ಡಿ. ವಿ. ಗುಂಡಪ್ಪ

8



ಜೀವನಧರ್ಮಯೋಗ

ಮುಖಪುಟ

ಜೀವನಧರ್ಮಯೋಗ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

e-Book
008v1.0.0
Date: October 10, 2018
ISBN: 9788193781814
Created by: Sriranga Digital Software Technologies Private Limited
srirangadigital.com

ಶ್ರೀಮದ್ಭಗವದ್ಗೀತಾತಾತ್ಪರ್ಯ

ಅಥವಾ

ಜೀವನಧರ್ಮಯೋಗ

ವ್ಯಾಸಂವಸುಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಮ್ ।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಂ ॥

***

ಶ್ರೀ ವಿಷ್ಣುವಾದಿಗುರು ಪಾ- ।
ರ್ಥವ್ಯಾಜದೆ ಸಕಲಮನುಜಲೋಕಹಿತಾರ್ಥಂ ॥
ಕಾವ್ಯಮಯಶಾಸ್ತ್ರನಯದಿಂ ।
ಜೀವನ-ಸದ್ಧರ್ಮಯೋಗಮಂ ಗೀತಿಸಿದಂ ॥

"ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದಂತಿ ಮಾನವಃ ॥" (೧೮-೪೬)
"ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ॥" (೮-೭)

ಜಗದೊಳ್ ಭಗವತ್ಸರಸವ ।
ಭಗವದ್ವಿಲಸಿತದಿ ಜಗವ ಕಾಣ್ಬುದು ಧರ್ಮಂ ॥
ಜಗಮಿರ್ಪನ್ನಂ ಧರ್ಮಂ ।
ಜಗಮಿರದವೊಲಾಗೆ ನಿನಗೆ ಸರ್ವಂ ಬ್ರಹ್ಮಂ ॥

"ಸ್ವಕರ್ಮಣಾ ತಮಭ್ಯರ್ಚ್ಯ"

ಬಾಲ್ಯದಲ್ಲಿಯೇ ಒದಗಿದ ವೈಧವ್ಯದುಃಖಕ್ಕೆ
ಅದು ದೈವವ್ಯವಸ್ಥೆಯೆಂದುಕೊಂಡು ತಲೆಬಾಗಿ

ಭಗವದ್ಭಕ್ತಿ ಸದಾಚಾರಶ್ರದ್ಧೆಗಳ ದೃಢಬಲದಿಂದ
ಎಲ್ಲ ಕಷ್ಟಗಳನ್ನೂ ಸಹಿಸಿ
ವೃದ್ಧ ಶುಶ್ರೂಷೆ ಅನಾಥ ಶಿಶುಪೋಷಣೆ ದೀನದುರ್ಬಲಪರಿಚರ್ಯೆ ಮೊದಲಾದ
ಸತ್ಕಾರ್ಯಗಳಲ್ಲಿ ಆಯುಷ್ಯವನ್ನು ತೆಯ್ದು
ನಮ್ಮ ಪಾಲಿಗೆ ಪುಣ್ಯಸ್ಮರಣೆಯನ್ನು ಇಟ್ಟು ಹೋಗಿರುವ
ನನ್ನ ತಂಗಿ
ಲಕ್ಷ್ಮೀದೇವಮ್ಮ
ನನ್ನ ಷಡ್ಡಕ-ಅಣ್ಣಂದಿರ ಮಗಳು
ಕುಟ್ಟ್ಯಮ್ಮ
ಅಂಥವರ ಸಾಧುಜೀವನದ ಆದರ್ಶಕ್ಕೆ
ಇದು ಅಂಕಿತ

ಮುನ್ನುಡಿ

(ಮೊದಲನೆಯ ಮುದ್ರಣ)

ವಾಚಕರು ಕೃಪೆಮಾಡಿ ಮೊದಲು ಈ ಮುನ್ನುಡಿಯನ್ನು ಲಾಲಿಸಿದ್ದಾದರೆ, ಅವರಿಂದ ನನಗೆ ಅವಶ್ಯವಿರುವ ಸಹಾನುಭೂತಿ ತಕ್ಕಷ್ಟು ಧಾರಾಳವಾಗಿ ದೊರೆತೀತೆಂದು ನಂಬಿಕೊಂಡಿದ್ದೇನೆ.

ಇದು ಸಂಕಲ್ಪಪೂರ್ವಕವಾಗಿ ಕುಳಿತು ರಚಿಸಿದ ಗ್ರಂಥವಲ್ಲ, ಆಗಂತುಕ ಸಂದರ್ಭಗಳಿಂದ ಹುಟ್ಟಿದ ಗ್ರಂಥ. ಮತ, ತತ್ತ್ವ, ಧರ್ಮ, ದೈವ ಮೊದಲಾದ ಸೂಕ್ಷ್ಮ ಪವಿತ್ರ ವಿಚಾರಗಳಿಗೆ ನಾನು ಬಾಯಿಹಾಕತಕ್ಕದ್ದಲ್ಲವೆಂದು ಮೊದಲಿನಿಂದ ನಿಯಮ ಮಾಡಿಕೊಂಡಿದ್ದೆ. ಅಂಥ ವಿಚಾರಕ್ಕೆ ಅವಶ್ಯವಾದ ಶಾಸ್ತ್ರಜ್ಞಾನವಾಗಲಿ ಅನುಷ್ಠಾನ-ಅನುಭವಗಳಾಗಲಿ ನನ್ನ ಪಾಲಿಗೆ ಬಂದಿಲ್ಲ. ನಾನು ಪತ್ರಿಕೋದ್ಯೋಗದಿಂದ ಹೊಟ್ಟೆಹೊರಕೊಳ್ಳುವವನು. ಸಂತೆಮಾಳದಲ್ಲಿ ನನ್ನ ನಿತ್ಯದ ಬಿಡಾರ. ಗುಡಿ ಮಠಗಳು ನನಗೆ ದೂರ. ಆದರೆ ದೈವದ ಅಗಟವಿಗಟದಲ್ಲಿ ಮೈಲಿಗೆಯವನಿಗೆ ಮಡಿಯ ಕೆಲಸ ಒದಗಿಬರುವುದುಂಟು–ಮಹಾಭಾರತದಲ್ಲಿ ವ್ಯಾಧನಿಗೆ ಧರ್ಮೋಪದೇಶದ ಕರ್ತವ್ಯ ಒದಗಿದ ಹಾಗೆ. ಯಾವುದು ನನಗೆ ಮೊದಲು ಉದ್ದೇಶದಲ್ಲಿರಲಿಲ್ಲಲ್ಲವೋ ಅದು ನನ್ನ ಕಸಬಿನ ಕಾರಣದಿಂದ ವಿಹಿತ ಕಾರ್ಯವಾಯಿತು.

ಈಗಿಗೆ ಐವತ್ತೈದು–ಐವತ್ತಾರು ವರ್ಷಗಳ ಹಿಂದೆ ನಾನು ಬೇರೆ ಜೀವನೋಪಾಯ ಕಾಣದೆ, ಪತ್ರಿಕಾವೃತ್ತಿಯನ್ನು ಹಿಡಿಯಬೇಕಾಯಿತು. ಅದಕ್ಕೆ ಅಂಟಿಕೊಂಡು ಸಾರ್ವಜನಿಕ ಜೀವನದ ಸಂಪರ್ಕ ನನಗೆ ಉಂಟಾಯಿತು. ಅಲ್ಲಿ ಅನುಭವ ಬೆಳೆದಂತೆ ರಾಜಕೀಯಕ್ಕೂ ಧರ್ಮಪ್ರಶ್ನೆಗೂ ಇರುವ ಸಂಬಂಧ ನನ್ನ ಮನಸ್ಸಿಗೆ ವಿಶದಪಡುತ್ತ ಬಂತು. ಗೋಖಲೆ ಸಂಸ್ಥೆಯ ಜವಾಬ್ದಾರಿ ಒದಗಿದಮೇಲಂತೂ ದೇಶಹಿತಕ್ಕೆ ಧಾರ್ಮಿಕ ಸಾಹಿತ್ಯದ ಅನಿವಾರ್ಯತೆ ಎಷ್ಟೆಂಬುದು ಮತ್ತಷ್ಟು ಸ್ಪಷ್ಟವಾಯಿತು. ಮನುಷ್ಯ ಸಮಾಜದ ನಾನಾ ಉದ್ದೇಶಪ್ರವೃತ್ತಿಗಳಲ್ಲಿ ಧರ್ಮಾಧರ್ಮವಿವೇಕವಿಲ್ಲದೆಹೋದಾಗ ಅದೆಂಥ ರಾಜಕೀಯವಾದೀತು? ಗುಣಾವಗುಣವಿಮರ್ಶೆ ಮಾಡದ ಸಾರ್ವಜನಿಕ ಕಾರ್ಯದಿಂದ ಎಂಥ ಪ್ರಜಾಕ್ಷೇಮವಾದೀತು?

ಹೀಗೆ ಧರ್ಮಜಿಜ್ಞಾಸೆ ಗೋಖಲೆ ಸಂಸ್ಥೆಯಲ್ಲಿ ಸಂಗತವಾಯಿತು. ಅಲ್ಲಿ ವಾರಕ್ಕೊಮ್ಮೆ ಸೇರುತ್ತಿದ್ದ ವ್ಯಾಸಂಗಗೋಷ್ಠಿಯ ಯುವಕ ಸದಸ್ಯರು ಕೆಲವರು ಧಾರ್ಮಿಕ ಸಾಹಿತ್ಯದಲ್ಲಿ ಕುತೂಹಲವುಳ್ಳವರಾದರು. ಆಗ ನಾನು ಅವರ ಸಂಗಡಿಗನಾಗಿ ಇಂಗ್ಲಿಷ್ ಭಾಷೆಯ ರಾಜಕೀಯ–ಸಾಮಾಜಿಕ ಸಾಹಿತ್ಯಗ್ರಂಥಗಳ ಜೊತೆಗೆ ಸಂಸ್ಕೃತ ಕನ್ನಡಗಳಲ್ಲಿ ರಾಮಾಯಣ ಭರತಗಳನ್ನೂ, ಮನುಸ್ಮೃತಿ ಶಾಂತಿಪರ್ವಗಳ ಕೆಲವು ಪ್ರಕರಣಗಳನ್ನೂ, ಆಮೇಲೆ ಈಶಾವಾಸ್ಯಾದಿ ದಶೋಪನಿಷತ್ತುಗಳನ್ನೂ ನಮಗಿದ್ದ ಮಿತಶಕ್ತಿ ಮಿತಾವಕಾಶಗಳಿಗೆ ಸಾಧ್ಯ ತೋರಿದಂತೆ ಅಷ್ಟಿಷ್ಟು ಪರಿಚಯ ಮಾಡಿಕೊಂಡದ್ದಾಯಿತು. ತರುವಾಯ ನನ್ನ ಯುವಕ ಮಿತ್ರರ ಉತ್ಸಾಹವು ಜಗದ್ವಿಖ್ಯಾತವಾದ ಭಗವದ್ಗೀತೆಯ ಕಡೆ ತಿರುಗಲು, ಅವರ ಸಹಪಾಠಿಯಾಗಿ ಗೀತಾವ್ಯಾಸಂಗ ಮಾಡುವ ಯೋಗ ನನಗೆ ಒದಗಿತು.

ಗೀತಾ ಗ್ರಂಥವನ್ನು ಮೊದಲ ಸಾರಿ ಶ್ಲೋಕಶ್ಲೋಕವಾಗಿ ತೆಗೆದುಕೊಂಡು ಅರ್ಥ ಗುರುತುಮಾಡಿಕೊಳ್ಳುತ್ತ ಕಡೆಯವರಿಗೂ ನೋಡಿದ್ದಾಯಿತು. ಇದು ತಾ ॥ ೫-೬-೧೯೬೦ ರಿಂದ ತಾ ॥ ೨೨-೭-೧೯೬೨ ರವರೆಗೆ. ಅದಾದ ಮೇಲೆ ಒಂದೊಂದು ಅಧ್ಯಾಯವನ್ನು, ಅಥವಾ ಅಧ್ಯಾಯಖಂಡವನ್ನು, ಒಂದೊಂದು ದಿವಸ (ಅಥವಾ ಒಂದೊಂದು ಸಂಜೆ) ವಿಚಾರಕ್ಕೆ ತೆಗೆದುಕೊಂಡು ಮುಖ್ಯಾಂಶಗಳಿಗೆ ಹೆಚ್ಚು ಗಮನ ಕೊಟ್ಟು ಪುನರಾವರ್ತನೆ ಮಾಡಿದ್ದಾಯಿತು. ನಡುನಡುವೆ ಚರ್ಚೆಗಳೂ ಪ್ರಶ್ನೋತ್ತರಗಳೂ ನಡೆಯುತ್ತಿದ್ದವು. ಇದು ತಾ ॥ ೨೬-೮-೧೯೬೨ ರಿಂದ ೮-೫-೧೯೬೩ ರವರೆಗೆ. ಈ ಪುನಃಪ್ರವಚನದ ಲಿಖಿತರೂಪವೇ ಪ್ರಕೃತಗ್ರಂಥದ ಮಾತೃಕೆ.

ಪ್ರವಚನ ನಡೆಯುತ್ತಿದ್ದಂತೆ ಅದನ್ನು ಮಿತ್ರರು “ಟೇಪ್ ರೆಕಾರ್ಡರ್” (Tape recorder) ಎಂಬ ಯಥೋಕ್ತಲಿಪಿಯಂತ್ರದಲ್ಲಿ ಗುರುತು ಮಾಡಿಸಿಟ್ಟರು. ಬಳಿಕ ಅದನ್ನು ಮಿತ್ರರೊಬ್ಬರು ಯಂತ್ರದಿಂದ ಕಾಗದಕ್ಕಿಳಿಸಿ, “ಪ್ರಜಾಮತ” ವಾರಪತ್ರಿಕೆಯಲ್ಲಿ ಪ್ರಕಟಮಾಡಿಸಿದರು. ಇದು ತಾ ॥ ೧೭-೨-೧೯೬೩ ರಿಂದ ೫-೭-೧೯೬೪ ರವರೆಗೆ. ಆ ಪ್ರಕಟನೆಯೇ ಈ ಗ್ರಂಥಕ್ಕೆ ಆಧಾರಪ್ರತಿ.

***

ಹೀಗೆ ಇದು ಮೂಲದಲ್ಲಿ ಬಾಯಮಾತಿನ ಗ್ರಂಥ, –ಕೈಯ ಬರಹದ್ದಲ್ಲ. ಉಪನ್ಯಾಸಧಾರೆ ಪತ್ರಿಕೆಯಲ್ಲಿ ಪ್ರಕಟವಾಗುವುದಕ್ಕೆ ಮುಂಚೆಯೂ ಪ್ರಕಟವಾದಮೇಲೂ ಅದನ್ನು ಅಷ್ಟಿಷ್ಟು ತಿದ್ದಿ ಪರಿಷ್ಕಾರಪಡಿಸಿದೆ. ಆದರೂ ಬಹುಭಾಗ ಬಾಯಮಾತಿನ ರೂಪದಲ್ಲಿ ಉಳಿದುಕೊಂಡಿದೆ. ಆ ರೂಪದಲ್ಲಿ ಕೆಲವು ಗುಣಗಳ ಜೊತೆಗೆ ದೋಷಗಳು ಸ್ವಾಭಾವಿಕವಾಗಿ ಬೆರೆತುಕೊಂಡಿರುತ್ತವೆ. ಜನರೂಢಿಯ ಮಾತಿನ ಸುಲಭತೆ, ಸಹಜತೆ, ಧೋರಣೆ, ಧ್ವನಿಪುಷ್ಟಿ –ಇವು ಬಾಯಮಾತಿನ ಗುಣಾಂಶಗಳಾದರೆ, ವ್ಯಾಕರಣಶಿಥಿಲತೆ, ಪದಗಳ ನ್ಯೂನಾತಿರೇಕ, ಪುನರುಕ್ತಿ, ಬಳಕೆಯ ಅನ್ಯಭಾಷಾಮಿಶ್ರಣ–ಇವು ಅದರ ಅವಗುಣಗಳು. ಆದರೆ ಈಗ ಆ ಒಂದು ದೋಷವನ್ನು ತಿದ್ದುವ ಪ್ರಯತ್ನ ಮಾಡಿದರೆ ಅಲ್ಲಿಯ ಒಂದು ಗುಣವು ಕೈಬಿಟ್ಟುಹೋಗುವ ಅಪಾಯವುಂಟು. ಇದನ್ನೆಲ್ಲ ಚಿಂತಿಸಿ, ಕಡೆಗೆ, ವಾಚಕರ ಇಂಗಿತಜ್ಞತೆಯೂ ಸಹಾನುಭೂತಿಯೂ ಗ್ರಂಥಕ್ಕೆ ಸಿದ್ಧವಾಗಿರುವಲ್ಲಿ ನನ್ನ ಲೋಪದೋಷಗಳು ಅವರ ಗಣನೆಗೆ ಬರಲಾರವೆಂಬ ವಿಶ್ವಾಸದಿಂದ ಗ್ರಂಥವನ್ನು ಈಗ ಇರುವಂತೆ ಮಹಾಜನರಿಗೆ ಒಪ್ಪಿಸಿದೆ.

ನನಗೆ ಇನ್ನೂ ಒಂದು ಭರವಸೆಯುಂಟು. ನಾನು ಕುಮಾರವ್ಯಾಸಾದಿ ಮಹಾಕವಿಗಳ "ಪದವಿಟ್ಟಳುಪದೊಂದಗ್ಗಳಿಕೆ" ಯನ್ನಾಗಲಿ ಇನ್ನ್ಯಾವ ಅಗ್ಗಳಿಕೆಯನ್ನಾಗಲಿ ಪಡೆದವನಲ್ಲ. ಇದನ್ನು ಎಲ್ಲರೂ ಬಲ್ಲರು. ಆದದ್ದರಿಂದ ನನ್ನ ಪದಪ್ರಯೋಗಗಳನ್ನು ಯಾರಾದರೂ ಅನುಕರಿಸಿಯಾರೆಂಬ ಭಯಕ್ಕೆ ಕಾರಣವಿಲ್ಲ. ಮತ್ತು ಯಾರಾದರೂ ನನ್ನ ತಪ್ಪನ್ನು ತಿಳಿಸಿಕೊಟ್ಟಲ್ಲಿ ಕೃತಜ್ಞನಾಗಿ ತಿದ್ದಿಕೊಳ್ಳಲು ಸಿದ್ಧನಾಗಿರುವನೆಂಬುದೂ ಸ್ಪಷ್ಟವಾಗಿದೆ. ಈ ಮಾತು ನನ್ನ ವಾಕ್ಯರಚನೆಗೆ ಮಾತ್ರವಲ್ಲ, ನನ್ನ ವಿಷಯನಿರೂಪಣೆಗೂ ಅನ್ವಯಿಸತಕ್ಕದ್ದು.

ಗ್ರಂಥದ ಗಾತ್ರವು ನಿರೀಕ್ಷಿಸಿದ್ದಕ್ಕಿಂತ ಬಹಳ ದೊಡ್ಡದಾಗಿದೆ. ಆದರೂ ಹೇಳಬೇಕಾದದ್ದನ್ನೆಲ್ಲ ಹೇಳಿದ್ದಾಯಿತೆಂಬ ತೃಪ್ತಿ ಬಂದಿಲ್ಲ. ಪ್ರವಚನಕಾಲದಲ್ಲಿ ಅದಕ್ಕೆ ಹಿನ್ನೆಲೆಯಾಗಿ ಕೆಲವು ಉಪನ್ಯಾಸಗಳಲ್ಲಿ ಮಹಾಭಾರತದ ಕಥೆಯನ್ನು ಸಂಗ್ರಹವಾಗಿ ಹೇಳಿ, ಮುಖ್ಯ ಮುಖ್ಯ ಕಥಾಪಾತ್ರಗಳ ಶೀಲಸ್ವಭಾವಗಳನ್ನು ಬಿಡಿಸಿ ತೋರಿಸಿದ್ದಾಗಿತ್ತು. ಪಾಂಡವ–ಕೌರವ ಯುದ್ಧ ಹೇಗೆ ಧರ್ಮಯುದ್ಧವಾಯಿತು, ಅದರ ಪ್ರವರ್ತಕ ಪೋಷಕರು ಎಂಥವರು–ಇದನ್ನು ತಿಳಿದುಕೊಳ್ಳುವುದು ಗೀತೆಯ ಸಮಗ್ರಸ್ವರೂಪದ ತಿಳಿವಳಿಕೆಗೆ ಪೀಠಿಕೆಯಾಗಿ ಅವಶ್ಯವಾಗಿದೆ. ಆದರೆ ಗ್ರಂಥಗಾತ್ರವು ಅತಿಯಾದೀತೆಂಭ ಭಯದಿಂದ ಆ ಪೀಠಿಕಾಭಾಗವನ್ನು ಬದಿಗಿರಿಸಬೇಕಾಯಿತು. ಹಾಗೆಯೇ ಪ್ರವಚನಾನಂತರದ ಪ್ರಶ್ನೋತ್ತರರೂಪದ ಪರಿಶಿಷ್ಟಗಳ

ಬಹುಭಾಗವನ್ನೂ ಬೇರೆ ಇಡಬೇಕಾಯಿತು. ಗ್ರಂಥಮೂಲಕ್ಕೆ ಶ್ಲೋಕಾರ್ಥವನ್ನು ಕೊಡಬೇಕೆಂಬ ಯೋಚನೆಯನ್ನೂ ದೂರಮಾಡಬೇಕಾಯಿತು.

ಈ ಪೂರ್ವಸಿದ್ಧತೆಯ ಸಾಹಿತ್ಯ ಕನ್ನಡದಲ್ಲಿ ಇರುವಷ್ಟುನ್ನು ವಾಚಕರು ಉಪಯೋಗ ಮಾಡಿಕೊಳ್ಳಬೇಕೆಂದು ಬೇಡುತ್ತೇನೆ. ಭಾರತ ಕಥಾಪಾತ್ರಗಳ ತಿಳಿವಳಿಕೆಯನ್ನು ಪ್ರೊಫೆಸರ್ ಎ. ಆರ್. ಕೃಷ್ಣಶಾಸ್ತ್ರಿಗಳ "ವಚನ ಭಾರತ" ಚೆನ್ನಾಗಿ, ಮನೋರಂಜಕವಾದ ಶೈಲಿಯಲ್ಲಿ ಒದಗಿಸುತ್ತದೆ. ಗೀತಾಗ್ರಂಥದ ಕನ್ನಡ ಭಾವಾನುವಾದಗಳು ಅನೇಕ ಇವೆ. ಅವುಗಳಲ್ಲಿ ಉತ್ತಮವೆಂದು ನನಗೆ ತೋರುವ ಎರಡು ಇವು:

1. ಶ್ರೀ ಶ್ರೀ ಆದಿದೇವಾನಂದಸ್ವಾಮಿಗಳವರಿಂದ ಸಂಪಾದಿತ. ಮೂಲ, ಪ್ರತಿಪದಾರ್ಥ, ವಾಕ್ಯಾನುವಾದ, ವಿಶೇಷವಿಷಯಗಳ ಟಿಪ್ಪಣಿ–ಇವುಗಳಿಂದ ಕೂಡಿದ್ದು. ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಪ್ರಕಟನೆ.
2. ಶ್ರೀ ಶ್ರೀ ಸಚ್ಚಿದಾನಂದಸರಸ್ವತೀಸ್ವಾಮಿಗಳವರಿಂದ ಸಂಪಾದಿತ. ಮೂಲ, ಸರಳ ವಾಕ್ಯಾನುವಾದ ಸಹಿತ. ಹೊಳೆನರಸೀಪುರದ ಆಧ್ಯಾತ್ಮ ಕಾರ್ಯಾಲಯದ ಪ್ರಕಟನೆ.

ಗ್ರಂಥವು ಏಳು ನೂರು ಪುಟವಲ್ಲ, ಏಳು ಸಾವಿರ ಪುಟಗಳಷ್ಟು ಬೆಳೆದರೂ ಗೀತೆಯ ವಿಷಯವನ್ನೆಲ್ಲ, –ಅದರಲ್ಲಿ ಅಡಗಿಕೊಂಡಿರುವ ಪ್ರಶ್ನೆ–ಉಪಪ್ರಶ್ನೆಗಳನ್ನೆಲ್ಲ, –ಸಮಗ್ರವಾಗಿ ಚರ್ಚಿಸಿ ವಿವರಿಸುವುದು ಸಾಧ್ಯವಾದೀತೆಂದು ನನಗನ್ನಿಸಿಲ್ಲ. ಎಂಥ ವಿವರಣಗ್ರಂಥವಾದರೂ ದಿಕ್ಪ್ರದರ್ಶನಮಾತ್ರದ್ದೇ. ಗ್ರಂಥದಲ್ಲಿ ದೊರೆಯದ್ದನ್ನು ವಾಚಕರ ಅಂತರ್ಮುಖಿತ್ವದ ಅಭ್ಯಾಸವು–ಸ್ವಬುದ್ಧಿಯಿಂದಾಗುವ ಮನನ ವಿಮರ್ಶನೆ ಅನುಸಂಧಾನಗಳು–ಕಾಲಕ್ರಮದಲ್ಲಿ ದೊರಕಿಸೀತು.

ಇದುವರೆಗೆ ಹೇಳಿದ್ದೆಲ್ಲ ಈ ಗ್ರಂಥದ ವಚನಭಾಗವನ್ನು ಕುರಿತು. ಗ್ರಂಥದ ಪ್ರಾರಂಭೋದ್ದೇಶದಲ್ಲಿರದೆ, ಹೊಸದಾಗಿ ಬಂದು ಸೇರಿಕೊಂಡಿರುವ ಅಂಶವು ಪದ್ಯಗಳದು. ಪದ್ಯದ ಉದ್ದೇಶವು ಜ್ಞಾಪಕಸೌಲಭ್ಯ. ವಿಸ್ತಾರವಾಗಿ ವೆಳೆದ ಜಟಿಲವಿಚಾರದ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಹೇಳಲು ಪದ್ಯರೂಪವು ಸಾಧನವಾಗುತ್ತದೆ. ಇದು ಧ್ಯಾನ ಮನನಗಳಿಗೆ ಅನುಕೂಲವೆಂದು ನನ್ನ ಭಾವನೆ. ಕನ್ನಡದ ಜನದಲ್ಲಿ ಈಗ ಪದ್ಯ ಪಾಠದ ಅಭ್ಯಾಸ, –ಅದರಲ್ಲಿಯೂ ಕಂದ, ವೃತ್ತ ಮೊದಲಾದ ಪ್ರಾಚೀನ ಜಾತಿಯ ಛಂದೋಬದ್ಧ

ಕೃತಿಗಳ ಅಭ್ಯಾಸ, –ತೀರಾ ಕಡಮೆಯಾಗಿದೆಯಲ್ಲ! –ಎಂಬ ಪ್ರಶ್ನೆ ಏಳಬಹುದು. ಆದರೆ ಈ ಪರಿಸ್ಥಿತಿ ಹೀಗೆಯೇ ನಿಂತೀತೆ? ಬದಲಾಯಿಸಲಾರದೆ? –ಎಂದು ನನ್ನ ಸಮಾಧಾನ. ಪುರಾತನದಲ್ಲಿ ಸತ್ತ್ವವಿದ್ದರೆ ಅದು ನಮಗೆ ಕಾಲಾನುಕಾಲಕ್ಕೆ ಹಿಂತಿರುಗಿ ಬರುತ್ತದೆ. ಅದರಲ್ಲಿ ಸತ್ತ್ವವಿಲ್ಲದಿದ್ದಲ್ಲಿ ಅದರ ಅಳಿವಿಗಾಗಿ ಯಾರೂ ಅಳಬೇಕಾದದ್ದಿಲ್ಲ.

***

ಗ್ರಂಥದ ಯೋಗ್ಯತೆ ಎಂಥಾದ್ದಾದರೂ ಆಗಲಿ; ಅದು ರೂಪ ತಾಳುವಂತೆ ಪ್ರೋತ್ಸಾಹ ಸಹಾಯಗಳನ್ನು ಕೊಟ್ಟವರನ್ನು ಲೇಖಕನು ಸ್ಮರಿಸದೆ ಬಿಟ್ಟಲ್ಲಿ ಅವನ ಹೃದಯವೇ ಅವನಿಗೆ ಭಾರವಾದೀತು. ಅಂಥ ಉಪಕಾರಿಗಳಲ್ಲಿ ಮೊದಲಿಗರು ಗೀತಾ ಪ್ರವಚನಕ್ಕಾಗಿ ವಾರವಾರವೂ ಸೇರುತ್ತಿದ್ದ ಇಪ್ಪತ್ತೈದು-ಮೂವತ್ತು ಮಂದಿ ಸಹೃದಯರಾದ ಸೋದರೀ ಸೋದರರು. ಶ್ರವಣಸಮಯದಲ್ಲಿ ಅವರು ತೋರಿದ ಶ್ರದ್ಧೆ ಅವಧಾನಗಳೂ ಪ್ರಶ್ನೋತ್ತರ ವೇಳೆಯಲ್ಲಿ ಕಾಣಬಂದ ಅವರ ವಿಷಯಪರಿಚಯ ಕುತೂಹಲಗಳೂ ಆ ನಮ್ಮ ಉದ್ಯೋಗವು ವ್ಯರ್ಥವಾಗಲಾರದೆಂಭ ನಂಬಿಕೆಯನ್ನು ನನ್ನಲ್ಲುಂಟುಮಾಡಿತು. ಅವರೇ ಗ್ರಂಥಪ್ರೇರಕರು. ಅವರಿಗೆ ವಂದನೆ.

ಆಮೇಲೆ ಪ್ರೋತ್ಸಾಹದಾತರು. “ಪ್ರಜಾಮತ” ದಲ್ಲಿ ಗ್ರಂಥಮೂಲವು ಭಾಗಭಾಗವಾಗಿ ಬರುತ್ತಿದ್ದಾಗ ನೂರಾರು ಮಂದಿ ಬರೆದೂ ನನ್ನನ್ನು ಮುಖತಃ ಕಂಡು ಒಪ್ಪಿಕೆಯನ್ನು ತಿಳಿಯಪಡಿಸಿದರು. ಆ ಪತ್ರಿಕೆಯ ಸಂಪಾದಕರು ತಮಗೆ ಬಂದಿದ್ದ ಅನುಮೋದಕ ಪತ್ರಗಳಿಂದ ವಾಕ್ಯಗಳನ್ನಾಯ್ದು ತಮ್ಮ ತಾ ॥ ೫-೭-೧೯೬೪ರ ಸಂಚಿಕೆಯಲ್ಲಿ ಪ್ರಕಟ ಪಡಿಸಿದರು. ಹೀಗೆ ಪ್ರೋತ್ಸಾಹಿಸಿದವರಲ್ಲಿ ಗ್ರಾಮ ಸೀಮೆಗಳ ಸಾಮಾನ್ಯ ಜನ – ಉಪಾಧ್ಯಾಯರು, ಶಾನುಭೋಗರು, ಪಟೇಲರು, ವರ್ತಕರು, ಪೋಲೀಸ್ ಕಾನ್‌ಸ್ಟೆಬಲರು, – ಇಂಥವರು ಹೆಚ್ಚು ಮಂದಿ. ಅಂಥಾ ತಾತ್ತ್ವಿಕ ಸಾಹಿತ್ಯಾಭಿಮಾನಿಗಳು ನಮ್ಮ ದೇಶದಲ್ಲಿ ಇನ್ನೂ ಬಹುಮಂದಿ ಇದ್ದಾರು. ಅಂಥವರ ಆದರಣೆಯಿಂದ ಈ ಪುಸ್ತಕಕ್ಕೆ ಬದುಕುವ ಅವಕಾಶ ದೊರೆತೀತು. ಅವರಿಗೆ ವಂದನೆ.

“ಪ್ರಜಾಮತ” ಪತ್ರಿಕೆಯ ಯಜಮಾನರಿಗೂ ಸಂಪಾದಕರಿಗೂ ವಂದನೆ. ಅವರಿಂದ ನನಗೆ ಬಹು ಉಪಕಾರವಾಗಿದೆ.

ಸಹಾಯ ಕೊಟ್ಟವರು ಬಹುಮಂದಿ. ಟೇಪ್ ರೆಕಾರ್ಡರ್ ಯಂತ್ರವನ್ನು ತಂದು ಅಣಿಮಾಡಿ, ಅದರಿಂದ ಕೆಲಸ ಮಾಡಿಸಿದವರು ನನ್ನ ಪೂಜ್ಯಮಿತ್ರರಾದ ಡಾಕ್ಟರ್ ಬಿ. ಕೆ. ನಾರಾಯಣರಾಯರವರ ಮಕ್ಕಳು ಚಿ ॥ ಶ್ರೀ ಬಿ. ಎನ್. ಅನಂತರಾಯರು. ಅವರೊಡನೆ ಸಹಕರಿಸಿದವರು ಅನೇಕರು.

ಪ್ರವಚನ ಮುಗಿಯುವವೇಳೆಗೆ ನನ್ನ ಕಣ್ಣಿನ ಪೊರೆಯ ವ್ಯಾಧಿ ಪ್ರಬಲವಾಯಿತು. ಓದು ಬರಹ ಅಸಾಧ್ಯವಾಯಿತು. ಅಂಥ ಅನನುಕೂಲದ ಸಂದರ್ಭದಲ್ಲಿ ಗ್ರಂಥದ ಮುದ್ರಣ ಪ್ರಾರಂಭವಾದದ್ದು. ಆಗ ಸಹಾಯವಾಗಲು ಮಿತ್ರರಿಲ್ಲದೆ ಹೋಗಿದ್ದಿದ್ದರೆ ಗ್ರಂಥ ಹೇಗೆ ತಾನೆ ರೂಪತಾಳಲಾಗುತ್ತಿತ್ತು?

ಆರಂಭದಿಂದ ಸಮಾಪನೆಯವರೆಗೂ ನನ್ನ ಕಣ್ಣೂ ಕೈಯೂ ಆಗಿದ್ದವರು ಚಿ ॥ ಶ್ರೀ ಎಸ್. ಆರ್. ರಾಮಸ್ವಾಮಿಯವರು. ಟೇಪ್ ರೆಕಾರ್ಡರಿಂದ ಹಸ್ತಪ್ರತಿ ಬರೆದವರು ಅವರು; ಅದನ್ನು ನನ್ನಿಂದ ತಿದ್ದಿಸಿ ಪತ್ರಿಕೆಗೆ ಕೊಟ್ಟವರು ಅವರು; ಆಗ ಅಚ್ಚು ಕರಡುಗಳನ್ನು ನೋಡಿ ಸರಿಪಡಿಸಿದವರು ಅವರು; ಬಳಿಕ ಆ ಲೇಖನಮಾಲೆಯನ್ನು ಪುಸ್ತಕ ಮುದ್ರಣಕ್ಕಾಗಿ ಸಿದ್ಧಪಡಿಸಿದವರು ಅವರು; ಪರಿಷ್ಕರಣಾವಸರದಲ್ಲಿ ನನಗೆ ಮರೆತು ಹೋಗಿದ್ದದ್ದನ್ನು ಜ್ಞಾಪಕಕ್ಕೆ ತಂದು, ಬರವಣಿಗೆಯಲ್ಲಿ ತೊಡಕು ಕಂಡಾಗ ಸಲಹೆ ಕೊಟ್ಟು, ಜಾಗರೂಕ ಪರಿಶ್ರಮದ ವಿಷಯಸೂಚಿಕೆಯನ್ನು ತಯಾರಿಸಿ, ಈ ಕಾರ್ಯದ ಪ್ರತಿಯೊಂದು ಘಟ್ಟದಲ್ಲಿಯೂ ಪ್ರತಿಯೊಂದು ಭಾಗದಲ್ಲಿಯೂ ಅದು ತಮ್ಮದೇ ಎಂಬಂತೆ ಅಭಿಮಾನೋತ್ಸಾಹಗಳನ್ನು ತೋರಿ, ನನ್ನ ಆತುರ ಅಸಹನೆಗಳಿಗೆ ಹೊಂದಿಕೊಂಡು, ಮಾಡಬೇಕಾದದ್ದನ್ನು ಪೂರ್ವಾಲೋಚನೆಯಿಂದ ಮಾಡಿಟ್ಟು, ಕೆಲಸವನ್ನು ಹಗುರ ಮಾಡಿಕೊಟ್ಟವರು ಶ್ರೀ ಎಸ್. ಆರ್. ರಾಮಸ್ವಾಮಿ. ಇಂಥ ಅವ್ಯಾಜವೂ ಅಂತಃಕರಣಪೂರ್ವಕವೂ ಆದ ಅಭಿಮಾನಕ್ಕೆ ಬೆಲೆ ಕಟ್ಟಲಾದೀತೆ? ಅವರಿಗೆ ನನ್ನ ಪ್ರೀತಿಯ ಆಶೀರ್ವಾದಗಳು.

ನನ್ನ ಮಾನ್ಯ ಮಿತ್ರರು ಸಂಸ್ಕೃತ ವ್ಯಾಕರಣ ಸಾಹಿತ್ಯ ವಿದ್ವಾನ್ ಕನ್ನಡ ಪಂಡಿತರು ಶ್ರೀ ಎನ್. ರಂಗನಾಥಶರ್ಮಾ ಅವರು, ನನ್ನ ಪ್ರಾರ್ಥನೆಯನ್ನಂಗೀಕರಿಸಿ, ಗ್ರಂಥವನ್ನು ಸಾಹಿತ್ಯಶುದ್ಧಿಯ ದೃಷ್ಟಿಯಿಂದ ಪರಿಶೀಲಿಸಿ, ಬಹುಭಾಗದ ಕರಡಚ್ಚುಗಳನ್ನು ಪರಿಶೋಧಿಸಿ ಕೊಟ್ಟಿದ್ದಾರೆ. ಅವರ ಸೂಚನೆಗಳನ್ನು ಬಹುಮಟ್ಟಿಗೆ ಉಪಯೋಗಿಸಿಕೊಂಡಿದ್ದೇನೆ. ಅಂಥ ವಿದ್ವದ್ರಸಿಕರು

ಗ್ರಂಥದಲ್ಲಿ ದೊಡ್ಡ ಪ್ರಮಾದವೇನೂ ಆಗಿಲ್ಲವೆಂದು ಹೇಳಿದಾಗ ಅದು ಲೇಖಕನಿಗೆ ಧೈರ್ಯವಾಗುತ್ತದೆ.

ಈ ಗ್ರಂಥಗಳಲ್ಲಿಯ ಅಭಿಪ್ರಾಯಗಳಿಗೂ ಪದಪ್ರಯೋಗಗಳಿಗೂ ಸಂಬಂಧ ಪಟ್ಟ ಜವಾಬ್ದಾರಿ ಪೂರ್ತಿಯಾಗಿ ಲೇಖಕನದು. ಸಹಾಯಕರ್ತರ ಮೇಲೆ ಆ ಭಾರವನ್ನು ಎಷ್ಟು ಮಾತ್ರವೂ ಹೊರಿಸತಕ್ಕದ್ದಲ್ಲ. ಗ್ರಂಥದಲ್ಲಿ ಸ್ಖಾಲಿತ್ಯಗಳೂ ಅಸ್ಫುಟತೆಗಳೂ ನ್ಯೂನತೆಗಳೂ ಪ್ರಮಾದಗಳೂ ಪುನರುಕ್ತಿಗಳೂ ಉಳಿದುಕೊಳ್ಳದಿದ್ದಲ್ಲಿ ಆಶ್ಚರ್ಯವೇ ಹೊರತು ಉಳಿದುಕೊಂಡಿದ್ದರೆ ಆಶ್ಚರ್ಯವಾಗದು. ನನ್ನ ಸಿದ್ಧತೆ ನನ್ನ ಸಂದರ್ಭಗಳನ್ನು ಮೊದಲೇ ಅರಿಕೆ ಮಾಡಿದ್ದೇನೆ. ಕೃತಸಂಕಲ್ಪನಾದ ಒಬ್ಬ ಪಂಡಿತನು ತದೇಕಾವಧಾನದಿಂದ ಅವಿಚ್ಛಿನ್ನವಾಗಿ ಕುಳಿತು ಮಾಡಿದ ಕೆಲಸವಲ್ಲ ಇದು. ನನ್ನ ಒಂದು ಗೀತಾ ಪ್ರವಚನಕ್ಕೂ ಇನ್ನೊಂದಕ್ಕೂ ನಡುವೆ ಒಂದು ವಾರದಷ್ಟು ಕಾಲದ ಅಂತರ, ಇತರ ಹವ್ಯಾಸಗಳ ಒತ್ತಡ, ಆಗಾಗ ಬಂದು ಹೊಸ ಶ್ರೋತರಿಗಾಗಿ ಪೂರ್ವವಿಷಯಪ್ರಸ್ತಾವ –ಇಂಥ ನಾಲ್ಕಾರು ವಿಕ್ಷೇಪಗಳ ಮಧ್ಯದಲ್ಲಿ ಆಗಿಷ್ಟು ಈಗಿಷ್ಟು ಹೇಗೆಹೇಗೋ ಸಾಗಿ ಮುಗಿದದ್ದು ಈ ಕೆಲಸ; ಮತ್ತು ಅರೆಕುರುಡನ ಕೆಲಸ, – ಉಭಯಾರ್ಥಗಳಲ್ಲಿಯೂ ಅರೆಕುರುಡು.

ಕೆಲಸವೆಂಥದಾದರಾಗಲಿ, ಅದು ನನ್ನಿಂದ ನಡೆಯತಕ್ಕದ್ದೆಂಬುದಾದರೆ ಬೇರೆ ತೊಡಕು ಬೇರೆ ಹವ್ಯಾಸಗಳ ಅವಸರದ ಮಧ್ಯದಲ್ಲಿಯೇ ಅದು ನಡೆಯಬೇಕೆಂಬುದು ನನ್ನ ಜಾತಕದ ವಿಧಿ ಎಂದು ತೋರುತ್ತದೆ. ಪೂರ್ತಿ ವ್ಯವಧಾನವೆಂಬುದು ನನ್ನ ಪಾಲಿಗೆ ಎಂದೂ ಬಂದದ್ದಲ್ಲ. ನಿತ್ಯವಿಕ್ಷೇಪವೇ ನನ್ನ ಜೀವನ. ಹಾಗಿರದೆ ಬಿಡುವು ನನಗೆ ಯಥೇಷ್ಟವಾಗಿ ದೊರೆತಿದ್ದಿದ್ದಲ್ಲಿ ಆಗ ನನ್ನ ಗ್ರಂಥ ನಿರ್ದೋಷವಾಗಿ, ಸರ್ವಾಂಶ ಸಂಪೂರ್ಣವಾಗಿ, ಸರ್ವಜನಾಂಗೀಕಾರಾರ್ಹವಾಗಿರುತ್ತಿತ್ತೆಂದು ನಾನು ಕ್ಷಣಮಾತ್ರವೂ ನಂಬಿಕೊಳ್ಳಲಾರೆ. ಎಲ್ಲ ದೋಷಗಳನ್ನೂ ಪರಿಹರಿಸಿ, ಎಲ್ಲ ಗುಣಗಳನ್ನೂ ತಂದು ತುಂಬಬಲ್ಲದ್ದು ಭಗವತ್ಕೃಪೆ. ಅದೇ ವಾಚಕರ ಸಹಾನುಭೂತಿಯಾಗಿ ಔದಾರ್ಯವಾಗಿ ಬರುತ್ತದೆ.

ಗ್ರಂಥದ ಮುದ್ರಣಕಾರರು ಶ್ರೀ ಜಿ. ಹೆಚ್. ಕೃಷ್ಣಮೂರ್ತಿಯವರು ನನ್ನ ವಿಷಯದಲ್ಲಿ ತೋರಿದ ಸ್ನೇಹ ಸಹನೆಗಳಿಂದಲೂ ಮುದ್ರಣಕಾರ್ಯದಲ್ಲಿ ಅವರು ತೋರಿದ ವಿಚಕ್ಷಣೆಯಿಂದಲೂ ನನ್ನ ಕೃತಜ್ಞತೆಯನ್ನು ಸಂಪಾದಿಸಿಕೊಂಡಿದ್ದಾರೆ.

ಗ್ರಂಥ ಪ್ರಕಾಶಕರು ಶ್ರೀ ಕೂಡಲಿ ಚಿದಂಬರಂ ಅವರು ನನಗೆ ಬಹುಕಾಲದ ಮಿತ್ರರು; ನನ್ನ ಮೇಲಣ ಅಭಿಮಾನದಿಂದ ಗ್ರಂಥಪ್ರಕಟನೆಗಾಗಿ ಬಹು ಬಂಡವಾಳ ಹಾಕಿದ್ದಾರೆ. ಕನ್ನಡ ಪ್ರಪಂಚದಲ್ಲಿ ಪುಸ್ತಕದ ಮಾರಾಟ ಯಾವ ಮಟ್ಟದಲ್ಲಿದೆ ಎಂಬುದನ್ನು ಬಲ್ಲವರು ಶ್ರೀ ಚಿದಂಬರಂ ಅವರದು ಕೇವಲ ವ್ಯಾಪಾರ ದೃಷ್ಟಿಯೆಂದು ಹೇಳಲಾರರು. ಶ್ರೀ ಚಿದಂಬರಂ ಅವರು ಮೊದಲು ಸಾಹಿತ್ಯೋತ್ಸಾಹಿಗಳು. ಅವರ ಉತ್ಸಾಹ ಹಣವನ್ನು ವೆಚ್ಚ ಮಾಡಿಸುತ್ತದೆ; ಗ್ರಂಥಕರ್ತನಿಗೆ ಉಪಕಾರವಾಗುತ್ತದೆ. ಅದು ಅವರಿಗೆ ನಷ್ಟಕಾರಿಯಾಗದೆ ಇರಬೇಕಾದರೆ ದೇಶದಲ್ಲಿ ಪುಸ್ತಕದ ಪೇಟೆ ಬೆಳೆಯಬೇಕು. ಅದು ನಮ್ಮ ಮಹಾಜನರ ಸಾಹಿತ್ಯಾಭಿಮಾನಕ್ಕೆ ಸೇರಿದ ಸಂಗತಿ.

ಸರ್ವಂ ಶಿವಂ.

ಡಿ.ವಿ.ಜಿ.

ವ್ಯಾಸಪೂರ್ಣಿಮೆ
ವಿಶ್ವಾವಸು, ಕಾರ್ತಿಕ
ತಾ ॥ ೯ ನವೆಂಬರ್ ೧೯೬೫

(ಎರಡನೆಯ ಮುದ್ರಣ)

ಈ ಗ್ರಂಥಕ್ಕೆ ಪುನರ್ಮುದ್ರಣಯೋಗ ಬಂದಿರುವುದು ಸಂತೋಷದ ಸಂಗತಿ. ಸಂತೋಷ ಸಮಯದಲ್ಲಿ ಅದಕ್ಕೆ ಯಾರು ಯಾರು ಕಾರಣಕರ್ತರಾದರೋ ಅವರಿಗೆ ವಂದನೆ ಸಮರ್ಪಿಸುವುದು ಈಗ ನನ್ನ ಮೊದಲ ಕರ್ತವ್ಯ.

ಈ ಗ್ರಂಥ ಮೊದಲು ಪ್ರಕಟವಾದದ್ದು ೧೯೬೮ರಲ್ಲಿ. ಅದು ಪುಸ್ತಕರೂಪದಲ್ಲಿ ಪ್ರಕಟವಾಗುವುದಕ್ಕೆ ಮುಂಚೆಯೇ –ಅದು ವಾರಪತ್ರಿಕೆಯಲ್ಲಿ ಕಂತುಕಂತಾಗಿ ಬಂದಾಗ – ಬಹುಮಂದಿ ಮೆಚ್ಚಿಕೆಯನ್ನೂ ಆದರಣೆಯನ್ನೂ ತೋರಿದ್ದರು. ಪುಸ್ತಕ ಪ್ರಕಟನಾ ನಂತರ ನನಗೆ ಬಂದಿರುವ ಮೆಚ್ಚಿಕೆಯ ಸೂಚನೆಗಳು ಬಹು ವಿಧವಾಗಿ ಪ್ರೋತ್ಸಾಹ ಕೊಟ್ಟಿವೆ. ಹತ್ತಾರು ಮಂದಿ ಬರೆದ ಪತ್ರಗಳಿಂದಲೂ ನನಗೆ ಭೇಟಿಕೊಟ್ಟು ಆಡಿದ ಮಾತಿನಿಂದಲೂ ತಮ್ಮ ತೃಪ್ತಿಯನ್ನೂ ಅಭಿಮಾನವನ್ನೂ ತಿಳಿಯಪಡಿಸಿದ್ದಾರೆ. ಈ ಎಲ್ಲ ಮಮತೆ ಮನ್ನಣೆಗಳನ್ನೂ ನಾನು ಶ್ರೀಹರಿಯ ಪ್ರಸಾದವೆಂದು ಸ್ವೀಕರಿಸಿದ್ದೇನೆ. ಆ ಎಲ್ಲ ಮಿತ್ರರಿಗೂ ನಮಸ್ಕಾರ.

ಈ ಗ್ರಂಥಕ್ಕೆ ೧೯೬೭-೬೮ರಲ್ಲಿ ಇನ್ನೊಂದು ವಿಶೇಷ ಯೋಗ ದೊರೆಯಿತು. ಅದು ಇಂಡಿಯ ಸರಕಾರದ ಆಶ್ರಯದಲ್ಲಿ ನಡೆಯುತ್ತಿರುವ ಸಾಹಿತ್ಯ ಅಕಾಡೆಮಿ (Sahitya Academy) ಎಂಬ ಸಾರಸ್ವತ ಸಂಸ್ಥೆಯು ಕೊಟ್ಟ ಐದು ಸಹಸ್ರ ರೂಪಾಯಿಗಳ ಬಹುಮಾನ. ಇದಕ್ಕಾಗಿ ನಾನು ಅಕಾಡೆಮಿ ಸಂಸ್ಥೆಗೆ ಕೃತಜ್ಞತೆಯನ್ನರ್ಪಿಸುತ್ತೇನೆ. ಆ ದ್ರವ್ಯವನ್ನು, ಯಾವ ಸಾರ್ವಜನಿಕ ಸಂಸ್ಥೆಯು ಈ ಗ್ರಂಥದ ರಚನೆಗೆ ಮೂಲಪ್ರೇರಕವೂ ಮುಖ್ಯ ಆಶ್ರಯವೂ ಆಯಿತೋ ಆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಉಪಯೋಗಕ್ಕಾಗಿ ಅರ್ಪಿಸಿದ್ದಾಗಿದೆ. ಅದು ನನಗೆ ಒಂದು ದೊಡ್ಡ ಸಂತೋಷ.

ಈ ಮುದ್ರಣದಲ್ಲಿ ಗ್ರಂಥವು ಬಹುಶಃ ಎಲ್ಲ ಭಾಗದಲ್ಲಿಯೂ ಹಿಂದಿನ ಮುದ್ರಣದ ಪಡಿಯಚ್ಚಾಗಿದೆ: ಪದಕ್ಕೆ ಪದ, ಪಂಕ್ತಿಗೆ ಪಂಕ್ತಿ; ಪುಟಕ್ಕೆ ಪುಟ. ಒಂದೆರಡು ಕಡೆ ಅಕ್ಷರಗಳನ್ನು ಅಥವಾ ಒಂದೆರಡು ಸಣ್ಣ ಮಾತುಗಳನ್ನು ತಿದ್ದಿದೆ. ಹೆಚ್ಚಿನ ವ್ಯತ್ಯಾಸಕ್ಕೆ ಕಾರಣವೇನೂ ತೋರಿಲ್ಲ.

ಈ ಮುದ್ರಣದಲ್ಲಿ ಹೊಸದಾಗಿರುವ ಭಾಗ:

1. ಟಿಪ್ಪಣಿಗಳು.
2. ಮುಖ್ಯ ವಿಷಯಗಳ ಮತ್ತು ಉದಾಹೃತಗಳ ಆಕಾರಾದಿ.
3. ಕೆಲವು ಚಿತ್ರಪಟಗಳು.

ಟಿಪ್ಪಣಿಗಳು ಏಳಿವೆ. ವಾಚಕರು ಕೇಳಿದ್ದ ಪ್ರಶ್ನೆಗಳಿಗೆ ಉತ್ತರಗಳು.

ಈ ಗ್ರಂಥಕ್ಕೆ ಪರಿಶಿಷ್ಟಪ್ರಾಯವಾದದ್ದು 'ಶ್ರೀಕೃಷ್ಣಪರೀಕ್ಷಣಂ' ಎಂಬ ಗ್ರಂಥ. ಅದು ಈಚೆಗೆ ಪ್ರಕಟವಾದದ್ದು. ಅದರ ವಿಷಯವು ಲೋಕನಿರ್ವಾಹದಿಂದಲೂ ಕಾಮಭೋಗದಿಂದಲೂ ಆಗಬಹುದಾದ ಜೀವಸಂಸ್ಕಾರ. ಭಗವದ್ಗೀತೆಯಲ್ಲಿ ಮುಖ್ಯವಾದ ವಿಷಯವು ಅಧ್ಯಾತ್ಮ. 'ಶ್ರೀಕೃಷ್ಣಪರೀಕ್ಷಣಂ' ಗ್ರಂಥದ ವಿಷಯವು, ಗೀತಾಚಾರ್ಯನು ಸಂಸಾರಧರ್ಮವನ್ನು ಕುರಿತು ಮಾಡಿದ ಉಪದೇಶವೆಂದು ನಾನು ಭಾವಿಸಿಕೊಂಡಿರುವುದರ ಚಿತ್ರ.

ದ್ವೈತಾದ್ವೈತಾದಿ ಮತಭೇದಗಳನ್ನು ಕುರಿತು 'ಶೃಂಗಾರ ಮಂಗಳಂ' ಮತ್ತು 'ಶ್ರೀಕೃಷ್ಣಪರೀಕ್ಷಣಂ: ನಾರದ-ಕೃಷ್ಣಸಂವಾದ' ಪದ್ಯಗಳನ್ನು ವಾಚಕರು ಸಮಾಲೋಚಿಸಬೇಕೆಂದು ಬೇಡುತ್ತೇನೆ.

ಈ ಸಾರಿ ಸೇರಿಸಿರುವ ಚಿತ್ರಗಳಲ್ಲಿ ಶ್ರೀ ವೇದವ್ಯಾಸ ಮಹರ್ಷಿಗಳ ರೇಖಾಚಿತ್ರಗಳು ಕಾಂಚೀಪುರದ ಪುರಾತನ ದೇವಾಲಯದ ಅಥವಾ ಮಠದ ಭಿತ್ತಿಯ ಮೇಲೆ ಯಾರೋ ಪೂರ್ವಿಕರು –ಬಹುಶಃ ಪೂರ್ವದ ಕಾಂಚೀ ಜಗದ್ಗುರು ಮಠಾಧಿಪತಿಗಳು–ಚಿತ್ರಣ ಮಾಡಿಸಿದವು. ಅವುಗಳನ್ನು ನನಗಾಗಿ ಪ್ರತಿಲೇಖ ಮಾಡಿಸಿಕೊಟ್ಟವರು ನನ್ನ ಮಿತ್ರರು ಮದರಾಸಿನ 'ಕಲ್ಕಿ' ಪತ್ರಿಕೆಯ ಸಂಪಾದಕರು ಶ್ರೀ ಟಿ. ಸದಾಶಿವಂ ಅವರು.

ನನ್ನ ಮಿತ್ರರು ಚಿ ॥ ಶ್ರೀ ಎಸ್. ಆರ್. ರಾಮಸ್ವಾಮಿ ಅವರು ಈ ಸಾರಿಯೂ ಗ್ರಂಥ ಮುದ್ರಣಕಾರ್ಯದಲ್ಲಿ ಯಥೇಷ್ಟವಾಗಿ ಸಹಾಯ ಕೊಟ್ಟಿರುವುದರ ಜೊತೆಗೆ ಮುಖ್ಯ ಮುಖ್ಯ ವಿಷಯಗಳ ಮತ್ತು ಉದಾಹೃತಗಳ ಅಕಾರಾದಿಯನ್ನು ರಚಿಸುವ ಶ್ರಮೆಯನ್ನೂ ವಹಿಸಿದ್ದಾರೆ. ಮಿತ್ರ ಶ್ರೀ ಚಿದಂಬರಂ ಅವರು ಪರಿಷ್ಕರಣ ಕಾರ್ಯದಲ್ಲಿ ಸಹಾಯ ಮಾಡಿದ್ದಾರೆ. ಇನ್ನು ಕೆಲವರು ಸ್ನೇಹಿತರೂ ಈ ಕಾರ್ಯದಲ್ಲಿ ಸಹಕರಿಸಿದ್ದಾರೆ.

ಈ ಎಲ್ಲ ಉಪಕಾರಿಗಳಿಗೂ ನಾನು ಕೃತಜ್ಞನಾಗಿದ್ದುಕೊಂಡು ಅವರು ನಿರಂತರವೂ ಭಗವತ್ಕೃಪೆಗೆ ಪಾತ್ರರಾಗಿರಲೆಂದು ಪ್ರಾರ್ಥಿಸುತ್ತೇನೆ.

ಮಹಾಜನರು ಈ ಮುದ್ರಣವನ್ನು ಕೃಪೆಯಿಟ್ಟು ಸ್ವೀಕರಿಸಿಯಾರೆಂದು ನಂಬಿಕೊಂಡಿದ್ದೇನೆ. ಶ್ರೀಮದ್ಭಗವದ್ಗೀತೆಯ ತತ್ತ್ವಗಳೂ ಭಾವಗಳೂ ನೀತಿನಿಯಮಗಳೂ ಆದರ್ಶಗಳೂ ನಮ್ಮ ಜನದಲ್ಲಿ ವ್ಯಾಪಿಸಿ ಪ್ರಚುರವಾಗಿ ಜಗತ್ತಿಗೆ ಮಂಗಳಕರಗಳಾಗಲಿ.

ಸರ್ವಂ ಶಿವಂ.

ಡಿ.ವಿ.ಜಿ.

ವಿರೋಧಿಕೃತ್
೯ ಜೂನ್ ೧೯೭೧

ಜಗದ್ರಣಾಂಗಣೆ ಯಾಸ್ಯ ಸ್ಮರಣಂ ಜಯಕಾರಣಮ್ ।
ಪಾರ್ಥಸಾರಥಯೇ ತಸ್ಮೈ ಶ್ರೀಕೃಷ್ಣಬ್ರಹ್ಮಣೇ ನಮಃ ।।

ಪ್ರಕರಣ ೧

ಭೂಮಿಕೆ

ಓಂತತ್ಸತ್‌ಪದಸೂಚ್ಯಾಯ
ವಿಷ್ಣವೇ ಪರಮಾತ್ಮನೇ ।
ಜಗಜ್ಜೀವೇಶತತ್ತ್ವಾಯ
ಶ್ರೀಕೃಷ್ಣಬ್ರಹ್ಮಣೇ ನಮಃ

॥ ೧ ॥

ಮರ್ತ್ಯಾತಿಮರ್ತ್ಯಲೀಲಾಯ
ಪೃಥಗ್ಜೀವಸ್ವಬನ್ಧವೇ ।
ಧರ್ಮಾಧಿಧರ್ಮಗುರವೇ
ಶ್ರೀಕೃಷ್ಣಬ್ರಹ್ಮಣೇ ನಮಃ

॥ ೨ ॥

ಏಕೋ ಬಹೂನಾಂ ಯಃ ಕಾಮಾನ್
ದದಾತಿ ಬಹುರೂಪತಃ ।
ರಾಸಿಕ್ಯಮೂರ್ತಯೇ ತಸ್ಮೈ
ಶ್ರೀಕೃಷ್ಣಬ್ರಹ್ಮಣೇ ನಮಃ

॥ ೩ ॥

ನಾನಾಮನುಷ್ಯಹೃದಯ-
ಸ್ಪಂದಸೂಕ್ಷ್ಮಾನುಕಂಪಿನೇ ।
ತತ್ತದ್ಧಿತೋಪಾಯವಿದೇ
ಶ್ರೀಕೃಷ್ಣಬ್ರಹ್ಮಣೇ ನಮಃ

॥ ೪ ॥

ಪ್ರತಿಜೀವಪೃಥಗ್ವ್ಯಾಧಿ-
ನಿದಾನೈಕಚಿಕಿತ್ಸಿನೇ ।
ಸರ್ವರೋಗೈಕವೈದ್ಯಾಯ
ಶ್ರೀಕೃಷ್ಣಬ್ರಹ್ಮಣೇ ನಮಃ

॥ ೫ ॥

ಜಗದ್ರಣಾಂಗಣೇ ಯಸ್ಯ
ಸ್ಮರಣಂ ಜಯಕಾರಣಮ್ ।
ಪಾರ್ಥಸಾರಥಯೇ ತಸ್ಮೈ
ಶ್ರೀಕೃಷ್ಣಬ್ರಹ್ಮಣೇ ನಮಃ

॥ ೬ ॥

ತದ್ಗೀತಾರ್ಥಾನುವಾದಾಯ
ಯತ್ಯತೇ ತತ್ಪ್ರಸಾದತಃ ।
ಸಾಮಾನ್ಯಜನಮುದ್ದಿಶ್ಯ
ಮಯಾ ಕರ್ಣಾಟಭಾಷಯಾ

॥ ೭ ॥

ವ್ಯಾಖ್ಯಾತಾ ಬಹುಭಿರ್ಗೀತಾ
ನಾನಾಮತವಿಭೇದತಃ ।
ವಿತರ್ಕಾಂಸ್ತು ವಿಹಾಯಾತ್ರ
ಋಜ್ವರ್ಥಶ್ಚಿನ್ತ್ಯತೇ ಮಯಾ

॥ ೮ ॥

ಜೀವನವ್ಯವಹಾರೇಷು
ಸರ್ವೇಷ್ವಪಿ ಚ ಸರ್ವದಾ ।
ತತ್ತಾತ್ಪರ್ಯಾನ್ವಯಾದೇವ
ಗೀತಾಪಾಠಫಲೋದಯಃ

॥ ೯ ॥

ತಸ್ಮಾದಸ್ಮಿನ್ ಪ್ರವೃತ್ತೋಽಹ-
ಮನುಷ್ಠಾನೋಪಯೋಗದೃಕ್ ।
ಸನ್ಮಾರ್ಗದೃಷ್ಟಿಶುದ್ಧಿಂ ವೋ
ದದ್ಯಾದನ್ತರ್ಗುರುರ್ಹರಿಃ

॥ ೧೦ ॥

ಬ್ರಹ್ಮಪತ್ತನವೀಥೀಷು
ಚರತಾ ಜೀವಸಂಭ್ರಮಾನ್ ।
ಪಶ್ಯತಾ ಹಿತನಿಶ್ರೇಣೀ-
ಮಿಚ್ಛತಾ ಶಿವಭಿಕ್ಷುಣಾ

॥ ೧೧ ॥

ಕೃತಂ ಸ್ವಚಿತ್ತಶುದ್ಧ್ಯರ್ಥಂ
ನ ಜ್ಞಂಮನ್ಯತಯಾ ತ್ವಿದಮ್ ।
ಕ್ಷಮ್ಯತಾಂ ಸಾಹಸಂ ಸದ್ಭಿಃ
ಕೃಪಯಾ ಚಾವಲೋಕ್ಯತಾಮ್

॥ ೧೨ ॥

ಓಂ ತತ್ಸತ್ ಪದಚಿಂತ್ಯನ- ।
ನಂತಂ ವಿಶ್ವಪ್ರಪಂಚಲೀಲೋದಂತಂ ॥
ಕಾಂತಂ ಚಿತ್ಪ್ರಭೆಯಿಂ ಜಗ- ।
ಕಂತರ್ಯಾಮಿ ಪ್ರಭು ಪ್ರಸನ್ನಂ ಕೃಷ್ಣಂ

॥ ೧ ॥

ಮರ್ತ್ಯಾತಿಮರ್ತ್ಯಲೀಲಂ ।
ನಿತ್ಯಂ ಧರ್ಮಾಧಿಧರ್ಮತತ್ತ್ವಾಧಾರಂ ॥
ಪ್ರತ್ಯಕ್ಷ ಪರಮದೈವಂ ।
ಸತ್ಯದಿ ನಡೆಯಿಸುಗೆ ನಮ್ಮನರ್ಜುನಸೂತಂ

॥ ೨ ॥

ಏಕೋ ವಿದಧಾತಿ ಬಹೂ- ।
ನಾಂ ಕಾಮಾನ್ ಎಂಬ ವೇದವಚವಂ ಪ್ರತ್ಯ- ॥
ಕ್ಷೀಕರಿಸಿದ ಬಹುರೂಪಂ ।
ಶ್ರೀಕೃಷ್ಣಂ ತೋರುಗೆಮಗೆ ಮಂಗಲಗತಿಯಂ

॥ ೩ ॥

ಗೋಪೀಮಧ್ಯದಿ ರಸಿಕಂ ।
ತಾಪಸರೊಳ್ ತಪಸಿ ರಾಜ್ಯತಂತ್ರದಿ ಶುಕ್ರಂ ॥
ಸೂಪಾಯಂ ರಣರಂಗದೊ- ।
ಳಾಪತ್ಸಖನಾಶ್ರಿತರ್ಗೆ ಸರ್ವಂ ಕೃಷ್ಣಂ

॥ ೪ ॥

ಪುರುಷಾರ್ಥಚತುಷ್ಕವ ನಿಜ- ।
ಚರಿತೆಗಳೊಳ್ ಕಣ್ಗೆ ತೋರ್ದ ನಾನಾ ಜೀವೋ- ॥
ದ್ಧರಣೋಪಾಯಸಮರ್ಥಂ ।
ಗುರು ಕೃಷ್ಣಂ ನೆಲಸಿ ನಲಿಗೆ ಮನ್ಮಾನಸದೊಳ್

॥ ೫ ॥

ಹರಿಯವತಾರಗಳೊಳ್ ಯದು- ।
ವರನವೊಲಾರ್ ಮನುಜಹೃದಯಮರ್ಮವನರಿತನ್ ॥
ಗುರುವೆಮಗದರಿಂ ಕೃಷ್ಣಂ ।
ಧರಣಿಯ ಗುಣವರಿಯದವನ ಕೃಷಿಯಿಂದಹುದೇಂ

॥ ೬ ॥

ಮಾನವಹೃನ್ಮರ್ಮದ ವಿ- ।
ಜ್ಞಾನಿ ಶ್ರೀಕೃಷ್ಣನವನೆ ಭವಗದಭಿಷಜಂ ॥
ಮಾನಸಕಾಯಕರೋಗನಿ- ।
ದಾನವ ಕಾಣದನ ವೈದ್ಯವೆಂತುಪಕರಿಕುಂ

॥ ೭ ॥

ಪ್ರತ್ಯಕ್ಷಧರ್ಮನ್ ಅಂತೆಯೆ ।
ಮೂರ್ತಿಮದಧಿಧರ್ಮನ್ ಅಖಿಲ ಸುಲಭೋಪಾಸ್ಯಂ ॥
ಪಾರ್ಥಗುರು ಪರಮತೇಜಂ ।
ನಿತ್ಯಂ ತನ್ನಡಿಗೆ ನಮಗೆ ತೋರುಗೆ ಪಥಮಂ

॥ ೮ ॥

ಭಗವದ್ಗೀತಾಶಾಸ್ತ್ರಂ ।
ನಿಗಮಾಗಮಸಾರಮಖಿಲಮನುಜಕುಲಕ್ಕಂ ॥
ಲಘುವೆನಿಸಿ ಜಗದ್ಭಾರವ ।
ಸುಗಮವನಾಗಿಪುದು ಜೀವಿತೋತ್ತಮಪದವಂ

॥ ೯ ॥

ಶ್ರೀವೇದವ್ಯಾಸ ನಮೋ ।
ಭೂವಿಯದಾದ್ಯಂತದರ್ಶಿ ಕವಿಸೂರ್ಯ ನಮೋ ॥
ಜೀವಿತಸಾರಜ್ಞ ನಮೋ ।
ಭಾವಿತವಿಶ್ವಪ್ರಜಾಭವಿಷ್ಯಾರ್ಥ ನಮೋ

॥ ೧೦ ॥

ಗುರುವೇ ನಿನ್ನಿತಿಹಾಸಾಂ- ।
ಬರಭಾಸ್ಕರದೀಪ್ತಿನಿಧಿಯ ಭಗವದ್ಗೀತಾ- ॥
ಪರಮಾರ್ಥವನೆನ್ನ ಜನ- ।
ಕ್ಕರಿಪಲ್ಕನುಮತಿಯ ನೀಡು ಮತಿವಾಗ್ಬಲಮಂ

॥ ೧೧ ॥

ಗಿರಿಶಿಖರದಿಂದೆ ಧರೆಯಂ ।
ನಿರುಕಿಸಿದರ್ ಪೂರ್ವಭಾಷ್ಯಕಾರರ್ ನಾಮೀ ॥
ಧರಣಿಯ ನಿಮ್ನದೆ ಜೀವಿತ- ।
ಗಿರಿಶಿಖರವ ನೋಳ್ಪ ನಮ್ರ ಲೌಕಿಕರಲ್ತೇ

॥ ೧೨ ॥

ಮೋಕ್ಷವ ಪಾಡುಗೆ ಸಿದ್ಧರ್ ।
ಲಕ್ಷ್ಯಂ ಸಾಧಕರಿಗಿರ್ಕೆ ಜೀವನನಯದೊಳ್ ॥
ದಕ್ಷತೆ ಕೃಷಿಕರ್ಮದೊಳಿರೆ ।
ಸುಕ್ಷೇತ್ರಂ ತಾನೆ ಫಲಿಸದೇಂ ನಿರ್ಯತ್ನಂ

॥ ೧೩ ॥

ನಾರಾಯಣನಂ ನರನಂ ।
ಭಾರತಿಯಂ ವ್ಯಾಸನಂ ಸದಾ ನಮಿಸುತೆ ಸಂ- ॥
ಸಾರಾಹವಮಂ ಭಾರತ ।
ಸಾರಥಿಗೀತೋಪದಿಷ್ಟಬಲದಿಂ ಗೆಲುವಂ

॥ ೧೪ ॥

ಗ್ರಂಥಾವತರಣ

ಗುರಿಯೇಂ ಜೀವನಕದು ಬರಿ ।
ಪರದಾಟಮೊ ಮನಸು ಬೇಡುವಿಂದ್ರಿಯಸುಖಮೋ ॥
ಸಿರಿತನಮೋ ದೊರೆತನಮೋ ।
ಸೆರೆಮನೆಯೋ ತಿರುಕನುಂಡ ಕನಸೌತಣಮೋ

॥ ೧ ॥

ಜೀವಿತದರ್ಥವದೇನ್ ಅದು ।
ದೈವಾಗ್ರಹಬಲಿಯೊ ಸೃಷ್ಟಿಯಂಧವಿಕಟಮೋ ॥

ಸೇವಾರ್ಹಮದರೊಳೇನ್ ಅದು ।
ಭಾವುಕರಿಗೆ ಸುಕೃತಭೂಮಿಯದು ಪಿರಿಯರ್ಥಂ

॥ ೨ ॥

ತತ್ತ್ವವಿವೇಕದೆ ಜೀವವಿ- ।
ದುತ್ತಮಪದಕಡರಲಹುದು ಸಂಸ್ಕೃತಿನಯದಿಂ ॥
ಆತ್ಮೋದ್ಧೃತಿಯವಕಾಶಮೆ ।
ವಿತ್ತಗಳೊಳ್ ಪರಮವಿತ್ತಮದು ಪುರುಷವಶಂ

॥ ೩ ॥

ವರಗಳೊಳಗ್ರದ ವರಮಿದು ।
ನರಜನ್ಮಂ ಮೃಗಕಲಂಕಶೇಷವ ಕಳೆದೀ ॥
ಪುರುಷತೆಯಿಂದಧಿಪುರುಷತೆ- ।
ಗರಿವಿಂ ಪ್ರಗತಿಯ ಗಳಿಪ್ಪ ಸಾಧನರಂಗಂ

॥ ೪ ॥

ಪ್ರತಿಯೊಬ್ಬ ಮನುಷ್ಯನಲ್ಲಿಯೂ ತಾನು ಚೆನ್ನಾಗಿ ಬದುಕಬೇಕು, ತನ್ನ ಬದುಕನ್ನು ಚೆನ್ನಾಗಿ ನಡಸಬೇಕು–ಎಂಬ ಆಶೆ ಸ್ವಾಭಾವಿಕವಾಗಿ ಇರುತ್ತದಲ್ಲವೆ? ನಮ್ಮ ಬದುಕಿನಲ್ಲಿ ಯಾವುದು ಚೆನ್ನ? ಯಾವುದು ಸೊಗಸು? ಯಾವುದು ಬೆಲೆಬಾಳತಕ್ಕದ್ದು? ಚೆನ್ನ ಎಂದರೆ ಏನು? ಬೆಲೆ ಗೊತ್ತುಮಾಡುವುದು ಹೇಗೆ? ಬದುಕನ್ನು ಚೆನ್ನ ಮಾಡುವುದು ಹೇಗೆ? ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕೆಂದು ಯಾರಿಗೆ ಮನಸ್ಸುಂಟೋ ಅಂಥವರು ಅಕ್ಕರೆಯಿಂದ ಓದಿ ತಿಳಿದುಕೊಳ್ಳಬೇಕಾದ ಗ್ರಂಥ ಭಗವದ್ಗೀತೆ. ಅದರಲ್ಲಿ ಜೀವ ಎಂದರೆ ಏನು, ಜೀವಕ್ಕೂ ಜಗತ್ತಿಗೂ ಏನು ಸಂಬಂಧ, ದೇವರು ಎಂಬುದೇನು, ಜೀವಕ್ಕೂ ದೇವರಿಗೂ ಸಂಬಂಧವೆಂಥಾದ್ದು–ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ.

ಭಗವದ್ಗೀತೆಯನ್ನು ಪೂರ್ವಿಕರು ಮೋಕ್ಷಶಾಸ್ತ್ರ ಎಂದು ಕರೆದಿದ್ದಾರೆ. ಅದು ಮೋಕ್ಷಶಾಸ್ತ್ರ ಹೌದು; ಅದರ ಜೊತೆಗೆ ಜೀವನಶಾಸ್ತ್ರವೂ ಹೌದು. ಗುಡಿಯಲ್ಲಿ ಮೂರ್ತಿಗೃಹ, ಮುಖಮಂಟಪ, ಪ್ರದಕ್ಷಿಣಪಥ, ಗೋಪುರ–ಇವೆಲ್ಲ ಸೇರಿರುತ್ತವೆ. ಗುಡಿಯ ಮಹಾದ್ವಾರದ ಗೋಪುರವನ್ನು ಹತ್ತಿ ಅದರ ತುಟ್ಟತುದಿಯಲ್ಲಿರುವ ಕನಕಕಲಶವನ್ನು ಮುಟ್ಟಬಲ್ಲ ಭಕ್ತರು

ಒಬ್ಬರಿದ್ದರೆ, ಪ್ರದಕ್ಷಿಣೆಮಾಡಿ, ಮೂರ್ತಿದರ್ಶನ ಪಡೆದು, ಪ್ರಸಾದದಿಂದ ತೃಪ್ತರಾಗುವ ಭಕ್ತರು ಒಂಬೈನೂರ ತೊಂಭತ್ತೊಂಭತ್ತು ಮಂದಿ ಇರುತ್ತಾರೆ. ಅದರಂತೆ ಭಗವದ್ಗೀತೆಯ ಮೋಕ್ಷೋಪದೇಶದಿಂದ ಪ್ರಯೋಜನ ಪಡೆಯಬಲ್ಲವರು ಒಬ್ಬರಿದ್ದರೆ ಅದರ ಸಾಮಾನ್ಯ ಧರ್ಮೋಪದೇಶದಿಂದ ಪ್ರಯೋಜನ ಪಡೆಯಬಲ್ಲವರು ಒಂಬೈನೂರ ತೊಂಭತ್ತೊಂಭತ್ತು ಮಂದಿ ಇರುತ್ತಾರೆ. ವಿದ್ವಾಂಸರು ಮಾತ್ರವೇ ಅಲ್ಲ, ಸಾಮಾನ್ಯ ಜನರೂ; ಅನುಕೂಲದಲ್ಲಿರುವವರು ಮಾತ್ರವೇ ಅಲ್ಲ, ಕಷ್ಟನಿಷ್ಠುರಗಳಲ್ಲಿ ಒದ್ದಾಡುತ್ತಿರುವವರೂ–ಗಂಡಸರಂತೆ ಹೆಂಗಸರೂ ತಮ್ಮ ತಮ್ಮ ಜೀವನವನ್ನು ಕ್ರಮಕ್ರಮವಾಗಿ ಉತ್ತಮಪಡಿಸಿಕೊಳ್ಳಲು ಅವಶ್ಯವಾದ ತಿಳಿವಳಿಕೆ ಭಗವದ್ಗೀತೆಯಲ್ಲಿ ದೊರೆಯುತ್ತದೆ. ಪ್ರತಿಯೊಬ್ಬನಿಗೂ ಪ್ರತಿಯೊಬ್ಬಳಿಗೂ ಜೀವನದಲ್ಲಿ ಒಂದು ಗೌರವ, ಕರ್ತವ್ಯದ ವಿಷಯದಲ್ಲಿ ಒಂದು ಉತ್ಸಾಹ, ಆಪತ್ಕಾಲದಲ್ಲಿ ಧೈರ್ಯ, ಸಂಶಯ ಹುಟ್ಟಿದಾಗ ನೆಮ್ಮದಿಯನ್ನುಂಟುಮಾಡುವ ನಂಬಿಕೆ–ಇವು ಗೀತೆಯಿಂದ ನಾವು ಸಂಪಾದಿಸಿಕೊಳ್ಳಬಹುದಾದ ಸಂಪತ್ತು.

ಗೀತಾವ್ಯಾಸಂಗಕ್ಕೆ ಪೂರ್ವಸಿದ್ಧತೆ

ಒಂದು ಎಚ್ಚರಿಕೆಯ ಮಾತನ್ನು ನೆನಪಿನಲ್ಲಿರಿಸಿಕೊಳ್ಳಬೇಕು. ಗೀತೆಯ ಎಲ್ಲ ಭಾಗವೂ ಎಲ್ಲರಿಗೂ ಒಂದೇ ಸಮನಾಗಿ ಅರ್ಥವಾಗತಕ್ಕದ್ದಲ್ಲ. ಉಪದೇಶವು ಅದನ್ನು ಬೇಡುವವನ ಯೋಗ್ಯತೆಗೆ ತಕ್ಕದ್ದಾಗಿರಬೇಕಲ್ಲವೆ? ನಮ್ಮನಮ್ಮ ಶ್ರದ್ಧೆಯೂ ನೀತಿ ಸಿದ್ಧತೆಯ ಬುದ್ಧಿಶಕ್ತಿಯೂ ಯಾವಯಾವ ಮಟ್ಟದ್ದಾಗಿರುತ್ತವೆಯೋ ಆಯಾ ಮಟ್ಟಕ್ಕೆ ತಕ್ಕಂತೆ ನಮಗೆ ಗೀತಾರ್ಥವು ದೊರೆಯುತ್ತದೆ. ಆ ಮಟ್ಟಕ್ಕಿಂತ ಮೇಲಿನ ಅಂಶ ನಮಗೆ ಅರ್ಥವಾಗದೆ ಹೋದೀತು. ಹೀಗೆ ಗೀತೆಯ ಒಂದಾನೊಂದು ವಾಕ್ಯ ಅಥವಾ ಪ್ರಕರಣ, ನಮಗೆ ಮೊದಲ ಸಲ, ಎರಡನೆಯ ಸಲ, ಅರ್ಥವಾಗಲಿಲ್ಲವೆಂಬ ಕಾರಣದಿಂದಲಾಗಲಿ, ಅಥವಾ ಅದು ನಮ್ಮ ಬುದ್ಧಿಗೆ ಸರಿತೋರಲಿಲ್ಲವೆಂಬ ಕಾರಣದಿಂದಲಾಗಲಿ, ನಾವು ಗ್ರಂಥವನ್ನು ತಳ್ಳಿಬಿಟ್ಟದ್ದಾದರೆ ನಮಗೆ ನಾವೇ ನಷ್ಟವನ್ನು ಮಾಡಿಕೊಂಡಂತಾಗುತ್ತದೆ. ಸದ್ಯಕ್ಕೆ ಅರ್ಥವಾದಷ್ಟನ್ನು ಗ್ರಹಿಸಿ, ಮನನಮಾಡಿ, ಅಭ್ಯಾಸಕ್ಕೆ ತಂದುಕೊಳ್ಳುವುದರಿಂದ ಅದಕ್ಕಿಂತ ಮೇಲ್ಮಟ್ಟದ ವಿಷಯವನ್ನು ಉತ್ತರೋತ್ತರ ತಿಳಿದುಕೊಳ್ಳಲು ನಮಗೆ ಸಾಮರ್ಥ್ಯ ಬರುತ್ತದೆ. ನಮ್ಮ ಓದು ಸಾರ್ಥಕವಾಗಬೇಕಾದರೆ ತಾಳ್ಮೆಯೂ ನಂಬಿಕೆಯೂ ಅವಶ್ಯವಾದ ಸಿದ್ಧತೆಗಳು. ಮಹಾತ್ಮಾ ಗಾಂಧಿಯವರು ಭಗವದ್ಗೀತೆಯನ್ನು ತಮ್ಮ ತಾಯಿ ಎಂದು ಹೇಳಿಕೊಂಡಿದ್ದಾರೆ. ತಾಯಿಯ ಮಾತಿನಲ್ಲಿ ಮಗುವಿಗೆ ಎಂಥ ನಂಬಿಕೆಯಿರುತ್ತದೆಯೋ, ತಾಯಿ ಬಡಿಸಿದ ಅಡಿಗೆಯಲ್ಲಿ ಮಗುವಿಗೆ ಎಂಥ ಪೂರ್ವವಿಶ್ವಾಸವಿರುತ್ತದೆಯೋ, ಅಂಥ ನಂಬಿಕೆ ವಿಶ್ವಾಸಗಳನ್ನಿಡದಿದ್ದರೆ ಒಂದು ಮಹಾಗ್ರಂಥದ ಅಂತರಂಗ ನಮಗೆ ದೊರಕಲಾರದು.

ಗೀತೆಯ ವಿಷಯ ಗಹನವಾದದ್ದು, ಸೂಕ್ಷ್ಮವಾದದ್ದು, ತೊಡಕುತೊಡಕಾದದ್ದು. ಅದನ್ನು ಬೋಧಿಸುವುದರಲ್ಲಿ ಒಂದು ಮೆಟ್ಟಿಲುಸಾಲುಗಳ ಜೋಡಣೆ ಅವಶ್ಯವಾಗುತ್ತದೆ. ಒಂದೇ ಮೆಟ್ಟಲಿನಲ್ಲಿ, –ಅದರಲ್ಲಿಯೂ ಒಂದೇ ವಾಕ್ಯದಲ್ಲಿ, –ಹೇಳಬೇಕಾದದ್ದನ್ನೆಲ್ಲ ಪೂರ್ತಿಯಾಗಿ ವಿವರಿಸುವುದು–ನಮ್ಮಂಥ ಸಾಮಾನ್ಯರಿಗೆ ವಿವರಿಸುವುದು–ಸಾಧ್ಯವಲ್ಲ. ಜೀವನತತ್ತ್ವವು ಒಂದು ದೊಡ್ಡ ಬೆಟ್ಟ. ಅದನ್ನು ಹತ್ತಹೊರಟವನು ಮೆಟ್ಟಲುಮೆಟ್ಟಲಾಗಿ ಕಾಲಿಟ್ಟು, ಅಲ್ಲಲ್ಲಿ ನಿಂತು ವಿಶ್ರಾಂತಿ ಪಡೆದು, ಅಲ್ಲಲ್ಲಿಯ ವಾತಾವರಣವನ್ನು ಉಸಿರಿ ಅನುಭವಿಸಿ, ಅಂತಸ್ತಂತಸ್ತಾಗಿ ಮೇಲಕ್ಕೆ ಸಾಗಲು ಸಿದ್ಧನಾಗಬೇಕು. ಆತುರವು ಇಲ್ಲಿ ಸಲ್ಲದು. ಆತುರಪಟ್ಟರೆ

ಅಪಾರ್ಥವಾಗುವ ಅಪಾಯ ಉಂಟು. ಮನಸ್ಸಮಾಧಾನ, ಸಾವಧಾನ–ಈ ಎರಡೂ ಗೀತಾಭ್ಯಾಸಿಗಳಿಗೆ ಮೊದಲು ಇರಬೇಕಾದ ಗುಣಗಳು.

ಮತಭೇದಗಳು

ಇನ್ನೊಂದು ಮುನ್ನೆಚ್ಚರಿಕೆಯೂ ಇಲ್ಲಿ ಅವಶ್ಯವೆನಿಸುತ್ತದೆ. ಅದು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ, ಭೇದಾಭೇದವಾದ–ಈ ವಾದಭೇದಗಳನ್ನು ಕುರಿತದ್ದು. ಈ ನಾನಾ ಮತಗಳು ಜೀವದ ಸದ್ಗತಿಯ ಶಿಖರದ ಅನುಭವವನ್ನು ಕುರಿತವು; ಜೀವ-ಬ್ರಹ್ಮ ಸಂಬಂಧವನ್ನು ಕುರಿತವು; ಮೋಕ್ಷಪರಿಣಾಮವನ್ನು ಕುರಿತವು. ಬೆಟ್ಟ ಹತ್ತಬೇಕೆಂದು ಹೊರಟು ಅದರ ಪಾದದ ಬಳಿ ನಿಂತಿರುವವರು ಶಿಖರದ ಮೇಲಣ ಗುಡಿಯೊಳಗಿರಬಹುದಾದ ಸಂದರ್ಭವನ್ನು ಚರ್ಚೆಮಾಡುವುದು ವೃಥಾ ಕಾಲಹರಣ ತಾನೆ? ಗುಡಿಯ ಹಿಂದೆ ಗವಿಯೊಂದಿಲ್ಲವೆ? ಗವಿಯಲ್ಲಿ ಕಗ್ಗತ್ತಲಲ್ಲವೆ? ಅದರಲ್ಲಿರುವುದು ಹಾವೋ, ಇಲಿಯೋ? ಹಾವಿನ ಹೊಟ್ಟೆಯಲ್ಲಿ ಇಲಿಯೋ, ಇಲಿಯಿಂದ ಕಣ್ಣು ಕುಕ್ಕಿಸಿಕೊಂಡ ಹಾವೋ? ಅಥವಾ ಯೋಗನಿದ್ರೆಯಲ್ಲಿರುವ ಹಾವು ಇಲಿಗಳೋ? ಹಾಗಲ್ಲದಿದ್ದರೆ ತಪೋ ಮಹಿಮೆಯಿಂದ ನಿರ್ವೈರಿಗಳಾದ ಹಾವು ಇಲಿಗಳೋ? ಗವಿಯೊಳಕ್ಕೆ ಹೊಕ್ಕು ನೋಡಿ ಬಂದವರು ಹೇಳಬಹುದಾದ ಸುದ್ದಿ ಅದು. ಅವರು ನಮಗೆ ದೊರೆಯುವಂತೆ ತೋರಿಲ್ಲ.

ಮತಾಚಾರ್ಯರುಗಳ ಭಾಷ್ಯವ್ಯಾಖ್ಯಾನಗಳಿಲ್ಲವೆ?–ಎಂದರೆ, ಅವರಲ್ಲಿ ಏಕವಾಕ್ಯತೆಯಿಲ್ಲ. ಯಾರನ್ನು ನಂಬೋಣ? ಸೂಕ್ಷ್ಮಾರ್ಥವುಳ್ಳ ಶಾಸ್ತ್ರವಾಕ್ಯಕ್ಕೆ ಅರ್ಥ ಹೇಳುವುದು ವ್ಯಾಖ್ಯಾನಕಾರರ ಚಮತ್ಕಾರ. ತರ್ಕ ವ್ಯಾಕರಣಗಳ ಯುಕ್ತಿಬಲದಿಂದ ಅದ್ವೈತವನ್ನು ದ್ವೈತವೆಂದು ಸಾಧಿಸಲಾದೀತು, ದ್ವೈತವನ್ನು ಅದ್ವೈತವೆಂದೇ ಸಾಧಿಸಲಾದೀತು. ಈ ಮಹೋನ್ನತ ವಿಚಾರದಲ್ಲಿ ಪರಮಪ್ರಮಾಣವಾಗಬಲ್ಲದ್ದು ಜಿಜ್ಞಾಸುವಿನ ಸ್ವಾನುಭವ. ಅವರವರ ಸ್ವಾನುಭವಕ್ಕೆ ಸಮ್ಮತವಾದದ್ದು ಅವರವರ ಪಾಲಿಗೆ ಸತ್ಯಾಂಶ. "ಸತ್ಯವೆಂಬುದರಲ್ಲಿ ಅಂಶವೆಂಬುದುಂಟೆ? ಸತ್ಯ ಅಖಂಡವಸ್ತುವಲ್ಲವೆ?" –ಎಂದು ಯಾರಾದರೂ ಕೇಳುವುದಾದರೆ, ಅವರಿಗೆ "ಸತ್ಯ ಅಖಂಡವಸ್ತುವಿರಬಹುದು; ಆದರೆ ಅದನ್ನು ನೋಡುವವನ ದೃಷ್ಟಿ ಖಂಡಖಂಡವಾಗಿಯೇ ವಸ್ತುವನ್ನು ಗ್ರಹಿಸಬಲ್ಲದ್ದು. ಕಣ್ಣಿರುವುದು ಮುಖದ ಒಂದು ಪಕ್ಕದಲ್ಲಿಯೇ ಅಲ್ಲವೆ? ಅದು ಒಂದು ಸ್ಥಲದಿಂದ ಒಂದು ಸಾರಿ ಕಾಣಲಿಕ್ಕಾಗುವುದು ವಸ್ತುವಿನ ಒಂದು ಪಾರ್ಶ್ವವನ್ನು ಮಾತ್ರವೇ" –ಎಂದು ಉತ್ತರವಾಗುತ್ತದೆ.

ಸತ್ಯ ಒಂದು; ಸತ್ಯದರ್ಶನ ಸಾವಿರ. ಇದನ್ನು ಜ್ಞಾಪದಲ್ಲಿರಿಸಿಕೊಂಡರೆ, ದ್ವೈತಾದ್ವೈತಾದಿ ಹಿಂದೂ ಮತಭೇದಗಳು ಹಾಗಿರಲಿ, ಜೈನ ಬೌದ್ಧ ಮುಸಲ್ಮಾನ್ ಕ್ರೈಸ್ತ ಮೊದಲಾದ ಸಮಸ್ತ ಅವೈದಿಕ ಮತಗಳೂ ಗೀತೆಯನ್ನಂಗೀಕರಿಸಬಹುದೆಂದು ಸಿದ್ಧವಾಗುತ್ತದೆ. ಪ್ರಕೃತ, ನಮ್ಮ ಇಲ್ಲಿಯ ಗೀತಾಪ್ರವಚನದಲ್ಲಿ ನಮ್ಮ ಮತಾಚಾರ್ಯರುಗಳಲ್ಲಿ ಯಾರಿಗೂ ವಿರೋಧವಾಗದಂತೆ ಅರ್ಥಾವಲೋಕನೆ ಮಾಡಬೇಕೆಂಬುದು ಉದ್ದೇಶ. ತಕರಾರಿರುವ ಕಡೆ ಅವರವರ ಅಭಿಪ್ರಾಯದ ಸ್ವಾತಂತ್ರ್ಯ ಅವರವರಿಗೆ ಉಂಟೇ ಉಂಟು. ನಮ್ಮ ಗಮನ ಮುಖ್ಯವಾಗಿರುವುದು ತಕರಾರು ಅಂಶದ ಮೇಲೆ ಅಲ್ಲ; ಸರ್ವಸಮ್ಮತವಾಗಬೇಕಾದ ಅಂಶದ ಮೇಲೆ. (ಮತತ್ರಯ ಸಾಮರಸ್ಯ ವಿಧಾನವನ್ನು ಅನುಬಂಧದಲ್ಲಿ ನೋಡಬಹುದು.)

ಗ್ರಂಥಸ್ವರೂಪ

ಭಗವದ್ಗೀತೆಯು ಸಂವಾದಕಥೆ. ಅದು ಅರ್ಜುನನಿಗೂ ಶ್ರೀಕೃಷ್ಣನಿಗೂ ನಡೆದ ಸಂವಾದ. ಅವರಿಬ್ಬರೂ ಯುದ್ಧರಂಗದಲ್ಲಿದ್ದಾರೆ. ಅದು ಕುರುಕ್ಷೇತ್ರ. ಅಲ್ಲಿ ಒಂದು ಕಡೆ ಪಾಂಡವರೂ ಇನ್ನೊಂದು ಕಡೆ ಕೌರವರೂ ಸೇನಾಸಮೇತರಾಗಿ ಯುದ್ಧಕ್ಕೆ ಸಿದ್ಧರಾಗಿ ನಿಂತಿದ್ದಾರೆ. ಅರ್ಜುನನು ಪಂಚಪಾಂಡವರಲ್ಲಿ ನಡುಕಲವನು; ಕೃಷ್ಣನಿಗೆ ಪರಮ ಸ್ನೇಹಿತ. ಆವರೆಗೂ ಯುದ್ಧಕ್ಕೆ ಉತ್ಸಾಹಿಯಾಗಿದ್ದ ಆ ಅರ್ಜುನನು ಯುದ್ಧಪ್ರಾರಂಭದ ಘಳಿಗೆಯಲ್ಲಿ ತನ್ನ ಎದುರಿಗೂ ಸುತ್ತಮುತ್ತಲೂ ಇದ್ದ ಜನಸ್ತೋಮವನ್ನು ನೋಡಿದಾಗ, ಅವರನ್ನು ತಾನು ಕೊಲ್ಲಬೇಕಾಗಿದೆಯಲ್ಲ! ಕೊಲ್ಲಬಹುದೆ? ತನ್ನ ಲಾಭಕ್ಕಾಗಿ ಅಂಥ ಕೆಲಸವನ್ನು ಮಾಡಬಹುದೆ? ಅದು ಮಹಾಪಾಪವಲ್ಲವೆ?– ಎಂದು ಮೊದಲಾದ ಶಂಕೆಗಳೂ ಪ್ರಶ್ನೆಗಳೂ ಅವನ ಮನಸ್ಸಿನಲ್ಲಿ ಹುಟ್ಟುತ್ತವೆ. ಶ್ರೀಕೃಷ್ಣ ಆ ಪ್ರಶ್ನೆಗಳಿಗೆ ಉತ್ತರ ಹೇಳಹೊರಡುತ್ತಾನೆ. ಅದರ ಮೇಲೆ ಮತ್ತೆಮತ್ತೆ ಪ್ರಶ್ನೆ ಮರುಪ್ರಶ್ನೆಗಳು ಹುಟ್ಟುತ್ತವೆ. ಶ್ರೀಕೃಷ್ಣಸ್ವಾಮಿಯು ಅದಕ್ಕೆಲ್ಲ ಸಮಾಧಾನಗಳನ್ನು ಹೇಳುತ್ತಾನೆ. ಹೀಗೆ ಬೆಳೆದಿದೆ ಗ್ರಂಥ. ಆಗ ಅರ್ಜುನನು ಪಟ್ಟ ಸಂಕಟ, ಅವನಿಗಿದ್ದ ಸಂದೇಹ, ಅವನಿಗೆ ತೋರಿದ ಭಯ ಅವನದು ಮಾತ್ರವಲ್ಲ, ಅಂದಿನದು ಮಾತ್ರವಲ್ಲ; ಅಂಥಾ ಧರ್ಮ ಸಂಕಟಗಳೂ ಅನಿಶ್ಚಯಗಳೂ ಭ್ರಾಂತಿಗಳೂ ಭೀತಿಗಳೂ ನಮ್ಮನ್ನೆಲ್ಲ ದಿನೇದಿನೇ ಕಾಡಬರುತ್ತವೆ. ಮನುಷ್ಯಪ್ರಾಣಿಗೆ ಅಂಥಾ ಜೀವನಪ್ರಶ್ನೆಗಳು ಎಲ್ಲ ಯುಗಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಎಲ್ಲ ಸ್ಥಲಗಳಲ್ಲಿಯೂ ಸರ್ವದಾ, ಒಂದು ರೂಪದಲ್ಲಲ್ಲದಿದ್ದರೆ ಇನ್ನೊಂದು ರೂಪದಲ್ಲಿ, ಇದ್ದೇ ಇರುತ್ತವೆ. ಮನುಷ್ಯನ ಮನುಷ್ಯತನ ಆ ಪ್ರಶ್ನೆಗಳನ್ನೆದುರಿಸಿ ಉತ್ತರ ಕೊಡುವುದರಲ್ಲಿರುತ್ತದೆ. ಅಂಥಾ ಉತ್ತರಗಳಿಗೆ ಆಧಾರವನ್ನೊದಗಿಸುವ ದ್ರವ್ಯದ ಗಣಿ ಭಗವದ್ಗೀತೆ. ಹೀಗೆ ಭಗವದ್ಗೀತೆಯು ಸಾರ್ವಕಾಲಿಕವೂ ಸಾರ್ವದೇಶಿಕವೂ ಆದ ಜೀವನಧರ್ಮಶಾಸ್ತ್ರ.

ನಮ್ಮ ವ್ಯಾಸಂಗದಲ್ಲಿ ಗೀತೆಯನ್ನು ಸಾಮಾನ್ಯಜನದ ಆವಶ್ಯಕತೆಯ ದೃಷ್ಟಿಯಿಂದ ನೋಡುವುದಾಗುತ್ತದೆ. ಹೆಚ್ಚಿನ ಶಾಸ್ತ್ರಪ್ರಕ್ರಿಯೆಗಳೂ ತರ್ಕಪ್ರತಿತರ್ಕಗಳೂ ಇಲ್ಲಿ ನಮಗೆ ಮುಖ್ಯವಲ್ಲ. ಇದು ಸಾಮಾನ್ಯ ಮನುಷ್ಯನೊಬ್ಬನು ತನ್ನಂಥ ಸಾಮಾನ್ಯ ಮನುಷ್ಯರೊಡನೆ ಸಹಪಾಠಿಯಾಗಿ ಕುಳಿತು ಮಾಡಿಕೊಂಡ ಪರಸ್ಪರ ಅರ್ಥವಿವರಣೆ.

ಗೀತೆಯು ಶಾಸ್ತ್ರವೆ, ಕಾವ್ಯವೆ?

ಈ ಗ್ರಂಥವನ್ನು ಗೀತಾಶಾಸ್ತ್ರವೆಂದು ಕರೆಯುವುದುಂಟು, ಗೀತೆ ಎಂಬುದಕ್ಕೂ ಶಾಸ್ತ್ರ ಎಂಬುದಕ್ಕೂ ಶಬ್ದಾರ್ಥದಲ್ಲಿ ಪರಸ್ಪರ ವೈಲಕ್ಷಣ್ಯ ತೋರುತ್ತದೆ. ಗೀತೆ ಎಂದರೆ ಹಾಡು. ಅದರ ಮುಖ್ಯ ಕಾರ್ಯ ಮನೋರಂಜನೆ. ಅದು ಬುದ್ಧಿಯನ್ನು ಉದ್ದೇಶಿಸಿದ್ದಲ್ಲ. ಶಾಸ್ತ್ರವಾದರೋ ಬುದ್ಧಿಯನ್ನುದ್ದೇಶಿಸಿದ್ದು. ಅದಕ್ಕೆ ಮನಸ್ಸಿನ ಉದ್ರೇಕ ಸಲ್ಲದು. ಹೀಗೆ ಮೇಲ್ನೋಟಕ್ಕೆ ಗೀತವೂ ಶಾಸ್ತ್ರವೂ ಪರಸ್ಪರ ವ್ಯತಿರಿಕ್ತಗಳು. ಕೃಷ್ಣಾರ್ಜುನಸಂವಾದದಲ್ಲಾದರೋ ಮನಸ್ಸಿನ ಸಂದರ್ಭಗಳೂ ಬುದ್ಧಿಪ್ರಸಕ್ತಿಗಳೂ ಸಮ್ಮಿಳಿತವಾಗಿ ಏಕೀಭವಿಸಿವೆ. ಉದಾಹರಣೆಗಾಗಿ ಮೊದಲನೆಯ ಅಧ್ಯಾಯವೆಲ್ಲ ಅರ್ಜುನನ ವಿಷಾದ ಕರುಣೆಗಳಿಂದ ತುಂಬಿದೆ. ಅದು ಬುದ್ಧಿಕಾರ್ಯಪ್ರಧಾನವಾದದ್ದಲ್ಲ; ಮಾನಸೋದ್ವೇಗಪ್ರಧಾನವಾದದ್ದು. ಹನ್ನೊಂದನೆಯ ಅಧ್ಯಾಯವಾದ ವಿಶ್ವರೂಪ ಪ್ರಕರಣವು ಅದ್ಭುತರಸಭರಿತವಾಗಿದೆ. ಮಿಕ್ಕ ಅಧ್ಯಾಯಗಳಲ್ಲಿಯೂ ಭಕ್ತಿರಸ ಆನಂದ ರಸಗಳು ಉಕ್ಕಿಬರುತ್ತವೆ. ಇವುಗಳ ಪಕ್ಕಪಕ್ಕದಲ್ಲಿಯೇ ಸಾಂಖ್ಯಪ್ರವಚನ, ಧ್ಯಾನ ಯೋಗಪ್ರಕ್ರಿಯೆ, ಯಜ್ಞೋಪದೇಶ–ಇಂಥ ಬುದ್ಧಿ ಪ್ರಯುಕ್ತವಾದ ಉಪದೇಶಗಳಿವೆ. ಆದದ್ದರಿಂದ ಈ ಗ್ರಂಥವನ್ನು ಶಾಸ್ತ್ರಕಾವ್ಯ ಎಂದು ಕರೆಯುವುದು ಉಚಿತವೆಂದೆನಿಸುತ್ತದೆ.

ಮನಸ್ಸಿನ ರಾಜ್ಯವೂ ಬುದ್ಧಿಯ ರಾಜ್ಯವೂ ಬೇರೆ ಬೇರೆ, –ದೂರದೂರ, –ಎಂಬ ಎಣಿಕೆ ಅವೆರಡರ ಉನ್ನತಘಟ್ಟದಲ್ಲಿ ಸಲ್ಲಲಾರದು. ಆ ಉನ್ನತ ದಶೆಯಲ್ಲಿ ಅವೆರಡೂ ಬೆರೆತು ಒಂದಾಗುತ್ತವೆ–ಆದರ್ಶ ದಂಪತಿಗಳಂತೆ. ಮನಸ್ಸು ಬುದ್ಧಿಯನ್ನು ಪ್ರಚೋದಿಸುತ್ತದೆ; ಬುದ್ಧಿ ಮನಸ್ಸನ್ನು ಲಾಲಿಸುತ್ತದೆ. ಬುದ್ಧಿಯ ಪ್ರಕಾಶವೂ, ಮನಸ್ಸಿನ ಪ್ರಸಾದವೂ ಬೆರೆತು ನಾವು ಅಂತರಂಗದಲ್ಲಿ ಚಂದ್ರಕಾಂತಿಯನ್ನನುಭವಿಸುವಂತಾಗುತ್ತದೆ. ಕಣ್ಣು ರೂಪಸೌಂದರ್ಯವನ್ನೂ, ಕಿವಿ ನಾದಸೌಂದರ್ಯವನ್ನೂ ಏಕ ಕಾಲದಲ್ಲಿ ಮನಸ್ಸಿಗೆ ಒದಗಿಸಿದಂತಾಗುತ್ತದೆ. ಅಂಥ ಸುಖ ಶುಭ ಸಮಾಗಮದಲ್ಲಿ ಬುದ್ಧಿಯನ್ನೂ ಮನಸ್ಸನ್ನೂ ಪ್ರತ್ಯೇಕಿಸುವುದು ಅಸಾಧ್ಯ ಮತ್ತು ಅನುಚಿತ. ಭಗವದ್ಗೀತೆ ಅಂಥ ಉಭಯವ್ಯಾಪಕ ಗ್ರಂಥ. ಅದು ಶಾಸ್ತ್ರಕಾವ್ಯ. ಈ ವಿಷಯವನ್ನು ಪುನಃ ಅನುಬಂಧದಲ್ಲಿ ಇನ್ನೂ ವಿಸ್ತಾರವಾಗಿ ಆಲೋಚಿಸುವುದಾಗುತ್ತದೆ.

ಗೀತೆಯಿಂದ ನಮಗೇನು?

ನಾವು ಭಗವದ್ಗೀತೆಯಿಂದ ನಿರೀಕ್ಷಿಸುವುದು ಏನನ್ನು?

ಓದುವುದಕ್ಕೆಂದು ನಾವು ಯಾವ ಗ್ರಂಥವನ್ನಾರಿಸಿಕೊಂಡರೂ ಅದರಲ್ಲಿ ಒಂದು ಸ್ವಾರಸ್ಯವನ್ನು ನಿರೀಕ್ಷಿಸಿಕೊಂಡಿರುತ್ತೇವೆ. ಕಥೆಯೆಂದರೆ ಅದರಲ್ಲಿ ಮನುಷ್ಯ ಸ್ವಭಾವದ ವಿಚಿತ್ರ ಘಟನೆಗಳನ್ನು ನಿರೀಕ್ಷಿಸುತ್ತೇವೆ. ನಾಟಕವೆಂದರೆ ಅದರಲ್ಲಿ ಬಗೆಬಗೆಯ ರಾಗಾವೇಶಗಳನ್ನು ನಿರೀಕ್ಷಿಸುತ್ತೇವೆ. ಪದ್ಯವೆಂದರೆ–ಹಾಡೆಂದರೆ–ಅದರಲ್ಲಿ ನಮ್ಮ ಮನಸ್ಸಿನ ಚಪಲ ಕಳವಳಗಳ ಪ್ರತಿಧ್ವನಿಯನ್ನು ನಿರೀಕ್ಷಿಸುತ್ತೇವೆ. ಚರಿತ್ರೆಯೆಂದರೆ ಅದರಲ್ಲಿ ದೇಶ ವಿದೇಶ ವೃತ್ತಾಂತವನ್ನು ನಿರೀಕ್ಷಿಸುತ್ತೇವೆ. ಜ್ಯೋತಿಷಗ್ರಂಥವೆಂದರೆ ಅದರಲ್ಲಿ ನಕ್ಷತ್ರ ಗ್ರಹಸಂಚಾರವರ್ಣನೆಯನ್ನು ನಿರೀಕ್ಷಿಸುತ್ತೇವೆ. ಹೀಗೆಯೇ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಆಯಾ ಶಾಸ್ತ್ರದ ತಿಳಿವಳಿಕೆಯನ್ನು ನಿರೀಕ್ಷಿಸುತ್ತೇವೆ.

ಗೀತೆಯಲ್ಲಿ ನಮಗಿರುವ ಕುತೂಹಲ ಎಂಥಾದ್ದು? ಇಲ್ಲಿ “ನಾವು” ಎಂದರೆ ಸಾಮಾನ್ಯ ಜನ. ನಾವು ಗೀತೆಯಿಂದ ನಿರೀಕ್ಷಿಸಿಕೊಂಡಿರುವ ಪ್ರಯೋಜನ ಎಂಥಾದ್ದು? ಅದನ್ನು ನಾವು ಮೊದಲು ನಮ್ಮ ಮನಸ್ಸುಗಳಿಗೆ ವಿಶದಪಡಿಸಿಕೊಂಡರೆ ಆಮೇಲೆ ನಮ್ಮ ವ್ಯಾಸಂಗದಿಂದ ಕಾಲ ವ್ಯರ್ಥವಾಯಿತೆಂಬ ದೂರಿಗೆ ಕಾರಣವಿರಲಾರದು.

ಗೀತೆಯ ಲೋಕಪ್ರಸಿದ್ಧಿ ನಮ್ಮನ್ನು ಆಕರ್ಷಿಸಿದೆಯೆಂಬುದನ್ನು ಒಪ್ಪಿಕೊಳ್ಳೋಣ. ನಮ್ಮ ದೇಶದಲ್ಲಿ ಎಷ್ಟೋ ಸಹಸ್ರ ವರ್ಷಗಳಿಂದ ವಿದ್ವಾಂಸರೂ ಸಮಾಜ ಶ್ರೇಷ್ಠರೂ ಗೀತೆಯನ್ನು ಪೂಜಿಸಿಕೊಂಡು ಬಂದಿದ್ದಾರೆ. ನಮ್ಮ ಮತಾಚಾರ್ಯರುಗಳು ಅದನ್ನು ಪ್ರಮಾಣವಾಗಿರಿಸಿಕೊಂಡಿದ್ದಾರೆ. ಯೂರೋಪಿನಲ್ಲಿ ತತ್ತ್ವವಿಚಾರಿಗಳಾದ ಪಂಡಿತರು ಬಹುಮಂದಿ ಅದನ್ನು ಗೌರವಿಸಿದ್ದಾರೆ. ನಮ್ಮ ಜನನಾಯಕರಾದ ಬಾಲಗಂಗಾಧರ ತಿಲಕರು, ಮಹಾತ್ಮ ಗಾಂಧಿಯವರು, ಅರವಿಂದರು ಮುಂತಾದ ಮಹನೀಯರು ಗೀತೆಯನ್ನು ತಮ್ಮ ತಮ್ಮ ಜೀವಿತಕ್ಕೆ ಸ್ಫೂರ್ತಿಯ ಊಟೆಯೆಂದು ಅಂಗೀಕರಿಸಿದ್ದಾರೆ. ಹೀಗೆ ಬಹು ವಿಧಗಳಲ್ಲಿ ಬಹು ಪ್ರಖ್ಯಾತವಾಗಿರುವ ಗ್ರಂಥದಲ್ಲಿ ಏನೋ ಒಂದು ವಿಶೇಷ ಸ್ವಾರಸ್ಯವಿರಲೇಬೆಂಕೆಂಬ ಪೂರ್ವವಿಶ್ವಾಸ ನಮಗೆಲ್ಲ ಇರುವುದು ಸ್ವಾಭಾವಿಕವಾಗಿದೆ.

ನಮ್ಮ ಪೂರ್ವಿಕರ ದೃಷ್ಟಿಯಲ್ಲಿ ಭಗವದ್ಗೀತೆ ಮೋಕ್ಷಶಾಸ್ತ್ರ. ಅವರಿಗೆ–ನೂರಿನ್ನೂರು ವರ್ಷಗಳ ಹಿಂದಿನವರಿಗೆ–ಇಹಜೀವನದ ಕಷ್ಟ ನಮಗಿರುವಷ್ಟು ದೊಡ್ಡದಾಗಿರಲಿಲ್ಲ. ಆಗಿನ ಮುಖ್ಯ ಜೀವಿಕಾವೃತ್ತಿ ಭೂವ್ಯವಸಾಯ. ಮಳೆ ಬೆಳೆ ಸರಿಯಾಗಿ ನಡೆಯುತ್ತಿದ್ದರೆ ಅವರಿಗೆ ಬೇರೆ ಏನೂ ಬೇಕಿರಲಿಲ್ಲ. ಅನ್ಯದೇಶಗಳ ಸಂಪರ್ಕವಿಕ್ಷೇಪಗಳಿರಲಿಲ್ಲ. ಜನತೆ ಪುರಾತನ ಸಂಪ್ರದಾಯದಲ್ಲಿ ಬಾಳುತ್ತಿತ್ತು. ಪೂರ್ವಾಚಾರ, ಪೂರ್ವಧರ್ಮ, ಪೂರ್ವವ್ಯವಸ್ಥೆ–ಇವು ಅವರಿಗೆ ಸಾಕಾಗಿತ್ತು. ತಮ್ಮ ತಂದೆ ತಾತಂದಿರು ಬಾಳಿದಂತೆ ಬಾಳಿಕೊಂಡು ನೆಮ್ಮದಿಯೇ ಸುಖಸಮಸ್ತವೆಂದು ಭಾವಿಸಿದ್ದವರು ಅವರು. ಆದದ್ದರಿಂದ ಅವರಿಗೆ ಇಹವು ಅತಿಭಾರವೆನಿಸದೆ ಸಹ್ಯವಾಗಿದ್ದು, ಅವರ ಮನಸ್ಸು ಪಾರತ್ರಿಕ ಗತಿಯನ್ನು ಹೆಚ್ಚಾಗಿ ಚಿಂತಿಸುತ್ತಿತ್ತು. ಹಾಗೆ ಅವರಿಗೆ ಸಮೀಪವಾಗಿದ್ದ ವಿಚಾರ ಮೋಕ್ಷದ್ದು.

ಇಂದಿನ ನಾವು ಹೊರಬೇಕಾಗಿರುವ ಹೊರೆ ಇಹಜೀವನದ್ದು. ಅನ್ನವಸ್ತ್ರ ಸಂಪಾದನೆ, ಉದ್ಯೋಗಾವಕಾಶ, ಕೇಳೋಣ ಕೀಳೋಣಗಳು, ಸಾಲ ಸುಲಿಗೆಗಳು, ಎಡೆಬಿಡದ ದುಡಿತ, ಬಿಡುವಿಲ್ಲದ ಹಾರಾಟ, ಆಚಾರಕ್ಲೇಶ, ವಿಮತಘರ್ಷಣೆ, ವರ್ಣ ಸಾಂಕರ್ಯ–ಈ ಅನಂತ ಚಿಂತೆಗಳು ನಮ್ಮ ಪಾಡು. ಇದರ ನಡುವೆ ಮೋಕ್ಷವಿಚಾರಕ್ಕೆ ಅವಧಾನವೆಲ್ಲಿ? ಅಂದಂದಿನ ಸಂಸಾರಭಾರ ಅಂದಂದಿಗೆ ಸಾಕಾಗಿದೆ. ಇಂಥಾದ್ದರಲ್ಲಿ ಗೀತೆ ನಮಗೆ ಸಹಾಯಕ್ಕೆ ಬಂದೀತೋ? ಹಾಗಾಗುವುದಾದರೆ ಅದಕ್ಕೊಂದು ಬೆಲೆಯುಂಟು.

ನಾವು ನಿರೀಕ್ಷಿಸುತ್ತಿರುವುದು ಈ ಉಪಕಾರವನ್ನು. ನಮ್ಮ ಮನಸ್ಸುಗಳು ತಲ್ಲಣದಲ್ಲಿವೆ; ನಮಗೆ ಒಂದು ಧೈರ್ಯ ಬೇಕು. ನಮ್ಮ ನಂಬಿಕೆಗಳು ಚೆದರಿ ಅಲುಗಾಡುತ್ತಿವೆ; ಮನಸ್ಸಿಗೆ ಒಂದು ನೆಲೆಮನೆ ಬೇಕು. ಭವಿಷ್ಯವು ಸಂದೇಹಗಳಲ್ಲಿ ಸಿಕ್ಕಿಕೊಂಡಿದೆ; ಒಂದು ಭರವಸೆ ಬೇಕು. ಇಂಥ ವಿವೇಕ, ಇಂಥ ಶ್ರದ್ಧೆ, ಇಂಥ ಸಮಾಧಾನಗಳಿಗೆ ಭಗವದ್ಗೀತೆ ದಾರಿ ತೋರಿಸುವುದಾದರೆ ಅದು ನಮಗೆ ಬೇಕಾದ ಗ್ರಂಥ.

ಇಂಥ ಉಪಕಾರವನ್ನು ಅದು ನಮಗೆ ನೀಡಬಲ್ಲದ್ದೆಂದು ಅದರ ವಾಕ್ಯಗಳಿಂದಲೇ ಸ್ಪಷ್ಟವಾಗುತ್ತದೆ. ನಮ್ಮ ಪ್ರಾಚೀನ ಭಾಷ್ಯಕಾರರುಗಳು ಸಹ ಮೋಕ್ಷಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದ್ದರೂ ಲೋಕಜೀವನದ ದೃಷ್ಟಿಯಿಂದಲೂ ಗೀತೋಪದೇಶವನ್ನು ಎಲ್ಲ ಜನರೂ ಅಂಗೀಕರಿಸತಕ್ಕದೆಂದು ಪ್ರತಿಪಾದಿಸಿದ್ದಾರೆ.

ಲೋಕಜೀವನದ ಸಮ್ಯಗ್ವಿಧಾನವೇ ಧರ್ಮ. ಧರ್ಮ ಮೋಕ್ಷಗಳು ಒಂದನ್ನೊಂದು ಬಿಟ್ಟಿರಲಾರವು. ಮೋಕ್ಷಕ್ಕೆ ಬೇಕಾದ ಪೂರ್ವಸಿದ್ಧತೆ ಧರ್ಮ; ಧರ್ಮದ ಫಲಪರಿಪೂರ್ಣತೆ ಮೋಕ್ಷ. ಹೀಗೆ ಯಾವುದು ಪೂರ್ವಿಕರಿಗೆ ಮೋಕ್ಷಶಾಸ್ತ್ರವಾಯಿತೋ ಅದು ಇಂದಿನವರಿಗೆ ಧರ್ಮಶಾಸ್ತ್ರವಾಗಿದೆ.

ಗ್ರಂಥಪ್ರತಿಜ್ಞೆ

ಭಗವದ್ಗೀತೆಯನ್ನು ಕುರಿತು ಹೊಸ ಪ್ರಬಂಧವೊಂದು ಹೊರಡುವುದಾದರೆ ಅದು "ಇದರಲ್ಲೇನು ವಿಶೇಷ?" ಎಂಬ ನ್ಯಾಯವಾದ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ.

ಗೀತೆಯನ್ನು ಕುರಿತ ಗ್ರಂಥಗಳಿಗೇನೂ ಕೊರತೆಯಿಲ್ಲ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಮೊದಲಾದ ನಾನಾ ಮತಗಳ ಮೂಲ ಪ್ರವರ್ತಕರು ಗೀತೆಯ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ. ಅವುಗಳ ಸುತ್ತಮುತ್ತ ವ್ಯಾಖ್ಯಾನಗಳೂ ಟೀಕೆಗಳೂ ಹತ್ತಾರು ಬೆಳೆದಿವೆ. ಅವಕ್ಕೆ ಪೋಷಕವಾಗಿ ದೀಪಿಕೆಗಳೂ ಸಂಗ್ರಹಗಳೂ ಹೇರಳವಾಗಿ ಆಗಿವೆ. ನಮ್ಮ ದೇಶದ ಎಲ್ಲ ಭಾಷೆಗಳಲ್ಲಿಯೂ ಮಾತ್ರವಲ್ಲದೆ ಇಂಗ್ಲಿಷ್ ಮೊದಲಾದ ಅನ್ಯಭಾಷೆಗಳಲ್ಲಿಯೂ ಗೀತಾವಿಷಯಕವಾದ ವಿವರಣೋಪನ್ಯಾಸಗಳು ಲೆಕ್ಕಕ್ಕೆ ಸಿಕ್ಕದಷ್ಟು ಹುಟ್ಟಿಕೊಂಡೂ ಹುಟ್ಟುತ್ತಲೂ ಇವೆ. ಇಂಥ ಸನ್ನಿವೇಶದಲ್ಲಿ ಹೊಸದೊಂದು ಅಂಥ ಪ್ರಬಂಧಕ್ಕೆ ಸ್ಥಾನವೆಲ್ಲಿ?

ಪ್ರಕೃತ ಲೇಖಕನು ಹೇಳುವ ಸಮಾಧಾನ ಹೀಗಿದೆ :

1. ಪೂರ್ವಾಚಾರ್ಯರುಗಳ ದೃಷ್ಟಿಯಲ್ಲಿ ಗೀತೆಯು ಮುಖ್ಯವಾಗಿ ಮೋಕ್ಷಶಾಸ್ತ್ರ. ಇಲ್ಲಿ ಅದು ಮುಖ್ಯವಾಗಿ ಜೀವನಶಾಸ್ತ್ರ. ಪೂರ್ವಾಚಾರ್ಯರುಗಳು ವೈರಾಗ್ಯಕ್ಕೆ ಹೆಚ್ಚುಪ್ರಾಶಸ್ತ್ಯ ಕೊಟ್ಟರು. ನಾವು ಸದ್ಯದ ಲೋಕದಲ್ಲಿ ಬಾಳಿ ಅದರ ಪ್ರಶ್ನೆಗಳನ್ನು ಬಿಡಿಸುವ ಮಾರ್ಗವನ್ನು ಕಾಣಬೇಕಾಗಿದೆ. ಗೀತೋಪದೇಶದ ಲೌಕಿಕ ಜೀವನಾನ್ವಯ ನಮ್ಮ ಉದ್ದೇಶ.
2. ಪೂರ್ವಾಚಾರ್ಯರುಗಳು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೊದಲಾದ ಮತ ಭೇದಗಳಿಗೆ ಹೆಚ್ಚು ಗಮನ ಕೊಟ್ಟಿದ್ದಾರೆ. ಇಲ್ಲಿ ಆ ಮತಗಳು ಪರಸ್ಪರ ವಿರೋಧಗಳಲ್ಲದೆ ಸೋದರರರಂತೆ ಪ್ರತ್ಯೇಕಮಾತ್ರಗಳೆಂದೂ ಅವುಗಳಲ್ಲಿ ಸಾಮರಸ್ಯವು ಸಾಧ್ಯವೆಂದೂ ನಂಬಿಕೆಯನ್ನಿರಿಸಿಕೊಂಡಿದೆ.
3. ಭಗವದುಪಾಸನೆಯಲ್ಲಿ ಕರ್ಮ ಮುಖ್ಯವೆ? ಭಕ್ತಿ ಮುಖ್ಯವೆ? ಜ್ಞಾನ ಮುಖ್ಯವೆ? ಈ ವಿಚಾರದಲ್ಲಿಯೂ ಪೂರ್ವಿಕರಲ್ಲಿ ತರ್ಕಾತಿರೇಕ ಕಾಣುತ್ತದೆ. ನಮ್ಮ ದೃಷ್ಟಿಯಲ್ಲಾದರೊ ಆ

ಮೂರೂ–ಅವುಗಳ ಜೊತೆಗೆ ಅಷ್ಟಾಂಗಯೋಗಾದಿಗಳನ್ನು ಸೇರಿಸಿಕೊಂಡರೆ ಆ ನಾಲ್ಕೂ–ಅನ್ಯೋನ್ಯ ಅಪಾಯಕಾರಿಗಳಲ್ಲದಿರುವುದು ಮಾತ್ರವಲ್ಲದೆ ಸಹಕಾರಿಗಳೇ ಆಗಿವೆ. ಅವೆಲ್ಲಕ್ಕೂ ಸಾಹಚರ್ಯವು ಸಾಧ್ಯ. ಉಪಾಸಕನ ಯೋಗ್ಯತಾವಕಾಶಗಳಿಗೆ ತಕ್ಕಂತೆ ಅವನಲ್ಲಿ ಅವುಗಳ ಪರಸ್ಪರ ಪರಿಮಾಣವಿರುತ್ತದೆ. ಅದರ ಹೆಚ್ಚು ಕಡಮೆಗಳಿಂದ ಅಧೋಗತಿಯ ಭಯವೇನೂ ಇಲ್ಲ.

4. ಪೂರ್ವಿಕರು ಶ್ರುತಿಸ್ಮೃತಿಗಳನ್ನು ಮುಖ್ಯಾಧಾರವಾಗಿರಿಸಿಕೊಂಡಿದ್ದರು. ಇಲ್ಲಿ ಆಧುನಿಕ ಕಾಲದ ವೈಜ್ಞಾನಿಕಸಾಮಾನ್ಯವಾದ ಪ್ರಾಶ್ನಿಕಬುದ್ಧಿವೃತ್ತಿಯನ್ನು ಪೂರ್ವಿಕರಿಗಿಂತ ಹೆಚ್ಚಾಗಿ ಗ್ರಹಿಸಿ ಶ್ರುತಿಸ್ಮೃತಿವಿರೋಧವಿಲ್ಲದಂತೆ ಕಾರಣವಿಚಾರಪದ್ಧತಿಯನ್ನು (Rationalism) ಸಮಾಧಾನಪಡಿಸಲು ಪ್ರಯತ್ನಿಸಿದೆ.
5. ಪೂರ್ವವ್ಯಾಖ್ಯಾನಕಾರರು ಶಾಸ್ತ್ರಪಾರಂಗತರಾದವರು. ಅವರು ಶಾಸ್ತ್ರಪರಿಶ್ರಮ ಮಾಡಿದವರನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದರು. ಅವರಿಗೆ ತರ್ಕವ್ಯಾಕರಣಾದಿಶಾಸ್ತ್ರ ಪಾಂಡಿತ್ಯದ ಬಲವು ಹೆಚ್ಚಾಗಿತ್ತು. ಇಲ್ಲಿ ಮೂಲಗ್ರಂಥದ ವಾಕ್ಯಗಳಿಂದ ಋಜುವಾಗಿ ಹೊರಡುವ ಅರ್ಥವೇನೆಂಬುದರ ಕಡೆಗೆ ಹೆಚ್ಚು ಗಮನ ಕೊಟ್ಟಿದೆ. ಗೀತೆಯಲ್ಲಿ ಕೆಲವು ಕಡೆ ಇಂಗ್ಲಿಷಿನಲ್ಲಿ “ಪ್ಯಾರಡಾಕ್ಸ್” (Paradox) ಎಂದು ಹೇಳುವ ಆಪಾತವಿರೋಧವಾಕ್ಯಗಳಿವೆ. (ಉದಾ: “ನ ತ್ವಹಂ ತೇಷು ತೇ ಮಯಿ” [೭–೧೨]); “ಎಪಿಗ್ರಮ್” (Epigram) ಎಂದು ಹೇಳುವ ಸೂಚ್ಯುಕ್ತಿಗಳಿವೆ. (ಉದಾ: “ಯೋಭುಂಕ್ತೇ ಸ್ತೇನ ಏವ ಸಃ” [೩-೧೨]). ಅವುಗಳ ಅರ್ಥವನ್ನು ಹೇಗೆ ಬೇಕಾದರೂ ಸೆಳೆದಾಡಲಾಗುತ್ತದೆ. ಇಂಥ ಸಂದರ್ಭಗಳಲ್ಲಿ ವೇದೋಪನಿಷತ್ತುಗಳ ಮತ್ತು ಗೀತೆಯ ಅಸಂದಿಗ್ಧಸ್ಫುಟವಾಕ್ಯಗಳ ಅರ್ಥವನ್ನನುಸರಿಸಿ ಗೀತೆಯ ಸಂದಿಗ್ಧವಾಕ್ಯಗಳ ಅರ್ಥಗ್ರಹಣ ಮಾಡುವುದು ನ್ಯಾಯವಾಗುತ್ತದೆ. ಹೀಗೆ ಋಜುವೂ ಸರಳವೂ ಆದ ಮಾರ್ಗವನ್ನು ಅವಲಂಬಿಸಲು ಇಲ್ಲಿ ಯತ್ನಿಸಿದೆ.
6. ಇಲ್ಲಿ ವೇದಮತದವರನ್ನು ಮಾತ್ರವೇ ಅಲ್ಲದೆ ಎಲ್ಲ ಮತಗಳ ಸಾಮಾನ್ಯ ಜನರನ್ನೂ ಉದ್ದೇಶದಲ್ಲಿರಿಸಿಕೊಂಡಿದೆ.
7. ಪಂಡಿತನಲ್ಲದ ಸಾಮಾನ್ಯ ಮನುಷ್ಯನೊಬ್ಬನು ಜೊತೆಗಾರರ ನಡುವೆ ಕುಳಿತು ದೇವರು, ಜೀವ, ಅದೃಷ್ಟ, ಧರ್ಮ–ಇಂಥ ಆಳವಾದ ವಿಷಯಗಳನ್ನು ಕುರಿತು ಆಳವಾಗಿ ಸಮಾಲೋಚನೆ ಮಾಡುವ ರೀತಿಯಲ್ಲಿ ಇಲ್ಲಿ ಅನುಸರಿಸಿದೆ.

ಈ ಮೇಲಣ ಕಾರಣಗಳಿಂದಲೇ ಪ್ರಕೃತ ಪ್ರಬಂಧದಲ್ಲಿ ಗೀತೆಯ ಉಪದೇಶವನ್ನು ಜೀವನಧರ್ಮಯೋಗವೆಂದು ಕರೆದಿದೆ.

ಗ್ರಂಥಸ್ವರೂಪ

ಗೀತೆಯು ಸುಲಭಕಷ್ಟವಾದ ಗ್ರಂಥ, ಅಥವಾ ಕಷ್ಟಸುಲಭವಾದ ಗ್ರಂಥ. ಹಾಗೆಂದರೇನು? ಮಾತುಗಳು ಬಿಡಿಬಿಡಿಯಾಗಿ ನೋಡಿದರೆ ಸುಲಭ; ಒಟ್ಟು ವಾಕ್ಯದ ಅರ್ಥ ಕಷ್ಟ. ನೀತಿಬೋಧನೆಯ ಭಾಗ ಸುಲಭ; ತತ್ತ್ವನಿರೂಪಣೆಯ ಭಾಗ ಕಷ್ಟ. ಹೀಗಿರುವುದರಿಂದ ಯಾರಿಗಾದರೂ ಈ ಗ್ರಂಥವನ್ನು ತಿಳಿದುಕೊಂಡಿದ್ದೇವೆಂಬ ಭ್ರಾಂತಿ ಬರುವುದು ಸುಲಭ. ಅದರ ಸಾರವನ್ನು ಅಂತರಂಗದಲ್ಲಿ ಕಂಡುಕೊಳ್ಳುವುದು ಕಷ್ಟ.

ಭಾಷಾಶೈಲಿ ಕಷ್ಟವಲ್ಲದಿದ್ದರೂ, ವಾಕ್ಯಾಲಂಕಾರಗಳು ಸ್ಪಷ್ಟವಾಗಿದ್ದರೂ ವಾಕ್ಯದ ಅನ್ವಯ ಕೆಲವು ಕಡೆ ಕ್ಲಿಷ್ಟವಾಗಿರುತ್ತದೆ. ಭಾವವನ್ನು ವಿಶದಪಡಿಸುವುದಕ್ಕಾಗಿ ಕೆಲವು ಕಡೆ ಉಪಮಾನಾದಿ ಅಲಂಕಾರಗಳನ್ನುಪಯೋಗಿಸಿದ್ದರೂ ಇನ್ನು ಕೆಲವು ಕಡೆ ಅರ್ಥವು ಮನಸ್ಸನ್ನು ಹಿಡಿದು ಅದರಲ್ಲಿ ನಾಟಿಕೊಳ್ಳುವಂತೆ ಆಗಬೇಕೆಂದು ಆಪಾತ ವಿರೋಧದ- ಇಂಗ್ಲಿಷಿನಲ್ಲಿ Paradox (ಆಪಾತವಿರೋಧ) ಎಂದು ಹೇಳುವ ರೀತಿಯಲ್ಲಿಯೂ, ಇಂಗ್ಲಿಷಿನಲ್ಲಿ Epigram (ಸೂಚ್ಯುಕ್ತಿ) ಎಂದು ಹೇಳುವ ರೀತಿಯಲ್ಲಿಯೂ ವಾಕ್ಯರಚನೆಯಿದೆ. ಇಂಥ ವಾಕ್ಯಗಳು ಹೆಚ್ಚು ಸಮಾಲೋಚನೆಯನ್ನು ಅಪೇಕ್ಷಿಸುತ್ತವೆ.

ಪ್ರಪಂಚದಲ್ಲಿ ಯಾವ ಗ್ರಂಥವೂ ಅದರ ರಚನೆಯ ಕಾಲವನ್ನೂ ಅದರ ದೇಶವನ್ನೂ ಮೀರಲಾರದು. ವೇದವು ಅಪೌರುಷೇಯವೆಂದು ನಾವು ಒಪ್ಪಿಕೊಂಡರೂ ಆ ಮಹಾವಾಙ್ಮಯದಲ್ಲಿಯೂ ಅಲ್ಲಲ್ಲಿ ಪೌರುಷೇಯದ ಚಿಹ್ನೆಗಳು ಇದ್ದೇ ಇವೆ. ಕುರುಪಾಂಚಾಲಾದಿ ದೇಶಗಳ ಸ್ಮರಣೆ ಇದ್ದೇ ಇದೆ. ಜನಕ ಜಾನಶ್ರುತಿ ಮೊದಲಾದ ರಾಜರುಗಳ ಹೆಸರುಗಳು ದೇಶಸೂಚಕ ಕಾಲಸೂಚಕಗಳಾಗಿವೆ. ಋಷಿಗಳ ಹೆಸರುಗಳು ನೂರಾರಿವೆ. ನಕ್ಷತ್ರ ಗ್ರಹಗತಿಗಳ ವರ್ಣನೆಗಳು ವೇದಾವತಾರದ ಕಾಲವೇನಿರಬಹುದೆಂದು ನಿರ್ಧಾರ ಮಾಡಲು ಸಾಧಕಗಳಾಗಿವೆ. ಲೋಕಮಾನ್ಯ ಬಾಲಗಂಗಾಧರ ತಿಲಕರವರು ಮೃಗಶಿರಾದಿ (Orion) ನಕ್ಷತ್ರಮಂಡಲದ ಸ್ಥಿತಿಯಿಂದ ಆ ಪ್ರಸ್ತಾವವಿರುವ ಋಕ್ಕಿನ ಪ್ರಾಚೀನತೆಯನ್ನು ಊಹಿಸಲು ಪ್ರಯತ್ನ ಮಾಡಿದ್ದಾರೆ. ಹೀಗೆ ಒಂದಾನೊಂದು ಕಾಲದ ಭೂಗೋಲ-ಖಗೋಲ ಪರಿಸ್ಥಿತಿಗಳು ಆ ಕಾಲದ ಗ್ರಂಥದಲ್ಲಿ ಅಷ್ಟಿಷ್ಟು ಕಾಣಬರುತ್ತವೆ.

ಗ್ರಂಥಲೇಖಕನು ತನ್ನ ದೇಶಕ್ಕೂ ತನ್ನ ಕಾಲಕ್ಕೂ ಒಳಪಟ್ಟವನೇ ಹೊರತು ಅವುಗಳನ್ನು ಮೀರಿ ಹೊರಕ್ಕೆ ಬಂದವನಲ್ಲ.

ಪಾಂಚಭೌತಿಕ ಪರಿಸರವು ಹೇಗೋ ಸಾಮಾಜಿಕ ಪರಿಸರವೂ ಹಾಗೆಯೇ ಅವನ ಮೇಲೆ ಅಷ್ಟಿಷ್ಟು ಪ್ರಭಾವ ಮಾಡುತ್ತದೆ. ಅವನ ಕಾಲದ ಜನರ ನಂಬಿಕೆಗಳು, ಅವರ ಕಥೆ ಐತಿಹ್ಯಗಳು, ಅವರ ಆಶೆಗಳು, ಅವರ ಅಭಿಪ್ರಾಯಗಳು, ಅವರ ಅಭಿರುಚಿಗಳು, ಅವರ ಮನೋಭಂಗಿ–ಇವುಗಳನ್ನು ಅವನು ಸಂಪೂರ್ಣವಾಗಿ ತಪ್ಪಿಸಿಕೊಳ್ಳಲಾಗುವುದಿಲ್ಲ. ಅವು ಅವನ ಮನಸ್ಸಿನ ಮೇಲೆ ಒಂದಿಷ್ಟಾದರೂ ಪರಿಣಾಮವನ್ನು ಮಾಡಲೇ ಮಾಡುತ್ತವೆ. ಎಂಥ ಕವಿಯೂ, ಎಂಥ ತತ್ತ್ವದರ್ಶಿಯೂ ತನ್ನ ಕಾಲದ, ತನ್ನ ದೇಶದ, ತನ್ನ ಸಮಾಜದ ವಾತಾವರಣದಿಂದ ಪೂರ್ತಿಯಾಗಿ ತಪ್ಪಿಸಿಕೊಳ್ಳಲಾಗದು.

ಕವಿಯು ತನ್ನ ವಾತಾವರಣದಿಂದ ಮೇಲಕ್ಕೇಳಬೇಕಾದವನು. ಅವನು ತನ್ನ ಕಾಲ ದೇಶ ಸನ್ನಿವೇಶಗಳ ವಾತಾವರಣದಿಂದ ಎಷ್ಟೆಷ್ಟು ಮೇಲಕ್ಕೆ ಹೋಗಿರುತ್ತಾನೋ ಅವನ ಮಹತ್ತ್ವ ಅಷ್ಟಷ್ಟಾಗಿರುತ್ತದೆ. ನಮಗೆ ಕವಿಯಿಂದ ಬೇಕಾಗಿರುವುದು ನಮ್ಮ ಸುತ್ತಮುತ್ತಣ ಪ್ರಪಂಚವಲ್ಲ. ಅವನ ಸಹಾಯವಿಲ್ಲದೆಯೇ ಅದು ನಮಗೆ ಇದ್ದುಕೊಂಡಿದೆ. ಅದರಿಂದ ಬಿಡಿಸಿಕೊಂಡು ಮೇಲ್ಮಟ್ಟಕ್ಕೇಳುವುದು ಹೇಗೆಂಬುದು ನಮಗಿರುವ ಪ್ರಶ್ನೆ. ನಮಗೆ ಆಗಬೇಕಾಗಿರುವ ಉಪಕಾರ ಇಲ್ಲಿ.

ಆದರೆ ಒಂದು ಮಿತಿಯುಂಟು. ಕವಿಯ ಬಹು ಮೇಲಿನ ಮಟ್ಟಕ್ಕೆ ಹಾರಿದರೆ ನಾವು ಅವನ ಜೊತೆಗೆ ಹಾರಲಾರೆವು. ಅವನು ನಿರ್ಮಿಸುವ ಪ್ರಪಂಚಕ್ಕೂ ನಮಗೆ ಗೊತ್ತಾಗಿರುವ ಪ್ರಪಂಚಕ್ಕೂ ಸಂಬಂಧವು ಎಷ್ಟುಮಾತ್ರವೂ ಇಲ್ಲದಿದ್ದಲ್ಲಿ ಅವನ ಮಾತೇ ನಮಗೆ ಅರ್ಥವಾಗದು. ಅವನ ಭಾಷೆ ನಮಗೆ ಪರಭಾಷೆಯಾದೀತು; ಅವನ ಲೋಕ ನಮಗೆ ಪರದೇಶವಾದೀತು; ಅವನ ಅರ್ಥವನ್ನು ನಾವು ಕಂಡುಕೊಳ್ಳುವ ಭಾವಮಾಧ್ಯಮ (medium –ಮಧ್ಯವರ್ತಿ) ಇಲ್ಲದೆಹೋದೀತು. ಕವಿಯಿಂದ ನಮಗೆ ಉಪಕಾರವಾಗಬೇಕಾದರೆ ಎರಡು ನಿಯಮಗಳು ಪಾಲಿಸಲ್ಪಡಬೇಕು:

1. ಅವನ ಪ್ರಪಂಚದ ವ್ಯಕ್ತಿಗಳೂ ಅವರಾಡುವ ಮಾತುಕಥೆಗಳೂ ನಮ್ಮ ಪ್ರಪಂಚಕ್ಕೂ ನಮ್ಮ ವ್ಯವಹಾರಕ್ಕೂ ಕೊಂಚಕೊಂಚವಾದರೂ ಹೋಲಿಕೆಯುಳ್ಳವಾಗಿರಬೇಕು.

2. ಆ ವ್ಯಕ್ತಿಗಳ ಶೀಲಸಂದರ್ಭಗಳೂ ಭಾವಭಂಗಿಗಳೂ ನಮ್ಮ ನಿತ್ಯಪರಿಚಯದ್ದಕ್ಕಿಂತ ಕೊಂಚ ಬೇರೆಯಾದವಾಗಿ ಒಂದು ನವೀನತೆಯನ್ನೂ ಒಂದು ನೂತನ ಮನಶ್ಚೋದನೆಯನ್ನೂ ಉಂಟುಮಾಡುವಂಥವಾಗಿರಬೇಕು.

ಕಾವ್ಯವಿಷಯಕ್ಕೂ ನಮಗೂ ಮಾನಸಿಕ ಸಂಬಂಧ ಇರಬೇಕು; ಆದರೆ ಮಿತವಾಗಿರಬೇಕು. ಮಿತಿಯನ್ನು ಮೀರಿದರೆ ಅದು ನಮಗೆ ರುಚಿಸದೆ ಹೋಗಬಹುದು, ಅಥವಾ ಅರ್ಥವಾಗದೆ ಹೋಗಬಹುದು.

ಇಷ್ಟನ್ನು ಹೇಳಿರುವುದರ ಉದ್ದೇಶವು ಒಂದಾನೊಂದು ಗ್ರಂಥಕ್ಕೂ ಅದರ ಕರ್ತನ ಕಾಲ ದೇಶ ಸನ್ನಿವೇಶದ ವಾತಾವರಣಕ್ಕೂ ಅನಿವಾರ್ಯವಾದ ಸಂಬಂಧ ಉಂಟೆಂಬುದರ ಸೂಚನೆ.

ಮೇಲಣ ಕಾವ್ಯಲಕ್ಷಣನಿರೂಪಣೆಯು ರಾಮಾಯಣ ಭಾರತಗಳಿಗೂ ಅನ್ವಯಿಸುತ್ತದೆ. ವಾಲ್ಮೀಕಿ ವ್ಯಾಸರುಗಳ ಕಾವ್ಯಗಳು ಸಾರ್ವಕಾಲಿಕಗಳೂ ಸಾರ್ವದೇಶಿಕಗಳು ಆದವು ಎಂಬುದೇ ನಮ್ಮ ಮಾತು. ಅವುಗಳ ಮುಖ್ಯ ಕಥಾತಾತ್ಪರ್ಯಗಳೂ ಅಲ್ಲಿಯ ಭಾವ ಪ್ರದರ್ಶನಗಳೂ ಅಲ್ಲಿಯ ನೀತಿಸಮಾಲೋಚನೆಗಳೂ ಅಲ್ಲಿಯ ತತ್ತ್ವನಿರೂಪಣೆಗಳೂ ಸಮಸ್ತ ಮಾನವಲೋಕಕ್ಕೂ ಎಂದೆಂದಿಗೂ ಅನ್ವಯಿಸತಕ್ಕವೇ ಸರಿ. ಹಾಗಿದ್ದರೂ ಆ ಎರಡು ಮಹಾಗ್ರಂಥಗಳಲ್ಲಿಯೂ ವಾಲ್ಮೀಕಿವ್ಯಾಸರುಗಳ ಕಾಲಗಳ ಸಮಾಜ ಲಕ್ಷಣಗಳು ಅಲ್ಲಲ್ಲಿ ಪ್ರಸ್ತಾವಿತವಾಗಿವೆ. ಅವರ ಕಾಲದ ಪೂರ್ವಗಾಥೆಗಳು, ಜನವಾಕ್ಯಗಳು, ಸಾಮತಿಗಳು, ಪ್ರಾಚೀನ ಸಂಪ್ರದಾಯಗಳು, ಐತಿಹ್ಯಗಳು, ಜನಶ್ರದ್ಧೆಗಳು, ಗತಾನುಗತ ವಿಶ್ವಾಸಗಳು–ಇಂಥವು ಸೇರಿಕೊಂಡಿವೆ. ಇವು ಗೌಣಾಂಶಗಳು. ಅವುಗಳಲ್ಲಿ ಎಷ್ಟನ್ನೋ ಈ ಕಾಲದ ನಾವು ಒಪ್ಪಲಾಗದಿರಬಹುದು. ಹಾಗೆ ಕಥೆ ಉಪಕಥೆಗಳ ಕೆಲವು ಭಾಗಗಳನ್ನೂ ಕೆಲವು ಉದಾಹರಣೆಗಳನ್ನೂ ಅಂಗೀಕರಿಸದೆ ಬಿಟ್ಟುಬಿಟ್ಟರೆ ಅದರಿಂದ ನಮ್ಮ ಮುಖ್ಯ ಕಥಾಗ್ರಹಣಕ್ಕೆ ಯಾವ ಕುಂದೂ ಬರಲಾರದು. ಕೇವಲ ಕಥಾದೃಷ್ಟಿಯಿಂದ ಇಲ್ಲಲ್ಲಿ ಸ್ವಾರಸ್ಯ ಕಡಮೆಯಾಗಬಹುದು. ಭೂಮಂಡಲದ ತಳವು ಚಪ್ಪಟೆಯಾಗಿದೆ, ಅದನ್ನು ಎಂಟು ದಿಗ್ಗಜಗಳು ಹೊತ್ತಿವೆ, ಅವು ಆಮೆಯ ಬೆನ್ನಿನ ಮೇಲೆ ನಿಂತಿವೆ, ಅದನ್ನು ಆದಿಶೇಷನ ಹೆಡೆ ಹೊತ್ತಿದೆ–ಇವೇ ಮೊದಲಾದ ವರ್ಣನೆಗಳನ್ನು ನಾವು ವಾಸ್ತವವೆಂದು ಅಂಗೀಕರಿಸದೆ ಬಿಟ್ಟರೆ

ಕೇವಲ ಕಥಾಸ್ವಾರಸ್ಯ ಕೊಂಚ ಕಡಮೆಯಾದೀತು. ಆದರೆ ಅದರಿಂದ ತತ್ತ್ವಗ್ರಹಣಕ್ಕೆ ಯಾವ ಬಾಧೆಯೂ ಬಾರದು.

ಗೀತೆಯಲ್ಲಿ ಇಂಥ ಅಂಶಗಳುಂಟು. ಯಜ್ಞದಿಂದ ಮಳೆ ಬೆಳೆ ಎಂಬ ನಂಬಿಕೆ ವೇದಗಳ ಕಾಲದಿಂದ ಬಂದದ್ದು. ಅದನ್ನು ನಾವು ಒಲ್ಲೆವೆಂದು ಬಿಟ್ಟರೂ ಗೀತೆಯ ಮುಖ್ಯೋಪದೇಶಕ್ಕೆ ಅದರಿಂದ ಬಾಧೆಯಾಗದು. ಇದರಂಥ ಇನ್ನೊಂದು ಪ್ರಸಂಗ ದೇವಯಾನ ಪಿತೃಯಾನಗಳದು. ಇದೂ ವೇದಗಳ ಕಾಲದಿಂದ ಬಂದಿರುವ ಒಂದು ನಂಬಿಕೆ. ಅದನ್ನು ನಂಬುವುದು ಐಚ್ಛಿಕ. ನಂಬೆವೆಂದು ಬಿಟ್ಟರೆ ಗೀತೆಯ ತತ್ತ್ವೋಪದೇಶಕ್ಕೆ ಯಾವ ನಷ್ಟವೂ ಇಲ್ಲ. ತತ್ತ್ವವಿಚಾರದ ಮಾರ್ಗವು ಯಜ್ಞಫಲಪ್ರಶ್ನೆಯಿಂದಲೂ ಅಯನಭೇದ ಪ್ರಶ್ನೆಯಿಂದಲೂ ಸ್ವತಂತ್ರವಾದದ್ದು.

ಬೋಧನೆಯ ಎರಡು ಅಂತಸ್ತುಗಳು

ಗೀತಾಚಾರ್ಯರು ಎರಡು ಅಂತಸ್ತುಗಳಲ್ಲಿ ಉಪದೇಶ ಮಾಡುತ್ತಾರೆ: ಒಂದು ಸಾಮಾನ್ಯ ಅಧಿಕಾರಿಯದು, ಅಥವಾ ವ್ಯಾವಹಾರಿಕದ್ದು; ಇನ್ನೊಂದು ಉತ್ತಮಾಧಿಕಾರಿಯದು, ಅಥವಾ ಪಾರಮಾರ್ಥಿಕದ್ದು. ಅರ್ಜುನನು ಸಾಮಾನ್ಯ ಅಧಿಕಾರಿಯಾಗಿದ್ದಲ್ಲಿ ಅವನು ರಾಜ್ಯಲಾಭ, ಕೀರ್ತಿ, ಸ್ವರ್ಗ ಮೊದಲಾದುವುಗಳ ಲೋಭದಿಂದ ಸ್ವಧರ್ಮದ ಮಾರ್ಗಕ್ಕೆ ಬರಲಿ.

ಪತ್ರಂ ಪುಷ್ಪಂ ಫಲಂ ತೋಯಮ್

—ಈ ಮಾರ್ಗವನ್ನನುಸರಿಸಲಿ. ಯಜ್ಞ ಮಾಡಲಿ, ಚಂದ್ರಮಾರ್ಗವನ್ನು ಹಿಡಿಯಲಿ; ಹಾಗಲ್ಲದೆ ಅವನು ಉತ್ತಮಾಧಿಕಾರಿಯಾಗಿದ್ದಲ್ಲಿ ನಿಸ್ತ್ರೈಗುಣ್ಯನಾಗಿ ಅಧಿಧರ್ಮಿಯಾಗಿ ಕೇವಲ ಸಾರ್ವಾತ್ಮ್ಯದೃಷ್ಟಿಯಿಂದ ಲೋಕಸಂಗ್ರಹ ಮಾಡಲಿ. ಹೀಗೆ ಅಧಿಕಾರಭೇದದಿಂದ ಮಾರ್ಗಗಳ ಭೇದ. ಆದರೆ ಗಮ್ಯಸ್ಥಾನದ ದೃಷ್ಟಿಯಿಂದ ಮಾರ್ಗಗಳ ಭೇದಗಳು ಎಣಿಕೆಗೆ ಬಾರವು. ಇದು ಗೀತಾವ್ಯಾಸಂಗದಲ್ಲಿ ನಮಗೆ ಸಂತತವಾಗಿ ನೆನಪಿನಲ್ಲಿರಬೇಕಾದ ಅರ್ಥ ಗ್ರಹಣವಿಧಿ. ವ್ಯಾವಹಾರಿಕ ಪಾರಮಾರ್ಥಿಕಗಳೆರಡೂ ಗೀತಾಚಾರ್ಯರಿಗೆ ಸಮ್ಮತವಾದವೇ.

ಮಿತ್ರಸಂಭಾಷಣೆಯ ಶೈಲಿ

ಗೀತೆಯ ಗ್ರಥನರೀತಿಯು ಒಂದೊಂದು ಕಡೆ ಹಿಂದುಮುಂದಾಗಿರುವಂತೆ ತೋರುತ್ತದೆ. ಗೀತೆಯನ್ನು ಶಾಸ್ತ್ರವೆಂದು ಕರೆಯುವುದು ಪದ್ಧತಿ. ವಿಷಯವು ಶಾಸ್ತ್ರದ್ದೇ ನಿಜ. ಆದರೆ ವಿಷಯಪ್ರತಿಪಾದನೆಯಲ್ಲಿ, ಪಾಠಶಾಲೆಯ ಶಾಸ್ತ್ರಗ್ರಂಥದಲ್ಲಿ ಕಾಣಬರುವ ನಿಷ್ಕೃಷ್ಟವಾದ ವಿಷಯವಿಭಾಗವೂ ಪ್ರಕರಣಾನುಕ್ರಮವೂ ಇಲ್ಲಿಲ್ಲ. ಇಲ್ಲಿ ಅಧ್ಯಾಯ ವ್ಯವಸ್ಥೆಯೇನೋ ಉಂಟು. ಆದರೆ ಒಂದಧ್ಯಾಯಕ್ಕೆ ಸಂಬಂಧಪಟ್ಟ ವಿಷಯ ಇನ್ನೊಂದಧ್ಯಾಯದಲ್ಲೆಲ್ಲೋ ಬೆರೆತುಕೊಂಡಿರುತ್ತದೆ. ಇನ್ನೆಲ್ಲಿಗೋ ಬೇಕಾಗುವ ಪ್ರಸ್ತಾವ ಇಲ್ಲಿ ಬಂದಿರುತ್ತದೆ. ಇದು ಹೀಗಿರಲು ಕಾರಣವಿದೆ. ಇದು ಶಾಸ್ತ್ರ ಬರೆಯಬೇಕೆಂಬ ಉದ್ದೇಶದಿಂದ ತಯಾರಾದ ಗ್ರಂಥವಲ್ಲ. ಅರ್ಜುನನಾಗಲಿ ಕೃಷ್ಣನಾಗಲಿ ಗ್ರಂಥರಚನೆಗೆ ಹೊರಟವರಲ್ಲ. ಅವರ ಸನ್ನಿವೇಶದ ಪ್ರೇರಣೆಯಿಂದ ಅವರು ಮಾತಿಗೆ ಮೊದಲುಮಾಡಿದರು, ಅದು ಮಿತ್ರಸಂಭಾಷಣೆಯಂತೆ ಸರಳವಾಗಿ ಸಾಗಿತು.

ರಾಮಣ್ಣನು ಮಾರುಕಟ್ಟೆಗೆ ಹೋದಾಗ ಅಲ್ಲಿ ಹಳೆಯ ಸ್ನೇಹಿತ ಭೀಮಣ್ಣನನ್ನು ಕಂಡ. ಅವರಿಬ್ಬರೂ ಬಾಲ್ಯದ ಗೆಳೆಯ ಶಾಮಣ್ಣನನ್ನು ಜ್ಞಾಪಕ ಮಾಡಿಕೊಂಡರು. ಹಾಗೆ ಶಾಮಣ್ಣನ ಮಗ ಕಾಮಣ್ಣನಿಗೆ ಸೋಮಣ್ಣ ಹೆಣ್ಣು ಕೊಡಬಂದ ಕಥೆ ಬಂತು. ಶೀನಣ್ಣನು ಲಾಯರಾಗಿ ತಿಮ್ಮಣ್ಣನ ಮೊಕದ್ದಮೆಯಲ್ಲಿ ವಕಾಲತ್ತು ವಹಿಸಿ ಗೆದ್ದಿದ್ದ. ಆ ಮೊಕದ್ದಮೆಯ ವರ್ಣನೆ ಮುಗಿದಮೇಲೆ ಮತ್ತೆ ಕಾಮಣ್ಣನ ಮಾತು, ಮತ್ತೆ ಸೋಮಣ್ಣ, ಮತ್ತೆ ಭೀಮಣ್ಣ, ಮತ್ತೆ ಅವನ ಭಾವ ಬೊಮ್ಮಣ್ಣ—ಹೀಗೆ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಹಾರಾಡುತ್ತದೆ ಸ್ನೇಹ ಸಂಭಾಷಣೆಯಲ್ಲಿ ವಿಷಯ: ಭವಭೂತಿ ಹೇಳಿದಂತೆ, “ಜಲ್ಪತೋರಕ್ರಮೇಣ.”

ಸ್ನೇಹಿತರು ತತ್ತ್ವವನ್ನು ಮಾತಿಗೆ ತೆಗೆದುಕೊಂಡರೂ ಅಷ್ಟೇ. ಆ ಘಳಿಗೆಯ ಸಂಗತಿಯಿಂದ ಹಿಂದಿನ ಪುರಾಣದ ಕಥೆಗೆ, ಪುರಾಣದಿಂದ ಲೋಕಪರಿಸ್ಥಿತಿಗೆ, ಲೋಕದಿಂದ ಪರಮಾರ್ಥಕ್ಕೆ, ಪರಮಾರ್ಥದಿಂದ ಸದ್ಯದ ಕಷ್ಟಕ್ಕೆ—ಹೀಗೆ ಆ ತರ್ಕ ಹಿಂದಿನಿಂದ ಮುಂದಕ್ಕೂ ಮುಂದಿನಿಂದ ಹಿಂದಕ್ಕೂ ಓಲಾಡುತ್ತಿರುತ್ತದೆ. ಇದನ್ನು ಪ್ಲೇಟೋ ಎಂಬ ಗ್ರೀಕ್ ತತ್ತ್ವಜ್ಞನು ಬರೆದಿರುವ ಸಂವಾದಗ್ರಂಥಗಳಲ್ಲಿ ಕಾಣಬಹುದು. ಅಲ್ಲಿ ಗುರು ಸಾಕ್ರಟೀಸಿಗೂ ಇತರರಿಗೂ ನಡೆದ ವಾಗ್ವಿವಾದವು ನಿರೂಪಿತವಾಗಿದೆ.

ಮಿತ್ರಸಲ್ಲಾಪದಲ್ಲಿ ಹೀಗೆ ವಿಷಯದ ಅಸ್ತವ್ಯಸ್ತತೆಯಿರುವುದು ಎಲ್ಲರ ಅನುಭವದಲ್ಲಿಯೂ ಇರತಕ್ಕದ್ದೇ. ಗೀತೆಯಲ್ಲಿಯೂ ಆ ಲಕ್ಷಣ ಸ್ವಾಭಾವಿಕವಾಗಿ ಬಂದಿದೆ. ಆದದ್ದರಿಂದ ಇಲ್ಲಿ ಪ್ರತ್ಯಕ್ಷ ಸಂಭಾಷಣೆಯ ಕೆಲವು ಕೊಂಡಿಗಳನ್ನು ನಾವು ಕಂಡುಕೊಳ್ಳಬೇಕಾಗಿದೆ. ಇಬ್ಬರು ಸ್ನೇಹಿತರು ಒಬ್ಬನನ್ನಿನ್ನೊಬ್ಬನು "ಯಾವಾಗ ಬಂದ ಆತ? ಏನಾಯಿತಂತೆ ಅಲ್ಲಿ?" ಎಂದು ಮೊದಲಾಗಿ ವಿಚಾರಿಸುತ್ತಾನೆ. ಅದರಲ್ಲಿ "ಆತ", "ಅಲ್ಲಿ" ಎಂಬ ಮಾತುಗಳ ಅರ್ಥ ಅವರಿಬ್ಬರಿಗೂ ತಿಳಿದದ್ದು. ಅವರ ಧ್ವನಿಭಾವದಿಂದಲೂ ಮುಖಾಭಿನಯದಿಂದಲೂ ಅಂಗವಿಕಾರದಿಂದಲೂ ಅವರು ಒಬ್ಬರೊಬ್ಬರ ಅಭಿಪ್ರಾಯವನ್ನು ಕಂಡುಕೊಳ್ಳಲಾಗುತ್ತದೆ. ಅವರನ್ನು ಎದುರಿಗೆ ಕಾಣದ ನಾವು ಅವರಾಡಿದ ಮಾತುಗಳನ್ನು ಮಾತ್ರ ಓದಿದಾಗ ಅವರ ಮನಸ್ಸುಗಳಲ್ಲಿದ್ದ ಭಾವನೆಗಳನ್ನು ಅವರ ಹಿನ್ನೆಲೆಯನ್ನರಿತು ಊಹಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಗೀತೆಯ ಕೆಲವು ಭಾಗಗಳಲ್ಲಿ ಒಂದು ಶ್ಲೋಕಕ್ಕೂ ಅದರ ಮುಂದಿನ ಶ್ಲೋಕಕ್ಕೂ ಇರುವ ಅರ್ಥಸಂಬಂಧವನ್ನು—ಹಾಗೆಯೇ ಒಂದು ಪ್ರಸ್ತಾವಕ್ಕೂ ಇನ್ನೊಂದು ಪ್ರಸ್ತಾವಕ್ಕೂ ಇರುವ ವಿಚಾರಸಂಬಂಧವನ್ನು—ಪೂರ್ವಾಪರ ಪರ್ಯಾಲೋಚನೆಯಿಂದ ಕಂಡುಕೊಳ್ಳಬೇಕಾಗುತ್ತದೆ. ಇಲ್ಲಿಯೇ ನಮಗೆ ಪೂರ್ವವ್ಯಾಖ್ಯಾನಗಳಿಂದ ಸಹಾಯ ದೊರೆಯುವುದು. ವಿಚಾರ ಸರಪಣಿಯ ಕೊಂಡಿಗಳು ಕೆಲವು ಗೂಢವಾಗಿರುವುದನ್ನು ಆ ವ್ಯಾಖ್ಯಾನಗಳು ಸ್ಪಷ್ಟಪಡಿಸುತ್ತವೆ. ಆ ಕೊಂಡಿಗಳನ್ನು ನಾವು ಅಧ್ಯಾಹಾರ ಮಾಡಿರಿಸಿಕೊಂಡಾಗ ಗ್ರಂಥವು ಸುಸಂಬದ್ಧವಾಗಿರುವುದು ನಮ್ಮ ಮನಸ್ಸಿಗೆ ಗೊತ್ತಾಗುತ್ತದೆ.

ಸಂವಾದಕ್ಕೆ ಕಾಲವ್ಯವಧಾನವಿತ್ತೆ?

ಇಂಥ ಚರ್ಚಾತ್ಮಕ ಸಂವಾದ ಯುದ್ಧರಂಗದಲ್ಲಿ ಸಾಧ್ಯವೆ? ರಣೋತ್ಸಾಹಿಗಳಾದ ಶತ್ರುಸೈನ್ಯಗಳ ನಡುವೆ ನಿಂತು ಹೀಗೆ ಸಾವಕಾಶವಾಗಿ ಚರ್ಚೆ ನಡಸಿದರೆಂಬುದು ಸಂಭಾವ್ಯವೆ?—ಎಂದು ಕೇಳುವವರಿದ್ದಾರೆ. ಹಾಗೆಯೇ ಕೃಷ್ಣಾರ್ಜುನರ ಬಾಯಿಂದ ಹೊರಟ ಮಾತುಗಳೆ ಇವು? ಅವರು ಶ್ಲೋಕರೂಪದಲ್ಲಿ ಸಂಭಾಷಣೆ ನಡಸಿದರೆ?—ಎಂದು ಸಂದೇಹಿಸುವವರೂ ಇದ್ದಾರೆ. ಈ ಸಂದೇಹಗಳು ಅಸಂಗತಗಳೆಂದು ನನ್ನ ನಿಶ್ಚಿತವಾದ ಪ್ರತ್ಯುತ್ತರ.

ಎಲ್ಲರೂ ಯುದ್ಧೋನ್ಮುಖರಾಗಿದ್ದಾಗ ಸಂವಾದಕ್ಕೆ ಸಮಯವೆ ಎಂಬ ಶಂಕೆಯ ಬಗ್ಗೆ ನಾವು ನೆನಪಿಗೆ ತಂದುಕೊಳ್ಳಬೇಕಾದ ಸಂಗತಿ ಆಗಣ ಯುದ್ಧನಿಯಮಾವಳಿ. ಆಗ ಯುದ್ಧವೆಂದರೆ ಯಾರೋ ಯಾರನ್ನೋ ಕೊಲ್ಲುವುದಲ್ಲ, ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಕೊಲ್ಲುವುದಲ್ಲ. ಯುದ್ಧಕ್ಕೆ ಸ್ಥಾನನಿಯಮವೂ ವೇಳಾನಿಯಮವೂ ಅರ್ಹಾನರ್ಹನಿಯಮವೂ ಇತ್ತು. ಅದೂ ಒಂದು ಧರ್ಮಪ್ರಸಂಗ; ಕ್ಷತ್ರಿಯಧರ್ಮಕ್ಕೆ ಸೇರಿದ್ದು. ಅದರ ನಿಯಮಗಳನ್ನು ಉಭಯ ಪಕ್ಷಗಳವರೂ ಸಮಾನವಾಗಿ ಅಂಗೀಕರಿಸಿದ್ದರು. ಒಬ್ಬರನ್ನೊಬ್ಬರು ಸಮೀಪಿಸಿದ ಕೂಡಲೆ, ಅಥವಾ ಕಣ್ಣಿಂದ ಕಂಡ ಕೂಡಲೆ ಯುದ್ಧಾರಂಭವಾದದ್ದಲ್ಲ. ಇಬ್ಬರೂ ಸಕಾಲವೆಂದು ಒಪ್ಪುವವರೆಗೂ ಯಾರಿಗೂ ಅಪಾಯಭಯವಿರಲಿಲ್ಲ. ಕೃಷ್ಣಾರ್ಜುನಸಂವಾದ ಮುಗಿದ ಮೇಲೂ ಕಾಲವ್ಯವಧಾನವಿತ್ತು.

ಯುದ್ಧಾರಂಭಕ್ಕೆ ಮುಂಚೆ ಧರ್ಮರಾಯ ರಥದಿಂದಿಳಿದು ಪಾದಚಾರಿಯಾಗಿ ಭೀಷ್ಮಾದಿ ಗುರುಜನರ ಕಡೆಗೆ ನಡೆದ. ತಮ್ಮಂದಿರು ಆತನ ಮನೋಗತವನ್ನರಿಯದೆ ಆತ ಭಯಪಟ್ಟು ಶರಣಾಗತನಾಗಿ ಹೋಗುತ್ತಿದ್ದಾನೋ ಎಂದು ಶಂಕಿಸಿ ತಡೆಯಯತ್ನಿಸಿದರು. ಧರ್ಮರಾಯನು ಅದನ್ನು ಲಕ್ಷಿಸದೆ, ಮರುಮಾತನಾಡದೆ, ಭೀಷ್ಮರ ಬಳಿಗೆ ಹೋಗಿ ಪಾದಾಭಿವಂದನೆ ಮಾಡಿ ಯುದ್ಧಕ್ಕೆ ನಿಶ್ಚಯವನ್ನು ಬಿನ್ನಯಿಸಿ ಆಶೀರ್ವಾದ ಬೇಡಿದ. ಹಾಗೆಯೇ ದ್ರೋಣ ಕೃಪಶಲ್ಯರಲ್ಲಿಯೂ ಮಾಡಿದ. ತರುವಾಯ ಶ್ರೀಕೃಷ್ಣನು ಕರ್ಣನನ್ನು ಮತ್ತೊಮ್ಮೆ ಪಾಂಡವ ಸಹಾಯಕ್ಕಾಗಿ ಕರೆದು ನೋಡಿದ. ಕಡೆಗೆ ಧರ್ಮರಾಯನು ರಣರಂಗದ ನಡುವೆ ನಿಂತು ತನ್ನ ಪಕ್ಷಕ್ಕೆ ಬರಲಿಚ್ಛಿಸುವವರು ಯಾರಾದರೂ ಇದ್ದರೆ ಅವರು ಬರಬೇಕೆಂದು ಬೇಡಿದ. ಹಾಗೆ ಪಾಂಡವ ಪಕ್ಷಕ್ಕೆ ಬಂದವನು ಯುಯುತ್ಸು—ಧೃತರಾಷ್ಟ್ರನ ದಾಸೀಪುತ್ರ.

ಇಷ್ಟೆಲ್ಲ ನಡೆದ ತರುವಾಯ ಪ್ರಾರಂಭವಾದದ್ದು ಯುದ್ಧ. ಯಾರಾದರೂ ದುಡುಕುವ ಭಯ ಯಾರಿಗೂ ಇರಲಿಲ್ಲ. ಎಲ್ಲ ಸಾವಧಾನವಾಗಿ, ಪಾಂಕ್ತವಾಗಿ ನಡೆಯಿತು. ಕೃಷ್ಣಾರ್ಜುನರಿಗೆ ಬೇಕಾದಷ್ಟು ಕಾಲವ್ಯವಧಾನವಿತ್ತು.

ಗ್ರಂಥದ ಕರ್ತೃತ್ವ

ಇನ್ನು ಗ್ರಂಥದ ರಚನೆ. ಅದರಲ್ಲಿರುವ ಪದಗಳೆಲ್ಲವೂ— 'ಚ' 'ತು' ಮುಂತಾದ ಭರ್ತಿ ಪದಗಳೂ–ಹಾಗೆಯೇ ಕೃಷ್ಣಾರ್ಜುನರ ಬಾಯಿಂದ ಬಂದವೆಂದು ಯಾರೂ ಹೇಳಲಾರರು. ಆದರೆ ಮುಖ್ಯಮುಖ್ಯ ಶಬ್ದಗಳು ಅವರವಲ್ಲವೆನ್ನಲು ಕಾರಣವಿಲ್ಲ. ಅವರಿಬ್ಬರಿಗೂ ಸಂಸ್ಕೃತ ಭಾಷೆ ಸಹಜವಾಗಿದ್ದದ್ದು. ಆದದ್ದರಿಂದ ಗ್ರಂಥದ ಶಬ್ದರಾಶಿ ಬಹುಶಃ ಆ ಕಾಲದ ಸಾಮಾನ್ಯ ಪ್ರಯೋಗದ್ದಾಗಿ ಅವರ ಮುಖದಿಂದ ಸಹಜವಾಗಿ ಬಂದದ್ದಿರಬೇಕು. ಇನ್ನು ಭಾವವಂತೂ ಅವರದಲ್ಲವೆಂದು ಹೇಗೆ ಹೇಳಲಾದೀತು? ಅಲ್ಲಿಯ ಶಂಕೆಗಳೂ ಸಮಾಧಾನಗಳೂ ಮತನಿರೂಪಣೆಗಳೂ ಪ್ರಮಾಣಯುಕ್ತಿಗಳೂ ಎಲ್ಲವೂ ಕೃಷ್ಣಾರ್ಜುನರವೇ. ಅಂಥ ಚರ್ಚೆಗಳು ಆ ಕಾಲದಲ್ಲಿ ಸಾಮಾನ್ಯವಾಗಿದ್ದುವೇ. ಅಂಥ ಪ್ರಸಂಗಗಳು ಭಾರತದಲ್ಲಿ ಇನ್ನೂ ಎಷ್ಟೋ ಕಡೆ ದೊರೆಯುತ್ತವೆ. ಹೀಗೆ ನೋಡಿದರೆ ಗೀತೆಯ ರಚನೆಯಲ್ಲಿ ಭಾಷೆಯ ಮುಖ್ಯ ಭಾಗವೂ ಭಾವನೆಯ ಸಮಸ್ತವೂ ಕೃಷ್ಣಾರ್ಜುನರವೇ ಎಂದೂ ಛಂದಸ್ಸು ಮಾತ್ರ ವ್ಯಾಸರದೆಂದೂ ಸಿದ್ಧವಾಗುತ್ತದೆ. ಸಂಜಯನ ಮುಖಾಂತರ ವ್ಯಾಸ ಮಹರ್ಷಿಗಳು ಆ ಸಂವಾದವನ್ನು ಶ್ಲೋಕರೂಪದಲ್ಲಿ ನಮಗಾಗಿ ವರದಿಮಾಡಿದ್ದಾರೆ.

ಅನುಬಂಧಚತುಷ್ಟಯ

ಒಂದು ಪ್ರಸಿದ್ಧ ಶಾಸ್ತ್ರಗ್ರಂಥವನ್ನು ವ್ಯಾಸಂಗಮಾಡುವಾಗ ಅದಕ್ಕೆ ಪೀಠಿಕಾರೂಪವಾಗಿ ನಾಲ್ಕು ಸಂಗತಿಗಳನ್ನು ಮನಸ್ಸಿಗೆ ವಿಶದಪಡಿಸಿಕೊಳ್ಳುವುದು ಪ್ರಾಚೀನ ಪದ್ಧತಿ.

> ಅಧಿಕಾರೀ ಚ ವಿಷಯಃ
> ಸಂಬಂಧಶ್ಚ ಪ್ರಯೋಜನಮ್ ।
> ಶಾಸ್ತ್ರಾರಂಭಫಲಂ ಪ್ರಾಹುಃ
> ಅನುಬಂಧಚತುಷ್ಟಯಮ್ ॥

(೧) ಅಧಿಕಾರಿ, (೨) ವಿಷಯ, (೩) ಸಂಬಂಧ, (೪) ಪ್ರಯೋಜನ—ಇವು ಅನುಬಂಧಗಳು.

1. ಗೀತಾಶಾಸ್ತ್ರದ ವ್ಯಾಸಂಗಕ್ಕೆ ಅಧಿಕಾರಿ ಯಾರು?
   ಯಾರು ಲೋಕಜೀವನದ ಕಷ್ಟಗಳನ್ನೂ ಇಕ್ಕಟ್ಟುಗಳನ್ನೂ ಬಿಕ್ಕಟ್ಟುಗಳನ್ನೂ ಅನುಭವದಿಂದ ಕಂಡು, ಭೋಗಲಾಭಗಳಲ್ಲಿ ಆಶೆಯನ್ನು ಮಿತಪಡಿಸಿಕೊಳ್ಳಬಲ್ಲವನಾಗಿ, ಸಕಲಜನಸಹಾನುಭೂತಿಯುಳ್ಳವನಾಗಿ, ಜೀವನದಲ್ಲಿ ತಾನು ಹೇಗೆ ನಡೆದುಕೊಂಡರೆ ಜನ್ಮ ಸಾರ್ಥಕವಾದೀತು—ಎಂಬುದನ್ನು ತಿಳಿದುಕೊಳ್ಳಲು ತೀವ್ರ ಕುತೂಹಲವುಳ್ಳವನಾಗಿರುತ್ತಾನೋ ಅವನು ಅಧಿಕಾರಿ. ಆಶಾಪರಿಮಿತಿ, ಸಂಯಮ, ತತ್ತ್ವಜ್ಞಾನೇಚ್ಛೆ—ಇವು ಗೀತಾವ್ಯಾಸಂಗಿಗೆ ಇರಬೇಕಾದ ಅಂತರಂಗಸಿದ್ಧತೆ.
2. ಗೀತೆಯ ವಿಷಯ ವಿಶ್ವತತ್ತ್ವ.
   ಜೀವವೆಂಬುದರ ಸ್ವರೂಪವೆಂಥಾದ್ದು? ಈಶ್ವರತತ್ತ್ವವೆಂಥಾದ್ದು? ಜಗತ್ಸ್ವಭಾವವೆಂಥಾದ್ದು? ಜೀವಕ್ಕೂ ಜಗತ್ತಿಗೂ ಇರುವ ಸಂಬಂಧವೇನು? ಜೀವಕ್ಕೆ ಉತ್ತಮಗತಿ ಎಂದರೆ ಏನು? ಜೀವ, ಜಗತ್ತು, ಈಶ್ವರ—ಈ ಮೂರು ವಸ್ತುಗಳಲ್ಲಿ ಈಶ್ವರನೆಂಬುದರ ಸ್ಥಾನವೆಲ್ಲಿ?—ಇವೇ ಮೊದಲಾದ ವಿಚಾರಗಳಿಗೆ ಉತ್ತರ ಕೊಡಬಲ್ಲದ್ದು ಭಗವದ್ಗೀತೆ. ಒಂದು ಸಂಪೂರ್ಣವಾದ ವಿಶ್ವಜೀವನದರ್ಶನ ಅದರ ವಿಷಯ.

3. ಇನ್ನು ಸಂಬಂಧ. ಅದು ತ್ರಿವಿಧವಾದದ್ದು.
    - ಒಂದು ಬೋಧಕ-ಬೋಧ್ಯ ಸಂಬಂಧ. ವ್ಯಾಸಂಗಿಯು ಬೋಧ್ಯ, ಗ್ರಂಥವು ಬೋಧಕ. ಹೀಗೆ ಶ್ರದ್ಧೆವಿಶ್ವಾಸಗಳು ಸಂಬಂಧದಲ್ಲಿ ಪ್ರಥಮಾಂಶ.
    - ಇನ್ನೊಂದು ಸಮನ್ವಯ-ಸಮನ್ವೇಯ ಸಂಬಂಧ. ಗೀತೆಯನ್ನು ವೇದಶಾಸ್ತ್ರ ಪುರಾಣೇತಿಹಾಸಗಳ ಸಾಹಚರ್ಯದಲ್ಲಿ-ವ್ಯಾಕರಣ ನ್ಯಾಯಾದಿ ಶಾಸ್ತ್ರಗಳ ಸಹಾಯದಿಂದ, ಲೋಕಾನುಭವ ಯುಕ್ತ್ಯುಪಪತ್ತಿಗಳನ್ನನುಸರಿಸಿ ವ್ಯಾಸಂಗಮಾಡಬೇಕಾದದ್ದು. ಸಮಸ್ತ ಶಾಸ್ತ್ರಾನುಭವಗಳೂ ಅದಕ್ಕೆ ಬೇಕಾದವು.
    - ಮತ್ತೊಂದು ಸಂಸ್ಕಾರಕ-ಸಂಸ್ಕಾರ್ಯ ಸಂಬಂಧ. ಗೀತೆಯ ಉಪದೇಶವು ಮನುಷ್ಯಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ವ್ಯಾಪಿಸಿ, ಎಲ್ಲ ಕ್ರಿಯೆಗಳನ್ನೂ ಶೋಧಿಸಿ ಉತ್ತಮಗೊಳಿಸಬೇಕಾದದ್ದು. ಜೀವನವು ತದುಪದೇಶಾನುಷ್ಠಾನದಿಂದ ಪರಿಷ್ಕೃತವಾಗಿ ಉತ್ತಮ ಗತಿಗೆ ಅರ್ಹವಾಗಬೇಕಾದದ್ದು.
4. ಇನ್ನು ಪ್ರಯೋಜನವಿಚಾರ.
   ಗೀತಾನುವರ್ತನೆಯಿಂದ ಜೀವಿಗೆ ಜಗದ್ಭಾರವು ಲಘುವಾಗುತ್ತದೆ. ತತ್ತ್ವವಿವೇಕದಿಂದ ನಾನಾ ಲೋಕವಸ್ತುಗಳ ಯಥಾರ್ಥಯೋಗ್ಯತೆ ಮನಸ್ಸಿಗೆ ಗೊತ್ತಾಗಿ ಅವುಗಳ ಮೌಲ್ಯ ತಾರತಮ್ಯವು ನಿರ್ಣೀತವಾಗುತ್ತದೆ. ಅದೇ ಮೋಹಭ್ರಾಂತಿನಿವಾರಣೆ. ಜೀವನದ ಅರ್ಥವೇನು, ಪರಮಾರ್ಥ ಯಾವುದು, ಕರ್ತವ್ಯಾಕರ್ತವ್ಯಗಳೆಂಥವು—ಇವೇ ಮೊದಲಾದ ಪ್ರಶ್ನೆಗಳು ಬಗೆಹರಿದು, ನಿರ್ಮಲ ಜೀವಿತಧರ್ಮಮಾರ್ಗ ಕಾಣಬರುತ್ತದೆ. ಆಗ ಮನಃಪ್ರಸನ್ನತೆ; ಆಗ ಜೀವನದ ಕಷ್ಟ ಸಂಕಟಗಳ ಪರಿಹಾರ; ಆಗ ಶಾಂತಿ. ಅದೇ ಗೀತಾನುಷ್ಠಾನದ ಫಲ.

ಹೀಗೆ ಸ್ಥೂಲವಾಗಿ ಅನುಬಂಧಚತುಷ್ಟಯವನ್ನು ವಿಚಾರಮಾಡಿದ್ದಾಯಿತಾದರೂ ಇನ್ನೂ ಹೆಚ್ಚು ವಿಚಾರವನ್ನು ಅಪೇಕ್ಷಿಸುವ ಸಂಗತಿಗಳು ಒಂದೆರಡಿವೆ. ಅದರಲ್ಲಿ ಮೊದಲು ಅಧಿಕಾರವಿಚಾರ. ಗೀತಾಚಾರ್ಯರು ಬಗೆಬಗೆಯ ಅಧಿಕಾರಗಳನ್ನು ಉದ್ದೇಶದಲ್ಲಿರಿಸಿಕೊಂಡಿದ್ದಾರೆ.

> ಚತುರ್ವಿಧಾ ಭಜಂತೇ ಮಾಂ
> ಜನಾಃ ಸುಕೃತಿನೋಽರ್ಜುನ ।

ಆರ್ತೋ ಜಿಜ್ಞಾಸುರರ್ಥಾರ್ಥೀ
ಜ್ಞಾನೀ ಚ ಭರತರ್ಷಭ ॥
ಉದಾರಾಃ ಸರ್ವ ಏವೈತೇ... ॥

ಮನುಷ್ಯರು ತಮ್ಮ ತಮ್ಮ ಪೂರ್ವಜನ್ಮಕರ್ಮಪರಿಪಾಕವನ್ನನುಸರಿಸಿ ಬುದ್ಧಿಶಕ್ತಿಯಲ್ಲಿ, ಇಷ್ಟಾಭಿರುಚಿಗಳಲ್ಲಿ, ವಿದ್ಯೆಯಲ್ಲಿ, ಗುಣಸಂಪತ್ತಿನಲ್ಲಿ, ವೈರಾಗ್ಯಯೋಗ್ಯತೆಯಲ್ಲಿ ಬೇರೆ ಬೇರೆ ರೀತಿಯವರಾಗಿ ಬೇರೆಬೇರೆ ಅಂತಸ್ತುಗಳವರಾಗಿರುತ್ತಾರೆ. ಈ ಯೋಗ್ಯತಾಭೇದಗಳೂ ಇಷ್ಟಾನಿಷ್ಟಭೇದಗಳೂ ಸ್ವಭಾವಸಿದ್ಧವಾದವು. ಆದದ್ದರಿಂದಲೇ ಉಪದೇಶಗಳೂ ಸಾಧನ ಕ್ರಮಗಳೂ ಒಬ್ಬೊಬ್ಬರಿಗೆ ಒಂದೊಂದು ವಿಧವಾಗಿರಬೇಕಾಗುತ್ತದೆ. ಅಧಿಕಾರಿಲಕ್ಷಣಗಳು ಒಟ್ಟಿನಲ್ಲಿ ಒಂದೇ ಎಂದು ತೋರಿದರೂ ಉಪಲಕ್ಷಣಗಳು ಭಿನ್ನಭಿನ್ನವಾಗಿರುತ್ತದೆ. ಹೀಗೆ ನಾನಾ ಪ್ರಕಾರಗಳಾದ ಜೀವರಾಶಿಗಳಲ್ಲಿ ಭಗವಂತನನ್ನು ನೆನೆದ ಪ್ರತಿಯೊಂದು ಜೀವಿಗೂ ಅದರ ಯೋಗ್ಯತೆಗೆ ತಕ್ಕ ಶ್ರೇಯೋಮಾರ್ಗವು ಅದಕ್ಕೇ ಪ್ರತ್ಯೇಕವಾಗಿರುತ್ತದೆ.

ಈ ಮೇಲಣ ಅನುಬಂಧವಿವರಣೆ ಸಾಮಾನ್ಯರೂಢಿಯದು, ಮತ್ತು ಸ್ಥೂಲ ರೂಪದ್ದು. ಇದರಲ್ಲಿ ವಿಚಾರಾರ್ಹವಾದ ಸಂಗತಿಗಳು ಹಲವು ಅಡಗಿಕೊಂಡಿವೆ. ಅವುಗಳನ್ನು ಪರೀಕ್ಷೆ ಮಾಡದಿದ್ದರೆ ಮೇಲೆ ಕೊಟ್ಟ ವಿವರಣೆಯು ಸಂಪೂರ್ಣವಾಗಲಾರದು.

ವಿಷಯಬೋಧನೆ ಅಧಿಕಾರಕ್ಕೆ ತಕ್ಕಂತೆ

ಮೊದಲು ಗ್ರಂಥವಿಷಯ ಮತ್ತು ಗ್ರಂಥಾಧಿಕಾರ—ಈ ಎರಡಂಶಗಳನ್ನು ನೋಡೋಣ. ಅವೆರಡೂ ಅನ್ಯೋನ್ಯ ನಿರ್ಣಾಯಕಗಳು. ಆರು ವರ್ಷದ ಹುಡುಗನಿಗೆ ಗೋವಿನ ಕಥೆ ತಕ್ಕ ಪಾಠ; ರಘುವಂಶಪಾಠಕ್ಕೆ ಹದಿನಾರು ವರ್ಷದವನು ತಕ್ಕ ವಿದ್ಯಾರ್ಥಿ.

ಹೀಗೆ ಒಂದು ಇನ್ನೊಂದನ್ನು ನಿರ್ಣಯಿಸುತ್ತದೆ. ವಿಷಯಕ್ಕೆ ತಕ್ಕ ಯೋಗ್ಯತೆಯಿರುವವನು ಅಧಿಕಾರಿ. ಅಧಿಕಾರಿಯ ವಿದ್ಯೆ ಸಾಮರ್ಥ್ಯಗಳಿಗೆ ತಕ್ಕಂತೆ ಇರಬೇಕಾದದ್ದು ಬೋಧನೆ. ಹೀಗೆ ಎರಡೂ ಪರಸ್ಪರ ಸಾಪೇಕ್ಷಗಳು.

ಭಗವದ್ಗೀತೆಯ ವಿಷಯವು ಸೂಕ್ಷ್ಮ ವಿವೇಚನೆಯಲ್ಲಿ ಏಕೈಕಪ್ರಕಾರದ್ದಲ್ಲ; ಅದು ಬಹು ಪ್ರಕಾರದ್ದು. ಲೋಕದಲ್ಲಿ ಕಾಣಬರುವ ಸಾಮಾನ್ಯ ಜನದ ಭಕ್ತಿ ಮೊದಲು ಮಾಡಿ ಮಹಾಪಂಡಿತರಿಗೆ ತಲೆಬೇನೆ ಹಿಡಿಸುವ ತರ್ಕಪ್ರಸಕ್ತಿಗಳವರೆಗೂ ಪ್ರಶ್ನೆಗಳು ಆ ಗ್ರಂಥದಲ್ಲಿ ಮೆಟ್ಟಲುಮೆಟ್ಟಲಾಗಿ ಕಾಣುತ್ತವೆ. ಪ್ರವೃತ್ತಿಧರ್ಮ, ನಿವೃತ್ತಿಧರ್ಮ, ಅತೀತಸ್ಥಿತಿ, ಭಕ್ತಿಯೋಗ, ಕರ್ಮಯೋಗ, ಧ್ಯಾನಸಮಾಧಿಯೋಗ, ಜ್ಞಾನಯೋಗ, —ಹೀಗೆ ವಿಷಯವು ಸೋಪಾನಾಕಾರದಲ್ಲಿದೆ. ಉದ್ದೇಶದಲ್ಲಿರುವ ಅಧಿಕಾರಿಗಳೂ ಹಾಗೆಯೇ ಬೇರೆಬೇರೆ ಇಯತ್ತೆಗಳವರು. ಪಾಮರರಿಂದ ಪರಮಹಂಸರವರೆಗೂ, ಸಂಸಾರಿಯಿಂದ ಸಂನ್ಯಾಸಿಯವರೆಗೂ ಎಷ್ಟೋ ಅಂತಸ್ತುಗಳ ಜನ ಗೀತೆಯ ಉದ್ದೇಶದಲ್ಲಿದ್ದಾರೆ. ಈ ಅಧಿಕಾರ ಭೇದದ ಕಾರಣದಿಂದ ಉಪದೇಶಭೇದವೂ ಸಂಗತವಾಗಿದೆ. “ಪತ್ರಂ ಪುಷ್ಪಂ ಫಲಂ ತೋಯಂ” ಎಂಬಲ್ಲಿಂದ ಹಿಡಿದು “ನಿಸ್ತ್ರೈಗುಣ್ಯೋ ಭವಾರ್ಜುನ” ಎಂಬವರೆಗೂ ಉಪದಿಷ್ಟಮಾರ್ಗಗಳೂ ಅನೇಕವಾಗಿವೆ. ಗಮ್ಯಸ್ಥಾನ ಒಂದು; ಗಮನೋಪಾಯ ಎಂಟು. ಆ ಎಂಟರಲ್ಲಿ ಈ ಒಂದೇ ಸರಿ, ಉಳಿದದ್ದು ಸರಿಯಾಗದು—ಎಂಬ ಹಟ ಸಾಧುವಾಗದು. ಶಿಷ್ಯತಾರತಮ್ಯದಂತೆ ಶಿಕ್ಷಣ ತಾರತಮ್ಯ ಎಂಬ ಸೂತ್ರವನ್ನು ಜ್ಞಾಪಕದಲ್ಲಿರಿಸಿಕೊಂಡರೆ ಮತವಿವಾದಗಳು ಬುಡವಿಲ್ಲದವೆಂದು ಕಾಣಬರುತ್ತದೆ.

ವೈದ್ಯಶಾಸ್ತ್ರದ ಉದ್ದೇಶ ಒಂದು; ಆರೋಗ್ಯವೆಂಬ ದೇಹಸ್ಥಿತಿ ಒಂದು. ಆದರೆ ಅನಾರೋಗ್ಯಕಾರಣಗಳು ನಾಲ್ಕಾರು; ರೋಗರೂಪಗಳು ನಾಲ್ಕಾರು. ಆದದ್ದರಿಂದ ಚಿಕಿತ್ಸೆ

ಪಥ್ಯಗಳ ವಿಧಾನಗಳು ನಾಲ್ಕಾರು. ಕಣ್ಣುಬೇನೆಗೆ ಶುಂಠಿ ಮೆಣಸು ಆಗದು; ಅಜೀರ್ಣಕ್ಕೆ ಪಟಿಕದ ದ್ರಾವಕ ಆಗದು, ದೇಹದೌರ್ಬಲ್ಯವನ್ನು ನೋಡಿ ಔಷಧ; ಜೀವ ದೌರ್ಬಲ್ಯವನ್ನು ನೋಡಿ ಉಪದೇಶ.

ಇದು ಬಹು ಮುಖ್ಯವಾದ ವಿಚಾರ. ಗೀತೆಯು ಎಲ್ಲ ವರ್ಣ ಎಲ್ಲ ವರ್ಗದವರಿಗೂ, ಎಲ್ಲ ಸಂದರ್ಭ ಎಲ್ಲ ಅವಸ್ಥೆಗಳಲ್ಲಿರುವವರಿಗೂ, ಸ್ತ್ರೀಯರಿಗೂ ಪುರುಷರಿಗೂ ಉಪಯುಕ್ತವಾಗತಕ್ಕದ್ದೆಂದು ಗೀತಾಚಾರ್ಯರೇ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಎಲ್ಲ ಉಪದೇಶವೂ ಎಲ್ಲರಿಗೂ ಅಲ್ಲ. ಪ್ರತಿಯೊಬ್ಬ ವ್ಯಾಸಂಗಿಯೂ ತನ್ನ ಯೋಗ್ಯತೆ ಎಷ್ಟು ಮಾತ್ರದ್ದೆಂಬುದನ್ನು ತಾನೇ ಅರಿತುಕೊಂಡು ಅದಕ್ಕೆ ತಕ್ಕ ಉಪದೇಶ ಯಾವುದೆಂಬುದನ್ನು ವಿವೇಚಿಸಿಕೊಳ್ಳಬೇಕು. ಇದನ್ನು ಗೀತಾಚಾರ್ಯರೇ ಸ್ಪಷ್ಟಪಡಿಸಿದ್ದಾರೆ:

> ಯಾವಾನರ್ಥ ಉದಪಾನೇ
> ಸರ್ವತಃ ಸಂಪ್ಲುತೋದಕೇ ।
> ತಾವಾನ್ ಸರ್ವೇಷು ವೇದೇಷು
> ಬ್ರಾಹ್ಮಣಸ್ಯ ವಿಜಾನತಃ ॥

ಎಲ್ಲೆಲ್ಲಿ ನೋಡಿದರೂ ಹೊಳೆಕೊಳಗಳಲ್ಲಿಯೂ ಕೆರೆಬಾವಿಗಳಲ್ಲಿಯೂ ನೀರು ತುಂಬಿ ತುಳುಕುತ್ತಿದ್ದರೂ ಮನುಷ್ಯನ ಉಪಯೋಗಕ್ಕೆ ಬರುವುದು ಅವನ ಸ್ನಾನಪಾನಗಳಿಗೆ ಯಾವುದು ಬೇಕೋ ಅದೇ; ಎಷ್ಟು ಬೇಕೋ ಅಷ್ಟು ಮಾತ್ರವೇ. ಅದರಂತೆಯೇ ವೇದಗಳಲ್ಲಿ ಉಪದೇಶಾಂಶಗಳು ನೂರಿದ್ದರೂ ವಿವೇಕಿ ಅವುಗಳಲ್ಲಿ ತನಗೆ ಹೊಂದತಕ್ಕದ್ದನ್ನು ಆರಿಸಿ ಸ್ವೀಕರಿಸುತ್ತಾನೆ. ಗೀತೋಪದೇಶದ ವಿಚಾರವೂ ಅಷ್ಟೇ. ಅರಸಿಗೆ ತಕ್ಕದ್ದು ಅರಮನೆ. ಅದರಲ್ಲಿ ಪರಿಚಾರಕ ಪರಿಚಾರಿಕೆಯರು ನೂರಾರು ಮಂದಿ ಇರುತ್ತಾರೆ; ಅವರಿಗೆ ನೂರು ಕೋಣೆಗಳು ಗೊತ್ತಾಗಿರುತ್ತವೆ. ಯಾವ್ಯಾವ ಮಹಡಿಯಲ್ಲಿ ಯಾರ್ಯಾರು ಎಲ್ಲೆಲ್ಲಿರಬೇಕೋ ಅಲ್ಲಲ್ಲಿರುವುದು ಉಚಿತ. ಎಲ್ಲ ಕೋಣೆಗಳೂ ಎಲ್ಲ ಮಹಡಿಗಳೂ ಎಲ್ಲರಿಗೂ ಅಲ್ಲ.

ಹಾಗಾದರೆ ಮೇಲುಕೀಳೆಂಬ ವ್ಯತ್ಯಾಸಗಳಾಗುವುದಿಲ್ಲವೆ? ಅದು ಸರಿಯೆ? ಎಂದು ಯಾರಾದರೂ ಕೇಳಬಹುದು. ಆ ಪ್ರಶ್ನೆಗೆ ಉತ್ತರ ಮನುಷ್ಯಸ್ವಭಾವದ ಮೇಲುಕೀಳುಗಳಲ್ಲಿ ಅಡಗಿದೆ. ಕೊಬ್ಬರಿ ಮಿಠಾಯಿ ಎಲ್ಲರಿಗೂ ಇಷ್ಟವಾದ ತಿಂಡಿಯೇ. ವ್ಯತ್ಯಾಸ ಮಾಡಬಾರದೆಂದು

ಎರಡು ವರ್ಷದ ಮಗುವಿಗೆ ಎರಡು ಸೇರು ಮಿಠಾಯಿ ಕೊಟ್ಟರೆ ಅದರ ಪಾಡೇನಾಗುತ್ತದೆ? ದೇಹದ ಆಹಾರಕ್ಕೆ ಹೇಗೆ ಮಿತಿಯಿರಬೇಕಾದದ್ದೋ ಮನಸ್ಸಿನ ಆಹಾರಕ್ಕೂ ಬುದ್ಧಿಯ ಆಹಾರಕ್ಕೂ ಹಾಗೆಯೇ ಮಿತಿಯಿರಬೇಕಾದದ್ದು. ಈ ಮಿತಿಯೆಂಬುದು ವಸ್ತುಸತ್ಯಕ್ಕೆ ಸಲ್ಲುವ ಗೌರವ. ಸತ್ಯವೆಂದರೆ ಯಥಾರ್ಥ. ವಸ್ತುವಿನ ಸ್ವಭಾವ ಹೇಗಿದೆಯೋ ಅದನ್ನು ಹಾಗೆ ಕಂಡುಕೊಳ್ಳುವುದು ಯಥಾರ್ಥ. ವಸ್ತುವಿನ ನಿಜಸ್ಥಿತಿ ಹೇಗಿದೆಯೋ ಅದನ್ನು ಹಾಗೆಯೇ ಗ್ರಹಿಸುವುದು ಯಥಾರ್ಥ. ತತ್ತ್ವವೆಂದರೂ ಅದೇಯೇ. ಅದರ ಅದಾಗಿರುವಿಕೆಯೇ ತತ್ + ತ್ವ. ತತ್ತ್ವವೇ, ಯಥಾರ್ಥವೇ, ಸತ್ಯವೇ ಧರ್ಮದ ಮೂಲ ಕಾರಣ. ಜೀವಕ್ಕೂ ಜೀವಕ್ಕೂ ಸ್ವಭಾವರಚನೆಯಲ್ಲಿಯೇ ಭೇದಗಳಿರುವುದು ಯಥಾರ್ಥವಾದದ್ದರಿಂದ ಅವರಿಗೆ ಕೊಡುವ ಉಪದೇಶಗಳಲ್ಲಿಯೂ ಸಾಧನೋಪಾಯಗಳಲ್ಲಿಯೂ ಆ ಯಥಾರ್ಥಕ್ಕನುಗುಣವಾಗಿ ಭೇದಗಳಿರಬೇಕಾಗುತ್ತದೆ. ಈ ಕಾರಣದಿಂದ ಗೀತೋಪದೇಶದ ನಾನಾವಿಧತ್ವ. ಇದರಲ್ಲಿ ಮೇಲುಬೀಳುಗಳ ಪ್ರಶ್ನೆ ತಲೆಯೆತ್ತತಕ್ಕದ್ದೇ ಅಲ್ಲ. ಮದ್ದುಗಳಲ್ಲಿ ಇಂಜೆಕ್ಷನ್ ಶ್ರೇಷ್ಠ, ಮಿಕ್ಸ್‌ಚರ್ ನಿಕೃಷ್ಟ; ಗುಳಿಗೆ ಶ್ರೇಷ್ಠ, ಚೂರ್ಣ ನಿಕೃಷ್ಟ—ಎಂದುಂಟೆ? ನಮಗಿರುವ ವ್ಯಾಧಿ ಅಜ್ಞಾನ, ಅದಕ್ಕೆ ವೈದ್ಯ ಗೀತಾಚಾರ್ಯ. ಮಹಾಭಾರತದಲ್ಲಿ ಯುದ್ಧಾನಂತರ ಅಶ್ವಮೇಧಿಕ ಪರ್ವದಲ್ಲಿ ಬೇರೊಂದು ಸಂದರ್ಭದಲ್ಲಿ ಗೀತಾಚಾರ್ಯರ ಮುಖದಿಂದಲೇ ಅರ್ಜುನನಿಗೆ ಇಂಥಾ ಶ್ರೇಷ್ಠ-ನಿಕೃಷ್ಟ ಸ್ಪರ್ಧೆಗೆ ಸಮಾಧಾನ ದೊರೆಯಿತು. ಅದನ್ನು ಇಲ್ಲಿ ಅನ್ವಯಿಸಿಕೊಳ್ಳಬಹುದು.

> ಸರ್ವೇ ಸ್ವವಿಷಯೇ ಶ್ರೇಷ್ಠಾಃ
> ಸರ್ವೇ ಚಾನ್ಯೋನ್ಯರಕ್ಷಿಣಃ ॥

“ಒಂದು ಗುಂಪಿನಲ್ಲಿ ಪ್ರತಿಯೊಬ್ಬನೂ ಅವನವನಿಗೆ ಗೊತ್ತಾದ ಕರ್ತವ್ಯವಿಷಯದಲ್ಲಿ ಮಿಕ್ಕವರಿಗಿಂತ ಶ್ರೇಷ್ಠನು—ವೇದವಿಷಯದಲ್ಲಿ ಬ್ರಾಹ್ಮಣ ಶ್ರೇಷ್ಠ; ರಾಜ್ಯ ವಿಷಯದಲ್ಲಿ ಕ್ಷತ್ರಿಯ ಶ್ರೇಷ್ಠ; ಸಂಪದ್ವಿಷಯದಲ್ಲಿ ವೈಶ್ಯ ಶ್ರೇಷ್ಠ; ಲೋಕಸೇವೆಯಲ್ಲಿ ಗೃಹಸ್ಥ ಶ್ರೇಷ್ಠ; ತಪಸ್ಸಿನಲ್ಲಿ ಸಂನ್ಯಾಸಿ ಶ್ರೇಷ್ಠ—ಹೀಗೆ. ವಿಹಿತಕರ್ತವ್ಯ ಹೊರತು ಮಿಕ್ಕ ವಿಚಾರಗಳಲ್ಲಿ ಪ್ರತಿಯೊಬ್ಬನೂ ಮಿಕ್ಕವರಿಗೆ ಸಹಕಾರಿಯಾಗಿರಬೇಕಾದವನು.” ಇದೇ ನ್ಯಾಯದಿಂದ ಪ್ರತಿಯೊಬ್ಬ ಜೀವಿಗೂ—ಅವನ ಜೀವಪರಿಶೋಧನೆಗೂ ಅವನ ಆಧ್ಯಾತ್ಮಿಕ ಪ್ರಗತಿಗೂ ಸಾಧಕವಾಗುವ ಉಪದೇಶ ಯಾವುದುಂಟೋ ಅದೇ ಅವನಿಗೆ ಶ್ರೇಷ್ಠ. ಇದನ್ನೇ ಗೀತೆಯಲ್ಲಿ

ಶ್ರೇಯಾನ್ ಸ್ವಧರ್ಮೋ ವಿಗುಣಃ
ಪರಧರ್ಮಾತ್ ಸ್ವನುಷ್ಠಿತಾತ್ ॥

ಎಂದು ಹೇಳಿದೆ. ಈ ಅಂಶವನ್ನು ಇಲ್ಲಿ ನಾನು ಇಷ್ಟು ಒತ್ತೊತ್ತಿ ಹೇಳಿರುವುದಕ್ಕೆ ಕಾರಣ ಏನೆಂದರೆ, ಜನಕ್ಕೆ ಮೋಕ್ಷಲಾಭದ ವಿಷಯದಲ್ಲಿರುವ ಅತಿಶಯವಾದ ಆತುರ. ಭಗವದ್ಗೀತೆಗೆ ಮೋಕ್ಷಶಾಸ್ತ್ರವೆಂದು ಪ್ರಸಿದ್ಧಿ ಬಂದಿದೆ. ಆದದ್ದರಿಂದ ಅದರಲ್ಲೇನು ರಹಸ್ಯವುಂಟೋ ಬೇಗ ತಿಳಿದುಕೊಂಡುಬಿಟ್ಟು ಮೋಕ್ಷಕ್ಕೆ ಹಾರಿಬಿಡೋಣ—ಎಂದು ಜನಕ್ಕೆ ಆತುರ. ಇಂಥ ಆತುರ ವ್ಯರ್ಥಮಾತ್ರವೇ ಅಲ್ಲ; ಅನರ್ಥಕರ. ಗೀತೆ ಮೋಕ್ಷಶಾಸ್ತ್ರವಲ್ಲವೆಂದು ಯಾರೂ ಹೇಳರು; ಮೋಕ್ಷಚಿಂತೆ ದೋಷವೆಂದೂ ಯಾರೂ ಹೇಳರು. ಆದರೆ ಗೀತೆ ಎಷ್ಟು ಮಟ್ಟಿಗೆ ಮೋಕ್ಷಶಾಸ್ತ್ರವೋ ಅಷ್ಟು ಮಟ್ಟಿಗೆ ಧರ್ಮಶಾಸ್ತ್ರವೂ ಹೌದು. ಮೋಕ್ಷಚಿಂತೆ ಒಳ್ಳೆಯದಾದರೆ ಅದಕ್ಕೆ ಪೂರ್ವಸಿದ್ಧತೆಯಾಗಿ ಧರ್ಮಚಿಂತೆ-ಮೊದಲಿನ ಒಳ್ಳೆಯದು. ಧರ್ಮವಿಲ್ಲದೇ ಮೋಕ್ಷವಿಲ್ಲ. ಇದನ್ನು ನಮ್ಮ ಜನ ಮೊದಲು ಮನಸ್ಸಿಗೆ ತಂದುಕೊಳ್ಳಬೇಕಾದದ್ದು. ವಿಚಾರಮಾಡಿ ನೋಡಿದರೆ ಮೋಕ್ಷಕ್ಕಾಗಿ ತಲ್ಲಣಿಸಬೇಕಾದದ್ದೇ ಇಲ್ಲ; ಧರ್ಮವಿದ್ದ ಕಡೆ ಮೋಕ್ಷ ತಾನಾಗಿ ಹಿಂದುಗೂಡಿ ಬರುತ್ತದೆ. ಹಗಲು ದುಡಿದು ಮಾಡಬೇಕಾದದ್ದನ್ನು ಯಥಾಶಕ್ತಿ ಮಾಡಿ. ಆರೋಗ್ಯವಿಧಿಯಂತೆ ಬಾಳಿದವನು ರಾತ್ರಿ ನಿದ್ದೆಗಾಗಿ ಗುಳಿಗೆ ಸೇವಿಸಬೇಕಾದದ್ದಿಲ್ಲ. ಆಹಾರ ಜೀರ್ಣವಾದವನು ಕೃತಕೃತ್ಯಸಮಾಧಾನದಿಂದ ತಲೆ ನೆಲಕ್ಕಿಟ್ಟರೆ ನಿದ್ದೆ ತಾನಾಗಿ ಬರುತ್ತದೆ. ವಿವೇಕ ಜಾಗರೂಕತೆಗಳಿಂದ ಧರ್ಮಸೇವೆ ಮಾಡಿದವನಿಗೆ ಮೋಕ್ಷ ಸ್ವತಃ ಸಿದ್ಧವಾಗಿರುತ್ತದೆ.

ಆದದ್ದರಿಂದ ನಾವು ಧರ್ಮವಿಚಾರದ ಮೇಲೆ ಹೆಚ್ಚು ಗಮನವಿಟ್ಟು ಗೀತೆಯನ್ನು ಅನುಸರಿಸೋಣ.

ನಮ್ಮ ವ್ಯಾಸಂಗದ ಸಂಬಂಧದಲ್ಲಿ ವಿಷಯ ಅಧಿಕಾರಿಗಳೆಂಬ ಎರಡು ಅನುಬಂಧಗಳು ಪೂರ್ಣ ಪ್ರತ್ಯೇಕಗಳಲ್ಲ, ಅನ್ಯೋನ್ಯಾವಲಂಬಿಗಳು; ವ್ಯಾಸಂಗಿಯು ಧರ್ಮಾಸಕ್ತನಾಗಿದ್ದಲ್ಲಿ ಗೀತೆಯ ವಿಷಯ ಧರ್ಮತತ್ತ್ವ ಎಂಬುದನ್ನು ನೋಡಿದ್ದಾಯಿತು. ಪ್ರಯೋಜನದ ವಿಷಯವನ್ನು ಸೂಕ್ಷ್ಮವಾಗಿ ಪ್ರಸ್ತಾವಿಸಿದ್ದಾಯಿತು. ಸಂಬಂಧವೆಂಬುದನ್ನು ಕುರಿತು ಒಂದು ಮಾತು ಹೇಳಬೇಕಾದದ್ದಿದೆ. ಇದು ನಮ್ಮ ಮನೋಭಾವವನ್ನು (attitude) ಕುರಿತದ್ದು. ಗೀತೆ ಬೋಧಕ, ನಾವು ಬೋಧ್ಯರು—ಹೀಗೆ ಬೋಧಕ ಬೋಧ್ಯಸಂಬಂಧ ಎಂದು ಅರಿಕೆ ಮಾಡಿದೆ.

ಇದು ಸ್ಪಷ್ಟವಲ್ಲವೇ? ಹೇಳಬೇಕೆ? ಎಂದು ಯಾರಿಗಾದರೂ ಅನ್ನಿಸಬಹುದು. ಹಾಗಲ್ಲ. ಸಂಬಂಧವು ಬೋಧಕ-ಬೋಧ್ಯರದಾಗದೆ, ಖಂಡಕ-ಖಂಡ್ಯರದಾಗಬಹುದಷ್ಟೆ? ಬೌದ್ಧ, ಮುಸಲ್ಮಾನ್, ಕ್ರಿಶ್ಚಿಯನ್ ಮೊದಲಾದ ಅನ್ಯಮತಸ್ಥರು ದೋಷಾನ್ವೇಷಣೆಗಾಗಿ ಗೀತೆಯನ್ನು ಓದುವುದು ಸಂಭವವಲ್ಲವೆ? ಅದು ಹಾಗಾದರೆ ಗ್ರಂಥಕ್ಕೂ ವ್ಯಾಸಂಗಿಗೂ ಅನ್ಯೋನ್ಯ ಶ್ರದ್ಧೆ ವಿಶ್ವಾಸಗಳಿರಬೇಕೆಂಬುದು ಅಭಿಪ್ರಾಯ.

ಶ್ರದ್ಧೆಯೆಂದರೆ ನಂಬಿಕೆ; ಆದರೆ ಕುರುಡುನಂಬಿಕೆಯಲ್ಲ. ತಾಯಿ ಕೊಟ್ಟ ತಿಂಡಿಯನ್ನು ಮಗು ಎಂಥ ನಂಬಿಕೆಯಿಂದ ತಿನ್ನುತ್ತದೆಯೋ, ವೈದ್ಯ ಕೊಟ್ಟ ಔಷಧಿಯನ್ನು ರೋಗಿ ಎಂಥ ನಂಬಿಕೆಯಿಂದ ಸೇವಿಸುತ್ತಾನೋ ಅಂಥ ನಂಬಿಕೆಯೇ ವಿಶ್ವಾಸ. ತಾಯಿ ಕೊಟ್ಟದ್ದು ರುಚಿಸದೆಹೋದರೆ ಮಗು ಅದನ್ನು ಬಿಸಾಟು ಬೇರೆ ತಿಂಡಿ ಕೇಳುತ್ತದೆ. ವೈದ್ಯ ಕೊಟ್ಟ ಔಷಧಿಯಿಂದ ಗುಣ ತೋರದೆಹೋದರೆ ರೋಗಿ ಅದನ್ನು ವೈದ್ಯನಿಗೆ ಹೇಳಿಕೊಂಡು ಪುಕಾರುಮಾಡುತ್ತಾನೆ. ಹೀಗೆ ಅನುಭವದಿಂದ ಪರೀಕ್ಷೆ ನಡಸುವ ಸ್ವಾತಂತ್ರ್ಯ ಮಗುವಿಗೂ ರೋಗಿಗೂ ಉಂಟೇ ಉಂಟು. ಅದರಂತೆ ನಾವು ಗುರುವಾಕ್ಯ ಶಾಸ್ತ್ರವಾಕ್ಯಗಳಲ್ಲಿ ಇರಿಸಬೇಕಾದ ಶ್ರದ್ಧೆ ಸ್ವತಂತ್ರವಿಚಾರಕ್ಕೆ ವಿರೋಧಿಯಾದದ್ದಲ್ಲ. ಅದು ನಮ್ಮ ಯುಕ್ತ್ಯನುಭವಗಳಿಗೆ ಒಳಪಟ್ಟದ್ದಾಗಿಯೇ ಇರುತ್ತದೆ. ಮೊದಲು ಪರೀಕ್ಷೆ, ಆಮೇಲೆ ವಿಶ್ವಾಸ—ಎಂಬುದು ಲೋಕವ್ಯವಹಾರದಲ್ಲಿ ರೂಢಿಯಾದ ನೀತಿ. ಆತ್ಮ, ಜೀವ, ಧರ್ಮ ಇವು ಅಲೌಕಿಕ ವಿಷಯಗಳು. ಆದದ್ದರಿಂದ ಅಲ್ಲಿ ಮೊದಲು ವಿಶ್ವಾಸ, ಆಮೇಲೆ ಅನುಭವಪೂರ್ವಕ ವಿಮರ್ಶೆ—ಇದು ನೀತಿ. ಇಲ್ಲಿ ಬೇಕಾದ ಮನೋಭಾವ ಅವಿಚಾರದ್ದಲ್ಲ, ವಿಚಾರಾಪೇಕ್ಷಿಯಾದದ್ದು ಎಂಬುದನ್ನು ಗೀತಾಚಾರ್ಯರೇ ಸ್ಪಷ್ಟಪಡಿಸಿದ್ದಾರೆ—

> ತದ್ವಿದ್ಧಿ...ಪರಿಪ್ರಶ್ನೇನ ।
> ವಿಮೃಶ್ಯೈತದಶೇಷೇಣ ।

ಇತ್ಯಾದಿ ವಾಕ್ಯಗಳಲ್ಲಿ.

ಈ ಪ್ರಸಂಗದಲ್ಲಿ ಯುಕ್ತವಾದ ಮಾತು ಇನ್ನೂ ಒಂದಿದೆ. ಅದು ಈ ಶಾಸ್ತ್ರಕ್ಕೂ ಲೌಕಿಕ ಶಾಸ್ತ್ರಗಳಿಗೂ ಸ್ವರೂಪದಲ್ಲಿರುವ ಭೇದವನ್ನು ಕುರಿತದ್ದು. ಗಣಿತ, ಭೌತವಿಜ್ಞಾನ, ರಸಾಯನವಿಜ್ಞಾನ ಮೊದಲಾದ ಶಾಸ್ತ್ರಗಳು ಕೇವಲ ಬುದ್ಧಿಶಕ್ತಿಗೆ ಸಾಧ್ಯವಾದವು. ಅವುಗಳ

ವಿಷಯಗಳು ಲೌಕಿಕ ವಸ್ತುಗಳು. ಲೌಕಿಕ ವಸ್ತುಗಳು ಇಂದ್ರಿಯಗೋಚರವಾದವು. ಅವುಗಳು ಪ್ರತ್ಯಕ್ಷ ಪ್ರಮಾಣಕ್ಕೂ ಅನುಮಾನ ಪ್ರಮಾಣಕ್ಕೂ ಸಿಕ್ಕುತ್ತವೆ. ಆತ್ಮವೆಂಬುದು ಅತೀಂದ್ರಿಯ ವಸ್ತು; ಅದು ನಮ್ಮ ಕೈಯ ಹಿಡಿತಕ್ಕೂ ತೂಕಕ್ಕೂ ಅಳತೆಗೂ ಸಿಕ್ಕತಕ್ಕದ್ದಲ್ಲ. ಆದದ್ದರಿಂದ ಅದನ್ನು ನಾವು ಕಂಡುಕೊಳ್ಳಬೇಕಾದರೆ ವೇದಶಾಸ್ತ್ರರೂಪವಾದ ಆಪ್ತವಾಕ್ಯವೊಂದೇ ಇರುವ ಪ್ರಮಾಣ. ಅದನ್ನು ನಂಬೆವೆಂದರೆ ನಮಗೆ ಬೇರೆ ದಾರಿಯೇ ಇಲ್ಲ.

ಆಪ್ತವಾಕ್ಯವಿಶ್ವಾಸದ ಜೊತೆಗೆ ಅವಶ್ಯವಾದ ಇನ್ನೊಂದು ಸಿದ್ಧತೆ ಅಂತರಂಗ ಶೋಧನೆ, ಅಥವಾ ಸತ್ತ್ವಶುದ್ಧಿ. ಮೋಕ್ಷಕ್ಕಾಗಿ ಆತುರಪಡುವವರು ಇದನ್ನು ಮರೆಯುತ್ತಾರೆ.

ಒಂದು ವಿಶೇಷ ಬುದ್ಧಿಸಾಹಸದಿಂದ ವೇದಾಂತದ ರಹಸ್ಯವನ್ನು ಸ್ವಾಧೀನಕ್ಕೆ ತಂದುಕೊಳ್ಳುತ್ತೇವೆಂಬುದು ಭ್ರಾಂತಿ—ಅಪಾಯಕರವಾದ ಭ್ರಾಂತಿ. ನಾವು ಇಸ್ಪೀಟ್ ಆಟವನ್ನು ಒಂದು "ಟ್ರಿಕ್" ಮಾಡಿ ಗೆಲ್ಲಬಹುದು. ಯಂತ್ರವನ್ನು ಒಂದು ಹುನ್ನರಿನಿಂದ ಚಲಾಯಿಸಬಹುದು. ಗಣಿತಸಮಸ್ಯೆಯನ್ನು ಒಂದು ಚಮತ್ಕಾರದಿಂದ ಪೂರಯಿಸಬಹುದು. ಹಾಗೆಯೇ ಒಂದು ವಾದದಲ್ಲಿ ವಾಕ್ಚಾತುರ್ಯದಿಂದ ಪ್ರತಿವಾದಿಗೆ ಬಾಯಿ ಮುಚ್ಚಿಸಬಹುದು. ಅದೇ ರೀತಿ ಒಂದು ಸುಲಭೋಪಾಯದಿಂದ ಮೋಕ್ಷನಗರದೊಳಕ್ಕೆ ನುಗ್ಗಿ ಹೋಗಬಹುದು ಎಂದು ತಿಳಿಯುತ್ತೇವೆ. ಆದರೆ ಹಾಗೆ ಕೇವಲ ಬುದ್ಧಿಯತ್ನಕ್ಕೆ ದೊರೆಯತಕ್ಕದ್ದಲ್ಲ ಬ್ರಹ್ಮತತ್ತ್ವ.

ಸಾಧನ ಚತುಷ್ಟಯ

ಬುದ್ಧಿಯು ಮನಸ್ಸಿನೊಡಗೂಡಿ ಕೆಲಸ ಮಾಡತಕ್ಕ ಶಕ್ತಿ ಎಂಬುದನ್ನು ಮೇಲೆ ಸೂಚಿಸಿದೆ. ಬುದ್ಧಿಯು ಮನಸ್ಸಿನ ಪ್ರಭಾವಕ್ಕೊಳಪಟ್ಟದ್ದು. ಆದದ್ದರಿಂದ ಬುದ್ಧಿಯನ್ನು ಪರಿಶುದ್ಧ ಮಾಡಬೇಕಾದರೆ ಮೊದಲು ಮನಸ್ಸನ್ನು ಶುದ್ಧಮಾಡಬೇಕು. ಬುದ್ಧಿಯು ವಿಚಾರ ಕಾರ್ಯಕ್ಕೆ ಸಾಧಕವಾದ ಆಯುಧ. ಹಾಗೆ ವಿಚಾರದಿಂದ ಸಿದ್ಧವಾದದ್ದನ್ನು ಅನುಭವಿಸತಕ್ಕದ್ದು ಮನಸ್ಸು. ಜ್ಞಾನವು ವೇದಾಂತದಲ್ಲಿ ಅನುಭವ. ಬ್ರಹ್ಮಜ್ಞಾನವೆಂದರೆ ಬ್ರಹ್ಮಾನುಭವ. ಅನುಭವದ ರಂಗಸ್ಥಲವಾದರೋ ಮನಸ್ಸು. ಮನಸ್ಸನ್ನು ಪಕ್ವಗೊಳಿಸಿದ ಹೊರತು ನಮಗೆ ಸಮ್ಯಕ್ಕಾಗಿ ತತ್ತ್ವಾನುಭವವಾಗಲಾರದು. ಹೀಗೆ ಮನಶ್ಶುದ್ಧಿಯು ಗೀತಾಶಾಸ್ತ್ರಾಭ್ಯಾಸಕ್ಕೆ ಇರಲೇಬೇಕಾದ ಪೂರ್ವಸಿದ್ಧತೆ. ಮನಶ್ಶೋಧನೆಯ ಕ್ರಮವನ್ನು ಸಾಧನ ಚತುಷ್ಟಯವೆಂದು ಕರೆಯುತ್ತಾರೆ. ಅವು ಹೀಗೆ:

1. **ನಿತ್ಯಾನಿತ್ಯವಿವೇಕ:** ಪ್ರಪಂಚದ ವಸ್ತುಗಳಲ್ಲಿ ಎಲ್ಲ ಕಾಲಕ್ಕೂ ಇರುವಂಥಾದ್ದು ಯಾವುದು, ಕೊಂಚ ಕಾಲ ಇದ್ದು ಹೋಗುವಂಥಾದ್ದು ಯಾವುದು—ಈ ಗುರು-ಲಘು ತಾರತಮ್ಯವನ್ನು, ಈ ಸ್ಥಿರ-ಚರ ತಾರತಮ್ಯವನ್ನು, ಈ ಸಾರ್ವಕಾಲಿಕ-ಕ್ಷಣಿಕ ತಾರತಮ್ಯವನ್ನು ಪದೇಪದೇ ಚಿಂತಿಸಿ ಮನಸ್ಸಿಗೆ ತಂದುಕೊಳ್ಳಬೇಕು.
2. **ಇಹಾಮುತ್ರಾರ್ಥಫಲಭೋಗವಿರಾಗ:** ಇಹಲೋಕದಲ್ಲಿಯಾಗಲಿ ಸ್ವರ್ಗಾದಿ ಲೋಕಗಳಲ್ಲಿಯೇ ಆಗಲಿ ದೇಹಭೋಗ ಪಡಬೇಕೆಂಬ ಇಚ್ಛೆಯನ್ನು ಕ್ರಮಕ್ರಮವಾಗಿ ಹೋಗಲಾಡಿಸಿಕೊಳ್ಳುವುದು : ಇಂದ್ರಿಯಭೋಗಗಳ ವಿಷಯದಲ್ಲಿ ತಾನು ಆಶೆಗೆ ವಶನಾಗದೆ ಇರುವುದು.
3. **ಶಮಾದಿಷಟ್ಕಸಂಪತ್ತಿ:** ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನ. ಈ ಅಂತರಂಗ-ಬಹಿರಂಗ ಸಾಧನೆ ಗೀತೆಯಲ್ಲಿಯೇ ಪದೇಪದೇ ವಿವರಿಸಲ್ಪಟ್ಟಿದೆ.
   - **ತಮ** ವೆಂದರೆ ಬೇರೆ ಚಿಂತೆಯನ್ನಿಟ್ಟುಕೊಳ್ಳದೆ ಅಂತರಿಂದ್ರಿಯಗಳನ್ನು ಹದ್ದಿನಲ್ಲಿರಿಸಿಕೊಳ್ಳುವುದು, ಮನಸ್ಸನ್ನು ಸ್ವಸ್ಥವಾಗಿರಿಸಿಕೊಳ್ಳುವುದು.
   - **ದಮ** ವೆಂದರೆ ಬಾಹ್ಯೇಂದ್ರಿಯಗಳನ್ನು ಹದ್ದಿನಲ್ಲಿರಿಸಿಕೊಳ್ಳುವುದು.

    - **ಉಪರತಿ** ಯೆಂದರೆ ಹೊರಪ್ರಪಂಚದ ವ್ಯಾಪಾರಗಳಿಂದ ಮನಸ್ಸನ್ನು ಒಳಕ್ಕೆಳೆದುಕೊಂಡು ಸ್ವಸ್ಥತೆಯಿಂದಿರುವುದು.
    - **ತಿತಿಕ್ಷೆ** ಯೆಂದರೆ ಲಾಭ-ನಷ್ಟ, ಸುಖ-ದುಃಖ, ರಾಗ-ದ್ವೇಷ, ಶೀತೋಷ್ಣಾದಿ ದ್ವಂದ್ವಗಳಿಂದ ಮನಸ್ಸಿಗೆ ಬಾಧೆಮಾಡಿಕೊಳ್ಳದೆ ಸಮಸ್ಥಿತಿಯಲ್ಲಿರುವುದು.
    - **ಶ್ರದ್ಧೆ** ಯೆಂದರೆ ಶಾಸ್ತ್ರವಾಕ್ಯವನ್ನೂ ಗುರುಹಿರಿಯರ ಉಪದೇಶವನ್ನೂ ನಂಬಿಕೆಯಿಂದ ಗ್ರಹಿಸುವುದು.
    - **ಸಮಾಧಾನ** ವೆಂದರೆ ಮನಸ್ಸನ್ನು ಹೋದಂತೆ ಬಿಡದೆ ಲಕ್ಷ್ಯಸ್ಥಾನದಲ್ಲಿ ಅದು ನಿಶ್ಚಿಂತವಾಗಿ ನಿಲ್ಲುವಂತೆ ಮಾಡುವುದು.
4. **ಮುಮುಕ್ಷುತ್ವ:** ಮೋಕ್ಷದಲ್ಲಿ ಕುತೂಹಲ. ಮೋಕ್ಷವೆಂದರೆ ದುಃಖದ ಸ್ಮರಣೆಯಿಲ್ಲದ, ದ್ವಂದ್ವಗಳಿಗೆ ಮೇಲ್ಪಟ್ಟ, ಬಂಧವಿಮೋಚನಜನಿತವಾದ ಆನಂದಾನುಭವ.

ಒಟ್ಟಿನಲ್ಲಿ ಗೀತಾವ್ಯಾಸಂಗಿಯು ಇಹಲೋಕದ ಭೋಗೈಶ್ವರ್ಯಗಳ ಪರಿಮಿತಿಯನ್ನು ಕಂಡವನಾಗಿ ಕಾಮಕ್ರೋಧಮಾತ್ಸರ್ಯಗಳನ್ನು ಹದ್ದಿನಲ್ಲಿರಿಸಿಕೊಂಡು ದೇಹ ಜೀವನಕ್ಕಿಂತ ಮೇಲೆ ಆತ್ಮತತ್ತ್ವ ಒಂದುಂಟೆಂಬುದನ್ನು ಗ್ರಹಿಸಿ ತನ್ನ ಎಲ್ಲ ವ್ಯವಹಾರಗಳಲ್ಲಿಯೂ ಆ ಪರಮಾರ್ಥವನ್ನೇ ಸರ್ವೋತ್ತಮವಾದದ್ದೆಂದು ಗಣಿಸಿರುತ್ತಾನೆ. ಅದೇ ಪರಮಾರ್ಥ ದೃಷ್ಟಿ. ಇದೇ ಗೀತಾಭ್ಯಾಸಿಗೆ ಬೇಕಾದ ಮೊದಲನೆಯ ಪೂರ್ವಸಿದ್ಧತೆ.

ಎರಡು ಮುನ್ನೆಚ್ಚರಿಕೆಗಳು

ಒಂದು ದೊಡ್ಡ ಗ್ರಂಥವನ್ನು ವ್ಯಾಸಂಗಕ್ಕಾಗಿ ತೆಗೆದುಕೊಂಡಾಗ ಅದರ ವಾಕ್ಯಗಳಿಗೆ ನಾವು ಹೇಗೆ ಅರ್ಥಮಾಡಬೇಕು? ಇಲ್ಲಿ ಎರಡು ಎಚ್ಚರಿಕೆಗಳು ಯುಕ್ತವಾಗಿವೆ:

1. ಕಥಾಸಂಗತಿಯಲ್ಲಿ ಅಪನಂಬಿಕೆಯನ್ನು ಅಮಾನತ್ತಿನಲ್ಲಿರಿಸುವುದು. ("Willing suspension of disbelief" —Coleridge);
2. ವಾಕ್ಯಧೋರಣೆಯಲ್ಲಿ ತಾತ್ಪರ್ಯಾರ್ಥವನ್ನು ಲಕ್ಷ್ಯದಲ್ಲಿರಿಸಿಕೊಳ್ಳುವುದು.

1. ಕಥಾಸಂಗತಿಯಲ್ಲಿ ಅಪನಂಬಿಕೆಯನ್ನು ಅಮಾನತ್ತಿನಲ್ಲಿರಿಸುವುದು. ಕಥಾಪ್ರಸಂಗದಲ್ಲಿ ನಾನಾ ಪಾತ್ರಘಟನೆಗಳನ್ನು ಕುರಿತು ನಮ್ಮ ಮನಸ್ಸಿನಲ್ಲಿ ಹುಟ್ಟುವ ಪ್ರಶ್ನೆಗಳನ್ನು ಕಾಲಾಂತರವಿಚಾರಕ್ಕಾಗಿ ಬದಿಗಿರಿಸತಕ್ಕದ್ದು. ರಾಮಾಯಣದಲ್ಲಿ ರಾವಣನಿಗೆ ನಿಜವಾಗಿ ಹತ್ತು ತಲೆ ಇತ್ತೆ? ಅವನು ಕಾಮರೂಪಿಯಾಗಿದ್ದನೆ? ಮಾರೀಚನು ಕನಕಮೃಗವಾದದ್ದು ಹೇಗೆ? —ಇಂಥವು ಶಂಕಾಸ್ಪದವಾದ ಸಂಗತಿಗಳು. ಭಾರತದಲ್ಲಿ ಪಾಂಡವರ ಜನನ ಮಂತ್ರ ಪ್ರಭಾವದಿಂದ ಆದದ್ದೆ? ಶ್ರೀಕೃಷ್ಣನು ನರಕಾಸುರನ ಪಟ್ಟಣದಿಂದ ತಂದ ಸ್ತ್ರೀಯರ ಸಂಖ್ಯೆ ಹೆಚ್ಚುಕಡಿಮೆಯಿಲ್ಲದೆ ಹದಿನಾರು ಸಾವಿರವೆ? ಅವರ ವಯಸ್ಸೆಲ್ಲ ಒಂದೇಯೊ, ಅವರಲ್ಲಿ ಕೆಲವರು ಮುದುಕಿಯರೂ ಇದ್ದರೊ? ಕಥಾಸ್ವಾರಸ್ಯಕ್ಕೆ ಇಂಥವೆಲ್ಲ ಅಸಂಗತ ಪ್ರಶ್ನೆಗಳು. ಆ ಅಸಾಧಾರಣ ಸಂಘಟನೆಗಳು ಕವಿ ಘಟಿತ ಪ್ರಪಂಚದ ವಾಸ್ತವಿಕತೆಗೆ ಅವಶ್ಯವಾದವು. ಅವು ಕವಿಯ ಕಟ್ಟಡದ ಇಟ್ಟಿಗೆಗಳು. ಆ ಕಥೆ ನಮಗೆ ಬೇಕಾದರೆ ಆ ಇಟ್ಟಿಗೆ ಗಟ್ಟಿಯೆಂದು ನಾವು ಭಾವಿಸಬೇಕು. ಮಕ್ಕಳಿಗೆ ಕಥೆ ಹೇಳಿದಾಗ ಅವರು ಹೇಗೆ ನಂಬಿ ಹೂಂಗುಟ್ಟುತ್ತಾರೋ ಹಾಗೆ ನಂಬಲು ನಾವು ಸಿದ್ಧರಾಗಿರಬೇಕು. ಹಾಗಲ್ಲದೆ ಮಾತುಮಾತಿಗೂ ಪ್ರಶ್ನೆಯೆತ್ತಿದರೆ ಕಟ್ಟಡ ಕುಸಿದುಬಿದ್ದು ನಮಗೆ ಅದರ ಪ್ರಯೋಜನವಿಲ್ಲದೆಹೋಗುತ್ತದೆ. ಇದು ಕಥಾಭಾಗಕ್ಕೆ ಮಾತ್ರ ಅನ್ವಯಿಸುವ ಸೂತ್ರ.
2. ವಾಕ್ಯಧೋರಣೆಯಲ್ಲಿ ತಾತ್ಪರ್ಯಾರ್ಥವನ್ನು ಲಕ್ಷ್ಯದಲ್ಲಿರಿಸಿಕೊಳ್ಳುವುದು. ತಾತ್ಪರ್ಯ ಎಂದರೆ ಯಾವ ವಿಷಯವು ಗ್ರಂಥದ ಅಥವಾ ವಾಕ್ಯದ ದೃಷ್ಟಿಯಲ್ಲಿ ಮುಖ್ಯವೋ ಅದಕ್ಕೆ ಹೊಂದಿಕೊಳ್ಳುವ (ತತ್ಪರವಾದ) ಅರ್ಥ. ಉದಾಹರಣೆ: ಭೋಜನಕಾಲದಲ್ಲಿ

> “ಸೈಂಧವವನ್ನು ತೆಗೆದುಕೊಂಡು ಬಾ” ಎಂದರೆ ಕುದುರೆಯೆಂದು ಅರ್ಥಮಾಡತಕ್ಕದ್ದಲ್ಲ; ಉಪ್ಪನ್ನು ಎಂದೇ ಅರ್ಥಮಾಡತಕ್ಕದ್ದು. ಸಂದರ್ಭ ನೋಡಿ ಮಾತಿಗೆ ಅರ್ಥಮಾಡತಕ್ಕದ್ದು. “ನೀನು ಗುಡಿಗೆ ಹೋಗುವಾಗ ನಮ್ಮ ಮನೆಯ ಮೇಲೆ ಬಾ” ಎಂದರೆ ಅಲ್ಲಿ “ಮೇಲೆ” ಎಂಬುದಕ್ಕೆ “ಆ ಕಡೆ” ಎಂದರ್ಥ. ಇದನ್ನು ಶಾಸ್ತ್ರದಲ್ಲಿ ಲಕ್ಷಣಾವೃತ್ತಿ ಎಂದು ಕರೆಯುತ್ತಾರೆ. ಮಾತಿಗಿಂತ ಮಾತನಾಡಿದವನ ಮನೋಗತ ಮುಖ್ಯ ಎಂಬುದು ಇಲ್ಲಿಯ ತತ್ತ್ವ.

ಮನೋಗತವು ಮುಖ್ಯವಾದ ಮೇಲೆ ಆ ಮನೋಗತಕ್ಕೆ ಯಾವ ಮಾತು ಸರಿ ಹೊಂದುತ್ತದೋ ಅದಷ್ಟನ್ನೇ ಉಪಯೋಗಿಸಬಹುದಲ್ಲ? ಹೆಚ್ಚುಗಟ್ಟಲೆ ಮಾತುಗಳನ್ನು ಬಿಡಬಹುದಲ್ಲ? ಇದು ನಮ್ಮ ಭಾಷೆಗಿರುವ ಸಾಮರ್ಥ್ಯ ಅಸಾಮರ್ಥ್ಯಗಳನ್ನು ಕುರಿತ ಪ್ರಶ್ನೆಯನ್ನೆಬ್ಬಿಸುತ್ತದೆ. ಅದು ಒಂದು ವಿಚಾರಗ್ರಂಥಿ. ಭಾಷೆಯು ಮನಸ್ಸಿನ ಮತ್ತು ಬುದ್ಧಿಯ ಭಾವನೆಗಳನ್ನು ಯಥಾವತ್ತಾಗಿ ಹೊರಡಿಸಬಲ್ಲದೊ? ಗ್ರಂಥಗಳನ್ನು ನೋಡಿದರೆ ಭಾಷೆಗೆ ಆ ಸಾಮರ್ಥ್ಯ ಎಷ್ಟೋ ಸಂದರ್ಭಗಳಲ್ಲಿ ಸಾಲದೆಹೋಗುತ್ತದೆಂದೂ ಭಾಷೆಗಿರುವ ಸಾಮರ್ಥ್ಯವು ಬಹು ಪರಿಮಿತವಾದದ್ದೆಂದೂ ಆದದ್ದರಿಂದ ಭಾಷೆಯು ಉಪಮಾನ-ಉಪಮೇಯ, ಉತ್ಪ್ರೇಕ್ಷೆ, ಪುನರುಕ್ತಿ ಮೊದಲಾದ ಅಲಂಕಾರೋಪಾಯಗಳ ಸಹಾಯವನ್ನು ತೆಗೆದುಕೊಳ್ಳಬೇಕಾಗುತ್ತದೆಂದೂ ತೋರಿಬರುತ್ತದೆ. ನಮ್ಮ ದಿನಚರಿಯ ಭಾಷೆ ಸಹ ಅಲಂಕಾರತನ್ಮಯವಾಗಿದೆ : “ಹತ್ತು ಹೋಳಿಗೆ ಹೊಡೆದೆ”, “ತುಂಟನಿಗೆ ನಾಲ್ಕು ಬಿಗಿದೆ”, “ಆ ಮಗು ಹೂವಿನಂತೆ ಇದೆ” ಇತ್ಯಾದಿ. ನಮ್ಮ ಎಷ್ಟೋ ಮನೋಭಾವಗಳನ್ನೂ ಎಷ್ಟೋ ಅನುಭವಗಳನ್ನೂ ತಿಳಿಯಪಡಿಸಲು ಮಾತು ಸಾಲದೆಹೋಗುತ್ತದೆ. “ಹೊಟ್ಟೆಯಲ್ಲಿ ಬೆಂಕಿಯಿಟ್ಟಂತಾಗಿದೆ” ಎನ್ನುತ್ತೇವೆ. “ಅವನು ಕಿಡಿಕಿಡಿಯಾದ” ಎನ್ನುತ್ತೇವೆ. “ಎಲ್ಲ ತಣ್ಣಗಾಯಿತು” ಎನ್ನುತ್ತೇವೆ. “ದೇವರನ್ನು ಕಂಡಂತಾಯಿತು” ಎನ್ನುತ್ತೇವೆ. “ಅಮೃತಪಾನವಾಯಿತು” ಎನ್ನುತ್ತೇವೆ. “ಕಾಮಧೇನುಸ್ಮರಣೆಯಾಯಿತು” ಎನ್ನುತ್ತೇವೆ, ಹೀಗೆ ಅಲಂಕಾರವಿಲ್ಲದೆ ಸಾಮಾನ್ಯ ಜನರು ಕೂಡ ಒಂದು ಕ್ಷಣಮಾತ್ರವೂ ಮಾತನಾಡಲಾರರು. ಈ ನಾನಾ ವಾಕ್ಯಗಳಲ್ಲಿ ಅಡಗಿರುವ ಒಂದು ಸಂತೋಷವನ್ನು ಅಥವಾ ಸಂಕಟವನ್ನು ಪೂರ್ತಿಯಾಗಿ ಹೊರಪಡಿಸಲು ಬಳಕೆಯ ಮಾತುಗಳು ಸಾಲವು ಎಂದು ಅಸಾಮಾನ್ಯವಾದ ಪದಗಳನ್ನೋ ಹೋಲಿಕೆಗಳನ್ನೋ ಮಾತಿನಲ್ಲಿ ಉಪಯೋಗಿಸುತ್ತೇವೆ. ಮಾತಿನಲ್ಲಿ ಸಾಲದೆಹೋದದ್ದನ್ನು ಆ ಹೋಲಿಕೆಯ ಮಾತುಗಳು ಭರ್ತಿಮಾಡುತ್ತವೆ. ಅದೇ

“ಅಲಂ+ಕರಣ” = ಸಾಕಾಗುವಂತೆಮಾಡುವುದು; ನ್ಯೂನತೆಯನ್ನು ಹೋಗಲಾಡಿಸುವುದು. ಹೇಳಬೇಕಾದದ್ದನ್ನು ಹೇಳುವುದರಲ್ಲಿ ಸಾಲದೆಹೋದದ್ದನ್ನು ಭರ್ತಿಮಾಡುವುದು ಅಲಂಕಾರ. ಅದೇ ಲಕ್ಷಣಾವೃತ್ತಿಯ ಒಂದು ಪ್ರಕಾರ. ಎಲ್ಲ ಕಲಾಸಂಘಟನೆಗಳ ವಿಷಯದಲ್ಲಿಯೂ ಇದೇ ಅಭಿಪ್ರಾಯವು ಗ್ರಾಹ್ಯವಾದದ್ದು. ಒಬ್ಬ ಯುವತಿ ಅಲಂಕಾರ ಮಾಡಿಕೊಂಡಳು ಎಂದರೆ ಏನು? ಆಕೆ ಎರಡು ಬಗೆಯ ಕಾರ್ಯಗಳನ್ನು ಮಾಡಿಕೊಂಡಳು. ತನ್ನ ಅಂಗಾಂಗಗಳಲ್ಲಿ ಎಷ್ಟು ಸೌಂದರ್ಯವುಂಟೋ ಅದು ಎದ್ದು ಕಾಣಿಸುವಂತೆ ಮಾಡಿಕೊಂಡಳು. ವಿಶಾಲವಾದ ಹೊಂಬಣ್ಣದ ಕೆನ್ನೆಯ ಮೇಲೆ ಒಂದು ಸಣ್ಣ ಸಾದಿನ ಬೊಟ್ಟನ್ನಿಟ್ಟುಕೊಂಡರೆ ಆ ಸೊಗಸು ಮತ್ತಷ್ಟು ಪ್ರಕಟವಾಗುತ್ತದೆ. ಕೃಷ್ಣಕಬರಿಯ ಮೇಲೆ ಒಂದು ಬಿಳಿಯ ಮಲ್ಲಿಗೆ ಹೂವನ್ನು ಮುಡಿದರೆ ಆ ಸೊಗಸು ಮತ್ತಷ್ಟು ಹೊರಪಡುತ್ತದೆ. ಹೀಗೆಂದರೇನು? ಇರುವ ವಸ್ತುವೇ ನೋಟಕನಿಗೆ ಮತ್ತಷ್ಟು ಬೇಗ, ಮತ್ತಷ್ಟು ಸ್ಫುಟವಾಗಿ ಕಾಣಬರುತ್ತದೆ. ಇದು ಒಂದು ಬಗೆಯ ಅಲಂಕರಣ. ಇನ್ನೊಂದು ಬಗೆಯ ಅಲಂಕರಣ ವಸ್ತುವಿನಲ್ಲಿರುವ ಲೋಪವೋ ವಿಕಾರವೋ ಕಾಣದಂತೆ ಮಾಡುವುದು. ಮಾಸಲು ಮುಖಕ್ಕೆ ಪೌಡರು ಹಚ್ಚುವುದು; ಹಲ್ಲಿನ ಸಂದುಗಳನ್ನು ಚಿನ್ನದಿಂದ ತುಂಬಿಸುವುದು; ಸಿಡುಬಿನ ಕಲೆಗಳಿಗೆ ಮಯಣ ಸವರುವುದು; ಇತ್ಯಾದಿ. ಇಲ್ಲಿಯೂ ಅಲಂಕರಣವೆಂದರೆ ಅಲ್ಲಿಲ್ಲದ ಸೊಗಸನ್ನು ಹೇಗೋ ಭರ್ತಿಮಾಡಿ ಆ ಸೊಗಸು ನೈಜವೆಂಬಂತೆ ತೋರಿಸುವುದು. ಇದು ಕೃತಕವೇ. ಕೃತಕದ ಉದ್ದೇಶ ಒಳ್ಳೆಯದಾದ ಕಡೆ—ಎಂದರೆ ಕೃತಕದ ಪರಿಣಾಮ ನಮಗಿಷ್ಟವಾಗುವ ಕಡೆ—ಅದನ್ನು ಅಲಂಕಾರವೆನ್ನುತ್ತೇವೆ.

ಭಾಷೆಯಲ್ಲಿ ಹೀಗೆ ಅರ್ಥಸ್ಪಷ್ಟತೆಗಾಗಿಯೋ ಅರ್ಥಪೋಷಣೆಗಾಗಿಯೋ ಹೆಚ್ಚು ಮಾತುಗಳನ್ನು ಉಪಯೋಗಿಸುವುದಾಗುತ್ತದೆ. “ರಾಮನು ಒಳ್ಳೆಯವನು” ಎಂಬುದರ ಭಾವವನ್ನೇ “ರಾಮಚಂದ್ರನು ಮಹಾನುಭಾವನು” ಎಂಬುದೂ ಹೇಳುತ್ತದೆ. ಆದರೆ ಅರ್ಥದ ಪುಷ್ಟಿ ಎರಡನೆಯ ವಾಕ್ಯದಲ್ಲಿ ಹೆಚ್ಚು.

ಈಗ ಭಗವದ್ಗೀತೆಯ ವಿಷಯಕ್ಕೆ ಹೋಗೋಣ. ಅದರ ಎಷ್ಟೋ ವಾಕ್ಯಗಳು ಪುನರುಕ್ತಿಗಳು; ಉಪಮಾನೋಪಮೇಯ ವಚನಗಳು; ಆಪಾತವಿರೋಧಭಾಸಕಗಳು. ನಮ್ಮ ಮನಸ್ಸಿನ ಗಮನವಾದರೋ ಅವುಗಳ ನಡುವೆ ತಾತ್ಪರ್ಯಾರ್ಥದ ಕಡೆಗಿರಬೇಕಾದದ್ದು. ಸಾಮಾನ್ಯವಾದ ಲೌಕಿಕವಿಷಯಗಳನ್ನೂ ಪ್ರತ್ಯಕ್ಷಸಂಗತಿಗಳನ್ನೂ ವಿವರಿಸುವಾಗಲೇ ನಮಗೆ ಬಳಕೆಯ ಮಾತು ಸಾಲದೆಹೋಗಿ ಅಲಂಕಾರಿಕ ಭಾಷೆ ಅವಶ್ಯವಾಗುತ್ತದೆಯೆಂದಮೇಲೆ,

ಅತೀಂದ್ರಿಯವಸ್ತು ಪ್ರಸಂಗದಲ್ಲಿ ಅಲಂಕಾರೋಕ್ತಿ ಇಲ್ಲದಿದ್ದರೆ ತತ್ತ್ವಬೋಧಕನ ಅಂತರಂಗ ನಮಗೆ ದೊರಕುವುದು ಹೇಗೆ? ಆದದ್ದರಿಂದಲೇ ವೇದದಲ್ಲಿ ಆತ್ಮವಿಷಯವನ್ನು ಹೇಳುವಾಗಲೆಲ್ಲ ಎಷ್ಟೋ ಆಲಂಕಾರಿಕ ಭಾಷೆ ಬಂದಿದೆ.

ಅಹಂ ವೃಕ್ಷಸ್ಯ ರೇರಿವಾ ।
ಕೀರ್ತಿಃ ಪೃಷ್ಠಂ ಗಿರೇರಿವ ।
ಊರ್ಧ್ವಪವಿತ್ರೋ ವಾಜಿನೀವ ಸ್ವಮೃತಮಸ್ಮಿ॥
ತಸ್ಯ ಮಧ್ಯೇ ವಹ್ನಿಶಿಖಾ
ಅಣೀಯೋರ್ಧ್ವಾ ವ್ಯವಸ್ಥಿತಃ ।
ನೀಲತೋಯದಮಧ್ಯಸ್ಥಾ-
ದ್ವಿದ್ಯುಲ್ಲೇಖೇವ ಭಾಸ್ವರಾ ।
ನೀವಾರಶೂಕವತ್ತನ್ವೀ ।
ಪೀತಾ ಭಾಸ್ವತ್ಯಣೂಪಮಾ ॥

-ಇತ್ಯಾದಿ. ಪುರುಷಸೂಕ್ತವೆಲ್ಲ ಒಂದು ಬೃಹದಲಂಕಾರ. ಇಂಥ ಭಾಷೆಯನ್ನು ನೋಡಿದಾಗ ನಮ್ಮ ಮನಸ್ಸು ಅಕ್ಷರಾರ್ಥದ ಕಡೆಗೆ ಹೋಗಬಾರದು; ತಾತ್ಪರ್ಯಾರ್ಥದ ಕಡೆಗೆ ಹೋಗಬೇಕು.

ಸಹಸ್ರಶೀರ್ಷಾ ಪುರುಷಃ

- ಎಂದರೆ ವಿರಾಟ್ಪುರುಷನ ತಲೆಗಳ ಸಂಖ್ಯೆ ೯೯೯ಕ್ಕಿಂತ ಒಂದು ಹೆಚ್ಚೆಂದಾಗಲಿ, ೧೦೦೧ಕ್ಕಿಂತ ಒಂದು ಕಡಿಮೆಯೆಂದಾಗಲಿ ಅರ್ಥವಲ್ಲ. ಎಣಿಕೆ ಮೀರಿದಷ್ಟು ಎಂದರ್ಥ. ಅದೇ ತಾತ್ಪರ್ಯಾರ್ಥ.

ಭಗವದ್ಗೀತೆಯಲ್ಲಿ ಎಷ್ಟೋಕಡೆ ಹಿಂದೆ ಬಂದ ಮಾತುಗಳೇ ಬಂದಿವೆ. ಒಂದು ಅಭಿಪ್ರಾಯವನ್ನೇ ಎರಡುಮೂರು ಮಾತುಗಳಲ್ಲಿ ಹೇಳಿದೆ.

ನಿತ್ಯಃ ಸರ್ವಗತಃ ಸ್ಥಾಣುಃ
ಅಚಲೋಽಯಂ ಸನಾತನಃ ॥

ಇಲ್ಲಿ ಸ್ಥಾಣುವೆಂದರೂ ಅಚಲವೆಂದರೂ ಎರಡೂ ಒಂದೇ. ನಿತ್ಯವೆಂದರೇನು? ಸನಾತನವೆಂದರೇನು? ಎರಡೂ ಒಂದೇ. ಒಂದು ಅಭಿಪ್ರಾಯವನ್ನು ತಿಳಿಸಲು ಎರಡುಮೂರು ಮಾತುಗಳನ್ನು ಉಪಯೋಗಿಸಿರುವುದು ಪುನರುಕ್ತಿದೋಷ ತಾನೆ? ಇಲ್ಲಿ ಹಾಗಲ್ಲ. ಇಲ್ಲಿ ಅದು ಗುಣ–ನಮ್ಮ ದೃಷ್ಟಿಯಿಂದ ಅತ್ಯವಶ್ಯವಾದ ಗುಣ. ಏಕೆಂದರೆ, ಬೋಧನೆ ಮಹಾವಾಕ್ಪ್ರವಾಹರೂಪದಲ್ಲಿ ಬಾರದೇ ಸೂಕ್ಷ್ಮಸೂತ್ರಾಕ್ಷರಗಳಲ್ಲಿ ಬಂದರೆ, ಅದು ಮಂದಾಧಿಕಾರಿಯೋ ಅಜಾಗರೂಕನೋ ಆದ ಶ್ರೋತನ ಮನಸ್ಸನ್ನು ಹಿಡಿಯಲಾರದು. ನಾಲ್ಕಾರು ಪರ್ಯಾಯ ಪದಗಳಲ್ಲಿ ಮರಳಿಮರಳಿ ಬಂದರೆ ಆ ನಷ್ಟಭಯ ಕಡಿಮೆ. ವಾಕ್ಯದ ಕಾರ್ಯಕಾರಿತ್ವ ಅದರ ಅಂತರ್ಬಲ ಮಾತ್ರದಿಂದಲೇ ಅಲ್ಲ; ಅದರ ಬಾಹ್ಯಗಾತ್ರದಿಂದಲೂ ಅದು ಸಂಪಾದ್ಯವಾಗುತ್ತದೆ. ಪಾಠಶಾಲೆಯಲ್ಲಿ ವಿದ್ಯಾರ್ಥಿ-ಬಾಲಕರಿಗೆ ಸುಲಭವೇ ಆದ ಒಂದು ವಿಷಯವನ್ನು – ಸಾಮಾನ್ಯವಾದದ್ದನ್ನು ಕೂಡ–ಪುನಃಪುನಃ ಪುನರಾವರ್ತನೆಮಾಡಿ ವಿವರಿಸುವುದು ಅವಶ್ಯವೆಂಬುದನ್ನು ಎಲ್ಲ ಅನುಭವಶಾಲಿಗಳಾದ ಉಪಾಧ್ಯಾಯರೂ ಬಲ್ಲರು. ಅತಿ ಸೂಕ್ಷ್ಮವೂ ಗಹನವೂ ಆದ ಒಂದು ತತ್ತ್ವವನ್ನು ಹೇಳುವಲ್ಲಿ ಅತಿ ಸಂಕ್ಷಿಪ್ತವಾದ ಭಾಷೆಯನ್ನು ಉಪಯೋಗಿಸಿದರೆ ಅರ್ಥವು ಅಗ್ರಾಹ್ಯವಾಗಬಹುದು, ಅಪಗ್ರಾಹ್ಯವಾಗಬಹುದು. ಆದದ್ದರಿಂದ ಅಲ್ಲಿ ಯತ್ಕಿಂಚಿತ್ಪುನರುಕ್ತಿಯು ದೋಷವಾಗದೆ ಗುಣವೇ ಆಗುತ್ತದೆ. ರಾಮಾಯಣ ಭಾರತಗಳಲ್ಲಿ ಕಾಡಿನ ವರ್ಣನೆ ಬಂದಾಗ ಮರಗಳ ಹೆಸರುಗಳು ಅಂಗಡಿ ಸರಕಿನ (Catalogue) ಪಟ್ಟಿಗಳಂತೆ ಬರುತ್ತವೆ. ಋಷ್ಯಾಶ್ರಮದ ವರ್ಣನೆ ಬಂದಾಗ ಒಂದುನೂರು ಮಂದಿಯ ಹೆಸರು ಬರುತ್ತದೆ. ನಾವೇನು ವೃಕ್ಷಶಾಸ್ತ್ರಜ್ಞರೆ, ಗೋತ್ರಪ್ರವರ ವಿಚಾರಿಗಳೆ? ನಮಗೆ ಆ ಕ್ಯಾಟಲಾಗುಗಳು ಏಕೆ? ಎಂದರೆ, ಆ ರಾಶೀಕೃತಸಾಮಗ್ರ್ಯವು ನಮ್ಮ ಮನಸ್ಸಿನ ಮೇಲೆ ಒಂದು ಪರಿಣಾಮವುಂಟುಮಾಡುತ್ತದೆ. ವಸ್ತುಚಿತ್ರಪರಿಪುಷ್ಟಿಗೆ ಅದು ಬೇಕು.

ಭಗವದ್ಗೀತೆಯ ೧೦, ೧೧ನೆಯ ಅಧ್ಯಾಯಗಳಲ್ಲಿ ಇಂಥ ರಾಶೀಕೃತ ನಿದರ್ಶನಗಳು ಬರುತ್ತವೆ. ಅವುಗಳಲ್ಲಿ ನಾವು ನೋಡಬೇಕಾದದ್ದು ಪ್ರವಾಹಾರ್ಥವನ್ನು. ಒಂದು ದೊಡ್ಡ ಅಭಿಪ್ರಾಯ ಅಥವಾ ತತ್ತ್ವ ನಾನಾ ಮುಖಗಳನ್ನು ತಾಳಿ ಪ್ರವಾಹರೂಪದಲ್ಲಿ ಹರಿದುಬರುತ್ತದೆ. ವಿಭೂತಿಯೋಗದಲ್ಲಿ :

ಆದಿತ್ಯಾನಾಮಹಂ ವಿಷ್ಣುಃ
ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ
ನಕ್ಷತ್ರಾಣಾಮಹಂ ಶಶೀ ॥
ವೇದಾನಾಂ ಸಾಮವೇದೋಽಸ್ಮಿ
ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ
ಭೂತಾನಾಮಸ್ಮಿ ಚೇತನಾ ॥ (೧೦-೨೧, ೨೨)

ವಿಶ್ವರೂಪಾಧ್ಯಾಯದಲ್ಲಿ ಹೀಗೆ :

ಅನೇಕ ಬಾಹೂದರವಕ್ತ್ರನೇತ್ರಂ
ಪಶ್ಯಾಮಿ ತ್ವಾಂ ಸರ್ವತೋಽನಂತರೂಪಮ್ ।
ನಾಂತಂ ನ ಮಧ್ಯಂ ನ ಪುನಸ್ತವಾದಿಂ
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ ॥
ತ್ವಮಕ್ಷರಂ ಪರಮಂ ವೇದಿತವ್ಯಂ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ ।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ ॥ (೧೧-೧೬, ೧೮)

ಗೀತಾಶೈಲಿಯ ವಿಶೇಷವೇನೆಂಬುದನ್ನು ನಾವು ಮನಗಾಣಬೇಕಾದರೆ ಸೂತ್ರದ ಶೈಲಿಯನ್ನು ಮನಸ್ಸಿಗೆ ತಂದುಕೊಳ್ಳಬೇಕು. ಸೂತ್ರವೆಂದರೆ ಏನು?

ಅಲ್ಪಾಕ್ಷರಮಸಂದಿಗ್ಧಂ
ಸಾರವದ್ವಿಶ್ವತೋಮುಖಮ್ ।
ಅಸ್ತೋಭಮನವದ್ಯಂ ಚ
ಸೂತ್ರಂ ಸೂತ್ರವಿದೋ ವಿದುಃ ॥

ಯಾವ ವಾಕ್ಯದಲ್ಲಿ ಅದರ ಉದ್ದೇಶಕ್ಕೆ ಅವಶ್ಯವಾದ ಮಾತನ್ನೊಂದನ್ನೂ ಬಿಟ್ಟಿಲ್ಲವೋ, ಮತ್ತು ಅನಾವಶ್ಯಕವಾದ ಮಾತನ್ನೊಂದನ್ನೂ ಸೇರಿಸಿಲ್ಲವೋ ಮತ್ತು ಯಾವುದಕ್ಕೆ ಒಂದು ಹೊಸ ಅಕ್ಷರವನ್ನು ಸೇರಿಸಿದರಾಗಲಿ ಇರುವ ಅಕ್ಷರವನ್ನು ಅದರಿಂದ ತೆಗೆದುಹಾಕಿದರಾಗಲಿ ಅಥವಾ ಅಕ್ಷರಗಳನ್ನು ಸ್ಥಾನಾಂತರಮಾಡಿದರಾಗಲಿ ಅರ್ಥವು ಉದ್ದೇಶಕ್ಕಿಂತ ಹೆಚ್ಚಿನದೋ ಕಡಮೆಯದೋ ಬೇರೆಯದೋ ಆದೀತೋ ಆ ಮಿತ ಪದಯೋಜನೆಗೆ ಸೂತ್ರ ಎಂದು ಹೆಸರು. ಒಂದು ಉದಾಹರಣೆಯನ್ನು ನೋಡೋಣ. ಬ್ರಹ್ಮಸೂತ್ರದಲ್ಲಿ

ಜನ್ಮಾದ್ಯಸ್ಯ ಯತಃ ॥

ಎಂಬುದೊಂದು ಸೂತ್ರ. ಇದರಲ್ಲಿ ನಾಲ್ಕು ಪದಗಳಿವೆ : “ಅಸ್ಯ = ಈ ಜಗತ್ತಿನ, ಜನ್ಮ = ಹುಟ್ಟುವಿಕೆ, ಆದಿ = ಮೊದಲಾದದ್ದು (ಎಂದರೆ ಇರೋಣ, ಸಾಯೋಣ–ಇವು), ಯತಃ = ಯಾವುದರಿಂದ ಉಂಟಾಗಿದೆಯೋ.”

ಇಲ್ಲಿ “ಅದೇ ಬ್ರಹ್ಮ” ಎಂದು ನಾವು ಅಧ್ಯಾಹಾರ ಮಾಡಿಕೊಳ್ಳಬೇಕು.

ಮೇಲಣ ಸೂತ್ರದ ವಿವರಣೆ ಉಪನಿಷತ್ತಿನಲ್ಲಿ ಹೀಗೆ :

ಯತೋ ವಾ ಇಮಾನಿ ಭೂತಾನಿ ಜಾಯನ್ತೇ ।
ಯೇನ ಜಾತಾನಿ ಜೀವನ್ತಿ ।
ಯತ್ಪ್ರಯನ್ತ್ಯಭಿಸಂವಿಶನ್ತಿ ।
ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ ॥

–ತೈತ್ತಿರೀಯೋಪನಿಷತ್ತು

ಉಪನಿಷತ್ತು ಹದಿನೈದು ಮಾತುಗಳಲ್ಲಿ ತಿಳಿಸಿದ ಸಂಗತಿಯನ್ನು ಸೂತ್ರವು ನಾಲ್ಕು ಮಾತುಗಳಲ್ಲಿ ಅಡಗಿಸಿದೆ. ಸೂತ್ರದಲ್ಲಿ “ಚ” ಎಂಬ ಅಕ್ಷರ ಬಂದರೆ ಅದಕ್ಕೊಂದು ವಿಶೇಷಾರ್ಥ; ಅದಿಲ್ಲದಿದ್ದರೆ ಇನ್ನೊಂದು ವಿಶೇಷಾರ್ಥ. “ತು” ಎಂಬುದಕ್ಕೂ ಹಾಗೆಯೇ. ಈ ಸೂತ್ರದ ಶೈಲಿ ಪ್ರೌಢವಿದ್ವಾಂಸರಿಗೆ ಒಪ್ಪುತ್ತದೆ; ಅವರ ತರ್ಕ ರಗಳೆಗಳಿಗೂ ಆಸ್ಪದವೊದಗಿಸುತ್ತದೆ. ಭಗವದ್ಗೀತಾಕಾರರು ಈ

ಅಕ್ಷರಸಂಕೋಚನಿಯಮವನ್ನಿಟ್ಟುಕೊಳ್ಳಲಿಲ್ಲ. ಅವರ ಶೈಲಿ ಕಾವ್ಯಧೋರಣೆಯದು. ಸಾಮಾನ್ಯ ಮಾತುಗಳಿಂದ ಅಸಾಮಾನ್ಯ ವಿಷಯವನ್ನು ವಿಶದಪಡಿಸಬೇಕೆಂಬ ಉದಾರಾಶಯ ಅವರದು. ಆದದ್ದರಿಂದ ನಾವು ಗೀತೆಯಲ್ಲಿ ಅಕ್ಷರಕ್ಷರವನ್ನೂ ಬೇರೆಬೇರೆ ಹರಿದು ಪರೀಕ್ಷಿಸತಕ್ಕದ್ದಲ್ಲ. ಸಮಗ್ರದೃಷ್ಟಿಯೇ ಅಲ್ಲಿಗೆ ಯುಕ್ತವಾದದ್ದು. ಒಂದು ಉಪದೇಶದ ಪ್ರತಿಪದಾರ್ಥವಲ್ಲ ನಮಗೆ ಗ್ರಾಹ್ಯವಾದದ್ದು; ಅದರ ಪ್ರವಾಹಾರ್ಥ—ಅದರ ಭಾವಧೋರಣೆ (general drift, general tenor). ಇದನ್ನು ನಾವು ನೆನಪಿನಲ್ಲಿರಿಸಿಕೊಂಡರೆ ಗೀತೋಪದೇಶದ ವಿಷಯದಲ್ಲಿ ನಾಲ್ಕಾರು ತಕರಾರುಗಳು ನಿರಾಧಾರವಾಗುತ್ತವೆ.

ಗ್ರಂಥದ ಕಥಾಭಾಗವು ಕಾವ್ಯಸಂಪ್ರದಾಯದಲ್ಲಿರುತ್ತದೆಯಷ್ಟೆ? ಕಾವ್ಯವಾದರೋ ಹೇಳಬೇಕಾದದ್ದನ್ನು ಹೇಳುವಾಗ ಅದನ್ನು ಮನಃಪರಿಣಾಮಕಾರಿಯಾಗುವ ರೀತಿಯಲ್ಲಿ ಹೇಳಲು ಪ್ರಯತ್ನಿಸುತ್ತದೆ. ಆ ಪ್ರಯತ್ನದಲ್ಲಿ ಉತ್ಪ್ರೇಕ್ಷೆ ಮೊದಲಾದ ವಾಕ್ಯಾಲಂಕಾರಗಳು ಅನಿವಾರ್ಯವಾಗುತ್ತವೆ. ಇದು ನಮ್ಮೆಲ್ಲರ ಅನುಭವದಲ್ಲಿಯೂ ಇರುವ ಸಂಗತಿ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಕಾಲದಲ್ಲಿ ಹುಡುಗ ಒಂದು ಲೆಕ್ಕವನ್ನು ಸರಿಯಾಗಿ ಮಾಡಿದ್ದರೆ “ಭೇಷ್!” ಎನ್ನುತ್ತೇವೆ. ಎರಡು ಸರಿ ಮಾಡಿದರೆ “ನೀನು ಮಹಾಜಾಣ!” ಎನ್ನುತ್ತೇವೆ. ಅಂಥವರು ಇಬ್ಬರು ಮೂವರಿದ್ದರೆ ಶಹಭಾಷ್‌ಗಿರಿ ಕೊಡಲು ಇನ್ಯಾವ ಮಾತನ್ನು ಉಪಯೋಗಿಸಬೇಕೆಂದು ನಮ್ಮ ಮನಸ್ಸಿನಲ್ಲಿ ಚಿಂತೆಯೇಳುತ್ತದೆ. ಆಗ ಒಬ್ಬನನ್ನು ಕುರಿತು “ನೀನು ಮಹಾಬುದ್ಧಿವಂತರಲ್ಲಿ ಮಹಾಬುದ್ಧಿವಂತ” ಎನ್ನುತ್ತೇವೆ; “ನೀನು ಜಾಣರಲ್ಲಿ ಅಗ್ರೇಸರ” ಎನ್ನುತ್ತೇವೆ. ಇಂಥ ಮಾತುಗಳಿಗೆಲ್ಲ ಅಕ್ಷರಾರ್ಥವನ್ನು ಮಾಡತಕ್ಕದ್ದಲ್ಲ. ಆ ಮಾತುಗಳನ್ನು ನಾವು ಉಪಯೋಗಿಸುವಾಗ ಅವುಗಳನ್ನು ತಕ್ಕಡಿಯಲ್ಲಿ ಹಾಕಿ ತೂಗಿಸುವುದಿಲ್ಲ. ಹಾಗೆ ಅಕ್ಷರಪರೀಕ್ಷೆ ಮಾಡುವುದು ನಮ್ಮ ಉದ್ದೇಶಕ್ಕೆ ಅನಾವಶ್ಯಕ, ಮತ್ತು ಭಂಗಕಾರಿ. ವಿದ್ಯಾರ್ಥಿಯನ್ನು ಪ್ರೋತ್ಸಾಹಪಡಿಸಬೇಕೆಂಬುದಷ್ಟೇ ನಮ್ಮ ಉದ್ದೇಶ. ವೈದ್ಯರು ಔಷಧವನ್ನು ತೂಕಮಾಡಿದಂತೆ ನಾವು ಮಾತುಗಳನ್ನು ತೂಕಮಾಡಿ ತೂಕಮಾಡಿ ಯಥಾಸ್ಥಿತವಷ್ಟನ್ನೇ ಹೇಳಬೇಕೆಂದರೆ ಆ ಮಾತು ಪ್ರೋತ್ಸಾಹಕರವಾಗುವುದಕ್ಕೆ ಪ್ರತಿಯಾಗಿ ನಿರುತ್ಸಾಹಕರವೇ ಆದೀತು. ಆದದ್ದರಿಂದ ಭಗವಂತನ ಆಶಯವನ್ನು ನೋಡಿ ಭಗವದ್ವಾಕ್ಯಕ್ಕೆ ಅರ್ಥಮಾಡತಕ್ಕದ್ದು ಯುಕ್ತ.

ಅರ್ಜುನನು ಎದೆಕುಗ್ಗಿ ಖಿನ್ನನಾಗಿದ್ದ. ಅವನ ಬುದ್ಧಿ ದಿಕ್ಕೆಟ್ಟಿತ್ತು. ಅವನಲ್ಲಿ ಉತ್ಸಾಹವನ್ನೂ ಆತ್ಮವಿಶ್ವಾಸವನ್ನೂ ತುಂಬಿ ಅವನು ಮುನ್ನುಗ್ಗುವಂತೆ ಮಾಡಬೇಕೆಂಬುದು ಭಗವಂತನ ಆಶಯ.

ತಾತ್ಪರ್ಯಾರ್ಥವು ಮನಸ್ಸಿಗಂಟುವುದಕ್ಕೋಸ್ಕರ ಒಂದು ಪದ ಸಾಕಾಗುವ ಕಡೆ ಕವಿ ನಾಲ್ಕು ಮಾತುಗಳನ್ನು ಉಪಯೋಗಿಸುತ್ತಾನೆ. ಇದು ಕಾವ್ಯದ ಒಂದು ಉಪಾಯ (literary device). ವೇದದಲ್ಲಿಯೂ ಇದು ಕಾಣಬರುತ್ತದೆ.

ವೇದದ ಮುಖ್ಯ ಉದ್ದೇಶವು ವಿಧಿ: ಧರ್ಮವನ್ನು ನಿರ್ಣಯಮಾಡುವುದು. ಹಾಗಾದರೆ ಅದರಲ್ಲಿರುವುವೆಲ್ಲ ವಿಧಿವಾಕ್ಯಗಳೊ? ಅಲ್ಲ. ಹೋಮಕಾಲದಲ್ಲಿ ಉದ್ದಿಷ್ಟ ದೇವತೆಯನ್ನು ಆಹ್ವಾನಮಾಡಬೇಕು ತಾನೆ? ಅದಕ್ಕಾಗಿ ಮಂತ್ರಗಳಿವೆ: ಸ್ತಾವಕಗಳು. ಇವು ದೇವತೆಯನ್ನು "ನೀನು ಮಹಾಮಹಿಮನು; ನೀನೇ ನಮ್ಮನ್ನೆಲ್ಲ ಮಾಡಿದವನು; ನೀನೇ ಪೂರ್ವದಲ್ಲಿದ್ದವನು" —ಹೀಗೆ ವಿಧವಿಧವಾಗಿ ಸ್ತೋತ್ರಮಾಡುತ್ತವೆ. ಯಾರನ್ನಾದರೂ ಸ್ತೋತ್ರ ಮಾಡಹೊರಟರೆ ವಿಪುಲವಾಗಿ ಮಾತುಗಳನ್ನು ಬಳಸುವುದು ಸ್ವಾಭಾವಿಕವೇ ಆಗಿದೆ. ಲೌಕಿಕದಲ್ಲಿಯೇ ಇದನ್ನು ನೋಡುತ್ತೇವೆ. ಮಂತ್ರಿಗಳನ್ನು ಕುರಿತು "ನೀವು ಬಿ. ಎಲ್. ಪ್ಯಾಸ್ ಮಾಡಿದ್ದೀರಿ", "ನಿಮಗೆ ಎರಡು ಕಿವಿ ಇದೆ" —ಎಂದರೆ ಅದು ಸ್ತೋತ್ರವಾದೀತೆ? "ನೀವು ಬೃಹಸ್ಪತಿಯ ಅವತಾರ" ಎಂದು ಮೊದಲಾಗಿ ಹೇಳಿದರೆ ತಾನೆ ಉದ್ದಿಷ್ಟ ಕಾರ್ಯ ನೆರವೇರುವುದು? ಲೌಕಿಕದಲ್ಲಿಯೇ ಹೀಗಿರಲಾಗಿ, ಯಜ್ಞೇಶ್ವರನನ್ನು ಸ್ತುತಿಸಹೊರಟು "ನೀನು ಸುಡುತ್ತಿ", "ನೀನು ಮಿತವಾಗಿದ್ದರೆ ನಮಗೆ ಹಿತವಾಗಿರುತ್ತದೆ, ನಿನ್ನ ಜಾಗ ನೋಡಿಕೊಂಡು ನೀನಿರು" ಎಂದರೆ ಕಾರ್ಯ ಸಾಧನೆಯಾದೀತೆ? ಅಗ್ನಿ ನಾವು ಕೇಳಿದ ವರವನ್ನು ಕೊಟ್ಟಾನೆ? ಆದದ್ದರಿಂದ ಯಥೇಷ್ಟವಾದ ಸ್ತಾವಕಗಳು ಅವಶ್ಯಕ. ಇದೊಂದು ಉಪಾಯ ಎಂಬುದು ಲೌಕಿಕ ದೃಷ್ಟಿ; ಪರಬ್ರಹ್ಮವಸ್ತುವೇ ಗಮ್ಯವಾದಾಗ ಅದಕ್ಕೆ ಸಲ್ಲಬೇಕಾದ ಎಲ್ಲ ಗುಣಗಳನ್ನೂ ಎಲ್ಲ ದೇವತೆಗಳಲ್ಲಿಯೂ ಆರೋಪ ಮಾಡತಕ್ಕದ್ದು—ಎಂಬುದು ತತ್ತ್ವದ ದೃಷ್ಟಿ.

ಅರ್ಥವಾದಗಳೆಂಬ ಇನ್ನೊಂದು ಜಾತಿಯ ವೇದವಾಕ್ಯಗಳುಂಟು. ಇಂಥಿಂಥ ಕರ್ಮ ನೀನು ಮಾಡಿದರೆ ನಿನಗೆ ಇಂಥಿಂಥ ಪ್ರಯೋಜನವುಂಟಾಗುತ್ತದೆ—ಹೀಗೆಂಬುದು ಅರ್ಥವಾದ. ನಮ್ಮ ಸಾಮಾನ್ಯ ಭಾಷೆಯಲ್ಲಿ ಇದೆಲ್ಲ ಒಂದು ಬಗೆಯ ಅಡ್‌ವರ್ಟೈಸ್‌ಮೆಂಟ್ (advertisement).

ಇಂಥ ಪ್ರರೋಚನಾರ್ಥವಾದ ವಾಕ್ಯಗಳು ವೇದದಲ್ಲಿ ಯಥೇಷ್ಟವಾಗಿ ಬರುತ್ತವೆ. ಪ್ರರೋಚನ ಎಂದರೆ ರುಚಿಯನ್ನು ಹುಟ್ಟಿಸುವುದು; ಅಭಿರುಚಿಯನ್ನು ಅಭಿವೃದ್ಧಿಪಡಿಸುವುದು.

ಅನ್ನವಾನನ್ನಾದೋ ಭವತಿ । ಮಹಾನ್ ಭವತಿ
ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ ।
ಮಹಾನ್ ಕೀರ್ತ್ಯಾ ॥

ಇದು ಅನ್ನದ ಕೊಂಡಾಟ. ಅನ್ನವನ್ನು ಹೆಚ್ಚಾಗಿ ಸಂಪಾದಿಸತಕ್ಕದ್ದು. ಅನ್ನವಂತನು ಪುಷ್ಕಳವಾಗಿ ಊಟಮಾಡುತ್ತಾನೆ. ಮಹಾ ದೊಡ್ಡವನಾಗುತ್ತಾನೆ. ಅವನಿಗೆ ಸಂತಾನ ಪ್ರಾಪ್ತಿ, ಗೋಸಂಪತ್ತು, ಬ್ರಹ್ಮತೇಜಸ್ಸು, ಅತಿಶಯವಾದ ಕೀರ್ತಿ—ಇವೆಲ್ಲ ಬರುತ್ತವೆ. ಹೀಗೆಲ್ಲ ಸ್ತೋತ್ರಮಾಡಿರುವುದರ ಅಭಿಪ್ರಾಯ ಏನು? ಮನುಷ್ಯನು ದುಡಿದು ಜೀವಿಕೆ ಸಂಪಾದಿಸಿಕೊಳ್ಳಲಿ ಎಂಬುದು. ಜೀವನಕ್ಕಾಗಿ ದುಡಿಯುವುದು ನಿಕೃಷ್ಟಕಾರ್ಯವಲ್ಲ, ಅದು ಶ್ರೇಷ್ಠವಾದ ಕರ್ತವ್ಯ; ಬ್ರಹ್ಮಸಾಕ್ಷಾತ್ಕಾರಕ್ಕೂ ಕೂಡ ಅದು ಅವಶ್ಯವಾದದ್ದು. ಹೀಗೆಲ್ಲ ಹೇಳಿ ಮನುಷ್ಯನಿಗೆ ಸಾಮಾನ್ಯವಾದ ಜೀವಿತಕೃತ್ಯಗಳಲ್ಲಿ ಒಂದು ಮಹತ್ತ್ವದ ಭಾವನೆಯನ್ನೂ ಶ್ರದ್ಧೋತ್ಸಾಹಗಳನ್ನೂ ಉಂಟುಮಾಡಬೇಕೆಂಬುದು ಮಹರ್ಷಿಗಳ ತಾತ್ಪರ್ಯ. “ಮಹಾನ್ ಭವತಿ” ಎಂದರೆ “ಊಟ ಮಾಡಿದವನು ಮೈಕೈತುಂಬಿಕೊಂಡು ದಾಂಡಿಗನಾಗುತ್ತಾನೆ” ಎಂದು ಅರ್ಥವಲ್ಲ; “ಗುಣಪ್ರಭಾವಗಳಲ್ಲಿ ಮಹನೀಯನಾಗುತ್ತಾನೆ” ಎಂದರ್ಥ.

ಹೀಗೆಯೇ ಗೀತೆಯಲ್ಲಿ ಉಪದೇಶವಾಕ್ಯಗಳು ಎಷ್ಟುಂಟೋ ಅರ್ಥಸ್ಪಷ್ಟೀಕರಣ ವಾಕ್ಯಗಳು ಅದಕ್ಕಿಂತ ಹೆಚ್ಚಾಗಿ ಉಂಟು. ಪ್ರರೋಚನಾರ್ಥಕವಾಕ್ಯಗಳಂತೂ ಮತ್ತೂ ಹೆಚ್ಚಾಗಿವೆ. ಆದದ್ದರಿಂದ ವಾಚಕರು ವಾಕ್ಯಗಳನ್ನೋದುವಾಗ ಯಾವಯಾವ ವಾಕ್ಯಗಳ ಕಾರ್ಯವು ಒಟ್ಟು ಗ್ರಂಥದ ಸಮಗ್ರಕಾರ್ಯದಲ್ಲಿ ಎಂಥೆಂಥ ವಿಧದ್ದು ಎಂಬುದನ್ನು ಗಮನದಲ್ಲಿರಿಸಿಕೊಂಡರೆ ಅವರಿಗೆ ಗ್ರಂಥದ ನಾನಾ ಭಾಗಗಳ ಅನ್ಯೋನ್ಯ ಸಾಮಂಜಸ್ಯವು ವೇದ್ಯವಾಗುತ್ತದೆ.

ಅನುಸಂಧಾನದ ಮುಖ್ಯತೆ

ಗೀತೆಯ ಉಪದೇಶದಲ್ಲಿ ಎರಡು ಬೇರೆಬೇರೆ ಅಂಶಗಳು ಬೆರೆತುಕೊಂಡಿವೆ: ಒಂದು ತತ್ತ್ವ, ಇನ್ನೊಂದು ಸಾಧನ. ತತ್ತ್ವವೆಂದರೆ Theory -ತರ್ಕನಿಶ್ಚಯ, ಕಾರ್ಯಕಾರಣ ವಿಚಾರದಿಂದ ಸಿದ್ಧವಾದ ವಸ್ತುಸ್ವಭಾವನಿರೂಪಣೆ. ಇದು ವಿಶೇಷವಾಗಿ ಬುದ್ಧಿಕಾರ್ಯ. ಸಾಧನವೆಂಬುದು ಆಚರಣೆ— Practice. ಇದು ಮನಸ್ಸಂಧಾನದ ಕಾರ್ಯ. ಮನಸ್ಸು ಕಾರ್ಯಗತವಾದಾಗ ಪಾರಿಭಾಷಿಕವಾಗಿ ಚಿತ್ತವೆನಿಸಿಕೊಳ್ಳುತ್ತದೆ: "ಅನುಸಂಧಾನಾತ್ಮಕ ವೃತ್ತಿಮದನ್ತಃಕರಣಂ ಚಿತ್ತಮ್ ।" ಬುದ್ಧಿಯನ್ನು ಚಿತ್ತ ಅನುಸರಿಸಬೇಕು. ಆದರೆ ಗತಿವೇಗದಲ್ಲಿ ಬುದ್ಧಿಗಿಂತ ಚಿತ್ತ ಕಡಮೆಯಾದದ್ದು. ಆದದ್ದರಿಂದ ಪ್ರಾಯಶಃ ಅವೆರಡಕ್ಕೂ ನಡುವೆ ಕೊಂಚವಾಗಿಯೋ ಹೆಚ್ಚಾಗಿಯೋ ಅಂತರ ಉಳಿದುಕೊಂಡೇ ಇರುತ್ತದೆ.

ಲೋಕದಲ್ಲಿ ಜನದ ಮಾತಿಗೂ ನಡವಳಿಕೆಗೂ ಹೆಚ್ಚುಕಡಮೆಯಿರುವುದು ಎಲ್ಲರಿಗೂ ಅನುಭವದಲ್ಲಿದೆ. ಈ ವ್ಯತ್ಯಾಸಕ್ಕೆ ಕಾರಣ ಸುಳ್ಳುತನವೊಂದೇ ಎಂದು ತಿಳಿಯಬಾರದು. ಬಾಯಿ ನುಡಿದ ಭಾವನೆ ಮನಸ್ಸಿನಲ್ಲಿಲ್ಲದ್ದು ನೂರರ ಪೈಕಿ ಐವತ್ತು ಸಂದರ್ಭಗಳಲ್ಲಿರಬಹುದು. ಇನ್ನೈವತ್ತು ಅಸತ್ಯತೆಯಲ್ಲ, ಅಸಾಧ್ಯತೆ. ಬುದ್ಧಿ ಯಾವುದನ್ನು ಯುಕ್ತವೆಂದು ಹೇಳುತ್ತದೆಯೋ ಅದನ್ನು ಅನುಸರಿಸಲು ಚಿತ್ತವು ನೈಜವಾಗಿ ಸಿದ್ಧಪಟ್ಟಿರುವುದಿಲ್ಲ. ಚಿತ್ತವು ಬುದ್ಧಿಯಷ್ಟು ಜಾಗರೂಕವಲ್ಲ. ಬುದ್ಧಿಯ ಉಪದೇಶ ಕಷ್ಟವಾದಷ್ಟೂ ಚಿತ್ತದ ಅಸಿದ್ಧತೆ ಅಷ್ಟು ಹೆಚ್ಚಾಗಿರುತ್ತದೆ.

ಮನುಷ್ಯನ ಮನಸ್ಸು ಒಂದು ಕಾಗದದಂತೆ. ಕಾಗದದ ಹಾಳೆಯನ್ನು ಪದರ ಪದರವಾಗಿ ಮಡಿಸದೆ, ಸುರುಳಿಯಾಗಿ ಸುತ್ತದೆ ಇದ್ದಾಗ ಅದು ಸಮವಾಗಿರುತ್ತದೆ. ಒಂದು ಸಲ ಮಡಿಸಿದ್ದಾದಮೇಲೆ ಅದನ್ನು ಸಮಪಡಿಸಲು ಪದೇ ಪದೇ ತಿದ್ದಬೇಕು. ಒಂದು ಲೋಹದ ಸಲಾಕಿಯೂ ಹಾಗೆಯೇ. ಅದನ್ನು ಒಂದು ಕಡೆಗೆ ಬಗ್ಗಿಸಿದ ಬಳಿಕ ಪುನಃ ನೇರವಾಗಿ ಮಾಡಬೇಕೆಂದರೆ ಪ್ರಯಾಸವಾಗುತ್ತದೆ. ಬೆತ್ತವನ್ನು ಕೂಡ ಬಾಗಿಸಿದ ಬಳಿಕ ನೆಟ್ಟಗೆ ನಿಲ್ಲಿಸುವುದು ಕಷ್ಟ. ಚಿತ್ತವೂ ಹಾಗೆಯೇ ಅಭ್ಯಾಸವಶವರ್ತಿಯಾದದ್ದು. ಒಂದು ಹಳೆಯ ಅಭ್ಯಾಸವನ್ನು ಬಿಟ್ಟು ಬೇರೊಂದು ಅಭ್ಯಾಸವನ್ನು ಹೊಸದಾಗಿ ಕಲಿಯಬೇಕೆಂದರೆ ಅದಕ್ಕೆ ಕಾಲಾವಕಾಶವೂ ತಾಳ್ಮೆಯೂ ಸ್ಥೈರ್ಯವೂ ಬೇಕು. ಇದು ವಸ್ತುಸ್ವಭಾವ.

ಆದದ್ದರಿಂದಲೇ ಭಗವಂತನ ಈ ವಚನ :

> ಅಸಂಶಯಂ ಮಹಾಬಾಹೋ
> ಮನೋ ದುರ್ನಿಗ್ರಹಂ ಚಲಮ್ ।
> ಅಭ್ಯಾಸೇನ ತು ಕೌನ್ತೇಯ
> ವೈರಾಗ್ಯೇಣ ಚ ಗೃಹ್ಯತೇ ॥ (೬-೩೫)
> ಅಭ್ಯಾಸಯೋಗಯುಕ್ತೇನ... ॥ (೮-೮)
> ಅಭ್ಯಾಸಯೋಗೇನ ತತೋ
> ಮಾಮಿಚ್ಛಾಪ್ತುಂ ಧನಂಜಯ ॥ (೧೨-೯)

ಬುದ್ಧಿಗೂ ಚಿತ್ತಕ್ಕೂ ನಡುವೆ ಇರುವ ಅಂತರ ಇಷ್ಟು ಗಹನವಾದದ್ದು.

ಈ ಕಾರಣದಿಂದ ಗೀತೋಪದೇಶದ ತತ್ತ್ವಭಾಗಕ್ಕಿಂತ ಸಾಧನಭಾಗ ಕಷ್ಟವಾದದ್ದು. ಸಾಧನಕ್ರಮವು ಬಹುಕಾಲದ ಚಿತ್ತದಾರ್ಢ್ಯವನ್ನೂ ಬಹುವಿಧದ ಸಂತತ ಪ್ರಯತ್ನವನ್ನೂ ಅಪೇಕ್ಷಿಸುತ್ತದೆ. ತತ್ತ್ವಶ್ರವಣಮಾಡಿದ ಮಾತ್ರದಿಂದ ಉದ್ದೇಶ ಸಿದ್ಧಿಯಾಯಿತೆಂದು ಭಾವಿಸತಕ್ಕದ್ದಲ್ಲ, ತತ್ತ್ವವಾಕ್ಯವು ಬುದ್ಧಿಗೆ ಅರ್ಥವಾಗಿ ಗ್ರಾಹ್ಯವಾಯಿತೆಂದರೂ ಅದು ಫಲಪ್ರಾಪ್ತಿಯಲ್ಲ. ವಾದಕ್ಕಾಗಿ ಹುಟ್ಟಿದ್ದಲ್ಲ ಈ ಶಾಸ್ತ್ರ. ಅದು ಅನುಷ್ಠಾನಕ್ಕಾಗಿ ಹುಟ್ಟಿದ್ದು.

ಅನುಭವವೇ ಜ್ಞಾನ

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಯಾರಿಗೆ ಅನುಷ್ಠಾನವಿಲ್ಲವೋ ಅವರಿಗೆ ತತ್ತ್ವಸ್ವರೂಪದ ಜ್ಞಾನವೇ ಆಗಿರಲಾರದೆಂದು ಹೇಳಬೇಕು. ಏಕೆಂದರೆ ಜ್ಞಾನವೆಂಬ ವಸ್ತು ಒಂದು ಸಂಕಲ್ಪಬಿಂದುವಲ್ಲ, ಒಂದು ಕಾರ್ಯವಿಧಾನ; ಒಂದು ಚುಕ್ಕೆಯಲ್ಲ, ಒಂದು ಗೆರೆ. ಅದರಲ್ಲಿ ಅನೇಕ ಸ್ಥಾನಮಟ್ಟಗಳುಂಟು. ಅದರ ಶಿಖರ ಅನುಭವ. ಯಾರು ಬೆಟ್ಟದ ಕೋಡುಗಲ್ಲನ್ನು ಹತ್ತಿದ್ದಾನೋ ಅವನು ಬೆಟ್ಟವನ್ನು ಪೂರ್ತಿ ಕಂಡವನು. ಯಾರು ತತ್ತ್ವವನ್ನು ಅನುಭವಕ್ಕೆ ತಂದುಕೊಂಡಿದ್ದಾನೋ ಅವನು ಅದನ್ನು ಸಂಪೂರ್ಣವಾಗಿ ಅರಿತವನು. ಅನುಭವವಿಲ್ಲದವನ ತತ್ತ್ವಜ್ಞಾನ, ಅಸಮಗ್ರಜ್ಞಾನ, ಆದದ್ದರಿಂದ ನಂಬಿಕೆಗೆ ಅರ್ಹವಲ್ಲ ಅದು. ಭ್ರಾಂತಿಯಂತೆಯೇ ಅಪಾಯಕರ. ಆದದ್ದರಿಂದ ಅನುಷ್ಠಾನ ಅನುಭವಗಳಿಗಾಗಿ ಯಾರು ಪರಿಶ್ರಮಿಸುತ್ತಾರೋ ಅವರೇ ಪ್ರಾಮಾಣಿಕರಾದ ಗೀತಾ ವಿದ್ಯಾರ್ಥಿಗಳು.

ಅನುಭವವೆಂದರೆ ಯಾವ ವಸ್ತುವನ್ನು ನಾವು ದೃಷ್ಟಿಯಲ್ಲಿರಿಸಿಕೊಂಡಿದ್ದೇವೋ ಆ ವಸ್ತುವೇ ನಾವಾಗುವುದು—ಮನಃಪ್ರಯತ್ನದಿಂದ. ಮನಸ್ಸು ಅರಗಿನಂತೆ, ಅಥವಾ ಜೇನುಮೇಣದಂತೆ, ರೂಪಾಂತರ ಧರಿಸಬಲ್ಲ ವಸ್ತು. ಅದು ಕರಗಿ ನೀರಾಗಿ ಉದ್ದಿಷ್ಟ ವಸ್ತುವಿನ ಆಕಾರವೆಂಬ ಎರಕದೊಳಕ್ಕೆ ಹರಿದು ನೆಲಸಿ ತದಾಕಾರವನ್ನು ತಾಳಿ ಗಟ್ಟಿಯಾಗಬೇಕು. ಅದು ಅನುಭವ—ವಸ್ತುವಿನಂತೆ ಆಗುವುದು. ಗೋಪಿಕಾಸ್ತ್ರೀಯರು ಶ್ರೀಕೃಷ್ಣಧ್ಯಾನ ಮಾಡುತ್ತ ಮಾಡುತ್ತ ಆವೇಶಗೊಂಡು ಕೊನೆಗೆ ತಾವೇ ಕೃಷ್ಣಮೂರ್ತಿಯೆಂದಂದುಕೊಂಡು ಆನಂದಿಸಿದರಂತೆ. ಅದು ಅನುಭವ.

ಇಂಥಾ ಅನುಭವ ನಮಗೆ ಭಗವದ್ವಿಷಯದಲ್ಲಿ ಆಗಬೇಕಾದರೆ ಅದು ಬಹು ಪ್ರಯಾಸದಿಂದ, ಬಹುಕಾಲದ ಅಭ್ಯಾಸದಿಂದ ಸಾಧ್ಯವಾಗತಕ್ಕದ್ದು. ಆದದ್ದರಿಂದ ಅಸ್ಮದಾದಿಗಳು ಗೀತಾವಚನಮಾತ್ರವನ್ನೋದಿ ಅದರ ಶಬ್ದಾರ್ಥವನ್ನು ಅಷ್ಟಿಷ್ಟು ತಿಳಿದುಕೊಂಡ ಮಾತ್ರದಿಂದ ಏನನ್ನೂ ಸಾಧಿಸಿದಂತಾಗದು. ನಮ್ಮ ಈಗಿನ ಸ್ಥಿತಿಗೆ ಅನುಷ್ಠಾನ ಅಭ್ಯಾಸಗಳು ಮುಖ್ಯ. ಇದಕ್ಕೆ ಯಾವ ಉಪದೇಶಾಂಶ, ಯಾವ ಅಭ್ಯಾಸಮಾರ್ಗ ನಮ್ಮ ನಮ್ಮ ಶಕ್ತಿ ಯೋಗ್ಯತೆಗಳಿಗೆ ಹೊಂದುತ್ತದೆಂಬುದನ್ನು ನಾವುನಾವು ಕಂಡುಕೊಳ್ಳಬೇಕು. ತತ್ತ್ವಭಾಗ ಅಮುಖ್ಯವಲ್ಲ. ಆದರೆ ಅದರ ಮುಖ್ಯತೆ ಬುದ್ಧಿವಿಚಾರಕ್ಕೆ. ಆ ವಿಚಾರದ ಸಾರ್ಥಕತೆ ಅದು ಅನುಭವಕ್ಕೆ ಬಂದಾಗ.

ಅನುಭವಕ್ಕಾದರೋ ಸಾಧನಭಾಗ ಮುಖ್ಯ. ಮತ್ತು ಅನುಭವವು ಬುದ್ಧಿಯೊಂದರಿಂದ ಆಗುವ ಕಾರ್ಯವಲ್ಲ. ಬುದ್ಧಿಯ ಜೊತೆಗೆ ಮನಸ್ಸು, ಚಿತ್ತ, ಸ್ಮೃತಿ, ವಿಜ್ಞಾನ, ತರ್ಕ, ಊಹೆ, ಪ್ರತಿಭೆ, ಅನ್ಯಸಹಾನುಭೂತಿ ಮೊದಲಾದ ಎಲ್ಲ ಅಂತಃಕರಣ ಶಕ್ತಿಗಳೂ ಏಕೀಭವಿಸಬೇಕು. ಜೀವಿತಸರ್ವಸ್ವವೂ ಪ್ರಯತ್ನ ಮಾಡಿದರೆ, ಆ ಕೃಷಿಯು ಫಲಕ್ಕೆ ಬಂದು ಪಕ್ವವಾದದ್ದು ಭಗವದನುಭವ.

ಆದದ್ದರಿಂದ ನಾವು ಅನುಸಂಧಾನದ ಕಡೆಗೆ ಗಮನವಿರಿಸೋಣ.

ಕೇವಲ ಪಾರಾಯಣ ಸಾಲದು

ಗೀತೆಯನ್ನು ಓದುವವರಲ್ಲಿ ಬಹುಮಂದಿ ಅದು ತಮಗೆ ಅರ್ಥವಾಗದಿದ್ದರೂ ಪುಣ್ಯಕಾರ್ಯವೆಂದು ಭಾವಿಸಿ ಪಾರಾಯಣಮಾಡುತ್ತಾರೆ. ಅದು ಒಳ್ಳೆಯದೇ ಸರಿ. ಆದರೆ ಅದರಲ್ಲಿ ಒಂದು ಅಪಾಯವುಂಟು. ಬರಿಯ ಅಕ್ಷರೋಚ್ಚಾರಣೆಯ ಮಾತ್ರದಿಂದ ಸಮಸ್ತ ಪಾಪಗಳೂ ಪರಿಹಾರವಾದಾವೆಂದು ಧೈರ್ಯತಂದುಕೊಳ್ಳುವ ಸಂಭವವುಂಟು. ನಮ್ಮಲ್ಲಿ ನಾಮಸ್ಮರಣೆ, ನಾಮಸಂಕೀರ್ತನೆ—ಇವುಗಳನ್ನು ಬಹುವಾಗಿ ಪ್ರಶಂಸೆ ಮಾಡಿದ್ದಾರೆ. ನಾಮಸ್ಮರಣೆಯೂ ಗ್ರಂಥಪಾರಾಯಣವೂ ಸಾಧನಮಾತ್ರಗಳು. ಯಾವುದಕ್ಕೆ ಸಾಧನ? ಮನಸ್ಸನ್ನು ಭಗವದ್ವಿಷಯಕ್ಕೆ ತಿರುಗಿಸಲು ಸಾಧನ. ಮನಸ್ಸನ್ನು ಭಗವಂತನಲ್ಲಿರಿಸದೆ ಬೇರೆಲ್ಲಿಯೋ ಇರಿಸಿ ಮಾಡುವ ನಾಮಸಂಕೀರ್ತನೆ ನಿಷ್ಫಲ. ದುಷ್ಕಾರ್ಯಮಾಡಿ ಅದರ ದೋಷವು ಗೀತಾಕ್ಷರೋಚ್ಚಾರಣೆಯಿಂದ ನಿವಾರಣೆಯಾದೀತೆಂಬುದು ಅಪಾಯಕರವಾದ ಭ್ರಾಂತಿ. ಪಾರಾಯಣದ ಪ್ರಯೋಜನವು ಗೀತಾವಾಕ್ಯಗಳನ್ನು ಬಾಯಿಗೆ ಸ್ವಾಧೀನಮಾಡಿಕೊಡುವುದರಲ್ಲಿರುತ್ತದೆ. ಗೀತಾವಾಕ್ಯವು ಮುಖಸ್ಥವಾಗಿದ್ದರೆ ಆಗ ಅದನ್ನು ಪದೇಪದೇ ಸ್ಮರಿಸಿಕೊಳ್ಳುವುದು ಸುಲಭವಾಗುತ್ತದೆ. ಪುನಃ ಪುನಃ ಸ್ಮರಣೆಮಾಡುವುದರಿಂದ ವಾಕ್ಯದ ಅರ್ಥವು ಮನಸ್ಸಿಗೆ ಪರಿಚಯವಾಗುತ್ತದೆ. ಅರ್ಥಪರಿಚಯದಿಂದ ಮನನವು ಸುಲಭವಾಗುತ್ತದೆ. ಅರ್ಥಮನನದಿಂದ ಅನುಸಂಧಾನವು ಸುಲಭವಾಗುತ್ತದೆ. ಹೀಗೆ ಪಾರಾಯಣವು ಪರಂಪರೆಯಿಂದ ಪ್ರಯೋಜಕವೇ ಹೊರತು ಸ್ವತಃ ಹೆಚ್ಚು ಫಲಕಾರಿಯಾಗದು. ಪೂರ್ಣಫಲ ದೊರೆಯಬೇಕಾದರೆ ಅರ್ಥದ ಮೇಲೆ ದೃಷ್ಟಿಯಿಡಬೇಕು. ಅರ್ಥದ ಮೇಲೆ ಗಮನವಿಲ್ಲದ ಶುಕಪಠಿತದ ಪದ್ಧತಿ ನಮ್ಮಲ್ಲಿ ಅತಿ ಹೆಚ್ಚಾಗಿದೆ. ನಾವೂ ಗೀತೆ ಓದಿದ್ದೇವೆ—ಎಂದು ಹೇಳಿಕೊಳ್ಳುವ ಆಶೆ ಬಲವಾಗಿ ಹರಡಿದೆ. ಓದಿದರೆ ಏನು ಬಂತು? ಮಾತಿನ ಅರ್ಥ ಕಂಡಿದ್ದರೆ ಏನು ಬಂತು? ಗ್ರಂಥದ ನಾನಾ ಭಾಗಗಳ ಅರ್ಥಗಳನ್ನು ಸಮಂಜಸವಾಗಿ ಹೊಂದಿಸಿ ಏಕಾಕಾರವಾಗಿ ಮನಸ್ಸಿನಲ್ಲಿ ಭಾವಿಸಿನೋಡಿದರೆ ಬಹುಕಾಲದ ಅಭ್ಯಾಸದಿಂದ ತತ್ತ್ವವು ಮನಸ್ಸಿಗೆ ಸ್ಫುರಿಸೀತು. ವೇದದ ವಿಷಯದಲ್ಲಿಯೂ ಇದೇ ಮಾತನ್ನು ಹೇಳಿದೆ.

स्थाणुरयं भारहारः किलाभूत्
अधीत्य वेदं न विजानाति योऽर्थम् ॥

ಗೀತಾಪಾರಾಯಣವು ಅಗಸನ ವಾಹನ ಹೊರುವ ಹೊರೆಯಂತಾಗಬಾರದು.

यथा खरश्चंदनभारवाही
भारस्य वेत्ता न तु चंदनस्य ।

ಕತ್ತೆಯು ಬೆನ್ನಿನ ಮೇಲೆ ಶ್ರೀಗಂಧದ ಕೊರಡುಗಳನ್ನು ಹೊತ್ತಿದ್ದರೇನು? ಅದರ ಅನುಭವಕ್ಕೆ ಬರುವುದು ಭಾರ ಮಾತ್ರ.

ಆದದ್ದರಿಂದ ಪಾರಾಯಣದ ಸಫಲತೆಯು ಗ್ರಂಥದ ಅರ್ಥಾನುಸಂಧಾನದಿಂದ.

ಅನುಸಂಧಾನದ ಮಾರ್ಗವನ್ನು ಪೂರ್ವಿಕರು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ.

श्रोतव्यो मंतव्यो निदिध्यासितव्यः ।...
तरति शोकमात्मवित् ।

ಶ್ರವಣ, ಮನನ, ನಿದಿಧ್ಯಾಸನ—ಇವು ಆ ಮೂರು ಹಂತಗಳು.

ಶ್ರವಣವೆಂದರೆ ಕೇಳುವುದು: ಅರ್ಥಾತ್ ಓದುವುದು ಅಥವಾ ಪಾರಾಯಣ.

ಮನನವೆಂದರೆ ಅರ್ಥಚಿಂತನೆ ಮಾಡುವುದು. ಸುಸಂಸ್ಕೃತವಾದ ಮನಸ್ಸೂ ಸುಶಿಕ್ಷಿತವಾದ ಬುದ್ಧಿಯೂ ಏಕೀಭವಿಸಿ ಗ್ರಂಥದ ಅರ್ಥವನ್ನು ವಿಚಾರಮಾಡುವುದು ಮನನ.

ನಿದಿಧ್ಯಾಸನವೆಂದರೆ ಮನನದಿಂದ ಗೊತ್ತಾದ ಸಿದ್ಧಾಂತವನ್ನು ನಡವಳಿಕೆಯಲ್ಲಿ ಸರ್ವದಾ ಗಮನದಲ್ಲಿರಿಸಿಕೊಂಡು ಅನುಸರಿಸುವುದು.

ಈ ಮೂರರಲ್ಲಿ ಮೊದಲನೆಯದು ಹೆಚ್ಚು ಕಷ್ಟವಲ್ಲ. ಮಿಕ್ಕೆರಡೂ ಕಷ್ಟಸಾಧ್ಯಗಳು. ಆ ಎರಡರಲ್ಲಿ ಮನನವು ಸಾಂಗವಾಗಿ ನಡೆದಿದ್ದರೆ ನಿದಿಧ್ಯಾಸನವು ಅಷ್ಟು ಕಷ್ಟವಾಗದು.

ಹೀಗೆ ಮನನವೇ ಈ ವಿಧಾನದ ಮುಖ್ಯಭಾಗ.

ಮನನ

ವಾಗ್ವಿವರಣೆಗೆ ಸಿಕ್ಕದೆ ಅಂತರನುಭವಕ್ಕೆ ಮಾತ್ರವೇ ಸಿಕ್ಕತಕ್ಕದ್ದಾದ ಸತ್ಯಾಂಶವಿರುತ್ತದೆ. ಅದೇ ರಹಸ್ಯ. ಆ ಬ್ರಹ್ಮರಹಸ್ಯವನ್ನು ಕಾಣಲು ಮನನಪೂರ್ವಕವಾದ ಅನುಸಂಧಾನವೊಂದೇ ಮಾರ್ಗ. ಶ್ರವಣವು ಸಾರ್ಥಕವಾಗಬೇಕಾದರೆ ಮನನದ ದಾರಿಯನ್ನು ಹಿಡಿಯಬೇಕು.

ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದು ಪ್ರಸಂಗವಿದೆ—ಹೀಗೆ: ಗಾರ್ಗಿಯು ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು ಭೂಲೋಕದ ರಚನೆ, ಅದರ ಹಾಸುಹೊಕ್ಕುಗಳ ರಚನೆ ಹೇಗೆಂದು ಕೇಳುತ್ತಾಳೆ. ಯಾಜ್ಞವಲ್ಕ್ಯರು ಇಲ್ಲಿಂದ ಬ್ರಹ್ಮಲೋಕದವರೆಗಿನ ನಾನಾ ಲೋಕಗಳ ಹುಟ್ಟು ಇರುವಿಕೆಗಳನ್ನು ಆಕೆಗೆ ಮೆಟ್ಟಲುಮೆಟ್ಟಲಾಗಿ ತಿಳಿಸುತ್ತಾರೆ. ಆಕೆ ಬ್ರಹ್ಮಲೋಕದ ರಚನೆಯನ್ನು ಕುರಿತು ಪ್ರಶ್ನೆ ಹಾಕುತ್ತಾಳೆ. ಆಗ

> ಮಾಽತಿಪ್ರಾಕ್ಷೀಃ ॥

ಅವರು “ಅತಿಪ್ರಶ್ನೆ ಮಾಡಬೇಡ” —ಎನ್ನುತ್ತಾರೆ.

ಪ್ರಶ್ನೆ ಪರೀಕ್ಷೆಗಳು ಒಂದು ಗಡಿಯವರೆಗೂ ಸಂಗತ; ಆಮೇಲೆ ಅಸಂಗತ. ಏಕೆಂದರೆ ಆ ಗಡಿ ದಾಟಿದ ಮೇಲೆ ಇರುವುದು ಮಾತುಗಳಿಗೆ ಒಳಪಡದ್ದು. ಅನುಭವವೇ ಅಲ್ಲಿರುವ ಗತಿ. ಅದಕ್ಕೆ ದಾರಿಯು ಮನನ ಅನುಸಂಧಾನಗಳ ಮೂಲಕ.

ಮನನವು ಮುಖ್ಯವಾಗಿ ಬುದ್ಧಿಕ್ರಿಯೆ. ಅದು ಶ್ರದ್ಧೆಯ ಪರಿಪಾಕವಿಧಾನವೆನ್ನಬಹುದು. ಉಪದೇಶವಾಕ್ಯದ ವಿಷಯದಲ್ಲಿ ಶಿಷ್ಯನು ಶ್ರದ್ಧೆಯುಳ್ಳವನಾಗಿರಬೇಕೆಂದು ನಿಯಮಮಾಡಿದೆಯಷ್ಟೆ? ಶ್ರದ್ಧೆಯೆಂದರೆ ನಂಬಿಕೆ. ಮೊದಲೇ ನಂಬಿಕೆಯಿದ್ದಲ್ಲಿ ಬುದ್ಧಿ ಮಾಡಬೇಕಾದ ಕೆಲಸವೇನಿದೆ?—ಎಂಬ ಪ್ರಶ್ನೆ ಬರುತ್ತದಷ್ಟೆ? ಶ್ರದ್ಧೆಯಿದ್ದರೂ ಬುದ್ಧಿಗೆ ಕರ್ತವ್ಯವುಂಟೆಂಬುದನ್ನು ಮನನನಿಯಮವು ತೋರಿಸುತ್ತದೆ. ಉಪದೇಶ ವಾಕ್ಯದ ಅರ್ಥವನ್ನು ಚರ್ಚಿಸಿ, ಅದರ ಅಂತರ್ಭಾವಗಳನ್ನು ಮೇಲಕ್ಕೆತ್ತಿ ವಿಮರ್ಶೆ ಮಾಡಿ, ಅಭಿಪ್ರಾಯವನ್ನು ಶೋಧಿಸಿ ದೃಢಪಡಿಸುವುದು ಮನನ. ನಮಗೆ ಮೊದಲು ಇರುವ ಜ್ಞಾನವು ಅಸಮಗ್ರಜ್ಞಾನ, ಜ್ಞಾನಾಭಾಸ. ಈ ಆಪಾತಜ್ಞಾನವು ಮನನಪರಿಷ್ಕಾರದಿಂದ

ಸಮ್ಯಗ್ಜ್ಞಾನವಾಗುತ್ತದೆ. ಹೀಗೆ ಶಾಸ್ತ್ರವ್ಯಾಸಂಗದಲ್ಲಿ ಬುದ್ಧಿಯ ಸ್ವತಂತ್ರಕಾರ್ಯವು ಮುಖ್ಯವಾದದ್ದಾಗುತ್ತದೆ. ಜ್ಞಾನಸಾಧನೆಯಲ್ಲಿ ಶ್ರವಣಕ್ಕೆ ಮೊದಲಿನ ಸ್ಥಾನ; ನಿದಿಧ್ಯಾಸಕ್ಕೆ ಕಡೆಯ ಸ್ಥಾನ. ಎರಡಕ್ಕೂ ನಡುವೆ ಸೇತುವೆಯಂತಿರುವುದು ಮನನ. ಅದು ಬುದ್ಧಿಯ ಜಾಗರೂಕ ವ್ಯಾಪಾರವನ್ನು ಅಪೇಕ್ಷಿಸುತ್ತದೆ.

ಧರ್ಮಸ್ವರೂಪ

ಜೀವನಕ್ರಿಯೆಗಳಲ್ಲಿ ತತ್ತ್ವವನ್ನೇ ಸರ್ವದಾ ದೃಷ್ಟಿಯಲ್ಲಿರಿಸಿಕೊಂಡು ನಡೆಯುವುದೇ ಅನುಸಂಧಾನ. ಅದೇ ಧರ್ಮಾಭ್ಯಾಸ. ಧರ್ಮದಲ್ಲಿ ಮುಖ್ಯವಾದ ಲಕ್ಷಣಗುಣಗಳು ನಾಲ್ಕು : (೧) ಭಗವನ್ಮಹಿಮಾಸ್ಮರಣೆ, (೨) ಸ್ವಾಹಂಕಾರವಿಸರ್ಜನೆ, (೩) ಮಮಕಾರಕೃಶೀಕರಣ, (೪) ಸ್ವಗುಣಶಕ್ತಿಗಳ ಪರಾರ್ಥವಿನಿಯೋಗ. ಈ ಧರ್ಮವು ಕುಟುಂಬಧರ್ಮ, ಕುಲಧರ್ಮ, ಜನಪದಧರ್ಮ ಮೊದಲಾದ ಅನೇಕ ರೂಪಗಳನ್ನು ತಾಳುತ್ತದೆ. ಈ ನಾನಾ ಧರ್ಮರೂಪಗಳಲ್ಲಿಯೂ ಗೀತಾನುಷ್ಠಾನ ನಡೆದರೆ ಆಗ ಯತ್ಕಿಂಚಿತ್ತಾಗಿ ಭಗವತ್ಸ್ವರೂಪದ ದೂರದರ್ಶನ. ಅದೇ ಅನುಭವ. ಧರ್ಮಕಾರ್ಯಗಳ ಮೂರು ಮುಖ್ಯವಿಧಾನಗಳನ್ನು ಗೀತಾಚಾರ್ಯರೇ ಸ್ಪಷ್ಟಪಡಿಸಿದ್ದಾರೆ:

> ತದಿತ್ಯನಭಿಸಂಧಾಯ
> ಫಲಂ ಯಜ್ಞತಪಃಕ್ರಿಯಾಃ ।
> ದಾನಕ್ರಿಯಾಶ್ಚ ವಿವಿಧಾಃ
> ಕ್ರಿಯನ್ತೇ ಮೋಕ್ಷಕಾಂಕ್ಷಿಭಿಃ ॥ (೧೭-೨೫)

ಯಜ್ಞ, ದಾನ, ತಪಸ್ಸು ಇವು ಭಗವದನುಭವವನ್ನು ಸಂಪಾದಿಸಿಕೊಡಲು ಸಾಧನಗಳು: ಯಜ್ಞವೆಂದರೆ ದೇವಪೂಜೆ, ದಾನವೆಂದರೆ ಲೋಕಸೇವೆ, ತಪಸ್ಸೆಂದರೆ ಆತ್ಮಶಿಕ್ಷಣ. ಈ ಮೂರೂ ಪ್ರತಿಫಲದ ಅಪೇಕ್ಷೆಯಿಲ್ಲದೆ ನಡೆದಾಗ ಜೀವೋದ್ಧಾರದ ಮಾರ್ಗಗಳು.

ಭಗವದ್ಗೀತೆಯು ಎಷ್ಟುಮಟ್ಟಿಗೆ ಮೋಕ್ಷೋಪದೇಶಕವೋ ಅಷ್ಟುಮಟ್ಟಿಗೆ ಧರ್ಮಪ್ರತಿಪಾದಕವೂ ಆಗಿದೆ. ಶಂಕರಾಚಾರ್ಯರು ಇದನ್ನು ಸ್ಪಷ್ಟವಾಗಿ ತಿಳಿಯಪಡಿಸಿದ್ದಾರೆ.

ದ್ವಿವಿಧೋ ಹಿ ವೇದೋಕ್ತೋ ಧರ್ಮಃ, ಪ್ರವೃತ್ತಿಲಕ್ಷಣೋ ನಿವೃತ್ತಿಲಕ್ಷಣಶ್ಚ । ಜಗತಃ ಸ್ಥಿತಿಕಾರಣಂ ಪ್ರಾಣಿನಾಂ ಸಾಕ್ಷಾದಭ್ಯುದಯನಿಃಶ್ರೇಯಸಹೇತುರ್ಯಃ ಸ ಧರ್ಮೋ ಬ್ರಾಹ್ಮಣಾದ್ಯೈರ್ವರ್ಣಿಭಿರಾಶ್ರಮಿಭಿಶ್ಚಶ್ರೇಯೋಽರ್ಥಿಭಿರನುಷ್ಠೀಯಮಾನಃ ।...ಅಭ್ಯುದಯಾರ್ಥೋಽಪಿ ಯಃ ಪ್ರವೃತ್ತಿಲಕ್ಷಣೋ ಧರ್ಮೋವರ್ಣಾಶ್ರಮಾಂಶ್ಚೋದ್ದಿಶ್ಯ ವಿಹಿತಃ

ಸ ದೇವದಿಸ್ಥಾನಪ್ರಾಪ್ತಿಹೇತುರಪಿ ಸನ್ನೀಶ್ವರಾರ್ಪಣ ಬುದ್ಧ್ಯಾನುಷ್ಠೀಯಮಾನಃ ಸತ್ತ್ವ-ಶುದ್ಧಯೇ ಭವತಿ ಫಲಾಭಿಸಂಧಿವರ್ಜಿತಃ ॥...

ಈ ವಿಚಾರದಲ್ಲಿ ರಾಮಾನುಜಾಚಾರ್ಯ, ಮಧ್ವಾಚಾರ್ಯರುಗಳ ಅಭಿಪ್ರಾಯ ಬೇರೆಯಲ್ಲ. ಮೂವರದೂ ಏಕವಾಕ್ಯವೇ.

ಧರ್ಮದಲ್ಲಿ ಮತಭೇದವಿಲ್ಲ

ಆಚಾರ್ಯರುಗಳ ಮತಭೇದವಿರುವುದು ಗ್ರಂಥದ ಧರ್ಮವಿಚಾರಭಾಗದಲ್ಲಲ್ಲ; ತತ್ತ್ವವಿಚಾರಭಾಗದಲ್ಲಿ. ತತ್ತ್ವಭಾಗಕ್ಕೆ ಅವರು ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದಾರೆ. ಕಾರಣ ಏನೆಂದರೆ ತತ್ತ್ವಸಿದ್ಧಾಂತವು ಮೋಕ್ಷಸ್ವರೂಪ ಮೊದಲಾದ ಕಡೆಕಡೆಯ ಪ್ರಶ್ನೆಗಳನ್ನು ಕುರಿತದ್ದು. ತತ್ತ್ವಜಿಜ್ಞಾಸೆಯನ್ನು ಬೆಳಸಿ, ಜೀವದ ಪರಮ ಪರಾಕಾಷ್ಠ ಗತಿಯನ್ನು ಅತಿಶಯವಾಗಿ ಚರ್ಚಿಸಿದ್ದರಿಂದ ಗ್ರಂಥವು ಮುಖ್ಯವಾಗಿ ಮೋಕ್ಷಪರವಾದದ್ದೆಂದೂ ಧರ್ಮಪ್ರಶ್ನೆ ಅದಕ್ಕೆ ಗೌಣಮಾತ್ರವೆಂದೂ ಜನದಲ್ಲಿ ಭಾವನೆ ಹರಡುವಂತಾಯಿತು. ಅದು ಸಮಂಜಸವಲ್ಲ. ಜನಸಾಮಾನ್ಯಕ್ಕಾದರೋ ಪ್ರಯೋಜನದೃಷ್ಟಿಯಿಂದ ಮುಖ್ಯವಾದದ್ದು ಸಾಧನೆ, ಅಥವಾ ಅನುಸಂಧಾನ.

ಇನ್ನೂ ಒಂದು ಕಾರಣವಿದೆ. ಧರ್ಮಸ್ವರೂಪವನ್ನು ಕುರಿತು ಶ್ರುತಿಸ್ಮೃತಿಗಳೂ ಪುರಾಣೇತಿಹಾಸಗಳೂ ಮಾತ್ರವೇ ಅಲ್ಲದೆ ಬಹುಕಾಲದ ಜನಸಂಪ್ರದಾಯಗಳೂ ಏಕಮುಖವಾಗಿವೆ. ಧರ್ಮವು ವಿಶೇಷವಾಗಿ ಬಹಿರಂಗವ್ಯಾಪಾರ. ಆದದ್ದರಿಂದ ಅಲ್ಲಿ ಪ್ರಮಾಣ, ನಿರ್ಣಯ, ಒಪ್ಪಿತ ತಪ್ಪಿತ—ಇವೆಲ್ಲ ಬಹುಜನವಿಚಾರಕ್ಕೆ ಸಿಕ್ಕತಕ್ಕವಾಗಿವೆ. ಅಲ್ಲಿ ಐಕಮತ್ಯ ಸುಲಭ. ಅದು ಪ್ರತ್ಯಕ್ಷವಾಗಿ ಸಿದ್ಧಸಂಗತಿಯಾಗಿಯೂ ಇದೆ. ಆದದ್ದರಿಂದ ಅಲ್ಲಿ ಹೆಚ್ಚು ತರ್ಕವಿಮತಗಳಿಗೆ ಅವಕಾಶವಿಲ್ಲ. ಮೋಕ್ಷವಾದರೋ ಅಂತರಂಗ ವಸ್ತುವಿನ ವಿಷಯ. ಬಹಿಃಪ್ರಮಾಣಗಳು ಅಲ್ಲಿಗೆ ಸಾಲವು. ಧರ್ಮವಿಚಾರದಲ್ಲಿ ಲೋಕಾಭಿಪ್ರಾಯ ಒಂದು ಸಮ್ಮತಿಗೆ ಬಂದಿರುವಂತೆ ಜೀವಾತ್ಮ ಪರಮಾತ್ಮ ವಿಚಾರದಲ್ಲಿ ಒಂದು ಸಮ್ಮತಿಗೆ ಬಂದಿಲ್ಲ, ಬರುವಂತೆಯೂ ಇಲ್ಲ. ಅದು ಚರ್ಚೆವಿಮರ್ಶೆಗಳನ್ನು ಕೇಳಬಹುದಾಗಿದೆ. ಆದದ್ದರಿಂದ ಒಬ್ಬರು ಮಾಡಿದ ಸಿದ್ಧಾಂತವನ್ನು ಇನ್ನೊಬ್ಬರು ಪ್ರತಿವಿಮರ್ಶೆ ಮಾಡಬಹುದಾಗಿದೆ. ಹೀಗೆ ವಾದಗ್ರಂಥಗಳು ಬೆಳೆದು ತತ್ತ್ವಸಿದ್ಧಾಂತದ ಕಡೆಗೆ ಹೆಚ್ಚು ಲಕ್ಷ್ಯವನ್ನು ಸೆಳೆದು ಧರ್ಮ ಸಾಧನೆಯ ಬಗ್ಗೆ ಜನದ ಗಮನವನ್ನು ತಪ್ಪಿಸಿದೆ.

ತರ್ಕಜಿಜ್ಞಾಸೆಯ ಸ್ಥಾನ

ಭಗವದ್ಗೀತೆಯ ಮೇಲೆ ಭಾಷ್ಯಗಳೂ ವ್ಯಾಖ್ಯಾನಗಳೂ ಟೀಕೆಟಿಪ್ಪಣಿಗಳೂ ನೂರಾರಿವೆ. ಅವುಗಳಲ್ಲಿ ಈಗ ತಿಳಿದಿರುವ ಮಟ್ಟಿಗೆ ಶಂಕರಾಚಾರ್ಯರದೇ ಎಲ್ಲಕ್ಕಿಂತ ಪುರಾತನವಾದದ್ದು. ಅವರು ತತ್ತ್ವಜಿಜ್ಞಾಸೆಗೆ ಹೆಚ್ಚು ಪ್ರಾಮುಖ್ಯ ಕೊಟ್ಟ ಕಾರಣದಿಂದ ಅವರ ಪ್ರತಿವಾದಿಗಳೂ ಹಾಗೆ ತತ್ತ್ವಜಿಜ್ಞಾಸೆಯನ್ನು ಬೆಳಸಬೇಕಾಯಿತು. ಶಂಕರಾಚಾರ್ಯರು ಗೀತಾದಿ ಶಾಸ್ತ್ರಗಳ ಭಾಷ್ಯಗಳಲ್ಲಿ ತತ್ತ್ವಜಿಜ್ಞಾಸಾಭಾಗಕ್ಕೆ ಅಷ್ಟು ಪ್ರಾಧಾನ್ಯ ಕೊಟ್ಟಿದ್ದಕ್ಕೆ ಕಾರಣ ಏನು? ಅದನ್ನು ನಾವು ನೋಡಬೇಕು.

ಶಂಕರಾಚಾರ್ಯರು ತಮ್ಮ ಕಾಲದಲ್ಲಿ ಪ್ರಚುರವಾಗಿದ್ದ ಅನೇಕ ಮತಗಳ ದೋಷಗಳನ್ನು ತೋರಿಸಿ ಶುದ್ಧ ವೇದಾಂತವನ್ನು ಸ್ಥಾಪಿಸಹೊರಟವರು. ಆ ಇತರ ಮತಗಳಲ್ಲಿ ಮುಖ್ಯವಾದವು ಮೂರು: (೧) ಬೌದ್ಧ, (೨) ಕರ್ಮಮತ, (೩) ಸಾಂಖ್ಯ. ಬೌದ್ಧಮತ ಅವೈದಿಕ, ಅದರಲ್ಲಿ ನಾಲ್ಕು ಒಳಭೇದಗಳು ಇದ್ದುವು. ಅವುಗಳ ವಿವರಣೆ ನಮಗೆ ಇಲ್ಲಿ ಅಪ್ರಕೃತ. ಅವು ಮುಖ್ಯವಾಗಿ ಭಗವತ್ತತ್ತ್ವವನ್ನು ಅಂಗೀಕರಿಸಿಲ್ಲ. ಕರ್ಮವಾದವು ವೈದಿಕಮತ. ವೇದದಲ್ಲಿ ಕರ್ಮಕಾಂಡವೇ ಮುಖ್ಯ, ಯಜ್ಞಯಾಗಾದಿ ಶ್ರೌತಕರ್ಮವೇ ಧರ್ಮ, ಆದರಿಂದಲೇ ಪರಮಪುರುಷಾರ್ಥ ಎಂದವರು ಭಟ್ಟಕುಮಾರಿಲ ಮೊದಲಾದ ಪೂರ್ವಮೀಮಾಂಸಕರು. ಇನ್ನು ಮೂರನೆಯವರಾದ ಸಾಂಖ್ಯರು ಅವೈದಿಕರಲ್ಲ. ಆದರೆ ಅವರು ಜಗದ್ರಚನೆಯ ಮೂಲಪದಾರ್ಥಗಳು ಹಲವೆಂದೂ ಅವುಗಳ ಕಾರ್ಯಕಾರಣ ಸಂಬಂಧವು ಪ್ರಕೃತಿ ಪುರುಷರೆಂಬ ಎರಡು ತತ್ತ್ವಗಳಿಂದಾದದ್ದೆಂದೂ ವಾದಿಸುವವರು. ಮುಖ್ಯವಾಗಿ ಈ ಮೂರೂ ವಾದಗಳು ಶಂಕರಾಚಾರ್ಯರ ಕಾಲದಲ್ಲಿ ಪ್ರಬಲಿಸಿದ್ದವು. ಅವು ಮೂರೂ ತತ್ತ್ವಸಿದ್ಧಾಂತವನ್ನು ಕುರಿತವು. ಆ ಮೂರನ್ನು ಖಂಡಿಸಿ ಸ್ವಸಿದ್ಧಾಂತವಾದ ಸಾರ್ವೈಕಾತ್ಮ್ಯಮತವನ್ನು ಪ್ರಮಾಣಪೂರ್ವಕವಾಗಿ ಯುಕ್ತಿಸಮ್ಮತವಾಗುವಂತೆ ಪ್ರತಿಪಾದನೆ ಮಾಡುವ ಕರ್ತವ್ಯವನ್ನು ಶಂಕರಾಚಾರ್ಯರು ಕೈಕೊಳ್ಳಬೇಕಾಯಿತು. ಹೀಗೆ ಅವರ ಗ್ರಂಥಗಳಲ್ಲಿ ತತ್ತ್ವವಿಮರ್ಶನೆಯೂ ತರ್ಕವಿತರ್ಕಪರೀಕ್ಷೆಯೂ ವಾದಪ್ರಕ್ರಿಯೆಯೂ ಲಂಬಿಸಿ ಕಾಣುತ್ತವೆ. ಅವರ ತರುವಾಯ ಬಂದವರು ಅದಕ್ಕೆ ಸದೃಶವಾದ ಕಾರಣದಿಂದ ತಮ್ಮತಮ್ಮ ಗ್ರಂಥಗಳಲ್ಲಿ ತರ್ಕಭೂಮಿಯನ್ನು ವಿಸ್ತರಿಸಿದರು. ಹೀಗೆ ದೇಶಚರಿತ್ರೆಗೂ ಮತತತ್ತ್ವಚರಿತ್ರೆಗೂ

ಸಂಬಂಧಪಟ್ಟ ಕಾರಣಗಳಿಂದ ಗೀತಾವ್ಯಾಖ್ಯಾನದಲ್ಲಿ ತರ್ಕಾಂಶ ಹೆಚ್ಚಿ ಧರ್ಮಾಭ್ಯಾಸಾಂಶ ಹಿಮ್ಮೆಟ್ಟಿದಂತಾಗಿದೆ. ನಮ್ಮ ಕಾಲದಲ್ಲಿ ಆ ತರ್ಕಪ್ರಾಚುರ್ಯ ಅನಾವಶ್ಯಕವೆನ್ನಿಸುತ್ತದೆ. ಚರ್ವಿತ ಚರ್ವಣದಿಂದ ನಮಗೆ ಆಗುವ ಪ್ರಯೋಜನಕ್ಕಿಂತ ಗ್ರಂಥವನ್ನು ಪ್ರಕೃತಲೋಕದ ದೃಷ್ಟಿಯಿಂದ ನೋಡುವುದು ಹೆಚ್ಚು ಪ್ರಯೋಜನಕರವೆಂದು ನನಗೆ ತೋರುತ್ತದೆ. ಪೂರ್ವಾಚಾರ್ಯರ ಭಾಷ್ಯವ್ಯಾಖ್ಯಾನಗಳನ್ನು ನಾನು ನಿರಾಕರಿಸುವವನಲ್ಲ. ಪ್ರಾಚೀನ ವ್ಯಾಖ್ಯೆಗಳೇ ನಮಗೆ ಮಾರ್ಗದರ್ಶಕ. ನಮಗವು ಬೇಕು. ಅವುಗಳ ಸಹಾಯವಿಲ್ಲದಿದ್ದರೆ ನಾವು ತಪ್ಪುದಾರಿ ಹಿಡಿಯಬಹುದು. ಆದರೆ ಅವುಗಳ ಜೊತೆಗೆ ಇನ್ನೊಂದು ಸಾಂಪ್ರತ ವಿಚಾರ ದೃಷ್ಟಿಯೂ ಬೇಕು. ಸಾಂಪ್ರತವಿಚಾರದಿಂದ ಪ್ರಾಚೀನ ಸಿದ್ಧಾಂತಕ್ಕೆ ಎಷ್ಟು ಮಾತ್ರವೂ ಭಂಗ ಬರಲಾರದು. ನಮ್ಮ ಇಂದಿನ ತಿಳಿವಳಿಕೆ ಪುರಾತನರ ತಿಳಿವಳಿಕೆಗೆ ಒಂದುಗೂಡಬೇಕು. ಅದೇ ಪ್ರಗತಿಯ ವಿಧಾನ. ಮನುಷ್ಯಚರಿತ್ರೆ ಗಂಗಾದಿ ಮಹಾನದಿಗಳಂತೆ ಅವಿಚ್ಛಿನ್ನವಾಗಿ ಅಖಂಡ ಧಾರೆಯಾಗಿ ಹರಿಯಬೇಕಾದದ್ದು. ನಮ್ಮ ಹೊಸ ಆಲೋಚನೆಗಳೂ ಹೊಸ ಅನುವಾದಗಳೂ ಹಿಂದಿನವಕ್ಕೆ ಅನುಸ್ಯೂತವಾಗಿ ಅಂಟಿಕೊಂಡಿರಬೇಕಾದವು.

ಪುರುಷಾರ್ಥ

ಮನುಷ್ಯನು ಆಶೆಗಳ ಮೂಟೆ, ಅವನ ಬಾಳು ಎಡೆಬಿಡದ ಬೇಕು-ಬೇಡಗಳ ಪ್ರವಾಹ. ಅವನು ಯಾವಯಾವ ಆಶೆಗಳನ್ನಿರಿಸಿಕೊಂಡಿರುತ್ತಾನೋ, ಯಾವಯಾವ ಉದ್ದೇಶಗಳಿಗಾಗಿ ಚಿಂತಿಸಿ ಪ್ರಯತ್ನಮಾಡುತ್ತಾನೋ, ಆ ಅಭಿಲಾಷೆಗಳನ್ನೆಲ್ಲ ನಮ್ಮ ಪೂರ್ವಿಕರು ಪುರುಷಾರ್ಥ ಎಂದು ಕರೆದಿದ್ದಾರೆ. ಅಂಥ ಪುರುಷಾರ್ಥಗಳು ನಾಲ್ಕು: (೧) ಧರ್ಮ, (೨) ಅರ್ಥ, (೩) ಕಾಮ, (೪) ಮೋಕ್ಷ. ಅರ್ಥವೆಂದರೆ ಧನ. ಕಾಮವೂ ಅರ್ಥವೂ ಎಲ್ಲರಿಗೂ ಮೊದಲು ಬೇಕೆನಿಸುವುವು. ಅವೆರಡೂ ಪ್ರಕೃತಿಯ ಪ್ರೇರಣೆಯಿಂದ ಹುಟ್ಟುವವು. ಧರ್ಮವು ಹಾಗಲ್ಲದೆ ಪುರುಷವಿವೇಕದಿಂದ ಸಿದ್ಧಿಸತಕ್ಕದ್ದು.

ಅರ್ಥದ ಪ್ರಯೋಜನಗಳು ಎರಡು: (೧) ಧರ್ಮ, (೨) ಕಾಮ. ಧನವನ್ನು ಧರ್ಮವಿರೋಧವಲ್ಲದ ರೀತಿಯಲ್ಲಿ ಸಂಪಾದಿಸಬೇಕಾದದ್ದು; ಮತ್ತು ಅದನ್ನು ಕಾಮೋಪಭೋಗಗಳಿಗಾಗಿ ವಿನಿಯೋಗಿಸುವುದಕ್ಕಿಂತ ಹೆಚ್ಚಾಗಿ ಸತ್ಪಾತ್ರದಾನ ಲೋಕೋಪಕಾರಗಳಿಗಾಗಿ ವಿನಿಯೋಗಿಸತಕ್ಕದ್ದು. ಆಗ ಅರ್ಥವು ಧರ್ಮಸಾಧಕವಾಗುತ್ತದೆ.

ಧರ್ಮವು ಪ್ರಕೃತಿಯನ್ನು ಭಾಗಶಃ ಅನುಸರಿಸಿಯೂ ಭಾಗಶಃ ಪ್ರತಿಕರಿಸಿಯೂ ಆಗತಕ್ಕದ್ದು. ಇನ್ನು ಮೋಕ್ಷವಾದರೋ ಪ್ರಕೃತಿಯನ್ನು ಪೂರ್ತಿಯಾಗಿ ದಾಟುವುದು. ಮನುಷ್ಯ ಜೀವನದ ಒಂದು ಕೊನೆ ಕಾಮ—ಪ್ರಕೃತ್ಯಧೀನ. ಇನ್ನೊಂದು ಕೊನೆ ಮೋಕ್ಷ—ಪ್ರಕೃತ್ಯತೀತ. ಬುಡದಿಂದ ತುದಿಗೇರುವ ಪುರುಷಪ್ರಯತ್ನವೇ ಧರ್ಮ. ಧರ್ಮದಲ್ಲಿ ಒಂದು ವಿಶೇಷ. ಅದು ಎರಡು ಪ್ರತ್ಯೇಕ ಫಲಗಳನ್ನು ದೊರಕಿಸಬಲ್ಲ ಸತ್ಕರ್ಮ: ಒಂದು ಇಷ್ಟ ಫಲ, ಇನ್ನೊಂದು ಹಿತಫಲ. ಧರ್ಮವು ಪ್ರಕೃತಿಯು ಹರಡುತ್ತಿರುವ ಮೋಹಭ್ರಾಂತಿಗಳ ಬಲೆಗಳಿಂದ ನಮ್ಮನ್ನು ಕೊಂಚ ಹೊತ್ತಾದರೂ ಹೊರಕ್ಕೆ ಎಳೆದು, ನಮ್ಮ ಸ್ವಾರ್ಥ ಅಹಂಕಾರಗಳನ್ನು ತಗ್ಗಿಸಿ, ನಮ್ಮ ಮನಸ್ಸನ್ನು ದೇವರ ಕಡೆಗೆ ತಿರುಗಿಸುತ್ತದೆ ಮತ್ತು ನಮ್ಮ ಜೀವನವನ್ನು ಲೋಕಜೀವನಕ್ಕೆ ಅನುಗೊಳಿಸುತ್ತದೆ. ಈ ಜೀವಸಂಸ್ಕಾರವೇ ಧರ್ಮದಿಂದಾಗುವ ಹಿತಫಲ. ಧರ್ಮ ಒಂದು ಕಡೆ ಹೀಗೆ ಜೀವಕ್ಕೆ ಪ್ರಗತಿಸಾಧಕವಾದರೆ ಇನ್ನೊಂದು ಕಡೆ ಅದು ವಿಗತಿಕಾರಕವೂ ಆಗಬಹುದು. ಯಜ್ಞ ದಾನ ತಪಸ್ಸು ಮೊದಲಾದ ದೇವ ಪೂಜಾಕಾರ್ಯಗಳು ಧರ್ಮದ ಒಂದು ರೂಪವಲ್ಲವೆ? ಈ ಪುಣ್ಯ ಕಾರ್ಯಗಳಿಂದ ದೇವತೆಗಳು ಒಲಿದು ನಾವು ಬೇಡಿದ್ದನ್ನು

ಕೊಡುತ್ತಾರೆ. ಅದು ಇಷ್ಟ ಫಲ. ಆ ಫಲದ ಮಧುವಿನಲ್ಲಿ ಮತ್ತುಂಟು. ನಾವು ಮಿತವರಿಯದೆ ತಿಂದ ರುಚಿರುಚಿಯಾದ ಆಹಾರ ನಮ್ಮ ಹೊಟ್ಟೆಯಲ್ಲಿ ಜೀರ್ಣಿಸದೆ ಹೇಗೆ ರೋಗಬೀಜವಾದೀತೋ ನಾವು ಬೇಡಿಪಡೆದ ವರವೂ ಹಾಗೆ ನಮಗೆ ಸ್ಮೃತಿತಪ್ಪಿಸಿ ಅವಿವೇಕಕ್ಕೆಳೆಯುವಷ್ಟರದಾಗಬಹುದು. ರಾವಣಾದಿ ರಾಕ್ಷಸರ ಕಥೆ ಇದೇ ತಾನೆ? ತಪಸ್ಸು ಮಾಡಿ ವರ ಪಡೆದರು, ವರವನ್ನು ದುರುಪಯೋಗ ಮಾಡಿದರು. ತನಗೆ ಯಾವುದು ತಕ್ಕದ್ದು, ತನ್ನ ಸ್ವಭಾವಕ್ಕೆ ಯಾವುದು ಒಳ್ಳೆಯದು—ಎಂಬುದನ್ನು ವಿಚಾರದಿಂದ ಕಂಡುಕೊಳ್ಳುವ ಮನುಷ್ಯನು ಸಾಮಾನ್ಯನಲ್ಲ. ನಾವು ಬಯಸಿದ ಭೋಗ ಭಾಗ್ಯಗಳು ಬಂದಾಗ ಅದನ್ನು ಅನುಭವಿಸುವ ಅಮಲಿನಲ್ಲಿ ನಾವು ಮೈಮರೆಯುತ್ತೇವೆ; ಆಗ ನಮ್ಮಿಂದ ಪ್ರಮಾದ ನಡೆಯಬಹುದು. ಆ ಸುಖ ಸಾಲದೆನಿಸಿದಾಗ ನಾವು ಇನ್ನೇನೋ ಬೇಕೆಂದು ಆತುರಪಡುತ್ತೇವೆ, ಅದು ದುಷ್ಪ್ರೇರಣೆಯಾಗಬಹುದು. ಆ ಸುಖ ಮುಗಿದುಹೋದಾಗ ಮತ್ತೂ ಬೇರೊಂದಕ್ಕಾಗಿ ಹಂಬಲಿಸುತ್ತೇವೆ. ಅದು ನಮ್ಮಿಂದ ತಪ್ಪು ಹೆಜ್ಜೆ ಹಾಕಿಸಬಹುದು. ಹೀಗೆ ಧರ್ಮಾಚರಣೆಯಿಂದ ಬಂದ ಇಷ್ಟಫಲವು ಜೀವನಕ್ಕೆ ಮೊದಲು ಸುಖಕರವಾದರೂ ಅದರ ಕಡೆಯ ಪರಿಣಾಮವು ದುಃಖಕರವೂ ಆಗುವ ಸಂಭವವುಂಟು. ಎಂದರೆ ಧರ್ಮವು ತನ್ನ ಫಲದಾನದಿಂದ ತನಗೆ ಪ್ರತಿಕಕ್ಷಿಗಳಾದ ಕಾಮಾವೇಶಕ್ಕೂ ಅರ್ಥಲೋಭಕ್ಕೂ ಅವಕಾಶ ಮಾಡಿಕೊಡುತ್ತದೆ ಎಂದಾಯಿತು.

ಮನುಷ್ಯಸ್ವಭಾವರಚನೆ

ಇಲ್ಲಿ ನಾವು ಅವಶ್ಯವಾಗಿ ಸ್ಮರಣೆಗೆ ತಂದುಕೊಳ್ಳಬೇಕಾದ ಇನ್ನೊಂದು ಸಂಗತಿ ಮನುಷ್ಯ ಸ್ವಭಾವದ ರಚನೆ. ನಮ್ಮ ಸ್ವಭಾವದಲ್ಲಿ ಸಾತ್ತ್ವಿಕ, ರಾಜಸ, ತಾಮಸ—ಎಂಬ ಮೂರು ತೆರದ ಗುಣಗಳು ಅಸಮ ಪರಿಮಾಣದಲ್ಲಿ ಬೆರೆತುಕೊಂಡಿರುತ್ತವೆ. ಧರ್ಮದ ಪರಿಣಾಮಗಳು ಧರ್ಮಕರ್ತನ ಸ್ವಭಾವದ ಗುಣಾಧಿಕ್ಯದಂತೆ ಇರುತ್ತವೆ. ಮನುಷ್ಯನು ಯಾವ ಉದ್ದೇಶಕ್ಕಾಗಿ ಧರ್ಮದಲ್ಲಿ ತೊಡಗುತ್ತಾನೆ? ಧರ್ಮದ ನಾನಾ ರೂಪಗಳಲ್ಲಿ ಎಂಥ ಧರ್ಮಕ್ಕೆ ಅವನ ಮನಸ್ಸು ತಿರುಗುತ್ತದೆ? ಈ ಪ್ರಶ್ನೆಗಳಿಗನುಸಾರವಾಗಿರತಕ್ಕದ್ದು ಧರ್ಮದ ಫಲಪರಿಣಾಮ.

ತ್ರಿಗುಣಗಳಿಂದ ಮನುಷ್ಯನ ಕಾಮಪ್ರವೃತ್ತಿ ಅರ್ಥಪ್ರವೃತ್ತಿಗಳು ಗೊತ್ತಾಗುತ್ತವೆ. ಆ ಪ್ರವೃತ್ತಿಗಳಿಂದ ಧರ್ಮಾಧರ್ಮಗಳು; ಧರ್ಮಾಧರ್ಮಗಳಿಂದ ಫಲಾಫಲಗಳು; ಫಲಾಫಲ ಪ್ರೇರಣೆಯಿಂದ ಪುನಃ ಮೋಹಲೋಭಗಳು; ಅದರ ಪರಿಣಾಮವಾಗಿ ತ್ರಿಗುಣಗಳ ವೃದ್ಧಿ ಹ್ರಾಸಗಳು; ಹಾಗೆ ಮನುಷ್ಯನ ಸ್ವಭಾವದ ಪುನಃಪರಿವರ್ತನೆಗಳು, ಪುನಃಪುನಃ ಧರ್ಮಾಧರ್ಮಗಳು, ಪುನರಪಿ ತತ್ಪರಿಣಾಮಪರಂಪರೆಗಳು—ಇದೇ ಸಂಸಾರ.

ಪರಮಾತ್ಮಪ್ರಾಪ್ತಿಯ ಉಪಾಯ

ಈ ವಿಕಾರಸಂತತಿಯನ್ನು ಮೀರಿದ್ದು ಮೋಕ್ಷ. ಅದು ನಿಷ್ಕಾಮದಿಂದ ಫಲಿಸಿದ ನೈಷ್ಕರ್ಮ್ಯ. ಮುಕ್ತನಾದವನ ನಡವಳಿಕೆ ಅಧಿಧರ್ಮ. ಧರ್ಮಕ್ಕುಂಟಾಗುವ ಫಲಾಫಲಗಳು ಅಧಿಧರ್ಮಕ್ಕಿಲ್ಲ. ಮುಕ್ತನಿಗೆ ಸಂಸಾರವು ಭಾರವಲ್ಲ, ಲೀಲೆ—ಎಂದರೆ ಸಂಸಾರ ಇದ್ದರೂ ಇಲ್ಲದಂತೆ ಹಗುರ.

ಯಾವ ಕಾಲಕ್ಕೆ ಧರ್ಮವು ಸುಲಭವಾಗುತ್ತದೆಯೋ—ಎಂದು ಧರ್ಮವು ಪ್ರಯಾಸವಾಗದೆ ಉಸಿರಾಟದಂತೆ ಪ್ರಯತ್ನವಿಲ್ಲದೆಯೇ ಸಾಹಜಿಕವಾಗಿ ನಡೆಯುತ್ತದೆಯೋ—ಅಂದಿನಿಂದ ಅಧಿಧರ್ಮವರ್ತನೆ. ಅದೇ ಮುಕ್ತಸ್ಥಿತಿ. ಆದದ್ದರಿಂದ ನಾವು ಪ್ರಯಾಸ ಪಡಬೇಕಾದದ್ದೆಲ್ಲ ಧರ್ಮಕ್ಕೋಸ್ಕರ. ಜೀವನದ ತೊಡಕಿರುವುದೆಲ್ಲ ಧರ್ಮ ಪ್ರಶ್ನೆಯಲ್ಲಿ.

> ಕಿಂ ಕರ್ಮ ಕಿಮಕರ್ಮೇತಿ
> ಕವಯೋಽಪ್ಯತ್ರ ಮೋಹಿತಾಃ ॥ (೪-೧೬)

"ಮಹಾ ಬುದ್ಧಿಶಾಲಿಗಳಾದವರು ಕೂಡ ಯಾವುದು ಮಾಡತಕ್ಕದ್ದು, ಯಾವುದು ಬಿಡತಕ್ಕದ್ದು ಎಂಬ ವಿಷಯದಲ್ಲಿ ಮೂಢರಾಗುತ್ತಾರೆ" —ಎಂದು ಶ್ರೀಕೃಷ್ಣ ಭಗವಂತನೇ ನುಡಿದಿದ್ದಾನೆ. ಧರ್ಮವು ಕಾಮಾಸಕ್ತಿ ಅರ್ಥಾಸಕ್ತಿಗಳನ್ನು ಪೋಷಿಸಲೂ ಬೇಕು, ನಿಗ್ರಹಿಸಲೂ ಬೇಕು. ಪೋಷಣೆ ನಿಲ್ಲಬೇಕಾದದ್ದು ಎಲ್ಲಿ? ನಿಗ್ರಹ ಮೊದಲಾಗಬೇಕಾದದ್ದು ಎಲ್ಲಿ? ಆ ಸೀಮಾರೇಖೆಯನ್ನು ಕಂಡುಕೊಳ್ಳುವುದು ನಮಗಿರುವ ಕಷ್ಟ.

ಅರ್ಥಾಸಕ್ತಿ ಕಾಮಾಸಕ್ತಿಗಳ ಹಿಂದೆ ಪ್ರಕೃತಿದೇವಿ ಬೆಂಬಲವಾಗಿ ನಿಂತಿದ್ದಾಳೆ. ಆಕೆ ಇಂದ್ರಿಯಗಳನ್ನು ಕೆರಳಿಸಿ ಸ್ವಾರ್ಥಬುದ್ಧಿಯನ್ನು ಉದ್ರೇಕಪಡಿಸಿ ವಿವೇಕವನ್ನು ಅಳಿಸಿ ಹಾಕುತ್ತಿರುತ್ತಾಳೆ. ಅವಳ ಜೊತೆಗೆ ಭ್ರಾಂತ್ರಿಕಾರಕವಾಗಿ ಸೇರುವ ಶಕ್ತಿ ಇನ್ನೊಂದಿದೆ. ಅದು ನಮ್ಮ ಪ್ರಾಚೀನ ಕರ್ಮ. ನಮ್ಮ ವಿವೇಕ ಕುಗ್ಗದೆ ನಿಂತು ಎಷ್ಟೇ ಪೌರುಷದಿಂದ ಹೋರಾಡಲಿ, ಫಲ ಕೈಗೂಡುತ್ತದೆಂಬ ನಿಶ್ಚಯವಿಲ್ಲ; ಆಪತ್ತು ಬಾರದೆಂಬ ಭರವಸೆಯಿಲ್ಲ. ಎಷ್ಟೋ ಜೀವನಗಳನ್ನು ಆಕಸ್ಮಿಕಗಳು ಅಲೆಯಲೆಯಾಗಿ ಬಂದು ಬಡಿಯುತ್ತವೆ. ಬಿರುಗಾಳಿ ಭೂಕಂಪಗಳಂತೆ ಅನಿರೀಕ್ಷಿತವಾಗಿ ವಿಘ್ನ ವಿಪತ್ತುಗಳೊದಗುತ್ತವೆ. ಪ್ರಾರಬ್ಧಕರ್ಮದ

ಸುಯೋಗ ಬಂದು ಕಾಂತಿಯ ಮೋಹವನ್ನು ಕವಿಸುವಂತೆ ದುರದೃಷ್ಟ ಬಂದು ಕತ್ತಲೆಯ ಮುಸುಕನ್ನು ಕವಿಸುತ್ತದೆ. ದುಃಖ ಸಂಕಟಗಳಿಂದ ಕಣ್ಣು ಮಂಜಾಗಿರುವಾಗ ಧರ್ಮವನ್ನು ಕಾಣುವುದು ಹೇಗೆ?

ಪ್ರಕೃತಿಯ ಸೃಷ್ಟಿಶಕ್ತಿಗೆ ಹೇಗೆ ಮಿತಿಯಿಲ್ಲವೋ ಮನುಷ್ಯನ ದೌರ್ಭಾಗ್ಯಕ್ಕೂ ಹಾಗೆ ಮಿತಿಯಿಲ್ಲ. ಆಕೆ ದಿನದಿನವೂ ಹೊಸಹೊಸ ಊಟಗಳನ್ನೂ ಹೊಸಹೊಸ ಆಟಗಳನ್ನೂ ಕಲ್ಪಿಸುತ್ತಾಳೆ. ಆದರೂ ಮನುಷ್ಯನನ್ನು ದಿನದಿನವೂ ಹೊಸಹೊಸ ಹಸಿವುಗಳೂ ಹೊಸಹೊಸ ನೋವುಗಳೂ ಕಾಡಬರುತ್ತವೆ. ಒಂದು ಕಡೆ ನೂತನ ಕಾಮನೆ, ಇನ್ನೊಂದು ಕಡೆ ಪ್ರಾಚೀನ ಸಂಪಾದನೆ. ಇವೆರಡರ ನಡುವೆ ಸಿಕ್ಕಿದ ಜೀವ ಇವೆರಡಕ್ಕಿಂತ ಬೇರೆಯಾದ ಸದ್ಗತಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳುವುದು ಕರ್ತವ್ಯ. ಧರ್ಮವು ನೂತನ ಕಾಮನೆಗಳನ್ನು ಪಾಲಿಸಿ, ಶಿಕ್ಷಿಸಿ, ಪ್ರಾರಬ್ಧಕ್ಕೆದುರಾಗಿ ಪೌರುಷವನ್ನು ನಿಲ್ಲಿಸಿ, ಜೀವವನ್ನು ಮೇಲಕ್ಕೆತ್ತಬೇಕು. ಭಗವಂತನು

ಗಹನಾ ಕರ್ಮಣೋ ಗತಿಃ ॥ (೪.೧೭)

ಎಂಬ ನುಡಿಯಿಂದ ತೋರಿದ್ದಾನೆ ಧರ್ಮಪ್ರಶ್ನೆಯ ಜಟಿಲಸ್ವರೂಪವನ್ನು. ಜೀವದ ಪ್ರಾಚೀನಕರ್ಮಶೇಷ, ತಾತ್ಕಾಲಿಕ ಕಾಮನೆ, ಭವಿಷ್ಯದ ಸದ್ಗತಿ—ಈ ಮೂರರ ಅವಶ್ಯಕತೆಗಳ ಸಮನ್ವಯವೇ ಧರ್ಮಕ್ಕಿರುವ ಕರ್ತವ್ಯ. ಈ ಮೂರರ ಪೈಕಿ ಮೇಲ್ಮೈಯಾಗಬೇಕಾದದ್ದು ಜೀವನದ ಭವಿಷ್ಯ—ಎಂದರೆ ಪರಮಾತ್ಮಪ್ರಾಪ್ತಿಯ ಉಪಾಯ.

ಜೀವನಯೋಗ

ಈ ತ್ರಿವಿಧ ಜೀವಚಿಂತೆಗಳನ್ನು ತತ್ತ್ವದ ಆಧಾರದ ಮೇಲೆ ನಿಲ್ಲಿಸಿ ತೋರಿಸುವುದು ಭಗವದ್ಗೀತೆ. ಮನುಷ್ಯಜೀವನದಲ್ಲಿ ಕಾಮಕ್ಕೆ ಒಂದು ಸ್ಥಲವುಂಟು; ಅರ್ಥಕ್ಕೆ ಒಂದು ಸ್ಥಲವುಂಟು; ಪುಣ್ಯಕ್ಕೆ ಒಂದು ಸ್ಥಲವುಂಟು; ಮೋಕ್ಷಕ್ಕೆ ಒಂದು ಸ್ಥಲವುಂಟು. ಈ ನಾಲ್ಕು ಸ್ಥಲಗಳಿಗೂ ಅರ್ಹತೆಯ ನಿಷ್ಕರ್ಷೆ ಹೇಗೆ? ಆಯಾ ಸ್ಥಲಗಳಿಗೆ ತಕ್ಕ ನಿಯಮಗಳೆಂಥವು? ಆ ನಾಲ್ಕು ಯೋಜನೆಗಳೂ ಪರಸ್ಪರ ಬಾಧಕಗಳಾಗದೆ ಸಾಧಕಗಳಾಗುವಂತೆ ಮಾಡುವ ಉಪಾಯ ಯಾವುದು? ಈ ಪ್ರಶ್ನೆಗಳಿಗೆ ಜಗಜ್ಜೀವನದ ಸ್ವಭಾವತತ್ತ್ವಗಳ ನಿರೂಪಣೆಯ ಮೂಲಕ ಉತ್ತರ ಸೂಚಿಸುವ ಶಾಸ್ತ್ರ ಗೀತಾಶಾಸ್ತ್ರ. ಅದು ಹೆಂಗಸರಿಗೂ ಗಂಡಸರಿಗೂ ಅವರವರ ಮನಸ್ಸಿದ್ಧತೆಗೆ ತಕ್ಕಂತೆ, ಅವರವರ ಬುದ್ಧಿಶಕ್ತಿಗೆ ತಕ್ಕಂತೆ, ಅವರವರ ವ್ಯಕ್ತಿಸಂದರ್ಭಕ್ಕೆ ತಕ್ಕಂತೆ ತಮ್ಮತಮ್ಮ ಜೀವನವನ್ನು ಯೋಗ್ಯಮಾಡಿಕೊಳ್ಳುವ ದಾರಿಯನ್ನು ತೋರಿಸುತ್ತದೆ. ಆದ್ದರಿಂದ ಗೀತೆಯನ್ನು ಸಮ್ಯಗ್‌ಜ್ಜೀವನ ಶಾಸ್ತ್ರವೆಂದು ಕರೆಯುವುದು, ಅಥವಾ ಜೀವನಯೋಗಶಾಸ್ತ್ರವೆಂದು ಕರೆಯುವುದು ಯುಕ್ತವಾಗುತ್ತದೆ.

ಮಹೋಪದೇಶ

ಗೀತೆಯ ಮಹೋಪದೇಶವೆಂದರೆ ಜೀವನದಲ್ಲಿ ಗೌರವ. ಜೀವನವು ಬ್ರಹ್ಮ ಚೈತನ್ಯದ ಒಂದು ಲೀಲೆ. ಯಾವ ಪ್ರಾಣಿಯಾದರೂ, ಎಂಥ ಪ್ರಾಣಿಯಾದರೂ, ಅದರ ಅಂತರಂಗದ ಅಂತರಾಳದಲ್ಲಿ ಪರಬ್ರಹ್ಮಶಕ್ತಿಯ ಚೇತನಾಂಶವಿರುತ್ತದೆ. ಇದನ್ನು ನಾವು ಗ್ರಹಿಸಿ ಜೀವನಕಾರ್ಯಗಳನ್ನು ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ನಿರ್ವಹಿಸಬೇಕಾದದ್ದು ಕರ್ತವ್ಯ. ಜೀವನವನ್ನು ತುಚ್ಛವೆನ್ನತಕ್ಕದ್ದಲ್ಲ. ಅದು ಒಂದು ಶ್ರೇಯೋವಕಾಶ ಮತ್ತು ಮಹಾಕರ್ತವ್ಯ. ಅದು ನಮ್ಮ ಆದರಣೆಗೂ ಸೇವೆಗೂ ಅರ್ಹವಾದದ್ದು. ಸ್ವಧರ್ಮದಲ್ಲಿ ಪವಿತ್ರಬುದ್ಧಿಯಿಂದಲೂ ಪಾರಮಾರ್ಥಿಕ ಶ್ರದ್ಧೆಯಿಂದಲೂ ತೊಡಗಬೇಕಾದದ್ದು. ಸಮ್ಯಗ್ಜೀವನವೇ ಭಗವದಾರಾಧನೆ.

ಪರಿಪೂರ್ಣಜೀವನಯೋಗ

ಭಗವದ್ಗೀತೆಯು ಸಮಸ್ತ ವೇದವೇದಾಂತಗಳ ಸಾರಸಂಗ್ರಹವೆಂದು ಪೂರ್ವಿಕರಿಂದ ನಮಗೆ ಬಂದಿರುವ ನಂಬಿಕೆ. ಗೀತೆಯೂ ಉಪನಿಷತ್ತೆಂದು ಒಂದು ಭಾವನೆ.

“ಶ್ರೀಮದ್ಭಗವದ್ಗೀತಾಸು ಉಪನಿಷತ್ಸು” ಎಂದು ಆ ವರ್ಣನೆ.

“ಸರ್ವೋಪನಿಷದೋ ಗಾವಃ... ದುಗ್ಧಂ ಗೀತಾಮೃತಂ ಮಹತ್ ॥” —ಗೀತೆಯು ಉಪನಿಷತ್ತುಗಳ ಸಾರಾಂಶವೆಂದು ಇನ್ನೊಂದು ವರ್ಣನೆ.

ವೇದಗಳೂ ವೇದಾಂತಗಳೆಂಬ ಉಪನಿಷತ್ತುಗಳೂ ಗೀತೆಯಲ್ಲಿ ಸಮನ್ವಯ ಪಡೆದಿವೆ—ಎಂದು ಹೇಳುವುದು ಯಥಾರ್ಥವೆನಿಸುತ್ತದೆ. ವೇದಗಳ ಉಪನಿಷದ್ಭಾಗಗಳನ್ನುಳಿದು ಮಿಕ್ಕ ಸಂಹಿತಾಬ್ರಾಹ್ಮಣಭಾಗಗಳು ವಿಶೇಷವಾಗಿ ದೇವತೋಪಾಸನೆಯಲ್ಲಿ ತಾತ್ಪರ್ಯವುಳ್ಳವು; ಉಪನಿಷತ್ತುಗಳು ಮುಖ್ಯವಾಗಿ ಆತ್ಮತತ್ತ್ವದಲ್ಲಿ ತಾತ್ಪರ್ಯವುಳ್ಳವು. ಗೀತೆಯು ವೇದದ ಕರ್ಮಕಾಂಡದ ಉಪಸನಾಪ್ರಕ್ರಿಯೆಯನ್ನೂ ಜ್ಞಾನಕಾಂಡದ ತತ್ತ್ವವಿಚಾರ ಪ್ರಕ್ರಿಯೆಯನ್ನೂ ಎರಡನ್ನೂ ಸಂಮೇಳನಮಾಡಿಸಿದೆ. ಸಮ್ಯಗ್ಜೀವನವು ಒಂದು ಬಿಂದುಪ್ರಾಯವಾದ (Point) ಸಂಗತಿಯಲ್ಲ; ಅದು ಅನೇಕ ಬಿಂದು ಪಂಕ್ತಿಯಾದ ರೇಖೆಯಂಥ (Line) ಸಂಗತಿ. ಅದು ಒಂದು ಕ್ಷಣದ್ದಲ್ಲ (Not of a moment); ಅದು ಸಹಸ್ರ ಸಹಸ್ರಕ್ಷಣಧಾರೆಯಾದ ಒಂದು ಕಾಲವಿಸ್ತಾರದ ಸಂಗತಿ (Period of time). ಅದರಲ್ಲಿ ಯಜ್ಞದಾನತಪೋರೂಪವಾದ ದೈವಿಕ ಕರ್ಮಕ್ಕೆ ಅವಕಾಶವಿದೆ; ವೈಯಕ್ತಿಕ ಸಾಮೂಹಿಕ ಜೀವಿಕಾವೃತ್ತಿ ವ್ಯವಹಾರ ರೂಪವಾದ ನಾನಾ ಲೌಕಿಕ ಧರ್ಮಕ್ಕೆ ಅವಕಾಶವಿದೆ; ಹಾಗೆಯೇ ಅಧ್ಯಾತ್ಮಧ್ಯಾನಾನುಸಂಧಾನರೂಪವಾದ ತತ್ತ್ವಾನುಷ್ಠಾನಕ್ಕೂ ಅವಕಾಶವಿದೆ. (೧) ದೈವತೋಪಾಸನೆ, (೨) ಲೋಕಜೀವನ, (೩) ಆತ್ಮಸ್ವರೂಪಚಿಂತನ—ಈ ತ್ರಿವಿಧ ಸಾಧನೆಗಳೂ ಪರಸ್ಪರ ಸಂಬದ್ಧಗಳೆಂದೂ ಅವುಗಳಲ್ಲಿ ಒಂದೊಂದಕ್ಕೂ ಸಮ್ಯಗ್ಜೀವನದಲ್ಲಿ ಒಂದೊಂದು ಗೊತ್ತಾದ ಸ್ಥಾನವುಂಟೆಂದೂ ಅವುಗಳನ್ನು ಸಮಗ್ರರೂಪದಲ್ಲಿ ಗ್ರಹಿಸತಕ್ಕದ್ದೆಂದೂ ತೋರಿಸುತ್ತದೆ ಭಗವದ್ಗೀತೆ.

ಹೀಗೆ, ಕೇವಲ ನಾಸ್ತಿಕರಲ್ಲದ ಸಮಸ್ತ ಮನುಷ್ಯಲೋಕಕ್ಕೂ ಒಂದು ಸಮಗ್ರ ಸಮ್ಯಗ್ಜೀವನದರ್ಶನವನ್ನು ದೊರಕಿಸುವುದು ಗೀತೆಯಿಂದ ನಮಗೆ ಆಗಿರುವ ಪರಮೋಪಕಾರ. ಶ್ರುತಿಸ್ಮೃತಿಗಳನ್ನು ನಂಬಿರುವ ಹಿಂದೂ ಜನ ಮಾತ್ರವೇ ಅಲ್ಲ; ಪಾರಸಿಕ, ಕ್ರೈಸ್ತ, ಮುಸ್ಲಿಮಾದಿ ಸಕಲಮತಗಳವರೂ ಸ್ವಸ್ವಮತವಿರೋಧವಿಲ್ಲದೆ ಅಂಗೀಕರಿಸಬಹುದಾದ ಜೀವನದರ್ಶನ ಗೀತೆಯಿದು. ಅದರ ಬೋಧನೆ ಯಾವ ಅಂಶದಲ್ಲಿಯೂ ಮನುಷ್ಯ ಬುದ್ಧಿಯ ಹೇತುವಿಚಾರಪ್ರವೃತ್ತಿಗೆ (Rationality) ಪ್ರತಿಕೂಲವಾಗಿಲ್ಲ. ಗೀತೆಯಲ್ಲಿ ಪಕ್ಷೈಕವಾದವಿಲ್ಲ (No dogmatism); ಮತಪಾಷಂಡತ್ವವಿಲ್ಲ; ಅನ್ಯಾಭಿಪ್ರಾಯ-ಅಸಹನೆಯಿಲ್ಲ.

> ತದ್ವಿದ್ಧಿ...ಪರಿಪ್ರಶ್ನೇನ... ॥ (೪-೩೪)
> ವಿಮೃಶ್ಯೈತದಶೇಷೇಣ... ॥ (೧೮-೬೩)

ಹೀಗೆ ವಿಚಾರತರ್ಕವನ್ನು ಗೀತೆಯು ಅಪೇಕ್ಷಿಸುತ್ತದೆ. ಅದು ವೇದವನ್ನು ಅವಲಂಬಿಸಿರುವುದು ಇಂದ್ರಿಯಾತೀತವಸ್ತುವಿನ ವಿಷಯದಲ್ಲಿ ಮಾತ್ರ. ಯಾವ ಸತ್ಯವು ನಮಗೆ ಪ್ರತ್ಯಕ್ಷವಸ್ತುವಲ್ಲವೋ, ಯಾವ ಸತ್ಯವು ಆತ್ಮರೂಪದಲ್ಲಿ ಅನುಭೂಯಮಾನವಾಗಿದ್ದರೂ ರಹಸ್ಯವಾಗಿ ಅನೂಹ್ಯವಾಗಿದೆಯೋ ಅದರ ವಿಷಯದಲ್ಲಿ ಶ್ರುತಿಪ್ರಮಾಣವನ್ನು ಬಿಟ್ಟರೆ ನಮಗೆ ಗತ್ಯಂತರವಿಲ್ಲ. ಅಂಥಾ ಅನಿವಾರ್ಯ ಪ್ರಸಂಗದಲ್ಲಿ ಗೀತೆಯು ವೇದವನ್ನು ಉದಾಹರಿಸುತ್ತಿದ್ದರೂ ಅಲ್ಲಿಯೂ ಆ ಉದಾಹರಣೆ ವಿಚಾರಣಾಪೇಕ್ಷಿಯಾದ ಪ್ರಾರಂಭಪ್ರತಿಜ್ಞೆಯಂತೆ (Hypothesis) ಇರುತ್ತದೆ.

ತರ್ಕವು ಒಂದು ಗೊತ್ತಾದ ವಿಷಯವನ್ನು ಕುರಿತದ್ದಾಗಿರುತ್ತದೆ. ವಿಷಯ ಸಾಮಗ್ರಿಯಿಲ್ಲದ ಶೂನ್ಯಸ್ಥಾನದಲ್ಲಿ ತರ್ಕಕ್ಕೆ ಕಾರಣವಿರದು. ಯಾವ ಅಭಿಪ್ರಾಯವನ್ನು ಅಥವಾ ಸಂಗತಿಯನ್ನು ಹೇಳುವ ವಾಕ್ಯವು ತರ್ಕವಿಚಾರಕ್ಕೆ ವಿಷಯವಾಗುತ್ತದೆಯೋ ಅದು ಪ್ರಾರಂಭಪ್ರತಿಜ್ಞೆ. ಅದು ಅಸ್ತ್ಯರ್ಥಕ (Positive) ವಾಕ್ಯವಾಗಬಹುದು; ನಾಸ್ತ್ಯರ್ಥಕ (Negative) ವಾಕ್ಯವಾಗಬಹುದು. ಯಾವುದಾದರೂ, ಅದು ಒಂದು ನಿಷ್ಕರ್ಷೆಯಾದ ಅಭಿಪ್ರಾಯವನ್ನು ತಿಳಿಸುವುದಾಗಿರಬೇಕು. ಇಂಥಾ ಪ್ರಾರಂಭಪ್ರತಿಜ್ಞೆ (Hypothesis) ನಮ್ಮ ಮುಂದೆ ಬಂದಾಗ ನಾವು ಅದನ್ನು ಬಗೆಬಗೆಯ ಕೋನಗಳಿಂದ ನೋಡಿ ಬಗೆಬಗೆಯ ಪ್ರಶ್ನೆಗಳನ್ನು ಕೇಳುತ್ತೇವೆ. ನಮ್ಮ ಅನುಭವಯುಕ್ತಿಗಳಿಂದ ಅದನ್ನು ಚರ್ಚಿಸುತ್ತೇವೆ. ಈ ನಾನಾ

ಪರೀಕ್ಷೆಗಳಿಗೆ ಆ ಪ್ರಾರಂಭಪ್ರತಿಜ್ಞೆಯು ಸಮಾಧಾನಕೊಟ್ಟು ನಿಂತರೆ ಅದು ಸಿದ್ಧಾಂತವೆನ್ನಿಸುತ್ತದೆ. ಗೀತೆಯ ತತ್ತ್ವಪ್ರತಿಪಾದಕ ವಾಕ್ಯಗಳು ಇಂಥಾ ತರ್ಕಪರೀಕ್ಷೆಗಳನ್ನೆದುರಿಸಿ ಅಲುಗಾಡದೆ ನಿಂತಿರತಕ್ಕವು. ಈ ಕಾರಣದಿಂದಲೇ ಗೀತೆಯ ಪ್ರಾಮಾಣ್ಯ. ಕೇವಲ ಬುದ್ಧಿಬಲದಿಂದಲೇ ಆಗಲಿ ಅನುಭವಾಧಾರದಿಂದಲೇ ಆಗಲಿ ಹುಟ್ಟಿಬರುವ ಎಲ್ಲ ಪ್ರಶ್ನೆಗಳಿಗೂ ಗೀತೆಯು ಸಮಾಧಾನ ಹೇಳಬಲ್ಲದ್ದಾಗಿದೆ.

"ಹಿಂದೂ ಮತವು ಸಮುದ್ರದಂಥಾದ್ದು" ಎಂದು ಗೋಲ್‌ಡ್‌ಸ್ಟಕರ್ (Theodore Goldstucker) ಎಂಬ ವಿದ್ವಾಂಸ ಹೇಳಿದ್ದು ಭಗವದ್ಗೀತೆಗೂ ಅನ್ವಯಿಸತಕ್ಕದ್ದಾಗಿದೆ. ಸಮುದ್ರದಿಂದ ಎಳೆಯಮಕ್ಕಳೂ ಸಂತೋಷಪಡುತ್ತಾರೆ. ಅದರ ದಡದ ಮರಳಿನಲ್ಲಿ ಆಟವಾಡಿ ಕುಣಿಯುತ್ತಾರೆ. ಅಲ್ಲಿಯ ಶಂಖ ಕಪ್ಪೆಚಿಪ್ಪುಗಳ ಮಾಟವನ್ನು ನೋಡಿ ನಲಿಯುತ್ತಾರೆ. ಅಲೆಗಳ ಬಡಿದಾಟದಿಂದ ಬೆರಗಾಗುತ್ತಾರೆ. ದೊಡ್ಡವರು ಅಲೆಗಳ ಎರಚಲಿನಲ್ಲಿ ಮಿಂದು ಸುಖಿಸುತ್ತಾರೆ. ದಿಗಂತದವರೆಗೂ ಕಣ್ಣುಚಾಚಿ ಧ್ಯಾನಮಗ್ನರಾಗುತ್ತಾರೆ. ಹಡಗು ದೋಣಿಗಳಲ್ಲಿ ಪ್ರಯಾಣಮಾಡಬಯಸುತ್ತಾರೆ. ತಂಗಾಳಿಗೆ ಮೈಯೊಡ್ಡುತ್ತಾರೆ. ಇದು ಸಾಮಾನ್ಯರ ಮಾತಾಯಿತು. ಸಾಹಸಿಗಳಾದ ನಾವಿಕರಾದರೋ ಆ ಜಲರಾಶಿಯಲ್ಲಿ ಮುಳುಗಿ ತಳಮುಟ್ಟಿ ಅಲ್ಲಿಂದ ಮುತ್ತು ಹವಳ ರತ್ನಗಳನ್ನೆತ್ತಿ ತರುತ್ತಾರೆ. ಹಿಂದೂ ಮತವೂ ಭಗವದ್ಗೀತೆಯೂ ಹಾಗೆ. ಮಾರಮ್ಮ ಗಂಗಮ್ಮರ ಭಕ್ತರಿಂದ ಮೊದಲಾಗಿ, ಕೋಳಿ ಕೋಣ ಬಲಿಕೊಡುವವರಿಂದ ಮೊದಲಾಗಿ, ನಿರ್ಗುಣ-ನಿರಾಕಾರವಸ್ತುವನ್ನು ಸಾಕ್ಷಾತ್ಕಾರಮಾಡಿಕೊಳ್ಳುವ ಮಹಾಮೇಧಾವಿಗಳವರೆಗೂ ಎಲ್ಲ ದರ್ಜೆಗಳ ಎಲ್ಲ ಅಂತಸ್ತುಗಳ ಎಲ್ಲ ಯೋಗ್ಯತೆಗಳ ಜನರಿಗೂ ಗೀತೆಯು ಅವರವರ ಮನೋಬುದ್ಧಿಸಂಸ್ಕಾರಗಳಿಗೆ ತಕ್ಕಂತೆ ಆತ್ಮೋದ್ಧಾರದ ಸಂತೃಪ್ತಿಯನ್ನು ಒದಗಿಸುತ್ತದೆ.

ಗೀತೆಯು ಸರ್ವಾಂಗಸಂಪೂರ್ಣವಾದ ಸಾರ್ಥಕಜೀವನದರ್ಶನ. ಮನುಷ್ಯಜೀವನದ ಯಾವ ಭಾಗವನ್ನೂ ಅದು ಗಣನೆಗೆ ತೆಗೆದುಕೊಳ್ಳದೆ ಬಿಟ್ಟಿಲ್ಲ; ಮನುಷ್ಯಸ್ವಭಾವದ ಯಾವ ಪಾರ್ಶ್ವವನ್ನೂ ಅದು ಪರ್ಯಾಲೋಚಿಸದೆ ಬಿಟ್ಟಿಲ್ಲ; ಮನುಷ್ಯಯೋಗ್ಯತೆಯ ಯಾವ ಮಟ್ಟದವರ ಬಗೆಗೂ ಅದು ಹಿತಚಿಂತನೆ ಮಾಡದೆ ಬಿಟ್ಟಿಲ್ಲ. ಅದು ಸರ್ವತೋಮುಖವಾಗಿ ಸರ್ವಾಂಗಪಟುವಾಗಿರುವ ತತ್ತ್ವಕಲಾಪ. ಅದರ ಅಂತರಂಶಗಳಲ್ಲಿ ಅನ್ಯೋನ್ಯವ್ಯಾಘಾತವಿಲ್ಲದೆ ಎಲ್ಲವೂ ಸುಸಂಗತಗಳಾಗಿವೆ. ಯಾರಾದರೂ ತನ್ನ ಯಾವ

ಪ್ರಶ್ನೆಗಾದರೂ ಅದರಲ್ಲಿ ಉತ್ತರ ದೊರೆಯಲಿಲ್ಲವೆಂದು ಭಾವಿಸುವಂತೆ ಆದಾಗ ಆತನು ನಿರಾಶನಾಗಬಾರದು. ಪುನಃಪುನಃ ಗೀತಾವಾಕ್ಯಗಳನ್ನು ಮನನಮಾಡಬೇಕು. ಸಮಗ್ರಗ್ರಂಥವೂ ಸ್ಮೃತಿಯಲ್ಲಿರುವಾಗ ಇದು ಸಾಧ್ಯವಾಗುತ್ತದೆ. ಗ್ರಂಥದ ಒಂದು ಪ್ರಕರಣದಲ್ಲಿ ಹುಟ್ಟುವ ಪ್ರಶ್ನೆಗೆ ಬೇರೊಂದು ಪ್ರಕರಣದಲ್ಲಿ ಉತ್ತರವಿರುತ್ತದೆ. ಆತನ ಮನಸ್ಸಿಗೆ ತೋರುವ ಲೋಪವು ಗ್ರಂಥದ್ದಲ್ಲ, ತನ್ನ ಗ್ರಂಥವ್ಯಾಸಂಗದಲ್ಲಿಯದು. ಆತನು ಮತ್ತೆ ಮತ್ತೆ ಮನನ ಮಾಡಬೇಕು. ಸಹನೆಯಿಂದ ಮನನ—ಸಾವಧಾನವಾದ ಮನನ—ಆತನಿಗೆ ಬೇಕಾದದ್ದು. ಅವನು ತನ್ನೊಳಗೆ ತಾನೇ ಚರ್ಚಿಸಿಕೊಳ್ಳುವುದರಿಂದ, ತನ್ನಲ್ಲಿ ತಾನೇ ಪ್ರಶ್ನೋತ್ತರ ಮಾಡಿಕೊಳ್ಳುವುದರಿಂದ ಮೊದಲು ಅವನಿಗೆ ಗ್ರಂಥದಲ್ಲಿ ಕಾಣಬಾರದಿರುವ ಅಂಶಗಳು ಕ್ರಮೇಣ ಅವನಲ್ಲಿ ಸ್ಫುರಿಸಿ ಅವನ ಶಂಕೆಗಳನ್ನು ಪರಿಹರಿಸುತ್ತವೆ. ಈ ಸಂತತ ಮನನವು ಶ್ರದ್ಧಾವಂತನಿಗೆ ಮಾತ್ರ ಸಾಧ್ಯವಾಗುತ್ತದೆ.

> ಶ್ರದ್ಧಾವಾನ್ ಲಭತೇ ಜ್ಞಾನಮ್ ॥
> ಯೋ ಯಚ್ಛ್ರದ್ಧಃ ಸ ಏವ ಸಃ ॥
> ಶ್ರದ್ಧಾ ಹಿ ಪರಮಾ ಗತಿಃ ॥

ಶ್ರದ್ಧೆಯಿಲ್ಲದವನಿಗೆ ಬುದ್ಧಿಭ್ರಾಂತಿ ತಪ್ಪದು. ಗೀತೆಯು ಸರ್ವಾಂಶಪೂರ್ಣವೂ ಸರ್ವಸಮಂಜಸವೂ ಸರ್ವಸಮರಸವೂ ಆದ ಜಗಜ್ಜೀವೇಶ್ವರತತ್ತ್ವನಿರೂಪಣೆ. ಅದರ ಬಳಿ ನಾವು ಹೋಗುವಾಗ ಭಕ್ತಿಶ್ರದ್ಧೆಗಳಿಲ್ಲದವರಾದರೆ ಮೈಲಿಗೆಯಲ್ಲಿ ಗುಡಿಗೆ ಹೋದಂತೆ; ಅದು ವ್ಯರ್ಥಪ್ರಯಾಸ.

ಶ್ರದ್ಧೆಯುಳ್ಳವನಿಗೆ ಗೀತೆಯಿಂದ ಲಭಿಸುವ ಉಪದೇಶವನ್ನು ಸಂಗ್ರಹಿಸಿ ಹೇಳಬೇಕೆಂದರೆ ಅದನ್ನು ಈಶೋಪನಿಷತ್ತಿನ ಈ ವಾಕ್ಯದಲ್ಲಿ ಹೇಳಬಹುದು:

> ಕುರ್ವನ್ನೇವೇಹ ಕರ್ಮಾಣಿ
> ಜಿಜೀವಿಷೇಚ್ಛತಗ್ಂ ಸಮಾಃ ॥

“ಕರ್ತವ್ಯಗಳಾದ ಕಾರ್ಯಗಳನ್ನು ಮಾಡಿಕೊಂಡು ನೂರಾರು ವರ್ಷ ಬದುಕಬಯಸು.”

ಎಂದರೆ ಜೀವನ ಕೆಟ್ಟದ್ದಲ್ಲ. ಅದರ ವಿಷಯದಲ್ಲಿ ಜಿಹಾಸೆಪಡತಕ್ಕದ್ದಲ್ಲ. ಮತ್ತು ಅದರಲ್ಲಿರುವ ಕಷ್ಟಗಳನ್ನು ಎದುರಿಸಿ ಪೌರುಷದಿಂದ ಹೋರಾಡತಕ್ಕದ್ದು. ಇದೇ ಗೀತೆಯ ಉಪದೇಶ:

ತಸ್ಮಾದ್ಯುಧ್ಯಸ್ವ ಭಾರತ ॥ (೨-೧೮)
ಯುಧ್ಯಸ್ವ ವಿಗತಜ್ವರಃ ॥ (೩-೩೦)
ಯುಧ್ಯಸ್ವ ಜೇತಾಸಿ ರಣೇ... (೧೧-೩೪)

ಮರಳಿನಲ್ಲಿ ಗಾಳಿ ಬರೆಯುವ ।
ಬರಿಬೊಂಬೆಯೆ ನರನದಲ್ಲವೆನೆ ಬಾಳ್ಕೆಯದೇನ್ ॥
ಗುರಿಯೇನರ್ಥವದೇನಿದ- ।
ನರುಹುವನೀ ಗೀತೆಯೊಳ್ ಜಗದ್ಗುರು ಕೃಷ್ಣಂ

॥ ೧ ॥

ದಿನದಿನಮುಮಧರ್ಮಂ ಪೊಸ- ।
ದಣಕಿಪ್ಪುದು ಪುರುಷನಂ ಪ್ರಕೃತಿಜಮನಾತ್ಮಂ ॥
ಅನಹಂಕೃತಿಯಿಂದೆದುರಿಪ- ।
ರಣಧೀರತೆಯಿಂದಲಹುದು ಜನ್ಮ ಸಫಲಂ

॥ ೨ ॥

ಯುಧ್ಯಸ್ವ ಧರ್ಮಪಕ್ಷದಿ ।
ಶುದ್ಧಾಂತಃಕರಣನಾಗಿ ಪಾಪವ ಬಡಿಯಲ್ ॥
ಸಿದ್ಧಂ ನಿಲ್ವುದೇ ವಿಜಯಂ ।
ಸದ್ಧರ್ಮೋದ್ಯೋಗದಿಂದೆ ಜನ್ಮಂ ಸಫಲಂ

॥ ೩ ॥

ಜೀವನದೊಳಿಟ್ಟ ಗೌರವ- ।
ಭಾವಮೆ ಜನಧರ್ಮಮೂಲಬಲಮೀಶ್ವರಲೀ- ॥
ಲಾವಿಭವಾಂಶಮೆ ಜೀವಂ ।
ದೈವಿಕಮದು ಪಾಶವಿಕಮದೆನಿಸಲಧರ್ಮಂ

॥ ೪ ॥

ಮೃಗದೈವಮಿಶ್ರಣಂ ನರ- ।
ನಗಣಿತಕುಕ್ಷಿಗಳ ಪೊತ್ತ ಚಿಚ್ಚಕ್ಷುವವನ್ ॥
ಮೃಗದ ಕ್ಷುತ್ತಿಳಿಯುತಿರಲ್ ।
ಪ್ರಗತಿಯವಂಗಕ್ಕುಮಾತ್ಮದುನ್ನತಿಪಥದೊಳ್

॥ ೫ ॥

ತಿಳಿವಾವುದಿರಲ್ ಬಾಳ್ವೆಯ ।
ತಲೆಪೊತ್ತಿಹ ಶಿಲೆಯ ಹೊರೆಯೆ ಹೂದೊಡವಹುದೋ ॥
ಕಲೆಯನದನಂದು ಪಾರ್ಥಂ- ।
ಗೊಲವಿಂ ಕಲಿಸಿದನೆ ನಮಗೆ ಗುರುವಕ್ಕೆಂದುಂ

॥ ೬ ॥

ಮಾನುಷ್ಯಲೀಲಾರಸಿಕನತಿಮಾನುಷವೈಭವಂ ।
ಮಾನುಷಾಸ್ಪೃಷ್ಟಚಿತ್ತೇಜಂ ಕೃಷ್ಣನಿರ್ಕೆಮ್ಮ ಚಿತ್ತದೊಳ್ ॥

ಅಥ ಶ್ರೀಮದ್ಭಗವದ್ಗೀತಾಸು
ಅರ್ಜುನವಿಷಾದಯೋಗೋ ನಾಮ
ಪ್ರಥಮೋಽಧ್ಯಾಯಃ

ಧೃತರಾಷ್ಟ್ರ ಉವಾಚ

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ

॥ ೧ ॥

ಸಂಜಯ ಉವಾಚ

ದೃಷ್ಟ್ವಾ ತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್

॥ ೨ ॥

ಪಶ್ಯೈತಾಂ ಪಾಂಡುಪುತ್ರಾಣಾಮಾಚಾರ್ಯ ಮಹತೀಂ ಚಮೂಮ್
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ

॥ ೩ ॥

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ ।
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ

॥ ೪ ॥

ಧೃಷ್ಟಕೇತುಶ್ಚೇಕಿತಾನಃ ಕಾಶಿರಾಜಶ್ಚ ವೀರ್ಯವಾನ್ ।
ಪುರುಜಿತ್ ಕುಂತಿಭೋಜಶ್ಚ ಶೈಬ್ಯಶ್ಚ ನರಪುಂಗವಃ

॥ ೫ ॥

ಯುಧಾಮನ್ಯುಶ್ಚ ವಿಕ್ರಾನ್ತ ಉತ್ತಮೌಜಾಶ್ಚ ವೀರ್ಯವಾನ್ ।

ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ

॥ ೬ ॥

ಅಸ್ಮಾಕಂ ತು ವಿಶಿಷ್ಟಾ ಯೇ ತಾನ್ನಿಬೋಧ ದ್ವಿಜೋತ್ತಮ ।
ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ

॥ ೭ ॥

ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಶ್ಚ ಸಮಿತಿಂಜಯಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವ ಚ

॥ ೮ ॥

ಅನ್ಯೇ ಚ ಬಹವಃ ಶೂರಾ ಮದರ್ಥೇ ತ್ಯಕ್ತಜೀವಿತಾಃ ।
ನಾನಾಶಸ್ತ್ರಪ್ರಹರಣಾಃ ಸರ್ವೇ ಯುದ್ಧವಿಶಾರದಾಃ

॥ ೯ ॥

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್

॥ ೧೦ ॥

ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ ।
ಭೀಷ್ಮಮೇವಾಭಿರಕ್ಷಂತು ಭವಂತಃ ಸರ್ವ ಏವ ಹಿ

॥ ೧೧ ॥

ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।
ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್

॥ ೧೨ ॥

ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।
ಸಹಸೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್

॥ ೧೩ ॥

ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ

॥ ೧೪ ॥

ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ

॥ ೧೫ ॥

ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ನಕುಲಸ್ಸಹದೇವಶ್ಚ ಸುಘೋಷಮಣಿಪುಷ್ಪಕೌ

॥ ೧೬ ॥

ಕಾಶ್ಯಶ್ಚ ಪರಮೇಷ್ವಾಸಃ ಶಿಖಂಡೀ ಚ ಮಹಾರಥಃ ।
ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ

॥ ೧೭ ॥

ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ ।
ಸೌಭದ್ರಶ್ಚ ಮಹಾಬಾಹುಃ ಶಂಖಾನ್ ದಧ್ಮುಃ ಪೃಥಕ್ಪೃಥಕ್

॥ ೧೮ ॥

ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ ।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್

॥ ೧೯ ॥

ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ ।
ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ

॥ ೨೦ ॥

ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ।

ಅರ್ಜುನ ಉವಾಚ

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ

॥ ೨೧ ॥

ಯಾವದೇತಾನ್ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್ ।
ಕೈರ್ಮಯಾ ಸಹ ಯೋದ್ಧವ್ಯಮಸ್ಮಿನ್ ರಣಸಮುದ್ಯಮೇ

॥ ೨೨ ॥

ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ ಸಮಾಗತಾಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ

॥ ೨೩ ॥

ಸಂಜಯ ಉವಾಚ

ಏವಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಮ್

॥ ೨೪ ॥

ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಮ್ ।
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ

॥ ೨೫ ॥

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೄನ್ ಅಥ ಪಿತಾಮಹಾನ್ ।
ಆಚಾರ್ಯಾನ್ಮಾತುಲಾನ್ಭ್ರಾತೄನ್ ಪುತ್ರಾನ್ಪೌತ್ರಾನ್ಸಖೀಂಸ್ತಥಾ

॥ ೨೬ ॥

ಶ್ವಶುರಾನ್ಸುಹೃದಶ್ಚೈವ ಸೇನಯೋರುಭಯೋರಪಿ ।
ತಾನ್ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ಬಂಧೂನವಸ್ಥಿತಾನ್

॥ ೨೭ ॥

ಕೃಪಯಾ ಪರಯಾಽಽವಿಷ್ಟೋ ವಿಷೀದನ್ನಿದಮಬ್ರವೀತ್ ।

ಅರ್ಜುನ ಉವಾಚ

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್

॥ ೨೮ ॥

ಸೀದನ್ತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ।
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ

॥ ೨೯ ॥

ಗಾಂಡೀವಂ ಸ್ರಂಸತೇ ಹಸ್ತಾತ್ತ್ವಕ್ಚೈವ ಪರಿದಹ್ಯತೇ ।
ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ

॥ ೩೦ ॥

ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ।
ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ

॥ ೩೧ ॥

ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ।
ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ

॥ ೩೨ ॥

ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಸ್ಸುಖಾನಿ ಚ ।
ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ

॥ ೩೩ ॥

ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ ।
ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬಂಧಿನಸ್ತಥಾ

॥ ೩೪ ॥

ಏತಾನ್ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ

॥ ೩೫ ॥

ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।
ಪಾಪಮೇವಾಽಽಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ

॥ ೩೬ ॥

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ಸ್ವಬಾಂಧವಾನ್ ।
ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ

॥ ೩೭ ॥

ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್

॥ ೩೮ ॥

ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಮ್ ।
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ

॥ ೩೯ ॥

ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ ।
ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ

॥ ೪೦ ॥

ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ

॥ ೪೧ ॥

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ

॥ ೪೨ ॥

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।
ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ

॥ ೪೩ ॥

ಉತ್ಸನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।
ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ

॥ ೪೪ ॥

ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಮ್ ।
ಯದ್ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ

॥ ೪೫ ॥

ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್

॥ ೪೬ ॥

ಸಂಜಯ ಉವಾಚ

ಏವಮುಕ್ತ್ವಾಽರ್ಜುನಃ ಸಂಖ್ಯೇ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ

॥ ೪೭ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಅರ್ಜುನವಿಷಾದಯೋಗೋ ನಾಮ ಪ್ರಥಮೋಽಧ್ಯಾಯಃ

ಸೂಚನೆ

ಭರತಕುಲದುಭಯವಾಹಿನಿ ।
ಕುರುರಂಗದಿ ಸೇರಿ ಸಮರಶಂಖಂ ಮೊಳಗಲ್ ॥
ನರನುತ್ಸಹಿಸದೆ ಕೃಷ್ಣಂ- ।
ಗೊರೆದಂ ತನಗಾದ ಧರ್ಮಸಂಕಟಭಯಮಂ ॥

ಸಾರಾಂಶ

ಯುದ್ಧಕ್ಕಾಗಿ ಕೌರವ ಪಾಂಡವ ಸೇನೆಗಳು ಧರ್ಮಕ್ಷೇತ್ರವೆನಿಸಿದ ಕುರುರಂಗದಲ್ಲಿ ನೆರೆದಿರುವಾಗ ಅರ್ಜುನನು ಗುರುಜನರನ್ನೂ ಬಂಧುಜನರನ್ನೂ ಎದುರಿಗೆ ಕಂಡು ಕಾರುಣ್ಯವಶನಾದ; ಸ್ವಜನಹತ್ಯೆಯಿಂದ ಲಭಿಸಬಹುದಾದ ರಾಜ್ಯಾದಿಭೋಗ ತನಗೆ ಬೇಡವೆಂದ: ಹೀಗೆ "ಶೋಕಸಂವಿಗ್ನಮಾನಸ" ನಾಗಿ, ಬಿಲ್ಲುಬತ್ತಳಿಕೆಗಳನ್ನು ಕೆಳಗೆಸೆದ; ಯುದ್ಧಮಾಡೆನೆಂದು ಶ್ರೀಕೃಷ್ಣನಲ್ಲಿ ಅರಿಕೆ ಮಾಡಿದ.

ಪ್ರಕರಣ ೨

ಅಧ್ಯಾಯ ೧ - ಅರ್ಜುನವಿಷಾದಯೋಗವೆಂಬ ಪ್ರಾಕೃತಕಾರುಣ್ಯಯೋಗ

ಭಗವದ್ಗೀತೆಯ ಮೊದಲನೆಯ ಅಧ್ಯಾಯವು ಕಥೆ; ಉಪದೇಶವಲ್ಲ. ಆ ಕಥೆಯು ಗೀತೋಪದೇಶದ ಕಾರಣವನ್ನು ತಿಳಿಸುತ್ತದೆ. ಗ್ರಂಥದ ತಾತ್ಪರ್ಯವೇನೆಂಬುದು ಅದರ ಉಪಕ್ರಮಸಂದರ್ಭದಿಂದ ಗೊತ್ತಾಗುತ್ತದೆಯಾದ್ದರಿಂದ ಈ ಅಧ್ಯಾಯದಲ್ಲಿ ನೇರವಾಗಿ ಉಪದೇಶವಿಲ್ಲದಿದ್ದರೂ ಇದು ಉಪದೇಶದ ಸ್ವರೂಪಕ್ಕೆ ಸೂಚನೆಯಾಗಿದೆ. ಇಲ್ಲಿಯ ಕಥೆ ಎರಡು ಭಾಗಗಳಲ್ಲಿದೆ: (೧) ಯುದ್ಧಸನ್ನಾಹದ ವರ್ಣನೆ, (೨) ಅರ್ಜುನನ ಯುದ್ಧಜಿಹಾಸೆಯ ವರ್ಣನೆ.

(೧) ಯುದ್ಧಸನ್ನಾಹ

ಹಸ್ತಿನಾಪುರದ ರಾಜ ಧೃತರಾಷ್ಟ್ರನು ತನ್ನ ಮಕ್ಕಳಾದ ಕೌರವರೂ ತನ್ನ ತಮ್ಮನ ಮಕ್ಕಳಾದ ಪಾಂಡವರೂ ಯುದ್ಧಭೂಮಿಯಲ್ಲಿ ಏನೇನು ಮಾಡಿದರು?—ಎಂದು ಸಂಜಯನನ್ನು ಕೇಳುತ್ತಾನೆ.

ಅದಕ್ಕುತ್ತರವಾಗಿ ಸಂಜಯ ಹೇಳಿದ:— “ದೊರೆಯೆ, ನಿನ್ನ ಮಗ ದುರ್ಯೋಧನನು ಪಾಂಡವಸೈನ್ಯದ ಸಿದ್ಧತೆಯನ್ನು ನೋಡಿ ದ್ರೋಣಾಚಾರ್ಯನ ಬಳಿಗೆ ಬಂದು ಹೀಗೆ ಬಿನ್ನಯಿಸಿದ: ‘ಗುರುವೆ, ಎರಡು ಪಕ್ಷಗಳಲ್ಲಿಯೂ ಮಹಾಮಹಾ ಶೂರರುಗಳಿದ್ದಾರೆ. ಆದರೆ ಭೀಷ್ಮನ ನಾಯಕತ್ವದಲ್ಲಿರುವ ನಮ್ಮ ಬಲ ಸಾಲದು. ಭೀಮನ ನಾಯಕತ್ವದಲ್ಲಿ ಶತ್ರುಬಲ ಬೇಕಾದಷ್ಟಿದೆ. ಆದದ್ದರಿಂದ ನಮ್ಮವರಾದ ನೀವೆಲ್ಲ ಭೀಷ್ಮನ ಸಂರಕ್ಷಣೆಯನ್ನು ನೋಡಿಕೊಳ್ಳಬೇಕಾದದ್ದು:’”

> ಅಪರ್ಯಾಪ್ತಂ ತದಸ್ಮಾಕಂ
> ಬಲಂ ಭೀಷ್ಮಾಭಿರಕ್ಷಿತಮ್ ।
> ಪರ್ಯಾಪ್ತಂ ತ್ವಿದಮೇತೇಷಾಂ
> ಬಲಂ ಭೀಷ್ಮಾಭಿರಕ್ಷಿತಮ್ ॥
> ಭೀಷ್ಮಮೇವಾಭಿರಕ್ಷನ್ತು
> ಭವನ್ತಃ ಸರ್ವ ಏವ ಹಿ ॥

ದುರ್ಯೋಧನನು ಪ್ರಥಮದಲ್ಲಿ ಭೀಷ್ಮರಿಗೆ ಸೇನಾನಾಯಕ ಪಟ್ಟವನ್ನು ಕಟ್ಟಿದ್ದನಷ್ಟೇ? ಅವರನ್ನು ಬಿಟ್ಟು ಅವನು ಮೊದಲು ದ್ರೋಣನ ಬಳಿಗೆ ಹೋದದ್ದೇಕೆ? ದುರ್ಯೋಧನನ ಮನಸ್ಸಿನಲ್ಲಿ ಏನೋ ಒಂದು ಶಂಕೆಯಿತ್ತೆಂದು ಅವನ ಮಾತಿನಿಂದ ತೋರುತ್ತದೆ. (೧) ಭೀಷ್ಮನು ಪಾಂಡವಪಕ್ಷಪಾತಿ; ಆದದ್ದರಿಂದ ಅವನ ಕೈ ಬಿರುಸಾಗದೆಹೋದೀತು—ಎಂದೆ? (೨) ಭೀಷ್ಮ ಮುದುಕ; ಅವನ ಕೈ ತ್ರಾಣವಿಲ್ಲದ್ದು—ಎಂದೆ? (೩) ಭೀಷ್ಮನು ಶೂರನಾದರೂ ಭೀಮನು ಆತನಿಗಿಂತ ಸಮರ್ಥ—ಎಂದೆ? (೪) ಅಥವಾ ಈ ಮೂರೂ ಅಲ್ಲದೆ, ದ್ರೋಣನು ಭೀಷ್ಮಸಮನಾದರೂ ಮೊದಲ ಪಟ್ಟವನ್ನು ಭೀಷ್ಮನಿಗೆ ಕಟ್ಟಿದ್ದರಿಂದ ದ್ರೋಣನ ಮನಸ್ಸಿನಲ್ಲಿ ಮತ್ಸರದ ಮುನಿಸೇನಾದರೂ ಇದ್ದರೆ ಆ ಅಸಮಾಧಾನವನ್ನು ಹೋಗಲಾಡಿಸುವುದಕ್ಕೋಸ್ಕರ ದ್ರೋಣನಿಗೆ ಮುಖಸ್ತುತಿಮಾಡಬೇಕೆಂದೆ? (೫) ಹಾಗೂ ಅಲ್ಲದೆ, ಭೀಷ್ಮನನ್ನು ಉಪಚಾರಕ್ಕಾಗಿ ಅಧಿಪತ್ಯದಲ್ಲಿಟ್ಟಿದ್ದರೂ ತನ್ನ ಅಂತರಂಗದ ಗೌರವ ಭಾವ ವಿಶ್ವಾಸಗಳು ದ್ರೋಣಾಚಾರ್ಯನಲ್ಲಿಯೇ ಹೆಚ್ಚೆಂದು ಸೂಚಿಸಿ, ದ್ರೋಣನ ಸ್ವಾಭಿಮಾನವನ್ನು ಕೆರಳಿಸಿದರೆ ತನಗೆ ಲಾಭವೆಂದೆ? ಹೀಗೆ ದುರ್ಯೋಧನನ ದ್ರೋಣಪ್ರಾರ್ಥನೆಗೆ ಐದಾರು ಕಾರಣಗಳನ್ನು ಊಹಿಸಲಾಗುತ್ತದೆ. ಕಾರಣಾವೆಂತಾದರಿದ್ದುಕೊಳ್ಳಲಿ, ದುರ್ಯೋಧನನ ಮನಸ್ಸಂತೂ

ನಿಶ್ಶಂಕವಾಗಿರಲಿಲ್ಲ; ಯಾವುದೋ ಅಳುಕಿನಿಂದ ಅಲೆಯುತ್ತಿತ್ತು. ಈ ಊಹೆ ಮುಂದೆ ೧೯ನೆಯ ಶ್ಲೋಕದಿಂದ ಸ್ಥಿರಪಡುತ್ತದೆ:

ಸ ಘೋಷೋ ಧಾರ್ತರಾಷ್ಟ್ರಾಣಾಂ
ಹೃದಯಾನಿ ವ್ಯದಾರಯತ್ ॥

ಪಾಂಡವಪಕ್ಷದಿಂದ ಹೊರಟ ಶಂಖನಾದದಿಂದ ಕೌರವರ ಎದೆ ಬಿರಿಯಿತು.

ದುರ್ಯೋಧನನ ಸಂದೇಹವನ್ನು ಭೀಷ್ಮರು ಊಹಿಸಿ ತಿಳಿದುಕೊಂಡು ಆ ಶಂಕೆಯನ್ನು ಪರಿಹರಿಸುವ ಉದ್ದೇಶದಿಂದಲೋ ಎಂಬಂತೆ ಉಚ್ಚಸ್ವರದಿಂದ ಸಿಂಹಗರ್ಜನೆ ಮಾಡಿ ಶಂಖವನ್ನೂದಿದರು. ಅದು ಯುದ್ಧಸಿದ್ಧತೆಯ ಸೂಚನೆ. ಅದಕ್ಕೆ ಪ್ರತ್ಯುತ್ತರವಾಗಿ ಎಲ್ಲ ನಾಯಕರೂ ಬೇರೆಬೇರೆಯಾಗಿ ಶಂಖಧ್ವನಿ ಮಾಡಿದರು:

ಶಂಖಾನ್ ದಧ್ಮುಃ ಪೃಥಕ್ಪೃಥಕ್ ॥

ಈ ಯುದ್ಧಾಹ್ವಾನವೇ ಕಥೆಯಲ್ಲಿ ಮೊದಲನೆಯ ಘಟ್ಟ.

(೨) ಅರ್ಜುನನ ಯುದ್ಧಜಿಹಾಸೆ

ಆಗ—ಶಸ್ತ್ರಾಸ್ತ್ರವಿನಿಯೋಗಕ್ಕೆ ತಕ್ಕ ಘಳಿಗೆ ಬಂದಿದ್ದಾಗ—ಅರ್ಜುನನು ಕೃಷ್ಣನನ್ನು ಕುರಿತು—

ಸೇನಯೋರುಭಯೋರ್ಮಧ್ಯೇ
ರಥಂ ಸ್ಥಾಪಯ ಮೇಽಚ್ಯುತ ॥

"ಅಚ್ಯುತ, ಎರಡು ಸೈನ್ಯಗಳಿಗೂ ನಡುವೆ ರಥವನ್ನು ನಿಲ್ಲಿಸು. ಯಾರೊಡನೆ ನಾನು ಯುದ್ಧ ಮಾಡಬೇಕಾಗಿದೆಯೋ, ಯಾರುಯಾರು ದುರ್ಬುದ್ಧಿಯಾದ ದುರ್ಯೋಧನನಿಗೆ ಬೆಂಬಲಿಗರಾಗಿ ನಿಂತಿದ್ದಾರೆಯೋ ಅವರನ್ನು ನಾನು ಕಣ್ಣಾರ ನೋಡಿಯೇನು" —ಎಂದು ಬಿನ್ನಯಿಸಿದ. ಕೃಷ್ಣನು ರಥವನ್ನು ಹಾಗೆ ನಿಲ್ಲಿಸಿ, "ಅರ್ಜುನ, ಕೌರವಸೇನೆಯನ್ನು ನೋಡು" ಎಂದ. ಅರ್ಜುನ ನೋಡಿದ. ಅಲ್ಲಿ ಎಲ್ಲರೂ ತನಗೆ ಪ್ರೀತಿಪಾತ್ರರಾಗಬೇಕಾದವರೇ. ತಂದೆಗೆ ಸಮಾನರಾದವರು, ಗುರುಗಳು, ಸೋದರಮಾವಂದಿರು, ಅಣ್ಣತಮ್ಮಂದಿರು, ಮಕ್ಕಳು, ಮೊಮ್ಮಕ್ಕಳು, ಸ್ನೇಹಿತರು, ಬಂಧುಗಳು—ಒಟ್ಟಿನಲ್ಲಿ ಆ ಸರ್ವರೂ ಸ್ವಜನರು. ಅವರನ್ನು ನೋಡಿದ ಕೂಡಲೆ ಅರ್ಜುನನಿಗೆ ಕರುಳ ಸಂಬಂಧದ ಸ್ಮರಣೆ ಬಂತು. ಬಂಧುಪ್ರೇಮ ಉಕ್ಕಿಬಂತು. ಅವರೆಲ್ಲ ಭಕ್ತಿ ಸ್ನೇಹ ವಾತ್ಸಲ್ಯಗಳಿಗೆ ತಕ್ಕವರೆಂಬ ಅರಿವು ತಲೆದೋರುತ್ತಲೇ ಅರ್ಜುನನ ಹೃದಯ ಕರಗಿತು, ಮೈ ಕುಸಿಯಿತು, ಮುಖ ಬಾಡಿತು, ಧನುಸ್ಸು ಕೈಯಿಂದ ಜಾರಿತು. ಮನಸ್ಸಿನ ದಾರ್ಢ್ಯ ಹಾರಿಹೋಯಿತು.

ಏತಾನ್ನ ಹನ್ತುಮಿಚ್ಛಾಮಿ
ಘ್ನತೋಽಪಿ ಮಧುಸೂದನ ॥

"ಕೃಷ್ಣ, ಇವರು ನನ್ನನ್ನು ಕೊಂದರೆ ಕೊಲ್ಲಲಿ; ನಾನು ಇವರನ್ನು ಕೊಲ್ಲಲೊಲ್ಲೆ" —ಹೀಗೆ ತೀರ್ಮಾನಿಸಿದ ಅರ್ಜುನ.

ಈ ನಡವಳಿಕೆ ಅನಿರೀಕ್ಷಿತವಾಗಿದ್ದದ್ದು. ಅರ್ಜುನ ಯುದ್ಧಕ್ಕೇನೂ ಹೊಸಬನಲ್ಲ; ಸೈನ್ಯಗಳನ್ನು ಕಂಡದ್ದು ಅಂದೇ ಮೊದಲನೆಯ ಸಾರಿಯಲ್ಲ. ನೂರು ಯುದ್ಧ ಗೆದ್ದು ಪ್ರಸಿದ್ಧನಾಗಿದ್ದವನು ಅರ್ಜುನ. ಯುದ್ಧದ ಘೋರ ಕ್ರೂರಗಳು ಅವನಿಗೆ ಅಪರಿಚಿತ ಸಂಗತಿಗಳಲ್ಲ.

ಎರಡನೆಯದಾಗಿ, ತನ್ನೆದುರಾಳುಗಳು ತನ್ನವರೆಂಬ ಸಂಗತಿ ಅವನಿಗೆ ತಿಳಿಯದೆ ಇದ್ದದ್ದಲ್ಲ. ನೂರಾರು ಸಾರಿ ಅವನು ದುರ್ಯೋಧನಾದಿಗಳೂ ಶಲ್ಯಾದಿಗಳೂ ಭೀಷ್ಮಾದಿಗಳೂ ತನಗೆ ಬಾಂಧವರು, ಪೂಜ್ಯರು ಎಂಬುದನ್ನು ನೆನಪಿಗೆ ತಂದುಕೊಂಡಿದ್ದವನು. ಅಷ್ಟುಕಾಲವೂ ಅವನ ಹೃದಯದಲ್ಲಿ ತೋರದಿದ್ದ ಕರುಣೆ ಆಗ ಹೇಗೆ ಉಕ್ಕಿಬಂತು?

ಇದು ವಿಚಾರಾರ್ಹವಾದ ಸಂಗತಿ. ವಸ್ತುವು ದೂರದಲ್ಲಿರುವಾಗ ಮನಸ್ಸಿನ ಊಹೆ ಕಲ್ಪನೆಗಳಿಂದ ನಾವು ಮಾಡಿಕೊಂಡಿರುವ ಅಂತರಂಗಭಾವನೆಗಳೆಲ್ಲ ಆ ವಸ್ತು ಹತ್ತಿರಕ್ಕೆ ಬಂದಾಗ ಹಠಾತ್ತಾಗಿ ಬದಲಾಯಿಸುತ್ತವೆ. ಸ್ನೇಹಿತರೊಬ್ಬರಿಗಾದ ಪ್ರಿಯ ವಿಯೋಗವನ್ನು ನಾವು ಕೇಳಿ ಚಿಂತಿಸಿ ಅದರ ಸ್ವಭಾವವನ್ನು ಎಷ್ಟೇ ಕಂಡುಕೊಂಡೆವೆಂದಿದ್ದರೂ ಅಂಥಾದ್ದು ನಮಗೇ ಒದಗಿಬಂದಾಗ ಅದು ಹೊಸ ವಿಪತ್ತೆಂಬಂತೆ ಸಂಕಟಪಡುತ್ತೇವೆ. ಇದೇ ಪ್ರತ್ಯಕ್ಷತೆಯಲ್ಲಿರುವ ಶಕ್ತಿ. ವಸ್ತುವರ್ಣನ-ಶ್ರವಣದಿಂದ ಆಗುವುದಕ್ಕಿಂತ ಹೆಚ್ಚಾಗಿ ವಸ್ತುಪ್ರತ್ಯಕ್ಷತೆಯಿಂದ ಹೃದಯಭಾವವು ಉದ್ರೇಕಗೊಳ್ಳುತ್ತದೆ. ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಆದದ್ದು ಒಂದಂಶದಲ್ಲಿ ಹೊಸ ಅನುಭವ.

ಹತ್ವಾ ಸ್ವಜನಮಾಹವೇ

"ಸ್ವಜನ" ಎಂಬ (೧ – ೨೮, ೩೧, ೩೭, ೪೫) ಮಾತಿನಲ್ಲಿಯ "ಸ್ವ" ಎಂಬ ಭಾವ ಗುರು ಬಂಧು ಸಂಮುಖದಲ್ಲಿ ಉತ್ಕಟವಾಯಿತು. ಅಂಥಾದ್ದು ಸ್ವಾನುಭವದ ಪರಮಪರಿಣಾಮ. ಕುರುಕ್ಷೇತ್ರದ ದೃಶ್ಯವು ಅರ್ಜುನನಲ್ಲಿ ಅಡಗಿದ್ದ ಸ್ವತ್ವಾನುಭವವನ್ನು ಉದ್ರೇಕಗೊಳಿಸಿತು.

ಈ ಸಂದರ್ಭದಲ್ಲಿ ಪ್ರತ್ಯಕ್ಷಾನುಭವದ ಪರಿಣಾಮತೀವ್ರತೆಗೆ ಕುರುಡುದೊರೆ ಧೃತರಾಷ್ಟ್ರನ ಸಂದರ್ಭವನ್ನು ನಾವು ಜ್ಞಾಪಕಕ್ಕೆ ತಂದುಕೊಳ್ಳಬಹುದು. ಯುದ್ಧಭೂಮಿಯ ದೃಶ್ಯವನ್ನು ಕಣ್ಣಾರ ನೋಡುವ ಶಕ್ತಿಯನ್ನು ಆತನಿಗೆ ಕೊಡುವುದಾಗಿ ವ್ಯಾಸರು ಹೇಳಿದರು:

ಯದಿ ಚೇಚ್ಛಸಿ ಸಂಗ್ರಾಮಂ
ದ್ರಷ್ಟುಮೇನಂ ವಿಶಾಂಪತೇ ।
ಚಕ್ಷುರ್ದದಾನಿ ತೇ ಪುತ್ರ
ಯುದ್ಧಮೇತನ್ನಿಶಾಮಯ ॥

ಅದಕ್ಕೆ ಧೃತರಾಷ್ಟ್ರ ಹೀಗೆ ಉತ್ತರಕೊಟ್ಟ:

> ನ ರೋಚಯೇ ಜ್ಞಾತಿವಧಂ
> ದ್ರಷ್ಟುಂ ಬ್ರಹ್ಮರ್ಷಿಸತ್ತಮ ।
> ಯುದ್ಧಮೇತತ್ತ್ವಶೇಷಣ
> ಶ್ರುಣುಯಾಂ ತವ ತೇಜಸಾ ॥

"ಜ್ಞಾತಿವಧೆಯನ್ನು ಕಣ್ಣಿಂದ ನೋಡಲಾರೆ; ಆದರೆ ಯುದ್ಧವಿಷಯದಲ್ಲಿ ಕುತೂಹಲವೇನೋ ಉಂಟು. ಆದದ್ದರಿಂದ ಯುದ್ಧವೃತ್ತಾಂತವನ್ನು ಕಿವಿಯಿಂದ ಕೇಳುವಂತೆ ಅನುಗ್ರಹಿಸು." ಈ ಮಾತಿನ ಮೇರೆಗೆ ವ್ಯಾಸರು ಸಂಜಯನಿಗೆ ದೂರದಿಂದಲೇ ಯುದ್ಧ ಕಾಣುವ ಶಕ್ತಿಯನ್ನು ವರವಾಗಿ ಕೊಟ್ಟು, ಅವನು ಧೃತರಾಷ್ಟ್ರನಿಗೆ ವರದಿ ಹೇಳುವಂತೆ ಏರ್ಪಡಿಸಿದರು.

ಧೃತರಾಷ್ಟ್ರ ಅರ್ಜುನನಿಗೆ ಹಿರಿಯ; ಹಳಬ; ಹೆಚ್ಚು ಅನುಭವಶಾಲಿ. ಆದದ್ದರಿಂದಲೇ ಘೋರದ ಪ್ರತ್ಯಕ್ಷದರ್ಶನ ಬೇಡವೆಂದ. ಕಿವಿಗಿಂತ ಕಣ್ಣಿನ ಪ್ರಭಾವ ದೊಡ್ಡದು. ಕಿವಿಯಿಂದ ಸಹಿಸಲಾಗುವಷ್ಟನ್ನು ಕಣ್ಣು ಸಹಿಸಲಾರದು.

ಅರ್ಜುನನಿಗೆ ಯುದ್ಧ ಬೇಡವೆಂದು ಮನಸ್ಸಾದದ್ದಕ್ಕೆ ಆತನೇ ಹೇಳಿರುವ ಕಾರಣಗಳು ಎಲ್ಲ ಧರ್ಮಜಿಜ್ಞಾಸುಗಳಿಗೂ ವಿಚಾರಾರ್ಹವಾದವು.

1. ಸ್ವಜನಹತ್ಯೆಯಿಂದ ಶ್ರೇಯಸ್ಸಾಗದು,
2. "ನ ಕಾಂಕ್ಷೇ ವಿಜಯಮ್" —ನನಗೆ ಜಯ ಬೇಕಿಲ್ಲ.
3. "ಕಿಂ ನೋ ರಾಜ್ಯೇನ ಕಿಂ ಭೋಗೈಃ" —ರಾಜ್ಯಕ್ಕೂ ಭೋಗಕ್ಕೂ ಏನು ಬೆಲೆ?
4. "ಕಿಂ ಜೀವಿತೇನ" —ಬದುಕಿನಿಂದೇನು?
5. "ಪಾಪಮೇವಾಶ್ರಯೇದಸ್ಮಾನ್" —ಪಾಪವೇ ಯುದ್ಧದಿಂದ ನಮಗಾಗುವ ಸಂಪಾದನೆ.
6. "ಲೋಭೋಪಹತಚೇತಸಃ" —ಲೋಭಕ್ಕೆ ತುತ್ತಾಗುವುದೆ?
7. "ಕುಲಕ್ಷಯಕೃತಂ ದೋಷಮ್" —ಕುಲಕ್ಷಯಕ್ಕೆ ಕಾರಣವಾದ ದೋಷ.
8. "ಮಿತ್ರದ್ರೋಹೇ ಚ ಪಾತಕಮ್" —ಮಿತ್ರದ್ರೋಹ ಮಾಡಿದ ಪಾಪ.
9. "ಕುಲಧರ್ಮಾಃ ಪ್ರಣಶ್ಯನ್ತಿ" —ಕುಲಧರ್ಮಗಳು ಹಾಳಾದಾವು.

10. “ಧರ್ಮೇ ನಷ್ಟೇ ಅಧರ್ಮೋಽಭಿಭವತಿ” —ಲೋಕದಲ್ಲಿ ಅಧರ್ಮವು ಪ್ರಬಲವಾಗುತ್ತದೆ.
11. “ಪ್ರದುಷ್ಯನ್ತಿ ಕುಲಸ್ತ್ರಿಯಃ” —ಗೃಹಿಣಿಯರು ಕೆಡುವರು.
12. “ಜಾಯತೇ ವರ್ಣಸಂಕರಃ” —ಜಾತಿ ಕುಲಗಳ ಬೆರಕೆಯಾದೀತು.
13. “ಸಂಕರೋ ನರಕಾಯೈವ” —ಬೆರಕೆಯಿಂದ ನರಕ.
14. “ಪತನ್ತಿ ಪಿತರಃ” —ಪಿತೃದೇವತೆಗಳನ್ನು ಕೆಳಕ್ಕೆಳೆದಂತೆ.
15. “ಉತ್ಸಾದ್ಯನ್ತೇ ಜಾತಿಧರ್ಮಾಃ ಕುಲಧರ್ಮಾಶ್ಚ” —ಜಾತಿಧರ್ಮ ಕುಲಧರ್ಮಗಳು ಹಾಳಾಗಿಹೋಗುತ್ತವೆ. ಇತ್ಯಾದಿ, ಇತ್ಯಾದಿ.

ಈ ಯುದ್ಧದೋಷಪಟ್ಟಿಕೆಯಲ್ಲಿ ಮೋಕ್ಷದ ಪ್ರಸ್ತಾವವಿಲ್ಲ; ಆತ್ಮತತ್ತ್ವಜಿಜ್ಞಾಸೆಯಿಲ್ಲ; ಪ್ರಕೃತಿಸ್ವಭಾವಪ್ರಸಕ್ತಿಯಿಲ್ಲ. ಇದು ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕಾದ ಸಂಗತಿ. ಏಕೆಂದರೆ ಆ ಮೂರಂಶಗಳು ಗೀತೋಪದೇಶದ ಮುಖ್ಯಾಂಶಗಳು. ಅರ್ಜುನನ ಪ್ರಶ್ನೆಯಲ್ಲಿ ಇಲ್ಲದ ಸಂಗತಿ ಕೃಷ್ಣನ ಉತ್ತರದಲ್ಲಿ ಬರಲು ಕಾರಣವೇನು? ಇದನ್ನು ತಿಳಿಯಬೇಕಾದರೆ ಅರ್ಜುನಪ್ರಶ್ನೆಯ ಮೂಲಾಂಶಗಳನ್ನು ಮನಸ್ಸಿಗೆ ತಂದುಕೊಳ್ಳಬೇಕು. ಮೇಲಣ ಪಟ್ಟಿಯಲ್ಲಡಗಿರುವ ಆಶಯಗಳನ್ನು ನಾಲ್ಕು ಗುಂಪುಗಳಲ್ಲಿ ಸಂಗ್ರಹಿಸಬಹುದು:

1. ಕರುಣೆಯ ಕರ್ತವ್ಯತೆ
2. ಪಾಪಭೀತಿ
3. ಭೋಗಭಾಗ್ಯವಿರಕ್ತತೆ
4. ಧರ್ಮಶ್ರದ್ಧೆ

ಈ ನಾಲ್ಕರಲ್ಲಿ ನಾವು ಬೇಡವೆನ್ನಬಹುದಾದದ್ದು ಯಾವುದು? ನಾಲ್ಕು ಗುಣಗಳೂ ನಾವು ಅಭ್ಯಾಸಮಾಡಿಕೊಳ್ಳಬೇಕಾದುವೆಂದೇ ಉಪದೇಶವಲ್ಲವೆ? ಹಾಗಾದರೆ ಅರ್ಜುನನ ವಾದದಲ್ಲಿ ದೋಷವೇನು? ಆ ವಾದವನ್ನು ಕೃಷ್ಣಭಗವಂತ ಏಕೆ ಒಪ್ಪಲಿಲ್ಲ?

ಗೀತೆಯ ಪ್ರಥಮಾಧ್ಯಾಯಕ್ಕೆ ಅರ್ಜುನವಿಷಾದಯೋಗವೆಂದು ಬಹುಕಾಲದಿಂದ ಹೆಸರು ಬಂದಿದೆ. ಅದರಲ್ಲಿ ವಿಷಾದವಿರುವುದು ದಿಟ. ಆದರೆ ಅದಷ್ಟುಮಾತ್ರವೇ ಅದರ

ತಾತ್ಪರ್ಯವೆ? ಅರ್ಜುನನ ವಿಷಾದದ ಹಿಂದೆ ಒಂದು ಕಾರಣವಿದೆ; ಅದರ ಮುಂದೆ ಒಂದು ಉದ್ದೇಶವಿದೆ. ಇವೆರಡನ್ನೂ ನಾವು ಅರ್ಥಮಾಡಿಕೊಳ್ಳಬೇಕು.

ಅರ್ಜುನನ ಕರುಣಾತಿರೇಕದಿಂದ ಉತ್ಪನ್ನವಾದದ್ದು ಯುದ್ಧಾನಿಚ್ಛೆ. ವಧೆಯಿಂದ ತನಗೆ ಇಷ್ಟರಾದವರು ನಷ್ಟವಾಗುವುದು ಮಾತ್ರವಲ್ಲದೆ ತನಗೆ ಒಂದು ಪಾಪ ಸಂಪಾದನೆಯೂ ಆಗುತ್ತದೆ. ಈ ಪಾಪದಿಂದ ತಾನು ತಪ್ಪಿಸಿಕೊಳ್ಳಬೇಕೆಂಬುದೂ ಅರ್ಜುನನ ಮನೋಗತ. ಈ ಉದ್ದೇಶ ಧರ್ಮಸಂಮತವಾದದ್ದೋ? ಧರ್ಮಯುದ್ಧದಲ್ಲಾಗುವ ವಧೆಯು ಅಧರ್ಮವೋ? ಪ್ರಾಣಿವಧೆ ಧರ್ಮವಾಗುವ ಸಂದರ್ಭ ಉಂಟೋ? ಇದು ವಿಚಾರ್ಯವಾದ ವಿಷಯ. ಅರ್ಜುನನು ಧರ್ಮತತ್ತ್ವವನ್ನು ಕಂಡಿದ್ದನೆ? ಕ್ಷತ್ರಿಯಧರ್ಮದ ವಿಷಯದಲ್ಲಿ ಅವನಿಗುಂಟಾದ ಶಂಕೆ ಯುಕ್ತವಾದದ್ದೆ? ಧರ್ಮವೆಂದರೆ ಏನು? ಯಾವುದು ಧರ್ಮ? ಈ ವಿಚಾರವು ಅವಶ್ಯವಾಗುತ್ತದೆ.

ವಿಷಾದವು ಯಾವ ಕಾರಣದಿಂದಲಾದರೂ ಬರಬಹುದು: ತನಗೆ ಶಕ್ತಿ ಸಾಲದೆಂಬ ಸಂಕೋಚದಿಂದ; ತನಗೆ ದೈವ ಒಲಿಯದೆಂಬ ಹೆದರಿಕೆಯಿಂದ; ತನಗೆ ಮುಂದೆ ಲಾಭದಲ್ಲಿ ಭಾಗ ದೊರೆಯದೆಂಬ ನಿರಾಶೆಯಿಂದ; ತನಗೆ ನೋವು ಸಾವುಗಳಾದೀತೆಂಬ ಪ್ರಾಣಭಯದಿಂದ. ಅರ್ಜುನನ ವಿಷಾದವು ಈ ನಾನಾ ವಿಧಗಳಲ್ಲಾವುದಕ್ಕೆ ಸೇರಿದ್ದೂ ಅಲ್ಲ. ಅದು ಸ್ನೇಹಾತಿಶಯದಿಂದ ಉಂಟಾದದ್ದು. ಸಂಜಯನು ಈ ವಿಷಾದದಶೆಯಲ್ಲಿದ್ದ ಅರ್ಜುನನನ್ನು—

> ತಂ ತಥಾ ಕೃಪಯಾಽಽವಿಷ್ಟಮ್ (೨-೧)

ಎಂದು ವರ್ಣಿಸಿದ್ದಾನೆ. ಕೃಪೆಯ ಅತಿರೇಕಕ್ಕೆ ಅರ್ಜುನನು ವಶನಾಗಿದ್ದಾನೆ. ಅದು ಅಲ್ಲಿ ಸಲ್ಲದ ಕೃಪೆ ಎಂಬುದು ಕೃಷ್ಣನ ಪ್ರತ್ಯುತ್ತರ. ಕರುಣೆ ಶ್ರೇಷ್ಠಗುಣವೆಂಬುದಕ್ಕೆ ಸಂದೇಹವಿಲ್ಲ. ಆದರೆ ಅದು ಉಚಿತಪಾತ್ರವಿಷಯದಲ್ಲಿ ಹುಟ್ಟಿದಾಗ ಶ್ರೇಷ್ಠ; ಬೇರೆಕಡೆ ಅಲ್ಲ.

ಕರುಣೆ ಒಂದು ಬಗೆಯ ಮನೋವಿಕಾರ. ಅದು ನಮ್ಮ ಒಳಗಿನಿಂದ ತಾನಾಗಿ ಹುಟ್ಟತಕ್ಕದ್ದು. ಹೊರಗಣ ಬಲಾತ್ಕಾರವಾಗಲಿ ಪ್ರೇರಣೆಯಾಗಲಿ ಅದಕ್ಕೆ ಬೇಕಿಲ್ಲ. ಭವಭೂತಿ ಹೇಳಿದಂತೆ—

ವ್ಯತಿಷಜತಿ ಪದಾರ್ಥಾ-
ನಾನ್ತರಃ ಕೋಽಪಿ ಹೇತುಃ ।
ನ ಖಲು ಬಹಿರುಪಾಧೀನ್
ಪ್ರೀತಯಸ್ಸಂಶ್ರಯನ್ತೇ ॥

"ಒಬ್ಬರನ್ನೊಬ್ಬರಿಗೆ ಪ್ರೀತಿಯಿಂದ ಕಟ್ಟುವ ಸೂತ್ರ ಅವರ ಅಂತರಂಗದೊಳಗಿನ ಯಾವುದೋ ಒಂದು ಸಂಗತಿ. ಪ್ರೀತಿಯು ಹೊರಸಂದರ್ಭವನ್ನಾಶ್ರಯಿಸಿರುವುದಿಲ್ಲ." ಆ ಒಳಸಂಗತಿಯಾದರೋ ಪ್ರಕೃತಿಯಿಂದಾದದ್ದು. ಆ ಪ್ರಕೃತಿಕೃತವೆಂಬ ಒಂದು ಕಾರಣ ಮಾತ್ರದಿಂದ ಅಂಥಾ ಕೃಪೆ ಯುಕ್ತವೆಂದೂ ಹಿತಕರವೆಂದೂ ನಿಶ್ಚಯವಾಗದು. ಹಿತಾಹಿತ ನಿರ್ಣಯವು ವಿಚಾರದಿಂದಲೇ ಉಂಟಾಗಬೇಕಾದದ್ದು. ಅರ್ಜುನನ ಕರುಣೆ ಹಾಗೆ ವಿಚಾರಶುದ್ಧವಾದದ್ದಲ್ಲ. ಇಂಗ್ಲೀಷಿನಲ್ಲಿ impulse of the moment ಎಂಬ ಒಂದು ಮಾತುಂಟು. ಹಾಗೆಂದರೆ ತತ್‌ಕ್ಷಣಮಾತ್ರದ ಸ್ವಾಭಾವಿಕ ಮನಃಪ್ರಚಲನೆ. ಅದೇ ಆತುರತೆ. ಅದು ನಂಬಿಕೆಗೆ ಸಾಲದು. ಅದರ ಜೊತೆಗೆ ವಿಷಯ ವಿಮರ್ಶನೆ ಸೇರಿ ಅದರಲ್ಲಿಯ ಅಶುದ್ಧತೆಗಳನ್ನು ಕಳೆಯಬೇಕು. ಹಾಗೆ ವಿವೇಕಸಿದ್ಧವಾದ ಮನಃಪ್ರಚಲನೆ ಕಾರ್ಯಾರ್ಹವಾಗುತ್ತದೆ.

ಬಹುಶಃ ಇದೇ ಅಭಿಪ್ರಾಯದಿಂದಲೇ ಶ್ರೀ ಯಾಮುನಾಚಾರ್ಯರು ಅರ್ಜುನನ ಮನೋಭಾವವನ್ನು "ಆಸ್ಥಾನಕಾರುಣ್ಯ" ಎಂದು ಕರೆದಿದ್ದಾರೆ. ಈ ಪ್ರಾಕೃತ ಕಾರುಣ್ಯ ಅಥವಾ ಅವಿಚಾರಕಾರುಣ್ಯವನ್ನು ಇಂಗ್ಲಿಷಿನ "ಸೆಂಟಿಮೆಂಟಲ್" (Sentimental) ಎಂಬ ಮಾತು ತಿಳಿಸುತ್ತದೆ. "ಸೆಂಟಿಮೆಂಟ್" ಎಂದರೆ ಹೃದಯಭಾವ. ಹೃದಯಭಾವದ ಅತಿರೇಕವನ್ನೂ ಸೆಂಟಿಮೆಂಟ್ ಎನ್ನುವುದುಂಟು. ಹೃದಯವು ಬುದ್ಧಿಯ ವಿಚಾರಕ್ರಿಯೆಗೆ ಒಳಪಡದೆ ಆವೇಶ ತಾಳಿದಾಗ "ಸೆಂಟಿಮೆಂಟಲ್" ಆಗುತ್ತದೆ. ಇದನ್ನೇ ಭಗವಂತನು "ಹೃದಯದೌರ್ಬಲ್ಯಂ" ಎಂದು ಕರೆದದ್ದು. ಅದು ಮನಸ್ಸಿನ ಮೆತುವು. ಮನಸ್ಸಿನ ಅಳ್ಳಕ. ಅದನ್ನು ಕಂಬನಿಕೊಚ್ಚು—ಬಾಷ್ಪಪಂಕ—ಎಂದು ಕರೆಯಬಹುದು. ಈ ಮನಸ್ಸಿನ ಶೈಥಿಲ್ಯ ನಮ್ಮ ಕಾಲದ ಲಕ್ಷಣವೆಂದು ಹೇಳಬಹುದು.

ನಮ್ಮ ಕಾಲವನ್ನು ವಿಜ್ಞಾನಯುಗ (Age of Science), ಬುದ್ಧಿಪ್ರಧಾನ ಕಾಲ—ಎಂದು ಹೇಳುವುದುಂಟು. ಒಂದು ಪಕ್ಕದಲ್ಲಿ ಬುದ್ಧಿ ಪ್ರಬಲವಾಗಿದ್ದರೆ ಇನ್ನೊಂದು ಪಕ್ಕದಲ್ಲಿ ಮನಸ್ಸು

ದುರ್ಬಲವಾಗಿಯೂ ಇದೆ. ಕಷ್ಟ ಬೇಡವೆನ್ನುತ್ತದೆ ನಮ್ಮ ಕಾಲ. ಕಷ್ಟವಾದದ್ದು ಬೇಡ, ಎಲ್ಲ ಸುಲಭವಾದದ್ದಿರಲಿ— "ಸುಲಿದ ಬಾಳೆಯ ಹಣ್ಣಿನಂದದಿ," ಇದು ಈಗಣ ಮನೋಗತ.

ಇದು ನಮ್ಮ ವಿದ್ಯಾಶಾಲೆಯಲ್ಲಿಯೇ ಪ್ರಾರಂಭ. ವರ್ಣಮಾಲೆಯಲ್ಲಿ ಥ, ಭ, ಕ್ಷ, ಹ್ರ ಇಂಥಾ ಅಕ್ಷರಗಳು ಬೇಡ. ಅವು ಮಕ್ಕಳಿಗೆ ಶ್ರಮಕೊಡುತ್ತವೆ.

ವಿದ್ಯಾರ್ಥಿಗಳನ್ನು ದಂಡಿಸುವುದು ಬೇಡ. ಅವರಿಗೆ ಮಿಠಾಯಿ ಬತ್ತಾಸು ಕೊಟ್ಟು ತಿದ್ದಬೇಕು. ಬೆತ್ತವಿಲ್ಲದೆ ತಿದ್ದಲಾಗದೆಹೋದರೆ ಅವರಿರುವಂತೆ ಇದ್ದುಕೊಳ್ಳಲಿ.

ಮೈಗೆ ಗಾಳಿ ಬಿಸಿಲು ತಾಕಿದರೆ ಚರ್ಮ ಒರಟುಬೀಳುತ್ತದೆ. ಅದು ಬೇಡ. ಎಲ್ಲಕ್ಕೂ ಯಾವಾಗಲೂ ಬಟ್ಟೆ ಸುತ್ತಿರಲಿ.

ಮುಖ ತೊಳೆದು ತಿಂಡಿ ತಿನ್ನು ಎಂದರೆ ಘಾಸಿಯಾಗುತ್ತದೆ. ಯಾವಾಗ ಬೇಕೆಂದರೆ ಆವಾಗ ತಿನ್ನಲಿ. ಇಷ್ಟ ಬಂದಾಗ ಹಲ್ಲುಜ್ಜಲಿ.

ಹೀಗೆ ಹರಿಯುತ್ತಿದೆ ಕರುಣಾಪ್ರವಾಹ.

ಪರೀಕ್ಷೆಯಲ್ಲಿ ನೂರಕ್ಕೆ ನಲವತ್ತು ನಂಬರನ್ನೇಕೆ ತೆಗೆಯಬೇಕು? ಹತ್ತು ತೆಗೆದುಕೊಂಡರೆ ಸಾಕು.

ಕಸ್ತೂರಿ ಮಾರುವವನ ಪಕ್ಕದಲ್ಲಿ ಗೊಬ್ಬರದವನು ಅಂಗಡಿ ಇಡಲಿ. ಅದೇ ಸಮಾನತ್ವ.

ನಿತ್ಯಸ್ನಾನಿಯ ಮೈಯನ್ನು ನೀರು ಸೋಕದವನು ತಿಕ್ಕಲಿ. ಅದೇ ಅಲ್ಲವೆ ಸೋದರತ್ವ?

ಸಾವಿರ ಸಂಬಳವಿಲ್ಲದ ಗಂಡನು ತನಗೆ ಬೇಕಿಲ್ಲವೆಂದು ಮಗಳು ಹೇಳಿದರೆ ನೂರು ಸಂಬಳದವನನ್ನು ಮದುವೆಯಾಗು—ಎಂದು ಆಕೆಗೆ ಹೇಳಬಹುದೆ? ಹಾಗೆ ಬಲಾತ್ಕಾರ ಮಾಡಿದರೆ ಆಗ ವ್ಯಕ್ತಿಸ್ವಾತಂತ್ರ್ಯವೇನಾಗುತ್ತದೆ?

ದೇಶವಿದೇಶಗಳಲ್ಲಿ ಅನ್ಯಾಯ ನಡೆದರೆ ಸಮಾಧಾನ ಭಾಷಣ ಮಾಡೋಣ. ಯುದ್ಧದ ಮಾತು ಬೇಡ. ಶಸ್ತ್ರಾಸ್ತ್ರಗಳು ತುಕ್ಕುತಿಂದುಹೋಗಲಿ. ನಮ್ಮ ಮನಸ್ಸುಗಳಲ್ಲಿ ಹೊಗೆಯಾಡಲಿ.

ಬ್ರಹ್ಮನು ಜನಕ್ಕೆ ಕಾಲುಗಳನ್ನೇಕೆ ಕೊಡುತ್ತಿದ್ದಾನೆ? ಕಾಲಿದ್ದರೆ ನಡೆಯುವ ಆಯಾಸ. ಅದಕ್ಕೆ ಬದಲಾಗಿ ಮೋಟಾರುಕಾರು ತಾನೇ ಮನುಷ್ಯನನ್ನೆತ್ತಿ ಒಳಗೆ ಕೂಡಿಸಿಕೊಳ್ಳುವಂತೆ ಯಂತ್ರವನ್ನು ಅಳವಡಿಸಲಿ.

ಬ್ರಹ್ಮನು ಕುದುರೆಗಳನ್ನೇಕೆ ಸೃಷ್ಟಿಮಾಡಬೇಕು? ಕುದುರೆಸವಾರಿ ಆಯಾಸ ಮತ್ತು ಅಪಾಯ. ಮನುಷ್ಯನಿಗೆ ರೆಕ್ಕೆಗಳನ್ನು ಕೊಡಲಿ.

ಚಕ್ಕಲಿ ಪೊಳ್ಳಂಗಾಯಿ ಎಂದರೆ ಹಲ್ಲುಗಳಿಗೆ ಪ್ರಯಾಸ. ಇದೇಕೆ ಬೇಕು? ರುಚಿರುಚಿಯ ಗುಳಿಗೆಗಳನ್ನು ಚಪ್ಪರಿಸಲಿಕ್ಕೆ ಕೊಟ್ಟರೆ ಸುಲಭವಲ್ಲವೆ?

ಸಾಲ ತೆಗೆದುಕೊಂಡವನು ತೀರಿಸದಿದ್ದರೆ ಹೋಗಲಿ—ಅವನಿಗೆ ಬಂದೀಖಾನೆಯ ಭಯ ಬೇಡ. ಭಯವೇ ಹಿಂಸೆ. ನಾವು ಕನಿಕರಿಸಿ ಇನ್ನಷ್ಟು ಸಾಲ ಕೊಡೋಣ.

ಕೊಲೆಪಾತಕನಿಗೆ ಮರಣಶಿಕ್ಷೆಯ ಭಯ ಬೇಡ. ಅವನಿಗೆ ಆ ದುಃಖ ಜ್ಞಾಪಕಕ್ಕೆ ಬಾರದಂತೆ ಧರ್ಮಶಾಲೆಗಳಲ್ಲಿ ಅವನಿಗೆ ಊಟವಿಡಿಸೋಣ.

ದರೋಡೆಕಾರರನ್ನು ಪೋಲೀಸಿನವರು ಹಿಡಿದು ನೋಯಿಸಬಾರದು. ದಮ್ಮಯ್ಯಾ ಹಾಗೆ ಮಾಡಬೇಡಿರಪ್ಪಾ—ಎಂದು ಬೇಡಿಕೊಳ್ಳಬೇಕು.

ಜೀತಗಾರರು ತಾವು ಜೀತಮಾಡುವವರೆಂಬ ಸಂಕೋಚದಿಂದ ಕುಗ್ಗದೆ ತಾವೇ ಯಜಮಾನರೆಂದುಕೊಂಡು ಹಿಗ್ಗುವಂತೆ ಆಗಬೇಕು. ಬಂಡವಾಳ ಕರಗಿದರೆ ಕರಗಲಿ; ಬಂಡಾಯಗಾರರು ಸಂತುಷ್ಟರಾಗಿರಬೇಕು.

ರಾಮನು ಸೀತೆಯನ್ನು ವನವಾಸಕ್ಕೆ ಕಳುಹಿಸಿದ್ದು ಕಲ್ಲೆದೆಯ ಕ್ರೂರತನ. ಅಂಥ ರಾಮನನ್ನೇಕೆ ಪೂಜಿಸಬೇಕು?

ಹೀಗೆಲ್ಲ ಹೊರಡುತ್ತಿದೆ ನಮ್ಮ ಕಾಲದ ಕರುಣಾಲಹರಿ. ಇದು ಆತ್ಮದೌರ್ಬಲ್ಯ, ಮನಶ್ಶೈಥಿಲ್ಯ; ಪೌರುಷವಲ್ಲ.

ಮನುಷ್ಯನ ಆತ್ಮವು ಬಲಿಷ್ಠವಾಗಬೇಕಾದರೆ ಅದರಲ್ಲೊಂದು ಕಷ್ಟಸಿದ್ಧತೆ ಇರಬೇಕು.

> ನಾಯಮಾತ್ಮಾ ಬಲಹೀನೇನ ಲಭ್ಯಃ ॥

ಧರ್ಮವು ಹೇಡಿಗೆ ಸಿಕ್ಕದು. ಧರ್ಮವು ಒಂದು ಧೀರತನವನ್ನು ಅಪೇಕ್ಷಿಸುತ್ತದೆ. ಯಾರು ಕಷ್ಟ ಪಡನೋ ಅವನ ಮೂಳೆ ಬಲಿಯದು. ಯಾರು ಯುದ್ಧಕ್ಕೆ ಸಿದ್ಧನಲ್ಲವೋ ಅವನು ಧರ್ಮವನ್ನು ಸಂರಕ್ಷಿಸಲಾರ.

ಯುದ್ಧಕಾರಣವು ಮನುಷ್ಯಸ್ವಭಾವದ ತಾಮಸ ರಾಜಸ ಗುಣಗಳು; ಸತ್ತ್ವಗುಣವಲ್ಲ. ಸತ್ತ್ವಾಧಿಕ್ಯವಿದ್ದಲ್ಲಿ ಕಲಹವಿರದು. ಕಲಹ ಹುಟ್ಟಿದರೂ ಅಲ್ಲಿ ಬೇಗ ತೀರಿಹೋಗುತ್ತದೆ. ರಜಸ್ಸು ತಮಸ್ಸುಗಳು ಹಾಗೆ ಮುಗಿಯುವವಲ್ಲ. ಅವುಗಳಿಗೆ ಅರ್ಥವಾಗುವ ಭಾಷೆ ನಯವಲ್ಲ, ದಂಡ. ದುರ್ಯೋಧನ ದುಶ್ಶಾಸನರು ಸತ್ತ್ವಪ್ರಧಾನರಲ್ಲ. ತಮಃಪ್ರಧಾನರು. ತಮಃಪ್ರಧಾನರಾದ ರಾಜರಿಗೆ ಯುದ್ಧವಲ್ಲದೆ ಬೇರೆ ಔಷಧವು ಪ್ರಯೋಜನಕ್ಕೆ ಬಾರದು. ಆದದ್ದರಿಂದ ಅವರಿಗೆ ದಂಡಪ್ರಯೋಗದ ಹೊರತು ಬೇರೆ ತಿದ್ದುವ ಉಪಾಯವಿಲ್ಲವಾಯಿತು.

ಒಬ್ಬ ಮಹನೀಯರೆಂದರು—ದಯೆಯಿಲ್ಲದ ಧರ್ಮ ಯಾವುದಯ್ಯಾ?—ಎಂದು. ಇನ್ನೊಬ್ಬರೆಂದರು—ಧರ್ಮವಿಲ್ಲದ ದಯೆ ಎಂಥದಯ್ಯಾ?—ಎಂದು. ಹೀಗೆ ಧರ್ಮ ಸಾಧನೆಯಲ್ಲಿ ದಯೆಗೊಂದು ಸ್ಥಾನವಿದ್ದರೆ ದಂಡಕ್ಕೂ ಒಂದು ಸ್ಥಾನವಿರುತ್ತದೆ. ಧರ್ಮವನ್ನು ಉಳಿಸಹೊರಟವನಿಗೆ ಮೊದಲು ಬೇಕಾದ ಗುಣ ಎದೆಗಾರಿಕೆ. ಅನ್ಯಾಯವನ್ನೂ ಅಧರ್ಮವನ್ನೂ ಕಂಡಾಗ ಎದುರಿಸಿ ಹೋರದೆ ಓಡಿಹೋಗುವೆನೆಂಬವನು ತೋರುವುದು ದಯೆಯನ್ನಲ್ಲ; ಅಧರ್ಮಪ್ರೋತ್ಸಾಹವನ್ನು.

ಇಂಥಾದ್ದು ಅರ್ಜುನನ ಆಗಿನ ಮನೋಭಾವ. ಅದು ಸತ್ಪಾತ್ರಕರುಣೆಯಲ್ಲ, ದುಷ್ಪಾತ್ರಕರುಣೆ. ಕರುಣೆಗೆ ಪಾತ್ರಾಪಾತ್ರವಿವೇಕ ಉಂಟೆಂಬುದನ್ನು ಭಗವಂತನೇ ಸಾರಿ ಹೇಳಿದ್ದಾನೆ:

> ದೇಶೇ ಕಾಲೇ ಚ ಪಾತ್ರೇ ಚ
> ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥ (೧೭-೨೦)

ಈ ತತ್ತ್ವ ಅರ್ಜುನನಿಗೆ ಮರೆತುಹೋಗಿತ್ತು.

ಅರ್ಜುನನ ಮನೋಗತವು ಕರುಣೆ ಹೌದು; ಆದರೆ ಅದರ ಸಂದರ್ಭ ತಕ್ಕದ್ದಲ್ಲ. ಪಾಯಸ ಒಳ್ಳೆಯದು—ಬಾಯೊಳಕ್ಕೆ, ಹೊಟ್ಟೆಯೊಳಕ್ಕೆ; ಮೈಮೇಲಕ್ಕಲ್ಲ. ಈ ಸ್ಥಾನಾಸ್ಥಾನವಿವೇಕವೇ ಧರ್ಮಕ್ಕೆ ಮೂಲ.

ಅರ್ಜುನನ-ವಿಷಾದವು ಕರುಣೆಯಾಗಿಯೂ ವಿರಕ್ತಿಯಾಗಿಯೂ ಪರಿಣಮಿಸಿದ್ದು ಅವನ ಜೀವಯೋಗ್ಯತೆ ಉಚ್ಚವಾದದ್ದೆಂಬುದನ್ನು ತೋರಿಸುತ್ತದೆ. ಅವನ ವೈರಾಗ್ಯ ಹೇಡಿಯದಲ್ಲ, ಅಶಕ್ತನದಲ್ಲ. ಕೆಲವರ ವಿಷಾದವು ರೋಷವಾಗುತ್ತದೆ; ಕೆಲವರಲ್ಲಿ ಅದು ನಿರಾಶೆಯನ್ನೂ ಸ್ತಬ್ಧತೆಯನ್ನೂ ತರುತ್ತದೆ. ಅರ್ಜುನನು ಖಿನ್ನನಾಗಲಿಲ್ಲ. ಕ್ರುದ್ಧನಾಗಲಿಲ್ಲ. ಅವನ “ಕಿಂ ಭೋಗೈರ್ಜೀವಿತೇನ ವಾ” ಎಂಬ ನುಡಿ ತತ್ತ್ವಕುತೂಹಲವಿಲ್ಲದ್ದು. ಮನಸ್ಸಿನಲ್ಲಿ ಧರ್ಮಸಂದೇಹ ಉಂಟಾಗಿದೆ. ಅದು ಪರಿಹಾರವಾಗಬೇಕು. ಆ ಸಂದೇಹಕ್ಕೆ ಕಾರಣ ಅವನಲ್ಲುದಿಸಿದ ಕರುಣೆ.

ಕರುಣೆ ಕೋಪದಂತೆಯೇ ಒಂದು ಬಗೆಯ ಮನೋವಿಕಾರ. ಅದು ಸಾಮಾನ್ಯವಾದ ಮಾನವಸನ್ನಿವೇಶಗಳಲ್ಲಿ ಒಳ್ಳೆಯ ವಿಕಾರವೇ ಇರಬಹುದು. ಕರುಣೆಯಿಲ್ಲದೆ ಧರ್ಮವಿರದು, ಜೀವನವೂ ಇರದು. ಆದರೆ ಅದು ಪ್ರಾಕೃತಕರುಣೆಯಾಗಬಾರದು. ಮೃಗಪಕ್ಷಿಗಳು ತಮ್ಮ ಮರಿಗಳಲ್ಲಿ ತೋರುವ ಕರುಣೆ ಪ್ರಾಕೃತವಾದದ್ದು. ಪ್ರಕೃತಿ ಆ ಮೂಢ ವಾಸನೆಯನ್ನು ಎಲ್ಲ ಜೀವಿಗಳಲ್ಲಿಯೂ ಇರಿಸಿರುತ್ತಾಳೆ. ತಿರ್ಯಗ್ಜಂತುಗಳಲ್ಲಿ ಆ ಸಹಜವಾಸನೆ ವಂಶಪೋಷಕವಾಗಿ ಕೆಲಸಮಾಡುತ್ತದೆ. ಮನುಷ್ಯವರ್ಗದಲ್ಲಿ ಆ ಪ್ರಾಕೃತವಾಸನೆ ವಿವೇಕವನ್ನು ಬಿಟ್ಟು ಕೆಲಸಮಾಡಿದರೆ ಭ್ರಾಂತಿಯಾಗಿ ವಿಪರೀತ ಪರಿಣಾಮಗಳನ್ನುಂಟುಮಾಡುತ್ತದೆ. ವಿಚಾರವಿಲ್ಲದ ಕರುಣೆಯೇ ವ್ಯಾಮೋಹ; ಅದೇ ಪಕ್ಷಪಾತ; ಅದೇ ಭ್ರಾಂತಿದೃಷ್ಟಿ; ಅದೇ ನ್ಯಾಯಕಂಟಕ. ಆದದ್ದರಿಂದ ಅರ್ಜುನನಲ್ಲಿ ಪ್ರಾಕೃತವಾಸನೆಗಳಿಂದ ಉತ್ಪನ್ನವಾದ ಕೃಪಾರಸವು ವಿವೇಕದಿಂದ ಪರಿಶೋಧನೆ ಪಡೆಯಬೇಕೆಂಬುದು ಭಗವಂತನ ಅಭಿಪ್ರಾಯವಾಯಿತು. ಮನೋವಿಕಾರದ ಪರಿಶೋಧನೆ ಆಗಬೇಕಾದದ್ದು ತತ್ತ್ವಜ್ಞಾನದಿಂದ. ಅದು ಮುಂದಿನ ಅಧ್ಯಾಯದ ವಿಷಯ.

ಅರ್ಜುನನ ಕರುಣೆಯಲ್ಲಿ ಅವಿಚಾರಸಿದ್ಧವಾದ, ಅಪರೀಕ್ಷಿತವಾದ ಪ್ರಾಕೃತಿಕ ರಾಗ ಇತ್ತೆಂಬುದು ಒಂದೇ ಅದರ ಲೋಪವಲ್ಲ. ಅದರ ಜೊತೆಗೆ ಅಹಂಕಾರವೂ ಸೇರಿತ್ತು. ಧರ್ಮಾಧರ್ಮನಿರ್ಣಯವನ್ನು ಮಾಡತಕ್ಕವನು ನಾನು, ಇವರು ನನ್ನ ಕನಿಕರಕ್ಕೆ

ಪಾತ್ರರಾಗಬೇಕಾದವರು, ಯುದ್ಧ ಮಾಡುವುದೂ ಬಿಡುವುದೂ ನನ್ನ ಸ್ವತಂತ್ರೇಚ್ಛೆಗೆ ಸೇರಿದ್ದು (ಅಧ್ಯಾಯ ೧೮, ಶ್ಲೋಕ ೫೮-೫೯ ನೋಡಿ) * —ಈ ವಿಧವಾದ ಆತ್ಮ ವಿಷಯಕ ಭ್ರಾಂತಿ ಸೇರಿತ್ತು.

ಕರುಣೆ ಮನುಷ್ಯಬಾಂಧವ್ಯಗಳಲ್ಲಿ ಬಹು ದೊಡ್ಡ ವಸ್ತುವೇ ಸರಿ. ಆದರೆ ಅದಕ್ಕಿಂತ ದೊಡ್ಡದು ಧರ್ಮ. ಕರುಣೆಯ ವಿಷಯರಾದವರು ಲೋಕದಲ್ಲಿ ಕೆಲವು ಮಂದಿ ಮಾತ್ರ. ಧರ್ಮವು ಸಮಸ್ತ ಜಗತ್ತಿಗೂ ಅನ್ವಯವಾಗಬೇಕಾದದ್ದು. ಆದದ್ದರಿಂದ ಕರುಣೆಯ ಯುಕ್ತಾಯುಕ್ತತೆಯನ್ನು ಧರ್ಮದ ದೃಷ್ಟಿಯಿಂದ ವಿವೇಚನೆ ಮಾಡಬೇಕು. ಧರ್ಮವು ನೂರಾರು ತತ್ತ್ವಗಳನ್ನು ಒಳಕೊಂಡಿರುತ್ತದೆ. ಅವುಗಳಲ್ಲಿ ಕರುಣೆ ಒಂದು ಮಾತ್ರ. ಧರ್ಮಮಾಡುವವನು ತನ್ನ ಕಾರ್ಯಸನ್ನಿವೇಶದಲ್ಲಿ ಸಂಗತವಾದ ಇತರ ತತ್ತ್ವಗಳನ್ನೂ ವಿಚಾರಕ್ಕೆ ತೆಗೆದುಕೊಳ್ಳಬೇಕು.

ಕರುಣೆಯು ಸ್ವಭಾವಸಿದ್ಧವಾದದ್ದು. ಧರ್ಮವು ವಿವೇಕಸಿದ್ಧವಾದದ್ದು. ಕರುಣೆಗೆ ಮೂಲವು ಪ್ರಕೃತಿ. ಧರ್ಮಕ್ಕೆ ಮೂಲವು ತತ್ತ್ವವಿಮರ್ಶೆ. ಧರ್ಮವನ್ನು ಬಿಟ್ಟ ಕರುಣೆ ಅನರ್ಥಕರವಾದೀತು. ಆದದ್ದರಿಂದ ಕರುಣೆಯ ಪ್ರವೃತ್ತಿ ಉಂಟಾದಾಗ ಅದನ್ನು ಧರ್ಮತತ್ತ್ವದ ದೀಪದ ಬೆಳಕಿನಲ್ಲಿ ಪರೀಕ್ಷಿಸಿ ಪರಿಷ್ಕಾರಮಾಡುವುದು ಅವಶ್ಯವಾಗುತ್ತದೆ. ಹೀಗೆ ಧರ್ಮತತ್ತ್ವವಿಚಾರವು ಸಂಗತವಾಗುತ್ತದೆ.

ಸಂಗ್ರಹ

ರಣಮಘಮೂಲಂ ಪ್ರಿಯಗುರು- ।
ಹನನಕರಂ ಲೋಕಧರ್ಮಘಾತಕಮದರಿಂ ॥
ಧನುವಂ ಧರಿಸೆನೆನುತ್ತ- ।
ರ್ಜನನಳುತಚ್ಯುತನಿಗೊರೆಯೆ ಮೊದಲಧ್ಯಾಯಂ ॥

ಅನುಬಂಧ : ಧರ್ಮವು ಅನೇಕಮುಖಿ

ಬಹುಮಂದಿಗೆ ಧರ್ಮವೆಂದರೆ ಲಾಡು ಚಿರೋಟಿಗಳ ಸಮಾರಾಧನೆ ಎಂದು ತೋರುತ್ತದೆ: ಮೆಣಸಿನ ಚಟ್ನಿಯೂ ಶುಂಠಿಯ ಪಚ್ಚಡಿಯೂ ಧರ್ಮವೆನಿಸುವುದಿಲ್ಲ. ಅರ್ಜುನನು ಅಂಥವನು.

ಅವನು ಒಳ್ಳೆಯ ಮನುಷ್ಯ, ಆದರೆ ಅವನ ಒಳ್ಳೆಯತನ ನಾವು ಸಾಮಾನ್ಯವಾಗಿ ಹೊಗಳುವಂಥಾದ್ದು; ಅದರಲ್ಲಿ ವಿವೇಕಾಂಶವುಂಟೆಂಬುದು ಗೊತ್ತಿಲ್ಲ. ವಿವೇಕ ಸೇರದ ಒಳ್ಳೆಯತನವು ಉದ್ದಿಷ್ಟ ಫಲವನ್ನು ಕೊಡಲಾರದು. ವಿವೇಕಿಯ ಔತಣದಲ್ಲಿ ಪಾಯಸಕ್ಕೆ ಒಂದು ಜಾಗವಿರುವಂತೆ ಮೆಣಸಿನ ಸಾರಿಗೂ ಒಂದು ಜಾಗವಿರುತ್ತದೆ. ಧರ್ಮಾಚರಣೆಯಲ್ಲಿ ದಯೆಗೆ ಜಾಗವಿರುವಂತೆ ಗಟ್ಟಿ ಮನಸ್ಸಿಗೂ ಜಾಗವಿರುತ್ತದೆ.

> ವಜ್ರಾದಪಿ ಕಠೋರಾಣಿ
> ಮೃದೂನಿ ಕುಸುಮಾದಪಿ ॥

ಇದನ್ನು ಮರೆತಿದ್ದ ಅರ್ಜುನ. ಜೀವಪೋಷಣೆಯು ಧರ್ಮವಾದಂತೆ ಜೀವ ಹತ್ಯೆಯೂ ಧರ್ಮವಾಗುವ ಸಂದರ್ಭವುಂಟು. ಸ್ನೇಹವು ಧರ್ಮವಾದಂತೆ ಯುದ್ಧವೂ ಧರ್ಮವಾಗುವ ಸಂದರ್ಭವುಂಟು. ಸುಗ್ರೀವ ವಿಭೀಷಣರ ವಿಷಯದಲ್ಲಿ ಶ್ರೀರಾಮನಿಗೆ ಸ್ನೇಹವು ಕರ್ತವ್ಯವಾಯಿತು, ವಾಲಿ ರಾವಣರ ವಿಷಯದಲ್ಲಿ ವಧೆ ಕರ್ತವ್ಯವಾಯಿತು.

ಧರ್ಮದ ಜೀವಾಳ ಜೀವೋತ್ಕರ್ಷೆ. ಅದರಿಂದ ಜೀವಕ್ಕೆ ಒಂದು ಸಂಸ್ಕಾರವಾಗಿ ಅದು ಕೊಂಚವಾದರೂ ಉತ್ತಮ ದಶೆಗೆ ಹತ್ತಬೇಕು. ಸುಗ್ರೀವ ವಿಭೀಷಣರ ಜೀವಗಳು ವಾಲಿ ರಾವಣರ ಜೀವಗಳಿಗಿಂತ ಮೇಲಾದ ದಶೆಯಲ್ಲಿದ್ದುವು. ಅದರ ಅಂತರಂಗಕ್ಕೆ ಇನ್ನೂ ಆಗಬೇಕಾಗಿದ್ದ ಸಂಸ್ಕಾರವು ಸ್ನೇಹದ ಮೂಲಕ ನಡೆಯಬೇಕಾದದ್ದಾಗಿತ್ತು. ವಾಲಿ ರಾವಣರ ಜೀವಗಳಿಗಾದರೋ ಆ ಜನ್ಮಗಳಲ್ಲಿ ಉತ್ತಮಸಂಸ್ಕಾರಯೋಗ್ಯತೆ ಇರಲಿಲ್ಲವಾದದ್ದರಿಂದ ದೇಹಾಂತರಪ್ರಾಪ್ತಿ ಅವಶ್ಯವಾಗಿತ್ತು. ಕೆಲವು ಕೊಳೆ ಬಟ್ಟೆಗಳನ್ನು ಒಗೆದು ಚೊಕ್ಕಟಪಡಿಸುವುದು ಸಾಧ್ಯ. ಇನ್ನು ಕೆಲವು ಕೊಳಕು ಬಟ್ಟೆಗಳನ್ನು ನೀರು ಮುಟ್ಟಲೇ ಆರದು. ಅವಕ್ಕೆ ಬೆಂಕಿಯೇ ಗತಿ. ದೇಹಗಳ ಮಾತೂ ಅಷ್ಟೇ. ಇದೇ ಯುದ್ಧಧರ್ಮದ ಅಂತಸ್ತತ್ತ್ವ.

ಹಿರಣ್ಯಕಶಿಪುವಿನ ವಧೆಯಾದ ಬಳಿಕ ಅವನ ಮಗನಾದ ಪ್ರಹ್ಲಾದನು ತನ್ನ ತಂದೆಗೆ ಸದ್ಗತಿಯನ್ನು ಕರುಣಿಸಬೇಕೆಂದು ಬೇಡಿದಾಗ ನರಸಿಂಹಸ್ವಾಮಿ ಹೀಗೆ ಹೇಳಿದನು:

> ತ್ರಿಃಸಪ್ತಭಿಃ ಪಿತಾ ಪೂತಃ ಪಿತೃಭಿಃ ಸಹ ತೇಽನಘ ।
> ... ಪಿತುಃ ಪೂತಸ್ಯ ಸರ್ವಶಃ ।
> ಮದಂಗಸ್ಪರ್ಶನೇನಾಂಗ ಲೋಕಾನ್ ಯಾಸ್ಯತಿ ಸುಪ್ರಜಾಃ ॥

ಭಗವದಂಗಸ್ಪರ್ಶವು ಪಾಪದೇಹಕ್ಕೆ ತಗಲಬೇಕಾದ ಚಿಕಿತ್ಸೆ. ಆದಕಾರಣದಿಂದ ಭಗವಂತನ ಅವತಾರದಿಂದ ಪಾಪಿಯ ವಧೆ. ವಧೆಯಿಂದಲೇ ಆ ಜೀವಕ್ಕೆ ಪಾಪಪಂಜರದಿಂದ ವಿಮೋಚನೆ. ಇಂಥ ವಧೆಯು ಮೇಲುನೋಟಕ್ಕೆ ಕ್ರೂರವೆನಿಸಿದರೂ ಅಂತರ್ದೃಷ್ಟಿಗೆ ಅದು ಕ್ರೂರತನವಲ್ಲ, ಕರುಣೆ, ಧೀರನಕರುಣೆ—ಶಸ್ತ್ರಚಿಕಿತ್ಸಕನ (Surgeon) ಕರುಣೆಯಂತೆ.

ಧರ್ಮವು ಒಂದೊಂದು ಸಾರಿ ಉಗ್ರರೂಪವನ್ನು ತಾಳಬೇಕಾಗುತ್ತದೆ—ಮಿಠಾಯಿ ಕೊಡುವ ತಂದೆಯ ಕೈ ಒಂದೊಂದು ಸಾರಿ ಪೆಟ್ಟನ್ನು ಕೊಡಬೇಕಾಗುವಂತೆ. ತಂದೆ ಕೊಡುವ ಪೆಟ್ಟು ಹೇಗೆ ವಾತ್ಸಲ್ಯವೋ, ವೈದ್ಯನು ಕೊಡುವ ಕಹಿದ್ರಾವಕ ಹೇಗೆ ಕಾರುಣ್ಯವೋ ಧರ್ಮವು ಬೇಕೆನ್ನುವ ಯುದ್ಧವು ಹಾಗೆ.

ಧರ್ಮವು ಗಳಗಳ ಧ್ವನಿ ಮಾತ್ರವಲ್ಲ, ಅದು ಸಿಂಹಗರ್ಜಿತವೂ ಹೌದು. ಧರ್ಮದ ಕರೆ ಹೆಂಗರುಳಿಗೆ ಮಾತ್ರವಲ್ಲ; ಗಂಡೆದೆಗೂ ಅದರ ಕರೆಯುಂಟು. ಇದನ್ನು ನಮ್ಮ ಜನ ಚೆನ್ನಾಗಿ ಮನಸ್ಸಿಗೆ ತಂದುಕೊಳ್ಳಬೇಕು. ಮೆಣಸು ಅದರ ಕೆಲಸವನ್ನು ಮಾಡಿದ ಬಳಿಕ ಉದ್ದು ಜಾಗ ಪಡೆಯಬಹುದು. ಯುದ್ಧವು ತನ್ನ ಕೆಲಸವನ್ನು ನಡೆಸಿದ ಬಳಿಕ ಕಾರುಣ್ಯ ವಾತ್ಸಲ್ಯಗಳಿಗೆ ಸ್ಥಲ ದೊರೆಯುತ್ತದೆ. ಉಪಾಧ್ಯಾಯನ ಬೆತ್ತ ತನ್ನ ಕೆಲಸ ಮಾಡಿದ ಬಳಿಕ ಶಿಷ್ಯನಿಗೆ ಪಾರಿತೋಷಕ ದೊರೆಯುತ್ತದೆ. ಇದನ್ನು ಭಗವಂತನೇ ಸೂಚಿಸಿದ್ದಾನೆ.

> ಯತ್ತದಗ್ರೇ ವಿಷಮಿವ
> ಪರಿಣಾಮೇಽಮೃತೋಪಮಮ್ ॥

ಮೊದಲು ಬೇವು; ಆಮೇಲೆ ಬೆಲ್ಲ.

> ದುಃಖಮಿತ್ಯೇವ ಯತ್ಕರ್ಮ
> ಕಾಯಕ್ಲೇಶಭಯಾತ್ತ್ಯಜೇತ್ ॥ (೧೮-೮)
> ನ ದ್ವೇಷ್ಟ್ಯಕುಶಲಂ ಕರ್ಮ
> ಕುಶಲೇ ನಾನುಷಜ್ಜತೇ ॥ (೧೮-೧೦)

ಮಾಡಬೇಕಾಗಿ ಬಂದಿರುವ ಕಾರ್ಯವು ದುಃಖದ್ದು ಎಂಬ ಕಾರಣದಿಂದ ಅದನ್ನು ಬಿಡತಕ್ಕದ್ದಲ್ಲ; ಅದು ದೇಹಕಷ್ಟವನ್ನು ಒಳಕೊಂಡಿದೆಯೆಂಬ ಕಾರಣದಿಂದ ಅದನ್ನು ತ್ಯಜಿಸಬಾರದು.

ಒಂದಾನೊಂದು ಕಾರ್ಯವು ಇಷ್ಟವಲ್ಲ ಅಥವಾ ಸುಲಭವಲ್ಲ ಎಂದು ಅದನ್ನು ದ್ವೇಷಿಸಬಾರದು; ಅದು ಸಂತೋಷಕರವಾದದ್ದೆಂದು ಅದಕ್ಕೆ ಅಂಟಿಹಾಕಿಕೊಳ್ಳಲೂಬಾರದು.

ಕರ್ಮವು ಧರ್ಮದ್ದಾಗಿದ್ದರೆ ಸರಿ; ಅದು ಎಂಥಾದ್ದಾದರೂ ಕರ್ತವ್ಯವೇ—ಎಂದು ತಾತ್ಪರ್ಯ. ಫಲಾಫಲದೃಷ್ಟಿ ಅಲ್ಲಿ ಸಲ್ಲದು.

ಪಿತಾಮಹಬ್ರಹ್ಮನಂತೆ ಧರ್ಮವನ್ನು ಚತುರ್ಮುಖಿಯೆನ್ನಬಹುದು. ಬ್ರಹ್ಮದೇವನು ನಾಲ್ಕು ಬಾಯಿಗಳಿಂದ ನಾಲ್ಕು ವೇದಗಳನ್ನು ಹೇಳುತ್ತಾನಂತೆ. ಧರ್ಮವು ತನ್ನ ನಾಲ್ಕು ಮುಖಗಳಿಂದ (೧) ಜೀವಪೋಷಣೆ, (೨) ಜೀವಶೋಧನೆ, (೩) ತತ್ತ್ವವಿಜ್ಞಾನ, (೪) ಲೋಕಮೈತ್ರಿ—ಈ ನಾಲ್ಕು ಕರ್ತವ್ಯಗಳನ್ನು ಬೋಧಿಸುತ್ತದೆ. ಇದರಲ್ಲಿ ಜೀವಶೋಧನೆಯು ತಪಸ್ಸು. ಅದು ಉಪಾಯದಿಂದ ಆಗತಕ್ಕದ್ದಲ್ಲ. ಅದು ಪರಶಿವಮೂರ್ತಿಯಂತೆ ರುದ್ರಾಕಾರವುಳ್ಳದ್ದು, ಭೈರವತಾಂಡವವಾಡತಕ್ಕದ್ದು; ಹಾಲಾಹಲಮಾಡುವಂಥಾದ್ದು. ಕುರುಕ್ಷೇತ್ರದಲ್ಲಿ ಅರ್ಜುನನ ಕಣ್ಣೆದುರಿಗಿದ್ದದ್ದು ಆ ಧರ್ಮದ ಉಗ್ರಾವತಾರ. ಅದಕ್ಕೆ ಬೇಕಾಗಿದ್ದದ್ದು ಕೆಚ್ಚೆದೆ. ಹೆಣ್ಣು ಹಂಬಲವಲ್ಲ. ಅದು ಬಯಸಿದ್ದು ಪೌರುಷವನ್ನು. ಆದದ್ದರಿಂದ ಭಗವಂತನ ಉಪದೇಶವು ಪೌರುಷಮಯವಾಯಿತು.

> ಮೃದುಲಂ ಪುಷ್ಪದವೋಲದೊಮ್ಮೆ ಶಿಲೆವೋಲ್ ಇನ್ನೊಮ್ಮೆ ತಾಂ ನಿಷ್ಠುರಂ ।
> ನದಿವೋಲ್ ಧಾರೆಯದೊಮ್ಮೆ ವಂಕಗತಿ ತಾಂ ಮತ್ತೊಮ್ಮೆ ಗುಪ್ತಸ್ರವಂ ॥

ಮಧುವೋಲ್ ಸ್ವಾದುವದೊಮ್ಮೆ ಶುಂಠಿವೊಲೆ ತೀಕ್ಷ್ಣಂ ಮತ್ತೆ ನೋಡಿಂತು ನೂರ್-
ವಿಧ ರೂಪಂಗಳ ತಾಳ್ವುದೀ ಜಗದಿ ಧರ್ಮಂ ಜೀವಭೇದೋಚಿತಂ ॥

ಮನುಜಾನುಭವಪ್ರಾಜ್ಞನನುಕಂಪಾರ್ದ್ರಲೋಚನಂ ।
ಘನಶ್ಯಾಮಂ ಕ್ಷಮಾಧಾಮಂ ಶರಣ್ಯಂ ಕೃಷ್ಣನಾವಗಂ ॥

ಅಥ ಸಾಂಖ್ಯಯೋಗೋ ನಾಮ
ದ್ವಿತೀಯೋಽಧ್ಯಾಯಃ

ಸಂಜಯ ಉವಾಚ-

ತಂ ತಥಾ ಕೃಪಯಾಽಽವಿಷ್ಟಮಶ್ರುಪೂರ್ಣಾಕುಲೇಕ್ಷಣಮ್ ।
ವಿಷೀದಂತಮಿದಂ ವಾಕ್ಯಮುವಾಚ ಮಧುಸೂದನಃ

॥ ೧ ॥

ಶ್ರೀಭಗವಾನುವಾಚ-

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ

॥ ೨ ॥

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ

॥ ೩ ॥

ಅರ್ಜುನ ಉವಾಚ-

ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂ ಚ ಮಧುಸೂದನ ।
ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ

॥ ೪ ॥

ಗುರೂನಹತ್ವಾ ಹಿ ಮಹಾನುಭಾವಾನ್
ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ ।
ಹತ್ವಾರ್ಥಕಾಮಾಂಸ್ತು ಗುರೂನಿಹೈವ
ಭುಂಜೀಯ ಭೋಗಾನ್ ರುಧಿರಪ್ರದಿಗ್ಧಾನ್

॥ ೫ ॥

ನ ಚೈತದ್ವಿದ್ಮಃ ಕತರನ್ನೋ ಗರೀಯೋ
ಯದ್ವಾ ಜಯೇಮ ಯದಿ ವಾ ನೋ ಜಯೇಯುಃ ।
ಯಾನೇವ ಹತ್ವಾ ನ ಜಿಜೀವಿಷಾಮ-
ಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ

॥ ೬ ॥

ಕಾರ್ಪಣ್ಯದೋಷೋಪಹತಸ್ವಭಾವಃ
ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ ।
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ
ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್

॥ ೭ ॥

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ-
ದ್ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಮ್ ।
ಅವಾಪ್ಯ ಭೂಮಾವಸಪತ್ನಮೃದ್ಧಂ
ರಾಜ್ಯಂ ಸುರಾಣಾಮಪಿ ಚಾಧಿಪತ್ಯಮ್

॥ ೮ ॥

ಸಂಜಯ ಉವಾಚ

ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪ ।
ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವ ಹ

॥ ೯ ॥

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।
ಸೇನಯೋರುಭಯೋರ್ಮಧ್ಯೇ ವಿಷೀದಂತಮಿದಂ ವಚಃ

॥ ೧೦ ॥

ಶ್ರೀಭಗವಾನುವಾಚ-

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ

॥ ೧೧ ॥

ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ ।
ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಮ್

॥ ೧೨ ॥

ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ

॥ ೧೩ ॥

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।
ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ

॥ ೧೪ ॥

ಯಂ ಹಿ ನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।
ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ

॥ ೧೫ ॥

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ

॥ ೧೬ ॥

ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ ಕರ್ತುಮರ್ಹತಿ

॥ ೧೭ ॥

ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ

॥ ೧೮ ॥

ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಮ್ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ

॥ ೧೯ ॥

ನ ಜಾಯತೇ ಮ್ರಿಯತೇ ವಾ ಕದಾಚಿ-
ನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ

॥ ೨೦ ॥

ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ ।
ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಮ್

॥ ೨೧ ॥

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾ-
ನ್ಯನ್ಯಾನಿ ಸಂಯಾತಿ ನವಾನಿ ದೇಹೀ

॥ ೨೨ ॥

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ

॥ ೨೩ ॥

ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ।
ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ

॥ ೨೪ ॥

ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ

॥ ೨೫ ॥

ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಮ್ ।
ತಥಾಽಪಿ ತ್ವಂ ಮಹಾಬಾಹೋ ನೈವಂ ಶೋಚಿತುಮರ್ಹಸಿ

॥ ೨೬ ॥

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ

॥ ೨೭ ॥

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ

॥ ೨೮ ॥

ಆಶ್ಚರ್ಯವತ್ ಪಶ್ಯತಿ ಕಶ್ಚಿದೇನ-
ಮಾಶ್ಚರ್ಯವದ್ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ
ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್

॥ ೨೯ ॥

ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।
ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ

॥ ೩೦ ॥

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ

॥ ೩೦ ॥

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಮ್ ।
ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಮ್

॥ ೩೨ ॥

ಅಥ ಚೇತ್ ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ

॥ ೩೩ ॥

ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂ ತೇಽವ್ಯಯಾಮ್ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ

॥ ೩೪ ॥

ಭಯಾದ್ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಮ್

॥ ೩೫ ॥

ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ ।
ನಿಂದಂತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಮ್

॥ ೩೬ ॥

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ

॥ ೩೭ ॥

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ

॥ ೩೮ ॥

ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ

॥ ೩೯ ॥

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್

॥ ೪೦ ॥

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್

॥ ೪೧ ॥

ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ

॥ ೪೨ ॥

ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮಫಲಪ್ರದಾಮ್ ।
ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ

॥ ೪೩ ॥

ಭೋಗೈಶ್ವರ್ಯಪ್ರಸಕ್ತಾನಾಂ ತಯಾಽಪಹೃತಚೇತಸಾಮ್ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ

॥ ೪೪ ॥

ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್

॥ ೪೫ ॥

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ

॥ ೪೬ ॥

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ

॥ ೪೭ ॥

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ

॥ ೪೮ ॥

ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ ।
ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ

॥ ೪೯ ॥

ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ।
ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಮ್

॥ ೫೦ ॥

ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।
ಜನ್ಮಬಂಧವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಮ್

॥ ೫೧ ॥

ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ

॥ ೫೨ ॥

ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ

॥ ೫೩ ॥

ಅರ್ಜುನ ಉವಾಚ-

ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಮ್

॥ ೫೪ ॥

ಶ್ರೀಭಗವಾನುವಾಚ-

ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥಮನೋಗತಾನ್ ।
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ

॥ ೫೫ ॥

ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ

॥ ೫೬ ॥

ಯಃ ಸರ್ವತ್ರಾನಭಿಸ್ನೇಹಸ್ತತ್ತತ್ ಪ್ರಾಪ್ಯ ಶುಭಾಶುಭಮ್ ।
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ

॥ ೫೭ ॥

ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ

॥ ೫೮ ॥

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ

॥ ೫೯ ॥

ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ ।
ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ

॥ ೬೦ ॥

ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।
ವಶೇ ಹಿ ಯಸ್ಯೇಂದ್ರಿಯಾಣಿ ಸತ್ಯ ಪ್ರಜ್ಞಾ ಪ್ರತಿಷ್ಠಿತಾ

॥ ೬೧ ॥

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ

॥ ೬೨ ॥

ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ

॥ ೬೩ ॥

ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ

॥ ೬೪ ॥

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ

॥ ೬೫ ॥

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಮ್

॥ ೬೬ ॥

ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ ।
ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ

॥ ೬೭ ॥

ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ

॥ ೬೮ ॥

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ

॥ ೬೯ ॥

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ
ಸ ಶಾಂತಿಮಾಪ್ನೋತಿ ನ ಕಾಮಕಾಮೀ

॥ ೭೦ ॥

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ

॥ ೭೦ ॥

ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।
ಸ್ಥಿತ್ವಾಽಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ

॥ ೭೨ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಸಾಂಖ್ಯಯೋಗೋ ನಾಮ ದ್ವಿತೀಯೋಽಧ್ಯಾಯಃ

ಯದಾ ಧರ್ಮಗ್ಲಾನಿರ್ಭವತಿ ಜಗತಾಂ ಕ್ಷೋಭಕರಣೀ
ತದಾ ಲೋಕಸ್ವಾಮೀ ಪ್ರಕಟಿತವಪುಃ ಸೇತುಧೃಗಜಃ ।
ಸತಾಂ ಧಾತಾ ಸ್ವಚ್ಛೋ ನಿಗಮಗುಣಗೀತೋ ವ್ರಜಪತಿಃ
ಶರಣ್ಯೋ ಲೋಕೇಶೋ ಮಮ ಭವತು ಕೃಷ್ಣೋಽಕ್ಷಿ ವಿಷಯಃ ॥

–ಶ್ರೀ ಶಂಕರಾಚಾರ್ಯರು

ಸೂಚನೆ

ಸ್ಮಿತದಿಂ ಸೌಹೃದವೀಕ್ಷಾ- ।
ಮೃತದಿಂ ಫಲ್ಗುಣನ ಸಂತವಿಡುತವನುಲಿದಾ ॥
ಮತಿಮೋಹವ ನೀಗುವ ಜೀ- ।
ವಿತತತ್ತ್ವವ ಪಾಡಿದಂ ಜಗದ್ಗುರು ಕೃಷ್ಣಂ

॥ ೧ ॥

ಅವಿಚಾರದ ಕೃಪೆಯೇಂ ತ- ।
ತ್ತ್ವವಿಮರ್ಶಾಧಾರಮಿರದ ಧರ್ಮಾಸ್ಥೆಯದೇಂ ॥

ಸವಿಷಾದ ವಿರಕ್ತಿಯದೇಂ ।
ನವಕುಸುಮಾಸ್ತರಣಗುಪ್ತಗರ್ತಂ ಸುಖಮೇಂ

॥ ೨ ॥

ತತ್ತ್ವವ ಸಾಂಖ್ಯಾದ್ಯಾರ್ಷಕ- ।
ಶಾಸ್ತ್ರಂಗಳಿನರುಹಿ ನಿತ್ಯಸರ್ವತ್ರಾತ್ಮ- ॥
ವ್ಯಾಪ್ತಿಯನವಿನಶ್ಯತೆಯಂ ।
ವಿಸ್ತರದಿಂ ಪೇಳಿ ಭಯವ ಕಳೆದಂ ದೇವಂ

॥ ೩ ॥

ಸಾರಾಂಶ

ಪ್ರಾಣಿಹತ್ಯೆಯು ವಿಹಿತವಾಗುವಂಥ, ಕರುಣೆಯು ಅನುಚಿತವಾಗುವಂಥ ವಿಶೇಷ ಸಂದರ್ಭಗಳುಂಟೆಂದೂ ಧರ್ಮನಿರ್ಣಯಕ್ಕೆ ಬರಿಯ ವೈಯಕ್ತಿಕ ದೃಷ್ಟಿಯ ಅಥವಾ ಸಾಮಾನ್ಯ ಲೋಕಾಭಿಪ್ರಾಯದ ಆಧಾರ ಸಾಕಾಗದೆಂದೂ ಕರ್ತವ್ಯನಿರ್ಣಯವು ನಿತ್ಯಾನಿತ್ಯ ವಿವೇಕವನ್ನು ಅಪೇಕ್ಷಿಸುವುದೆಂದೂ ಅರ್ಜುನನಿಗೆ ತಿಳಿದಿರಲಿಲ್ಲ.

ಕರ್ಮವು ಪುರುಷಾಯತ್ತ; ಫಲವು ದೈವಾಯತ್ತ. ಕರ್ಮಮಾಡಿಯೂ ದೋಷವನ್ನು ಅಂಟಿಸಿಕೊಳ್ಳದಿರುವುದೇ ಕೌಶಲ.

ಪ್ರಕರಣ ೩

ಅಧ್ಯಾಯ ೨ - ಸಾಂಖ್ಯಯೋಗ ಅಥವಾ ತತ್ತ್ವವಿವೇಕಯೋಗ

ಪಾರಿಭಾಷಿಕ

ಗೀತೆಯಲ್ಲಿ ಹತ್ತಾರು ಶಾಸ್ತ್ರಪರಿಭಾಷೆಯ ಶಬ್ದಗಳು ಬಂದಿವೆ: ಆತ್ಮ, ಬ್ರಹ್ಮ, ಪ್ರಕೃತಿ—ಇಂಥವು. ಈ ಮಾತುಗಳ ಅರ್ಥವಿವರಣೆ ಗೀತಾಗ್ರಂಥದಲ್ಲಿಲ್ಲ. ಆ ಮಾತುಗಳು ಗೀತಾಪ್ರಸಂಗದ ಕಾಲಕ್ಕೆ ಎಷ್ಟೋ ಹಿಂದಿನಿಂದ ರೂಢಿಯಲ್ಲಿದ್ದುವು. ವೇದೋಪನಿಷತ್ತುಗಳಿಂದ ಬಂದಿರುವ ಶಬ್ದಗಳು ಅವು. ವೇದೋಪನಿಷತ್ತುಗಳು ಗೀತೆಗಿಂತ ಎಷ್ಟೋ ಸಹಸ್ರವರ್ಷ ಪ್ರಾಚೀನವಾದವು. ಆದದ್ದರಿಂದ ಆ ಮಾತುಗಳನ್ನು ವಿವರಿಸಿ ಹೇಳುವುದು ಶ್ರೀಕೃಷ್ಣಾರ್ಜುನವ್ಯಾಸರಿಗೆ ಅವಶ್ಯವಿದ್ದಿರಲಾರದು. ನಮ್ಮ ಮುಂದಿನ ವ್ಯಾಸಂಗಕ್ಕಾದರೋ ಆ ಶಬ್ದಗಳ ಅರ್ಥದ ತಿಳಿವಳಿಕೆಯು ಅವಶ್ಯವಾದ ಪೂರ್ವಸಿದ್ಧತೆ. ಆದದ್ದರಿಂದ ಅಂಥಾ ಮಾತುಗಳಲ್ಲಿ ಮುಖ್ಯವಾದವುಗಳ ಸ್ಥೂಲಪರಿಚಯವನ್ನು ಕೊಂಚವಾಗಿಯಾದರೂ ಈಗ ಮಾಡಿಕೊಳ್ಳೋಣ.

೧. ಅಧಿಧರ್ಮ: ಈ ಪದವು ಗೀತೆಯಲ್ಲಿಲ್ಲ. ಅದು ಬೇರೆ ಯಾವ ಪುರಾತನ ಗ್ರಂಥದಲ್ಲಿಯಾದರೂ ಇದ್ದರೆ ಆ ಸಂಗತಿ ನನಗೆ ತಿಳಿದಿಲ್ಲ. ಅದು ಅವಶ್ಯವಾದ ಪದವೆಂದು ನನಗೆ ತೋರಿದ್ದರಿಂದ ಅದನ್ನು ಈ ಗ್ರಂಥದಲ್ಲಿ ಬಳಸಿದೆ.

ಧರ್ಮವಿಚಾರವು ಆರು ಬೇರೆಬೇರೆ ದೃಷ್ಟಿಗಳಿಂದ ಸಂಭಾವನೀಯವಾಗಿದೆ :

- **ಧರ್ಮ:** ವಿಹಿತವೂ ಸ್ವಹಿತ ಪರಹಿತಸಾಧಕವೂ ಆದ ಲೌಕಿಕ ವೈದಿಕ ಕರ್ಮವ್ಯವಹಾರ ನೀತಿ ಮರ್ಯಾದೆಗಳ ಸಮುದಾಯ.
- **ಸ್ವಧರ್ಮ:** ಒಬ್ಬಾನೊಬ್ಬ ಮನುಷ್ಯನ ಕುಲ ಸಮಾಜ ಸನ್ನಿವೇಶಾದಿಗಳಿಂದ ನಿಶ್ಚಿಯಿಸಿದ್ದಾದ ಧರ್ಮವಿಶೇಷ.
- **ಅಧರ್ಮ:** (i) ಧರ್ಮವಲ್ಲದ್ದು; (ii) ಧರ್ಮವಿರುದ್ಧವಾದದ್ದು.
- **ವಿಧರ್ಮ:** (i) ಸ್ವಧರ್ಮವಲ್ಲದ್ದು, (ii) ಪರಧರ್ಮ.

- **ಉಭಯತಾಟಸ್ಥ್ಯ:** ಧರ್ಮ, ಅಧರ್ಮ—ಎರಡರ ವಿಷಯದಲ್ಲೂ ಉದಾಸೀನನಾಗಿರುವುದು.
- **ಅಧಿಧರ್ಮ:** ಧರ್ಮ ಅಧರ್ಮಗಳೆರಡನ್ನೂ ಮೀರಿದವನಾಗಿ, ಆದರೂ ಲೋಕದಲ್ಲಿ ಧರ್ಮಿಷ್ಠನಂತೆ ನಡೆದುಕೊಳ್ಳುವವನು. ಅವನು ಎಲ್ಲೆಲ್ಲೂ ಸ್ವಾತ್ಮವೊಂದನ್ನೇ ಕಾಣುತ್ತಿರುವನಾದದ್ದರಿಂದ ಅವನಿಗೆ ಶತ್ರುಮಿತ್ರರುಗಳಿಲ್ಲ; ರಾಗದ್ವೇಷಗಳಿಲ್ಲ; ಆದದ್ದರಿಂದ ಪುಣ್ಯಪಾಪಸ್ಪರ್ಶವಿಲ್ಲ; ಆದದ್ದರಿಂದ ಅವನಿಗೆ ವಿಧಿ ನಿಷೇಧಗಳ ಆವಶ್ಯಕತೆಯಿಲ್ಲ. ಹಾಗಿದ್ದರೂ ಅವನು ವಿಧಿ ನಿಷೇಧಗಳಿಗೆ ಒಳಪಟ್ಟವನು ಹೇಗೋ ಹಾಗೆ ಜಗದ್ವ್ಯವಹಾರಗಳನ್ನು ನಡಸುತ್ತ ಅವುಗಳ ಫಲಾಫಲಗಳನ್ನು ತಪ್ಪಿಸಿಕೊಂಡವನಾಗಿರುತ್ತಾನೆ.

  > ತ್ಯಜ ಧರ್ಮಮಧರ್ಮಂ ಚ...
  > ಯೇನ ತ್ಯಜಸಿ ತತ್ತ್ಯಜ ॥

೨. ಅವಿದ್ಯೆ: ಈ ಮಾತು ಗೀತೆಯಲ್ಲಿಲ್ಲ; ಶಾಸ್ತ್ರದಲ್ಲುಂಟು. ಅವಿದ್ಯೆಯೆಂದರೆ ಮನುಷ್ಯನ ಜ್ಞಾನವು ಸಾಕಾಗದಿರೋಣ (ನ್ಯೂನತೆ — Deficiency); ಜ್ಞಾನಶೂನ್ಯತೆಯಲ್ಲ. ಅವನಲ್ಲಿರುವ ಆತ್ಮದ ಚಿತ್ಪ್ರಭಾವವು ಅವನ ಪೂರ್ವಜನ್ಮಮಲಗಳಿಂದ ಮುಚ್ಚಲ್ಪಟ್ಟಿರುತ್ತದೆ. ಆದದ್ದರಿಂದ ಅವನು ಮಾಯೆಯನ್ನು ಮಾಯೆಯೆಂದು ಕಂಡುಕೊಳ್ಳಲು ಅಸಮರ್ಥನಾಗಿರುತ್ತಾನೆ. ಈ ಜ್ಞಾನದಲ್ಲಿ ಊನವಾಗಿರುವಿಕೆಯೇ ತಿಳಿವಳಿಕೆ ಸಾಕಾಗದಿರೋಣವೇ ಅವಿದ್ಯೆ.

೩. ಆತ್ಮ: ಆತ್ಮಶಬ್ದವು ಬಹ್ವರ್ಥವುಳ್ಳದ್ದು. ಅವುಗಳಲ್ಲಿ ಕೆಲವನ್ನು ಇಲ್ಲಿ ಗುರುತು ಮಾಡಿಕೊಳ್ಳೋಣ.

- **ದೇಹಸಹಿತವಾಗಿರುವ ಚೈತನ್ಯ:** ಮನುಷ್ಯನು "ನಾನು" "ನಾನು" ಎಂದುಕೊಳ್ಳುವಾಗ ತನ್ನ ಮನಸ್ಸಿನಲ್ಲಿ ಯಾವುದನ್ನು ಉದ್ದೇಶಿಸಿರುತ್ತಾನೋ ಅದು ಆತ್ಮ. ಈ ಆತ್ಮವು "ಅಹಂ" "ಅಹಂ" ಎಂದುಕೊಂಡು ತನ್ನನ್ನು ಪ್ರಪಂಚದಿಂದ ಪ್ರತ್ಯೇಕಮಾಡಿಕೊಳ್ಳುತ್ತದೆ. ಇದನ್ನು ದೇಹಾತ್ಮವೆನ್ನಬಹುದು. ದೇಹವೆಂಬುದರಲ್ಲಿ ಅಂಗಾಂಗಗಳು, ಮನಸ್ಸು ಬುದ್ಧಿಗಳು, ಪ್ರಾಣವಾಯುಗಳು—ಇವೆಲ್ಲವೂ ಸೇರಿರುತ್ತವೆ.

- **ಆತ್ಮವೆಂದರೆ ಮನಸ್ಸು ಎಂಬ ಅರ್ಥವುಂಟು:** ದೇಹದಿಂದ ಬೇರೆಯಾದ ಮನಸ್ಸು. "ಮಹಾತ್ಮಾ" "ದುಷ್ಟಾತ್ಮಾ" "ಪಾಪಾತ್ಮಾ" "ಪುಣ್ಯಾತ್ಮಾ" ಮೊದಲಾದ ಕಡೆ ಇದು ಕಾಣುತ್ತದೆ.
- **ಜೀವಾತ್ಮ:** ದೇಹ ಮನಸ್ಸುಗಳೆರಡರಿಂದಲೂ ಬೇರೆಯಾಗಿ ಎರಡಕ್ಕೂ ಶಕ್ತಿ ಕೊಡತಕ್ಕದ್ದಾಗಿರುವ ಒಳಗಿನ ಚೈತನ್ಯ. ಇದನ್ನು ಜೀವಾತ್ಮವೆಂದು ಕರೆಯುವುದುಂಟು. ಜೀವವೆಂಬುದರಲ್ಲಿ ಶುದ್ಧಚೈತನ್ಯದ ಜೊತೆಗೆ ಕೆಲವು ದೇಹಾದಿ ಪದಾರ್ಥಗಳು ಅಂಟಿಕೊಂಡಿರುತ್ತವೆ.
- **ಅಂತರಾತ್ಮ:** ಇದು ಯಾವ ಉಪಾಧಿಗಳೂ ಇಲ್ಲದ ಚೈತನ್ಯಾಂಶ. ಇದನ್ನು ಕೂಟಾತ್ಮವೆಂದೂ ಸೂತ್ರಾತ್ಮವೆಂದೂ ಕರೆಯುವುದುಂಟು. ಏಕೆಂದರೆ ಇದು ಮಣಿಹಾರದೊಳಗಣ ಸೂತ್ರದಂತೆ ಎಲ್ಲ ಜೀವಗಳಲ್ಲಿಯೂ ಅಂತಸ್ಸತ್ತ್ವವಾಗಿ ಇರುತ್ತದೆ. ಆದರೆ ಯಾವುದಕ್ಕೂ ಅಂಟಿಕೊಳ್ಳದೆ ಗೂಢವಾಗಿರುತ್ತದೆ.

  ಇಲ್ಲಿಯವರೆಗೆ ವ್ಯಷ್ಟಿಜಂತುವನ್ನು ಹೇಳಿದ್ದಾಯಿತು.

- **ಪರಮಾತ್ಮ:** ಹೀಗೆ ವ್ಯಷ್ಟಿಪ್ರಾಣಿಗಳಲ್ಲಿರುವ ಅಂತಶ್ಚೈತನ್ಯದ ಸಮಷ್ಟಿ ಭಾವವೇ ಪರಮಾತ್ಮ. ಇದು ಸಮಸ್ತ ಪ್ರಪಂಚದಲ್ಲಿಯೂ ವ್ಯಾಪಿಸಿ ಎಲ್ಲಕ್ಕೂ ಅದರದರ ಶಕ್ತಿಯನ್ನು ಕೊಟ್ಟುಕೊಂಡಿರತಕ್ಕದ್ದು. ಇದು ಪರಬ್ರಹ್ಮದ ಒಂದಾನೊಂದು ದಶೆ.

೪. ಈಶ್ವರ: ಸೃಷ್ಟಿಸ್ಥಿತಿಸಂಹಾರಾದಿ ಜಗತ್ಕಾರ್ಯಗಳಿಗೆ ಸಂಬಂಧಪಟ್ಟ ಬ್ರಹ್ಮವಸ್ತುವಿನ ದಶೆ.

೫. ಋತ: ಸೃಷ್ಟಿಯಲ್ಲಡಗಿರುವ ಕಾರ್ಯನಿಯಮ. ಇದು ಭೂಗ್ರಹ ಸೂರ್ಯಚಂದ್ರಾದಿ ಗ್ರಹಗಳ ಗತಿಕ್ಲೃಪ್ತತೆಯಲ್ಲಿಯೂ ಋತುಗಳ ಪರಿವರ್ತನಕ್ರಮದಲ್ಲಿಯೂ ವಂಶಬೀಜಸಂತತಿಯಲ್ಲಿಯೂ ಕಾಣಬರುತ್ತದೆ. ಜಗತ್ಪದಾರ್ಥಗಳಲ್ಲಿ ಪ್ರತಿಯೊಂದರಲ್ಲಿಯೂ ಕಾಣಬರುವ ವಿಶೇಷ ನೈಜಗುಣವು ಋತ. ಈ ಅರ್ಥದಲ್ಲಿ ಅದು ಧರ್ಮ ಬೀಜ. ಋತವೆಂದರೆ ಅಂತರಂಗದಲ್ಲಿ ಸ್ಫೂರ್ತಿಯಾದ ಸತ್ಯ ಅಥವಾ ಯಥಾರ್ಥ. ಕರ್ಮಕ್ಕೆ ನಿಯತ ಫಲವನ್ನು ದೊರಕಿಸುವ ಶಕ್ತಿಯು ಋತ.

೬. ಕರ್ಮ ಅಥವಾ ಜನ್ಮಾಂತರ ಕರ್ಮ: ಇದು ಮೂರು ವಿಧ:

- **ಸಂಚಿತ:** ಇದು ಎಷ್ಟೋ ಜನ್ಮಗಳಲ್ಲಿ ಮಾಡಿದ ಕರ್ಮಗಳ ಫಲಾಫಲ ಶೇಷಗಳ ಒಟ್ಟುರಾಶಿ. ಅವು ತಮ್ಮ ಫಲವನ್ನು ತಿನ್ನಿಸಲು ಕಾದುಕೊಂಡಿರುತ್ತವೆ.
- **ಆಗಾಮಿ:** ಯಾವ ಕರ್ಮಶೇಷವು ಇನ್ನೂ ಫಲಕ್ಕೆ ಬಾರದೆ ಇನ್ನು ಮುಂದೆ ಫಲ ಕೊಡಲು ಕಾದಿದೆಯೋ ಅದು.
- **ಪ್ರಾರಬ್ಧ:** ಇದು ಸಂಚಿತದಲ್ಲಿ ಒಂದು ಭಾಗ. ಅದು ಫಲ ಕೊಡುವುದಕ್ಕೆ ಪ್ರಾರಂಭವಾಗಿರುವ ಭಾಗ. ಧಾನ್ಯದ ರಾಶಿಯಲ್ಲಿ ಕೆಲವು ಕಾಳುಗಳು ಮೊಳೆಯಲಾರಂಭಿಸಿರುತ್ತವೆ. ಅಂಥವು ಪ್ರಾರಬ್ಧ. ಈ ಪ್ರಾರಬ್ಧವನ್ನು ಉಂಡೇ ಮುಗಿಸಬೇಕು.

ಅನಾದಿಯಾದ ಜೀವವು ಇಂದಿನ ಜನ್ಮಕ್ಕೆ ಹಿಂದೆ ಎಷ್ಟೆಷ್ಟೋ ಜನ್ಮಗಳಲ್ಲಿ ಬದುಕಿತ್ತಷ್ಟೆ? ಆಗ ಮಾಡಿದ ಕೋಟಿಗಟ್ಟಲೆ ಕರ್ಮಗಳಲ್ಲಿ ಯಾವಯಾವುದರ ಫಲವನ್ನು ಆಗಲೇ ಅನುಭವಿಸಿದ್ದಾಯಿತೋ ಅದು ಹೋಗಲಾಗಿ ಮಿಕ್ಕ ಕರ್ಮಶೇಷ; ಇಂದಿನ ಊಟಕ್ಕಾಗಿ ಹಿಂದಿನಿಂದ ಉಳಿದುಕೊಂಡು ಬಂದಿರುವ ಪಾಕಶೇಷ. ಇದು ಮೇಲೆ ಹೇಳಿದಂತೆ ಸಂಚಿತ, ಆಗಾಮಿ, ಪ್ರಾರಬ್ಧ—ಎಂದು ಮೂರು ಬಗೆ.

ರಾಗಿಯ ಕಾಳನ್ನು ನೆನಸಿಟ್ಟರೆ ಅದರಲ್ಲಿ ಕೆಲವು ಕಾಳುಗಳು ಬೇಗ ಮೊಳೆಯುತ್ತವೆ. ಇನ್ನು ಕೆಲವು ಸಾವಕಾಶವಾಗಿ ಮೊಳಕೆಯಾಗುತ್ತವೆ. ಮೊಳಕೆಯಾಗಿರುವುದು ಪ್ರಾರಬ್ಧ. ಈ ಪ್ರಾರಬ್ಧ ಕರ್ಮಗಳಲ್ಲಿ ಪ್ರಭೇದಗಳುಂಟು. ಅವು ಇಲ್ಲಿ ಅಪ್ರಕೃತ.

೭. ಕಾಲ–ದೇಶ: “ದೇಶ–ಕಾಲ” ನೋಡಿರಿ.

೮. ದೇಶ–ಕಾಲ: ಜಗತ್ತಿನ ವಸ್ತುಕ್ರಿಯಾಭೇದಗಳ ಅನುಭವದಿಂದ ನಮ್ಮ ಮನಸ್ಸಿನಲ್ಲುತ್ಪನ್ನವಾಗುವ ಗಾತ್ರಪರಿಮಾಣಕಲ್ಪನೆಗಳು. ದೇಶ, ಕಾಲ—ಇವೆರಡೂ ಜಗದಸ್ತಿತ್ವಾನುಭವವಾಚಕಗಳು. ಜಗತ್ತು ವಸ್ತುಗಳ ಮತ್ತು ಕ್ರಿಯೆಗಳ ಸಮುದಾಯ. ಜಗದ್ವಸ್ತುಗಳ ಗಾತ್ರವಿಸ್ತರಗಳನ್ನೂ ಅನ್ಯೋನ್ಯವ್ಯವಧಾನಗಳನ್ನೂ ದೇಶ (ಅಥವಾ ದಿಕ್ಕು) ಎಂಬ ಪದವು ಸೂಚಿಸುತ್ತದೆ. ಜಗತ್ಕ್ರಿಯೆಗಳ ವ್ಯಾಪ್ತಿವಿಸ್ತರಗಳನ್ನೂ ಅನ್ಯೋನ್ಯವ್ಯವಧಾನಗಳನ್ನೂ ಕಾಲ ಶಬ್ದವು ಸೂಚಿಸುತ್ತದೆ. ಎಲ್ಲಿ ಜಗತ್ತುಂಟೋ ಅಲ್ಲಿ ದೇಶಕಾಲಗಳ ಭಾವನೆಯುಂಟು. ಎಲ್ಲಿ ಜಗತ್ತಿಲ್ಲವೋ ಅಲ್ಲಿ ದೇಶಕಾಲಗಳ ಭಾವನೆಯಿಲ್ಲ;

ಅದೇ ವಿಶ್ವಾತೀತ; ಅದೇ ಅನಂತಸತ್ತಾ; ಅದೇ ಕೇವಲ ಸತ್ತಾ. ದೇಶಕಾಲಗಳು ಜಗತ್ತಿನೊಳಗಿನ ತದನುಭವ ಪ್ರಕಾರಗಳ ಸಂಜ್ಞೆಗಳು. ಈ ವಿಚಾರವನ್ನು ಅನುಬಂಧದಲ್ಲಿ ವಿಸ್ತರಿಸಿದೆ.

೯. ದೈವ–ವಿಧಿ: ಜೀವದ ಆಗುಹೋಗುಗಳನ್ನು ಗೊತ್ತುಮಾಡುವ ಭಗವದಾಜ್ಞೆ. ಇದೇ ಋತು ನಿಯಮ. ಅದು ಎರಡು ನೂಲೆಳೆಗಳ ಹೆಣಿಗೆಯಿಂದ ಆದ ಒಂದು ಹುರಿ. ಆ ಎರಡರಲ್ಲಿ ವ್ಯಷ್ಟಿಜೀವದ ಪ್ರಾಚೀನಕರ್ಮಫಲಿತವನ್ನು ಕುರಿತದ್ದು ಒಂದು ವಿಧಿ. ಸಮಷ್ಟಿ ಜಗತ್ತಿನ ಧರ್ಮಸಂಸ್ಥಿತಿಗಾಗಿ ಆದದ್ದು ಇನ್ನೊಂದು ವಿಧಿ. ಈ ಎರಡು ವಿಧಿಗಳು ಏಕೀಭವಿಸಿ ದೈವ.

೧೦. ಧರ್ಮ: ಯಾವುದು ಧರಿಸುತ್ತದೆಯೋ — ಉಳಿಸಿ ಕಾಪಾಡುತ್ತದೆಯೋ ಅದು ಧರ್ಮ. ಯಾವ ಬಗೆಯ ಕರ್ಮವೂ ಲೋಕವ್ಯವಹಾರವೂ ಜೀವನವನ್ನು ಪೋಷಿಸಿ ಮೇಲ್ಗತಿಗೆ ತರುತ್ತವೆಯೋ ಆ ಕ್ರಮನಿಯಮಗಳೇ ಧರ್ಮ.

ಇದು ಪ್ರಪಂಚಕ್ಕೆ ಸೇರಿದ್ದು. ಜಗತ್ತಿನ ವಿಷಯದಲ್ಲಿ ಮನುಷ್ಯಜೀವ ಹೇಗೆ ಹೇಗೆ ನಡೆದುಕೊಂಡರೆ ತಜ್ಜೀವಾಂತರ್ಗತವಾದ ವ್ಯಷ್ಟ್ಯಾತ್ಮವು ತನ್ನ ದೇಹೇಂದ್ರಿಯಾದಿ ಉಪಾಧಿಗಳನ್ನು ಕಳೆದುಕೊಂಡು ಪರಮಾತ್ಮಾನುಭವಮಾಡಿಕೊಂಡು ಆ ಮೂಲಕ ಪ್ರಪಂಚದಿಂದ ಅತೀತವಾಗುವುದು ಸಾಧ್ಯವೋ ಆ ನಡವಳಿಕೆ—ಆ ಜೀವಚರ್ಯೆ ಧರ್ಮ.

ಜೀವೋದ್ಧಾರಕವಾಗುವ ಜೀವಜಗದ್ವ್ಯವಸ್ಥೆಯೇ ಧರ್ಮ. ಇದರ ವ್ಯಾಪನೆ ತ್ರಿವಿಧದೇಹಗಳಲ್ಲಿ ಯಾವ ಒಂದರ ಸಂಪರ್ಕವಾದರೂ ಜೀವಕ್ಕೆ ತಗಲಿಕೊಂಡಿರುವವರೆಗೆ ಮಾತ್ರ. ಜೀವದಶೆ ಮುಗಿದರೆ ಧರ್ಮದ ಬಂಧನವಿಲ್ಲ (“ಅಧಿಧರ್ಮ” ನೋಡಿರಿ.)

೧೧. ಪ್ರಕೃತಿ: ಬ್ರಹ್ಮವಸ್ತುವಿನ ಶಕ್ತಿ ಮತ್ತು ಆ ಶಕ್ತಿಯ ವ್ಯಕ್ತಾವಸ್ಥೆ; ಅದರ ಬಾಹ್ಯರೂಪ.

೧೨. ಬ್ರಹ್ಮ: ಬ್ರಹ್ಮವೆಂದರೆ ದೊಡ್ಡದು ಎಂದು ಮೂಲಾರ್ಥ. ಶಾಸ್ತ್ರದ ರೂಢಿಯಲ್ಲಿ ಮಿತಿಮೇರೆಗಳಿಲ್ಲದ್ದು ಎಂದರ್ಥ. ಅದೇ ಅನಂತ. ದೇಶದ ಎಲ್ಲೆಕಟ್ಟಾಗಲಿ ಕಾಲದ ಎಲ್ಲೆಕಟ್ಟಾಗಲಿ ಅದನ್ನು ಬಾಧಿಸದು. ಅದು ಚೈತನ್ಯಸ್ವರೂಪವಾದದ್ದು. ಅದರ ಲಕ್ಷಣವನ್ನು ಮಾತುಗಳಿಂದ ಸಂಪೂರ್ಣವಾಗಿ ಹೇಳುವುದು ಸಾಧ್ಯವಾಗದು. ಏಕೆಂದರೆ ಮಾತುಗಳು ಪ್ರಪಂಚಕ್ಕೆ ಸೇರಿದವು. ಬ್ರಹ್ಮಚೈತನ್ಯವಾದರೋ ಪ್ರಪಂಚದಲ್ಲಿ ಸರ್ವವ್ಯಾಪಿಯಾಗಿರುವುದಲ್ಲದೆ

ಪ್ರಪಂಚವನ್ನು ಮೀರಿರುತ್ತದೆ, ಮನುಷ್ಯನ ಊಹೆಯನ್ನು ಮೀರಿರುತ್ತದೆ. ಈ ಬ್ರಹ್ಮವೇ ಪರಬ್ರಹ್ಮ. ಅದು ಮನುಷ್ಯನ ವಾಗ್ವ್ಯವಹಾರದಲ್ಲಿ ಪರಮಾತ್ಮವೆಂದೂ ಈಶ್ವರನೆಂದೂ ಕರೆಯಲ್ಪಡುತ್ತದೆ. (ಮೇಲೆ "ಆತ್ಮ" ಶಬ್ದವನ್ನು ನೋಡಿರಿ.) ಪ್ರಪಂಚದ ಮೂಲವು ಬ್ರಹ್ಮವಾಗಿ ಅದು ಪ್ರಪಂಚರೂಪದಲ್ಲಿ ಕಾಣಬರುವ ಅವಸ್ಥೆಯಲ್ಲಿ ಅದಕ್ಕೆ ಶಬಲಬ್ರಹ್ಮವೆಂದೂ ಕಾರ್ಯಬ್ರಹ್ಮವೆಂದೂ ಹೆಸರು. ಕಾರ್ಯಬ್ರಹ್ಮವೇ ಪರಮೇಶ್ವರ; ಏಕೆಂದರೆ ಈ ಈಶ್ವರದಶೆಯಲ್ಲಿ ಬ್ರಹ್ಮವು ಜಗತ್ತಿನ ಸೃಷ್ಟಿಪರಿಪಾಲನಾದಿ ಕಾರ್ಯಗಳನ್ನು ನಡಸುತ್ತದೆ. ಪ್ರಪಂಚಾತೀತವಾದ ದಶೆಯಲ್ಲಿ ಭಾವಿಸಲಾಗುವ ಬ್ರಹ್ಮವನ್ನು ಕುರಿತು ಶುದ್ಧಬ್ರಹ್ಮವೆಂದೂ ಕಾರಣಬ್ರಹ್ಮವೆಂದೂ ಪರಬ್ರಹ್ಮವೆಂದೂ ಶಾಸ್ತ್ರವ್ಯವಹಾರವುಂಟು.

ಈ ಮೇಲಣ ವಿವರಣೆಗಳು ಸ್ಥೂಲರೇಖೆಯವು. ಆತ್ಮಶಬ್ದ ಬ್ರಹ್ಮಶಬ್ದಗಳ ಅರ್ಥ ವಿಶೇಷಗಳು ಮುಂದೆಮುಂದೆ ವಿಶದವಾದಾವು.

೧೩. ಮಾಯೆ: ಜಗತ್ಕಣಗಳ ಸಂತತ ಪರಿಸ್ಪಂದನದಿಂದ ನೋಡುವವನ ಕಣ್ಣಿಗೂ ನೋಡಲ್ಪಡುವ ವಸ್ತುವಿಗೂ ನಡುವೆ ಮೋಡದಂಥ ಪಟಗಳೆದ್ದು, ಇರುವ ಪದಾರ್ಥವು ಇಲ್ಲದಂತೆಯೂ ಇಲ್ಲದ ಪದಾರ್ಥವು ಇರುವಂತೆಯೂ ತೋರುವುದು. ಇರುವ ಪದಾರ್ಥವನ್ನು ಮುಚ್ಚಿ ಮುಸುಕುವುದು ಆವರಣ; ಇಲ್ಲದ ಪದಾರ್ಥದ ತೋರಿಕೆಯನ್ನುಂಟುಮಾಡುವುದು ವಿಕ್ಷೇಪ.

"ಮಾಯಾ" ಶಬ್ದದ ಈ ಮತ್ತು ಇತರ ಭಾವಗಳನ್ನು ಗ್ರಂಥದಲ್ಲಿ ಕಾಣುವುದಾಗುತ್ತದೆ.

೧೪. ಮೂರ್ತ–ಅಮೂರ್ತ: ಪಂಚಭೂತಗಳಲ್ಲಿ ಪೃಥಿವಿ, ಅಪ್ಪು, ತೇಜಸ್ಸು—ಇವು ಮೂರ್ತಗಳು, ಎಂದರೆ ದೇಹಾಕಾರವನ್ನು ಧರಿಸುವವು. ಅಮೂರ್ತಗಳು ವಾಯು ಆಕಾಶಗಳು; ಇವು ದೇಹಾಕಾರಗಳಿಲ್ಲದವು. ಸದೇಹ, ಅದೇಹ ಎಂಬ ಸಾಮಾನ್ಯಾರ್ಥದಲ್ಲಿಯೂ ಮೂರ್ತ–ಅಮೂರ್ತ ಪದಗಳನ್ನು ಉಪಯೋಗಿಸುವುದುಂಟು.

೧೫. ವ್ಯಕ್ತ–ಅವ್ಯಕ್ತ: ವ್ಯಕ್ತವೆಂದರೆ ವಸ್ತುವು ತನ್ನೊಳಗಿನ ಗುಣಗಳನ್ನು ಹೊರಕ್ಕೆ ತೋರಿಸಿಕೊಂಡಿರುವುದು, ಪ್ರಕಟವಾಗಿರುವುದು. ಜಗತ್ತು ಬ್ರಹ್ಮಶಕ್ತಿಯ ವ್ಯಕ್ತರೂಪ.

ಅವ್ಯಕ್ತವೆಂದರೆ ಗುಣಪ್ರಕಟನೆಯಾಗದೆ ಇರುವುದು. ಬೀಜದೊಳಗೆ ಮೊಳಕೆಯಂತೆ ಗೂಢವಾಗಿರುವುದು. ಇದು ಸೃಷ್ಟಿಪೂರ್ವದ ಪ್ರಕೃತಿದಶೆ.

೧೯. ವ್ಯಷ್ಟಿ–ಸಮಷ್ಟಿ: ವ್ಯಷ್ಟಿಯೆಂದರೆ ಬೇರೆಬೇರೆಯಾಗಿರುವುದು; ಬಿಡಿಬಿಡಿಯಾಗಿ ಲೆಕ್ಕಕ್ಕೆ ಬರುವುದು.

ರೂಪಾಯಿ ಎಂದಾಗ ಒಂದು ನೂರು ಬೇರೆಬೇರೆ ಪೈಸೆಗಳು ಲೆಕ್ಕಕ್ಕೆ ಬರುತ್ತವೆ. ಇದು ವ್ಯಷ್ಟಿ. ಸಮಷ್ಟಿಯೆಂದರೆ ಬೇರೆಬೇರೆಯಾಗಿರುವ ವಸ್ತುಗಳನ್ನು ಒಟ್ಟುಗೂಡಿಸಿ ಲೆಕ್ಕ ಮಾಡುವುದು. ವ್ಯಷ್ಟಿಗಳ ಸಮಸ್ತದ ಏಕರೂಪವೇ ಸಮಷ್ಟಿ. ಒಂದು ನೂರು ಪೈಸೆಗಳನ್ನು ಒಟ್ಟಿಗೆ ರೂಪಾಯೆಂದು ಮನಸ್ಸಿಗೆ ತಂದುಕೊಂಡಾಗ ಅದು ಸಮಷ್ಟಿ.

೧೭. ವ್ಯಾಕೃತ–ಅವ್ಯಾಕೃತ: ವ್ಯಾಕೃತವೆಂದರೆ ಏಕಾಕಾರವಾದ ವಸ್ತುರಾಶಿಯಲ್ಲಿ ಅಂಗಾಂಗಗಳು ತೋರಿ ಭಾಗವ್ಯವಸ್ಥೆಯುಂಟಾಗಿರುವುದು. ಜಾತಿ, ವರ್ಗ ಮೊದಲಾಗಿ ವಿಂಗಡವಾಗಿರುವ ಸ್ಥಿತಿಯು ವ್ಯಾಕೃತ. ವ್ಯಾಕರಣವೆಂದರೂ ಅಷ್ಟೆ ಭಾಷೆಯನ್ನು ನಾಮವಾಚಕ, ಗುಣವಾಚಕ, ಕ್ರಿಯಾವಾಚಕ, ಅವ್ಯಯ, ಪ್ರತ್ಯಯ, ಉಪಸರ್ಗ ಮೊದಲಾಗಿ ವಿಂಗಡಿಸಿ ಅವುಗಳ ಅನ್ಯೋನ್ಯ ಸಂಬಂಧವನ್ನು ಗೊತ್ತುಮಾಡುವುದು.

ಅವ್ಯಾಕೃತವೆಂದರೆ ಅಂಥ ವಸ್ತುವಿಭಜನೆಯಿಲ್ಲದೆ ಅಖಂಡರಾಶಿಯಾಗಿ ಉಳಿದಿರುವುದು.

ಮೂರ್ತ-ಅಮೂರ್ತ, ವ್ಯಕ್ತ-ಅವ್ಯಕ್ತ, ವ್ಯಾಕೃತ-ಅವ್ಯಾಕೃತ—ಈ ಮೂರೂ ಸೃಷ್ಟಿವಿಧಾನದ ವಿವರಣೆಗೆ ಸಂಬಂಧಪಟ್ಟ ಪರಿಭಾಷೆ.

೧೮. ಸತ್–ಅಸತ್: ಈ ಜೋಡಿ ಪದಗಳಿಗೆ ಎರಡು ಮೂರು ಅರ್ಥಗಳುಂಟು:

ಮೊದಲನೆಯ ಅರ್ಥ:

ಸತ್: ಇರುವುದು; ಉಂಟಾದದ್ದು; ದಿಟವಾದದ್ದು.

ಅಸತ್: ಇರುವುದಲ್ಲದ್ದು; ನಿಜವಾದ ಇರುವಿಕೆಯಿಲ್ಲದ್ದು; ಸುಳ್ಳಾದದ್ದು.

ಈ ಅರ್ಥದಲ್ಲಿ ಅಸತ್ ಎಂದರೆ ಬರಿಯ ತೋರಿಕೆಯದು ಎಂದೂ ಆಗುತ್ತದೆ. ವಾಸ್ತವವಾಗಿ ಇರದೆ, —ಎಂದರೆ ಸ್ವಶಕ್ತಿಬಲದಿಂದ ಇಲ್ಲದೆ, —ಮತ್ತೊಂದರ ಆಶ್ರಯದಿಂದ ನಮ್ಮ ಕಣ್ಣು ಕಿವಿಗಳಿಗೆ ಕಿಂಚಿತ್ಕಾಲ ಮಾತ್ರ ಯಾವುದು ತಿಳಿದುಬರುತ್ತದೆಯೋ ಅದು ಅಸತ್ (ಅಸತ್ತಾ).

ಮರ ಸತ್; ಅದರ ನೆರಳು ಅಸತ್. ಮನುಷ್ಯನು ಸತ್; ಕನ್ನಡಿಯಲ್ಲಿ ಕಾಣುವ ಅವನ ಪ್ರತಿಬಿಂಬ ಅಸತ್. ಹೀಗೆಯೇ ಬ್ರಹ್ಮವು ಸತ್; ಜಗತ್ತು ಅಸತ್.

ಅಸತ್ತೇ ಮಿಥ್ಯೆ. ಸತ್ತೇ ತಥ್ಯ, ಯಥಾರ್ಥ.

ಅಸತ್ತು ಅಥವಾ ಮಿಥ್ಯೆ ಎಂದರೆ ಶೂನ್ಯವೆಂದಲ್ಲ; ಅತ್ಯಂತಾಭಾವವೆಂದಲ್ಲ; ಮೊಲದ ಕೊಂಬಿನಂತೆ ಕೇವಲ ಕಾಲ್ಪನಿಕವೆಂದಲ್ಲ. ತೋರಿಕೆ, ಸ್ವಪ್ನದಂಥಾದ್ದು—ಎಂದು ಭಾವ.

ಎರಡನೆಯ ಅರ್ಥ:

ಸತ್: ಗೋಚರವಾಗಿರುವ ಪದಾರ್ಥ. ಯಾವುದು ಇದೆಯೆಂದು ನಮಗೆ ಗೊತ್ತಾಗಿದೆಯೋ ಅದು ಸತ್.

ಅಸತ್: ಗೂಢವಾಗಿರುವ ಪದಾರ್ಥ. ಯಾವುದು ವಾಸ್ತವದಲ್ಲಿ ಇರುವುದಾದರೂ ನಮ್ಮ ಪಾಲಿಗೆ ಇಲ್ಲವೆಂಬಂತಿದೆಯೋ ಅದು ಅಸತ್.

> ಅಸದ್ವಾ ಇದಮಗ್ರ ಆಸೀತ್ ।

"ಮೊದಲು ಇದ್ದದ್ದು ಅಸತ್ತಲ್ಲವೆ?"

ಅಸತ್ತೆಂದರೆ ಅಗೋಚರ. ಈ ಅರ್ಥದಲ್ಲಿ ಅವ್ಯಕ್ತವೆಂದದ್ದು ಅಸತ್.

ಮೂರನೆಯ ಅರ್ಥ:

ಸತ್: ಒಳ್ಳೆಯದು; ಸಾಧುವಾದದ್ದು.

ಅಸತ್: ಸಾಧುವಲ್ಲದ್ದು; ಕೆಟ್ಟದ್ದು.

೧೯. ಚೈತನ್ಯ: ಜ್ಞಾನಸಮೇತವಾದ ಶಕ್ತಿ (ಯಂತ್ರದ ಶಕ್ತಿಯಲ್ಲ; ಜಡ ವಸ್ತುವಿನ ಶಕ್ತಿಯಲ್ಲ.)

ಉಪದೇಶಾರಂಭ

ಗೀತೆಯ ಎರಡನೆಯ ಅಧ್ಯಾಯದಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳಿವೆ :

1. ಮೊದಲನೆಯ ಅಧ್ಯಾಯದ ಪರಿಶೇಷ—ಎಂದರೆ ಅರ್ಜುನನ ಯುದ್ಧಜಿಹಾಸೋಕ್ತಿ.
2. ಆತ್ಮನಿತ್ಯತಾಪ್ರತಿಪಾದನೆ.
3. ಸ್ವಧರ್ಮಕರ್ತವ್ಯತೆ,
4. ತತ್ತ್ವಜ್ಞಲಕ್ಷಣ.

ಇವುಗಳನ್ನೊಂದೊಂದಾಗಿ ನೋಡೋಣ.

ಅರ್ಜುನಜಿಹಾಸೆ

ಮೊದಲ ಒಂಭತ್ತು ಶ್ಲೋಕಗಳಲ್ಲಿ ಅರ್ಜುನನ ನಿರ್ವಿಣ್ಣತೆಯ ಕಥೆ ಮುಂಬರಿದಿದೆ. ಅವನು ಬಿಲ್ಲುಬಾಣಗಳನ್ನು ಕೆಳಗೆಸೆದು, ಶೋಕದಲ್ಲಿ ಮುಳುಗಿ, ಕೈಕಟ್ಟಿ ಕುಳಿತದ್ದನ್ನು ನೋಡಿ, ಶ್ರೀಕೃಷ್ಣ ಆಕ್ಷೇಪಮಾಡಿದ— "ಅರ್ಜುನ, ನಿನಗೆ ಈ ಮನಸ್ಸಿನ ಕಶ್ಮಲ ಹೇಗೆ ಬಂತು? ಇದು ಆರ್ಯನಾದವನಿಗೆ ತಕ್ಕದ್ದಲ್ಲ. ಅಸ್ವರ್ಗ್ಯ, ಅಕೀರ್ತಿಕರ. ಈ ಹೇಡಿತನವನ್ನು ಬಿಡು. ಎದೆಗುಂದದೆ ಯುದ್ಧಕ್ಕೆ ಎದ್ದು ನಿಲ್ಲು."

ಈ ಮಾತಿಗೆ ಅರ್ಜುನ ಉತ್ತರ ಹೇಳಿದ: "ಕೃಷ್ಣ, ಪೂಜಾರ್ಹರಾದ ಭೀಷ್ಮದ್ರೋಣಾದಿಗಳ ಮೇಲೆ ಬಾಣ ಹಾಕಲು ನನಗೆ ಹೇಗೆ ಮನಸ್ಸಾದೀತು? ಗುರುಗಳನ್ನು ಕೊಲ್ಲದೆ ಬಿಟ್ಟಿದ್ದಕ್ಕಾಗಿ ಭಿಕ್ಷಾನ್ನದಿಂದ ಹೊಟ್ಟೆಹೊರೆದುಕೊಳ್ಳಬೇಕಾಗಿ ಬಂದರೂ ಅಂಥ ಭಿಕ್ಷಾನ್ನವು ರಕ್ತದಲ್ಲಿ ಕಲಸಿದ ಅನ್ನಕ್ಕಿಂತ ಮೇಲು. ನಾವು ಶತ್ರುಗಳನ್ನು ಜಯಿಸುವುದೆ, ಅಥವಾ ಶತ್ರುಗಳಿಂದ ಜಯಿಸಲ್ಪಡುವುದೆ? ಈ ಎರಡರಲ್ಲಿ ಯಾವ ಮಾರ್ಗ ಉತ್ತಮ? ಕೃಷ್ಣ, ನಮ್ಮ ಶತ್ರುಗಳು ಎಂಥವರು? ಯಾರನ್ನು ಕೊಂದಮೇಲೆ ಬದುಕೇ ನಮಗೆ ಬೇಡವಾದೀತೋ ಅಂಥವರು ಅವರು. ನನ್ನ ಸ್ವಭಾವದಲ್ಲಿ 'ನಾನು, ನನ್ನವರು' ಎಂಬೀ ತೆರದ ಸ್ವಾರ್ಥಕಾರ್ಪಣ್ಯವುಂಟು ("ಕಾರ್ಪಣ್ಯದೋಷೋಪಹತಸ್ವಭಾವಃ"). ಆ ಮಮತಾಭಾವದ ಕಾರಣದಿಂದಲೇ ನಾನು ಧರ್ಮವಿಷಯದಲ್ಲಿ ಮೂಢನಾಗಿದ್ದೇನೆ. ಭೂಲೋಕದಲ್ಲಿ ರಾಜ್ಯವನ್ನಾಗಲಿ ದೇವಲೋಕದಲ್ಲಿ ಇಂದ್ರಪದವಿಯನ್ನಾಗಲಿ ಪಡೆದರೆ ಅದರಿಂದ ಏನಾಗುತ್ತದೆ? ನನ್ನ ಸರ್ವೇಂದ್ರಿಯಗಳನ್ನೂ ಒಣಗಿಸುತ್ತಿರುವ ಈ ದುಃಖವನ್ನು ಪರಿಹಾರ ಮಾಡಬಲ್ಲದ್ದನ್ನಾವುದನ್ನೂ ಕಾಣೆ" —ಹೀಗೆ ಹೇಳಿ ಅರ್ಜುನನು—

> ನ ಯೋತ್ಸ್ಯೇ (ಯುದ್ಧಮಾಡೆ)

ಎಂದು ಸುಮ್ಮನಾಗಿ ಕುಳಿತ. ದ್ವಿತೀಯಾಧ್ಯಾಯದ ಪ್ರಥಮ ಪ್ರಕರಣ ಇಲ್ಲಿಗೆ ಮುಗಿಯುತ್ತದೆ.

ಈಗ ಭಗವಂತನು ಮತ್ತೆ ಸಮಾಧಾನಕೊಡಲು ಹೊರಟನು:

> ಅಶೋಚ್ಯಾನನ್ವಶೋಚಸ್ತ್ವಮ್ ॥ (೨-೧೧)

“ಯಾರ ವಿಷಯದಲ್ಲಿ ಶೋಕವು ತಕ್ಕದ್ದಲ್ಲವೋ ಅಂಥವರಿಗಾಗಿ ನೀನು ಶೋಕಪಡುತ್ತಿದ್ದೀಯೆ.”

ಹೀಗೆಂದರೆ ಏನು? ಗುರುಗಳಿಗಾಗಿಯೂ ಬಂಧುಗಳಿಗಾಗಿಯೂ ದುಃಖಪಡಕೂಡದೆ? ಹೃದಯವನ್ನು ಶಿಲೆಯನ್ನಾಗಿ ಮಾಡಿಕೊಳ್ಳಬೇಕೆ?

ಹೃದಯದಲ್ಲಿ ಕರುಣರಸ ಉಕ್ಕುವುದು ಸಹಜ. ಆದರೆ ಕೆಲವು ಸಂದರ್ಭಗಳಲ್ಲಿ ಆ ರಸವನ್ನು ತಡೆದುಕೊಳ್ಳುವುದು ಅವಶ್ಯವಾಗುತ್ತದೆ. ಧರ್ಮಯುದ್ಧವು ಅಂಥ ಸಂದರ್ಭ.

ಯುದ್ಧವೆಂಬುದು ಬಹುಜನಸಮೂಹಕ್ಕೆ ಸೇರಿದ ಘಟನೆ. ಅತಿವೃಷ್ಟಿ, ಅಗ್ನ್ಯುತ್ಪಾತ, ಭೂಕಂಪ, ಸಾಂಕ್ರಾಮಿಕರೋಗ—ಇಂಥವು ಒಂದು ಜನಸಮುದಾಯದ ಪಾಪದಂಡನೆಗಾಗಿ ದೈವವು ತಂದೊಡ್ಡುವ ಆಪತ್ತು. ಮನುಷ್ಯಕರ್ಮವು ಎಷ್ಟೋ ಸಂದರ್ಭಗಳಲ್ಲಿ ಫಲ ಬಿಡುವಾಗ ಕರ್ತನ ಜೊತೆಗೆ ಇತರರನ್ನೂ ಸೇರಿಸಿಕೊಳ್ಳುತ್ತದೆ.

> ಕರ್ತಾ ಕಾರಯಿತಾ ಚೈವ ಪ್ರೇರಕಶ್ಚಾನುಮೋದಕಃ ॥

ವ್ಯಕ್ತಿಕರ್ಮಕ್ಕೆ ವ್ಯಕ್ತಿಫಲ; ಸಾಮೂಹಿಕ ಕರ್ಮಕ್ಕೆ ಸಾಮೂಹಿಕ ಫಲ. ದುರ್ಯೋಧನಾದಿಗಳು ಯುದ್ಧಕರ್ತರಾದರೆ ಭೀಷ್ಮದ್ರೋಣರೂ ಕರ್ಣಶಲ್ಯರೂ ಅವರಿಗೆ ಇಷ್ಟದಿಂದಲೋ ಇಷ್ಟವಿಲ್ಲದೆಯೋ ಸಹಾಯಕರಾಗಿ ಬಂದರು. ಹಾಗೆಯೇ ಪ್ರತಿಪಕ್ಷದಲ್ಲೂ ನಡೆಯಿತು. ಧರ್ಮಕ್ಕೆಂದು ಬಂದವರು ಕೆಲವರಿದ್ದರೆ ಸೇಡಿಗೆಂದೋ ಕೀರ್ತಿಗೆಂದೋ ಇನ್ನೂ ಎಂಥೆಂಥ ಉದ್ದೇಶಗಳಿಂದಲೋ ಸೈನ್ಯದಲ್ಲಿ ನಿಂತವರು ಎರಡು ಪಕ್ಷಗಳಲ್ಲಿಯೂ ಇದ್ದರು. ಮೃತ್ಯು ಉಭಯಪಕ್ಷಗಳಿಗೂ ಸನ್ನಿಹಿತವಾಗಿತ್ತು. ಧರ್ಮವಿಹಿತವಾದ ಈ ಪ್ರಕರಣದಲ್ಲಿ “ಶೋಚ್ಯರು” ಎಂದರೆ ಯಾರು? “ಅಶೋಚ್ಯರು” ಯಾರು? ಯಾರು ಶೋಚ್ಯರಲ್ಲ; ಅಲ್ಲಿ ಸಾಯುವವರೆಲ್ಲರೂ ಅಶೋಚ್ಯರೇ. ಏಕೆ? ಮೃತ್ಯು ಕೆಲವರಿಗೆ ಪಾಪದಿಂದ ಬಿಡುಗಡೆಯಾಗಿ ಬರುತ್ತದೆ; ಇನ್ನು ಕೆಲವರಿಗೆ ಉತ್ತಮಗತಿಪ್ರದವಾಗಿ ಬರುತ್ತದೆ. ದುರ್ಯೋಧನ ದುಶ್ಶಾಸನಾದಿಗಳು ಅವರು ತಾವಾಗಿರುವಷ್ಟು ದಿವಸವೂ ಪಾಪೋದ್ಯುಕ್ತರಾಗಿಯೇ ಇರುತ್ತಾರೆ. ಕಶ್ಮಲಬೀಜವು ಅವರ ಅಂತರಂಗದಲ್ಲಿ ಜನ್ಮಜನ್ಮಾಂತರವಾಸನೆಯಾಗಿ ನೆಲಸಿರುತ್ತದೆ. ಆ ಕಶ್ಮಲದಿಂದ ಅವರು ಪಾರಾಗಬೇಕಾದರೆ ಆ ಕವಚವನ್ನು ಕಳಚಿಹಾಕುವುದು ಆವಶ್ಯಕ.

ಮರಣವು ಇದಕ್ಕೆ ಸಾಧಕವಾಗುತ್ತದೆ. ಯುದ್ಧದಲ್ಲಾಗುವ ಮರಣವೊಂದೇ ಅವರಿಗೆ ಪಾಪಸನ್ನಿವೇಶದಿಂದ ಉದ್ಧಾರವಾಗುವ ದಾರಿ.

ಹೀಗೆ ಮೃತ್ಯುವು ದುಷ್ಟರಿಗೆ ದುಷ್ಟತನದ ಆಶ್ರಯದಿಂದ ಮೋಚಕವಾಗುತ್ತದೆ. ಆದದ್ದರಿಂದ ಅದಕ್ಕಾಗಿ ಶೋಕಪಡತಕ್ಕದ್ದಲ್ಲ.

ಇನ್ನು ಧರ್ಮಿಷ್ಠರೋ ಎಂದರೆ ಮೃತ್ಯುವು ಅವರಿಗೂ ಉಪಕಾರವೇ. ಭೀಷ್ಮದ್ರೋಣಾದಿಗಳು ಮಹಾತ್ಮರು, ಪುಣ್ಯಲೋಕಗಳಿಗೆ ಅರ್ಹರಾದವರು. ಆದರೂ ಯಾವುದೋ ಪೂರ್ವಜನ್ಮದ ಕರ್ಮಶೇಷಕ್ಕಾಗಿ ದೇಹಧಾರಣ ಮಾಡಿದ್ದವರು. ಆ ಕರ್ಮಶೇಷ ಪೂರಯಿಸಿದ ಮೇಲೆ ಅವರು ಊರ್ಧ್ವಲೋಕಗಳನ್ನು ಸೇರಲರ್ಹರಾದವರು. ಆದದ್ದರಿಂದ ಸುಕೃತಿಗಳಿಗೆ ಧರ್ಮಯುದ್ಧದಲ್ಲಿ ಬಂದ ಮೃತ್ಯುವು ಸ್ವರ್ಗಾದ್ಯುತ್ತಮಲೋಕಪ್ರಾಪಕವಾಗುತ್ತದೆ. ಹೀಗೆ ಶೋಕವು ಈ ಸಂದರ್ಭದಲ್ಲಿಯೂ ಅನುಚಿತವಾಗುತ್ತದೆ.

ಹಾಗಾದರೆ ಶೋಕವು ಉಚಿತವಾಗುವುದು ಯಾವಾಗ? ಯಾವಾಗಲೂ ಶೋಕವು ಉಚಿತವಲ್ಲ. ಅದನ್ನು ತಡೆಯುವುದು ಅಸಾಧ್ಯವೆಂಬುದು ಬೇರೆಯ ಮಾತು. ಸಹಜವಾದದ್ದೆಲ್ಲ ಸಮೀಚೀನವಾದದ್ದೆಂದು ವಾದಿಸಲಾಗದು. ನಮ್ಮ ದೇಹಕ್ರಿಯೆಗಳಲ್ಲಿ ಎಷ್ಟೋ ಸಹಜವಾದವು; ಆದರೆ ಇಷ್ಟವಾದವಲ್ಲ. ಅಂಥ ದೇಹಕ್ರಿಯೆಗಳನ್ನು ತಡೆಯಲು ಯತ್ನಿಸುತ್ತೇವೆ. ಮಾನಸ ಕ್ರಿಯೆಗಳಲ್ಲಿಯೂ ಹಾಗೆಯೇ. ಸಹಜವಾದದ್ದೆಲ್ಲವೂ ಅನುಮೋದನಾರ್ಹವಾದದ್ದಲ್ಲ. ಬಂಧುಮಿತ್ರವಿಯೋಗದಿಂದ ದುಃಖ ಉಕ್ಕುವುದು ಸಹಜ. ಆದರೆ ಜೀವಗತಿಯ ತತ್ತ್ವವನ್ನೂ ಪ್ರಕೃತಿವಿಧಿಯನ್ನೂ ಜ್ಞಾಪಕಕ್ಕೆ ತಂದುಕೊಂಡು ದುಃಖವನ್ನು ಉಪಶಮನ ಮಾಡಿಕೊಳ್ಳುವುದು ವಿವೇಕ. ಈ ವಿವೇಕವನ್ನು ಭಗವಂತನು ಈಗ ಉಪದೇಶಿಸುತ್ತಾನೆ—ಜೀವದ ಅಂತಸ್ತತ್ತ್ವವಾದ ಆತ್ಮದ ಸ್ವರೂಪವನ್ನು ವರ್ಣಿಸುವುದರಿಂದ.

ಆತ್ಮನಿತ್ಯತೆ

ಇಲ್ಲಿಂದ ಉಪದೇಶಾರಂಭ. ಅರ್ಜುನನು ಕೇಳಿದ್ದ ಪ್ರಶ್ನೆಗಳು ಮುಖ್ಯವಾಗಿ ನಾಲ್ಕು:

1. ಪ್ರಾಣಿಹತ್ಯೆ ಪಾಪವಲ್ಲವೆ?
2. ಕರುಣೆ ಕರ್ತವ್ಯವಲ್ಲವೆ?
3. ಸ್ವಾರ್ಥಲೋಭನೆಗಳು ತ್ಯಾಜ್ಯವಲ್ಲವೆ?
4. ಧರ್ಮ ಎಲ್ಲಕ್ಕಿಂತ ದೊಡ್ಡದಲ್ಲವೆ?

ಶ್ರೀಕೃಷ್ಣನು ಉತ್ತರ ಹೇಳಬೇಕಾಗಿದ್ದದ್ದು ಈ ಪ್ರಶ್ನೆಗಳಿಗೆ.

ಅರ್ಜುನನ ಮನಸ್ಸಿನಲ್ಲಿ ಈ ನಾಲ್ಕು ಗುಣಗಳೂ ಇದ್ದವು. ಪಾಪಭೀರುತೆ, ಜೀವಕಾರುಣ್ಯ, ಸ್ವಾರ್ಥವರ್ಜನೆ, ಧರ್ಮಶ್ರದ್ಧೆ—ಇವೆಲ್ಲ ಉತ್ತಮೋತ್ತಮ ಗುಣಗಳೆಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅಂಥ ಉತ್ತಮ ಗುಣಶಾಲಿಗೂ ಉಪದೇಶವಾಗಬೇಕಾದದ್ದುಂಟೆ? ಉಂಟು: ಏಕೆಂದರೆ ಆ ಗುಣಗಳು ಅರ್ಜುನನಲ್ಲಿದ್ದದ್ದು **ವಿಚಾರಸಿದ್ಧ**ವಾಗಿ ಅಲ್ಲ, ಪ್ರಕೃತಿಪ್ರೇರಿತವಾಗಿ ಮತ್ತು ಅನ್ಯಾನುಕರಣವಾಗಿ. ನಾವೆಲ್ಲರೂ ಸಾಮಾನ್ಯವಾಗಿ ಅಂಥವರೇ. ಸ್ವಾಭಾವಿಕವಾಗಿ ಕೆಲವು ಸ್ನೇಹಪ್ರವೃತ್ತಿಗಳು ನಮ್ಮೊಳಗಡೆ ಇರುತ್ತವೆ, ಅದನ್ನೇ ನಾವು “ಕರುಳು ಸೆಳೆಯುವುದು” ಎನ್ನುತ್ತೇವೆ. ಅದರಲ್ಲಿ ಕೃತ್ರಿಮವಿಲ್ಲ; ಆದರೂ ಅದನ್ನು ಹಾಗೆಯೇ ಪರಿಶುದ್ಧವೆಂದು ಭಾವಿಸತಕ್ಕದ್ದಲ್ಲ. ಆ ಸ್ನೇಹದ ಒಳಗಡೆ ಎಲ್ಲೋ ಒಂದಿಷ್ಟು ಮಮತೆಯ ಕಣವೋ, ಸ್ವಾರ್ಥದ ಕಣವೋ, ಸ್ವಾಭಿಮಾನದ ಕಣವೋ ಅಂಟಿಕೊಂಡು, ಕಣ್ಣಿಗೆ ಕಾಣದಂತೆ ಇರಬಹುದು. ಇದನ್ನು ಪರೀಕ್ಷಿಸಿ ಶೋಧಿಸಿದ್ದಾದಮೇಲೆಯೇ ಸ್ನೇಹವು ನಿರ್ಮಲವೂ ಹಿತವೂ ಆಗತಕ್ಕದ್ದು. ಅದೇ ರೀತಿಯಲ್ಲಿ ಎಷ್ಟೋ ಗುಣಗಳನ್ನು ನಾವು ಸುತ್ತಮುತ್ತಲಿನವರಿಂದ ಕಲಿಯುತ್ತೇವೆ. ನಮ್ಮ ಅಭಿಪ್ರಾಯಗಳನ್ನು ನಾವು ಇತರರಿಂದ ಗ್ರಹಿಸಿಕೊಂಡಿರುತ್ತೇವೆ. ಯಾವೊಂದು ನಡವಳಿಕೆಯೇ ಆಗಲಿ, ಅಭ್ಯಾಸವೇ ಆಗಲಿ, ಅಭಿಪ್ರಾಯವೇ ಆಗಲಿ, ನಂಬಿಕೆಯೇ ಆಗಲಿ, ಅದು ಬಹುಜನರೂಢಿಯೆಂಬ ಕಾರಣದಿಂದಲೇ ಶುದ್ಧವೆಂದೂ ಹಿತವೆಂದೂ ಭಾವಿಸತಕ್ಕದ್ದಲ್ಲ. ಅದನ್ನು ನಾವು ಸ್ವತಂತ್ರವಾಗಿ ವಿಮರ್ಶೆಮಾಡಿ ಅದರಲ್ಲಿರುವ

ಒಳ್ಳೆಯ ಅಂಶವನ್ನು ಕಂಡುಕೊಂಡಿರಬೇಕು. ಹೀಗೆ ನಮ್ಮ ಅಭಿಪ್ರಾಯಗಳೂ ಪ್ರವೃತ್ತಿಗಳೂ ವಿಚಾರಶುದ್ಧವಾಗಬೇಕು.

ಇಂಗ್ಲಿಷ್ ತಾತ್ತ್ವಿಕ ಜಾನ್ ಸ್ಟೂಅರ್ಟ್ ಮಿಲ್ (J.S. Mill) ಹೇಳಿರುವ ಸೂತ್ರ ತಮ್ಮ ಜ್ಞಾಪಕದಲ್ಲಿರಬಹುದು. ಮನುಷ್ಯನು ಒಂದು ಅಭಿಪ್ರಾಯವನ್ನೋ ಕಾರ್ಯಕ್ರಮವನ್ನೋ ಅದು ಒಳ್ಳೆಯದು ಎಂದು ಇತರರ ಹೇಳಿಕೆಯಿಂದ ನಂಬಿ ಅನುಸರಿಸಿದರೆ ಸಾಲದು; ಅದು ಹೇಗೆ ಒಳ್ಳೆಯದು, ಯಾವಯಾವ ಕಾರಣಗಳಿಂದ ಒಳ್ಳೆಯದು—ಎಂಬುದನ್ನು ತಾನೇ ವಿಚಾರವಿಮರ್ಶೆಯಿಂದ ತಿಳಿದುಕೊಂಡಿರಬೇಕು. ಆಗ ಅದು ಪೂರ್ಣ ಫಲಕಾರಿಯಾಗುತ್ತದೆ. ಮೂಢವಿಶ್ವಾಸದಿಂದ ಮಾತ್ರ ಬಂದ ಒಳ್ಳೆಯದೆಂಬ ಭಾವನೆ ಅಷ್ಟು ಫಲಕಾರಿಯಾಗದು.

ಇದೇ ಮಾತನ್ನೇ ಮಿಲ್ಲಿಗಿಂತ ಎಷ್ಟೋ ಸಾವಿರ ವರ್ಷಗಳಷ್ಟು ಹಳೆಯದಾದ ವೇದ ಹೇಳಿದೆ:

> ಯದೇವ ವಿದ್ಯಯಾ ಕರೋತಿ... ।
> ತದೇವ ವೀರ್ಯವತ್ತರಂ ಭವತಿ ॥
> ವಿಜ್ಞಾನಂ ಯಜ್ಞಂ ತನುತೇ ॥

ವಿದ್ಯೆ ಎಂದರೆ ಜ್ಞಾನ, –ಅರ್ಥಜ್ಞಾನ, –ಕಾರಣಕಾರ್ಯಸಂಬಂಧಪರಾಮರ್ಶೆಯಿಂದ ಉತ್ಪನ್ನವಾದ ಜ್ಞಾನ. ವಿಚಾರಸಿದ್ಧವಾದ ಜ್ಞಾನವೇ ವಿಜ್ಞಾನ. ಇಂಥಾ ತರ್ಕವಿವೇಕಪೂರ್ವಕವಾದ ಜ್ಞಾನವಿದ್ದಲ್ಲಿ ಕ್ರಿಯೆ ಸಾರ್ಥಕವಾಗುತ್ತದೆ. ಅರ್ಜುನನಲ್ಲಿ ಅಂಥಾ ವಿಚಾರಶುದ್ಧಿ ಇರಲಿಲ್ಲ. ಅವನ ಪಾಪಭೀರುತೆ ಇತರರ ಮಾತನ್ನು ಕೇಳಿ ಬಂದದ್ದು, ವಿಚಾರಪೂರ್ವಕವಾದದ್ದಲ್ಲ. ಅವನ ಕರುಣೆ ಪ್ರಾಕೃತವಾಸನೆಯದು; ಸಂಸ್ಕೃತವಾದದ್ದಲ್ಲ. ಅದು ಹೃದಯದ್ದು, ಬುದ್ಧಿಯದಲ್ಲ. ಅವನ ವಿರಕ್ತಿಯೂ ಅಂಥಾದ್ದೇ; ಒಂದು ಕ್ಷಣದ ಕಷ್ಟದರ್ಶನದಿಂದ ಬಂದದ್ದು, ಪ್ರಸಕ್ತ ವಸ್ತುಗಳ ನಿತ್ಯಾನಿತ್ಯವಿವೇಚನೆಯಿಂದ ಬಂದದ್ದಲ್ಲ. ಸಂಸಾರಿಗೆ ಮನೆಯಲ್ಲಿ ಯಾವುದೋ ಅಕ್ರಮ, ಯಾವುದೋ ಅವಿಧೇಯತೆ ಕಾಣಿಸಿದಾಗ ಅವನು "ತಲೆಯ ಮೇಲೆ ಗುಡ್ಡೆ ಹಾಕಿಕೊಂಡು ಎಲ್ಲಿಗಾದರೂ ಹೋಗಿಬಿಡುತ್ತೇನೆ," "ಎಲ್ಲೋ ಹಾಳಾಗಿಹೋಗುತ್ತೇನೆ" ಎಂದು ಶಾಪವಿಡುತ್ತಾನೆ. ಮರುಕ್ಷಣದಲ್ಲಿಯೇ ಕೆಟ್ಟುಹೋಗಿದ್ದದ್ದನ್ನು ಸರಿಪಡಿಸಲು ಹೊರಡುತ್ತಾನೆ. ಅರ್ಜುನನಿಗೆ ಬಂದಿದ್ದ ವೈರಾಗ್ಯ ಆ ಜಾತಿಯದು; ವಿವೇಕದಿಂದ ಸ್ಥಿರಪಟ್ಟದ್ದಲ್ಲ, ಆತುರದ್ದು. ಇನ್ನು ಅವನ ಧರ್ಮಶ್ರದ್ಧೆಯೂ ಅಂಥಾದ್ದೇ,

ಲೋಕರೂಢಿಯದು; ಧರ್ಮಮೂಲದ ಜ್ಞಾನದಿಂದ ಫಲಿಸಿದ್ದಲ್ಲ. ಧರ್ಮದ ತತ್ತ್ವಸ್ವರೂಪ ತನಗೆ ತಿಳಿದಿಲ್ಲವೆಂದು ಅವನೇ ಒಪ್ಪಿಕೊಂಡಿದ್ದಾನೆ:

ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ ॥

ಕೃಷ್ಣನು ಅರ್ಜುನನ ಪ್ರಶ್ನೆಗಳಿಗೆ ಉತ್ತರ ಹೇಳಲಾರಂಭಿಸಿದಾಗ ಕೊಂಚ ಪರಿಹಾಸಮಾಡಿದನೆಂದು ಧ್ವನಿತವಾಗುತ್ತದೆ— "ಪ್ರಹಸನ್ನಿವ", "ಪ್ರಜ್ಞಾವಾದಾಂಶ್ಚಭಾಷಸೇ" —ಈ ಮಾತುಗಳಿಂದ. ಅರ್ಜುನನಿಗಿದ್ದದ್ದು ಭ್ರಾಂತಿಜನ್ಯವಾದ ಜ್ಞಾನ, ಯಥಾರ್ಥಜ್ಞಾನವಲ್ಲ. ಅವನು ಪಾಪ, ಪುಣ್ಯ, ವೈರಾಗ್ಯ, ಧರ್ಮ ಮೊದಲಾದ ದೊಡ್ಡ ದೊಡ್ಡ ಶಾಸ್ತ್ರಶಬ್ದಗಳನ್ನು ಹೇಳಿದ, —ಪ್ರಾಜ್ಞ ಪಂಡಿತ ವಾಕ್ಯಗಳನ್ನಾಡಿದ. ಆ ಪ್ರಾಜ್ಞಪದಗಳ ಮೂಲವೇನು? ಅಂತರ್ಭಾವವೇನು? ವ್ಯಾಪನೆಯೇನು? ಎಂಬುದನ್ನು ಅವನರಿಯ. ಅದೇ "ಪ್ರಜ್ಞಾವಾದ" ಈ ಭ್ರಾಂತಿಯನ್ನು ನಿವಾರಣೆಮಾಡುವುದೇ ಭಗವಂತನಿಗಿದ್ದ ಕಾರ್ಯ.

"ಅರ್ಜುನ, ನೀನು ಧರ್ಮಶ್ರದ್ಧೆಯುಳ್ಳವನು. 'ಉತ್ಸಾದ್ಯನ್ತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ' ಎಂದು ಹೇಳಿ ಜಾತಿಧರ್ಮಗಳ ವಿಷಯದಲ್ಲಿ ಚಿಂತೆ ವ್ಯಾಕುಲಗಳನ್ನು ತೋರಿಸಿದೆಯಲ್ಲಾ—ನಿನ್ನ ಜಾತಿಯ ಧರ್ಮವೇನು? ಅದನ್ನು ಜ್ಞಾಪಕಮಾಡಿಕೊ. ನಿನ್ನ ಸ್ವಧರ್ಮವನ್ನು ಮರೆತು 'ಧರ್ಮ' 'ಧರ್ಮ' ಎಂದು ಶುಕ ಪಾಠ ಮಾಡಿದರೆ ತತ್ತ್ವ ಹಿಡಿದು ಮಾತನಾಡಿದಂತಾಯಿತೆ?"

ಅರ್ಜುನನ ಎಲ್ಲ ಪ್ರಶ್ನೆಗಳಿಗೂ ಮೂಲಭೂತವಾದದ್ದು ಆತ್ಮವಿಷಯ. ಲೋಕಬಾಂಧವ್ಯ, ಕರುಣೆ, ಪುಣ್ಯ, ಪಾಪ, ಧರ್ಮ—ಇವೆಲ್ಲ ಮನುಷ್ಯನ ಜೀವವನ್ನು ಆಶ್ರಯಿಸಿಕೊಂಡಿರುವ ಸಂಗತಿಗಳು. ಜೀವವು ಆತ್ಮಚೈತನ್ಯದ ಒಂದಾನೊಂದು ಪರಿಸ್ಥಿತಿ. ಆದಕಾರಣ ಮೊದಲು ಆತ್ಮಸ್ವರೂಪವನ್ನು ತಿಳಿದುಕೊಂಡರೆ, ಆ ಜ್ಞಾನದಿಂದ ಮಿಕ್ಕೆಲ್ಲ ಪ್ರಶ್ನೆಗಳಿಗೂ ಸಮಾಧಾನವನ್ನು ಕಾಣಲಾಗುತ್ತದೆ. ಆದದ್ದರಿಂದ ಮೊದಲು ಆತ್ಮವೆಂದರೆ ಏನು, ಅದೆಂಥಾದ್ದು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯ.

ಧರ್ಮಾಧರ್ಮಗಳನ್ನು ನಮ್ಮ ಸ್ವಾಭಾವಿಕ ಪ್ರವೃತ್ತಿಗಳಿಂದಲೇ ಆಗಲಿ ಕೇವಲ ಲೋಕಾಭಿಪ್ರಾಯದಿಂದಲೇ ಆಗಲಿ ನಿರ್ಣಯಿಸಲಾಗದು. ಅರ್ಜುನನ ಮನಸ್ಸಿನಲ್ಲಿದ್ದದ್ದು

ಕರುಣೆಯೇ ಆದರೂ ಅದು ಪ್ರಕೃತಿಯಿಂದ ಉತ್ಪನ್ನವಾದ ಒಂದು ಮನೋವಿಕಾರವೇ ಹೊರತು ವಿಚಾರದಿಂದ ಉಪಪನ್ನವಾದದ್ದಲ್ಲ. ಅವನ ಪುಣ್ಯಪಾಪಭಾವನೆಗಳು ಇತರ ಜನರ ಮಾತನ್ನು ಕೇಳಿ ಅವನು ಮಾಡಿಕೊಂಡವು. ಅವುಗಳಿಗೂ ಸೋಪಪತ್ತಿಕವಾದ ಆಧಾರಗಳಿರಲಿಲ್ಲ. ಧರ್ಮವು ತತ್ತ್ವದ ಆಧಾರದಿಂದ ನಿರ್ಣಯವಾಗಬೇಕಾದದ್ದು. ತತ್ತ್ವವಾದರೋ ಶಾಸ್ತ್ರದಿಂದ ನಿರ್ಣೀತವಾಗಬೇಕಾದದ್ದು. ತತ್ತ್ವದ ವಿಷಯವು ಲೋಕಾತೀತವಾಗಿ ಇಂದ್ರಿಯಗಳಿಗೆ ಸಿಕ್ಕಲಾರದ್ದಾದದ್ದರಿಂದ ಅದು ವೇದಶಾಸ್ತ್ರಗಳಿಂದಲೇ ನಿರ್ಧಾರವಾಗಬೇಕಾದದ್ದು. ಆದದ್ದರಿಂದಲೇ ಭಗವಂತನು ಹದಿನಾರನೆಯ ಅಧ್ಯಾಯದಲ್ಲಿ

> ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ॥ (೧೬-೨೪)

—ಎಂದು ಹೇಳಿದ್ದಾನೆ. ತತ್ತ್ವದಿಂದ ಧರ್ಮನಿರ್ಣಯ. ಶಾಸ್ತ್ರವಿಚಾರದಿಂದ ತತ್ತ್ವನಿರ್ಣಯ.

ನಿತ್ಯಾನಿತ್ಯ ವಿವೇಕ

ನಮ್ಮ ಅನುಭವದಲ್ಲಿರುವ ಪ್ರಪಂಚದಲ್ಲಿ ಎರಡು ವಿಧದ ವಸ್ತುಗಳು ಕಾಣಿಸುತ್ತಿವೆ. ಕೆಲವು ಪದೇಪದೇ ಬದಲಾಯಿಸಿಕೊಂಡು ವೃದ್ಧಿಕ್ಷಯಾದಿವಿಕಾರಗಳನ್ನು ಪಡೆಯುತ್ತಿರತಕ್ಕವು. ಇವೇ ಅನಿತ್ಯಗಳು. ಇದೇ ಪ್ರತ್ಯಕ್ಷ ಪ್ರಪಂಚದ ಬಹುಭಾಗ. ಆದರೆ ಈ ಪ್ರತ್ಯಕ್ಷಪ್ರಪಂಚವು ಕೊಂಚಕಾಲವಾದರೂ ಇರುತ್ತದಲ್ಲ? ಅದಕ್ಕೆ ಆ ಮಿತವಾದ ಅಸ್ತಿತ್ವ ಎಲ್ಲಿಂದ ಬರುತ್ತದೆ? ಆ ಪ್ರತ್ಯಕ್ಷಪ್ರಪಂಚವು ಮಿತವಾಗಿಯಾದರೂ ಚೇಷ್ಟೆಗಳನ್ನು ಮಾಡುತ್ತದಲ್ಲ? ಅದಕ್ಕೆ ಆ ಪ್ರಾಣಶಕ್ತಿ ಎಲ್ಲಿಂದ ಬಂತು? ಅದಕ್ಕೆ ಆಕಾರ ಕೊಟ್ಟವರು ಯಾರು, ವಿಕಾರ ತರುವವರು ಯಾರು?

ಪ್ರಪಂಚಶಕ್ತಿಗೆ ಮೂಲವಾದದ್ದು ನಿತ್ಯ. ಅದೇ ಬ್ರಹ್ಮವಸ್ತು. ಅನಿತ್ಯಗಳ ಹಿಂದೆಯೂ ಒಳಗಡೆಯೂ ಕೆಲಸ ನಡಸುತ್ತಿರುವ ಚೈತನ್ಯವೇ ಬ್ರಹ್ಮವೆಂಬುದು. ಹೀಗೆ ಅನಿತ್ಯವಾದ ಜಗತ್ತು, ನಿತ್ಯವಾದ ಬ್ರಹ್ಮ—ಎಂದು ನಮ್ಮ ಪ್ರಪಂಚವು ಎರಡು ಜಾತಿಯ ಪದಾರ್ಥಗಳಾಯಿತು.

ಪ್ರಪಂಚವು ಅಸತ್ತು, ಎಂದರೆ ಸ್ವತಂತ್ರವಾದ ಸತ್ತಾ (ಇರುವಿಕೆ) ಇಲ್ಲದ್ದು. ಬ್ರಹ್ಮವು ಸತ್ತಾ ಉಳ್ಳದ್ದು. ಅದರ ಅಸ್ತಿತ್ವವೇ ಜಗತ್ತಿಗೆ ಆಧಾರ.

ಈಗ ಸ್ವಾಮಿ ಈ ಎರಡು ಪದಾರ್ಥಗಳ ಸಂಬಂಧವನ್ನು ನಿರೂಪಿಸುತ್ತಾನೆ. ಏಕೆಂದರೆ ಅರ್ಜುನನ ಪ್ರಶ್ನೆಗೆ ಕೊಡಬೇಕಾದ ಉತ್ತರವು ಈ ನಿತ್ಯಾನಿತ್ಯ ವಸ್ತು ನಿರ್ಣಯದಿಂದ ಹೊರಡಬೇಕಾಗಿದೆ. ಯುದ್ಧಕ್ರಿಯೆಯು ಅನಿತ್ಯವಾದದ್ದಕ್ಕೆ ಸಂಬಂಧಪಟ್ಟದ್ದು.

> ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
> ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥

"ಅಸತ್ತಿನಿಂದ, ಎಂದರೆ ಇರುವಿಕೆಯಿಲ್ಲದ್ದರಿಂದ ಇರುವಿಕೆ ಹುಟ್ಟುವುದಿಲ್ಲ. ಇರುವುದರಿಂದ ಇಲ್ಲದಿರುವಿಕೆ ಹುಟ್ಟುವುದಿಲ್ಲ, ಉಂಟಾಗುವುದಿಲ್ಲ. [ಎಂದರೆ, ಇಲ್ಲದ್ದು ಹುಟ್ಟುವುದಿಲ್ಲ, ಇರುವುದು ಹೋಗುವುದಿಲ್ಲ.] ಇರುವುದು, ಇಲ್ಲದಿರುವುದು—ಅಸ್ತಿತ್ವ, ನಾಸ್ತಿತ್ವ—ಇವುಗಳ ಮರ್ಮವನ್ನು ತಿಳಿದುಕೊಂಡವರು ತತ್ತ್ವಜ್ಞರು."

ಅರ್ಜುನನ ಪ್ರಶ್ನೆ ಪ್ರಾಣಿಹತ್ಯಾಪ್ರಸಕ್ತಿಯಿಂದ ಎದ್ದದ್ದಲ್ಲವೆ? ಹತ್ಯೆ ಎಂದರೆ ಇಲ್ಲದಂತಾಗುವುದು. ಇಲ್ಲವೆಂಬುದೇನು, ಇರೋಣವೆಂಬುದೇನು? ಮೊದಲು ಇದರ ತತ್ತ್ವವನ್ನು ನೋಡೋಣ—ಎನ್ನುತ್ತಾನೆ ಭಗವಂತ. 'ಇರುವುದು', 'ಇರುತ್ತದೆ' ಎಂಬ ಮಾತು ಯಾವುದಕ್ಕೆ ಸಲ್ಲುತ್ತದೆ? ಯಾವುದಕ್ಕೆ ಇಲ್ಲವೆಂಬ ಮಾತು ಇಲ್ಲವೋ ಆ ವಸ್ತುವಿಗೆ ಮಾತ್ರ ಸಲ್ಲುತ್ತದೆ. ಯಾವುದಕ್ಕೆ ನಾಶವಿಲ್ಲವೋ, ಯಾವುದಕ್ಕೆ ವಿಕಾರ ಬಾರದೋ ಅದನ್ನು ನಾವು "ಸತ್", "ಸತ್ತಾ", "ಸತ್ಯ" ಎನ್ನುವುದು ಯುಕ್ತವಾಗುತ್ತದೆ. ಇಂಥ ನಿರ್ವಿಕಾರವೂ ಅವಿನಶ್ಯವೂ ಆದದ್ದು ಬ್ರಹ್ಮವಸ್ತು.

> ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ ।
> ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥

"ಈ ಜಗತ್ತೆಲ್ಲವೂ ಯಾವುದರಿಂದ ವಿಸ್ತರಿಸಲ್ಪಟ್ಟಿದೆಯೋ ಅದನ್ನು ನಾಶವಿಲ್ಲದ್ದೆಂದು ತಿಳಿ. ಹೆಚ್ಚುಕಡಮೆಗಳಾಗದ ಆ ಶಾಶ್ವತವಸ್ತುವಿಗೆ ಯಾರೂ ನಾಶವನ್ನುಂಟುಮಾಡಲು ಶಕ್ತರಲ್ಲ."

> ಅನ್ತವನ್ತ ಇಮೇ ದೇಹಾ ನಿತ್ಯಸ್ಯೋಕ್ತಾ ಶರೀರಿಣಃ ।
> ಅನಾಶಿನೋऽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥

"ನಮ್ಮೀ ದೇಹಗಳು ಹೇಗಿದ್ದರೂ ಕೊನೆಗಾಣತಕ್ಕವೇ. ಅವುಗಳೊಳಗೆ ಅವನ್ನು ಧರಿಸಿಕೊಂಡಿರುವ ಆತ್ಮಚೈತನ್ಯವಾದರೋ ನಿತ್ಯವಾದದ್ದು; ನಾಶವಿಲ್ಲದ್ದು; ಅಳತೆಗೂ ತೂಕಕ್ಕೂ ಪರೀಕ್ಷೆಗೂ ಸಿಕ್ಕದ್ದು. ಅರ್ಜುನ, ನಿನ್ನ ಬಾಣದಿಂದಲೂ ಕತ್ತಿಯಿಂದಲೂ ಅದಕ್ಕೇನೂ ಬಾಧೆಯಾಗದು. ಆದದ್ದರಿಂದ ಏಳು, ಹೊಡೆ."

ವಸ್ತುಸ್ಥಿತಿ ಹೀಗಿರಲಾಗಿ ಕೊಲ್ಲುವವನೆಂದು ನಿನ್ನನ್ನೂ, ಇನ್ನೊಬ್ಬನನ್ನು ಕೊಲೆಯಾದವನೆಂದೂ ಯಾರಾದರೂ ಹೇಳಿದರೆ ಅವನು ತತ್ತ್ವವನ್ನರಿಯದ ಅಜ್ಞಾನಿ. ಇಲ್ಲಿ ಕೊಲ್ಲುವವನೂ ಇಲ್ಲ, ಕೊಲ್ಲಿಸಿಕೊಂಡವನೂ ಇಲ್ಲ. ಆತ್ಮವಸ್ತುವಿಗೆ ಹುಟ್ಟೋಣವೂ ಇಲ್ಲ, ಸಾಯೋಣವೂ ಇಲ್ಲ. ಅದಕ್ಕೆ ಭೂತ ವರ್ತಮಾನ ಭವಿಷ್ಯತ್ತು ಎಂಬ ಕಾಲಭೇದಗಳಿಲ್ಲ. ಅದು ಎಂದೆಂದಿಗೂ ಏಕಾಕಾರವಾಗಿ ಇದ್ದುಕೊಂಡಿರಬಲ್ಲದ್ದು.

ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥
ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ ॥

ಆತ್ಮವು ಅಬಾಧ್ಯ

“ಅರ್ಜುನ, ಲೋಕದಲ್ಲಿರುವ ಪದಾರ್ಥಗಳು ಎರಡು: ಒಂದು ದೇಹ, ಇನ್ನೊಂದು ದೇಹಿ. ದೇಹವೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿದಿರುವ ವಸ್ತು. ಅದರಲ್ಲಿ ಭೌತವಾದ ಅಂಗಾಂಗಗಳು ಮಾತ್ರವಲ್ಲದೆ ಮನಸ್ಸು ಬುದ್ಧಿ ಮೊದಲಾದ ಅಂತಃಕರಣಗಳೂ ಅವುಗಳಲ್ಲಿ ಜನ್ಮಜನ್ಮಾಂತರಗಳಿಂದ ಸೇರಿಕೊಂಡಿರುವ ಕರ್ಮಋಣಶೇಷಗಳೂ ವಾಸನಾಪ್ರವೃತ್ತಿಗಳೂ ಸೇರಿರುತ್ತವೆ. ಇವೇ ಜೀವಲಕ್ಷಣಗಳು. ಆತ್ಮದಿಂದ ಬೇರೆಯಾದ ಎಲ್ಲ ಸೂಕ್ಷ್ಮದ್ರವ್ಯಗಳೂ ದೇಹದ ಅಂಶಗಳೇ. ದೇಹಿಯು ದೇಹದೊಳಗಿರುವ ಚೈತನ್ಯ. ಅದೇ ಶುದ್ಧಾತ್ಮ. ದೇಹವು ಆತ್ಮದ ಸ್ವತ್ತು. ಆತ್ಮವು ದೇಹದ ಸ್ವಾಮಿ. ಇಲ್ಲಿಯ ವಿಶೇಷವೇನೆಂದರೆ—ದೇಹವು ಬದಲಾಯಿಸತಕ್ಕದ್ದು; ಆತ್ಮ ಶಾಶ್ವತವಾಗಿರತಕ್ಕದ್ದು. ದೇಹವನ್ನು ನಾಶಪಡಿಸಲಾದೀತು; ಆತ್ಮವನ್ನು ನಾಶಪಡಿಸಲಾಗದು.

“ಅರ್ಜುನ, ಯುದ್ಧರಂಗದಲ್ಲಿ ಕೊಲ್ಲಬೇಕಾಗುತ್ತದೆ ಎಂದಲ್ಲವೆ ನಿನ್ನ ದುಃಖ? ಕೊಂದರೆ ನಷ್ಟವಾಗುವುದು ಯಾವುದು—ದೇಹವೆ, ದೇಹಿಯೆ? ದೇಹಿಯಾದ ಆತ್ಮವಲ್ಲ.

> ನಾಯಂ ಹನ್ತಿ ನ ಹನ್ಯತೇ ॥
> ದೇಹೀ ನಿತ್ಯಮವಧ್ಯೋಽಯಮ್ ॥

“ಇನ್ನುಳಿದದ್ದು ದೇಹ. ಅದಕ್ಕಾಗಿ ಅಳುವೆಯೇನು? ನೀನು ಅತ್ತರೆ ಅದು ಉಳಿಯತಕ್ಕದ್ದಲ್ಲ. ಅದು ಯಾರೇನು ಮಾಡಿದರೂ ಅಳಿದುಹೋಗತಕ್ಕದ್ದೇ.

> ಜಾತಸ್ಯ ಹಿ ಧ್ರುವೋ ಮೃತ್ಯುಃ ॥

“ನಾವು ಹಳೆ ಬಟ್ಟೆ ಕಳಚಿ ಹೊಸಬಟ್ಟೆಯುಡುವಂತೆ. ಜೀವದಶೆಯಲ್ಲಿರುವ ಆತ್ಮ ಒಂದು ದೇಹವನ್ನು ತೊರೆದು ಇನ್ನೊಂದನ್ನು ಧರಿಸಿಕೊಳ್ಳುತ್ತದೆ. ಮನುಷ್ಯನಿಗೆ ಬಾಲ್ಯ ಯೌವನ ಮುಪ್ಪುಗಳು ಹೇಗೆ ತಪ್ಪಿಸಿಕೊಳ್ಳಲಾಗದ ಅವಸ್ಥೆಗಳೋ, ಮರಣದಿಂದ ಬೇರೊಂದು ದೇಹವನ್ನು ಪಡೆಯುವುದೂ ಹಾಗೆ ತಪ್ಪದೆ ಬರುವ ಘಟನೆ:

ತಸ್ಮಾದಪರಿಹಾರ್ಯೇಽರ್ಥೇ
ನ ತ್ವಂ ಶೋಚಿತುಮರ್ಹಸಿ ॥

“ನಮ್ಮಿಂದ ಪರಿಹರಿಸಲಾಗದ ಸಂದರ್ಭಕ್ಕಾಗಿ ಗೋಳಿಟ್ಟರೆ ಬರುವ ಫಲವೇನು? ಹೇಗಾದರೂ ಮೃತ್ಯು ಎಲ್ಲರಿಗೂ ಎಂದೋ ಒಂದು ದಿನ ತಪ್ಪದೆ ಬರತಕ್ಕದ್ದು. ಗೋಳಾಟದಿಂದ ಅದು ತಪ್ಪದು.”

ಭಗವಂತನು ದೇಹಕ್ಕೆ ಹಳೆಯ ಬಟ್ಟೆಯ ಉಪಮಾನವನ್ನು ಕೊಟ್ಟಿದ್ದಾನೆ: “ವಾಸಾಂಸಿ ಜೀರ್ಣಾನಿ.” ಇದರಲ್ಲಿ ಒಂದು ಸ್ವಾರಸ್ಯವಿದೆ. ಜೀರ್ಣವಾದ ಬಟ್ಟೆಯನ್ನು ಯಾರೂ ಪುನಃ ಗಟ್ಟಿಮಾಡಲಾರರು. ಬಿಸಾಡುವುದೊಂದೇ ಅದಕ್ಕೆ ತಕ್ಕ ವಿನಿಯೋಗ. ಹಾಗೆಯೇ ಬಹುಪ್ರಬಲವಾದ ದುರ್ಗುಣಗಳಿಂದಲೂ ದುರಾಶೆಗಳಿಂದಲೂ ದುರಭ್ಯಾಸಗಳಿಂದಲೂ ಜೀರ್ಣವಾದ ದೇಹವನ್ನು ತೊಳೆದು ನಿರ್ಮಲಪಡಿಸುವುದು ಯಾರಿಗೂ ಸಾಧ್ಯವಿಲ್ಲ. ಕೊಳೆಬಟ್ಟೆಯನ್ನು ಬಿಸಾಡುವವರೆಗೂ ಹೇಗೆ ಕಮಟುನಾತ ತಪ್ಪದೋ, ಹೇನುಬಿದ್ದು ಹುಣ್ಣಾದ ತಲೆಯ ಕೂದಲನ್ನು ವಪನಮಾಡಿಸಿ ಬಿಸಾಡುವವರೆಗೂ ಆ ತಲೆ ಹೇಗೆ ಚೊಕ್ಕಟವಾಗಲಾರದೋ ಹಾಗೆಯೇ ಚಿರಕಾಲದಿಂದ ದುಷ್ಟತನಕ್ಕೆ ಆಶ್ರಯ ಕೊಟ್ಟಿರುವ ದೇಹವನ್ನು ಮೃತ್ಯು ಬಂದು ಕಳಚಿಹಾಕಿದ ಹೊರತು ಅದರೊಳಗಿನ ಜೀವಕ್ಕೆ ಪರಿಶುದ್ಧತೆಯ ಆಶೆಯಿರದು. ಆದದ್ದರಿಂದ ದುಷ್ಟದೇಹವನ್ನು ಧರಿಸಿರುವ ಜೀವಕ್ಕೆ ಆ ದೇಹದ ಅವಸಾನವೇ ಉಪಕಾರವಾದೀತು. ಪಾಪದೇಹಧಾರಿಗೆ ಮರಣವೇ ಮೋಚಕ. ಆದದ್ದರಿಂದ ಯುದ್ಧದಲ್ಲಿ ಒದಗಿಬರುವ ಮೃತ್ಯುವು ಅಪಕಾರವೆಂದು ಭಾವಿಸಬೇಕಾಗಿಲ್ಲ. ರೋಗಗ್ರಸ್ತನಾಗಿ ಬಳಲಿ ಕೊಳೆಯಲ್ಲಿಯೇ ಇದ್ದುಬಿಡುತ್ತೇನೆನ್ನುವ ಸೋಮಾರಿಯನ್ನು ನಿರ್ಬಂಧದಿಂದ ಹಿಡಿದೆಬ್ಬಿಸಿ ಹಳೆ ಬಟ್ಟೆಬರೆಗಳನ್ನು ತೆಗೆದುಹಾಕಿ ಒಗೆದ ಬಟ್ಟೆಯನ್ನುಡಿಸುವುದು ಹೇಗೋ, ಯುದ್ಧವು ಯಾರಿಗಾದರೂ ದೇಹವನ್ನು ಬಿಡಿಸುವುದು ಹಾಗೆ. ಅವರಿಗೆ ತದನಂತರ ಇನ್ನೂ ಉತ್ತಮವಾದ ವಸ್ತ್ರಲಾಭವಾಗುತ್ತದೆ.

ಅರ್ಜುನನು ಇನ್ನೊಂದು ಪ್ರಶ್ನೆ ಕೇಳಬಹುದು: ಮೃತ್ಯು ಅನಿವಾರ್ಯವಾಗಿ ಬಂದರೆ ಬಂದುಕೊಳ್ಳಲಿ. ಆದರೆ ಅದಕ್ಕೆ ಕಾರಣ ನನ್ನ ಕೈಯಿಂದ ಏಕೆ ಆಗಬೇಕು? ಆ ಪಾಪ ನನ್ನ ಕೈಗೆ ಏಕೆ ಅಂಟಬೇಕು? ಇದಕ್ಕುತ್ತರ ಹೀಗಿದೆ.

ಸ್ವಧರ್ಮಕರ್ತವ್ಯತೆ

ಪ್ರತಿಯೊಂದು ಪ್ರಾಣಿಯೂ ದೇಹ-ಆತ್ಮ ಎಂಬ ಎರಡಂಶಗಳುಳ್ಳದ್ದಷ್ಟೆ? ಆತ್ಮ ಆ ದೇಹಸ್ಥಿತಿಯಲ್ಲಿ ಜೀವವೆನ್ನಿಸಿಕೊಳ್ಳುತ್ತದೆ. ಜೀವವು ಎರಡು ಪಾರ್ಶ್ವಗಳುಳ್ಳ ವಸ್ತು. ಒಂದು ಪಕ್ಕದಲ್ಲಿ ಅದು ಜಡವಾದ ದೇಹ; ಇನ್ನೊಂದು ಪಕ್ಕದಲ್ಲಿ ಅದು ಚೇತನವಾದ ಆತ್ಮ. ದೇಹಕಾರಣದಿಂದ ಜೀವವು ಲೋಕಜೀವನದಲ್ಲಿ ನಾನಾ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಪ್ರಕೃತಿ, ಕರ್ಮ, ದೈವ ಮೊದಲಾದ ನಾನಾ ಕಾರಣಗಳ ಗದ್ದಲದಲ್ಲಿ ಜೀವವು ತನ್ನ ಆತ್ಮದಶೆಯನ್ನು ಮರೆತುಕೊಂಡು ದುಃಖಪಡುತ್ತದೆ. ಅದು ತನ್ನ ಜೀವಾವಸ್ಥೆಯಿಂದ ಬಿಡಿಸಿಕೊಂಡು ಆತ್ಮಸ್ವರೂಪವನ್ನು ಕಂಡುಕೊಂಡು ಅನುಭವಿಸಿದಾಗ ನಿಜವಾದ ಆನಂದ. ಅದೇ ಮೋಕ್ಷ. ಆ ಸ್ವಾತ್ಮಸಂದರ್ಶನವು ಜೀವಕ್ಕಾಗಬೇಕಾದರೆ ಅದು ಕೆಲವು ಶಿಕ್ಷಣಸಾಧನೆಗಳನ್ನು ಪಡೆದುಕೊಳ್ಳಬೇಕು. ಆತ್ಮವು—

> ನಿತ್ಯಃ ಸರ್ವಗತಃ ಸ್ಥಾಣುಃ
> ಅಚಲೋಽಯಂ ಸನಾತನಃ ।
> ಅವ್ಯಕ್ತೋಽಯಮಚಿನ್ತ್ಯೋಽಯಮ್
> ಅವಿಕಾರ್ಯೋಽಯಮುಚ್ಯತೇ ॥

ಹೀಗೆ ಆತ್ಮವು ಲೋಕಾತೀತವಾದದ್ದು, ಲೋಕವಿಲಕ್ಷಣವಾದದ್ದು, ಉಪಮಾನೋಪಮೇಯಗಳಿಗೆ ಸಿಕ್ಕಲಾರದ್ದು, ವರ್ಣನೆಗೆ ಶಕ್ಯವಲ್ಲದ್ದು. ಅಂಥಾದ್ದನ್ನು ಕಂಡು ಅನುಭವಿಸಬೇಕೆಂದರೆ ಆತ್ಮಕ್ಕೆ ಮುಸುಕಿರುವ ದೇಹ ಪ್ರಪಂಚಗಳ ಪೊರೆಪಟಗಳನ್ನು ಸಡಲಿಸಿ ಬಿಸಾಡಬೇಕು. ಇದಕ್ಕುಪಾಯವೇ ಧರ್ಮ.

ಧರ್ಮವೆಂದರೆ ಏನು?

ಈಗ 'ಧರ್ಮ' ಎಂಬ ಪದದ ಅರ್ಥವನ್ನು ಕೊಂಚಮಟ್ಟಿಗಾದರೂ ವಿಶದಪಡಿಸಿಕೊಂಡರೆ ಅದು ನಮ್ಮ ಮುಂದಿನ ವ್ಯಾಸಂಗಕ್ಕೆ ಅನುಕೂಲವಾಗುತ್ತದೆ. ಆ ಪದವನ್ನು ಈಗಾಗಲೇ ಅನೇಕ ಸಾರಿ ಉಪಯೋಗಿಸಿದ್ದಾಗಿದೆ; ಇನ್ನು ಮುಂದೆಯೂ ಪದೇ ಪದೇ ಉಪಯೋಗಿಸಬೇಕಾಗುತ್ತದೆ. ಗೀತಾಶಾಸ್ತ್ರವನ್ನು ಜೀವನಧರ್ಮಶಾಸ್ತ್ರ ಎಂದು ವರ್ಣಿಸಿದ್ದಾಗಿದೆ. ಭಗವಂತನೇ ಗೀತೆಯ ವಿಷಯ ಧರ್ಮವೆಂದು ಸ್ಪಷ್ಟಪಡಿಸಿದ್ದಾನೆ:

> ಯ ಇಮಂ ಧರ್ಮ್ಯಂ ಸಂವಾದಮಾವಯೋಃ ॥ (೧೮-೭೦)

'ಧರ್ಮ' ಶಬ್ದದ ಅರ್ಥವನ್ನು ಅವಲಂಬಿಸಿಕೊಂಡು ಮಿಕ್ಕೆಲ್ಲ ಪ್ರಸಂಗಗಳೂ ಇವೆ. ಆದದ್ದರಿಂದ ಧರ್ಮವೆಂದರೆ ಏನು ಎಂದು ಇಲ್ಲಿ ವಿಚಾರಮಾಡುವುದು ಸಂಗತವಾಗಿದೆ.

ಮೊದಲು ಶಬ್ದಾರ್ಥ: ಧರ್ಮ ಎಂದರೆ ಧರಿಸಬಲ್ಲದ್ದು. "ಧಾರಣಾತ್ ಧರ್ಮಮ್ ಇತ್ಯಾಹುಃ". ಯಾವ ಕಟ್ಟುಪಾಡು ಎಲ್ಲವನ್ನೂ ತಕ್ಕಂತೆ ಕಾಪಾಡಬಲ್ಲದೋ ಅದು ಧರ್ಮ. "ಧರ್ಮೋ ರಕ್ಷತಿ ರಕ್ಷಿತಃ". ಯಾವುದನ್ನು ನಾವು ಪಾಲಿಸಿದ್ದಾದರೆ ಅದು ನಮ್ಮನ್ನು ಪಾಲಿಸುವುದೋ ಆ ವಿಧದ ನೀತಿ ನಿಯಮಗಳು ಧರ್ಮ.

ಪ್ರಯೋಗದಲ್ಲಿ ಧರ್ಮವು ಮುಖ್ಯವಾಗಿ ಮೂರು ವಿಧವಾಗಿದೆ: (೧) ನೈಜ, (೨) ನ್ಯಾಯ, (೩) ಮೈತ್ರಿ.

1. ನೈಜವೆಂದರೆ ಸಹಜ ಲಕ್ಷಣ. ಯಾವ ಒಂದು ಗುಣದಿಂದ ಅಥವಾ ಶಕ್ತಿಯಿಂದ ಒಂದು ಪದಾರ್ಥ ಆ ಪದಾರ್ಥವೇ ಆಗಿದೆಯೋ ಆ ಲಕ್ಷಣದ ವಿಕಾಸವೇ ಧರ್ಮ. ಸುಡುವುದು ಬೆಂಕಿಯ ಧರ್ಮ, ಬೀಸುವುದು ಗಾಳಿಯ ಧರ್ಮ, ಹಾರುವುದು ಪಕ್ಷಿಯ ಧರ್ಮ, ಬಿಸಿಯನ್ನು ಹೋಗಲಾಡಿಸಿ ತಣುವಾಗಿಸುವುದು ನೀರಿನ ಧರ್ಮ, ಮೈ ಮುದಿಯಾಗುವುದು ದೇಹಧರ್ಮ. ಹಾಗೆಯೇ ವಯೋಧರ್ಮ, ಋತುಧರ್ಮಗಳು. ಮನುಷ್ಯ ಯಾವ ತನ್ನ ಗುಣದಿಂದ ಅಥವಾ ಬಲದಿಂದ ಇತರ ಜನರ ಪ್ರಯೋಜನಕ್ಕೆ ಒದಗಬಹುದೋ ಆ ಗುಣಬಲವಿಶೇಷ ಅವನ ಧರ್ಮ. ಇಂಗ್ಲಿಷಿನಲ್ಲಿ ಇದನ್ನು

“Value” ಎಂದು ಕರೆಯುತ್ತಾರೆ. ಯಾವ ಒಂದು ಗುಣದಿಂದ ಅಥವಾ ಶಕ್ತಿಯಿಂದ ಒಂದು ಪದಾರ್ಥಕ್ಕೆ ಬೆಲೆ ಬರುತ್ತದೋ ಆ ಗುಣ ಅಥವಾ ಶಕ್ತಿ ಅದರ ಧರ್ಮ. ಹೀಗೆ ನೈಜದ ಪರಿಪಾಲನೆ ಧರ್ಮ.

2. ನ್ಯಾಯವೆಂದರೆ ಒಂದು ವಸ್ತುವಿನ ಅಥವಾ ಪ್ರಾಣಿಯ ನೈಜಾಭಿವ್ಯಕ್ತಿಯಿಂದ ಇನ್ನೊಂದರ ನೈಜಕ್ಕೆ ಹಾನಿಯಾಗದಂತೆ ಒಂದು ಸಮೂಹದ ನಾನಾ ವ್ಯಕ್ತಿಗಳ ನೈಜ ವಿಕಾಸಗಳನ್ನು ಹದ್ದಿನಲ್ಲಿರಿಸುವ ವ್ಯವಸ್ಥೆ. ಅನ್ಯೋನ್ಯ ಅಬಾಧೆಯ ವಿಧಿಯೇ ನ್ಯಾಯ, Justice. ಅದು ಧರ್ಮ.
3. ಮೈತ್ರಿಯೆಂದರೆ ಇತರರಲ್ಲಿ ಪ್ರೀತಿ. ವ್ಯಕ್ತಿಯು ತನ್ನ ನೈಜದಿಂದ ಎಲ್ಲರಿಗೂ ಪ್ರಯೋಜನವಾಗುವಂತೆ ಸ್ವಜೀವನವನ್ನು ವಿಸ್ತಾರಪಡಿಸುವುದು. ಅದೇ ಆತ್ಮವಿಕಾಸ. ಅದಕ್ಕೆ ಸಾಧಕವಾದದ್ದು ಲೋಕಸ್ನೇಹ. ಅದೇ ಮುಂದೆ ಗೀತೆಯಲ್ಲಿ ಹೇಳುವ ಆತ್ಮೌಪಮ್ಯ. ಅದು ಧರ್ಮ.

ಧರ್ಮ ಶಬ್ದವನ್ನು ವೇದಮತದವರು ಮಾತ್ರವೇ ಅಲ್ಲದೆ ಬೌದ್ಧರೂ ಜೈನರೂ ಪೂಜ್ಯಬುದ್ಧಿಯಿಂದ ಬಳಸಿಕೊಂಡಿದ್ದಾರೆ. ವೈದಿಕರು ಬೇರೆಬೇರೆ ಶಾಸ್ತ್ರಗಳಲ್ಲಿ ಬೇರೆಬೇರೆ ಪಾರಿಭಾಷಿಕ ಅರ್ಥದಲ್ಲಿ ಆ ಪದವನ್ನು ಪ್ರಯೋಗಿಸಿದ್ದಾರೆ. ಶಂಕರಾಚಾರ್ಯರು ಕೊಟ್ಟಿರುವ ಅರ್ಥ ಹೀಗೆ:

> ಜಗತಃ ಸ್ಥಿತಿಕಾರಣಮ್ । ಪ್ರಾಣಿನಾಮ್
> ಸಾಕ್ಷಾದಭ್ಯುದಯನಿಃಶ್ರೇಯಸಹೇತುಃ ಯಃ ಸ ಧರ್ಮಃ ॥

ಯಾವ ವ್ಯವಸ್ಥೆಯೂ-ಯಾವ ಚರ್ಯೆಯೂ (೧) ಲೋಕದ ಒಳ್ಳೆಯ ಸ್ಥಿತಿಗೆ ಸಾಧಕವಾಗಿ, (೨) ಜೀವಿಗಳಿಗೆ ಇಹದಲ್ಲಿ ಯೋಗಕ್ಷೇಮಗಳನ್ನೂ, (೩) ಪರದಲ್ಲಿ ಸದ್ಗತಿಯನ್ನೂ ಸಂಪಾದಿಸಿಕೊಡಬಲ್ಲದೋ ಅದು ಧರ್ಮ.

ಧರ್ಮವು ಜೀವವನ್ನೂ ಜಗತ್ತನ್ನೂ ಸಹ “ಧರಿಸುತ್ತದೆ”. ಜೀವಕ್ಕೂ ಜಗತ್ತಿಗೂ ಸಂಬಂಧ ತಪ್ಪಿದ್ದಲ್ಲ. ಹಾಗಿರುವಲ್ಲಿ—

1. ಜೀವಿಯ ನೈಜಗುಣಗಳು ಜಗತ್ಸಂಪರ್ಕದಿಂದ ಕೆಡದೆ, ಉತ್ತಮಪಡುತ್ತ ಜಗತ್ತಿಗೆ ಉಪಕಾರಕವಾಗುವಂತೆಯೂ,
2. ಜಗತ್ತು ಜೀವಿಸಂಪರ್ಕದಿಂದ ಕೆಡದೆ, ಉತ್ತಮಪಡುತ್ತ, ಜೀವಿಗೆ ಉಪಕಾರಕವಾಗುವಂತೆಯೂ,

ಯಾವಯಾವ ಚರ್ಯೆಗಳೂ ಕಾರ್ಯಗಳೂ ನಿಯಮಗಳೂ ನೀತಿಗಳೂ ಮನುಷ್ಯನಿಗೆ ಯುಕ್ತವಾಗುತ್ತವೆಯೋ ಅವುಗಳ ಒಟ್ಟೇ ಧರ್ಮ.

ಇದು ಪ್ರಾಚೀನವಾದ ಅರ್ಥವಿವರಣೆ. ವೈಶೇಷಿಕ ಸೂತ್ರ ಹೀಗಿದೆ:

> ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ ॥

ನಿಃಶ್ರೇಯಸವೆಂದರೆ ಒಳ್ಳೆಯದರಲ್ಲಿ ಒಳ್ಳೆಯದು, ಸರ್ವೋತ್ತಮವಾದದ್ದು. ಒಳ್ಳೆಯದು ಎಂದರೆ ಏನು? ಹಿತ ಯಾವುದು? ಆಪಸ್ತಂಬ ಮಹರ್ಷಿಗಳು ವೇದವೇದಾಂತಸಾರವನ್ನು ಹೀಗೆ ಹೇಳಿದ್ದಾರೆ:

> ಆತ್ಮಲಾಭಾನ್ನ ಪರೋ ವಿದ್ಯತೇ ॥

ಆತ್ಮಲಾಭಕ್ಕಿಂತ ಮೇಲಾದದ್ದು ಯಾವುದೂ ಇಲ್ಲ. ಅದೇ ಹಿತಗಳಲ್ಲೆಲ್ಲ ಪರಮಹಿತ. ಆತ್ಮದ ಸ್ವಸ್ವರೂಪವನ್ನು ಕಂಡುಕೊಂಡು ಅನುಭವಿಸುವುದೇ ಮೋಕ್ಷ ಎಂದು ಪೂರ್ವಿಕರ ಮತ.

ಬೃಹದಾರಣ್ಯಕೋಪನಿಷತ್ತು ಹೀಗೆ ಹೇಳುತ್ತದೆ:

> ಆತ್ಮಾ ವಾ ಅರೇ ಶ್ರೋತವ್ಯಃ...
> ತರತಿ ಶೋಕಮಾತ್ಮವಿತ್ ॥

ಈಶಾವಾಸ್ಯದಲ್ಲಿ ಹೀಗಿದೆ:

> ತತ್ರ ಕೋ ಮೋಹಃ ಕಃ ಶೋಕ
> ಏಕತ್ವಮನುಪಶ್ಯತಃ ॥

ಎಲ್ಲ ಉಪನಿಷತ್ತುಗಳ ಮಾತೂ ಇದೇಯೆ.

ಜೀವವು ಜಗತ್ಪ್ರಕೃತಿ ಬೀಸುತ್ತಿರುವ ಮಾಯಾಜಾಲದೊಳಗೆ ಸಿಕ್ಕಿಕೊಂಡು ತನ್ನೊಳಗಿರುವ ಪರಮಾತ್ಮವಸ್ತುವನ್ನು—ಪರಮೇಶ್ವರನನ್ನು—ಮರೆತು, ತದಿತರವಾದದ್ದನ್ನು ಸುಖವೆಂದು ನಂಬಿಕೊಂಡು, ಆ ಸುಖಸಾಮಗ್ರಿಗಾಗಿ ಪರಿದಾಡುತ್ತಿರುತ್ತದೆ. ಈ ಪರಿಭ್ರಮಣವೇ ಸಂಸಾರ. ಜಗದ್ವ್ಯಾಮೋಹದಿಂದ ಭ್ರಾಂತಿ. ಈ ಭ್ರಾಂತಿ ಪ್ರಮಾದಗಳನ್ನು ನೀಗಿ, ಆತ್ಮಸ್ವರೂಪವನ್ನು—ಭಗವತ್ಸ್ವರೂಪವನ್ನು—ಕಂಡುಕೊಂಡು ಅನುಭವಿಸುವುದು ಹೊರಗೆ ಸಿಕ್ಕುವ ಸುಖಗಳಿಗಿಂತ ಮಹತ್ತರವಾದ ಸುಖ. ಈ ಉತ್ತಮೋತ್ತಮ ಲಾಭಕ್ಕೆ ಜೀವವನ್ನು ಅನುಗೊಳಿಸುವ ಗುಣಸಂಸ್ಕಾರ ವರ್ತನೆಗಳು ಧರ್ಮ. ಈ ಮಾತನ್ನೇ ಯಾಜ್ಞವಲ್ಕ್ಯರು ಹೇಳಿದ್ದಾರೆ:

> ಅಯಂ ತು ಪರಮೋ ಧರ್ಮೋ
> ಯದ್ಯೋಗೇನಾತ್ಮದರ್ಶನಮ್ ॥

ಈ ಮೇಲಣ ಅಭಿಪ್ರಾಯಗಳನ್ನೆಲ್ಲ ಸಂಗ್ರಹಮಾಡಿ ಹೀಗೆ ಹೇಳಬಹುದು: ಧರ್ಮದಿಂದ ಆಗುವ ಪ್ರಯೋಜನಗಳು ಮುಖ್ಯವಾಗಿ ಮೂರು:

1. ಲೋಕಸಂಸ್ಥಿತಿ,
2. ಜೀವಕ್ಕೆ ಸುಖಸಂಪಾದನೆ,
3. ಜೀವಕ್ಕೆ ಹಿತಸಾಧನೆ.

ಪ್ರಾಣಿಗಳು ಸಾಮಾನ್ಯವಾಗಿ ಕ್ಷಣೇಕಣೇ ಬಯಸುವುದು ಸುಖವನ್ನು. ಸುಖವೆಂದರೆ ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವಾರಣೆ. ಆದರೆ ಸುಖವೆಲ್ಲ ಹಿತವಲ್ಲ; ಸುಖಕರವಾದದ್ದೆಲ್ಲ ಹಿತಕರವಾಗದು. ಎಷ್ಟೋ ಭಕ್ಷ್ಯಭೋಜ್ಯಗಳು ನಾಲಗೆಯ ಮೇಲಿರುವಾಗ ಸುಖಕರವಾಗಿರುತ್ತವೆ; ಹೊಟ್ಟೆಗೆ ಸೇರಿದ ಮೇಲೆ ದುಃಖಕರವಾಗುತ್ತವೆ. ಎಂಥ ಆಹಾರವು ನಾಲಗೆಗೆ ಸುಖ ಕೊಟ್ಟರೂ ಹೊಟ್ಟೆಗೆ ದುಃಖ ತರಲಾರದೋ ಅಂಥ ಆಹಾರ ಹಿತ. ಹಿತವೆಂಬುದು ಸುಖವನ್ನು ಪರಿಮಿತಿಗೊಳಿಸುವುದರಿಂದ ಉಂಟಾಗುತ್ತದೆ. ಸುಖಕ್ಕೆ ಒಂದು ಕ್ರಮವನ್ನೂ ಒಂದು ನಿಯಮವನ್ನೂ ಗೊತ್ತುಮಾಡಿಕೊಂಡರೆ ಅದು ಹಿತವಾಗುತ್ತದೆ. ಜೀವದ

ಹಿತವೆಂದರೆ ಮನುಷ್ಯನು ಇಹಲೋಕದ ಭೋಗಭಾಗ್ಯಗಳನ್ನು ಸಂಪಾದಿಸುವುದರಲ್ಲಿ ಮುಂದಿನ ಸದ್ಗತಿಯನ್ನು ಕೆಡಿಸಿಕೊಳ್ಳದಂತೆ ತನ್ನ ಸುಖಾನ್ವೇಷಣೆಯನ್ನು ಮಿತಪಡಿಸಿಕೊಂಡಿರುವುದು. ಇಂಥ ಹಿತದೃಷ್ಟಿಯಿಂದ ವಿಹಿತವಾಗಿರುವ ಆಚಾರ ವ್ಯವಹಾರ ಕ್ರಮನಿಯಮಗಳೇ ಧರ್ಮದ ತಿರುಳು.

ಮೇಲಣ ಲಕ್ಷಣನಿರೂಪಣೆ ಧರ್ಮದ ಕಾರ್ಯಫಲದೃಷ್ಟಿಯಿಂದ ಆದದ್ದು; ಧರ್ಮದ ಸ್ವರೂಪರಚನೆಯ ದೃಷ್ಟಿಯಿಂದ ಧರ್ಮವು ವಸ್ತುಸತ್ಯದ ಪ್ರಯೋಗಾಚರಣೆಯೆನ್ನಬಹುದು. ಸತ್ಯವೆಂದರೆ ಯಥಾರ್ಥ—ಸಂದರ್ಭ ವಾಸ್ತವವಾಗಿ ಹೇಗಿದೆಯೋ ಅದು. ತತ್ತ್ವವೆಂದರೂ ಅದೇ. ಪ್ರಸಕ್ತವಾಗಿರುವ ವಿಷಯದ ನಿಜಸ್ಥಿತಿಯೇ ತತ್ತ್ವ (ತತ್ + ತ್ವ = ಅದರ ಅದುತನ). ನಮಗಿರುವ ಸಂದರ್ಭದ ತತ್ತ್ವವನ್ನು—ಯಥಾರ್ಥವನ್ನು—ಗ್ರಹಿಸಿ ಅದಕ್ಕೆ ನಮ್ಮ ನಡವಳಿಕೆಯನ್ನು ಹೊಂದಿಸಿಕೊಳ್ಳುವುದು ಧರ್ಮ.

ಇನ್ನೂ ಬೇರೊಂದು ರೀತಿ ಹೇಳಬಹುದು. ಪರಮಾತ್ಮಸಾಕ್ಷಿಕವಾದ ವರ್ತನೆ ಧರ್ಮ, ಮನುಷ್ಯ ತಾನು ಮಾಡಿದ್ದಕ್ಕೂ ಮಾಡದೆ ಬಿಟ್ಟದ್ದಕ್ಕೂ ಪರಮೇಶ್ವರನಿಗೆ ಪ್ರತ್ಯುತ್ತರ ಬಾಧ್ಯ—ಎಂದರೆ ಜವಾಬ್ದಾರ—ಎಂಬ ಭಾವನೆಯನ್ನು ಮನಸ್ಸಿನಲ್ಲಿ ಸರ್ವದಾ ಧರಿಸಿ ನಡೆಯುವ ನಡವಳಿಕೆ ಧರ್ಮ.

ಏವಂ ಚ ಧರ್ಮವು ದೇಹಧಾರಿಯಾದ ಜೀವಕ್ಕೆ ಅವಶ್ಯವಾದ ಒಂದು ಸಂಸ್ಕಾರ. ಅಂಥ ಸಂಸ್ಕಾರವಿಧಾನಗಳಲ್ಲಿ ಯುದ್ಧವೂ ಒಂದು. ಕೆಲವು ಬಗೆಯ ಜೀವಗಳಿಗೆ ಅವು ಧರಿಸಿರುವ ದೇಹದ ಕಾರಣದಿಂದ ಯುದ್ಧನಿಮಿತ್ತವಾದ ಮರಣವು ಧರ್ಮಸಂಸ್ಕಾರವಾಗುತ್ತದೆ, ಕೆಲವು ಜಾತಿಯ ರೋಗಗಳಿಗೆ ಶಸ್ತ್ರಚಿಕಿತ್ಸೆಯಾಗುವಂತೆ.

ಹೀಗೆ ಧರ್ಮವು ಆತ್ಮವನ್ನವಲಂಬಿಸಿ, ಸತ್ಯವನ್ನನುಸರಿಸಿ, ಸರ್ವಹಿತವನ್ನು ಲಕ್ಷ್ಯದಲ್ಲಿ ಇರಿಸಿ ನಡೆಯುವ ನಡವಳಿಕೆ.

ಧರ್ಮದ ಅಂತಸ್ತತ್ತ್ವವನ್ನು ಸಂಕ್ಷೇಪವಾಗಿ ಗುರುತುಮಾಡಿಕೊಂಡ ಬಳಿಕ, ಆ ತತ್ತ್ವವು ಕಾರ್ಯಕ್ಷೇತ್ರದಲ್ಲಿ ಅನೇಕ ರೂಪಗಳನ್ನು ತಾಳಬೇಕಾಗುತ್ತದೆ ಎಂಬುದನ್ನು ನಾವು ಗ್ರಹಿಸಬೇಕು. ಒಂದೇ ಚಿನ್ನದ ಗಟ್ಟಿ ಬಗೆಬಗೆಯ ಆಭರಣಗಳಾಗಿಯೂ ನಾಣ್ಯಗಳಾಗಿಯೂ

ಬಹುರೂಪಿಯಾಗಿರುವಂತೆ. ಒಂದೇ ಧರ್ಮತತ್ತ್ವವು ಜೀವಿಗಳ ಶಕ್ತಿಯೋಗ್ಯತೆಗಳಿಗೆ ಒಪ್ಪುವಂತೆ, ಅವರ ನಾನಾ ಸಂದರ್ಭಗಳಿಗೆ ಹೊಂದುವಂತೆ, ಅನೇಕ ರೂಪಗಳನ್ನು ಧರಿಸಿ ಕೆಲಸಮಾಡುತ್ತದೆ. ಅಂಥ ಧರ್ಮಗಳನ್ನು ಮುಖ್ಯವಾಗಿ ನಾಲ್ಕು ಬಗೆ ಎಂದು ವಿಂಗಡಿಸಬಹುದು.

1. ಸಾಧಾರಣ ಧರ್ಮ ಅಥವಾ ನಿತ್ಯ ಧರ್ಮ
2. ವಿಶೇಷ ಧರ್ಮ
3. ನೈಮಿತ್ತಿಕ ಧರ್ಮ
4. ಆಪದ್ಧರ್ಮ

1. **ಸಾಧಾರಣ ಧರ್ಮ ಅಥವಾ ನಿತ್ಯ ಧರ್ಮ:** ಇದು ಸಮಸ್ತ ಮನುಷ್ಯವರ್ಗಕ್ಕೂ ವಿಹಿತವಾದದ್ದು. ಇದರ ಮುಖ್ಯ ಲಕ್ಷಣಗಳನ್ನು ಮನುಗಳು ಹೀಗೆ ಹೇಳಿದ್ದಾರೆ:

    ಧೃತಿಃ ಕ್ಷಮಾ ದಮೋಽಸ್ತೇಯಂ
    ಶೌಚಮಿನ್ದ್ರಿಯನಿಗ್ರಹಃ ।
    ಧೀರ್ವಿದ್ಯಾ ಸತ್ಯಮಕ್ರೋಧೋ
    ದಶಕಂ ಧರ್ಮಲಕ್ಷಣಮ್ ॥

    (೧) ದೃಢತೆ ಮತ್ತು ಧೈರ್ಯ, (೨) ಕ್ಷಮೆ, (೩) ದಮ (ಮನಸ್ಸನ್ನು ಹದ್ದಿನಲ್ಲಿರಿಸಿಕೊಂಡಿರುವುದು), (೪) ಅಸ್ತೇಯ (ಪರರ ಒಡವೆಗಳಿಗೆ ಆಶೆ ಕುಡದಿರುವುದು), (೫) ಶೌಚ (ನಿರ್ಮಲತೆ), (೬) ಇಂದ್ರಿಯಗಳ ಮೇಲೆ ಹತೋಟಿ, (೭) ಬುದ್ಧಿವ್ಯವಸಾಯ, (೮) ವಿದ್ಯೆ—ವಿಶೇಷವಾಗಿ ತತ್ತ್ವವಿದ್ಯೆ, (೯) ಸತ್ಯಶೀಲತೆ, (೧೦) ಸೌಮ್ಯಶಾಂತಿಗಳು—ಈ ಹತ್ತು ಧರ್ಮದ ಗುರುತುಗಳು. ಇವು ದೇಶಭೇದ ಕಾಲಭೇದಗಳಿಂದ ವ್ಯತ್ಯಾಸವಾಗದೆ ಎಲ್ಲ ಮನುಷ್ಯರಲ್ಲಿಯೂ ಯಾವಾಗಲೂ ಇರಬೇಕಾದ ನೀತಿಗುಣಗಳು.

2. **ವಿಶೇಷ ಧರ್ಮ:** ಇದು ಎರಡು ವಿಧ. (೧) ಜಾತಿಧರ್ಮ: ಚಾತುರ್ವರ್ಣ್ಯಕ್ಕೂ ನಾನಾ ಕುಲಗಳಿಗೂ ನಾನಾ ಪ್ರದೇಶಗಳಿಗೂ ಸಂಬಂಧಪಟ್ಟದ್ದು. ಇವುಗಳನ್ನೇ ಅರ್ಜುನನು

"ಉತ್ಸಾದ್ಯನ್ತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ" ಎಂದು ಹೇಳಿರುವುದು (೨) ಆಶ್ರಮಧರ್ಮ; ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿ—ಈ ನಾನಾ ಆಶ್ರಮಗಳಿಗೆ ಸಂಬಂಧಪಟ್ಟ ದೀಕ್ಷೆ-ವ್ರತ-ಸಂಸ್ಕಾರ.

3. **ನೈಮಿತ್ತಿಕ ಧರ್ಮ:** ಇದು ಯಾವುದೋ ಒಂದು ಕೊಂಚ ಕಾಲದ ಉದ್ದೇಶಕ್ಕಾಗಿ ನಡೆಯತಕ್ಕದ್ದು. ಅದು ಎರಡು ಬಗೆ: (೧) ಕಾಮ್ಯ, ಎಂದರೆ ತಮ ತಮಗೆ ಇರುವ ಬೇಡಿಕೆಗಳು ನೆರವೇರುವುದಕ್ಕೋಸ್ಕರ ಮಾಡುವ ಪೂಜೆ, ಯಜ್ಞ, ವ್ರತ ಮೊದಲಾದವು. (೨) ಶುದ್ಧಿಕ್ರಿಯೆ, ಎಂದರೆ ದೋಷಪ್ರಾಯಶ್ಚಿತ್ತರೂಪವಾಗಿಯೋ ಆಶೌಚನಿವೃತ್ತಿರೂಪವಾಗಿಯೋ ಮಾಡಿಕೊಳ್ಳುವ ಕ್ರಿಯೆಗಳು.
4. **ಆಪದ್ಧರ್ಮ:** ರೋಗ, ಅರಾಜಕ ಮೊದಲಾದ ಕಾರಣಗಳಿಂದ ಮೇಲೆ ಹೇಳಿರುವ ಧರ್ಮಗಳಲ್ಲಿ ಯಾವುದನ್ನಾದರೂ ಸಾಂಗವಾಗಿ ನಡೆಯಿಸಲು ಸಾಧ್ಯವಾಗದೆ ಹೋದಾಗ ಧರ್ಮದ ಒಂದು ಸೂಕ್ಷ್ಮಲಾಂಛನವನ್ನು ಮಾತ್ರವಾದರೂ ಉಳಿಸಿಕೊಳ್ಳುವುದಕ್ಕಾಗಿ ಮಾಡುವ ಆಚರಣೆಗಳು: ಜ್ವರ ಬಂದಾಗ ಮಂತ್ರಸ್ನಾನ, ಬ್ರಾಹ್ಮಣನಿಗೆ ಕಲಿಯುಗದಲ್ಲಿ ಕೃಷ್ಯಾದಿ ಜೀವನ—ಇತ್ಯಾದಿ. ದ್ರೋಣಾಚಾರ್ಯರ ಯುದ್ಧಪ್ರಸಕ್ತಿಯು ಹೀಗೆ ಆಪದ್ಧರ್ಮ—ಅಥವಾ ವಿಶೇಷ ಧರ್ಮ, ಛಾಂದೋಗ್ಯದ ಉಪಾಖ್ಯಾನದಲ್ಲಿ—ದುರ್ಭಿಕ್ಷದಿಂದ ಕೃಶನಾಗಿದ್ದ ಉಷಸ್ತಿ ಎಂಬ ಬ್ರಾಹ್ಮಣನಿಗೆ ಪ್ರಾಣಧಾರಣಾರ್ಥವಾಗಿ ಮಾಹುತನಿಂದ ಅಲಸಂದಿ ಉಸಲಿಯ ಉಚ್ಛಿಷ್ಟವನ್ನು ತೆಗೆದುಕೊಂಡು ತಿನ್ನುವುದು ಧರ್ಮವಾಯಿತು.

ಒಟ್ಟಿನಲ್ಲಿ ಮನುಷ್ಯನು ಸ್ವಸುಖವನ್ನು ಸಾಧಿಸಿಕೊಳ್ಳುವುದರಲ್ಲಿ ಜೀವದ ಸದ್ಗತಿಯನ್ನು ಮರೆಯದೆಯೂ, ಇತರ ಜನದ ಸುಖಸಾಧನೆಗೆ ಅಡ್ಡಿ ತಾರದೆಯೂ, ಇತರ ಜನಕ್ಕೆ ತನ್ನ ನೈಜದಿಂದ ಸಹಾಯವಾಗುವಂತೆಯೂ ನಡೆದುಕೊಳ್ಳಬೇಕೆಂಬ ನಿಬಂಧನೆಯೇ ಧರ್ಮ.

ಒಂದೊಂದು ಜೀವದ ಸ್ವಭಾವರಚನೆಯೂ ಸಂದರ್ಭ ಸನ್ನಿವೇಶವೂ ಒಂದೊಂದು ರೀತಿ ಬೇರೆಬೇರೆಯಾಗಿರುತ್ತದೆ. ಆದದ್ದರಿಂದ ಒಂದೊಂದರ ಧರ್ಮವೂ ಬೇರೆಬೇರೆಯಾಗುತ್ತದೆ. ಹೀಗೆ ಪ್ರತಿಯೊಬ್ಬನಿಗೂ ಅವನ, ಪ್ರತಿಯೊಬ್ಬಳಿಗೂ ಅವಳ ಸ್ವಧರ್ಮ.

ಧರ್ಮಪ್ರಯುಕ್ತವಾದ ಯುದ್ಧದಲ್ಲಿ ನಿಂತು ಹೋರುವುದು ಕ್ಷತ್ರಿಯನಿಗೆ ಸ್ವಧರ್ಮ. ಅದು ಅರ್ಜುನನಿಗೆ ಕರ್ತವ್ಯ; ವ್ಯಾಸರಿಗಲ್ಲ. ಪಂಚಪತಿಸ್ವೀಕಾರ ದ್ರೌಪದಿಗೆ ಕರ್ತವ್ಯವಾಯಿತು; ಸ್ತ್ರೀಲೋಕದಲ್ಲಿ ಇನ್ಯಾರಿಗೂ ಹಾಗಾಗಲಿಲ್ಲ. ಭಾವನಿಂದ ಮಕ್ಕಳನ್ನು ಪಡೆಯುವುದು ಅಂಬಿಕೆ

ಅಂಬಾಲಿಕೆಯರಿಗೆ ಕರ್ತವ್ಯವಾಯಿತು; ಮಿಕ್ಕ ಸ್ತ್ರೀಯರಿಗಲ್ಲ. ಹೀಗೆ ಧರ್ಮತತ್ತ್ವವು ಜಾತಿಯನ್ನನುಸರಿಸಿ, ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ, ಸಮಾಜಸಂದರ್ಭವಶದಿಂದ ರೂಪತಾಳುತ್ತದೆ. ಆದದ್ದರಿಂದಲೇ,

ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಮ್ ॥

ವಸ್ತುವಿಚಾರದಿಂದಲೇ ಧರ್ಮಸ್ವರೂಪನಿಷ್ಕರ್ಷೆ.

ಯಸ್ತರ್ಕೇಣಾನುಸಂಧತ್ತೇ
ಸ ಧರ್ಮಂ ವೇದ ನೇತರಃ ॥ (ಮನು)
ಇತಿಕರ್ತವ್ಯತಾಭಾಗಂ
ಮೀಮಾಂಸಾ ಪೂರಯಿಷ್ಯತಿ ॥ (ಮನು)

ಸ್ವಧರ್ಮದಿಂದ ಜಾರುವುದೇ ಪಾಪ. ಕ್ಷತ್ರಿಯನು ಧರ್ಮಕ್ಕಾಗಿ ಯುದ್ಧರಂಗದಲ್ಲಿ ನಿಲ್ಲಬೇಕಾದಾಗ ಕೊಲ್ಲುವುದಲ್ಲ ಪಾಪ; ಕೊಲ್ಲದೆ ಓಡಿಹೋಗುವುದು ಪಾಪ. ಪಾಪ ಎಂದರೆ ಏನು? ಜೀವವು ಅಧೋಗತಿಗೆ ಇಳಿಯುವುದು. ಆದದ್ದರಿಂದ ಭಗವಂತ ಹೇಳಿದ: "ಅರ್ಜುನ, ಜೀವಹಿತದ ದೃಷ್ಟಿಯಿಂದ ನೋಡು. ಈ ಯುದ್ಧ ನಿನಗೆ ಧರ್ಮಸಾಧನೆಯ ಅವಕಾಶ. ಅದರಿಂದ ಧರ್ಮಹಾನಿಯಾಗದು."

ಹೀಗೆ ಸ್ವಧರ್ಮತತ್ತ್ವವನ್ನು ಹೇಳಿ, ಅದು ಪರಮಾರ್ಥವೂ ಗಹನವೂ ಆದದ್ದರಿಂದ ಅದು ಅರ್ಜುನನ ಮನಸ್ಸಿಗೆ ಹಿಡಿಯಿತೋ ಇಲ್ಲವೋ ಎಂಬ ಸಂದೇಹ ತೋರಿಯೋ, ಅಥವಾ ಅರ್ಜುನನ ಮನೋವೃತ್ತಿಯನ್ನು ಪರೀಕ್ಷಿಸಲೆಂದೋ, ಶ್ರೀಕೃಷ್ಣನು ಬೇರೆ ಕೆಲವು ಯುದ್ಧ ಪ್ರೇರಣೆಗಳನ್ನು ಹೇಳುತ್ತಾನೆ:

1. ಬಂಧುಮಿತ್ರರ ಮರಣದಿಂದ ದುಃಖ ಬರುತ್ತದೆ; ನಿಜ. ಆದರೆ ಲೋಕದಲ್ಲಿ ಮಂಜು ಬೇಸಗೆಗಳು ಬಂದುಹೋಗುವಂತೆ ಲಾಭನಷ್ಟಗಳೂ ಸುಖದುಃಖಗಳೂ ಬರುತ್ತವೆ, ಹೋಗುತ್ತವೆ. ಅವುಗಳನ್ನು ಸಹಿಸಬೇಕಾದದ್ದು. ಅವುಗಳಿಗೆ ಹೆದರಿ ಧರ್ಮವನ್ನು ಬಿಡತಕ್ಕದ್ದಲ್ಲ.

2. ಈ ಯುದ್ಧವು ಯದೃಚ್ಛೆಯಿಂದ ಒದಗಿದ್ದು: ತಾನಾಗಿ ಒದಗಿದ್ದು, ನಿನ್ನಿಷ್ಟದಿಂದ ಬಂದದ್ದಲ್ಲ. ಆದದ್ದರಿಂದ ಅದು ನಿನಗೆ ಪಾಪವಾಗದು.
3. ಈ ಯುದ್ಧವನ್ನು ಮಾಡದೆಹೋದರೆ ನಿನಗೆ ಪಾಪ.
4. ಯುದ್ಧ ಬಿಟ್ಟರೆ ನಿನಗೆ ಅಪಕೀರ್ತಿ ತಪ್ಪದು.
5. ಲೋಕವು ನಿನ್ನನ್ನು ಹೇಡಿಯೆಂದು ತೆಗಳಿ ನಿನಗೆ ಅಗೌರವ ಮಾಡೀತು.
6. ನೀನು ಸತ್ತರೆ ಸ್ವರ್ಗಕ್ಕೆ ಹೋಗುವೆ.
7. ನೀನು ಗೆದ್ದರೆ ರಾಜ್ಯಪದವಿ ಪಡೆಯುವೆ.

ಹೀಗೆ ನಾನಾ ಆಸೆಗಳನ್ನು ತೋರಿಸುತ್ತಾನೆ ಕೃಷ್ಣ; ಭಯಗಳನ್ನು ಹುಟ್ಟಿಸುತ್ತಾನೆ. ಕಠೋಪನಿಷತ್ತಿನಲ್ಲಿ, ನಚಿಕೇತನು ಯಮನನ್ನು ಕುರಿತು ಆತ್ಮಜ್ಞಾನವನ್ನು ಬೇಡಿದಾಗ ಯಮನು ಅವನಿಗೆ “ಮನೆ ಕೊಟ್ಟೇನು, ಮಡದಿಯರನ್ನು ಕೊಟ್ಟೇನು, ಆಯುಸ್ಸು ಕೊಟ್ಟೇನು, ಐಶ್ವರ್ಯ ಕೊಟ್ಟೇನು” ಎಂದು ಆತ್ಮತತ್ತ್ವಕ್ಕಿಂತ ಕೀಳ್ಮಟ್ಟದ ವರಗಳನ್ನು ತೋರಿಸಿ ಪರೀಕ್ಷಿಸಿದ. ಹಾಗೆ ಶ್ರೀಕೃಷ್ಣನು ಅರ್ಜುನನನ್ನು ಶೋಧಿಸಿ ನೋಡಿದ.

ಈ ಮೇಲಣ ಏಳು ವಾದಗಳ ಜೊತೆಗೆ ಇನ್ನೂ ಮೂರನ್ನು ಕೃಷ್ಣ ಬೇರೆ ಕಡೆ ಸೇರಿಸಿದ್ದಾನೆ:

8. ಯುದ್ಧಪ್ರವೃತ್ತಿ ನಿನ್ನ ಸ್ವಭಾವದಲ್ಲಡಗಿದೆ: ಅದನ್ನು ಅದುಮಲಾಗದು. ನೀನು ತಡೆದರೂ ಅದು ಎದ್ದು ನಿನ್ನಿಂದ ಯುದ್ಧ ಮಾಡಿಸಲೇ ಮಾಡಿಸುತ್ತದೆ.
9. ಸ್ವಪ್ರಯೋಜನಕ್ಕಾಗಿ ಯುದ್ಧ ಬೇಡವಾದರೆ, ಲೋಕಸಂಗ್ರಹಕ್ಕಾಗಿ ಅದು ಬೇಕಾಗಿದೆ.
10. ಈ ಯುದ್ಧವು ದೈವಸಂಕಲ್ಪದ ಒಂದು ಘಟನೆ. ನೀನು ಸೇರೆನೆಂದರೆ ಅದು ನಿಂತುಹೋಗುವುದಿಲ್ಲ. ಅದು ನಡೆಯಲೇ ನಡೆಯುತ್ತದೆ. ನೀನು ಕೊಲ್ಲೆನೆನ್ನುವವರು ಸಾಯದೆ ಉಳಿಯುವುದಿಲ್ಲ. ಅವರು ಮೃತ್ಯುಮುಖದಲ್ಲಿ ಈಗಾಗಲೇ ಹೊಕ್ಕುಬಿಟ್ಟಿದ್ದಾರೆ. ನೀನು ಯುದ್ಧಕ್ಕೆ ಸೇರೆನೆಂದರೆ ನಷ್ಟ ನಿನಗೆ.

ಹೀಗೆ ಯುದ್ಧದ ಅನಿವಾರ್ಯತೆಯನ್ನೂ ಕರ್ತವ್ಯತೆಯನ್ನೂ ತಿಳಿಸಿ, ಬಳಿಕ ಸಾರ್ವಾತ್ಮ್ಯ ತತ್ತ್ವವನ್ನೂ ಸಮಾಧಿನಿಷ್ಠೆಯ ಆವಶ್ಯಕತೆಯನ್ನೂ ಕರ್ಮಪ್ರಸಂಗದಲ್ಲಿರಬೇಕಾದ ಮನೋಭಾವವನ್ನೂ ಹೇಳುವುದಾಗುತ್ತದೆ.

ಸಾರ್ವಾತ್ಮ್ಯದೃಷ್ಟಿ

“ಅರ್ಜುನ, ನೀನು ಹೇಳಿದ್ದು ಲೋಕಜನರಿಂದ ನೀನು ಕೇಳಿ ಆಡಿದ ಮಾತು. ಅದು ಪ್ರಯೋಜನಕ್ಕೆ ಬಾರದು. ನೀನು ಸ್ವಬುದ್ಧಿಯಿಂದ ತತ್ತ್ವವಿಚಾರಮಾಡಿ ನೋಡು. ತತ್ತ್ವ ಏನೆಂಬುದನ್ನು ಹೇಳಿದ್ದೇನೆ—ಆತ್ಮವಸ್ತುಸ್ವರೂಪವೇ ಅದು. ಅದೇ ಸಾಂಖ್ಯ. ಆತ್ಮತತ್ತ್ವವನ್ನು ಆಧಾರವಾಗಿರಿಸಿಕೊಂಡು ಸ್ವಬುದ್ಧಿಯಿಂದ ಜೀವನಪ್ರಶ್ನೆಗಳನ್ನು ಪರಿಶೀಲಿಸಿದರೆ ಪುಣ್ಯಪಾಪಗಳ ಬಂಧನಗಳೆಲ್ಲ ಸಡಲಿಬೀಳುತ್ತವೆ.

ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ ॥

“ಯಾವವರೆಗೆ ದೇಹವುಂಟೋ ಆವರೆಗೆ ಕರ್ಮವುಂಟು. ಧರ್ಮವೆಂಬುದೂ ಒಂದು ಕರ್ಮ. ಆತ್ಮಪರವಾದ ಕರ್ಮವೇ ಧರ್ಮ. ಎಲ್ಲ ಕರ್ಮಗಳಲ್ಲಿಯೂ ಸತ್ತ್ವ ರಜಸ್ಸು ತಮಸ್ಸುಗಳೆಂಬ ಸ್ವಾಭಾವಿಕ ಗುಣಗಳು ಬೆರೆತುಕೊಂಡಿರುತ್ತವೆ. ಆ ತ್ರಿಗುಣಗಳು ಧರ್ಮ ಕಾರ್ಯದಲ್ಲಿಯೂ ಇರಬಹುದು. ನೀನು ಆ ಗುಣಗಳಿಗೆ ಮೇಲ್ಪಟ್ಟವನಾಗಿ ಧರ್ಮ ಮಾಡು ಎಂದರೆ ಇತರರು ಸ್ವರ್ಗಾದಿ ಕಾಮನೆಗಳನ್ನಿಟ್ಟುಕೊಂಡು ಮಾಡುವ ಧರ್ಮವನ್ನು ನೀನು ಯಾವ ಕಾಮನೆಯೂ ಇಲ್ಲದೆ ಮಾಡು. ಶ್ರುತಿಸ್ಮೃತಿಗಳು ಕಾಮ್ಯಕರ್ಮಗಳನ್ನು ಬೋಧಿಸಿವೆಯಲ್ಲವೆ?—ಎಂದರೆ, ಹೌದು. ಆದರೆ ಅದು ಅಷ್ಟಕ್ಕೆ ಮಾತ್ರ ಅರ್ಹರಾಗಿ, ಅದಕ್ಕಿಂತ ಮೇಲಿನ ಹಂತವನ್ನು ಮುಟ್ಟಲಾರದವರಿಗೆ: ಮಂದಾಧಿಕಾರಿಗಳನ್ನು ಪ್ರೋತ್ಸಾಹಿಸಿ ಭಗವಂತನ ಕಡೆ ಅವರನ್ನು ತಿರುಗಿಸುವ ಉದ್ದೇಶದಿಂದ ಶ್ರುತಿಮಾಡಿರುವ ಪ್ರರೋಚನಾರ್ಥವಾದ (ರುಚಿ ಹುಟ್ಟಿಸುವುದಕ್ಕೋಸ್ಕರವಾದ) ಉಪದೇಶ ಅದು.

ಯಾವಾನರ್ಥ ಉದಪಾನೇ
ಸರ್ವತಃ ಸಂಪ್ಲುತೋದಕೇ
ತಾವಾನ್ ಸರ್ವೇಷು ವೇದೇಷು
ಬ್ರಾಹ್ಮಣಸ್ಯ ವಿಜಾನತಃ ॥

ಊರಲ್ಲಿ ಹತ್ತು ಬಾವಿ, ಹತ್ತು ಕುಂಟೆ, ಹತ್ತು ಕೆರೆ ಇದ್ದು, ಅವೆಲ್ಲವುಗಳಲ್ಲಿಯೂ ನೀರು ತುಂಬಿತುಳುಕುತ್ತಿದ್ದರೂ ನಾವು ಅದರಲ್ಲಿ ತೆಗೆದುಕೊಳ್ಳುವುದು ನಮ್ಮ ಸ್ನಾನಕ್ಕೋ, ನಮ್ಮ

ಅಡುಗೆಗೋ, ನಮ್ಮ ಪಾನಕ್ಕೋ ಯಾವ್ಯಾವುದು, ಎಷ್ಟೆಷ್ಟು ಸರಿಯೋ ಅಷ್ಟನ್ನು ಮಾತ್ರವೇ ಅಲ್ಲವೆ? ಎಲ್ಲವನ್ನೂ ಅಲ್ಲ. ವೇದಶಾಸ್ತ್ರೋಪದೇಶಗಳೂ ಅಷ್ಟೇ. ಅವು ನೂರಾರಿರುತ್ತವೆ. ನಮ್ಮ ಯೋಗ್ಯತೆಗೆ ತಕ್ಕದ್ದನ್ನು ನಾವು ಆರಿಸಿಕೊಳ್ಳಬೇಕಾದದ್ದು. ಈ ಯೋಗ್ಯತೆಗೆ 'ಅಧಿಕಾರ' ಎಂದು ಪಾರಿಭಾಷಿಕವಾದ ಹೆಸರು. ಅಧಿಕಾರಕ್ಕೆ ತಕ್ಕಂತೆ ಉಪದೇಶ. ಎಲ್ಲವೂ ಎಲ್ಲರಿಗೂ ಆಗದು. ನಾನು ಹೇಳಿರುವ ಹತ್ತು ಕಾರಣಗಳಲ್ಲಿ ಯಾವುದು ನಿನಗೆ ಹೊಂದುತ್ತದೆಯೋ ಅದಕ್ಕಾಗಿಯೋ, ಅಥವಾ ಅದು ಯಾವುದೂ ಸರಿತೋರದಲ್ಲಿ ಕಾಮನೆಗಳನ್ನು ಮೀರಿದ ಸರ್ವಾತ್ಮಭಾವದಿಂದಲೋ, ನೀನು ನಡೆದುಕೋ. ಹೇಗೆ ನಡೆದುಕೊಂಡರೂ ಅದರಲ್ಲಿ ಒಂದು ನಿಯಮ ಮಾತ್ರ ನೆನಪಿನಲ್ಲಿರಲಿ: ಕರ್ಮಮಾಡುವ ಅಧಿಕಾರ ಮಾತ್ರವೇ ನಿನಗೆ ಸೇರಿದ್ದು; ಅದರ ಫಲದ ಅಧಿಕಾರ ನಿನ್ನದಲ್ಲ. ಯತ್ನ ನಿನ್ನ ಅಧೀನ; ಜಯಾಪಜಯಗಳು ದೈವಾಧೀನ. (ಅಧ್ಯಾಯ ೧೮-ಶ್ಲೋಕ ೧೪ ನ್ನೂ ನೋಡಿರಿ.) ಫಲವೆಂತಾದರಾಗಿಕೊಳ್ಳಲಿ ಎಂದು ಕರ್ಮಫಲವಿಷಯದಲ್ಲಿ ನಿನ್ನ ಮನಸ್ಸು ಅಂಟಿಕೊಳ್ಳದಿದ್ದರೆ, ಆಗ ಆ ಕರ್ಮದ ಪುಣ್ಯಾಪುಣ್ಯಗಳು ನಿನಗೆ ಅಂಟವು. ಅದೇ ಯೋಗ.

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
> ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥ (೨-೪೭)

"ನಿನಗೆ ಅಧಿಕಾರವಿರುವುದು ಮಾಡಬೇಕಾದ ಕರ್ಮವನ್ನು ಮಾಡುವುದರಲ್ಲಿ. ಹಾಗೆ ಮಾಡಿದ್ದರ ಫಲಾಫಲಗಳಲ್ಲಿ ನಿನಗೆ ಅಧಿಕಾರ ಎಂದಿಗೂ ಇಲ್ಲ. ಕರ್ಮ ಮಾಡುವುದರಲ್ಲಿ ಅದರಿಂದ ನನಗೇನು ಫಲವೆಂದು ಕಾರ್ಯಕಾರಣಪರೀಕ್ಷೆಗೆ ಹೊರಡಬೇಡ. ಕರ್ತವ್ಯ ತ್ಯಾಗದಲ್ಲಿ ಸೇರಬೇಡ."

ಇದು ಬಹು ಪ್ರಸಿದ್ಧವಾದ ಶ್ಲೋಕ. ಸಾಮಾನ್ಯವಾಗಿ ಜನರು ಏನಾದರೊಂದು ಕೆಲಸ ಮಾಡಬೇಕೆಂದಾಗ ಅದರಿಂದ ನಮಗೇನು ಪ್ರಯೋಜನ?—ಎಂದು ಕೇಳುತ್ತಾರೆ. ಅದರಲ್ಲಿಯೂ ರಾಷ್ಟ್ರದ ಕರ್ತವ್ಯದ ವಿಷಯದಲ್ಲಿ ಈ ಪ್ರಶ್ನೆ ಅತಿ ಸಾಮಾನ್ಯವಾಗಿದೆ. ಸರಕಾರ ಪ್ರಬಲವಾದದ್ದು. ಅದು ಮಾಡಬೇಕೆಂದಿರುವ ಕೆಲಸ ಅನ್ಯಾಯವಿರಬಹುದು, ಅಕ್ಷೇಮವಿರಬಹುದು. ಆದರೆ ಅದನ್ನು ವಿರೋಧಿಸಿದ್ದರಿಂದ ಬರುವ ಲಾಭವೇನು? ಸರಕಾರವು ತನ್ನ ದಾರಿಯನ್ನೇನೂ ಬಿಡುವುದಿಲ್ಲ. ಪ್ರತಿಭಟಿಸಿದವರಿಗೆ ಬರುವುದು ಕೇವಲ ನಿಷ್ಠುರ—ಈ ರೀತಿಯ ವಾದ ಎಲ್ಲರೂ ಕೇಳಿರತಕ್ಕದ್ದೇ. ಆದರೆ ಅದು ಗೀತೆಯ

ಅಭಿಪ್ರಾಯವಲ್ಲ. ಅನ್ಯಾಯವನ್ನೂ ಅಧರ್ಮವನ್ನೂ ಎಂಥ ಸಂದರ್ಭದಲ್ಲೂ ವಿರೋಧಿಸತಕ್ಕದ್ದೇ ಕರ್ತವ್ಯ. ದೌಷ್ಟ್ಯವಿರೋಧಿಯು ಒಬ್ಬನೇ ಆಗಿ ಅಸಹಾಯನಾಗಿ ನಿಂತು ಕಡೆಗೆ ಮಡಿಯಬೇಕಾಗಿ ಬಂದರೂ ಅವನು ತನ್ನ ಅಂತರಾತ್ಮವು ಧರ್ಮವೆಂದು ಹೇಳಿದ್ದನ್ನು ಉಳಿಸುವುದಕ್ಕೂ ಅಧರ್ಮವೆನಿಸುವುದನ್ನು ಅಳಿಸುವುದಕ್ಕೂ ಸ್ಥಿರನಾಗಿ ನಿಲ್ಲಲೇಬೇಕು.

> They are slaves who dare not be In the right with two or three.

ಧರ್ಮಕ್ಕಾಗಿ ಹೋರಿದವನು ಸೋತದ್ದು ಅಪರೂಪವಲ್ಲ. ಅದು ದಿನೇ ದಿನೇ ನಡೆಯುತ್ತಲೇ ಇದೆ. ಅವನು ಹೊರಗಣ ಸೋಲು ಗೆಲುವುಗಳನ್ನು ಲೆಕ್ಕಕ್ಕೆ ತಂದುಕೊಳ್ಳದೆ ತನ್ನೊಳಗಿನ ಅಂತರಾತ್ಮದ ತೃಪ್ತಿಯಿಂದ ಸಂತೋಷಿಸಬೇಕು. ಒಂದಾನೊಂದು ಕಾರ್ಯದ ಧರ್ಮ ಯೋಗ್ಯತೆಯು ಗೊತ್ತಾಗುವುದು ಅದಕ್ಕಾಗುವ ಫಲದಿಂದಲ್ಲ. ಧರ್ಮವು ಫಲಾಶ್ರಿತವಲ್ಲ. ಧರ್ಮವು ಸ್ವತಂತ್ರ. ಅದರ ಮೂಲಸ್ಥಾನ ಆತ್ಮಚೈತನ್ಯದ ಚಿಚ್ಛಕ್ತಿಯಲ್ಲಿರುತ್ತದೆ, ಚಿಚ್ಛಕ್ತಿಯಿಂದ ನಡೆಯುವ ಆತ್ಮಾನಾತ್ಮವಿವೇಕದಲ್ಲಿರುತ್ತದೆ; ಆತ್ಮೋತ್ಕರ್ಷದ ಪರಮಾಪೇಕ್ಷಣೀಯತೆಯಲ್ಲಿರುತ್ತದೆ. ಧರ್ಮವು ಜೀವೋದ್ಧಾರಕ್ಕಾಗಿ, ಬಾಹ್ಯಲಾಭಗಳಿಗಾಗಿ ಅಲ್ಲ. ಇದನ್ನೇ ಮತ್ತೊಮ್ಮೆ ಸ್ವಾಮಿ ಸ್ಥಿರೀಕರಿಸಿದ್ದಾನೆ.

> ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
> ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥ (೨-೪೮)

ಕರ್ಮ ಮಾಡಿ ತತ್ಫಲವಿಷಯದಲ್ಲಿ ಚಿತ್ತವಿಕಾರಕ್ಕೆ ಅವಕಾಶ ಕೊಡದಿರುವುದೇ ಯೋಗ. ದುಡಿದು ದುಡಿಯದವನಂತೆ, ಬೆವರಿದರೂ ಆಯಾಸವಿಲ್ಲದವನಂತೆ ಸ್ವಸ್ಥಚಿತ್ತನಾಗಿರುವುದೇ ಯೋಗ. ಅದೇ ಕರ್ಮಕೌಶಲ.

ಭಗವದ್ಗೀತೆಯಲ್ಲಿ “ಪತ್ರಂ ಪುಷ್ಪಂ ಫಲಂ ತೋಯಮ್” –ಆ ದರ್ಜೆಯವರಿಂದ ಹಿಡಿದು ನಿಸ್ತ್ರೈಗುಣ್ಯರಾದ ಅವಧೂತರವರೆಗೆ ಎಲ್ಲರಿಗೆ ಬೇಕಾದ ಉಪದೇಶಗಳೂ ಇವೆ. ನಮ್ಮಲ್ಲಿ ಎಲ್ಲರೂ ಅವೆಲ್ಲವನ್ನೂ ಅನುಷ್ಠಾನಮಾಡುವುದು ಸಾಧ್ಯವಿಲ್ಲ. ಅದು ಪುಸ್ತಕ ಭಂಡಾರ ಇದ್ದ ಹಾಗೆ. ನಮಗೆ ಬೇಕಾದದ್ದನ್ನು ನಾವು ಆರಿಸಿಕೊಳ್ಳುತ್ತೇವೆ. ಉಪದೇಶಗಳು ನೂರಾರಿದ್ದರೂ

ನಮ್ಮ ಅರ್ಹತೆಗೆ ತಕ್ಕದ್ದನ್ನು ನಾವೇ ಆರಿಸಿಕೊಳ್ಳಬೇಕು. ಒಬ್ಬರ ಮೈನವೆಯನ್ನು ಇನ್ನೊಬ್ಬರು ನಿವಾರಿಸಲಾಗುವುದಿಲ್ಲ. ಎಲ್ಲಿ ನವೆಯಾಗುತ್ತಿದೆ ಎಂಬುದು ನವೆ ಅನುಭವಿಸುವವನಿಗೇ ಗೊತ್ತು.

ಅವರವರ ಧರ್ಮ ಕರ್ಮ ಏನು ಎನ್ನುವುದನ್ನು ಅವರವರೇ ಕಂಡುಕೊಳ್ಳಬೇಕು. ಕರ್ಮದ ಉದ್ದೇಶ ಪಾಪಗಳನ್ನು ತೊಳೆಯುವುದು. ಇದರಿಂದ ಏನು ಫಲ ಎಂದು ಕೇಳತಕ್ಕದ್ದಲ್ಲ; ಮನಸ್ಸನ್ನು ಸಿದ್ಧಪಡಿಸುವುದೇ ಫಲ. ಒಂದು ಒಳ್ಳೆಯ ಕೆಲಸ ಮಾಡುವುದರಿಂದ ಏನು ಫಲ? ತಾಯಿ ತಂದೆಗಳ ಸೇವೆ ಮಾಡುವುದರಿಂದ, —ಮಕ್ಕಳನ್ನು ಎತ್ತಿ ಮುದ್ದಾಡುವುದರಿಂದ, — ಏನು ಫಲ? ಅದರಿಂದಾಗುವ ಸಂತೋಷವೇ ಫಲ. ಕರ್ಮ ಪುರುಷಾಯತ್ತ; ಫಲ ದೈವಾಯತ್ತ. ನಮ್ಮ ಜಾಣತನ ಎಲ್ಲಿ ಹಾಗಾದರೆ? ಕರ್ಮಮಾಡಿಯೂ ದೋಷವನ್ನಂಟಿಸಿಕೊಳ್ಳದೆ ಇರುವುದರಲ್ಲಿ. ಇದು ಸಾಧ್ಯವಾಗಬೇಕಾದರೆ ಫಲದ ವಿಷಯದಲ್ಲಿ ಔದಾಸೀನ್ಯ ತಾಳಬೇಕು. ಇದೇ ಯೋಗ. "ಯೋಗಃ ಕರ್ಮಸು ಕೌಶಲಮ್" ಎನ್ನುವುದರ ಅಭಿಪ್ರಾಯ ಇದು. ಜ್ಞಾನಿಗೆ ತಾನು ಒಳ್ಳೆಯದನ್ನು ಮಾಡುತ್ತಿದ್ದೇನೆಂಬ ಭಾವನೆಯೂ ಇಲ್ಲ. ಸ್ವಾಭಾವಿಕವಾಗಿಯೇ ಅವನಿಂದ ಒಳ್ಳೆಯದಾಗುತ್ತದೆ. ಕಸ್ತೂರಿ ಉಂಡೆಯಿಂದ ಹೊರಡುವುದು ಸುವಾಸನೆಯೊಂದೇ. ಅದರಲ್ಲಿ ಒಳ್ಳೆಯದೇನು, ಕೆಟ್ಟದ್ದೇನು? ಅದನ್ನು ಕೆಡಿಸುವುದು ಸಾಧ್ಯವೆ?

ಆತ್ಮವು ನಿರ್ಲಿಪ್ತ

ಜ್ಞಾನಿಯು ದ್ವಂದ್ವಾತೀತ. ಅವನು ಏಕಾಕಾರವಾಗಿ, ಅಖಂಡವಾಗಿ ಒಳ್ಳೆಯವನಾಗಿರುತ್ತಾನೆ. ಫಲವು ಕರ್ಮದಿಂದ ಬಂದದ್ದು, ಕರ್ಮವು ಪ್ರಕೃತಿಯ ನಿರ್ಬಂಧದಿಂದಲೋ, ಧರ್ಮದ ವಿಧಿಯಿಂದಲೋ ಆದದ್ದು. ಜ್ಞಾನಿಯ ಗಣನೆ ಹೀಗೆ; "ಮಾಡಬೇಕಾದದ್ದನ್ನು ಮಾಡಿಯಾಯಿತು. ಅದರಿಂದ ಫಲಿಸಬೇಕಾದದ್ದು ಫಲಿಸುತ್ತದೆ; ಅದು ಸಿಹಿಯಾದರೇನು, ಕಹಿಯಾದರೇನು, ನನ್ನ ನಾಲಗೆ ಎರಡಕ್ಕೂ ಸಿದ್ಧವಾಗಿದೆ." ಅಂಥವರೇ ಬುದ್ಧಿಯುಕ್ತರು; ತತ್ತ್ವವನ್ನು ಆಮೂಲಾಗ್ರವಾಗಿ ಕಂಡವರು; ಒಳ್ಳೆಯದೋ, ಕೆಟ್ಟದ್ದೋ ಎಂಬ ಪ್ರಶ್ನೆ ಚಿಂತೆಗಳ ಆಯಾಸ ಅವಶ್ಯವಿಲ್ಲದವರು:

> ಬುದ್ಧಿಯುಕ್ತೋ ಜಹಾತೀಹ
> ಉಭೇ ಸುಕೃತದುಷ್ಕೃತೇ ॥
> ತಸ್ಮಾದ್ಯೋಗಾಯ ಯುಜ್ಯಸ್ವ
> ಯೋಗಃ ಕರ್ಮಸು ಕೌಶಲಮ್ ॥

ಆತ್ಮವು ನಿಷ್ಕ್ರಿಯ

ಪ್ರಕೃತಿಯು ಪ್ರಾಚೀನ ಕರ್ಮವಿಧಿಯೂ ಮನುಷ್ಯನಿಂದ ಕರ್ಮಗಳನ್ನು ಮಾಡಿಸುತ್ತವೆ. ಅವನು ಆ ಕರ್ಮಗಳನ್ನು ಮಾಡುವವನು ತಾನು, ಅದರ ಫಲಾಫಲಗಳು ತನ್ನವು, ಎಂದು ತನ್ನನ್ನು ಕರ್ಮಕ್ಕೆ ಅಂಟಿಸಿಕೊಂಡರೆ ಅವು ಅವನಿಗುಂಟು. ಹಾಗೆ ಮಾಡದೆ, ಯಾವುದೋ ಪ್ರಾರಬ್ಧಕರ್ಮವಶದಿಂದ ತನ್ನ ಜೀವನ; ವಾಸ್ತವವಾಗಿ ತನ್ನೊಳಗಿನ ಆತ್ಮ ಚೈತನ್ಯ ನಿಷ್ಕ್ರಿಯವಾದದ್ದು, ನಿರ್ಮಲವಾದದ್ದು; ಆದದ್ದರಿಂದ ತಾನು ಧರ್ಮಕ್ಕಾಗಿ ಕರ್ಮಮಾಡತಕ್ಕದ್ದು, ಅದರ ಫಲಕ್ಕಾಗಿ ಅಲ್ಲ ಎಂದು ದೃಢಭಾವನೆ ಮಾಡಿಕೊಂಡರೆ ಅವನನ್ನು ಕರ್ಮಪಾಶ ಬಿಗಿಯದು:

> ನಾಯಂ ಹನ್ತಿ ನ ಹನ್ಯತೇ
> ಕಂ ಘಾತಯತಿ ಹನ್ತಿ ಕಮ್ ॥

"ಆತ್ಮ ಕೊಲ್ಲುವವನೂ ಅಲ್ಲ, ಕೊಲ್ಲಿಸಿಕೊಳ್ಳುವವನೂ ಅಲ್ಲ. ಆತ್ಮ ಯಾರನ್ನು ಕೊಲ್ಲಿಸುತ್ತದೆ? ಯಾರನ್ನು ಕೊಲ್ಲುತ್ತದೆ?" ಆತ್ಮವು ಯಾವುದನ್ನೂ ತಾನು ಮಾಡದು, ಮಾಡುವುದೆಲ್ಲ ಮನೋವಿಕಾರ ಬುದ್ಧಿವಿಕಾರಗಳು. ಅವು ಪ್ರಕೃತಿಪ್ರೇರಿತವೂ ಪ್ರಾಚೀನ ಪ್ರೇರಿತವೂ ಆದ ವಿಕಾರಗಳು. ಅವುಗಳಿಗೆ ಹದ್ದುಮಿತಿಯನ್ನು ಗೊತ್ತುಪಡಿಸುವ ಶಕ್ತಿ ಪುರುಷಬುದ್ಧಿಗೆ ಉಂಟು. ವಿವೇಕಸ್ವಾತಂತ್ರ್ಯವೇ ಮನುಷ್ಯನಿಗಿರುವ ಶುಭಾವಕಾಶ.

"ಎಲ್ಲ ಕರ್ಮಗಳಲ್ಲೂ ಸತ್ತ್ವ, ರಜಸ್ಸು, ತಮಸ್ಸು—ಈ ಮೂರು ಗುಣಗಳು ಸೇರಿವೆ ಎಂದೆನಲ್ಲವೆ? ಈ ತ್ರಿಗುಣಕಾರ್ಯಗಳಲ್ಲಿ ಧರ್ಮವೂ ಧರ್ಮವಲ್ಲದ್ದೂ ಎರಡೂ ಇರಬಹುದು. ತ್ರಿಗುಣಸ್ಪರ್ಶವಿಲ್ಲದೆ ಮಾಡಿದ ಕರ್ಮವು ನಿನಗೆ ಯಾವ ಬಂಧನವನ್ನೂ ತಾರದೆ, ಲೋಕ ಸಹಾಯವಾದೀತು.

> ತ್ರೈಗುಣ್ಯ ವಿಷಯಾ ವೇದಾಃ
> ನಿಸ್ತ್ರೈಗುಣ್ಯೋ ಭವಾರ್ಜುನ ॥ (೨-೪೫)

“ವೇದಶಾಸ್ತ್ರಗಳಲ್ಲಿ ವಿಧಿಸಿರುವ ಧರ್ಮಕರ್ಮಗಳು ಫಲಕಾರಿಗಳು. ಸ್ವರ್ಗಸೌಭಾಗ್ಯಾದಿ ಕಾಮನೆಗಳನ್ನಿಟ್ಟುಕೊಂಡಿರುವವರು ಆ ಧರ್ಮಗಳನ್ನು ಮಾಡುತ್ತಾರೆ. ನೀನು ಅದೇ ಧರ್ಮವನ್ನು ಯಾವ ಕಾಮನೆಯೂ ಇಲ್ಲದೆ ಮಾಡು. ಆಗ ಅದು ಅಧಿಧರ್ಮವಾಗುತ್ತದೆ. ಕಾಮ್ಯಕರ್ಮಗಳ ಮೂಲಕ ಜೀವಶುದ್ಧಿ ಅನೇಕರಿಗೆ ಆಗಬಹುದು. ಇನ್ನು ಕೆಲವರಿಗೆ ಶ್ರುತಿಸ್ಮೃತಿಗಳ ವಿಧಿನಿಷೇಧಗಳೇ ಬೇಕಿಲ್ಲ. ನೀನು ಅವರಂತೆ ನಿಸ್ತ್ರೈಗುಣ್ಯನಾಗು. ಅದಾಗುವುದಿಲ್ಲವೆಂದರೆ ಮಿಕ್ಕವರಂತೆ ಸಾಧಾರಣಮಾರ್ಗ ಹಿಡಿದು ಉತ್ತಮಗತಿಯನ್ನು ಸಂಪಾದಿಸಿಕೊ.

“ಅರ್ಜುನ, ನಿನ್ನ ಮನಸ್ಸು ಎಂದು ಮೋಹವ್ಯಾಕುಲವನ್ನು ದಾಟುತ್ತದೆಯೋ ಅಂದು ನಿನಗೆ ಉಪದೇಶಾವಶ್ಯಕತೆ ಮುಗಿಯುತ್ತದೆ. ಎಂದರೆ ಎಲ್ಲ ಉಪದೇಶವೂ ಮನಸ್ಸಿನ ಕಾಮನೆ ವ್ಯಾಮೋಹಗಳನ್ನು ಕಳೆಯುವುದಕ್ಕಾಗಿ ಮಾತ್ರ ಎಂದು ಭಾವ. ಹೇಳಿಕೆಯ ಮಾತುಗಳು ಹಲವಾರು ತೆರನಾಗಿರುತ್ತವೆ. ಅವು ಮನಸ್ಸನ್ನು ಕಲಕಿ ಚದರಿಸುತ್ತವೆ. ನೀನು ಅವಕ್ಕೆ ಕಿವಿಗೊಡದೆ ಯಾವುದೋ ಒಂದೆಡೆ ನೆಲಸಿ ನಿಂತರೆ, ಆಗ ಪುಣ್ಯ ಪಾಪಗಳ ಸೋಂಕಿಗೆ ಸಿಕ್ಕದೆ ಜಗತ್ತಿನಲ್ಲಿ ಜೀವಿಸುವ ಯೋಗಕಲಾರಹಸ್ಯವು— ‘ಯೋಗಃ ಕರ್ಮಸು ಕೌಶಲಮ್’ ಎಂಬುದು—ನಿನಗೆ ಸಾಧ್ಯವಾಗುತ್ತದೆ.”

> ಸಮಾಧಾವಚಲಾ ಬುದ್ಧಿಃ
> ತದಾ ಯೋಗಮವಾಪ್ಸ್ಯಸಿ ॥

ಸಮಾಧಿಯೆಂದರೆ ಸಮಾಧಾನ—ಮನಸ್ಸನ್ನು ಸಮಸ್ಥಿತಿಗೆ ತಂದು ಲಕ್ಷ್ಯವಿಷಯದಲ್ಲಿ ಕೇಂದ್ರೀಕರಿಸುವುದು. ಮನಸ್ಸು ಅಲುಗಾಡದೆ ಒಂದೇ ಧ್ಯಾನದಲ್ಲಿ ನಿಂತಿರುವುದು.

ತತ್ತ್ವಜ್ಞಲಕ್ಷಣ

ಅರ್ಜುನನ ಮನಸ್ಸಿಗೆ ಸ್ವಲ್ಪಮಾತ್ರ ಉಪದೇಶ ನಾಟಿರಬೇಕು. ಅವನು ಕೇಳುತ್ತಾನೆ: "ಸಮಾಧಿಸ್ಥನೆಂದು ಹೇಳಿದೆಯಲ್ಲ; ಸ್ಥಿತಪ್ರಜ್ಞ ಎಂದೆಯಲ್ಲ—ಅವನ ಲಕ್ಷಣ ಏನು? ಅವನು ಹೇಗೆ ಮಾತನಾಡುತ್ತಾನೆ?" ಅದಕ್ಕುತ್ತರವಾಗಿ ಭಗವಂತ ಹೇಳಿದ್ದು ಜ್ಞಾನಿಯ ಲಕ್ಷಣ. ಅದೇ ಜಿಜ್ಞಾಸುವಿಗೆ ಶಿಕ್ಷಣ. ಈ ೫೪ನೆಯ ಶ್ಲೋಕವಾದ "ಸ್ಥಿತಪ್ರಜ್ಞಸ್ಯ" ಎಂಬಲ್ಲಿಂದ ೭೨ನೆಯ ಶ್ಲೋಕದ ಕಡೆಯಾದ, "ನಿರ್ವಾಣಮೃಚ್ಛತಿ" ಎಂಬಲ್ಲಿಯವರೆಗೆ ೧೯ ಶ್ಲೋಕಗಳು ಮಹಾತ್ಮಗಾಂಧಿಯವರಿಗೆ ಅತ್ಯಂತ ಪ್ರಿಯವಾಗಿದ್ದವೆಂದು ತಿಳಿದವರು ಹೇಳುತ್ತಾರೆ. ಧ್ಯಾನಕ್ಕೂ ಅಭ್ಯಾಸಕ್ಕೂ ಆ ಶ್ಲೋಕಗಳು ಉಪಯುಕ್ತವಾಗುತ್ತವೆ.

ಅರ್ಜುನನ ಪ್ರಶ್ನೆ:

"ಕೇಶವನೆ, ಸ್ಥಿರವಾದ ಪ್ರಜ್ಞೆಯುಳ್ಳವನು ಆಡುವ ಮಾತು ಎಂಥಾದ್ದು? ಮನಸ್ಸನ್ನು ಸಮಸ್ಥಿತಿಯಲ್ಲಿರಿಸಿಕೊಂಡಿರುವವನ ನಡೆನುಡಿಗಳು ಎಂಥವು? ದೃಢವಾದ ಬುದ್ಧಿಯುಳ್ಳವನು ಏನನ್ನು ಕುರಿತು ಮಾತನಾಡುತ್ತಾನೆ? ಅವನು ಹೇಗಿರುತ್ತಾನೆ? ಏನನ್ನು ಬಯಸುತ್ತಾನೆ?" (೫೪)

ಶ್ರೀಕೃಷ್ಣನ ಉತ್ತರ:

"ಎಲೈ ಅರ್ಜುನನೆ, ಮನುಷ್ಯನು ಯಾವಾಗ ತನ್ನ ಮನಸ್ಸಿನಲ್ಲಿರುವ ಎಲ್ಲ ಕಾಮಗಳನ್ನೂ ಸಂಪೂರ್ಣವಾಗಿ ತ್ಯಜಿಸಿ ತನ್ನೊಳಗೆ ತಾನೇ ತನ್ನಿಂದಲೇ—ಆತ್ಮಧ್ಯಾನ ಆತ್ಮಾನುಭವಗಳಲ್ಲಿಯೇ ಸಂತೋಷಪಡಬಲ್ಲವನಾಗಿರುತ್ತಾನೋ ಆಗ ಅವನಿಗೆ ಸ್ಥಿತಪ್ರಜ್ಞನೆಂದು ಹೆಸರು ಸಲ್ಲುತ್ತದೆ." (೫೫)

"ಅವನು ದುಃಖಗಳಿಂದ ಕೆರಳುವವನಲ್ಲ; ಸುಖಗಳಿಗಾಗಿ ಆಶೆ ಪಡುವವನಲ್ಲ; ವ್ಯಾಮೋಹ, ಭಯ, ರೋಷ—ಇವುಗಳನ್ನು ಬಿಟ್ಟು ಬುದ್ಧಿಯನ್ನು ಅಲುಗಾಡದಂತೆ ಉಳಿಸಿಕೊಂಡಿರುವವನಿಗೆ ಮುನಿ ಎಂಬ ಹೆಸರು ಸಲ್ಲುತ್ತದೆ." (೫೬)

“ಯಾರು ಎಲ್ಲೆಡೆಗಳಲ್ಲಿಯೂ ಮೋಹಪಕ್ಷಪಾತಗಳಿಲ್ಲದವನಾಗಿ ತನ್ನ ಪಾಲಿಗೆ ಬಂದ ಶುಭಾಶುಭಗಳನ್ನು ಅನುಭವಿಸುವುದರಲ್ಲಿ ಅಭಿನಂದನೆ ನಿಂದನೆಗಳೆರಡೂ ಇಲ್ಲದವನಾಗಿ, ಎಂದರೆ ಉಭಯನಿರ್ವಿಕಾರನಾಗಿರುತ್ತಾನೋ ಅವನಲ್ಲಿ ತತ್ತ್ವಪ್ರಜ್ಞೆಯು ದೃಢವಾಗಿರುತ್ತದೆ.” (೫೭)

“ಆಮೆಯು ತನ್ನ ತಲೆ ಕಾಲು ಮೊದಲಾದ ಅಂಗಗಳನ್ನು ತನ್ನೊಳಕ್ಕೆಳೆದುಕೊಳ್ಳುವಂತೆ ಯಾವಾತನು ತನ್ನ ಇಂದ್ರಿಯಗಳನ್ನು ಅವುಗಳನ್ನು ಕೆರಳಿಸುವ ವಿಷಯಗಳಿಂದ ತನ್ನೊಳಕ್ಕೆ ಸೆಳೆದುಕೊಂಡು [ವಿಷಯಸ್ಪರ್ಶವಿಲ್ಲದಂತೆ] ಬಾಳಬಲ್ಲನೋ ಅವನಲ್ಲಿ ಪ್ರಜ್ಞೆಯು ಸ್ಥಿರವಾಗಿರುತ್ತದೆ.” (೫೮)

“ಮನುಷ್ಯನು ಆಹಾರವನ್ನು ಮಿತಪಡಿಸಿಕೊಂಡಂತೆ ಇಂದ್ರಿಯವಿಷಯಗಳು ಅವನಿಂದ ದೂರವಾಗುತ್ತವೆ. ರಸಾಭಿಲಾಷೆಯು ಮನಸ್ಸಿನ ಒಳಗಡೆ ಇರತಕ್ಕದ್ದಲ್ಲವೆ?—ಎಂದರೆ, ಹೌದು. ಆದರೆ ಬುದ್ಧಿಯಿಂದ ಅದಕ್ಕಿಂತಲೂ ಶ್ರೇಷ್ಠವಾದದ್ದನ್ನು ಕಂಡಾಗ ಆ ಅಭಿಲಾಷೆಯು ತೊಲಗಿಹೋಗುತ್ತದೆ. [ಎಂದರೆ ಪರಮಾತ್ಮಕುತೂಹಲ ಬೆಳೆದಂತೆಲ್ಲ ವಿಷಯಕುತೂಹಲ ಸವೆದುಹೋಗುತ್ತದೆ.]” (೫೯)

“ಅರ್ಜುನ, ಬುದ್ಧಿವಂತನಾದ ಮನುಷ್ಯನು ಸಂತತವಾಗಿ ತಡೆಗಟ್ಟಲು ಪ್ರಯತ್ನ ಮಾಡಿದರೂ ಇಂದ್ರಿಯಗಳು ಅವನನ್ನು ಕೆರಳಿಸಿ ಬೇಗ ಅವನ ಮನಸ್ಸನ್ನು ಹಾರಿಸಿಕೊಂಡು ಹೋಗುತ್ತವೆ. [ಸ್ವಭಾವ ಹಾಗಿರುವುದರಿಂದ] ಆ ಇಂದ್ರಿಯಗಳನ್ನೆಲ್ಲ ಅದು ಮೀರಿಸಿ ಪರಮಾತ್ಮವಸ್ತುವಿನಲ್ಲಿ ಮನಸಾ ಸೇರಿಕೊಂಡಿರಬೇಕಾದದ್ದು. ಯಾರಿಗೆ ಇಂದ್ರಿಯಗಳು ಸ್ವಾಧೀನದಲ್ಲಿವೆಯೋ ಅವನ ಪ್ರಜ್ಞೆಯು ಸುಪ್ರತಿಷ್ಠಿತವಾದದ್ದು.” (೬೦-೬೧)

“ಮನುಷ್ಯನು ಇಂದ್ರಿಯವಿಷಯಗಳನ್ನು ನೆನಪಿಗೆ ತಂದುಕೊಂಡ ಒಡನೆಯೇ ಆ ವಿಷಯಗಳಲ್ಲಿ ಸಂಬಂಧವುಂಟಾಗುತ್ತದೆ. ಆ ಜ್ಞಾಪಕಸಂಬಂಧದಿಂದಲೇ ಆ ವಿಷಯದಲ್ಲಿ ಕಾಮವುಂಟಾಗುತ್ತದೆ. [ಆ ಕಾಮಕ್ಕೆ ಅಡ್ಡಿ ಕಂಡಾಗ] ಕ್ರೋಧ ಹುಟ್ಟುತ್ತದೆ. ಕ್ರೋಧದಿಂದ ವಿವೇಕ ತಪ್ಪಿಸುವ ಸಂಮೋಹ ಹುಟ್ಟುತ್ತದೆ. ಸಂಮೋಹದಿಂದ ತಿಳಿವಳಿಕೆ ತಲೆಕೆಳಗಾಗುತ್ತದೆ. ತಿಳಿವಳಿಕೆಯ ಹೆಚ್ಚು ಕಡಿಮೆಗಳಿಂದ ಬುದ್ಧಿಯು ನಶಿಸುತ್ತದೆ. ಬುದ್ಧಿನಾಶದಿಂದ ಮನುಷ್ಯನು ನಾಶಹೊಂದುತ್ತಾನೆ.” (೬೨-೬೩)

“ಯಾರು ರಾಗದ್ವೇಷಗಳನ್ನು ಬಿಟ್ಟವನಾಗಿ ಇಂದ್ರಿಯಗಳನ್ನು ವಿಷಯಗಳಿಂದ ಬಿಡಿಸಿದವನಾಗಿ ಅವುಗಳನ್ನು ಸ್ವವಶದಲ್ಲಿರಿಸಿಕೊಂಡು ತನ್ನ ಮನಸ್ಸನ್ನು ತನಗೆ ವಿಧೇಯ ಮಾಡಿಕೊಂಡಿರುತ್ತಾನೋ ಆತನು ಮನಸ್ಸಿನ ಪ್ರಸಾದಸ್ಥಿತಿಯನ್ನು, ಎಂದರೆ ಅಲುಗಾಡದೆ, ಕೊಳಕಿಲ್ಲದೆ ಇರುವ ಸ್ಥಿತಿಯನ್ನು ಹೊಂದಬಲ್ಲನು.” (೬೪)

“ಮನಸ್ಸು ಪ್ರಸಾದವಾದಾಗ ಅವನಲ್ಲಿ ಸಮಸ್ತ ದುಃಖಗಳೂ ಕೊನೆಗಾಣುತ್ತವೆ. ಪ್ರಸನ್ನಮನಸ್ಸಿನವನಲ್ಲಿ ಬುದ್ಧಿಯು ದೃಢವಾಗಿ ನಿಲ್ಲುತ್ತದೆ.” (೬೫)

“ಯಾರು ಮನಸ್ಸನ್ನು ಆತ್ಮವಸ್ತುವಿನಲ್ಲಿ ಸೇರಿಸಿಲ್ಲವೋ ಅವನಲ್ಲಿ ಬುದ್ಧಿ ಸರಿಯಾಗಿ ಕೆಲಸಮಾಡದು. ಅವನಿಗೆ ತತ್ತ್ವಭಾವನೆ ಬಾರದು. ಯಾರಿಗೆ ತತ್ತ್ವಭಾವನೆಯಿಲ್ಲವೋ ಅವನಿಗೆ ಶಾಂತಿಯಿಲ್ಲ. ಶಾಂತಿಯಿಲ್ಲದವನಿಗೆ ಸುಖವೆಲ್ಲಿಂದ ಬರಬೇಕು?” (೬೬)

“ಯಾರ ಮನಸ್ಸು ಇಂದ್ರಿಯಗಳಿಗೆ ವಿಧೇಯವಾಗಿ ನಡೆಯುತ್ತದೆಯೋ ಅವನ ಪ್ರಜ್ಞೆಯನ್ನು ಅದು ಅಪಹರಿಸಿಕೊಂಡು ಹೋಗುತ್ತದೆ—ಸಮುದ್ರದಲ್ಲಿ ದೋಣಿಯನ್ನು ಗಾಳಿ ಎಲ್ಲೆಲ್ಲಿಗೋ ತಳ್ಳಿಕೊಂಡು ಹೋಗುವಂತೆ.” (೬೭)

“ಆದದ್ದರಿಂದ, ಎಲೈ ಮಹಾಬಾಹುವೆ, ಯಾವಾತನಲ್ಲಿ ಇಂದ್ರಿಯಗಳು ಇಂದ್ರಿಯಾರ್ಥಗಳಿಂದ ಎಲ್ಲೆಡೆಯೂ ಬೇರ್ಪಡಿಸಲ್ಪಟ್ಟು ಹದ್ದಿನಲ್ಲಿರಿಸಿಕೊಂಡವಾಗಿರುತ್ತವೋ ಅವನ ಪ್ರಜ್ಞೆಯು ಪ್ರತಿಷ್ಠಿತವಾಗಿರುತ್ತದೆ.” (೬೮)

“ಲೋಕಕ್ಕೆ ಯಾವಾಗ ರಾತ್ರಿಯೋ ಆಗ ಜ್ಞಾನಿಯು ಎಚ್ಚರಗೊಂಡಿರುತ್ತಾನೆ. [ಎಂದರೆ ಸಾಮಾನ್ಯ ಜನರು ಯಾವ ತತ್ತ್ವವನ್ನು ಕಾಣದವರಾಗಿ ಅಜ್ಞಾನದಲ್ಲಿರುತ್ತಾರೋ ಆ ತತ್ತ್ವದ ವಿಷಯದಲ್ಲಿ ಜಾಗರೂಕತೆಯಿಂದಿರುವವನು ಜ್ಞಾನಿ.] ಯಾವಾಗ ಸಾಮಾನ್ಯ ಪ್ರಾಣಿಗಳಿಗೆ ಹಗಲಾಗಿರುತ್ತದೆಯೋ ಆಗ ಜ್ಞಾನಿಗೆ ರಾತ್ರಿಯಾಗಿರುತ್ತದೆ. [ಎಂದರೆ ಯಾವ್ಯಾವ ವಿಷಯದಲ್ಲಿ ಸಾಮಾನ್ಯ ಜನಕ್ಕೆ ಅತ್ಯಂತ ಆಸಕ್ತಿಯೋ ಅವುಗಳಲ್ಲಿ, ಜ್ಞಾನಿಗೆ ಕೊಂಚವೂ ಆಸಕ್ತಿಯಿರದು.]” (೬೯)

“ಎಂದೆಂದಿಗೂ ಹೊಸಹೊಸದಾಗಿ ಬಂದದ್ದನ್ನು ತೆಗೆದುಕೊಳ್ಳುತ್ತಲೇ ಇನ್ನೂ ಚಂಚಲವಾಗಿಯೇ ಉಳಿದುಕೊಳ್ಳುವ ಸಮುದ್ರವನ್ನು ಹೊಸಹೊಸ ನೀರುಗಳು ಹೇಗೆ

ಹರಿದು ಬಂದು ಸೇರಿಕೊಳ್ಳುತ್ತವೋ ಅದರಂತೆ ಕಾಮಗಳು ಮನುಷ್ಯನನ್ನು ಪ್ರವೇಶಿಸುತ್ತಿರುತ್ತವೆ. ಯಾರನ್ನು ಕಾಮಗಳು ಹಾಗೆ ಪ್ರವೇಶಿಸುವುದಿಲ್ಲವೋ ಅವನು ಶಾಂತಿಯನ್ನು ಪಡೆಯುತ್ತಾನೆ. ಕಾಮಕಾಮಿಯಾದವನಿಗೆ ಶಾಂತಿಯಿಲ್ಲ." (೭೦)

"ಯಾವ ಮನುಷ್ಯನು ಕಾಮನೆಗಳನ್ನೆಲ್ಲ ಬಿಟ್ಟು ನಿಃಸ್ಪೃಹನಾಗಿ, ಅಹಂಕಾರ ಮಮಕಾರಗಳಿಲ್ಲದವನಾಗಿ ನಡೆದುಕೊಳ್ಳುತ್ತಾನೋ ಅವನು ಶಾಂತಿಯನ್ನು ಪಡೆಯುತ್ತಾನೆ." (೭೧)

"ಎಲೈ ಪಾರ್ಥನೆ, ಇಂಥಾದ್ದು ಬ್ರಾಹ್ಮೀ ಸ್ಥಿತಿ; ಎಂದರೆ ಬ್ರಹ್ಮವಸ್ತುವನ್ನು ತಿಳಿದು ಅನುಭವಿಸುವವರ ಮನಸ್ಸಿನ ಸ್ಥಿತಿ. ನೀನು ಈ ಸ್ಥಿತಿಯನ್ನು ಪಡೆದುಕೊಂಡರೆ ನಿನ್ನ ಮೋಹ ಭ್ರಾಂತಿಗಳೆಲ್ಲ ತೊಲಗಿಹೋಗುತ್ತವೆ. ಈ ಸ್ಥಿತಿಯಲ್ಲಿ ಆಮರಣಾಂತವಾಗಿ ಇರುವವನು ಬ್ರಹ್ಮನಿರ್ವಾಣವನ್ನು ಪಡೆಯುತ್ತಾನೆ [ಎಂದರೆ ಬ್ರಹ್ಮವಸ್ತುವಿನಲ್ಲಿ ಲೀನನಾಗಿದ್ದು ಬಿಡುತ್ತಾನೆ]." (೭೨)

***

ಮೇಲೆ ಪ್ರಸ್ತುತವಾಗಿರುವ ಗುಣಗಳನ್ನು ಸಂಪಾದಿಸಿಕೊಳ್ಳುವುದು ಸುಲಭವೆಂದು ಯಾರೂ ಭಾವಿಸಿರಲಾರರು. ತುಂಬಾ ಉದಾತ್ತಗಳೂ ಹಾಗೆಯೇ ಕಷ್ಟಸಾಧ್ಯಗಳೂ ಆದ ಗುಣಗಳು ಅವು. ಯೋಗಾಭ್ಯಾಸಿಗೆ ಮಾತ್ರವಲ್ಲ, ಎಲ್ಲರಿಗೂ ಬೇಕಾದಂಥವು. ಎಲ್ಲರೂ ಅವನ್ನು ಆಗಾಗ ಸ್ಮರಣೆಗೆ ತಂದುಕೊಳ್ಳುವುದೊಳ್ಳೆಯದು: ಸಮಚಿತ್ತತೆ, ಕಾಮಕ್ರೋಧಾದಿಗಳನ್ನು ವರ್ಜ್ಯ ಮಾಡುವುದು, ಶುಭಾಶುಭಗಳನ್ನು ಸಮಾನವಾಗಿ ಗ್ರಹಿಸುವುದು, ಇಂದ್ರಿಯಗಳನ್ನು ಹದ್ದಿನಲ್ಲಿಡುವುದು—ಇಂಥವು.

ಈ ಅಧ್ಯಾಯಕ್ಕೆ ಸಾಂಖ್ಯಯೋಗ ಎಂದು ರೂಢಿಯ ಹೆಸರು. ಸಾಂಖ್ಯ ಎಂದರೆ ವಸ್ತುತತ್ತ್ವವಿವೇಕ. "ಖ್ಯಾ ಪ್ರಕಥನೇ" ಎಂದು ಧಾತುಪಾಠ. ಸಂಖ್ಯಾ, ಖ್ಯಾತಿ ಈ ಮಾತುಗಳೆಲ್ಲ ಅದರಿಂದಲೇ ಬಂದವು. ತತ್ತ್ವವನ್ನು ಚೆನ್ನಾಗಿ ಹೇಳುವುದು ಸಾಂಖ್ಯ. ವಸ್ತುವಿನ ಯಥಾರ್ಥಜ್ಞಾನ ಪಡೆದಿರುವವನೇ ಸಂಖ್ಯಾವಾನ್. ಸಾಂಖ್ಯ ಎಂದು ಒಂದು ವಿಶೇಷವಾದ ತತ್ತ್ವಶಾಸ್ತ್ರ ಉಂಟು. ಅದು ಕಪಿಲ ಮಹರ್ಷಿಗಳು ಪ್ರತಿಪಾದನೆ ಮಾಡಿದ್ದು. ಅಲ್ಲಿಯೂ

ಶಬ್ದಾರ್ಥ ಹೀಗೆಯೇ. "ಸಮ್ಯಗ್ವಿವಿಚ್ಯ ಖ್ಯಾಯನ್ತೇ ಅರ್ಥಾತ್ ಪ್ರಕಟೀಕ್ರಿಯನ್ತೇ ತತ್ತ್ವಾನಿ ಪ್ರಕೃತಿ ಪುರುಷ ಪದಾರ್ಥರೂಪಾಣಿ ಯಸ್ಮಿಂಸ್ತತ್ ॥" ಪ್ರಕೃತಿ, ಪುರುಷ, ದ್ವಾವಿಂಶತಿ ತತ್ತ್ವಗಳು—ಇದೇ ಜಗತ್ತಿನ ಸಾಮಗ್ರಿ ಎಂದು ಸಾಂಖ್ಯರು ಹೇಳುತ್ತಾರೆ. ಈ ವೇದಾಂತಶಾಸ್ತ್ರದಿಂದ ಅದು ಭಿನ್ನವಾದದ್ದಾದ ಕಾರಣ, ಇಲ್ಲಿ ನಮಗೆ ಅದು ಅಪ್ರಕೃತ. ನಮ್ಮ ಪ್ರಕರಣದಲ್ಲಿ ಸಾಂಖ್ಯವೆಂದರೆ ಆತ್ಮವಸ್ತುವನ್ನು ದೇಹದಿಂದ ಪ್ರತ್ಯೇಕಮಾಡಿ, ಜೀವ, ಜಗತ್ತು, ಈಶ್ವರ ಅವುಗಳ ಅಂತಸ್ತತ್ತ್ವಗಳನ್ನು ಪ್ರತಿಪಾದಿಸುವ ಶಾಸ್ತ್ರ. ಅದು ತತ್ತ್ವವಿವೇಕ.

ಅರ್ಜುನನ ಪ್ರಾಕೃತ ಮನೋಭಾವ ಈ ತತ್ತ್ವವಿವೇಕದಿಂದ ಸಂಸ್ಕಾರಪಡೆಯಬೇಕಾಗಿತ್ತು.

"ಸಾಂಖ್ಯ" ಶಬ್ದ ಇಲ್ಲಿಯ ನಮ್ಮ ಅರ್ಥದಲ್ಲಿ ಈಗ ಅಷ್ಟು ಪ್ರಸಿದ್ಧವಾಗಿಲ್ಲವಾದದ್ದರಿಂದ ನಾವು ಈ ಅಧ್ಯಾಯವನ್ನು ತತ್ತ್ವವಿವೇಕಯೋಗ ಎಂದು ಕರೆಯಬಹುದೆಂದು ತೋರುತ್ತದೆ. ಆ ಮಾತಿನಿಂದ ಈ ಅಧ್ಯಾಯದ ಸಾರಾಂಶ ಮನಸ್ಸಿಗೆ ಬೇಗ ಸ್ಫುರಿಸೀತು.

ಆತ್ಮತತ್ತ್ವವೇ ಸರ್ವನಿರ್ಣಾಯಕ

ಗೀತೆಯ ಉಪದೇಶಭಾಗ ಪ್ರಾರಂಭವಾಗುವುದು ಎರಡನೆಯ ಅಧ್ಯಾಯದಲ್ಲಿ. ಅಲ್ಲಿ ಉಪಕ್ರಮದಲ್ಲಿಯೇ ಸ್ವಾಮಿ ಸಮಸ್ತ ಜಗದ್ವಸ್ತುವನ್ನೂ ದೇಹ-ದೇಹಿ ಎಂಬೆರಡು ವರ್ಗವಾಗಿ ವಿಂಗಡಿಸಿ, ದೇಹವು ವಿಕಾರ ವಿನಾಶಗಳಿಗೆ ಒಳಪಟ್ಟದ್ದೆಂದೂ ದೇಹಿ ಮಾತ್ರ—ಎಂದರೆ ದೇಹದಲ್ಲಿರುವ ಚೈತನ್ಯವಾದ ಆತ್ಮವು—ವಿಕಾರ ವಿನಾಶಗಳಿಲ್ಲದೆ, ಶಾಶ್ವತವಾಗಿ, ಏಕಾಕಾರವಾಗಿ, ಅಖಂಡವಾಗಿರತಕ್ಕದ್ದೆಂದೂ ಸಾರಿದ್ದಾನೆ.

ಆತ್ಮವಸ್ತು ನಿತ್ಯವಾದದ್ದು; ಅದು ಸರ್ವವ್ಯಾಪಿ. ನಿರ್ವಿಕಾರಿ, ಅನಾದಿ, ಅನಂತ. ಈ ತತ್ತ್ವವನ್ನು ಎಲ್ಲಕ್ಕಿಂತ ಮೊದಲಿನಲ್ಲಿಯೇ ಇಷ್ಟು ವಿಸ್ತಾರವಾಗಿ ಒತ್ತೊತ್ತಿ ಹೇಳಿರುವುದರ ತಾತ್ಪರ್ಯವೇನು? ಎಲ್ಲ ಜೀವನಪ್ರಶ್ನೆಗಳೂ ಆತ್ಮತತ್ತ್ವದ ದೃಷ್ಟಿಯಿಂದಲೇ ತೀರ್ಮಾನಕ್ಕೆ ಬರಬೇಕಾದವು—ಎಂದು.

ಮನುಷ್ಯ ಎಂಬ ವಸ್ತುವಿನಲ್ಲಿ ಎಷ್ಟೋ ಬೇರೆಬೇರೆ ಅಂಶಗಳು ಮಿಶ್ರಿತವಾಗಿ ಏಕೀಭವಿಸಿವೆ. ಕೈಕಾಲು ಮೊದಲಾದ ಕರ್ಮಾಂಗಗಳು, ಕಣ್ಣು ಕಿವಿ ಮೂಗು ನಾಲಗೆ ಮೊದಲಾದ ಜ್ಞಾನೇಂದ್ರಿಯಗಳು, ಮನಸ್ಸು ಬುದ್ಧಿ ಮೊದಲಾದ ಅಂತಃಕರಣಗಳು, ಪೂರ್ವಜನ್ಮದಿಂದ ಬಂದಿರುವ ಕರ್ಮಶೇಷ, ಅದರಲ್ಲಿರುವ ಋಣಾನುಬಂಧಗಳು, ವಾಸನಾ ವೃತ್ತಿಗಳು, ಪುಣ್ಯಪಾಪಫಲಗಳು—ಹೀಗೆ ಬಹ್ವಂಶಗಳ ಅಡಕುಪಾತ್ರೆಯ ಅಂತರಾಂತರದೊಳಗಿದ್ದುಕೊಂಡು ಸುಖದುಃಖಗಳನ್ನು ಪಡುತ್ತಿರುವ ಜೀವ, ಅದರೊಳಗೆ ಯಾವುದಕ್ಕೂ ಅಂಟದ ಆತ್ಮ: ಇದು ಮನುಷ್ಯನೆಂಬ ವಸ್ತು. ಈ ನಾನಾ ಪದಾರ್ಥ ಸಂಕೀರ್ಣವಾದ ವಸ್ತುವಿನಲ್ಲಿ ಆತ್ಮವೊಂದೇ ಶಾಶ್ವತವೆಂದೂ ಉಳಿದದ್ದೆಲ್ಲ ವೃದ್ಧಿ ಹ್ರಾಸ ವ್ಯತ್ಯಾಸಗಳಿಗೆ ಒಳಪಡತಕ್ಕದ್ದೆಂದೂ ಆ ಕಾರಣದಿಂದ ಆತ್ಮಾನಾತ್ಮವಿವೇಕವು ನಮಗೆ ಪ್ರಥಮಕರ್ತವ್ಯವೆಂದೂ ಎಲ್ಲ ಜೀವನೋದ್ದೇಶಗಳ, ಎಲ್ಲ ಜೀವನಕ್ರಿಯೆಗಳ ಯುಕ್ತಾಯುಕ್ತತೆಗಳನ್ನೂ ಆತ್ಮೈಕ ದೃಷ್ಟಿಯಿಂದ ನೋಡಿ ಹಿತಾಹಿತಗಳನ್ನು ನಿಶ್ಚಯಿಸಿಕೊಳ್ಳತಕ್ಕದ್ದೆಂದೂ ಗೀತೋಪದೇಶದ ತಾತ್ಪರ್ಯ. ಅರ್ಜುನನು ಪ್ರಶ್ನೆ ಕೇಳಿದ್ದು ಧರ್ಮವನ್ನು ಕುರಿತು:

ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ ॥

ಶ್ರೀಕೃಷ್ಣನು ಉತ್ತರ ಹೇಳಿದ್ದು ಬಹುವಾಗಿ ಮೋಕ್ಷವನ್ನು ಕುರಿತು. ಇದು ಸಂಗತವೇ.

ಒಂದು ಮರದ ಯೋಗ್ಯತೆ ಗೊತ್ತಾಗುವುದು ಅದರ ಹಣ್ಣಿನಿಂದ. "A tree is known by its fruit" ಎಂದು ಇಂಗ್ಲಿಷ್ ಗಾದೆ. ಧರ್ಮವೂ ಮೋಕ್ಷವೂ ಒಂದೇ ವೃಕ್ಷದ ಎರಡಂಗಗಳು: ಧರ್ಮ ಬೇರು, ಮೋಕ್ಷ ಹಣ್ಣು. ಒಂದಾನೊಂದು ಕಾರ್ಯವು ಧರ್ಮವೋ ಅಲ್ಲವೋ ಎಂದು ಪ್ರಶ್ನೆ ಬಂದರೆ ಅದು ಮೋಕ್ಷಕ್ಕೆ ಸಾಧಕವೋ ಬಾಧಕವೋ ನೋಡಿರಿ ಎಂದು ಉತ್ತರ. ನಾವು ಮಾಡುವ ಆಲೋಚನೆ, ನಾವು ಆಡುವ ಮಾತು, ನಾವು ನಡೆಯುವ ನಡವಳಿಕೆ ಆ ಸಮಯದಲ್ಲೇ ಆಗಲಿ ಕ್ರಮಕ್ರಮವಾಗಿಯಾಗಲಿ, ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಮೋಕ್ಷಗತಿಗೆ ಸಹಾಯ ಕೊಡುವುದಾದರೆ ಅದು ಧರ್ಮ; ಅಡ್ಡಿತರುವುದಾದರೆ ಅದು ಅಧರ್ಮ. ಧರ್ಮ ಮೋಕ್ಷಗಳ ಸಂಬಂಧ ಹೀಗಿರುವುದರಿಂದ ಅರ್ಜುನನಿಗೆ ಮಾಡಿದ ಉಪದೇಶವು ಮೋಕ್ಷಸಂಪಾದನೆಗೆ ಪ್ರತಿಕೂಲವಾಗದೆ ಅನುಕೂಲವೇ ಆದದ್ದೆಂದು ತೋರಿಸುವುದು ಅವಶ್ಯವಾಯಿತು. ಹೀಗೆ ಮೋಕ್ಷಸ್ವರೂಪ ವಿಚಾರವು ಅನಿವಾರ್ಯವಾಯಿತು. ಅದರಿಂದ ಬಂತು ಆತ್ಮವಿಚಾರ, ಜೀವವಿಚಾರ, ಪ್ರಕೃತಿವಿಚಾರ, ಪರಮಾತ್ಮವಿಚಾರ, ಉಪಾಸನಾಮಾರ್ಗವಿಚಾರ—ಇವೇ ಮೊದಲಾದ ಮೋಕ್ಷಪ್ರಸಕ್ತಿಗಳು.

ಅರ್ಜುನನಿಗೆ ಬೇಕಾಗಿದ್ದದ್ದು ಈ ವಿವೇಕ. ಅವನ ಪ್ರಾಕೃತ ಗುಣಗಳು ಒಳ್ಳೆಯವಾಗಿದ್ದರೂ ಆ ಒಳ್ಳೆಯತನ ತತ್ತ್ವವಿವೇಕದಿಂದ ಸಂಸ್ಕಾರ ಪಡೆಯದಿದ್ದ ಕಾರಣದಿಂದ ಅವನ ಮನಸ್ಸು ಹಾಗೆ ವಿಕ್ಷೋಭೆಗೆ ಸಿಕ್ಕಿತು. ದೃಢನಿಶ್ಚಯವಿಲ್ಲದೆಹೋಯಿತು. ತತ್ತ್ವವಿವೇಕವೇ ಧರ್ಮಜ್ಞಾನಕ್ಕೆ ಮೂಲ. ಅದರಿಂದ ಈ ಶಾಸ್ತ್ರದ ಪ್ರಶಸ್ತಿ.

ಸಂಗ್ರಹ

ವಸ್ತುಪರೀಕ್ಷಣದಿಂ ಯಾ- ।
ಥಾರ್ಥ್ಯದ ತಿಳಿವದರೊಳಿಹುದು ಧರ್ಮದ ಬೀಜಂ ॥
ಕೃತ್ಯಾಕೃತ್ಯವಿವೇಕಕೆ ।
ತತ್ತ್ವವ ನೋಡೆಂಬುದು ದ್ವಿತೀಯಾಧ್ಯಾಯಂ ॥

ಅನುಬಂಧ ೧ :
ತತ್ತ್ವವೆಂದರೆ ಏನು?

ಧರ್ಮಾಧರ್ಮಗಳ ನಿರ್ಣಯವನ್ನು—ಎಂದರೆ ಯಾವ ಕಾರ್ಯವನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬ ತೀರ್ಮಾನವನ್ನು ತತ್ತ್ವದ ಆಧಾರದ ಮೇಲೆ ಮಾಡತಕ್ಕದ್ದೆಂದೂ, ನಮ್ಮನಮ್ಮ ಪೂರ್ವವಿಶ್ವಾಸದಿಂದಲಾಗಲಿ ಪೂರ್ವಾಗ್ರಹದಿಂದಲಾಗಲಿ ಅದನ್ನು ಗೊತ್ತುಮಾಡತಕ್ಕದ್ದಲ್ಲವೆಂದೂ ಹೇಳಿದೆವು. ತತ್ತ್ವವೇ ಧರ್ಮಕ್ಕೆ ತಳಪಾಯ. ಹಾಗಾದರೆ ತತ್ತ್ವವೆಂಬುದೇನು?

ತತ್ತ್ವವೆಂದರೆ (ತತ್ + ತ್ವ) ಒಂದಾನೊಂದು ಪದಾರ್ಥವು "ಅದಾಗಿರುವ ಸ್ಥಿತಿ." ಯಾವ ಒಂದು ಗುಣಾತಿಶಯದಿಂದ, ಅಥವಾ ಲಕ್ಷಣದಿಂದ ಒಂದು ಪದಾರ್ಥವು ಬೇರೊಂದು ಪದಾರ್ಥವೆನಿಸದೆ ಆ ಪದಾರ್ಥವೇ ಆಗಿರುತ್ತದೆಯೋ ಆ ಗುಣವಿಶೇಷವು, ಅಥವಾ ಆ ಲಕ್ಷಣವು, ಆ ಪದಾರ್ಥದ ತತ್ತ್ವ. ವಸ್ತುವಿನ ಯಥಾರ್ಥ ರೂಪವೇ, ಅವರ ನೈಜಸ್ವರೂಪವೇ, ಅದರ ತತ್ತ್ವ.

ಜಗತ್ತಿನಲ್ಲಿ ಪ್ರತಿಯೊಂದು ಪದಾರ್ಥಕ್ಕೂ ಎರಡು ರೂಪಗಳಿರುತ್ತವೆ: ಒಂದು ಇರುವ ರೂಪ, ಇನ್ನೊಂದು ತೋರುವ ರೂಪ. ಇರುವ ರೂಪವು ತತ್ತ್ವ; ತೋರುವ ರೂಪವು ಪ್ರತೀತಿ.

ನೆಲ ಒಂದು ವಸ್ತು. ಅದು ನಮಗೆ ಮಣ್ಣು, ಮರಳು, ಕಲ್ಲು ಮೊದಲಾದ ರೂಪಗಳಲ್ಲಿ ಕಾಣಬರುತ್ತದೆ. ಇದು ಪ್ರತೀತಿ. ಅದು ಹಳ್ಳ, ದಿಣ್ಣೆ, ಕಟ್ಟಡ, ಕಾಲುವೆ ಮೊದಲಾದ ಆಕಾರಗಳಲ್ಲಿ ತಿಳಿದುಬರುತ್ತದೆ. ಇದು ಪ್ರತೀತಿ. ಈ ಪ್ರತೀತಿಯು ನಮ್ಮ ಕಣ್ಣು ಕೈ ಮೊದಲಾದ ಇಂದ್ರಿಯಗಳಿಗೆ ಗೋಚರವಾಗತಕ್ಕದ್ದು. ನಮ್ಮ ಇಂದ್ರಿಯ ಕಾರ್ಯಗಳನ್ನು ವಿನಾಯಿಸಿದಾಗ ಆ ನೆಲವೆಂಬ ವಸ್ತು ಹೇಗುಂಟೋ ಅದು ಅದರ ತತ್ತ್ವ.

ಜಗತ್ತು ಒಂದು ವಸ್ತು; ಜೀವ ಒಂದು ವಸ್ತು–ಇವು ನಮ್ಮ ಕಣ್ಣು ಕಿವಿ ನಾಲಗೆಗಳಿಗೆ ಹೇಗೆಹೇಗೋ, ಸಾವಿರಾರು ಬಗೆಯ ರೂಪಗಳಲ್ಲಿ ಕಾಣಬರುತ್ತವೆ. ಇದು ಪ್ರತೀತಿ; ತತ್ತ್ವವಲ್ಲ. ನಮ್ಮ ಕಣ್ಣು ಕಿವಿ ನಾಲಗೆಗಳಲ್ಲಿರುವ ವೇದನಶಕ್ತಿ ಸ್ವಲ್ಪವಾದದ್ದು; ಆದದ್ದರಿಂದ ನೇತ್ರಾದಿ ಇಂದ್ರಿಯಗಳಿಗೆ ಇರುವುದೆಲ್ಲವೂ ಕಾಣಬಾರದೆ ಅದರಲ್ಲಿ ಕೊಂಚವೇ

ಕಂಡುಬಂದಿರಬಹುದು. ರೋಗದಿಂದ ನಮ್ಮ ಇಂದ್ರಿಯಗಳು ಭ್ರಾಂತಿಪಟ್ಟಿರಬಹುದು. ಪ್ರತೀತಿಯಲ್ಲಿ ಇಂಥಾ ಲೋಪ ಪ್ರಮಾದಗಳು ಅಸಂಭವವಲ್ಲ. ಆದದ್ದರಿಂದ ಇಂದ್ರಿಯಾನುಭವ ಮಾತ್ರವೇ ಪೂರ್ಣಸತ್ಯವಾಗಲಾರದು. ತತ್ತ್ವವೆಂದರೆ ಪ್ರಸಕ್ತವಸ್ತುವನ್ನು ಕುರಿತ ಪೂರ್ಣ ಸತ್ಯ.

ಗೀತಾಪ್ರಸಂಗದಲ್ಲಿ ಬಂದಿರುವುದು ಧರ್ಮಾಧರ್ಮಗಳ ತತ್ತ್ವ. ಹಾಗೆಂದರೆ ಜೀವಕ್ಕೂ ಜಗತ್ತಿಗೂ ಎಂಥ ಸಂಬಂಧವಿದ್ದರೆ ಚೆನ್ನ?—ಎಂಬ ಪ್ರಶ್ನೆ. ಈ ಪ್ರಶ್ನೆ ನಿರ್ಧಾರವಾಗಬೇಕಾದರೆ ಜಗತ್ತಿನ ತತ್ತ್ವವೇನು? ಜೀವನ ತತ್ತ್ವವೇನು?—ಇದನ್ನು ವಿಚಾರ ಮಾಡುವುದು ಅವಶ್ಯವಾಗುತ್ತದೆ. ಜಗತ್ತು, ಜೀವ–ಈ ಎರಡೂ ಬೇರೆಬೇರೆ ವಸ್ತುಗಳೇ? ಅವೆರಡಕ್ಕೂ ಇರುವ ಸಂಬಂಧ ಎಂಥಾದ್ದು?—ಇದು ವಿಚಾರ. ಇದಕ್ಕೆ ಬರುವ ಪ್ರತ್ಯುತ್ತರವು ಜಗತ್ತು, ಜೀವ—ಈ ಎರಡನ್ನೂ ಒಳಕೊಂಡದ್ದಾಗಿರಬೇಕು. ಮುಂಡಕೋಪನಿಷತ್ತಿನ ಒಂದು ವಾಕ್ಯವು ತತ್ತ್ವದ ಲಕ್ಷಣವನ್ನು ಗೊತ್ತುಪಡಿಸಿ ಹೇಳಿದೆ:

> ಕಸ್ಮಿನ್ನು ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ ॥

"ಯಾವುದು ತಿಳಿದಲ್ಲಿ ಈ ಎಲ್ಲವನ್ನೂ ತಿಳಿದಂತಾಗುವುದೋ" ಅದು ತತ್ತ್ವ.

ತತ್ತ್ವಪ್ರತಿಪಾದಕವಾಕ್ಯವು ಅದರ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳಿಗೂ ಸಮಾಧಾನ ಕೊಡಬಲ್ಲದ್ದಾಗಿರಬೇಕು.

ಯಾವ ಒಂದನ್ನು ತಿಳಿದರೆ ನಮಗೆ ಏನೇನು ತಿಳಿಯಬೇಕಾಗಿದೆಯೋ ಅದನ್ನೆಲ್ಲವನ್ನೂ ತಿಳಿಯಲಾದೀತೋ ಆ ವಸ್ತುವು ಬ್ರಹ್ಮ ಅಥವಾ ಪರಬ್ರಹ್ಮ. ಬ್ರಹ್ಮಸ್ವರೂಪವನ್ನು ಅಷ್ಟಿಷ್ಟಾದರೂ ನಾವು ಅರಿತುಕೊಂಡದ್ದಾದರೆ ಆ ಅರಿವಿನಿಂದ ಜಗತ್ತು, ಈಶ್ವರ, ಜೀವ, ಧರ್ಮ ಇತ್ಯಾದಿ ಆಧ್ಯಾತ್ಮಿಕ ವಿಷಯಗಳನ್ನೆಲ್ಲ ಸಮಂಜಸವಾಗಿ ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. ಆ ಸರ್ವಮೂಲವಾದ ಬ್ರಹ್ಮವನ್ನು ಕುರಿತು ನಮಗೆ ತಿಳಿವಳಿಕೆ ಕೊಡುವ ಜ್ಞಾನಮೂಲವು ವೇದ. ಅದು ಬ್ರಹ್ಮವನ್ನು ಕುರಿತು ಹೀಗೆ ಹೇಳುತ್ತದೆ:

> ಸರ್ವಂ ಖಲ್ವಿದಂ ಬ್ರಹ್ಮ ॥
> ಸತ್ಯಂ ಜ್ಞಾನಮನಂತಂ ಬ್ರಹ್ಮ ॥

ಅಯಮಾತ್ಮಾ ಬ್ರಹ್ಮ ॥
ಆತ್ಮೈವೇದಗ್ಂ ಸರ್ವಮ್ ॥

ವೇದವಿಶ್ವಾಸಿಗಳು ಈ ಬ್ರಹ್ಮಪ್ರತಿಪಾದಕವಾಕ್ಯಗಳನ್ನು ಸ್ವತಃಪ್ರಮಾಣ ಎಂದು ಗ್ರಹಿಸಿರುತ್ತಾರೆ. ಇತರರು ಇವುಗಳನ್ನು ಅರ್ಥಾಪತ್ತಿಪ್ರತಿಜ್ಞೆಯೆಂದು ಅಂಗೀಕರಿಸಿದರೂ ಅದು ಅವರಿಗೆ ಪ್ರಯೋಜಕವಾಗುತ್ತದೆ. ಯಾವ ಒಂದು ಪ್ರತಿಜ್ಞೆಯನ್ನು ಆಧಾರವಾಕ್ಯವಾಗಿ ಅಂಗೀಕರಿಸಿದ ಪಕ್ಷದಲ್ಲಿ ಪ್ರಸಕ್ತ ವಿಷಯವನ್ನು ಕುರಿತ ಎಲ್ಲ ಪ್ರಶ್ನೆಗಳಿಗೂ ಅದರಿಂದ ಸಮಂಜಸವಾದ ಉತ್ತರಗಳನ್ನು ಒದಗಿಸಲಾಗುತ್ತದೆಯೋ, ಮತ್ತು ಆ ಆಧಾರವಾಕ್ಯ ಇಲ್ಲದಲ್ಲಿ ಮಿಕ್ಕೆಲ್ಲ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರವಿಲ್ಲದೆ ಹೋಗುತ್ತದೆಯೋ ಆ ಆಧಾರಪ್ರತಿಜ್ಞೆಯೇ ಅರ್ಥಾಪತ್ತಿ. ಇದನ್ನೇ ಇಂಗ್ಲೀಷಿನಲ್ಲಿ ಹೈಪಾತೆಸಿಸ್ (Hypothesis) ಎನ್ನುವುದು.

ವೇದ ವೇದಾಂತಗಳು ಹೇಳುವ ಬ್ರಹ್ಮವಿಷಯವಾಕ್ಯಗಳನ್ನು ನಾವು ಅಂಗೀಕರಿಸಿದ್ದಾದರೆ ಜಗತ್ತು, ಜೀವ—ಮೊದಲಾದ ವಿಚಾರಗಳಲ್ಲಿ ನಾವು ಕೇಳುವ ಎಲ್ಲ ಪ್ರಶ್ನೆಗಳಿಗೂ ಸುಸಂಬದ್ಧಗಳಾದ ಉತ್ತರಗಳು ದೊರೆಯುತ್ತವೆ. ಆದದ್ದರಿಂದ ವೇದವನ್ನು ನಾವು ಮಹಾ ಅರ್ಥಾಪತ್ತಿಪ್ರತಿಜ್ಞೆಯೆಂದು (The Great Hypothesis) ಗ್ರಹಿಸಬಹುದು. ಈ ಕಾರಣದಿಂದಲೇ ಪರಬ್ರಹ್ಮತತ್ತ್ವವು ಎಲ್ಲ ವಿಚಾರಗಳಿಗೂ ಮೂಲತತ್ತ್ವವಾಗುತ್ತದೆ.

ಕೃಷ್ಣಾರ್ಜುನಸಂವಾದದಲ್ಲಿ ಪ್ರಸಕ್ತವಾಗಿರುವ ವಿಷಯಗಳು ಯಾವಯಾವುವು?

1. ಜೀವ
2. ಆತ್ಮ
3. ಜಗತ್ತು
4. ಈಶ್ವರ
5. ಧರ್ಮಾಧರ್ಮಗಳು
6. ಸ್ವರ್ಗ ನರಕಗಳು
7. ಜನ್ಮಾಂತರ್ಯ
8. ಮೋಕ್ಷ

ಈ ಎಂಟು ಪ್ರಶ್ನೆಗಳಿಗೂ ಅವುಗಳಿಗೆ ಸೇರಿದ ಉಪಪ್ರಶ್ನೆಗಳಿಗೂ ಉತ್ತರವನ್ನು ಕಂಡುಕೊಳ್ಳಲು, ನಮಗಿರುವ ಆಧಾರಭೂಮಿ ಬ್ರಹ್ಮತತ್ತ್ವ. ಮೇಲೆ ಹೇಳಿದ ಎಂಟಂಶಗಳೂ ಬ್ರಹ್ಮಮಹಿಮಾವಿಸ್ತಾರದ ಎಂಟು ಅಧ್ಯಾಯಗಳು. ಬ್ರಹ್ಮವಸ್ತುವಿನ ಸ್ವಭಾವ ಸ್ವರೂಪಚೈತನ್ಯ ವೈಭವಗಳನ್ನು ತಿಳಿದುಕೊಂಡರೆ ಜಗಜ್ಜೀವ ಧರ್ಮಗಳ ಸ್ವರೂಪ ನಮಗೆ ತಿಳಿದುಬರುತ್ತದೆ. ಹೀಗೆ ಬ್ರಹ್ಮವೇ ತತ್ತ್ವ.

ಕಸ್ಮಿನ್ನು ವಿಜ್ಞಾತೇ
ಸರ್ವಮಿದಂ ವಿಜ್ಞಾತಂ ಭವತಿ ॥

ಅನುಬಂಧ ೨ :
ಇಂದ್ರಿಯಗಳನ್ನೇನು ಮಾಡಬೇಕು?

ಇಂದ್ರಿಯಗಳ ತಂಟೆ ಪದೇ ಪದೇ ವಿಚಾರಕ್ಕೆ ಬರುತ್ತದೆ: ಇಂದ್ರಿಯಗಳಿಲ್ಲದೆ ಜೀವವಿಲ್ಲ; ಇಂದ್ರಿಯಗಳಿದ್ದು ನೆಮ್ಮದಿಯಿಲ್ಲ. ಅವುಗಳನ್ನು ನಿರ್ವಹಿಸುವುದು ಹೇಗೆ?

> ಇಂದ್ರಿಯಾಣಿ ಪ್ರಮಾಥೀನಿ
> ಹರಂತಿ ಪ್ರಸಭಂ ಮನಃ ॥ (೨-೬೦)

ಇಂದ್ರಿಯಗಳು ಮನಸ್ಸನ್ನು ಕಡೆದು ಚದರಿಸಿ ಹಾರಿಸಿಕೊಂಡು ಹೋಗುತ್ತವೆ. ಆದದ್ದರಿಂದ ಇಂದ್ರಿಯಗಳನ್ನು ನಿಗ್ರಹಿಸಿಡಬೇಕು. ಹಾಗೆಂದರೆ ಏನು? ಇಂದ್ರಿಯಗಳು ತಮ್ಮ ಕೆಲಸಗಳನ್ನು ಮಾಡದಂತೆ ಅವುಗಳನ್ನು ತಡೆಯುವುದೆ? ಅಥವಾ ಇಂದ್ರಿಯಗಳನ್ನು ಕೆಲಸ ಮಾಡಬಿಟ್ಟರೆ ಅವು ತಂಟೆ ಮಾಡುತ್ತವಾದ್ದರಿಂದ ಅವುಗಳನ್ನು ಅದುಮಿ ಕೊಂದುಹಾಕಬಹುದಲ್ಲವೆ?

ಅಲ್ಲ. ಅದು ಸಾಧ್ಯವಲ್ಲ; ಅದು ಯುಕ್ತವೂ ಅಲ್ಲ. ಇಂದ್ರಿಯಗಳನ್ನು ಜಯಿಸಬೇಕು, ಕೊಲ್ಲಬಾರದು. ಇಂದ್ರಿಯಗಳಿರಬೇಕು; ಹದ್ದಿನಲ್ಲಿರಬೇಕು. ಅವು ಕೆಲಸಮಾಡಬೇಕು, ಮಿತಿಯರಿತು ಕೆಲಸಮಾಡಬೇಕು. ಇದನ್ನೇ ಮಹರ್ಷಿಗಳು ಬೇಡಿದ್ದು:

> ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।
> ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ॥
> ಸ್ಥಿರೈರಂಗೈಸ್ತುಷ್ಟುವಾಗ್ಂಸಸ್ತನೂಭಿಃ ॥
> ಆಪ್ಯಾಯನ್ತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಶ್ಶ್ರೋತ್ರಮಥ ಬಲಮಿನ್ದ್ರಿಯಾಣಿ ಚ ಸರ್ವಾಣಿ ॥

ಉಪನಿಷತ್ತುಗಳು ಇಂದ್ರಿಯಗಳನ್ನು ಕುದುರೆಗಳಿಗೆ ಹೋಲಿಸುವುದು ಅರ್ಥವತ್ತಾಗಿದೆ.

> ಆತ್ಮಾನಂ ರಥಿನಂ ವಿದ್ಧಿ
> ಶರೀರಂ ರಥಮೇವ ತು ॥

ಇಂದ್ರಿಯಾಣಿ ಹಯಾನಾಹುಃ ॥

ಕುದುರೆ ಎಲ್ಲೆಲ್ಲಿಗೋ ಓಡೀತೆಂಬ ಹೆದರಿಕೆಯಿಂದ ಕುದುರೆಯ ಬೆನ್ನಿನಿಂದ ಇಳಿದು ಬಿಡುವುದು ಸವಾರನ ಲಕ್ಷಣವಲ್ಲ. ಕುದುರೆಯ ಮೇಲೆ ದೃಢವಾಗಿ ಕುಳಿತಿರಬೇಕು; ಹಾಗೆಯೇ ಕುದುರೆಯನ್ನು ಹತೋಟಿಯಲ್ಲಿರಿಸಿಕೊಂಡು ಬೇಕಾದ ಕಡೆ ಹೋಗಬೇಕು. ಲಗಾಮು ಕಡಿವಾಣಗಳ ಉಪಯೋಗವನ್ನರಿತವನು ಎಂಥ ಕುದುರೆಯನ್ನಾದರೂ ಸ್ವಾಧೀನದಲ್ಲಿರಿಸಿಕೊಳ್ಳುತ್ತಾನೆ. ಜಿತೇಂದ್ರಿಯನು ಮೃತೇಂದ್ರಿಯನಲ್ಲ. ಇಂದ್ರಿಯ ಜಯವು ಇಂದ್ರಿಯಧ್ವಂಸನವಲ್ಲ. ಇಂದ್ರಿಯಗಳಿರಬೇಕು; ಅವು ಪಟುವಾಗಿರಬೇಕು, ಆದರೂ ದುಷ್ಟತನಕ್ಕೆ ಹೋಗದೆ ಇರಬೇಕು.

ಗತೇಂದ್ರಿಯತ್ವದಲ್ಲಿ ಪುಣ್ಯವೇನುಂಟು? ದರಿದ್ರನು ವಿರಕ್ತನಂತೆಯೇ; ಹಲ್ಲಿಲ್ಲದವನು ಪಥ್ಯಾನ್ನಸೇವಿಯೇ; ಮೂಕನು ಮೌನಿಯೇ; ನಿಶ್ಶಕ್ತನು ಸಾಧುಪುರುಷನೇ. ಈ ನಾನಾ ನಿರಪರಾಧಿತ್ವಗಳು ವಾಸ್ತವವಾಗಿ ಗುಣಗಳಲ್ಲ; ಗುಣಲೋಪಗಳು. ಬಲವಿದ್ದು ಬಲ ಪ್ರಯೋಗ ಮಾಡದಿದ್ದರೆ ಅದು ಸಹನೆ. ದಂಡನಸಾಮರ್ಥ್ಯವುಳ್ಳವನು ದಂಡಿಸದೆ ಬಿಟ್ಟರೆ ಕ್ಷಮೆ. ಇಂದ್ರಿಯಗಳು ಪಟುವಾಗಿದ್ದು ದುಷ್ಟತನಕ್ಕೆ ಹೋಗದಿದ್ದರೆ ಅದು ಸದ್ಗುಣ.

ಇಂದ್ರಿಯಗಳು ಸೌಂದರ್ಯಗ್ರಹಣಶಕ್ತಿಯನ್ನು ಕಳೆದುಕೊಳ್ಳಬಾರದು. ಅವು ಸೂಕ್ಷ್ಮವೇದಿಗಳಾಗಿದ್ದುಕೊಂಡು ನಾವು ಅವಕ್ಕೆ ವಶರಾಗದಂತಿರಬೇಕು. ಮಿಠಾಯಿ ಅಂಗಡಿಯವನು ತಾನು ಮಾಡುವ ಬಗೆಬಗೆಯ ತರತೀಪುಗಳ ರುಚಿತಾರತಮ್ಯವನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ. ಆ ರುಚಿ-ಪಕ್ವ-ತಾರತಮ್ಯಜ್ಞಾನವು ಅವನಿಗಿಲ್ಲದಿದ್ದರೆ ಅವನ ಸಾಮಾನು ಗಿರಾಕಿಗಳನ್ನಾಕರ್ಷಿಸಲಾರದು. ಹಾಗೆ ಅವನು ರುಚಿಪ್ರವೀಣನಾದರೂ ಅವನು ರುಚಿಪರವಶನಾಗುವುದಿಲ್ಲ. ತನ್ನ ಭಕ್ಷ್ಯಗಳ ಮೋಹಕ್ಕೆ ತಾನೇ ಸಿಕ್ಕಿಕೊಂಡರೆ ಅವನೇ ಎಲ್ಲವನ್ನೂ ತಿಂದು ಅಂಗಡಿ ಮುಚ್ಚಬೇಕಾದೀತು. ಜಿಹ್ವೆಯ ಪಟುತ್ವ ಅವನಿಗೆ ಅವಶ್ಯ, ಆದರೆ ಅವನಿಗೆ ಅಪಾಯಕರವಲ್ಲ.

ನಮ್ಮ ಇಂದ್ರಿಯನೀತಿಯೂ ಅಂಥಾದ್ದಾಗಬೇಕು. ಅವುಗಳ ಮೇಲೆ ನಮ್ಮ ಅಧಿಕಾರವಿರಬೇಕು; ನಾವು ಅವುಗಳ ಅಧಿಕಾರಕ್ಕೆ ಒಳಪಡಬಾರದು.

ಯುಕ್ತಾಹಾರವಿಹಾರಸ್ಯ ॥

ಎಲ್ಲವೂ ಯುಕ್ತವಾದಷ್ಟು ಮಾತ್ರ ಇರಬೇಕು.

ಅನುಬಂಧ ೩ :
ಬುದ್ಧಿಯೋಗ

ಬುದ್ಧ್ಯಾಯುಕ್ತೋ...ಕರ್ಮಬಂಧಂ ಪ್ರಹಾಸ್ಯಸಿ (೨-೩೯)
ಬುದ್ಧೌ ಶರಣಮನ್ವಿಚ್ಛ (೨-೪೯)
ಬುದ್ಧಿಯುಕ್ತೋ ಜಹಾತೀಹ
ಉಭೇ ಸುಕೃತದುಷ್ಕೃತೇ (೨-೫೦)

ಈ ಪ್ರಕರಣದಲ್ಲಿ ಬುದ್ಧಿ ಎಂಬ ಮಾತು ವಿಶೇಷಾರ್ಥದಲ್ಲಿ ಪ್ರಯುಕ್ತವಾಗಿದೆ. ಇಲ್ಲಿ "ಬುದ್ಧಿ" ಯು ಅಂತರಂಗದ ಉಪಕರಣಗಳ ಪೈಕಿ ಒಂದಲ್ಲ. ಮನಸ್ಸು, ಚಿತ್ತ, ಅಹಂಕಾರ, ಸ್ಮೃತಿ, ಧೃತಿ, ಆಕೂತಿ—ಇಂಥಾ ಅಂತಃಕರಣವೃತ್ತಿಯಲ್ಲ. ಈ ಪ್ರಕರಣದಲ್ಲಿ 'ಬುದ್ಧಿ' ಎಂದರೆ ಬುದ್ಧಿಕ್ರಿಯೆ. ಅದು ತತ್ತ್ವವಿವೇಕ. ಆದದ್ದರಿಂದ ತತ್ತ್ವವಿವೇಕಕ್ಕೂ ಬುದ್ಧಿಯೆಂದು ಸಂಕೇತಮಾಡಿದೆ; ಮತ್ತು ಆ ವಿವೇಕದ ಫಲವಾದ ತತ್ತ್ವಜ್ಞಾನಕ್ಕೂ ಬುದ್ಧಿಯೆಂದು ಸಂಕೇತಮಾಡಿದೆ.

ಹೀಗೆ "ಬುದ್ಧಿಯೋಗಮುಪಾಶ್ರಿತ್ಯ" ಎಂದರೆ ತತ್ತ್ವವಿವೇಕವನ್ನು ಆಶ್ರಯಿಸಿಕೊಂಡು ಎಂದರ್ಥ. ತತ್ತ್ವವಿವೇಕ ಉಂಟಾಗಿದ್ದಲ್ಲಿ ಅಂಥವನು ಮಾಡುವ ಕರ್ಮ ಅವನಿಗೆ ಬಂಧನವಾಗುವುದಿಲ್ಲ. ಅದು ಹೇಗೆಂದರೆ, ಅವನು ಕರ್ಮವನ್ನು ಕೇವಲ ಪಾರಮಾರ್ಥಿಕ ದೃಷ್ಟಿಯಿಂದ, ಸ್ವಪ್ರಯೋಜನದೃಷ್ಟಿಯಿಲ್ಲದೆ ಮಾಡುತ್ತಾನೆ. ತತ್ತ್ವಜ್ಞಾನಿಗೆ 'ಸ್ವ' ಎಂಬುದಿಲ್ಲ. ಎಲ್ಲಿ ಸ್ವಾರ್ಥವಿಲ್ಲವೋ ಅಲ್ಲಿ ಪಾಪದ ಸೋಂಕಿಲ್ಲ.

ಹೀಗೆ ತತ್ತ್ವೈಕಶರಣನಾಗಿ, ಸರ್ವತ್ರ ಆತ್ಮವಸ್ತುವೊಂದನ್ನೇ ನೋಡುತ್ತಿರುವವನಾಗಿ ಅಹಂಕಾರದಿಂದ ಬಿಡುಗಡೆ ಪಡೆದಿರುವವನಿಗೆ ಪುಣ್ಯವೆಂಬುದೂ ಇಲ್ಲ, ಪಾಪವೆಂಬುದೂ ಇಲ್ಲ. ಅವನೇ ಅಧಿಧರ್ಮಿ. ಅವನ ಲಕ್ಷಣವನ್ನೇ ಇಲ್ಲಿ ಹೇಳಿದೆ:

ಬುದ್ಧಿಯುಕ್ತೋ ಜಹಾತೀಹ ।
ಉಭೇ ಸುಕೃತದುಷ್ಕೃತೇ ॥ (೨-೫೦)

ಯಾರು ಬುದ್ಧಿಯುಕ್ತನೋ, —ಎಂದರೆ ಬುದ್ಧಿಯೋಗವನ್ನು ಹಿಡಿದವನೋ, —ಎಂದರೆ ಪರಮಾರ್ಥತತ್ತ್ವವನ್ನು ಗ್ರಹಿಸಿ ಅನುಭವಕ್ಕೆ ತಂದುಕೊಂಡಿರುವವನೋ, —ಅವನು ಸ್ವಾರ್ಥಶೂನ್ಯನಾದದ್ದರಿಂದ ಪುಣ್ಯಪಾಪಗಳೆರಡನ್ನೂ ದೂರಮಾಡಿದವನಾಗುತ್ತಾನೆ.

೧೮ನೆಯ ಅಧ್ಯಾಯದಲ್ಲಿ 'ಸರ್ವಧರ್ಮಾನ್ ಪರಿತ್ಯಜ್ಯ' (೧೮-೬೬) ಎಂಬಲ್ಲಿ ಇದು ಅನ್ವಯವಾಗಬೇಕಾದದ್ದು. ಧರ್ಮಗಳು ಪುಣ್ಯಕೋಟಿಗೆ ಸೇರಿದವು. ಅವು ಪ್ರಯೋಜನೋದ್ದೇಶ ಉಳ್ಳವು. ಅವುಗಳಲ್ಲಿ ಅಹಂತೆಯ ಅಂಶ ಯತ್ಕಿಂಚಿತ್ತಾದರೂ ಇರುತ್ತದೆ. ಬುದ್ಧಿಯುಕ್ತನಾದ, ತತ್ತ್ವಜ್ಞನಾದರೋ 'ಅಹಂ' ಎಂಬುದೇ ಇಲ್ಲದವನಾಗಿರುತ್ತಾನೆ. ಯಾರಿಗೆ ಅಹಂತೆ ಇಲ್ಲವೋ ಅವನ ಪಾಲಿಗೆ ಪುಣ್ಯವೆಂಬುದೂ ಇಲ್ಲ, ಪಾಪವೆಂಬುದೂ ಇಲ್ಲ. "ಜಹಾತೀಹ ಉಭೇ ಸುಕೃತದುಷ್ಕೃತೇ". ಅವನು ಎರಡರಿಂದಲೂ ಬಿಡುಗಡೆ ಪಡೆದಿರುತ್ತಾನೆ. ಅಂಥವನ ವಿಷಯದಲ್ಲಿಯೇ ಈ ವಾಕ್ಯ:

> ತ್ಯಜ ಧರ್ಮಮಧರ್ಮಂ ಚ...
> ಯೇನ ತ್ಯಜಸಿ ತತ್ತ್ಯಜ ॥ (ಪುಟ 97)

ಅನುಬಂಧ ೪ :
ತಿತಿಕ್ಷೆ

ತಿತಿಕ್ಷೆಯೆಂದರೆ ಸಹಿಸೋಣ, ಸಮಾಧಾನ, ತಾಳ್ಮೆ. ಇದು ಸಾಧಕನಿಗೆ ಬಹು ಅವಶ್ಯವಾದ ಗುಣ. ಮನುಷ್ಯಜೀವನದ ಪರಮಧ್ಯೇಯವು ಬ್ರಹ್ಮಸಾಕ್ಷಾತ್ಕಾರ ಅಥವಾ ಭಗವನ್ಮಹಿಮಾನುಭವ ಎಂಬುದು ಸಿದ್ಧಾಂತ. ಹಾಗಾದ ಮೇಲೆ ಅದಕ್ಕೆ ಯಾವುದು ದಾರಿಯೋ ಅದು ಅತಿ ಮುಖ್ಯವಾಗುತ್ತದೆ. ಭಗವತ್ಸಮಕ್ಷತಾಭ್ಯಾಸವೇ ಆ ದಾರಿ. ನಾವು ಸರ್ವದಾ ದೇವರ ಕಣ್ಣೆದುರಿಗೆ ಇದ್ದೇವೆ; ಆತನ ಕಣ್ಣು ಎವೆಯಿಕ್ಕದೆ ನಮ್ಮನ್ನೇ ನೋಡುತ್ತಿದೆ–ಎಂದು ತಿಳಿದರೆ ಹೇಗೆ ನಡೆದುಕೊಳ್ಳುತ್ತೇವೋ ಹಾಗೆ ನಡೆಯಬೇಕಾದದ್ದು ಜೀವನದಲ್ಲಿ.

ನಾವು ಸಾಮಾನ್ಯವಾಗಿ ಒಬ್ಬ ಸರಕಾರಿ ಅಧಿಕಾರಿಯನ್ನೋ ಪ್ರಭಾವಶಾಲಿಯಾದ ದೊಡ್ಡ ಮನುಷ್ಯನನ್ನೋ ನೋಡಬೇಕಾಗಿ ಬಂದಾಗ ಆತನೆದುರಿನಲ್ಲಿ ಎಷ್ಟೋ ವಿನಯ ಮರ್ಯಾದೆಗಳಿಂದ ನಡೆದುಕೊಳ್ಳುತ್ತೇವೆ. ಇನ್ನು ಭಗವಂತನೇ ಎದುರಿಗಿದ್ದಾನೆಂದು ತಿಳಿದ ಮೇಲೆ ಎಷ್ಟು ವಿನಯಮರ್ಯಾದೆಗಳಿಂದ ನಡೆದುಕೊಳ್ಳಬೇಕು! ಆಗ ರೇಗಾಡಬಾರದು, ಕೂಗಾಡಬಾರದು, ಹಾರಾಡಬಾರದು, ನಮ್ಮ ದರ್ಪವನ್ನೂ ಅಹಂಕಾರವನ್ನೂ ಅಣಗಿಸಿಡಬೇಕು. ಇದೇ ತಿತಿಕ್ಷೆ.

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ॥ (೨-೧೪)

ಜಗತ್ತಿನ ಸಂಪರ್ಕಗಳು ಬರುತ್ತವೆ, ಹೋಗುತ್ತವೆ. ಇಂದ್ರಿಯಾನುಭವಗಳು ಆಗುತ್ತವೆ, ಹೋಗುತ್ತವೆ. ಅವುಗಳಿಂದ ಮನೋವಿಕಾರ ಪಡಬಾರದು.

ಬೇಸಗೆ, ಮಳೆ, ಮಂಜು, ಗಾಳಿ—ಇವು ಬಂದಾಗ ನಾವು ಏನು ಮಾಡುತ್ತೇವೆ? ಅದು ಋತುಕ್ರಮವೆಂದು ಅಂಗೀಕರಿಸಿ, ಆ ಅನಾನುಕೂಲಗಳನ್ನು ಸಹಿಸಿಕೊಳ್ಳುತ್ತೇವೆ. ಪ್ರಕೃತಿಯನ್ನು ನಾವು ಬದಲಾಯಿಸಹೊರಡದೆ, ಪ್ರಕೃತಿಯ ವ್ಯವಸ್ಥೆಗೆ ತಕ್ಕಂತೆ ನಾವು ಬದಲಾಯಿಸಿಕೊಳ್ಳುತ್ತೇವೆ. ಅದೇ ನೀತಿಯನ್ನು ನಮ್ಮ ಲೋಕಸಂಬಂಧಗಳಲ್ಲಿ ಏಕೆ ಅನುಸರಿಸುವುದಿಲ್ಲ? ಅಂಗಪುಷ್ಟಿ, ಕೃಶತೆ, ಉಲ್ಲಾಸ, ನೋವು, ಸಿರಿತನ, ಬಡತನ, ಗೆಲವು,

ಸೋಲು—ಇವೆಲ್ಲ ಹೇಗೆಹೇಗೋ ಬರುತ್ತವೆ, ಬಳಿಕ ಹೋಗುತ್ತವೆ. ಅವೆಲ್ಲ ಅನಿತ್ಯಗಳು, ಕಿಂಚಿತ್ಕಾಲದವು. ಅವುಗಳ ಕಾರಣದಿಂದ ನಾವು ತಲೆ ಕೆಡಿಸಿಕೊಳ್ಳತಕ್ಕದ್ದಲ್ಲ.

ತಿತಿಕ್ಷೆಗೆ ವಿರೋಧಿ ಅಹಂಭಾವ. ನನ್ನ ಅನುಕೂಲ, ನನ್ನ ಲಾಭ, ನನ್ನ ಇಷ್ಟ, ನನ್ನ ಹೆಮ್ಮೆ—ಈ ನನ್ನಗಳು ಪ್ರಬಲವಾದಾಗ ತಿತಿಕ್ಷೆ ಅಸಾಧ್ಯವಾಗುತ್ತದೆ. “ನನ್ನ ಕೆಲಸ ಕೆಟ್ಟಿತಲ್ಲಾ! ನನ್ನ ಜಂಬ ಮುರಿಯಿತಲ್ಲಾ! ನನ್ನ ಹೊತ್ತಿಗೆ ಬೇಕಾದದ್ದು ಬರಲಿಲ್ಲವಲ್ಲಾ!” —ಇದು ಅಹಂಕಾರ. ಇದೇ ಭಗವತ್ಸಮಕ್ಷತಾಭ್ಯಾಸಕ್ಕೆ ವಿಘಾತಕ.

ತಿತಿಕ್ಷೆಯು ನಿತ್ಯಾನಿತ್ಯವಿವೇಕದಿಂದ ಬರುತ್ತದೆ.

> ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥ (೨-೧೪)

ಬಹುಕಾಲವಿರಲಾರದ್ದು, ಕೊಂಚಕಾಲ ಇದ್ದು ಮುಗಿಯುವಂಥಾದ್ದು: ಚಳಿ, ಸೆಕೆ, ನೋವು, ನಲಿವು, ಋಣ, ಹಣ, ಚಿಂತೆ, ಸಂತಸ—ಇಂಥವೆಲ್ಲ ಈಗ ಇವೆ; ಇನ್ನೊಂದು ಕ್ಷಣ ಇರಲಾರವು. ಹಾಗೆಂದು ವಿವೇಕ ಮೂಡಿದ ಮೇಲೆ ಸಹನೆಯು ಸುಲಭವಾಗುತ್ತದೆ.

ಇದೇ ತಾರತಮ್ಯವಿವೇಕವನ್ನು ಇಂಗ್ಲಿಷಿನಲ್ಲಿ “ಸೆನ್ಸ್ ಆಫ್ ಪ್ರೊಪೋರ್ಷನ್” (Sense of proportion) ಎಂದು ಕರೆಯುವುದುಂಟು. ಹಾಗೆಂದರೆ ಒಂದಾನೊಂದು ವಸ್ತುವಿನಲ್ಲಿ ಅಥವಾ ಸಂದರ್ಭದಲ್ಲಿ ಅಥವಾ ವಿಷಯದಲ್ಲಿ ಸೇರಿರುವ ನಾನಾ ಅಂಶಗಳಲ್ಲಿ ಪರಸ್ಪರ ಪರಿಮಾಣೌಚಿತ್ಯ. ಮೂರು ಕಾಸು ಬೆಲೆಬಾಳುವ ಅಂಶಕ್ಕೆ ಎರಡು ಕಾಸನ್ನೋ ನಾಲ್ಕು ಕಾಸನ್ನೋ ಕೊಟ್ಟರೆ ಅದು ಅನುಚಿತ. ಒಂದು ಕ್ಷಣ ಮಾತ್ರವಿದ್ದು ಹೋಗುವ ವಿಷಯಕ್ಕೆ ಒಂದು ದಿನವೆಲ್ಲ ಇರುವ ಪದಾರ್ಥಕ್ಕೆ ಸಲ್ಲುವಷ್ಟು ಗಮನ ಕೊಟ್ಟರೆ ಅದು ಅನುಚಿತ. ನಮ್ಮೆಲ್ಲರ ದಿನಚರಿಯಲ್ಲಿ ಪದೇಪದೇ ತಲೆಯೆತ್ತುವ ಕೋಪ ತಾಪಗಳಿಗೆಲ್ಲ ಈ ಔಚಿತ್ಯವಿವೇಕವಿಲ್ಲದಿರುವುದೇ ಕಾರಣ. ಸ್ವಲ್ಪದ್ದನ್ನು ಅತಿ ಮಾಡಿ ನಮ್ಮ ತಲೆ ಕೆಡಿಸಿಕೊಂಡು ಇತರರ ತಲೆ ಕೆಡಿಸಹೊರಡುತ್ತೇವೆ.

> ವಿವೇಕಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ ॥

ತಿತಿಕ್ಷೆಯು ಮನಶ್ಶ್ಯಾಂತಿಗೆ ಸಾಧಕ. ಮನಶ್ಶ್ಯಾಂತಿಯಿಲ್ಲದೆ ತತ್ತ್ವದರ್ಶನವಿಲ್ಲ. ಗಾಳಿಯಿಂದ ಅಲೆಯುತ್ತಿರುವ ದೀಪದುರಿಯ ಬೆಳಕಿನಲ್ಲಿ ದೃಷ್ಟಿ ಹೇಗೆ ರೂಪವನ್ನು ಸರಿಯಾಗಿ ಗ್ರಹಿಸಲಾರದೋ ಅಶಾಂತ ಮನಸ್ಸು ಹಾಗೆ ಸತ್ಯದರ್ಶನಕ್ಕೆ ಅಸಮರ್ಥವಾಗುತ್ತದೆ. ಆದದ್ದರಿಂದ ತಿತಿಕ್ಷೆಯು ತತ್ತ್ವಸಾಧಕನಿಗೆ ಅನಿವಾರ್ಯವಾದ ಯೋಗ್ಯತಾ ಸಿದ್ಧತೆ.

ಅನುಬಂಧ ೫ :
ವ್ಯವಸಾಯ

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ॥ (೨-೪೧)

ಇಲ್ಲಿ ವ್ಯವಸಾಯ ಎಂದರೆ ಸಂತತ ಪ್ರಯತ್ನ, ಏಕೈಕೋದ್ದೇಶವುಳ್ಳ ನಿರಂತರ ಪರಿಶ್ರಮ. ಅದೇ ತಪಸ್ಸು. ಮನುಷ್ಯನು ಪ್ರಪಂಚದಲ್ಲಿ ಯಾವ ದೊಡ್ಡ ಉದ್ದೇಶವನ್ನು ಸಾಧಿಸಬೇಕಾದರೂ ಅವನು ಏಕಾಗ್ರಚಿತ್ತನಾಗಿರಬೇಕು. ಹಾಗಲ್ಲದೆ ಒಂದೊಂದು ಘಳಿಗೆಗೆ ಒಂದೊಂದು ಕಡೆಗೆ ಮನಸ್ಸನ್ನು ತಿರುಗಿಸುತ್ತಿದ್ದರೆ ಅವನ ಪ್ರಯತ್ನ ಯಾವುದೂ ಬಹು ದೂರ ಸಾಗದು.

ನಮ್ಮಲ್ಲಿ ಈ ಪಾಠವನ್ನು ಕಲಿಯಬೇಕಾದವರು ನೂರರಲ್ಲಿ ಎಂಭತ್ತು ತೊಂಭತ್ತು ಮಂದಿ. ಅವರಿಗೆ ಲೋಕದ ಆಕರ್ಷಣೆಗಳು ಹತ್ತಾರು ಇರುತ್ತವೆ. ಅವರು ಅವುಗಳಲ್ಲಿ ಒಂದೊಂದಕ್ಕೂ ಮನಸೋತು ಯಾವ ಒಂದರಲ್ಲಿಯೂ ಕೃತಾರ್ಥರಾಗದೆ ಉಳಿದುಕೊಳ್ಳುತ್ತಾರೆ.

ಉಪಾಧ್ಯಾಯನು ಒಳ್ಳೆಯ ಸಂಗೀತವನ್ನು ಕೇಳಿದಾಗ “ಆಹಾ—ನನ್ನದೇನು ಹಾಳುಚಾಕರಿ. ನಾನು ಸಂಗೀತಗಾರನಾಗಿದ್ದಿದ್ದರೆ!” ಎಂದುಕೊಳ್ಳುತ್ತಾನೆ. ಸಂಗೀತಗಾರನು ಲಾಯರ್ ಕಸಬಿನಲ್ಲಿ ವ್ಯಾಮೋಹ ತಾಳುತ್ತಾನೆ. ಲಾಯರಾದವನು ವೈದ್ಯಕದಲ್ಲಿ ಉತ್ಸಾಹ ತೋರುತ್ತಾನೆ. ವೈದ್ಯನು ತಾನು ವರ್ತಕನಾಗಿದ್ದಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತೆಂದುಕೊಳ್ಳುತ್ತಾನೆ. ಒಬ್ಬನೇ ಮನುಷ್ಯ ತಾನು ಬೆಳಗ್ಗೆ ರೇಡಿಯೋ ಕೇಳಿದಾಗ “ಆಹಾ—ನಾನೂ ಹಾಡಿಕೆ ಕಲಿಯಬಾರದಾಗಿತ್ತೆ!” —ಎಂದುಕೊಳ್ಳುತ್ತಾನೆ; ಹತ್ತು ಘಂಟೆಗೆ ಸರಕಾರಿ ಹುದ್ದೇದಾರರು ಮೋಟಾರು ಸವಾರಿ ಮಾಡುವುದನ್ನು ನೋಡಿದಾಗ “ನಾನು ಐ.ಎ.ಎಸ್.ಗೆ ಹೋಗಬೇಕಾಗಿತ್ತು” —ಎಂದುಕೊಳ್ಳುತ್ತಾನೆ; ಮಧ್ಯಾಹ್ನ ಲಾಯರುಗಳು ಬ್ಯಾಂಕಿಗೆ ಹೋಗಿ ಹಣ ಕಟ್ಟುವುದನ್ನು ನೋಡಿದಾಗ ಅವನ ಬಾಯಿ ವಕೀಲಿಗಾಗಿ ನೀರೂರಿಸುತ್ತದೆ; ಸಂಜೆ ಸಿನೆಮಾ ಮಂದಿರದ ಮುಂದೆ ಹೋದಾಗ “ನಾನೂ ನಟನಾಗಿದ್ದಿದ್ದರೆ!—ನಟಿಯಾಗಿದ್ದಿದ್ದರೆ!” ಎಂದುಕೊಳ್ಳುತ್ತಾನೆ. ಇದೇ ಬಹು ಮಂದಿಯ ಪಾಡು. ತಮ್ಮ ಕೈಗೆ ಬಂದದ್ದರಲ್ಲಿ ಗೌರವವಿಲ್ಲ; ಬಾರದ್ದರಲ್ಲಿ ಅತ್ಯಂತ ಗೌರವ. ಇದು ಜೀವನವನ್ನು ಹಾಳುಮಾಡಿಕೊಳ್ಳುವ ದಾರಿ.

ಬಾಳನ್ನು ಸಾರ್ಥಕಪಡಿಸಿಕೊಳ್ಳಬೇಕೆನ್ನುವವನು ಮೊದಲು ತನ್ನ ಗುರಿ ಏನೆಂಬುದನ್ನು ತನ್ನ ಮನಸ್ಸಿಗೆ ಗೊತ್ತುಮಾಡಿಕೊಳ್ಳಬೇಕು. ಹಾಗೆ ಗೊತ್ತುಮಾಡಿಕೊಂಡ ಮೇಲೆ ಅದನ್ನು ಪಟ್ಟಾಗಿ ಹಿಡಿಯಬೇಕು. ಕಂಡುಕಂಡದ್ದನ್ನೆಲ್ಲ ಮೆಚ್ಚಿ ಮನಸೋಲಬಾರದು.

ಲೋಕದಲ್ಲಿ ಒಳ್ಳೆಯದೆಂಬುದು ಹತ್ತಾರು ಬಗೆ ಇರುತ್ತದೆ. ಸೊಗಸುಗಳು ಹತ್ತಾರು. ರುಚಿಗಳು ಹತ್ತಾರು. ಚೆನ್ನುಗಳು ಹತ್ತಾರು. ಅವೆಲ್ಲವನ್ನೂ ಒಬ್ಬನೇ ಪಡಲಾಗುವುದಿಲ್ಲ. ಅವುಗಳಲ್ಲಿ ಕೆಲವು ಅವನ ಪಾಲಿಗೆ ಅಷ್ಟಿಷ್ಟು ಬರಬಹುದು. ಅದಕ್ಕೆ ಅವನು ತನ್ನ ನಿಜವಾದ ಗುರಿಯನ್ನು ಬಲಿಕೊಡತಕ್ಕದ್ದಲ್ಲ. ಬೀದಿಯಲ್ಲಿ ಹೋಗುತ್ತಿರುವಾಗ ಯಾರ ಮನೆಯಲ್ಲಿಯೋ ಭಕ್ಷ್ಯ ಕರಿಯುತ್ತಿರುವ ವಾಸನೆ ಅವನ ಮೂಗಿಗೆ ತಗುಲಿದಾಗ ಅವನು ತನ್ನ ಮನೆಯಲ್ಲಿಯೂ ಅಡಿಗೆಯಾಗಬೇಕೆಂಬುದನ್ನು ಮರೆಯಬಾರದು. ಯಾರ ಮನೆಯಿಂದಲೋ ಇಂಪಾದ ಹಾಡು ಕೇಳಿಬಂದಾಗ ತನಗೂ ಒಂದು ಸ್ವಂತ ಕುಟುಂಬ ಉಂಟೆಂಬುದನ್ನು ಮರೆಯಬಾರದು. ತನ್ನ ಕರ್ತವ್ಯ ಯಾವುದೋ ಅದರ ಮೇಲೆ ಅವನು ಸರ್ವದಾ ಲಕ್ಷ್ಯವಿರಿಸಿ ಶ್ರಮಿಸಬೇಕು. ಅರ್ಜುನನು ಕ್ಷತ್ರಿಯ, ಅವನ ಮುಖ್ಯ ಗುರಿಯು ಧರ್ಮ ಸಂರಕ್ಷಣೆಯ ಕಾರ್ಯದಲ್ಲಿರಬೇಕಾದದ್ದು. ಅವನು ಅದನ್ನು ಬಿಟ್ಟು "ನಾನು ಯತಿಯಾಗುತ್ತೇನೆ. ಪ್ರಾಣಿದಯಾಪ್ರಚಾರಕನಾಗುತ್ತೇನೆ, ಆಸ್ಪತ್ರೆಯಲ್ಲಿ ನರ್ಸ್ ಆಗುತ್ತೇನೆ, ಗುಡಿಯ ಮುಂದೆ ಕುಳಿತು ಭಜನೆ ಮಾಡುತ್ತೇನೆ" —ಎಂದು ಮುಂತಾಗಿ ಹೊರಡುವುದು ಧರ್ಮ ಸಾಧನೆಯಲ್ಲ; ಧರ್ಮಲೋಪ.

ಮನುಷ್ಯನು ಒಂದಾನೊಂದು ನಿಷ್ಕರ್ಷೆಯಾದ ಉದ್ದೇಶವನ್ನು ಇಟ್ಟುಕೊಳ್ಳಬೇಕೆಂದರೆ ಅದಕ್ಕೆ ಅಕ್ಕಪಕ್ಕದವರು ಅಡ್ಡಿ ಹೇಳಿ ಮನಸ್ಸನ್ನು ಚದರಿಸುತ್ತಾರೆ. ಹುಡುಗನನ್ನು ಬಿ.ಎ.ಗೆ ಓದಿಸಬೇಕೆಂದರೆ ಈ ಪಕ್ಕದ ಮನೆಯವರು "ಅಯ್ಯೊ ಬಿಡಿ ದರಿದ್ರ ಬಿ.ಎ." —ಎನ್ನುತ್ತಾರೆ; ಆ ಪಕ್ಕದ ಮನೆಯವರು "ಯಾಕೆ, ಬಿ.ಇ.ಗೆ ಗತಿ ಇಲ್ಲವೆ?" —ಎನ್ನುತ್ತಾರೆ. ಮೂರನೆಯವರು "ಬಿ.ಎಸ್‌ಸಿ. ಆದರೂ ಆಗಲಿ" —ಎನ್ನುತ್ತಾರೆ. ಮನಸ್ಸು ಕದಲುತ್ತದೆ.

ನನ್ನ ಸ್ನೇಹಿತರೊಬ್ಬರು ಮನೆ ಕಟ್ಟಿಸಿಕೊಳ್ಳುತ್ತಿದ್ದರು. ನಾವು ಸ್ನೇಹಿತರು ಐದಾರು ಮಂದಿ ಗುಂಪುಗೂಡಿ ಪ್ರತಿದಿವಸವೂ ಅವರ ಮನೆಯ ಮುಂದೆ ವಾಕಿಂಗ್ ಹೋಗುತ್ತಿದ್ದೆವು. ಒಂದೊಂದು ದಿನ ನಮ್ಮ ಪೈಕಿ ಒಬ್ಬೊಬ್ಬನು ಒಂದೊಂದು ಸಲಹೆ ಕೊಡುತ್ತಿದ್ದ. ಒಂದು ದಿನ ನಾನು "ಈ ಕಿಟಕಿ ದೊಡ್ಡದಾಗಿರಬೇಕಾಗಿತ್ತು" ಎಂದೆ. ಇನ್ನೊಂದು ದಿನ ಇನ್ನೊಬ್ಬನು

“ಕಿಟಕಿಯ ಗಾತ್ರಕ್ಕೆ ಬಾಗಿಲು ಸಣ್ಣದಾಯಿತು” ಎಂದ. ಮೂರನೆಯ ದಿನ ಮತ್ತೊಬ್ಬನು “ಚಾವಣಿಗೆ ಹೆಂಚು ಹೊದಿಸಿದರೆ ಚೆಂದ” ಎಂದ. ಮತ್ತೊಂದು ದಿನ ಇನ್ನೊಬ್ಬ ಸ್ನೇಹಿತ “ಇಂಥಾ ಮನೆಗೆ ತಾರಸಿಯೇ ಸರಿ” ಎಂದ. ಮನೆಯ ಮಾಲಿಕನು ಎಲ್ಲರ ಸಲಹೆಗಳನ್ನೂ ನಗುಮುಖದಿಂದ ಕೇಳುತ್ತಿದ್ದ. ಹೀಗೆ ಹದಿನೈದಿಪ್ಪತ್ತು ದಿನ ಕಳೆದ ಮೇಲೆ ನಾವು ಅಲ್ಲಿಗೆ ಹೋದೆವು. ಆ ಹೊತ್ತು ನಮ್ಮಿಂದ ಸಲಹೆ ಹೊರಡಲಿಲ್ಲ. “ಈಹೊತ್ತು ಏನೂ ಸಲಹೆ ಇಲ್ಲವೆ?” ಎಂದು ಕೇಳಿ ಆತ ನಕ್ಕು “ನಾನು ಯಾರ ಸಲಹೆಯಂತೆ ನಡೆಯಬೇಕಾಗಿತ್ತು? ನಿಮ್ಮೆಲ್ಲರ ಸಲಹೆಗಳನ್ನೂ ಅಂಗೀಕರಿಸಿದ್ದಿದ್ದರೆ ಮನೆಯ ಗೋಡೆಗಳು ಮೇಲಕ್ಕೇಳುತ್ತಿರಲಿಲ್ಲ” —ಎಂದ.

ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥ (೨-೪೧)

ತಮ್ಮ ಮನಸ್ಸು ತಮಗೆ ಗೊತ್ತಿಲ್ಲದವರ ಪಾಡು ಹಾಗಾಗುತ್ತದೆ. ಗುರಿ ಗೊತ್ತಾದರೆ ಜೀವ ದೃಢಪಡುತ್ತದೆ. ಅದರಿಂದ ಮನಸ್ಸಿಗೆ ನೆಮ್ಮದಿ. ಅಂಥಾ ಮನಸ್ಸು ಉದ್ದೇಶವನ್ನು ಸಾಧಿಸಿಕೊಳ್ಳಲು ಸಮರ್ಥವಾಗುತ್ತದೆ. ಹೀಗೆ ಜೀವನವು ಸಾರ್ಥಕವಾಗಬೇಕಾದರೆ ಮನುಷ್ಯನು ಮಾಡಿಕೊಳ್ಳಬೇಕಾದ ಸಿದ್ಧತೆಗಳಲ್ಲಿ ಮೊದಲನೆಯದು ಉದ್ದೇಶ ನಿಷ್ಕರ್ಷೆ. ನಿಷ್ಕರ್ಷೆಯಾದ ಮೇಲೆ ಕಣ್ಣನ್ನು ಒಂದು ಕ್ಷಣ ಎಡಕ್ಕೂ ಇನ್ನೊಂದು ಕ್ಷಣ ಬಲಕ್ಕೂ ತಿರುಗಿಸುತ್ತಿರಬಾರದು. ಕಿವಿಯನ್ನು ಈ ಕಡೆಯವರಿಗೂ ಆ ಕಡೆಯವರಿಗೂ ಒತ್ತೆಯಿಡಬಾರದು. ಅರ್ಜುನನು ಹಾಗೆ ಮಾಡಿದ್ದ, ಇವರವರ ಮಾತಿಗೆ ಮನಕೊಟ್ಟು ಮರುಳಾಗಿದ್ದ. ಆದ್ದರಿಂದಲೇ ಭಗವಂತನು ಅವನ್ನು ಕುರಿತು—

ಪ್ರಜ್ಞಾವಾದಾಂಶ್ಚ ಭಾಷಸೇ ॥ (೨–೧೧)
ಶ್ರುತಿವಿಪ್ರತಿಪನ್ನಾ ತೇ (೨–೫೩)

—ಎಂದೆಲ್ಲ ಹೇಳಿ ತಿದ್ದಿದ. “ನಿನ್ನ ಬುದ್ಧಿಯು ಕೇಳಿಕೆಯ ಮಾತುಗಳಿಂದ ನಂಬಿಕೆ ಕಳೆದುಕೊಂಡು ತಳಮಳಗುಟ್ಟುತ್ತಿದೆ.” ಇದು ನಮಗೆಲ್ಲ ಎಚ್ಚರಿಕೆ.

ದುರಿತದ ತನುಪಂಜರಮಂ ।
ಮುರಿದಲ್ಲದೆ ಜೀವಪಕ್ಷಿಗೂರ್ಧ್ವಸ್ಮರಣಂ ॥

ದೊರೆಕೊಳದು ಧರ್ಮಯುದ್ಧದಿ।
ಮರಣಂ ತತ್ತರಣಮದುವೆ ದೈವವಿಧಾನಂ

॥ ೧ ॥

ಜಗದಿಂ ತಾನುಂ ತನ್ನಿಂ।
ಜಗಮಂ ಕೆಡದವೊಲಿರುತ್ತಲವರನ್ಯೋನ್ಯಂ॥
ಮಿಗೆ ಸಾಹ್ಯಮಾಗಿ ಜೀವ-।
ಪ್ರಗತಿಯ ಗಳಿಪಂತೆ ಬಾಳನಾಳ್ವುದೆ ಧರ್ಮಂ

॥ ೨ ॥

ಇಂದ್ರಿಯದೆ ಜಗಜ್ಞಾನಂ।
ತಂದ್ರಿತಮಿಂದ್ರಿಯದಿನಪ್ಪುದಾತ್ಮಜ್ಞಾನಂ॥
ಸಾಂದ್ರವಿವೇಕದಿನಾಳ್ವಂ-।
ಗಿಂದ್ರಿಯಮಹುದುಚಿತಭೃತ್ಯನುಭಯಹಿತಾರ್ಥಂ

॥ ೩ ॥

ಹಯದಿಂದಿಳಿಯದೆ ತೋತ್ರ-।
ಪ್ರಯುಕ್ತಿಯಿಂ ಸುಗಮಗೊಳಿಪ ಪಟುಸಾದಿಯವೋಲ್॥
ಜಯಿಪುದು ಕೊಲ್ಲದೆ ನಾಮಿಂ-।
ದ್ರಿಯಗಳನೊಡೆತನದಿನಿಳೆಯದೂಳಿಗಕೆಂದಂ

॥ ೪ ॥

ನಿಖಿಲಜಗದಸಂಗಂ ಜೀವಲೀಲಾಪ್ರಸಂಗಂ।
ವಿಷಯನಿಗಳಭಂಗಂ ಜ್ಞಾತಭೂತಾಂತರಂಗಂ॥
ಪ್ರಣಯರಸತರಂಗಂ ಪಾಪತೂಲಸ್ಫುಲಿಂಗಂ।
ಮನುಜಹೃದಯಲಿಂಗಂ ಕೇಶವಂ ಮಂಗಳಾಂಗಂ॥

ಅಥ ಕರ್ಮಯೋಗೋ ನಾಮ
ತೃತೀಯೋಽಧ್ಯಾಯಃ

ಅರ್ಜುನ ಉವಾಚ-

ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।
ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ

॥ ೧ ॥

ವ್ಯಾಮಿಶ್ರೇಣೇವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ।
ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಮ್

॥ ೨ ॥

ಶ್ರೀಭಗವಾನುವಾಚ-

ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾಽನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್

॥ ೩ ॥

ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ

॥ ೪ ॥

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ

॥ ೫ ॥

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ

॥ ೬ ॥

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ

॥ ೭ ॥

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ

॥ ೮ ॥

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ

॥ ೯ ॥

ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್

॥ ೧೦ ॥

ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ

॥ ೧೧ ॥

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ

॥ ೧೨ ॥

ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್

॥ ೧೩ ॥

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ

॥ ೧೪ ॥

ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಮ್ ।
ತಸ್ಮಾತ್ ಸರ್ವಗತಂ ಬ್ರಹ್ಮಂ ನಿತ್ಯಂ ಯಜ್ಞೇ ಪ್ರತಿಷ್ಠಿತಮ್

॥ ೧೫ ॥

ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ

॥ ೧೬ ॥

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ

॥ ೧೭ ॥

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।
ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ

॥ ೧೮ ॥

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ

॥ ೧೯ ॥

ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ

॥ ೨೦ ॥

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ

॥ ೨೧ ॥

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ

॥ ೨೨ ॥

ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ

॥ ೨೩ ॥

ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ

॥ ೨೪ ॥

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಮ್

॥ ೨೫ ॥

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್

॥ ೨೬ ॥

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾಽಹಮಿತಿ ಮನ್ಯತೇ

॥ ೨೭ ॥

ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ

॥ ೨೮ ॥

ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನ ವಿಚಾಲಯೇತ್

॥ ೨೯ ॥

ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ

॥ ೩೦ ॥

ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ

॥ ೩೧ ॥

ಯೇ ತ್ವೇತಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಮ್ ।
ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿ ನಷ್ಟಾನಚೇತಸಃ

॥ ೩೨ ॥

ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ

॥ ೩೩ ॥

ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।
ತಯೋರ್ನ ವಶಮಾಗಚ್ಛೇತ್ ತೌ ಹಸ್ಯ ಪರಿಪಂಥಿನೌ

॥ ೩೪ ॥

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ

॥ ೩೫ ॥

ಅರ್ಜುನ ಉವಾಚ-

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ

॥ ೩೬ ॥

ಶ್ರೀಭಗವಾನುವಾಚ-

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್

॥ ೩೭ ॥

ಧೂಮೇನಾವ್ರಿಯತೇ ವಹ್ನಿರ್ಯಥಾಽದರ್ಶೋ ಮಲೇನ ಚ ।
ಯಥೋಲ್ಬೇನಾವೃತೋ ಗರ್ಭಸ್ತಥಾ ತೇನೇದಮಾವೃತಮ್

॥ ೩೮ ॥

ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ

॥ ೩೯ ॥

ಇಂದ್ರಿಯಾಣಿ ಮನೋಬುದ್ಧಿರಸ್ಯಾಧಿಷ್ಠಾನಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯದೇಹಿನಮ್

॥ ೪೦ ॥

ತಸ್ಮಾತ್ ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ * ಹ್ಯೇನಂ ಜ್ಞಾನವಿಜ್ಞಾನನಾಶನಮ್

॥ ೪೧ ॥

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ

॥ ೪೨ ॥

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್

॥ ೪೩ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಕರ್ಮಯೋಗೋ ನಾಮ ತೃತೀಯೋಽಧ್ಯಾಯಃ

ನರನಹುದು ಹರಿಯುಮಹುದ- ।
ಚ್ಚರಿಯಹುದು ರಹಸ್ಯಮಹುದು ರಸಿಕನಲಿಪ್ತಂ ॥
ಪರಿಣತ ಲೌಕಿಕನುಮಹುದು ।
ಪರಿಪೂರ್ಣಮನುಷ್ಯಜೀವನೋಜ್ಜ್ವಲಮುಕುರಂ ॥

ಗುರುವಾತಂ ಧರ್ಮಧುರಂ- ।
ಧರನಾತಂ ರಾಜ್ಯತಂತ್ರಿ ರಣಜಯಿಯಾತಂ ॥
ಪುರುಷಾರ್ಥಸಕಲನಾತಂ ।
ಹರಿಯೆನಿಸಿದನಖಿಲದಾತ್ಮನಖಿಲಾತೀತನ್ ॥

ಸೂಚನೆ

ಪುಣ್ಯಾಪುಣ್ಯಸ್ಪರ್ಶಂ ।
ಸನ್ನಿಹಿತಂ ಲೋಕಕರ್ಮದೊಳಗದು ಹಿತಮೋ ।
ಸಂನ್ಯಾಸದೆ ಬಂಧಪರಿ- ।
ಚ್ಛಿನ್ನಮೆ ಹಿತಕರಮೊ ವಿಹಿತಮಾವುದು ಕೃಷ್ಣಾ॥

ಸಾರಾಂಶ

ಕರ್ಮವು ಒಂದರ್ಥದಲ್ಲಿ ಯಾರನ್ನೂ ಬಿಟ್ಟಿದ್ದಲ್ಲ. ಸ್ವಾಭಾವಿಕವಾದ ಉಸಿರಾಟ ಮೊದಲಾದ ದೈಹಿಕ ಕರ್ಮಗಳನ್ನು ಬಿಟ್ಟು ನಾವು ಬುದ್ಧಿಪೂರ್ವಕವಾಗಿ ಮಾಡುವ ಕರ್ಮವು ಇಲ್ಲಿ ಪ್ರಸಕ್ತವಾದದ್ದು. ಇಂಥಾ ಪುರುಷಾಯತ್ತವಾದ ಕರ್ಮಗಳಲ್ಲಿ ಪಾಪಸಂಭವವುಂಟು. ಆ ದೋಷದ ಮೂಲಸ್ಥಾನ ಯಾವುದು? ಕರ್ಮವು ಜಡಪದಾರ್ಥ. ಅದಕ್ಕೆ ಗುಣವೋ ದೋಷವೋ ಬರುವುದು ಕರ್ಮಿಯಿಂದ, ಅಥವಾ ಕರ್ತನಿಂದ. ಕತ್ತಿಯೆಂಬುದು ಕಬ್ಬಿಣದ ನಿಶ್ಚೇತನ ವಸ್ತು. ಅದರಿಂದ ಪುಣ್ಯವೋ ಪಾಪವೋ ಆಗುವುದು ಕತ್ತಿಯ ಉಪಯೋಗಕರ್ತನ ಮನೋಭಾವದಿಂದ.

ನೀರು ಎಂಥ ನೆಲದಲ್ಲಿ ಹರಿಯುತ್ತದೆಯೋ ಅಂಥ ಬಣ್ಣ ರುಚಿ ವಾಸನೆಗಳನ್ನು ತಾಳುತ್ತದೆ. ಕರ್ಮವೂ ನೀರಿನಂತೆ ಸ್ವತಂತ್ರ, ಗುಣವರ್ಣಗಳಿಲ್ಲದ್ದು. ಕರ್ಮವು ಜಗಜ್ಜೀವನದ ಒಂದಂಶ. ಕರ್ಮಿಯ ಭಾವನೆ ಉದಾತ್ತವಾದಂತೆ ಕರ್ಮವು ನಿರ್ಮಲಿನವಾಗುತ್ತದೆ. ಕರ್ಮವು ಕರ್ಮಿಯನ್ನನುಸರಿಸಿ ಪಾಪವಾಗಬಹುದು, ಪುಣ್ಯವಾಗಬಹುದು, ಉಭಯಾತೀತವಾದ ಆತ್ಮೈಕ ವಿಲಾಸವಾಗಬಹುದು.

. . .

ಪ್ರಕರಣ ೪

ಅಧ್ಯಾಯ ೩ - ಕರ್ಮಯೋಗವೆಂಬ ಸ್ವಧರ್ಮಯೋಗ

ಈ ಅಧ್ಯಾಯದ ಮುಖ್ಯವಿಷಯಗಳು ಆರು:

1. ಕರ್ಮದ ಅನಿವಾರ್ಯತೆ,
2. ಸಕಲಭೂತಸಹಕಾರ,
3. ಅಸಕ್ತಕರ್ಮ,
4. ಜ್ಞಾನಿಯ ಕರ್ಮ—ಸಾಮಾನ್ಯನ ಕರ್ಮ,
5. ಜ್ಞಾನಕರ್ಮಗಳ ಸಂಬಂಧ,
6. ಸ್ವಧರ್ಮಕರ್ತವ್ಯತೆ.

ಅರ್ಜುನನ ಮನಸ್ಸಿನಲ್ಲಿದ್ದ ಭಾವನೆಗಳು ಮುಖ್ಯವಾಗಿ ನಾಲ್ಕು: (೧) ಸ್ವಜನ ಪ್ರೀತಿ, (೨) ಪಾಪಭೀತಿ, (೩) ಸ್ವಾರ್ಥವಿರಕ್ತಿ, (೪) ಧರ್ಮಚಿಂತನೆ. ಇವು ಸತ್ಪುರುಷರಲ್ಲಿರಬೇಕಾದ ಗುಣಗಳೇ ಹೊರತು ದೋಷಗಳಲ್ಲ ಎಂದು ನಮಗನ್ನಿಸುತ್ತದೆ. ಆದರೆ ಕೃಷ್ಣಸ್ವಾಮಿ ಅರ್ಜುನನ ಮಾತನ್ನು ಕ್ಷುದ್ರವೆಂದೂ ಅನಾರ್ಯವೆಂದೂ ದುರ್ಬಲ ಸೂಚಕವೆಂದೂ ಹಳಿದ. ಆ ಹಳಿವಿಗೆ ಕಾರಣ ಅರ್ಜುನನ ವಾದ “ಪ್ರಜ್ಞಾವಾದ” ವೆಂಬ ಸಂಗತಿ. ಅದು ಪ್ರಾಜ್ಞರಾಡುವ ಮಾತಿನ ಶುಕಪಠಿತವೇ ಹೊರತು, ತತ್ತ್ವಜ್ಞಾನದ ಆಧಾರದ ಮೇಲೆ ಸ್ವಬುದ್ಧಿ ವಿಚಾರಸಿದ್ಧವಾದದ್ದಲ್ಲ—ಎಂಬುದು ಭಗವಂತನ ಆಕ್ಷೇಪ. ಹಾಗಾದರೆ ತತ್ತ್ವಾಧಾರ ಯಾವುದು? ಎಲ್ಲ ಧರ್ಮಾಧರ್ಮಗಳಿಗೂ ಮೂಲಪ್ರಾಯವಾದದ್ದು ಆತ್ಮವಸ್ತು. ಆದದ್ದರಿಂದ ಆತ್ಮವಸ್ತುಸ್ವರೂಪವನ್ನು ಮೊದಲು ಕಂಡುಕೊಳ್ಳಬೇಕಾದದ್ದು. ಹಾಗೆ ವಿಚಾರಮಾಡಿ ನೋಡಿದರೆ, ಆತ್ಮ ಅವಧ್ಯವಾದದ್ದು; ದೇಹವಾದರೋ ಹೇಗಾದರೂ ಮೃತ್ಯುವಶವಾಗತಕ್ಕದ್ದೇ. ಆದದ್ದರಿಂದ “ಹೇ ಅರ್ಜುನ, ನೀನು ಯುದ್ಧ ಮಾಡಿದರೆ ನಷ್ಟವಾಗುವುದು ಯಾವುದು? ಯಾವುದಕ್ಕೆ ನಾಶವು ಸ್ವಭಾವ ಸಿದ್ಧವೋ ಅದು ಮಾತ್ರ. ಆದದ್ದರಿಂದ ನೀನು ಅದಕ್ಕಾಗಿ

ಅಳತಕ್ಕದ್ದಲ್ಲ. ಯುದ್ಧ ಮಾಡಬೇಕಾದದ್ದು ಏತಕ್ಕೋಸ್ಕರ—ಎನ್ನುತ್ತೀಯೋ? ರಾಜ್ಯ, ಕೀರ್ತಿ, ಭೋಗ, ಸ್ವರ್ಗ—ಇವುಗಳಿಗಾಗಿ ಯುದ್ಧಮಾಡು. ಅವೆಲ್ಲ ನಿನಗೆ ಬೇಡವೆಂದರೆ, ಧರ್ಮಾರ್ಥವಾಗಿ ಯುದ್ಧಮಾಡು. ಧರ್ಮವಾದ ಆ ಕರ್ಮವನ್ನು ಕೇವಲ ಪಾರಮಾರ್ಥಿಕ ದೃಷ್ಟಿಯಿಂದ ಮಾಡು. ಪುಣ್ಯಪಾಪಗಳೆರಡನ್ನೂ ದಾಟಿರುವ ಯೋಗಿಯ ಮನೋಭಾವದಿಂದ ಫಲಾಪೇಕ್ಷೆ ಇಲ್ಲದೆ ಮಾಡಿದ ಕರ್ಮವು ನಿನ್ನ ಆತ್ಮಕ್ಕೆ ಸಂಕೋಲೆಯಾಗದು" —ಹೀಗೆಂದು ಭಗವಂತ ಹೇಳಿದ್ದನ್ನು ಕೇಳಿ ಅರ್ಜುನನು— "ಆ ಪಾರಮಾರ್ಥಿಕಯೋಗಿ ಎಂಥವನು, ಅವನ ಲೋಕಚರ್ಯೆ ಎಂಥಾದ್ದು?" ಎಂದು ಪ್ರಶ್ನೆಮಾಡಲು, ಭಗವಂತನು ಸ್ಥಿತಪ್ರಜ್ಞನ ಲಕ್ಷಣಗಳನ್ನು ವಿವರಿಸಿದ. ಸ್ಥಿತಪ್ರಜ್ಞನು ಇಂದ್ರಿಯಗಳನ್ನು ಜಯಿಸಿದವನು, ರಾಗದ್ವೇಷಾದಿ ಹರ್ಷಶೋಕಾದಿ ದ್ವಂದ್ವಗಳಿಗೆ ಅತೀತನಾದವನು, ನಿಷ್ಕಾಮಿ, ನಿರ್ಮಮನು, ಪ್ರಸನ್ನಚಿತ್ತನು—ಎಂದು ಬ್ರಾಹ್ಮೀಸ್ಥಿತಿಯನ್ನು ವರ್ಣಿಸಿದ ಭಗವಂತ.

ಆಗ ಅರ್ಜುನನೆಂದ: "ಒಳ್ಳೆಯದು, ಕೃಷ್ಣ. ಅಂಥ ಬ್ರಾಹ್ಮೀಸ್ಥಿತಿಗೆ ಸಾಧನವು ತತ್ತ್ವಜ್ಞಾನವೆಂದು ನೀನು ಹೇಳಿದೆ. ಸಾಂಖ್ಯವೆಂಬ ಬುದ್ಧಿಯೋಗವೇ ಆ ಪರಮೋತ್ತಮ ಸ್ಥಿತಿಯನ್ನು ಸಂಪಾದಿಸಿಕೊಡಬಲ್ಲದ್ದಾದಮೇಲೆ, ನಾನು ಆ ದಾರಿಯನ್ನೇ ಹಿಡಿಯಬಹುದಲ್ಲ? ಧರ್ಮಕರ್ಮಗಳೇಕೆ?" ಇದಕ್ಕುತ್ತರವನ್ನು ಮೂರನೆಯ ನಾಲ್ಕನೆಯ ಅಧ್ಯಾಯಗಳಲ್ಲಿ ಹೇಳಿದೆ.

ಈ ಸಂಧಿಯಲ್ಲಿ ಕರ್ಮಶಬ್ದದ ಅರ್ಥವನ್ನು ನಾವು ವಿಶದಪಡಿಸಿಕೊಳ್ಳುವುದು ಅವಶ್ಯವಾಗಿದೆ. ಕರ್ಮ ಎಂದರೆ ಕೆಲಸ, —ಯಾವುದಾದರೂ ಕೆಲಸ. ಕರ್ಮ, ಕಾರ್ಯ, ಕೃತಿ, ಕೃತ್ಯ, ಕರ್ತವ್ಯ, ಕರಣ, ಕಾರಣ, ಕ್ರಿಯೆ, ಆಕಾರ, ವಿಕಾರ, ಪ್ರಕಾರ—ಇವೆಲ್ಲ ಒಂದೇ ಬುಡಕಟ್ಟಿನಿಂದ ಬಂದಿರುವ ಮಾತುಗಳು. ಈ ಮಾತುಗಳಲ್ಲಿ ಕರ್ಮ ಎಂಬುದು ಶಾಸ್ತ್ರ ಪರಿಭಾಷೆಯಲ್ಲಿ ಹೆಚ್ಚು ಬಳಕೆಯಲ್ಲಿದೆ. ಆ ಪಾರಿಭಾಷಿಕಾರ್ಥಗಳು ಅನೇಕವಾಗಿವೆ. ಸದ್ಯಕ್ಕೆ ಪ್ರಸಕ್ತವಾಗಿರುವುದನ್ನು ನೋಡೋಣ:

ಕರ್ಮ ಮೊದಲು ಎರಡು ವಿಧ: (೧) ಪ್ರಾಕೃತ, (೨) ಸ್ವಕೃತ.

ಪ್ರಾಕೃತ ಕರ್ಮಗಳು ಪ್ರಾಣಿಯಿಂದ ಅಪ್ರಯತ್ನವಾಗಿ ನಡೆಯುವ ಕೆಲಸಗಳು: ಉಸಿರಾಡುವುದು, ರೆಪ್ಪೆಬಡಿಯುವುದು, ಆಕಳಿಕೆ, ತೇಗು, ಹಸಿವಾಗುವುದು, ನಿದ್ದೆ,


ಜಲಮಲಾದಿವಿಸರ್ಜನೆ—ಇತ್ಯಾದಿ ದೈಹಿಕ ಕಾರ್ಯಗಳು ಸ್ವಾಭಾವಿಕಗಳು. ಇವು ಎಂಥ ಜ್ಞಾನಿಗೂ ತಪ್ಪಿದ್ದಲ್ಲ. ಇವುಗಳನ್ನು ಒಟ್ಟಿಗೆ ಪ್ರಾಣಕ್ರಿಯೆಗಳು ಎನ್ನಬಹುದು.

ಸ್ವಕೃತ ಕರ್ಮಗಳು ಮನುಷ್ಯನು ಬುದ್ಧಿಪೂರ್ವಕವಾಗಿ ಮಾಡುವ ಕೆಲಸಗಳು. ಅವು ಎರಡು ವಿಧ: (೧) ಸತ್ಕರ್ಮ, (೨) ದುಷ್ಕರ್ಮ. ಸತ್ಕರ್ಮವೆಂಥಾದ್ದು, ದುಷ್ಕರ್ಮವೆಂಥಾದ್ದು ಎಂಬ ವಿವರಣೆಯನ್ನು ಮುಂದೆಮುಂದೆ ನೋಡುವುದಾಗುತ್ತದೆ. ಸದ್ಯಕ್ಕೆ ಇಷ್ಟು ಇಟ್ಟುಕೊಳ್ಳೋಣ: ಯಾವಯಾವ ಕೆಲಸದಿಂದ ಜೀವ ಮೇಲ್ಗತಿ ಪಡೆಯುತ್ತದೆಯೋ ಅದು ಸತ್ಕರ್ಮ. ಯಾವುದರಿಂದ ಜೀವಕ್ಕೆ ಕೀಳ್ಗತಿಯೋ ಅದು ದುಷ್ಕರ್ಮ.

ಎಲ್ಲ ಕರ್ಮಗಳಲ್ಲೂ ಮೂರು ವಿಧ ಉಂಟು: (೧) ಕರ್ಮ; (೨) ಅಕರ್ಮ; (೩) ವಿಕರ್ಮ—ಎಂದರೆ (೧) ವಿಹಿತವಾದದ್ದನ್ನು ಮಾಡುವುದು; (೨) ಮಾಡದೆ ಬಿಡುವುದು; ಮಾಡಿದರೂ ಮಾಡದವನಂತಿರುವುದು; (೩) ಹೇಗೆ ಮಾಡಬೇಕೋ ಹಾಗಲ್ಲದೆ ಬೇರೆ ರೀತಿ ಮಾಡುವುದು. ಇಂಥ ಭೇದವನ್ನು ಪ್ರಾಕೃತ ಕರ್ಮದಲ್ಲಿಯೂ ಕಾಣಲಾಗುತ್ತದೆ: ಮೂಗಿನಿಂದ ಉಸಿರಾಡುವುದಕ್ಕೆ ಬದಲಾಗಿ ಬಾಯಿಂದ ಉಸಿರಾಡುವುದು ಇತ್ಯಾದಿ. ಆದರೆ ಅದು ಮನುಷ್ಯನ ಸ್ವಂತ ಇಷ್ಟದಿಂದ ಆದದ್ದಲ್ಲ.

ಸತ್ಕರ್ಮವೇ ಧರ್ಮ. ಅದು ಮೂರು ವಿಧ :

(೧) ಲೌಕಿಕ, (೨) ವೈದಿಕ, (೩) ಪಾರಮಾರ್ಥಿಕ.



ಲೌಕಿಕ ಧರ್ಮವು ಲೋಕಸಾಮಾನ್ಯವಾದ ನೀತಿ : ಭೂತದಯೆ, ಸದಾಚಾರಗಳು, ಸತ್ಯ, ಅಹಿಂಸೆ, ಶೌಚ, ಕ್ಷಮೆ, ದೀನವಾತ್ಸಲ್ಯ. ಪರಹಿತಚಿಂತನೆ, ಪೌರ ರಾಷ್ಟ್ರಕ ಕರ್ತವ್ಯಗಳು—ಇವೆಲ್ಲ ಸರ್ವಮನುಷ್ಯಸಾಧಾರಣವಾಗಿ ಸರ್ವಾಂಗೀಕೃತವಾಗಿರುವ ಸದ್ಗುಣ ಸದ್ವೃತ್ತಿಗಳು.

ವೈದಿಕಕರ್ಮ ಮುಖ್ಯವಾಗಿ ಎರಡು ರೂಪವಾದದ್ದು : ಒಂದು ಸಂಸ್ಕಾರರೂಪವಾದದ್ದು, ಇನ್ನೊಂದು ಸಾಧನರೂಪವಾದದ್ದು. ಸಂಸ್ಕಾರ ಎಂದರೆ ಜಾತಕರ್ಮ, ನಾಮಕರಣ, ಉಪನಯನ, ವೇದಾಧ್ಯಯನ, ವಿವಾಹ ಇತ್ಯಾದಿ. ಇವು ಮಂತ್ರಗಳಿಂದಲೂ

ಶಾಸ್ತ್ರಕ್ರಿಯೆಗಳಿಂದಲೂ ಜೀವವನ್ನು ಶುದ್ಧಪಡಿಸುತ್ತವೆ. ತೀರ್ಥಸ್ನಾನ, ಕ್ಷೇತ್ರವಾಸ ಮೊದಲಾದವೂ ಈ ವಿಧದವೇ.

ಸಾಧನಕರ್ಮಗಳನ್ನು ಮುಖ್ಯವಾಗಿ ಮೂರೆಂದಿದ್ದಾರೆ ಗೀತೆಯಲ್ಲಿ : ಯಜ್ಞ, ದಾನ, ತಪಸ್ಸು. ಈ ಮೂರರಲ್ಲಿ ಎಲ್ಲ ಪುಣ್ಯಗಳನ್ನೂ ಸೇರಿಸಬಹುದು. ಯಜ್ಞ ಎಂಬುದರಲ್ಲಿ ಭಗವದಾರಾಧನೆ, ಗುರುಹಿರಿಯರ ಸೇವೆ, ಶಾಸ್ತ್ರಾಧ್ಯಯನ ಇವನ್ನೆಲ್ಲ ಸೇರಿಸಬಹುದು. ಗೀತೆಯಲ್ಲಿ ದ್ರವ್ಯಯಜ್ಞ, ಜ್ಞಾನಯಜ್ಞ, ಸ್ವಾಧ್ಯಾಯಯಜ್ಞ, ಧ್ಯಾನಯಜ್ಞ ಮೊದಲಾದ ಅನೇಕ ಯಜ್ಞಗಳ ಪ್ರಸಕ್ತಿಯಿದೆ. ಯಜ್ಞವೆಂದರೆ ಪೂಜೆ. ಇನ್ನೊಬ್ಬರಿಗೆ ಸಂತೋಷವಾಗಬೇಕೆಂದು ನಾವು ಮಾಡುವ ಎಲ್ಲ ಕೆಲಸವೂ ಯಜ್ಞವೇ.

ದಾನವೆಂದರೆ ತನ್ನ ಸ್ವತ್ತನ್ನು ಅರ್ಹರಾದವರಿಗೆ ಕೊಟ್ಟುಬಿಡತಕ್ಕದ್ದು. ದಾನಗಳು ನಾನಾ ವಿಧವಾದವು. ದಾನಮಾಡಿದ ವಸ್ತುವಿನಲ್ಲಿ ಮೊದಲು ಅದು “ತನ್ನದು” ಎಂಬ ಭಾವ ಸೇರಿರಬೇಕು. ಬಳಿಕ ಆ ಭಾವವನ್ನು ಇಷ್ಟದಿಂದ ಬಿಟ್ಟುಕೊಟ್ಟಾಗ— “ನ ಮಮ” ಎಂದಾಗ— ದಾನ.

ತಪಸ್ಸೆಂಬುದು ವ್ರತರೂಪವಾದದ್ದು : ಆಹಾರ ವಿಹಾರಾದಿಗಳಲ್ಲಿ ನಿಯಮದಿಂದಿರುವುದು; ಜಪ, ಪಾರಾಯಣ ಇತ್ಯಾದಿಗಳಿಂದ ಮನಸ್ಸನ್ನೂ ಇಂದ್ರಿಯಗಳನ್ನೂ ಸ್ವಾಧೀನ ಪಡಿಸಿಕೊಳ್ಳುವುದು; ದೊಡ್ಡ ವಿಷಯವನ್ನು ಮನಸ್ಸಿಗೆ ಅಭ್ಯಾಸಮಾಡಿಸುವುದು : ಒಂದಾನೊಂದು ದೊಡ್ಡ ಅಭಿಪ್ರಾಯವನ್ನು, ದೊಡ್ಡ ಗುಣವನ್ನು, ದೊಡ್ಡ ಆದರ್ಶವನ್ನು ಪದೇಪದೇ ಸ್ಮರಣೆಮಾಡಿ, ಚಿಂತಿಸಿ, ಅನುಸಂಧಾನಮಾಡುವುದು; ಒಂದು ಮಹೋದ್ದೇಶಕ್ಕಾಗಿ ಸಂತತ ಪರಿಶ್ರಮಮಾಡುವುದು—ಇವೆಲ್ಲ ತಪಸ್ಸು.

ಹೀಗೆ ಯಜ್ಞ, ದಾನ, ತಪಸ್ಸು ಈ ಮೂರು ಸಾಧನಗಳು: ಹಿಂದೆ ಹೇಳಿದ ಸಂಸ್ಕಾರಗಳೂ ಈ ಸಾಧನಗಳೂ ಶಾಸ್ತ್ರೋಕ್ತ ರೀತಿಯಲ್ಲಿ ಸಂಪ್ರದಾಯಾನುಸಾರ ನಡೆಯುತ್ತವೆ. ಆಯಾ ಮತಸ್ಥರಿಗೆ ಆಯಾ ಮತದ ನಿಯಮಗಳು ಅನ್ವಯಿಸುತ್ತವೆ: ಮುಸಲ್ಮಾನರಿಗೆ ಕ್ರಿಶ್ಚಿಯನರಿಗೆ ಅವರವರದು—ಮುಸಲ್ಮಾನರಲ್ಲಿ ರಂಜಾನ್ ಉಪವಾಸ, ಕ್ರೈಸ್ತ ಧರ್ಮಾನುಯಾಯಿಗಳಿಗೆ ಲೆಂಟ್ ವ್ರತಕಾಲ—ಇವೆಲ್ಲ ಶಾಸ್ತ್ರೋಕ್ತ ಕರ್ಮಗಳು. ಇವುಗಳ ಪ್ರಯೋಜನ ಇಹಲೋಕದಲ್ಲಷ್ಟೇ ಅಲ್ಲದೆ ಜನ್ಮಾಂತರ ಲೋಕಾಂತರಗಳಲ್ಲೂ ಉಂಟೆಂದು ವೈದಿಕರ

ನಂಬಿಕೆ. ಅನೇಕ ಪೂಜಾಕಾರ್ಯಗಳಿಗೆ ಫಲ ಈ ಲೋಕದಲ್ಲಿ ದೊರಕುವುದಕ್ಕಿಂತ ಹೆಚ್ಚಾಗಿ ಪರಲೋಕದಲ್ಲಿ ಜೀವಕ್ಕೆ ದೊರಕುತ್ತದೆ.

ಮೂರನೆಯದು ಪಾರಮಾರ್ಥಿಕ ಕರ್ಮ. ಲೌಕಿಕ ಕರ್ಮ, ವೈದಿಕ ಕರ್ಮ ಇವೆರಡೂ ಫಲಗಳನ್ನುಳ್ಳವು. ಪಾರಮಾರ್ಥಿಕ ಕರ್ಮವು ಫಲವನ್ನು ಅಪೇಕ್ಷಿಸುವುದಿಲ್ಲ; ಇದು ಪ್ರತಿಫಲಾಪೇಕ್ಷೆಯಿಲ್ಲದೆ, ಕೇವಲ ಕರ್ತವ್ಯವೆಂಬ ದೃಷ್ಟಿಯಿಂದ, ಆತ್ಮೈಕದೃಷ್ಟಿಯಿಂದ, ಪರಮಾತ್ಮಪ್ರೀತ್ಯರ್ಥವಾಗಿ ಮಾಡಿದ್ದು. ಪಾರಮಾರ್ಥಿಕ ಸತ್ಕರ್ಮವು ಧರ್ಮವೂ ಹೌದು, ಧರ್ಮಕ್ಕಿಂತ ಮೇಲ್ಪಟ್ಟದ್ದೂ ಹೌದು. ಲೋಕಪ್ರಯೋಜನದ ದೃಷ್ಟಿಯಿಂದ ಅದು ಧರ್ಮ. ಕರ್ಮಿಯ ಭಾವನಾದೃಷ್ಟಿಯಿಂದ ಅದು ಧರ್ಮಾತೀತ. ಆದದ್ದರಿಂದ ಅದನ್ನು ಅಧಿಧರ್ಮ ಎಂದು ಕರೆಯಬಹುದು. "ನಿಸ್ತ್ರೈಗುಣ್ಯೋ ಭವಾರ್ಜುನ" ಎಂಬಲ್ಲಿ ಹೇಳಿದ್ದು ಈ ಅಭಿಪ್ರಾಯವನ್ನೇ. ಅದು ಸ್ಥಿತಪ್ರಜ್ಞನ ಲೋಕವರ್ತನೆ. ಅವನು ಪ್ರತಿಫಲಚಿಂತೆಯೇ ಇಲ್ಲದೆ ಧರ್ಮವನ್ನು ನಡಸುತ್ತಾನೆ. ಸಾಮಾನ್ಯ ಮನುಷ್ಯನು ಐಹಿಕ ಸುಖ ಸಂಪತ್ತುಗಳ ಆಶೆಯಿಂದಲೋ ನರಕಭಯದಿಂದಲೋ ಸ್ವರ್ಗಾಪೇಕ್ಷೆಯಿಂದಲೋ ಧರ್ಮಕರ್ಮ ಮಾಡುತ್ತಾನೆ. ಪಾರಮಾರ್ಥಿಕನು ಯಾವ ಆಶೆಯೂ ಯಾವ ಭಯವೂ ನಿರೀಕ್ಷೆಯೂ ಇಲ್ಲದೆ, ಲೋಕವೆಲ್ಲ ತಾನೇ ಎಂಬ ಮನಸ್ಸಿನಿಂದ ಎಲ್ಲರ ವಿಷಯದಲ್ಲೂ "ಆತ್ಮೌಪಮ್ಯೇನ ಸರ್ವತ್ರ" ನಡೆದುಕೊಳ್ಳುತ್ತಾನೆ. ಸತ್ಕರ್ಮ ಅವನಿಗೆ ಸ್ವಾಭಾವಿಕ—ಸುಗಂಧವು ಚಂದನದ ಸ್ವಭಾವವಾಗಿರುವಂತೆ ಅಥವಾ ತಂಪು ಚಂದ್ರನ ಸ್ವಭಾವವಾಗಿರುವಂತೆ. ಅದು ಯಾವ ಪ್ರಯತ್ನವನ್ನೂ ಪ್ರಯಾಸವನ್ನೂ ಅಪೇಕ್ಷಿಸುವುದಿಲ್ಲ, ಇಂಥದು ಉತ್ತಮೋತ್ತಮ ಸ್ಥಿತಿ—ಬ್ರಾಹ್ಮೀಸ್ಥಿತಿ.

ಕರ್ಮವೆಂದರೆ ಕರ್ಮಫಲವೆಂದೂ ರೂಢಿಯುಂಟು. "ಅವನ ಕರ್ಮ ಅವನನುಭವಿಸುತ್ತಿದ್ದಾನೆ" ಎಂದರೆ ಅವನು ಮಾಡಿದ್ದರ ಫಲಾಫಲಗಳನ್ನು ಅವನು ಅನುಭವಿಸುತ್ತಿದ್ದಾನೆ ಎಂದರ್ಥ. ಪ್ರಾಚೀನ, ಪ್ರಾರಬ್ಧ, ಪ್ರಾಪ್ತಿ—ಇವೆಲ್ಲ ಪೂರ್ವಕರ್ಮಾರ್ಜಿತ ಹೆಸರುಗಳು. ಕರ್ಮವೆಂದರೆ ಪ್ರಾಚೀನ, ಪೂರ್ವಜನ್ಮದ ಕರ್ಮ ಎಂಬರ್ಥದ ಪ್ರಸ್ತಾವ ೪, ೭, ೧೪ನೆಯ ಅಧ್ಯಾಯಗಳಲ್ಲಿ ಬರುತ್ತವೆ. ಆ ಬಗೆಯ ಅರ್ಥವಿವರಣೆಯನ್ನು ಆಯಾ ಸಂದರ್ಭಗಳಲ್ಲಿ ನೋಡೋಣ. ಈ ಪ್ರಾಚೀನ ಕರ್ಮಫಲ ಎಂಬ ಅರ್ಥ ನಮಗೆ ಸದ್ಯಕ್ಕೆ ಅಪ್ರಕೃತ.

ಅರ್ಜುನನ ಸಂದೇಹ ಇದು: "ಭಗವಂತ, ನೀನು ಒಂದು ಸಾರಿ 'ಯುದ್ಧಾಯ ಯುಜ್ಯಸ್ವ' 'ಕರ್ಮಣ್ಯೇವಾಧಿಕಾರಸ್ತೇ' 'ಕುರು ಕರ್ಮಾಣಿ' ಎಂದು ಉಪದೇಶಿಸಿದ್ದಿ. ಇನ್ನೊಂದು ಸಾರಿ 'ಅವರಂ ಕರ್ಮ,' 'ಬುದ್ಧೌ ಶರಣಮನ್ವಿಚ್ಛ,' 'ಯೋಗಾಯ ಯುಜ್ಯಸ್ವ' ಎಂದು ಉಪದೇಶಿಸಿದ್ದಿ. ಹೀಗೆ ನಿನ್ನ ಬೋಧನೆ ದ್ವಿವಿಧಮಿಶ್ರಣವಾಗಿ, ಅನ್ಯೋನ್ಯ ಅಸಂಬದ್ಧವಾಗಿದೆ. ಇದರಿಂದ ನನ್ನ ಮನಸ್ಸು ಭ್ರಾಂತಿಗೊಂಡಿದೆ. ಕರ್ಮ, ಜ್ಞಾನ—ಇವೆರಡರಲ್ಲಿ ಯಾವುದು ಸರಿ? ನಿಶ್ಚಯಿಸಿ ಹೇಳು."

ಕೃಷ್ಣ ಹೇಳುತ್ತಾನೆ: ಅರ್ಜುನ, ಜ್ಞಾನವೂ ಕರ್ಮವೂ ಪರಸ್ಪರ ವಿರೋಧಿಗಳಲ್ಲ, ಪರಸ್ಪರ ಸಹಕಾರಿಗಳು. ಮೊದಲು ಕರ್ಮವು ಜ್ಞಾನಕ್ಕೆ ಸಾಧಕವಾಗುತ್ತದೆ. ಜ್ಞಾನಸಿದ್ಧಿಯಾದ ಬಳಿಕ ಕರ್ಮವು ಅದರ ಫಲಿತಾಂಶವಾಗುತ್ತದೆ. ಹೇಗೂ ಕರ್ಮವು ಉಂಟೇ ಉಂಟು. ಕರ್ಮವನ್ನು ಮಾಡದೆ ಬಿಟ್ಟಮಾತ್ರದಿಂದ ಜೀವಕ್ಕೆ ಕರ್ಮಲೇಪ ತಪ್ಪುವುದಿಲ್ಲ. ಯತ್ಯಾಶ್ರಮ ಮಾತ್ರದಿಂದ ಜ್ಞಾನಸಿದ್ಧಿಯಾಗದು. ಕರ್ಮವನ್ನು ಬಿಡುವುದೆಂದರೆ ಏನು?

> ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
> ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥

"ಯಾವುದಾದರೊಂದು ಕರ್ಮವನ್ನು ಮಾಡದೆ ಯಾವನೂ ಒಂದು ಕ್ಷಣವೂ ಇರಲಾಗದು. ಪ್ರಕೃತಿಯೇ ಒಳಗಿನಿಂದ ಗುಣಗಳನ್ನು ಹೊರಕ್ಕೆ ತಳ್ಳಿ ಕೈಹಿಡಿದು ಕೆಲಸ ಮಾಡಿಸುತ್ತಾಳೆ. ಇಂದ್ರಿಯಗಳು ಜಗದ್ವಿಷಯಗಳಿಂದ ಕೆರಳಿ ಮನಸ್ಸನ್ನು ಕುದಿಸುತ್ತಿರುವಾಗ ಆ ತಳಮಳವನ್ನು ಬಚ್ಚಿಟ್ಟುಕೊಂಡು, ಹೊರಗಡೆಗೆ ಮೈಕೈ ಬಿಗಿದು ಕುಳಿತಿರುವುದು ಬೂಟಾಟಿಕೆ. ಅದಕ್ಕೆ ಪ್ರತಿಯಾಗಿ, ಯಾರು ಇಂದ್ರಿಯಗಳನ್ನು ಹದ್ದಿನಲ್ಲಿರಿಸಿ ಸ್ವಪ್ರಯೋಜನಚಿಂತೆಯಿಲ್ಲದೆ, ಕೇವಲ ಧರ್ಮಕ್ಕಾಗಿ ಅಂಗಾಂಗಗಳಿಂದ ಕರ್ಮ ಮಾಡಿಸುತ್ತಾನೋ ಅವನು ಕರ್ಮಯೋಗಿ."

> ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
> ಇಂದ್ರಿಯಾರ್ಥಾನ್ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥

ಯಾರು ಕೇವಲ ಬಹಿರಿಂದ್ರಿಯಗಳನ್ನು ಅದುಮಿಟ್ಟುಕೊಂಡು ಮನಸ್ಸಿನೊಳಗೆ ಇಂದ್ರಿಯವಿಷಯಗಳನ್ನು ಸ್ಮರಿಸುತ್ತಿರುತ್ತಾನೋ ಅವನು ಮಿಥ್ಯಾಚಾರಿ. ಸಂಸ್ಕಾರ ಯಾವುದಕ್ಕೆ

ಆಗಬೇಕೆಂಬ ವಿವೇಕ ಅವನಿಗಿಲ್ಲ. ಬಹಿರಂಗಗಳನ್ನು ಬಂಧನದಲ್ಲಿಟ್ಟು ಮಾಡಿದ ಕರ್ಮತ್ಯಾಗದಿಂದ ಪ್ರಯೋಜನವಿಲ್ಲ. ಭಗವಂತ ಹೇಳುತ್ತಾನೆ :

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ॥

"ನಿನಗೆ ಯಾವ ಕರ್ಮ ವಿಹಿತವಾಗಿದೆಯೋ, ಯಾವುದು ಕರ್ತವ್ಯವೋ, ಅದನ್ನು ಮಾಡು. ಕರ್ಮ ಬಿಡುವುದಕ್ಕಿಂತ ಅಂಥ ಕರ್ಮದ ಅನುಷ್ಠಾನ ಉತ್ತಮ."

ಇಲ್ಲಿ ನಿಯತ-ಅನಿಯತಗಳ ವಿವೇಕವೇ ಮುಖ್ಯಾಂಶ. ಮನೆಯಲ್ಲಿ ಮುದಿಯೋ ಮಗುವೋ ಕಾಯಿಲೆ ಮಲಗಿದೆಯೆನ್ನಿ. ಆಗ ಪಕ್ಕದ ಮನೆಯಲ್ಲಿ ಭಜನೆ ನಡೆಯುತ್ತಿದ್ದರೆ ಅಲ್ಲಿ ಹೋಗಿ ಕುಳಿತುಬಿಡುವುದು 'ನಿಯತಂ ಕರ್ಮ' ವೋ? ಒಳ್ಳೆಯ ಕರ್ಮಗಳು ಲೋಕದಲ್ಲಿ ಬೇಕಾದಷ್ಟು ತೋರುತ್ತವೆ. ಅವೆಲ್ಲ ನಿಯತ ಕರ್ಮಗಳೊ? ಇಂಡಿಯವನ್ನು ಚೀಣೀಯರು ಬಂದು ಆಕ್ರಮಣಮಾಡುತ್ತಿರುವಾಗ, ನಾವು ಕೋರಿಯದಲ್ಲಿಯೋ ಮತ್ತೆಲ್ಲಿಯೋ ಯಾವುದೋ ಕಲಹ ಪರಿಹಾರಮಾಡುವುದಕ್ಕೆ ಹೊರಡಬೇಕೆಂಬುದು ನಿಯತವೊ? ಅಲ್ಲ. ನಿನ್ನ ನೆರೆಹೊರೆಯಲ್ಲಿ ಆಗಬೇಕಾಗಿರುವುದೇನಾದರೂ ಉಂಟೇ? ನಿನ್ನ ಜವಾಬ್ದಾರಿ ಯಾರ ವಿಷಯದಲ್ಲುಂಟು? ಅದನ್ನು ಕುರಿತು ವಿಚಾರಮಾಡಿಕೊ. ಶಾಸ್ತ್ರವಿಚಾರವಿಹಿತವಾದ ಕರ್ಮದ ಅನುಷ್ಠಾನ ಮುಖ್ಯ.

ಒಂಭತ್ತನೆಯ ಶ್ಲೋಕವಾದ "ಯಜ್ಞಾರ್ಥಾತ್" ಎಂಬಲ್ಲಿಂದ "ಮೋಘಂ ಪಾರ್ಥ ಸ ಜೀವತಿ" ಎಂಬ ಹದಿನಾರನೆಯ ಶ್ಲೋಕದವರೆಗೆ ಎಂಟು ಶ್ಲೋಕಗಳನ್ನು ಒಂದು ಗ್ರಂಥಖಂಡವೆಂದು ಒಟ್ಟಿಗೆ ತೆಗೆದುಕೊಂಡರೆ ಅರ್ಥವು ಸುಲಭವಾದೀತು. ಗ್ರಂಥಶೈಲಿ ಇಲ್ಲಿ ಕೊಂಚ ಜಟಿಲವಾಗಿದೆ. ಎರಡು ಮೂರು ರೂಪಕಗಳು ಸಂಮಿಶ್ರಿತವಾಗಿವೆ : ಕಾಮಧೇನು, ಜೀವಚಕ್ರ, ಬ್ರಹ್ಮಚಕ್ರ—ಹೀಗೆ. ವಿಷಯಗಳೂ ತೊಡಕು ತೊಡಕಾಗಿವೆ. ಆಹಾರ, ಮಳೆಬೆಳೆಗಳು, ಯಜ್ಞ, ಫಲಭೋಗದಲ್ಲಿ ಸಹಭಾಗಿತ್ವ—ಹೀಗೆ ಅನೇಕ ಭಾವನೆಗಳನ್ನು ಹೆಣೆದಿದೆ. ಈ ಖಂಡದ ಭಾವವು ವಿಶದಪಡಬೇಕಾದರೆ ಮೊದಲಿನಿಂದ ಕಡೆಯವರೆಗೂ ಗ್ರಂಥವನ್ನು ಅಖಂಡಾಕಾರವಾಗಿ ನೋಡಬೇಕು.

ಇಲ್ಲಿ ಯಜ್ಞವೆಂದರೆ ಪೂಜಾಕ್ರಿಯೆಯೆಂದೂ ಆ ಕ್ರಿಯೆಯಲ್ಲಿ ಮೂರು ಭಾಗಗಳುಂಟೆಂದೂ ಮೊದಲು ಗ್ರಹಿಸಬೇಕು. ಮೊದಲನೆಯ ಭಾಗ ಪೂಜ್ಯವಸ್ತುವಿನ, ಎಂದರೆ ದೇವತೆಯ—ಮಹತ್ತ್ವದ ಅಂಗೀಕಾರ. (೨) ಆ ಅಂಗೀಕಾರದ ಪರಿಣಾಮವಾಗಿ ತದ್ವಿಧೇಯತೆ, ಎಂದರೆ ಸ್ವತಾಸಮರ್ಪಣೆ (Self surrender). (೩) ದೊರೆತ ಪೂಜಾ ಫಲವನ್ನು ಇತರರೊಡನೆ ಹಂಚಿಕೊಳ್ಳುವುದು. ಈ ಮೂರು ಅಭಿಪ್ರಾಯಗಳೂ ವಿಶದವಾಗಿ ಸ್ಮರಣೆಯಲ್ಲಿಲ್ಲದೆಹೋದರೆ ಈ ವಾಕ್ಯಗಳ ಅರ್ಥವು ಅದರ ಸಮಗ್ರ ರೂಪದಲ್ಲಿ ದೊರೆಯದೆ ಹೋದೀತು.

ಈಗ ಶ್ಲೋಕಗಳ ಭಾವಾನುವಾದವನ್ನು ನೋಡೋಣ.

> ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
> ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥ (೩-೯)

“ಅರ್ಜುನ, ಯಜ್ಞಬುದ್ಧಿಯಿಂದ ಅಲ್ಲದೆ, ದೇವತಾಸಮರ್ಪಣಭಾವವಿಲ್ಲದೆ ಮಾಡಿದ ಕರ್ಮವು ನಮ್ಮನ್ನು ಈ ಲೋಕಕ್ಕೆ ಬಿಗಿಯುತ್ತದೆ. ಈ ಬಂಧನಕ್ಕೆ ನಾವು ಸಿಕ್ಕಿಕೊಳ್ಳದೆ ಉಳಿಯಬೇಕಾದರೆ ಉಪಾಯ—ಕರ್ಮವನ್ನು ಬಿಡುವುದಲ್ಲ, ಕರ್ಮವನ್ನು ಯಜ್ಞಭಾವದಿಂದ ಮಾಡುವುದು.

ಆದಕಾರಣದಿಂದ ನೀನು ಸ್ವಾರ್ಥಸಂಗವಿಲ್ಲದೆ, ಎಂದರೆ ಯಜ್ಞಾರ್ಥವಾಗಿ, ವಿಹಿತಕರ್ಮವನ್ನು ಮಾಡು.” (೯)

> ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
> ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್ ॥ (೩-೧೦)

“ಸೃಷ್ಟಿಕರ್ತನು ಪ್ರಜೆಗಳನ್ನು ಯಜ್ಞಸಹಿತರನ್ನಾಗಿಯೇ ಸೃಷ್ಟಿಮಾಡಿ, ಎಂದರೆ ಯಜ್ಞಬುದ್ಧಿಯನ್ನು ಅವರ ಅಂತರಂಗದಲ್ಲಿ ಹುದುಗಿಸಿ ಸೃಷ್ಟಿಮಾಡಿ, ಅವರಿಗೆ ಹೀಗೆ ಅಪ್ಪಣೆಕೊಟ್ಟನು :

ಪ್ರಜೆಗಳಿರಾ, ನಿಮ್ಮ ಅಂತರಂಗದಲ್ಲಿ ಸಹಜವಾಗಿರುವ ಯಜ್ಞಪ್ರವೃತ್ತಿಯನ್ನು ಮೇಲಕ್ಕೆ ತಂದು ಪ್ರಯೋಗಮಾಡಿ ಅದರಿಂದ ನಿಮಗೆ ಬೇಕಾದದ್ದನ್ನು ಪಡೆದುಕೊಳ್ಳಿ. ಯಜ್ಞವೇ ನಿಮ್ಮ ಪಾಲಿಗೆ

ಕಾಮಧೇನು.” (೧೦)

> ದೇವಾನ್ ಭಾವಯತಾನೇನ ತೇ ದೇವಾ ಭಾವಯನ್ತು ವಃ ।
> ಪರಸ್ಪರಂ ಭಾವಯನ್ತಃ ಶ್ರೇಯಃ ಪರಮವಾಪ್ಸ್ಯಥ ॥ (೩-೧೧)

“ಈ ಯಜ್ಞದಿಂದ ದೇವತೆಗಳನ್ನು ಸಂತೋಷಪಡಿಸಿರಿ. ಆ ದೇವತೆಗಳು ನಿಮ್ಮನ್ನು ಸಂತೋಷಪಡಿಸುತ್ತಾರೆ.

ಹೀಗೆ ದೇವತೆಗಳೂ ಮನುಷ್ಯರೂ ಪರಸ್ಪರ ಸಂತೋಷಕಾರಿಗಳಾಗಿ ಉತ್ತಮವಾದ ಶ್ರೇಯಸ್ಸನ್ನು ಪಡೆಯಿರಿ.” (೧೧)

[ಇದು ಪರಬ್ರಹ್ಮವಸ್ತುವಿನ ಪರವಾಗಿ ಆಡಿದ ಮಾತು. ಇಹಲೋಕದಲ್ಲಿ ದೇವತೆಗಳಿಂದ ಪಡೆಯುವ ಭೋಗಭಾಗ್ಯಗಳಿಗಿಂತ ಮೇಲಾದದ್ದು (ಪರಂ) ಇನ್ನೊಂದುಂಟು ಎಂದು ಹೇಳಿದೆ. ಇಹಲೋಕಕ್ಕಿಂತ ಶ್ರೇಷ್ಠವಾದದ್ದು ಮಾತ್ರವಲ್ಲ, ಇಂದ್ರಸೂರ್ಯಾದಿ ಲೋಕಗಳಿಗಿಂತ ಮೇಲಾದದ್ದು. ದೇವತೆಗಳೂ ಪರಬ್ರಹ್ಮ ಚೈತನ್ಯಕ್ಕೆ ಅಧೀನರಾದವರೇ.]

> ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯನ್ತೇ ಯಜ್ಞಭಾವಿತಾಃ ।
> ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥ (೩-೧೨)

“ಯಜ್ಞಗಳಿಂದ ತೃಪ್ತರಾದ ದೇವತೆಗಳು ನಿಮಗೆ ಇಷ್ಟವಾದ ಭೋಗಗಳನ್ನು ಕೊಡುತ್ತಾರೆ.

ಅವರಿಂದ ಕೊಡಲ್ಪಟ್ಟದ್ದನ್ನು ದಾನಧರ್ಮಪರೋಪಕಾರಗಳ ಮೂಲಕ ದೇವತೆಗಳಿಗೇ ಹಿಂತಿರುಗಿಸದೆ ತಾನೊಬ್ಬನೇ ಯಾರು ಊಟಮಾಡುತ್ತಾನೋ ಅವನು ಕಳ್ಳ.” (೧೨)

> ಯಜ್ಞಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ ।
> ಭುಂಜತೇ ತೇ ತ್ವಘಂ ಪಾಪಾ ಯೇ ಪಚನ್ತ್ಯಾತ್ಮಕಾರಣಾತ್ ॥ (೩-೧೩)

“ಯಾರು ಯಜ್ಞಕಾರ್ಯದಿಂದ ತಮ್ಮ ಪಾಲಿಗೆ ಬಂದದ್ದನ್ನು ಯಜ್ಞಶೇಷವೆಂದೂ ಭಗವತ್ಪ್ರಸಾದವೆಂದೂ ಭಾವಿಸಿ ಅನುಭವಿಸುತ್ತಾನೋ ಅವನು ಸಮಸ್ತಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ.”

(ಭಗವತ್ಪ್ರಸಾದವೆಂಬ ಮಾತಿನಲ್ಲಿಯೇ ಅದನ್ನು ಇತರರೊಡನೆ ಹಂಚಿಕೊಂಡು ಅನುಭವಿಸತಕ್ಕದ್ದೆಂಬ ತತ್ತ್ವ ಅಡಗಿಕೊಂಡಿದೆ. ಇದು ಇಲ್ಲಿಯೇ ಮುಂದೆ ಸ್ಪಷ್ಟಪಡುತ್ತದೆ.) "ಯಾರು ಹಾಗೆ ತನಗೆ ದೊರೆತದ್ದನ್ನು ಇತರರೊಡನೆ ಹಂಚಿಕೊಳ್ಳದೆ ತಾನೊಬ್ಬನೇ ತಿಂದುಕೊಳ್ಳುತ್ತಾನೋ ಅವನು ತಿಂದದ್ದು ಪಾಪವನ್ನು. ಅವನು ತನ್ನೊಬ್ಬನ ಹೊಟ್ಟೆಗಾಗಿ ಅನ್ನ ಬೇಯಿಸಿಕೊಳ್ಳುವವನು." (೧೩)

ಈಗ ಜೀವಚಕ್ರ :

> ಅನ್ನಾದ್ಭವನ್ತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
> ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ (೩-೧೪)

"ಪ್ರಪಂಚದ ಸಮಸ್ತ ಜೀವಿಗಳೂ ಅನ್ನದಿಂದ ಉಂಟಾಗುತ್ತವೆ. ಅನ್ನವೇ ಜೀವನದ ಮೂಲ. ಆ ಅನ್ನವಾದರೋ ಪರ್ಜನ್ಯದೇವತೆಯಿಂದ (ಮಳೆಯಿಂದ) ಪರ್ಜನ್ಯಕೃಪೆಯಾದರೋ ಯಜ್ಞದಿಂದ, ಎಂದರೆ ಭಗವದಾರಾಧನೆಯಿಂದ.

ಆರಾಧನೆಯಾದರೋ ಅನೇಕ ಲೌಕಿಕ ವೈದಿಕ ಕಾರ್ಯಗಳ ರೂಪವಾದದ್ದು." (೧೪)

> ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಮ್ ।
> ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್ ॥ (೩-೧೫)

"ಆ ಕರ್ಮವಾದರೋ ಮೂಲದಲ್ಲಿ ಬ್ರಹ್ಮಪ್ರೇರಿತವಾದದ್ದು. (ಯಜ್ಞಪ್ರೇರಣೆ ಸೃಷ್ಟ್ಯಾದಿಯಿಂದಲೇ ಮನುಷ್ಯನಿಗೆ ಬಂದದ್ದೆಂದು ಮೇಲೆ ನೋಡಿದೆ.)

ಬ್ರಹ್ಮವಾದರೋ (ಇಲ್ಲಿ ಬ್ರಹ್ಮವೆಂದರೆ ವೇದ ಎಂದರ್ಥ) ಶಾಶ್ವತವಾದ ಪರಬ್ರಹ್ಮವಸ್ತುವಿನಿಂದ ಉಂಟಾದದ್ದು.

ಪರಬ್ರಹ್ಮಚೈತನ್ಯವಾದರೋ ಎಲ್ಲೆಲ್ಲೂ ಇರತಕ್ಕದ್ದು. ಹೀಗಿರುವುದರಿಂದ ಬ್ರಹ್ಮವಸ್ತುವು ಯಜ್ಞಕ್ರಿಯೆಯಲ್ಲಿ ನೆಲಸಿರುತ್ತದೆ." (೧೫)

ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥ (೩-೧೬)

"ಹೀಗೆ ತಿರುಗುತ್ತಿರತಕ್ಕದ್ದು ಜೀವನಚಕ್ರ. ಈ ಜೀವನಚಕ್ರವನ್ನು ಎಂದರೆ ಅನ್ನೋತ್ಪತ್ತಿ ಮೊದಲುಗೊಂಡು ದೇವತಾರಾಧನದ್ವಾರಾ ಪರಬ್ರಹ್ಮಸಂದರ್ಶನದವರೆಗಿನ ಜಗಜ್ಜೀವನ ಚಕ್ರವನ್ನು ಲೋಕದಲ್ಲಿ ಯಾರು ಅನುಸರಿಸುವುದಿಲ್ಲವೋ—ಅರ್ಥಾತ್ ಯಾರು ಅದಕ್ಕೆ ಅವಿಧೇಯನಾಗಿರುತ್ತಾನೋ ಅವನ ಬದುಕು ನಿರರ್ಥಕ."

ಈ ಎಂಟು ಶ್ಲೋಕಗಳಲ್ಲಿ ಗೀತೆಯು ಸಾಮಾನ್ಯ ಜನಕ್ಕೆ ಉದ್ದೇಶಿಸಿರುವ ಉಪದೇಶದ ಸಾರವೆಲ್ಲ ಅಡಗಿದೆಯೆಂದು ಹೇಳಬಹುದು. ಈ ಉಪದೇಶದ ಮುಖ್ಯಾಂಶಗಳನ್ನು ಜ್ಞಾಪಕದಲ್ಲಿರಿಸಿಕೊಳ್ಳೋಣ:

1. ಜಗತ್ತು ತುಚ್ಛವಾದದ್ದಲ್ಲ. ಬ್ರಹ್ಮನಿರ್ಮಿತವಾದದ್ದು. ಆದದ್ದರಿಂದ ಅದಕ್ಕೆ ನಮ್ಮ ಭಕ್ತಿ ಗೌರವಗಳು ಸಲ್ಲುತ್ತವೆ.
2. ಜಗದ್ಯಂತ್ರವನ್ನು ಸಂಚಲನ ಮಾಡಿಸುತ್ತಿರುವ ಪ್ರಕೃತಿಶಕ್ತಿಗಳೇ ದೇವತೆ—ಇಂದ್ರ, ಅಗ್ನಿ, ವರುಣ, ವಾಯು, ಸೂರ್ಯ, ಪೃಥ್ವೀ, ಚಂದ್ರ, ಪರ್ಜನ್ಯ ಮೊದಲಾದವು.
3. ಈ ನಾನಾ ದೇವತೆಗಳನ್ನು ಪೂಜಿಸುವುದೇ ಯಜ್ಞ. ಆ ಪೂಜೆಯು ಮೂರು ಭಾವಗಳನ್ನೊಳಗೊಂಡಿದೆ: (i) ಅನುವರ್ತನೆ ಅಥವಾ ವಿಧೇಯತೆ, (ii) ಪ್ರಸಾದ ಸ್ವೀಕಾರ, (iii) ಲೋಕವಿತರಣೆ.
4. ಅನುವರ್ತನೆಯೆಂದರೆ ಪ್ರಕೃತಿನಿಯಮಗಳನ್ನು ಅರಿತುಕೊಂಡು ಅವುಗಳನ್ನು ಅನುಸರಿಸಿ ನಡೆಯುವುದು. ಪ್ರಕೃತಿವಿರೋಧವಾದದ್ದನ್ನು ಪ್ರಯತ್ನಿಸತಕ್ಕದ್ದಲ್ಲ. ಮೈಯ ಕೂದಲು ಸ್ವಾಭಾವಿಕವಾಗಿ ಇಳಿಮುಖವಾಗಿರುತ್ತದೆ. ಅದೇ ಅನುಲೋಮ. ಅದನ್ನು ಮೇಲಕ್ಕೆತ್ತಿ ನಿಲ್ಲಿಸುವ ಪ್ರಯತ್ನ ಪ್ರಕೃತಿವಿರುದ್ಧವಾದದ್ದು. ಅದನ್ನೇ ಪ್ರತಿಲೋಮವೆನ್ನುವುದು.
5. ಪ್ರಕೃತಿಯಿಂದ, ಎಂದರೆ ಜಗಚ್ಛಕ್ತಿಗಳ ಕಾರ್ಯದಿಂದ ನಮಗೆ ಏನು ಫಲಿಸಿ ಬರುತ್ತದೆಯೋ ಅದು ಎಂಥಾದ್ದಾದರಾಗಲಿ, ಅದನ್ನು ದೇವತಾನುಗ್ರಹವೆಂದು ಭಾವಿಸಿ ಸಮಾಧಾನದಿಂದ ಅಂಗೀಕರಿಸುವುದು. "ಇದನ್ನು ನಾನು ಸಂಪಾದಿಸಿದೆ", "ಇದು ನನ್ನ

ಬುದ್ಧಿಸಾಮರ್ಥ್ಯದ ಫಲ", "ಇದು ನನ್ನ ಸ್ವಾರ್ಜಿತ" —ಎಂದುಕೊಳ್ಳಬಾರದು. "ಇದು ನನ್ನ ಯತ್ನವಲ್ಲ, ಮೇಲಿನಿಂದ ಬಂದ ವರ" —ಎಂದುಕೊಳ್ಳಬೇಕು.

6. ತನಗೆ ಬಂದದ್ದನ್ನು ಲೋಕದ ಜನರ ಪ್ರಯೋಜನಕ್ಕಾಗಿ ಹಂಚಬೇಕು. ತಪೋಯಜ್ಞದಾನಗಳೆಂಬ ಮೂರು ಪುಣ್ಯಗಳೂ ನಮ್ಮ ಜೀವನಕರ್ಮದಲ್ಲಿ ಅಡಗಿವೆ. ಇದು ಪ್ರತಿಯೊಬ್ಬರಿಗೂ ಸಾಧ್ಯವಿರುವ ಅನುಸಂಧಾನ. ಭಗವಂತನ ಮಹಿಮೆಯನ್ನು ಅಂಗೀಕರಿಸಿ ಸ್ವಾಹಂಕಾರವನ್ನು ವರ್ಜಿಸುವುದೇ ತಪಸ್ಸು. ಜಗಚ್ಛಕ್ತಿಗಳನ್ನು ಉಪಯೋಗಿಸಿಕೊಂಡು ಲೋಕಕಾರ್ಯಗಳನ್ನು ನಡಸುವುದೇ ಯಜ್ಞ. ('ಪುರುಷಸೂಕ್ತ' ನೋಡಿರಿ.) ಕಾರ್ಯಫಲಿತಾಂಶವನ್ನು ತನ್ನೊಬ್ಬನ ಊಟಕ್ಕಾಗಿರಿಸಿಕೊಳ್ಳದೆ ಸುತ್ತಮುತ್ತಣವರಿಗೆ ಹಂಚಿ ಅವರ ಸಂತೋಷದಲ್ಲಿ ತಾನು ಬೆರೆತು ಸಂತೋಷಿಸುವುದೇ ದಾನ.

ಹೀಗೆ ತಪೋಯಜ್ಞದಾನರೂಪವಾದ ಲೋಕಜೀವನವನ್ನು ನಡಸುವವನು ಮೋಕ್ಷಕ್ಕಾಗಿ ಚಿಂತಿಸಬೇಕಾದದ್ದೇ ಇಲ್ಲ. ಅದು ಅವನಿಗೆ ಸಿದ್ಧವಾಗಿಯೇ ಇರುತ್ತದೆ. ಅವನು ಇಂಥ ಭಗವದರ್ಪಿತವಾದ ಜೀವನನೀತಿಯ ಅಭ್ಯಾಸದಿಂದ ಲೋಕದ ಕಾಮಕ್ರೋಧಾದಿ ದ್ವಂದ್ವಗಳ ಮೆಟ್ಟಲಿನಿಂದ ಮೇಲಕ್ಕೆ ಹತ್ತಿ ಕ್ರಮೇಣ ಜಗದ್ಭೋಗಕ್ಕಿಂತ ಮೇಲಣ ದಶೆಯೊಂದು ಉಂಟೆಂಬುದನ್ನು ಕಂಡುಕೊಂಡು ಆ ಪರಮಾತ್ಮಪದವಿಯನ್ನು ಕಾಣಲರ್ಹನಾಗಿರುತ್ತಾನೆ. ಬಳಿಕ ಕರ್ಮಬಂಧದಿಂದ ಬಿಡುಗಡೆ.

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥ (೩-೧೭)

"ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ" ("ಸಹಯಜ್ಞೈಃ" ಎಂದೂ ಒಂದು ಪಾಠವಿರುವಂತೆ ತೋರುತ್ತದೆ): ಈ ಶ್ಲೋಕದ ಮೇಲಣ ಪೂರ್ವಾಚಾರ್ಯಭಾಷ್ಯಗಳ ಅಂತರ್ಭಾವಗಳನ್ನು ಸ್ವಲ್ಪ ವಿಸ್ತರಿಸಿ ಪುಷ್ಟೀಕರಿಸುವುದು ಅವಶ್ಯವೆಂದು ತೋರುತ್ತದೆ.

1. ಇದರಲ್ಲಿ ದೇಶ ಜಾತಿ ಕುಲ ಭೇದಗಳ ಪ್ರಸಕ್ತಿ ಇಲ್ಲವೆಂಬುದನ್ನು ನೋಡಬೇಕು. "ಪ್ರಜಾಃ ಸೃಷ್ಟ್ವಾ" ಎಂಬ ಮಾತುಗಳಿಂದ ಇದು ಎಲ್ಲ ಮಾನವಲೋಕವನ್ನೂ

ಉದ್ದೇಶಿಸಿದೆಯೆಂಬುದು ಸ್ಪಷ್ಟವಾಗುತ್ತದೆ. ವರ್ಣಾಶ್ರಮಭೇದಗಣನೆಯಿಲ್ಲದೆ ಸಮಸ್ತ ಮನುಷ್ಯ ಲೋಕಕ್ಕೂ ಅನ್ವಯಿಸಬೇಕಾದ ಉಪದೇಶ ಇದು.

2. "ಮನುಷ್ಯನ ಸ್ವಭಾವರಚನೆಯಲ್ಲಿಯೇ ಯಜ್ಞಪ್ರಕೃತಿ ಒಂದಂಗವಾಗಿ ಸೇರಿಕೊಂಡಿದೆ. ಅದು ಮನುಷ್ಯನೊಳಕ್ಕೆ ಹೊರಗಿನಿಂದ ಬಂದದ್ದಲ್ಲ. ಪರಕೀಯ ಪ್ರೇರಣೆಯಿಂದ ಉಂಟಾದದ್ದಲ್ಲ. ಮನುಷ್ಯತ್ವದ ಒಂದು ಅಂತರ್ಲಕ್ಷಣ ಯಜ್ಞಪ್ರವೃತ್ತಿ.
3. ಯಜ್ಞವೆಂದರೆ ಪೂಜೆ. ಪೂಜಾಕ್ರಿಯೆಯ ಒಂದು ಮುಖ್ಯಾಂಶ ನೈವೇದ್ಯ ಅಥವಾ ಬಲಿಪ್ರದಾನ; ಅದೇ ಆಹುತಿ ಅಥವಾ ಹವಿರ್ಭಾಗ; ಅದೇ ಕಾಣಿಕೆ ಅಥವಾ ಮುಡುಪು. "ಯಜ್ಞ" ಶಬ್ದವನ್ನು ಇಂಗ್ಲಿಷಿಗೆ "ಸ್ಯಾಕ್ರಿಫೈಸ್ (sacrifice) ಎಂದು ಭಾಷಾಂತರಿಸುವುದು ರೂಢಿ. "ಸ್ಯಾಕ್ರಿಫೈಸ್" ಮಾತಿನ ತಾತ್ಪರ್ಯವೂ ಮೊದಲು ಪವಿತ್ರವಸ್ತುವಿನ ವಿಷಯದಲ್ಲಿ ನಡೆದುಕೊಳ್ಳುವುದು—ಅರ್ಥಾತ್ ಪೂಜೆ ಎಂದಾರಂಭಿಸಿ ಬಲಿ ಸಲ್ಲಿಸುವುದು ಎಂದು ಪ್ರಚಾರದಲ್ಲಿದೆ. ತನ್ನದಾದದ್ದನ್ನು ಒಂದು ಪೂಜ್ಯ ವಸ್ತುವಿಗಾಗಿ ಬಿಟ್ಟುಕೊಡುವುದು—ಸ್ವತ್ವವನ್ನು ಪೂಜಾಭಾವದಿಂದ ವರ್ಜಿಸುವುದು—ಯಜ್ಞ.
4. ಮನುಷ್ಯನು ಸೃಷ್ಟಿಯಿಂದಲೇ ಯಜ್ಞಸಹಿತನಾಗಿ ಬಂದಿದ್ದಾನೆ—ಎಂದಲ್ಲವೆ ಮೇಲಣ ಶ್ಲೋಕದ ಅರ್ಥ? ಹಾಗೆಂದರೇನು? ಸ್ವತ್ವವರ್ಜನೆ ಅವನಿಗೆ ಸ್ವಾಭಾವಿಕವಾಗಿ ಬಂದಿದೆ ಎಂದು ತಾನೆ? ಅದು ವಾಸ್ತವವೋ? ನಮ್ಮ ಅನುಭವದಲ್ಲಿ ಹಾಗೆ ತೋರುವುದಿಲ್ಲ. ಮನುಷ್ಯನು ಸಹಜವಾಗಿ ಸ್ವಾರ್ಥಿ. ಸ್ವಾರ್ಥವರ್ಜನೆ ಅವನಿಗೆ ಸಹಜವೆನಿಸುವುದಿಲ್ಲ—ಸಾಮಾನ್ಯವಾಗಿ. (ಮುಂದೆ ೭ ನೆಯ ಖಂಡವನ್ನು ನೋಡಿರಿ).
5. ಅನುಭವವನ್ನು ಇನ್ನೂ ವಿಸ್ತಾರವಾಗಿ, ಇನ್ನೂ ಆಳವಾಗಿ ನೋಡೋಣ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಯಾವುದೋ ಒಂದು ವಿಷಯದಲ್ಲಾದರೂ ಕೊಂಚ ಉದಾರತೆಯಿರುತ್ತದೆ. ಎಂಥ ಲೋಭಿಯಾದವನೂ ತನ್ನ ಮಡದಿಮಕ್ಕಳ ವಿಷಯದಲ್ಲಾದರೂ—ಒಂದೊಂದು ಸಾರಿಯಾದರೂ, ಒಂದೊಂದು ಕ್ಷಣವಾದರೂ—ಕನಿಕರ ಪಡುತ್ತಾನೆ. ಸ್ವಾರ್ಥಸಾಧನೆಗಾಗಿಯಾದರೂ ಅವನ ಕೈ ಕೊಂಚ ಸಡಿಲುತ್ತದೆ; ಮತ್ತೊಬ್ಬರನ್ನು ಹತ್ತಿರಕ್ಕೆ ಕರೆದುಕೊಳ್ಳುತ್ತಾನೆ. ಅದೇ ಸ್ವಾರ್ಥವರ್ಜನೆಯ ಬೀಜ. ದಾನವೂ ಯಜ್ಞವೂ ಸತ್ತ್ವಗುಣದ ಕಾರ್ಯಗಳು. ಸತ್ತ್ವಾಂಶ ಕೊಂಚವಾದರೂ ಇಲ್ಲದ ಮನುಷ್ಯನಿಲ್ಲ. ಹೇಗೆ ಸತ್ತ್ವಪರಿಪೂರ್ಣನು ಲೋಕದಲ್ಲಿಲ್ಲವೋ ಹಾಗೆಯೇ ಸತ್ತ್ವಪರಿಶೂನ್ಯನೂ ಇಲ್ಲ. ಕೆಲವರಲ್ಲಿ ಸತ್ತ್ವಗುಣವೂ ಯಜ್ಞಪ್ರವೃತ್ತಿಯೂ ಬಹು

ಸ್ವಲ್ಪಾಂಶದಲ್ಲಿರುತ್ತವೆ; ಬಹು ಮಂದವಾಗಿರುತ್ತವೆ. ಲೋಕಸಂಪರ್ಕದಿಂದ ಅವು ಕ್ರಮೇಣ ಅಭಿವರ್ಧಿಸಿ ತೀವ್ರವಾಗುತ್ತವೆ. ಕಾಮವು ಪ್ರೇಮವಾಗುತ್ತದೆ; ಪ್ರೇಮವು ಮಮತೆಯಾಗುತ್ತದೆ; ಮಮತೆಯು ಸಹಭಾಗಿತೆಯಾಗುತ್ತದೆ; ಸಹಭಾಗಿತೆಯು ಸ್ವಾರ್ಥವರ್ಜನೆಯನ್ನು ಯತ್ಕಿಂಚಿತ್ತಾದರೂ ಅಭ್ಯಾಸಕ್ಕೆ ತರುತ್ತದೆ. ಇದು ಲೋಕಸಂಸರ್ಗದಿಂದ ಆದ ನೀತಿಶಿಕ್ಷಣ. ಈ ಶಿಕ್ಷಣವು ಸಾಧ್ಯವಾಗುವುದು ಮನುಷ್ಯನ ಒಳಗಡೆ ಸತ್ತ್ವಾಣುವಿರುವುದರಿಂದ. ಸತ್ತ್ವಾಣುವಿನ ಅಂಕುರವೇ ಯಜ್ಞಪ್ರವೃತ್ತಿ. ಮ್ಯಾತ್ಯು ಆರ್ನಾಲ್ಡನ ಅಭಿಪ್ರಾಯವು ಇದಕ್ಕೆ ಸಮೀಪದಲ್ಲಿದೆ... the enduring Power, not ourselves, which makes for righteousness (*Literature and Dogma*).

6. ಮೊದಮೊದಲು ಸಹಜಸ್ವಾರ್ಥವೇ ಅನ್ಯಸಹಾಯವನ್ನು ಅಪೇಕ್ಷಿಸುತ್ತದೆ. ಅನ್ಯ ಸಹಾಯ ಅಷ್ಟಿಷ್ಟಾದರೂ ಇಲ್ಲದೆ ಯಾರಿಗೂ ಜೀವನ ಸಾಧ್ಯವಿಲ್ಲ. ವಾಸ್ತವವನ್ನು ವಿಚಾರಮಾಡಿದರೆ ಏಕಾಕಿಜೀವನ ಪೂರ್ಣ ಜೀವನವಲ್ಲ. ಯಾವ ಮನುಷ್ಯನೂ ಸಂಪೂರ್ಣ ಸ್ವತಂತ್ರನಲ್ಲ. ಪ್ರತಿಯೊಬ್ಬನೂ ಪರಾವಲಂಬಿಯೇ. ಹೀಗೆ ಮನುಷ್ಯರು ಅನ್ಯೋನ್ಯಾವಶ್ಯಕರಾದ್ದರಿಂದಲೇ ಅವರು ಕುಲ ಸಮಾಜ ರಾಜ್ಯಗಳನ್ನು ಕಟ್ಟಿಕೊಂಡಿದ್ದಾರೆ. ಪ್ಲೇಟೋ ತತ್ತ್ವಜ್ಞನ ಅಭಿಪ್ರಾಯ ಕೂಡ ಹೀಗೆಯೇ. ಹೀಗೆ ಮನುಷ್ಯರ ಅನ್ಯೋನ್ಯಾವಶ್ಯಕತೆ ಸ್ವಭಾವಸಿದ್ಧವಾದ ಪರಿಸ್ಥಿತಿ.
7. ಯಜ್ಞಬೀಜವು ಮನುಷ್ಯರಲ್ಲಿ ಪ್ರಕೃತಿಸಿದ್ಧವಾಗಿದ್ದರೂ ಅದು ಬಹುಮಟ್ಟಿಗೆ ನಿದ್ರಿಸುತ್ತಿರುತ್ತದೆಂಬುದು ನಮಗಿರುವ ಕಷ್ಟ. (ಮೇಲೆ ೫ನೆಯ ಖಂಡವನ್ನು ನೋಡಿರಿ.) ಮುಂದೆ ಹದಿನೈದನೆಯ ಅಧ್ಯಾಯದಲ್ಲಿ ನಾವು ನೋಡಲಾಗುವಂತೆ, ದೈವೀಗುಣ ಆಸುರೀಗುಣಗಳೆರಡೂ ಸ್ವಭಾವದಲ್ಲಿ ಬೆರೆತುಕೊಂಡಿರುತ್ತವೆ : ಸ್ವಾರ್ಥನಿಷ್ಠೆಯೂ ಪರಸ್ನೇಹವೂ ಬೆರೆತಿರುತ್ತವೆ; ಮಮತೆ ನಿರ್ಮಮತಾಂಶಗಳು ಬೆರೆತಿರುತ್ತವೆ. ಈ ಬೆರಕೆಗಳನ್ನು ವಿಂಗಡಿಸಿ ಬಿಡಿಸಿ ಶುದ್ಧವಾದದ್ದನ್ನು ಮೇಲಕ್ಕೆತ್ತಿ ಬಲಪಡಿಸುವುದೇ ಧರ್ಮ ಸಂಸ್ಕಾರಗಳ ಉದ್ದೇಶ. ಧರ್ಮಗಳಲ್ಲಿ ಮೊದಲನೆಯದು ಇದು : ಪರಸಹಕಾರಬುದ್ಧಿ—ಪರಹಿತಚಿಂತನೆಯ ಬುದ್ಧಿ. ಅದು ಸ್ವಹಿತಚಿಂತನೆಯ ಕಾರಣದಿಂದ ಹುಟ್ಟಿದ್ದಾದರೂ ದೋಷವಿಲ್ಲ. ತನಗಿಂತ ಬೇರೊಬ್ಬರಿದ್ದಾರೆ, ಅವರ ಸ್ನೇಹ ತನಗೆ ಒಳ್ಳೆಯದು ಎಂದಿಷ್ಟು ಜ್ಞಾನೋದಯವಾದರೆ ಸಾಕು. ಆ ತಿಳಿವಳಿಕೆಯು ಇನ್ನೂ ಬೇಕಾಗಿರುವ ಮುಂದಿನ ನೀತಿಶಿಕ್ಷಣಕ್ಕೆ ದಾರಿ ಮಾಡುತ್ತದೆ. ಮನುಷ್ಯನು ಅಹಂಕಾರದಿಂದ ಮಮಕಾರಕ್ಕೆ

ಸಾಗಿದಾಗ—ತಾನು ಎಂಬ ಕೇಂದ್ರದಿಂದ ತನ್ನವರು ಎಂಬಷ್ಟು ವಿಸ್ತಾರಪಟ್ಟಾಗ—ನೀತಿ ಪ್ರಗತಿ ಮೊದಲಾಯಿತು ಎಂದುಕೊಳ್ಳಬಹುದು. ತನ್ನವರು ಎಂಬುದರಿಂದ ಎಲ್ಲರೂ ತನ್ನವರು ಎಂಬುದು ಎರಡನೆಯ ಹೆಜ್ಜೆ. ಹೀಗೆ ಸ್ವಾಭಾವಿಕವಾದ ಆತ್ಮಪ್ರೀತಿ ಆತ್ಮಾಭಿಮಾನಗಳೇ ಸೃಷ್ಟಿವ್ಯವಸ್ಥಾಪ್ರಭಾವದಿಂದ ಅನ್ಯಸ್ನೇಹವನ್ನು ಬಯಸಿ, ನಮಗೆ ಸ್ವಾರ್ಥವರ್ಜನೆಯ ಅಭ್ಯಾಸವಾಗುತ್ತದೆ.

8. "ಪರಸ್ಪರಂ ಭಾವಯನ್ತಃ" : ಇದೇ ಸ್ವಾಮಿ ಉಪದೇಶಿಸುವ ಲೋಕ ಜೀವನಸೂತ್ರ. ಅದೇ ಲೋಕಮೈತ್ರಿ. ಅದು ಒಂದು ಯಜ್ಞ—ಎಂದರೆ ಸ್ವಾರ್ಥಾಹುತಿ ಹೋಮ. ಅದರ ಒಂದು ಪ್ರಾಥಮಿಕ ರೂಪವೇ ಕುಟುಂಬಬಾಂಧವ್ಯ. ಗಂಡನು ಹೆಂಡತಿಯ ಸುಖಕ್ಕಾಗಿ ಸ್ವಸುಖವನ್ನು ಒಂದಿಷ್ಟು ತ್ಯಾಗಮಾಡಬೇಕು; ಹೆಂಡತಿ ಗಂಡನ ಸುಖಕ್ಕಾಗಿ ಸ್ವಸುಖವನ್ನು ಒಂದಿಷ್ಟು ತ್ಯಾಗಮಾಡಬೇಕು. ಈ ಉಭಯತ್ಯಾಗವೇ ಯಜ್ಞ. ಅದಾದಾಗಲೇ ದಾಂಪತ್ಯದ ಪ್ರೇಮಾಭಿವೃದ್ಧಿ. ಪ್ರೇಮವೆಂದರೆಯೇ ಸ್ವತ್ಯಾಗ ಸಿದ್ಧತೆ. ಇಂಥಾ ಅಹಂತಾಹುತಿರೂಪವಾದ ಯಜ್ಞವಿಲ್ಲದೆ ಕುಟುಂಬವಿಲ್ಲ, ಸ್ನೇಹವಿಲ್ಲ, ಸಮಾಜವಿಲ್ಲ, ಯಾವ ಮಾನವಬಾಂಧವ್ಯವೂ ಇಲ್ಲ.
9. ಮಮತಾರಸವು ಮನೆ, ಬಂಧುವರ್ಗ, ಸಮಾಜ, ಜನಪದ—ಈ ದೊಡ್ಡ ದೊಡ್ಡ ಮಂಡಲಗಳಲ್ಲಿ ಹರಡಿದಂತೆಲ್ಲ ಅದು ಆಳ ಹೋಗಿ ತೆಳುವಾಗುತ್ತದೆ. ಹಾಗೆ ಅಹಂತೆ ತೆಳುವಾದಂತೆಲ್ಲ ಆತ್ಮೌಪಮ್ಯದ ಸರ್ವತ್ರಾಭ್ಯಾಸ ಹೆಚ್ಚುತ್ತದೆ. ಆತ್ಮೌಪಮ್ಯ ಅಭ್ಯಾಸಕ್ಕೆ ಬಂದಂತೆಲ್ಲ ಸಾರ್ವಾತ್ಮ್ಯಾನುಭವ ವಿಸ್ತರಿಸುತ್ತದೆ. ಮಮತೆಯು ತನಗೆ ಜಗದ್ವ್ಯಾಮೋಹವಿಟ್ಟಿರುವ ಮಿತಿಮೇರೆಗಳನ್ನು ಹೊಡೆದು ಕೊಚ್ಚಿಕೊಂಡು ಹರಿದು ಪರಮಾತ್ಮಸಾಗರದಲ್ಲಿ ಸೇರಿಕೊಂಡಾಗ ಮೋಕ್ಷಲಾಭ.

"ದೇವತೆಗಳನ್ನು ಪೂಜೆಯಿಂದ ತೃಪ್ತಿಪಡಿಸಿದರೆ ಅವರು ಮಳೆಬೆಳೆಗಳನ್ನು ಕೊಡುತ್ತಾರೆ".

ಈ ವಾಕ್ಯಕ್ಕೆ ಅಪಾರ್ಥಮಾಡುವುದು ಸುಲಭ. ಪೂಜೆಮಾಡದಿದ್ದರೆ ಮಳೆಬೆಳೆಗಳು ನಿಂತುಹೋಗುತ್ತವೋ? ಮಳೆಬೆಳೆಗಳು ಪುರುಷಾಧೀನವೋ? ಹಾಗಾದರೆ ಪ್ರಕೃತಿಗಿಂತ ಮನುಷ್ಯ ಬಲಿಷ್ಠನೆಂದಾಯಿತಷ್ಟೆ? ಇದು ವಿತಂಡವಾದ. ತಂದೆ ತುಂಟ ಮಗನನ್ನು ಕುರಿತು "ನೀನು ಚೆನ್ನಾಗಿ ಓದಬೇಕು, ರಿಸ್ಟ್‌ವಾಚ್ ತೆಗೆದುಕೊಡುತ್ತೇನೆ. ಅಮ್ಮ ಹೇಳಿದಹಾಗೆ ಕೇಳಬೇಕು, ಒಳ್ಳೆಯ ತಿಂಡಿ ಕೊಡುತ್ತಾಳೆ" ಎಂದು ಹೇಳಿದರೆ ಅದರ ಅಭಿಪ್ರಾಯವೇನು?

ಪಾಸಾಗದಿದ್ದರೆ ಮನೆಯಿಂದ ಓಡಿಸಿಬಿಡುತ್ತಾನೆ, ಮಗನಿಗೆ ಅನ್ನ ಹಾಕುವುದಿಲ್ಲ ಎಂದು ಅರ್ಥವೆ? ತಂದೆ ಹಾಗಾಡುವುದೂ ಮಗನು ಹೀಗಾಡುವುದೂ ನಮ್ಮೆಲ್ಲರ ನಿತ್ಯದ ಅನುಭವದಲ್ಲಿದೆ. ಮಗನು ಪೋಲಿಪೋಲಿಯಾಗಿದ್ದುಕೊಂಡು ಪರೀಕ್ಷೆಯಲ್ಲಿ ಫೇಲಾಗುತ್ತಿದ್ದರೂ ತಾಯಿ ತಂದೆಯರು ಅವನನ್ನು "ಮರಳಿ ಯತ್ನವ ಮಾಡು" ಎನ್ನುತ್ತಾರೆ. ಭಗವಂತನು ಹೇಳಿರುವ ಮಳೆಬೆಳೆಗಳ ವಾಗ್ದಾನವೂ ಇಷ್ಟಭೋಗಗಳ ವಾಗ್ದಾನವೂ ವಿಧಿವಾಕ್ಯಗಳಲ್ಲ, ಪ್ರರೋಚನೆಗಳು, ಪ್ರೋತ್ಸಾಹನಗಳು. ಅದು ವ್ಯಷ್ಟಿಗೆ ಮಾಡಿದ ಉಪದೇಶ. ಒಬ್ಬ ವ್ಯಕ್ತಿಯೋ ಸಾವಿರಮಂದಿ ವ್ಯಕ್ತಿಗಳೋ ಯಜ್ಞಪೂಜನೆಗಳನ್ನು ಮಾಡಲಿಲ್ಲವೆಂಬ ಕಾರಣದಿಂದ ಸಕಲ ಜಗಜ್ಜಂತುಗಳಿಗೂ ಸಲ್ಲಬೇಕಾದ ಮಳೆ ಬೆಳೆಗಳನ್ನು ಪ್ರಕೃತಿ ನಿಲ್ಲಿಸುವವಳಲ್ಲ.

"ಪರಸ್ಪರಂ ಭಾವಯನ್ತಃ" ಎಂಬಲ್ಲಿ ಉಪದೇಶಿಸಿರುವ ಪರಸ್ಪರಾನುಕೂಲ್ಯವು ಮನುಷ್ಯರಿಗೂ ದೇವತೆಗಳಿಗೂ ನಡುವೆ ಇರಬೇಕಾದದ್ದೆಂದು ಸದ್ಯಕ್ಕೆ ತೋರಿದರೂ ಆ ಪರಸ್ಪರ ಹಿತಚಿಂತನೆಯ ನೀತಿ ಮನುಷ್ಯನಿಗೂ ಇತರ ಪ್ರಾಣಿವರ್ಗಕ್ಕೂ ನಡುವೆಯೂ ಇರತಕ್ಕದ್ದೆಂಬುದನ್ನು ನಾವು ಗ್ರಹಿಸಬೇಕು.

ಹಾಗೆಯೇ ಆ ನೀತಿಯು ಮನುಷ್ಯರಲ್ಲಿಯೇ ಅನ್ಯೋನ್ಯವಾಗಿರಬೇಕಾದದ್ದು ಎಂಬುದು ಸ್ಪಷ್ಟವಾಗಿದೆ.

ಪರಸ್ಪರಾನುಕೂಲತೆಯ ನೀತಿಯು ಸಮಸ್ತ ಪ್ರಪಂಚಕ್ಕೂ ಅನ್ವಯಿಸಬೇಕಾದದ್ದು. ಅದರ ಮೂಲಸೂತ್ರವೇನು?

> ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
> ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥ (೬-೨೯)

ಇದಕ್ಕೆ ಪ್ರೇರಕವಾದ ಪ್ರವೃತ್ತಿ—ಸೋದರ ಪ್ರವೃತ್ತಿ—ಎಲ್ಲರಲ್ಲಿಯೂ ಅಲ್ಪ ಸ್ವಲ್ಪ ಸಹಜವಾಗಿರುತ್ತದೆ. "ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ". ಒಳ್ಳೆಯತನ ಎಲ್ಲರಲ್ಲಿಯೂ ಅಷ್ಟಿಷ್ಟು ಇರುತ್ತದೆ; ಆದರೆ ಅವಿತುಕೊಂಡಿರುತ್ತದೆ. ಒಳಗಡೆ ಎಲ್ಲೋ ಆಳದಲ್ಲಿರುತ್ತದೆ. ಅದನ್ನೆತ್ತಿ ಮೇಲಕ್ಕೆ ತರಬೇಕು. ಅದು ಶಾಸ್ತ್ರಸಂಪ್ರದಾಯಗಳ ಪ್ರಯತ್ನ.

ಯಜ್ಞವು ಸಮಸ್ತಲೋಕಕ್ಕೂ ಹಿತವನ್ನುಂಟುಮಾಡುವ ಕಾರ್ಯ. ಅದು ಪೂಜಾರೂಪವಾಗಿಯೂ ಸ್ವಾರ್ಥತ್ಯಾಗರೂಪದಲ್ಲಿಯೂ ಲೋಕಹಿತಾರ್ಥವಾಗಿಯೂ ಮಾಡಿದ ಕರ್ಮ.

ದೇವ-ಮಾನವರುಗಳ ಪರಸ್ಪರ ಸಹಕಾರದಿಂದಲೇ ಜಗಜ್ಜೀವನ. ತತ್ಪ್ರಯುಕ್ತವಾಗಿ ಯಜ್ಞಕರ್ಮ. ಅಂಥ ಕರ್ಮವೇ ಧರ್ಮ. ಶ್ರುತಿಯ ಮಾತು ಅದು :

ಯಜ್ಞೇನ ಯಜ್ಞಮಯಜನ್ತ ದೇವಾಃ ।
ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ॥

ದೇವತೆಗಳು ಸೃಷ್ಟ್ಯಾದಿಯಲ್ಲಿ ಪಂಚಮಹಾಭೂತಗಳನ್ನು ತತ್ತದ್ವಿಹಿತ ಕರ್ಮಗಳಲ್ಲಿ ವಿನಿಯೋಜಿಸುವುದರ ಮೂಲಕ ಈಶ್ವರನನ್ನಾರಾಧಿಸಿದರು. ಅದೇ ಪ್ರಥಮ ಯಜ್ಞ. ಅದೇ ಧರ್ಮಕ್ಕೆ ಆದಿ. ಸೃಷ್ಟಿಶಕ್ತಿಗಳು ಭಗವನ್ನಿಯಮದಂತೆ ನಡೆಯುವುದೇ, ನಿಯಮವನ್ನು ಉಲ್ಲಂಘಿಸದೆ ವಿಧೇಯರಾಗಿರುವುದೇ ಧರ್ಮ. ಸ್ವವಿಹಿತ ಕರ್ಮಾಚರಣೆಯೇ ಧರ್ಮ. ನಮ್ಮ ಮಹಾಕವಿಗಳು ಇದನ್ನೇ ಪ್ರಶಂಸೆಮಾಡಿದ್ದಾರೆ. ವಾಲ್ಮೀಕಿ ವ್ಯಾಸರುಗಳು ಈ ಅಭಿಪ್ರಾಯವನ್ನು ಗ್ರಹಿಸಿದ್ದಾರೆ. ದೇವತೆಗಳು ಬೇರೆ, ಮನುಷ್ಯರು ಬೇರೆ, ಈ ಲೋಕಕ್ಕೂ ಆ ಲೋಕಕ್ಕೂ ಏನೂ ಸಂಬಂಧವಿಲ್ಲ ಎಂಬುದನ್ನು ಇವರು ಅಂಗೀಕಾರ ಮಾಡಿಲ್ಲ. ದೇವತೆಗಳೂ ಮನುಷ್ಯರೂ ಇತರ ಪ್ರಾಣಿವರ್ಗಗಳೂ ಎಲ್ಲ ಒಂದೇ ಲೋಕ.

ಯತ್ರಂ ವಿಶ್ವಂ ಭವತ್ಯೇಕನೀಡಮ್ ॥

ಇಡೀ ವಿಶ್ವವೇ ಆ ಈಶ್ವರಸನ್ನಿಧಿಯೆಂಬ ಒಂದು ಗೂಡಿನಲ್ಲಿ ಅಡಗಿಕೊಂಡಿದೆ. ಕಾಲಿದಾಸನ ಶಾಕುನ್ತಲದಲ್ಲಿ :

ತವ ಭವತು ಬಿಡೌಜಾಃ
ಪ್ರಾಜ್ಯವೃಷ್ಟಿಃ ಪ್ರಜಾಸು
ತ್ವಮಪಿ ವಿತತಯಜ್ಞೋ
ವಜ್ರಿಣಂ ಪ್ರೀಣಯಸ್ವ ॥

ಧರಣೀನಾಥನೆ ನಿನ್ನದೇಶಗಳೊಳಿಂದ್ರಂ
ಮಾಳ್ಕೆ ಸದ್ವೃಷ್ಟಿಯಂ
ಸುರರಂ ನೀನುಮುದಾರಯಾಗಮುಖದಿಂ
ಸಂತರ್ಪಿಸು... ॥ (ಬಸವಪ್ಪಶಾಸ್ತ್ರಿ)

ಈ ಗೀತೋಪದೇಶದ ಅಂತರ್ಭಾವವನ್ನು ನಾವು ಸಾವಧಾನವಾಗಿ ಗ್ರಹಿಸಬೇಕು. ಜಗತ್ತು ಈಶ್ವರಕಾರ್ಯ. ಈ ಸಂತತವಾದ ಮಹಾಕಾರ್ಯದಲ್ಲಿ ಅನಂತಶಕ್ತಿಗಳು ಸೇರಿವೆ. ಆ ಭಗವಚ್ಛಕ್ತಿಗಳೊಡನೆ ತಾನೂ ಅವುಗಳಲ್ಲೊಂದು ಎಂದು ಸೇರಿಕೊಂಡು ಸಹಕರಿಸುವ ಅವಕಾಶವನ್ನು ಮನುಷ್ಯನಿಗೆ ಈಶ್ವರವ್ಯವಸ್ಥೆ ದೊರಕಿಸಿದೆ. ಅದೇ ಧರ್ಮ. ಆ ಅವಕಾಶವನ್ನುಪಯೋಗಿಸಿಕೊಳ್ಳುವುದು ಸತ್ಕರ್ಮ.

ಕರ್ಮವು ನೀರಿನಂತೆ ಸ್ವತಂತ್ರ ಗುಣವರ್ಣಗಳಿಲ್ಲದ್ದು. ನೀರು ಎಂಥ ನೆಲದಲ್ಲಿ ಹರಿಯುತ್ತದೆಯೋ ಅಂಥ ಬಣ್ಣ ರುಚಿ ವಾಸನೆಗಳನ್ನು ತಾಳುತ್ತದೆ. ಅದರಂತೆಯೇ ಕರ್ಮವು ಕರ್ಮಿಯನ್ನನುಸರಿಸಿ ಪಾಪವಾಗಬಹುದು, ಪುಣ್ಯವಾಗಬಹುದು, ಉಭಯಾತೀತವಾದ ಆತ್ಮೈಕವಿಲಾಸವಾಗಬಹುದು. ಕರ್ಮಿಯ ಭಾವನೆ ಉದಾತ್ತವಾದಂತೆ ಕರ್ಮವು ನಿರ್ಮಲಿನವಾಗುತ್ತದೆ. ಹೇಗಾದರೂ ಕರ್ಮವು ಜಗಜ್ಜೀವನದ ಒಂದಂಶ. ಹಾಗಿರಲಾಗಿ, ಕರ್ಮವು ದೇವತೆಗಳನ್ನು ತೃಪ್ತಿಪಡಿಸುವಂಥಾದ್ದಾದರೆ ಅವರು ಪ್ರತಿಫಲವಾಗಿ ಮಳೆಬೆಳೆಗಳನ್ನು ಕೊಡುತ್ತಾರೆ. ಅದರಿಂದ ಪ್ರಾಣಿಗಳಿಗೆ ಸೌಖ್ಯ ವೈಭವಗಳು.

ಇಲ್ಲಿ ಒಂದು ಪ್ರಶ್ನೆ. ಮನುಷ್ಯ ಮಾಡುವ ಯಜ್ಞಕಾರ್ಯಕ್ಕೂ ಪ್ರಕೃತಿ ಮಾಡಿಸುವ ಮಳೆಬೆಳೆಗಳಿಗೂ ಸಂಬಂಧವೇನು? ಮನುಷ್ಯನು ಕರ್ಮಮಾಡದಿದ್ದರೆ ಪ್ರಕೃತಿಯ ಕೆಲಸ ನಿಂತುಹೋಗುತ್ತದೆಯೆ? ಯಜ್ಞಯಾಗಾದಿ ಸ್ಮರಣೆಯೇ ಇಲ್ಲದ ದೇಶಗಳಲ್ಲಿ ಮಳೆಬೆಳೆಗಳಾಗುತ್ತಿಲ್ಲವೆ? ಇಲ್ಲಿ ಆಲೋಚನೆಗೆ ಬರಬೇಕಾದ ಅಂಶಗಳು ಐದಿವೆ :

1. ಮನುಷ್ಯಪುಣ್ಯಕ್ಕೂ ದೈವಾನುಗ್ರಹಕ್ಕೂ ಸಂಬಂಧವುಂಟೆಂಬ ನಂಬಿಕೆ ಎಲ್ಲ ಮತಗಳಲ್ಲಿಯೂ ಉಂಟು. ಹಾಗೆಯೇ ಮನುಷ್ಯಪಾಪಕ್ಕೂ ದೈವಾಗ್ರಹಕ್ಕೂ ಸಂಬಂಧ ಉಂಟು. ದೈವವು ಆಗ್ರಹಗೊಂಡಾಗ ಪ್ರಕೃತಿಯ ವೈಪರೀತ್ಯ—ಅತಿವೃಷ್ಟಿ, ಅನಾವೃಷ್ಟಿ,

ಭೂಕಂಪ, ಸಾಂಕ್ರಾಮಿಕ ರೋಗ ಇತ್ಯಾದಿ. ಈ ನಂಬಿಕೆ ಇಸ್ಲಾಮ್ ಮತದ ಪವಿತ್ರ ಗ್ರಂಥಗಳಲ್ಲಿಯೂ ಕ್ರೈಸ್ತಮತದ ಸಾಹಿತ್ಯದಲ್ಲಿಯೂ ಕಾಣಬರುತ್ತದೆ.

2. ಇಂಡಿಯ ದೇಶದಿಂದ ಹೊರಗಿರುವ ದೇಶಗಳು, ವೇದಶಾಸ್ತ್ರಗಳನ್ನರಿಯದ ದೇಶಗಳು ಯಜ್ಞಾದಿಗಳಿಲ್ಲದೆಯೇ ಮಳೆಬೆಳೆಗಳನ್ನು ಪಡೆಯುತ್ತಿವೆ ಎಂಬ ಮಾತನ್ನು ಕೂಡ ಹಾಗೆಯೇ ಒಪ್ಪತಕ್ಕದ್ದಲ್ಲ. ಯಜ್ಞವೆಂದರೆ ದೇವತಾಪೂಜೆ. ಆ ವಿಶಾಲಾರ್ಥದಲ್ಲಿ ಯಜ್ಞ ಮಾಡದ ಜನಾಂಗವೇ ಇಲ್ಲ. ಆಫ್ರಿಕಾ ಖಂಡದ ಅನಾಗರಿಕ ಜನಾಂಗಗಳಲ್ಲಿ ಕೂಡ ದೇವರೆಂಬ ಒಂದು ನಂಬಿಕೆಯೂ ದೇವತಾಗ್ರಹದ ಭಯವೂ ದೇವತಾನುಗ್ರಹ ಶ್ರದ್ಧೆಯೂ ದೃಢವಾಗಿ ಉಂಟು. ಬಹುಶಃ ನಾಗರಿಕ ಜನದಲ್ಲಿರುವುದಕ್ಕಿಂತ ಅವರಲ್ಲಿ ಅದು ಪ್ರಬಲವಾಗಿದೆ. ಮತವಿಲ್ಲದ ಮನುಷ್ಯನಿಲ್ಲ; ಯಜ್ಞವಿಲ್ಲದ ಮತವಿಲ್ಲ. ಆದದ್ದರಿಂದ ಯಜ್ಞಕ್ಕೂ ಮಳೆಬೆಳೆಗಳಿಗೂ ಸಂಬಂಧವಿಲ್ಲವೆಂಬ ವಾದವು ವೇದೇತರ ಮತಗಳ ಉದಾಹರಣೆಯಿಂದ ಸಿದ್ಧವಾಗುವುದಿಲ್ಲ.

3. ಮನುಷ್ಯಕರ್ಮಕ್ಕೂ ಪ್ರಕೃತಿವರ್ತನೆಗೂ ಕಾರಣಕಾರ್ಯಸಂಬಂಧವುಂಟೆನ್ನಲು ಪ್ರಮಾಣಕೊಡುವುದು ಎಷ್ಟು ಕಷ್ಟವೋ ಅದಿಲ್ಲವೆನ್ನಲು ಪ್ರಮಾಣಕೊಡುವುದೂ ಅಷ್ಟೇ ಕಷ್ಟ. ಜನ್ಮಾಂತರ ಲೋಕಾಂತರ ಪ್ರಾಪ್ತಿಗಳ ಮಾತೂ ಹಾಗೆಯೇ. ಪುನರ್ಜನ್ಮ ಪರಲೋಕಗಳುಂಟೆಂದರೆ ಪುಣ್ಯಪಾಪಗಳಿಗೂ ಸುವೃಷ್ಟಿ ಅನಾವೃಷ್ಟಿಗಳಿಗೂ ಸಂಬಂಧ ಉಂಟು. As in the physical world, so in the world of the spirit, nothing ever goes without producing results–results of one kind or of another kind ನಾವು ಪ್ರಾಚೀನಕರ್ಮ ಎಂಬುದನ್ನು ನಂಬುತ್ತೇವೆ, ಜನ್ಮಾಂತರ ಎಂಬುದನ್ನು ನಂಬುತ್ತೇವೆ, ಭವಿಷ್ಯತ್ತುಂಟು ಎಂಬುದನ್ನು ನಂಬುತ್ತೇವೆ. ಆದದ್ದರಿಂದ ಮನುಷ್ಯನ ಕರ್ಮಕ್ಕೂ ದೈವಿಕ ವ್ಯಾಪಾರಕ್ಕೂ ಸಂಬಂಧ ಉಂಟೇ ಉಂಟು ಎಂಬುದನ್ನು ನಾವು ನಂಬುತ್ತೇವೆ.

4. ಪ್ರಕೃತಿಚರ್ಯೆಯು ಮನುಷ್ಯಚರ್ಯೆಗೆ ಪ್ರತ್ಯುತ್ತರವಲ್ಲವೆಂದಾದರೆ ಪ್ರಕೃತಿಯ ಯಾವುದಾದರೊಂದು ಚರ್ಯೆಗೆ ಕಾರಣವನ್ನೇನೆಂದು ಹೇಳಬಹುದು? ಪ್ರಕೃತಿಯು ನಿಯಮವಾವುದೂ ಇಲ್ಲದ್ದೆ? ಅದು ಯಾದೃಚ್ಛಿಕವೆ? ಉನ್ಮತ್ತ ಸಂಭ್ರಮವೆ? ಸೂರ್ಯಗತಿ ಚಂದ್ರಗತಿ ಭೂಗತಿ—ಈ ಪ್ರಕೃತಿಕಾರ್ಯಗಳನ್ನು ನೋಡಿದರೆ ಹಾಗೆನ್ನಿಸುವುದಿಲ್ಲ. ಅಲ್ಲಿ ನಿಯತಿ ಕಾಣುತ್ತದೆ. ಪ್ರಕೃತಿಕಾರ್ಯದಲ್ಲಿ ಋತುಸೂತ್ರದ ಕ್ರಮಕ್ಕೆ ವ್ಯಾಪ್ತಿಯುಂಟೆಂದು ಆಗಲೇ ನೋಡಿದ್ದೇವೆ. ಹಾಗೆಂದಮೇಲೆ, ಅಕಾರಣ

ಘಟನೆಗಳು ಹೇಗಾಗುತ್ತವೆ? ಎಲ್ಲ ಕಾರ್ಯಕ್ಕೂ ಕಾರಣವುಂಟು. ಆ ಕಾರಣಗಳಲ್ಲಿ ಒಂದಂಶ ಮನುಷ್ಯರ ಕರ್ಮಾಕರ್ಮವೆಂದು ನಾವು ಊಹಿಸುತ್ತೇವೆ. ಪ್ರಕೃತಿಯು ಈಶ್ವರನಿಯಾಮಕದಂತೆ ನಡೆಯತಕ್ಕದ್ದು. ಕರ್ಮಕ್ಕೆ ತಕ್ಕ ಫಲವೆಂಬುದು ಈಶ್ವರ ನಿಯಮ.

5. ಜಗತ್ತು ಒಂದು ಅಖಂಡವಾದ ಮಹಾಯಂತ್ರ. ದೇವತೆಗಳೂ ಮನುಷ್ಯರೂ ತಿರ್ಯಗ್ಜಂತುಗಳೂ ಜಡವಸ್ತುಗಳೂ ಸಹ ಆ ಯಂತ್ರದ ಚಕ್ರಗಳು, ಕೀಲುಗಳು, ಹಿಡಿಕೆಗಳು, ಸಲಾಕಿಗಳು, ಬಿಗಿಪಟ್ಟಿಗಳು. ಇವುಗಳಲ್ಲಿ ಪ್ರತಿಯೊಂದೂ ತನ್ನತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದರಲ್ಲವೆ ಒಟ್ಟು ಯಂತ್ರ ಸಾಗುವುದು? ಮೋಟಾರು ಗಾಡಿಯಲ್ಲಿ ಮಡ್‌ಗಾರ್ಡ್ ಎಂಬ ಕೆಸರುಕಾಪಿಗೆ ಒಂದು ಕಂಬ ತಗುಲಿ ಅದರ ಒಂದು ಮೊಳೆ ಸಡಲಿದರೆ, ಕೂಡಲೆ ಅದನ್ನು ಗಟ್ಟಿಮಾಡಬೇಕು. ಅದು ಸಡಲಿ ಹಾಗೆಯೇ ಇದ್ದರೆ ಅದರಿಂದ ಕಟಕಟ ಶಬ್ದವಾಗಿ, ಆ ಶಬ್ದದ ಸ್ಪಂದಿತಗಳು ಕ್ರಮೇಣ ಗಾಡಿಯ ಇತರ ಭಾಗಗಳಿಗೆ ತಗುಲಿ, ಕೊಂಚ ದಿನದಲ್ಲಿ ಗಾಡಿಯೊಟ್ಟೂ ಸಡಲಿ ಕೆಲಸ ಮಾಡದೆ ನಿಂತೀತು. ಪ್ರಪಂಚಯಂತ್ರದಲ್ಲಿಯೂ ಹಾಗೆಯೇ. ಮನುಷ್ಯ ಈಹೊತ್ತು ಮಾಡಿದ ಲೋಪ ನಾಳೆ ದೇವತೆಗಳೆಂಬ ಪ್ರಕೃತಿಶಕ್ತಿಗಳನ್ನು ಮುಟ್ಟಿ ಮುನಿಯಿಸುತ್ತದೆ. ಮನುಷ್ಯನು ಜಗದ್ಯಂತ್ರದಿಂದ ಬೇರೆಯಾಗಿಲ್ಲ. ಯಂತ್ರಕ್ಕಾದದ್ದೆಲ್ಲ ಅವನಿಗಾಗುತ್ತದೆ; ಅವನು ಮಾಡಿದ್ದೆಲ್ಲ ಯಂತ್ರಕ್ಕೂ ತಗಲುತ್ತದೆ. ಹೀಗೆ ದೇವತೆಗಳೂ ಮನುಷ್ಯರೂ ಒಂದೇ ಯಂತ್ರದ ಅವಯವಗಳು.

ಈ ವಿಚಾರದ ಇನ್ನು ಕೆಲವಂಶಗಳನ್ನು ಬೇರೆ ಕಡೆ ಪ್ರಸ್ತಾವಿಸಿದೆ.

ದೇವತೆಗಳೆಂದರೇನು? ತ್ರಿಶೂಲ ಹಿಡಿದವರು, ದೊಣ್ಣೆ ಹಿಡಿದವರು, ಹಗ್ಗ ಹಿಡಿದವರು, ಚಕ್ರ ಹಿಡಿದವರು—ಹೀಗೆ ನಾನಾ ಚಿತ್ರಗಳು ಮನಸ್ಸಿನಲ್ಲೇಳಬಹುದು. ಆ ಚಿತ್ರಗಳ ಪ್ರಯೋಜನ ಬೇರೆ ಕಡೆ ಉಂಟು; ಅವು ಧ್ಯಾನಸಹಾಯಗಳು. ಶಾಸ್ತ್ರ ಜಿಜ್ಞಾಸೆ ಮಾಡುವಾಗ ದೇವತೆಗಳೆಂದರೆ ಸೃಷ್ಟಿಶಕ್ತಿಗಳು—ಪ್ರಕೃತಿಯ ಮೂಲಶಕ್ತಿಗಳು, ನಾನಾ ವಿಧದ ಮಹಾಶಕ್ತಿಗಳು. ಈ ಅಮಾನುಷ ಶಕ್ತಿಗಳಿಗೂ ಮನುಷ್ಯನಿಗೂ ಇರುವ ಸಂಬಂಧ ಅಪ್ರತ್ಯಕ್ಷವಾಗಿರಬಹುದು. ಅದು ಅಪ್ರತ್ಯಕ್ಷವಾದದ್ದರಿಂದ ಇಲ್ಲವೆನ್ನುವ ಹಾಗಿಲ್ಲ.

ಬೆಂಗಳೂರಿನಲ್ಲಿರುವ ನಮಗೆಲ್ಲ ಚೈನಾದೇಶ ಅಪ್ರತ್ಯಕ್ಷವಾಗಿದೆ. ಆದರೆ ಅದಿಲ್ಲವೊ? ಅದಿದೆ ಎಂಬ ವಿಚಾರದಲ್ಲಿ ನಮಗೆ ಸಂದೇಹವೇ ಇಲ್ಲ.

ಭೂಲೋಕ ದೇವಲೋಕಗಳು ಅನ್ಯೋನ್ಯ ಪರಿಣಾಮಕಾರಿಗಳೆಂಬ ಜಗದ್ಬಾಂಧವ್ಯವನ್ನು ಸ್ವಾಮಿ ಸಾರಿ, ನಮ್ಮ ಕಾಲದ ಸೋಷಲಿಸ್ಮ್ (ಸಮಾಜಾಧಿಕಾರವಾದ), ಕಮ್ಯೂನಿಸ್ಮ್ (ಸಮಷ್ಟಿಸಾಮ್ಯವಾದ) ಎಂಬ ವಾದಗಳಿಗಿಂತ ವಿಸ್ತಾರವಾದ ನೀತಿಯನ್ನು ಎತ್ತಿ ತೋರಿಸಿದ್ದಾನೆ :

> ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥

“ದೇವತೆಗಳು ತನಗೆ ಕೊಟ್ಟಿದ್ದನ್ನು ಯಾರು ದೇವತಾಪ್ರೀತ್ಯರ್ಥವಾಗಿ ಇತರರಿಗೆ ಹಂಚಿಕೊಡದೆ ತಾನೊಬ್ಬನೆ ತಿನ್ನುತ್ತಾನೋ ಅವನು ಕಳ್ಳನೇ ಸರಿ.”

> ಯಜ್ಞಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ ।
> ಭುಂಜತೇ ತೇ ತ್ವಘಂ ಪಾಪಾ ಯೇ ಪಚನ್ತ್ಯಾತ್ಮಕಾರಣಾತ್ ॥

“ತನ್ನ ಸಂಪಾದನೆಯಲ್ಲಿ ದೈವಪ್ರೀತ್ಯರ್ಥವಾಗಿ ಇತರರಿಗೆ ಭಾಗ ಕೊಡುವುದು ಯಜ್ಞ. ಆ ಯಜ್ಞಮಾಡಿ ಮಿಕ್ಕದ್ದನ್ನು ದೈವಪ್ರಸಾದವೆಂದು ಊಟ ಮಾಡುವವನು ಸತ್ಪುರುಷ. ಹಾಗೆ ಮಾಡದೆ ತನ್ನೊಬ್ಬನಿಗಾಗಿಯೇ ಅಡಿಗೆ ಮಾಡಿಸಿದವನು ತಿನ್ನುವ ಅನ್ನ ಪಾಪ.”

“ಆದದ್ದರಿಂದಲೇ ನಮ್ಮಲ್ಲಿ ವೈಶ್ವದೇವ ಬಲಿಹರಣ ಭೂತಬಲಿ ಮೊದಲಾದ ದೈವ ನೈವೇದ್ಯಸಂಪ್ರದಾಯಗಳು ಪೂರ್ವದಿಂದ ಬಂದಿವೆ. ಯಾರಾದರೂ ಅತಿಥಿಗಳು ಸಹ ಪಂಕ್ತಿಯಲ್ಲಿಲ್ಲದೆ ಊಟಮಾಡತಕ್ಕದ್ದಲ್ಲವೆಂಬ ನಿಯಮದ ಭಾವವೂ ಅದೇ. ಆ ಉದ್ದೇಶದಿಂದಲೇ ವೇದ ಸಾರುತ್ತದೆ: “ಕೇವಲಾಘೋ ಭವತಿ ಕೇವಲಾದೀ”.

ದೇವರಿಗೆ ನೈವೇದ್ಯ, ಅತಿಥಿಸತ್ಕಾರ—ಇವೂ ಯಜ್ಞಗಳೇ.

ಇದೇ ಸಂಸೃಷ್ಟಿಜೀವನದ ನೀತಿ. ಇದೇ ಆತ್ಮವಿಕಾಸದ ಮಾರ್ಗ.

ಸಂಸೃಷ್ಟಂ ಧನವಮುಭಯ್ ।
ಸಮಾಕೃತಮಸ್ಮಭ್ಯಮ್ ॥

ಋಗ್ವೇದದ ಕಾಲದಿಂದ ಮಹರ್ಷಿಗಳು ಸಾರಿರುವ ಆತ್ಮಭಾವವಿಸ್ತರಣಮಾರ್ಗವನ್ನೇ ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ್ದು. ಈಶೋಪನಿಷತ್ತು ಹೇಳುತ್ತದೆ :

ತೇನ ತ್ಯಕ್ತೇನ ಭುಂಜೀಥಾಃ ॥

ಎಲ್ಲ ಸಂಪತ್ತೂ ಈಶ್ವರನದು. ಅವನ ಪ್ರಸಾದವೆಂದು ನೀನು ಲೋಕವನ್ನು ಅನುಭವಿಸು.

ನನಗೆ ಚೆನ್ನಾಗಿ ತಿಳಿದ ಒಂದಾನೊಂದು ಕುಟುಂಬದಲ್ಲಿ ನಡೆಯುತ್ತಿದ್ದ ಒಂದು ಮನಃಸ್ಪರ್ಶಿಯಾದ ಸಂಗತಿಯನ್ನು ಇಲ್ಲಿ ಹೇಳಬೇಕೆನಿಸುತ್ತದೆ. ಆ ಕುಟುಂಬದ ಯಜಮಾನ ತಕ್ಕಮಟ್ಟಿಗೆ ಅನುಕೂಲಸ್ಥ, ಸರಕಾರದ ಚಾಕರಿಯಲ್ಲಿ ನಾನೂರು ಐನೂರು ರೂಪಾಯಿ ಸಂಬಳ ತೆಗೆಯುತ್ತಿದ್ದವನು. ಆತನ ಹೆಂಡತಿ ಆ ಮನೆಯ ಯಜಮಾನತಿ. ಆಕೆ ಮನೆಯ ಜನರೆಲ್ಲರಿಗೂ, ಆಳುಗಳಿಗೂ ಸಹ ಊಟವಾದ ಮೇಲೆ ತಾನು ಊಟಕ್ಕೆ ಕುಳಿತುಕೊಳ್ಳುತ್ತಿದ್ದಳು. ಹಾಗೆ ಕುಳಿತುಕೊಂಡಾಗ ತನ್ನ ಊಟದೆಲೆಯಲ್ಲಿ ತನಗೆ ಬೇಕಾದ ಪದಾರ್ಥಗಳನ್ನೆಲ್ಲ ಬಡಿಸಿಕೊಂಡು ಮಿಕ್ಕ ಪದಾರ್ಥಗಳನ್ನೆಲ್ಲ ಬೇರೆಯಿಟ್ಟು ತನ್ನ ಎಲೆಯಲ್ಲಿದ್ದದ್ದನ್ನು, ಅನ್ನ, ತುಪ್ಪ, ಪಲ್ಯ, ಭಕ್ಷ್ಯವೇನಾದರೂ ಇದ್ದರೆ ಅದು—ಇದನ್ನೆಲ್ಲ ತನ್ನ ಒಂದು ಕೈ ಬೊಗಸೆಯ ತುಂಬ ತುಂಬಿಕೊಂಡು ತಲೆಬಾಗಿಲಿಗೆ ಬಂದು ನಿಲ್ಲುತ್ತಿದ್ದಳು. ಆ ಹೊತ್ತನ್ನು ಕಂಡುಕೊಂಡಿದ್ದ ತಿರುಪೆಗಾರರು ಅಲ್ಲಿಗೆ ಬಂದು ಆಕೆಯ ಕೈಯಿಂದ ಆಕೆಯ ಭಕ್ಷ್ಯವನ್ನು ತೆಗೆದುಕೊಂಡು ಹೋಗುತ್ತಿದ್ದರು. ಇದು ಸಾಮಾನ್ಯವಾದ ವಾಡಿಕೆ. ಒಂದು ದಿನ ಆಕೆಯ ಮಗನು ಆಕೆಯನ್ನು ಕುರಿತು ಅದರ ಅರ್ಥವೇನೆಂದು ಕೇಳಿದ. ಆಕೆ ಅದು ತಾನು ಮಾಡಲಾಗುವ ದಾನವೆಂದು ಹೇಳಿದಳು. ಆ ಹುಡುಗ “ಇದು ಯಾಕೆ ಈ ದಾನ? ಅಪ್ಪ ಬೇಕಾದಷ್ಟು ದುಡ್ಡು ಕೊಟ್ಟಿದ್ದಾನಲ್ಲ? ಆತ ದಾನಮಾಡುತ್ತಾನಲ್ಲ?” ಎಂದು ಕೇಳಿದ. ಆಕೆ ಹೇಳಿದಳು: “ನಿಮ್ಮಪ್ಪ ಹಣ ಕೊಡುವುದು ಒಟ್ಟು ಸಂಸಾರಕ್ಕಾಗಿ. ಅವರು ಮಾಡುವ ದಾನಗಳು ಅವರ ಸ್ವಂತ ಸಂಪಾದನೆಯಿಂದ. ನಾನು ಮಾಡುವ ಸಂಪಾದನೆ ಏನಿದ್ದರೂ ನಾನು ಮಾಡಿದ ಅಡಿಗೆಯಿಂದ. ನನ್ನ ದುಡಿತದಿಂದ ನನ್ನ ಊಟ ಸಂಪಾದಿಸಿಕೊಂಡು, ಆ ನನ್ನ ಊಟದಲ್ಲಿ ಇನ್ನೊಬ್ಬರಿಗೆ ಭಾಗವಿಟ್ಟರೆ ಅದು ನಾನು ಮಾಡುವ ಪುಣ್ಯವಾದೀತು.

ನಿಮ್ಮಪ್ಪನ ಹಣವನ್ನೂ ನಿನ್ನ ಹಣವನ್ನೂ ನಾನು ದಾನಮಾಡಿದರೆ ಏನು ಬಂತು? ಅದರಲ್ಲಿ ನನ್ನ ತ್ಯಾಗವಿಲ್ಲ. ತ್ಯಾಗವಿಲ್ಲದ ದಾನ ಬರಿಯ ಹೆಸರಿನದು."

ಜಗದ್ಬಾಂಧವ್ಯಧರ್ಮದ ಕಾರಣದಿಂದ ಕರ್ಮ ಎಲ್ಲರಿಗೂ ಯುಕ್ತವಾಗುತ್ತದೆ.

ಎಲ್ಲರಿಗೂ ಎಂದರೆ ಆತ್ಮಸಾಕ್ಷಾತ್ಕಾರವಾದವರಿಗೂ ಸಹ ಎಂದು ಅಭಿಪ್ರಾಯವೆ? ಹೌದು. ೧೭ನೆಯ ಶ್ಲೋಕದ "ತಸ್ಯ ಕಾರ್ಯಂ ನ ವಿದ್ಯತೇ" ಎಂಬಷ್ಟನ್ನು ನೋಡಿ ಗ್ರಂಥ ಮುಚ್ಚುವವರು ಆತ್ಮಜ್ಞಾನಿಗೆ ಕರ್ಮವಿಲ್ಲ ಎಂದುಕೊಳ್ಳಬಹುದು. ಅದು ಭ್ರಾಂತಿ, ಏಕೆಂದರೆ ಆ ಶ್ಲೋಕದಲ್ಲಿ ಆರಂಭವಾದ ವಾಕ್ಯ ಮುಗಿಯುವುದು ೧೯ನೆಯ ಶ್ಲೋಕದಲ್ಲಿ:

> ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ॥

ಆತ್ಮಜ್ಞಾನಿಯಾದವನಿಗೆ ಸ್ವಪ್ರಯೋಜನಾಪೇಕ್ಷೆ ಇಲ್ಲ, ಅಷ್ಟೆ. ಲೋಕಪ್ರಯೋಜನಕ್ಕೋಸ್ಕರ, ಫಲಾಸಕ್ತಿ ಇಲ್ಲದೆ, ಕರ್ಮಮಾಡುತ್ತಾನೆ ಅವನು; ಅನ್ಯನಿರ್ಬಂಧದಿಂದಲ್ಲ. ಭಗವಂತನು ಎಲ್ಲೆಲ್ಲೂ "ಕಾರ್ಯಂ ಕರ್ಮ", "ನಿಯತಂ ಕರ್ಮ" ಎಂದೇ ಹೇಳುತ್ತಾನೆ. "ನಿನಗೆ ಯಾವುದು ಕರ್ತವ್ಯವೋ ಅದನ್ನು ಮಾಡು." ದಾನ ಮಾಡು ಎಂದೇನೋ ಹೇಳಿದ್ದುಂಟು; ಸಾಲಮಾಡಿ ಮಾಡಬೇಕೆಂದು ತಾತ್ಪರ್ಯವಲ್ಲ. ಕದ್ದು ದಾನ ಮಾಡಬೇಕಾದದ್ದಿಲ್ಲ. ಕುಟುಂಬಭರಣ ಮೊದಲಾದ ಧರ್ಮಗಳನ್ನು ಸ್ವಕರ್ಮ ಫಲಿತದಿಂದ ನಡಸಬೇಕು.

ಆತ್ಮಾನುಭವಿಗೆ ಯಾವ ಸ್ವಾರ್ಥಾಪೇಕ್ಷೆಯೂ ಯಾವ ಕಾರ್ಪಣ್ಯವೂ ಇರದು. ಅಂಥವನು ಮಾಡಿದ ಕರ್ಮ ಪಾಪರಹಿತವಾಗಿ ಲೋಕಹಿತಕರವಾಗುತ್ತದೆ. ಅಂಥವನೇ ಜಗತ್ಕರ್ಮಕ್ಕೆ ಸಂಪೂರ್ಣಾಧಿಕಾರಿ. ಯಾರ ವಿಷಯದಲ್ಲಿ "ತಸ್ಯ ಕಾರ್ಯಂ ನ ವಿದ್ಯತೇ" ಎಂದು ಹೇಳಿದ್ದಾರೋ, ಯಾರು ಯಾವ ನಿರ್ಬಂಧವೂ ಇಲ್ಲದೆ, ಯಾವ ಸ್ವಾಭಿಲಾಷೆಯೂ ಇಲ್ಲದೆ, ಸಾರ್ವಾತ್ಮ್ಯದೃಷ್ಟಿಯಿಂದ ಸ್ವತಃ ಕರ್ಮ ಮಾಡುತ್ತಾನೋ ಅವನ ಕರ್ಮವೇ ಲೋಕಹಿತಕರವಾಗತಕ್ಕದ್ದು.

ಕರ್ಮಕ್ಕೆ ಸ್ವಾತ್ಮಶುದ್ಧಿ. ಸ್ವೇಷ್ಟಲಾಭ ಈ ಎರಡು ಪ್ರಯೋಜನಗಳಷ್ಟೆ? ಆತ್ಮಜ್ಞಾನಿಗೆ ಈ ಎರಡೂ ಬೇಕಿಲ್ಲ. ಸತ್ತ್ವಶುದ್ಧಿ ಅವನಿಗೆ ಆಗಿಯೇ ಇದೆ; ಇತರ ಲಾಭ ಬೇಕಾಗಿಲ್ಲ. ಹಾಗಾದರೆ ಅವನು

ಏಕೆ ಕರ್ಮ ಮಾಡುತ್ತಾನೆ? ಲೋಕಸಂಗ್ರಹಕ್ಕೋಸ್ಕರ ಎಂದು ಭಗವಂತನ ಉತ್ತರ. ಲೋಕಸಂಸ್ಥಿತಿ ಅವನಿಗೆ ಸೇರಿದ್ದು. ಇದನ್ನೇ ವಿದ್ಯಾರಣ್ಯಸ್ವಾಮಿಗಳು ಹೇಳಿರುವುದು :

> ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿಲೌಕಿಕಮ್ ॥

ಪ್ಲೇಟೊ ಅಭಿಪ್ರಾಯವೂ ಇದೇ. ರಾಜ್ಯಕಾರ್ಯ ಬಹುಮಂದಿಗೆ ಸಂಬಂಧಪಟ್ಟದ್ದು; ಆದದ್ದರಿಂದ ಅದಕ್ಕೆ ಕೈಹಾಕಬೇಕಾದವನು ಸ್ವಾರ್ಥಿಯಾಗಿರಬಾರದು. ಭೀಷ್ಮರು ಹೇಳುವುದೂ ಇದನ್ನೇ ಭಾರತದಲ್ಲಿ: ನಿನಗೇನೋ ಸ್ವರ್ಗ ಬೇಡ, ರಾಜ್ಯ ಬೇಡ, ಭೋಗ ಬೇಡ ಎಂದೆಲ್ಲ ಹೇಳಬಹುದು. ಆದರೆ ಲೋಕಸಂದರ್ಭವನ್ನೂ ನೋಡಬೇಕಲ್ಲ? ನೀನು ಯಾವ ಮನೆಯಲ್ಲಿದ್ದೀಯೋ ಅದರ ಯಜಮಾನನನ್ನು ಸಂತೋಷಪಡಿಸುವುದಕ್ಕೋಸ್ಕರ ಕರ್ಮಮಾಡು.

ಇನ್ನೊಂದು ವಿಚಾರ. ನಿನಗಿಂತ ಹಿಂದೆ, ನಿನಗಿಂತ ದೊಡ್ಡವರಾದ ಜ್ಞಾನಿಗಳು ಕರ್ಮಮಾಡಿದ್ದಾರೆ: ಜನಕಾದಿಗಳು.

> ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
> ಲೋಕಸಂಗ್ರಹಮೇವಾಪಿ ಸಂಪಶ್ಯನ್ಕರ್ತುಮರ್ಹಸಿ ॥

ಎಷ್ಟೋ ಮಂದಿ ಋಷಿಗಳು ತಮ್ಮಲ್ಲಿ ಬ್ರಹ್ಮವಿದ್ಯೆ ಕಲಿಯಬೇಕೆಂದು ಯಾರಾದರೂ ಬಂದರೆ ಅವರನ್ನು ಜನಕನ ಬಳಿಗೆ ಕಳುಹಿಸುತ್ತಿದ್ದರು. ಅಂಥ ಪರಮಜ್ಞಾನಿ ಜನಕ. ಜನಕನ ಕಥೆ ಅನೇಕಕಡೆ ಬರುತ್ತದೆ—ಭಾರತದಲ್ಲಿ, ಭಾಗವತದಲ್ಲಿ, ಯೋಗ ವಾಸಿಷ್ಠದಲ್ಲಿ; ಎಲ್ಲಕ್ಕಿಂತ ಹೆಚ್ಚಾಗಿ ಬೃಹದಾರಣ್ಯಕೋಪನಿಷತ್ತಿನಲ್ಲಿ: ಜನಕಯಾಜ್ಞವಲ್ಕ್ಯ ಸಂವಾದ. ಜನಕನು ರಾಜ್ಯವನ್ನು ಬಿಡಲಿಲ್ಲ. ಜನ ಹೇಗೆ ಬದುಕುತ್ತಿದ್ದಾರೆಂಬುದನ್ನು ಸಂತತವಾಗಿ ನೋಡಿ ರಾಜ್ಯವನ್ನಾಳುತ್ತಿದ್ದವನು ಆ ರಾಜರ್ಷಿ. ಅರ್ಜುನ, ಅಂಥ ಜನಕನೇ ಲೋಕಕರ್ಮ ಮಾಡಿದ್ದನೆಂದಮೇಲೆ ನೀನು ಏಕೆ ಮಾಡುವುದಿಲ್ಲವೆನ್ನುತ್ತಿ? ಜನಕ ಹೇಗೆ ಆತನ ಕಾಲದಲ್ಲಿ ಗಣ್ಯಪುರುಷನಾಗಿದ್ದನೋ ಹಾಗೆಯೇ ನೀನೂ ಗಣ್ಯ ಪುರುಷನಾಗಿದ್ದಿ. ದೊಡ್ಡವರ ರೀತಿಯನ್ನು ಸಾಮಾನ್ಯಜನ ಅನುಸರಿಸುತ್ತಾರೆ.

> ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
> ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

ಜನಕನೇನೋ ಈಗ ಅಪ್ರತ್ಯಕ್ಷನಾಗಿದ್ದಾನೆನ್ನೋಣ. ನಾನಿದ್ದೇನಲ್ಲ? ನೀನು ಬಾಲ್ಯದಿಂದ ನನ್ನನ್ನು ನೋಡಿದ್ದಿ. ನಾನು ಮೂಲದಲ್ಲಿ ಎಂಥವನೆಂಬುದು ನಿನಗೆ ಗೊತ್ತಿದೆ. ನನ್ನ ಶಕ್ತಿ ಎಂಥಾದ್ದೆಂದು ಖಾಂಡವದಹನ ಮೊದಲುಗೊಂಡು ಎಷ್ಟೋ ಸಂದರ್ಭಗಳಲ್ಲಿ ನೋಡಿದ್ದಿ. ನಾನು ಏಕೆ ಲೋಕದಲ್ಲಿ ಕರ್ಮ ಮಾಡುತ್ತಿದ್ದೇನೆ? ಯಾರ್ಯಾರು ಏನೇನನ್ನು ಬಯಸಬಹುದೋ ಅದೆಲ್ಲ ನನ್ನ ಸ್ವಾಧೀನದಲ್ಲಿದೆ. ನನಗೇನಾಗಬೇಕಾಗಿದೆ ಇನ್ನು? ಆದರೂ ನಾನು ಕರ್ಮ ಮಾಡುತ್ತಿದ್ದೇನೆ, ಲೋಕ ಚೆನ್ನಾಗಿ ಬಾಳಲೆಂದು. ನಾನು ಕರ್ಮ ಮಾಡದಿದ್ದರೆ ಲೋಕದಲ್ಲಿ ಅವ್ಯವಸ್ಥೆ ಹರಡಿ ಜನತೆ ಕೆಡುತ್ತದೆ. ಅದು ಈ ಹೊತ್ತು ಮಾತ್ರವಲ್ಲ, ಎಂದೆಂದಿಗೂ :

> ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
> ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್ ॥
> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
> ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಹೀಗೆ ನಾನಾಗಿ ಕೆಲಸ ಇಟ್ಟುಕೊಂಡಿದ್ದೇನೆ—ಲೋಕಕ್ಕೋಸ್ಕರ.

ಲೋಕದ ವಿಷಯದಲ್ಲಿ ಭಗವಂತ ಎಂಥಾ ವಾತ್ಸಲ್ಯವನ್ನಿಟ್ಟಿದ್ದಾನೆ! ಇದನ್ನು ನಾವು ಮರೆಯಬಾರದು. ಭಗವದ್ವ್ಯವಸ್ಥೆಯಲ್ಲಿ ನಮ್ಮ ಪಾಲಿಗೆ ಬಂದಿರುವ ಜಾಗದ ಕರ್ತವ್ಯವನ್ನು ನಾವು ಭಗವತ್ಸೇವೆಯೆಂದು ಮಾಡಬೇಕು. ಇದು ನಮ್ಮ ಕಾಲಕ್ಕೆ ಅತ್ಯಂತ ಪ್ರಸಕ್ತವಾದ ಉಪದೇಶ. ನಮ್ಮಲ್ಲಿ ವಿಚಾರಪರರಾದವರಲ್ಲಿ ಬಹುಮಂದಿಯ ದೃಷ್ಟಿಯಲ್ಲಿ ಮೋಕ್ಷಚರ್ಚೆಗೆ ಮೊದಲನೆಯ ಜಾಗ ದೊರೆತು ಲೋಕಕರ್ತವ್ಯಕ್ಕೆ ಎರಡನೆಯ ಜಾಗ ಬಂದಿದೆ.

ಕೃಷ್ಣಕಥಾಸಂದರ್ಭದಲ್ಲಿ (ಭಾಗವತದಲ್ಲಿ) ನಾವು ನೋಡಿದ್ದೇವೆ—ಗೋಪಿಕೆಯರು ಕೇಳಿದ್ದನ್ನು : “ಲೋಕದಲ್ಲಿ ಕೆಲಮಂದಿ ಯಾರು ತಮ್ಮಲ್ಲಿ ಪ್ರೀತಿ ಮಾಡುತ್ತಾರೋ ಅವರಲ್ಲಿ ಪ್ರತಿಯಾಗಿ ಪ್ರೀತಿ ಮಾಡುತ್ತಾರೆ. ಇನ್ನು ಕೆಲವರು ಪ್ರೀತಿ ಮಾಡದವರನ್ನು ಪ್ರೀತಿ ಮಾಡುತ್ತಾರೆ. ಮತ್ತೆ ಕೆಲವರು ಪ್ರೀತಿ ಮಾಡುವವರನ್ನೂ ಮಾಡದಿರುವವರನ್ನೂ ಎಲ್ಲರನ್ನೂ ಮರೆತುಬಿಡುತ್ತಾರೆ.

ಏನು ಇದರ ಮರ್ಮ?" ಈ ಕಡೆಯ ಪ್ರಶ್ನೆ ಕೃಷ್ಣನನ್ನು ಹಂಗಿಸುವುದಕ್ಕೆಂದು. ಕೃಷ್ಣ ಹೇಳಿದ : "ಯಾರು ಪ್ರೀತಿ ಕೊಡುತ್ತಾರೋ ಅವರಿಗೆ ಮರುಪ್ರೀತಿ ಕೊಡುವುದು ಅಂಗಡಿಯ ವ್ಯಾಪಾರವಾಯಿತು. ಯಾರು ನಮ್ಮನ್ನು ಬಯಸುವುದಿಲ್ಲವೋ ಅವರಲ್ಲಿ ನಾವು ಅನುಗ್ರಹ ಮಾಡಿದರೆ ಅದು ದೊಡ್ಡ ವಿಷಯ."

ಕೇವಲ ಪರಹಿತಕ್ಕಾಗಿ ಮಾಡಿದ ನಿಸ್ವಾರ್ಥಯಜ್ಞವನ್ನು ಪ್ರಶಂಸೆಮಾಡುತ್ತಾನೆ ಸ್ವಾಮಿ. ಪರಮಾತ್ಮಜ್ಞಾನಿಯೂ ಲೌಕಿಕ ಕಾರ್ಯಗಳನ್ನು ಅಲಕ್ಷ್ಯಮಾಡತಕ್ಕದ್ದಲ್ಲ :

> ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವನ್ತಿ ಭಾರತ ।
> ಕುರ್ಯಾದ್ವಿದ್ವಾಂಸ್ತಥಾಽಸಕ್ತಃ ಚಿಕೀರ್ಷುರ್ಲೋಕಸಂಗ್ರಹಮ್ ॥

ಇದು ಕರ್ಮಯೋಗದ ಸಾರಸೂತ್ರ. ಇದನ್ನು ಈ ಗೋಖಲೆ ಸಂಸ್ಥೆಯ ಧ್ಯೇಯಗಳಂತೆ ಧ್ಯೇಯವುಳ್ಳವರು ಸರ್ವದಾ ಜ್ಞಾಪಕದಲ್ಲಿರಿಸಿಕೊಳ್ಳಬೇಕಾದದ್ದು.

> ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
> ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ॥ (೩-೨೮)

ಕರ್ಮವು ಪ್ರತ್ಯಕ್ಷ ವ್ಯಾಪಾರವಾದರೂ ಕರ್ಮಮೂಲವು ಗೂಢವಾದದ್ದು. ಮನುಷ್ಯನ ಅಂತರಂಗವು ಬಹಿರಂಗದ ಮೂಲಕ ಹೊರಕ್ಕೆ ಹರಿದಾಗ ಅದು ಕರ್ಮವೆನಿಸುತ್ತದೆ.

> ಯತ್ಪುರುಷೋ ಮನಸಾಭಿಗಚ್ಛತಿ ।
> ತದ್ವಾಚಾ ವದತಿ ।
> ತತ್ಕರ್ಮಣಾ ಕರೋತಿ ॥

ಆದದ್ದರಿಂದ ಕರ್ಮದ ಫಲಾಫಲಗಳ ಕಾರಣಸ್ಥಾನವು ಮನಸ್ಸು. ಮನಸ್ಸೇ ಕರ್ತ ಅಥವಾ ಕರ್ಮಿ. ಕರ್ಮಿಯಂತೆ ಕರ್ಮ. ಅವನು ಒಳ್ಳೆಯವನಾದರೆ ಅದು ಒಳ್ಳೆಯದು; ಅವನು ಕೆಟ್ಟವನಾದರೆ ಅದು ಕೆಟ್ಟದ್ದು. ಅವನ ಉದ್ದೇಶವು ಯುಕ್ತವಲ್ಲದಿದ್ದರೆ ಅವನ ಕ್ರಿಯಾರೂಪ ಒಳ್ಳೆಯದೆನಿಸಿದರೂ ಅದು ಪುಣ್ಯವಾಗದು. ಅವನ ಉದ್ದೇಶ ಒಳ್ಳೆಯದಾಗಿದ್ದರೆ ಅವನು

ಒಳ್ಳೆಯವನು; ಅಂಥವನು ಮಾಡಿದ್ದು—ಅದರ ಬಹಿರಾಕಾರ ಪ್ರಕಾರಗಳು ಎಂಥವಾದರೂ—ಪುಣ್ಯಕರ್ಮವೇ.

ಹತ್ವಾಽಪಿ ಸ ಇಮಾಂಲ್ಲೋಕಾನ್ ನ ಹನ್ತಿ ನ ನಿಬಧ್ಯತೇ ॥

ಜ್ಞಾನಿಗೂ ಅಜ್ಞಾನಿಗೂ ಏನು ವ್ಯತ್ಯಾಸ? ಇಬ್ಬರೂ ಲೋಕಕ್ಕಾಗಿ ಕೆಲಸ ಮಾಡುತ್ತಲೇ ಇರುತ್ತಾರಷ್ಟೆ? ಎಂದರೆ, ಒಂದು ವಿಶೇಷವುಂಟು. ತತ್ತ್ವಜ್ಞನು ಸ್ವಾರ್ಥಚಿಂತನೆಯಿಲ್ಲದೆ ಲೋಕವ್ಯವಸ್ಥೆಗಾಗಿ ಕೆಲಸ ಮಾಡುತ್ತಾನೆ. ಅಜ್ಞಾನಿಯ ಕೆಲಸದಿಂದ ವ್ಯವಸ್ಥೆ ಅವ್ಯವಸ್ಥೆ ಎರಡೂ ಆಗುತ್ತವೆ. ಏಕೆ ಅವ್ಯವಸ್ಥೆ ಎಂದರೆ, ಇವನಲ್ಲಿ ಅಹಂತೆ ಕೂತಿದೆ; ಫಲಾಸಕ್ತಿಯಿದೆ. ಲೌಕಿಕನು ಎಲ್ಲವನ್ನೂ ತನ್ನ ಪ್ರಯೋಜನದೃಷ್ಟಿಯಿಂದ ಅಳೆಯುತ್ತಾನೆ. ಅಜ್ಞಾನಿಯು ಯಾವ ಕೆಲಸವನ್ನು ಫಲಾಪೇಕ್ಷೆಯಿಂದ ಮಾಡುತ್ತಾನೋ ಅದೇ ಕೆಲಸವನ್ನು ಜ್ಞಾನಿಯು ಫಲಾಪೇಕ್ಷೆಯಿಲ್ಲದೆ ಮಾಡುತ್ತಾನೆ; ಕೆಲಸವೇನೋ ಅದೇ. ಒಬ್ಬನು ಧರ್ಮಸತ್ರವಿಟ್ಟು ಭೋಜನ ಕೊಡುತ್ತಾನೆ; ಇನ್ನೊಬ್ಬನು ಹೋಟಲಿಟ್ಟು ಭೋಜನ ಕೊಡುತ್ತಾನೆ. ಕರ್ಮ ಇಬ್ಬರಿಗೂ ಸಾಮಾನ್ಯವಾದದ್ದು. ಜ್ಞಾನಿ ಮಾಡಲೇಬೇಕೆಂಬ ನಿರ್ಬಂಧವಿಲ್ಲದೆ ಸರ್ವಾತ್ಮೈಕದೃಷ್ಟಿಯಿಂದ ಮಾಡುತ್ತಾನೆ; ಅಜ್ಞಾನಿ ಸ್ವಪ್ರಯೋಜನ ದೃಷ್ಟಿಯಿಂದ ಮಾಡುತ್ತಾನೆ.

ಲೋಕಸಂಗ್ರಹಕ್ಕಾಗಿ ನಾನು ಕೆಲಸ ಮಡುತ್ತಿದ್ದೇನೆ ಎಂದು ಅಜ್ಞಾನಿಯೂ ಅಂದುಕೊಳ್ಳಬಹುದಲ್ಲ? ಅದು ಅಹಂತೆ ತಾನೆ? ಅಷ್ಟರಮಟ್ಟಿಗೆ ಅವನಲ್ಲಿ ಪಾಪ ಬೀಜ ಇದೆಯಲ್ಲವೆ? ಹೀಗೆಂದರೆ ಅದಕ್ಕೆ ಭಗವಂತನ ಉತ್ತರ: “ಯಾರ ಅಂತರಂಗದಲ್ಲಿ ಅಹಂತೆ ಯತ್ಕಿಂಚಿತ್ತಾದರು ಸೇರಿಕೊಂಡಿದೆಯೋ ಅವನನ್ನು ಜ್ಞಾನಿ ಎಂದು ಕರೆಯತಕ್ಕದಲ್ಲ. ಲೌಕಿಕ ವಿಷಯದಲ್ಲಿ ಅವನು ಜ್ಞಾನಿಯೇ; ಆತ್ಮವಿಷಯದಲ್ಲಿ ಅವನು ಜ್ಞಾನಿಯಲ್ಲ ಅಷ್ಟೆ. ಆದರೆ ಇದರಲ್ಲಿ ಒಂದು ಚೋದ್ಯವುಂಟು: ಬಹಿರಂಗದಲ್ಲಿ ಅವನು ಅಹಂಕಾರ ಇರುವವನಂತೆ ತೋರಬಹುದು—ಕರ್ಮದ ಅವಸರದಲ್ಲಿ. ಅಂತರಂಗದಲ್ಲಿ ಅವನು ಕರ್ಮಮಾಡುವುದು ಪ್ರಕೃತಿಯ ಗುಣಗಳು, ತಾನಲ್ಲ ಎಂದೂ ಭಗವತ್ಪ್ರೀತಿಯೇ ತನ್ನ ಸಂತೋಷವೆಂದೂ ಇರಬಹುದು.

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾಽಹಮಿತಿ ಮನ್ಯತೇ ॥

ಮನುಷ್ಯಸ್ವಭಾವದಲ್ಲಿ ಸತ್ತ್ವರಜಸ್ತಮೋಗುಣಗಳು ಸೇರಿಕೊಂಡಿವೆ. ಹಾಗೆಯೇ ಜಗತ್ತಿನ ಸ್ವಭಾವದಲ್ಲಿಯೂ ಸತ್ತ್ವರಜಸ್ತಮೋಗುಣಗಳಿವೆ. ಅವನ ಒಳಗಡೆಯ ಗುಣಗಳೂ ಹೊರಗಡೆಯ ಗುಣಗಳೂ ಒಂದನ್ನೊಂದು ಕೆರಳಿಸುತ್ತವೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಗ್ರಹ—ಅತಿಗ್ರಹ ಎಂದು ಹೇಳಿರುವುದರ ತಾತ್ಪರ್ಯ ಈ ಪರಸ್ಪರೋದ್ರೇಕವೇ.

> ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
> ಗುಣಾ ಗುಣೇಷು ವರ್ತನ್ತ ಇತಿ ಮತ್ವಾ ನ ಸಜ್ಜತೇ ॥

ಗುಣಕರ್ಮಗಳ ಹಂಚಿಕೆಯ ತತ್ತ್ವವನ್ನು ತಿಳಿದಾತನು ಲೋಕದ ಸಮಸ್ತ ವ್ಯವಹಾರಗಳೂ ಜೀವದೊಳಗಣ ಸತ್ತ್ವರಜಸ್ತಮಸ್ಸುಗಳಿಗೂ ಬಾಹ್ಯಜಗತ್ತಿನಲ್ಲಿಯ ಸತ್ತ್ವರಜಸ್ಸು ತಮಸ್ಸುಗಳಿಗೂ ನಡೆಯುವ ಪ್ರಶ್ನೆ–ಪ್ರತ್ಯುತ್ತರಗಳೆಂದೂ ಆತ್ಮವು ಆ ವ್ಯಾಪಾರಕ್ಕೆ ಅಂಟಿದ್ದಲ್ಲವೆಂದೂ ತಿಳಿದು ಹೊರಗಿನವನಂತೆ ಇರುತ್ತಾನೆ, ಅದರಿಂದ ಎಳೆಯಲ್ಪಡದೆ ಇರುತ್ತಾನೆ.

ಜ್ಞಾನಿಯು ಲೋಕಜೀವನವನ್ನು ಪ್ರಕೃತಿಕಾರ್ಯವೆಂದೂ ಆತ್ಮಸಂಬಂಧವಿಲ್ಲದ್ದೆಂದೂ ತಿಳಿದುಕೊಳ್ಳುತ್ತಾನೆ : ನಾಟಕವನ್ನು ನೋಡುತ್ತಿರುವ ಸಹೃದಯನ ಹಾಗೆ. ಲೋಕಜೀವನವನ್ನು ದೂರದಿಂದ ನೋಡಿ ವಿನೋದಪಡತಕ್ಕದ್ದಷ್ಟೇ. ರಂಗದ ಮೇಲೆ ಬಂದವರು ವಿಧವಿಧವಾಗಿ ಚೇಷ್ಟೆ ಮಾಡುತ್ತಾರೆ, ಗೋಳಾಡುತ್ತಾರೆ, ಚೀರುತ್ತಾರೆ; ಇವನು ಅದರಲ್ಲೆಲ್ಲ ಸೇರದೆಯೇ ಬೇರೆ ಇದ್ದುಕೊಂಡು ಅದನ್ನು ನೋಡಿ ಅನುಭವಿಸಿ ಸಂತೋಷಪಡುತ್ತಾನೆ.

ಆತ್ಮಜ್ಞನ ಮನೋವೃತ್ತಿ ಹೀಗೆ :

> ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥

ಪ್ರಕೃತಿ ಏನೇನೋ ಗಮ್ಮತ್ತು ನಡಸುತ್ತಿದ್ದಾಳೆ. ಅದು ಭಗವಂತನ ಲೀಲೆ; ನಮ್ಮ ಹತೋಟಿಗೆ ಸಿಕ್ಕತಕ್ಕದ್ದಲ್ಲ. ಈ ತಿಳಿವಳಿಕೆಯನ್ನು ಸಂತತವಾಗಿ ಇಟ್ಟುಕೊಂಡಿರುತ್ತಾನೆ ಜ್ಞಾನಿ. ಸಾಮಾನ್ಯ ಜನ ಆತ್ಮವನ್ನು ದೇಹ ಮೊದಲಾದ ಉಪಾಧಿಗಳಿಂದ ಬೇರ್ಪಡಿಸುವುದಿಲ್ಲ. ದೇಹವೇ ಜೀವ, ದೇಹವೇ ಆತ್ಮ ಎಂದು ಮುಂತಾಗಿ ಭ್ರಾಂತಿ ಪಡುತ್ತಾರೆ. ದೇಹವು (೧) ಸ್ಥೂಲ, (೨) ಸೂಕ್ಷ್ಮ, (೩) ಲಿಂಗ ಅಥವಾ ಕಾರಣ ಎಂದು ಮೂರಷ್ಟೆ? ಹೊರಗಿನ ದೇಹ, ಮನಸ್ಸು ಮೊದಲಾದವು,

ಪೂರ್ವಜನ್ಮದ ವಾಸನೆಗಳು—ಈ ಮೂರು ದೇಹಗಳೂ ಯಾವವರೆಗೆ ಆತ್ಮವನ್ನು ಸೆರೆಹಿಡಿದಿರುತ್ತವೆಯೋ ಆವರೆಗೆ ಅದು "ಜೀವ" "ಜೀವ" ಎನ್ನಿಸಿಕೊಳ್ಳುತ್ತದೆ. ಜೀವಕ್ಕೆ ಸೇರಬೇಕಾದದ್ದನ್ನು ಆತ್ಮಕ್ಕೂ ಆತ್ಮಕ್ಕೆ ಸೇರಬೇಕಾದದ್ದನ್ನು ಜೀವಕ್ಕೂ ಸೇರಿಸುವ ಅನ್ಯೋನ್ಯ ಭ್ರಾಂತಿಯು ದೇಹಾದಿಪ್ರಕೃತಿಕಾರಣದಿಂದ ನಮ್ಮ ಮನಸ್ಸಿಗುಂಟಾಗುತ್ತದೆ. ಜ್ಞಾನಿ "ಕೃತ್ಸ್ನವಿತ್" : ಎಲ್ಲವನ್ನೂ ತಿಳಿದವನು. ಸಾಮಾನ್ಯ ಜನ ಭ್ರಾಂತಿವಶರಾಗಿರುವುದನ್ನು ಅವನು ನೋಡುತ್ತಾನೆ. ಆದರೆ ಅವರ ದಾರಿಯಿಂದ ಅವರನ್ನು ಬಿಡಿಸಲೆಂದು ಅವನು ದುಡುಕುವುದಿಲ್ಲ. ಯಾರ್ಯಾರಿಗೆ ಬುದ್ಧಿಸಾಮರ್ಥ್ಯ, ನೀತಿಯೋಗ್ಯತೆ, ಎಷ್ಟೆಷ್ಟುಂಟೋ ಅದದಕ್ಕೆ ತಕ್ಕಂತೆ ಅವರವರ ಸಾಧನೆಯಿರುತ್ತದೆ. ಅದರಿಂದ ಅವರನ್ನು ತಪ್ಪಿಸಬಾರದು. ಅವರಿಗೆ ಯುಕ್ತವಾಗಿರುವುದನ್ನು ನಾವು ಬಿಡಿಸಿದರೆ ಅದು ಹೋಗುತ್ತದೆ; ನಮ್ಮ ಉಪದೇಶ ಅವರಿಗೆ ಸಾಧ್ಯವಾಗದೆ, ಒಗ್ಗಿಬಾರದೆ, ಅವರು ಕೆಡುತ್ತಾರೆ. "ಕಾಗೆಯ ನಡಿಗೆ ಮರೆತು ಹೋಯಿತು, ಹಂಸೆಯ ನಡಿಗೆ ಬರಲಿಲ್ಲ" ಎಂಬಂತಾಗಬಾರದು. ಆದದ್ದರಿಂದ ಗೀತೆ ಹೇಳುತ್ತದೆ :

ನ ಬುದ್ಧಿಭೇದಂ ಜನಯೇತ್ ಅಜ್ಞಾನಾಂ ಕರ್ಮಸಂಗಿನಾಮ್ ॥

ಜನ ಅವರ ಸದ್ಯದ ಅಂತಸ್ತಿಗೆ ಏನು ವಿಧಾಯಕವಾಗಿದೆಯೋ ಅದನ್ನು ಮಾಡಿದರೆ ಅದಕ್ಕಿಂತ ಮೇಲಿನ ಅಂತಸ್ತಿಗೆ ತಕ್ಕ ಯೋಗ್ಯತೆ ಆ ಸಾಧನೆಯಿಂದ ಬರುತ್ತದೆ.

ನಮ್ಮ ವೇದಾಂತೋತ್ಸಾಹಿಗಳು ಗಮನಿಸಬೇಕಾದ ಸಂಗತಿ ಇದು. ಪರಮಾರ್ಥ ತತ್ತ್ವವನ್ನು ಸಾಮಾನ್ಯ ಜನರಿಗೆ ಘೋಷಿಸುವುದರಿಂದ ಉಪಕಾರವಾಗುವುದಕ್ಕೆ ಬದಲಾಗಿ ಅಪಕಾರವೇ ಆಗಬಹುದು. ಎಳೆಯ ಮಗುವನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿರುವ ತಂದೆ ಅದಕ್ಕೆ ಚೆನ್ನಾಗಿ ನಡಿಗೆ ಕಲಿಸಬೇಕೆಂದು ತಾನು ಹೋಗುವ ವೇಗದಲ್ಲಿ ಅದನ್ನು ಸೆಳೆದುಕೊಂಡುಹೋದರೆ ಅದಕ್ಕೆ ಇರುವ ಶಕ್ತಿಯೂ ಹೊರಟುಹೋಗುತ್ತದೆ: ಉಸಿರೇ ಹೋದರೂ ಹೋಗಬಹುದು. ಅಧ್ಯಾತ್ಮವಿದ್ಯೆಯಲ್ಲಿಯೂ ಹಾಗೆಯೇ. ಪರಮಾರ್ಥಬೋಧನೆಯ ವಿಷಯದಲ್ಲಿ ಅತಿ ಹೆಚ್ಚಿನ ಅವಸರ ತಕ್ಕದ್ದಲ್ಲ.

ವೇದಾಂತಕ್ಕೆ ಪೂರ್ವಸಿದ್ಧತೆ ಮನಸ್ಸನ್ನು ಹತೋಟಿಯಲ್ಲಿಟ್ಟಿರತಕ್ಕದ್ದು, ಮತ್ತು ಮಾಡುವ ಕೆಲಸದಲ್ಲಿ ಪ್ರಾಮಾಣಿಕನಾಗಿರತಕ್ಕದ್ದು. ಈ ಸಾಮಾನ್ಯ ಲೌಕಿಕ ನೀತಿಗಳನ್ನು ಪರಿಪೋಷಣೆ

ಮಾಡುವುದಕ್ಕೆ ನಾವು ಹೆಚ್ಚಿನ ಗಮನ ಕೊಡಬೇಕು. ತತ್ತ್ವಜಿಜ್ಞಾಸೆ—ದ್ವೈತಮು ಸುಖಮಾ ಅದ್ವೈತಮು ಸುಖಮಾ—ಈ ತಕರಾರುಗಳಲ್ಲಿ ಜನ ಹೆಚ್ಚು ಪ್ರವೃತ್ತರಾಗಿದ್ದಾರೆ ಈಚೆಗೆ. ಅದು ನಿಷ್ಫಲ. ಸಮಸ್ತ ವೇದಾಂತವೂ ಆತ್ಮಪರಿಶುದ್ಧಿಯನ್ನು, ಶಮದಮಾದಿ ಸದ್ಗುಣಗಳನ್ನು ಅಪೇಕ್ಷಿಸುತ್ತದೆ. ಆ ವಿಷಯಕ್ಕೆ ನಾವು ಹೆಚ್ಚು ಗಮನ ಕೊಡಬೇಕು.

***

ಜ್ಞಾನಕರ್ಮಸಂಬಂಧವನ್ನು ಸ್ವಾಮಿ ಸಂಗ್ರಹವಾಗಿ ಹೇಳಿದ್ದಾನೆ. ಸಾಮಾನ್ಯ ಮನುಷ್ಯನಂತೆಯೇ ಜ್ಞಾನಿಯೂ ಕರ್ಮಮಾಡುತ್ತಾನೆ. ಸಾಮಾನ್ಯನು ಕರ್ಮ ಮಾಡುವವನು ತಾನು ಎಂದು ಜೀವದೃಷ್ಟಿಯಿಂದ ತಿಳಿಯುತ್ತಾನೆ. ಜ್ಞಾನಿ ತಾನು ಕರ್ತೃವಲ್ಲ, ಕರ್ತೃ ಪ್ರಕೃತಿ ಎಂದು ತಿಳಿದುಕೊಂಡಿದ್ದಾನೆ. ಇಬ್ಬರಿಗೂ ಭೇದ ಇರುವುದು ಕರ್ಮ ಮಾಡುವುದರಲ್ಲಲ್ಲ; ಕರ್ಮಾಚರಣೆ ಇಬ್ಬರಿಗೂ ಸಮಾನವಾದದ್ದು. ಸಾಮಾನ್ಯ ಜನರಲ್ಲಿ ಕರ್ಮಾಚರಣೆ ಜ್ಞಾನಕ್ಕಾಗಿ ಪೂರ್ವಸಿದ್ಧತೆ: ತತ್ತ್ವಜ್ಞಾನಿಗಳಲ್ಲಿ ಕರ್ಮಾಚರಣೆ ಜ್ಞಾನದ ಫಲಿತಾಂಶ. ಹೀಗೆ ಕರ್ಮವ್ಯಾಪನೆಯ ಪರಿಮಿತಿಗಳನ್ನು ಭಗವಂತ ನಿರ್ದೇಶಮಾಡಿ ಈ ರೀತಿ ಹೇಳಿದ: "ಅರ್ಜುನ, ನೀನು ಮಾಡುವ ಕರ್ಮದ ಫಲ ನಿನಗೆ ಸೇರತಕ್ಕದ್ದಲ್ಲ. ಅದೇನು ಫಲವೇ ಆಗಲಿ ನನಗೆ [ಅಂದರೆ ಪರಮಾತ್ಮನಿಗೆ] ಸೇರತಕ್ಕದ್ದೆಂದು ತಿಳಿದು ನಿರಪೇಕ್ಷೆಯಿಂದ, ನಿರ್ಮಮತೆಯಿಂದ, ಯುದ್ಧಕರ್ಮ ಮಾಡು.

> ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
> ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥

"ಜ್ವರ ಬಿಟ್ಟುಹೋಗಲಿ. ಹೆದರಬೇಡ. ನಿರ್ಭಯವಾಗಿ ಯುದ್ಧಮಾಡು."

ಎಂಥ ಜ್ಞಾನಿಯಾದರೂ ಪ್ರತಿಯೊಬ್ಬನೂ ಸ್ವಪ್ರಕೃತಿಯಿಂದ ನಡೆಯುತ್ತಾನೆ. ಹಾಗಾದರೆ ಅವನಿಗೆ ಜ್ಞಾನದಿಂದ ಆಗುವ ಪ್ರಯೋಜನ ಏನು? ಸ್ವಭಾವವೇ ಎಲ್ಲವನ್ನೂ ಮಾಡಿಸುವುದಾದರೆ ಆತ್ಮಜ್ಞಾನದಿಂದ ಅವನಿಗೆ ಆಗುವುದೇನು? ಆ ಪ್ರಯೋಜನ ಇಷ್ಟು: ಜ್ಞಾನಿಯು ಕೆಲಸಮಾಡುವುದರಲ್ಲಿ ರಾಗದ್ವೇಷಾದಿ ಮನೋವಿಕಾರಗಳನ್ನು ತಡೆದಿರುತ್ತಾನೆ. ಕೆಲಸವನ್ನೇನೋ ಮಾಡುತ್ತಾನೆ: ಆದರೆ ರಾಗದ್ವೇಷಾದಿ ಸಂಪರ್ಕಗಳಿಲ್ಲದೆ ಮಾಡುತ್ತಾನೆ.

ಸಾಮಾನ್ಯನು ಆ ರಾಗದ್ವೇಷಗಳನ್ನು ಇಟ್ಟುಕೊಂಡಿರುತ್ತಾನೆ. ಅವನೂ ಸ್ವಭಾವಕ್ಕನುಸಾರವಾಗಿ ಕೆಲಸ ಮಾಡುತ್ತಾನೆ. ಇಬ್ಬರಿಗೂ ವ್ಯತ್ಯಾಸವಿರುವುದು ಮನಃಪರಿಸ್ಥಿತಿಯಲ್ಲಿ.

ಪ್ರಕೃತಿಂ ಯಾನ್ತಿ ಭೂತಾನಿ ನಿಗ್ರಹ ಕಿಂ ಕರಿಷ್ಯತಿ ॥

ಎಲ್ಲರಲ್ಲಿಯೂ ಬಲವತ್ತರವಾದದ್ದು ಪ್ರಕೃತಿ. ಅಗಸನ ಭಾರದ ಪ್ರಾಣಿಯ ಶಾರೀರವನ್ನು ಪಡೆದುಕೊಂಡು ಬಂದು ಗಂಧರ್ವಲೋಕದ ಸಂಗೀತವನ್ನು ಹಾಡಬೇಕೆಂದರೆ ಆದೀತೋ? ಅಲ್ಲಲ್ಲಿಯ ಪ್ರಕೃತಿಗುಣ ಅಲ್ಲಲ್ಲಿ ತಪ್ಪದೆ ಇರುತ್ತದೆ. ಎಂಥ ಸಂದರ್ಭದಲ್ಲಿಯೂ ಪ್ರಕೃತಿ ತಾನಾಗಿ ನುಗ್ಗಿ ಬಂದುಬಿಡುತ್ತದೆ. ಈ ಪ್ರಕೃತಿ ಒಂದೊಂದು ಜೀವಿಯಲ್ಲಿ ಒಂದೊಂದು ರೀತಿ ಇರುತ್ತದೆ. ಪ್ರಕೃತಿಯೆಂದರೆ ಜೀವದ ಸಂದರ್ಭದಲ್ಲಿ ಪೂರ್ವಜನ್ಮವಾಸನೆ. ಅದು ಪ್ರಾಚೀನಸಂಸ್ಕಾರಫಲಿತವಾದದ್ದು. ಹೀಗೆ ಪ್ರಕೃತಿ ಒಂದೊಂದು ಜೀವಿಗೆ ಒಂದೊಂದು ರೀತಿ. ಇದರಿಂದಲೇ ಧರ್ಮವೂ ಜೀವಿಗಳಿಗೆ ಬೇರೆಬೇರೆ ಎಂದ ಹಾಗಾಯಿತು. ಪ್ರಕೃತಿಯನ್ನು ಅನುಸರಿಸಿ ಧರ್ಮ. ಯಾವ್ಯಾವ ಜೀವಿಯಲ್ಲಿ ಎಂಥೆಂಥ ಪ್ರಕೃತಿ ಕುಳಿತಿದೆಯೋ ಅದದನ್ನು ಅನುಸರಿಸಿ ಆಯಾ ಜೀವದ ಧರ್ಮ. ಹೀಗೆ ಸ್ವಧರ್ಮ. ಕರ್ಮ ಮಾಡಬೇಕು. ಎಂಥ ಕರ್ಮ ಮಾಡಬೇಕು? ಸ್ವಧರ್ಮರೂಪವಾದ ಕರ್ಮ ಮಾಡಬೇಕು. ಕರ್ಮ ಮಾಡುವುದು ಅನಿವಾರ್ಯ. ಅದರಲ್ಲಿ ಸ್ವಧರ್ಮವನ್ನರಿತು ಮಾಡುವುದು ಶ್ರೇಷ್ಠ.

ಶ್ರೇಯಾನ್ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥

"ಅರ್ಜುನ, ನೀನು ಕ್ಷತ್ರಿಯ. ನಿನ್ನ ಧರ್ಮ ಯುದ್ಧಮಾಡುವುದು. ಸಂನ್ಯಾಸ ಬ್ರಾಹ್ಮಣಧರ್ಮ : ಬ್ರಾಹ್ಮಣರಲ್ಲಿಯೂ ಕೆಲಮಂದಿಗೆ ಮಾತ್ರ ಧರ್ಮ—ಯಾರಿಗೆ ನಿಜವಾಗಿ ಅಂತರಂಗದಲ್ಲಿ ವಿರಕ್ತಿ ಉಂಟಾಗಿದೆಯೋ ಅವರಿಗೆ ಮಾತ್ರ. ಕಲಿಯುಗದಲ್ಲಂತೂ ಸಂನ್ಯಾಸಾಶ್ರಮ ವರ್ಜ್ಯವೆಂದೇ ಶಾಸ್ತ್ರವಾಕ್ಯವುಂಟು. ಯಾರಿಗೆ ಚಿರಕಾಲದ-ನಿರ್ವೇದ-ಬೇಸರಬಂದಿದೆಯೋ ಅವರು ಮಾತ್ರ ಸಂನ್ಯಾಸಕ್ಕೆ ಅಧಿಕಾರಿಗಳು : ಯಾರಿಗೆ ಲೋಕ ಭೋಗಗಳಲ್ಲಿ ಜುಗುಪ್ಸೆ ಸಂಪೂರ್ಣವಾಗಿ ಬಂದಿದೆಯೋ ಅವರಿಗೆ ಮಾತ್ರ ಸಂನ್ಯಾಸವು ವಿಹಿತವಾಗುತ್ತದೆ. ವಿರಕ್ತಿ ಬಂದಮೇಲೆ ಪ್ರವ್ರಜನ. ನೀನಾದರೋ ಕ್ಷತ್ರಿಯ. ಬ್ರಾಹ್ಮಣನ ಒಂದಾನೊಂದು ವಿಶೇಷ ಧರ್ಮಕ್ಕೆ ನೀನು ಏಕೆ ಕೈ ಹಾಕುತ್ತೀ? ಮತ್ತೊಬ್ಬರ ಧರ್ಮವನ್ನು ಚೆನ್ನಾಗಿ ಮಾಡುವುದಕ್ಕಿಂತ

ನಿನ್ನ ಧರ್ಮದಲ್ಲಿ ಅಷ್ಟು ಗುಣವಿಲ್ಲದೆ ಹೋದರೂ ಅದನ್ನು ಮಾಡುವುದೇ ನಿನಗೆ ಒಳ್ಳೆಯದು. ವಿಶ್ವಾಮಿತ್ರನ ಆದರ್ಶ ನಿನಗೆ ಬೇಡ. ಅವನೇನೋ ಹಟಮಾಡಿ ಗೆದ್ದ—ಅದಕ್ಕೆ ನಮ್ಮ ನಮಸ್ಕಾರ. ಆದರೆ ನಿನ್ನ ಸ್ವಭಾವರಚನೆ ಬೇರೆ ಬಗೆಯದು. ನೀನು ಯುದ್ಧ ಮಾಡಬೇಕಾದವನು, ಮಾಡು."

ಸ್ವಧರ್ಮವೇ ಏಕೆ?

"ಅನ್ಯಧರ್ಮವನ್ನು ನೀನು ಎಷ್ಟೇ ಚೆನ್ನಾಗಿ ಆಚರಿಸಿದರೂ ಅದಕ್ಕಿಂತ ನಿನ್ನ ಸ್ವಧರ್ಮವು ಅದರಲ್ಲಿ ಅಷ್ಟು ಗುಣವಿಲ್ಲದಿದ್ದರೂ ಶ್ರೇಷ್ಠ." ಸ್ವಧರ್ಮ ಎಂದರೆ ಏನು?

ಮನುಷ್ಯನಿಗೆ ಯಾವಯಾವ ಗುಣಗಳು. ಯಾವಯಾವ ಶಕ್ತಿಗಳು, ಎಂಥೆಂಥ ಒಲವುಗಳು, ಎಂಥೆಂಥ ಹುಮ್ಮಸ್ಸುಗಳು ಸ್ವಾಭಾವಿಕವಾಗಿ ಬಂದಿರುತ್ತವೋ ಆ ಗುಣಶಕ್ತಿಗಳನ್ನೂ ಆ ಮನಃಪ್ರವಣತೆ ಆ ಅಂತಃಪ್ರವೃತ್ತಿಗಳನ್ನೂ ಅವನು ಲೋಕ ಪ್ರಯೋಜನಕ್ಕಾಗಿ ವಿನಿಯೋಗಿಸುವುದು ಧರ್ಮ.

ಹೀಗೆ ಅವನು ತನ್ನ ಸಹಜಕ್ಕೇ ಕಟ್ಟುಬಿದ್ದಿರಬೇಕೆಂಬುದೇಕೆ? ಇನ್ನೂ ಉತ್ತಮವೆನಿಸಿದ್ದನ್ನು ಅವನು ಏಕೆ ಅವಲಂಬಿಸಬಾರದು? ಸ್ವಧರ್ಮದಲ್ಲಿ ಒಂದು ವೇಳೆ ಗುಣ ಕಡಮೆಯೆಂದು ತೋರಿದರೂ ಅದು ಗುಣ ಹೆಚ್ಚೆನಿಸಿದ ಪರಧರ್ಮಕ್ಕಿಂತ ಶ್ರೇಷ್ಠವಾಗುವುದು ಹೇಗೆ? ನಾಲ್ಕು ಕಾರಣಗಳಿಂದ ಅವನಿಗೆ ಸ್ವಧರ್ಮದಲ್ಲಿ ಗುಣ ಅಧಿಕ :

1. ಸ್ವಧರ್ಮದಲ್ಲಿ ಅವನಿಗೆ ಪ್ರಕೃತಿ ಸಹಾಯವಾಗಿರುತ್ತಾಳೆ. ಆಕೆ ಮಾಡಿಸಿದ್ದೇ ಸ್ವಧರ್ಮ. ಅದಕ್ಕೆ ಆಕೆಯ ಬೆಂಬಲವಿರುವುದರಿಂದ ಅವನ ಕೆಲಸ ಸುಲಭವಾಗುತ್ತದೆ. ಈ ಕಾರ್ಯಸೌಲಭ್ಯ ಮೊದಲನೆಯ ಗುಣ.
2. ಯಾವಾಗ ಸುಲಭವಾಯಿತೋ ಆಗ ಕೆಲಸ ಬೇಗಬೇಗ ನಡೆಯುತ್ತದೆ : ಫಲವೂ ಹೆಚ್ಚಾಗಿ ಬರುತ್ತದೆ. ಹೀಗೆ ಪ್ರತಿಫಲಬಾಹುಳ್ಯ ಎರಡನೆಯ ಗುಣ.
3. ಇದರಿಂದ ಲೋಕಕ್ಕೆ ಪ್ರಯೋಜನ ಹೆಚ್ಚಾಗಿ—ಅವನ ಯೋಗ್ಯತೆಯಿಂದ ಎಷ್ಟು ಹೆಚ್ಚು ಸಾಧ್ಯವೋ ಅಷ್ಟು ಹೆಚ್ಚಾಗಿ—ಆಗುತ್ತದೆ. ಈ ಲೋಕೋಪಯೋಗಾಧಿಕ್ಯ ಮೂರನೆಯ ಗುಣ.

4. ಸ್ವಧರ್ಮನಿರತನಲ್ಲಿ ಕೆಲವು ಗೊತ್ತಾದ ಗುಣಶಕ್ತಿಗಳಾದರೂ ದೃಢವಾಗಿ ಬೆಳೆದು ಬಲಪಡುತ್ತವೆ. ಧರ್ಮವನ್ನು ಬದಲಾಯಿಸಿದರೆ ಹಿಂದಿದ್ದ ಶಕ್ತಿಸಾಮರ್ಥ್ಯಗಳು ಕೃಶವಾಗುತ್ತವೆ; ಹೊಸದು ಸಂಪಾದನೆಯಾಗುವ ಭರವಸೆಯಿಲ್ಲ. ಇಂಥ ಸಾಂಕರ್ಯಶಂಕೆಯಿಲ್ಲದ ಸ್ವಬಲಪುಷ್ಟಿಯ ಅವಕಾಶ ನಾಲ್ಕನೆಯ ಗುಣ.

ನಮ್ಮೂರಿನಲ್ಲಿ ಸಾಹುಕಾರರ ಮನೆಯಲ್ಲಿ ಮದುವೆಯೆಂದರೆ ಮಡಿವಾಳಮಾಚಯ್ಯನಿಗೆ ಒಂದು ತಿಂಗಳು ಮೈಮುರಿಯಕೆಲಸ. ಆದರೆ ಏನು? ಲಗ್ನದ ದಿವಸ ಜಮಖಾನದ ಮೇಲೆ ಕುಳಿತು ಹೂವಿನ ಹಾರ ಹಾಕಿಸಿಕೊಳ್ಳುವವನು ಸಂಗೀತದ ರಂಗಪ್ಪ. ಇದನ್ನು ನೋಡಿ ನೋಡಿ ಮಾಚಯ್ಯನ ಮನಸ್ಸು ರೋಸಿಹೋಗಿತ್ತು. ತನ್ನ ಮಗ ಮಾರಯ್ಯನನ್ನು ಸಂಗೀತಕ್ಕೆ ಹಾಕಿದ. ಹತ್ತುವರ್ಷ ಪಾಠ ನಡೆಯಿತು. ಮಾರಯ್ಯನ ಹಾಡಿಕೆ ಬೀದಿಯ ಭಜನೆಗೆ ಬೇಕಾದಷ್ಟಾಯಿತು. ಊರಿಗೆ ಈಗ ಒಳ್ಳೆಯ ಅಗಸ ಇಲ್ಲವಾದ, ಒಳ್ಳೆಯ ಸಂಗೀತಗಾರ ಬಂದಹಾಗಾಯಿತೊ?— ಎಂದು ಕೇಳಿದವು ಕತ್ತೆಗಳು.

ಸತ್ತ್ವಗುಣಾಭ್ಯಾಸ

ಇನ್ನೊಂದು ಪ್ರಶ್ನೆ ಎತ್ತಿದ ಅರ್ಜುನ. ನಾವು ಒಳ್ಳೆಯ ಉದ್ದೇಶದಿಂದಲೇ ಕರ್ಮಮಾಡ ಹೊರಟರೂ ಅದರಲ್ಲಿ ಪಾಪಗಳು ಬಂದೊದಗುತ್ತವಲ್ಲ, ಅದಕ್ಕೇನು ಮಾಡಬೇಕು? ಭಗವಂತನ ಉತ್ತರ ಇದು :

> ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
> ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥

ಕಣ್ಣಿಗೆ ಕಟ್ಟಿದ ಹಾಗೆ ಹೇಳಿದ್ದಾನೆ ಇದನ್ನು : ಕಾಮವನ್ನು ಬಿಗಿಹಿಡಿಯಬೇಕು. ಇಂದ್ರಿಯಗಳು ಮನಸ್ಸನ್ನು ಕೆರಳಿಸುತ್ತವೆ : ಮನಸ್ಸು ಬುದ್ಧಿಯನ್ನು ಕೆರಳಿಸುತ್ತದೆ : ಕೆರಳಿದ ಬುದ್ಧಿಗೆ ದೃಷ್ಟಿ ತಪ್ಪುತ್ತದೆ. ಆದದ್ದರಿಂದ ನೀನು ಬುದ್ಧಿಗಿಂತ ಮೇಲಿರುವ ಆತ್ಮಸತ್ತ್ವವನ್ನು ಜಾಗರೂಕನಾಗಿ ಕಾಪಾಡಿಕೊಂಡು, ಬುದ್ಧಿ ಕೆಡದಂತೆ ನೋಡಿಕೊಳ್ಳಬೇಕು. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟಾಗ ಬುದ್ಧಿ ಚೆನ್ನಾಗಿ ಕೆಲಸಮಾಡುತ್ತದೆ. ಆದದ್ದರಿಂದ ನಿನ್ನೊಳಗೆ ಬುದ್ಧಿಯ ಹಿಂದೆ ಗೂಢವಾಗಿರುವ ಆ ಸತ್ತ್ವಗುಣವನ್ನು ಎಚ್ಚರಿಸಿ ನಿಲ್ಲಿಸಿಕೋ.

ಕಾಮಕ್ರೋಧಾದಿ ಗುಣಗಳು ವಂಶಾನುಗತವಾಗಿ ಬಂದಿರುತ್ತವೆ. ವಂಶವಾದರೋ ಪೂರ್ವಜನ್ಮಕರ್ಮಾನುಗುಣವಾಗಿ ಬಂದಿರುತ್ತದೆ. ಮನುಷ್ಯನ ಬಂಧುಮಿತ್ರ ಪರಿವಾರಾದಿ ಸಮಾಜಪರಿಸರವೂ ಪೂರ್ವಜನ್ಮಋಣದಿಂದ ಬಂದಿರುತ್ತದೆ. ಹೀಗೆ ಜನ್ಮಾಂತರವಾಸನೆಯಾಗಿ ಆ ಗುಣಗಳು ಅಸಂಖ್ಯೇಯ ಜನ್ಮಗಳಿಂದ ಬಂದಿರುವುವಾದಲ್ಲಿ ಅವುಗಳನ್ನು ಈಗ ನಿಗ್ರಹಿಸುವುದು ಹೇಗಾದೀತು? ಇದಕ್ಕುತ್ತರ ಹೀಗೆ. ಜನ್ಮಾಂತರಗಳಿಂದ ಬಂದಿರುವ ಋಣವಾಸನೆಗಳಿಗಿಂತ ಪ್ರಬಲವಾಗಬಲ್ಲಷ್ಟು ಸತ್ತ್ವವು ಜೀವದ ಒಳಗಡೆಯಿರುತ್ತದೆ. ಆದರೆ ಅದು ನಿದ್ರಿಸುತ್ತಿರುತ್ತದೆ, ಅಥವಾ ರಜಸ್ಸು ತಮಸ್ಸುಗಳ ಭಾರದಿಂದ ಅದು ಒಳಗಡೆ ಕುಗ್ಗಿಕೊಂಡಿರುತ್ತದೆ. ಇಲ್ಲಿ ಒಂದು ವಿಶೇಷವನ್ನು ನಾವು ಜ್ಞಾಪಕಕ್ಕೆ ತಂದುಕೊಳ್ಳಬೇಕು. ಜೀವದಲ್ಲಿ ಇರುವ ಸತ್ತ್ವವು ಮೂಲದಲ್ಲಿ ಅಪಾರವಾದದ್ದು. ಕೃಷ್ಣರಾಜ ಸಾಗರದಲ್ಲಿರುವ ನೀರು ಮಹಾರಾಶಿ. ಅದರಿಂದ ನಮ್ಮೂರಿಗೆ ತಂದ ನಲ್ಲಿಯಲ್ಲಿ ಬರುವ ನೀರು ತೊಟ್ಟುತೊಟ್ಟು ಮಾತ್ರದ್ದು. ಅಲ್ಲಿಂದ ಇಲ್ಲಿಗೆ ಬರುವ ಕೊಳವೆಗಳಲ್ಲಿ ಏನೋ ಕಶ್ಮಲ

ಸೇರಿಕೊಂಡು ನೀರಿನ ಹರಿವಿಗೆ ಅಡ್ಡಿಯಾಗಿರುತ್ತದೆ. ಆದರೆ ನಮ್ಮ ನಲ್ಲಿಯ ಮುಖದಲ್ಲಿನ ನೀರಿನ ಹಿಂದೆ ಸಾಗರದ ನೀರಿದೆಯೆಂಬುದನ್ನು ನಾವು ನೆನಪಿಗೆ ತಂದುಕೊಳ್ಳಬೇಕು. ಆ ನೆನಪೇ ಧೈರ್ಯ. ಭಗವಂತನ ಸ್ಮರಣೆಯೇ ಆ ನೆನಪು. ಭಗವಂತ ನಮ್ಮ ಹಿಂದೆ ಇದ್ದಾನೆ. ನಮ್ಮ ದೇಹೇಂದ್ರಿಯಗಳಲ್ಲಿ ಹೊರಪಡುವ ಶಕ್ತಿ—ಆ ಶಕ್ತಿ ಸಮುದ್ರದ್ದು ಎಂಬುದನ್ನು ನಾವು ನೆನಪಿಗೆ ತಂದುಕೊಂಡಾಗ ಕಾಮಕ್ರೋಧಾದಿ ರೂಪವಾದ ರಜಸ್ಸು ತಮಸ್ಸುಗಳನ್ನು ನಿಗ್ರಹಿಸುವುದು ಸಾಧ್ಯವಾಗುತ್ತದೆ. ಆತ್ಮ—ಬ್ರಹ್ಮ ಸ್ಮರಣೆಯ ಅಭ್ಯಾಸ ಸಂತತವಾಗಿರಬೇಕು. ಇದನ್ನು ಮತ್ತೆ ಮುಂದೆ ನೋಡುವುದಾಗುತ್ತದೆ.

ಆತ್ಮಸಾಮರ್ಥ್ಯವು ಸಾಮಾನ್ಯವಾಗಿ ನಿದ್ರಿಸಿದಂತಿರುತ್ತದೆ. ಜಾಗರೂಕನಾದವನು ಆತ್ಮಸತ್ತ್ವವನ್ನು ಉತ್ತೇಜಿಸುತ್ತಾನೆ. ಆಗ ಬುದ್ಧಿ ಕೆಡದೆ ಎಚ್ಚರವಿದ್ದು, ಮನಸ್ಸನ್ನು ತಿದ್ದುತ್ತದೆ. ಮನಸ್ಸು ಎಚ್ಚತ್ತು ಇಂದ್ರಿಯೋದ್ರೇಕವನ್ನು ಶಮನಗೊಳಿಸುತ್ತದೆ. ಇಂದ್ರಿಯದ ಕಾವು ಇಳಿದಾಗ ಪುಣ್ಯಪಾಪವಿವೇಕ ಸಾಧ್ಯವಾಗುತ್ತದೆ. ಆ ವಿವೇಕದಿಂದ ಪಾಪ ಪ್ರವೃತ್ತಿ ತಪ್ಪುತ್ತದೆ. ಹೀಗೆ ಕಾಮರೂಪವಾದ ಶತ್ರುವನ್ನು ಹೊಡೆಯುವುದು ಪಾಪವನ್ನು ಗೆಲ್ಲುವುದರಲ್ಲಿ ಮೊದಲ ಹೆಜ್ಜೆ.

ಈ ಅಧ್ಯಾಯವನ್ನು ಸಾಮಾನ್ಯವಾಗಿ ಕರ್ಮಯೋಗ ಎಂದು ಕರೆಯುತ್ತಾರೆ. ಶಂಕರಭಾಷ್ಯದ ಒಂದು ಪ್ರತಿಯಲ್ಲಿ ಇದನ್ನು ಕರ್ಮಪ್ರಶಂಸಾಯೋಗವೆಂದು ಕರೆದಿದೆ. ಕರ್ಮವು ನಾನಾ ರೂಪವಾಗಿರಬಹುದು. ಧರ್ಮರೂಪವಾದ ಕರ್ಮಯೋಗ ಇಲ್ಲಿಯದು : ಅದರಲ್ಲಿಯೂ ಸ್ವಧರ್ಮರೂಪವಾದ ಕರ್ಮ. ಆದದ್ದರಿಂದ ಇದನ್ನು ಸ್ವಧರ್ಮಯೋಗ ಎಂದು ಕರೆದರೆ ಈ ಅಧ್ಯಾಯದ ತಾತ್ಪರ್ಯ ಬೇಗ ಮನಸ್ಸಿಗೆ ಹೊಳೆದೀತು.

ಮುಂದಿನ ಅಧ್ಯಾಯದ್ದೂ ಇದೇ ವಿಷಯ. ಯಜ್ಞರೂಪವಾದ ಕರ್ಮ ಎಂದು ಹೇಳಿದ್ದನ್ನು ಬ್ರಹ್ಮಾರ್ಪಣರೂಪವಾದ ಕರ್ಮ, ಲೇಪವಿಲ್ಲದೆ ಮಾಡುವ ಕರ್ಮ ಎನ್ನುವುದನ್ನು—ಕರ್ಮಕರಣದ ಉಪಾಯವನ್ನು—ಆ ಅಧ್ಯಾಯ ತಿಳಿಸುತ್ತದೆ.

ಸಂಗ್ರಹ

ಅನ್ಯೋನ್ಯ ಸಾಹ್ಯ ಕರ್ಮಮೆ ।
ಪುಣ್ಯಂ ಮಾನವರಿಗದುವೆ ನಿತ್ಯದ ಯಜ್ಞಂ ॥
ನಿನ್ನೆಲ್ಲವ ನಿಃಸ್ಪೃಹೆಯಿಂ- ।
ದನ್ವಯಿಪುದು ಧರ್ಮಕಿದು ತೃತೀಯಾಧ್ಯಾಯಂ ॥

ಮನುಷ್ಯಸ್ವಭಾವಪ್ರಕಾರನಭಿಜ್ಞಂ ।
ಮನಶ್ಶಿಕ್ಷಣೋಪಾಯ ನೀತಿಜ್ಞನಾಗನ್ ॥
ನರಸ್ವಾಂತಕಂಪಾನುಕಂಪಾರ್ದ್ರಚಿತ್ತಂ ।
ಗುರುಪ್ರಷ್ಠನಪ್ಪಂ ಹೃಷೀಕೇಶನೆಂದುಂ ॥

ಅಥ ಜ್ಞಾನಕರ್ಮಸಂನ್ಯಾಸಯೋಗೋ ನಾಮ ಚತುರ್ಥೋಽಧ್ಯಾಯಃ

ಶ್ರೀಭಗವಾನುವಾಚ-

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್
॥ ೧ ॥

ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ
॥ ೨ ॥

ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ ।
ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್
॥ ೩ ॥

ಅರ್ಜುನ ಉವಾಚ-

ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ ।
ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ
॥ ೪ ॥

ಶ್ರೀಭಗವಾನುವಾಚ-

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ
॥ ೫ ॥

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ

॥ ೬ ॥

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್

॥ ೭ ॥

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ

॥ ೮ ॥

ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ

॥ ೯ ॥

ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।
ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ

॥ ೧೦ ॥

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ

॥ ೧೧ ॥

ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ ।
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ

॥ ೧೨ ॥

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್

॥ ೧೩ ॥

ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ

॥ ೧೪ ॥

ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।
ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಮ್

॥ ೧೫ ॥

ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।
ತತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್

॥ ೧೬ ॥

ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ

॥ ೧೭ ॥

ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್

॥ ೧೮ ॥

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ

॥ ೧೯ ॥

ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ

॥ ೨೦ ॥

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್

॥ ೨೧ ॥

ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಽಪಿ ನ ನಿಬಧ್ಯತೇ

॥ ೨೨ ॥

ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ

॥ ೨೩ ॥

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ

॥ ೨೪ ॥

ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ

॥ ೨೫ ॥

ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ ।
ಶಬ್ದಾದೀನ್ ವಿಷಯಾನನ್ಯ ಇಂದ್ರಿಯಾಗ್ನಿಷು ಜುಹ್ವತಿ

॥ ೨೬ ॥

ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ ।
ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ

॥ ೨೭ ॥

ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಽಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ

॥ ೨೮ ॥

ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಽಪರೇ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ

॥ ೨೯ ॥

ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ ।
ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ

॥ ೩೦ ॥

ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಮ್ ।
ನಾಯಂ ಲೋಕೋಽಸ್ತ್ಯ ಯಜ್ಞಸ್ಯ ಕುತೋಽನ್ಯಃ ಕುರುಸತ್ತಮ

॥ ೩೧ ॥

ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ ವಿದ್ಧಿ ತಾನ್ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ

॥ ೩೨ ॥

ಶ್ರೇಯಾನ್ ದ್ರವ್ಯಮಯಾದ್ಯಜ್ಞಾಜ್ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ

॥ ೩೩ ॥

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ

॥ ೩೪ ॥

ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ ।
ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ

॥ ೩೫ ॥

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ

॥ ೩೬ ॥

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ

॥ ೩೭ ॥

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ

॥ ೩೮ ॥

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ

॥ ೩೯ ॥

ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ

॥ ೪೦ ॥

ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಮ್ ।
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ

॥ ೪೧ ॥

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾಽಽತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ

॥ ೪೨ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಜ್ಞಾನಕರ್ಮಸಂನ್ಯಾಸಯೋಗೋ ನಾಮ ಚತುರ್ಥೋಽಧ್ಯಾಯಃ

ಸೂಚನೆ

ವಿವರಿಸಿದೆನಿದಂ ಪೂರ್ವದಿ ।
ವಿವಸ್ವತಂಗೆಂದು ಕೃಷ್ಣನೊರೆಯಲ್ ಪಾರ್ಥಂ ॥
ಅವತಾರಂಗಳದೆಂತೆನೆ ।
ಸ್ವವಪುರ್ಧೃತಿ ಧರ್ಮರಕ್ಷೆಗೆಂದಂ ದೇವಂ

॥ ೧ ॥

ಕರ್ಮಮನಿವಾರ್ಯಮಾರ್ಗಂ ।
ನಿರ್ಮಮತೆಯಿನಾದ ಕರ್ಮಮೀಶಪ್ರೀತಂ ॥
ಕರ್ಮಮಯಂ ಜಗಮೆಲ್ಲಂ ।
ಧರ್ಮಂ ಬ್ರಹ್ಮಪ್ರಭಾವಮೆಂದಂ ಕೃಷ್ಣಂ

॥ ೨ ॥

ಸಾರಾಂಶ

ಅರಳಿಯ ಮರದಲ್ಲಿ ಹಳೆಯ ಬುಡ ಬೇರು, ಹೊಸ ಕೊಂಬೆ ಚಿಗುರು—ಎರಡೂ ಇರುವಂತೆ ಮನುಷ್ಯಚರಿತ್ರೆಯಲ್ಲಿಯೂ ಸೋಪಾನಕ್ರಮವುಂಟು. ನವೀನಕಾಲದಲ್ಲಿ ಬಂದದ್ದಕ್ಕೆ ಪೂರ್ವಕಾಲದ್ದು ಆಧಾರಪ್ರಾಯವಾಗಿರಬೇಕು. ಆಗಲೇ ನಾವೀನ್ಯಕ್ಕೆ ಬೆಲೆ ಬರುವುದು, ಪ್ರಾಮಾಣ್ಯ ಬರುವುದು. ಪೂರ್ವಾಪರಗಳ ಅನುಸ್ಯೂತತೆಯೇ ಸಮಾಜಜೀವಿತದಲ್ಲಿ ಆರೋಗ್ಯದ ಲಕ್ಷಣ. ಶ್ರೀಕೃಷ್ಣ ಅಂಥ ಅನುಸ್ಯೂತತೆಯನ್ನೇ ತನ್ನ ಉಪದೇಶದಲ್ಲಿ ಅರ್ಜುನನಿಗೆ ತೋರಿಸಿದ್ದು.

ಯಾರುಯಾರಿಗೆ ಯಾವಯಾವ ದಾರಿಯಲ್ಲಿ ಒಳ್ಳೆಯದನ್ನು ಹುಡುಕಬೇಕೆಂದು ಅಂತರಂಗದಲ್ಲಿ ಪ್ರೇರಣೆಯಾಗುತ್ತದೆಯೋ ಅವರವರಿಗೆ ಅದದು ಧರ್ಮದ್ವಾರ. ಜೀವಸ್ಥಿತಿಯನ್ನು—ಜೀವದ ಅಧಿಕಾರಭೇದವನ್ನು, ಅರ್ಹತೆ-ಅನರ್ಹತೆಗಳನ್ನು–ಅನುಸರಿಸಿ ಧರ್ಮ. ಒಂದೊಂದು ಜೀವದ ವಿಶೇಷಗುಣಗಳನ್ನನುಸರಿಸಿ ಆಯಾ ಜೀವಕ್ಕೆ ಸ್ವಧರ್ಮ ಉಂಟಾಗುತ್ತದೆ. ಅರ್ಥಾತ್, ಧರ್ಮಾನುಸಂಧಾನವು ವಿವೇಕದಿಂದ ಆಗತಕ್ಕದ್ದೇ ಹೊರತು ಅಂಧಶ್ರದ್ಧೆಯಿಂದ ಸಾಧ್ಯವಿಲ್ಲ.

ನಾವು ಮಾಡುವ ಕೆಲಸ ನಮ್ಮ ಇಷ್ಟಾರ್ಥಸಾಧನೆಗೋಸ್ಕರವೇ ಆದರೂ ಅದು ಯಜ್ಞವೆಂಬ, ಭಗವತ್ಸೇವೆಯೆಂಬ ಭಾವನೆಯಿಂದ ಮಾಡಿದರೆ ನಮ್ಮ ಅಹಂಭಾವ ಅಣಗಿ ಜೀವ ಶುದ್ಧವಾಗುತ್ತದೆ; ಶುದ್ಧವಾದಂತೆಲ್ಲ ತತ್ತ್ವಗ್ರಹಣಕ್ಕೆ ಸಮರ್ಥವಾಗುತ್ತದೆ. ಕರ್ಮವನ್ನು ಯಜ್ಞಭಾವನೆಯಿಂದ ಮಾಡದವನಿಗೆ ಇಹಲೋಕದ ಶುಭವೇ ದೊರೆಯುವುದಿಲ್ಲ. ತನಗೆ ದೊರೆತದ್ದು ಈಶ್ವರಾನುಗ್ರಹ, ತಾನು ಇತರರಿಗೆ ಕೊಡಲಾದದ್ದು ಈಶ್ವರಾರ್ಪಣ—ಈ ಎರಡು

ದಡಗಳ ನಡುವೆ ಯಾವ ಮನುಷ್ಯನ ಜೀವ ನದಿ ಹರಿಯುತ್ತಿರುತ್ತದೆಯೋ ಅವನು ಪುಣ್ಯಶಾಲಿ.

ಪ್ರಕರಣ ೫

ಅಧ್ಯಾಯ ೪ - ಜ್ಞಾನಯೋಗವೆಂಬ ನಿರ್ಲೇಪಕರ್ಮಯೋಗ

ಈ ಅಧ್ಯಾಯದ ಮುಖ್ಯ ವಿಷಯಗಳು ಏಳು :

1. ಕರ್ಮೋಪದೇಶದ ಪರಮಪ್ರಾಚೀನತೆ
2. ಧರ್ಮದ ದಿವ್ಯಮಹತ್ತ್ವ
3. ಧರ್ಮಕ್ಕಾಗಿ ಗುಣಕರ್ಮವಿಭಾಗ
4. ಕರ್ಮದಲ್ಲಿ ಅಕರ್ಮ
5. ವಿವಿಧ ಕರ್ಮಯಜ್ಞಗಳು
6. ಜ್ಞಾನ-ಕರ್ಮ ಸಂಬಂಧ
7. ಸಂಶಯವಿಚ್ಛೇದನೆಯ ಆವಶ್ಯಕತೆ.

ಹಿಂದಿನ ಅಧ್ಯಾಯದಲ್ಲಿ ಭಗವಂತ ಹೇಳಿದ್ದೇನು? ಅದು ಹೀಗೆ : "ಅರ್ಜುನ, ನೀನು ಕರ್ಮ ಮಾಡೆನೆನ್ನುತ್ತಿ. ನಿನಗೆ ಕುಲಪ್ರಾಪ್ತವಾಗಿಯೂ ಪ್ರಕೃತಿವಿಹಿತವಾಗಿಯೂ ಇರುವ ಯುದ್ಧಕರ್ಮವನ್ನು ಬೇಡವೆನ್ನುತ್ತಿ. ಕರ್ಮ ನಿನ್ನ ವಶವೆ? ಅಲ್ಲ. ಕರ್ಮ ಮಾಡಿಸುವುದು ಪ್ರಕೃತಿ. ನಿನ್ನ ಒಳಗಿನ ಸ್ವಭಾವದಿಂದಲೇ ನಿನಗೆ ಕಾರ್ಯಪ್ರವೃತ್ತಿಯುಂಟಾಗುತ್ತದೆ. ಹಾಗೆ ನಿನ್ನ ಸಹಜಪ್ರವೃತ್ತಿಯನ್ನು ನೀನು ಅದುಮಿಕೊಳ್ಳುವೆನೆಂದರೆ ಹಾಗೆ ಅದುಮಿ ತಡೆಯುವುದೂ ಒಂದು ಕರ್ಮವೇ. ಹೇಗೂ ಕರ್ಮ ಅನಿವಾರ್ಯ.

> ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
> ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥

“ಲೋಕದಲ್ಲಿ ಯಾರೂ ಒಂದು ಕ್ಷಣವೂ ಯಾವುದಾದರೊಂದು ಕೆಲಸವನ್ನು ಮಾಡದೆ ಸುಮ್ಮನಿರಲಾಗದು. ಹೀಗೆ ಕರ್ಮ ನಿನಗೆ ಅನಿವಾರ್ಯವಾದ ಮೇಲೆ, ನಿನಗಿರುವ ಸ್ವಾತಂತ್ರ್ಯ ಏನಿದ್ದರೂ ಕರ್ಮ ಬಿಡುವುದಕ್ಕಲ್ಲ; ಒದಗಿದ ಸಂದರ್ಭದಲ್ಲಿ ಸತ್ಕರ್ಮ ಯಾವುದು, ದುಷ್ಕರ್ಮ ಯಾವುದು ಎಂದು ವಿವೇಚನೆ ಮಾಡಿ, ಧರ್ಮವಾದ ಕರ್ಮವನ್ನಾರಿಸಿಕೊಳ್ಳುವುದಕ್ಕೆ. ಈ ವಿವೇಚನಸ್ವಾತಂತ್ರ್ಯವೂ ಮಿತವಾದದ್ದೇ. ಏತಕ್ಕೆಂದರೆ ವಿವೇಚನೆ ಮಾಡುವ ಬುದ್ಧಿ ಬಹುಮಟ್ಟಿಗೆ ಪ್ರಾಚೀನ ವಾಸನೆಗಳಿಗೆ ವಶವಾಗಿರುತ್ತದೆ. ಪೂರ್ವಜನ್ಮದ ಸಂಸ್ಕಾರಗಳು ಮನಸ್ಸನ್ನೂ ಬುದ್ಧಿಯನ್ನೂ ಆವರಿಸಿ ಹಿಡಿದುಕೊಂಡಿರುತ್ತವೆ. ಹಾಗಾದರೂ ಯಾವುದೋ ಒಂದು ಒಳ್ಳೆಯ ಘಳಿಗೆಯಲ್ಲಿ—ಒಂದು ಅದೃಷ್ಟದಿಂದ—ಮನುಷ್ಯನೊಳಗಿರುವ ಸತ್ತ್ವಕಣ ಮೇಲಕ್ಕೆ ತಲೆದೋರುತ್ತದೆ, ಆಗ ವಿವೇಚನೆ ಸಾಧ್ಯವಾಗುತ್ತದೆ. ಆಗ ಚಿಂತಿಸಬೇಕಾದದ್ದು ಧರ್ಮವನ್ನು—ವಿಶೇಷವಾಗಿ ಸ್ವಧರ್ಮವನ್ನು:

> ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ॥

“ನೀನು ಸ್ವಧರ್ಮವನ್ನು ಬಿಡಬೇಕೆನ್ನುತ್ತಿ; ಸಂನ್ಯಾಸಿಯಾಗಬೇಕೆನ್ನುತ್ತಿ; ಪರಧರ್ಮವನ್ನು ಅಂಗೀಕಾರಮಾಡುತ್ತೇನೆನ್ನುತ್ತಿ : ನನಗೆ ರಾಜ್ಯ ಬೇಡ ಎನ್ನುತ್ತಿ. ಇದು ಯುಕ್ತವಲ್ಲ: ಸ್ವಧರ್ಮದಲ್ಲಿ ಗುಣ ಹೆಚ್ಚು:

> ಸ್ವಧರ್ಮೇ ನಿಧನಂ ಶ್ರೇಯಃ ॥

“ಸ್ವಧರ್ಮದಿಂದ ಮರಣವಾದರೂ ಅದೇ ಶ್ರೇಯಸ್ಸು: ಏಕೆಂದರೆ ಸ್ವಧರ್ಮದಲ್ಲಿ ಪ್ರಕೃತಿ ನಿನಗೆ ಸಹಾಯವಾಗುತ್ತಾಳೆ. ಅದರಿಂದ ಲಾಭ ಮೂರು: (೧) ನಿನ್ನ ಕೆಲಸ ಸುಲಭವಾಗುತ್ತದೆ, ಬೇಗಬೇಗ ಆಗುತ್ತದೆ. (೨) ಆ ಕೆಲಸದಿಂದ ಲೋಕಕ್ಕೆ ನೀನು ಬೇರೆ ಕೆಲಸ ಮಾಡಿದರೆ ಆಗುವುದಕ್ಕಿಂತ ಹೆಚ್ಚಿನ ಪ್ರಯೋಜನವಾಗುತ್ತದೆ. (೩) ಸ್ವಧರ್ಮದಿಂದ ನಿನ್ನ ಗುಣಶಕ್ತಿಗಳು ವಿಕಾಸವಾಗುತ್ತವೆ. ನಿನ್ನ ಶಕ್ತಿಗಳೂ ಗುಣಗಳೂ ವಿಕಸಿತವಾಗಿ ಅಭಿವೃದ್ಧಿಯಾದಂತೆ ನಿನಗೆ ತತ್ತ್ವದ ಸ್ಫುರಣೆ ಮತ್ತಷ್ಟು ಬೇಗ ಆಗುತ್ತದೆ: ಜನ್ಮಸಾಫಲ್ಯ ಮತ್ತಷ್ಟು ಬೇಗ ಆಗುತ್ತದೆ.

“ಸ್ವಧರ್ಮ ನಿನ್ನ ಪಾಲಿಗೆ ಈಗ ಯುದ್ಧಕಾರ್ಯ. ಅದರಲ್ಲಿ ಪ್ರಾಣಿವಧೆ ಮೊದಲಾದ ಕ್ರೂರಘಟನೆಗಳು ನಡೆಯುತ್ತವೆ. ಅವು ಪಾಪ—ಎನ್ನುವೆಯೇನು? ಆ ಕ್ರಿಯೆಗಳನ್ನು ನೀನು

ನಿಃಸ್ವಾರ್ಥಬುದ್ಧಿಯಿಂದ ಮಾಡಿದರೆ ಅವು ಪಾಪವಾಗವು. ಪಾಪ ಯಾವಾಗ ಬರುತ್ತದೆ? ನೀನು ಮಾಡುವ ಕೆಲಸದಲ್ಲಿ ಸ್ವಪ್ರಯೋಜನದೃಷ್ಟಿ ಇದ್ದರೆ—ಯತ್ಕಿಂಚಿತ್ತಾದರೂ ಸ್ವಾರ್ಥತೆ ಇದ್ದರೆ—ಅದರಿಂದ ಪಾಪ. ಆ ಕ್ರಿಯೆಗಳನ್ನು ನೀನು ನಿಃಸ್ವಾರ್ಥಬುದ್ಧಿಯಿಂದ ಮಾಡಿದರೆ ಪಾಪವಾಗುವುದಿಲ್ಲ. ಲೋಕಕ್ಕೆ ಈಗ ಯುದ್ಧ ಬೇಕು. ನ್ಯಾಯಕ್ಕಾಗಿ ಯುದ್ಧ ಬೇಕು, ವಿಶ್ವಧರ್ಮಕ್ಕಾಗಿ ಯುದ್ಧ ಬೇಕು, ನಿನ್ನ ಸ್ವಂತಕ್ಕೆ ಬೇಡ. ಭಗವದರ್ಪಣೆ ಎಂದು ನೀನದನ್ನು ಮಾಡು. ಯಾವುದು ಲೋಕಹಿತಕ್ಕೆ ಸಾಧಕವೋ ಅದನ್ನು ಸ್ವಪ್ರಯೋಜನದೃಷ್ಟಿ ಇಲ್ಲದೆ ಮಾಡು. ಆಗ ಆ ಕರ್ಮದಲ್ಲಿ ಅಂಟಿಬರುವ ಆನುಷಂಗಿಕವಾದ ಪಾಪ ನಿನ್ನನ್ನು ಅಂಟುವುದಿಲ್ಲ. ಲೋಕದಲ್ಲಿ ಎಲ್ಲ ಕರ್ಮಗಳಲ್ಲಿಯೂ ಯತ್ಕಿಂಚಿತ್ತು ಕಲ್ಮಷದ ಅಂಶ ಸೇರಿಕೊಂಡಿರುತ್ತದೆ. ಎಲ್ಲ ಕೆಲಸಗಳಲ್ಲಿಯೂ ಎಲ್ಲರ ಜೀವನಗಳಲ್ಲಿಯೂ—ಅದು ಅಷ್ಟೋ ಇಷ್ಟೋ ಇರುತ್ತದೆ. ಆ ಕಾರಣದಿಂದ ಜೀವನ ಬೇಡವೆನ್ನಲಾಗುವುದಿಲ್ಲ. ಆ ಕೊಳಕನ್ನು ತೊಳೆಯುವ ದಾರಿ ಯಾವುದೆಂದು ನೋಡಬೇಕು. ಕರ್ಮ ಎನ್ನುವುದು ಒಂದು ಜೀವನಕ್ರಿಯೆ. ಅದರಲ್ಲಿ ಮಲದ ಸಂಭವನೀಯತೆ ತಪ್ಪಿದ್ದಲ್ಲ. ಅದನ್ನು ನಿವಾರಣೆ ಮಾಡುವುದು ಹೇಗೆ? ಸ್ವಾರ್ಥ ಬಿಡೋಣದರಿಂದ. ಸ್ವಪ್ರಯೋಜನದೃಷ್ಟಿ ಇಡದೆ ಈಶ್ವರಾರ್ಪಣಬುದ್ಧಿಯಿಂದ ಕರ್ಮಮಾಡಿದರೆ ಆ ಕರ್ಮವು ಪಾತಕವಾಗುವುದಿಲ್ಲ; ತಾರಕವಾಗುತ್ತದೆ. ಸತ್ಕರ್ಮ ಬಿಟ್ಟು ಮಾಡಿದ್ದೆಲ್ಲ ದುಷ್ಕರ್ಮ. ಯಾವುದು ಧರ್ಮವಲ್ಲವೋ ಅದೆಲ್ಲ ನಿನ್ನ ಪಾಲಿಗೆ ಅಧರ್ಮ. ಯಾವುದು ನಿನಗೆ ಸ್ವಧರ್ಮವೋ ಅದನ್ನು ಬಿಟ್ಟು ಉಳಿದದ್ದೆಲ್ಲ ನಿನ್ನ ಪಾಲಿಗೆ ಅಧರ್ಮ.” ಹೀಗೆ ಹಿಂದೆ ಹೇಳಿದ್ದನ್ನು ನಾಲ್ಕನೆಯ ಅಧ್ಯಾಯದಲ್ಲಿ ಭಗವಂತ ಪರಿಪೋಷಣೆ ಮಾಡುತ್ತಾನೆ.

ಕರ್ಮವಿದ್ಯೆಯ ಪ್ರಾಚೀನತೆ

“ಅರ್ಜುನ ನಿನಗೆ ನಾನು ಹೇಳುತ್ತಿರುವುದು ಈ ಹೊತ್ತಿನ ಹೊಸ ಮಾತೇನೂ ಅಲ್ಲ. ಸೃಷ್ಟ್ಯಾದಿಯಲ್ಲಿ ನಾನು ವಿವಸ್ವತನೆಂಬ ಸೂರ್ಯನಿಗೆ ಮಾಡಿದ ಉಪದೇಶ ಅದು. ಸೂರ್ಯನು ಮನುಷ್ಯಕುಲದ ಮೂಲಪುರುಷನಾದ ಮನುವಿಗೂ, ಮನುವು ರಾಜರಲ್ಲಿ ಪ್ರಥಮನಾದ ಇಕ್ಷ್ವಾಕುವಿಗೂ ಅದೇ ಉಪದೇಶವನ್ನು ಕೊಟ್ಟರು. ಹೀಗೆ ಬಹುಕಾಲದ ಪರಂಪರೆಯಿಂದ ಬಂದಿರುವುದು ಈ ಕರ್ಮಯೋಗದ ವಿದ್ಯೆ. ಹಿಂದೆ ಬಹು ಮಂದಿ ರಾಜರ್ಷಿಗಳು, ಜನಕಾದಿಗಳು ಆಚರಿಸಿ ಕೃತಕೃತ್ಯರಾದದ್ದು ಈ ವಿದ್ಯೆಯಿಂದ.”

ಈ ಗುರುಶಿಷ್ಯಪಾರಂಪರ್ಯವನ್ನು ಭಗವಂತ ಉಪದೇಶಿಸಿದ್ದರ ತಾತ್ಪರ್ಯವೇನು? ಪ್ರಾಚೀನವಾದ ಕಾರಣ ಅದನ್ನು ಅಂಗೀಕರಿಸಬೇಕೆಂದೊ? ಕಾಲಿದಾಸ ಹೇಳಿದ್ದಾನಲ್ಲ—

> ಪುರಾಣಮಿತ್ಯೇವ ನ ಸಾಧು ಸರ್ವಂ
> ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
> ಸನ್ತಃ ಪರೀಕ್ಷ್ಯಾನ್ಯತರದ್ಭಜನ್ತೇ... ॥

ಹಳೆಯದೆಂದದ್ದೆಲ್ಲ—ಆ ಹಳೆತನದ ಕಾರಣದಿಂದಲೇ—ಸಾಧುವಾಗದು; ಹೊಸದೆಂಬ ಕಾರಣದಿಂದಲೇ ದೋಷವಾಗದು. ಗುಣದೋಷಗಳನ್ನು ವಿಮರ್ಶೆ ಮಾಡಿಯೇ ತೀರ್ಮಾನ ಮಾಡಬೇಕು: ಅಂಧಶ್ರದ್ಧೆಯಿಂದ ಯಾವುದನ್ನೂ ಅಂಗೀಕರಿಸತಕ್ಕದ್ದಲ್ಲ. ಹೀಗಾದರೂ, ಬಹು ಕಾಲದ ಬಹು ಜನದ ಅಂಗೀಕಾರವೇ ಗುಣವಿರುವುದಕ್ಕೆ ಒಂದು ಗುರುತು. ಲೋಕಾಂಗೀಕಾರಪ್ರಾಮಾಣ್ಯವನ್ನು ವೇದದ ವಿಷಯದಲ್ಲಿ ಕೂಡ ಹೇಳಿರುತ್ತಾರೆ. ಆದದ್ದರಿಂದ ಕರ್ಮವಿದ್ಯೋಪದೇಶದ ಶ್ರೇಷ್ಠತೆಗೆ ಅದನ್ನು ಬಹು ಕಾಲದಿಂದ ಮಹನೀಯರು ಅಂಗೀಕರಿಸಿರುವುದೇ ಒಂದು ದೊಡ್ಡ ರುಜುವಾತು.

ಭಗವಂತನು ಪ್ರಾಚೀನತೆಯನ್ನೂ ಪಾರಂಪರ್ಯವನ್ನೂ ಪ್ರಶಂಸೆಮಾಡಿರುವುದರ ತಾತ್ಪರ್ಯ ಇದು. ನಮ್ಮ ಕಾಲದ ಜನ ಈ ತತ್ತ್ವವನ್ನು ಗಮನಿಸಿ ನೋಡಬೇಕು. ಮನುಷ್ಯಚರಿತ್ರೆ ಒಂದು ಮಹಾನದಿಯಂತೆ ಧಾರಾಪ್ರವಾಹವಾಗಿರಬೇಕಾದದ್ದು. ಹಾಗಿದ್ದರೆಯೇ ಅದಕ್ಕೆ ಗುಣಾಧಿಕ್ಯ. ಹಾಗಾಗದೆ ಅದು ಅಲ್ಲಲ್ಲಿ ಕಡಿದು ನಿಂತು, ಛಿದ್ರಛಿದ್ರವಾಗಿ ಪರಸ್ಪರ ಅಸಂಬದ್ಧವಾಗಿದ್ದರೆ ಅದು ಅರ್ಥವಿಲ್ಲದ, ಅರ್ಥಕ್ಕೆ ಬಾರದ ಪರಿದಾಟವಾಗುತ್ತದೆ, “ಅಪರಸ್ಪರಸಂಭೂತಮ್” ಎಂಬ ಲೋಕಾಯತವಾದವಾಗುತ್ತದೆ. ಈ ಕಾರಣದಿಂದಲೇ ನಮ್ಮ ಪ್ರಪಂಚದಲ್ಲಿ ಅವತರಿಸಿದ ಸಮಾಜಪರಿಷ್ಕಾರಕರೆಲ್ಲ ತಾವು ತಮ್ಮ ಪೂರ್ವಿಕರ ಅನುಯಾಯಿಗಳೆಂದು ಹೇಳಿಕೊಂಡೇ ಕೆಲಸ ಮಾಡಿದ್ದಾರೆ. ಎಲ್ಲ ದೇಶಗಳಲ್ಲೂ ಇದೇ ಸಂಪ್ರದಾಯ. ಒಬ್ಬ ಪರಿಷ್ಕಾರಕ ತನ್ನ ಕೆಲಸ ಶಾಶ್ವತವಾಗಿ ನಿಲ್ಲಬೇಕೆಂದು ಅಭಿಪ್ರಾಯಪಟ್ಟರೆ, ತನಗಿಂತ ಹಿಂದೆ ಇದ್ದದ್ದರಲ್ಲಿ ಅಂತರ್ಭಾವವಾಗಿದ್ದದ್ದನ್ನೇ ತಾನು ಎತ್ತಿತೋರಿಸುತ್ತಿದ್ದೇನೆಂದೇ ಹೇಳುವುದು. ಯೇಸುಕ್ರಿಸ್ತನ ಮಾತೂ ಹಾಗೆಯೇ. ತಾನು ಹೊಸದಾಗಿ ಮತವೊಂದನ್ನು ಸ್ಥಾಪನೆಮಾಡಿದೆನೆಂದು ಆತ ಹೇಳಿಕೊಳ್ಳಲಿಲ್ಲ. ಹಿಂದಿನಿಂದ ಇದ್ದ ಮತವೇ ಇದು, ಕಾಲಕ್ರಮದಲ್ಲಿ ಲೋಪವಾಯಿತು: ಅದನ್ನು ನಾನು ಪುನರುದ್ಧಾರಮಾಡುತ್ತಿದ್ದೇನೆ—ಎಂದು

ಹೇಳಿದ. ವ್ಯವಹಾರ ನ್ಯಾಯಶಾಸ್ತ್ರಕಾರರೂ ಹಾಗೆಯೇ. ತಾವು ಪ್ರಕೃತಿಸಿದ್ಧವಾದ ನೀತಿಗಳನ್ನು ಮುಂದಕ್ಕೆ ಕೊಂಡೊಯ್ಯುವವರೇ ಹೊರತು ಹೊಸದಾಗಿ ಸೃಷ್ಟಿಮಾಡುವವರಲ್ಲ ಎಂದು ಹೇಳಿಕೊಂಡಿದ್ದಾರೆ. ವೇದಮಹರ್ಷಿಗಳು ಸಹ "ಇತಿ ಶುಶ್ರುಮ ಧೀರಾಣಾಮ್ ಯೇನಸ್ತ ದ್ವ್ಯಾಚಚಕ್ಷಿರೇ," "ಇದಮಾಹುರನೂಚಾನಾಃ." "ತದೇಷಾಭ್ಯುಕ್ತಾ," "ಅತ್ರೈತೇ ಶ್ಲೋಕಾ ಭವನ್ತಿ" ಇತ್ಯಾದಿಯಾಗಿ ಪೂರ್ವಸೂರಿಗಳನ್ನು ಸ್ಮರಿಸುತ್ತಾರೆ.

ಇದು ಬರಿಯ ಉಪಚಾರವಲ್ಲ. ಮಾನವಪ್ರಗತಿಯನ್ನು ಸಾಧಿಸುವವರು ಮನೆ ಕಟ್ಟುವವರ ನೀತಿಯನ್ನು ಅನುಸರಿಸುತ್ತಾರೆ. ಅಡಿಪಾಯದ ಮೇಲೆ ಇಟ್ಟಿಗೆಯ ಸಾಲು; ಆ ಸಾಲಿನ ಮೇಲೆ ಇನ್ನೊಂದು ಸಾಲು; ಒಂದು ಮಾಳಿಗೆಯ ಆಧಾರದ ಮೇಲೆ ಇನ್ನೊಂದು ಮಹಡಿ. ಹೀಗೆ ತಳದಿಂದ ತುದಿಯವರೆಗೆ ಒಂದಕ್ಕೊಂದು ಸೇರಿಕೊಂಡಿರಬೇಕಾದದ್ದು ಮುಖ್ಯ. ಯಾವ ಕಟ್ಟಡ ಹಾಗೆ ಬೆಳೆದು ಬಹುಕಾಲ ಗಟ್ಟಿಯಾಗಿ ನಿಂತಿದೆಯೋ ಅದು ಮಳೆ ಗಾಳಿ ಬಿಸಿಲುಗಳ ಹೊಡೆತವನ್ನೂ ವಾಸಸ್ಥರಿಂದ ತಗಲುವ ಏಟು ಪೋಟುಗಳನ್ನೂ ಸಹಿಸಿ ನಿಲ್ಲಬಲ್ಲಷ್ಟು ಶಕ್ತಿಯುಳ್ಳದ್ದು ಎಂದು ರುಜುವಾತಾಗುತ್ತದೆ. ಇಂಥ ಬಹು ಪರೀಕ್ಷಾ ಪ್ರಾಮಾಣ್ಯದಿಂದ ಒಂದು ಮತವಾಗಲಿ ಒಂದು ಆಚಾರವಾಗಲಿ ನಮಗೆ ಮಾನ್ಯವಾಗುತ್ತದೆ. ಇದನ್ನೇ ಇಂಗ್ಲಿಷಿನಲ್ಲಿ ಟ್ರ್ಯಡಿಷನ್ (Tradition – ಸಂಪ್ರದಾಯ) ಎಂದು ಕರೆಯುತ್ತಾರೆ. ಯಾವ ಜನಾಂಗಕ್ಕೆ ಒಂದು ಸಂಪ್ರದಾಯವಿಲ್ಲವೋ ಆ ಜನಾಂಗದ ಪಾಡು ಗಾಳಿಗೆ ಸಿಕ್ಕಿದ ಹತ್ತಿಯ ಹಿಂಜಿಯಂತೆ ಗೊತ್ತುಗುರಿಯಿಲ್ಲದ್ದಾಗುತ್ತದೆ.

ಸಂಪ್ರದಾಯವೆಂದರೆ ಶುಕಪಠಿತವಲ್ಲ. ಪಾರಂಪರ್ಯವೆಂದರೆ ಪೌನಃಪುನ್ಯವಲ್ಲ. ಹೇಳಿದ್ದೇ ಹೇಳುವುದೂ ಮಾಡಿದ್ದೇ ಮಾಡುತ್ತಿರುವುದೂ ಪ್ರಗತಿಯಲ್ಲ, ನಿಜವಾದ ಪ್ರಗತಿಯಲ್ಲಿ ಸಮಾಜಜೀವನದ ಹಳೆಯ ಅಂಶಗಳೂ ಹೊಸ ಅಂಶಗಳೂ ಒಂದುಗೂಡಿ ಬೆರೆತಿರುತ್ತವೆ– ಹಳೆಯ ಬುಡಬೇರೂ ಹೊಸ ಕೊಂಬೆ ಚಿಗುರೂ ಅರಳಿಮರದಲ್ಲಿರುವಂತೆ ಹೊಸದು ಬೇರೆಯದಾದರೂ ಹಳೆಯದನ್ನು ಹೊಂದಿಕೊಂಡು ಬೆಳೆಯುತ್ತದೆ.
ಮನುಷ್ಯಚರಿತ್ರೆಯಲ್ಲಿಯೂ ಹಾಗೆಯೇ ಒಂದು ಸೋಪಾನಕ್ರಮವುಂಟು. ನವೀನಕಾಲದಲ್ಲಿ ಬಂದದ್ದಕ್ಕೆ ಪೂರ್ವಕಾಲದ್ದು ಆಧಾರಪ್ರಾಯವಾಗಿರಬೇಕು. ಆಗಲೇ ನಾವೀನ್ಯಕ್ಕೆ ಬಲಬರುವುದು; ಪ್ರಾಮಾಣ್ಯ ಬರುವುದು. ಅಂಥಾ ಪೂರ್ವಾಪರಗಳ ಅನುಸ್ಯೂತತೆಯೇ ಸಮಾಜಜೀವಿತದಲ್ಲಿ ಆರೋಗ್ಯದ ಲಕ್ಷಣ. ಶ್ರೀಕೃಷ್ಣ ಅಂಥಾ ಅನುಸ್ಯೂತತೆ ತನ್ನ

ಉಪದೇಶದಲ್ಲುಂಟು; ಆದದ್ದರಿಂದ ಅದು ಅನುಸರಣೀಯವಾದದ್ದು, ಅದು ಬಹುಕಾಲದ ಬಹುಜನದ ಮನಸ್ಸಿಗೆ ಒಪ್ಪಿತವಾದದ್ದು, ಆದದ್ದರಿಂದ ಅದು ಪ್ರಮಾಣಭೂತವಾದದ್ದು— ಎಂದು ಅರ್ಜುನನಿಗೆ ತೋರಿಸಿದ: "ಅಯ್ಯಾ, ಈ ಉಪದೇಶ ಸಾರ್ವಕಾಲಿಕವಾದದ್ದು; ಪ್ರಪಂಚದ ಬುದ್ಧಿವಂತರುಗಳಲ್ಲಿ ಅರ್ಜುನನಾದ ನೀನೇ ಪ್ರಥಮನೆಂದುಕೊಳ್ಳಬೇಡ! ಹಿಂದೆ ನಿನ್ನಂಥ ಬುದ್ಧಿವಂತರುಗಳೆಷ್ಟೋ ಮಂದಿ ಇದ್ದರು. ಅವರೆಲ್ಲ ಈ ಮಾರ್ಗವನ್ನನುಸರಿಸಿದ್ದಾರೆ. ಕಾಲಪರೀಕ್ಷಾಪ್ರಾಮಾಣ್ಯದಿಂದ, ಜನಪರೀಕ್ಷಾಪ್ರಮಾಣ್ಯದಿಂದ ದೃಢಪಟ್ಟಿರುವುದನ್ನೇ ನಾನು ಹೇಳುತ್ತಿರುವುದು. ಆದಕಾರಣ ಅದು ಅಂಗೀಕಾರಾರ್ಹವಾಗಿದೆ" –ಎಂದು.

ಪ್ರಾಚೀನಸಿದ್ಧವಾಗಿದ್ದದ್ದು ಕಳೆದುಹೋದದ್ದೇಕೆ?

> ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।
> ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ।

"ಬಹುಕಾಲ ಕಳೆದದ್ದರಿಂದ ಪ್ರಪಂಚಸಂದರ್ಭಗಳು ಹೇಗೆಹೇಗೋ ಬದಲಾಯಿಸಿ, ಆ ಯೋಗ ಕಳೆದುಹೋಯಿತು."

ಹಾಗಾದದ್ದರಲ್ಲಿ ಏನೇನೂ ಆಶ್ಚರ್ಯವಿಲ್ಲ, ನಮ್ಮ ಕಣ್ಣೆದುರಿಗೆ ಹುಟ್ಟಿದ ಅನೇಕ ಧರ್ಮಗಳು ನಮ್ಮ ಕಣ್ಣೆದುರಿಗೇ ನಷ್ಟವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಭಗವದವತಾರಗಳು

ಶ್ರೀಕೃಷ್ಣನ ಪೂರ್ವಿಕಪ್ರಶಂಸೆಯನ್ನು ಕೇಳಿ ಅರ್ಜುನನಿಗೆ ಆಶ್ಚರ್ಯವಾಯಿತು. ಅವನು ಕೇಳಿದ :– "ಏನಯ್ಯಾ, ವಿವಸ್ವತ ಹುಟ್ಟಿದ್ದು ಯಾವಾಗ, ನೀನು ಹುಟ್ಟಿದ್ದು ಯಾವಾಗ? ನನ್ನ ಕಾಲದವನಾದ ನೀನು ನಮಗೆ ಹಿಂದೆ ಎಂದೋ ಇದ್ದವನಿಗೆ ಉಪದೇಶ ಕೊಟ್ಟದ್ದು ಹೇಗೆ ?"

ಈ ಅರ್ಜುನಪ್ರಶ್ನೆಯಿಂದ ಸ್ವಾಮಿಗೆ ತನ್ನ ಸ್ವಧರ್ಮನಿಷ್ಠೆಯನ್ನು ನಿರೂಪಿಸಲು ಅವಕಾಶವಾಯಿತು. ಸ್ವಾಮಿ ಹೇಳಿದ : "ಅರ್ಜುನ, ನೀನೂ ನಾನೂ ಇಂದಿನವರಲ್ಲ; ಮೊದಲಿನಿಂದಲೂ ಇರುವವರೇ. ನಿನಗೂ ನನಗೂ ವ್ಯತ್ಯಾಸ ಎರಡು ಸಂಗತಿಗಳಲ್ಲಿ : ಮೊದಲನೆಯದಾಗಿ, ನಿನ್ನ ಪೂರ್ವಜನ್ಮಗಳು ನಿನಗೆ ಮರೆತುಹೋಗಿವೆ; ನನ್ನ ಪೂರ್ವಜನ್ಮಗಳ ವೃತ್ತಾಂತ ನನಗೆ ಜ್ಞಾಪಕದಲ್ಲಿದೆ. ಎರಡನೆಯದಾಗಿ, ನಿನ್ನ ಪೂರ್ವಜನ್ಮಗಳು ನಿನ್ನ ಪುಣ್ಯಪಾಪಗಳ ಕಾರಣದಿಂದ ಆದವು; ನನ್ನ ಅವತಾರಗಳು ಧರ್ಮಸಂರಕ್ಷಣೆಗಾಗಿ ಆದವು.

> ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
> ಅಭ್ಯುತ್ಥಾನಮಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್ ॥
> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
> ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಸಜ್ಜನರನ್ನು ಕಾಪಾಡುವುದಕ್ಕೆ, ದುಷ್ಟರನ್ನು ಸಂಹಾರಮಾಡುವುದಕ್ಕೆ, ಧರ್ಮ ಸಂಸ್ಥಾಪನೆಗಾಗಿ ಸೃಷ್ಟಿಯ ಮೊದಲಿಂದ, ಯುಗಯುಗಗಳಲ್ಲೂ ನಾನು ಅವತಾರ ಮಾಡುತ್ತಲೇ ಇದ್ದೇನೆ."

ಧರ್ಮದ ಪೂಜ್ಯತೆ

ಧರ್ಮವು ದೈವಪ್ರತಿಷ್ಠಿತವಾದದ್ದು; ದೈವಪರಿಪೋಷಿತವಾದದ್ದು. ಯಾವ ಚಿಂತೆಯೂ ಇರಬೇಕಾದ ಕಾರಣವಿಲ್ಲದ ಪರಮೇಶ್ವರನು ಧರ್ಮಚಿಂತೆಯೊಂದನ್ನು ತಾನಾಗಿ ಇರಿಸಿಕೊಂಡಿದ್ದಾನೆ. ಹಾಗೆಂದಮೇಲೆ ಧರ್ಮದ ಮಹತ್ತ್ವ ಎಂಥಾದ್ದೆಂಬುದು ನಮ್ಮ ಮನಸ್ಸಿಗೆ ಬರಬೇಕಲ್ಲವೆ? ಧರ್ಮವೆನ್ನುವುದು ಈಶ್ವರನ ಸ್ವಂತ ಸ್ವತ್ತು : ಆದದ್ದರಿಂದ ನಮಗೆಲ್ಲ ಅದು ಪರಮಪೂಜ್ಯವಾದದ್ದು. ಸರ್ವದಾ ಈಶ್ವರನು ಎಲ್ಲವನ್ನೂ ನೋಡುತ್ತಲೇ ಇರುತ್ತಾನೆಂಬುದನ್ನು ಸ್ಮರಣೆಯಲ್ಲಿರಿಸಿಕೊಂಡಿರಬೇಕು. ಯೂರೋಪಿನ ಕವಿಯೊಬ್ಬನ ಮಾತು ಹೀಗಿದೆ :

Though the mills of God grind slowly,
And they grind exceeding small,
Though with patience He stands waiting,
With exactness grinds He all.

ಕರ್ಮದ ಗಾಣಕ್ಕೆ ಸಿಕ್ಕದಿರುವವರು ಯಾರೂ ಇಲ್ಲ. ಕೆಲವರು ಮೊದಲು, ಕೆಲವರು ಆಮೇಲೆ– ಅಷ್ಟೆ. ಧರ್ಮಮಾಡಿದವರು ಪಾರಾಗುತ್ತಾರೆ.

ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥

ವಿವೇಕಾವಶ್ಯಕತೆ

ಒಳ್ಳೆಯದು; ಧರ್ಮಕ್ಕೆ ದಾರಿ ಯಾವುದು? ಯಾರುಯಾರಿಗೆ ಯಾವಯಾವ ದಾರಿಯಲ್ಲಿ ಒಳ್ಳೆಯದನ್ನು ಹುಡುಕಬೇಕೆಂದು ಅಂತರಂಗದಲ್ಲಿ ಪ್ರೇರಣೆಯಾಗುತ್ತದೆಯೋ ಅವರವರಿಗೆ ಅದದು ಧರ್ಮದ್ವಾರ. ಜೀವಸ್ಥಿತಿಯನ್ನು–ಜೀವದ ಅಧಿಕಾರ ಭೇದವನ್ನು, ಅರ್ಹತೆ ಅನರ್ಹತೆಗಳನ್ನು–ಅನುಸರಿಸಿ ಧರ್ಮ. ಈ ವಿಷಯದಲ್ಲಿ "ಏಕ ಮೂಲಿಕಾ ಪ್ರಯೋಗ" ಸಾಧ್ಯವಿಲ್ಲ. ಒಂದೊಂದು ಜೀವದ ವಿಶೇಷಗುಣಗಳನ್ನನುಸರಿಸಿ ಆಯಾ ಜೀವಕ್ಕೆ ಧರ್ಮ ಉಂಟಾಗುತ್ತದೆ. ಅಂದರೆ, ಧರ್ಮಾನುಸಂಧಾನವು ವಿವೇಕದಿಂದ ಆಗತಕ್ಕದ್ದೇ ಹೊರತು ಅಂಧಶ್ರದ್ಧೆಯಿಂದ ಸಾಧ್ಯವಿಲ್ಲ.

> ಧರ್ಮೇ ಪ್ರಮೀಯಮಾಣೇ ಹಿ ವೇದೇನ ಕರಣಾತ್ಮನಾ ।
> ಇತಿಕರ್ತವ್ಯತಾಭಾಗಂ ಮೀಮಾಂಸಾ ಪೂರಯಿಷ್ಯತಿ ॥

ಮೀಮಾಂಸಾ ಎಂದರೆ ತರ್ಕ, ಪೂರ್ವಾಪರ ಆಲೋಚನೆ–ಶೋಧನೆ. ವಿಚಾರ ಮಥನ ಮಾಡಿ ತಿಳಿದುಕೊಳ್ಳಬೇಕೆಂದರ್ಥ.

ಹೀಗೆ ಧರ್ಮವು ಮೂಲತತ್ತ್ವ ಭಾಗದಲ್ಲಿ ಎಲ್ಲರಿಗೂ ಒಂದೇ; ಪ್ರಯೋಗಭಾಗದಲ್ಲಿ ಬೇರೆ ಬೇರೆ–ಅವನವನ ಅಪೇಕ್ಷೆ ಯೋಗ್ಯತೆಗಳಿಗೆ ತಕ್ಕಂತೆ. ಹೊಟ್ಟೆಯ ಸ್ಥಿತಿಯನ್ನೂ ನಾಲಗೆಯ ಸ್ಥಿತಿಯನ್ನೂ ಅನುಸರಿಸಿ ಆಹಾರ; ಜೀವದ ಸ್ಥಿತಿಯನ್ನನುಸರಿ ಧರ್ಮ. ಜೀವದ ಅಶಕ್ತಿಯನ್ನೂ ಅದು ಅನುಸರಿಸಬೇಕಾಗುತ್ತದೆ. ಹಸಿವು ತಡೆಯಲಾರದವರಿಗೆ ಉಪವಾಸವನ್ನು ವಿಧಿಸಲಾದೀತೆ? ಆಯಾ ಜೀವದ ಸ್ವಭಾವ ಪ್ರವೃತ್ತಿಯ ಪ್ರಕಾರದಿಂದ ಆಯಾ ಜೀವದ ಧರ್ಮವು ನಿಶ್ಚಿತವಾಗುತ್ತದೆ.

ಗುಣಕರ್ಮವಿಭಾಗ

ಜನರು ಬಗೆಬಗೆಯ ಬಯಕೆಗಳನ್ನಿರಿಸಿಕೊಂಡು ತಮ್ಮ ತಮ್ಮ ಇಷ್ಟಾರ್ಥಸಿದ್ಧಿಗಾಗಿ ನಾನಾ ದೇವತೆಗಳನ್ನು ಸೇವಿಸುತ್ತಾರೆ. ಅವರೆಲ್ಲರೂ ಭಗವನ್ಮಾರ್ಗದ ಯಾತ್ರಿಕರೇ. ಮನುಷ್ಯರ ಸಹಜ ಗುಣಗಳೂ ಸಹಜ ಪ್ರವೃತ್ತಿಗಳೂ ಸ್ವತ ಏವ ಪ್ರತ್ಯೇಕಪ್ರತ್ಯೇಕವಾಗಿರುವ ಕಾರಣದಿಂದಲೇ ಅವರನ್ನು ಧರ್ಮನಿರ್ಣಯಕ್ಕಾಗಿ ಸ್ಥೂಲದೃಷ್ಟಿಯಿಂದ ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದಾಗಿದೆ. “ಧರ್ಮಸಂಸ್ಥಾಪನೆಗಾಗಿ ನಾನು ಪುನಃ ಪುನಃ ಅವತಾರ ಮಾಡಿ ವರ್ಣಾಶ್ರಮವ್ಯವಸ್ಥೆಯನ್ನು ಗೊತ್ತು ಮಾಡಿ, ಅದಕ್ಕೆ ತಕ್ಕ ಫಲಾಫಲಗಳುಂಟಾಗುವಂತೆ ಕಟ್ಟುಮಾಡಿಸಿ, ಧರ್ಮಕರ್ಮವನ್ನು ಮಾಡುತ್ತಿದ್ದೇನೆ” –ಎಂದು ಹೇಳಿದ ಭಗವಂತ:

> ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ॥

ಜಾತಿವ್ಯವಸ್ಥೆಯನ್ನು ಕುರಿತು ಹೇಳಬೇಕಾದ ವಿಶೇಷಾಂಶ ಒಂದಿದೆ. ನಮ್ಮ ಕಾಲದ ಸುಧಾರಕರು (Reformers) ಜಾತಿನಿಯಮವು ಸಮಾನತ್ವತತ್ತ್ವಕ್ಕೆ ವಿರೋಧಿಯಾದದ್ದು, ಆದದ್ದರಿಂದ ಅದು ದೋಷ–ಎಂದು ವಾದಿಸುತ್ತಾರೆ. ಗೀತಾಚಾರ್ಯರ ಮತವು ಸಮಾನತ್ವವನ್ನು ಬೋಧಿಸುವುದೇ ಆದರೂ, ಆ ಸಮಾನತ್ವವು ಪ್ರಯೋಗ ಕ್ರಮದಿಂದ ಜೀವಹಿತದಲ್ಲಿ ಪರ್ಯಾವಸಾನವಾಗಬೇಕೆಂಬುದು ಅಂತರಂಗ. ವರ್ಣ ವ್ಯವಸ್ಥೆಯಲ್ಲಿ ಇರುವ ಮುಖ್ಯ ತಾತ್ಪರ್ಯವು ವ್ಯಷ್ಟಿಮನುಷ್ಯನು ತನ್ನ ಜನ್ಮದ ಉಪಾಧಿಗಳನ್ನು ಸಮಸ್ತರ ಸೇವೆಯಲ್ಲಿ ಸವೆಯಿಸಬೇಕೆಂಬುದು. ವ್ಯಷ್ಟಿಯ ಉತ್ಕರ್ಷವು ಮುಖ್ಯವಾದದ್ದು ನಿಜ; ಆದರೆ ಆ ಉತ್ಕರ್ಷವು ಬರಿಯ ತೋರಿಕೆಯ ಉತ್ಕರ್ಷವಾಗದೆ ವಾಸ್ತವವಾದ ಉತ್ಕರ್ಷವಾಗಬೇಕಾದರೆ ಅದು ಸಮಷ್ಟಿಯ ಅತ್ಯಂತ ಪ್ರಯೋಜನದಲ್ಲಿ ಪೂರಯಿಸಬೇಕು. ಸಮಷ್ಟಿಲೋಕದ ಅತ್ಯಂತ ಪ್ರಯೋಜನದಲ್ಲಿ ವ್ಯಷ್ಟಿಯ ಉತ್ಕರ್ಷವನ್ನು ಸಾಧಿಸಬೇಕೆಂಬುದು ವರ್ಣವ್ಯವಸ್ಥೆಯ ಆಧಾರತತ್ತ್ವ. ಆ ಅತ್ಯಂತ ಪ್ರಯೋಜನಕ್ಕೆ ಒದಗತಕ್ಕವು ವ್ಯಷ್ಟಿಯ ಸ್ವಾಭಾವಿಕವಾದ ಗುಣಕರ್ಮ ಶಕ್ತಿಗಳು.

ಭಗವದ್ವಾಕ್ಯವು ಸ್ವಾಭಾವಿಕವಾಗಿರುವ ವಸ್ತುಸ್ಥಿತಿಯನ್ನು ವರ್ಣಿಸುವುದೇ ಹೊರತು ಮನುಷ್ಯಕೃತಕಲ್ಪನೆಯನ್ನಲ್ಲ. ಮನುಷ್ಯಸಮಾಜದ ಈ ಚತುರ್ಭಾಗವ್ಯವಸ್ಥೆಯು

ಸ್ವಾಭಾವಿಕವಾದದ್ದು ಎಂದ ಮೇಲೆ ಅದು ಎಲ್ಲ ಮನುಷ್ಯಲೋಕಕ್ಕೂ ಎಲ್ಲ ದೇಶಗಳಿಗೂ ಅನ್ವಯಿಸತಕ್ಕದ್ದೆಂಬುದು ಸಿದ್ಧವಾಗಿದೆ.

ಜನತೆಯ ನಾನಾ ವರ್ಗಗಳಲ್ಲಿ ಸ್ವಾಭಾವಿಕವಾಗಿ ಹಂಚಿರುವ ನಾನಾ ಗುಣಗಳನ್ನೂ ಆ ನಾನಾ ಗುಣಗಳಿಂದ ಲೋಕಕ್ಕೆ ಆಗಬಹುದಾದ ನಾನಾ ಹಿತಕಾರ್ಯಗಳನ್ನೂ ನೋಡಿ ಜಾತಿವ್ಯವಸ್ಥೆಯನ್ನು ಭಗವಂತನೇ ಮಾಡಿದ್ದಾನೆ. ಪ್ರಕೃತಿಸಿದ್ಧವಾದ ಸತ್ತ್ವರಜಸ್ತಮೋಗುಣಗಳು ಯಾರ್ಯಾರಲ್ಲಿ ಯಾವ್ಯಾವ ಪ್ರಮಾಣದಲ್ಲಿ ಹೇಗೆ ಹೇಗೆ ಬೆರೆತಿವೆಯೋ ಅದಕ್ಕನುಸಾರವಾಗಿ ಜಾತಿಧರ್ಮ ಕುಲಧರ್ಮಗಳನ್ನು ಗೊತ್ತುಮಾಡಿರುವವನು ಅವನು.

ವರ್ಣವ್ಯವಸ್ಥೆಯನ್ನು ಉಪಸಂಹಾರಭಾಗದಲ್ಲಿ ಪುನಃ ವಿಚಾರಮಾಡುವುದಾಗುತ್ತದೆ.

ಕರ್ಮದಲ್ಲಿ ಅಕರ್ಮ

ತಾನು ಹೀಗೆ ಕರ್ಮಿಯಾಗಿದ್ದರೂ ತನಗೆ ಕರ್ಮದ ಸೋಂಕಿಲ್ಲವೆಂದು ಅರ್ಜುನನಿಗೆ ಹೇಳುತ್ತಾನೆ ಭಗವಂತ:

> ನ ಮೇ ಕರ್ಮಫಲೇ ಸ್ಪೃಹಾ ॥

“ಅರ್ಜುನ, ನೀನು ರಾಜ್ಯಲಾಭ ಕೀರ್ತಿ ಪ್ರತಿಷ್ಠೆಗಳಿಗಾಗಿ ಯುದ್ಧಮಾಡುವೆನೆಂದರೆ ಅದು ಅಯುಕ್ತವೇನೂ ಆಗದು. ಆ ಫಲ ಬೇಕಿಲ್ಲವೆಂದು ಕೇವಲ ಭಗವತ್ಪ್ರೀತಿಗೋಸ್ಕರ, ಕೇವಲ ಧರ್ಮಕರ್ತವ್ಯಬುದ್ಧಿಯಿಂದ, ಯುದ್ಧಮಾಡುವೆನೆಂದರೆ ಅದೂ ಯುಕ್ತವೇ ಆಗುತ್ತದೆ.”

> ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।
> ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಮ್ ॥

ಕೃಷ್ಣನು ಮಾಡರ್ನಿಸ್ಟ್ (Modernist) –ನವನವೀನಪಂಥಿ ಅಲ್ಲ; ಟ್ರೆಡಿಷನಲಿಸ್ಟ್ (Traditionalist) –ಸಂಪ್ರದಾಯಪಂಥಿ. ಆತನಿಗೆ ಕಾಲಪ್ರತಿಷ್ಠಿತವಾದದ್ದರಲ್ಲಿ ನಂಬಿಕೆ. ಅದೇ ಸನಾತನಧರ್ಮವೆಂಬಲ್ಲಿ “ಸನಾತನ” ಶಬ್ದದ ಅರ್ಥ. ಪೂರ್ವಿಕರಲ್ಲಿ ಲೋಕಭೋಗಗಳನ್ನಪೇಕ್ಷಿಸಿದವರು ಮಾತ್ರವೇ ಅಲ್ಲ, ಮೋಕ್ಷಾಪೇಕ್ಷಿಗಳು ಸಹ ಕರ್ಮಮಾಡಿದರು. ಮೋಕ್ಷವೆಂದರೆ ಬಿಡುಗಡೆ. ಬಿಡುಗಡೆ ಬೇಕೆಂದವರು ಕರ್ಮದ ನಿರ್ಬಂಧಕ್ಕೆ ಏಕೆ ಸಿಕ್ಕಿಹಾಕಿಕೊಂಡರು? ಭಗವಂತ ಅದನ್ನು ವಿವರಿಸುತ್ತಾನೆ:

> ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
> ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥

ಕರ್ಮ ಮೂರು ವಿಧ: (೧) ವಿಹಿತ ಕರ್ಮ, (೨) ವಿಕರ್ಮ, ಎಂದರೆ ನಿಷಿದ್ಧ ಕರ್ಮ. (೩) ಅಕರ್ಮ, ಎಂದರೆ ಮಾಡಿಯೂ ಮಾಡದಿದ್ದರೆ ಹೇಗೋ ಹಾಗೆ ನಿರ್ಲಿಪ್ತನಾಗಿರುವುದು. ಈ ಮೂರರ ಸ್ವಭಾವಗಳನ್ನು ತಿಳಿದುಕೊಳ್ಳಬೇಕು. ಏಕೆಂದರೆ ಕರ್ಮದ ಮಾರ್ಗ ಗಹನವಾದದ್ದು “ಗಹನಾ ಕರ್ಮಣೋ ಗತಿಃ ॥”

ಇಲ್ಲಿ ಮೂರು ವಿಧದ ಕರ್ಮಸಂದರ್ಭಗಳನ್ನು ಹೇಳಿದೆ: (೧) ಕರ್ಮ, (೨) ವಿಕರ್ಮ, (೩) ಅಕರ್ಮ.

1. **ಕರ್ಮ** ವೆಂದರೆ ಕರ್ತವ್ಯ, ವಿಹಿತವಾದ ಕರ್ಮ, ಸರಿಯಾದ ಕೆಲಸ: ಯಾವುದು ಮಾಡತಕ್ಕದ್ದೋ ಅದು.
2. **ವಿಕರ್ಮ** ವೆಂದರೆ ವಿಪರೀತಕರ್ಮ, ಯುಕ್ತವಲ್ಲದ ಕರ್ಮ, ತಕ್ಕದ್ದಲ್ಲದ ಕೆಲಸ; ಮಾಡಬಾರದ್ದು.
3. **ಅಕರ್ಮ** ವೆಂಬುದಕ್ಕೆ ಮೂರು ಅರ್ಥ ಸಾಧ್ಯ. ಆದದ್ದರಿಂದ ಹಿಂದು ಮುಂದಿನ ಸಂದರ್ಭವನ್ನು ಪರಿಶೀಲಿಸಿ ಅರ್ಥನಿರ್ಣಯ ಮಾಡಬೇಕು:
    - ವಿಹಿತಕರ್ಮವನ್ನು ಸಹ ಮಾಡದೆ ಬಿಟ್ಟಿರುವುದು, ತಕ್ಕ ಕೆಲಸವನ್ನೂ ಮಾಡದಿರುವುದು: ಯಾವುದನ್ನೂ ಏನನ್ನೂ ಮಾಡದಿರುವುದು:

        ಮಾ ತೇ ಸಂಗೋಽಸ್ತ್ವ ಕರ್ಮಣಿ ॥ (೨-೪೭)
        ಕರ್ಮ ಜ್ಯಾಯೋ ಹ್ಯಕರ್ಮಣಃ ।
        ನ ಪ್ರಸಿದ್ಧ್ಯೇದಕರ್ಮಣಃ ॥ (೩-೮)

    - ವಿಹಿತಕರ್ಮವನ್ನು ಮಾಡಿ ಅದರ ಫಲವನ್ನು ಮಾತ್ರ ಅಂಟಿಸಿಕೊಳ್ಳದಿರುವುದು. ಮಾಡಿದರೂ ಮಾಡದವನಂತೆ ಅನಾಯಾಸನಾಗಿ ನಿಶ್ಚಿಂತನಾಗಿರುವುದು:

        ಕರ್ಮಣ್ಯಕರ್ಮ ಯಃ ಪಶ್ಯೇತ್ ॥ (೪-೧೮)
        ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥ (೪-೨೦)
        ಕುರ್ವನ್ನಪಿ ನ ಲಿಪ್ಯತೇ ॥ (೫-೭)

    - “ವಿಕರ್ಮ” ಎಂಬ ಅರ್ಥವೂ ಉಂಟು. ಮಾಡಬಾರದ ಕರ್ಮ, ಅಕಾರ್ಯ. ಯಾವ ಕೆಲಸ ತಕ್ಕದ್ದಲ್ಲವೋ ಅದು. ಈ ಅರ್ಥದ ಪ್ರಯೋಗವು ಗೀತೆಯಲ್ಲಿಲ್ಲದಿದ್ದರೂ ಬೇರೆ ಕಡೆ ಅದು ಉಂಟು.

ಹೀಗೆ ಸಂದರ್ಭವನ್ನರಿತು ಅರ್ಥಯೋಜನೆ ಮಾಡತಕ್ಕದ್ದು.

ಅರ್ಜುನನಿಗೆ ಆತುರ. ಮೊದಲು ಯುದ್ಧಮಾಡಬೇಕೆಂಬ ಆತುರ; ಆಮೇಲೆ ಯುದ್ಧಬಿಡಬೇಕೆಂಬ ಆತುರ. ಈ ಆತುರದಿಂದ ವಿಕರ್ಮ ಮಾಡುವುದಾಗುತ್ತದೆ. ಅದರಿಂದಲೇ ಧರ್ಮನಿರ್ಣಯ ಮಾಡುವವರ ವಿಷಯದಲ್ಲಿ ಹೀಗೆ ಹೇಳಿರುವುದು:

> ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮಕಾಮಾಃ ಸ್ಯುಃ ।
> ಯಥಾ ತೇ ತತ್ರ ವರ್ತೇರನ್ । ತಥಾ ತತ್ರ ವರ್ತೇಥಾಃ ॥ (ತೈ. ಉ)
> ಧರ್ಮಶಾಸ್ತ್ರಾನುಸಾರೇಣ... ॥
> ಕ್ರೋಧಲೋಭವಿವರ್ಜಿತಃ ॥ (ಯಾಜ್ಞವಲ್ಕ್ಯಸ್ಮೃತಿ)

ಇಲ್ಲಿ ದಾರಿ ಯಾವುದು?

> ಕರ್ಮಣ್ಯಕರ್ಮ ಯಃ ಪಶ್ಯೇತ್ ಅಕರ್ಮಣಿ ಚ ಕರ್ಮ ಯಃ ।
> ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥

ಕರ್ಮತತ್ತ್ವವನ್ನೆಲ್ಲ ಈ ಶ್ಲೋಕದಲ್ಲಡಗಿಸಿಟ್ಟಿದ್ದಾನೆ ಸ್ವಾಮಿ. ಯಾರು ಕರ್ಮ ಮಾಡುವುದರಲ್ಲಿ ಮಾಡದಿರುವವನ ನಿರ್ಲೇಪ ನೆಮ್ಮದಿಗಳನ್ನು ಕಾಣಬಲ್ಲನೋ, ಹಾಗೆಯೇ ಕರ್ಮತ್ಯಾಗದಲ್ಲಿ ಕರ್ಮದ ಭೂತಹಿತವನ್ನು ಕಾಣಬಲ್ಲನೋ ಅವನೇ ಬುದ್ಧಿವಂತ. ಅವನೆ "ಕೃತ್ಸ್ನ ಕರ್ಮಕೃತ್" –ಸಮಸ್ತ ಕರ್ಮಗಳನ್ನೂ ಮಾಡಲು ಅರ್ಹನಾದವನು. ಅಂಥವನು ಎಲ್ಲ ಕರ್ಮಗಳನ್ನೂ ಮಾಡಿ ಯಾವೊಂದರ ಪರಿಣಾಮಕ್ಕೂ ಒಳಗಾಗದೆ ಇರುತ್ತಾನೆ. ಹಲಸಿನ ಹಣ್ಣನ್ನು ಸುಲಿಯಬೇಕು. ಕೈ ಕೊಳಕಾಗಬಾರದು. ಅದಕ್ಕಾಗಿ ಕೈಗೆ ಮೊದಲೇ ಜಿಡ್ಡು ಬಳಿದುಕೊಂಡಿರಬೇಕು. ಇದು ಉಪಾಯ. ಅದನ್ನೇ ಸ್ವಾಮಿ ಮುಂದೆ

> ಪದ್ಮಪತ್ರಮಿವಾಂಭಸಾ

ಎಂದು ದೃಷ್ಟಾಂತಪಡಿಸಿದ್ದಾನೆ. ನೀರಿನಲ್ಲಿ ತಾವರೆ ಎಲೆ ಹೇಗಿರುತ್ತದೆಯೋ ಹಾಗೆ ಮನುಷ್ಯನು ಲೋಕದಲ್ಲಿ ಜೀವನಮಾಡಬೇಕು. ಬಹಿರಂಗದಲ್ಲಿ ಲೋಕಶ್ರಮ ಮಾಡಬೇಕು. ಅಂತರಂಗದಲ್ಲಿ ವಿಕಾರಕ್ಕೆ ಸಿಕ್ಕಿಕೊಳ್ಳಬಾರದು. ಕರ್ಮಮಾಡುವುದರಲ್ಲಿ ಕರ್ಮದ ಕ್ಲೇಶಗಳನ್ನೂ ಮನೋವಿಕಾರಗಳನ್ನೂ ತಂದುಕೊಳ್ಳಬಾರದು. ಇದೇ ಅಭಿಪ್ರಾಯವೇ

ಅಲೇಪವಾದಮಾಶ್ರಿತ್ಯ ಶ್ರೀಕೃಷ್ಣಜನಕಾವುಭೌ

ಎಂಬ ಪ್ರಾಚೀನವಾಕ್ಯದಿಂದ ಹೊರಪಡುತ್ತದೆ.

ಅಸಂಗಕರ್ಮ

ಅಕರ್ಮ ಎನ್ನುವುದನ್ನು ಮತ್ತೂ ವಿವರಿಸುತ್ತಾನೆ ಭಗವಂತ:

> ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
> ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥

ಕರ್ಮಗಳಲ್ಲಿ ಪ್ರವೃತ್ತನಾಗಿದ್ದರೂ “ನೈವ ಕಿಂಚಿತ್ಕರೋತಿ ಸಃ” ಹೇಗೆ? ಅವನು ನಿತ್ಯತೃಪ್ತನಾಗಿ ನಿಷ್ಕಾಮಿಯಾಗಿರುವುದರಿಂದ. ಹಿಂದಿನ ಅಧ್ಯಾಯದಲ್ಲಿ ಹೇಳಿದ್ದಾಗಿದೆ:

> ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
> ಗುಣಾ ಗುಣೇಷು ವರ್ತನ್ತ ಇತಿ ಮತ್ವಾ ನ ಸಜ್ಜತೇ ॥

ಮನುಷ್ಯನ ಅಂತರಂಗಸ್ವಭಾವದಲ್ಲಿ ಕೆಲವು ಗುಣಗಳಿವೆ. ಬಹಿರಂಗಜಗತ್ತಿನಲ್ಲಿ ಕೆಲವು ಗುಣಗಳಿವೆ. ಇವೆರಡೂ ಪದೇಪದೇ ಒಂದನ್ನೊಂದು ಕೆಣಕುತ್ತಲೇ ಇರುತ್ತವೆ. ಇದು ಆತ್ಮಕ್ಕೆ ಸೇರಿದ ಕ್ರಿಯೆ ಅಲ್ಲ. ಪ್ರಕೃತಿಯಲ್ಲಿ ಇದು ನಡೆದುಹೋಗುತ್ತದೆ. ಆತ್ಮಕ್ಕೆ ಇದನ್ನು ಅಂಟಿಸತಕ್ಕದ್ದಲ್ಲ.

ಮನುಷ್ಯನಿಗಿರುವ ಸ್ವಾತಂತ್ರ್ಯವು ಕರ್ಮ ಯಾವುದು, ವಿಕರ್ಮ ಯಾವುದು ಅಕರ್ಮ ಯಾವುದು ಎಂದು ವಿವೇಕಮಾಡುವುದರಲ್ಲಿ. ಈ ವಿವೇಕಸ್ವಾತಂತ್ರ್ಯವಿರುವುದೂ ಕೊಂಚಮಾತ್ರವೇ. ಏಕೆಂದರೆ ವಿವೇಕಕ್ಕೂ ಜನ್ಮಾಂತರವಾಸನೆಯು ಕಟ್ಟುಗಳನ್ನು ಬಿಗಿಸಿರುತ್ತದೆ. ಆ ಮಿತಿಗೊಳಪಟ್ಟು ಪುರುಷವಿವೇಕ ಎಲ್ಲರಲ್ಲಿಯೂ ಸ್ವಲ್ಪವಾದರೂ ಇದ್ದೇ ಇರುತ್ತದೆ. “ನಾವು ಜ್ಞಾನಿಗಳಲ್ಲ” ಎನ್ನುವ ತಿಳಿವಳಿಕೆಯಾದರೂ–ಅಥವಾ ಒಂದು ವೇಳೆ ತಾವು ಜ್ಞಾನಿಗಳೆಂದುಕೊಂಡಿದ್ದರೂ ಹಾಗೆ ಹೇಳುವುದು ಯುಕ್ತವಲ್ಲವೆನ್ನುವ ತಿಳಿವಳಿಕೆಯಾದರೂ–ಅಂಥಾ ಆತ್ಮಶ್ಲಾಘನೆಯ ಅಪಾಯದ ಭಯವಾದರೂ–ಎಂಥವರಲ್ಲಿಯೂ ಇರುತ್ತದೆ. ಇರುವ ವಿವೇಕವನ್ನು ಉಪಯೋಗಿಸಿಕೊಂಡು ಮತ್ತಷ್ಟು ವಿವೇಕವನ್ನು ಸಂಪಾದಿಸಬೇಕು. ಆ ವಿವೇಕ ಬೆಳೆದಂತೆ ಅಸಂಗಾಭ್ಯಾಸ.

ಭಾರತದಲ್ಲಿಯೂ, ರಾಮಾಯಣದಲ್ಲಿಯೂ ಪದೇಪದೇ ಉಪಯೋಗಿಸುತ್ತಾರೆ ಒಂದು ಮಾತನ್ನು: “ರಾಮಸ್ಯ ಅಕ್ಲಿಷ್ಟಕರ್ಮಣಃ,” “ರಾಮಮಕ್ಲಿಷ್ಟಕರ್ಮಾಣಮ್”. ಧರ್ಮರಾಜನ ವಿಷಯದಲ್ಲಿಯೂ ಹಾಗೆಯೇ. ಆ ಮಹಾಪುರುಷರು ಕರ್ಮ ಮಾಡುತ್ತಾರೆ, ಆದರೆ ಅದರಿಂದ ಆಯಾಸಪಡುವುದಿಲ್ಲ. ಇದೇ ಅಲೇಪಯೋಗ. ಇದನ್ನೇ “ತ್ಯಕ್ತ್ವಾ ಕರ್ಮಫಲಾಸಂಗಮ್” ಎಂಬಲ್ಲಿ ಸೂತ್ರಿಸಿರುವುದು. “ಯಾರು ತಾನು ಮಾಡಿದ ಕೆಲಸದ ಫಲಿತದಲ್ಲಿ ಸ್ವಪ್ರಯೋಜನಾಕಾಂಕ್ಷೆಯನ್ನಿಟ್ಟುಕೊಂಡಿಲ್ಲವೋ, ಯಾರು ತೃಪ್ತಿಯುಳ್ಳವನೋ ಮತ್ತು ಪರಾಧೀನನಲ್ಲವೋ ಅಂಥವನು ಕರ್ಮಮಾಡಿದರೂ ಕರ್ಮ ಮಾಡಿದವನಾಗನು.”

“ನಿತ್ಯತೃಪ್ತಃ” ಎಂದಿದ್ದಾರೆ. ಇದು ಬಹಳ ಮುಖ್ಯವಾದ ಗುಣ. ಹಾಗೆಯೇ, “ನಿರಾಶ್ರಯಃ” ಇನ್ನೊಂದರ ಅವಲಂಬನೆ ಇವನಿಗಿರಬಾರದು: ಅನ್ಯಾಪೇಕ್ಷೆ ಕೂಡದು. ಮನುಷ್ಯನ ಒಳಗೆ ಋಜುವಾಗಿರುವುದು ಪೂರ್ತಿ ಹೊರಕ್ಕೆ ಬರುವುದು ಅನ್ಯಾವಲಂಬನೆ ಇಲ್ಲದಾಗಲೇ. “ನಿಃಸ್ಪೃಹಸ್ಯ ತೃಣಂ ಜಗತ್.” ಯಾವ ಆಶೆಯೂ ಇಲ್ಲದವನು ಕರ್ಮಗಳಲ್ಲಿ ಪ್ರವೃತ್ತನಾಗಿದ್ದರೂ “ನೈವ ಕಿಂಚಿತ್ಕರೋತಿ.” ಅವನು ಧರ್ಮ ತಿಳಿದವನು. ಸ್ತೋತ್ರ, ನಿಂದೆ, ಕೀರ್ತಿ, ಅಪಕೀರ್ತಿ–ಈ ಯಾವುದಕ್ಕೂ ಅವನು ಬೆಲೆ ಕೊಡುವುದಿಲ್ಲ. ಅವನು ಅಂತರಂಗದಲ್ಲಿ ಶ್ರಮಪಡುವುದಿಲ್ಲ: ಯಾವ ಕೆಲಸಕ್ಕೂ ತನ್ನ ಆತ್ಮವನ್ನು ಅಂಟಿಸಿಕೊಳ್ಳುವುದಿಲ್ಲ. ಎರಡನೆಯ ಅಧ್ಯಾಯದಲ್ಲಿಯೇ ಹೇಳಿದೆ:

> ನೈನಂ ಛಿನ್ದನ್ತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
> ನ ಚೈನಂ ಕ್ಲೇದಯನ್ತ್ಯಾಪೋ ನ ಶೋಷಯತಿ ಮಾರುತಃ ॥

ಜೀವದಶೆಯ ಜವಾಬ್ದಾರಿ

ಜ್ಞಾನಿಯು ಶ್ರಮಪಡುವುದಿಲ್ಲವೆಂದೂ ಯಾವ ಕೆಲಸಕ್ಕೂ ತನ್ನ ಆತ್ಮವನ್ನು ಅಂಟಿಸಿಕೊಳ್ಳುವುದಿಲ್ಲವೆಂದೂ ಹೇಳಿದೆವು. ಹಾಗೆಂದರೆ ಅವನಿಗೆ ಜವಾಬ್ದಾರಿಯ ಬುದ್ಧಿ ಇಲ್ಲವೆಂದು ತಾತ್ಪರ್ಯವೊ?

ಮೂಲವಸ್ತು ಒಂದು. ಅದು ಆತ್ಮ. ಅದಕ್ಕೆ ಜೀವದಶೆ ಬಂದಿದೆ. ಈ ಜೀವದಶೆಯಲ್ಲಿ ಜಬಾಬ್ದಾರಿಗಳುಂಟು. ಆತ್ಮದಶೆಯಲ್ಲಿ ಯಾವ ಲೇಪವೂ ಅದಕ್ಕಿಲ್ಲ. ಜೀವದಶೆಯಲ್ಲಿ ಜವಾಬ್ದಾರಿಗಳು, ಪುಣ್ಯಪಾಪಗಳು, ಧರ್ಮಾಧರ್ಮಗಳು–ಇವೆಲ್ಲ ಉಂಟು, ಖಂಡಿತವಾಗಿಯೂ ನಿರಂತರವಾಗಿಯೂ ಬಹುವಾಗಿಯೂ ಉಂಟು. ಆದದ್ದರಿಂದಲೇ ವಿವೇಕಮಾಡಬೇಕೆಂದು ಸ್ವಾಮಿ ಹೇಳುವುದು. ಕರ್ಮದ ದಾರಿ ತಿಳಿಯುವುದು ಕಷ್ಟ. ವಿಹಿತಕರ್ಮವನ್ನು ತಿಳಿಯುವುದೂ ಅದನ್ನು ಶ್ರಮವನ್ನನುಭವಿಸದೆ ಮಾಡುವುದೂ ಕಷ್ಟ. ಈ ಕೆಲಸ ಮಾಡಿದೆನೆಂಬ ಜಂಭ, ಈ ಕೆಲಸ ಮಾಡಲಿಲ್ಲವೆಂಬ ಪಶ್ಚಾತ್ತಾಪ–ಎರಡೂ ಇರಬಾರದು. ಯಾರು ಕರ್ತವ್ಯೈಕದೃಷ್ಟಿಯಿಂದ ಕರ್ಮಮಾಡುತ್ತಾನೋ ಅವನು ಬುದ್ಧಿಮಾನ್. ವೈದ್ಯರ ಉದಾಹರಣೆಯನ್ನು ಕೊಡಬಹುದು. ಅವರಿಗೆ ರಾಗವೂ ಇಲ್ಲ, ದ್ವೇಷವೂ ಇಲ್ಲ. ರೋಗಿಯ ದೇಹವನ್ನು ಸ್ವಾಭಾವಿಕಕ್ಕೆ ತರುವುದಷ್ಟೇ ಅವರ ದೃಷ್ಟಿ. ಈ ರೋಗಿ ಪಾಪಿ, ಕಳ್ಳ ಎಂದು ಅವರು ಎಂದೂ ಯೋಚನೆ ಮಾಡುವುದಿಲ್ಲ.

ಫಲಾಸಕ್ತಿ ಇರಬಾರದೆಂಬುದು ತತ್ತ್ವ. ಭಗವಂತನಿಗೆ ಪ್ರೀತಿಯಾಗಲೆಂದು, ಧರ್ಮ ನಡೆಯಲೆಂದು, ಕರ್ಮಮಾಡಬೇಕು. ಸತ್ಕರ್ಮದಲ್ಲೂ ಎರಡೂ ಘಟ್ಟಗಳನ್ನು ಹೇಳುತ್ತಾರೆ: ಭಗವತ್ಪ್ರೀತಿಯಿಂದ ಮಾಡಬೇಕೆನ್ನುವುದು ಮೊದಲ ಘಟ್ಟ; ಆತ್ಮಜ್ಞಾನದಿಂದ ಮಾಡಬೇಕೆನ್ನುವುದು ಎರಡನೆಯದು. ಆತ್ಮಜ್ಞಾನವು ಸುಲಭವಾಗಿ ದೊರಕತಕ್ಕದ್ದಲ್ಲ. ಅದು ತಾನಾಗಿ ಒಳಗಡೆಯಿಂದ ಬೆಳೆದುಕೊಂಡು ಬರತಕ್ಕದ್ದು. ಇದಾಗಬೇಕಾದರೆ ಮೇಲೆ ಹೊತ್ತಿರುವ ಮಲಗಳನ್ನು ತೆಗೆಯಬೇಕು. ಧರ್ಮಕರ್ಮದ ಮೂಲಕ ಈ ಮಲಗಳನ್ನು ಸವೆಸಬೇಕು.

ನಿಸ್ವಾರ್ಥಕರ್ಮ

ಫಲಾಭಿಸಂಧಿ ಬೇಡವೆಂಬ ತತ್ವ ಯಾರಿಗೆ? ಮೋಕ್ಷಾರ್ಥಿಗೆ. ಮೋಕ್ಷಾರ್ಥಿಗಳಾದವರು ನಮ್ಮಲ್ಲಿ ಎಷ್ಟು ಮಂದಿ ಇದ್ದೇವೆ? ಕಾಮ್ಯಾರ್ಥಿಗಳ ಸಂಖ್ಯೆಯೇ ಲೋಕದಲ್ಲಿ ಹೆಚ್ಚು. ನಾವೆಲ್ಲ ನಾನಾ ಕಾಮನೆಗಳುಳ್ಳವರು. ಅವೆಲ್ಲ ಒಳ್ಳೆಯ ಉದ್ದೇಶಗಳೇ ಇರಬಹುದು. ಅನ್ಯಾಯ ಮಾಡುತ್ತಿರುವವರನ್ನು ಧ್ವಂಸ ಮಾಡಬೇಕು, ನಮ್ಮ ದೇಶಕ್ಕೆ ಬೇಕಾದ ಅನ್ನವನ್ನು ನಾವೇ ಬೆಳೆದುಕೊಳ್ಳಬೇಕು, ನಾವು ಲೋಕದಲ್ಲಿ ಸುಪ್ರತಿಷ್ಠಿತರಾಗಬೇಕು–ಇತ್ಯಾದಿ. ಇಂಥ ಕಾಮ್ಯಾರ್ಥಗಳಿಗಾಗಿ ಕರ್ಮಮಾಡುವವರು–ಮಾಡಬೇಕಾದವರು–ನಾವು. ಮೋಕ್ಷಾರ್ಥಿಯೂ ಆ ಕರ್ಮಗಳನ್ನು ಮಾಡಬಹುದು. ಆದರೆ ಅವನು ಸ್ವತಂತ್ರವಾಗಿ ಮಾಡುತ್ತಾನೆ. "ನಿರಾಶ್ರಯಃ" ಎಂಬ ಶಬ್ದದ ಅರ್ಥ ಇದು.

ನಾವು ಒಂದಲ್ಲ ಒಂದು ಫಲವನ್ನಾಶ್ರಯಿಸಿ ಕೆಲಸ ಮಾಡುತ್ತೇವೆ. "ಕೃಪಣಾಃ ಫಲ ಹೇತವಃ". ಮಹರ್ಷಿಗಳು ಪ್ರಾರ್ಥನೆ ಮಾಡಿದ್ದು ಏನೆಂದು? "ಆಸ್ಮಿನ್ ರಾಷ್ಟ್ರೆ ಶೂರೋ ಜಾಯತಾಮಿತ್ಯಾಹ..." "ಶೂರನು ನಮ್ಮ ದೇಶದಲ್ಲಿ ಹುಟ್ಟಲಿ; ಒಳ್ಳೆಯ ಕುದುರೆಗಳು ಹುಟ್ಟಲಿ; ಸಭೆಗಳಲ್ಲಿ ಚರ್ಚೆಮಾಡುವ ಸಾಮರ್ಥ್ಯವುಳ್ಳ ಯುವಕರು ಹುಟ್ಟಲಿ; ವಾದ ವಿವಾದ ಮಾಡಲಿ" –ಇದೆಲ್ಲ ಒಂದು ದೃಷ್ಟಿಯಲ್ಲಿ ಸ್ವಾರ್ಥವೇ ಒಳ್ಳೆಯ ಸ್ವಾರ್ಥ, ಸುಸ್ವಾರ್ಥ, ಆದರೂ ಸ್ವಾರ್ಥ. ಸ್ವಾರ್ಥ ಇಲ್ಲದೆ, ಕೇವಲ ಧರ್ಮಕ್ಕೋಸ್ಕರ, ಲೋಕ ಸುಸ್ಥಿತಿಗೋಸ್ಕರ ಕರ್ಮ ಮಾಡಿದರೆ ಪಾಪ ಅಂಟುವುದಿಲ್ಲವೆಂದು ಸ್ವಾಮಿ ಅರ್ಜುನನಿಗೆ ಉಪದೇಶ ಮಾಡಿದ್ದು.

> ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
> ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥

ಆಯಾಸಮಾಡಿಕೊಳ್ಳದೆ, ದೊರೆತಷ್ಟರಿಂದ ತೃಪ್ತಿ, ಪ್ರಪಂಚದ ರಾಗದ್ವೇಷಾದಿಗಳಿಗಿಂತ ಮೇಲ್ಪಟ್ಟ ಮನಃಸ್ಥಿತಿ, ಅಸೂಯಾದಿಗಳ ವಿವರ್ಜನೆ, ಜಯಾಜಯಗಳಲ್ಲಿ ವಿಕಾರವಾಗದ ಏಕಚಿತ್ತತೆ. ಈ ಗುಣಗಳುಳ್ಳವನು ಕರ್ಮಮಾಡಿದರೂ ಅದು ಅವನಿಗೆ ಬಂಧನವಾಗುವುದಿಲ್ಲ. "ಯದೃಚ್ಛಾ" : ಯಾವುದೋ ಒಂದು ಪಾಡು ನಮ್ಮ ಪಾಲಿಗೆ ಬಂದಿದೆ; ಅದೇ ಇರಲಿ, "ದ್ವಂದ್ವಾತೀತಃ" ; ಪಾಪಪುಣ್ಯಗಳೂ ದ್ವಂದ್ವಕ್ಕೆ ಸೇರಿದ್ದೇ. ಆದರೆ ನಾವಷ್ಟು

ದೂರ ಹೋಗಬೇಕಾಗಿಲ್ಲ; ರಾಗದ್ವೇಷಾದಿಗಳೆಂದಿಟ್ಟುಕೊಳ್ಳಬಹುದು. “ವಿಮತ್ಸರಃ” : ಹೊಟ್ಟೆಕಿಚ್ಚಿಲ್ಲದೆ ಇರುವುದು. ಪದೇ ಪದೇ ಈ ಮಾತನ್ನು ಹೇಳುತ್ತಾನೆ ಸ್ವಾಮಿ. ಬಹಳ ಕಷ್ಟವಂತೆ ಇದರ ಅಭ್ಯಾಸ; ಅನಸೂಯೆ ಲೋಕದಲ್ಲಿ ತುಂಬಾ ಕಷ್ಟ– “ಸಮಸ್ಸಿದ್ಧಾವಸಿದ್ಧೌಚ” : ಒಂದು ಸಲ ನಾವಂದುಕೊಂಡಹಾಗಾಗಲಿಲ್ಲವೆಂದು ಬಿಟ್ಟುಬಿಡಬಾರದು; ಪುನಃಪುನಃ ಧರ್ಮಯತ್ನ ಮಾಡಬೇಕು. ಈ ಮನೋಭಾವದಿಂದ ಯಾರು ಕೆಲಸ ಮಾಡುತ್ತಾನೋ ಅವನು “ಕೃತ್ವಾಪಿ ನ ನಿಬಧ್ಯತೇ.” ಅವನಿಗೆ ಕರ್ಮದ ಪಾಶವಿಲ್ಲ.

ಕರ್ಮಯಜ್ಞ

> ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
> ಯಜ್ಞಾಯಾಚರಿತಂ ಕರ್ಮ ಸಮಗ್ರಂ ಪ್ರವಿಲೀಯತೇ ॥

ಫಲಾತುರವಿಲ್ಲದೆ, ವ್ಯಾಮೋಹ ಬಿಟ್ಟು, ತತ್ತ್ವಜ್ಞಾನನಿಷ್ಠನಾದವನು ಮಾಡುವ ಕರ್ಮವು ಯಜ್ಞ. ಹಾಗೆ ಯಜ್ಞವೆಂದು ಮಾಡಿದ ಕರ್ಮವು ಅವನಿಗೆ ಪರಿಣಾಮ ತಾರದೆ ಪೂರ್ತಿ ಕರಗಿಹೋಗುತ್ತದೆ.

ಮಾಡಬೇಕಾದ ಪ್ರತಿಯೊಂದು ಕಾರ್ಯವನ್ನೂ ಯಜ್ಞಬುದ್ಧಿಯಿಂದ ಮಾಡಬೇಕು. ಶ್ರುತಿಯ ಉಪದೇಶವೂ ಇದೇ: ಯಜ್ಞಬುದ್ಧಿಯಿಂದ ಬದುಕಬೇಕೆಂದು. ಯಜ್ಞವೆಂದರೆ ನಮ್ಮ ಮನಸ್ಸಿನಲ್ಲಿ ಹವನ, ಹೋಮ, ತುಪ್ಪ ಇತ್ಯಾದಿಗಳ ಚಿತ್ರ ಏಳಬಹುದು. ಅದಲ್ಲ. ಎಲ್ಲ ಪೂಜಾಕಾರ್ಯವೂ ಯಜ್ಞವೇ. ವ್ಯಾಕರಣದಲ್ಲಿ ಇರುವುದೇ ಹಾಗೆ: “ಯಜಪೂಜಾಯಮ್”. ರೂಢಿಯಿಂದ ಯಜ್ಞಕ್ಕೆ ಆಹುತಿ, ಅರ್ಪಣೆ ಎಂದರ್ಥ ಬಂದಿದೆ. ತನಗೆ ಪ್ರಿಯವಾದದ್ದನ್ನು ಅನ್ಯಪ್ರೀತ್ಯರ್ಥವಾಗಿ ಸಮರ್ಪಿಸುವುದು ಯಜ್ಞ.

ಫಲಾಭಿಲಾಷೆಯನ್ನು ಬಿಡತಕ್ಕದ್ದೆಂದು ಹಿಂದೆ ಹೇಳಿದರಷ್ಟೆ? ಅದಕ್ಕಿಂತ ಸುಲಭವಾಗಿ ನಮಗೆ ಗ್ರಾಹ್ಯವಾಗತಕ್ಕದ್ದು ಈ ಭಾವನೆ. ಬಹಳ ಪ್ರಸಿದ್ಧವಾದದ್ದು ಈ ಶ್ಲೋಕ:

> ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
> ಬ್ರಹ್ಮೈವ ತೇನ ಗನ್ತವ್ಯಂ ಬ್ರಹ್ಮಕರ್ಮಸಮಾಧಿನಾ ॥

ಜ್ಞಾನಿಯು ಮಾಡುವ ಎಲ್ಲ ಕರ್ಮವೂ ಯಜ್ಞವೇ. ಆ ಯಜ್ಞದ ಎಲ್ಲ ಅವಯವಗಳೂ ಉಪಕರಣಗಳೂ ಬ್ರಹ್ಮಮಯವಾದವು. ಯಜ್ಞಕ್ರಿಯೆ ಬ್ರಹ್ಮಕ್ಕೆ ಅರ್ಪಿತವಾದದ್ದು; ಹಾಗೆ ಯಜ್ಞದಲ್ಲಿ ಸಮರ್ಪಿತವಾದ ಹವಿಸ್ಸು ಬ್ರಹ್ಮದ್ದು; ಆ ಹವಿಸ್ಸನ್ನು ಸ್ವೀಕರಿಸುವ ಅಗ್ನಿ ಬ್ರಹ್ಮ; ಹೋಮ ಮಾಡುವವನೂ ಬ್ರಹ್ಮ. ಹೀಗೆ ಬ್ರಹ್ಮಕರ್ಮನಿಷ್ಠನಾದವನು ಪಡೆಯುವ ಲಾಭ ಬ್ರಹ್ಮ. ಮಾಡುವವನು, ಮಾಡಿದ್ದು, ಮಾಡಿಸಿಕೊಂಡದ್ದು–ಎಲ್ಲ ಬ್ರಹ್ಮತನ್ಮಯ. ಸಮಸ್ತ ಜೀವನಕ್ರಿಯೆಯೂ ಪರಬ್ರಹ್ಮ ಪೂಜೆಯೇ. ಇದೇ ಅಭಿಪ್ರಾಯವನ್ನೇ ಶ್ರುತಿ ಹೇಳಿರುವುದು:

> ತಸ್ಯೈವಂ ವಿದುಷೋ ಯಜ್ಞ ಸ್ಯಾತ್ಮಾ ಯಜಮಾನಶ್ರದ್ಧಾ ಪತ್ನೀ
> ಶರೀರಮಿಧ್ಮಮುರೋವೇದಿರ್ಲೋಮಾನಿ ಬರ್ಹಿರ್ವೇದಶ್ಶಿಖಾ ಹೃದಯಂ
> ಯೂಪಃ ಕಾಮ ಆಜ್ಯಂ ಮನ್ಯುಃ ಪಶುಃ... ಯನ್ಮರಣಂ ತದವಭೃಥಃ ॥

ಜ್ಞಾನಿಯ ಯಜ್ಞದ ಸ್ವರೂಪ ಹೀಗೆಂದಿದ್ದಾರೆ. ಈ ಯಜ್ಞಕ್ಕೆ ಆತ್ಮಚೈತನ್ಯವೇ ಯಜಮಾನ. ಯಜ್ಞ ಮಾಡಲು ಸಪತ್ನೀಕನೇ ಅಧಿಕಾರಿಯಾದದ್ದರಿಂದ "ಶ್ರದ್ಧಾಪತ್ನೀ", ಶ್ರದ್ಧೆಯೇ ಭಾರ್ಯೆ, ಶರೀರವೇ ಸೌದೆ: ಹೃದಯವೇ ಯೂಪಸ್ತಂಭ, ಕಾಮನೆಗಳೇ ಆಜ್ಯ. ಕೋಪವೇ ಯಜ್ಞಪಶು. ಯಜ್ಞವೆಲ್ಲ ಸಾಂಗವಾಗಿ ನೆರವೇರಿತೆಂದು ಮಾಡುವ ಸಮಾಪನ ಸ್ನಾನವೇ ಅವಭೃಥ. ಜ್ಞಾನಿಗೆ ಮರಣವೇ ಆ ಅವಭೃಥಸ್ನಾನ. ಅವನು ಮರಣದ ವಿಷಯದಲ್ಲಿ ಭಯಪಡುವುದಿಲ್ಲ. ಅದಕ್ಕೆ ಪ್ರತಿಯಾಗಿ ಅವಭೃಥಸ್ನಾನ ಮಾಡುತ್ತಿರುವವನು ಯಜ್ಞ ಸಾಂಗವಾಗಿ ನೆರವೇರಿತೆಂದು ಹೇಗೆ ಸಂತೋಷಪಡುತ್ತಾನೋ ಹಾಗೆ ತನ್ನ ಜೀವನವು ಬ್ರಹ್ಮಾರ್ಪಿತವಾಯಿತೆಂದು ಸಂತೋಷಿಸುತ್ತಾನೆ.

ಗೀತೆಯ ಮೂರನೆಯ ಅಧ್ಯಾಯದಲ್ಲಿ ಇದೇ ಅಭಿಪ್ರಾಯವನ್ನು ನೋಡಿದೆವು.

> ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
> ತದರ್ಥಂ ಕರ್ಮ ಕೌನ್ತೇಯ ಮುಕ್ತಸಂಗಃ ಸಮಾಚರ ॥
> ಯಜ್ಞ ಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ ॥

ನಮ್ಮ ಸುಖಸಂತೋಷಗಳೆಲ್ಲ ದೇವರು ಕೊಟ್ಟ ಪ್ರಸಾದ. ಊಳಿಗ ಮಾಡಿದ್ದು ನಮ್ಮ ಕೈಯಾದರೂ ವರ ಕೊಟ್ಟದ್ದು ದೇವರ ಕೈ. ಇಷ್ಟು ಮಾತ್ರ ಸರ್ವದಾ ನಮ್ಮ ಸ್ಮರಣೆಯಲ್ಲಿ ಇದ್ದರೆ ನಮ್ಮನ್ನು ಪಾಪ ಸೋಕದು.

ಕರ್ಮಮಾಡಿಯೂ ಪಾಪ ಅಂಟದಿರುವ ಒಂದು ಮಾರ್ಗವನ್ನು ಭಗವಂತನು ಉಪದೇಶ ಮಾಡುತ್ತಿದ್ದಾನೆ. ಬೇಕುಬೇಕಾದ ಲೋಕಸುಖಗಳನ್ನು ಪಡಿ; ಅದೆಲ್ಲ ಈಶ್ವರಪ್ರಸಾದ ಎನ್ನುವುದನ್ನು ಮಾತ್ರ ಮರೆಯಬೇಡಿ, ಯಾವಾಗಲೂ ಬ್ರಹ್ಮಸ್ಮೃತಿಯಿರಲಿ–ಎಂದು ಈ ಉಪದೇಶದ ತಾತ್ಪರ್ಯ.

ಸ್ಮೃತಿಮಾತ್ರೇಣ ಯತ್ಪುಂಸಾಂ ಬ್ರಹ್ಮ ತನ್ಮಂಗಲಂ ವಿದುಃ ॥
ಯಸ್ಮ ಸ್ಮರಣಮಾತ್ರೇಣ ಜನ್ಮಸಂಸಾರಬಂಧನಾತ್
ವಿಮುಚ್ಯತೇ ನಮಸ್ತಸ್ಮೈ ವಿಷ್ಣವೇ ಪ್ರಭವಿಷ್ಣವೇ ॥

ಬ್ರಹ್ಮವಸ್ತುವಿನ ಸ್ಮರಣಮಾತ್ರದಿಂದಲೇ ನಮಗೆ ಮಂಗಲವುಂಟಾಗುತ್ತದೆ. ಹೇಗೆ? ಬ್ರಹ್ಮವಸ್ತು ಅತ್ಯಂತ ದೊಡ್ಡದು. ಅದರ ಮಹಿಮೆಯ ಯೋಚನೆ ಮನಸ್ಸನ್ನು ತುಂಬಿದ್ದರೆ ಪಾಪದ ಯೋಚನೆ ಬರುವುದಿಲ್ಲ.

ಸುಖಪಡುವುದು ನಿಷಿದ್ಧವಲ್ಲ, ಯುಕ್ತ ಎಂದು ಹೇಳಿದ ಮೇಲೆ ಅದನ್ನು ಸಂಪಾದಿಸಲು ಬೇಕಾದ ಏರ್ಪಾಟುಗಳನ್ನೆಲ್ಲ ಮಾಡಲೇಬೇಕು: ಸಂಸಾರನಿರ್ವಹಣೆ, ಸಂಬಳ ಮನೆಗೆತರುವುದು, ತುರ್ತು ಬಂದಾಗ ಸಾಲ ತರುವುದು, ಅದನ್ನು ತೀರಿಸುವುದು–ಸಹಾಯಬೇಡುವುದು, ಸಹಾಯನೀಡುವುದು, ಪರಿದಾಡುವುದು–ಈ ಸಮಸ್ತವೂ ಕರ್ತವ್ಯವಾಗುತ್ತದೆ.

ಶಂಕರಾಚಾರ್ಯರ ಉಪದೇಶ ಹೀಗಿದೆ:

ಯೋಗರತೋ ವಾ ಭೋಗರತೋ ವಾ ಸಂಗರತೋ ವಾ ಸಂಗವಿಹೀನಃ ।
ಯಸ್ಯ ಬ್ರಹ್ಮಣಿ ರಮತೇ ಚಿತ್ತಂ ನನ್ದತಿ ನನ್ದತಿ ನನ್ದತ್ಯೇವ ॥

ಕಾರಿನ ಡ್ರೈವರನ್ನು ಏರ್ಪಾಟುಮಾಡಿದರೆ ಕಾರಿನ ಭಾಗಗಳೆಲ್ಲ ಸರಿಯಾಗಿದೆಯೆ, ಪೆಟ್ರೋಲಿದೆಯೆ ಇದನ್ನೆಲ್ಲ ನೋಡಿಕೊಳ್ಳುವುದು ಅವನ ಹೊಣೆಯಾಗುತ್ತದೆ. ಭಗವಂತ ಧರ್ಮವೆಂಬುದನ್ನು ಸ್ಥಾಪಿಸಿದ್ದಾನೆ. ಅದನ್ನು ಸರಿಯಾಗಿ ನಡಸಿಕೊಂಡು ಹೋಗುವ ಜವಾಬ್ದಾರಿ ನಮ್ಮದು.

ಸರ್ವಸಂಸಾರಕಾರ್ಯವೂ ಭಗವತ್ಸೇವೆಯೆಂಬ ಭಾವನೆಯನ್ನು ನಮ್ಮ ಕನಕದಾಸರು ಬಹಳ ಸುಲಭವಾದ, ಸುಂದರವಾದ ಮಾತುಗಳಲ್ಲಿ ಹೇಳಿದ್ದಾರೆ:

ತನು ನಿನ್ನದು ಜೀವನ ನಿನ್ನದೋ ರಂಗ ॥
ಎನದಾವುದೊಂದನೀ ಜಗದೊಳು ನಾ ಕಾಣೆ ॥

ಅನುದಿನದಲಿ ಬಹ ಸುಖದುಃಖ ನಿನದಯ್ಯ॥

ಸಮಸ್ತ ವೇದಾಂತದ ಸಾರ ಇದು. ನಮ್ಮ ಜೀವನವೆಲ್ಲ ಒಂದು ಯಜ್ಞ. ಯಜ್ಞ ಎಷ್ಟೋ ಬಗೆ ಎನ್ನುತ್ತಾನೆ ಭಗವಂತ:

ದ್ರವ್ಯಯಜ್ಞಾಸ್ತಪೋಯಜ್ಞಾಃ ಯೋಗಯಜ್ಞಾಸ್ತಥಾಽಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥
ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ ವಿದ್ಧಿ ತಾನ್ ಸರ್ವಾನ್ ಏವಂ ಜ್ಞಾತ್ವಾ ವಿಮೋಕ್ಷ್ಯಸೇ ॥

ಭಗವತ್ಸಮಕ್ಷತೆ

ಅವರವರ ಬುದ್ಧಿಗೆ ತೋರಿದ್ದು, ಅವರವರ ಮನಸ್ಸಿಗೆ ಒಪ್ಪಿದ್ದು, ಅವರವರ ಶಕ್ತಿಗೆ ಒಗ್ಗಿದ್ದು, ಅವರವರ ಅನುಕೂಲಕ್ಕೆ ತಕ್ಕದ್ದು ಯಾವಯಾವುದೋ ಅದನ್ನೆಲ್ಲ ಮಾಡುವಾಗಲೂ ಬೇಡುವಾಗಲೂ "ಶ್ರೀಕೃಷ್ಣಪ್ರಸೀದ" ಎಂದುಕೊಂಡರೆ, –ಅದನ್ನೆಲ್ಲ ಅನುಭವಿಸುವಾಗ "ಶ್ರೀಕೃಷ್ಣಾರ್ಪಣ" ಎಂದುಕೊಂಡರೆ, ಅದು ಯಜ್ಞವಾಗುತ್ತದೆ. ಅದನ್ನು ಅನ್ನಬೇಕಾದದ್ದು ಬಾಯಿಂದ ಅಲ್ಲ, ಮನಸ್ಸಿನಿಂದ. ಅಂತರಂಗದ ಆಳದಲ್ಲಿರಬೇಕು ಆ ಭಾವ. ಪ್ರಸಿದ್ಧವಾದ ಈ ಶ್ಲೋಕದ ಅಭಿಪ್ರಾಯವೂ ಅದೇ:

> ಆತ್ಮಾ ತ್ವಂ ಗಿರಿಜಾ ಮತಿಃ ಪರಿಚರಾಃ ಪ್ರಾಣಾಃ ಶರೀರಂ ಗೃಹಮ್ ।
> ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ ॥
> ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರಃ ।
> ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್ ॥

ಮೇಲೆ ನಾವು ಉದಾಹರಿಸಿದ "ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ" ಇತ್ಯಾದಿ ಉಪನಿಷದ್ವಾಕ್ಯದ ತಾತ್ಪರ್ಯವೂ ಇದೇ. ಪರಶಿವನಿಗೆ "ಶರೀರಂ ಗೃಹಮ್". ವಿಷಯೋಪಭೋಗರಚನೆಯೇ "ತೇ ಪೂಜಾ". "ಎವೆಯಿಕ್ಕದೆ ನೋಡುವ ನೋಟ ನಿನದಯ್ಯ". "ಷಡುರಸದನ್ನಕೆ ನಲಿದಾಡುವ ಜಿಹ್ವೆ ನಿನದಯ್ಯ" ಎನ್ನುತ್ತಾರೆ ಕನಕದಾಸರು. ಯಜ್ಞಬುದ್ಧಿಯಿಂದ ಯಾವಜ್ಜೀವವೂ ಬದುಕಬೇಕು. "ಯನ್ಮರಣಂ ತದವಭೃಥಃ" : ಮರಣ ಕೂಡ ಯಜ್ಞಾಂಗವಾದ ಒಂದಾನೊಂದು ಕರ್ಮ. ಯಜ್ಞ ಶಬ್ದಕ್ಕೆ ವಿಸ್ತಾರವಾಗಿ ಅರ್ಥಮಾಡಬೇಕು. ಜ್ಞಾನಯಜ್ಞ ಎಂಬ ಮಾತಿನಲ್ಲಿಯ ಜ್ಞಾನ ಶಬ್ದದಿಂದ ತತ್ತ್ವಜ್ಞಾನ, ಪ್ರಕೃತಿವಿಜ್ಞಾನ, ಗಣಿತಶಾಸ್ತ್ರ ಇತ್ಯಾದಿ ಸಮಸ್ತ ಜ್ಞಾನವನ್ನೂ ಗ್ರಹಿಸಬೇಕು. ನಾನಾ ಭೌತವಿಜ್ಞಾನ ಜೈವವಿಜ್ಞಾನ ಸಮಾಜವಿಜ್ಞಾನ ಮೊದಲಾದ ಪ್ರಕೃತ ಕಾಲದ ಸಯನ್ಸ್ ವಿದ್ಯೆಗಳೂ ಜ್ಞಾನವೇ– ವೈಜ್ಞಾನಿಕರೂ ಯಜ್ಞನಿಷ್ಠರೇ. ಎಲ್ಲ ವಿದ್ಯೆಗಳೂ ಎಲ್ಲ ಕಲೆಗಳೂ ಎಲ್ಲ ಜ್ಞಾನಗಳೂ ಆತ್ಮಹಿತಕ್ಷೇತ್ರದಲ್ಲಿ ಸಮನ್ವಯ ಹೊಂದುತ್ತವೆ.

ಹಳೆಯ ಕಾಲದ ಜನ ಭೋಜನ ಸಮಯದಲ್ಲಿ ಇತರರೊಡನೆ ಮಾತನಾಡದೆ "ಕವಳೇ ಕವಳೇ ಗೋವಿಂದಮ್" ಎಂಬ ವ್ರತ ಹಿಡಿದು ತುತ್ತು ತುತ್ತಿಗೂ ಭಗವನ್ನಾಮಸ್ಮರಣೆ ಮಾಡುತ್ತಿದ್ದರು. ಭೋಜನಕಾಲದಲ್ಲಿ ಶ್ಲೋಕ ಹೇಳುವ ಪದ್ಧತಿಯೂ ಅದೇ ವ್ರತವೇ. ನಮ್ಮ ಕಾಲದಲ್ಲಿ ಭಗವನ್ನಾಮಸ್ಮರಣೆಗೆ ನಾಗರಿಕರೂಢಿ ಪ್ರತಿಕೂಲವಾಗಿದೆ. ಮಹಾತ್ಮಗಾಂದಿಯವರು ಅದನ್ನು ಪುನಃ ಆಚರಣೆಗೆ ತರಲು ಯತ್ನಿಸಿದರು. ಕೆಲವಂತಸ್ತಿನ ಮನಸ್ಸುಗಳಿಗೆ ನಾಮಸಂಕೀರ್ತನೆ ಯಥೋಚಿತ ಸಂಸ್ಕಾರವಾಗುತ್ತದೆ. ಆ ಬಗೆಯ ಮನೋಧರ್ಮ ಉಳ್ಳವರಿಗೆ ನಾಮೋಚ್ಚಾರಣೆಯೂ ಒಂದು ಯಜ್ಞ. ನಾನಾ ಯಜ್ಞಗಳಿಗೂ ಎರಡು ವಿಧವಾದ ಫಲಗಳು: ಒಂದು ಸದ್ಯಸ್ಸಂಕಲ್ಪಸಿದ್ಧಿ, ಇನ್ನೊಂದು ಆನುಕ್ರಮಿಕ ಜೀವೋನ್ನತಿ.

ನಾವು ಮಾಡುವ ಕೆಲಸ ನಮ್ಮ ಇಷ್ಟಾರ್ಥಸಾಧನೆಗೋಸ್ಕರವೇ ಆದರೂ ಅದನ್ನು ಮಾಡುವಾಗ ಅದು ಒಂದು ಯಜ್ಞವೆಂಬ ಭಾವನೆಯಿಂದ–ಅದು ಭಗವತ್ಸೇವೆ ಎಂಬ ಭಾವನೆಯಿಂದ–ಮಾಡಿದರೆ, ಆ ರೀತಿಯಲ್ಲಿ ನಮ್ಮ ಮನಸ್ಸು ಪದೇಪದೇ ಭಗವಂತನ ಕಡೆಗೆ ತಿರುಗಿ, ಹಾಗೆ ನಮ್ಮ ಅಹಂಭಾವ ಸವೆದು, ಹಾಗೆ ಕೊಂಚಕೊಂಚವಾಗಿ ಜೀವವು ಶುದ್ಧವಾಗುತ್ತದೆ. ಜೀವವು ಶುದ್ಧವಾದಂತೆಲ್ಲ ಅದು ತತ್ತ್ವಗ್ರಹಣಕ್ಕೆ ಸಮರ್ಥವಾಗುತ್ತದೆ.

ಅವರವರ ಶಕ್ತಿಯನ್ನನುಸರಿಸಿ ಅವರವರು ಕರ್ಮಮಾಡುತ್ತಾರೆ. ಕುಚೇಲನಲ್ಲಿದ್ದದ್ದು ಏನು? ಒಂದು ಹಿಡಿ ಅವಲಕ್ಕಿ: ಅದು ಹೇಗೆ ಅಕ್ಷಯವಾಯಿತು? ಕೃಷ್ಣಾರ್ಪಣ ಎಂದದ್ದರಿಂದ. ಎಲ್ಲವನ್ನೂ ಕೃಷ್ಣಾರ್ಪಣಬುದ್ಧಿಯಿಂದ ನೋಡಬೇಕು. ಯಾವುದನ್ನು ಸ್ವೀಕರಿಸುತ್ತೇವೋ ಅದೆಲ್ಲ ಕೃಷ್ಣಾನುಗ್ರಹ ಎಂಬ ಭಾವನೆ ಉಂಟಾಗಬೇಕು. ನನ್ನ ಹಿರಿಯರೊಬ್ಬರು ಊಟ ಮಾಡುವಾಗ ಒಂದು ತೆಲುಗು ಪದ್ಯ ಹೇಳುತ್ತಿದ್ದರು: "ಒಂದು ಅಗುಳು ಹೆಚ್ಚಿಲ್ಲ; ಒಂದಗುಳು ಕಡಮೆಯಿಲ್ಲ. ಒಂದು ಘಳಿಗೆ ಹಿಂದೆ ಇಲ್ಲ; ಒಂದು ಘಳಿಗೆ ಮುಂದೆ ಇಲ್ಲ. ಒಂದು ತೊಟ್ಟು ನೀರು ಹೆಚ್ಚಿಲ್ಲ; ಒಂದು ತೊಟ್ಟು ಕಡಮೆಯಿಲ್ಲ. ಸ್ವಾಮಿ, ನೀನು ಎಷ್ಟು ವಿಧಾಯಕ ಮಾಡಿದ್ದೀಯೋ ಅಷ್ಟೇ ನನ್ನ ಹೊಟ್ಟೆಯೊಳಕ್ಕೆ ಹೋಗುತ್ತದೆ." ಮಂತ್ರ ಹೇಳಿದ ಮೇಲೆ ಅವರು ಈ ಪದ್ಯ ಹೇಳಿ ಆಪೋಶನ ತೆಗೆದುಕೊಳ್ಳುತ್ತಿದ್ದರು. ವೈದಿಕರು ಭೋಜನಪ್ರಾರಂಭದಲ್ಲಿ "ಶ್ರದ್ಧಾಯಾಂ ಪ್ರಾಣೇ ನಿವಿಶ್ಯ... ಪ್ರಾಣಾಯಸ್ವಾಹಾ" ಎಂದು ಹೇಳುವುದರ ಅಭಿಪ್ರಾಯವಾದರೂ ಅದೇ: ಭಗವಂತನ ಸಾನ್ನಿಧ್ಯದ ಸಂತತವಾದ ಸ್ಮರಣೆ. ಇಂಗ್ಲಿಷಿನಲ್ಲಿಯೂ ಹೇಳುತ್ತಾರೆ: Practice of the Presence of God ಎಂದು:

ಸರ್ವದಾ ಈಶ್ವರನು ನೋಡುತ್ತಿದ್ದಾನೆಂಬ ಭಾವನೆ. ಈ ಭಗವತ್ಸಮಕ್ಷತೆಯ ಭಾವನೆ ಒಂದು ಸಾವಿರ ಸಂಪಿಗೆ ಹೂಗಳಿಂದಾಗಲಿ ಹತ್ತು ಸಾವಿರ ಮಲ್ಲಿಗೆ ಹೂಗಳಿಂದಾಗಲಿ ಬರಲಾರದು. ಮೊದಲು ಆ ಭಾವನೆಯಿದ್ದರೆ ಆಮೇಲೆ ಹೂರಾಶಿಯ ಪೂಜೆಗೆ ಅರ್ಥವುಂಟಾಗುತ್ತದೆ. ಮನಸ್ಸಿನ ಪರಿಪಾಕ ಮುಖ್ಯ. "ಪತ್ರಂ ಪುಷ್ಪಂ ಫಲಂ ತೋಯಮ್" ಎಂದು ಸ್ವಾಮಿ ಹೇಳಿರುವುದೂ ಇದನ್ನೇ.

> ಯಜ್ಞಶಿಷ್ಟಾಮೃತಭುಜೋ ಯಾನ್ತಿ ಬ್ರಹ್ಮ ಸನಾತನಮ್ ।
> ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ ॥

ಯಜ್ಞಭಾವನೆಯಿಲ್ಲದೆ ಕರ್ಮಮಾಡುವವನಿಗೆ ಇಹಲೋಕದ ಶುಭವೇ ದೊರೆಯುವುದಿಲ್ಲ, ಇನ್ನು ಲೋಕಾಂತರದಲ್ಲಿ ಸದ್ಗತಿ ಹೇಗಾದೀತು? ಪುರುಷಾರ್ಥಗಳಲ್ಲಿ ಸರ್ವಶ್ರೇಷ್ಠವಾದದ್ದು ಮೋಕ್ಷ. ಕರ್ಮವು ಧರ್ಮಾರ್ಥಕಾಮಸಾಧಕವಾದದ್ದು. ಹಾಗಾದರೂ ಆ ಕರ್ಮವೇ ಮೋಕ್ಷಕ್ಕೆ ಅವಶ್ಯವಾದ ಪೂರ್ವಸಿದ್ಧತೆ. ಮೋಕ್ಷವೆಂದರೆ ಜಗದ್ಭಾರದಿಂದ ಬಿಡುಗಡೆ. ನಾವು ಆತ್ಮತತ್ತ್ವವನ್ನು ತಿಳಿಯದಿರುವ ಕಾರಣದಿಂದ ಮಾಯಾಮೋಹಗಳು ನಮ್ಮನ್ನು ಆವರಿಸಿ ಬಿಗಿದು ಜೀವನವು ಭಾರವಾಗಿ ತೋರುವಂತೆ ಮಾಡಿವೆ. ಆ ಭಾರವನ್ನಿಳಿಸಬೇಕಾದರೆ ನಾವು ಜೀವ, ಈಶ್ವರ, ಪರಮಾತ್ಮ–ಈ ತತ್ತ್ವಗಳ ಸ್ವರೂಪವನ್ನರಿಯಬೇಕು. ಅದೇ ತತ್ತ್ವಜ್ಞಾನ. ಈ ಜ್ಞಾನಕ್ಕೆ ಮಾರ್ಗವು ಲೋಕದಲ್ಲಿಯ ಕರ್ಮಸಂಸ್ಕಾರ.

> ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
> ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥

ಯಾರು ನಾನು ಯಜ್ಞಮಾಡುತ್ತಿದ್ದೇನೆಂದು ತಿಳಿಯುತ್ತಾನೋ ಅವನಿಗೆ ಎಷ್ಟು ಬಂದರೆ ಅಷ್ಟರಿಂದ ತೃಪ್ತಿ, ಸಂತೋಷ. ತನಗೆ ದೊರೆತದ್ದು ಈಶ್ವರಾನುಗ್ರಹ, ತಾನು ಇತರರಿಗೆ ಕೊಡಲಾದದ್ದು ಈಶ್ವರಾರ್ಪಣ–ಈ ಅನುಗ್ರಹ ಅರ್ಪಣಗಳೆಂಬ ಎರಡು ದಡಗಳ ನಡುವೆ ಯಾವನ ಜೀವನದಿ ಹರಿಯುತ್ತಿರುತ್ತದೆಯೋ ಅವನು ಪುಣ್ಯಶಾಲಿ, ಅವನು ಬ್ರಹ್ಮಸಮುದ್ರವನ್ನು ಬೇಗ ಸೇರುತ್ತಾನೆ. ಸಂತತವಾದ ಈಶ್ವರಸ್ಮರಣೆಯಿಂದ ಅವನಿಗೆ ಭಗವತ್ಸ್ವರೂಪ ಗೊತ್ತಾಗುತ್ತದೆ: "ಜ್ಞಾನೇ ಪರಿಸಮಾಪ್ಯತೇ."

ಸತ್ಕರ್ಮಪ್ರಯೋಜನ

ಹೀಗೆ ಸತ್ಕರ್ಮ ಮಾಡುವುದರಿಂದ ನಾಲ್ಕು ವಿಧವಾದ ಪ್ರಯೋಜನ:

1. ಇಷ್ಟಪ್ರಾಪ್ತಿ: ಗಜೇಂದ್ರ ಮೋಕ್ಷ, ಧ್ರುವನ ಕಥೆ–ಇವುಗಳಲ್ಲಿರುವಂತೆ.
2. ಭಕ್ತಿಯ ಅಭ್ಯಾಸ: ನಮಗಿಂತ ದೊಡ್ಡವನು ಮೇಲೊಬ್ಬನಿದ್ದಾನೆ ಎಂಬುದರ ಅನುಭವ; ನಮ್ಮ ಪ್ರೀತಿಗೆ, ಪೂಜೆಗೆ, ಸೇವೆಗೆ ವಿಧೇಯತೆಗೆ ಅರ್ಹವಾದ ವಸ್ತು ಒಂದಿದೆ ಎಂಬ ಭಾವನೆ. ಇದೇ ಸಮಾಧಾನ, ಧೈರ್ಯ.
3. ಅಹಂಕಾರಕ್ಷಯ: ನಾನು ಎನ್ನುವುದು ಭ್ರಾಂತಿ, ನನ್ನ ಹಿಂದೆ ಮಹಾ ಚೈತನ್ಯ ಸಮುದ್ರ ಒಂದಿದೆ–ಎಂಬುದರ ಸಂತತಾನುಭವ.
4. ತತ್ತ್ವಗ್ರಹಣಾರ್ಹತೆ: ಮನಸ್ಸಿನ ಸಿದ್ಧತೆ.

ಆತ್ಮತತ್ತ್ವವನ್ನು ಬುದ್ಧಿ ಸ್ವಲ್ಪಮಟ್ಟಿಗೆ ಗ್ರಹಿಸೀತು. ಪೂರ್ತಿ ಗ್ರಹಿಸಬೇಕಾದರೆ ಅದು ಅನುಭವಕ್ಕೆ ಬರಬೇಕು. ಅನುಭವ ಬೇಕಾದರೆ ಸಮಸ್ತ ಅಂತಃಕರಣಗಳೂ ಏಕೀಭವಿಸಿ ಕೆಲಸ ಮಾಡಬೇಕು. ಅಹಂತೆಯ ಕಾಠಿನ್ಯಗಳೆಲ್ಲ ಹೋಗಬೇಕು. ಈ ಸಂಸ್ಕಾರಗಳೆಲ್ಲ ಸಿದ್ಧತೆಯನ್ನು ತರುತ್ತವೆ ಆತ್ಮಸಾಕ್ಷಾತ್ಕಾರಕ್ಕೆ. “ಬುದ್ಧಿಗ್ರಾಹ್ಯಮತೀಂದ್ರಿಯಮ್” (೬–೨೧). ಅಂತರಂಗದಲ್ಲಿ ನಂಬಿಕೆ ಉಂಟಾಗಬೇಕು. ಅಂತರಂಗವೆಂಬ ಕನ್ನಡಿ ನಿರ್ಮಲವಾಗಬೇಕು:

> ಧೂಮೇನಾವ್ರಿಯತೇ ವಹ್ನಿರ್ಯಥಾಽಽದರ್ಶೋ ಮಲೇನ ಚ ॥

ಕನ್ನಡಿಯನ್ನು ಒರಸಿ ಚೊಕ್ಕಟಮಾಡತಕ್ಕದ್ದು ಕರ್ಮ.

ಜ್ಞಾನಸಂಪಾದನೆ

ಬರಿಯ ಕರ್ಮಪೂರ್ವಕವಾದ ಸಿದ್ಧತೆ ಬಂದದ್ದರಿಂದ ಜ್ಞಾನ ಬರುತ್ತದೊ? ಅಷ್ಟೇ ಸಾಲದು. ಜ್ಞಾನಕ್ಕೆ ಬೇರೆ ಪ್ರಯತ್ನವೂ ಬೇಕು. ಏನದು?

> ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
> ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥

ಪ್ರಣಿಪಾತವೆಂದರೆ ನಮಸ್ಕಾರಮಾಡುವುದು: ವಿನಯಸೂಚನೆ–ದೊಡ್ಡ ವಿಷಯದಲ್ಲಿ ಕುತೂಹಲವಿದೆ ಎಂಬುದರ ಸೂಚನೆ. ಇಂಗ್ಲಿಷಿನಲ್ಲಿ Earnestness, Receptivity ಎನ್ನುವುದೂ ಇದನ್ನೇ. ಗ್ರಹಣಸಿದ್ಧತೆಯು ಜ್ಞಾನಾರ್ಥಿಯ ಮೊದಲನೆಯ ಲಕ್ಷಣ.

ಎರಡನೆಯ ಲಕ್ಷಣ–ಪರಿಪ್ರಶ್ನೆ: ವಿಷಯವನ್ನು ಸುತ್ತಿಸುತ್ತಿ ಪ್ರಶ್ನೆ ಹಾಕುವುದು. ಪದೇಪದೇ ಯೋಚನೆಮಾಡಿ, ಇರಬಹುದಾದ ಶಂಕೆಗಳನ್ನು ಹೇಳಿ ಉತ್ತರ ಪಡೆದು ಪರಿಹಾರಮಾಡಿಕೊಳ್ಳುವುದು.

ಮೂರನೆಯದು: "ಸೇವಯಾ". ಸರ್ವದಾ ಗುರುಜನರ ಜೊತೆಯಲ್ಲಿರುವುದು. ಗುರುವು Theory –ಶುದ್ಧತತ್ತ್ವವನ್ನು ಮಾತಿನಿಂದ ವಿವರಿಸಿಯಾನು. ಅದರ ಅನುಸಂಧಾನವನ್ನು ಆತನ ನಡವಳಿಕೆಯಿಂದಲೇ ತಿಳಿದುಕೊಳ್ಳಬೇಕು. "ಕೆಲವಂ ಮಾಳ್ಪವರಿಂದೆ ಕಂಡು…" ಮನೋವಿಕಾರ ಉಂಟಾಗಬಹುದಾದ ಸಂದರ್ಭದಲ್ಲಿ ಗುರುಗಳು ಹೇಗೆ ನಡೆದುಕೊಳ್ಳುತ್ತಾರೆ; ಸಂದಿಗ್ಧದಲ್ಲಿ ಅವರು ಹೇಗೆ ನಡೆದುಕೊಳ್ಳುತ್ತಾರೆ–ಅದನ್ನು ಕಾದು ನೋಡಿ ತಿಳಿದುಕೊಳ್ಳಬೇಕು.

ತತ್ತ್ವದ ಸಾರಾಂಶವಾಕ್ಯ ಇದು:

> ಯಜ್ಜ್ಞಾತ್ವಾನ ಪುನರ್ಮೋಹಮ್ ಏವಂ ಯಾಸ್ಯಸಿ ಪಾಂಡವ ।
> ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥

“ಯಾವುದನ್ನು ತಿಳಿದುಕೊಂಡ ಬಳಿಕ ನಿನ್ನನ್ನು ಈಗ ಮುಸುಕಿರುವಂಥ ಮೋಹ ಮರಳಿ ನಿನಗೆ ಬರಲಾರದೋ ಮತ್ತು ಯಾವುದನ್ನು ಕಂಡ ಬಳಿಕ ನೀನು ಜಗತ್ತಿನ ಎಲ್ಲ ಜೀವಿಗಳನ್ನೂ ನಿನ್ನೊಳಗೂ ಹಾಗೆಯೇ ನನ್ನೊಳಗೂ ಕಾಣಲಾಗುವುದೋ ಆ ತಿಳಿವಿನ ವಿಷಯವೇ ಪರಮತತ್ತ್ವ. ಆ ತಿಳಿವಳಿಕೆ ಬಂದ ಮೇಲೆ ನಿನಗೆ ಪಾಪ ಹೇಗೆ ಬಂದೀತು? ಪಾಪವೆಂದರೆ ಪರರಿಗೆ ಮಾಡಿದ ಅಪಕಾರ.”

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।
ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್ ॥

ತನ್ನಿಂದ “ಪರ” ವೆಂಬುದೊಂದೂ ಬೇರೆಯೆಂಬುದೊಂದೂ ಜಗತ್ತಿನಲ್ಲಿ ಕಾಣದಾಗ “ಪರರು” ಎಂಬುವರ್ಯಾರು? ಆತ್ಮಜ್ಞಾನಿಗೆ ಪರರೆಂಬುದೇ ಇಲ್ಲ. ಪರಪೀಡನೆ ಹೇಗಾಗಬೇಕು? ಪರೋಪಕಾರವೆಂಬುದು ಕೂಡ ಹೇಗೆ? ತಾನು ಇನ್ನೊಬ್ಬನಿಗೆ ಉಪಕಾರ ಮಾಡಿದೆನೆಂಬುದು ಸ್ವಾಭಿಮಾನ. ಸರ್ವಾತ್ಮೈಕಸಂದರ್ಶಿಗೆ ಪರರೆಂಬುದಿಲ್ಲ; ಆದದ್ದರಿಂದ ಪುಣ್ಯಪಾಪ ಸ್ಪರ್ಶವೂ ಇಲ್ಲ.

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥

ಇವನು ನನ್ನವನು, ಇವನು ಹೊರಗಿನವನು ಎಂಬ ಎಣಿಕೆ ಸಾಮಾನ್ಯ ಮನುಷ್ಯನಿಗೆ. ಆದದ್ದರಿಂದ ಅವನಿಗೆ ಪುಣ್ಯಪಾಪಗಳ ವಿಚಾರವುಂಟು, ಪರಮತತ್ತ್ವವನ್ನು ಬಲ್ಲ ಉದಾರಿಗೆ ಜಗತ್ತೆಲ್ಲ ತನ್ನ ಆತ್ಮವಿಸ್ತಾರವೇ ಆಗಿರುತ್ತದೆ. ಹೀಗೆ ತತ್ತ್ವಜ್ಞಾನವು ಜಗದ್ಭೇದಗಳನ್ನೂ ಭೇದಜನ್ಯಗಳಾದ ಮೋಹಲೋಭಗಳನ್ನೂ ತಜ್ಜನ್ಯಗಳಾದ ದ್ವೇಷಮಾತ್ಸರ್ಯಗಳನ್ನೂ ನಿವಾರಿಸುತ್ತದೆ.

ಜ್ಞಾನಂ ಲಬ್ಧ್ವಾ ಪರಾಂ ಶಾನ್ತಿಮ್ ಅಚಿರೇಣಾಧಿಗಚ್ಛತಿ ॥

ದೃಢನಿಶ್ಚಯದ ಆವಶ್ಯಕತೆ

“ಅರ್ಜುನ, ತತ್ತ್ವದ ದೃಷ್ಟಿಯಿಂದ ನೋಡಿದರೆ ನಿನಗೆ ಈಗಿರುವ ಶಂಕೆಗಳು ನಿರಾಧಾರವೆಂದು ಗೊತ್ತಾಗುತ್ತದೆ. ಆತ್ಮವಿಷಯದಲ್ಲಿ ದೃಢನಿಶ್ಚಯವನ್ನು ಮಾಡಿಕೋ. ಸಂಶಯವನ್ನು ಮಾತ್ರ ಮನಸ್ಸಿನಲ್ಲಿರಿಸಿಕೊಳ್ಳಬೇಡ.

> ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ॥
> ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥

ಕರ್ಮವೋ, ಜ್ಞಾನವೋ, ಧರ್ಮವೋ, ಸಂನ್ಯಾಸವೋ–ಈ ಡೋಲಾವಸ್ಥೆಬೇಡ. ಅದರಿಂದ ನೀನು ಉಭಯಭ್ರಷ್ಟನಾಗುವೆ. ಯಾವುದಾದರೊಂದನ್ನು ಗಟ್ಟಿಯಾಗಿ ನಂಬು, ಅದರಿಂದಲೇ ನಿನಗೆ ಸದ್ಗತಿಪ್ರಾಪ್ತಿಯಾಗುವುದು.

ದೊಡ್ಡ ಹೊಟೇಲೊಂದರಲ್ಲಿ ಭೋಜನಕೂಟಕ್ಕೆ ಆಹ್ವಾನ ಬಂದಿದೆಯೆಂದಿಟ್ಟುಕೊಳ್ಳೋಣ. ಆಮೇಲೆ ಆಹೊತ್ತು ಏಕಾದಶಿಯೆಂದು ತಿಳಿದುಬಂದರೆ ಸಂಪ್ರದಾಯಸ್ಥನ ಮನಸ್ಸಿಗುಂಟಾಗುವ ದ್ವೈಧೀಭಾವವನ್ನು ಊಹಿಸಬಹುದು. ಹೋಗದೆ ಮನೆಯಲ್ಲಿ ಕುಳಿತವನು ಹೊಟೇಲಿನಲ್ಲಿ ತನ್ನ ಸ್ನೇಹಿತರು ಪಡುತ್ತಿರುವ ಸಂಭ್ರಮಗಳನ್ನು ಕುರಿತು ಯೋಚನೆಯಾಡುತ್ತಿರುತ್ತಾನೆ. ಭೋಜನಕ್ಕೆ ಹೋದವನು “ಎಲಾ, ಈ ಹೊತ್ತು ಏಕಾದಶಿ, ಇಲ್ಲಿ ಬಂದು ತಿನ್ನುತ್ತಿದ್ದೇನಲ್ಲಾ!” ಎಂದು ಮನಃಕಷಾಯಕ್ಕೆ ಒಳಗಾಗುತ್ತಾನೆ. ಇಬ್ಬರೂ ಸಂಶಯಾತ್ಮರೇ ಇವನು ಊಟವನ್ನು ಚೆನ್ನಾಗಿ ಮಾಡಲಿಲ್ಲ; ಅವನು ಏಕಾದಶಿಯೆಂದು ಭಗವದ್ಧ್ಯಾನವನ್ನೂ ಮಾಡಲಿಲ್ಲ.

ಯಾವುದಾದರೊಂದನ್ನು ದೃಢವಾಗಿ ನಂಬಬೇಕು: ಕರ್ಮವನ್ನೋ ಜ್ಞಾನವನ್ನೋ ಯಾವುದಾದರೊಂದನ್ನು. ಆಗಲೇ ಮನಸ್ಸಿಗೆ ಶಾಂತಿಯುಂಟಾಗುವುದು. ನಂಬಿಕೆಯೇ ಧೈರ್ಯ; ಧೈರ್ಯವೇ ಸಂತೋಷ. ಈ ಹೊತ್ತಿನ ಪ್ರಪಂಚದಲ್ಲಿ ಸಹಸ್ರಾರು ತತ್ತ್ವಗಳು ಸೃಷ್ಟಿಯಾಗಿಬಿಟ್ಟಿವೆ – ಲೆಕ್ಕವಿಲ್ಲದಷ್ಟು. ಆದರೆ ಇವುಗಳಲ್ಲಿ ಮನಸ್ಸಿಗೆ ನಂಬಿಕೆ ಉಂಟುಮಾಡುವ ತತ್ತ್ವ ಯಾವುದೂ ಇಲ್ಲ. ನಂಬಿಕೆಯನ್ನು ಕದಲಿಸುವಂಥವು ಅನೇಕ. “ನಾನು ಬದುಕಿರುವುದು ಈ ಉದ್ದೇಶಕ್ಕಾಗಿ. ನನ್ನಚಿಂತೆಗಳು ಪರಿಹಾರವಾಗುವುದು

ಇದರಿಂದ" –ಎಂದು ಯಾವುದರಲ್ಲಾದರೂ ಬಲವಾದ ನಂಬಿಕೆ ಇಲ್ಲದಿರುವುದೆ ನಮ್ಮ ಕಾಲದ ದಾರಿದ್ರ್ಯ. ನಮ್ಮ ಬಡತನಗಳಲ್ಲೆಲ್ಲ ತುಂಬ ದೊಡ್ಡ ಬಡತನ ಈ ಶ್ರದ್ಧಾದಾರಿದ್ರ್ಯ.

ಶ್ರೀಕೃಷ್ಣನ ಉಪದೇಶ ಇದು. "ಅರ್ಜುನ, ನಿನ್ನ ಹೃದಯದೊಳಗೆ ಅಜ್ಞಾನದಿಂದ ಹುಟ್ಟಿದ ಸಂಶಯ ಕುಳಿತಿದೆ. ಅದನ್ನು ಆತ್ಮಜ್ಞಾನದ ಶಕ್ತಿಯಿಂದ ಕತ್ತರಿಸಿ, ಭಗವತ್ಕರ್ಮಯೋಗದಲ್ಲಿ ನೆಲಸು, ಏಳು, ಯುದ್ಧಕ್ಕೇಳು."

ನಿರ್ಲೇಪಯೋಗ

“ಯೋಗಸಂನ್ಯಸ್ತಕರ್ಮಾಣಮ್” ಎಂಬ ಮಾತಿನಿಂದ ಈ ಅಧ್ಯಾಯಕ್ಕೆ ಜ್ಞಾನ ಕರ್ಮ ಸಂನ್ಯಾಸಯೋಗವೆಂದು ಹೆಸರು ಬಂದಿರುವಂತೆ ತೋರುತ್ತದೆ. ಶಂಕರಭಾಷ್ಯದಲ್ಲಿ ಈ ಅಧ್ಯಾಯವನ್ನು ಬ್ರಹ್ಮಯಜ್ಞಪ್ರಶಂಸಾ ಎಂದು ಕರೆದಿದೆ. ಸಾಮಾನ್ಯ ಜನದ ದೃಷ್ಟಿಗೆ ಇದರಲ್ಲಿಯ ಮುಖ್ಯ ಬೋಧನೆ “ಕರ್ಮಣ್ಯಕರ್ಮ ಯಃ ಪಶ್ಯೇತ್” ಎಂಬುದು. ಕರ್ಮ ಮಾಡಬೇಕು, ಅದರ ಮಲ ಅಂಟಿಕೊಳ್ಳದಂತೆ ಮಾಡಬೇಕು. ಆದದ್ದರಿಂದ ಈ ಅಧ್ಯಾಯವನ್ನು ನಿರ್ಲೇಪಕರ್ಮಯೋಗವೆಂದು ಕರೆದರೂ ಸಾಧುವಾಗುತ್ತದೆ.

ಅಲೇಪ ಅಥವಾ ನಿರ್ಲೇಪ ಎಂದರೆ ಅವಗುಣ–ನಾಸ್ತಿತ್ವವಾಯಿತು. ಇದು (ನೆಗಟಿವ್) ನಞ್ ರೂಪದ್ದು. ಅದು ಗುಣದ ಅಸ್ತಿತ್ವವಾಗಲಿಲ್ಲ. ಒಂದು ವಸ್ತುವೋ ಕ್ರಿಯೆಯೋ ಪ್ರಯೋಜಕವಾಗಬೇಕಾದರೆ ಅದರಲ್ಲಿ ಒಂದು (ಪಾಸಿಟಿವ್) ಅಸ್ ರೂಪದ ಗುಣವಿರಬೇಕು. ಕೆಟ್ಟದ್ದು ಹೋದಮಾತ್ರದಿಂದ ಒಳ್ಳೆಯದು ಬಂತೆಂದು ಆಗುವುದಿಲ್ಲ. ಊಟದ ಎಲೆಯನ್ನು ತೊಳೆದು ಚೊಕ್ಕಟಪಡಿಸಿದ್ದರಿಂದ ನಾಲಗೆ ಸವಿದು ಹೊಟ್ಟೆ ತುಂಬಿದಂತಾಗಲಿಲ್ಲ. ಆ ಎಲೆಯ ಮೇಲೆ ಭಕ್ಷ್ಯಭೋಜ್ಯಗಳು ಬಂದಾಗ ಸೊಗಸು. ಹಾಗೆಯೇ ನಿರ್ಲಿಪ್ತವಾದ ಮನಸ್ಸು ಯೋಗವನ್ನು ಸಂಪಾದಿಸಬೇಕು. ಯೋಗವೆಂದರೆ ಮತ್ತೊಂದು ವಸ್ತುವಿನಲ್ಲಿ ಸೇರಿಕೊಳ್ಳುವುದು. ಜೀವವು ಭಗವಂತನಲ್ಲಿ ಸೇರಿಕೊಂಡಾಗ ಅದು ಯೋಗ. ವಿಹಿತಕರ್ಮನಿಷ್ಠವಾಗಿ ಲೇಪವಂಟದ ಅಥವಾ ಲೇಪವನ್ನು ತೊಳೆದು ಶುದ್ಧವಾದ ಮನಸ್ಸು ಕ್ರಮಕ್ರಮವಾಗಿ ಪರಮಾತ್ಮನಲ್ಲಿ ಜೀವವನ್ನು ಹೊಂದಿಸುವುದು ನಿರ್ಲೇಪಕರ್ಮಯೋಗ.

ಸಂಗ್ರಹ

ಲೋಕಾರ್ಥಮೆ ಭಗವಂತಂ ।
ಸಾಕಾರದಿ ಕರ್ಮಿಯಾಗೆ ನೀನೆಲ್ಲವ ತತ್- ॥
ಸ್ವೀಕಾರಕ್ಕೆಂದೆಸಗಲ್ ।
ವ್ಯಾಕುಲಕೆಡೆಯಿಲ್ಲವಿದು ಚತುರ್ಥಾಧ್ಯಾಯಂ ॥

ನರಸ್ವಾಂತಪರೀಪಾಕವಿಚಕ್ಷಣನಧೋಕ್ಷಜನ್ ।
ಶಿರವಂ ವಜ್ರವಾಗಿಪ್ಪನುರಮಂ ಸುಧೆಯಾಗಿಪಂ ॥

ಅನುಬಂಧ ೧ : ಈಶ್ವರನ ಅಧಿಕಾರವ್ಯವಸ್ಥೆ

> ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
> ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್ ॥ (೪–೭)

> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
> ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ (೪–೮)

> ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
> ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ (೯–೨೨)

ಸದ್ವಸ್ತುವನ್ನು–ಎಂದರೆ ಯಾವ ವಸ್ತುವು ನಿಜವಾಗಿ ಇರುತ್ತದೋ, ಯಾವುದಕ್ಕೆ ಅಸ್ತಿತ್ವವುಂಟೋ ಅದನ್ನು ನಾಲ್ಕು ಪ್ರಕಾರವಾಗಿ ಭಾವಿಸಬಹುದು:

1. ಪರಬ್ರಹ್ಮ–ಇದು ನಿರಾಕಾರ, ನಿರ್ವಿಕಾರ, ನಿಷ್ಕ್ರಿಯ ಮತ್ತು ನಿಷ್ಪ್ರಪಂಚ.
2. ಈಶ್ವರ ಅಥವಾ ಜಗದೀಶ್ವರ–ಇದು ಸಾಕಾರವೂ, ಸವಿಕಾರವೂ, ವ್ಯವಹಾರಸಹಿತವೂ ಆಗಿರುವ ಬ್ರಹ್ಮವಿಷಯಕ ಭಾವನೆ. ಇದೇ ಜಗತ್ತನ್ನು ಆಳುವ ಸಂಬಂಧವುಳ್ಳದ್ದು.
3. ಪ್ರಕೃತಿ–ಇದೇ ಜಗತ್ತು. ನಾಮರೂಪವ್ಯವಹಾರಮಯವಾದದ್ದು, ಈಶ್ವರಾಧೀನವಾದದ್ದು.
4. ಜೀವ–ಇದು ನಾನಾ ಪ್ರಾಣಿರೂಪವಾದದ್ದು, ಜಗತ್ತಿನ ವ್ಯಷ್ಟ್ಯಂಶ.

ಈ ನಾಲ್ಕರಲ್ಲಿ ಮೊದಲನೆಯದು ಅವ್ಯವಹಾರ್ಯವಾದದ್ದು. ಆದಕಾರಣದಿಂದ ಅದನ್ನು ಪ್ರತ್ಯೇಕವಾಗಿರಿಸಿ ಮಿಕ್ಕ ಮೂರರ ಅನ್ಯೋನ್ಯಸಂಬಂಧವನ್ನು ಇಲ್ಲಿ ವಿಚಾರ ಮಾಡಲಾಗುತ್ತದೆ.

ಈಶ್ವರನಿಗೂ, ಜಗತ್ತಿಗೂ ಇರುವ ಸಂಬಂಧವು ಇಂಗ್ಲೆಂಡಿನಂಥ ವ್ಯವಸ್ಥಾನಿಬದ್ಧ ರಾಜ್ಯದಲ್ಲಿ (Constitutional Monarchy), ರಾಜನಿಗೂ ಪ್ರಜೆಗೂ ಇರುವ ಅನ್ಯೋನ್ಯಸಂಬಂಧವನ್ನು ಹೋಲುತ್ತದೆ–ಎಂದು ಹೇಳಿದ್ದಾಗಿದೆ. ವ್ಯವಸ್ಥಾನಿಬದ್ಧವಾದ ರಾಜ್ಯವೆಂದರೆ, ಒಂದು ಗೊತ್ತಾದ ವ್ಯವಸ್ಥೆಗೆ, ಅಥವಾ ನಿಬಂಧನೆಗೆ, ಅಥವಾ ಏರ್ಪಾಟಿಗೆ, ರಾಜನೂ ಸಮಸ್ತ ಪ್ರಜೆಗಳೂ ಒಳಪಟ್ಟಿರುವ ರಾಜ್ಯನಿರ್ವಾಹಕ್ರಮ. ಆ ರಾಜ್ಯದಲ್ಲಿ ಅದರ ಮೂಲನಿಬಂಧನೆಯನ್ನು (Constitution) ಪ್ರಜೆಗಳೆಲ್ಲರೂ ಹೇಗೆ ಅಂಗೀಕರಿಸುತ್ತಾರೋ,

ಹಾಗೆ ರಾಜನೂ ಅಂಗೀಕರಿಸಿಕೊಂಡಿರುತ್ತಾನೆ. ಅದರಲ್ಲಿ ರಾಜನು ಸಂಪೂರ್ಣ ಸ್ವತಂತ್ರನಲ್ಲ, ಸ್ವೇಚ್ಛಾವರ್ತಿಯಲ್ಲ. ಅವನ ಕೈಯನ್ನು ರಾಜ್ಯನಿಬಂಧನೆಯು ಪೂರ್ತಿಯಾಗಿ ಕಟ್ಟಿಹಾಕಿರುವುದಿಲ್ಲವಾದರೂ, ಅವನ ಸ್ವತಂತ್ರಾಧಿಕಾರಕ್ಕೆ ಇತಿಮಿತಿಗಳನ್ನು ಗೊತ್ತುಪಡಿಸಿರುತ್ತದೆ. ಆ ಇತಿಮಿತಿಗಳಿಗೆ ಒಳಪಟ್ಟು ಅವನ ರಾಜಪದವಿಯ ಅಧಿಕಾರ ನಡೆಯಬೇಕಾದದ್ದು. ಈ ನಿಯಮವನ್ನು ರಾಜನು ಅಂಗೀಕರಿಸಿರುತ್ತಾನೆ.

ಇಂಗ್ಲೆಂಡಿನ ರಾಜನು (ಅಥವಾ ರಾಣಿಯು) ಸಿಂಹಾಸನವನ್ನು ಏರುವಾಗ, ರಾಜ್ಯದ ಮಹಾಜನರಿಗೆ ಒಂದು ಪ್ರತಿಜ್ಞಾವಚನವನ್ನು ಕೊಡುತ್ತಾನೆ (ಕೊಡುತ್ತಾಳೆ). ತಾನು ಸಾಂಪ್ರದಾಯಿಕವಾಗಿ ಬಂದಿರುವ ರಾಜ್ಯವ್ಯವಸ್ಥೆಯನ್ನೂ, ಶಾಸನಗಳನ್ನೂ ಅನುಸರಿಸಿ ಪರಿಪಾಲಿಸಲುಳ್ಳವನು (ಉಳ್ಳವಳು)–ಎಂದು ಆ ಪ್ರತಿಜ್ಞೆಯಲ್ಲಿ ಇರುತ್ತದೆ.

ಇಂಡಿಯಾ ದೇಶದಲ್ಲಿ, ಈಗ ರಾಜನ ಸ್ಥಾನದಲ್ಲಿರುವ ರಾಷ್ಟ್ರಾಧ್ಯಕ್ಷನು ತನ್ನ ಪದವೀ ಸ್ವೀಕಾರದ ಸಮಯದಲ್ಲಿ, ಒಂದು ಪ್ರಮಾಣವಚನವನ್ನು ಕೊಡಬೇಕಾಗಿದೆ. ಅದರಲ್ಲಿ ಹೀಗಿದೆ:

“I will, to the best of my ability, preserve, protect and defend the Constitution and the law” (Art. 60).

ಹೀಗೆ ರಾಜ್ಯದ ಪರಮೋನ್ನತನಾದ ಅಧಿಕಾರಿಯೂ ಜನಾಂಗೀಕೃತವಾದ ರಾಜ್ಯ ವ್ಯವಸ್ಥೆಗೆ ಅಧೀನನಾಗಿರುತ್ತಾನೆ.

ವೇದಾಂತಮತದಲ್ಲಿ ಜಗದೀಶ್ವರನ ಪ್ರಭುತ್ವವು ಇದೇ ರೀತಿಯಾದದ್ದು. ಸರ್ವ ಜನಾಂಗೀಕೃತವಾದ ರಾಜ್ಯವ್ಯವಸ್ಥೆಯೇ ಧರ್ಮ. ಧರ್ಮವೇ ಸಾಮ್ರಾಜ್ಯದ ಸಾರ್ವತ್ರಿಕ ಶಾಸನ. ಅದರ ಪರಿಪಾಲನೆಯ ಭಾರವನ್ನು ಈಶ್ವರನು ವಹಿಸಿಕೊಂಡಿರುತ್ತಾನೆ. ಈಶ್ವರನೇ ಧರ್ಮರಕ್ಷಕನೆಂಬುದು ಧರ್ಮಶಾಸನದಲ್ಲಿ ಒಂದು ಮುಖ್ಯವಾಕ್ಯ. ಹೀಗೆ ಧರ್ಮದ ನಿರ್ವಹಣೆಯಲ್ಲಿ ಈಶ್ವರನೂ ಸಹ ಒಬ್ಬ ಅಧಿಕಾರಿ: ಅಷ್ಟು ಮಾತ್ರವಲ್ಲ, ಅವನು ಪರಮಾಧಿಕಾರಿ. ಧರ್ಮಶಾಸನವು ಈಶ್ವರನಿಗೆ ನಾಲ್ಕು ಅಧಿಕಾರಗಳನ್ನು ನಿಯಮಿಸಿರುತ್ತದೆ:

1. ಧರ್ಮಿಷ್ಠರ ಸಂರಕ್ಷಣೆ
2. ಧರ್ಮಘಾತುಕರ ದಂಡನೆ

3. ವಿಶೇಷ ಸಮಯಗಳಲ್ಲಿ ಧರ್ಮದ ಪುನರುದ್ಧಾರ
4. ಆರ್ತಪರಿತ್ರಾಣ.

ಮೇಲಿನ ನಾಲ್ಕು ಕರ್ತವ್ಯಗಳಲ್ಲಿ ಮೊದಲನೆಯ ಎರಡನ್ನು–ಎಂದರೆ, ದುಷ್ಟದಂಡನೆ, ಶಿಷ್ಟಪರಿಪಾಲನೆ, ಇವುಗಳನ್ನು–ಧರ್ಮವಿಹಿತವಾದಂತೆ ನಿರ್ವಹಿಸಲು ಈಶ್ವರನು ಪ್ರತ್ಯೇಕಪ್ರತ್ಯೇಕ ಅಧಿಕಾರಿಗಳನ್ನು ನಿಯಮಿಸಿರುತ್ತಾನೆ. ಇಂದ್ರ, ಅಗ್ನಿ, ಯಮ, ವರುಣ, ವಾಯು–ಮೊದಲಾದ ದೇವತೆಗಳು ಇಂಥ ಅಧಿಕಾರಿಗಳು. ನಾನಾ ಕರ್ಮದೇವತೆಗಳೂ, ದಿಕ್ಪಾಲಕರೂ ನಕ್ಷತ್ರ ಗ್ರಹಾಭಿಮಾನಿ ದೇವತೆಗಳೂ ಇಂಥ ಅಧಿಕಾರಿಗಳು. ಸಾಮಾನ್ಯವಾಗಿ ಇವರುಗಳು ಪ್ರಪಂಚದ ಧರ್ಮಗಳನ್ನು ಕಾಪಾಡುತ್ತಾರೆ. ಧರ್ಮಿಷ್ಠರನ್ನು ಕಾಪಾಡಿ ಪ್ರೋತ್ಸಾಹಿಸುತ್ತಾರೆ. ಅಧರ್ಮಿಗಳನ್ನು ತಕ್ಕತಕ್ಕಂತೆ ಶಿಕ್ಷಿಸುತ್ತಾರೆ. ಅವರ ಈ ಧರ್ಮಾನುಪಾಲನನಿಷ್ಠೆಯನ್ನು ಕುರಿತು ಜಗದೀಶ್ವರನು ಮೇಲ್ವಿಚಾರಣೆ ನಡಸುತ್ತಾನೆ. ಹೀಗೆ ಈಶ್ವರನು ಸಾಮಾನ್ಯವಾಗಿ ದಿನಂಪ್ರತಿಯ ಲೋಕ ವ್ಯವಹಾರಕ್ಕೆ ಪ್ರವೇಶಿಸಬೇಕಾಗಿಲ್ಲ. ನಿತ್ಯವ್ಯವಹಾರಕ್ಕೆ ಧರ್ಮಶಾಸ್ತ್ರವು ಕಾನೂನಾಗಿರುತ್ತದೆ. ಆ ಕಾನೂನನ್ನು ಚಾಲನೆ ಮಾಡುವ ಜವಾಬ್ದಾರಿಯನ್ನು ನಾನಾ ದೇವತೆಗಳು ಹೊತ್ತುಕೊಂಡಿರುತ್ತಾರೆ. ಈಶ್ವರನು ಅವರ ವಿಷಯದಲ್ಲಿ ಕೇವಲ “ಅಧ್ಯಕ್ಷ”. ಸಾಮಾನ್ಯ ಸಂದರ್ಭಗಳಲ್ಲಿ ಈಶ್ವರನು ಸ್ವತಃ ನಿಷ್ಕ್ರಿಯನಾಗಿರುತ್ತಾನೆ.

ನಮ್ಮ ಇಂದಿನ ಲೋಕದ ವ್ಯವಸ್ಥಾನಿಬದ್ಧ ರಾಜ್ಯಪದ್ಧತಿಯಲ್ಲಿ, ರಾಜನೂ ಹಾಗೆಯೇ ತಟಸ್ಥನಾಗಿರತಕ್ಕವನು. ಇಂಗ್ಲೆಂಡಿನ ರಾಜ್ಯವ್ಯವಸ್ಥೆಯ ಸತ್ತ್ವಪ್ರತಿಪಾದಕನಾದ ಬೇಜಟ್ (Walter Bagehot) ಎಂಬಾತನು, ಇಂಗ್ಲೆಂಡ್‌ರಾಜನ ಸರ್ವೋತ್ಕೃಷ್ಟವಾದ ಗುಣವು “ವಿವೇಕಪೂರ್ವಕ ನಿಷ್ಕ್ರಿಯತೆ” (Wise Inaction) ಎಂದು ವರ್ಣಿಸಿದ್ದಾನೆ. ಅದರಲ್ಲಿ, “ರಾಜನು ದೋಷ ಮಾಡಲಾರದವನು” (The King can do no wrong) ಎಂಬುದು ಒಂದು ಮೂಲಸೂತ್ರ. ಹಾಗೆಂದರೆ ರಾಜ್ಯದಲ್ಲಿ ದೋಷ ನಡೆಯಲಾರದೆಂದು ಅರ್ಥವಲ್ಲ. ದೋಷಗಳು ನಡೆಯಬಹುದು. ಆದರೆ ಆ ದೋಷಗಳಿಗೆ ಸೇರಿದ ಹೊಣೆಗಾರಿಕೆ (ಜವಾಬ್ದಾರಿ) ರಾಜನದಲ್ಲ–ರಾಜನಿಗೆ ಮಂತ್ರಾಲೋಚನೆ ಹೇಳಲು ನಿಯುಕ್ತನಾದ ಮಂತ್ರಿಯದು ಆ ಜವಾಬ್ದಾರಿ. ಅರ್ಥಾತ್, ಎಲ್ಲ ರಾಜ್ಯದೋಷಗಳಿಗೂ ಮಂತ್ರಿಯು ಶಿಕ್ಷಾರ್ಹನಾಗುತ್ತಾನೆ–ಇದು

ಇಂಗ್ಲೆಂಡಿನ ರಾಜ್ಯಪದ್ಧತಿಯ ವೈಶಿಷ್ಟ್ಯ. ಇದೇ “ಜವಾಬ್ದಾರಿ ಸರಕಾರ” ಎಂಬುದರ ಅಂತರ್ಭಾವ.

ಹೀಗೆ, ಎಲ್ಲ ಜಬಾಬ್ದಾರಿಯೂ ವಾಸ್ತವದಲ್ಲಿ ಮಂತ್ರಿಯದಾಗಿದ್ದರೂ ಕೆಲವು ವಿಶೇಷ ಅಧಿಕಾರಗಳನ್ನು ರಾಜ್ಯನಿಬಂಧನೆಯು, ರಾಜನ ಸ್ವಾಧೀನದಲ್ಲಿ ಬಿಟ್ಟಿರುತ್ತದೆ. ಅಂಥಾ ವಿಶೇಷಾಧಿಕಾರಕ್ಕೆ, (Prerogative) (ಪ್ರಭುಸ್ವತ್ವ) ಎಂದು ಹೆಸರು. ಪಾರ್ಲಿಮೆಂಟ್ ಸಭೆಯನ್ನು ಆಹ್ವಾನಿಸುವುದೂ, ವಿಸರ್ಜಿಸುವುದೂ, ರಾಜ್ಯಕ್ರಾಂತಿಯ ಸಂದರ್ಭದಲ್ಲಿ ಅಧಿಕಾರ ಸೂತ್ರಗಳನ್ನು ಸ್ವತಃ ವಹಿಸಿಕೊಳ್ಳುವುದೂ, ಉಗ್ರದಂಡನೆಗೆ ಪಾತ್ರರಾದವರಿಗೆ ಕ್ಷಮಾಪ್ರದಾನ ಮಾಡುವುದೂ ಪ್ರಭುಸ್ವತ್ವತೆಗೆ ಸೇರಿದ ವಿಷಯಗಳು.

ಇದರಂತೆ ಜಗದೀಶ್ವರನ ರಾಜ್ಯಭಾರದಲ್ಲಿಯೂ ಉಂಟು. ಮೇಲಣ ನಾಲ್ಕು ಧರ್ಮ ಕರ್ತವ್ಯಗಳಲ್ಲಿ, ಶಿಷ್ಟಸಂರಕ್ಷಣೆ ದುಷ್ಟದಂಡನೆಗಳು ಸಾಮಾನ್ಯವಾಗಿ ಲೋಕಪಾಲ ಕರ್ಮಪಾಲಾದಿ ದೇವತೆಗಳ ಅಧಿಕಾರವ್ಯಾಪ್ತಿಗೆ ಸೇರಿದವು. ಉಳಿದೆರಡು–ಧರ್ಮ ಪುನರುದ್ಧಾರ, ಆರ್ತಕಾರುಣ್ಯ, ಇವೆರಡೂ ಈಶ್ವರನ (Prerogative) ಪ್ರಭುಸ್ವತ್ವ ಕ್ಷೇತ್ರಕ್ಕೆ ಸೇರಿದವು. ಮನುಷ್ಯನ ಪುಣ್ಯಪಾಪಗಳಿಗಾಗಿ ಸಲ್ಲಬೇಕಾದ ಶುಭಾಶುಭಫಲಗಳನ್ನು ನಾನಾ ಕರ್ಮ ದೇವತೆಗಳು ಇಹದಲ್ಲಿಯೂ ಪರದಲ್ಲಿಯೂ ಅವನಿಗೆ ಸಲ್ಲಿಸುತ್ತಾರೆ.

ಆದರೆ, ಲೋಕದಲ್ಲಿ ಸಾಧುಸಜ್ಜನರು ದುರ್ಬಲರಾಗಿ ದುಷ್ಟದುರ್ಜನರೇ ಪ್ರಬಲರಾಗುವ ಸಂಭವಗಳೂ ಉಂಟು. ಅಂಥ ಆಸುರೀ ಸಂಪತ್ತಿನ ಕಾಲದಲ್ಲಿ ಸಾಮಾನ್ಯ ದೇವತೆಗಳ ಅಧಿಕಾರವು ಸಾಕಾಗುವುದಿಲ್ಲ. ಅಂಥಾ ಸಮಯಕ್ಕೆ ಬೇಕಾಗತಕ್ಕದ್ದು ಈಶ್ವರನ ಸಾಕ್ಷಾದವತಾರ. ಅದನ್ನೇ ಈ ಮೇಲೆ ಉದಾಹರಿಸಿರುವ

> ಯದಾ ಯದಾ ಹಿ... ।
> ಧರ್ಮಸಂಸ್ಥಾಪನಾರ್ಥಾಯ... ಯುಗೇ ಯುಗೇ ॥

ಈ ವಾಕ್ಯಗಳು ಸಾರುತ್ತವೆ. ಇದನ್ನು ಗಮನದಲ್ಲಿರಿಸಿಕೊಂಡೇ ಅರ್ಜುನನು ಸ್ವಾಮಿಯನ್ನು

> ಶಾಶ್ವತಧರ್ಮಗೋಪ್ತಾ (೧೧–೧೮)

ಎಂದು ಸ್ತುತಿಸಿದ್ದು. ಈ ವಿಶ್ವಸಮಷ್ಟಿಯ ಸನಾತನಧರ್ಮದ ರಕ್ಷಣೆಗಾಗಿಯೂ ಪುನರುದ್ಧಾರಕ್ಕಾಗಿಯೂ, ದುಷ್ಟದಮನಾರ್ಥವಾಗಿಯೂ ಯುದ್ಧಾದಿ ಉಗ್ರಕಾರ್ಯಗಳು ಅವಶ್ಯವಾಗುತ್ತವೆ. ಅಂಥಾ ಉಗ್ರಸಂದರ್ಭಗಳನ್ನು ಸಂಧಾನ ಮಾಡಿಸುವವನು ಈಶ್ವರ. ಧರ್ಮರಕ್ಷಣೋಪಾಯವು ಈಶ್ವರನ ಪ್ರಭುಸ್ವತ್ವಕ್ಷೇತ್ರದ ಕರ್ತವ್ಯವಾಗುತ್ತದೆ.

ಹಾಗೆಯೇ ಆರ್ತಸಹಾಯ, ದೀನವಾತ್ಸಲ್ಯ, ಶರಣಾಗತರಕ್ಷಣೆ–ಇವು ಈಶ್ವರನ ಪ್ರಭುಸ್ವತ್ವಕ್ಷೇತ್ರದ ಲಕ್ಷಣಗಳು. ನಮ್ಮ ಲೌಕಿಕ ರಾಜ್ಯದಲ್ಲಿ, ಇಂಗ್ಲೆಂಡಿನದರಂಥ ರಾಜಕೀಯ ವ್ಯವಸ್ಥೆಯಲ್ಲಿ (ಇಂಡಿಯದಲ್ಲಿ ಸಹ) ಉಗ್ರದಂಡನೆಗೆ ಪಾತ್ರನಾದ ಒಬ್ಬ ಪ್ರಜಾವ್ಯಕ್ತಿಯು ತನ್ನ ಅಪರಾಧಕ್ಕಾಗಿ ಪಶ್ಚಾತ್ತಾಪ ಪಟ್ಟು ಕ್ಷಮೆಯನ್ನು ಬೇಡಿದಾಗ ಅವನ ಆ ಬೇಡಿಕೆಯ ವಿಷಯದಲ್ಲಿ, ಮಂತ್ರಿಗಳೊಡನೆ ವಿಮರ್ಶೆ ನಡಸಿ ಕ್ಷಮಾಪ್ರಧಾನ ಮಾಡುವುದು, ಸಿಂಹಾಸನಸ್ಥನಿಗೆ ಸೇರಿದ ಪ್ರಭುಸ್ವತ್ವಾಧಿಕಾರ. ಅದರಂತೆಯೇ ಧರ್ಮ ಶಾಸನಕ್ಕೆ ಭಂಗವಾಗದ ರೀತಿಯಲ್ಲಿ ಮತ್ತು ಧರ್ಮವನ್ನು ಪ್ರೋತ್ಸಾಹಿಸುವ ರೀತಿಯಲ್ಲಿ, ಶರಣಾಗತರಾದ ಭಕ್ತರಿಗೆ ಕರುಣೆ ತೋರುವುದು ಈಶ್ವರನ ಪ್ರಭುಕ್ಷೇತ್ರಕ್ಕೆ ಸಂಬಂಧಪಟ್ಟ ನೀತಿಯಾಗಿರುತ್ತದೆ. ಇಂಥಾ ಭಗವತ್ಕಾರುಣ್ಯವನ್ನು ಪಕ್ಷಪಾತವೆಂದಾಗಲಿ, ಆತ್ಮಾಭಿಮಾನವೆಂದಾಗಲಿ ಆಕ್ಷೇಪಿಸಲಾಗದು. ಭಗವಂತನಲ್ಲಿ ವೈಷಮ್ಯವೂ, ನಿಷ್ಕರುಣಿತ್ವವೂ ಇಲ್ಲ. ಅದಕ್ಕೆ ಪ್ರತಿಯಾಗಿ ಧರ್ಮ ಪ್ರೋತ್ಸಾಹಕವಾದ ವಾತ್ಸಲ್ಯವೂ ಕಾರುಣ್ಯವೂ ಇರುತ್ತವೆ. ಈ ಕಾರಣದಿಂದಲೇ ಸ್ವಾಮಿಯು ಎಲ್ಲರಿಗೂ

> ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ॥ (೯–೧೮)

ಅನುಬಂಧ ೨ : ಕರ್ಮಾಕರ್ಮನಿರ್ಣಯ

ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥ (೪–೧೭)

ಕರ್ಮಾಕರ್ಮಗಳ ವಿಚಾರವು ಬುದ್ಧಿವಂತರಿಗೆ ಕೂಡ ಭ್ರಾಂತಿಯನ್ನುಂಟುಮಾಡುತ್ತದೆ. ಅದು ಅಷ್ಟು ಗಹನವಾದದ್ದು–ಹೇಗೆಂಬುದು ಭಗವಂತನ ಮಾತು. ಅದರಿಂದ ಏನು ಹೊರಡುತ್ತದೆ? ಮನುಷ್ಯನ ಜವಾಬ್ದಾರಿ ಹೆಚ್ಚಿನದು. ಆ ಜವಾಬ್ದಾರಿಯು ವಿವೇಚನರೂಪವನ್ನು ತಾಳಬೇಕಾದದ್ದು–ಎಂದು ಹೊರಡುತ್ತದೆ. ಹೀಗೆ ವಿವೇಕವು, –ಸಾಧ್ಯವಾದಷ್ಟು ಹೆಚ್ಚಾಗಿ ಸ್ವತಂತ್ರವಾದ ವಿವೇಕವು, –ಮನುಷ್ಯನಿಗೆ ಕರ್ತವ್ಯವಾಗುತ್ತದೆ. ಈ ಮಾತನ್ನು ನಾವು ಗಮನವಿರಿಸಿ ಮನಸಿಗೆ ತಂದುಕೊಳ್ಳಬೇಕಾದದ್ದು.

ಯಾವುದು ನಮಗೆ ವಿಹಿತ ಕಾರ್ಯವಲ್ಲವೋ ಅದು ಅಕರ್ಮ, ಅಕಾರ್ಯ. ಯಾವುದು ನಮ್ಮ ಶಕ್ತಿಯನ್ನೂ, ಯೋಗ್ಯತೆಯನ್ನೂ ಮೀರಿದ ಕರ್ಮವೋ ಅದು ನಮ್ಮ ಪಾಲಿಗೆ ಅಕರ್ಮವಾಗುತ್ತದೆ. ಇದನ್ನು ಜಾಗರೂಕತೆಯಿಂದ ಪರೀಕ್ಷಿಸಬೇಕಾದದ್ದೆಂದು ಸ್ವಾಮಿಯ ಅಭಿಪ್ರಾಯ.

ಅಕರ್ಮಣಶ್ಚ ಬೋದ್ಧವ್ಯಂ ॥

ಯಾವ ಕರ್ಮವನ್ನು ತಾನು ಮಾಡದೆ ಬಿಡಬೇಕಾದದ್ದು–ಎಂಬುದನ್ನು ಕೂಡ ತಿಳಿದುಕೊಳ್ಳಬೇಕಂತೆ. ಇದು ಕರ್ಮಶಾಸ್ತ್ರದಲ್ಲಿಯ ನೀತಿಸೂಕ್ಷ್ಮ.

ಒಂದಾನೊಂದು ಕರ್ಮವು ಲೋಕದಲ್ಲಿ ಪ್ರಶಸ್ತವಾಗಿರಬಹುದು; ಸಮಾಜವೂ ಶಿಷ್ಟ ಜನರೂ ಅದನ್ನು ನಮಗೆ ಶಿಫಾರಸು ಮಾಡಿರಬಹುದು. ಆದರೆ ಅದು ನಮ್ಮ ಪಾಲಿಗೆ ಕರ್ಮವೋ ಅಲ್ಲವೋ–ಎಂಬುದನ್ನು ನಾವುನಾವೇ ನಿರ್ಣಯಿಸಿಕೊಳ್ಳಬೇಕು.

ಹಿಮಾಲಯದ ಕೇದಾರನಾಥ, ಬದರೀನಾಥ ಕ್ಷೇತ್ರಗಳಿಗೆ ಯಾತ್ರೆಮಾಡುವುದು ದೊಡ್ಡಪುಣ್ಯವೆಂದು ಪೂರ್ವಕಾಲದಿಂದ ಬಂದಿರುವ ನಂಬಿಕೆ. ಆದರೆ ಎಂಬತ್ತು ತೊಂಬತ್ತು

ವರುಷದ ಮುದುಕಮುದುಕಿಯರಿಗೆ ಅದು ಕರ್ಮವೋ ಅಕರ್ಮವೋ ಅವರವರೇ ನಿಶ್ಚಯ ಮಾಡಿಕೊಳ್ಳಬೇಕಾದದ್ದು. ಅದರ ನಿರ್ಣಯ ಇತರರಿಗೆ ಗಹನವಾಗುತ್ತದೆ.

ಒಂದು ಕುಟುಂಬದಲ್ಲಿ ಯಜಮಾನನಿಗೆ ಪ್ರಬಲವಾದ ರೋಗ ಬಂದಿರುತ್ತದೆ. ಆ ಕಾಲದಲ್ಲಿ ಆತನ ಪತ್ನಿ ಅಲ್ಲಿಗೆ ದೂರವಾದ ಒಂದು ಕ್ಷೇತ್ರಕ್ಕೆ ಹೋಗಿ ಅಲ್ಲಿ ಎರಡು ವಾರ ಸೇವೆ ಸಲ್ಲಿಸಿದರೆ ರೋಗವು ನಿವಾರಣೆಯಾಗುತ್ತದೆಂದು ಆಕೆಗೆ ಯಾರೋ ಉಪದೇಶಿಸುತ್ತಾರೆ. ಆಗ ಆಕೆಗೆ ಗಂಡನ ಸಮೀಪದಲ್ಲಿ ಇರುವುದು ಕರ್ಮವೋ, ದೂರದೇಶ ಪ್ರವಾಸವು ಕರ್ಮವೋ– ಇದನ್ನು ಆಕೆಯು ತಾನೇ ನಿಶ್ಚಯಮಾಡಿಕೊಳ್ಳಬೇಕು.

ಹೀಗೆ ರಾಮಣ್ಣನ ಪಾಲಿಗೆ ಕರ್ಮವಾದದ್ದು ಭೀಮಣ್ಣನ ಪಾಲಿಗೆ ಅಕರ್ಮವಾಗುತ್ತದೆ. ಶಾಮಯ್ಯನ ಪಾಲಿಗೆ ಅಕರ್ಮವಾದದ್ದು ಸೋಮಯ್ಯನ ಪಾಲಿಗೆ ಕರ್ಮವೇ ಆಗಬಹುದು. ಇಲ್ಲಿ ಸರ್ವಸಂದರ್ಭೋಚಿತವಾಗುವ ಏಕೈಕ ನಿಯಮವು ಅಸಾಧ್ಯವಾಗಿರುತ್ತದೆ. ಈ ಕಾರಣದಿಂದ ಇಂಗ್ಲಿಷಿನಲ್ಲಿ (Individual Responsibility) ಎಂದು ಹೇಳುವ ವೈಯುಕ್ತಿಕ ಉತ್ತರಭಾರವು ದೊಡ್ಡದಾಗುತ್ತದೆ. ಯಾವ ಮನುಷ್ಯನೂ ತನ್ನ ವಿವೇಕವನ್ನು ಅವಲಂಬಿಸದೆ 'ನಾನು ಅವರು ಹೇಳಿದ್ದರಿಂದ ಹೀಗೆ ಮಾಡಿದೆ,' 'ಇವರು ಹೇಳಿದ್ದರಿಂದ ಹಾಗೆ ಮಾಡಿದೆ,' 'ದೇವರ ಮೇಲೆ ಭಾರಹಾಕಿ ಮಾಡಿದೆ,' 'ಗುರುಗಳ ಆಶೀರ್ವಾದ ನಂಬಿ ಹೀಗೆ ಮಾಡಿದೆ,' –ಈ ರೀತಿಯಾಗಿ ವಾದಿಸಿ ತನ್ನ ಸ್ವಂತ ಉತ್ತರವಾದಿತ್ವವನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. ಭಕ್ತಿ ಪಂಥದಲ್ಲಿ ವಿಶ್ವಾಸವುಳ್ಳವರು ಈ ವಿಷಯದಲ್ಲಿ ಎಚ್ಚರವಿಡಬೇಕು. ಅವರು 'ದೇವರು ಎಲ್ಲವನ್ನೂ ಮಾಡಿಸುತ್ತಾನೆ, ನಮಗೇನೂ ಜವಾಬ್ದಾರಿಯಿಲ್ಲ' –ಎಂಬಂತೆ ಮಾತನಾಡುವುದುಂಟು. ಅದು ಕರ್ಮಾಕರ್ಮವಿವೇಕವನ್ನು ಬಲ್ಲವರ ದಾರಿಯಲ್ಲ.

ದೇವರು ಫಲಕೊಡತಕ್ಕವನು, ಪ್ರಯತ್ನ ಮಾಡತಕ್ಕವನು ಮನುಷ್ಯ. ಪ್ರಯತ್ನವು ಸರಿಯಾದದ್ದೆ? ಅದು ತಕ್ಕಷ್ಟು ಆಗಿದೆಯೆ? –ಎಂಬುದು ಮನುಷ್ಯನು ಎದುರಿಸಬೇಕಾಗಿರುವ ಪ್ರಶ್ನೆ. ಈ ವ್ಯಕ್ತಿಗತವಾದ ಉತ್ತರಬಾಧ್ಯತೆಯನ್ನು (Personal Responsibility) ನಾವು ಸರ್ವದಾ ನೆನಪಿನಲ್ಲಿರಿಸಿಕೊಳ್ಳಬೇಕು.

ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನ ಕರ್ಮಕೃತ್ ॥ (೪–೧೮)

ಕರ್ಮದಲ್ಲಿ ಅಕರ್ಮವನ್ನೂ, ಅಕರ್ಮದಲ್ಲಿ ಕರ್ಮವನ್ನೂ ಕಾಣಬೇಕಂತೆ. ಅದು ಬುದ್ಧಿಶಾಲಿಯ ಲಕ್ಷಣವಂತೆ. ಅಕರ್ಮವೆಂದರೆ ಏನು? (ಪುಟ ೧೪೧–೧೪೩ ನೋಡಿರಿ). ಅಕರ್ಮವೆಂದರೆ ಎರಡರ್ಥ: (೧) ಯಾವ ಕರ್ಮವನ್ನೂ ಮಾಡದೆ ಇರುವುದು. (೨) ಕರ್ಮವನ್ನು ಮಾಡಿದ್ದರೂ ಮಾಡದೆ ಬಿಟ್ಟವನೋಪಾದಿಯಲ್ಲಿ ಇರುವುದು.

ಎಂದರೆ: (೧) ಕರ್ಮಲೋಪ. (೨) ಕರ್ಮಫಲವಿರಕ್ತಿ.

ಇಲ್ಲಿ ಉಪದೇಶವಾಗಿರುವುದು ಮೊದಲನೆಯ ಅರ್ಥವಲ್ಲ, ಎರಡನೆಯ ಅರ್ಥ.

ಕರ್ಮವನ್ನು ಬಿಡಬೇಕೆಂಬುದು ಸ್ವಾಮಿಯ ಅಭಿಪ್ರಾಯವೇ ಅಲ್ಲ. ಇದು ಅನೇಕ ಭಗವದ್ವಾಕ್ಯಗಳಿಂದ ಸ್ಪಷ್ಟವಾಗಿದೆ.

ಮಾ ತೇ ಸಂಗೋಽಸ್ತ್ವಕರ್ಮಣಿ ॥ (೨–೪೭)
ಯಜ್ಞದಾನತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ॥ (೧೮-೫)

ಹಾಗಾದರೆ ನಾವು ಎರಡನೆಯ ಅರ್ಥವಾದ ಫಲಚಿಂತಾವಿಸರ್ಜನೆ–ಎಂಬ ಉಪದೇಶವನ್ನು ಗ್ರಹಿಸಬೇಕು. ಯಾರು ನಾನಾ ವಿಹಿತಕರ್ಮಗಳನ್ನು, ಯಾರು ನಾನಾ ಕರ್ತವ್ಯ ಕರ್ಮಗಳನ್ನು, ಯಾರು ನಾನಾ ಧರ್ಮಕರ್ಮಗಳನ್ನು ಬಿಡದೆ ಮಾಡುತ್ತ, ಹಾಗೆ ಮಾಡುತ್ತಿದ್ದರೂ ಅವುಗಳ ಫಲವಿಷಯದಲ್ಲಿ ಮಾಡದೆಯೇ ಇರುವವನ ಹಾಗೆ ಉದಾಸೀನನಾಗಿರುತ್ತಾನೋ ಅವನಿಗೆ ಪಾಪವೆಂಬುದು ಅಂಟದು. ಅಂಥವನ ಕರ್ಮವು ಬಂಧನವಾಗದು.

ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥ (೪–೩೭)
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥ (೪–೪೧)
ಕರ್ಮಣ್ಯಕರ್ಮ ಯಃ ಪಶ್ಯೇತ್
ಅಕರ್ಮಣಿ ಚ ಕರ್ಮ ಯಃ ॥ (೪–೧೮)

–ಇದು ಗೀತೆಯ ಮಹಾವಾಕ್ಯಗಳಲ್ಲೊಂದು, ಮುಖ್ಯವಾದದ್ದು. ಅಕರ್ಮ ಶಬ್ದವು ಎರಡು ಅರ್ಥಗಳುಳ್ಳದ್ದು. ಆದದ್ದರಿಂದ ನಾವು ಅರ್ಥಗ್ರಹಣ ಮಾಡುವುದರಲ್ಲಿ ಜಾಗರೂಕರಾಗಿರಬೇಕು.

"ಮಾ ತೇ ಸಂಗೋಽಸ್ತ್ವಕರ್ಮಣಿ" ಎಂಬಲ್ಲಿ ಅಕರ್ಮವೆಂದರೆ ಕರ್ಮಪರಿವರ್ಜನೆ ಎಂದು ಭಾವ. ಈ ಬಗೆಯ ಅಕರ್ಮ ಕೂಡದು. ಇನ್ನೊಂದು ಬಗೆಯ ಅಕರ್ಮವು ಬೇಕಾದದ್ದು. ಅದು ಕರ್ಮಫಲಪರಿವರ್ಜನರೂಪವಾದದ್ದು.

"ಕರ್ಮಣ್ಯಕರ್ಮ" ಎಂದರೆ ಮಾಡಬೇಕು, ಮಾಡದೆ ಇರುವವನಂತೆ ಇರಬೇಕು. ಎಂದರೆ ಫಲಾಫಲವಿಷಯದಲ್ಲಿ ತಟಸ್ಥನಾಗಿರಬೇಕು. ದುಡಿಯಬೇಕು, ಮೈಯಲಸಿತೆಂದುಕೊಳ್ಳಬಾರದು. ಬಾಯಿ ಸಿಹಿಯಾಗಲಿಲ್ಲವೆಂದೂ ಅಂದುಕೊಳ್ಳಬಾರದು.

"ಅಕರ್ಮಣಿ ಚ ಕರ್ಮ" ಎಂದರೆ ಫಲವಿಷಯದಲ್ಲಿ ವರ್ಜನರೂಪವಾದ ಕರ್ಮವನ್ನು ಮಾಡಬೇಕು. ಇದು ಸ್ವಾರಸ್ಯ. ವಿಹಿತಾಚರಣೆ ಒಂದು ಕರ್ಮ. ತತ್ಫಲತ್ಯಾಗ ಎಂಬ ಅಕರ್ಮವು ಇನ್ನೊಂದು ಕರ್ಮ.

ಕರ್ಮಾಸಕ್ತಿ, ಫಲವಿರಕ್ತಿ; ಇದು ಉಪದೇಶ. ಕರ್ಮಾಚರಣೆಯಲ್ಲಿ ಫಲತ್ಯಾಗ ರೂಪವಾದ ಅಕರ್ಮ; ಫಲತ್ಯಾಗದಲ್ಲಿ ಔದಾಸೀನ್ಯವೆಂಬ ಕರ್ಮ.

ಕರ್ಮಮಾಡುವುದರಲ್ಲಿ ಫಲವಿವರ್ಜನೆಯೇ ಅಕರ್ಮ; ಫಲವಿವರ್ಜನೆಯಲ್ಲಿ ತತ್ತ್ಯಾಗವೇ ಕರ್ಮ–ಹೀಗೆ "ಕರ್ಮಣ್ಯಕರ್ಮ" ಮತ್ತು "ಅಕರ್ಮಣಿ ಚ ಕರ್ಮ."

ಹೋಟೇಲಿನಲ್ಲಿ ಅಡುಗೆ ಮಾಡುವವನು ಪಾಕಮಾಡುತ್ತಾನೆ. ಅದು ಕರ್ಮ. ಅದನ್ನು ಊಟಮಾಡುವವರು ಯಾರೆಂಬ ಚಿಂತೆ ಅವನಿಗಿಲ್ಲ. ಅದು ಅಕರ್ಮ. ಊಟಕ್ಕಾಗಿ ಬಂದವನು ಊಟಮಡುವುದು ಕರ್ಮ, ಅವನು ಅಡುಗೆ ಮಾಡಿದರ್ವನ ವಿಷಯ ವಿಚಾರಿಸದಿರುವುದು ಅಕರ್ಮ. ಹೀಗೆ ಕರ್ಮದಲ್ಲಿ ಅಕರ್ಮ, ಅಕರ್ಮದಲ್ಲಿ ಕರ್ಮ– ಶ್ರದ್ಧೆಯಿಂದ ದುಡಿಯುವುದು. ಫಲದ ವಿಷಯದಲ್ಲಿ ಅಸಡ್ಡೆಯಿಂದಿರುವುದು–ಇದು ತತ್ತ್ವ.

ಅನುಬಂಧ ೩ : ಮಳೆ ಬೆಳೆ–ದೇವತೆಗಳು

(ಪುಟ ೧೪೭, ೧೫೩–೧೫೯ ನೋಡಿರಿ)

> ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
> ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ (೩–೧೪)

ದೇವತೆಗಳು ಮಳೆ ಬೆಳೆ ಕೊಡುವುದು ಯಾರು ಯಜ್ಞಮಾಡುತ್ತಾನೋ ಅವನೊಬ್ಬನಿಗೋಸ್ಕರವಾಗಿಯೇ ಅಲ್ಲ. ದೇವತೆಗಳು ಉದಾರಿಗಳು. ಒಬ್ಬ ಮನುಷ್ಯ ತಮ್ಮನ್ನು ಪೂಜಿಸಿದರೆ ಅವರು ಎಲ್ಲ ಮನುಷ್ಯರಿಗೂ ಉಪಕಾರಕರಾಗುತ್ತಾರೆ. ಊರಿನಲ್ಲಿ ಯಾವಾತನೋ ಒಬ್ಬ ಪುಣ್ಯಾತ್ಮನಿದ್ದರೂ, ಅವನು ಮಾಡಿದ ಪುಣ್ಯದ ಪ್ರತಿಫಲವು ಊರಿನವರಿಗೆಲ್ಲರಿಗೂ ದೊರೆಯುತ್ತದೆ.

ಯಜ್ಞಮಾಡಿದವನಿಗೆ ಬರುವ ಫಲವು ಅವನೊಬ್ಬನ ಸ್ವಾರ್ಜಿತವಾದರೂ, ಅವನು ಅದನ್ನು ಎಲ್ಲರೊಡನೆಯೂ ಹಂಚಿಕೊಂಡು ಅನುಭವಿಸಬೇಕೆಂಬುದು ಇಲ್ಲಿಯ ಉಪದೇಶ. ಇದರ ಅಂತರ್ಗತಭಾವೇನು? ದೇವತೆ ಕೊಡುವುದನ್ನು ಒಬ್ಬನು ಮಾಡಿದ ಸತ್ಕರ್ಮಕ್ಕೆ ವರವಾಗಿ ಕೊಟ್ಟರೂ, ಆ ವರದಲ್ಲಿ ಭಾಗವು ಸಮಸ್ತರಿಗೂ ಸಲ್ಲತಕ್ಕದ್ದೆಂಬುದು. ಯಾರು ಯಜ್ಞ ಮಾಡಿದನೋ ಅವನು ಒಬ್ಬನೇ ಅಲ್ಲ ತತ್ಫಲಕ್ಕೆ ಭಾಗಿ. ಅವನೊಡನೆ ಇರುವವರೆಲ್ಲರೂ, ಆ ಸತ್ಕಾರ್ಯಕ್ಕೆ ಹಾಗೋ ಹೀಗೋ ಅಷ್ಟೋ ಇಷ್ಟೋ ಸಹಾಯ ಮಾಡಿರುತ್ತಾರೆ. ಸಕಾರ ರೂಪದಲ್ಲಿ ಮಾಡದಿದ್ದರೂ (Positive) ನಕಾರ ರೂಪದಲ್ಲಿ (Negative) ಸಹಾಯ ಮಾಡಿರುತ್ತಾರೆ: ಎಂದರೆ–ಅಡ್ಡಿಹಾಕದೆ ಅಡಚಣೆ ಮಾಡದೇ ಇರುತ್ತಾರೆ. ಆದದ್ದರಿಂದ ಅವರಿಗೂ ಆ ಪುಣ್ಯಶಾಲಿ ಸಂಪಾದಿಸಿದ ವರಸೌಭಾಗ್ಯದಲ್ಲಿ ಭಾಗ ದೊರೆಯುತ್ತದೆ.

ಹೀಗೆ– “ಯಜ್ಞಮಾಡದೆ ಇರುವವನಿಗೆ ಮಳೆ ಬೆಳೆ ಇಲ್ಲವೆ?” –ಎಂಬ ವಿತಂಡವಾದವು ಬಿದ್ದುಹೋಗುತ್ತವೆ. ಕೆಲವರಾದರೂ ಪುಣ್ಯವಂತರಿರಬೇಕು. ಆ ಪುಣ್ಯದ ಫಲಾಂಶವು ಸಮಸ್ತರಿಗೂ ದೊರೆಯುತ್ತದೆ–ಇದು ಪುಣ್ಯಕಾರ್ಯದ ಮಹಿಮೆಯನ್ನು ಬೋಧಿಸುವ ಮಾತು. ಒಬ್ಬನು ಮಾಡಿದ ಒಳ್ಳೆಯದು ಎಲ್ಲರಿಗೂ ಒಳ್ಳೆಯದು.

ಅಂದು ನರಂಗೆ ಯುದ್ಧಮುಖದೊಳ್ ಪರತತ್ತ್ವವ ಪೇಳ್ದು ಲೋಕಕಾಂ ।
ಬಂದಪೆನನ್ನೆಯೋದ್ಧತರ ದುಷ್ಟರ ದಂಡಿಸಿ ಸಾಧುವೃಂದಕಾ– ॥
ನಂದವನಿತ್ತು ಶಾಶ್ವತದ ಧರ್ಮದ ಸಂಸ್ಥಿತಗೈವೆನೆಂದ ಗೋ- ।
ವಿಂದನೆ ನೀನದಂ ಮರೆತೆಯೇನಿಳೆಗೇತಕೆ ಬಾರೆ ಬೇರದಿಂ ॥

ಅಥ ಸಂನ್ಯಾಸಯೋಗೋ ನಾಮ ಪಂಚಮೋಽಧ್ಯಾಯಃ

ಅರ್ಜುನ ಉವಾಚ-

ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್

॥ ೧ ॥

ಶ್ರೀಭಗವಾನುವಾಚ

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ

॥ ೨ ॥

ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ॥
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ ಪ್ರಮುಚ್ಯತೇ

॥ ೩ ॥

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್

॥ ೪ ॥

ಯತ್ಸಾಂಖ್ಯೈಃ ಪ್ರಾಪ್ಯತ್ಯೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ

॥ ೫ ॥

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ

॥ ೬ ॥

ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ

॥ ೭ ॥

ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್

॥ ೮ ॥

ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್

॥ ೯ ॥

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ

॥ ೧೦ ॥

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾಽಽತ್ಮಶುದ್ಧಯೇ

॥ ೧೧ ॥

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಮ್ ।
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ

॥ ೧೨ ॥

ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವ ಕುರ್ವನ್ನ ಕಾರಯನ್

॥ ೧೩ ॥

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ

॥ ೧೪ ॥

ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ

॥ ೧೫ ॥

ಜ್ಞಾನೇನ ತು ತದಜ್ಞಾನಂ ಯೇಷಂ ನಾಶಿತಮಾತ್ಮನಃ ।
ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್

॥ ೧೬ ॥

ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ

॥ ೧೭ ॥

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ

॥ ೧೮ ॥

ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ

॥ ೧೯ ॥

ನ ಪ್ರಹೃಷ್ಯೇತ್ ಪ್ರಿಯಂ ಪ್ರಾಪ್ಯ ನೋದ್ವಿಜೇತ್ ಪ್ರಾಪ್ಯ ಚಾಪ್ರಿಯಮ್ ।
ಸ್ಥಿರಬುದ್ಧಿರಸಂಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ

॥ ೨೦ ॥

ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ

॥ ೨೧ ॥

ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।
ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ

॥ ೨೨ ॥

ಶಕ್ನೋತೀಹೈವ ಯಃ ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್ ।
ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ

॥ ೨೩ ॥

ಯೋಽಂತಸ್ಸುಖೋಽಂತರಾರಾಮಸ್ತಥಾಽಂತಜ್ಯೋತಿರೇವ ಯಃ ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ

॥ ೨೪ ॥

ಲಭಂತೇ ಬ್ರಹ್ಮನಿರ್ವಾಣಮೃಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾ ಯತಾತ್ಮಾನಃ ಸರ್ವಭೂತಹಿತೇ ರತಾಃ

॥ ೨೫ ॥

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್

॥ ೨೬ ॥

ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಽಭ್ಯಂತರಚಾರಿಣೌ

॥ ೨೭ ॥

ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ

॥ ೨೮ ॥

ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್ ।
ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ

॥ ೨೯ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಸಂನ್ಯಾಸಯೋಗೋ ನಾಮ ಪಂಚಮೋಽಧ್ಯಾಯಃ

ಸೂಚನೆ

ಭೋಧಿಸಿದೆ ಕರ್ಮಯೋಗವ ।
ಬೋಧಿಸಿದಯ್ ಸಂನ್ಯಸನವನುಮನಾ ದ್ವಿಕದೋಳ್ ॥
ಸಾಧನ ಮೇಲೆನಗಾವುದೊ ।
ಆದೇಶಿಪುದೆಂದು ಬೇಡಿದಂ ಕೌಂತೇಯಂ

॥ ೧ ॥

ಕರ್ಮವನೆಸಗಿಯುಮಾತ್ಮದ ।
ನಿರ್ಮಲತೆಯ ಕಾವ ಭಾವಕೌಶಲನಯದಾ ॥
ನಿರ್ಮೋಹಯೋಗಕಲೆಯಂ ।
ಧರ್ಮಾಶ್ರಯ ಕೃಷ್ಣನೀಗಳುಪದೇಶಿಸುವಂ

॥ ೨ ॥

ಸಾರಾಂಶ

ಕರ್ಮಮಾಡಿ ಅದರ ಫಲವನ್ನು ಬಿಟ್ಟಿರುತ್ತಾನೆ ಜ್ಞಾನಿ.

ತೆಂಗಿನಮರ ನೆಡುವವನು ಅದರ ಫಲವನ್ನು ಕಾಣುವುದು ಯಾವಾಗಲೋ! ಮರ ನೆಟ್ಟವರು ಯಾರೋ; ಬೆಳೆಸುವವರು ಇನ್ಯಾರೋ; ಫಲ ಅನುಭವಿಸುವವರು ಮತ್ತ್ಯಾರೋ. ಮರ ನೆಡುವವನು ಜನಕ್ಕೆ ಒಳ್ಳೆಯದಾಗಲೆಂದು ಆ ಕೆಲಸ ಮಾಡುತ್ತಾನೆ. ಪಾಪಬೀಜ ಹೇಗೆ ಸ್ವಭಾವದಲ್ಲಿದೆಯೋ ಪುಣ್ಯದ ಬೀಜವೂ ಹಾಗೆಯೇ ಸ್ವಭಾವದಲ್ಲಿದೆ. ಈ ಸದಂಶವನ್ನು ಪ್ರವರ್ಧಮಾನ ಮಾಡಬೇಕೆಂಬುದೇ ಗೀತೆಯ ತಾತ್ಪರ್ಯ.

ಅಂತಸ್ಸಮತೆ, ಬಹಿಸ್ತಾರತಮ್ಯ–ಇವು ಲೋಕಹಿತಸೂತ್ರದ ಎರಡು ಭಾಗಗಳು. ಮನೆಯಲ್ಲಿ ತಾಯಾದವಳು ಮಾಡುವ ಆರೈಕೆ ಮಕ್ಕಳ ವಯಸ್ತಾರತಮ್ಯವನ್ನೂ ಆರೋಗ್ಯ ತಾರತಮ್ಯವನ್ನೂ ಅನುಸರಿಸಿ ನಡೆಯುತ್ತದೆ. ಆಕೆ ಬಾಹ್ಯ ಸಾಮ್ಯವನ್ನು ಪಟ್ಟುಹಿಡಿದು ಹದಿನಾರು ವರ್ಷದವನಿಗೆ ಕೊಡುವ ತಿಂಡಿಯನ್ನು ಹದಿನಾರು ತಿಂಗಳವನಿಗೆ ಕೊಟ್ಟರೆ ಅದು ಹಿತವಾಗುವುದು ಹೋಗಿ ತದ್ವಿರುದ್ಧವೇ ಆಗುತ್ತದೆಯಷ್ಟೆ? ಸಮತ್ವ ಸಮತ್ವ ಎಂದು

ಕೂಗಾಡುವ ರಾಜಕೀಯಸ್ಥರು ತಾರತಮ್ಯ ತತ್ತ್ವಕ್ಕೂ ನಮ್ಮ ಜೀವನದಲ್ಲಿ ಒಂದು ಜಾಗವುಂಟೆಂಬುದನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಳ್ಳಬೇಕು.

ಪ್ರಕರಣ ೬

ಅಧ್ಯಾಯ ೫ - ಸಂನ್ಯಾಸಯೋಗವೆಂಬ ಕರ್ಮಜ್ಞಾನಸಾಮರಸ್ಯಯೋಗ

ಇದು ಚಿಕ್ಕ ಅಧ್ಯಾಯ. ಆದರೂ ಸಾರಭೂತವಾದದ್ದು. ಇದರ ವಿಷಯಗಳು ಮುಖ್ಯವಾಗಿ ಐದು:

1. ಕರ್ಮನಿಷ್ಠೆ ಜ್ಞಾನನಿಷ್ಠೆಗಳ ಪರಸ್ಪರ ಸಹಾಯತೆ,
2. ಕರ್ಮದಲ್ಲಿರಬೇಕಾದ ಮನೋವೃತ್ತಿ,
3. ಆತ್ಮದ ನಿಷ್ಕ್ರಿಯತೆ,
4. ಸರ್ವತ್ರಾತ್ಮಾಸಮಸಮಕ್ಷತೆ,
5. ಯೋಗಿಯ ಲೋಕಹಿತನಿಷ್ಠೆ.

ನಾಲ್ಕನೆಯ ಅಧಾಯ್ಯದ ಭಗವದ್ವಾಕ್ಯದಲ್ಲಿ ಅರ್ಜುನನಿಗೆ ಒಂದು ಅಸಂಬದ್ಧತೆ ತೋರಿತು: "ಕೃಷ್ಣ, ನೀನು ಒಂದು ಸಾರಿ ಕರ್ಮಸಂನ್ಯಾಸವನ್ನು ಪ್ರಶಂಸೆ ಮಾಡಿದೆ. ಇನ್ನೊಂದು ಸಾರಿ ಕರ್ಮಯೋಗವನ್ನು ಪ್ರಶಂಸಿಸಿದೆ. (ಇಲ್ಲಿ ಸಂನ್ಯಾಸವೆಂಬುದಕ್ಕೂ ಯೋಗವೆಂಬುದಕ್ಕೂ ಪರಸ್ಪರ ವಿರೋಧದ ಸೂಚನೆ ತೋರುತ್ತದೆ.)

> ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
> ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥ (೪–೩೩)

'ಎಲ್ಲ ಕರ್ಮವೂ ತತ್ತ್ವಜ್ಞಾನದಲ್ಲಿ ಮುಗಿಯುತ್ತದೆ.' ಹೀಗೆ ನೀನು ಒಂದು ಸಲ ಹೇಳಿದೆ. ಇನ್ನೊಂದು ಸಲ–

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾऽऽತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮ್ ಆತಿಷ್ಠೋತ್ತಿಷ್ಠ ಭಾರತ ॥ (೪–೪೨)

'ಕರ್ಮಯೋಗದಲ್ಲಿ ನಿಲ್ಲು; ಯುದ್ಧಕ್ಕೇಳು' –ಎಂದು ಹೇಳಿದೆ. ಇವೆರಡೂ ನಿನ್ನ ಮಾತೇ. ಈ ಎರಡರಲ್ಲಿ ನಿಶ್ಚಯ ಯಾವುದು? ತತ್ತ್ವಜ್ಞಾನವೇ ಕರ್ಮಕ್ಕಿರುವ ಪರಮಫಲ: ಜ್ಞಾನಕ್ಕೋಸ್ಕರವಾಗಿಯೇ ಕರ್ಮ ಮಾಡಬೇಕಾದದ್ದು–ಎಂದ ಮೇಲೆ ಜ್ಞಾನಸಂಪಾದನೆಯಾದ ಬಳಿಕ ಕರ್ಮ ಮಾಡಬೇಕಾದದ್ದಿಲ್ಲ ಎಂದಾಯಿತಷ್ಟೆ? ಸಂನ್ಯಾಸಿಗಳು ಕರ್ಮ ಮಾಡಬೇಕಾಗಿಲ್ಲವಲ್ಲವೆ? ಕರ್ಮರಹಿತವಾದದ್ದು ಸಂನ್ಯಾಸ; ಕರ್ಮಸಹಿತವಾದದ್ದು ಕರ್ಮಯೋಗ. ಸಂನ್ಯಾಸ ಶ್ರೇಷ್ಠವೇ, ಕರ್ಮ ಶ್ರೇಷ್ಠವೇ" ಈ ಪ್ರಶ್ನೆಗೆ ಉತ್ತರರೂಪವಾದದ್ದು ಐದನೆಯ ಅಧ್ಯಾಯ.

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥

ಇದು ಭಗವಂತ ಕೊಟ್ಟ ಸಮಾಧಾನ. "ಕರ್ಮಸಂನ್ಯಾಸ, ಕರ್ಮಯೋಗ–ಈ ಎರಡೂ ಪರಮೋತ್ತಮ ಪದವಿಯನ್ನು ಕೊಡಬಲ್ಲವು. ಆ ಎರಡರಲ್ಲಿ ಕರ್ಮಯೋಗ ವಿಶೇಷವಾದದ್ದು."

ಸಂನ್ಯಾಸವೆಂದರೆ ಬಿಡುವುದು, ತೊರೆಯುವುದು; ಯೋಗವೆಂದರೆ ಸೇರಿಕೊಳ್ಳುವುದು, ಹೊಂದಿಕೊಳ್ಳುವುದು. ಕರ್ಮವನ್ನು ಬಿಡುವುದು ಎಂದರೆ ಏನು? ಸೇರಿಕೊಳ್ಳುವುದು ಎಂದರೆ ಏನು? ಎರಡೂ ಒಂದೇ ಅಲ್ಲವೆಂದು ಮಾತಿನಿಂದಲೇ ಸ್ಪಷ್ಟವಾಗಿದೆ. ಮಾತಿನಿಂದ ಮಾತ್ರವೇ ಅಲ್ಲ, ಅರ್ಥದಲ್ಲಿಯೂ ಸಂನ್ಯಾಸದಿಂದ ಯೋಗ ಬೇರೆಯೆಂಬುದು ಭಗವದ್ವಾಕ್ಯದಿಂದಲೇ ಸ್ಪಷ್ಟವಾಗಿದೆ: "ಕರ್ಮಯೋಗೋ ವಿಶಿಷ್ಯತೇ." ಕರ್ಮಯೋಗದ ವಿಶೇಷವೇನು? ಏನೆಂದರೆ ಕರ್ಮಯೋಗವು ಸಂನ್ಯಾಸದ ಪರಮೋದ್ದೇಶವಾದ ಸಾಂಖ್ಯಕ್ಕೆ–ಎಂದರೆ ತತ್ತ್ವಜ್ಞಾನಕ್ಕೆ–ಅವಶ್ಯವಾದ ಪೂರ್ವಸಿದ್ಧತೆ ಎಂಬುದು.

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥

ಇಲ್ಲಿ ಯೋಗವೆಂದರೆ ಕರ್ಮಯೋಗ. "ಕರ್ಮಯೋಗವಿಲ್ಲದೆ ಸಂನ್ಯಾಸ ಬರುವುದು ಕಷ್ಟ. ಕರ್ಮಯೋಗ ಮಾಡಿದ ಮೌನಿಯು ಸಂನ್ಯಾಸವನ್ನು ಎಂದರೆ ಆತ್ಮಜ್ಞಾನವನ್ನು ಪಡೆಯಲು ಬಹುಕಾಲ ಹಿಡಿಯದು."

ಸಂನ್ಯಾಸಿ ಯಾರು?

ಕಾಷಾಯ ಧರಿಸಿ ಶಿರೋಮುಂಡನ ಮಾಡಿಸಿಕೊಂಡು ಕರ್ಮವರ್ಜನೆ ಮಾಡಿದವರೆಲ್ಲ ಸಂನ್ಯಾಸಿಗಳೆ? ಅಲ್ಲವೆಂದು ಹಿಂದೆ ಹೇಳಿದೆ (೩–೬). ದುಡುಕಿ ಸಂನ್ಯಾಸಾಶ್ರಮ ತೆಗೆದುಕೊಂಡರೆ ಕರ್ಮಾಧಿಕಾರ ಹೋಗುತ್ತದೆ. ಜ್ಞಾನಾಧಿಕಾರ ಬರುವ ನಿಶ್ಚಯವಿಲ್ಲ.

> ನ ಕರ್ಮಣಾಮನಾರಂಭಾತ್ ನೈಷ್ಕರ್ಮ್ಯಂ ಪುರುಷೋಽಶ್ನುತೇ ।
> ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ (೩–೪)

ಮುಂದೆಯೂ ಅದನ್ನು ಹೇಳುವುದಾಗುತ್ತದೆ:

> ... ಸಂನ್ಯಾಸೀ... ನ ನಿರಗ್ನಿರ್ನ ಚಾಕ್ರಿಯಃ ॥

"ಅಗ್ನಿಹೋತ್ರಾದಿ ಕರ್ಮಗಳನ್ನು ತೊರೆದಮಾತ್ರದಿಂದ ಸಂನ್ಯಾಸಿಯಾಗುವುದಿಲ್ಲ." ನಿಜವಾದ ಸಂನ್ಯಾಸದ ಲಕ್ಷಣ ಇದು:

> ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ॥

"ಯಾರು ಯಾರನ್ನೂ ಯಾವುದನ್ನೂ ಎಂದೆಂದೂ ದ್ವೇಷಿಸನೋ, ಎಂದೆಂದೂ ಆಶಿಸನೋ ಅವನು ಸದಾ ಸಂನ್ಯಾಸಿ." "ನ ದ್ವೇಷ್ಟಿ, ನ ಕಾಂಕ್ಷತಿ" ಎಂಬುದರಲ್ಲಿ ಉಪೇಕ್ಷೆ ಎಂಬ ಭಾವ ಅಡಗಿದೆ. ಎಂದರೆ ಇಂಗ್ಲಿಷಿನಲ್ಲಿ ಹೇಳುವಂತೆ ಬರಿಯ Co-existence –ಸಹಅಸ್ತಿತ್ವ ಮಾತ್ರವಲ್ಲ. ಬಸ್ಸಿನಲ್ಲಿಯೋ ರೈಲಿನಲ್ಲಿಯೋ ಕುಳಿತ ಅಪರಿಚಿತ ಮನುಷ್ಯರಿಬ್ಬರಿರುವುದು ಸಹಅಸ್ತಿತ್ವ. ಅವರಿಬ್ಬರೂ ಪರಸ್ಪರ "ನ ದ್ವೇಷ್ಟಿ, ನ ಕಾಂಕ್ಷತಿ." ಇದು ನಞ್ ರೂಪದ (ನೆಗೆಟಿವ್) ಭಾವನೆ. ಇದರ ಜೊತೆಗೆ ಅಸ್ ರೂಪದ (ಪಾಸಿಟಿವ್) ಭಾವನೆ ಸೇರಬೇಕು. ಅದನ್ನು ಈಗ ಭಗವಂತ ತೋರಿಸುತ್ತಾನೆ:

ಲಭನ್ತೇ ಬ್ರಹ್ಮನಿರ್ವಾಣಮ್ ಋಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾ ಯತಾತ್ಮಾನಃ ಸರ್ವಭೂತಹಿತೇ ರತಾಃ ॥

"ಋಷಿಗಳು ಕಲ್ಮಷಗಳನ್ನು ಕಳೆದವರಾಗಿ, ಎಲ್ಲ ಸಂದೇಹಗಳನ್ನೂ ನೀಗಿ, ನಿಶ್ಚಯ ಜ್ಞಾನವಂತರಾಗಿ, ಸಮಸ್ತ ಪ್ರಾಣಿಗಳಿಗೂ ಹಿತವೆಸಗುವುದರಲ್ಲಿ ನಿರತರಾಗಿರುತ್ತಾರೆ.

ಹಿತನಿರತರು ಎಂದರೆ ಬಾಯಿಂದ ಸ್ವಸ್ತಿವಾಚನ ಹೇಳುವವರು ಎಂದಲ್ಲ; ಹಿತವನ್ನು ಅಂತರಂಗದಲ್ಲಿ ಸಂಕಲ್ಪಿಸಿಕೊಂಡು ಬಹಿರಂಗದಲ್ಲಿ ಕಾರ್ಯಗತ ಮಾಡುವವರು ಎಂದರ್ಥ. ಹೀಗೆ ಲೋಕಹಿತಕಾರ್ಯವನ್ನು ಸಂನ್ಯಾಸಿ ಬಿಡಬೇಕಾದದ್ದಿಲ್ಲ. ಆದರೆ ಒಂದು ಅಸಾಧಾರಣ ಮನೋಭಾವದಿಂದ ಮಾಡಬೇಕು. ಕಾರ್ಯವೆಂದರೆ ಲೋಕ ಸಂಪರ್ಕ–ಲೋಕದಿಂದ ತೆಗೆದುಕೊಳ್ಳುವುದು, ಲೋಕಕ್ಕೆ ಕೊಡುವುದು. ಕರ್ಮಾವಸರದಲ್ಲಿ ಕಾಮ–ಕ್ರೋಧಗಳೂ ಲೋಭ–ಮೋಹಗಳೂ ಅಹಂಕಾರ–ಅಸೂಯೆಗಳೂ ಆನುಷಂಗಿಕವಾಗಿ ಬರುತ್ತವೆ. ಈ ಆನುಷಂಗಿಕ ಮನೋವಿಕಾರಗಳಿಲ್ಲದವನು ಸಂನ್ಯಾಸಿ. ಕರ್ಮ ಮಾಡಿ ಕರ್ಮದೋಷಗಳನ್ನು ಬಿಟ್ಟಿರುವವನು ಸಂನ್ಯಾಸಿ.

ಈ ಶ್ಲೋಕದಲ್ಲಿ ಬಳಸಿರುವ ಮಾತುಗಳನ್ನು ಜಾಗರೂಕತೆಯಿಂದ ಪರಿಶೀಲಿಸುವುದು ಆವಶ್ಯಕ. ಸಂನ್ಯಾಸಿಗಳು "ಛಿನ್ನದ್ವೈಧಾಃ: ದ್ವೈಧಗಳಿಲ್ಲದವರು. "ಭಗವಂತ ಇದ್ದಾನೊ?" ಎಂದರೆ ಅದಕ್ಕೆ ಕೆಲವರು ಒಂದು ಪ್ರಸಿದ್ಧವಾದ Agnostic –ಅಜ್ಞೇಯತಾವಾದಿಯ ಮಾತಿನಲ್ಲಿ ಉತ್ತರ ಹೇಳುವುದುಂಟು. ಆ ಅಜ್ಞೇಯತಾವಾದಿ ಹೀಗೆ ಪ್ರಾರ್ಥಿಸಿದ್ದನಂತೆ: "ಓ ದೇವರೇ–ದೇವರೆಂಬುದಿರುವ ಪಕ್ಷದಲ್ಲಿ–ನನ್ನ ಜೀವವನ್ನು–ಜೀವವೆಂಬುದಿರುವ ಪಕ್ಷದಲ್ಲಿ–ಕಾಪಾಡು–ಕಾಪಾಡುವುದೆಂಬ ಕ್ರಿಯೆ ಸಾಧ್ಯವಿರುವ ಪಕ್ಷದಲ್ಲಿ." ಇದು ದ್ವೈಧ. ನಂಬಲು ಇಷ್ಟವಿಲ್ಲ; ನಂಬಿಕೆ ಬಿಡಲು ಧೈರ್ಯವಿಲ್ಲ. ನಂಬಿಕೆಗೂ ಅಪನಂಬಿಕೆಗೂ ನಡುವೆ ತೂಗುಮಣೆಯಂತೆ ಓಲಾಡುತ್ತಿರುವುದು ದ್ವೈಧೀಭಾವ. ಈ ರೀತಿಯ ದ್ವೈಧಗಳಿಲ್ಲದವರು ಸಂನ್ಯಾಸಿಗಳು. ರಾಮಕೃಷ್ಣ ಪರಮಹಂಸರನ್ನು ವಿವೇಕಾನಂದರ ಪೂರ್ವಾಶ್ರಮದಲ್ಲಿ "ದೇವರಿದ್ದಾನೆಯೆ?" ಎಂದು ಕೇಳಿದಾಗ ಅವರು ಏನೆಂದರು? "ಇದ್ದಾನೆ." "ಹಾಗಾದರೆ ತೋರಿಸುತ್ತಿರೋ?" ಎಂದು ಕೇಳಲು, ಅವರು "ಓಹೊ ತೋರಿಸುತ್ತೇನೆ" ಎಂದರು. ಈ ರೀತಿಯ ನಿಶ್ಚಯ ಜ್ಞಾನ ಸಂನ್ಯಾಸಿಗಳದು. ಮತ್ತು ಅವರು "ಯತಾತ್ಮಾನಃ" –ಆತ್ಮವನ್ನು ಹದ್ದಿನಲ್ಲಿರಿಸಿಕೊಂಡವರು. ನಿಶ್ಚಯಜ್ಞಾನ ಬಂದರೆ ದರ್ಪ ಇರಬಹುದಲ್ಲ? ಸಂನ್ಯಾಸಿಗಳು

ತಮ್ಮನ್ನು ತಾವು ಹತೋಟಿಯಲ್ಲಿಟ್ಟುಕೊಂಡಿರುತ್ತಾರೆ. ಅಷ್ಟೇ ಅಲ್ಲ: "ಸರ್ವಭೂತ ಹಿತೇ ರತಾಃ". ಸುಮ್ಮನೆ ಕೈಕಟ್ಟಿ ಕುಳಿತಿರುವವರಲ್ಲ ಅವರು: ಸಮಸ್ತ ಪ್ರಾಣಿಗಳಿಗೂ ಹಿತವಾಗುವಂತೆ ನಡೆದುಕೊಳ್ಳುತ್ತಾರೆ. "ಹಿತ" ಎಂಬ ಮಾತನ್ನು ಗಮನಿಸಬೇಕು. ಸುಖ ಎನ್ನಬಹುದಾಗಿತ್ತು– ಹಾಗೆನ್ನಲಿಲ್ಲ. ಸುಖವಾದದ್ದೆಲ್ಲ ಹಿತವಲ್ಲ. ಪರಿಣಾಮದಲ್ಲಿ ಹಿತಕರವಾಗುವಂಥ ಕಾರ್ಯದಲ್ಲಿ ತೊಡಗಿರಬೇಕೆಂದು ತಾತ್ಪರ್ಯ.

ಸರ್ವಭೂತಾತ್ಮಭೂತತ್ವ

ಸಂನ್ಯಾಸಿಗಳು ಕರ್ಮಮಾಡುತ್ತಾರೆ–ಭೂತಹಿತಕ್ಕಾಗಿ. ಅವರಿಗೆ ಕರ್ಮ ಅಂಟುವುದಿಲ್ಲ; ಅವರು ನಿರಹಂಭಾವಿಗಳೂ ನಿರ್ದ್ವಂದ್ವರೂ ಆದದ್ದರಿಂದ

> ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
> ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥

ಇವನ ಆತ್ಮವು ಎಲ್ಲ ಭೂತಗಳಿಗೂ ಆತ್ಮ. ಸಮಸ್ತ ಪ್ರಾಣಿಗಳ ಸುಖದುಃಖಗಳೂ ತನ್ನವೆಂದುಕೊಳ್ಳುತ್ತಾನೆ ಇವನು. ತನಗೆ ಯಾವ ಶಾಂತಿ ಬೇಕೆನಿಸುತ್ತದೆಯೋ ಅದು ಎಲ್ಲ ಪ್ರಾಣಿಗಳಿಗೂ ದೊರೆಯಬೇಕೆಂಬುದು ಜ್ಞಾನಿಯ ಮನೋಭಾವ. ಜೀವ ಉದ್ಧಾರವಾಗಬೇಕು. ನಮಗೆ ಸೋಮಾರಿತನದಿಂದ ಮೈಮುರಿದಾಗ ಒಂದು ಬಗೆಯ ಸುಖವಾಗುತ್ತದೆ. ಆದರೆ ಅದು ಹಿತದ ಗುರುತಲ್ಲ. ಚೆನ್ನಾಗಿ ಮಲಗಿ ಕೊಂಡಾಗ ನಿದ್ದೆ ಬರುತ್ತದೆ. ಅದು ಸುಖವೂ ಹೌದು, ಹಿತವೂ ಹೌದು. ಜೀವವನ್ನು ಉದ್ಧಾರಮಾಡುವ ಕಾರ್ಯವು ಹಿತ. ಸರ್ವಭೂತಗಳ ಆತ್ಮವನ್ನೂ ತನ್ನಲ್ಲಿ ತಾನು ಅನುಭವಿಸುತ್ತಾನೆ ಸಂನ್ಯಾಸಿ. ಹಾಗೆ ಎಲ್ಲವೂ ತಾನೇ ಆದರೆ, ಅವನಿಗೆ ವಿರೋಧಿ ಯಾರು? ಆತ್ಮವು ಸರ್ವತ್ರ ಸಮಗತವಾದದ್ದು. ಆದದ್ದರಿಂದ ಮಮತೆ ಪಕ್ಷಪಾತಗಳಿಗೆ ಕಾರಣವಿಲ್ಲ, ವ್ಯಾಮೋಹ ಅಸೂಯೆಗಳಿಗೂ ಆಸ್ಪದವಿಲ್ಲ. ಆದರೆ ಈ ಸರ್ವಭೂತಾತ್ಮ ಭೂತತ್ವ ನಮ್ಮ ಮನಸ್ಸಿಗೆ ಬರುವುದು ಹೇಗೆ? ನಮ್ಮ ಬುದ್ಧಿಗೆ ಅದು ಅರ್ಥವಾಗುವುದು ಹೇಗೆ? ಮೇಲಾಗಿ ನಮ್ಮ ಕ್ಷಣಕ್ಷಣದ ಸ್ವಾನುಭವವಾಗುವುದು ಹೇಗೆ? ಅನುಭವವು ಜ್ಞಾನಕ್ಕಿಂತ ಹೆಚ್ಚಾದದ್ದು; ನಾವು ಯಾವುದನ್ನು ಕುರಿತು ಧ್ಯಾನ ಮಾಡುತ್ತಿದ್ದೇವೋ ಅದೇ ನಾವು ಆಗಿಬಿಡಬೇಕು ಮನಸ್ಸಿನಲ್ಲಿ. ಅಣಿಮಾದಿ ಅದ್ಭುತಸಿದ್ಧಿಗಳು ಹಠಯೋಗಸಾಧ್ಯ. ಈ ಎಲ್ಲ ಸಿದ್ಧಿಗಳಿಗೂ ಮೇಲ್ಮಟ್ಟದ್ದು "ಸರ್ವಭೂತಾತ್ಮ ಭೂತಾತ್ಮಾ" ಎಂಬ ಸ್ಥಿತಿ. ತುಂಬಾ ಸಂಸ್ಕಾರದಿಂದ ಬರತಕ್ಕದ್ದಿದು.

ಅಸಂಗಕರ್ಮ

> ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
> ಯೋಗಿನಃ ಕರ್ಮ ಕುರ್ವನ್ತಿ ಸಂಗಂ ತ್ಯಕ್ತ್ವಾऽऽತ್ಮಶುದ್ಧಯೇ ॥

ದೇಹದಿಂದ, ಮನಸ್ಸಿನಿಂದ, ಬುದ್ಧಿಯಿಂದ, ಕರ್ಮೇಂದ್ರಿಯ ಜ್ಞಾನೇಂದ್ರಿಯಗಳೆಲ್ಲದರಿಂದಲೂ ಕೆಲಸ ಮಾಡುತ್ತಾರೆ ಯೋಗಿಗಳು. ಹೇಗೆ? “ಸಂಗಂ ತ್ಯಕ್ತ್ವಾ.” ಇಲ್ಲಿ ಮುಖ್ಯವಾದ ಅಂಶಗಳೆರಡು:

1. ಕರ್ಮ ಚೆನ್ನಾಗಿ ಆಗಬೇಕಾದರೆ ಜ್ಞಾನಿಯಾಗಿರಬೇಕು ಮಾಡುವವನು.
2. ಜ್ಞಾನೇಂದ್ರಿಯ ಕರ್ಮೇಂದ್ರಿಯ ಶಕ್ತಿಗಳೆಲ್ಲ ಒಟ್ಟುಗೂಡಿ ಕೆಲಸಮಾಡಬೇಕು.

ಆಗಲೇ ಕಾಯಪಟುತ್ವ. ಯಾವ ಒಂದು ಅಂಗವೂ ಸಡಿಲವಾಗಬಾರದು. ಎಲ್ಲ ಅಂಗಗಳೂ ಸಮರ್ಥವಾಗಿ, ಜಾಗರೂಕವಾಗಿ, ದೃಢವಾಗಿರಬೇಕು. ಆದದ್ದರಿಂದಲೇ ವಿದ್ಯಾರಣ್ಯ ಸ್ವಾಮಿಗಳು ಹೇಳಿದ್ದು:

> ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿಲೌಕಿಕಮ್ ॥

ಆತ್ಮಜ್ಞಾನಿಗೆ ಸ್ವಾರ್ಥವಿಲ್ಲವಾದದ್ದರಿಂದ ಅವನು ಮಾಡುವ ಕೆಲಸಗಳೆಲ್ಲ ಚೆನ್ನಾಗಿಯೇ ಆಗುತ್ತವೆ. ಯೋಗಿಗಳು ಯಾವ ಕಾರಣದಿಂದ ಕರ್ಮಮಾಡುತ್ತಾರೆ? “ಆತ್ಮಶುದ್ಧಯೇ”. ಇದೇ ಅಭಿಪ್ರಾಯವನ್ನೇ ಹತ್ತನೆಯ ಶ್ಲೋಕದಲ್ಲಿ ಹೇಳಿದರು:

> ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
> ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥

ಕರ್ಮ ಮಾಡಬೇಕು–ಬ್ರಹ್ಮದಲ್ಲಿ ಸಮರ್ಪಣಮಾಡಿ ಮಾಡಬೇಕು. “ಈ ಕೆಲಸದಿಂದ ಈ ಲಾಭ ಬರುತ್ತದೆ, ಯಶಸ್ಸು ಬರುತ್ತದೆ” ಎಂದು ಮೊದಲಾದ ಅಂದಾಜುಗಳಿರಬಾರದು. ಯಾರು ಅಂಥ ನಿರೀಕ್ಷೆಯನ್ನಿಟ್ಟುಕೊಳ್ಳದೆ ಕರ್ಮಮಾಡುತ್ತಾನೋ ಅವನಿಗೆ ಪಾಪ ಅಂಟುವುದಿಲ್ಲ. “ಯಾವುದು ಸ್ವಾಭಾವಿಕವೋ ಅದರಲ್ಲಿ ಸ್ವಾರ್ಥ ಸೇರಿರುತ್ತದೆ. ಜ್ಞಾನಿಗೆ ಇದು

ಹೇಗೆ ಅಂಟುವುದಿಲ್ಲ?" "ಪದ್ಮಪತ್ರಮಿವಾಂಭಸಾ" : ನೀರಿನಲ್ಲಿರುವ ತಾವರೆ ಎಲೆಯ ಹಾಗೆ. ಬಟ್ಟೆಯನ್ನು ನೀರಿನಲ್ಲಿ ಹಾಕಿದರೆ ಒದ್ದೆಯಾಗುತ್ತದೆ. ತಾವರೆ ಎಲೆ ನೀರಿನಲ್ಲಿಯೇ ಹುಟ್ಟಿ ಬೆಳೆದು, ಅಲ್ಲಿಯೆ ಹಣ್ಣಾಗಿ ಉದುರಿಹೋಗುವುದಾದರೂ ಅದಕ್ಕೆ ತೇವ ಅಂಟುವುದೇ ಇಲ್ಲ. ನೀರಿನ ಮಧ್ಯದಲ್ಲಿಯೇ ಇರುತ್ತದೆ ಅದು. ಜ್ಞಾನಿಯು ಸಂಸಾರದ ಮಧ್ಯದಲ್ಲಿಯೇ ಇರುತ್ತಾನೆ: ಅದರ ಕಷ್ಟಸುಖಗಳಲ್ಲೆಲ್ಲ ಭಾಗಿಯಾಗುತ್ತಾನೆ. ಆದರೆ ಅಂತರಂಗದಲ್ಲಿ ಬದಲಾವಣೆ ಇಲ್ಲದೆ ಇರುತ್ತಾನೆ.

> ಯೋಽಂತಸ್ಸುಖೋಽಂತರಾರಾಮಃ ತಥಾಂತರ್ಜ್ಯೋತಿರೇವ ಯಃ ।
> ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥

ಪ್ರಕೃತಿ ಎಲ್ಲವನ್ನೂ ಮಾಡಿಸುತ್ತಿದ್ದಾಳೆ; ಅದು ನನಗೆ ತಟ್ಟುವುದಲ್ಲ ಎಂದು ತಿಳಿದುಕೊಂಡಿರುತ್ತಾನೆ ಜ್ಞಾನಿ.

ಲುಕ್ರೀಷಸ್ ಕವಿ ಹೇಳುತ್ತಾನೆ: ಸಮುದ್ರದ ದಡದಲ್ಲಿ ನಿಂತಿರುವವನು ಮೀನು ಹಿಡಿಯಲು ಹೋಗುತ್ತಿರುವ ಬೆಸ್ತರ ಕಷ್ಟವನ್ನು ನೋಡಿ ಸಂತೋಷಪಡುತ್ತಾನಂತೆ. ಅದು ಎರಡು ವಿಧವಾದ ಸಂತೋಷ–ಆ ಬೆಸ್ತರು ಮಾಡುತ್ತಿರುವ ಸಾಹಸವನ್ನು ನೋಡಿ ಒಂದು ಸಂತೋಷ; ತನಗೆ ಆ ಕಷ್ಟವಿಲ್ಲವಲ್ಲ ಎಂದು ಇನ್ನೊಂದು ಸಂತೋಷ! ಜ್ಞಾನಿಯು ಆ ಪ್ರೇಕ್ಷಕನಂತೆ ಲೋಕಕ್ರಿಯೆಗಳನ್ನು ನಿಶ್ಚಿಂತನಾಗಿ ನೋಡುತ್ತಾನೆ.

ಜ್ಞಾನಿಯ ಯೋಗನಿಷ್ಠೆ

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾನ್ತಿಮಾಪ್ನೋತಿನೈಷ್ಠಿಕೀಮ್ ।
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥

"ಯುಕ್ತಃ" ಎಂದರೆ "ಯೋಗನಿಷ್ಠಃ" ಎಂದರ್ಥ. ಕರ್ಮಮಾಡಿ ಅದರ ಫಲವನ್ನು ಬಿಟ್ಟಿರುತ್ತಾನೆ ಜ್ಞಾನಿ. ಇದು ಕಷ್ಟವೆಂದು ಬಹಳ ಬೇಗ ನಮ್ಮ ಅನುಭವಕ್ಕೆ ಬರುತ್ತದೆ. ಆದರೆ ಅಂಥಾದ್ದು ಅಪರೂಪವಲ್ಲ. ತೆಂಗಿನಮರ ನೆಡುವವನು ಅದರ ಫಲವನ್ನು ಕಾಣುವುದು ಯಾವಾಗಲೋ! ಮರ ನೆಟ್ಟವರು ಯಾರೋ; ಬೆಳಸುವವರು ಇನ್ನ್ಯಾರೋ; ಫಲ ಅನುಭವಿಸುವವರು ಮತ್ತ್ಯಾರೋ. ಮರ ನೆಡುವವನು ಜನಕ್ಕೆ ಒಳ್ಳೆಯದಾಗಲೆಂದು ಆ ಕೆಲಸ ಮಾಡುತ್ತಾನೆ. ಪಾಪಬೀಜ ನಮ್ಮ ಸ್ವಭಾವದಲ್ಲಿರುವಂತೆ ಪುಣ್ಯಬೀಜವೂ ನಮ್ಮ ಸ್ವಭಾವದಲ್ಲಿದೆ. ಈ ಸದಂಶವನ್ನು ಪ್ರವರ್ಧಮಾನಮಾಡಬೇಕೆಂಬುದೇ ಗೀತೆಯ ತಾತ್ಪರ್ಯ. ಒಳಗಿರುವ ಸತ್ತ್ವವನ್ನು ವಿಸ್ತರಿಸಬೇಕು. ಹಾಗೆ ಮಾಡಿದವನು "ಶಾನ್ತಿಮಾಪ್ನೋತಿ ನೈಷ್ಠಿಕೀಮ್". "ನೈಷ್ಠಿಕೀಮ್" ಎಂದರೆ ನಿಷ್ಠೆಯಿಂದುಂಟಾಗತಕ್ಕದ್ದು: "ತನ್ನಿಷ್ಠಸ್ಯ ಮೋಕ್ಷೋಪದೇಶಾತ್" ಮೊದಲಾದ ಕಡೆ ಇರುವ ಹಾಗೆ, ತದೇಕನಿಷ್ಠೆಯಿಂದಲೇ ಶಾಂತಿ ಉಂಟಾಗತಕ್ಕದ್ದು. ಯಾವುದಾದರೊಂದರಲ್ಲಿ ನಿಷ್ಠೆ ಇರಬೇಕು. ಆಯುರ್ವೇದದಲ್ಲಿ ಸ್ವಲ್ಪನಂಬಿಕೆ, ಯುನಾನಿ ಆಲೋಪತಿಗಳಲ್ಲಿಯೂ ಸ್ವಲ್ಪಸ್ವಲ್ಪ ನಂಬಿಕೆ–ಹೀಗೆ ಎಲ್ಲದರಲ್ಲೂ ನಮ್ಮ ನಂಬಿಕೆ ಹರಡಿರುತ್ತದೆ ಸಾಮಾನ್ಯವಾಗಿ. ಯೋಗನಿಷ್ಠೆ ಇಲ್ಲದವನು "ಕಾಮಕಾರೇಣ ಫಲೇಸಕ್ತೋ ನಿಬಧ್ಯತೇ". ಅವನು ಆಯಾ ಕ್ಷಣದಲ್ಲಿ ಹೇಗೆಹೇಗೆ ತೋರಿದರೆ ಹಾಗೆಹಾಗೆ ನಡೆಯುತ್ತಾನೆ. ನಿಷ್ಠೆಗೆ ವಿರುದ್ಧವಾದದ್ದು ಕಾಮಕಾರ. ಅದೇ ವ್ಯಭಿಚಾರ. ಕಾಮಕಾರನಿಗೆ ಶಾಂತಿಯಿಲ್ಲ. ಅವನಿಗೆ ಆ ಹೊತ್ತಿನ ಫಲದಲ್ಲಷ್ಟೆ ಆಸಕ್ತಿ. ಕಣಕ್ಷಣಕ್ಕೂ ಅವನ 'ನಿಷ್ಠೆ' ಬದಲಾಯಿಸುತ್ತಿರುತ್ತದೆ. ಆದದ್ದರಿಂದ ಅವನಿಗೆ ಶಾಂತಿಯಿಲ್ಲ. ಅವನು "ನಿಬಧ್ಯತೇ" –ಕರ್ಮಗಳಿಂದ ಬಂಧಿಸಿಲ್ಪಡುತ್ತಾನೆ.

“ಕರ್ಮ” ಶಬ್ದಾರ್ಥ

“ಕರ್ಮ” ಶಬ್ದಕ್ಕೆ ನಾಲ್ಕಾರು ಅರ್ಥಗಳುಂಟು. ಈ ಸಂದರ್ಭದಲ್ಲಿ “ಸತ್ಕರ್ಮ” ಎಂದು ಹೇಳುವ ಅಗತ್ಯ ಕೂಡ ಇಲ್ಲ. “ಬ್ರಹ್ಮಣ್ಯಾಧಾಯ” ಎಂದಿದ್ದಾರೆ. ಬ್ರಹ್ಮಸ್ಮೃತಿ ಇದ್ದರೆ ದುಷ್ಕರ್ಮ ಸಾಧ್ಯವೇ ಇಲ್ಲ. ಸತ್ಕರ್ಮ ಎರಡು ರೀತಿಯದಾಗಿರಬಹುದು. ಶಾಸ್ತ್ರೋಕ್ತವಾದ ಕರ್ಮ; ಲೌಕಿಕವಾದ ಕರ್ಮ. ಶಾಸ್ತ್ರೋಕ್ತ ಎಂದರೆ ಶ್ರೌತಸ್ಮಾರ್ತ ಕರ್ಮಗಳು; ಯಜ್ಞಯಾಗಾದಿಗಳು. ಸಾಮಾನ್ಯವಾಗಿ ಕರ್ಮ ಎಂದು ಹೇಳಿದರೆ ಶಾಸ್ತ್ರಕರ್ಮ, ಲೌಕಿಕ ಕರ್ಮ ಎಲ್ಲವನ್ನೂ ಗ್ರಹಿಸಬಹುದು. ಎಲ್ಲ ಕರ್ಮವನ್ನೂ “ಬ್ರಹ್ಮಣ್ಯಾಧಾಯ” ಎಲ್ಲದರಲ್ಲೂ ಬ್ರಹ್ಮಸ್ಮರಣೆ ಇರಬೇಕು; ಸ್ವಪ್ರಯೋಜನ ದೃಷ್ಟಿ ಇರಬಾರದು. ಯಾರು ಇದನ್ನು ಮಾಡುತ್ತಾನೋ ಅವನು “ಲಿಪ್ಯತೇ ನ ಸ ಪಾಪೇನ”. ಪಾಪ ಬರುವುದು ಅಹಂತೆ ಇದ್ದರೆ. ಆದದ್ದರಿಂದ “ಸಂಗಂ ತ್ಯಕ್ತ್ವಾ” ಎಂದಿದ್ದಾರೆ: “ಮಮತೆಯ ಸಂಗವನ್ನು ಬಿಟ್ಟು” ಎಂದು ಇದರ ತಾತ್ಪರ್ಯ. ಹಾಗಾದರೆ ಅದರ ಜವಾಬ್ದಾರಿಯನ್ನು ಯಾರಾದರೂ ವಹಿಸಿಕೊಳ್ಳಬೇಕಲ್ಲ? “ಬ್ರಹ್ಮಣಿ ಆಧಾಯ” – ಜವಾಬ್ದಾರಿಯನ್ನು ಜ್ಞಾನಿ ಬ್ರಹ್ಮನಿಗೊಪ್ಪಿಸಿಬಿಡುತ್ತಾನೆ.

ಇದೇ ಅಭಿಪ್ರಾಯವನ್ನೇ “ಯುಕ್ತಃ ಕರ್ಮಫಲಂ ತ್ಯಕ್ತ್ವಾ” ಎಂಬಲ್ಲಿ ಹೇಳಿದ್ದಾರೆ. ಅಯುಕ್ತಃ ಎಂದರೆ, ಯಾರು ಭಗವಂತನಲ್ಲಿ ಮನಸ್ಸನ್ನು ಸೇರಿಸಿಲ್ಲವೋ ಅವನು, “ಕಾಮ ಕಾರೇಣ” – ತೋರಿದಹಾಗೆಲ್ಲಾ ನಡೆದುಕೊಳ್ಳುತ್ತಾನೆ: ಅವನು “ಫಲೇ ಸಕ್ತಃ” –ಪ್ರಯೋಜನದೃಷ್ಟಿ ಇಟ್ಟುಕೊಂಡಿರುತ್ತಾನೆ. ಅವನು “ನಿಬಧ್ಯತೇ” –ಅಂಥವನಿಗೆ ಬಂಧನವಲ್ಲದೆ ಇನ್ನೇನಾದೀತು?”

ಅಂತರಂಗತಾಟಸ್ಥ್ಯ

ಇದನ್ನೇ ಮುಂದುವರಿಸುತ್ತಾರೆ:

> ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
> ನವದ್ವಾರೇ ಪುರೇ ದೇಹಿ ನೈವ ಕುರ್ವನ್ನ ಕಾರಯನ್ ॥

ವಶೀ ಎಂದರೆ ತನ್ನ ಮೇಲೆ ಹತೋಟಿ ಇಟ್ಟುಕೊಂಡವನು: ಅವನು ಸುಖಿಯಾಗಿರುತ್ತಾನೆ. ಏಕೆ? **"ಸರ್ವ ಕರ್ಮಾಣಿ ಮನಸಾ ಸಂನ್ಯಸ್ಯ"**. ಕರ್ಮಗಳನ್ನೇನೋ ಬಹಿರಂಗದಲ್ಲಿ ಮಾಡಲೇಬೇಕು–ಆದರೆ ಅಂತರಂಗದಲ್ಲಿ ಸಂನ್ಯಸನ ಮಾಡಬೇಕು. ಇದೇ ಗೀತೆಯ ಸಾರಾಂಶ. ಸಂನ್ಯಸನವು ಅಂತರಂಗದ ಕಾರ್ಯ. ಅದರಿಂದ ಬಹಿರಂಗಕಾರ್ಯಕ್ಕೆ ಲೋಪ ಆಗಬಾರದು. ಅಂತರಂಗದ ನಿಸ್ಸಂಗ ಇಲ್ಲಿ ಹೇಳಿರುವುದು. ಬಹಿರಂಗಕಾರ್ಯಕ್ಕೆ ತಡೆಬಾರದೆ ಅಂತರಂಗದ ಸಂನ್ಯಾಸವು ಸಾಧ್ಯ ಎಂದು ಭಗವಂತ ಹೇಳಿರುವುದು.

ಬಹಿರಂಗದಲ್ಲಿ ಕಾರ್ಯ ನಡೆದು, ಅಂತರಂಗದಲ್ಲಿ ತತ್ಕಾರ್ಯ ನಡೆಯದಿರುವ ಸಂದರ್ಭಗಳು ನಮ್ಮ ಅನುಭವದಲ್ಲಿ ಕೆಲವಿವೆ. ಯಜ್ಞೋಪವೀತಧಾರಣೆ ನಮ್ಮಲ್ಲನೇಕರಿಗೆ ಹಾಗೆ. ಭೋಜನಾರಂಭದಲ್ಲಿ ಪರಿಷೇಚನ ಇತ್ಯಾದಿಗಳನ್ನು ಬರಿಯ ಅಭ್ಯಾಸಬಲದಿಂದ ಮಾಡುತ್ತೇವೆ. ಅದು ಬಹಿರಂಗಕ್ರಿಯೆ. ಅಂತರಂಗ ಅದರಲ್ಲಿ ಸೇರಿರುವುದು ಅಪರೂಪ. ಬೈಸಿಕಲ್ ಭಟರು ಚಕ್ರ ಒತ್ತುವುದು ಬಹಿರಂಗಕ್ರಿಯೆ: ಅಂತರಂಗವನ್ನು ಅದು ಸೋಕುವುದಿಲ್ಲ. ಕರ್ಮ ಮಾಡಬೇಕು, ಅಂತರಂಗದಲ್ಲಿ ಆಯಾಸಪಡಬಾರದು. ಅಂತರಂಗ ತಾಟಸ್ಥ್ಯವನ್ನು ಅಭ್ಯಾಸ ಮಾಡಿಕೊಳ್ಳಬೇಕು. ತಾಟಸ್ಥ್ಯವೆಂದರೆ ದಡದಲ್ಲಿ ನಿಂತಿರುವುದು. ದಡದಲ್ಲಿ ನಿಂತವನಿಗೆ ನೀರು ಅಂಟುವುದಿಲ್ಲ: ನೀರಿನಲ್ಲಿ ಯಾರು ಸ್ನಾನಮಾಡುತ್ತಿದ್ದಾರೆ. ಯಾರು ಮುಳುಗಿಹೋಗುತ್ತಿದ್ದಾರೆ–ಇದನ್ನೆಲ್ಲ ತಟಸ್ಥನು ನೋಡಿದರೂ ಅವನಿಗೆ ಈ ಯಾವುದರಲ್ಲಿಯೂ ಸ್ವಾರ್ಥಾಸಕ್ತಿ ಇಲ್ಲ. ಅದೇ ರೀತಿಯಲ್ಲಿ ಬಹಿರಂಗ ವ್ಯಾಪಾರಿಗಳು ಜ್ಞಾನಿಯ ಮೇಲೆ ಪರಿಣಾಮ ಮಾಡುವುದಿಲ್ಲ.

ಮನುಷ್ಯ ತನ್ನನ್ನು ತಾನು ಎರಡಾಗಿ ವಿಂಗಡಿಸಿಕೊಳ್ಳಬೇಕು: ಮಾಡುವವನೊಬ್ಬ; ಅದನ್ನು ನೋಡುವವನೊಬ್ಬ. "ನಾನು ಸಾಕ್ಷಿ, ನೋಡುತ್ತಿರುವವನು. ಮಾಡುತ್ತಿರುವವರು ಬೇರೆ

ಯಾರೋ." ಈ ಭಾವನೆ ಉಂಟಾಗಬೇಕು. ಆಗ ಮನೋವಿಕಾರಗಳಿರುವುದಿಲ್ಲ. ಅಹಂಕಾರ ಮಮಕಾರಗಳಿದ್ದರೆ ಮನೋವಿಕಾರ ಬರುತ್ತದೆ.

ನೈವ ಕಿಂಚಿತ್ಕರೋಮಿತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥
ಪ್ರಲಪನ್ ವಿಸೃಜನ್ ಗೃಹ್ಣನ್ ಉನ್ಮಿಷನ್ ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತನ್ತ ಇತಿ ಧಾರಯನ್ ॥

ತತ್ತ್ವವನ್ನು ತಿಳಿದವನು ತಾನು ಯಾವ ಕೆಲಸವನ್ನೂ ಮಾಡುತ್ತಿಲ್ಲವೆಂದುಕೊಳ್ಳುತ್ತಾನೆ. ಅವನು ನೋಡುತ್ತಲೇ ಇರುತ್ತಾನೆ; ಕೇಳುತ್ತಲೇ ಇರುತ್ತಾನೆ; ಪದಾರ್ಥಗಳನ್ನು ಮುಟ್ಟುತ್ತಲೇ ಇರುತ್ತಾನೆ; ವಾಸನೆ ನೋಡುತ್ತಲೇ ಇರುತ್ತಾನೆ: ಊಟ ಮಾಡುತ್ತಿರುತ್ತಾನೆ; ನಡೆಯುತ್ತಿರುತ್ತಾನೆ; ನಿದ್ರೆ ಮಾಡುತ್ತಿರುತ್ತಾನೆ; ಮಾತನಾಡುತ್ತ ಇರುತ್ತಾನೆ; ಮಲಾದಿವಿಸರ್ಜನೆ ಮಾಡುತ್ತ ಇರುತ್ತಾನೆ; ಕಣ್ಣುಗಳನ್ನು ಬಿಡುವುದು, ಮುಚ್ಚಿಕೊಳ್ಳುವುದು–ಇದನ್ನೆಲ್ಲ ಮಾಡುತ್ತಲೇ ಇದ್ದರೂ "ನಾನು ಈ ಕೆಲಸ ಮಾಡುತ್ತಿದ್ದೇನೆ" ಎಂಬ ಭಾವನೆ ಇಲ್ಲ ಅವನಿಗೆ. ಇದೆಲ್ಲ ಶ್ರೌತ ಕರ್ಮವಲ್ಲವಷ್ಟೆ? ಅದು ಲೌಕಿಕ ಕರ್ಮವಷ್ಟೆ? "ಇಂದ್ರಿಯಾಣಿ ಇಂದ್ರಿಯಾರ್ಥೇಷು ವರ್ತನ್ತೆ?" –ಇಂದ್ರಿಯಗಳು ಯಾವುದನ್ನು ಬಯಸುತ್ತವೋ ಅವುಗಳಲ್ಲಿ ಅವು ವರ್ತಿಸುತ್ತವೆ. ತಾನು ಅವಲ್ಲ. ತಾನು ಇಂದ್ರಿಯಗಳಲ್ಲ. ಹೀಗೆ ಆಲೋಚಿಸಿ "ಬ್ರಹ್ಮಣ್ಯಾಧಾಯ" : ತಾನು ಯಾವುದನ್ನೂ ಮಾಡತಕ್ಕವನಲ್ಲ ಎಂಬುದನ್ನು ಮನಸ್ಸಿನಲ್ಲಿ ಧರಿಸಿದ್ದಾನೆ.

ಗುಣಗಳ ವರ್ತನೆ

ಹಾಗಾದರೆ ಈ ಜಗತ್ಕಾರ್ಯವೆಲ್ಲ ನಡೆಯುತ್ತಿದೆಯಲ್ಲ, ಯಾರು ಇದನ್ನು ಮಾಡುತ್ತಿರುವುದು? ಮೂರನೆಯ ಅಧ್ಯಾಯದಲ್ಲಿ ನೋಡಿದೆವು:

> ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
> ಗುಣಾ ಗುಣೇಷು ವರ್ತನ್ತ ಇತಿ ಮತ್ವಾ ನ ಸಜ್ಜತೇ ॥ (೩–೨೮)

ಇಂದ್ರಿಯಗುಣಗಳು ವಸ್ತುಗುಣಗಳಲ್ಲಿ "ನಡೆದುಕೊಳ್ಳುತ್ತವೆ." ಹೊರಜಗತ್ತಿನ ವಿಷಯಗಳಲ್ಲಿ ಇಂದ್ರಿಯಗಳು ನಡೆದುಕೊಳ್ಳುತ್ತವೆ. ಇದೇ ತತ್ತ್ವವನ್ನೇ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿರುವುದು. ಅಲ್ಲಿ ಇನ್ನೂ ವಿಸ್ತಾರವಾಗಿದೆ:

> ಜಿಹ್ವಾ ವೈ ಗ್ರಹಃ । ಸ ರಸೇನ ಅತಿಗ್ರಹೇಣ ಗೃಹೀತಃ ।
> ಚಕ್ಷುರ್ವೈ ಗ್ರಹಃ । ಸ ರೂಪೇಣ ಅತಿಗ್ರಹೇಣ ಗೃಹೀತಃ ।
> ಶ್ರೋತ್ರಂ ವೈ ಗ್ರಹಃ । ಸ ಶಬ್ದೇನ ಅತಿಗ್ರಹೇಣ ಗೃಹೀತಃ ।
> ಮನೋ ವೈ ಗ್ರಹಃ । ಸ ಕಾಮೇನ ಅತಿಗ್ರಹೇಣ ಗೃಹೀತಃ ।
> ಹಸ್ತೋ ವೈ ಗ್ರಹಃ । ಸ ಕರ್ಮಣಾ ಅತಿಗ್ರಹೇಣೆ ಗೃಹೀತಃ ।
> ತ್ವಗ್ವೈ ಗ್ರಹಃ । ಸ ಸ್ಪರ್ಶೇನ ಅತಿಗ್ರಹೇಣ ಗೃಹೀತಃ ॥

ಪ್ರಪಂಚವನ್ನೆಲ್ಲ ಗ್ರಹವೆಂದೂ ಅತಿಗ್ರಹವೆಂದೂ ಎರಡು ಭಾಗ ಮಾಡಿದರು. ಯಾವುದು ಗ್ರಹಿಸುತ್ತದೆಯೋ ಅದು ಗ್ರಹ; ಅದು ಯಾವುದನ್ನು ಗ್ರಹಿಸುತ್ತದೆಯೋ ಅದು ಅತಿಗ್ರಹ. ನಾಲಗೆ ಗ್ರಹ; ರುಚಿ ಅತಿಗ್ರಹ. ರುಚಿ ಬಂದು ನಾಲಗೆಯನ್ನು ಹಿಡಿಯುತ್ತದೆ. ಕಣ್ಣು ಗ್ರಹ; ರೂಪವೇ ಅದಕ್ಕೆ ಅತಿಗ್ರಹ. ಕಿವಿ ಗ್ರಹ; ಶಬ್ದ, ಸಂಗೀತ ಮೊದಲಾದದ್ದೆಲ್ಲ ಅತಿಗ್ರಹ. ಕಿವಿ ಕಣ್ಣು ಇವೆಲ್ಲಕ್ಕೂ ಅಧಿಪತಿಯಾದ ಮನಸ್ಸೂ ಗ್ರಹವೇ; ಕಾಮ ಎಂಬ ಅತಿಗ್ರಹದಿಂದ ಅದು ಹಿಡಿಯಲ್ಪಟ್ಟಿದೆ. ಎಲ್ಲ ಇಂದ್ರಿಯಗಳೂ ಗ್ರಹಗಳು; ಅವುಗಳನ್ನು ಆಕರ್ಷಿಸಿಕೊಳ್ಳುವ ರಸರುಚಿಗಳು ಅತಿಗ್ರಹಗಳು. ಹೀಗೆ ಗ್ರಹ–ಅತಿಗ್ರಹ ಎಂದು ಎರಡು ಕಕ್ಷಿ ಲೋಕದಲ್ಲಿವೆ. ಪ್ರಕೃತಿಸಿದ್ಧವಾದ ಕಕ್ಷಿಗಳು ಇವು. ಪ್ರಕೃತಿಯು ಪರಬ್ರಹ್ಮದ ಕಾರ್ಯಶಕ್ತಿ. ಬ್ರಹ್ಮವನ್ನು ಬಿಟ್ಟು ಪ್ರಕೃತಿ ಇಲ್ಲ. ಬ್ರಹ್ಮಶಕ್ತಿಗಳ ಕಾರ್ಯರೂಪವೇ ಪ್ರಕೃತಿ. ಅದು ತಯಾರುಮಾಡಿದ್ದು ಈ ಗ್ರಹ-

ಅತಿಗ್ರಹ ಎಂಬ ಕಕ್ಷಿಗಳು. ಅವು ಒಂದನ್ನೊಂದು ಹೊಂದಿಕೊಳ್ಳುತ್ತವೆ; ಕೆರಳಿಸಲೂ ಕೆರಳಿಸುತ್ತವೆ. ಇದೇ ನಮ್ಮ ಜೀವನ. ಎಲ್ಲ ಪ್ರಾಣಿಗಳ ಜೀವನವೂ ಗ್ರಹ–ಅತಿಗ್ರಹ ಇವುಗಳ ಸಂವಾದವಿವಾದಗಳು. ಇದೇ ನಮ್ಮ ನಿತ್ಯದ ಹೋರಾಟ.

ಆತ್ಮದ ನಿಷ್ಕ್ರಿಯತೆ

ಹೀಗೆ ಸಮಸ್ತ ಜೀವನಕ್ರಿಯೆಯೂ ಬ್ರಹ್ಮಶಕ್ತಿಯಿಂದುಂಟಾದದ್ದು: ಪರಬ್ರಹ್ಮಲೀಲೆ. ಇದನ್ನೆಲ್ಲ ಮಾಡಿಸಿ ಆನಂದಿಸುತ್ತಿದ್ದಾನೆ ಆತ. ಆನಂದ ಎಂದು ಏಕೆ ಹೇಳುತ್ತೇವೆ? ಆನಂದ ಆತನ ಸ್ವಭಾವ. ಕಷ್ಟ ಆತನ ಸ್ವಭಾವದಲ್ಲಿಲ್ಲ. ನಮಗೆ ಅಳು, ದುಃಖ ಎಂದು ಕಾಣಿಸಿದರೂ ಇದೆಲ್ಲದರಲ್ಲೂ ಏನೋ ಒಂದು ಲೀಲೆಯ ಅಂಶ ಇದ್ದೇ ಇರುತ್ತದೆ. ಮಕ್ಕಳ ಅಳು ನಗುಗಳಿದ್ದಂತೆ ನಮ್ಮ ಅಳು ನಗುಗಳು ಭಗವಂತನಿಗೆ. ಆದದ್ದರಿಂದಲೇ ರುದ್ರಾಧ್ಯಾಯದಲ್ಲಿ ಭಗವಂತನನ್ನು "ನಮ ಆಕ್ಖಿದತೇ ಚ ಪ್ರಕ್ಖಿದತೇ ಚ" ಎಂದು ಮೊದಲಾದ ದುಃಖಿತಾಕಾರಗಳಲ್ಲಿಯೂ ಪ್ರಶಂಸೆಮಾಡಿದೆ.

> ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
> ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥

ಜಗತ್ತನ್ನು ಈಶ್ವರ ಮಾಡಿದ, ಅವನೇ ಅನುಭವಿಸಿಕೊಳ್ಳಲಿ ಎನ್ನುವಹಾಗಿಲ್ಲ. ಈಶ್ವರನಿಗೆ ಯಾವುದೂ ಅಂಟುವುದಿಲ್ಲ–ಅವನು ಈಶ್ವರನಾದದ್ದರಿಂದ. ಜಗದ್ವ್ಯಾಪಾರಗಳು ಜೀವದ ಅಂತರ್ಗತವಾದ ಆತ್ಮಕ್ಕೆ ಅಂಟುವುದಿಲ್ಲ, ಅದು ಈಶ್ವರಾಂಶವಾದದ್ದರಿಂದ ಜೀವಕ್ಕೆ ಅದು ಅಂಟುತ್ತದೆ. ಜೀವವೆಂದರೇನು? ಆತ್ಮವಸ್ತು ದೇಹಧಾರಣೆ ಮಾಡಿರುವ ಕಾಲದಲ್ಲಿ ಅದಕ್ಕೆ ಜೀವ ಎಂದು ಹೆಸರು. ಇದೂ ಆತ್ಮವೇ; ಆದರೆ ಮುಸುಕು ಹೊದ್ದುಕೊಂಡುಬಿಟ್ಟಿದೆ; ದುಪ್ಪಟಿ ಹೊದ್ದು "ಭಾರ" "ಭಾರ" ಎಂದು ಅರಚುತ್ತಿದೆ. ಹೀಗೆ ಭಾರವನ್ನು ಅನುಭವಿಸುತ್ತಿರುವ ಕಾಲದಲ್ಲಿ ಅದು ಜೀವ. ಆಗ ಯಾರಾದರೂ ಬಲ್ಲವರು ಬಂದು ಹೊದ್ದಿರುವ ಬೊಂತೆಯನ್ನು ತೆಗೆದು ಬಿಸಾಟರೆ ಹಗುರವಾಗುತ್ತದೆ. ಈ ಜೀವತ್ವ ಎನ್ನುವುದು ಸ್ವಾಭಾವಿಕ. ಆತ್ಮತ್ವವು ಸ್ವಭಾವಾತೀತ. ಪರಮೇಶ್ವರನು ಲೋಕದಲ್ಲಿ ನಡೆಯುವ ಕಾರ್ಯಗಳಿಗೆ ಕರ್ತೃವೂ ಅಲ್ಲ, ಅವುಗಳ ಕಾರ್ಯಕಾರಣ ಸಂಬಂಧಗಳನ್ನು ಯೋಜಿಸಿದವನೂ ಅಲ್ಲ. ಆದರೆ ಎಲ್ಲ ಜಗತ್ಸಂಬಂಧಗಳ ಮೂಲ ದ್ರವ್ಯಗಳೂ ಮೂಲಶಕ್ತಿಗಳೂ ಪರಮೇಶ್ವರನ ಮಹಾಶಕ್ತಿಯಾದ ಪ್ರಕೃತಿರಾಶಿಯ ಕ್ವಚಿದಂಶಗಳು, ಅವುಗಳ ಚೇಷ್ಟಿತವೇ ಲೋಕವ್ಯವಹಾರ. ಕರ್ಮಗಳ ಫಲಸಂಬಂಧ ಪರಮೇಶ್ವರನದಲ್ಲ. ಕರ್ತೃತ್ವ, ಭೋಕ್ತೃತ್ವ, ಕಾರಕತ್ವ, ಕಾರಣತ್ವ–ಇದೆಲ್ಲ ಪ್ರಕೃತಿಗೆ ಸೇರಿದ ಅವಸ್ಥೆಗಳು. ಪ್ರಕೃತಿ ತನಗೆ ಅಧೀನನಾಗಿ ಯಾವ ಜೀವನುಂಟೋ ಆ ಜೀವನಿಂದ

ಎಲ್ಲವನ್ನೂ ಮಾಡಿಸುತ್ತಾಳೆ. ಜೀವದಶೆಯಾದರೋ ಪರಿಹಾರ್ಯವಾದದ್ದು; ಶಾಶ್ವತವಾದದ್ದಲ್ಲ. ಮೋಕ್ಷವೆಂದರೆ ಜೀವದಶೆಯಿಂದ ಬಿಡುಗಡೆ, ಆತ್ಮೇತರವಸ್ತು ಆತ್ಮವನ್ನು ಮುಸುಕಿದಾಗ ಅದು ಜೀವವಾಗುತ್ತದೆ. ಆತ್ಮೇತರವಾದದ್ದು "ವಿನಶ್ಯ." ಅದನ್ನು ತೆಗೆದುಹಾಕಬಹುದು. ಎರಡನೆಯ ಅಧ್ಯಾಯದಲ್ಲಿ ನೋಡಿದೆವು:

> ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ ।
> ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥

ಹೀಗೆ ಆತ್ಮೇತರವಾದದ್ದನ್ನು ಕಳಚಿಹಾಕಬಹುದು. ಅನಾತ್ಮಕವಚದಿಂದ ಜೀವದ ಅಂತಶ್ಚೈತನ್ಯವಾದ ಆತ್ಮವನ್ನು ಬಿಡಿಸಬೇಕು. ಕವಚವನ್ನು ಬಿಡಿಸಿ ನೋಡಿದರೆ ಆತ್ಮಸ್ವರೂಪ ಗೊತ್ತಾಗುತ್ತದೆ. ಆದದ್ದರಿಂದಲೇ ಭಗವಂತ ಹೇಳಿದ್ದು:

> ನವದ್ವಾರೇ ಪುರೇ ದೇಹೀ ನೈವ ಕುರ್ವನ್ನ ಕಾರಯನ್ ॥

ಎರಡು ಕಣ್ಣು, ಎರಡು ಕಿವಿ, ಎರಡು ಮೂಗು, ಬಾಯಿ, ಇನ್ನೆರಡು ಅಧೋರಂಧ್ರಗಳು–ಈ ಒಂಬತ್ತು ರಂಧ್ರಗಳೇ ನವದ್ವಾರಗಳು. ಈ ನವದ್ವಾರಗಳಿರುವ ಪಟ್ಟಣ ನಮ್ಮ ದೇಹ. ಇದಕ್ಕೆ ಯಜಮಾನ ಒಳಗಡೆ ಕುಳಿತಿದ್ದಾನೆ. ಅವನು ಯಾವುದನ್ನೂ ಮಾಡುವುದಿಲ್ಲ: Constitutional Monarch. ವ್ಯವಸ್ಥಾನಿಬದ್ಧ ಪ್ರಭು ಅವನು.ಎಲ್ಲ ಕೆಲಸಗಳಿಗೂ ಬೇರೆ ಬೇರೆ ಮಂತ್ರಿಗಳನ್ನೂ ಅಧಿಕಾರಿಗಳನ್ನೂ ಏರ್ಪಾಟು ಮಾಡಿಬಿಟ್ಟಿದ್ದಾನೆ: ಅವರು ಶಾಸನಾನುಸಾರವಾಗಿ ಲೋಕವನ್ನು ನಡಸುತ್ತಿದ್ದಾರೆ.

ಅರ್ಜುನಪ್ರಶ್ನೆಯ ವ್ಯಾಪ್ತಿ

ಅರ್ಜುನನ ಪ್ರಶ್ನೆಯಿಂದ ದೂರವಾದದ್ದು ಈ ವಿಚಾರ ಎನ್ನಿಸುತ್ತದೆ. ಅರ್ಜುನನ ಪ್ರಶ್ನೆ–ಯುದ್ಧ ಮಾಡಬೇಕೆ? ಬೇಡವೆ? ಎಂದು. ಇದಕ್ಕೆ ಉತ್ತರ ಹೇಳುವ ನೆವದಲ್ಲಿ ಪ್ರಕೃತಿ ಎಂದರೇನು, ಬ್ರಹ್ಮವಸ್ತು ಎಂದರೇನು, ಕ್ರಿಯೆ ಮಾಡೋಣ ಎಂದರೇನು, ಮಾಡತಕ್ಕವನು ಯಾರು, ಅನುಭವಿಸತಕ್ಕವನು ಯಾರು–ಎಂಬುದನ್ನೆಲ್ಲ ಭಗವಂತ ಉಪದೇಶಿಸಿದ್ದಾನೆ. ಇದು ಅವಾಂತರ ವಿಚಾರ ಅನ್ನಿಸುತ್ತದೆ ನಮಗೆ. ಯುದ್ಧವಿಚಾರ ಕೇಳಿದರೆ ಆತ್ಮಾನಾತ್ಮವಿಚಾರ ಹೇಳಿದ ಶ್ರೀಕೃಷ್ಣ. ಇದು ಹೇಗೆ ಸಂಬಂಧಪಟ್ಟದ್ದು? ಈ ಪ್ರಶ್ನೆಯನ್ನು ಆ ರೀತಿಯೇ ನಿರ್ಣಯಮಾಡಬೇಕಾದದ್ದು ಎಂದು ಪ್ರತ್ಯುತ್ತರ. ಆತ್ಮಾನಾತ್ಮ ವಿಜ್ಞಾನವನ್ನು ಬಿಟ್ಟರೆ ಧರ್ಮಾಧರ್ಮಗಳನ್ನು ನಿರ್ಣಯಮಾಡುವುದಕ್ಕೆ ಆಧಾರವೇ ಇಲ್ಲದೆಹೋಗುತ್ತದೆ. ಅರ್ಜುನನ ಪ್ರಶ್ನೆಯೇ ಇದು: “ಇದು ಧರ್ಮವೋ ಅಧರ್ಮವೊ? ಅಧರ್ಮವೆಂದು ನನಗೆ ತೋರುತ್ತದೆ” ಎಂದ ಅರ್ಜುನ. “ಅದು ಧರ್ಮ” ಎಂದ ಕೃಷ್ಣ. ಇದನ್ನು ತೀರ್ಮಾನಮಾಡುವುದಕ್ಕೆ ಏನು ಆಧಾರ? ಯಾವುದು ಪ್ರಮಾಣ? ಆತ್ಮಾನಾತ್ಮವಿವೇಕವೇ ಪ್ರಮಾಣ. ಅರ್ಜುನನು ಪ್ರಶ್ನೆಯನ್ನೇನೋ ಕೇಳಿಬಿಟ್ಟ. ಪ್ರಶ್ನೆಯ ಮೂಲ ಎಲ್ಲಿದೆ, ಎಷ್ಟು ದೂರ ವ್ಯಾಪಿಸುತ್ತದೆ ಎಂಬುದು ಅವನಿಗೆ ತಿಳಿದಿರಲಿಲ್ಲ. ವಾದದ ಅವಸರದಲ್ಲಿ ಈ ಪ್ರಶ್ನೆ ಬಂತು. ಕರ್ತವ್ಯಾಕರ್ತವ್ಯನಿರ್ಣಯಕ್ಕೆ ಮೊದಲು ಬೇಕಾದದ್ದು ಆತ್ಮಜ್ಞಾನ. ಯಾರು ಆತ್ಮಾನಾತ್ಮವಿವೇಕ ಪಡೆದಿದ್ದಾರೋ ಅವರ ನಿರ್ಣಯವನ್ನು ನಾವು ಅಂಗೀಕರಿಸತಕ್ಕದ್ದು.

ಅಜ್ಞಾನನಿವೃತ್ತಿ

ಜ್ಞಾನವೆಂಬುದು ಜೀವಕ್ಕೆ ಹೊರಗಿನ ವಸ್ತುವಲ್ಲ; ಒಳಗಿನದು. ಆತ್ಮದ ಲಕ್ಷಣ ಮೂರು: ಸತ್, ಚಿತ್, ಆನಂದ. ಈ ಚಿತ್ ಎನ್ನುವುದೇ ಜ್ಞಾನದ ಬೀಜ. ಚಿತ್ ಎಂದರೆ ಜ್ಞಾನ, ವೇದನರೂಪವಾದ ಕ್ರಿಯೆ, ಅದರಿಂದ ಪ್ರೇರಿತವಾಗುವ ಕಾರ್ಯಶಕ್ತಿ. ಇದೆಲ್ಲ ಜೀವದಲ್ಲಿ ಗೂಢವಾಗಿದೆ–ಅನಾದಿಕಾಲದಿಂದ. ಅಜ್ಞಾನ ಬಂದು ಈ ಜ್ಞಾನವನ್ನು ಮುಸುಕಿಬಿಟ್ಟಿದೆ. ಮಕ್ಕರಿಯ ಹಾಗೆ. ಆದದ್ದರಿಂದ ನಮಗೆ ಬ್ರಹ್ಮವಸ್ತುವಿನ ದರ್ಶನವಾಗದೆ ಮಕ್ಕರಿಯ ದರ್ಶನವಾಗುತ್ತಿದೆ.

> ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯನ್ತಿ ಜನ್ತವಃ ॥

ಈ ಅಜ್ಞಾನದ ಆವರಣ ಹೋದರೆ ಜ್ಞಾನ ತಾನಾಗಿ ಉಂಟಾಗುತ್ತದೆ. ಅದಕ್ಕೇ ಭಗವಂತ ಹೇಳುವುದು: ಮೊದಲು ಕಾಮಕ್ರೋಧಗಳನ್ನು ಜಯಿಸು. ಮಿಕ್ಕದ್ದೆಲ್ಲ ಆಮೇಲೆ ಸ್ವತ ಏವ ಆಗುತ್ತದೆ–ಎಂದು.

> ಧೂಮೇನಾವ್ರಿಯತೇ ವಹ್ನಿರ್ಯಥಾಽಽದರ್ಶೋ ಮಲೇನ ಚ ॥

ಕೆಂಡವನ್ನು ಹೊಗೆ ಮುಚ್ಚಿದ ಹಾಗೆ, ಕನ್ನಡಿಯನ್ನು ಕೊಳೆ ಕವಿದ ಹಾಗೆ ಆತ್ಮ ನೈಜವಾದ ಜ್ಞಾನವನ್ನು ಪ್ರಕೃತಿಪ್ರಭಾವವು ಮುಚ್ಚಿಬಿಟ್ಟಿದೆ. ಈ ಅಜ್ಞಾನದ ಪರಿಹಾರ ಹೇಗೆ? ಆತ್ಮಸಮಕ್ಷತೆಯನ್ನು ಅಭ್ಯಾಸ ಮಾಡಿಕೊಳ್ಳುವುದರಿಂದ.

ಸಮಕ್ಷತೆ ಎಂದರೆ ಕಣ್ಣೆದುರಿಗಿರುವುದು Presence –ಹಾಜರಿ. ಇಂಗ್ಲಿಷಿನಲ್ಲಿ Practice of the Presence of God ಎನ್ನುವಂತೆ, ನಾವು ಭಗವತ್ಸಮಕ್ಷತೆಯನ್ನು ಅಭ್ಯಾಸದಿಂದ ಅನುಭವಕ್ಕೆ ತಂದುಕೊಳ್ಳಬೇಕು.

ಆತ್ಮಸಮಕ್ಷತೆಯನ್ನು ಅಭ್ಯಾಸಕ್ಕೆ ತಂದುಕೊಂಡಿರುವವರನ್ನು ಹೀಗೆ ವರ್ಣಿಸಿದ್ದಾರೆ:

> ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
> ಗಚ್ಛನ್ತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥

ಆತ್ಮಸಮಕ್ಷತೆ ನಮ್ಮ ಅನುಭವಕ್ಕೆ ಬಂದಿದೆಯೆ, ಇಲ್ಲವೆ? ಇದನ್ನು ನಾವುನಾವೇ ಕಂಡುಕೊಳ್ಳಬಹುದು. ಯಾರನ್ನು ಜನ ಸಣ್ಣವನೆನ್ನುತ್ತದೆಯೋ, ನೀಚನೆನ್ನುತ್ತದೆಯೋ ಅವನು ಬಂದು ನಮ್ಮ ಪಕ್ಕದಲ್ಲಿ ಕುಳಿತಾಗ ನಮ್ಮ ಮುಖ ಯಾವ ಭಾವವನ್ನು ತಾಳುತ್ತದೆ? ನಮಗೆ ಅಪಕಾರ ಮಾಡಿದವನು ಬಂದು ಪಕ್ಕದಲ್ಲಿ ಕುಳಿತಾಗ ನಮ್ಮ ಮನಸ್ಸು ಏನೆನ್ನುತ್ತದೆ? ಅಧಿಕಾರವಂತನೂ ಕೀರ್ತಿವಂತನೂ ನಮ್ಮ ಬಳಿ ಸುಳಿದಾಗ ನಾವು ಹೇಗೆ ನಡೆದುಕೊಳ್ಳುತ್ತೇವೆ? ಆ ಅಂತಸ್ತು, ದರ್ಜೆ, ಪ್ರತಿಷ್ಠೆಗಳಿಂದಾದ ಬಹಿರ್ಭೇದಗಳನ್ನು ನಮ್ಮ ಮನಸ್ಸು ಗಣನೆಗೆ ತೆಗೆದುಕೊಳ್ಳುತ್ತದೆ. ಹಾಗಾಗದೆ ಎಲ್ಲರನ್ನೂ ಏಕ ಪರಿಣಾಮದ ಆತ್ಮಪ್ರೀತಿಯಿಂದ ನೋಡಿದರೆ ಆಗ ಸಮತೆಯನ್ನಾಚರಿಸಿದಂತಾಗುತ್ತದೆ.

ವೈಷಮ್ಯಗಳನ್ನೆಲ್ಲ ಕಳೆದುಕೊಳ್ಳಬೇಕು. ಭೇದಗಳು ಮನಸ್ಸಿನ ತುಂಬಾ ತುಂಬಿಕೊಂಡಿವೆ. ಯಾರು ಭಗವಂತನ ಸಮಕ್ಷತೆಯನ್ನು ಕಂಡುಕೊಂಡಿದ್ದಾನೋ ಅವನಿಗೆ ಈ ಭೇದಗಳಿಲ್ಲ.

> ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
> ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥

ಸಮದರ್ಶನ

ಇದು ಪ್ರಸಿದ್ಧವಾದ ಶ್ಲೋಕ. ಸಮದರ್ಶನ ಎಂದರೇನು? ಹಸು, ಆನೆ–ಎರಡಕ್ಕೂ ಒಂದೇ ಆಹಾರ ಹಾಕಿದರೆ ಅದು ಸಮತೆಯೆ? ನಮ್ಮ ಕಾಲದಲ್ಲಿ ಈ 'ಸಮ' ಎನ್ನುವುದು ಅತ್ಯಂತ ದುರುಪಯೋಗವಾಗಿರುವ ಪದ. ರಾಜಕೀಯಸ್ಥರು ಅದನ್ನು ಪದೇಪದೇ ಉಪಯೋಗಿಸುತ್ತಾರೆ. ಅದರ ಅರ್ಥ ತಿಳಿಯದೆಯೋ, ತಪ್ಪಾಗಿ ತಿಳಿದೋ ಬಳಸುವುದು ಅಪರೂಪವೇನಲ್ಲ. ಸಮತೆ ಎಂದರೆ ಯಾವಯಾವ ಜೀವಕ್ಕೆ ಯಾವ ಯಾವುದು ಹಿತವೋ ಅದದನ್ನು ಒದಗಿಸುವುದು: ಬ್ರಾಹ್ಮಣನಿಗೆ ಮೃಷ್ಟಾನ್ನಭೋಜ, ಹಸುವಿಗೆ ಹುಲ್ಲು–ಹೀಗೆ ಎಲ್ಲರಲ್ಲೂ ಒಂದೇ ವಿಧವಾದ ಪ್ರೀತಿ ತೋರಿಸುವುದು ಸಮದರ್ಶನ. ಉಪಾಧ್ಯಾಯರು ಒಬ್ಬ ವಿದ್ಯಾರ್ಥಿಗೆ ಏಟು ಕೊಡುತ್ತಾರೆ; ಇನ್ನೊಬ್ಬನಿಗೆ ಮಿಠಾಯಿ ಕೊಡುತ್ತಾರೆ. ಇದು ಸಮದರ್ಶನವೇ–ವಿದ್ಯಾರ್ಥಿಗಳ ಯೋಗ್ಯತಾ ತಾರತಮ್ಯದ ದೃಷ್ಟಿಯಿಂದ.

ಸಮದರ್ಶನ ಇಬ್ಬರನ್ನು ಅಪೇಕ್ಷಿಸುತ್ತದೆ: ಒಬ್ಬ ದರ್ಶಕ, ಇನ್ನೊಬ್ಬ ದೃಷ್ಟ. ದರ್ಶಕನ ಸಮದರ್ಶಿತ್ವದಿಂದ ದೃಷ್ಟನಿಗೆ ಹಿತವಾಗಬೇಕು. ಸಮದರ್ಶಿತ್ವದ ಪರ್ಯವಸಾನ ಹಿತಚಿಂತನೆಯಲ್ಲಾಗಬೇಕು. ಏಕಪ್ರಕಾರವಾಗಿ ಉಪಕಾರದೃಷ್ಟಿ ಇದ್ದರೆ ಅದೇ ಸಮದರ್ಶನ. ಈ ಉಪದೇಶ ಅಂತರಂಗಪ್ರೀತಿಯ ಸರ್ವಸಮತೆಯನ್ನು ಕುರಿತದ್ದು. ಸರ್ವಸಮವಾದ ಪ್ರೀತಿಯು ತನ್ನ ಪಾತ್ರರ ಯೋಗ್ಯತಾಭೇದವನ್ನನುಸರಿಸಿ ವ್ಯಕ್ತವಾಗುತ್ತದೆ.

ಇಲ್ಲಿ ಸಮತೆಯನ್ನು ಬೋಧಿಸಿದರಲ್ಲಾ, ಇದರ ಸಂಬಂಧ ಏನು? ಜ್ಞಾನದ ಲಕ್ಷಣವೇ ಸಮದರ್ಶನ. ಆತ್ಮದರ್ಶನ ಮಾಡಿದವನ ಮುಖ್ಯ ಲಕ್ಷಣ ಸಮದರ್ಶಿತ್ವ. ಅವನಿಗೆ ಯಾರಲ್ಲಿಯೂ ದ್ವೇಷವಿಲ್ಲ; ಎಲ್ಲರಲ್ಲೂ ಸಮಾನವಾದ ಪ್ರೀತಿ ಉಂಟು. ಅವನು ಯಾವಾಗಲೂ ಎಲ್ಲರ ಹಿತಚಿಂತನೆ ಮಾಡುತ್ತಿರುತ್ತಾನೆ, ಬೇರೆಯಾಗಿ ಅವರಿವರ ಪ್ರಯೋಜನವನ್ನು ಮಾತ್ರವಲ್ಲ. ಅಧ್ಯಾತ್ಮ ವಿಷಯದಲ್ಲಿ ಸುಖಕ್ಕೆ ಮೇಲ್ಪಟ್ಟದ್ದು ಹಿತ. ಸುಖವುಂಟುಮಾಡಬೇಕೆಂಬುದು ಸರಿಯೇ, ಆದರೆ ಆ ಸುಖವು ಹಿತಕ್ಕೆ ವಿರೋಧಿಯಾಗಬಾರದು. ಸುಖ, ಹಿತ–ಈ ಎರಡನ್ನೂ ನಾವು ಬೇರೆಬೇರೆ ಮಾಡಿ ನೋಡಬೇಕು.

ವಿದ್ಯೆ, ವಿನಯ–ಇವೆರಡರ ಸಾಹಚರ್ಯವನ್ನು ಬ್ರಾಹ್ಮಣಲಕ್ಷಣವಾಗಿ ಹೇಳಿದೆ. ಆ ಎರಡು ಅಂತರಂಗಸಂಪತ್ತುಗಳೂ ಒಟ್ಟುಗೂಡಿರುವುದು ಲೋಕದಲ್ಲಿ ಸಾಮಾನ್ಯವಲ್ಲ. ವಿದ್ಯಾಸಂಪನ್ನರು ಬಹುಮಂದಿಯಿರುತ್ತಾರೆ. ಅವರೆಲ್ಲ ವಿನಯಶಾಲಿಗಳಲ್ಲ. ಹಾಗೆಯೇ ವಿನಯಶೀಲರು ಬಹುಮಂದಿಯಿರುತ್ತಾರೆ. ಅವರೆಲ್ಲ ವಿದ್ವಾಂಸರಲ್ಲ. ವಿದ್ವತ್ತೆಯೂ ವಿನಯವೂ ಒಟ್ಟುಗೂಡಿರುವುದು ವಿಶೇಷ. ಅವಿನಯವನ್ನು, ಅಹಂಭಾವವನ್ನು ಕಳಚಿ ಹಾಕಬೇಕು. ಶಂಕರಾಚಾರ್ಯರ ಪ್ರಾರ್ಥನೆಯಲ್ಲಿ ಪ್ರಥಮಾಂಶವೇ ಅದು:

ಅವಿನಯಮಪನಯ ವಿಷ್ಣೋ ॥

ವಿನಯವೇ “ಅಮಾನಿತ್ವಮದಂಭಿತ್ವಮ್”. ಈ ವಿನಯಗುಣವು ಪ್ರಜಾರಾಜ್ಯದಲ್ಲಿ ಮೃಗ್ಯವಾಗುವ ಲಕ್ಷಣ. ವಿನಯವಂತನಿಗೆ ಏನೇನೂ ದೊರೆಯದು ಪ್ರಜಾ ರಾಜ್ಯದಲ್ಲಿ. ಅಲ್ಲಿ ಬದುಕಬೇಕೆನ್ನುವವನು ಅನುದಿನವೂ ಬೊಬ್ಬೆಯಿಡುತ್ತಿರಬೇಕು. ಬಾಯುಂಟಾದವನು ಬಾಳಿದ. ಬಾಯಿ ಇಲ್ಲದವನು ಪಾಳುಬಾವಿಗಾದ. ಬದುಕಬೇಕೆನ್ನುವವನು ತನ್ನನ್ನು ಇತರರು ಗುರುತಿಸಿ ಕರೆಯಲಿ ಎಂದು ಕಾದಿದ್ದರೆ ಕಡೆಯವರೆಗೂ ಕಾದೇ ಇರಬೇಕಾಗುತ್ತದೆ. ಯಾರು ಬೇಡವೆಂದರೂ ಕೇಳದೆ ತಾನೇ ಮುನ್ನುಗ್ಗಿ ಬಂದು “ನನ್ನ ಮಾತು ಕೇಳಿರಿ. ಇನ್ನೊಬ್ಬರ ಮಾತಿಗೆ ಕಿವಿ ಕೊಡಬೇಡಿ. ನಾನೇ ದೇಶವನ್ನು ಉದ್ಧರಿಸಬಲ್ಲವನು; ಇತರರು ಹಾಳುಮಾಡುವವರು. ನಾನೇ ನಿಮಗೆ ಆಪ್ತ ಬಂಧು; ಇತರರೆಲ್ಲ ನಿಮ್ಮ ಶತ್ರುಗಳು; ನಾನೊಬ್ಬನೇ ಸತ್ಯವಂತ; ಮಿಕ್ಕವರು ವಂಚಕರು” –ಹೀಗೆ ಕೂಗಿಡುವವನಿಗೇ ದೊಡ್ಡ ಜಾಗ. ಈ ಪರಿಸ್ಥಿತಿಯಲ್ಲಿ ವಿನಯಕ್ಕೆಲ್ಲಿ ಪ್ರೋತ್ಸಾಹ? ರಾಜಕೀಯಸ್ಥರು ಉದಾಹರಿಸುವ ಭವಗದ್ಗೀತೆಯೂ ರಾವಣಾಸುರನ ಸಂನ್ಯಾಸವೂ ಸರಿಸಮಾನಗಳು.

ಸಮತೆಯನ್ನೇ ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ:

ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ ಬ್ರಹ್ಮಣಿ ತೇ ಸ್ಥಿತಾಃ ॥

ಯಾರ ಮನಸ್ಸು ಬ್ರಹ್ಮದ ಸರ್ವತ್ರಸಮಾನವಾದ ಸಮಕ್ಷತೆಯಲ್ಲಿ ನಿಂತಿರುತ್ತದೆಯೋ ಅವರು “ಇಹೈವ” –ಈ ಲೋಕದಲ್ಲಿಯೇ–ಮೋಕ್ಷ ಪಡೆದವರಾಗುತ್ತಾರೆ. ಬ್ರಹ್ಮವಸ್ತು ಎಲ್ಲಕಡೆಯೂ

ಇದೆ, ಅದು ಸಮವಾಗಿದೆ–ಎನ್ನುವುದರ ತಾತ್ಪರ್ಯ, ಅದು ಪಕ್ಷಪಾತವಿಲ್ಲದ್ದು ಎನ್ನುವುದನ್ನು ಸೂಚಿಸಲು ಹೇಳಿದ್ದಷ್ಟೇ ಹೊರತು ಎಲ್ಲರಿಗೂ ಒಂದೇ ರೀತಿ ತೋರುತ್ತದೆಂದಲ್ಲ. ಆಕಾಶ ಸರ್ವತ್ರ ಹೇಗೆ ಸಮವಾಗಿರುತ್ತದೋ ಹಾಗೆ ಬ್ರಹ್ಮವಸ್ತು ಎಲ್ಲ ಕಡೆಯೂ ಒಂದೇ ರೀತಿ ಇರುತ್ತದೆ. ಅದಕ್ಕೆ ವೈಷಮ್ಯ ನೈರ್ಘೃಣ್ಯಗಳಿಲ್ಲ. ಇದು "ಶುನಿ ಚೈವ ಶ್ವಪಾಕೇ ಚ" (ನಾಯಿಯಲ್ಲಿಯೂ ನಾಯಿಮಾಂಸ ತಿನ್ನುವ ಚಂಡಾಲನಲ್ಲಿಯೂ) ಎನ್ನುವುದರ ಅಂತರ್ಭಾವ. ಯಾವಯಾವ ಜೀವ ಉದ್ಧಾರವಾಗುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲ ಮಾಡುವುದು ಜ್ಞಾನಿಯ ಉದ್ದೇಶ. ಎಲ್ಲರೂ ಉದ್ಧಾರವಾಗಬೇಕೆಂಬ ತಾತ್ಪರ್ಯ ಸಮವಾಗಿದೆ. ಜಡ್ಜಿಗಳ ದೃಷ್ಟಿ ಸಮವಾದದ್ದು ಎಂದರೆ ಏನು? ಕಾನೂನಿನ ಪ್ರಕಾರ ಯಾರ್ಯಾರಿಗೆ ಏನೇನು ಸಲ್ಲಬೇಕೋ ಅವನವನಿಗೆ ಅದದನ್ನು ಸಲ್ಲಿಸುವುದು. ಈ ಮನೋಭಾವ ನಮ್ಮಲ್ಲಿ ನೆಲಸಬೇಕಾದರೆ ಅದಕ್ಕೆ ಪೂರ್ವಸಿದ್ಧತೆ ಬೇಕು. ನಮ್ಮ ಮಮತಾವ್ಯಾಮೋಹಗಳು ಹೋಗಬೇಕು. ಅವು ನಮ್ಮಲ್ಲಿರುವವರೆಗೂ ಈ ಸರ್ವತ್ರಸಮತಾಭ್ಯಾಸ ಸಾಧ್ಯವಾಗುವುದಿಲ್ಲ.

> ಶಕ್ನೋತೀಹೈವ ಯಃ ಸೋಢುಂ ಪ್ರಾಕ್ ಶರೀರವಿಮೋಕ್ಷಣಾತ್ ।
> ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥

ಇಹದಲ್ಲಿ ಬದುಕಿರುವಾಗಲೇ ಕಾಮಕ್ರೋಧಗಳ ಹೊಡೆತಗಳನ್ನು ಎದುರಿಸಬೇಕು. ಅವನ್ನು ತಡೆದು ಜಯಿಸಬಲ್ಲವನೇ ಯೋಗಿ, ಅವನೇ ಸುಖಿ.

ಈ ಅಧ್ಯಾಯದಲ್ಲಿ ಯೋಗ ಎಂದರೆ ಕರ್ಮಯೋಗ. ಯೋಗಿಗಳು "ಸರ್ವಭೂತ ಹಿತೇ ರತಾಃ." ಅವರು ಎಲ್ಲೆಲ್ಲಿ ನೋಡಿದರೂ ತಮ್ಮ ಆತ್ಮವನ್ನೇ ಕಾಣುತ್ತಾರೆ. ಆದದ್ದರಿಂದ ಎಲ್ಲರೂ ಅವರಿಗೆ ಆತ್ಮಸಮರು. ಆತ್ಮಪ್ರೇಮದ ಅಭಿವ್ಯಂಜನವೇ ಸರ್ವಹಿತಾಚರಣೆ. ಸರ್ವಹಿತಾಚರಣೆ ಎನ್ನುವುದೂ ಒಂದು ಕರ್ಮ. ಆ ಕರ್ಮ ಪರಮೇಶ್ವರ ಪ್ರೀತ್ಯರ್ಥವಾದದ್ದು.

> ಭೋಕ್ತಾರಂ ಯಜ್ಞ ತಪಸಾಂ ಸರ್ವಲೋಕಮಹೇಶ್ವರಂ ।
> ಸುಹೃದಂ ಸರ್ವಭೂತಾನಂ ಜ್ಞಾತ್ವಾ ಮಾಂ ಶಾನ್ತಿಮೃಚ್ಛತಿ ॥

ಶ್ರೀಕೃಷ್ಣನು ತನ್ನ ವಿಷಯದಲ್ಲಿ ಹೇಳಿಕೊಂಡಿರುವುದರಲ್ಲೆಲ್ಲ ಪರಮಸುಂದರವಾದ ಮಾತು ಇದು. "ಸಮಸ್ತ ಪ್ರಾಣಿಗಳಿಗೂ ಸ್ನೇಹಿತ ನಾನು. ಎಲ್ಲರನ್ನೂ ಕಾಪಾಡತಕ್ಕವನು ನಾನು. ನಾನಿದ್ದೇನೆಂದು ತಿಳಿದು ಕರ್ಮ ಮಾಡಿರಿ." ನಾವು ಮಾಡುವ ಯಜ್ಞಾದಿ ಪುಣ್ಯಕಾರ್ಯಗಳೂ, ತಪಸ್ಸೂ ಸೇರುವುದು ಯಾರಿಗೆ? ಪರಮೇಶ್ವರನಿಗೆ. ಯಾರು ಹೀಗೆ ಪರಮೇಶ್ವರಮಹಿಮೆಯನ್ನು ಸದಾ ಅನುಭವಿಸುತ್ತಿರುತ್ತಾನೋ ಅವನಿಗೆ ಶಾಂತಿ ಲಭಿಸುತ್ತದೆ. ಇದು ಭಗವದವತಾರವನ್ನು ನಮ್ಮ ಸ್ಮರಣೆಗೆ ತಂದುಕೊಡತಕ್ಕ ವಾಕ್ಯ.

ಸಮತಾತತ್ತ್ವವಿಚಾರ

ಗೀತೆಯಲ್ಲಿ ಸಮ, ಸಮತಾ, ಸಾಮ್ಯ, ಸಮಾನ, ಸಮದರ್ಶಿ—ಈ ಮಾತುಗಳು ಎರಡು ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿವೆ. ಈ ಎರಡೂ ಪರಸ್ಪರ ವಿರುದ್ಧವಾದ ಅರ್ಥಗಳಲ್ಲ; ಎರಡೂ ಸುಸಂಬದ್ಧವಾದ ಅರ್ಥಗಳು:

ಮೊದಲನೆಯ ಅರ್ಥ: “ಸಮದುಃಖಸುಖಂ ಧೀರಂ” “ಸಮತ್ವಂ ಯೋಗ ಉಚ್ಯತೇ”. ಈ ಸಂದರ್ಭಗಳಲ್ಲಿ ಲಾಭ—ನಷ್ಟ, ಪ್ರಿಯ—ಅಪ್ರಿಯ, ಶತ್ರು—ಮಿತ್ರ ಮೊದಲಾದ ದಂದ್ವಗಳಿಂದ ಮನೋವಿಕಾರಗಳನ್ನು ಪಡೆಯದೆ ಇರತಕ್ಕ ಸ್ಥಿತಿ ಸಮತ್ವ.

ಎರಡನೆಯ ಅರ್ಥವನ್ನು “ಸಮಂ ಸರ್ವೇಷು ಭೂತೇಷು”, “ಪಂಡಿತಾಃ ಸಮ ದರ್ಶಿನಃ” ಎಂಬಲ್ಲಿ ಕಾಣಬಹುದು. ಆತ್ಮವಸ್ತು ಏಕರೂಪದಲ್ಲಿ ಎಲ್ಲ ಪ್ರಾಣಿಗಳಲ್ಲೂ ಇದೆ ಎಂದು ಇಲ್ಲಿಯ ಅಭಿಪ್ರಾಯ.

ಈ ಎರಡರ್ಥಗಳನ್ನೂ ನಾವು ಸಂದರ್ಭಾನುಸಾರ ಸ್ವೀಕರಿಸಬೇಕು.

ಅಂತಸ್ಸಮತೆ, ಬಹಿಸ್ತಾರತಮ್ಯ—ಇವು ಲೋಕಹಿತಸೂತ್ರದ ಎರಡು ಭಾಗಗಳು. ಮನಸ್ಸಿನೊಳಗಡೆ ಎಲ್ಲರೂ ಸಮಾನರೆಂಬ ಭಾವನೆ ಇಲ್ಲದ ಪಕ್ಷದಲ್ಲಿ ಅಂಥವನ ಹೊರ ನಡವಳಿಕೆ ಪಕ್ಷಪಾತವುಳ್ಳದ್ದಾಗಿ ಕೆಲವರಿಗೆ ಉಪಕಾರವಾಗಿ ಇನ್ನು ಕೆಲವರಿಗೆ ಅಪಕಾರಕವಾಗಿ ಪರಿಣಮಿಸುತ್ತದೆ. ಸಾಮಾನ್ಯವಾಗಿ ನಮ್ಮೆಲ್ಲರ ಒಳ್ಳೆಯತನವೂ ಈ ರೀತಿಯದೇ. ಅದರಿಂದ ಕೆಲವರಿಗೇನೋ ಒಳ್ಳೆಯದಾಗಬಹುದು. ಅದರ ಜೊತೆಯಲ್ಲಿಯೇ ಇನ್ನೆಷ್ಟೋ ಮಂದಿಗೆ ಕೆಡುಕೇ ಆಗಬಹುದು. ಈ ಹೆಚ್ಚು ಕಡಮೆಗಳಿಲ್ಲದೆ ಒಳ್ಳೆಯತನ ಕಾರ್ಯರೂಪಕ್ಕೆ ಬರಬೇಕಾದರೆ ಮನಸ್ಸಿನೊಳಗಡೆ ಸರ್ವಸಮಭಾವನೆ ದೃಢವಾಗಿರಬೇಕು. ಆದರೆ ನಮ್ಮೊಳಗಿನ ಆ ಸರ್ವಸಮತ್ವ ಸಫಲವಾಗಬೇಕಾದರೆ ಅದು ನಮ್ಮ ಹೊರಗಣ ಜನದ ಸಂದರ್ಭಭೇದಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಇದೇ ತಾರತಮ್ಯ. ಮನೆಯಲ್ಲಿ ತಾಯಾದವಳು ತನ್ನ ನಾಲ್ವರು ಮಕ್ಕಳಲ್ಲಿಯೂ ಸಮಾನವಾದ ಪ್ರೀತಿಯನ್ನಿಟ್ಟಿದ್ದರೂ ಆಕೆ ಮಾಡುವ ಆರೈಕೆ ಆ ಮಕ್ಕಳ ವಯಸ್ತಾರತಮ್ಯವನ್ನೂ ಆರೋಗ್ಯತಾರತಮ್ಯವನ್ನೂ ಅನುಸರಿಸಿ ನಡೆಯುತ್ತದೆ. ಹೀಗೆ ತಾರತಮ್ಯ ನೋಡದೆ ಆಕೆ ಬಾಹ್ಯಸಾಮ್ಯವನ್ನು ಪಟ್ಟುಹಿಡಿದು ಹದಿನಾರು

ವರ್ಷದವನಿಗೆ ಕೊಡುವ ತಿಂಡಿಯನ್ನು ಹದಿನಾರುತಿಂಗಳವನಿಗೆ ಕೊಟ್ಟರೆ, ಅದು ಹಿತವಾಗುವುದು ಹೋಗಿ ತದ್ವಿರುದ್ಧವೇ ಆಗುತ್ತದೆಯಷ್ಟೆ? ಆದದ್ದರಿಂದ ನಮ್ಮ ಲೋಕದಲ್ಲಿ ಸಮತ್ವ ಸಮತ್ವ ಎಂದು ಕೂಗಾಡುವ ರಾಜಕೀಯಸ್ಥರು ತಾರತಮ್ಯ ತತ್ತ್ವಕ್ಕೂ ನಮ್ಮ ಜೀವನದಲ್ಲಿ ಒಂದು ಜಾಗ ಉಂಟೆಂಬುದನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಳ್ಳಬೇಕು. ತಾರತಮ್ಯದಿಂದ ಅನ್ಯಾಯವಾಗುವ ಸಂದರ್ಭಗಳಿಲ್ಲವೆಂದು ಯಾರೂ ಹೇಳರು, ಆದರೆ ಆ ಅನ್ಯಾಯಕ್ಕೆ ಕಾರಣ ಬಹಿಸ್ತಾರತಮ್ಯವಲ್ಲ, ಅಂತಸ್ತಾರತಮ್ಯ. ಅಂತರ್ಭಾವದಲ್ಲಿ ಸಮತೆ, ಬಹಿಷ್ಕ್ರಿಯೆಯಲ್ಲಿ ತಾರತಮ್ಯವಿವೇಕ–ಇವೆರಡೂ ಪರಸ್ಪರ ಸಾರ್ಥಕಕಾರಿಗಳಾದ ಸೂತ್ರಗಳು.

ಒಂದು ಹಳೆಯ ತಕರಾರು

ಆರನೆಯ ಅಧ್ಯಾಯಕ್ಕೆ ಹೊರಡುವುದಕ್ಕೆ ಮುಂಚೆ ಗಮನಿಸಬೇಕಾದ ಚರ್ಚೆ ಒಂದಿದೆ. ಕರ್ಮ–ಜ್ಞಾನ: ಈ ಎರಡರಲ್ಲಿ ಮೋಕ್ಷಕ್ಕೆ ಕಾರಣ–ಅವ್ಯವಹಿತ ಕಾರಣ–ಯಾವುದು? ಅಥವಾ, ಪ್ರತ್ಯಕ್ಷವಾದ, ಸಾಕ್ಷಾತ್ ಕಾರಣ ಯಾವುದು? ಕರ್ಮವೆ, ಜ್ಞಾನವೆ? ಇದು ಬಹಳ ಪುರಾತನವಾದ ಪ್ರಶ್ನೆ.

ಈಶಾವಾಸ್ಯೋಪನಿಷತ್ತಿನಲ್ಲಿ ಒಂದು ವಾಕ್ಯವಿದೆ:

> ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದ ಉಭಯಗ್ಂ ಸಹ ।
> ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

ಇಲ್ಲಿ "ಅವಿದ್ಯೆ" ಎಂದರೆ ಕರ್ಮ; "ವಿದ್ಯೆ" ಎಂದರೆ ಜ್ಞಾನ. ಎರಡೂ ಆವಶ್ಯಕವೆಂದಿದ್ದಾರೆ. ಕರ್ಮದಿಂದ ಮೃತ್ಯುವನ್ನು–ಎಂದರೆ ಸಂಸಾರವನ್ನು–ದಾಟಿ, ವಿದ್ಯೆಯಿಂದ ಎಂದರೆ ಜ್ಞಾನದಿಂದ ಪರಬ್ರಹ್ಮಪದವಿಯನ್ನು ಪಡೆಯುತ್ತಾನೆ. ಹೀಗೆ ಕರ್ಮ-ಜ್ಞಾನ ಎರಡಕ್ಕೂ ಪ್ರಯೋಜನ ಉಂಟು. ಲೋಕದ ವ್ಯಾಮೋಹಗಳು ಹೋಗಬೇಕಾದರೆ "ಅವಿದ್ಯಯಾ" – ಕರ್ಮದಿಂದ ಭ್ರಾಂತಿಯನ್ನು ಕಳೆದುಕೊಳ್ಳಬೇಕು. "ಸಂಸಾರಭ್ರಮಣ ಪರಿತಾಪೋಪಶಮನಮ್." ಇದು ಕರ್ಮಾಚರಣೆಯ ಮೂಲಕವೇ ಸಾಧ್ಯ.

ಇದಕ್ಕೆ ಸಂಬಂಧಪಟ್ಟ ಹಾಗೆ ಮೂರು ವಾದಗಳಿವೆ.

1. ಮೊದಲನೆಯ ವಾದ ಪೂರ್ವಮೀಮಾಂಸಕರದು. ವೇದೋಕ್ತವಾದ ಕರ್ಮವೇ ಧರ್ಮ. "ಚೋದನಾಲಕ್ಷಣೋಽರ್ಥೋ ಧರ್ಮಃ". ಚೋದನೆ ಎಂದರೆ ಪ್ರೇರಣೆ. "ಅಹರಸ್ಸಂಧ್ಯಾಮುಪಾಸೀತ" ಇತ್ಯಾದಿ ರೀತಿಯಲ್ಲಿ, ಯಾವ ಕೆಲಸಗಳನ್ನು ಮಾಡಬೇಕೆಂದು ಶ್ರುತಿ ಪ್ರೇರಣೆ ಮಾಡುತ್ತದೆಯೋ ಅದೇ ಧರ್ಮ. ವೇದದಲ್ಲಿ ಹೇಳಿರಬೇಕು ಅದು. ಆ ಧರ್ಮದಿಂದಲೇ ಮೋಕ್ಷ.
2. ಇನ್ನು ಕೆಲವರು ಹೇಳುತ್ತಾರೆ: ಜ್ಞಾನ ಮುಖ್ಯ. ಕರ್ಮಕ್ಕೆ ಬೇಕಾಗುವುದೆಲ್ಲ ಜಡಪದಾರ್ಥಗಳು. ಇವುಗಳಿಂದ ಮೋಕ್ಷ ಹೇಗೆ ಸಾಧ್ಯ? ಜ್ಞಾನದಿಂದಲೇ ಮೋಕ್ಷ

"ಜ್ಞಾನಾದೇವ ತು ಕೈವಲ್ಯಮ್." ಇದು ಎರಡನೆಯ ವಾದ.

3. ಮೂರನೆಯ ವಾದ ಒಂದಿದೆ. ಅದನ್ನು ಸಮುಚ್ಚಯವಾದ ಎನ್ನುತ್ತಾರೆ. ಒಂದು ಪಕ್ಷಿ ಹಾರಬೇಕಾದರೆ ಹೇಗೆ ಎಡ, ಬಲ–ಎರಡು ಪಕ್ಕಗಳಲ್ಲೂ ರೆಕ್ಕೆ ಇರಬೇಕೋ ಹಾಗೆಯೇ ಕರ್ಮಜ್ಞಾನಗಳು ಸಮುಚ್ಚಯವಾಗಿದ್ದರೆಯೇ ಮೋಕ್ಷ.

ಮೇಲಣ ವಿವಾದದಲ್ಲಿ ಕರ್ಮ ಎಂದರೆ ಲೌಕಿಕ ಕರ್ಮವಲ್ಲ: ವೇದದಲ್ಲಿ ಹೇಳಿರುವ ಕರ್ಮ; ಸಾಧಾರಣ ನೀತಿನಿಯಮಪಾಲನೆಯೂ ಅಲ್ಲ. ಇಲ್ಲಿ ವಿವಕ್ಷಿತವಾದ ಕರ್ಮವು ಶಾಸ್ತ್ರ ಕರ್ಮ: ಶ್ರೌತಸ್ಮಾರ್ತಕರ್ಮ. ಇಲ್ಲಿ ಜ್ಞಾನವೆಂದರೆ ಆತ್ಮಜ್ಞಾನ.

ಶಾಸ್ತ್ರಕರ್ಮದ, ಎಂದರೆ ಶ್ರೌತಸ್ಮಾರ್ತಕರ್ಮದ ಪ್ರಯೋಜನವನ್ನು ಕುರಿತು ತರ್ಕ ಪ್ರಾರಂಭವಾದದ್ದು ಗೌತಮಬುದ್ಧನ ಕಾಲದಲ್ಲಿ. ಆತನ ಕಾಲಕ್ಕೆ ಯಜ್ಞಯಾಗಾದಿ ಕರ್ಮಗಳ ಅವಾಂತರ ತುಂಬಾ ಪ್ರಬಲಿಸಿ ಲೋಕಜೀವನದ ನೀತಿಯ ವಿಷಯದಲ್ಲಿ ಪಂಡಿತರ ಗಮನ ಕಡಿಮೆಯಾಗಿಹೋಗಿತ್ತೆಂದು ತೋರುತ್ತದೆ. ಪಂಡಿತರು "ಮಾಡಿದರೆ ಅಶ್ವಮೇಧ ಮಾಡಬೇಕು, ವಾಜಪೇಯ ಮಾಡಬೇಕು. ಮಿಕ್ಕದ್ದೆಲ್ಲ ಏನು ಪ್ರಯೋಜನ?" ಎಂದು ಹೊರಟಿದ್ದರು. ಬುದ್ಧನಿಗೆ ಇದು ಯುಕ್ತವೆಂದು ತೋರಲಿಲ್ಲ. "ಇಹದ ಕರ್ತವ್ಯವನ್ನು ಮರೆತು ಪರಕ್ಕಾಗಿ ಕರ್ಮಗಳನ್ನು ಮಾಡುವುದು ನಿಷ್ಫಲ" ಎಂದ ಆತ. "ಎದುರಿಗಿರುವ ಧರ್ಮಾವಕಾಶವನ್ನು ಮರೆತು ಪರಲೋಕದ ಧರ್ಮವನ್ನು ಕುರಿತು ಯೋಚನೆ ಮಾಡುತ್ತಿದ್ದೀರಿ ನೀವು. ಈ ಕರ್ಮದಿಂದ ಏನೂ ಪ್ರಯೋಜನವಿಲ್ಲ" –ಎಂದ ಆತ. ಪ್ರತ್ಯಕ್ಷವಾಗಿರತಕ್ಕ ಲೋಕವನ್ನು ನಾವು ಗಮನಿಸಬೇಕು; ಇಲ್ಲಿಯ ಕಷ್ಟಗಳನ್ನು ನಿವಾರಿಸಬೇಕು.

ಈ ವಾದದ ಅವಸರದಲ್ಲಿ ಗೌತಮಬುದ್ಧನು ಕರ್ಮಶ್ರದ್ಧೆಯನ್ನು ನಿರುತ್ಸಾಹ ಗೊಳಿಸಿಬಿಟ್ಟ. ವೇದಾನುಯಾಯಿಗಳಿಗೆ ಇದು ಸರಿತೋರಲಿಲ್ಲ. ವೈದಿಕಧರ್ಮವನ್ನು ಬುದ್ಧದೇವನು ಖಂಡನೆಮಾಡಿದ ಹಾಗಾಯಿತು. ಕುಮಾರಿಲಭಟ್ಟರೂ, ಅವರ ಶಿಷ್ಯ ಪರಂಪರೆಯೂ ವೈದಿಕ ಧರ್ಮದ ಉದ್ಧಾರ ಮಾಡಬೇಕೆಂದು ನಿಂತರು. ಅವರು ಕರ್ಮಕಾಂಡಶಾಸ್ತ್ರವನ್ನು ಯಥೇಷ್ಟವಾಗಿ ಬೆಳಸಿದರು. ಮಂತ್ರಗಳಲ್ಲಿ ಶಕ್ತಿಯಿದೆ; ಅವುಗಳಿಂದಲೇ ನಮಗೆ ಫಲಾಫಲಗಳು ಉಂಟಾಗುತ್ತವೆ. ಇದನ್ನು ಹೇಳುವ ಅವಸರದಲ್ಲಿ ಅವರು ಈಶ್ವರ ಕೂಡ ಬೇಕಾಗಿಲ್ಲ ಎಂಬವರೆಗೂ ಹೋದರು. ವೇದದ ಸಂಹಿತಾಭಾಗ ವಿಧಿಗೆ ಅಂಗ; ಆರಣ್ಯಕೋಪನಿಷತ್ತುಗಳೆಲ್ಲ– "ಸತ್ಯಂ ವದ", "ಧರ್ಮಂ ಚರ" ಎನ್ನುವುದೆಲ್ಲಾ ನಮಗೆ

ಕರ್ಮದಲ್ಲಿ ಶ್ರದ್ಧೆಯುಂಟಾಗಲೆಂದು ಹೇಳಿದ್ದು ಅಷ್ಟೆ ಎಂದರು; ನಮ್ಮ ಈ ಹೊತ್ತಿನ ಭಾಷೆಯಲ್ಲಿ Advertisement –ಸ್ತಾವಕಗಳು, ಅರ್ಥವಾದಗಳು ಎಂದರು; "ಸಾಯುಜ್ಯಂ ಸಲೋಕತಾಮಾಪ್ನೋತಿ" ಇದೆಲ್ಲ ಜನರಿಗೆ ನಂಬಿಕೆಯುಂಟಾಗಲೆಂದು ಹೇಳಿದ ಪ್ರರೋಚನ ವಾಕ್ಯಗಳು. ಹಾಗಾದರೆ ವೇದದ ಮುಖ್ಯಭಾಗ ಯಾವುದು? ಎಂದರೆ, ಚೋದನೆ ಎಂದರು. "ಅಗ್ನಿಷ್ಟೋಮೇನ ಸ್ವರ್ಗಕಾಮೋ ಯಜೇತ" ಮುಂತಾದ ಕಡೆ ಇರುವಂತೆ.

ಶಂಕರಾಚಾರ್ಯರು ಈ ಆಭಾಸವನ್ನು ಸಹಿಸಲಿಲ್ಲ. ಉಪನಿಷತ್ತು ಎಷ್ಟು ಮುಖ್ಯವಾದದ್ದು, ಇದನ್ನೇ ಈ ಪಂಡಿತರು ಅಲ್ಲಗಳೆದುಬಿಟ್ಟಿದ್ದಾರಲ್ಲ! ವೇದದಲ್ಲೆಲ್ಲ ಕಿರೀಟಪ್ರಾಯವಾದವು ಉಪನಿಷತ್ತುಗಳು. ವೇದಾಂತ ಎಂದು ಅದಕ್ಕೆ ಹೆಸರು–ಎಲ್ಲ ವೇದದ ಸಿದ್ಧಾಂತಭಾಗ ಉಪನಿಷತ್ತು. ಕರ್ಮಕಾಂಡಕ್ಕೆ ಪ್ರಯೋಜನವೇನೋ ಉಂಟು, ಆದರೆ ಮಿತವಾಗಿ. ಚಿತ್ತಶುದ್ಧಿ ಉಂಟಾಗುವುದು ಕರ್ಮದಿಂದ, ಮೋಕ್ಷವು ಜ್ಞಾನದಿಂದ–ಎಂದರು ಶಂಕರಾಚಾರ್ಯರು. ಅವರು ಮೊದಲು ಕುಮಾರಿಲಭಟ್ಟರು ಮೊದಲಾದವರ ಜೊತೆಗೆ ಸೇರಿ ಬೌದ್ಧರನ್ನು ಅಡಗಿಸಿದರು. ಬೌದ್ಧರನ್ನು ಸೋಲಿಸಿದ ಬಳಿಕ ಪೂರ್ವ ಮೀಮಾಂಸಕರ ಮೇಲೆ ಧಾಳಿ ಮಾಡಿದರು. "ನೀವು ಹೇಳುವ ಕರ್ಮಕಾಂಡದ ಮಹತ್ತ್ವವನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಕರ್ಮದಿಂದ ಮೋಕ್ಷಕ್ಕೆ ಪೂರ್ವಸಿದ್ಧತೆಯಾಗುತ್ತದೆಯಷ್ಟೇ ಹೊರತು ಅದರಿಂದಲೇ ಮೋಕ್ಷಸಾಧನೆಯಾಗುವುದಿಲ್ಲ. ಚಿತ್ತಶುದ್ಧಿಯಷ್ಟೇ ಕರ್ಮದಿಂದ ಸಾಧ್ಯ. ಮೋಕ್ಷವನ್ನು ಕೊಡುವುದು ಜ್ಞಾನ." ಬೌದ್ಧರು ವೇದವನ್ನು ತಳ್ಳಿಹಾಕಿದಂತೆ ಶಂಕರರು ವೇದವನ್ನು ತಳ್ಳಿಹಾಕಲಿಲ್ಲ; ಪೂರ್ವಕಾಂಡಕ್ಕೆ ಕುಮಾರಿಲಭಟ್ಟರು ಕೊಟ್ಟ ಪ್ರಾಶಸ್ತ್ಯವನ್ನೂ ಅವರು ಕೊಡಲಿಲ್ಲ. ಹೀಗೆ ಇವರ ವಾದದಲ್ಲಿ ತತ್ತ್ವಜ್ಞಾನಕ್ಕೆ ಮೊದಲನೆಯ ಜಾಗ ದೊರೆತು ಕರ್ಮ ಎರಡನೆಯದಾಗಬೇಕಾಯಿತು.

ತಿಲಕರ ವಾದ

ಬಾಲಗಂಗಾಧರ ತಿಲಕರು ಕರ್ಮಮಾರ್ಗವನ್ನು ಶಂಕರಾಚಾರ್ಯರು ಖಂಡಿಸಿದ್ದಾರೆಂದು ಹೇಳಿ ಕರ್ಮದ ಪ್ರಾಶಸ್ತ್ಯವನ್ನು ಸಾಧಿಸಲು ಹೊರಟರು. ತಿಲಕರು ಅಶ್ವಮೇಧ ವಾಜಪೇಯಗಳನ್ನು ಪುನಃಪ್ರವರ್ತನ ಮಾಡಲು ಕಂಕಣತೊಟ್ಟವರಲ್ಲ. ಅವರಿಗೆ ಬೇಕಾದದ್ದು ಲೌಕಿಕಕರ್ಮ. ಆ ವಿಚಾರಕ್ಕೆ ಶಂಕರಾಚಾರ್ಯರು ವಿರೋಧಿಗಳಲ್ಲ. ಆ ವಿಷಯ ಶಂಕರರಿಗೆ ಬೇಕಾಗಿಯೇ ಇರಲಿಲ್ಲ; ಆ ವಿಷಯವನ್ನು ಕುರಿತು ಏನನ್ನೂ ಹೇಳುವುದು ಅವರ ದೃಷ್ಟಿಯಿಂದ ಅನಾವಶ್ಯಕವಾಗಿತ್ತು, ಈ ಕರ್ಮ, –ನಿತ್ಯಜೀವನದ ಕರ್ಮ, –ಕಡ್ಡಾಯವಾಗಿ ಮಾಡಲೇಬೇಕಾದದ್ದೆಂಬುದು ಸ್ವತಸ್ಸಿದ್ಧವಾಗಿತ್ತು. ಇದಕ್ಕೆ ಮನುಸ್ಮೃತಿಯ ಆಧಾರವಿದೆ. ಮನುಸ್ಮೃತಿಯು ಶಂಕರಾಚಾರ್ಯರಿಗೆ ಪರಮಪ್ರಮಾಣ: ಪದೇ ಪದೇ ಅದರಿಂದ ಉದಾಹರಿಸುತ್ತಾರೆ: “ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್” ಇತ್ಯಾದಿ. ಬುದ್ಧನ ಮುಖ್ಯಬೋಧನೆ ನೀತಿಯನ್ನು ಕುರಿತದ್ದು. ವೇದಾಂತ ಗ್ರಂಥವನ್ನು ಕೈಯಲ್ಲಿ ಹಿಡಿಯುವುದಕ್ಕೆ ಮುಂಚೆ ಆ ನೀತಿಸಿದ್ಧತೆಯೆಲ್ಲ ಆಗಿರಬೇಕೆನ್ನುತ್ತಾರೆ, ಶಂಕರಾಚಾರ್ಯರು. ಶಮದಮಾದಿಸಂಪತ್ತುಂಟಾದವರೇ ವೇದಾಂತಜ್ಞಾನಕ್ಕೆ ಅರ್ಹರು. ಅವರಿಗೇ ಭಗವದ್ಗೀತೆಯನ್ನು ಮುಟ್ಟಲು ಅಧಿಕಾರ. ಹೀಗೆ ಲೌಕಿಕಧರ್ಮ ನಡೆಯಬೇಕೆಂಬುದನ್ನು ಮೊದಲೇ ಒಪ್ಪಿಬಿಟ್ಟಿದ್ದಾರೆ ಶಂಕರರು. ಅವರ ತಕರಾರಿರುವುದೆಲ್ಲ ಶ್ರೌತ ಸ್ಮಾರ್ತಕರ್ಮದ ವಿಷಯದಲ್ಲಿ. ಈ ಕಾಲದ ನಮಗಂತೂ ಕಾಲಪುರುಷನ ಕೃಪೆಯಿಂದ ಅದು ಸಂಪೂರ್ಣವಾಗಿ ಅಪ್ರಸಕ್ತವಾದ ವಿಚಾರ. ಪದೇ ಪದೇ ನಮ್ಮ ಪಂಡಿತರುಗಳು ‘ಕರ್ಮ’ ವನ್ನು ಕುರಿತು ತಕರಾರು ಮಾಡುತ್ತಾರೆ. ಮೊದಲೇ ಜಟಿಲವಾಗಿರುವ ವಿಷಯ ಈ ಅಪ್ರಸಕ್ತವಾದ ತರ್ಕದಿಂದ ಇನ್ನಷ್ಟು ಜಟಿಲವಾಗುತ್ತದೆ. ಲೌಕಿಕಧರ್ಮಗಳು ನಡೆಯಬೇಕೆಂಬ ವಿಚಾರದಲ್ಲಿ ಶಂಕರಾಚಾರ್ಯರದೂ ಯಾರದೂ ಏನೂ ತಕರಾರಿಲ್ಲ. ಕೃಷ್ಣ ಭಗವಂತನೇ ಕರ್ಮ ಮಾಡಬೇಕೆಂದು ಹೇಳಿರುವುದರಿಂದ ಒಂದು ವೇಳೆ ಶಂಕರಾಚಾರ್ಯರೇ ಬೇಡವೆಂದರೂ ಅದು ನಿಲ್ಲುವುದಿಲ್ಲ!

ನಮ್ಮ ಮತತ್ರಯ ಭಾಷ್ಯಕಾರರುಗಳಲ್ಲಿ ಕಾಲಮಾನದಲ್ಲಿ ಮೊದಲಿಗರು ಶಂಕರಾಚಾರ್ಯರು. ಅವರು ತಕರಾರೆತ್ತಿದ ಮೇಲೆ ಭಿನ್ನಮತವಾದಿಗಳೂ ನಾನಾ ವ್ಯಾಖ್ಯಾನಕಾರರುಗಳೂ ಅದಕ್ಕೆ

ಕೈಹಾಕದೆ ಇದ್ದರೆ ಹೇಗಾದೀತು? ಹೀಗೆ ಬೆಳೆದಿದೆ ತರ್ಕ ಸಾಹಿತ್ಯ. ಅದನ್ನು ನಾವು ಒತ್ತಟ್ಟಿಗಿಡಬಹುದು.

ನಮಗೆ ಪ್ರಸಕ್ತವಾಗಿರುವುದು ಶ್ರೌತಕರ್ಮದ ಪ್ರಶ್ನೆಯಲ್ಲ. ಲೌಕಿಕಕರ್ಮದ ಪ್ರಶ್ನೆ. ಲೋಕಜೀವನದಲ್ಲಿಯೂ ಕೃತ್ಯಾಕೃತ್ಯಗಳುಂಟು, ಧರ್ಮಾಧರ್ಮಗಳುಂಟು, ಪುಣ್ಯಪಾಪಗಳುಂಟು. ವೈದಿಕಾಧಿಕಾರಕ್ಕೆ ಸಾಕ್ಷಾತ್ತಾಗಿ ಒಳಪಡದ ಈ ಲೋಕಜೀವನ ಕ್ಷೇತ್ರದಲ್ಲಿ ಗೀತೆ ಅನ್ವಯಿಸುತ್ತದೆಯೆ, ಇಲ್ಲವೆ? ಇಲ್ಲವೆಂಬ ಪಕ್ಷದಲ್ಲಿ ಗೀತೆ ಕಾಲ ಬಾಧೆಗೆ ಒಳಪಟ್ಟ ಗ್ರಂಥವೆಂದಾಯಿತು. ಆಗ ಅದಕ್ಕೆ ನಮ್ಮಿಂದ ವಿಧೇಯತೆ ಸಲ್ಲಬೇಕಾದ ಕಾರಣವಿಲ್ಲ.

ಕರ್ಮಯೋಗದ ಮೂರು ಸೂತ್ರಗಳು

ಗೀತೋಪದೇಶವು ಸರ್ವಕಾಲ ಸರ್ವದೇಶಗಳಲ್ಲೂ ಉಪಯುಕ್ತವಾಗತಕ್ಕದ್ದು. ಹಾಗೆ ನಾವಿಟ್ಟುಕೊಂಡರೆ ಕರ್ಮಯೋಗದ ತತ್ತ್ವಗಳು ನಮ್ಮೆಲ್ಲರಿಗೂ ಅನ್ವಯಿಸುತ್ತವೆ. ಏಕೆ? ಕರ್ಮ ಎಂದರೆ ಈ ಪ್ರಕರಣದಲ್ಲಿ ಶಾಸ್ತ್ರೀಯವೂ ಸಾಂಪ್ರದಾಯಿಕವೂ ಆದ ದೇವತಾಕರ್ಮ ಮಾತ್ರವೇ ಅಲ್ಲ. ಎಲ್ಲ ಜೀವನಕರ್ಮಗಳೂ ಸೇರಿವೆ. ಕುಟುಂಬಕ್ಕಾಗಿ ಮಾಡಬೇಕಾದದ್ದು ಋಣಾದಾನಗಳು, ವರಾನ್ವೇಷಣ ಕನ್ಯಾನ್ವೇಷಣಗಳು, ಬೀಗರೊಡನೆ ತ್ವಂಚಾಹಂಚ, ಕುಲಸಮಾಜಗಳ ಶುಭಾಶುಭಗಳು, ಸ್ವರಾಷ್ಟ್ರ ಪರರಾಷ್ಟ್ರಗಳ ವ್ಯವಹಾರಗಳು–ಇವೆಲ್ಲ ಕರ್ಮಗಳೇ, ಮತ್ತು ಕರ್ತವ್ಯಗಳೇ.

ಮೊದಲನೆಯದಾಗಿ, ಕಾರ್ಯಾಕಾರ್ಯ ವಿಷಯಗಳನ್ನು ಅಂತರಾತ್ಮದೃಷ್ಟಿಯಿಂದ ನಿಶ್ಚಯಿಸಬೇಕು; ಎರಡನೆಯದಾಗಿ, ಜೀವದ ಉತ್ತಮಗತಿಗೆ ಸಾಧಕವಾದದ್ದು ಸತ್ಕಾರ್ಯ; ಮೂರನೆಯದು, ಕರ್ಮಮಾಡುವುದರಲ್ಲಿ ಅಹಂಭಾವವನ್ನು, ಫಲಾಸಕ್ತಿಯನ್ನು ಬಿಡಬೇಕು–ಭಗವತ್ಸೇವಾಬುದ್ಧಿಯಿಂದ ಕರ್ಮಮಾಡಬೇಕು. ಈ ಮೂರು ಸೂತ್ರಗಳನ್ನು ಐದನೆಯ ಅಧ್ಯಾಯದಲ್ಲಿ ಉಪದೇಶ ಮಾಡಿದೆ.

ಜ್ಞಾನ ಮೋಕ್ಷಗಳ ವಿಚಾರ ಹೇಳಿದೆವು. ಜ್ಞಾನಕ್ಕೆ ಪೂರ್ವಸಿದ್ಧತೆಯಾಗಿ ಕರ್ಮವುಂಟು. ಜ್ಞಾನಸಿದ್ಧಿಯಾದ ಮೇಲೆ ಆತ್ಮವಿಲಾಸವಾಗಿ ಕರ್ಮವುಂಟು. ಸರ್ವತ್ರ ತನ್ನ ಆತ್ಮವನ್ನೇ, –ಭಗವಂತನ ಸ್ವರೂಪವನ್ನೇ, ನೋಡುತ್ತಿರುತ್ತಾನೆ ಜ್ಞಾನಿ. ಆದದ್ದರಿಂದ ಭಗವತ್ಸೇವಾರೂಪದಲ್ಲಿ, ಪ್ರಯಾಸವಿಲ್ಲದೆ ಅವನು ಕರ್ಮವನ್ನು ನಡಸುತ್ತಾನೆ. ಹೀಗೆ ಜ್ಞಾನೋದಯಕ್ಕೆ ಪೂರ್ವವೂ ಕರ್ಮವುಂಟು; ಜ್ಞಾನೋದಯದ ಅನಂತರವೂ ಕರ್ಮವುಂಟು. ಮೊದಲನೆಯದು ನಿರ್ಬಂಧರೂಪವಾದ ಕರ್ಮ, ವಿಧಿರೂಪವಾದದ್ದು; ಎರಡನೆಯದು ನೈಜವಾದದ್ದು. ನಿಷ್ಪ್ರಯತ್ನವಾದದ್ದು. ಇಷ್ಟೇ ವ್ಯತ್ಯಾಸ. ಹೀಗೆ ಉಭಯಥಾ ಕರ್ಮ ಉಂಟೇ ಉಂಟು.

ಸಾಮಾನ್ಯ ಮನುಷ್ಯರಲ್ಲಿ ಆಸ್ತಿಕರಾದವರಲ್ಲಿ ಕ್ರರ್ಮಶ್ರದ್ಧೆ, ಜ್ಞಾನಕುತೂಹಲ–ಎರಡೂ ಸೇರಿರುತ್ತವೆ. ಜ್ಞಾನ ಬೆಳೆದಂತೆಲ್ಲ ಕರ್ಮ ತಾನಾಗಿ ಕಡಮೆಯಾಗುತ್ತ ಹೋಗುತ್ತದೆ. ನಾವು

ಕುಡಿಯುವ ಹಾಲಿನಲ್ಲಿ ನೀರು ಬೆರೆತಿರುತ್ತದೆ. ಆಕಳ ಕೆಚ್ಚಲಿನಿಂದ ಹಾಗೆಯೇ ಬಂದ ಹಾಲಿನಲ್ಲಿ ಸಹ ಜಲಾಂಶವಿದ್ದೇ ಇರುತ್ತದೆ. ಹಾಲನ್ನು ಕಾಯಿಸುತ್ತ ಹೋದಂತೆಲ್ಲ ಜಲಾಂಶ ಕಡಮೆಯಾಗಿ ಕ್ಷೀರಾಂಶ ಹೆಚ್ಚುತ್ತಹೋಗುತ್ತದೆ. ಖೋವ ಮೊದಲಾದ ತರತೀಪುಗಳನ್ನು ಮಾಡುವಲ್ಲಿ ಜಲಾಂಶ ಸಂಪೂರ್ಣವಾಗಿ ಹೋಗಿ ಕ್ಷೀರಾಂಶವೇ ಘನೀಭೂತವಾಗಿ ನಿಲ್ಲುತ್ತದೆ. ಕರ್ಮಜ್ಞಾನಗಳ ಸಹವಾಸದ ರೀತಿಯೂ ಹೀಗೆಯೇ. ತತ್ತ್ವಜ್ಞಾನ ಬೆಳೆದಂತೆಲ್ಲ ಕರ್ಮದಲ್ಲಡಗಿರುವ ಫಲದ ಚಿಂತೆ ಕಡಮೆಯಾಗುತ್ತದೆ. ವಯಸ್ಸೂ ಲೋಕಾನುಭವವೂ ಇದಕ್ಕೆ ಕಾರಣವಿರಬಹುದು. ಜ್ಞಾನದದೃಷ್ಟ್ಯಾ ಕರ್ಮವು ಬಹಿರಾಚಾರವೆಂದೆನ್ನಿಸುವ ಸ್ಥಿತಿ ಮನಸ್ಸಿಗೆ ಬರಬಹುದು. ಹೀಗೆ ಕರ್ಮದ ಆತುರ ಕ್ರಮಕ್ರಮವಾಗಿ ಕಡಮೆಯಾಗುತ್ತ ಕರ್ಮದ ಒಳತಿರುಳಾದ ಜ್ಞಾನದ ಪ್ರಕಾಶ ಹೆಚ್ಚಬಹುದು. ಹೀಗೆ ಜ್ಞಾನ ಬೆಳೆದಮೇಲೆ ಎಂದೋ ಒಂದು ದಿವಸ ಯಾವುದೋ ಒಂದು ಸ್ಥಿತಿಯಲ್ಲಿ ಕರ್ಮ ಅನಾವಶ್ಯಕವೆಂದು ತೋರಬಹುದು. ಆಗ ಕರ್ಮ ತಾನಾಗಿ ಕಳಚಿಬೀಳುತ್ತದೆ. ಜ್ಞಾನಿಯು ಅದನ್ನು ಬಿಡುವುದಿಲ್ಲ; ಅದು ತಾನಾಗಿ ಬಿಟ್ಟು ಹೋಗುತ್ತದೆ. ನಾವು ಕಥೆಯ ಪುಸ್ತಕವನ್ನು ಕೈಯಲ್ಲಿ ಹಿಡಿದು ಮಲಗಿಕೊಂಡು ಓದುತ್ತಿರುತ್ತೇವೆ. ನಿದ್ದೆ ಯಾವಾಗಲೋ ಹೇಗೋ ಬಂದು ಕಣ್ಣು ರೆಪ್ಪೆಯನ್ನು ಮುಚ್ಚಿಸುತ್ತದೆ. ಕೈಯಲ್ಲಿದ್ದ ಪುಸ್ತಕ ತಾನಾಗಿ ಕಳಚಿಬಿದ್ದು ಹೋಗುತ್ತದೆ.

ಸುಪ್ತಹಸ್ತಸ್ಥಪುಷ್ಪವತ್ ॥

ಎಂದರೆ ಏನಾಯಿತು? ಕರ್ಮದಲ್ಲಿ ಶ್ರದ್ಧೆ ಹೋಯಿತೆಂದಲ್ಲ; ಕರ್ಮ ಅನಾವಶ್ಯಕವಾಯಿತೆಂದು. ಗ್ರಂಥವು ನಮಗೆ ಬೇಕಾಗುವುದು ಯಾವಾಗ? ಅದು ನಮ್ಮ ಬಾಯಿಗೆ ಸ್ವಾಧೀನವಾಗುವವರೆಗೂ. ಅದು ಚೆನ್ನಾಗಿ ಕಂಠಪಾಠವಾಗಿ ಎಲ್ಲೆಂದರಲ್ಲಿ ಹೇಳುವ ಸಾಮರ್ಥ್ಯ ಬಂದ ಮೇಲೆ ಪುಸ್ತಕದ ಆವಶ್ಯಕತೆಯೇನು? ಕರ್ಮಾಚರಣೆಯು ಪುಸ್ತಕದಂತೆ. ಕರ್ಮವು ಜ್ಞಾನಕ್ಕಾಗಿ. ಪುಸ್ತಕವೂ ಜ್ಞಾನಕ್ಕಾಗಿ. ಜ್ಞಾನಸಂಪಾದನೆಯಾದಂತೆಲ್ಲ ಪುಸ್ತಕವೂ ಕರ್ಮವೂ ಅಪ್ರಕೃತಗಳಾಗುತ್ತವೆ.

ಆದರೆ ಒಂದು ಹುಷಾರಿಯಿರಲಿ. ನಮಗೆ ಜ್ಞಾನಸಿದ್ಧಿಯಾಗಿದೆಯೋ? ಮೊದಲು ಅದನ್ನು ಖಂಡಿತಮಾಡಿಕೊಳ್ಳೋಣ. ಜ್ಞಾನಸಿದ್ಧಿಯಾಯಿತೆಂದು ಕರ್ಮಬಿಡುವುದಕ್ಕಿಂತ ಜ್ಞಾನವನ್ನು ಇನ್ನೂ ಸಾಧಿಸಬೇಕಾಗಿದೆಯೆಂದು ಕರ್ಮಮಾಡುವುದು ಕ್ಷೇಮಕರ.

ಸಂಗ್ರಹ

ಕಾಷಾಯದಿನೇನ್, ಆತ್ಮವ ।
ನೈಸರ್ಗದಿನೆತ್ತಿ ಲೋಕಕೃತ್ಯವ ಧರ್ಮ್ಯ- ॥
ಕಾಶಯದೆ ಚರಿಸಲದು ಸಂ ।
ನ್ಯಾಸಂ ನಿರಹಂತೆ ಎಂಬುದೈದನೆಯ ಪದಂ ॥

ಜಲದರುಚಿರನೀಲಂ ನಂದಗೋಪಾಲಬಾಲಂ ।
ನವಸುಮವನಮಾಲಂ ಗೋಪಿಕಾರಾಸಲೀಲಂ ।
ಕುರುಕುಲಯಮಶೂಲಂ ಪಾಂಡವದ್ವಾರಪಾಲಂ ।
ಸುರತಿವಿರತಿಮೇಲಂ ವೈಣವೋಂಕಾರಲೋಲಂ ॥

ಅನುಬಂಧ : ಮತವಿವಾದಗಳು

ಐದನೆಯ ಅಧ್ಯಾಯದಲ್ಲಿಯ ಈ ಕೆಳಗಣ ಶ್ಲೋಕಗಳನ್ನು ನೆನಪಿನಲ್ಲಿರಿಸಿಕೊಳ್ಳಬೇಕು.

> ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
> ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥
> ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
> ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ (೫-೪, ೫)

ಸಾಂಖ್ಯಮತಸ್ಥರಿಗೂ ಯೋಗಮತಸ್ಥರಿಗೂ ಇರುವ ಭೇದವು ತತ್ತ್ವವಿಚಾರಿಗೆ ಗಣನೆಗೆ ಬರಬೇಕಾದದ್ದಲ್ಲವೆಂದು ಸ್ವಾಮಿಯ ಅಭಿಪ್ರಾಯ.

"ಸಾಂಖ್ಯವನ್ನೂ ಯೋಗವನ್ನೂ ಬೇರೆಬೇರೆಯೆಂದೆಣಿಸುವವರು ಬಾಲಿಶರು (ಏನೂ ಅರಿಯದವರು). ಪಂಡಿತರು ಹಾಗೆ ಬೇರೆ ವಿಂಗಡವನ್ನು ಹೇಳುವುದಿಲ್ಲ. ಆ ಎರಡು ಮತಗಳಲ್ಲಿ ಯಾವ ಒಂದನ್ನು ಚೆನ್ನಾಗಿ ಅನುಸರಿಸಿದರೂ ಅದರಿಂದಲೇ ಮಿಕ್ಕ ಇನ್ನೊಂದಕ್ಕೆ ದೊರೆಯಬಹುದಾದ ಫಲವೂ ಕೈಗೂಡುತ್ತದೆ."

"ಸಾಂಖ್ಯರು ಯಾವ ಪದವಿಯನ್ನು ಪಡೆಯಲಾಗುತ್ತದೆಯೋ ಅದೇ ಪದವಿಯನ್ನು ಯೋಗಪಂಥಿಗಳೂ ಪಡೆಯಲಾಗುತ್ತದೆ. ಯಾರು ಸಾಂಖ್ಯವನ್ನೂ ಯೋಗವನ್ನೂ ಒಂದೇ ಎಂಬಂತೆ ಕಾಣುತ್ತಾರೋ ಅವರು ತತ್ತ್ವವನ್ನು ಕಂಡವರು."

ಈ ಅಭಿಪ್ರಾಯವು ನಮ್ಮ ದೇಶದಲ್ಲಿ ನಮ್ಮ ಕಾಲಕ್ಕೆ ಬಹುಮುಖ್ಯವಾಗಿವೆ. ನಮ್ಮ ದೇಶದ ಜನಜೀವನದಲ್ಲಿ ಈಗ ಹಾಲಾಹಲಪ್ರಾಯವಾಗಿರುವ ಸಂಗತಿ ನಾನಾ ಮತವಿವಾದಗಳು ಮತ್ತು ಮತವೈಷಮ್ಯಗಳು. ಇವು ಅಸಾಧುವೆಂದೂ ಹಾನಿಕರವೆಂದೂ ಮೇಲಣ ವಾಕ್ಯಗಳು ಸಾರುತ್ತವೆ.

ದ್ವೈತಾದ್ವೈತ ವಿಶಿಷ್ಟಾದ್ವೈತಗಳ ವಾಗ್ವಿವಾದಗಳಿಗೆ ಮೇಲಣ ಉಪದೇಶವು ತಕ್ಕ ಉತ್ತರವಾಗಿದೆ.

ಹಾಗೆಯೇ ಶೈವ ವೈಷ್ಣವ ಶಾಕ್ತೇಯಾದಿ ವಿವಾದಗಳಿಗೂ ಮೇಲಿನದೇ ಉತ್ತರ.

ಅಷ್ಟೇ ಅಲ್ಲ; ಹಿಂದೂ–ಕ್ರೈಸ್ತ–ಮಹಮ್ಮದೀಯಾದಿ ಸ್ವದೇಶಿಯ–ವಿದೇಶೀಯ ಮತಗಳ ಪರಸ್ಪರ ವಿರೋಧಗಳಿಗೂ ಮೇಲಣ ವಾಕ್ಯವು ಸಮಂಜಸವಾಗಿ ಉತ್ತರ ಹೇಳುತ್ತದೆ.

ಗಮ್ಯಸ್ಥಾನ ಒಂದು; ಅದಕ್ಕೆ ದಾರಿಗಳು ಅನೇಕ; ಯಾತ್ರಿಕನ ಅಭಿರುಚಿಗೂ ಕಾಲಿನ ಬಲಕ್ಕೂ ತಕ್ಕಂತೆ ಅವನು ದಾರಿಯನ್ನು ಗೊತ್ತು ಮಾಡಿಕೊಳ್ಳತಕ್ಕದ್ದು.

ದ್ವೈತಾದ್ವೈತಾದಿ ವಿವಾದವನ್ನು ಕುರಿತು ಈ ಗ್ರಂಥದ ಪರಿಶಿಷ್ಟಭಾಗದಲ್ಲಿ ವಿಸ್ತಾರವಾಗಿ ವಿಚಾರಮಾಡುವುದಾಗುತ್ತದೆ.

ಅಥ ಧ್ಯಾನಯೋಗೋ ನಾಮ ಷಷ್ಠೋಽಧ್ಯಾಯಃ

ಶ್ರೀಭಗವಾನುವಾಚ-

ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ

॥ ೧ ॥

ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ

॥ ೨ ॥

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ

॥ ೩ ॥

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ

॥ ೪ ॥

ಉದ್ಧರೇದಾತ್ಮನಾಽಽತ್ಮಾನಂ ನಾಽಽತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ

॥ ೫ ॥

ಬಂಧುರಾತ್ಮಾಽಽತ್ಮನಸ್ತಸ್ಯ ಯೇನಾಽಽತ್ಮೈವಾಽಽತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾಽಽತ್ಮೈವ ಶತ್ರುವತ್

॥ ೬ ॥

ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ।
ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ

॥ ೭ ॥

ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ

॥ ೮ ॥

ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ

॥ ೯ ॥

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ

॥ ೧೦ ॥

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್

॥ ೧೧ ॥

ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಽಽಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ

॥ ೧೨ ॥

ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್

॥ ೧೩ ॥

ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ

॥ ೧೪ ॥

ಯುಂಜನ್ನೇವಂ ಸದಾಽಽತ್ಮಾನಂ ಯೋಗೀ ನಿಯತಮಾನಸಃ ।
ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ

॥ ೧೫ ॥

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ

॥ ೧೬ ॥

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ

॥ ೧೭ ॥

ಯದಾ ವಿನಿಯತಂ ಚಿತ್ತಮಾತ್ಮನ್ಯೇವಾವತಿಷ್ಠತೇ ।
ನಿಃಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ಸದಾ

॥ ೧೮ ॥

ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ।
ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ

॥ ೧೯ ॥

ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾಽಽತ್ಮನಾಽಽತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ

॥ ೨೦ ॥

ಸುಖಮಾತ್ಯಂತಿಕಂ ಯತ್ತದ್ಬುದ್ಧಿಗ್ರಾಹ್ಯಮತೀಂದ್ರಿಯಮ್ ।
ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ

॥ ೨೦ ॥

ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಽಪಿ ವಿಚಾಲ್ಯತೇ

॥ ೨೨ ॥

ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಮ್ ।
ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣಚೇತಸಾ

॥ ೨೩ ॥

ಸಂಕಲ್ಪಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ ।
ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ

॥ ೨೪ ॥

ಶನೈಃ ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್

॥ ೨೫ ॥

ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್

॥ ೨೬ ॥

ಪ್ರಶಾಂತಮನಸಂ ಹ್ಯೇನಂ ಯೋಽಗಿನಂ ಸುಖಮುತ್ತಮಮ್ ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಮ್

॥ ೨೭ ॥

ಯುಂಜನ್ನೇವಂ ಸದಾಽಽತ್ಮಾನಂ ಯೋಗೀ ವಿಗತಕಲ್ಮಷಃ ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ

॥ ೨೮ ॥

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾಽಽತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರಸಮದರ್ಶನಃ

॥ ೨೯ ॥

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ

॥ ೩೦ ॥

ಸರ್ವಭೂತಾಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ

॥ ೩೧ ॥

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ

॥ ೩೨ ॥

ಅರ್ಜುನ ಉವಾಚ-

ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ ।
ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಿಂ ಸ್ಥಿರಾಮ್

॥ ೩೩ ॥

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್

॥ ೩೪ ॥

ಶ್ರೀಭವಗಾನುವಾಚ-

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ

॥ ೩೫ ॥

ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।
ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ

॥ ೩೬ ॥

ಅರ್ಜುನ ಉವಾಚ-

ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ।
ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ

॥ ೩೭ ॥

ಕಚ್ಚಿನ್ನೋಭಯವಿಭ್ರಷ್ಟಶ್ಛಿನ್ನಾಭ್ರಮಿವ ನಶ್ಯತಿ ।
ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ

॥ ೩೮ ॥

ಏತನ್ಮೇ ಸಂಶಯಂ ಕೃಷ್ಣ ಛೇತ್ತುಮರ್ಹಸ್ಯಶೇಷತಃ ।
ತ್ವದನ್ಯಃ ಸಂಶಯಸ್ಯಾಸ್ಯ ಛೇತ್ತಾ ನ ಹ್ಯುಪಪದ್ಯತೇ

॥ ೩೯ ॥

ಶ್ರೀಭಗವಾನುವಾಚ-

ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ

॥ ೪೦ ॥

ಪ್ರಾಪ್ಯ ಪುಣ್ಯಕೃತಾನ್ ಲೋಕಾನುಷಿತ್ವಾ ಶಾಶ್ವತೀಃ ಸಮಾಃ ।
ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ

॥ ೪೧ ॥

ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ।
ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್

॥ ೪೨ ॥

ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ।
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ

॥ ೪೩ ॥

ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ।
ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ

॥ ೪೪ ॥

ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ।
ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್

॥ ೪೫ ॥

ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ

॥ ೪೬ ॥

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ

॥ ೪೭ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಧ್ಯಾನಯೋಗೋ ನಾಮ ಷಷ್ಠೋಽಧ್ಯಾಯಃ

ಸೂಚನೆ

ಜ್ಞಾನಾರ್ಹತೆ ಸಂನ್ಯಾಸದೆ ।
ಸಂನ್ಯಸಿಪುದು ಕರ್ಮಫಲವನೋ ಕರ್ಮವನೋ ॥
ಏನಂ * ಕರ್ಮದೊಳಿಲ್ಲಂ ।
ತಾನೆನುವುದು ಸೇರೆ ಕರ್ಮದೊಳಗದು ಕಲುಷಂ

॥ ೧ ॥

ಸ್ವಾಂತದ ಶೋಧನೆಯಪ್ಪುದು ।
ಸಂತತಕರ್ಮಾತ್ತಲೋಕಸಂಪರ್ಕಗಳಿಂ ॥
ಅಂತಂತಶ್ಶ್ಯೋಧಿತದೈ- ।
ಕಾಂತದ ದೃಷ್ಟಿಯಿನೆ ಪೂರ್ಣತತ್ತ್ವಂ ದೊರೆಗುಂ ॥ ೨ ॥

ಸಾರಾಂಶ

ಸ್ವಪ್ರಯೋಜನಸಂಕಲ್ಪವಿಲ್ಲದಿರುವುದು ಸಂನ್ಯಾಸ. ನ್ಯಾಯವಿಹಿತವಾದ ಕ್ರಮದಲ್ಲಿ ಭೋಗ ಭಾಗ್ಯ ಯಶಸ್ಸುಗಳಿಗಾಗಿ ಸಂಕಲ್ಪಿಸುವುದು ಗಾರ್ಹಸ್ಥ್ಯಕ್ಕೆ ಒಪ್ಪುತ್ತದೆ. ವಿಹಿತಕರ್ಮವನ್ನು ಸ್ವಾರ್ಥದಿಂದ ಮಾಡಿದರೂ ಅದು ಕಾಲಾನುಕಾಲದಲ್ಲಿ ನಿಃಸ್ವಾರ್ಥವನ್ನು ತರಬಲ್ಲದು. ಆ ಕರ್ಮವು ಶಾಸ್ತ್ರದ್ದೇ ಆಗಲಿ, ಲೌಕಿಕದ್ದೇ ಆಗಲಿ, ಅದು ಸ್ವಾರ್ಥಸಹಿತವಾದದ್ದೂ ಆಗಿರಲಿ, – ಧರ್ಮ ಸಂಮತವಾಗಿದ್ದಲ್ಲಿ ಅದು ಮನಸ್ಸನ್ನು ಕ್ರಮೇಣ ಭಗವಂತನ ಕಡೆಗೆ ತಿರುಗಿಸುತ್ತದೆ. ಲೋಕ ಸಂಪರ್ಕದಿಂದ ಉಂಟಾಗುವ ಬಗೆಬಗೆಯ ಅನುಭವಗಳು ಜೀವವನ್ನು ಕಲಕಿ, ಕುಲುಕಿ, ಅಲೆದಾಡಿಸಿ, ಆಯಾಸಪಡಿಸಿ ಕಡೆಗೆ ಪ್ರಪಂಚದ ಬೆಲೆ ಇಷ್ಟು, ಭೋಗಗಳ ಪಾಡು ಹೀಗೆ, ಮನುಷ್ಯ ಶಕ್ತಿಯ ವ್ಯಾಪನೆ ಇಲ್ಲಿಯವರೆಗೆ–ಎಂಬ ಪರಿಮಿತಿಯ ಅರಿವನ್ನು ತಂದೊದಗಿಸುತ್ತವೆ.

ದೇಹಕ್ರಿಯೆಗಳಿಗೆ ಬಾಧೆ ತರುವಂಥ ವೀರವ್ರತಗಳನ್ನು ಗೀತಾಚಾರ್ಯರು ಉಪದೇಶ ಮಾಡುವುದಿಲ್ಲ. ಎಲ್ಲದರಲ್ಲೂ ಒಂದು ಯುಕ್ತವಾದ ಮಿತಿಗೆ ಒಳಪಟ್ಟು ನಡೆಯಬೇಕೆನ್ನುತ್ತಾರೆ. ಕಾರ್ಯದಕ್ಷತೆ, ಮನಸ್ಸಮಾಧಾನ–ಈ ಎರಡು ಲಕ್ಷ್ಯಗಳಿಗೆ ಬಾಧೆ ತಾರದಂತಿರಬೇಕು ಸಾಧನೆ.

ಆತ್ಮತತ್ತ್ವದಲ್ಲಿ ಮನಸ್ಸನ್ನು ನೆಲಗೊಳಿಸುವುದೇ ಧ್ಯಾನಯೋಗ. ಧ್ಯಾನವಿಲ್ಲದೆ ಭಗವದ್ಗೀತೆಯನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ಗ್ರಂಥವ್ಯಾಸಂಗಮಾತ್ರದಿಂದುಂಟಾದ ಜ್ಞಾನ ಅಪೂರ್ಣ. ಸಂಪೂರ್ಣಜ್ಞಾನ ಉಂಟಾಗುವುದು ಸ್ವಾನುಭವದಿಂದ–ಆತ್ಮೌಪಮ್ಯಾನುಸಂಧಾನದಿಂದ.

ಜನ್ಮಜನ್ಮಾಂತರಗಳೆಂಬ ನಾನಾ ಪ್ರಸಂಗಗಳು ಒಂದೇ ಜೀವದ–ಒಂದೇ ಮಹಾಕಥೆಯ–ಅನೇಕ ಪ್ರಕರಣವಿಭಾಗಗಳು. ಜೀವಗತಿಯ ರೂಪವನ್ನು ಕಾಣಬೇಕೆನ್ನುವವರು ಜನ್ಮ ಜನ್ಮಾಂತರ ವೃತ್ತಾಂತಗಳನ್ನು ಏಕೈಕವಾದ ಅಖಂಡನದೀಧಾರೆಯೆಂದು ನೋಡಬೇಕು. ಈ ಜೀವನನದೀಪ್ರವಾಹದಲ್ಲಿ ತಿಳಿನೀರಿನ ಹೊಳೆಗಳೂ ಸೇರುತ್ತವೆ. ಗ್ರಾಮಸಾರದ ರೊಚ್ಚೂ ಸೇರುತ್ತದೆ. ನದಿಯ ಮುಂಬರಿದಂತೆ ಕೊಳೆಯಿಳಿದು ನೀರು ತಿಳಿಯಾಗುತ್ತದೆ. ಹೀಗೆ ಸಣ್ಣ ಪುಟ್ಟ ತೊರೆಗಳ ತಿಳಿಹರಿವೂ ಸಾರ್ಥಕವಾಗುತ್ತದೆ. ನಾವು ಮಾಡಲಾಗುವ ಅಷ್ಟಿಷ್ಟು ಸತ್ಪ್ರಯತ್ನದ ಕಥೆಯೂ ಹಾಗೆಯೇ.

. . .

ಪ್ರಕರಣ ೭

ಅಧ್ಯಾಯ ೬ - ಧ್ಯಾನಯೋಗವೆಂಬ ಧ್ಯಾನಾಭ್ಯಾಸಯೋಗ

ಹಿಂದಿನ ಅಧ್ಯಾಯದಲ್ಲಿ ಕರ್ಮಜ್ಞಾನಸಾಮರಸ್ಯವನ್ನು ಪ್ರತಿಪಾದಿಸಿದ್ದಾಯಿತು. ಈಗ ಜ್ಞಾನಪ್ರಾಪ್ತಿಗೆ ಸತ್ಕರ್ಮಾಚರಣೆಯ ಜೊತೆಗೆ ಸಾಧಕವಾದ ಧ್ಯಾನರೂಪದ ಕರ್ಮ ವಿಧಾನವನ್ನು ತಿಳಿಸುವುದಾಗುತ್ತದೆ. ಈ ಅಧ್ಯಾಯದ ಮುಖ್ಯ ವಿಷಯಗಳು ಹತ್ತು:

1. ಸಂನ್ಯಾಸಕ್ಕೂ ಯೋಗಕ್ಕೂ ಸಂಬಂಧ
2. ಮನುಷ್ಯನ ಸ್ವಪ್ರಯತ್ನದ ಮುಖ್ಯತೆ
3. ಜ್ಞಾನ ವಿಜ್ಞಾನಗಳ ಅನ್ಯೋನ್ಯಾವಶ್ಯಕತೆ
4. ಧ್ಯಾನವಿಧಾನ
5. ಆಹಾರ ವಿಹಾರಗಳ ಉಚಿತ ಮಿತಿ
6. ಉಪಶಾಂತಿ
7. ಆತ್ಮೌಪಮ್ಯಾನುಸಂಧಾನ
8. ಅಭ್ಯಾಸದಿಂದ ಸಿದ್ಧಿ
9. ಕಿಂಚಿತ್ಪ್ರಯತ್ನವಾದರೂ ವ್ಯರ್ಥವಾಗದು
10. ಧ್ಯಾನಾನುಸಂಧಾನಯೋಗದ ಶ್ರೇಷ್ಠತೆ.

ಸಂನ್ಯಾಸ–ಯೋಗ ಸಂಬಂಧ

ಹಿಂದೆ ಸಂನ್ಯಾಸಿ ಎಂಥವನು ಎಂಬ ಪ್ರಶ್ನೆ ಬಂತಷ್ಟೆ? ಅದಕ್ಕುತ್ತರವನ್ನು ಈಗ ಪುನಃ ನಿಷ್ಕರ್ಷೆಯಿಂದ ಹೇಳಿದೆ:

> ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
> ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥

ಸಂನ್ಯಾಸಿ ಯಾರೆಂದರೆ ಯಜ್ಞಹೋಮಗಳನ್ನೂ ದಾನಧರ್ಮಗಳನ್ನೂ ಬಿಟ್ಟವನಲ್ಲ. ಯಾರು ಮಾಡಬೇಕಾಗಿರುವ ಕರ್ತವ್ಯಕರ್ಮಗಳನ್ನು ಸ್ವಪ್ರಯೋಜನ ಚಿಂತೆಯಿಲ್ಲದೆ ಮಾಡುತ್ತಾನೋ ಅವನೇ ಸಂನ್ಯಾಸಿ; ಅವನೇ ಯೋಗಿ.

ಗೀತೆಯ ಮಹಾವಾಕ್ಯಗಳಲ್ಲಿ ಇದೊಂದು ಅತಿ ಮುಖ್ಯವಾದದ್ದು. ಯೋಗವೆಂದರೆ ಇಲ್ಲಿ ಕರ್ಮಯೋಗವಾದರೂ ಆಗಬಹುದು; ಜ್ಞಾನಯೋಗವಾದರೂ ಆಗಬಹುದು. ಸಂನ್ಯಾಸವೂ ಯೋಗವೂ ಎರಡೂ ಪರಿಣಾಮದಲ್ಲಿ ಬೆರೆತಿರತಕ್ಕವೇ ಹೊರತು ಅನ್ಯೋನ್ಯ ಬಾಧಕಗಳಲ್ಲ. ಸಂನ್ಯಾಸ, ಸಾಂಖ್ಯ, ಜ್ಞಾನ–ಈ ಮೂರೂ ಗೀತೆಯಲ್ಲಿ ಪರ್ಯಾಯ ಪದಗಳು. ಹಾಗೆಯೇ ಧರ್ಮ, ನಿಯತ ಕರ್ಮ, ಕರ್ತವ್ಯ–ಇವು ಮೂರೂ ಪರ್ಯಾಯ ಪದಗಳಾಗಿ ಬಳಸಲ್ಪಟ್ಟಿವೆ. ಕರ್ಮಾಚರಣೆಯು ಜ್ಞಾನಪ್ರಯತ್ನಕ್ಕೆ ಪೂರ್ವಭಾವಿಯಾಗಿರಬೇಕಾದ ಚಿತ್ತಶುದ್ಧಿಗೆ ಕಾರಣವಾಗುತ್ತದೆ. ಚಿತ್ತಶುದ್ಧಿಯಿಲ್ಲದೆ ಜ್ಞಾನಪ್ರಾಪ್ತಿ ಸಾಧ್ಯವಿಲ್ಲ. ಜ್ಞಾನಪ್ರಯತ್ನ ಸಫಲವಾಗುವುದಕ್ಕೆ ಚಿತ್ತಸಮಾಧಾನ ಬೇಕು. ಸಂನ್ಯಾಸವು ಚಿತ್ತಸಮಾಧಾನಕ್ಕೆ–ಮನಸ್ಸನ್ನು ಒಂದು ನೆಮ್ಮದಿಯಲ್ಲಿ ಇಟ್ಟಿರುವುದಕ್ಕೆ–ಸಾಧಕವಾಗುತ್ತದೆ. ಹೀಗೆ ಕರ್ಮವೂ ಸಂನ್ಯಾಸವೂ ಎರಡೂ ಜ್ಞಾನಯೋಗದಲ್ಲಿ ಒಂದಾಗುತ್ತವೆ. ಅವೆರಡೂ ಪರಸ್ಪರ ಪರಿಪೂರಕಗಳು. ಇದನ್ನು ಸ್ಪಷ್ಟಪಡಿಸುತ್ತಾನೆ ಭಗವಂತ:

> ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
> ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥

ಯೋಗಾಭ್ಯಾಸದ ಪ್ರಾರಂಭಕ್ಕೆ ಮುಂಚೆ ಅದಕ್ಕೆ ಬೇಕಾದ ಯೋಗ್ಯತಾಸಿದ್ಧತೆಯು ಕರ್ಮದಿಂದ ಬರುತ್ತದೆ. ಪ್ರಾರಂಭವಾದ ಬಳಿಕ ಯೋಗ ಸಾಂಗವಾಗುವುದು ಶಮದಿಂದ.

ಮೊದಲು ವಿಹಿತಕರ್ಮ, ಬಳಿಕ ಕರ್ಮಫಲತ್ಯಾಗ ಅದು ನಿರಹಂತಾಭ್ಯಾಸ; ಅದರಿಂದ ರಾಗದ್ವೇಷಾದಿಗಳ ಶಮನ; ಹಾಗೆ ಚಿತ್ತಸಮಾಧಾನ; ಅದರಿಂದ ಸಂಪೂರ್ಣ ಆತ್ಮಸಂದರ್ಶನ.

> ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
> ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥

ಯೋಗಕ್ಕೆ ಮೊದಲು ಬೇಕಾದ ಸಿದ್ಧತೆ ಸಂಕಲ್ಪವರ್ಜನೆ. ಸಂಕಲ್ಪವೆಂದರೆ ಆಶೆ, ಮನೋರಥ. ಇದಾಗಬೇಕು. ಅದಾಗಬೇಕು. ಹೀಗಾಗಬೇಕು. ಹಾಗಾಗಕೂಡದು–ಎಂಬೀ ತೆರದ ಫಲಚಿಂತೆಗಳೇ ಸಂಕಲ್ಪ. ಸ್ವಪ್ರಯೋಜನಸಂಕಲ್ಪವಿಲ್ಲದಿರುವುದೇ ಸಂನ್ಯಾಸ.

ಸ್ವಾರ್ಥಸಂಕಲ್ಪವರ್ಜನೆ

ಒಂದು ಪ್ರಶ್ನೆ ಏಳುತ್ತದೆ. ದೇಶೋದ್ಧಾರವೇ ಮೊದಲಾದ ನಾನಾ ಸಂಕಲ್ಪಗಳು ಇರಬೇಕಾದವಲ್ಲವೋ? ಸಂಕಲ್ಪ ಎಂದರೆ Planning (ಪ್ಲ್ಯಾನ್ ಮಾಡುವುದು). ಈ Planning ಯೋಜನಾಲೋಚನೆ ಇಲ್ಲದೆಹೋದರೆ ಲೋಕಪ್ರಗತಿ ಸಾಧ್ಯವೆ? ಈ ರೀತಿಯಾಗಿ ಪ್ರಶ್ನೆಗಳು ಬರಬಹುದು. ಸಂಕಲ್ಪವು ಪೌರುಷದ ಲಕ್ಷಣ. ಪೌರುಷ ಬಿಟ್ಟುಬಿಡಬೇಕಾದದ್ದೋ? "ಪೌರುಷಂ ನೃಷು" – "ಮನುಷ್ಯರಲ್ಲಿ ನಾನು ಪೌರುಷರೂಪವಾಗಿದ್ದೇನೆ" ಎಂದು ಭಗವಂತನೇ ಹೇಳಿದ್ದಾನಲ್ಲವೆ? ಪೌರುಷ ಇರಬೇಕೆಂದು ರಾಮಾಯಣ ಮಹಾಭಾರತಗಳಲ್ಲಿ ಯಥೇಷ್ಟವಾಗಿ ಹೇಳಿದ್ದಾರೆ. ಸಂಕಲ್ಪವಿಲ್ಲದೆ ಪೌರುಷ ಸಾಧ್ಯವಿಲ್ಲ.

ಇದಕ್ಕೆ ಉತ್ತರ ಹೀಗೆ: ಮೊದಲನೆಯದಾಗಿ, ಇಲ್ಲಿ ಬಿಡಬೇಕೆನ್ನುವುದು ಲೋಕಹಿತ ಸಂಕಲ್ಪವನ್ನಲ್ಲ, ಸ್ವಾರ್ಥಸಂಕಲ್ಪವನ್ನು, ಲಾಭ, ಭೋಗ, ಕೀರ್ತಿ ಇತ್ಯಾದಿ ಅಹಂ ಪ್ರಯುಕ್ತವಾದ ಸಂಕಲ್ಪಗಳನ್ನು ಬಿಡಬೇಕು. ಭಗವತ್ಪ್ರೀತ್ಯರ್ಥಗಳಾದ ಸಂಕಲ್ಪಗಳಿಂದ ಬಾಧೆಯಾಗದು. ಎರಡನೆಯದಾಗಿ, ಸ್ವಾರ್ಥಸಂಕಲ್ಪವನ್ನು ನಿಷೇಧಮಾಡಿರುವುದು ಸಂನ್ಯಾಸಿಗೆ, ಆತ್ಮಜ್ಞಾನಾಕಾಂಕ್ಷಿಗೆ; ಎಲ್ಲರಿಗೂ ಅಲ್ಲ. ಯಾರಿಗೆ ಪ್ರಪಂಚದ ಭೋಗ ಭಾಗ್ಯಗಳು ನಿಸ್ಸಾರವೆನಿಸಿವೆಯೋ ಅಂಥವನಿಗೆ ಸಂನ್ಯಾಸ. ಯಾರ ಮನಸ್ಸು ನೈಜವಾಗಿ ಪ್ರಪಂಚಕ್ಕೆ ಅಂಟಿಕೊಂಡಿದೆಯೋ ಅವರಿಂದ ಸಂಕಲ್ಪವರ್ಜನೆ ಬೇಕಾಗಿಲ್ಲ. "ಚತುರ್ವಿಧ ಫಲಪುರುಷಾರ್ಥ ಸಿದ್ಧ್ಯರ್ಥಮ್" ಎಂದೇ ಅವರ ಸಂಕಲ್ಪ. ಸ್ವಾರ್ಥಸಂಕಲ್ಪ ಕೂಡ ಧರ್ಮಸಂಮತವಾಗಿರಬಹುದು. ಅಗ್ನಿಷ್ಟೋಮ ಅಶ್ವಮೇಧಾದಿ ಕರ್ಮಗಳೆಲ್ಲ ಇಂಥವೇ ತಾನೆ? ನ್ಯಾಯವಿಹಿತವಾದ ಕ್ರಮದಲ್ಲಿ ಭೋಗ ಭಾಗ್ಯ ಯಶಸ್ಸುಗಳಿಗಾಗಿ ಸಂಕಲ್ಪಿಸುವುದು ಸಂನ್ಯಾಸಕ್ಕೆ ಆಗದೇ ಹೊರತು ಗಾರ್ಹಸ್ಥ್ಯಕ್ಕೆ ಒಪ್ಪುತ್ತದೆ. ಆ ಗೃಹಸ್ಥಸಂಕಲ್ಪವು ಧರ್ಮಾದಿ ಪುರುಷಾರ್ಥಕೋಟಿಯಲ್ಲಿ ಸೇರಿದ್ದು.

ಗುರುಕುಲದಲ್ಲಿರುವ ವಿದ್ಯಾರ್ಥಿ ಗಂಧಪುಷ್ಪತಾಂಬೂಲಾದಿಗಳನ್ನು ಸೇವಿಸಬಾರದೆಂದರೆ ಗೃಹಸ್ಥನಿಗೆ ಆ ಸುಖವು ನಿಷಿದ್ಧವಾಗುವುದಿಲ್ಲ. ವಿಹಿತವೇ ಆಗುತ್ತದೆ. ಜ್ವರ ಪೀಡಿತನಿಗೆ ಜಿಡ್ಡು ಬೇಡವೆಂದರೆ ಅತಿಥಿ ಅಭ್ಯಾಗತರಿಗೂ ತುಪ್ಪ ಬಡಿಸಬಾರದೆಂದು ಅರ್ಥವಲ್ಲ.

ಸ್ವಾರ್ಥವಿರುವುದಾದರೆ ಇದ್ದುಕೊಳ್ಳಲಿ, ಆದರೆ ಧರ್ಮಕ್ಕೆ ವಿಧೇಯವಾಗಿರಲಿ, ಪರಮಾರ್ಥ ಬೇಕಾದರೆ ಆಗ ಸ್ವಾರ್ಥಸಂಕಲ್ಪಗಳು ದೂರವಾಗಲಿ.

ಕರ್ಮಪ್ರಯೋಜನ

ಕರ್ಮಾಚರಣೆಯಿಂದ ಚಿತ್ತಶುದ್ಧಿ–ಎಂಬ ಮಾತನ್ನು ಪರೀಕ್ಷಿಸಿ ಗ್ರಹಿಸಬೇಕು. ವಿಹಿತ ಕರ್ಮವನ್ನು ಸ್ವಾರ್ಥದಿಂದ ಮಾಡಿದರೂ ಅದು ಕಾಲಾನುಕಾಲದಲ್ಲಿ ನಿಃಸ್ವಾರ್ಥವನ್ನು ತರಬಲ್ಲದು. ಆ ಕರ್ಮವು ಶಾಸ್ತ್ರದ್ದೇ ಆಗಲಿ, ಲೌಕಿಕದ್ದೇ ಆಗಲಿ, ಅದು ಸ್ವಾರ್ಥಸಹಿತವಾದದ್ದೂ ಆಗಿರಲಿ, –ಅದು ಧರ್ಮಸಂಮತವಾಗಿದ್ದಲ್ಲಿ ಅದರ ಫಲಿತಾಂಶಗಳು ಎರಡು: ಮೊದಲನೆಯದು ಭಗವಂತನ ಕಡೆಗೆ ಮನಸ್ಸನ್ನು ತಿರುಗಿಸುವುದು; ಎರಡನೆಯದು ಇಷ್ಟಾರ್ಥವನ್ನು ಪೂರಯಿಸುವುದು. ಭಗವದ್ಧ್ಯಾನವನ್ನು ಕುರಿತು ವಿವರಣೆ ಅವಶ್ಯವಿಲ್ಲ, ಇಷ್ಟಪ್ರಾಪ್ತಿಯ ವಿಷಯದಲ್ಲಿ ಹೇಳಬೇಕಾದದ್ದು ಒಂದು ಮಾತುಂಟು. ಇಷ್ಟಪ್ರಾಪ್ತಿಯೆಂದರೂ ಅನಿಷ್ಟ ನಿವಾರಣೆಯೆಂದರೂ ಯಾವ ದೃಷ್ಟಿಯಿಂದ ನೋಡಿದರೂ ಸತ್ಕರ್ಮ ಅವಶ್ಯ. ಅದಕ್ಕಿಂತ ಮುಖ್ಯವಾಗಿ, ಅದಕ್ಕಿಂತ ಪ್ರತ್ಯಕ್ಷವಾಗಿ, ಕರ್ಮವೆಂದರೆ ಲೋಕಸಂಪರ್ಕ. ಲೋಕಸಂಪರ್ಕವು ಜೀವವನ್ನು ಸಂಸ್ಕಾರಪಡಿಸುತ್ತದೆ ಅಥವಾ ವಿಕಾರಪಡಿಸುತ್ತದೆ. ಅಂಥಾ ವಿಕಾರಗಳಿಂದಲೂ ಜೀವಕ್ಕೆ ಪ್ರಯೋಜನ ಉಂಟು. ಕರ್ಮಗಳು, ಅಕರ್ಮಗಳು, ಆತುರಗಳು, ಅವಿವೇಕಗಳು, ಲಾಭಗಳು, ನಷ್ಟಗಳು, ಮೋಹಗಳು, ದ್ವೇಷಗಳು, ಮತ್ಸರಗಳು, ಹಠಗಳು, ವಿಯೋಗಗಳು, ರೋಗಗಳು, ದುಃಖಗಳು–ಈ ಬಗೆಬಗೆಯ ಅನುಭವಗಳು ಜೀವವನ್ನು ಕಲಕಿ, ಕುಲುಕಿಸಿ, ಅಲೆದಾಡಿಸಿ, ಕಡೆಗೆ ಪ್ರಪಂಚದ ಬೆಲೆ ಇಷ್ಟುಮಟ್ಟಿಗೆ, ಭೋಗಗಳ ಪಾಡು ಹೀಗೆ, ಮನುಷ್ಯ ಶಕ್ತಿಯ ವ್ಯಾಪನೆ ಇಲ್ಲಿಯವರೆಗೆ ಎಂಬ ಪರಿಮಿತಿಯ ಅರಿವನ್ನು ತಂದೊದಗಿಸುತ್ತವೆ. ಭರ್ತೃಹರಿಯ ಮಾತು ತಮಗೆಲ್ಲ ಜ್ಞಾಪಕದಲ್ಲಿರಬಹುದು.

> ಮಾತರ್ಮೇದಿನಿ ತಾತ ಮಾರುತ ಸಖೇ ತೇಜಸ್ಸುಬಂಧೋ ಜಲ ।
> ಭ್ರಾತರ್ವ್ಯೋಮ ನಿಬದ್ಧ ಏವ ಭವತಾಮ್ ಅಂತ್ಯಃ ಪ್ರಣಾಮಾಂಜಲಿಃ ॥
> ಯುಷ್ಮತ್ಸಂಗವಶೋಪಜಾತಸುಕೃತಸ್ಫಾರಸ್ಫುರನ್ನಿರ್ಮಲ- ।
> ಜ್ಞಾನಾಪಾಸ್ತಸಮಸ್ತಮೋಹಮಹಿಮಾ ಲೀಯೇ ಪರಬ್ರಹ್ಮಣಿ ॥

ಭರ್ತೃಹರಿಗೆ ಅವಸಾನಕಾಲ ಬಂದಿತೆಂದು ತೋರುತ್ತದೆ. ಆಗ ಕೈಮುಗಿದು ಹೇಳುತ್ತಾನೆ: “ಓ ಭೂಮಿತಾಯಿ, ತಂದೆಯಾದ ಓ ವಾಯುವೆ, ಸ್ನೇಹಿತನಾದ ಅಗ್ನಿಯೇ ಬಂಧುಪ್ರಾಯವಾದ ಜಲವೇ ಸೋದರನೋಪಾದಿಯಲ್ಲಿ ಸಂರಕ್ಷಣೆಮಾಡುವ ಆಕಾಶವೆ ನಿಮಗೆಲ್ಲ ಇಗೋ ಇದು

ಕಡೆಯ ನಮಸ್ಕಾರ.” ಏಕೆ? “ನಿಮ್ಮೆಲ್ಲರ ಸಹವಾಸದಿಂದ ನನಗೆ ಪುಣ್ಯ ಬಂತು. ಆ ಪುಣ್ಯದಿಂದ ವಿಸ್ತಾರವೂ ಪ್ರಕಾಶಮಾನವೂ ಆದ ನಿರ್ಮಲ ತತ್ತ್ವಜ್ಞಾನ ನನಗೆ ಲಭಿಸಿತು.” ಲೋಕಸಂಪರ್ಕವಾಗುತ್ತಾಗುತ್ತ ಭ್ರಾಂತಿಗಳು, ಮೋಹಗಳು ಎಲ್ಲ ಬಿಟ್ಟು ಹೋಗುತ್ತವೆ. ಲೋಕಸಂಪರ್ಕದಿಂದ ಪದಾರ್ಥಗಳ ಬೆಲೆ ಇಷ್ಟೇ ಎಂಬ ಜ್ಞಾನ ಬರುತ್ತದೆ. ಹೀಗೆ ನಮ್ಮ ವ್ಯಾಮೋಹಗಳೆಲ್ಲ ಒಂದೊಂದಾಗಿ ಕಳಚುತ್ತವೆ. ಇದು ಲೋಕಾನುಭವದಿಂದ ನಮಗಾಗುವ ಪರಮಪ್ರಯೋಜನ. ನಮ್ಮ ಜೀವಕ್ಕಾಗಬೇಕಾದ ಸಂಸ್ಕಾರದ ಒಂದಾನೊಂದು ರೂಪ ಲೋಕಸಂಪರ್ಕ. ಷೋಡಶಸಂಸ್ಕಾರಗಳಿಂದಾಗತಕ್ಕ ಚಿತ್ತಶುದ್ಧಿಗಿಂತ ಉತ್ತಮವಾದ ಚಿತ್ತಶುದ್ಧಿಯೂ ಭ್ರಾಂತಿನಿವಾರಣೆಯೂ ಪ್ರಪಂಚ ಸಂಪರ್ಕದಿಂದ ಆಗುತ್ತವೆ. ಈ ಕಾರಣದಿಂದ ಕರ್ಮ ಬಹಳ ಮುಖ್ಯವಾದ ಸಾಧನವಾಗುತ್ತದೆ. ಮನುಷ್ಯ ಎಂದರೆ ಕರ್ಮ.

ಹೀಗೆ ಸ್ವಾರ್ಥಕರ್ಮಫಲಭೋಜನದಿಂದಲೇ ಸ್ವಾರ್ಥಕ್ಕೆ ಮಿತಿಯನ್ನು ಕಾಣುವಂತಾಗುತ್ತದೆ. ದುಃಖಾನುಭವ ಹೇಗೋ ಸುಖಾನುಭವ ಕೂಡ ಹಾಗೆಯೇ ಜೀವಕ್ಕೆ ಒಂದು ಅವಶ್ಯ ಸಂಸ್ಕಾರ. ಆದದ್ದರಿಂದ ಆಕಾಂಕ್ಷೆಯಿಟ್ಟುಕೊಂಡು ಮಾಡಿದ ಪೂಣ್ಯ ಕರ್ಮವೂ ಜೀವವನ್ನು ಪರಿಪಕ್ವಪಡಿಸುತ್ತದೆ. ದೇವತಾಸ್ಮರಣೆ ಮತ್ತು ನೂತನ ಜೀವ ಸಂಸ್ಕಾರ–ಇವೆರಡೂ ಸತ್ಕರ್ಮದ ಶುಭಫಲಗಳು. ಇಂಥ ಫಲಗಳನ್ನನುಭವಿಸಿ, ಜೀವ ಮೆಟ್ಟಲು ಮೆಟ್ಟಲಾಗಿ ಜನ್ಮಜನ್ಮಾಂತರಗಳ ದ್ವಾರಾ ಉತ್ತಮಗತಿಗೇರುತ್ತದೆ.

> ಅನೇಕಜನ್ಮಸುಸಿದ್ಧಸ್ತತೋ ಯಾತಿ ಪರಾಂ ಗತಿಮ್ ॥

ಒಂದೇ ಹಾರಿನಿಂದ ಹಾರಲಾಗದು; ಮೆಟ್ಟಲುಮೆಟ್ಟಲಾಗಿ ಹತ್ತಬೇಕು.

ಸಂನ್ಯಾಸ ಸುಲಭವಲ್ಲ; ಸ್ವಾರ್ಥತ್ಯಾಗ ಸುಲಭವಲ್ಲ; ಸಂಕಲ್ಪವರ್ಜನೆ ಸುಲಭವಲ್ಲ. ವಿಹಿತವಾದ ಕರ್ಮಾಚರಣೆ, ಆ ಮೂಲಕ ಲಭ್ಯವಾದ ಲೋಕಾನುಭವ–ಇದರಿಂದಲೇ ಪರಮಾರ್ಥಾನುಭವಯೋಗ್ಯತೆ ಬರತಕ್ಕದ್ದು.

ಹೀಗೆ ಶ್ರೌತಸ್ಮಾರ್ತ ಕರ್ಮಗಳು ಮಾತ್ರವೇ ಅಲ್ಲ, ಎಲ್ಲ ಲೌಕಿಕ ಕರ್ಮಗಳೂ, ಎಲ್ಲ ಜೀವಿತವ್ಯಾಪಾರಗಳೂ, ಎಲ್ಲ ಸ್ನೇಹಬಾಂಧವ್ಯಗಳೂ, ಎಲ್ಲ ಋಣದಾನಾದಾನಗಳೂ ಜೀವಕ್ಕೆ ಸಂಸ್ಕಾರಕಾರಿಗಳು. ಆದದ್ದರಿಂದ ಕರ್ಮವೇ ಜೀವನ ಎಂದು ಹೇಳಬಹುದು.

ಅಥ ಖಲು ಕ್ರತುಮಯಃ ಪುರುಷಃ ॥
ಪುರುಷೋ ವಾವಯಜ್ಞಃ ॥
ಕ್ರತೋ ಸ್ಮರ ಕೃತಗ್ಗ್ಂ ಸ್ಮರ ॥

ಇತ್ಯಾದಿ ಉಪನಿಷದ್ವಾಕ್ಯಗಳ ಅಭಿಪ್ರಾಯವೂ ಇದೇ. ಕರ್ಮವೇ ಜೀವ. ಜೀವಕ್ಕೆ ಅಧ್ಯಾತ್ಮಶಿಕ್ಷಣವು ಕರ್ಮದಿಂದ.

ಕರ್ಮಾಧಿಕಾರಿ ಯಾರು?

ಪ್ರತಿಯೊಬ್ಬ ಮನುಷ್ಯವ್ಯಕ್ತಿಗೂ ತನ್ನ ಶಕ್ತಿಸಾಮರ್ಥ್ಯಗಳಿಗೆ ತಕ್ಕಂತೆ, ತನ್ನ ಸಂದರ್ಭಕ್ಕೆ ತಕ್ಕಂತೆ ಕರ್ಮವಿವೇಕಮಾಡಿಕೊಳ್ಳುವಷ್ಟರ ಸ್ವಾತಂತ್ರ್ಯ ಇದ್ದೇ ಇರುತ್ತದೆ.

> ಉದ್ಧರೇದಾತ್ಮನಾಽಽತ್ಮಾನಂ ನಾಽಽತ್ಮಾನಮವಸಾದಯೇತ್ ।
> ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥

ಮೇಲೆ ಹೇಳಿದ ಸ್ವಾತಂತ್ರ್ಯ ಮನುಷ್ಯನಿಗಿಲ್ಲದೆಹೋಗಿದ್ದಿದ್ದರೆ ಈ ವಾಕ್ಯ ಸಾರ್ಥಕವಾಗುತ್ತಿರಲಿಲ್ಲ. ಆತ್ಮೋದ್ಧಾರ ಮಾಡಿಕೊಳ್ಳುವ ಸ್ವಾತಂತ್ರ್ಯ–ಅದಕ್ಕೆ ಬೇಕಾದ ಕರ್ಮಾಕರ್ಮವಿವೇಕಮಾಡುವ ಸ್ವಾತಂತ್ರ್ಯ–ಮನುಷ್ಯಜೀವಕ್ಕುಂಟು.

ಮನುಷ್ಯನ ಈ ಹೊತ್ತಿನ ಸ್ಥಿತಿ ಹೇಗಾಯಿತು? ಹಿಂದೆ ಮಾಡಿಕೊಂಡದ್ದರಿಂದ ಆಯಿತು. ಕರ್ಮದಿಂದ ತಾನು. ತನ್ನ ಪ್ರಾಚೀನದಿಂದ ತಾನು. ತನ್ನ ಪ್ರಾಚೀನದಿಂದ ತಾನು ಎಂಬುದರಲ್ಲಿಯೇ ತನ್ನಿಂದಲೇ ತನ್ನ ಭವಿಷ್ಯ ಎಂಬ ನಿಶ್ಚಯ ಅಡಗಿದೆ. ಈ ಹೊತ್ತು ಕರ್ಮಾಕರ್ಮ ವಿವೇಕಮಾಡಿ ವಿಹಿತಕರ್ಮ ಮಾಡಿದರೆ ನಾಳೆ ಅವನ ಪರಿಸ್ಥಿತಿ ಉತ್ತಮದ್ದಾಗುತ್ತದೆ. ಪಾಶ್ಚಾತ್ಯರ ಕಲ್ಪನೆಯಲ್ಲಿ ಕರ್ಮ ಎಂದರೆ "ಅದೃಷ್ಟ", – "ಒಂದು ವಿಧದ ಪೂರ್ವನಿಶ್ಚಿತತಾವಾದ, Fatalism; ಇನ್ನು ನಾವು ಮಾಡಬಹುದಾದದ್ದು ಏನೂ ಇಲ್ಲ" ಎಂಬ ಭಾವನೆ ಬಂದುಬಿಟ್ಟಿದೆ. ಇದು ವೇದಾಂತಶಾಸ್ತ್ರದ ಒಂದು ಲೋಪ ಎಂದು ಅವರು ಹೇಳುತ್ತಾರೆ. ಅದು ಲೋಪವಲ್ಲ, ಗುಣ ಎನ್ನುತ್ತೇವೆ ನಾವು. ಈ ಹೊತ್ತಿಗೆ ಯಾರು ಅಧಿಕಾರಿ? ನೀನೇ–ಎಂದರೆ ನಿನ್ನೆ ನೀನು ಮಾಡಿದ್ದೇ. ನಾಳೆಗೆ ಯಾರು ಅಧಿಕಾರಿ? ನೀನೇ–ಎಂದರೆ ಈ ಹೊತ್ತು ನೀನು ಮಾಡುವುದೇ. ನಿನ್ನೆಯು ಈ ಹೊತ್ತಿಗೆ ಅಧಿಕಾರಿಯಾಗಿದ್ದ ಮೇಲೆ ಈ ಹೊತ್ತು ನಾಳೆಗೆ ಅಧಿಕಾರಿಯಾಗುತ್ತದೆ. ಹೀಗೆ ಭೂತ–ವರ್ತಮಾನ–ಭವಿಷ್ಯತ್ಕಾಲಗಳು ಅನುಸ್ಯೂತಗಳಾಗಿ ಅಖಂಡವಾಗಿರುತ್ತವೆ. ಆದದ್ದರಿಂದ ಈ ಹೊತ್ತು ಮಾಡತಕ್ಕದ್ದನ್ನು ಸರಿಯಾಗಿ ಮಾಡು. ಇದೆ "ಉದ್ಧರೇದಾತ್ಮನಾಽಽತ್ಮಾನಮ್" ವಾಕ್ಯದ ಅಂತರ್ಭಾವ. ಮನುಷ್ಯನು ಭವಿಷ್ಯಾಧಿಕಾರಿ. ಇದು ಈ ಅಧ್ಯಾಯದ ಮುಖ್ಯ ತಾತ್ಪರ್ಯ.

ಹಾಗಾದರೆ ಒಂದು ಹಾರು ಹಾರಿ ಭವಿಷ್ಯವನ್ನು ಕೈಗೆ ತೆಗೆದುಕೊಳ್ಳಬಹುದಲ್ಲ? ಅದು ಆಗುವುದಿಲ್ಲ. ಏಕೆ? ಏಕೆಂದರೆ ಭೂತಕಾಲದ ಭಾರ ಜೀವದ ಮೇಲೆ ಹೇರಿಕೊಂಡಿದೆ. ಆ ಭಾರವನ್ನು ಮೊದಲು ಕರಗಿಸಬೇಕು. ಭವಿಷ್ಯ ಅನಂತವಾದದ್ದು. ಭೂತಕಾಲ ಹೇಗೆ ಅನಾದಿಯಾದದ್ದೋ ಹಾಗೆಯೇ ಭವಿಷ್ಯತ್ತು ಅನಂತವಾದದ್ದು. ನೀವು ಬಯಸುವ ಭವಿಷ್ಯ ಎಂದೋ ಒಂದು ದಿವಸ ನಿಮಗೆ ಸಾಧ್ಯವಾಗುತ್ತದೆ. ಪರಮಾತ್ಮ ಸನ್ನಿಧಿ ದೊರಕಬೇಕೆಂದು ನೀವು ಕೆಲಸಮಾಡಿದರೆ ಅದೂ ಆಗುತ್ತದೆ:

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ॥

ಜನ್ಮಜನ್ಮದಲ್ಲಿಯೂ ಶ್ರಮಪಡುತ್ತಿದ್ದರೆ ಕಾಲಾನುಕಾಲಕ್ಕೆ ಜ್ಞಾನಸಿದ್ಧಿಯಾಗುತ್ತದೆ; ತಾತ್ಪರ್ಯ ಇಷ್ಟು: ಜೀವಸಂಸ್ಕಾರ ಆಗಬೇಕು. ಅದನ್ನು ನಾವು ಲಕ್ಷ್ಯದಲ್ಲಿರಿಸಿಕೊಂಡು ಪ್ರತಿಯೊಂದು ಜನ್ಮದಲ್ಲಿಯೂ ಜೀವಕ್ಕೆ ಸಂಸ್ಕಾರವಾದ ಕರ್ಮವನ್ನು ಮಾಡಬೇಕು.

ಶಮ

ಕರ್ಮ ಒಂದು ಮಾರ್ಗವೆಂದು ಒಪ್ಪಿಕೊಳ್ಳೋಣ. ಅಷ್ಟೇ ಸಾಕೋ? ಸಾಲದು.

> ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥

ಕರ್ಮದ ಜೊತೆಗೆ ಶಮ ಸೇರಬೇಕು. ಶಮ ಎಂದರೆ ಶಾಂತಿ. ಆ ಶಾಂತಿ ಸಮಾಧಾನವು ತತ್ತ್ವಧ್ಯಾನದಿಂದ ಸಾಧ್ಯವಾಗುತ್ತದೆ. ಕರ್ಮ ಒಟ್ಟಿನ ಮೇಲೆ ಸಂಸ್ಕಾರಕಾರಿಯೂ ಹೌದು, ವಿಕಾರಕಾರಿಯೂ ಹೌದು. ದೇವರ ಪೂಜೆಗೆಂದು ಕುಳಿತುಕೊಂಡ ವೇಳೆಯಲ್ಲಿಯೂ ಚಿತ್ತಕ್ಷೋಭೆಯ ಸಂಭವ ತಪ್ಪಿದ್ದಲ್ಲ– "ಈಹೊತ್ತು ಬರಿ ಕೆಂಪು ಹೂವೇ ತಂದುಬಿಟ್ಟಿದ್ದೀರಿ?", "ದೀಪಕ್ಕೆ ಎಣ್ಣೆ ಸಾಲದು", "ನೈವೇದ್ಯಕ್ಕೆ ಏನು ಮಾಡಿದ್ದೀರಿ?" – ಹೀಗೆ ನಾನಾ ಮನೋವಿಕಾರಗಳುಂಟಾಗುತ್ತಲೇ ಇರುತ್ತವೆ.

ಕರ್ಮ ಎಂದರೆ ಲೋಕವ್ಯವಹಾರವಷ್ಟೆ? ಲೋಕವು ನಮ್ಮ ಮಾತನ್ನು ಕೇಳತಕ್ಕದ್ದಲ್ಲ. ಕುಟುಂಬದಲ್ಲಿ ಗಂಡನ ಸ್ವಭಾವಕ್ಕೆ ಹೆಂಡತಿ ಒಗ್ಗಿಕೊಳ್ಳದಿರಬಹುದು; ಹೆಂಡತಿಯ ಮರ್ಜಿಯನ್ನು ಗಂಡ ಅನುಸರಿಸದಿರಬಹುದು; ಇಬ್ಬರ ಮಾತನ್ನೂ ಮಕ್ಕಳು ಮನ್ನಿಸದಿರಬಹುದು; ಮುದುಕರಿಗೆ ಎಲ್ಲರಲ್ಲೂ ಅಸಹನೆ. ಧಣಿಗೆ ಜೀತದವನ ಕಷ್ಟ ಬೇಕಿಲ್ಲ; ಜೀತಗಾರನಿಗೆ ಧಣಿಯ ಚಿಂತೆಯಂಟುವುದಿಲ್ಲ. ಸಹೋದ್ಯೋಗಿಗಳಿಗೆ ಸಹನೆಯಿದ್ದರೆ ಸಾಮರ್ಥ್ಯವಿಲ್ಲ, ಸಾಮರ್ಥ್ಯವಿದ್ದರೆ ಸಹನೆಯಿಲ್ಲ. ಇಂಥಾ ಪ್ರಪಂಚದಲ್ಲಿ ಕರ್ಮ ಮಾಡ ಹೊರಡುವವನಿಗೆ ಆತಂಕಗಳೂ ಮನಃಕ್ಲೇಶಗಳೂ ಹೆಜ್ಜೆ ಹೆಜ್ಜೆಗೂ ಬರುತ್ತಲೇ ಇರುತ್ತವೆ. ಇದರಲ್ಲಿ ಚಿತ್ತವನ್ನು ಸ್ವಸ್ಥವಾಗಿರಿಸಿಕೊಳ್ಳುವುದು ಹೇಗೆ?

> ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
> ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥

ಸುತ್ತಮುತ್ತಲೂ ಗೊಂದಲವಾಗಿರುವಾಗ ಸಮತ್ವ ಹೇಗೆ ಸಾಧ್ಯವಾದೀತು? ಅದಕ್ಕೆ ಉಪಾಯ ಭಗವದ್ಧ್ಯಾನ. ಭಗಂತನ ಸ್ಮರಣೆ ಮನಸ್ಸಿನಲ್ಲಿ ದೃಢಪಟ್ಟರೆ ಚಿತ್ತವಿಕ್ಷೇಪ ತಪ್ಪುತ್ತದೆ, ಅಶಾಂತಿ ತಪ್ಪುತ್ತದೆ; ಮಾಡಿದ ಕೆಲಸ ಸಾರ್ಥಕವಾಗುತ್ತದೆ. ಆದದ್ದರಿಂದ ಮನಸ್ಸಿನಲ್ಲಿ ಭಗವಂತನ

ಸ್ಮರಣೆಯನ್ನು, ಮಹಿಮೆಯನ್ನು ಸರ್ವದಾ ಧರಿಸಿರಬೇಕು. ಆಗ ಯಾವ ಕಾರ್ಯ ಮಾಡಿದರೂ ಸಾಂಗವಾಗಿ ನಡೆಯುತ್ತದೆ. ಹೀಗೆ ಧ್ಯಾನವೂ ಕರ್ಮದಂತೆ ಮುಖ್ಯ ಸಾಧನ.

ಜ್ಞಾನ–ವಿಜ್ಞಾನ

> ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
> ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥

ಮನಸ್ಸು ತೃಪ್ತಿಗೊಂಡಿರುವುದಕ್ಕೆ ಎರಡು ಬಗೆಯ ಬುದ್ಧಿಸಂಪತ್ತಿರಬೇಕು. ಒಂದು ಜ್ಞಾನ, ಇನ್ನೊಂದು ವಿಜ್ಞಾನ. ಜ್ಞಾನವೆಂದರೆ ಇಲ್ಲಿ ತತ್ತ್ವಜ್ಞಾನ. ಅದು ಬುದ್ಧಿಪರಿಶ್ರಮದಿಂದ ಸಂಪಾದಿಸಿಕೊಂಡ ತಿಳಿವಳಿಕೆ; ಗ್ರಂಥ, ಉಪದೇಶ ಮೊದಲಾದವುಗಳಿಂದ ಬರತಕ್ಕದ್ದು; ವಿಜ್ಞಾನವೆಂದರೆ ತಿಳಿದ ತಿಳಿವಳಿಕೆಯನ್ನು ಕಾರ್ಯರೂಪದಲ್ಲಿ ಅನುಭವಕ್ಕೆ ತಂದುಕೊಳ್ಳುವುದು. ಜ್ಞಾನದ ಅನುಭವ ವಿಜ್ಞಾನ. ಒಂದು Theory, ಬುದ್ಧಿವೃತ್ತಿ; ಇನ್ನೊಂದು Practice, ಪ್ರಯೋಗವೃತ್ತಿ. ಈ ಎರಡನ್ನೂ ಸಂಪಾದಿಸಿ ಕೊಂಡು ಇಂದ್ರಿಯಗಳ ಉಪಟಳಕ್ಕೊಳಗಾಗದಿರಬೇಕು. ಹಾಗಿರುವವನೇ “ತೃಪ್ತಾತ್ಮಾ.” ದೇಹಾದಿ ಆತ್ಮೇತರ ವಸ್ತುಗಳಿಂದ ಯಾರು ಬೇರೆಯಾಗಿರುತ್ತಾನೋ ಅವನು “ಕೂಟಸ್ಥಃ ವಿಜತೇಂದ್ರಿಯ”. “ಕೂಟಸ್ಥಃ” ಎಂದರೆ ಬೇರೆಯಾಗಿ, ಪೃಥಕ್ಕಾಗಿ ಇರುವುದು, ಮತ್ತು ಕಮ್ಮಾರನ ಅಡಿಗಲ್ಲಿನಂತೆ ಅವಿಕಾರ್ಯವಾಗಿರುವುದು. (Milton) ಮಿಲ್ಟನನ್ನು ಕುರಿತು (Wordsworth) ವರ್ಡ್ಸ್‌ವರ್ತ್ ಹೇಳುವಂತೆ–

Thy soul was like a star and dwelt apart.

ನಕ್ಷತ್ರದಂತೆ ಕಾಂತಿ ಬೆರೆಯಬೇಕು, ವ್ಯಕ್ತಿ ಬೇರೆಯಾಗಿರಬೇಕು. ಹಿಂದೆಯೇ ಹೇಳಿದ ಹಾಗೆ “ಪದ್ಮಪತ್ರಮಿವಾಂಭಸಾ” –ಲೋಕದಲ್ಲಿದ್ದೂ ಅದಕ್ಕೆ ಸೇರಿಕೊಳ್ಳದ ಇರಬೇಕು. ಅದು ಕೂಟಸ್ಥತೆ. ಹಾಗಿರುವವನೇ “ಯುಕ್ತನು,” –ಯೋಗಯುಕ್ತನು; ಹೊನ್ನೂ ಮಣ್ಣೂ ಅವನ ಪಾಲಿಗೆ ಒಂದೇ.

ಧ್ಯಾನವಿಧಾನ

ಯೋಗಿಯಾದವನು ಇಂದ್ರಿಯಗಳನ್ನು ಸ್ವಾಧೀನಕ್ಕೆ ತಂದುಕೊಂಡು ಆತ್ಮ ಯಾವುದು, ಅನಾತ್ಮ ಯಾವುದು ಎನ್ನುವ ತಿಳಿವಳಿಕೆಯನ್ನು ಸಂಪಾದಿಸಿ ಅದನ್ನು ಸಾಧ್ಯವಾದ ಮಟ್ಟಿಗೆ ಲೋಕಾನುಭವದಲ್ಲಿ ಆಚರಣೆಗೆ ತಂದುಕೊಂಡು ಉಪಶಾಂತನಾಗಿರುತ್ತಾನೆ.

> ಯೋಗೀ ಯುಂಜೀತ ಸತತಂ ಆತ್ಮಾನಂ ರಹಸಿ ಸ್ಥಿತಃ ।
> ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥

ಅವನು ಆತ್ಮವಸ್ತುವಿನಲ್ಲಿಯೇ ಮನಸ್ಸನ್ನು ಸೇರಿಸುತ್ತಿರುತ್ತಾನೆ. ಮನಸ್ಸನ್ನು ಹದ್ದಿನಲ್ಲಿರಿಸಿಕೊಂಡಿರುತ್ತಾನೆ. ಸಂಪಾದನೆಯ ಚಿಂತೆ, ಉಪಭೋಗದ ಚಿಂತೆ ಅವನಿಗಿಲ್ಲ. ರಹಸ್ಯ ಸ್ಥಲದಲ್ಲಿ ಒಬ್ಬನೇ ಕುಳಿತು ಆತ್ಮಸ್ವರೂಪವನ್ನು ಚಿಂತಿಸುತ್ತ ಧ್ಯಾನಮಗ್ನನಾಗಿರುತ್ತಾನೆ.

> ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
> ಉಪವಿಶ್ಯಾಽಽಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥

ಧ್ಯಾನಮಾಡುವ ಸ್ಥಳ ಶುಚಿಯಾಗಿರಬೇಕು. ಕೂಡುವ ಪೀಠ ಭದ್ರವಾಗಿರಬೇಕು. ತುಂಬ ಎತ್ತರವಾಗಿರಬಾರದು, ತುಂಬ ತಗ್ಗಾಗಿಯೂ ಇರಬಾರದು. ಅಲ್ಲಿ ಗಾಳಿ ಬೆಳಕುಗಳ ಹೊಡೆತ ಹೆಚ್ಚಾಗಿಲ್ಲದೆ ಮೃದುವಾಗಿರಬೇಕು. ಇಂಥಾ ಕಡೆ ಕುಳಿತು ಮನಸ್ಸನ್ನು ಏಕಾಗ್ರವನ್ನಾಗಿ ಮಾಡಬೇಕು.

ಕುಳಿತುಕೊಂಡು ಮಾಡಬೇಕೆನ್ನುತ್ತಾರೆ ಯೋಗಾಭ್ಯಾಸವನ್ನು. “ಆಸೀನಸ್ಸಂಭವಾತ್” ಎಂದು ಬ್ರಹ್ಮಸೂತ್ರದಲ್ಲಿಯೂ ಹೇಳಿದೆ. ನಡೆದುಕೊಂಡು ಏಕೆ ಮಾಡಬಾರದು? ಸಾಧ್ಯವಿದ್ದರೆ ಆಗಬಹುದು. ಸಾಧ್ಯವಲ್ಲ ಅಷ್ಟೆ. ನಡೆಯುವ ವೇಳೆಗೆ ಕಾಲು ಎಲ್ಲಿಡುತ್ತೇವೋ ಎಂಬ ಯೋಚನೆ ಇರುತ್ತದೆ. ಮಲಗಿಕೊಂಡು ಮಾಡುತ್ತೇವೆಂದರೆ ನಿದ್ರೆ ಬಂದುಬಿಡುತ್ತದೆ. ನೆಮ್ಮದಿಯಿಂದ ಕುಳಿತುಕೊಂಡು ಮಾಡಬೇಕು. “ಯತ್ರೈಕಾಗ್ರತಾ ತತ್ರಾವಿಶೇಷಾತ್.” ಎಲ್ಲಿ ಕುಳಿತುಕೊಂಡರೆ ಮನಸ್ಸು ಏಕಾಗ್ರತೆಯನ್ನು ಪಡೆಯುತ್ತದೆಯೋ ಅಲ್ಲಿ ಕುಳಿತುಕೊಳ್ಳಬೇಕು.

ಮನಸ್ಸಿಗೆ ನೆಮ್ಮದಿ ತರುವಂಥ ಜಾಗದಲ್ಲಿ –ಮನಸ್ಸು ಬೇರೆ ಕಡೆ ಹೋಗುವ ಸಂಭವ ಎಲ್ಲಿ ಕಡಮೆಯೋ ಅಲ್ಲಿ–ಕುಳಿತುಕೊಳ್ಳಬೇಕು.

ಭೋಗಪರಿಮಿತಿ

ಧ್ಯಾನನಿಷ್ಠನಾಗುವವನು ಆಹಾರ ವಿಹಾರಾದಿಗಳಲ್ಲಿ ವೀರವ್ರತಗಳನ್ನು ಹಿಡಿಯಬೇಕಾದದ್ದಿಲ್ಲ. ಕೂಡುವುದರಲ್ಲಿ ಶ್ವಾಸಾದಿ ದೇಹಕ್ರಿಯೆಗಳಿಗೆ ಪ್ರತಿಕೂಲವಾಗದಂತೆಯೂ ಅಂಗಾಂಗಹಿಂಸೆಯಾಗದಂತೆಯೂ ಇರಬೇಕು. ಆಹಾರ ನಿದ್ರೆ ಜಾಗರಣೆ ಎಲ್ಲದರಲ್ಲೂ ಒಂದು ಯುಕ್ತವಾದ ಪರಿಮಾಣವುಂಟು. ಆ ಮಿತಿಗೊಳಪಟ್ಟು ನಡೆಯುತ್ತಾನೆ ಯೋಗಿ. ಮಿತ ಎಂದರೆ ಎಷ್ಟಾದರೆ ಮನಃಸ್ವಾಸ್ಥ್ಯಕ್ಕೆ ಅನುಕೂಲವೋ ಅಷ್ಟು: ಅಷ್ಟಕ್ಕಿಂತ ಹೆಚ್ಚಲ್ಲ, ಅಷ್ಟಕ್ಕಿಂತ ಕಡಮೆಯೂ ಅಲ್ಲ.

> ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾನ್ತಮನಶ್ನತಃ ।
> ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥
> ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
> ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥

ಅತಿಭೋಜನ ಕೂಡದು; ಉಪವಾಸವೂ ಕೂಡದು. ಅತಿನಿದ್ರೆ ಕೂಡದು; ಜಾಗರಣೆಯೂ ಕೂಡದು. ಸಮಾಧಾನವಿರಬೇಕು, ಭೋಗಾತಿರೇಕ ಕೂಡದು.

ಲಕ್ಷ್ಯದ್ವಯ

ಇಲ್ಲಿ ಎರಡು ಲಕ್ಷ್ಯಗಳು: (೧) ಕಾರ್ಯದಕ್ಷತೆ, (೨) ಮನಸ್ಸಮಾಧಾನ. ಧರ್ಮಾಚರಣೆಯಲ್ಲಿ ಮುಖ್ಯ ಲಕ್ಷಣ ಯಾವುದೆಂದು ಧರ್ಮರಾಯನನ್ನು ಯಕ್ಷ ಕೇಳಿದ್ದಕ್ಕೆ ಅವನು ಹೇಳುತ್ತಾನೆ: “ದಾಕ್ಷ್ಯಮೇಕಪದಂ ಧರ್ಮಂ.” ಕಾರ್ಯದಕ್ಷತೆಯಿದ್ದಲ್ಲಿ ಧರ್ಮ ಸಾಧ್ಯತೆ. ಜಾಗರಣೆ, ಅತಿನಿದ್ರೆ, ಉಪವಾಸ, ಹೊಟ್ಟೆ ಬಿರಿಯ ಊಟ ಮಾಡೋಣ ಇವೆಲ್ಲ ಮನಸ್ಸಮಾಧಾನಕ್ಕೆ ಬಾಧಕಗಳು.

ಭುಕ್ತಿರಕ್ತಿಗಳು ಈ ಎರಡು ಲಕ್ಷ್ಯಗಳಿಗೂ ಬಾಧೆ ತಾರದಂತೆ ಇರಬೇಕು. “ಬಾಧೆತಾರದಂತೆ” ಎಂಬುದು ಎಷ್ಟು ಮುಖ್ಯವೋ “ಇರಬೇಕು” ಎಂಬುದೂ ಅಷ್ಟೇ ಮುಖ್ಯ. ದೇಹೇಂದ್ರಿಯ ಮನಸ್ಸುಗಳನ್ನು ಹದ್ದಿನಲ್ಲಿರಿಸಬೇಕೇ ಹೊರತು ಕೊಲ್ಲಬಾರದು. ಅವನ್ನು ಒಂದಷ್ಟು ದೂರ ಅನುಸರಿಸಿದರೇನೆಯೇ ಅವು ವಿಧೇಯವಾಗುವುದು. ಅವುಗಳನ್ನು ಹೆಚ್ಚು ಅದುಮ ಯತ್ನಿಸಿದರೆ ಅವು ದಂಗೆಯೆದ್ದು ಮನಸ್ಸನ್ನು ಚದರಿಸಿ ಚೂರುಚೂರು ಮಾಡಿಯಾವು. ಆಗ ಧ್ಯಾನ ಅಸಾಧ್ಯವಾಗುತ್ತದೆ; ಲೋಕಕಾರ್ಯ ಅಸಾಧ್ಯವಾಗುತ್ತದೆ. ಸಮಾಧಾನವಿಲ್ಲದ ಮನಸ್ಸಿಗೆ ವಿವೇಕ ದೂರವಾಗುತ್ತದೆ.

ಕಾರ್ಯದಕ್ಷತೆ, ಮನಸ್ಸಮಾಧಾನ–ಇವೆರಡೂ ಬೇಕಾದದ್ದು ಜ್ಞಾನಾರ್ಥಿಗೆ ಮಾತ್ರವಲ್ಲ, ಯೋಗಿಗೆ ಮಾತ್ರವಲ್ಲ; ಅಂಥ ಧೀರರಲ್ಲದ ನಮ್ಮಂಥವರಿಗೂ ಅವು ಬೇಕಾದ ಗುಣಗಳೇ. ಅವು ನಮ್ಮ ಲೋಕವ್ಯಾಪಾರಗಳಲ್ಲಿ ತಕ್ಕಷ್ಟು ಇಲ್ಲದ್ದರಿಂದಲೇ ಮನುಷ್ಯನ ಪಾಡು ಈಗಿನಂತೆ ಇದೆ. ಚಿತ್ತಸ್ವಾಸ್ಥ್ಯವನ್ನು ಸಂಪಾದಿಸಿದ ಬಳಿಕ ಧ್ಯಾನ ಯೋಗ.

> ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
> ಸಂಕಲ್ಪಪ್ರಭವಾನ್ ಕಾಮಾನ್ ತ್ಯಕ್ತ್ವಾ ಸರ್ವಾನಶೇಷತಃ ।
> ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥
> ಶನೈಃ ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ ।
> ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥

ಯಾವಾಗ ಮನಸ್ಸು ಅತ್ತಿತ್ತ ಚಲಿಸುವುದು ನಿಂತು, ಏಕಾಗ್ರಕ್ಕೆ ಬಂದು ನಿಶ್ಚಲವಾಗಿ ನಿಲ್ಲುತ್ತದೋ ಆಗ ಯೋಗಯೋಗ್ಯತೆ. ಆವರೆಗೆ ನಮಗೆ ಯೋಗಾರ್ಹತೆಯಿಲ್ಲ. ನಾನಾ ಸಂಕಲ್ಪಗಳಿಗೂ ಮೂಲವಾದ ಕಾಮನೆಗಳನ್ನು ಪೂರ್ತಿಯಾಗಿ ತ್ಯಜಿಸಿ, ಸರ್ವೇಂದ್ರಿಯಗಳನ್ನೂ ಜಿತಮನಸ್ಸಿನಿಂದ ತಡೆದಿಟ್ಟು, ದೃಢಬುದ್ಧಿಯಿಂದ ಕೊಂಚಕೊಂಚವಾಗಿ ಸಮಾಧಾನವನ್ನು ತಂದುಕೊಳ್ಳುತ್ತ, ಆತ್ಮತತ್ತ್ವದಲ್ಲಿ ಮನಸ್ಸನ್ನು ನೆಲೆಗೊಳಿಸಿ, ಬೇರಾವುದನ್ನೂ ಸ್ಮರಣೆಗೆ ತಂದುಕೊಳ್ಳದೆ ಇರಬೇಕು. ಇದು ಪರಮಾತ್ಮಧ್ಯಾನಯೋಗ.

ಧ್ಯಾನಯೋಗಪ್ರಕಾರಗಳು

ನಮ್ಮಲ್ಲಿ ಬಹುಮಂದಿಗೆ ಪರಮಾತ್ಮನೆಂಬುದು ದೂರದ ವಸ್ತು. ಅದನ್ನು ಊಹಿಸುವುದು ಕೂಡ ನಮಗೆ ಸುಲಭವಲ್ಲ. ಆದರೆ ಆತ್ಮದರ್ಶನದಲ್ಲಿ ನಮಗೂ ಅಭಿಲಾಷೆಯುಂಟು. ಆದದ್ದರಿಂದ ಆತ್ಮದರ್ಶನಕ್ಕೆ ಕ್ರಮೇಣ ಸಾಧಕವಾಗಬಹುದಾದ ಒಂದು ಸಾಮಾನ್ಯ ಧ್ಯಾನಮಾರ್ಗ ನಮಗೂ ಅವಶ್ಯವಾಗಿದೆ. ಈ ಮೇಲಣ ವಾಕ್ಯದಲ್ಲಿ

ಆತ್ಮಸಂಸ್ಥಂ ಮನಃ ಕೃತ್ವಾ

ಎಂದಿರುವುದರಲ್ಲಿ ಆತ್ಮಶಬ್ದಸ್ಥಾನದಲ್ಲಿ ನಮಗೆ ಇಷ್ಟವಾದ ಸುಲಭವಾದ ಒಂದು ದೇವತಾ ಮೂರ್ತಿಯ ಹೆಸರನ್ನು ನಾವು ಇರಿಸಿಕೊಳ್ಳಬಹುದು: “ದೇವಸಂಸ್ಥಂ ಮನಃ ಕೃತ್ವಾ”, “ವಿಷ್ಣುಸಂಸ್ಥಂ ಮನಃ ಕೃತ್ವಾ”, “ಶಂಭುಸಂಸ್ಥಂ ಮನಃ ಕೃತ್ವಾ”, “ರಾಮಸಂಸ್ಥಂ ಮನಃ ಕೃತ್ವಾ”, “ಕೃಷ್ಣಸಂಸ್ಥಂ ಮನಃ ಕೃತ್ವಾ”, “ವಾಣೀಸಂಸ್ಥಂ ಮನಃ ಕೃತ್ವಾ”, “ಲಕ್ಷ್ಮೀಸಂಸ್ಥಂ ಮನಃ ಕೃತ್ವಾ”, “ಗೌರೀಸಂಸ್ಥಂ ಮನಃ ಕೃತ್ವಾ” –ಈ ರೀತಿಯಾಗಿ ನಮ್ಮ ಇಷ್ಟದೇವತೆಯ ರೂಪದ ಧ್ಯಾನದಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಸಾಮಾನ್ಯವಾಗಿ ವಿನಾಯಕವ್ರತ ಮೊದಲಾದ ಸಮಸ್ತ ಪೂಜಾಕಾಲಗಳಲ್ಲಿಯೂ, ಗಾಯತ್ರೀಜಪ ಮೊದಲಾದ ಸಮಸ್ತ ಜಪ ಕಾಲಗಳಲ್ಲಿಯೂ ಪ್ರಥಮದಲ್ಲಿ ಧ್ಯಾನಶ್ಲೋಕವನ್ನು ಹೇಳುವುದು ಪ್ರಾಚೀನಪದ್ಧತಿ. ಅದರ ಉದ್ದೇಶ ಒಂದು ದೈವಮೂರ್ತಿಯ ಸ್ಮರಣೆ, ಮತ್ತು ಆ ಮೂಲಕ ಆ ದೇವತಾಮಾಹಾತ್ಮ್ಯದಲ್ಲಿ–ಅದರ ಅದ್ಭುತ ಶಕ್ತಿ ಗುಣ ಮಹಿಮೆಗಳಲ್ಲಿ–ಮನಸ್ಸನ್ನು ತಲ್ಲೀನಮಾಡಿಸುವುದು. ಗಾಯತ್ರೀಧ್ಯಾನದಲ್ಲಿ “ಮುಕ್ತಾವಿದ್ರುಮ......” ಸೂರ್ಯಪ್ರಾರ್ಥನೆಯಲ್ಲಿ “ಧ್ಯೇಯಃ ಸದಾ ಸವಿತೃಮಂಡಲ...” ಇತ್ಯಾದಿ.

ಇದು ಧ್ಯಾನಯೋಗದಲ್ಲಿ ಪ್ರಥಮ ಪಾಠ.

ಧ್ಯಾನಯೋಗದ ಪ್ರಕಾರವನ್ನು ನಾವು ಅನುಭವಶಾಲಿಗಳಿಂದಲೇ ತಿಳಿಯಬೇಕು. ಉಪನ್ಯಾಸ ವ್ಯಾಖ್ಯಾನಗಳಿಂದ ಆ ರಹಸ್ಯವನ್ನು ಕಲಿಯುವುದು ಸಾಧ್ಯವಿಲ್ಲ. ಧ್ಯಾನದ ರಹಸ್ಯವೆಂದರೆ ಮನಸ್ಸನ್ನು ಹದಗೊಳಿಸುವ ಉಪಾಯ. ಆ ಉಪಾಯ ಒಂದೊಂದು ಜೀವದ ಮನಸ್ಸಿಗೆ ಒಂದೊಂದು ತೆರನಾಗಿರುತ್ತದೆ. ಕೆಲವು ಮಕ್ಕಳು ಪೆಪ್ಪರ್ಮಿಂಟಿಗೆ ಒಲಿಯುತ್ತಾರೆ. ಇನ್ನು

ಕೆಲವರಿಗೆ ಬೆತ್ತದ ದರ್ಶನವೇ ಬೇಕು. ಎಲ್ಲ ಮನಸ್ಸುಗಳಿಗೂ ಒಂದೇ ನಿಯಮ ಅನ್ವಯಿಸಲಾರದು. ಅನುಭವಸ್ಥರು ತಮ್ಮ ಅನುಭವವನ್ನು ತಿಳಿಸಿದರೆ ಅದರಿಂದ ಒಂದಿಷ್ಟು ಮಾರ್ಗಸೂಚನೆ ದೊರಕಬಹುದು. ನಾನು ಅನುಭವಿಯಲ್ಲ. ಇತರರಿಂದ ಕಿವಿಯ ಮೂಲಕ ಮಾತ್ರ ಕೇಳಿರುವ ಒಂದೆರಡು ಮಾತನ್ನು ಹೇಳುತ್ತೇನೆ.

ಧ್ಯಾನಸಾಧನಗಳು

ಧ್ಯಾನ ಮಾಡುವವರು ಸಾಧ್ಯವಾದ ಮಟ್ಟಿಗೂ–

1. ಒಂದು ಸ್ಥಳ,
2. ಒಂದು ಕಾಲ,
3. ಒಂದು ಮೂರ್ತಿ,
4. ಒಂದು ಮಂತ್ರ ಅಥವಾ ಮಹಾವಾಕ್ಯ,

ಈ ನಾಲ್ಕನ್ನು ಗೊತ್ತುಮಾಡಿಕೊಳ್ಳಬೇಕು. ದಿವಸದ ಇಪ್ಪತ್ತನಾಲ್ಕು ಘಂಟೆಗಳಲ್ಲಿ ಕಾಲು ಘಂಟೆಯನ್ನಾದರೂ ಇದಕ್ಕೆ ಮೀಸಲಾಗಿಡಬೇಕು. ಪ್ರಾತಃಕಾಲವಾದರೆ ಉತ್ತಮ. ಅದು ಸಾಧ್ಯವಿಲ್ಲದಿದ್ದರೆ ರಾತ್ರಿ ಆಗಬಹುದು. ಮನಸ್ಸು ನೆಮ್ಮದಿಯಾಗಿರುವುದು ಮುಖ್ಯ. ಕಾಲವೂ ಜಾಗವೂ ಒಂದು ಗೊತ್ತಾದದ್ದಾಗಿದ್ದರೆ ಮನಸ್ಸು ತಾಳಿಕೊಳ್ಳಬೇಕಾದ ಆಕಾರಭಾವವನ್ನು – Mood, Attitude– ಸುಲಭವಾಗಿ ತಾಳಿಕೊಳ್ಳಲಾಗುತ್ತದೆ. ಅಭ್ಯಾಸವಿಲ್ಲದ ಹೊತ್ತಿನಲ್ಲಿ ಅಥವಾ ಅಭ್ಯಾಸವಾಗದ ಜಾಗದಲ್ಲಿ ಆ ಮನೋಭಾವ ಬರುವುದು ಅಷ್ಟು ಸುಲಭವಲ್ಲ. ಸದ್ದುಗದ್ದಲವಿಲ್ಲದೆ, ಇತರರ ಹಾರಾಟಗಳು ಚೇಷ್ಟೆಗಳೂ ಇಲ್ಲದ ಕಡೆ, ಶುಚಿಯಾಗಿ ಕುಳಿತು, ಇಷ್ಟದೈವದ ಮೂರ್ತಿಯ ಮೇಲೆ ದೃಷ್ಟಿ ನಿಲ್ಲಿಸಿ, ಆ ಮೂರ್ತಿಯ ಕಥಾವಿಶೇಷಗಳನ್ನೂ ಗುಣಮಹಿಮೆಗಳನ್ನೂ ನೆನಪಿಗೆ ತಂದುಕೊಂಡು ಮನಸ್ಸಿನಿಂದ ಅದನ್ನೇ ಚಿಂತಿಸುತ್ತಿರಬೇಕು. ಪೂಜೆಮಾಡಬೇಕೆಂದೆನಿಸಿದರೆ ಸುಲಭವಾದಷ್ಟು ಪೂಜಾಕಾರ್ಯವನ್ನು ಮಾಡಬಹುದು. ಆದರೆ ಪೂಜೆಯೆಂದಾರಂಭಿಸಿ ಹೂವು ನೈವೇದ್ಯಗಳ ಅವಾಂತರದಿಂದ ಮನಸ್ಸು ಬೇರೊಂದೆಡೆಗೆ ಹೋಗುವಂತೆ ಆಗಬಾರದು. ಮಂತ್ರ ಜಪಗಳನ್ನು ಗಟ್ಟಿಯಾಗಿ ಕೂಡ ಮಾಡತಕ್ಕದ್ದಲ್ಲ: ಏಕೆಂದರೆ ಕೂಗು ಮನಸ್ಸನ್ನು ಬಹಿರಂಗಪಡಿಸುತ್ತದೆ. ಧ್ಯಾನಗಳಲ್ಲೆಲ್ಲಾ ಮೌನದ ಧ್ಯಾನವೇ ಶ್ರೇಷ್ಠವಾದುದು. ಆದದ್ದರಿಂದಲೇ ಯೋಗಿಗಳನ್ನು “ಮೌನಿ” ಗಳೆನ್ನುವುದು.

ಹಾಗಾದರೆ ಭಜನೆ ಸಂಕೀರ್ತನೆಗಳು ತಪ್ಪೊ? ತಪ್ಪಲ್ಲ. ಅವು ಪ್ರಯೋಜಕಗಳೇ, ಆದರೆ ಆ ಪ್ರಯೋಜನ ಕೊಂಚಮಟ್ಟಿನದು. ಭಜನೆ ಕೀರ್ತನೆಗಳು ಮನಸ್ಸಿಗೆ ಒಂದು ಉನ್ನತ

ಭಾವಾವೇಶವನ್ನು ತರುತ್ತವೆ. ಆ ಆವೇಶ ಬಂದಬಳಿಕ ಅದು ಫಲಕ್ಕೆ ಬರುವುದು ಏಕಾಂತಧ್ಯಾನದಿಂದ.

ಧ್ಯಾನಾಭ್ಯಾಸ ನಮ್ಮಲ್ಲಿ ಪ್ರತಿಯೊಬ್ಬರಿಗೂ–ಹೆಂಗಸರಿಗೂ ಸಹ–ಅಷ್ಟಿಷ್ಟಾದರೂ ಸಾಧ್ಯವೆಂದು ನನಗೆ ತೋರುತ್ತದೆ. ಅದಕ್ಕೆ ಬೇರೆ ಯಾವ ಹೊತ್ತೂ ಅನುಕೂಲಿಸದಿದ್ದರೂ ರಾತ್ರಿ ಮಲಗುವ ಮುಂಚೆ, ಅಥವಾ ಬೆಳಗ್ಗೆ ದಿನಚರಿಗೆ ಹೊರಡುವ ಮುಂಚೆ–ಹಾಸಿಗೆಯ ಪಕ್ಕದಲ್ಲಿಯೇ–ಒಂದೈದು ನಿಮಿಷವಾದರೂ ಬಿಡುವುಮಾಡಿಕೊಳ್ಳಲಾಗದವರು ಯಾರೂ ಇರಲಾರರು. ಆ ಐದು ನಿಮಿಷವನ್ನು ದೈವಧ್ಯಾನಕ್ಕಾಗಿ ವಿನಿಯೋಗಿಸಿದರೆ ಅದು ಅಂದಿನ ಚಿತ್ತ ಶುದ್ಧಿಗೂ ಅಂದಿನ ಶಾಂತಿಸಮಾಧಾನಕ್ಕೂ ಅನುಕೂಲವಾಗುವುದಲ್ಲದೆ ಅಭ್ಯಾಸವನ್ನು ದೃಢಪಡಿಸುತ್ತದೆ.

ಭಗವದ್ಧ್ಯಾನದಲ್ಲಿ ಬಹುಕಾಲ ತದೇಕನಿಷ್ಠರಾಗಿರಬಲ್ಲವರು ಯೋಗಿಗಳು. ನಮಗೆ ಆ ದೀರ್ಘನಿಷ್ಠೆ ದುರ್ಲಭ. ನಮ್ಮ ಮನಸ್ಸು ಒಂದು ಕ್ಷಣ ಮಾತ್ರ ಭಗವಂತನಲ್ಲಿ ನಿಂತರೆ ಅದೇ ದೊಡ್ಡ ಪುಣ್ಯ. ನನ್ನ ಹಿರಿಯರೊಬ್ಬರು “ಒಂದು ಎಮ್ಮೆ ತೊಳೆದೇನು, ಒಂದು ಸಾಲಿಗ್ರಾಮ ತೊಳೆಯುವುದು ನನಗೆ ಬಹುಕಷ್ಟ” ಎನ್ನುತ್ತಿದ್ದರು. ಇನ್ನೊಬ್ಬ ಹಿರಿಯರು “ಲೌಕಿಕ ವಿಷಯವನ್ನು ಕುರಿತು ಗಂಟೆಗಟ್ಟಲೆ ತದೇಕಧ್ಯಾನವಾಗುತ್ತದೆ. ಪೂಜೆಗೆಂದು ಕುಳಿತಿರುವ ಅರ್ಧಗಂಟೆಯೊಳಗಾಗಿ ಅರ್ಧ ನಿಮಿಷವಾದರೂ ನನ್ನ ಮನಸ್ಸು ನಿಲ್ಲೆನೆನ್ನುತ್ತದೆ” –ಎಂದು ಹೇಳುತ್ತಿದ್ದರು. ಲೋಕವಸ್ತುವು ಕಾಮವನ್ನೋ ಕ್ರೋಧವನ್ನೋ ಕೆರಳಿಸಿ, ಆ ಬಲೆಯಿಂದ ನಮ್ಮ ಮನಸ್ಸನ್ನು ಹಿಡಿದಿರಿಸಿಕೊಳ್ಳುತ್ತದೆ. ಭಗವನ್ನಿಷ್ಠೆಗೆ ಅಂಥಾ ಹೊರಗಣ ಆಕರ್ಷಣೆ ಇಲ್ಲ. ಅದು ನಮ್ಮೊಳಗಣ ಕಾರ್ಯ. ನಮ್ಮ ದೃಢಪ್ರಯತ್ನ ಅದಕ್ಕೆ ಅವಶ್ಯ. “ಉದ್ಧರೇದಾತ್ಮನಾಽಽತ್ಮಾನಮ್”. ಆದದ್ದರಿಂದಲೇ ಅದು ಕಷ್ಟ. ಕಷ್ಟವಾದದ್ದನ್ನು ಸಾಧಿಸಿದ್ದೇ ಸಾಧನೆ. ಸುಲಭವಾದದ್ದರಲ್ಲಿ ಸಾಧನೆಯೇನು?

ಈ ರೀತಿಯ ಧ್ಯಾನವಿಲ್ಲದೆ ಭಗವದ್ಗೀತೆಯನ್ನು ಅರ್ಥಮಾಡಿಕೊಳ್ಳುವುದು ಯಾರಿಗೂ ಸಾಧ್ಯವಾಗದು. ಅನುಭವವೇ ಜ್ಞಾನ. ಸ್ವಾನುಭವವೇ ಅನುಭವ. ಪುಸ್ತಕದಿಂದ ಬಂದ ಜ್ಞಾನ ಸಮ್ಯಗ್‌ಜ್ಞಾನವಲ್ಲ. ಅದು ಕೊಂಚಮಾತ್ರದ ಜ್ಞಾನ, ಅಷ್ಟೆ. ಪುಸ್ತಕಜ್ಞಾನವು ಜ್ಞಾನದ ಒಂದು ಅಂಶಪ್ರಭೇದ. ಸಂಪೂರ್ಣವಾದ ಜ್ಞಾನವು ಅನುಭವದ್ದು. ಆ ಅನುಭವ ಬರಬೇಕಾದರೆ ಮನಸ್ಸು ಪಕ್ವವಾಗಬೇಕು. ಮನಸ್ಸು ಪಕ್ವವಾಗುವುದಕ್ಕೆ ಕರ್ಮಜ್ಞಾನಗಳೆರಡೂ ದಾರಿಗಳು:

ಎರಡೂ ಬೇಕು. “ಯಾವದ್ಯಾವತ್ಕರ್ಮಭ್ಯ ಉಪರಮತೇ ತಾವತ್ತಾವನ್ನಿರಾಯಾಸಸ್ಯ ಜಿತೇಂದ್ರಿಯಸ್ಯ ಚಿತ್ತಂ ಸಮಾಧೀಯತೇ ।” ; “ನೈತಾದೃಶಂ ಬ್ರಾಹ್ಮಣಾಸ್ಯಾಸ್ತಿ ವಿತ್ತಂ ಯಥೈಕತಾ ಸಮತಾ ಸತ್ಯತಾ ಚ ।... ತತಸ್ತತ ಶ್ಚೋಪರತಿಃ ಕ್ರಿಯಾಭ್ಯಃ ॥” ಮನಸ್ಸನ್ನು ಉಪರಮ ಮಾಡಬೇಕೆನ್ನುತ್ತಾರೆ. ಉಪರಮವೆಂದರೆ ಕರ್ಮದ ಚಿಂತೆ ಕಳವಳಗಳಿಂದ ಬಿಡಿಸಿಕೊಳ್ಳುವುದು. ಕರ್ಮಗಳನ್ನು ಮಾಡಲೂ ಬೇಕು, ಕರ್ಮಗಳಿಂದ ಬಿಡಿಸಿಕೊಳ್ಳಲೂ ಬೇಕು: ಎರಡೂ ಬೇಕು. ಒಂದು ಘಳಿಗೆ ಇದು: ಒಂದು ಘಳಿಗೆ ಅದು.

ಆತ್ಮಜ್ಞಾನಿ ಎಂಥವನು?

ಆತ್ಮಧ್ಯಾನ ಮಾಡಿ ಸಫಲವಾದ ಧ್ಯಾನಿಯ ಲಕ್ಷಣವನ್ನು ಭಗವಂತ ವರ್ಣಿಸುತ್ತಾನೆ.

> ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
> ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರಸಮದರ್ಶನಃ ॥
> ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
> ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥
> ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
> ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥

ಸಮಸ್ತ ಪ್ರಾಣಿಗಳೂ ಸ್ವಾತ್ಮದ ವ್ಯಾಪ್ತಿಯ ಒಳಗೆ ಇವೆ. ಈ ತತ್ತ್ವವನ್ನು ಯೋಗಿಯಾದವನು ಅನುಭವಿಸುತ್ತ ಎಲ್ಲದರಲ್ಲಿಯೂ ಸಮಭಾವದಿಂದ ನಡೆದುಕೊಳ್ಳುತ್ತಾನೆ. ಸಮಭಾವ ಎಂಬುದರ ತಾತ್ಪರ್ಯವನ್ನು ಹಿಂದೆ ನೋಡಿದ್ದೇವೆ: ಬಾಹ್ಯಚರ್ಯೆಯಲ್ಲಿ ಯುಕ್ತಾಯುಕ್ತತಾರತಮ್ಯ, ಅಂತರಂಗದಲ್ಲಿ ಪ್ರೀತಿಯ ಸಮತೆ. ಭಗವದ್ವಸ್ತುವೇ ಎಲ್ಲವೂ; ಅದು ಸಮಾನವಾಗಿ ವ್ಯಾಪಿಸಿದೆ ಎಲ್ಲೆಡೆಯಲ್ಲಿಯೂ. ಒಂದು ಕಡೆ ನಿಬಿಡವಾಗಿದೆ, ಒಂದು ಕಡೆ ವಿರಳವಾಗಿದೆ ಎಂದು ಹೇಳುವಹಾಗಿಲ್ಲ. ಯೋಗಿಯ ಅಂತರಂಗದ ಪ್ರೀತಿ ಎಲ್ಲರಲ್ಲಿಯೂ ಸಮಾನವಾಗಿರುತ್ತದೆ. ಅವನು ಹೇಗೆ ಹೇಗಿದ್ದರೂ ಎಲ್ಲ ಅವಸ್ಥೆಗಳಲ್ಲಿಯೂ ಭಗವಂತನನ್ನು ಕುರಿತೇ ಎಲ್ಲೆಡೆಯೂ ನಡೆದುಕೊಳ್ಳುತ್ತಾನೆ; ಆತ್ಮೌಪಮ್ಯದಿಂದ ನಡೆಯುತ್ತಾನೆ. ಆತ್ಮೌಪಮ್ಯ ಎಂದರೆ ಮತ್ತೊಬ್ಬನು ತಾನೇ ಆಗಿದ್ದರೆ ಹೇಗೋ ಹಾಗೆ ಆ ಮನುಷ್ಯನ ವಿಷಯದಲ್ಲಿ ನಡೆದುಕೊಳ್ಳುವುದು. ಯಾರು ಸರ್ವಕಾಲ ಸರ್ವಾವಸ್ಥೆಗಳಲ್ಲೂ ಇತರರ ಸುಖ ದುಃಖಾದಿಗಳನ್ನು ತನ್ನದು ಆ ಸ್ಥಿತಿ, ತನ್ನದು ಆ ಗತಿ ಎಂಬಂತೆ ನೋಡಿಕೊಳ್ಳುತ್ತಾನೋ ಅವನು ಪರಮಯೋಗಿ. ಅವನು ಲೋಕದ ಸುಖದುಃಖಾದ್ಯನುಭವಗಳಲ್ಲಿ ಭಾಗಸ್ಥನಾಗುತ್ತಾನೆ. ಇದು ಭಗವದ್ವಾಕ್ಯ. ಅವನು ಲೋಕವನ್ನು ಕೈಬಿಡುವವನಲ್ಲ; ಪ್ರತ್ಯುತ, ಸರ್ವಭೂತಹಿತೇರತನು. ಅಂತರಂಗದಲ್ಲಿ ಅವನು ಜಗದ್ವ್ಯಾಪಾರಕ್ಕೆ ದೂರನು, ಬಹಿರಂಗದಲ್ಲಿ ಜಗಜ್ಜೀವನಸಹಕಾರಿ. ಅಂತರಂಗದಲ್ಲಿ ಅವನು ಆತ್ಮತತ್ತ್ವನಿಷ್ಠನು. ಆ ಕಾರಣದಿಂದಲೇ –ಆತ್ಮಸ್ವರೂಪಜ್ಞಾನವು ಅವನಲ್ಲಿ

ಪರಿಪೂರ್ಣವಾಗಿರುವ ಕಾರಣದಿಂದಲೇ–ಬಹಿರಂಗದಲ್ಲಿ ಸರ್ವತ್ರ ಆತ್ಮೌಪಮ್ಯದಿಂದ ನಡೆಯುವುದು ಅವನಿಗೆ ಸ್ವಭಾವವೇ ಆಗಿರುತ್ತದೆ. ಮಲ್ಲಿಗೆ ಹೂವಿಗೆ ಸುವಾಸನೆ ಹರಡುವುದು ಹೇಗೆ ನೈಜಗುಣವಿಕಾಸವೋ ಆತ್ಮೌಪಮ್ಯವರ್ತನೆ ಹಾಗೆ ಯೋಗಿಗೆ ಅಪ್ರಯತ್ನವಾಗಿ, ಸ್ವಾಭಾವಿಕವಾಗಿ ಬರುತ್ತದೆ. ಸಾಧಕನಿಗೆ ಆತ್ಮೌಪಮ್ಯ ವೃತ್ತಿಯು ಧರ್ಮವಿಧಿ; ಸಿದ್ಧನಿಗೆ ಅದು ಸ್ವಭಾವವಿಕಾಸ. ಆತ್ಮೌಪಮ್ಯದ ಮುಖ್ಯತೆ ಹೀಗೂ ಉಂಟು, ಹಾಗೂ ಉಂಟು. ಈ ಆತ್ಮೌಪಮ್ಯತತ್ತ್ವ ನಮ್ಮ ಸಮಸ್ತ ಲೋಕ ನೀತಿಗೂ ಸತ್ಸಂಪ್ರದಾಯಗಳಿಗೂ ಮೂಲಭೂತವಾದ ಸೂತ್ರ. ಇದನ್ನು ಶಾಸ್ತ್ರಗಳು ಬಹುವಿಧವಾಗಿ ಹೇಳಿವೆ:

> ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥
> ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿ ಲೋಷ್ಠವತ್ ॥
> ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ ॥

ಅಭ್ಯಾಸದಿಂದ ಸಿದ್ಧಿ

ಅರ್ಜುನನ ಮನಸ್ಸಿಗೆ ಈ ಆತ್ಮಾನುಸಂಧಾನದ ಉಪದೇಶದಲ್ಲಿ ತತ್ತ್ವಭಾಗ ಒಪ್ಪಿತೆಂದು ತೋರುತ್ತದೆ. ಅದರ ಪ್ರಯೋಗಭಾಗದಲ್ಲಿ ಮಾತ್ರ ಸಂದೇಹ ಉಳಿದಿತ್ತು.

> ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ।
> ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್ ॥

"ಕೃಷ್ಣ, ಮನಸ್ಸು ಚಂಚಲವಲ್ಲವೆ? ಅದು ಜೀವವನ್ನು ತಡೆದು ಅಲುಗಾಡಿಸಬಲ್ಲದ್ದಲ್ಲವೆ? ಗಾಳಿಯನ್ನು ಬಿಗಿಹಿಡಿದಿಡುವುದಾದೀತೇನಯ್ಯ?" –ಎನ್ನುತ್ತಾನೆ ಅರ್ಜುನ. ಭಗವಂತ ಹೇಳುತ್ತಾನೆ: "ಅದು ಕಷ್ಟವೇ ಸರಿಯಯ್ಯ, ಆದರೆ ಅಸಾಧ್ಯವಲ್ಲ." ಹೇಗೆ ಸಾಧ್ಯ?

> ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।
> ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥

ಪ್ರಯತ್ನಪಟ್ಟು ಉಪಾಯದಿಂದ ಮನಸ್ಸನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುತ್ತದೆ. ಧ್ಯಾನಾಭ್ಯಾಸ, ಭೋಗಭಾಗ್ಯವಿರಕ್ತಿ–ಇವೆರಡೂ ಅದಕ್ಕೆ ದಾರಿ.

ಇಲ್ಲಿ "ಅಭ್ಯಾಸ" ಎಂಬ ಮಾತನ್ನು ಗಮನವಿರಿಸಿ ನೋಡಬೇಕು. ಅಭ್ಯಾಸವೆಂದರೆ ಪುನಃಪುನಃ ಮಾಡುವುದು. ಪದೇ ಪದೇ ಮಾಡುವುದು ಎಂದರ್ಥ. ಹೀಗೆಂದರೆ ಏನು? ಹಾಗೆಂದರೆ ಸಾಧಿಸಬೇಕಾದದ್ದನ್ನು ಒಂದು ಕ್ಷಣದ ಮನಸ್ಸಾಹಸದಿಂದ ಸಾಧಿಸಲಾಗುವುದಿಲ್ಲ, ಬಹುಕಾಲದ ಸಂತತಪ್ರಯತ್ನದಿಂದ ಸಾಧಿಸಲಾಗುತ್ತದೆ ಎಂದು. ಕ್ಷಣವೆಂಬುದು ಉದ್ದವಾದ ಗೆರೆಯಲ್ಲಿ ಒಂದು ಬಿಂದು ಮಾತ್ರ. ಕಾಲವೆಂಬುದು ಆ ಕ್ಷಣಗಳ ಎಡೆಬಿಡದ ಸಾಲುಗೆರೆ. ಗೆರೆಯಲ್ಲಿ ಚುಕ್ಕೆಗಳು ಒಂದರ ಪಕ್ಕದಲ್ಲೊಂದು ಎಡೆಬಿಡದೆ ಸಾಗಿಕೊಂಡಿರುತ್ತವೆ. ವಿರಕ್ತಿಯೂ ಧ್ಯಾನವೂ ಹೀಗೆ ಸಂತತಧಾರೆಯಾಗಿ ಬಹು ಕಾಲ ಸಾಗಬೇಕು. ಎಷ್ಟು ಕಾಲ? ಜೀವದಲ್ಲಿರುವ ಸತ್ತ್ವಗುಣವು ತನ್ನನ್ನು ಅದುಮಿರುವ ತಮಸ್ಸು ರಜಸ್ಸುಗಳಿಂದ ಬಿಡಿಸಿಕೊಂಡು ಮೇಲಕ್ಕೆದ್ದು, ತಾನು ಅವುಗಳನ್ನು ಅದುಮುವಷ್ಟು ಪ್ರಬಲವಾಗಬೇಕು. ಈ ಸತ್ತ್ವ ಪ್ರಾಬಲ್ಯಕ್ಕೆ ಎಷ್ಟು ಕಾಲ ಬೇಕಾಗುತ್ತದೆಂಬುದನ್ನು ರಜಸ್ಸು ತಮಸ್ಸುಗಳ ರಾಶಿ ಎಷ್ಟು ದೊಡ್ಡದು

ಎಂಬುದರಿಂದ ಗೊತ್ತುಮಾಡಲಾಗುತ್ತದೆ. ಜೀವದಲ್ಲಿ ಆ ತ್ರಿಗುಣಗಳು ಯಾವ ಯಾವುದು ಎಷ್ಟೆಷ್ಟು ದೊಡ್ಡದಾಗಿ ಅಡಗಿಕೊಂಡಿದೆ ಎಂಬುದನ್ನು ಅಳೆದು ಹೇಳಬಲ್ಲವರಾರು? ಮನುಷ್ಯನ ಹೊರಗಡೆ ಅದನ್ನು ಅವನಿಗೆ ಹೇಳಬಲ್ಲವರು ಯಾರೂ ಇರರು. ಅವನ ಅಂತರಂಗವು ಅವರಿಗೆ ಕಾಣಿಸಲಾರದು. ಮತ್ತು ಹೊರಗಿನವರೊಬ್ಬರು ಅವನಿಗೆ ಅದನ್ನು ತಿಳಿಸಬೇಕಾದ ಆವಶ್ಯಕತೆಯೂ ಇಲ್ಲ. ಏಕೆಂದರೆ, ಅವನ ಒಳಗಡೆ ಸತ್ತ್ವವು ಪ್ರಬಲಿಸಿದ್ದು ಅವನಿಗೆ ತಾನಾಗಿಯೇ ತಿಳಿಯುತ್ತದೆ. ಸತ್ತ್ವವಿಕಾಸದ ವೇಳೆ ಎಂಥ ಅಸಂಸ್ಕೃತನಿಗೂ ಎಂಥ ದುಷ್ಕರ್ಮಿಗೂ ಎಂದೋ ಒಂದು ದಿನ ಬಂದೇ ಬರುತ್ತದೆ. ಸತ್ತ್ವವು ಲೇಶಮಾತ್ರವೂ ಇಲ್ಲದ ಮನುಷ್ಯಪ್ರಾಣಿ ಇಲ್ಲ. ಅದು ವಿಕಾಸಗೊಂಡಾಗ ಅವನ ಸುಯೋಗ. ಆಗಲೇ ಅವನು ಜಾಗರೂಕನಾಗಿರಬೇಕಾದದ್ದು. ಅಂಥ ಅಂತಸ್ಸತ್ತ್ವದ ಧ್ವನಿಯನ್ನೇ ಇಂಗ್ಲಿಷಿನಲ್ಲಿ “Inner voice” ಎಂದು ಕರೆಯುವುದು. ನಮ್ಮ ದೇಹದ ಕಿವಿಯನ್ನು ಮುಚ್ಚಿ ಮನಸ್ಸಿನ ಕಿವಿಯನ್ನು ತೆರೆದಾಗ ಆ ಅಂತರ್ಧ್ವನಿ ಕೇಳಬರುತ್ತದೆ. ಅದನ್ನು ಆಲಿಸಿ ಕೇಳಿ, ಕೇಳಿದ್ದನ್ನು ಪಟ್ಟಾಗಿ ಹಿಡಿದು, ಅಲ್ಲಿಂದ ಮುಂದಕ್ಕೆ ಆ ಮಾತಿನಂತೆ ನಡೆದರೆ ಅದು ಅಭ್ಯಾಸವಾಗುತ್ತದೆ. ಬಹುಕಾಲದ ವೈರಾಗ್ಯಾಭ್ಯಾಸ, ಧ್ಯಾನಾಭ್ಯಾಸಗಳಿಂದ ಮನಸ್ಸಿಗೆ ದಾರ್ಢ್ಯ ಬರುತ್ತದೆ. ಮನಸ್ಸು ದೃಢವಾದ ಮೇಲೆ ತತ್ತ್ವಾನುಸಂಧಾನವು ಸುಲಭವಾಗುತ್ತದೆ.

ಅರ್ಜುನ ಹೇಳಿದ: “ಹೌದು, ಕೃಷ್ಣ. ನನಗೇನೋ ಶ್ರದ್ಧೆಯುಂಟು. ಆದರೆ ನನ್ನ ಮನೋನಿಗ್ರಹಪ್ರಯತ್ನ ಪೂರ್ತಿಗೊಳ್ಳದೆ ಅರ್ಧದಲ್ಲಿ ಮುರಿದುಬೀಳಬಹುದು. ಆಗ ನನ್ನ ಗತಿ ಏನು? ಮೋಡದ ತುಂಡೊಂದು ದೊಡ್ಡ ಮೋಡದಿಂದ ಬೇರೆಯಾದರೆ ಏನಾಗುತ್ತದೆ? ಗಾಳಿಗೆ ಸಿಕ್ಕಿ ತನ್ನ ಗುರುತು ಕೂಡ ಉಳಿಸಿಕೊಳ್ಳಲಾಗದೆ ಚದರಿಹೋಗುತ್ತದೆ. ನನ್ನ ಪಾಡೂ ಹಾಗೆಯೇ ಅಲ್ಲವೆ? ಓಟ ಓಡಹೋಗಿ ಕಾಲುಮುರಿದು ಕೊಂಡದ್ದಷ್ಟೇ ಪ್ರಯೋಜನವಾದರೆ? ಧ್ಯಾನಾನುಸಂಧಾನವನ್ನು ಬಿಟ್ಟಂತೆಯೂ ಇಲ್ಲ, ಸಾಧಿಸಿದಂತೆಯೂ ಆಗಲಿಲ್ಲ.”

ಕಿಂಚಿತ್ಪ್ರಯತ್ನವೂ ವ್ಯರ್ಥವಾಗದು

ಇದಕ್ಕೆ ಭಗವಂತನು ಕೊಟ್ಟ ಸಮಾಧಾನ ಹೀಗೆ:

> ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
> ನ ಹಿ ಕಲ್ಯಾಣಕೃತ್ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ॥

ಪ್ರಯತ್ನಪಟ್ಟು ಭಂಗವಾದರೂ ಅದರಿಂದ ನೀನು ನಷ್ಟಪಡಲಾರೆ. ಒಳ್ಳೆಯದನ್ನು ಸಾಧಿಸಯತ್ನಿಸಿದವನಿಗೆ ಎಂದಿಗೂ ದುರ್ಗತಿ ಬಾರದು.

ಮನೆಯ ಹುಡುಗನನ್ನು ದೊಡ್ಡ ಪರೀಕ್ಷೆಗೆ ಓದು ಎಂದು ಹಿರಿಯರು ಪ್ರೇರಿಸುತ್ತಾರೆ. ಅವನು ಬುದ್ಧಿವಂತ, ಪಾಠಶೀಲ, ಪ್ಯಾಸ್ ಮಾಡಿಯಾನು ಎಂದು ಅವರಿಗೆ ಖಾತರಿ ತೋರುತ್ತದೆ. ಆದರೆ ಅವನಿಗೆ ಧೈರ್ಯವಿಲ್ಲದೆಹೋಗಬಹುದು. ಅವನು "ಪ್ಯಾಸ್ ಆಗದಿದ್ದರೆ ಗತಿಯೇನು?" ಎಂದು ಕೇಳಿಯಾನು. ಆಗ ಆ ಹಿರಿಯರು "ಆಗದಿದ್ದರೆ ಬೇಡ. ನೀನು ಓದಿದ್ದರಿಂದ ನಷ್ಟವೇನು? ಈ ಸಾರಿಯ ಪರೀಕ್ಷೆಗಾಗಿ ಮಾಡಿಕೊಂಡ ತಯಾರಿ ಈಗ ಅಲ್ಲದಿದ್ದರೆ ಮುಂದಿನ ಸಾರಿಯ ಪರೀಕ್ಷೆಯಲ್ಲಿ ಉಪಯೋಗಕ್ಕೆ ಬರುತ್ತದೆ" ಎಂದು ಸಮಾಧಾನ ಹೇಳುತ್ತಾರೆ. ಅದರಂತೆಯೇ ಇದೆ ಭಗವಂತನ ಉತ್ತರ.

ಇದೇ ಭರವಸೆಯನ್ನು ಹಿಂದೆಯೂ ಸ್ವಾಮಿ ಅರ್ಜುನನಿಗೆ ಕೊಟ್ಟಿದ್ದ:

> ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
> ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥

ಧರ್ಮವು ಸ್ವಲ್ಪವ್ದೇ ಆಗಿದ್ದಾಗ್ಲೂ ಅದು ಮಹತ್ತರವಾದ ಭಯದಿಂದ ಮನುಷ್ಯನನ್ನು ಕಾಪಾಡಬಲ್ಲದ್ದಾಗುತ್ತದೆ.

ಬಹುಜನ್ಮಸಂಸ್ಕಾರ

ಮೇಲೆ ಹೇಳಿದ್ದು ಬರಿಯ ಪ್ರೋತ್ಸಾಹದ ಮಾತಲ್ಲ. ಯೋಗಸಿದ್ಧಿಯಾಗತಕ್ಕದ್ದು ಎಂಥವರಿಗೂ ಸೋಪಾನಕ್ರಮದಲ್ಲಿಯೇ. ಒಂದೇ ಜನ್ಮದ ಪ್ರಯತ್ನದಿಂದ ಪೂರ್ಣಫಲ ಲಭಿಸದು. ಒಂದು ಜನ್ಮದ ಪುಣ್ಯದಿಂದ ಮುಂದಿನ ಜನ್ಮಕ್ಕೆ ಶ್ರೇಷ್ಠವಾದ ಜೀವನ ಸನ್ನಿವೇಶ; ಆಗಣ ಪುಣ್ಯದಿಂದ ಮತ್ತೊಂದು ಜನ್ಮದಲ್ಲಿ ಇನ್ನೂ ಉತ್ತಮವಾದ ಜೀವನ ಸಂದರ್ಭ. ಹೀಗೆ ಬಹುಜನ್ಮಸಂಸ್ಕಾರ ಬಹುಜನ್ಮ ಪ್ರಯತ್ನಗಳಿಂದ ಲಭಿಸತಕ್ಕದ್ದು ಪರಮಾತ್ಮಸಾನ್ನಿಧ್ಯ.

> ಪ್ರಾಪ್ಯ ಪುಣ್ಯಕೃತಾನ್ ಲೋಕಾನ್ ಉಷಿತ್ವಾ ಶಾಶ್ವತೀಃ ಸಮಾಃ ।
> ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥
> ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ।
> ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್ ॥

ಯೋಗಮಾರ್ಗವನ್ನು ಹಿಡಿದರೂ ಅದನ್ನು ಪೂರ್ತಿಗೊಳಿಸಲಾಗದವನು ಅದರಿಂದ ಹಾನಿಗೆ ಒಳಗಾಗದೆ ಪುಣ್ಯಲೋಕಗಳನ್ನೇ ಸೇರಿ ಅಲ್ಲಿ ಸುಖಪಡುವನು. ಆಮೇಲೆ ಸದಾಚಾರವಂತವಾದ ಶ್ರೀಮಂತ ಕುಟುಂಬದಲ್ಲಿ ಜನಿಸಿ ಅಲ್ಲಿ ಪುನಃ ಪುಣ್ಯಕರ್ಮ ಮಾಡಲು ಶಕ್ತನಾಗುತ್ತಾನೆ. ಅಥವಾ ತತ್ತ್ವವೇತ್ತರಾದ ಯೋಗಿಗಳ ವಂಶದಲ್ಲಿ ಹುಟ್ಟಿ ಜ್ಞಾನ ಸಂಸ್ಕಾರವನ್ನು ಪಡೆಯುತ್ತಾನೆ.

ಇಂಥ ಸತ್ಕುಲಪ್ರಾಪ್ತಿ ಲೋಕದಲ್ಲಿ ವಿರಳವಲ್ಲವೆ? ಒಳ್ಳೆಯ ಮನೆತನದಲ್ಲಿ ಹುಟ್ಟುವುದೇ ಒಂದು ಪುಣ್ಯ.

> ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ।
> ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ ॥
> ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ।
> ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ ॥
> ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ।
> ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್ ॥

ಧ್ಯಾನಯೋಗಕ್ಕೆ ಪ್ರಯತ್ನಮಾಡಿ ಅದು ಪೂರ್ತಿಯಾಗುವ ಮೊದಲೇ ಆ ದೇಹವನ್ನು ಬಿಟ್ಟವನು ಅಲ್ಲಿಂದ ಮುಂದಿನ ಜನ್ಮದಲ್ಲಿ ಉತ್ತಮಕುಲಪ್ರಸೂತನಾಗುತ್ತಾನೆ. ಹಾಗೆ ಅವನ ಜನ್ಮಸ್ಥಲಸಂದರ್ಭಗಳು ಶ್ರೇಷ್ಠವಾಗಿರುವುದರಿಂದ ಅಲ್ಲಿ ಅವನ ಮನಸ್ಸು ತಾನು ಹಿಂದೆ ಅರ್ಧವಾಗಿ ಮಾಡಿ ಬಿಟ್ಟಿದ್ದ ಯೋಗದ ಕಡೆಗೆ ತಿರುಗುತ್ತದೆ. ಮನಸ್ಸು ಪೂರ್ವಜನ್ಮದ ಅಭ್ಯಾಸಬಲದಿಂದ ಈಗ ಉತ್ತಮವಾಸನೆಗಳುಳ್ಳದ್ದಾಗಿ ಯೋಗಕ್ಕೆ ಪರಿಪಕ್ವವಾಗಿರುತ್ತದೆ. ಮನಃಪರಿಪಾಕವಾಗುವುದು ಕುಲಪ್ರಭಾವದಿಂದ. ಹಾಗೆ ಅವನ ಅಭ್ಯಾಸಕ್ಕೆ ಮತ್ತೆ ವಿಘ್ನಗಳು ಬಂದರೂ ಅವನು ಅವುಗಳನ್ನು ಗೆಲ್ಲಲು ಶಕ್ತನಾಗಿರುತ್ತಾನೆ. ಆಗ ಅವನು ಮತ್ತೂ ಜಿಜ್ಞಾಸೆ ನಡಸಿ, ಆನಂತರ ಅದರಿಂದ ತತ್ತ್ವವನ್ನು ಅರಿತುಕೊಂಡು, ಹಾಗೆ ಎಲ್ಲ ಗ್ರಂಥಪಾಂಡಿತ್ಯವನ್ನೂ ಮೀರಿ ಇನ್ನೂ ಮೇಲಕ್ಕೆ ಹೋಗುತ್ತಾನೆ. ಜಿಜ್ಞಾಸೆ ಎಂದರೆ ಜ್ಞಾನಾಪೇಕ್ಷೆ, ಜ್ಞಾನಸಂಪಾದನೆಯ ಪ್ರಯತ್ನ. ಆ ಪ್ರಯತ್ನಕ್ಕೆ ಸಾಮಾಗ್ರಿಯಾದದ್ದು ಶಬ್ದಬ್ರಹ್ಮ ಎಂದರೆ ವೇದಶಾಸ್ತ್ರರಾಶಿ. ಇದನ್ನು ಮೀರಿದವನಾಗುತ್ತಾನೆ ಎಂದರೆ ಆ ಗ್ರಂಥರಾಶಿಯಲ್ಲಿರುವುದನ್ನು ಅವನು ಸ್ವಾಧೀನ ಪಡಿಸಿಕೊಂಡದ್ದರಿಂದ ಗ್ರಂಥ ಅವನಿಗೆ ಅನಾವಶ್ಯಕವಾಗುತ್ತದೆ. ಹೀಗೆ ಪುನಃಪುನಃ ಮಾಡಿದ ಪ್ರಯತ್ನದಿಂದ ಅವನು ಪೂರ್ವವಾಸನಾಕಶ್ಮಲವನ್ನು ಕಳೆದು ನೀಗಿ ಜ್ಞಾನಸಿದ್ಧಿಯನ್ನು ಪಡೆಯುತ್ತಾನೆ.

ಮೇಲೆ ಗಮನಿಸಬೇಕಾದ ಅಂಶಗಳು ಮೂರು:

1. ಪುನರ್ಜನ್ಮಪ್ರಾಪ್ಯತೆ;
2. ಕುಲಕ್ಕೂ ಯೋಗಪ್ರಯತ್ನಾರ್ಹತೆಗೂ ಇರುವ ಸಂಬಂಧ;
3. ದೀರ್ಘಕಾಲಾಭ್ಯಾಸದ ಆವಶ್ಯಕತೆ.

ಕುಲಪ್ರಭಾವ

ಕುಲಪ್ರಭಾವಪರಿಗಣನೆ ಹಿಂದೂ ಸಂಪ್ರದಾಯದ ಒಂದು ವಿಶೇಷ ಲಕ್ಷಣ. ಶ್ರೀರಾಮನನ್ನು ಇಕ್ಷ್ವಾಕುವಂಶದವನೆಂದೂ ರಘುವಂಶದವನೆಂದೂ ಕರೆಯುವುದೇ ಒಂದು ಗೌರವಚಿಹ್ನೆ. ಹಾಗೆಯೇ ಪೌರವ, ಭಾರತ, ಯಾದವ ಮೊದಲಾದ ವಂಶ ನಾಮಧೇಯಗಳು ಉನ್ನತಸ್ಫೂರ್ತಿಪದಗಳು. ಕಣ್ವಮಹರ್ಷಿಗಳು ದುಷ್ಯಂತರಾಜನನ್ನು ಸಂಭೋಧಿಸಿ “ಉಚ್ಚೈಃ ಕುಲಂ ಚಾತ್ಮನಃ” ಎಂಬ ವರ್ಣನೆಯಿಂದ ರಾಜನ ಉದಾತ್ತ ವರ್ತನೆಯ ಕರ್ತವ್ಯತೆಯನ್ನು ಸೂಚಿಸಿದರು. ಇಂಗ್ಲಿಷಿನಲ್ಲಿ Noblesse oblige ಎಂದರೆ ಶ್ರೀಮಂತಿಕೆಯೊಡಗೂಡಿಕೊಂಡು ಭಾರೀ ಕರ್ತವ್ಯ ಬರುತ್ತದೆ–ಎಂದು ಲೋಕವಾಕ್ಯ ಉಂಟು. ಅರ್ಜುನನೇ ತನ್ನ ಜಿಹಾಸಾವಿಸ್ತರದಲ್ಲಿ ಕುಲಧರ್ಮಗಳನ್ನು ಪ್ರಸ್ತಾವಿಸಿದ್ದಾನೆ. “ಕುಲವನ್ನು ನಾಲಗೆ ಹೇಳುತ್ತದೆ” ಎಂಬ ನಾಣ್ನುಡಿ ಕನ್ನಡದಲ್ಲೂ ಉಂಟು. ಹೀಗೆ ಕುಲವೂ ಸಮಾಜವೂ ಮಹತ್ತ್ವವುಳ್ಳ ಸಂಗತಿ. ಅದು ಮನುಷ್ಯನಿಗೆ ಪೂರ್ವಜನ್ಮ ಕರ್ಮಗಳ ಫಲವಾಗಿ ಬರುತ್ತದೆ. ಒಳ್ಳೆಯ ಮನೆತನವೆಂದರೆ ಮೊದಲು ಒಳ್ಳೆಯ ಸ್ವಭಾವವೆಂದೂ ಆಮೇಲೆ ಒಳ್ಳೆಯ ಸಂಸ್ಕಾರವೆಂದೂ ತಾತ್ಪರ್ಯ. ಸಾತ್ತ್ವಿಕ ಮನಸ್ಸೂ ಪಾರಮಾರ್ಥಿಕ ಬುದ್ಧಿಯೂ ಅಲ್ಲಿ ಸ್ವಾಭಾವಿಕವಾಗಿ, ಪೂರ್ವಿಕಪರಂಪರೆಯಿಂದ ದಾಯದ್ರವ್ಯವಾಗಿ, ಬಂದಿರುತ್ತದೆ: ಹಾಗೆಯೇ ಸತ್ಸಹವಾಸಕ್ಕೂ ವಿದ್ಯಾಶಿಕ್ಷಣಕ್ಕೂ ಅಲ್ಲಿ ಅವಕಾಶ ಹೆಚ್ಚಾಗಿರುತ್ತದೆ. ಹೀಗೆ ಸದ್ವಂಶಪ್ರಾಪ್ತಿಯೇ ಒಂದು ಪುಣ್ಯಫಲ. ಹಾಗೆಯೇ ಹೀನ ಜನ್ಮವು ಪಾಪಫಲ.

ಜೀವಪ್ರಗತಿಯ ಸೋಪಾನಕ್ರಮ

ಜನ್ಮಜನ್ಮಾಂತರಗಳೆಂಬ ನಾನ ಪ್ರಸಂಗಗಳು ಬೇರೆಬೇರೆ ಕಥೆಗಳಲ್ಲ; ಎಲ್ಲ ಜನ್ಮಾಂತರಗಳೂ ಒಂದೇ ಜೀವದ–ಒಂದೇ ಮಹಾಕಥೆಯ–ಅನೇಕ ಅಧ್ಯಾಯಗಳು. ಜೀವಗತಿಯ ರೂಪವನ್ನು ಕಾಣಬೇಕೆನ್ನುವವರು ಜನ್ಮಜನ್ಮಾಂತರ ವೃತ್ತಾಂತಗಳನ್ನು ಏಕೈಕವಾದ ಅಖಂಡ ನದೀಧಾರೆಯೆಂದು ನೋಡಬೇಕು. ಈ ಜೀವನ ನದೀಪ್ರವಾಹದಲ್ಲಿ ತಿಳಿನೀರಿನ ಹೊಳೆಗಳೂ ಸೇರುತ್ತವೆ, ಗ್ರಾಮಸಾರದ ರೊಚ್ಚೂ ಸೇರುತ್ತದೆ. ನದಿಯು ಮುಂಬರಿದಂತೆ ಕೊಳೆಯಿಳಿದು ನೀರು ತಿಳಿಯಾಗುತ್ತದೆ. ಹೀಗೆ ಸಣ್ಣಪುಟ್ಟ ತೊರೆಗಳ ಇಳಿಹರಿವೂ ಸಾರ್ಥಕವಾಗುತ್ತದೆ. ನಾವು ಮಾಡಲಾಗುವ ಅಷ್ಟಿಷ್ಟು ಸತ್ಪ್ರಯತ್ನದ ಕಥೆಯೂ ಹಾಗೆಯೇ.

ಜೀವಪ್ರಗತಿಯು ಸೋಪಾನಕ್ರಮದಲ್ಲಿ ಆಗತಕ್ಕದ್ದು. ಒಂದೊಂದು ಜನ್ಮವೂ ಒಂದೊಂದು ಮೆಟ್ಟಲು. ಮೋಕ್ಷಾರ್ಹತೆಯು ಬಹುವಿಧಸಂಸ್ಕಾರಗಳಿಂದ ಉಂಟಾಗತಕ್ಕದ್ದು. ಒಂದು ಶಿಲಾವಿಗ್ರಹದ ನಿರ್ಮಾಣಕ್ಕೆ ಶಿಲ್ಪಿಯ ಉಳಿತಾಯ ಪೆಟ್ಟು ಎಷ್ಟು ಬಗೆಯಾಗಿ ಆಗಬೇಕೋ–ಒಂದು ಔಷಧದ ರಚನೆಗೆ ಧಾತುಮೂಲಿಕೆಗಳ ಪುಟಪಾಕ ಶೋಧನೆಗಳು ಎಷ್ಟು ಬಗೆಯಾಗಿ ನಡೆಯಬೇಕೋ–ಒಂದು ಜೀವದ ಸದ್ಗತಿಗೂ ಹಾಗೆಯೇ ನಾನಾ ಶೋಧನಸಂಸ್ಕಾರಗಳು ಅವಶ್ಯಕ. ಆದದ್ದರಿಂದ ಮೋಕ್ಷವಿಷಯದಲ್ಲಿ ಆತುರ ಯುಕ್ತವಲ್ಲ. ನಿರಂತರವಾದ ಯೋಗಪ್ರಯತ್ನವೇ ಅಲ್ಲಿ ಸಾಧಕ.

ಧ್ಯಾನಯೋಗಶ್ರೇಷ್ಠತೆ

ಮನುಷ್ಯಜೀವಿ ತನ್ನ ದೈವಿಕಾಂಶವನ್ನು ಜಗತ್ಸೇವೆಯಲ್ಲಿ ತೇದು ತೇದು ಸವೆಯಿಸಿ, ಅಂತರಾತ್ಮವನ್ನು ಪರಮಾತ್ಮನಲ್ಲಿ ಸೇರಿಸುವುದೇ ಯೋಗ. ಎಂದರೆ ಜಗತ್ಕರ್ಮಗಳನ್ನು ಕರ್ಮಫಲಸಂಗವಿಲ್ಲದಂತೆ ಮಾಡುವುದು: "ಯೋಗಃ ಕರ್ಮಸು ಕೌಶಲಮ್." ಇಂಥ ಯೋಗವು ವ್ರತೋಪವಾಸಾದಿ ತಪಸ್ಸಿಗಿಂತ ಮೇಲ್ಮಟ್ಟದ್ದು; ನಾನಾ ಶಾಸ್ತ್ರ ಪಾಂಡಿತ್ಯ ಜ್ಞಾನಕ್ಕಿಂತ ಮೇಲ್ಮಟ್ಟದ್ದು; ಯಜ್ಞಯಾಗಾದಿರೂಪವಾದ ಕರ್ಮಾನುಷ್ಠಾನಕ್ಕಿಂತ ಮೇಲ್ಮಟ್ಟದ್ದು. ಆದದ್ದರಿಂದ, ಅರ್ಜುನ, ನೀನು ಈ ಯೋಗವನ್ನು ಅಭ್ಯಾಸಮಾಡಿ ಯೋಗಿಯಾಗು.

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥

"ಯಾವಾತನು ತನ್ನ ಅಂತರಾತ್ಮವನ್ನು ನನ್ನಲ್ಲಿ ನೆಲೆಗೊಳಿಸಿ ಶ್ರದ್ಧೆಯಿಂದ ನನ್ನನ್ನು ಸೇವಿಸುತ್ತಾನೋ ಅವನು ಯೋಗಿಗಳಲ್ಲೆಲ್ಲ ಸರ್ವಶ್ರೇಷ್ಠನೆಂದು ನನ್ನ ಎಣಿಕೆ.

ನಿನ್ನ ಮನಸ್ಸು ನನ್ನಲ್ಲಿರಲಿ; ನಿನ್ನ ಕೈ ನನ್ನ ಆಜ್ಞೆಯಲ್ಲಿರಲಿ."

ಇದೇ ಧ್ಯಾನಾಭ್ಯಾಸಯೋಗ.

ಸಂಗ್ರಹ

ಸಂನ್ಯಾಸದಂತರಂಗಂ ।
ಛಿನ್ನಸ್ಪೃಹೆ ಸರ್ವಜಗದೊಳಾತ್ಮೌಪಮ್ಯಂ ॥
ವಹ್ನಿತ್ಯಾಗಾದಿ ಬಹಿ- ।
ಶ್ಚಿಹ್ನಿತಗಳ್ ಗೌಣಮಿಂತು ಷಷ್ಠಾಧ್ಯಾಯಂ ॥

ಪ್ರಥಮಷಟ್ಕಸಂಗ್ರಹ

ಪುರುಷಾರ್ಥಸಿದ್ಧಿಗೆಂದೋ ।
ದುರಿತಕ್ಷಯಕೆಂದೊ ಲೋಕಸಂಸ್ಥಿತಿಗೆಂದೋ ॥
ಚರಿತಸ್ವಧರ್ಮಕರ್ಮಮೆ ।
ಪರಮೇಶ್ವರಭಕ್ತಿಯೆಂಬುದಾದಿಮಷಟ್ಕಂ ॥

ಅರ್ಪಣೆ ವರಪ್ರಸಾದಂಗಳೆರಡು ತಟಂ ।
ಸತ್ಪುರುಷಜೀವಿತದ ನದಿ ನಡುವೆ ಪರಿಗುಂ ॥
ಕಾರ್ಪಣ್ಯಮಿರದ ಸ್ವಕರ್ಮಮರ್ಪ್ಯಸುಮಂ ।
ತತ್ಫಲಮದೆಂತಿರೆಯುಮೊಪ್ಪಿಕೊಳೆ ಧನ್ಯಂ ॥

ನಿಖಿಲನಿಗಮಸಾರಂ ನಿರ್ಮಲಜ್ಞಾನಪೂರಂ ।
ಪರಿಹೃತಭವಭಾರಂ ಬ್ರಹ್ಮತತ್ತ್ವ ಪ್ರಚಾರಂ ॥
ಪ್ರಕೃತಿಜಲಧಿತೀರಂ ದ್ವಂದ್ವಮೋಹಾಪಹಾರಂ ।
ಕೃತಜಗದುಪಕಾರಂ ಕೃಷ್ಣಗೀತಾವತಾರಂ ॥

ಅಥ ಜ್ಞಾನವಿಜ್ಞಾನಯೋಗೋ ನಾಮ ಸಪ್ತಮೋಽಧ್ಯಾಯಃ

ಶ್ರೀಭಗವಾನುವಾಚ-

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು

॥ ೧ ॥

ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ

॥ ೨ ॥

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ

॥ ೩ ॥

ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ

॥ ೪ ॥

ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್

॥ ೫ ॥

ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ

॥ ೬ ॥

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ

॥ ೭ ॥

ರಸೋಽಹಮಪ್ಸು ಕೌಂತೇಯ ಪ್ರಭಾಽಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು

॥ ೮ ॥

ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು

॥ ೯ ॥

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್

॥ ೧೦ ॥

ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಮ್ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ

॥ ೧೧ ॥

ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇಶಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ

॥ ೧೨ ॥

ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್

॥ ೧೩ ॥

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ

॥ ೧೪ ॥

ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಽಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ

॥ ೧೫ ॥

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ

॥ ೧೬ ॥

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ

॥ ೧೭ ॥

ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್

॥ ೧೮ ॥

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ

॥ ೧೯ ॥

ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।
ತಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ

॥ ೨೦ ॥

ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾಽರ್ಚಿತಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್

॥ ೨೦ ॥

ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾಽರಾಧಾನಮೀಹತೇ ।
ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್

॥ ೨೨ ॥

ಅಂತವತ್ತು ಫಲಂ ತೇಷಂ ತದ್ಭವತ್ಯಲ್ಪಮೇಧಸಾಮ್ ।
ದೇವಾನ್ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ

॥ ೨೩ ॥

ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಮ್

॥ ೨೪ ॥

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್

॥ ೨೫ ॥

ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ

॥ ೨೬ ॥

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ

॥ ೨೭ ॥

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ

॥ ೨೮ ॥

ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನ ಮಧ್ಯಾತ್ಮಂ ಕರ್ಮ ಚಾಖಿಲಮ್

॥ ೨೯ ॥

ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ

॥ ೩೦ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಜ್ಞಾನವಿಜ್ಞಾಯೋಗೋ ನಾಮ ಸಪ್ತಮೋಽಧ್ಯಾಯಃ

ಸೂಚನೆ

ಧ್ಯಾನವನುಪದೇಶಿಸಿ ನರ ।
ಮಾನಸದೇಕಾಗ್ರಲಕ್ಷ್ಯಕೆಂದಚ್ಯುತನಾ ॥
ನಾನಾ ಕೃತಿಗುಣಬಲಮಹಿ- ।
ಮಾನಂಗಳ ಬಣ್ಣಿಪಂ ಜಗದ್ಗುರುವೀಗಳ್

॥ ೧ ॥

ವಿಶ್ವಪ್ರಕೃತಿವಿರಚನೆಯ- ।
ನೀಶ್ವರಮಹಿಮಾಸಮಕ್ಷತೆಯ ಮೇಣ್ ಮಾಯಾ- ॥
ವಿಷ್ವಙ್ಮೋಹವ ವಿವರಿಸಿ ।
ಶಶ್ವತ್ಸುಖಶಾಂತಿಲಾಭಪಥಮಂ ತೋರ್ಪಂ

॥ ೨ ॥

ಸಾರಾಂಶ

ಲೋಕದಲ್ಲಿ ಸಾರಭೂತವಾದದ್ದೆಲ್ಲ, ಮಹಿಮಾವಿಶಿಷ್ಟವಾದದ್ದೆಲ್ಲ ಬ್ರಹ್ಮಶಕ್ತಿಯ ಹೆಗ್ಗುರುತೆಂದು ತಿಳಿಯತಕ್ಕದ್ದು. ಯಾವ ಗುಣ ಒಂದು ಪದಾರ್ಥದಲ್ಲಿರುವುದರಿಂದ ಆ ಪದಾರ್ಥಕ್ಕೆ ಒಂದು ಪ್ರಯೋಜಕತೆಯೂ ಒಂದು ಬೆಲೆಯೂ ಬರುತ್ತದೆಯೋ ಆ ಗುಣವು ಬ್ರಹ್ಮಶಕ್ತಿಯದು.

ಸತ್ತ್ವಗುಣದ ಜೊತೆಗೆ ರಾಜತಾಮಸಗಳೂ ಜಗತ್ಕಾರ್ಯಕ್ಕೆ ಬೇಕಾಗುತ್ತವೆ. ಜಗತ್ತಿನ ಇರುವಿಕೆಗೆ–ನಿರಂತರ ಚಲನವಲನರೂಪದ ವ್ಯಾಪಾರ ನಡೆಯುವುದಕ್ಕೆ ಮೂಲಭೂತವಾದದ್ದು ಈ ತ್ರಿಗುಣಗಳ ಅನ್ಯೋನ್ಯಘರ್ಷಣೆ. ತಾನು ಈ ವಿಷಮತೆಯನ್ನು ಇರಿಸಿದ್ದೇನೆ, ಶಕ್ತಿಯಿದ್ದರೆ ಮನುಷ್ಯನು ಅದನ್ನು ಮೀರಲಿ–ಎಂಬುದು ಪ್ರಕೃತಿಯು ಮನುಷ್ಯನಿಗೆ ಕೊಡುವ ಸ್ಪರ್ಧಾಶಪಥ.

ವಸ್ತುಸ್ಥಿತಿಯನ್ನು ಬೇರೆಮಾಡಿ ಅಥವಾ ಮರೆಮಾಚಿ ನಮ್ಮ ಮನಸ್ಸಿಗೆ ಬರುವ ಪ್ರತೀತಿ ಮಾಯೆ: ಬುದ್ಧಿಯ ಕಣ್ಣಿನಲ್ಲಿ ನೈಜವಾಗಿರುವ ಅವಿದ್ಯಾದೋಷವನ್ನು ಪರಿಣಾಮಕ್ಕೆ ತರುವ

ಜಗದ್ಭ್ರಮಣಶಕ್ತಿ ಅದು.

ಯಾರು ಪೂರ್ವಜನ್ಮಪರಂಪರೆಯಿಂದ ಬಂದ ಅವಿದ್ಯೆಯನ್ನು ಕಳೆದುಕೊಂಡಿರುತ್ತಾರೋ ಅವರ ಮೇಲೆ ಮಾಯೆಯ ಪರಿಣಾಮವಿಲ್ಲ. ಅವಿದ್ಯಾನಿವಾರಣೆ ಸಾಧ್ಯವಾಗುವುದು ಈಶ್ವರ ಸಮಕ್ಷತಾಭ್ಯಾಸದ ಮೂಲಕ–ಯಥಾರ್ಥಜ್ಞಾನವನ್ನು ಪ್ರೋತ್ಸಾಹಮಾಡುವುದರ ಮೂಲಕ.

ಸರ್ವತ್ರ ಭಗವತ್ಸಮಕ್ಷತೆಯನ್ನು ಕಾಣುವವನು ಎಲ್ಲ ಲೋಕಸಂಬಂಧಗಳನ್ನೂ ಬಂಧುಮಿತ್ರ ಪರಿವಾರವನ್ನೂ ಈಶ್ವರಪ್ರದತ್ತವಾದ ಪ್ರಸಾದವೆನ್ನುತ್ತಾನೆ. ಆ ಭಾವನೆ ಬೆಳೆದಂತೆ ಮಮತಾ ಮೋಹಗಳು ಸವೆಯುತ್ತವೆ; ಜೀವ ಶುದ್ಧವಾಗುತ್ತದೆ; ತತ್ತ್ವಾನುಸಂಧಾನ ಸುಲಭವಾಗುತ್ತದೆ. ತತ್ತ್ವಜ್ಞಾನವುಳ್ಳವನು ತನ್ನ ಜೀವನದಲ್ಲಿ ಜಗತ್ತಿಗೆ ಸಲ್ಲಬೇಕಾದದ್ದೇನು, ಅಂತರಾತ್ಮಕ್ಕೆ ಸಲ್ಲಬೇಕಾದದ್ದೇನು–ಎಂಬುದನ್ನು ಕಂಡುಕೊಂಡು ಉಭಯಹಿತತತ್ಪರನಾಗಿ ನಿಶ್ಚಿಂತನಾಗುತ್ತಾನೆ. ಅಂಥಾ ಸ್ಥಿತಿಯೇ ಶಾಂತಿ.

ಪ್ರಕರಣ ೮

ಅಧ್ಯಾಯ ೭ - ಜ್ಞಾನವಿಜ್ಞಾನಯೋಗವೆಂಬ ಜಗಜ್ಜೀವೇಶ್ವರಯೋಗ

ಏಳನೆಯ ಅಧ್ಯಾಯದ ಶ್ಲೋಕಸಂಖ್ಯೆ ಮುವ್ವತ್ತೇ ಆದರೂ ವಿಷಯ ಕ್ಲಿಷ್ಟವಾದದ್ದು. ಇಲ್ಲಿಯ ಮುಖ್ಯ ಸಂಗತಿಗಳು ಒಂಭತ್ತು:

1. ಜಗತ್ತು–ಜಡಪ್ರಕೃತಿ
2. ಜಗತ್ತು–ಜೀವಪ್ರಕೃತಿ
3. ಈಶ್ವರ
4. ಈಶ್ವರಾಂತಃಸ್ಥವಾದ ಬ್ರಹ್ಮಸತ್ತ್ವ
5. ಬ್ರಹ್ಮಲಿಂಗಗಳು
6. ಮಾಯೆ

7. ಮಾಯಾಸಂತರಣ
8. ಈಶ್ವರೋಪಾಸನೆ
9. ಮೋಹನಿವೃತ್ತಿ.

ಈ ಒಂಭತ್ತು ದೊಡ್ಡ ವಿಷಯಗಳನ್ನೊಳಗೊಂಡದ್ದು ಈ ಸಣ್ಣ ಅಧ್ಯಾಯ. ಹಿಂದಿನ ಅಧ್ಯಾಯದಲ್ಲಿ ಧ್ಯಾನವನ್ನು ಕುರಿತು ಹೇಳಿದ್ದಾಗಿದೆ. ಕರ್ಮದಿಂದ ಸತ್ತ್ವಶುದ್ಧಿ: ಅದು ನಞ್‍ಪ್ರಕಾರದ (Negative) ಸಾಧನೆ. ಅಸ್ ಪ್ರಕಾರದ (Positive) ಸಾಧನೆ ಧ್ಯಾನ. ಕರ್ಮದಿಂದ ದುರಿತಕ್ಷಯ; ಧ್ಯಾನದಿಂದ ನೂತನಹಿತ ಸಂಪಾದನೆ. ಅದನ್ನು ಕುರಿತು ಆರನೆಯ ಅಧ್ಯಾಯದಲ್ಲಿ ಹೇಳಿದ್ದಾಗಿದೆ. “ಯುಕ್ತಾಹಾರವಿಹಾರ” ಮೊದಲಾದ ಉಪಾಯಗಳಿಂದ ಮನಸ್ಸಿನ ಉದ್ವೇಗಗಳನ್ನು ಕಳೆದು, ಸಮಾಧಾನಸ್ಥಿತಿ ತಂದುಕೊಂಡು, ಶುಚಿಯಾದ ಸ್ಥಳದಲ್ಲಿ ಕುಳಿತು ಧ್ಯಾನಮಾಡಬೇಕು–ಇತ್ಯಾದಿಯಾಗಿ ಹೇಳಿದೆ.

ಈಗ ಧ್ಯಾನಮಾಡುವುದರಲ್ಲಿ ಧ್ಯೇಯ ಯಾವುದು–ಎಂಬುದನ್ನು ವಿಶದಪಡಿಸಿಕೊಳ್ಳಬೇಕು. ಧ್ಯಾನವೆಂಬುದರಲ್ಲಿ ಮೂರು ಅಂಗಗಳಿವೆ: ಧ್ಯಾನ, ಧ್ಯಾತೃ, ಧ್ಯೇಯ, ಹಾಗೆಯೇ ಜ್ಞಾನವೂ ಮೂರು ಅಂಗಗಳನ್ನಪೇಕ್ಷಿಸುತ್ತದೆ: ಜ್ಞಾನ, ಜ್ಞಾತೃ, ಜ್ಞೇಯ, ತತ್ತ್ವಸ್ವರೂಪ ತಿಳಿದುಕೊಳ್ಳಬೇಕೆಂಬ ಇಚ್ಛೆಯಿರತಕ್ಕವರೆಲ್ಲ ಧ್ಯಾತೃಗಳು. ಧ್ಯೇಯ ಏನಿರಬೇಕೆಂಬುದನ್ನು ಕುರಿತು ಈಗ ತಿಳಿಸುತ್ತಾನೆ ಸ್ವಾಮಿ:

> ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥

ಪರಬ್ರಹ್ಮಸ್ವರೂಪವನ್ನು ಇಲ್ಲಿಷ್ಟು, ಅಲ್ಲಷ್ಟು ತಿಳಿದುಕೊಂಡರೆ ಸಾಲದು: “ಸಮಗ್ರಂ” – ಸಂಪೂರ್ಣವಾಗಿ ಮೊದಲಿನಿಂದ ಕಡೆಯವರೆಗೂ ನೋಡಬೇಕು.

ಗ್ರಂಥದ ಮುಂದಿನ ಭಾಗಕ್ಕೆ ಹೋಗುವುದಕ್ಕೆ ಮುಂಚೆ ಕೆಲವು ಮಾತುಗಳ ಅರ್ಥವನ್ನು ತಿಳಿದುಕೊಳ್ಳುವುದು ಅವಶ್ಯವಾಗುತ್ತದೆ. ಈ ಅಧ್ಯಾಯದಲ್ಲಿ ಪ್ರಯುಕ್ತವಾಗಿರುವ ಕೆಲವು ಪಾರಿಭಾಷಿಕ ಶಬ್ದಗಳು ವ್ಯಾಸರ ಕಾಲದಲ್ಲಿ ಜನರಿಗೆ ಪ್ರಸಿದ್ಧವಾಗಿದ್ದವೆಂದು ತೋರುತ್ತದೆ. ಮಹಾಭಾರತದ ಮೋಕ್ಷಧರ್ಮ ಪ್ರಕರಣದಲ್ಲಿ, ಸನತ್ಸುಜಾತೀಯದಲ್ಲಿ, ಈ ಮಾತುಗಳ, ಭಾವನೆಗಳ, ಬಳಕೆ ಇದೆ. “ಬ್ರಹ್ಮ” ಮೊದಲಾದ ಮಾತುಗಳು ಆ ಕಾಲದ ಜನಕ್ಕೆ

ವಿವರಣೆಯಿಲ್ಲದೆಯೇ ಅರ್ಥವಾಗುತ್ತಿತ್ತೆಂದು ತೋರುತ್ತದೆ. ನಮಗೆ ಇವೆಲ್ಲ ಹೊಸ ಮಾತುಗಳು.

"ಸತ್" ಶಬ್ದಾರ್ಥ

ಪರಬ್ರಹ್ಮವೆನ್ನುವುದು ಕೇವಲ ಸತ್ತ್ವ. "ಸತ್" ಎಂದರೆ ಇರತಕ್ಕದ್ದೆಂದು ಮೂಲಾರ್ಥ. ಒಳ್ಳೆಯದು ಎಂಬುದು ಆಮೇಲೆ ಬಂದ ಅರ್ಥ. ಯಾವುದು ಚಿರಕಾಲ ಬಾಳತಕ್ಕದ್ದೋ ಅದು ಸತ್ಯ. "ಸತ್" ಎಂಬ ಪದ "ಅಸ್" ಎಂಬ ಧಾತುವಿನಿಂದ ಬಂದದ್ದು ("ಅಸ=ಭುವಿ"). ಅಸ್ತಿ, ಸತ್ಯ–ಮೊದಲಾದ ಎಷ್ಟೋ ಪದಗಳು ಅಸ್ ಧಾತುವಿನಿಂದ ಬಂದವು. ಯಾವುದು ಇದೆಯೋ ಅದು "ಸತ್". ಇರೋಣ ಎಂದರೆ ಒಂದೇ ರೀತಿ ಇರುವುದು. ಭೂತಭವಿಷ್ಯದ್ವರ್ತಮಾನಕಾಲಗಳ ಬಾಧೆ ಇಲ್ಲದೆ, ಯಾವ ಕಾಲದಲ್ಲಿಯೂ ವಿಕಾರವನ್ನು ಪಡೆಯದೆ, ಎಂದೆಂದಿಗೂ ಏಕರೂಪವಾಗಿ ಯಾವುದು ಇರುತ್ತದೆಯೋ ಅದಕ್ಕೆ "ಸತ್" ಎಂದು ಹೆಸರು. ಅಂಥಾದ್ದು "ಸತ್ಯ". ಕಾಲಭೇದದಿಂದ, ದೇಶಭೇದದಿಂದ, ಋತುಭೇದದಿಂದ, ಆವರಣ ಭೇದದಿಂದ, ಬಹಿರಾಘಾತಕಾರಣದಿಂದ ವಿಕಾರ ಪಡೆಯದೆ ಇರತಕ್ಕದ್ದೇ ಸತ್. ಗ್ರಂಥದ ಮೊದಲಿನಲ್ಲಿಯೇ ನೋಡಿದೆವು ಇದನ್ನು:

> ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ।
> ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ ॥

ಸದ್ವಸ್ತು ದೊಡ್ಡದು, ಬಹಳ ದೊಡ್ಡದು. ನಾವು ಅತ್ಯಂತ ದೊಡ್ಡದೆಂದು ಯಾವುದನ್ನು ಊಹೆಮಾಡಬಹುದೋ ಅದಕ್ಕಿಂತ ದೊಡ್ಡದು; ಅನಂತವಾದದ್ದು; ಅಪಾರವಾದದ್ದು. ಅದಕ್ಕಾಗಿಯೇ "ಸರ್ವವ್ಯಾಪಿ" ಎನ್ನುತ್ತೇವೆ ಅದನ್ನು; "ಬ್ರಹ್ಮ" ಎನ್ನುತ್ತೇವೆ. ಬೃಹಿ ಎಂದರೆ ದೊಡ್ಡದು ಎಂದರ್ಥ ("ಬೃಹಿ=ವೃದ್ಧೌ".) ಬ್ರಹ್ಮವೇ ಸತ್. ಅದರ ವಿಷಯದಲ್ಲಿ ನಾವು ಹೇಳಬಹುದಾದದ್ದು ಇಷ್ಟೇ: ಅದು ಇದೆ. ಇದೆ ಎಂದಷ್ಟೇ ಹೇಳುವುದು ನಮ್ಮಿಂದ ಸಾಧ್ಯ. ಅದಕ್ಕಿಂತ ಹೆಚ್ಚು ಹೇಳಲು ಪ್ರಯತ್ನ ಮಾಡುವುದು ಸಾಹಸ. ಸತ್ ಎನ್ನುವುದಕ್ಕೆ ಇನ್ನೂ ಎರಡು ಲಕ್ಷಣಗಳನ್ನು ಸೇರಿಸಿದ್ದಾರೆ ಪೂರ್ವಿಕರು: ಚಿತ್ ಮತ್ತು ಆನಂದ. ಈ ಎರಡನ್ನು ಕೆಲವರು ಸ್ವರೂಪಲಕ್ಷಣ ಎಂದು ಹೇಳದೆ ತಟಸ್ಥಲಕ್ಷಣ ಎನ್ನುತ್ತಾರೆ. ದಡದಲ್ಲಿ ನಿಂತು ನೋಡುವವನಿಗೆ ನೀರಿನಲ್ಲಿ ಈಜುವವನು ಹೇಗೆ ತೋರಬಹುದೋ ಹಾಗೆ ತೋರುವುವು

ಚಿತ್ ಮತ್ತು ಆನಂದ ಎಂಬ ಲಕ್ಷಣಗಳು–ಬ್ರಹ್ಮಲಿಂಗಗಳು. ಲಿಂಗ ಎಂದರೆ ಚಿಹ್ನೆ ಅಥವಾ ಗುರುತು. ಚಿಹ್ನೆಯಿಂದ ಅದರ ಹಿಂದಿರುವ ತತ್ತ್ವವನ್ನು ಗುರುತುಹಿಡಿಯಲಾಗುತ್ತದೆ. ಚಿತ್, ಆನಂದ ಈ ಎರಡನ್ನೂ ವ್ಯವಹಾರದಲ್ಲಿ ಅಷ್ಟಿಷ್ಟು ಕಾಣಬಹುದು. ಆದರೆ ಸತ್ ಎಂಬುದು ಅಲಿಂಗ, ಅಕ್ರಿಯ. ವ್ಯವಹಾರಕ್ಕೆ ಸಿಕ್ಕುವುದಿಲ್ಲ. ಅದು ಏನಿದ್ದರೂ ಅನುಭವೈಕ ಗೋಚರವಾದದ್ದು. (ಬುದ್ಧಿಗ್ರಾಹ್ಯಮತೀಂದ್ರಿಯಮ್). ಅದರ ಇರುವಿಕೆಯನ್ನು ತರ್ಕಮಾಡಿ ರುಜುವಾತು ಪಡಿಸುವುದು ಶಕ್ಯವಿಲ್ಲ. ತಾನಾಗಿ ಇರತಕ್ಕದ್ದು ಅದು: Pure being; pure existence. ಗ್ರೀಕ್, ಲ್ಯಾಟಿನ್ ಭಾಷೆಗಳ ousia, esse: ಸಂಸ್ಕೃತದಲ್ಲಿ ಇದನ್ನು ಸತ್ತಾ ಎನ್ನುತ್ತಾರೆ.

ಸತ್ತ್ವದ ಎರಡು ದಶೆಗಳು

ಬ್ರಹ್ಮಸತ್ತ್ವವನ್ನು ನಾವು ಎರಡು ದಶೆಗಳಲ್ಲಿ ಭಾವಿಸಬಹುದಾಗಿದೆ: (೧) ವ್ಯಕ್ತ ಅಥವಾ ದೃಶ್ಯ: ಇದೇ ಪ್ರಕೃತಿ. ಇದು ಕಾರ್ಯಬ್ರಹ್ಮ. (೨)ಅವ್ಯಕ್ತ ಅಥವಾ ಅದೃಶ್ಯ: ಕಾರಣ ಬ್ರಹ್ಮ. ಅದೇ ಕೇವಲಸತ್ತ್ವ ಅಥವಾ ಪರಬ್ರಹ್ಮ. ದೃಶ್ಯವಾದದ್ದನ್ನು ವ್ಯಕ್ತವೆಂದೂ ಅದೃಶ್ಯವಾದದ್ದನ್ನು ಅವ್ಯಕ್ತವೆಂದೂ ಗೀತೆಯ ಎಂಟನೆಯ ಅಧ್ಯಾಯದಲ್ಲಿ ಕರೆದಿದೆ:

> ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವನ್ತ್ಯಹರಾಗಮೇ ।
> ರಾತ್ರ್ಯಾಗಮೇ ಪ್ರಲೀಯನ್ತೇ ತತ್ರೈವಾವ್ಯಕ್ತಸಂಜ್ಞಕೇ ॥
> ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।
> ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥

ಕೇವಲ ಸತ್ತಾ ಆದದ್ದು ಯಾವಾಗ ದೃಶ್ಯವಾಗುತ್ತದೆ? ಜಗದ್ರೂಪದಲ್ಲಿ ಕಾಣಿಸಿಕೊಂಡಗ, ಬ್ರಹ್ಮವಸ್ತುವಿನ ದೃಶ್ಯಾವಸ್ಥೆಗೆ ಜಗತ್ತು ಎಂದು ಹೆಸರು. ಜಗತ್ತಿಗೆ ಕಾರಣ ಯಾವುದು? ಪರಬ್ರಹ್ಮವಸ್ತು. "ಜನ್ಮಾದ್ಯಸ್ಯ ಯತಃ", "ಯತೋ ವಾ ಇಮಾನಿ ಭೂತಾನಿ ಜಾಯನ್ತೇ", "ಸರ್ವಂ ಖಲ್ವಿದಂ ಬ್ರಹ್ಮತಜ್ಜಲಾನಿತಿ ಶಾಂತ ಉಪಾಸೀತ" –ಮೊದಲಾದ ವಾಕ್ಯಗಳ ಅಭಿಪ್ರಾಯ ಇದೆ. ಪ್ರಪಂಚವು ಬ್ರಹ್ಮಾಧೀನವಾದದ್ದು: ಬ್ರಹ್ಮವಸ್ತುವಿನ ಆಧಾರದ ಮೇಲೆ ಉಂಟಾದದ್ದು. ಅದರ ಚಿದಂಶದಿಂದ ಉತ್ಪನ್ನವಾದದ್ದು ಪ್ರಕೃತಿ.

ಪ್ರಕೃತಿ ಎಂದರೆ ಪ್ರಕರ್ಷವಾದ ಕೃತಿ: ವಿಸ್ತಾರವಾದ, ಉತ್ತಮವಾದ ಕೃತಿ. ಯಾರ ಕೆಲಸ ಇದು? ಬ್ರಹ್ಮದಲ್ಲಿ ಅಪಾರವಾದ ಶಕ್ತಿಗಳು ಅಡಗಿಕೊಂಡಿವೆಯಷ್ಟೆ? ಅವು ಈ ಸಂದರ್ಭದಲ್ಲಿ ಪ್ರಸ್ತುತವಾದವು. ಬ್ರಹ್ಮವಸ್ತುವಿನ ಚೈತನ್ಯ–ಚಿಚ್ಛಕ್ತಿ–ಎಷ್ಟು ಅಪಾರವಾದದ್ದು ಅದು! ಅಚಿಂತ್ಯವಾದದ್ದು ಅದು! ಅದರಲ್ಲಿ ಇಂಥಾದ್ದಿದೆ, ಇಂಥಾದ್ದಿಲ್ಲ. ಎಂದು ಹೇಳುವಂತಿಲ್ಲ. ಅದು ಅತಿಶಯವಾದ ಸಾಮರ್ಥ್ಯವುಳ್ಳದ್ದು. ಅದರ ಅಭಿವ್ಯಕ್ತಿಯೇ ಪ್ರಕೃತಿ–ದೊಡ್ಡ ಕೆಲಸ. ಅದೇ ಜಗತ್ತು. ಯಾವಯಾವುದನ್ನು ನಮ್ಮ ಕಣ್ಣು ಕಿವಿ ಇತ್ಯಾದಿ ಇಂದ್ರಿಯಗಳು ಅನುಭವಿಸುವುದಕ್ಕಾಗುತ್ತದೆಯೋ ಯಾವ ಯಾವುದನ್ನು ನಮ್ಮ ಬುದ್ಧಿಯು ತರ್ಕ ಮಾಡಿ ಊಹಿಸುವುದಕ್ಕಾಗುತ್ತದೆಯೋ ಅದೆಲ್ಲ ಪ್ರಕೃತಿ. ನಾವು ತಿಳಿದುಕೊಳ್ಳುವ, ಆಲೋಚನೆ

ಮಾಡುವ, ವಿಚಾರ ಮಾಡುವ ವ್ಯವಸ್ಥೆಯೆಲ್ಲ ಪ್ರಪಂಚಕ್ಕೇ ಸೇರಿದ್ದು. ಇಂದ್ರಿಯಶಕ್ತಿಗಳು, ಆಲೋಚನಾಶಕ್ತಿಗಳು ವಿವೇಚನಾಶಕ್ತಿಗಳು ಇವೆಲ್ಲ ಪ್ರಕೃತಿಗೆ ಸೇರಿದವು. ನಮ್ಮ ಅನುದಿನದ ಜೀವನರಂಗವೆಲ್ಲ ಪ್ರಕೃತಿಮಯ. ಮನಸ್ಸು, ಬುದ್ಧಿ, ಪ್ರತಿಭೆ ಈ ಎಲ್ಲ ಶಕ್ತಿಗಳನ್ನೂ ನಾವು ಪ್ರದರ್ಶನ ಮಾಡುವ ಜಾಗ ಜಗತ್ತು. ಈ ಜಗದ್ರೂಪವಾದ ದೃಶ್ಯಪ್ರಪಂಚವನ್ನು ಆವರಿಸಿಕೊಂಡು ಅದರ ಒಳಗೂ ಹೊರಗೂ ಎಲ್ಲೆಲ್ಲೂ ವ್ಯಾಪಿಸಿಕೊಂಡಿರತಕ್ಕದ್ದು ಅವ್ಯಕ್ತಸತ್ತ್ವ.

ಅವ್ಯಕ್ತವೆಂಬ ಮಹಾಸಮುದ್ರದಲ್ಲಿ ಒಂದು ನೀರ್ಗಲ್ಲು (Iceberg) ತೇಲುತ್ತಿದೆ: ಅದೂ ನೀರೇ; ನೀರ್ಗಲ್ಲು ಅಷ್ಟೇ. ಸಮುದ್ರ ಎನ್ನುವುದು ಅವ್ಯಕ್ತ: ನೀರ್ಗಲ್ಲು ಎನ್ನುವುದು ವ್ಯಕ್ತ. ವ್ಯಕ್ತ ಎಂದರೆ ಗುರುತಿಸಬಹುದಾದದ್ದು. ಗುರುತಿಸುವುದಕ್ಕಾಗದೆ ಇರುವ ಸಮುದ್ರದ ನಡುವೆ ತೇಲಿಕೊಂಡಿದೆ ಈ ಗುರುತಿಸುವುದಕ್ಕಾಗುವ ಪ್ರಪಂಚ: ಗಾಳಿಯಲ್ಲಿ ತೇಲಿಬಿಟ್ಟಿರುವ ಬೆಲೂನ್ ಬುರುಡೆಗೆ ಹೇಗೆ ಗಾಳಿಯೇ ಒಳಗೂ ಹೊರಗೂ ಆಧಾರವೋ ಹಾಗೆ ಬ್ರಹ್ಮದ ಅವ್ಯಕ್ತಸ್ವರೂಪ. ಯಾವುದು ತೇಲಿಕೊಂಡಿದೆಯೋ ಅದಕ್ಕಿಂತ ಅದು ಯಾವುದರಲ್ಲಿ ತೇಲಿಕೊಂಡಿದೆಯೋ ಅದು ದೊಡ್ಡದು ತಾನೆ? ಇದನ್ನೇ ಶ್ರುತಿಯಲ್ಲಿ ಹೇಳಿರುವುದು: “ಪಾದೋಽಸ್ಯ ವಿಶ್ವಾ ಭೂತಾನಿ । ತ್ರಿಪಾದಸ್ಯಾಮೃತಂ ದಿವಿ ।” ಪಾದ ಎಂದರೆ ಭಾಗ: ಹಾಗಪಾಲು. ಸೂರ್ಯಮಂಡಲ ಚಂದ್ರಮಂಡಲ ಭೂಮಂಡಲ ಇವೆಲ್ಲ ಸೇರಿ ಆ ಬ್ರಹ್ಮವಸ್ತುವಿನ ಒಂದು ಹಾಗದಷ್ಟು. ಇದರ ಮೂರರಷ್ಟು, ಎಂದರೆ ಬಹುಪಾಲು ದೊಡ್ಡದಾಗಿರುವುದು–ಅಪಾರವಾಗಿರುವುದು–ಅದೃಷ್ಟಸತ್ತ್ವ, ಅಥವಾ ಅವ್ಯಕ್ತಸತ್ತ್ವ.

ಹೀಗೆ ಪರಬ್ರಹ್ಮದಲ್ಲಿ ವ್ಯಕ್ತ, ಅವ್ಯಕ್ತ–ದೃಶ್ಯ, ಅದೃಶ್ಯ–ಎಂದು ಎರಡಂಶ. ಆದದ್ದರಿಂದಲೇ ಪೂರ್ವಿಕರು ಪರಬ್ರಹ್ಮವನ್ನು ಸ್ಮರಿಸುವಾಗ “ವ್ಯಕ್ತಾವ್ಯಕ್ತಸ್ವರೂಪಾಯ” ಎಂದು ಹೇಳುತ್ತಿದ್ದದ್ದು. ಎಲ್ಲ ಚರಾಚರ ವಸ್ತುಗಳಲ್ಲೂ–ಯಾವ ಯಾವುದು ನಮಗೆ ಗೋಚರಿಸುತ್ತದೋ, ಎಲ್ಲಿಲ್ಲಿ ಚಲನೆ ಉಂಟೋ ಅಲ್ಲೆಲ್ಲ ಸೇರಿಕೊಂಡಿರತಕ್ಕದ್ದು ಪರಬ್ರಹ್ಮವಸ್ತು. ಈ ದೃಷ್ಟಿಯಿಂದಲೇ ಅದು ಸರ್ವಾಂತರ್ಯಾಮಿ, ಸರ್ವವ್ಯಾಪಿ. ಆದದ್ದರಿಂದಲೇ ಅದಕ್ಕೆ ವಿಷ್ಣು ಎಂದು ಹೆಸರು. ವಿಷ್ಣು ಎಂದರೆ ಸರ್ವವ್ಯಾಪಿಯಾದದ್ದು. ಎಲ್ಲರಲ್ಲಿಯೂ ಇದು ಆತ್ಮರೂಪದಲ್ಲಿರುವುದರಿಂದ ಇದು ಪರಮಾತ್ಮ ಎಂದು ಕರೆಯಿಸಿಕೊಳ್ಳುತ್ತದೆ.

ಇದಗ್ಂ ಸರ್ವಮಸೃಜತ ।...
ತತ್ಸೃಷ್ಟ್ವಾ । ತದೇವಾನುಪ್ರಾವಿಶತ್ ॥

ಜಗತ್ತನ್ನು ಸೃಷ್ಟಿಮಾಡಿ ಅದರ ಒಳಹೊಕ್ಕಿತಂತೆ ಪರಬ್ರಹ್ಮವಸ್ತು. ಕಥಾರೂಪದಲ್ಲಿ ಇದನ್ನು ಹೇಳಿದ್ದಾರೆ.

ಸೃಷ್ಟಿಯಾದಮೇಲೆ ಆ ಪ್ರಾಣಿಗೆ ಅನ್ನ ಮೊದಲಾದವೆಲ್ಲ ಬೇಕಾಯಿತು; ಆಳುವವನೊಬ್ಬ ಬೇಕಾಯಿತು. ಇಷ್ಟನ್ನೆಲ್ಲ ಸೃಷ್ಟಿಮಾಡಿದ ಮೇಲೆ ಆಳುವವನೊಬ್ಬನಿಲ್ಲದೆ ಅದನ್ನು ನಿಭಾಯಿಸುವುದು ಹೇಗೆ? ಆದದ್ದರಿಂದ ತಾನೇ ಈಶ್ವರನೆಂದಾಯಿತು ಪರಬ್ರಹ್ಮ. ಅದರ ಸರ್ವವ್ಯಾಪಿಯಾಗಿರುವ ಅವಸ್ಥೆಗೆ ಪರಮಾತ್ಮ ಎಂದೂ, ಜಗತ್ತನ್ನಾಳುವ ಅವಸ್ಥೆಗೆ ಪರಮೇಶ್ವರ ಎಂದೂ ವ್ಯವಹಾರ. ಹೀಗೆ ಒಂದೇ ತತ್ತ್ವ ಎರಡು ರೀತಿ ನಮ್ಮ ಬುದ್ಧಿ ಭಾಷೆಗಳ ವ್ಯವಹಾರಕ್ಕೆ ಬರುತ್ತದೆ.

ಆತ್ಮ ಎಂದರೇನು?

ಮನುಷ್ಯನು “ನಾನು”, “ನಾನು” ಎಂದು ನುಡಿಯುವಾಗ ಯಾವುದನ್ನು ಕುರಿತು ಹಾಗೆ ನುಡಿಯುತ್ತಾನೋ ಅದು ಆತ್ಮ. (ಎರಡನೆಯೆ ಅಧ್ಯಾಯವನ್ನೂ ನೋಡಿರಿ). “ಅಹಂ” ಪದಕ್ಕೆ ವಿಷಯವಾದದ್ದು ಆತ್ಮ. ಆತ್ಮವೆಂಬುದು ಸ್ವರೂಪಸ್ಥಿತಿಯಲ್ಲಿ ಚೈತನ್ಯ; ಚಿಚ್ಛಕ್ತಿ. ಆ ಚೈತನ್ಯವು ದೇಹಾದಿ ಕರ್ಮಸಾಧನಗಳನ್ನು ಧರಿಸಿಕೊಂಡ ಅವಸ್ಥೆಯಲ್ಲಿ “ಜೀವ” – “ಜೀವಾತ್ಮ” – ಎನ್ನಿಸಿಕೊಳ್ಳುತ್ತದೆ. ದೇಹ, ಇಂದ್ರಿಯ, ಮನಸ್ಸು ಮೊದಲಾದ ಉಪಕರಣಗಳನ್ನು ಪಡೆದುಕೊಂಡಿರುವ ಒಟ್ಟು ಮನುಷ್ಯವ್ಯಕ್ತಿಯನ್ನು ಕೆಲವು ಸಂದರ್ಭದಲ್ಲಿ ಆತ್ಮವೆಂದು ವ್ಯವಹರಿಸುವುದುಂಟು: ಇದು ಸಾಮಾನ್ಯ ಜನದ ಸಾಮಾನ್ಯರೂಢಿ. ಮನಸ್ಸಿಗೂ ಆತ್ಮವೆಂಬ ಪದವನ್ನು ಉಪಯೋಗಿಸುವುದುಂಟು. ದೇಹವನ್ನೂ ಮನಸ್ಸನ್ನೂ ವಿನಾಯಿಸಿ ಜೀವವನ್ನು ಆತ್ಮವೆನ್ನುವುದೂ ಉಂಟು. ಒಂದು ಪ್ರಾಚೀನ ವಾಕ್ಯ ಹೀಗಿದೆ:

> ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ॥
> ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಕಥ್ಯತೇ ॥

“ಯಾವುದು (ಬಂದದ್ದನ್ನು) ಪಡೆದುಕೊಳ್ಳುತ್ತದೆಯೋ, ಯಾವುದು (ಬೇಕಾದದ್ದನ್ನು) ತೆಗೆದುಕೊಳ್ಳುತ್ತದೆಯೋ, ಯಾವುದು ಲೋಕವಿಷಯಗಳನ್ನನುಭವಿಸುತ್ತದೆಯೋ, ಯಾವುದು ಎಡೆಬಿಡದೆ ಉಳಿದುಕೊಂಡಿರುತ್ತದೆಯೋ ಅದನ್ನು ಆತ್ಮವೆನ್ನುತ್ತಾರೆ.”

ಪ್ರಪಂಚವ್ಯವಹಾರದಲ್ಲಿ ಪ್ರಯುಕ್ತವಾದ ವ್ಯಕ್ತಿಶಕ್ತಿಯ ಘನರೂಪವೇ–ಅದರ ಕೇಂದ್ರಾಕೃತಿಯೇ–ಜೀವ. ಜೀವದ ಅಂತರ್ಬೀಜ ಆತ್ಮ.

ಜೀವಾವಸ್ಥೆ

ಆತ್ಮಕ್ಕೆ ಉಪಾಧಿಯೊಂದು ಸೇರಿದಾಗ ಜೀವವಾಗುತ್ತದೆ. ಉಪಾಧಿ ಎಂದರೆ ಹೊರಗಿನಿಂದ ಬಂದು ಸೇರಿಕೊಂಡದ್ದು ಎನ್ನಬಹುದು: ಹೊರಗಿನಿಂದ ಬಂದ ಆಧಿ-ವ್ಯಾಧಿ, ರೋಗ ಮೊದಲಾದವೂ ಉಪಾಧಿಗಳೇ. ಪದವಿ, ಬಿರುದು ಎಂಬರ್ಥದಲ್ಲಿಯೂ ಈ ಉಪಾಧಿ ಶಬ್ದದ ಪ್ರಯೋಗವಿದೆ. ಗುಲಾಬಿಯ ಹೂವಿನ ಪಕ್ಕದಲ್ಲಿ ಗಾಜಿನ ಗೋಲಿಯನ್ನಿಟ್ಟರೆ ಗಾಜು ಗುಲಾಬಿ ಬಣ್ಣದ್ದಾಗಿ ಕಾಣುತ್ತದೆ. ಆ ಬಣ್ಣ ಗಾಜಿಗೆ ಅಂಟಿದ ಉಪಾಧಿ. ಹೂವನ್ನು ನಾರಿನಿಂದ ಕಟ್ಟಿ ಹಾರ ಮಾಡುತ್ತೇವೆ. ನಾರಿಗೆ ಹೂವಿನ ವಾಸನೆ ಉಪಾಧಿಯಾಗುತ್ತದೆ: ಎಂದರೆ ನಾರಿಗೆ ಸ್ವತಃ ಇಲ್ಲದ ಗುಣ ಹೂವಿನಿಂದ ಉಂಟಾಗುತ್ತದೆ. ತನ್ನದಲ್ಲದ, ಹೊರಗಿನಿಂದ ಬಂದು ಸೇರಿಕೊಂಡ ಅಂಶ ಉಪಾಧಿ. ಜಗತ್ತನ್ನು ಸೃಷ್ಟಿಮಾಡಿದ ಮೇಲೆ ಅದನ್ನು ನಡಸಬೇಕು, ಹಾಗೆ ಜಗತ್ಸಂಪರ್ಕ. ಅದರಿಂದ ಕೆಲವು ಉಪಾಧಿಗಳನ್ನು ತಾಳಿಕೊಳ್ಳುತ್ತದೆ ಪರಬ್ರಹ್ಮವಸ್ತು. ಈ ಉಪಾಧಿಗಳೊಡನೆ ಕಾಣಿಸಿಕೊಂಡಾಗ ಆತ್ಮವಸ್ತು ಜೀವವೆನ್ನಿಸಿಕೊಳ್ಳುತ್ತದೆ. ಸ್ವತಃ ನಿಷ್ಕ್ರಿಯವಾದ ಆತ್ಮಕ್ಕೆ ಜಗತ್ಕಾರಣದಿಂದ ಕಾರ್ಯಾವಸ್ಥೆ ಬಂದಾಗ ಅದು ಜೀವ.

ಪದೇ ಪದೇ ಬಳಸಲ್ಪಡುವ “ಜೀವಾತ್ಮ”, “ಪರಮಾತ್ಮ”, “ಈಶ್ವರ” ಮೊದಲಾದ ಕೆಲವು ಪರಿಭಾಷಾಶಬ್ದಗಳ ವಿವಕ್ಷೆಯನ್ನು ಈಗ ಸ್ಪಷ್ಟಪಡಿಸಿಕೊಳ್ಳೋಣ.

ಪ್ರತಿಯೊಂದು ಪ್ರಾಣಿಯಲ್ಲಿಯೂ ನಾವು ವೃದ್ಧಿಕ್ಷಯಗಳನ್ನು ಕಾಣುತ್ತೇವೆ. ಆಹಾರಗ್ರಹಣ, ಮಲವಿಸರ್ಜನೆ–ಇವು ಸಮಸ್ತ ಪ್ರಾಣಿವರ್ಗದಲ್ಲೂ ಕಂಡುಬರುತ್ತವೆ. ಎಲ್ಲ ಪ್ರಾಣಿಗಳೂ–ಗಿಡ ಮರಗಳೂ ಕೂಡ–ಏನನ್ನಾದರೂ ಗ್ರಹಿಸುತ್ತವೆ; ಏನನ್ನಾದರೂ ಹೊರಕ್ಕೆ ಬಿಡುತ್ತವೆ. ವೃದ್ಧಿ ಆಗುವುದು ಆಹಾರವನ್ನು ಒಳಕ್ಕೆ ತೆಗೆದು ಕೊಳ್ಳುವುದರಿಂದ. ಅದು ಕಡಮೆಯಾದರೆ ಕ್ಷಯ. ಜೀವ ಮಾಡುವ ಕೆಲಸ ಇದು: ಮೊದಲು ಒಂದಿಪ್ಪತ್ತು ವರ್ಷ ದೇಹವನ್ನು ಚೆನ್ನಾಗಿ ಕೊಬ್ಬಿಸುತ್ತದೆ; ಆಮೇಲೆ ಕ್ರಮೇಣ ಸವೆಯಿಸುತ್ತದೆ. ಜಡ ವಸ್ತುಗಳು ಕೆಲಸಮಾಡುವುದು ಮನುಷ್ಯಸಂಪರ್ಕದಿಂದ. ಮನುಷ್ಯಶಕ್ತಿಗೆ ಅವು ಬರಿಯ ಉಪಕರಣಗಳು. ಯಾವುದು ಸ್ವತಃ ಕೆಲಸಮಾಡಲಾರದೋ, ಯಾವುದರ ಚಲನೆಗೆ ಅನ್ಯವಸ್ತುವಿನ ಅಪೇಕ್ಷೆ ಉಂಟೋ ಅದು ಜಡವಸ್ತು. ಗೀತೆಯಲ್ಲಿ “ಅಪರಾ” ಎಂದು ಕರೆಯಲ್ಪಟ್ಟಿದೆ ಇದು: ಕೆಳದರ್ಜೆಯ ಸೃಷ್ಟಿ ಅದು.

ಒಳಗಿನ ಚೈತನ್ಯವನ್ನೂ ಹೊರಗಿನ ಜಡಪ್ರಪಂಚವನ್ನೂ ಒಟ್ಟಾಗಿಸಿ ಹಿಡಿದುಕೊಂಡಿದೆ ಜೀವ. ನಾನಾ ಕಾರ್ಯಗಳನ್ನು ಮಾಡಲು ಆತ್ಮವು ನಾನಾ ವೇಷಗಳನ್ನು ತಾಳುತ್ತದೆ. ಈ ವೇಷಗಳೇ ಉಪಾಧಿಗಳು.

ಜೀವದಿಂದ ಜಗತ್ತು. ಜೀವ ಇರೋಣದರಿಂದಲೇ ಮನಸ್ಸು ಮೊದಲಾದವೆಲ್ಲ ಕೆಲಸ ಮಾಡುತ್ತಿರುವುದು. ಮನುಷ್ಯನಲ್ಲಿ ಎರಡು ಭಾಗ; ಜೀವಭಾಗ–ಜೀವೇತರ ಭಾಗ: ಇದನ್ನು ನಾವು ಗ್ರಹಿಸಬೇಕು. ಜಡಭಾಗವೇ ಜೀವೇತರಭಾಗ. ಆದರೆ ಇದನ್ನು ನಿಕೃಷ್ಟ ಮಾಡಬಾರದು. ನಮಗೆಲ್ಲ ಪರಿಚಿತವಾಗಿರುವುದು ನಿಕೃಷ್ಟಭಾಗವೇ. ಉತ್ಕೃಷ್ಟ ಭಾಗ ನಮ್ಮ ಕಣ್ಣಿಗೆ ಕಾಣುವುದಿಲ್ಲ. ನಿಕೃಷ್ಟವಾದದ್ದರ ಮೂಲಕವೇ ನಾವು ಉತ್ಕೃಷ್ಟವಾದದ್ದನ್ನು ನೋಡಲಾಗುವುದು. ಪರಿಚಿತವಾದದ್ದರಿಂದ ಅಪರಿಚಿತವಾದದ್ದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಮಾಡಬೇಕು.

ಜೀವದ ಒಳಗಡೆಯ ಒಳಗಡೆ ಇರುವ ಚೈತನ್ಯಬೀಜವೇ ಆತ್ಮ ಅಥವಾ ಜೀವಾತ್ಮ. ಅದರ ಹೊರಗಡೆಯ ಹೊರಗಡೆ ಇರುವ ಕವಚವೇ ದೇಹ. ಜೀವ ಎಂಬುದು ಒಳಗಡೆಯ ಆತ್ಮ, ಹೊರಗಡೆಯ ಶರೀರ–ಈ ಎರಡರ ಸಂಯೋಗದಿಂದ ಆಗಿರುವ ವಸ್ತು. ಲೋಕ ವ್ಯವಹಾರವೆಲ್ಲ ವಸ್ತುಗಳ ದೃಶ್ಯರೂಪವನ್ನು ಅನುಸರಿಸುತ್ತದೆಯಷ್ಟೆ? ನಮಗೆ ಪರಿಚಿತನಾಗಿರುವ ಒಬ್ಬಾನೊಬ್ಬ ಮನುಷ್ಯನು ವಿಹಿತಪ್ರಕಾರದ ಖಾಕಿ ಉಡುಪನ್ನೂ ಕೆಂಪು ಮುಂಡಾಸನ್ನೂ ಧರಿಸಿ ಬಂದರೆ ಶಿಪಾಯಿ ಎನ್ನಿಸಿಕೊಳ್ಳುತ್ತಾನೆ. ತಲೆ ನುಣ್ಣಗೆ ಮಾಡಿಸಿಕೊಂಡು ಕಾವಿ ಮುಸುಕು ಹಾಕಿಬಂದರೆ ಅವನೇ ಸಂನ್ಯಾಸಿ ಎನ್ನಿಸಿಕೊಳ್ಳುತ್ತಾನೆ. ಹಾಗೆಯೇ ಆತ್ಮವಸ್ತು ದೇಹೇಂದ್ರಿಯಾದಿ ಜ್ಞಾನೋಪಕರಣ ಕರ್ಮೋಪಕರಣಗಳನ್ನು ಧರಿಸಿರುವಾಗ ಜೀವಿ, ಜಂತು, ಪ್ರಾಣಿ, ದೇಹಿ ಎಂದೆನಿಸಿಕೊಳ್ಳುತ್ತದೆ.

ಜೀವಾತ್ಮ–ಪರಮಾತ್ಮ

ಜಗತ್ತಿನ ಅಸಂಖ್ಯೇಯ ಜೀವರಾಶಿಯಲ್ಲಿ ಪ್ರತಿಯೊಂದು ಪ್ರಾಣಿಯನ್ನೂ ಬೇರೆ ಬೇರೆಯಾಗಿ ಬಿಡಿಬಿಡಿಯಾಗಿ ಗಣನೆಗೆ ತೆಗೆದುಕೊಂಡಾಗ ಆ ಪ್ರತ್ಯೇಕ ಜೀವವನ್ನು ವ್ಯಷ್ಟಿಯೆಂದೂ, ಸಮಸ್ತ ಜೀವಕೋಟಿಯನ್ನೂ ಒಟ್ಟಿಗೆ ಚಿಂತಿಸಿದಾಗ ಆ ಸಮುದಾಯವನ್ನು ಸಮಷ್ಟಿಯೆಂದೂ ಕರೆಯುವುದು ಶಾಸ್ತ್ರದ ಪದ್ಧತಿ. ನಾಣ್ಯಗಳಲ್ಲಿ ರೂಪಾಯಿ ಸಮಷ್ಟಿ: ಅದರೊಳಗಣ ನೂರು ಪೈಸೆಗಳಲ್ಲಿ ಪ್ರತಿಯೊಂದನ್ನೂ ಬೇರೆಬೇರೆ ಎಣಿಸಿದಾಗ ವ್ಯಷ್ಟಿ.

ಈಶ್ವರದಶೆ

ದೃಶ್ಯಸತ್ತ್ವದ ದೃಷ್ಟಿಯಿಂದ–ಎಂದರೆ ಪ್ರಪಂಚದ ದೃಷ್ಟಿಯಿಂದ ಅದೃಶ್ಯಾಖಂಡ ಸತ್ತ್ವವು–ಎಂದರೆ ಪರಬ್ರಹ್ಮವಸ್ತುವು ಈಶ್ವರ ಅಥವಾ ಪರಮೇಶ್ವರ ಎನ್ನಿಸುತ್ತದೆ. ಶುದ್ಧವೂ ನಿರಾಕಾರವೂ ನಿಷ್ಕ್ರಿಯವೂ ಆದ ಬ್ರಹ್ಮವು ಜಗತ್ತಿನ ಪ್ರಭುತ್ವವನ್ನು ವಹಿಸಿಕೊಂಡ ವೇಷದಲ್ಲಿ ಪರಮೇಶ್ವರ. ಬ್ರಹ್ಮವಸ್ತುವಿನ ಸ್ವರೂಪದೆಶೆಯಲ್ಲಿ ಅಧಿಕಾರ ಅಧೀನತೆಗಳ ಭೇದಗಳಿಲ್ಲ. ಆ ಸತ್ತ್ವವು ಜಗತ್ಪ್ರಜೆಯಾಗಿ ಜೀವವೆನ್ನಿಸಿ, ಅದನ್ನಾಳಲು ಅಧಿಕಾರ ದಶೆಯಲ್ಲಿ ಕಾಣಿಸಿಕೊಂಡಾಗ ಅದು ಈಶ್ವರ.

ಈ ಸ್ಥೂಲ ವಿವರಣೆ ನಾವು ಈಗ ನೋಡಬೇಕಾಗಿರುವ ಪ್ರಕರಣಕ್ಕೆ ಅವಶ್ಯವಾದ ಪೀಠಿಕೆ. ಜೀವ, ಜಗತ್ತು, ಈಶ್ವರ, ಆತ್ಮ, ಬ್ರಹ್ಮ–ಈ ಪದಗಳ ಅರ್ಥವನ್ನು ಸ್ಥೂಲವಾಗಿಯಾದರೂ ಗುರುತುಮಾಡಿಕೊಂಡಿದ್ದರೆ ಮುಂದಿನ ವಿಚಾರ ಸುಲಭವಾದೀತು. ಈಗ ಗ್ರಂಥಕ್ಕೆ ಹೋಗೋಣ.

ಜಡಪ್ರಕೃತಿ

ನಮಗೆ ಪ್ರತ್ಯಕ್ಷವಾಗಿ ತಿಳಿದಿರುವ ಸಂಗತಿ ಜಗತ್ತು. ಅದೇ ಪ್ರಕೃತಿ. ಅದರ ವಿವರಣೆಯಿಂದ ಶಾಸ್ತ್ರ ಪ್ರಾರಂಭವಾಗಿದೆ. ಪ್ರಕೃತಿ ಎರಡು ವಿಧ: ಒಂದು ಅಪರಾ ಅಥವಾ ನಿಕೃಷ್ಟ; ಇನ್ನೊಂದು ಪರಾ ಅಥವಾ ಉತ್ಕೃಷ್ಟ. ಎರಡರಲ್ಲಿ ಸ್ಥೂಲವೂ ನಮಗೆ ಹೆಚ್ಚು ಪರಿಚಿತವೂ ಆದದ್ದು ಅಪರಾ ಅಥವಾ ನಿಕೃಷ್ಟ ಭಾಗ. ಅದರ ರಚನೆ ಅಷ್ಟಾಂಶಗಳುಳ್ಳದ್ದು, ಹೀಗೆ:

> ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
> ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ–ಈ ಐದು ಪಂಚಭೂತಗಳು; ಇವುಗಳ ಗುಣಗಳಾದ ಗಂಧ, ರುಚಿ, ಬೆಳಕು, ಸೋಕು, ಸದ್ದು–ಈ ಐದನ್ನನುಭವಿಸಿ ಅವುಗಳ ಸಂಬಂಧದಿಂದ ಕೆಲಸ ಮಾಡುವ ಮನಸ್ಸು, ಬುದ್ಧಿ, ಅಹಂಕಾರ–ಈ ಮೂರು ಅಂತಃಕರಣಗಳು; ಒಟ್ಟಿಗೆ ಈ (೫+೩) ಎಂಟು ಪ್ರಕೃತಿಯ ಅಂಗಗಳು, ಎಂದರೆ ಪರಬ್ರಹ್ಮಶಕ್ತಿಯ ಕಾರ್ಯೋಪಕರಣಗಳು.

ಈ ಎಂಟರಲ್ಲಿ ಮೊದಲನೆಯ ಐದಾದ ಪಂಚಭೂತಗಳೊಡನೆ ಬೆರೆತು ಕೆಲಸ ಮಾಡುವ ಇಂದ್ರಿಯಗಳ ಅಧಿಷ್ಠಾನಗಳಾದ ಮೂಗು, ನಾಲಗೆ, ಕಣ್ಣು, ಮೈತೊಗಲು, ಕಿವಿ–ಈ ಐದೂ ಬಹಿರಂಗಗಳು, ಮನಸ್ಸು ಬುದ್ಧಿ ಅಹಂಕಾರಗಳು ಅಂತರಂಗಗಳು.

ಅಂತರಂಗಗಳು ನಾಲ್ಕೆಂಬ ವಾದ ಒಂದುಂಟು. ಆ ವಾದವು ಈ ಮೂರರ ಜೊತೆಗೆ ಚಿತ್ತವೆಂಬುದನ್ನು ಸೇರಿಸುತ್ತದೆ. ಹಾಗೆ ಸೇರಿಸಹೊರಟರೆ ಸ್ಮೃತಿ ಮೊದಲಾದ ಇನ್ನೂ ಎಷ್ಟನ್ನೊ ಸೇರಿಸಬೇಕಾಗಿಬರುತ್ತದೆ. ಆ ವಿವಾದವನ್ನು ಬದಿಗಿರಿಸಿ, ಆ ಹೊಸ ಅಂಶಗಳನ್ನೆಲ್ಲ ಮನಸ್ಸೆಂಬುದರ ಅಂತರ್ಗತಾಂಶಗಳೆಂದು ಗಣಿಸಬಹುದು.

ಮನಸ್ಸಿನ ಕೆಲಸ ಜಗದ್ವಿಷಯಗಳನ್ನು ತಿಳಿದುಕೊಳ್ಳುವುದು. ಬುದ್ಧಿಯ ಕೆಲಸ ಮನಸ್ಸು ಕೊಟ್ಟ ತಿಳಿವಳಿಕೆಯನ್ನು ಪರೀಕ್ಷಿಸಿ ಯುಕ್ತಾಯುಕ್ತಗಳನ್ನು ನಿಶ್ಚಯಿಸುವುದು. ಅಹಂಕಾರದ ಕೆಲಸ ಬುದ್ಧಿಗೆ ಉದ್ದೇಶವನ್ನು ನಿಯಮಿಸುವುದು. ಪ್ರತಿಯೊಂದು ವಿಷಯದಲ್ಲಿಯೂ “ಇದರಿಂದ ನನಗೇನು?” ಎಂಬ ದೃಷ್ಟಿಯಿಂದ “ನಾನು” (ಅಹಂ) ಎಂಬುದನ್ನು ಮುಂದಕ್ಕೆ ಚಾಚುವ

ಸಹಜ ಪ್ರವೃತ್ತಿಯೇ ಅಹಂಕಾರ, (ಅಹಂಕಾರವನ್ನು ಕುರಿತು ಒಂದು ಪ್ರತ್ಯೇಕ ಪರಿಶಿಷ್ಟವನ್ನು ಕೊಟ್ಟಿದೆ.) ಹೀಗೆ ಪಂಚಭೂತಗಳು, ಪಂಚ ಜ್ಞಾನೇಂದ್ರಿಯಗಳು, ಮೂರು ಅಂತಃಕರಣಗಳು– ಇವೆಲ್ಲ ಸೇರಿ ಜಗತ್ತು. ಅವುಗಳ ಜೊತೆಗೆ ತದ್ವಿಧೇಯಗಳಾದ ಪಂಚಕರ್ಮೇಂದ್ರಿಯಗಳು (ವಾಕ್ಕು, ಕೈ ಕಾಲು, ಎರಡು ಅಧೋದ್ವಾರಗಳು) ಸೇರಿದರೆ ಆ ಹದಿನೆಂಟು ಮನುಷ್ಯ ಜೀವನದ ಮುಖ್ಯಾಂಶಗಳು. ಹೀಗೆ ಎಂಟು ಅಥವಾ ಹದಿನೆಂಟು ಅವಯವಗಳ ಸಾಮುದಾಯಿಕ ಕಾರ್ಯರಂಗ ಜಗತ್ತು.

ಈ ಮೇಲೆ ಹೇಳಿದ ಪ್ರಕೃತಿಯ ಅಷ್ಟಾಂಗಗಳಲ್ಲಿ ಮನಸ್ಸು, ಬುದ್ಧಿ, ಅಹಂಕಾರ–ಎಂಬ ಮೂರರ ಸ್ಥಾನದಲ್ಲಿ ಚಂದ್ರ, ಸೂರ್ಯ, ಯಜಮಾನ (ಕಾರ್ಯಕರ್ತಾ)–ಎಂಬ ಮೂರನ್ನಿರಿಸಿ ಕಾಲಿದಾಸನು ಆ ಎಂಟೂ ಪರಶಿವಮೂರ್ತಿಯ ಅಷ್ಟತನುಗಳೆಂದು ವರ್ಣಿಸಿದ್ದಾನೆ. ಶಂಕರಾಚಾರ್ಯರೂ ಕಾಲಿದಾಸನಂತೆ–

> ಭೂರಂಭಾಂಸ್ಯನಲೋಽನಿಲೋಽಂಬರಮಹರ್ನಾಥೋ ಹಿಮಾಂಶುಃ ಪುಮಾನ್ ।
> ಇತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್ ॥

ಎಂದು ಸ್ತುತಿಸಿದ್ದಾರೆ. ಅಮರಸಿಂಹನು ಪರಶಿವನ ಹೆಸರುಗಳಲ್ಲಿ–

> ಅಷ್ಟಮೂರ್ತಿರಹಿರ್ಬುಧ್ನ್ಯೋ ಮಹಾಕಾಲೋ ಮಹಾನಟಃ ॥

ಎಂದು ಸೇರಿಸಿ ಅಷ್ಟಮೂರ್ತಿತ್ವದ ಮತವನ್ನಂಗೀಕರಿಸಿದ್ದಾನೆ. ಇಷ್ಟು ಜಡಪ್ರಕೃತಿಯ ಮಾತು.

ಜೀವಪ್ರಕೃತಿ

ಮೇಲಣ ಭಗವದ್ವಾಕ್ಯದಲ್ಲಿ ಹೇಳಿರುವ ಅಷ್ಟಾಂಗಗಳು ಪ್ರಕೃತಿಯ "ಅಪರಾ" ವಿಭಾಗಕ್ಕೆ, ಎಂದರೆ ನಿಕೃಷ್ಟವರ್ಗಕ್ಕೆ ಸೇರಿದವು. ಏಕೆಂದರೆ ಅವು ಸ್ವತಂತ್ರಗಳಲ್ಲ. ಜಡಪದಾರ್ಥಗಳು. ಮನೋಬುದ್ಧ್ಯಹಂಕಾರಗಳು ಸಹ ಜಡಗಳೇ; ಏಕೆಂದರೆ ಜೀವಸಂಪರ್ಕವಿಲ್ಲದೆ ಅವು ಏನನ್ನೂ ಮಾಡಲಾರವು. ಜೀವಚೈತನ್ಯ ಅವುಗಳನ್ನು ಹೊಕ್ಕಾಗ ಅವುಗಳ ವ್ಯಾಪಾರ. ಈ ಕಾರಣದಿಂದ ಜೀವವು ಪ್ರಕೃತಿರಾಜ್ಯದಲ್ಲಿ "ಪರಾ" ವಿಭಾಗ, ಎಂದರೆ ಉತ್ಕೃಷ್ಟವರ್ಗ.

> ಅಪರೇಯಮ್ ಇತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।
> ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥

ಜೀವದಿಂದ ಜಗತ್ತು. ಜೀವಕ್ಕಾಗಿ ಜಗತ್ತು, ಜೀವವಿಲ್ಲದಿದ್ದಲ್ಲಿ ಜಗತ್ತಿರದು.

ಜೀವವನ್ನು ಬಿಟ್ಟು ಜಗತ್ತು ಇರಬೇಕಾದ ಕಾರಣವಿಲ್ಲ. ಜಗತ್ತಿಲ್ಲದೆ ಜೀವವಿದ್ದೀತೋ? ಅದೂ ಸಾಧ್ಯವಿಲ್ಲ. ಯಾವ ಕಾರ್ಯಕ್ಕಾಗಿ ಅಥವಾ ಯಾವ ಉದ್ದೇಶಕ್ಕಾಗಿ ಜೀವ ಇರಬೇಕಾಗಿದೆಯೋ ಅದು ನೆರವೇರಲು ಅವಶ್ಯವಾದ ಉಪಕರಣಸಂಪತ್ತೇ ಜಗತ್ತು; ಅದರ ಅವಕಾಶಸ್ಥಾನವೇ ಜಗತ್ತು. ಜಗತ್ತಿಲ್ಲದೆ ಜೀವಕ್ಕೆ ಸಾರ್ಥಕ್ಯವಿಲ್ಲ. ಹೀಗೆ ಜೀವವೂ ಜಗತ್ತೂ ಅನ್ಯೋನ್ಯಾಪೇಕ್ಷಿಗಳು. ಅವೆರಡೂ ಪ್ರಕೃತ್ಯಾಕಾರದ ಉತ್ತರಾಧರ ಭಾಗಗಳು.

ಜೀವವು ಪ್ರಕೃತಿಸಾಮ್ರಾಜ್ಯದ ಪ್ರಜೆ. ಪಂಚಭೂತಾದಿ ದೇವತೆಗಳು ಆ ರಾಜ್ಯದ ಅಧಿಕಾರಿಮಂಡಲ. ಅದರ ರಾಜ ಯಾರು? ಪರಮೇಶ್ವರ–ಪರಬ್ರಹ್ಮದ ಅಧಿಕಾರ ರೂಪ, ಬ್ರಹ್ಮವಿಷ್ಣುಶಿವಾದಿ ಕಾರ್ಯಕಾರಾವತಾರಗಳು.

> ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥

ಜಗತ್ತೂ ಜೀವವೂ ದೇಹವಂತಗಳು. ಆದದ್ದರಿಂದ ಅವುಗಳಿಗೆ ಹುಟ್ಟುಸಾವುಗಳುಂಟು, ನಾನಾ ವಿಕಾರಗಳುಂಟು. ಈಶ್ವರನು ಹಾಗೆ ಹುಟ್ಟು ಸಾವುಗಳಿಗೆ ಅಧೀನನಲ್ಲ. ತಾನು

ಜನನಮರಣವಿಕಾರಗಳಿಲ್ಲದೆ ಜೀವಜಗತ್ತುಗಳ ಜನನಮರಣವಿಕಾರಗಳಿಗೆ ಮೂಲ ಕಾರಣನಾದವನು ಈಶ್ವರ; ಹೀಗೆ ತ್ರಿಮೂರ್ತ್ಯಾತ್ಮಕನು ಪರಬ್ರಹ್ಮ.

ಬ್ರಹ್ಮಲಿಂಗಗಳು

ಈಶ್ವರನ ಅಸ್ತಿತ್ವವನ್ನು ಗುರುತಿಸುವುದು ಹೇಗೆ? ಈಶ್ವರಸಮಕ್ಷತೆಯ ಲಕ್ಷಣಗಳನ್ನು "ರಸೋಽಹಮಪ್ಸು" ಎಂಬಲ್ಲಿಂದ "ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ" ಎಂಬಲ್ಲಿಯವರೆಗೆ ನಾಲ್ಕು ಶ್ಲೋಕಗಳು ಹೇಳುತ್ತವೆ.

> ರಸೋಽಹಮಪ್ಸು ಕೌಂತೇಯ ಪ್ರಭಾಽಸ್ಮಿ ಶಶಿಸೂರ್ಯಯೋಃ ।
> ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥
> ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
> ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥
> ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್ ।
> ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ॥
> ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಮ್ ॥
> ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥

ಅನ್ನಪಾನಾದಿಗಳ ರುಚಿಗಳು, ಸೂರ್ಯಚಂದ್ರರ ಬೆಳಕು, ಮನುಷ್ಯರ ಪೌರುಷ, ಬೆಂಕಿಯ ತೇಜಸ್ಸು, ಪ್ರಾಣಿಗಳ ಪ್ರಾಣ, ತಪಸ್ವಿಗಳು ಮಾಡುವ ತಪಸ್ಸು, ಬುದ್ಧಿಶಾಲಿಗಳ ಬುದ್ಧಿಗುಣ, ದುಷ್ಕಾರ್ಯಕ್ಕೆ ಹೋಗದ ಬಲಿಷ್ಠರ ಬಲ, ಅಧರ್ಮಕ್ಕೆ ಹೋಗದ ಕಾಮಿಗಳ ಕಾಮನೆ–ಇವೆಲ್ಲ ಬ್ರಹ್ಮಪ್ರಭಾವವೇ. ಲೋಕದಲ್ಲಿ ಎಲ್ಲೆಲ್ಲಿ ಯಾವಯಾವುದು ಸಾರವೋ ಅದೆಲ್ಲ ಬ್ರಹ್ಮಶಕ್ತಿಯ ಚಿಹ್ನೆ.

ಹೀಗೆ ಶ್ರೇಷ್ಠವಾದ, ಸಾರಭೂತವಾದ ಗುಣಗಳನ್ನೇ ಹೇಳಿದ್ದಾನೆ ಸ್ವಾಮಿ. ಏಕೆ? ಹೆಗ್ಗುರುತನ್ನು ಮಾತ್ರ ಹೇಳುವುದಕ್ಕೆ ಹೊರಟಿದ್ದಾನೆ; ಎಲ್ಲವನ್ನೂ ಅಲ್ಲ ಎಲ್ಲವೂ ಪರಬ್ರಹ್ಮವೆನ್ನುವುದೇನೋ ಸರಿಯೇ. ಅತ್ಯಾಶೆ, ದುಷ್ಕಾರ್ಯಪ್ರವೃತ್ತಿ ಇದೆಲ್ಲ ಬ್ರಹ್ಮವಸ್ತುವಿನ ಪರಿಧಿಯಲ್ಲೇ ಸೇರಿದ್ದಾದರೂ ಈಗ ಹೇಳಹೊರಟಿರುವುದು ಹೆಗ್ಗುರುತನ್ನು. ಅಧರ್ಮಕಾರ್ಯಗಳು ಭಗವಂತನ ಅಧಿಕಾರದಲ್ಲಿ ಸೇರಿದ್ದಾದರೂ ಹೆಗ್ಗುರುತು ಅದಲ್ಲ "ಧರ್ಮ + ಅವಿರುದ್ಧೋ ಭೂತೇಷು." ಇದೇ ಅಭಿಪ್ರಾಯವನ್ನು ಮುಂದೆ ಹತ್ತನೆಯ ಅಧ್ಯಾಯದಲ್ಲಿ ನೋಡುವುದಾಗುತ್ತದೆ:

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥

ಲೋಕದಲ್ಲಿ ಎಲ್ಲೆಲ್ಲಿ ಯಾವಯಾವುದು ಸಾರಭೂತವಾಗಿದೆಯೋ ಮಹಿಮಾ ವಿಶಿಷ್ಟವಾಗಿದೆಯೋ ಪ್ರಕಾಶಮಾನವಾಗಿದೆಯೋ ಅದನ್ನೆಲ್ಲ ಬ್ರಹ್ಮಶಕ್ತಿಯ ಹೆಗ್ಗುರುತೆಂದು ತಿಳಿಯಬೇಕು. ಒಂದೊಂದು ಜಗದ್ವಸ್ತುವಿಗೂ ಒಂದೊಂದು ಬೆಲೆಯುಂಟಷ್ಟೆ? ಯಾವ ಗುಣ ಒಂದು ಪದಾರ್ಥದಲ್ಲಿರುವುದರಿಂದ ಆ ಪದಾರ್ಥಕ್ಕೆ ಒಂದು ಪ್ರಯೋಜಕತೆಯೂ ಒಂದು ಬೆಲೆಯೂ ಬರುತ್ತದೆಯೋ ಆ ಗುಣ ಬ್ರಹ್ಮಶಕ್ತಿಯದು. ಇದನ್ನೇ ಶ್ರುತಿಯಲ್ಲಿ ಹೇಳಿರುವುದು:

ಯ ಏವಂ ವೇದ ।
ಕ್ಷೇಮ ಇತಿ ವಾಚಿ ।
ಯೋಗಕ್ಷೇಮ ಇತಿ ಪ್ರಾಣಾಪಾನಯೋಃ ।
ಕರ್ಮೇತಿ ಹಸ್ತಯೋಃ ।
ಗತಿರಿತಿ ಪಾದಯೋಃ ।
ವಿಮುಕ್ತಿರಿತಿ ಪಾಯೌ ॥
… ತೃಪ್ತಿರಿತಿ ವೃಷ್ಟೌ ।
ಬಲಮಿತಿ ವಿದ್ಯುತಿ ।
ಯಶ ಇತಿ ಪಶುಷು ।
ಜ್ಯೋತಿರಿತಿ ನಕ್ಷತ್ರೇಷು ।
ಪ್ರಜಾತಿರಮೃತಮಾನಂದ ಇತ್ಯುಪಸ್ಥೇ ।
ಸರ್ವಮಿತ್ಯಾಕಾಶೇ ।
ತತ್ಪ್ರತಿಷ್ಠೇತ್ಯುಪಾಸೀತ ॥

ಯಾವುದು ಜನದ ಮಾತಿನಲ್ಲಿ ಕ್ಷೇಮಕರವಾಗುತ್ತದೆಯೋ, ಪ್ರಾಣಾಪಾನ ವಾಯುರೂಪದಲ್ಲಿ ಯಾವುದು ಪ್ರಾಣಾಧಾರವಾಗಿರುತ್ತದೆಯೋ, ಯಾವುದು ಕಾಲುಗಳಲ್ಲಿ ಚಲನ ಶಕ್ತಿಯಾಗಿರುತ್ತದೆಯೋ, ಮಳೆಯಲ್ಲಿ ಯಾವುದು ತೃಪ್ತಿಯುಂಟುಮಾಡುವ ಶಕ್ತಿಯಾಗಿರುತ್ತದೆಯೋ, ವಿದ್ಯುತ್ತಿನಲ್ಲಿ ಯಾವ ಬಲ ಇರುವುದರಿಂದ ಅದು ನಾನಾ ಕಾರ್ಯಗಳನ್ನು ಮಾಡುತ್ತಿದೆಯೋ, ಪಶುಸಂಪತ್ತಿನಲ್ಲಿ ಯಶೋಗುಣ ಯಾವುದೋ, ನಕ್ಷತ್ರ

ಮಂಡಲದಲ್ಲಿ ಯಾವುದು ಜ್ಯೋತಿಯಾಗಿದೆಯೋ–ಅವೆಲ್ಲ ಪರಬ್ರಹ್ಮಸಾನ್ನಿಧ್ಯಗಳು. ಬ್ರಹ್ಮ ಅದರಲ್ಲಿದೆ ಎಂದು ತಿಳಿದು ಉಪಾಸನೆ ಮಾಡತಕ್ಕದ್ದು.

ಜಗತ್ತಿನ ಅಸದಂಶ

ಹೀಗೆ ಮನುಷ್ಯವ್ಯಾಪಾರ, ದೈವವ್ಯಾಪಾರ ಎರಡರಲ್ಲೂ ಭಗವದಂಶ ಇದೆ. ಯಾವುದು ಪ್ರಯೋಜನಗುಣವನ್ನು ಪಡೆದಿದೆಯೋ ಅದಕ್ಕೆ ನಮ್ಮ ಜೀವನದಲ್ಲಿ ಒಂದು ಸ್ಥಾನ ಇರುವ ಹಾಗೆ ಯಾವುದನ್ನು ತಿರುಳಿಲ್ಲದ್ದೆನ್ನುತ್ತೇವೋ ಅದಕ್ಕೂ ನಮ್ಮ ಜೀವನರಂಗದಲ್ಲಿ ಒಂದು ಸ್ಥಾನ ಉಂಟು. ಆ ನಿಸ್ಸಾರಗಳೂ ಭಗವಂತನ ಪ್ರಭಾವಕ್ಕೇ ಸೇರಿದವು.

ನಿಲಯನಂ ಚಾನಿಲಯನಂ ಚ ।
ವಿಜ್ಞಾನಂ ಚಾವಿಜ್ಞಾನಂ ಚ ।
ಸತ್ಯಂ ಚಾನೃತಂ ಚ ॥

ಎಂಬ ಶ್ರುತಿಯ ಅಭಿಪ್ರಾಯ ಅದೇ.

ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ವಿದ್ಧಿ ನ ತ್ವಹಂ ತೇಷು ತೇ ಮಯಿ ॥

ಸತ್ತ್ವಗುಣವುಳ್ಳವು ಯಾವುವೋ, ರಾಜಸತಾಮಸಗುಣಗಳುಳ್ಳವು ಯಾವುವೋ ಅವೆಲ್ಲ ಬ್ರಹ್ಮದಿಂದ ಆದುವೇ. ಆದರೆ ಆ ನಾನಾ ಗುಣವಿಕಾರಗಳಲ್ಲಿ ಬ್ರಹ್ಮವಿಲ್ಲ; ಅವು ಬ್ರಹ್ಮದಲ್ಲಿವೆ.

ಸಮುದ್ರದಲ್ಲಿ ನೀರ್ಗುಳ್ಳೆಯಿದೆ, ಅದರ ನೊರೆಯಿದೆ; ನೊರೆಯಲ್ಲಿ ಸಮುದ್ರವಿಲ್ಲ. ಅಂತರಿಕ್ಷದಲ್ಲಿ ಜಲರೇಣುಸಮೂಹವಾದ ಮೇಘವಿದೆ; ಮೇಘದಲ್ಲಿ ಅಂತರಿಕ್ಷವಿಲ್ಲ. ಶರೀರದಲ್ಲಿ ಶರೀರಾಂಶವಲ್ಲದ ಎಷ್ಟೋ ವಸ್ತುಗಳು ಸೇರಿಕೊಂಡಿರುತ್ತವೆ. ನಖ ಶಿಖಾದಿಗಳು ದೇಹದಲ್ಲಿ ಹುಟ್ಟಿದವು, ಆದರೆ ಪ್ರಾಣಧಾರಣೆಗೆ ಅವು ಅವಶ್ಯಗಳೇನಲ್ಲ. ಯಾವುದೋ ಕಾರಣದಿಂದ ದೇಹಕ್ಕೆ ಸೇರಿದವೆಂಬಂತೆ ಕಾಣಿಸುತ್ತವೆ; ಪುನಃ ಹೊರಟು ಹೋಗುತ್ತವೆ. ಹಾಗೆಯೇ ಬ್ರಹ್ಮಶರೀರವಾದ ಪ್ರಕೃತಿಯಲ್ಲಿ ರಾಜಸತಾಮಸಾದಿ ವಿಕಾರ ವೈಪರೀತ್ಯಗಳು ಏನೇನೋ ನಡೆಯುತ್ತವೆ. ಆದರೆ ಅವು ಬ್ರಹ್ಮಲಕ್ಷಣಗಳಲ್ಲ. ಬ್ರಹ್ಮಸಾನ್ನಿಧ್ಯ ಅವುಗಳಲ್ಲಿಲ್ಲ.

ಗುಣವೈಷಮ್ಯದ ಆವಶ್ಯಕತೆ

ಅಸದಂಶ–ಸಾತ್ತ್ವಿಕವಲ್ಲದ್ದು–ಎಂದರೆ ರಾಜಸತಾಮಸಾದಿಗಳು ಜಗದ್ವ್ಯಾಪಾರಕ್ಕೆ ಬೇಕಾಗುತ್ತವೆ. ಕೇವಲ ಸಾತ್ತ್ವಿಕಾಂಶ ಸಾಕಾಗುವುದಿಲ್ಲ. ಸತ್ತ್ವ, ರಜಸ್ಸು, ತಮಸ್ಸು–ಹೀಗೆ ಮೂರು ಗುಣಗಳನ್ನು ಶಾಸ್ತ್ರ ಪದೇಪದೇ ಹೇಳಿದೆ.

ಗುಣ ಮೂರೇಕೆ? ಎರಡೇ ಏಕಾಗಬಾರದು? ಅಥವಾ ನಾಲ್ಕಾಗಬಹುದಲ್ಲ? ಜಗತ್ತಿನ "ಜಗಳ" ಸಾಧ್ಯವಾಗುವುದು ವಿಷಮಸಂಖ್ಯೆಯಿಂದ. ಒಂದೇ ಇದ್ದರೆ ಜಗಳ ಸಾಧ್ಯವಿಲ್ಲ. ಎರಡಿದ್ದರೆ ಒಂದನ್ನೊಂದು ಹೊಡೆದು ಸೋಲಿಸಬಹುದು. ಇಬ್ಬರನ್ನು ಭೇದಮಾಡುವುದಕ್ಕೆ ಮೂರನೆಯವನೊಬ್ಬನ ಆವಶ್ಯಕತೆ. ಈ ವಿಷಮಸ್ಥಿತಿ ನಿರಂತರವಾಗಿ ಇರಬೇಕಾದದ್ದು. ಈ ಸ್ಥಿತಿ ಇಲ್ಲದೆ ಜಗತ್ತಿಲ್ಲ, ಜಗತ್ತಿನ ಇರುವಿಕೆಗೆ, –ಎಂದರೆ ಜಗತ್ತಿನ ಲಕ್ಷಣವಾದ ನಿರಂತರ ಚಲನವಲನರೂಪದ ವ್ಯಾಪಾರ ನಡೆಯುವುದಕ್ಕೆ–ಮೂಲಭೂತವಾದದ್ದು ಈ ಸತ್ತ್ವರಜಸ್ತಮೋಗುಣಗಳ ಅನ್ಯೋನ್ಯ ಘರ್ಷಣೆ. ಈ ವಿಷಮತೆಯನ್ನು ಪ್ರಕೃತಿ ಇರಿಸಿದ್ದಾಳೆ ಸೃಷ್ಟಿಯಲ್ಲಿ. "ಎಲೋ ಮನುಷ್ಯ, ನಾನು ಈ ಜಗಳ ಇಟ್ಟಿದ್ದೇನೆ; ಅದನ್ನು ಮೀರುವ ಶಕ್ತಿ ನಿನಗಿದ್ದರೆ ಮೀರು, ನೋಡೋಣ" –ಎಂಬುದು ಪ್ರಕೃತಿ ನಮಗೆ ಕೊಡುತ್ತಿರುವ ಸ್ಪರ್ಧಾಶಪಥ (ಚಾಲೆಂಜ್).

ಮಾಯೆ

ಈ ತತ್ತ್ವವಿವೇಕ ಜನದಲ್ಲಿ ಸಾಮಾನ್ಯವಾಗಿ ಏಕೆ ಇರುವುದಿಲ್ಲ? ಇದಕ್ಕೆ ಭಗವಂತನ ವಿವರಣೆ ಹೀಗೆ:

> ಮಾಯಯಾಽಪಹೃತಜ್ಞಾನಾಃ ।।

ಮಾಯೆಯು ಜನದ ತತ್ತ್ವಜ್ಞಾನಸಾಮರ್ಥ್ಯವನ್ನು ಅಪಹರಿಸಿದೆ.

ಮಾಯೆಯೆಂಬುದು ಪ್ರಕೃತಿಕಾರ್ಯದಲ್ಲಿಯ ಒಂದು ತಂತ್ರ ವಿಶೇಷ. ಅದು ನಮ್ಮ ಮನಸ್ಸಿನ ಇತರ ವಸ್ತುಗ್ರಹಣದಲ್ಲಿ ಆದ ಒಂದು ಅಸಂಗತದಿಂದ ಫಲಿಸಿದ ಪ್ರಮಾದ ಅಥವಾ ಭ್ರಮೆ. ಸಂಗತ ಎಂದರೆ ಒಂದಕ್ಕೊಂದು ಹೊಂದಿಕೊಂಡಿರುವುದು: ಅವಿರೋಧ ಮಾತ್ರವಲ್ಲ, ಸ್ನೇಹವೂ ಅಲ್ಲಿರಬೇಕು. ಯಥಾರ್ಥದರ್ಶನಕ್ಕೆ ಎರಡು ಕಾರಣಸ್ಥಾನಗಳು ಸುಸಂಗತವಾಗಿರುವುದು ಅವಶ್ಯ: (೧) ದರ್ಶಕನ ದೃಷ್ಟಿ ಪಟುವಾಗಿರಬೇಕು; (೨) ವಸ್ತುವಿನ ಮೇಲೆ ಬೀಳುವ ಬೆಳಕು ಸಾಕಷ್ಟಿರಬೇಕು. ಈ ಎರಡರಲ್ಲಿ ಯಾವ ಒಂದರಲ್ಲಿ ಕುಂದಿದ್ದರೂ ವಸ್ತುಜ್ಞಾನ ಸರಿಯಾದದ್ದಾಗುವುದಿಲ್ಲ. ದರ್ಶಕ ದೃಷ್ಟಿಶಕ್ತಿ, ದೃಶ್ಯ ವಸ್ತುವಿನ ಪ್ರತಿಭಾಸ– ಇವೆರಡರಲ್ಲಿ ಯಾವ ಒಂದು ನ್ಯೂನವಾದರೂ ಅಯಥಾರ್ಥ ಜ್ಞಾನವಾಗುತ್ತದೆ. ಎರಡರಲ್ಲಿಯೂ ನ್ಯೂನತೆಯಿದ್ದರಂತೂ ಹೇಳತಕ್ಕದ್ದೇ ಇಲ್ಲ. ದರ್ಶಕನ ದೃಷ್ಟಿನ್ಯೂನತೆಯನ್ನು ಅವಿದ್ಯೆ ಎಂದೂ ದೃಶ್ಯವಸ್ತುವಿನ ಸ್ಫುರಣಸ್ಪಂದವನ್ನು (ಅದಿರು ಹೊಳಪನ್ನು) ಮಾಯೆ ಎಂದೂ ಕರೆಯುವುದು ಪದ್ಧತಿ. ಜೀವಾವಿದ್ಯೆಯೂ ಜಗನ್ಮಾಯೆಯೂ ಸಹಕಾರಿ ಪ್ರತಿಯೋಗಿಗಳು.

ಜಗತ್ತು ಕುಣಿಯುತ್ತಿದೆ; ಕಣ್ಣು ಅದಿರುತ್ತಿದೆ. ಆಗಿನ ನೋಟ ಮಾಯೆಯದು.

ಸಂಜೆಮಬ್ಬಿನಲ್ಲಿ ಒಬ್ಬ ಮನುಷ್ಯ ಒಂದೂರಿನಿಂದ ಇನ್ನೊಂದೂರಿಗೆ ಹೋಗುತ್ತಿರುತ್ತಾನೆ. ದಾರಿಯಲ್ಲಿ ಒಂದು ವಸ್ತು ಅವನ ಕಣ್ಣಿಗೆ ಬೀಳುತ್ತದೆ. ಅದು ವಂಕುವಂಕಾಗಿ ಅಲುಗಾಡುತ್ತಿರುವಂತೆ ಕಾಣುತ್ತದೆ. ಅವನು ಅದು ಹಾವೆಂದು ತಿಳಿದು ಹೆದರಿ ಓಡುತ್ತಾನೆ. ಮೈನಡುಗಿ ಬೆವರುತ್ತದೆ. ಆಗ ಇನ್ನೊಬ್ಬನು ಅಲ್ಲಿಗೆ ಬಂದು ಭಯಕ್ಕೆ ಕಾರಣವೇನೆಂದು

ಕೇಳುತ್ತಾನೆ. “ಹಾವು” ಎಂದು ಭಯಪಟ್ಟವನು ಹೇಳಿದರೆ ಇನ್ನೊಬ್ಬನು ನಕ್ಕು, “ಅದು ಹಾವಲ್ಲ. ಹಗ್ಗದ ತುಂಡು” ಎನ್ನುತ್ತಾನೆ. ಅರೆಬೆಳಕಿನಲ್ಲಿ ಹಗ್ಗವನ್ನು ಹಾವಿನಂತೆ ತೋರಿಸಿದ್ದು ಮಾಯೆ. ಆ ಕೃತ್ರಿಮವನ್ನು ಆ ಮನುಷ್ಯ ಕಂಡುಕೊಳ್ಳಲಾಗದಂತೆ ಮಾಡಿದ್ದು ಅವನ ನೈಜದ ಅವಿದ್ಯೆ.

ಮಾಯೆ ಸುಳ್ಳಲ್ಲ; ಅದು ದಿಟವೂ ಅಲ್ಲ. ಹಗ್ಗವು ಹಾವಾಗಿ ತೋರಿ ನಿಜವಾದ ಹಾವು ಉಂಟುಮಾಡುವ ಬೆವರು ನಡುಕ ಮುಂತಾದುವನ್ನೆಲ್ಲ ಉಂಟುಮಾಡಿತು. ಅವನು ಕಂಡ “ಹಾವು” ಹಾವಲ್ಲದಿದ್ದರೂ ಹಾವಿನ ಹೋಲಿಕೆಯನ್ನು ತಾಳಿತ್ತು. ಅವನು ಎಂದೋ ಎಲ್ಲಿಯೋ ನೋಡಿದ್ದ ಹಾವಿನ ನೆನಪು ಈಗ ಅವನಿಗೆ ಆ ರಜ್ಜುವಿನ ಆಶ್ರಯದಿಂದ ಸರ್ಪಭ್ರಾಂತಿಯನ್ನುಂಟುಮಾಡಿತು. ಹೀಗೆ ಒಂದು ವಸ್ತುವನ್ನು ಮತ್ತೊಂದು ವಸ್ತುವೆಂಬ ತಪ್ಪು ತಿಳಿವಳಿಕೆಯನ್ನು ಉಂಟುಮಾಡುವ ಸಂದರ್ಭವಿಶೇಷವೇ ಮಾಯೆ. ಮಾಯೆ ಎಂಬುದು ಸಂಪೂರ್ಣವಾದ ಸುಳ್ಳಲ್ಲ; ನಿಜವಂತೂ ಅಲ್ಲ. ಮೇಲಿನ ಕಥೆಯಲ್ಲಿ ಹಗ್ಗದ ತುಂಡೂ ಹಿಂದಿನ ಸರ್ಪಸ್ಮೃತಿಯೂ ಎರಡೂ ಇಲ್ಲದೆ ಹೋಗಿದ್ದಿದ್ದರೆ ಆ ಭ್ರಾಂತಿಯುಂಟಾಗುತ್ತಿರಲಿಲ್ಲ. ಆ ಮನುಷ್ಯನಲ್ಲಿ ಆ ಸಂದರ್ಭವನ್ನು ಅವನು ವಿಚಾರ ಮಾಡುವುದಕ್ಕೆ ಮುಂಚೆಯೇ ಭಯ ಆತುರಗಳನ್ನುಂಟುಮಾಡಿದ್ದು ಅವನ ಅವಿದ್ಯೆ.

ನಾವು ಬಿಸಿಲಿನಲ್ಲಿ ಸಂಚಾರ ಮಾಡುವಾಗ–ಅದೂ ಮೋಟಾರ್, ರೈಲು ಮುಂತಾದ ಶೀಘ್ರವಾಹನಗಳಲ್ಲಿ ಹೋಗುತ್ತಿರುವಾಗ–ದೂರದಲ್ಲೆಲ್ಲೋ ಕೆರೆಯಿರುವಂತೆ ತೋರುತ್ತದೆ. ವಾಸ್ತವವಾಗಿ ಅದು ಕೆರೆಯಲ್ಲ. ಮರಳುಬೈಲು. ಸೂರ್ಯನ ಕಿರಣಗಳು ಆ ಮರಳಿನ ಮೇಲೆ ಇಳಿಯುವಾಗಲೂ, ಬಳಿಕ ಗಾಜಿನಂತೆ ಬೆಳ್ಳಗೂ ಸಮತಲವಾಗಿಯೂ ಇರುವ ಆ ಪ್ರದೇಶದಿಂದ ಸೂರ್ಯಪ್ರಭೆ ಪ್ರತಿಫಲಿಸಿ ಮೇಲಕ್ಕೇಳುವಾಗಲೂ ಅದು ಅಲುಗಾಡುತ್ತದೆ. ಆ ಕಿರಣ ಸ್ಪಂದನಗಳು ನಮ್ಮ ಕಣ್ಣಿನ ದೃಷ್ಟಿಕಿರಣಗಳನ್ನು ಚದರಿಸುತ್ತವೆ. ಆಗ ಮರಳಿದ್ದ ಕಡೆ ನೀರನ್ನು ಕಂಡಂತಾಗುತ್ತದೆ. ಇದೇ ಮಾಯೆ. ಹೊರಗೆ ಬಿಸಿಲಿನ ಕೃತ್ರಿಮ, ಒಳಗೆ ಬಾಯಾರಿಕೆಯ ಆತುರ.

ನಾವು ತಲೆಯೆತ್ತಿ ನೋಡಿದರೆ ಮೇಲೆ ದೂರದಲ್ಲಿ ಒಂದು ನೀಲವಸ್ತ್ರದ ವಿತಾನವನ್ನು ಕಟ್ಟಿರುವಂತೆ ಕಾಣುತ್ತದೆ. ಆದರೆ ಆಕಾಶದಲ್ಲಿ ವಸ್ತ್ರವಾಗಲಿ ತಗಡಾಗಲಿ ಹಲಗೆಯಾಗಲಿ ಇಲ್ಲ; ಅದು ಬರಿಯ ಜಾಗ, ಖಾಲಿ ಜಾಗ. ಆಕಾಶದ ನೀಲವರ್ಣ ಒಂದು ಮಾಯೆ.

ಅಂತರಿಕ್ಷದ ದೂರದಿಂದಲೂ ನಕ್ಷತ್ರ ಗ್ರಹಗಳ ಕಿರಣಗಳ ಅದಿರೋಣದರಿಂದಲೂ ನಮ್ಮ ಕಣ್ಣಿನ ಕಿರಣಗಳು ಅಷ್ಟು ದೂರ ಹೋಗಲಾರದ್ದರಿಂದಲೂ ನಮ್ಮ ಕಣ್ಣಿಗೆ ನೀಲಿಯ ಹರಹು ತೋರಬಹುದು. ಯಥಾರ್ಥವಂತೂ ಅಲ್ಲ. ಕಾರಣ ಯಾವುದಾದರಾಗಲಿ, ದೃಷ್ಟಿ ಪ್ರಮಾದವಂತೂ ವಾಸ್ತವದ ಸಂಗತಿ. ಆ ಪ್ರಮಾದವು ಮಾಯಾ ಕಾರ್ಯ.

ಇನ್ನೊಂದು ಉದಾಹರಣೆಯನ್ನು ನೋಡೋಣ. ನಾವು ಬೆಂಗಳೂರಿನಿಂದ ರೈಲಿನಲ್ಲಿ ಹೊರಟು ಮೈಸೂರಿಗೆ ಪ್ರಯಾಣಮಾಡುತ್ತಿದ್ದೇವೆ. ಮದ್ದೂರು ಬಳಿ ನಮ್ಮ ರೈಲು ತಲುಪಿದಾಗ್ಗೆ ಅಲ್ಲಿ ಮೈಸೂರಿನಿಂದ ಬಂದ ಗಾಡಿ ಅದುವರೆಗೂ ಕಾದಿದ್ದು ಆಗ ಬೆಂಗಳೂರು ಕಡೆ ಹೊರಡುತ್ತದೆ. ನಮ್ಮ ಬಂಡಿ ನಿಂತೇ ಇರುತ್ತದೆ. ಅದರ ಕಿಟಕಿಯಿಂದ ನಾವು ಹೊರಕ್ಕೆ ನೋಡುತ್ತಿದ್ದರೆ ಚಲನಮಾಡುತ್ತಿರುವುದು ನಮ್ಮ ಬಂಡಿ, ಮೈಸೂರಿನಿಂದ ಬಂದದ್ದಲ್ಲ ಎಂದು ನಮಗೆ ಭಾಸವಾಗುತ್ತದೆ. ಹೀಗೆ ವಸ್ತುಸ್ಥಿತಿಯನ್ನು ಬೇರೆ ಮಾಡಿ ಅಥವಾ ಮರೆಮಾಚಿ ನಮ್ಮ ಮನಸ್ಸಿಗೆ ಬರುವ ಪ್ರತೀತಿಯು ಮಾಯೆ. ಇರುವ ಒಂದು ವಸ್ತು ಬೇರೊಂದು ವಸ್ತುವಿನಂತೆ ನಮಗೆ ಕಾಣಿಸುವುದು ಮಾಯೆ. ಹಾಗೆಯೇ ಇರುವ ವಸ್ತುವು ನಮ್ಮ ಕಣ್ಣಿಗೆ ಬೀಳದಂತೆ ಮಾಡಿಸುವುದು ಮಾಯೆ.

ಮಾಯೆಯ ದ್ವೈವಿಧ್ಯ

ಮಾಯೆ ಎರಡು ವಿಧಗಳಲ್ಲಿ ಕೆಲಸ ಮಾಡುತ್ತದೆ:

1. ಒಂದಿರುವುದನ್ನು ಇನ್ನೊಂದನ್ನಾಗಿ ತೋರಿಸುವುದು. ಇದಕ್ಕೆ ವಿಕ್ಷೇಪಶಕ್ತಿ ಎಂದು ಹೆಸರು. ನಿರ್ಜಲವಾದ ಮರಳುಕಾಡಿನ ಮೇಲೆ ಮಧ್ಯಾಹ್ನದ ಸೂರ್ಯಕಿರಣ ಬಿದ್ದು ಅಲ್ಲಿ ಜಲಾಶಯವಿರುವಂತೆ ದೂರದಿಂದ ನಮ್ಮ ಕಣ್ಣಿಗೆ ಆಗುತ್ತದೆ. ಅದೇ ಮರೀಚಿಕೆ. ಅದು ಮಾಯೆಯ ವಿಕ್ಷೇಪ.
2. ಇರುವುದನ್ನು ಇಲ್ಲವೆನ್ನಿಸುವಂತೆ ಅದಕ್ಕೆ ಮುಸುಕು ಕವಿಸುವುದು. ಇದು ಆವರಣ. ದೊಡ್ಡ ಮರ ಹಿಂದೆ ಎಂದೋ ತನ್ನ ಹುಟ್ಟಿಗೆ ಕಾರಣವಾಗಿದ್ದ ಬೀಜವನ್ನು ಅದೃಶ್ಯವನ್ನಾಗಿ ಮಾಡುತ್ತದೆ. ಗಿಡ ಬೆಳೆದು ದೊಡ್ಡ ಮರವಾದ ಮೇಲೆ ಅದು ಎಂದೆಂದೂ ಹಾಗೆಯೇ ಇದ್ದದ್ದು ಎಂದು ನಮ್ಮ ಮನಸ್ಸಿಗೆ ತೋರುವಂತಾಗಿ, ಅದಕ್ಕೆ ಯಾವುದೋ ಒಂದು ಕಾಲದಲ್ಲಿ ಒಂದು ಬೀಜ ಕಾರಣವಾಗಿತ್ತೆಂಬುದನ್ನು ಮರೆಯಿಸುತ್ತದೆ. ಹೀಗೆ ನಿಜವನ್ನು ಬಚ್ಚಿಡುವುದು ಮಾಯೆಯ ಆವರಣಶಕ್ತಿ. ದೇಹದ ಬಾಹ್ಯ ಸೌಂದರ್ಯವು ದೇಹದೊಳಗಿನ ಮಲ ಮೂತ್ರ ಕೀವು ಮೊದಲಾದವು ನಮ್ಮ ಮನಸ್ಸಿಗೆ ಬಾರದಂತೆ ಮುಚ್ಚಿಡುತ್ತದೆ. ಇದು ಆವರಣಶಕ್ತಿ.

ಈ ದ್ವಿವಿಧವಾದ ಮಾಯಾಶಕ್ತಿಯನ್ನು ಇನ್ನು ಹೆಚ್ಚು ನಿರ್ದೇಶಮಾಡುವುದು ಸಾಧ್ಯವಿಲ್ಲ. ಏಕೆಂದರೆ ಮಾಯೆ ಒಂದು ದೃಷ್ಟಿಯಿಂದ ಇರತಕ್ಕದ್ದು; ಇನ್ನೊಂದು ದೃಷ್ಟಿಯಿಂದ ಇಲ್ಲದ್ದು. ಇದೆಯೆಂದರೆ ಇದೆ: ಇಲ್ಲವೆಂದರೆ ಇಲ್ಲ. ಅದು ಹೀಗೆಯೇ ಸರಿ ಎಂದು ನಿಷ್ಕರ್ಷೆಯಾಗಿ ಹೇಳಲು ಶಕ್ಯವಲ್ಲದ ಸಂಗತಿ.

> ಸನ್ನಾಪ್ಯಸನ್ನಾಪ್ಯುಭಯಾತ್ಮಿಕಾ ನೋ ಭಿನ್ನಾಪ್ಯಭಿನ್ನಾಪ್ಯುಭಯಾತ್ಮಿಕಾ ನೋ ।
> ಸಾಂಗಾಪ್ಯನಂಗಾ ಹ್ಯುಭಯಾತ್ಮಿಕಾ ನೋ ಮಹಾದ್ಭುತಾಽನಿರ್ವಚನೀಯರೂಪಾ ॥

ಸತ್ತೂ ಅಲ್ಲ, ಅಸತ್ತೂ ಅಲ್ಲ. ಸದಸತ್ತೂ ಅಲ್ಲ; ಬೇರೆಯಾದದ್ದೂ ಅಲ್ಲ, ಕೂಡಿಕೊಂಡದ್ದೂ ಅಲ್ಲ. ಅದಿಷ್ಟು ಇದಿಷ್ಟು ಬೆರೆತದ್ದೂ ಅಲ್ಲ; ಸಾವಯವವೂ ಅಲ್ಲ, ನಿರವಯವವೂ ಅಲ್ಲ,

ಎರಡರ ಬೆರಕೆಯೂ ಅಲ್ಲ; ಆ ಮಾಯಾಶಕ್ತಿಯು ಅದ್ಭುತವಾದದ್ದು; ಹುಟ್ಟಿದ್ದು ಹೇಗೆ, ಇರುವುದು ಹೇಗೆ–ಈ ವಿವರಣೆಗೆ ಅಶಕ್ಯವಾದದ್ದು (ಅನಿರ್ವಚನೀಯ).

ಅನಾದಿಯಾದ ಪೂರ್ವಜನ್ಮಪರಂಪರೆಯಿಂದ ಬಂದ ಅವಿದ್ಯೆಯನ್ನು ಯಾರು ಕಳೆದುಕೊಂಡಿರುತ್ತಾರೋ ಅವರ ಮೇಲೆ ಮಾಯೆಯ ಪರಿಣಾಮವಿಲ್ಲ.

ಒಟ್ಟಿನಲ್ಲಿ ನಾವು ಯಾವುದನ್ನು ಸಾಮಾನ್ಯವಾಗಿ ಭ್ರಾಂತಿಯೆಂದೂ ಪ್ರಮಾದವೆಂದೂ ಮಿಥ್ಯಾಗ್ರಹಣವೆಂದೂ ತಪ್ಪು ತಿಳಿವಳಿಕೆಯೆಂದೂ ಕರೆಯುತ್ತೇವೋ ಆ ಅಯಥಾರ್ಥ ಪ್ರತೀತಿಗೆ ಕಾರಣವಾದದ್ದು ಮಾಯೆ; ಇದನ್ನು ಇನ್ನೂ ಹೆಚ್ಚಾಗಿ ಬೇರೆ ಕಡೆ ನೋಡಬಹುದು.

ಮಾಯೆಯ ಪ್ರಾಬಲ್ಯ

ಪ್ರಕೃತಿಶಕ್ತಿಗಳಲ್ಲೊಂದಾದ ಮಾಯೆಯನ್ನು ಕುರಿತು ಇಷ್ಟು ವಿಸ್ತಾರವಾಗಿ ಹೇಳಿದ್ದಕ್ಕೆ ಕಾರಣ ಆ ಮಾಯೆಯಿಂದ ನಮ್ಮ ಜೀವಕ್ಕಾಗುವ ಪರಿಣಾಮ. ಆ ಮಾಯೆಯ ಬುದ್ಧಿಯ ಕಣ್ಣಿನಲ್ಲಿ ನೈಜವಾಗಿರುವ ಅವಿದ್ಯಾದೋಷವನ್ನು ಫಲಕ್ಕೆ ತರುವ ಜಗಚ್ಛಕ್ತಿ. ಆ ಪೊರೆಯ ಕಾರಣದಿಂದ ನಾವು ಒಂದು ಕಡೆ ಈಶ್ವರನಿಗೂ ಜಗತ್ತಿಗೂ ಇರುವ ಅವಿನಾಭಾವವನ್ನು ಕಾಣದಂತಾಗುತ್ತದೆ; ಇನ್ನೊಂದುಕಡೆ ಜೀವನಿಗೂ ಪರಮಾತ್ಮನಿಗೂ ಇರುವ ತಾತ್ತ್ವಿಕ ಸಂಬಂಧವನ್ನು ಕಾಣದಂತಾಗುತ್ತದೆ. ಜೀವಕ್ಕೆ ತನ್ನ ದಿನದಿನದ ಪ್ರಪಂಚವೇ ಸರ್ವಶಾಶ್ವತವೆಂದು ತೋರುವಹಾಗೆ ಮಾಡುತ್ತದೆ ಮಾಯೆ. ಮತ್ತು ಜೀವನದಲ್ಲಿ “ಈಶ್ವರೋಽಹಮಹಂಭೋಗೀ” ಇತ್ಯಾದಿರೂಪದ ಅಹಂತಾಭ್ರಾಂತಿಯುಂಟಾಗುವಂತೆ ಮಾಡುತ್ತದೆ. ಇಂಥ ಮಹಿಮೆಯುಳ್ಳದ್ದು ಮಾಯೆ. ಅದನ್ನು ಮೀರಿದ ಹೊರತು ಜಗದೀಶ್ವರ ಸಂಬಂಧದ ಯಥಾರ್ಥವಾಗಲಿ ಜೀವೇಶ್ವರ ಸಂಬಂಧದ ಯಥಾರ್ಥವಾಗಲಿ ನಮಗೆ ದೊರಕಲಾರದು. ಮಾಯೆಯು ತತ್ತ್ವಜ್ಞಾನಕ್ಕೆ ಇರುವ ಮಹಾಪ್ರತಿಬಂಧಕವಾದದ್ದರಿಂದ ಅದನ್ನು ಕುರಿತು ಇಷ್ಟು ವಿಸ್ತಾರವಾಗಿ ಹೇಳಬೇಕಾಯಿತು.

ಬುದ್ಧಿಯ ಪರಿಮಿತತೆ

ಮೈಯ ಕಣ್ಣಿಗೆ ಮಂಜುಕವಿದಂತೆ ಬುದ್ಧಿಯ ಕಣ್ಣಿಗೂ ಮಂಜುಕವಿಯುತ್ತದೆ. ಒಂದು ಕಡೆ ಪೂರ್ವಜನ್ಮದ ವಾಸನೆಗಳು, ಅದರೆದುರುಗಡೆ ಜಗತ್ತಿನ ರುಚಿ ಕಾಂತಿ ವಿಲಾಸಗಳು–ಇವೆರಡರ ನಡುವೆ ಮನಸ್ಸಿನ ಕಿರಣಗಳು ಅದಿರುತ್ತವೆ. ಹಾಗೆಯೇ ಒಂದು ಕಡೆ ಬಹುಕಾಲದ ಅಭ್ಯಾಸಗಳು, ಅವಿಚಾರವಿಶ್ವಾಸಗಳು. ಅದಕ್ಕೆದುರಾಗಿ ಹೊಸ ಹೊಸ ತರ್ಕವಿತರ್ಕಗಳು, ಹೊಸ ಲೋಕಸಂಘಟನೆಗಳು–ಇವೆರಡರ ನಡುವೆ ಬುದ್ಧಿಯ ಕಿರಣಗಳು ಅದಿರುತ್ತವೆ. ಮೊದಲೇ ಮನುಷ್ಯನ ಬುದ್ಧಿಶಕ್ತಿ ಅಮಿತವಾದದ್ದಲ್ಲ, ಮಿತವೇ ಆದದ್ದು. ಹೀಗೆ ಸ್ವತಃ ಕುಂಠಿತವಾದ ಮನುಷ್ಯಬುದ್ಧಿಯು ಮನಸ್ಸಿನ ಪೂರ್ವವಾಸನೆ ಪೂರ್ವವಿಶ್ವಾಸಗಳಿಗೆ ವಶವರ್ತಿಯಾದ ಮೇಲೆ ಅದರ ನ್ಯೂನತೆ ದ್ವಿಗುಣವಾಗುತ್ತದೆ. ಈ ಪಾರ್ಶ್ವ ಹೀಗೆ ಮುಂಜುಗಣ್ಣಾಗಿರುವಾಗ ಅದು ನೋಡುವ ಜಗತ್ತಾದರೋ ಕ್ಷಣೇಕ್ಷಣೇ ಬದಲಾಯಿಸುತ್ತ ದಿಟ್ಟನೋಟಕ್ಕೆ ಸಿಕ್ಕದೆ ಅಲುಗಾಡುತ್ತಿರುತ್ತದೆ. ಹೀಗೆ ಒಂದು ಕಡೆ ಅರೆಕುರುಡೂ ಇನ್ನೊಂದು ಕಡೆ ಅದಿರುನಿಲುವೂ ಆಗಿರುವಲ್ಲಿ ಯಥಾರ್ಥದರ್ಶನ ಹೇಗಾದೀತು? ಆಗ ತವರವೇ ಬೆಳ್ಳಿಯೆಂದೆನಿಸುತ್ತದೆ. ಕಾಗೆ ಕೋಗಿಲೆಯೆಂದು ಸ್ವಾಗತಿಸಲ್ಪಡುತ್ತದೆ. ನೀರ್ಗುಳ್ಳೆಯ ನೊರೆ ಬಿಳಿಗಲ್ಲಿನ ಬೆಟ್ಟವೆಂದು ಗ್ರಹಿಸಲ್ಪಡುತ್ತದೆ. ಪಾಚಿ ಹೆಪ್ಪುಗಟ್ಟಿದ ಕೊಳ ಹುಲ್ಲುಗಾವಲೆಂದು ತಿಳಿಯಲ್ಪಡುತ್ತದೆ. ಹೀಗೆ ಮನೋಬುದ್ಧಿಗಳಿಗೆ ಸತ್ಯ ಸಿಕ್ಕದಂತೆ ಮಾಡುತ್ತದೆ ಜಗನ್ಮಾಯೆ.

> ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
> ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥
> ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
> ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥

ಪ್ರಕೃತಿಯಲ್ಲಿರುವ ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳು ಸಮಸ್ತ ಲೋಕಕ್ಕೂ ಮೋಹವನ್ನು ಕವಿಸಿವೆ. ಆ ಮೂರು ಗುಣಶಕ್ತಿಗಳಿಗೂ ಮೇಲ್ಪಟ್ಟದ್ದು ಬ್ರಹ್ಮವಸ್ತು; ಅದು ಎಂದಿಗೂ ವಿಕಾರಪಡದೆ ಇರತಕ್ಕದ್ದು ಎಂಬುದನ್ನು ಲೋಕ ತಿಳಿಯಲಾರದು. ಈ ತ್ರಿಗುಣಾತ್ಮಕವಾದ ಮಾಯೆ ದೈವಪ್ರಭಾವವುಳ್ಳದ್ದು. ಅದನ್ನು ಮೀರುವುದು ಕಷ್ಟ.

ಮಾಯಾಪಟಲ ನಮ್ಮನ್ನು ಮುಸುಕಿರುವ ಕಾರಣದಿಂದ ಜಗಜ್ಜೀವೇಶ್ವರತತ್ತ್ವ ನಮಗೆ ಲಭ್ಯವಾಗಿಲ್ಲ. ಆ ಮುಸುಕನ್ನು ಕಳಚಿ ಬಿಸಾಟರೆ ಆಗ ಪರಮತತ್ತ್ವ ಲಭ್ಯವಾಗುತ್ತದೆ. ಮಾಯೆಯನ್ನು ಮೀರುವುದು ಕಷ್ಟವೆಂದು ಭಗವಂತನೇ ಹೇಳಿದನಲ್ಲವೆ? ಭಗವಂತನನ್ನೇ ಯಾರು ಆಶ್ರಯಿಸಿಕೊಂಡಿರುತ್ತಾರೋ ಅವರು ಮಾಯೆಯನ್ನು ದಾಟುತ್ತಾರೆ. ಎಂದರೆ ಪರಮತತ್ತ್ವವನ್ನು ಕಾಣುತ್ತಾರೆ–ಎಂದೂ ಭಗವಂತನೇ ದಾರಿ ತೋರಿಸಿದ್ದಾನೆ.

ಮಾಯಾಸಂತರಣ

ತ್ರಿಗುಣಾತ್ಮಕವಾದ ಮಾಯೆ ದೈವಪ್ರಭಾವದಿಂದಾದದ್ದು. ಈ ಮಾಯೆ, ಈ ಮೋಸ, ನಮ್ಮನ್ನು ವಂಚನೆಮಾಡುತ್ತಿದೆ ಎಂದು ನಾವು ದೂರುವಂತಿಲ್ಲ. ಅದರ ಉತ್ಪತ್ತಿಸ್ಥಾನ ಪರಬ್ರಹ್ಮವಸ್ತು. ಯಾರು ಪರಬ್ರಹ್ಮವಸ್ತುವನ್ನೇ ಯಾವಾಗಲೂ ಮನಸ್ಸಿನಲ್ಲಿ ಧರಿಸಿರುತ್ತಾರೋ ಅವರು ಮಾಯೆಯನ್ನು ದಾಟುತ್ತಾರೆ. ಮಾಯೆಯು ಪ್ರಕೃತಿಯ ನಿಕೃಷ್ಟ ಕಾರ್ಯಗಳಲ್ಲಿ ಒಂದು. ನಿಕೃಷ್ಟವಾದದ್ದನ್ನು ಹೋಗಲಾಡಿಸುವುದು ಹೇಗೆ? ಉತ್ಕೃಷ್ಟವಾದದ್ದನ್ನು ಪ್ರೋತ್ಸಾಹನ ಮಾಡುವುದರಿಂದ. ದುರ್ಗಂಧವನ್ನು ನಿವಾರಿಸಬೇಕಾದರೆ ಸುಗಂಧ ಹಾಕಬೇಕು. ಹಾಗೆಯೇ ಮಾಯೆಯನ್ನು ಹೋಗಲಾಡಿಸುವುದು ಈಶ್ವರ ಸಮಕ್ಷತಾಭ್ಯಾಸದ ಮೂಲಕ– ಯಥಾರ್ಥಜ್ಞಾನವನ್ನು ಪ್ರೋತ್ಸಾಹಪಡಿಸುವುದರ ಮೂಲಕ. ಈಶ್ವರನ ಇರುವಿಕೆಯನ್ನು ನಮ್ಮ ಬುದ್ಧಿಯಲ್ಲಿ ಸ್ಥಿರಪಡಿಸಿಕೊಂಡಷ್ಟೂ ಮಾಯೆಯ ಹಿಡಿತ ಸಡಿಲ ಬೀಳುತ್ತದೆ.

ಭಗವದುಪಾಸನೆ

ಭಗವದುಪಾಸನೆಯೇ ತತ್ತ್ವಜ್ಞಾನಕ್ಕೆ ಉಪಾಯವೆಂದು ಸಿದ್ಧವಾಯಿತು. ಇನ್ನು ಉಪಾಸನೆಯ ವಿಧಾನವನ್ನು ಕುರಿತು ಒಂದೆರಡು ಮಾತು.

> ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
> ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥

ಭಗವಂತನನ್ನು ಆಶ್ರಯಿಸುವ ಜನದಲ್ಲಿ ನಾಲ್ಕು ಬಗೆ:

1. ಆರ್ತರು–ಎಂದರೆ “ಸಂಕಟಬಂದಾಗ ವೆಂಕಟರಮಣ” ಎನ್ನುವವರು;
2. ಜಿಜ್ಞಾಸುಗಳು–ಎಂದರೆ ಜ್ಞಾನಕುತೂಹಲವುಳ್ಳವರು, ಶಾಸ್ತ್ರವಿದ್ಯಾರ್ಥಿಗಳು;
3. ಅರ್ಥಾರ್ಥಿಗಳು–ಎಂದರೆ ಅದು ಬೇಕು, ಇದು ಬೇಕು ಎಂದು ಹರಕೆ ಹೊರುವವರು;
4. ಜ್ಞಾನಿಗಳು–ಎಂದರೆ ತತ್ತ್ವಾನುಭವಿಗಳು.

ಈ ನಾಲ್ಕು ಬಗೆಗಳವರೂ ಸುಕೃತಿಗಳೇ–ಪುಣ್ಯ ಮಾಡಿದವರೇ. ನಾಲ್ವರೂ ಉದಾರರೇ. ಜ್ಞಾನಿ ಅವರಲ್ಲಿ ಸಂಕಲ್ಪಸಿದ್ಧಿ ಪಡೆದವನು.

> ಜ್ಞಾನೀ ತ್ವಾತ್ಮೈವ ಮೇ ಮತಮ್ ॥

ಜ್ಞಾನಿಯು ಕೇವಲಾತ್ಮನು. ಅವನು “ನಾನೇ” ಎಂದರೆ ಕೃಷ್ಣಭಗವಂತನಲ್ಲಿ ಏಕೀಭವಿಸಿದವನೇ ಎಂದು ಅಭಿಪ್ರಾಯ.

> ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
> ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥

“ಇತರರು ಆ ಸರ್ವೋತ್ತಮಪದವಿಗೆ ಬಹುಜನ್ಮಗಳಲ್ಲಿ, ವಾಸುದೇವನೆ ಸರ್ವವೂ ಎಂಬ ತತ್ತ್ವವನ್ನು ಅನುಸಂಧಾನಮಾಡಿ, ಮೆಟ್ಟಲುಮೆಟ್ಟಲಾಗಿ ಹತ್ತಿಬರುತ್ತಾರೆ. ಅಂಥ ಮಹನೀಯರು ವಿರಳರಾಗಿರುತ್ತಾರೆ.”

ಮಾಯೆಯನ್ನು ಮೀರಲಾಗುವುದು ಈಶ್ವರಸಮಕ್ಷತಾಭ್ಯಾಸದ ಮೂಲಕ. ಅದು ತಮಗೆ ಅಶಕ್ಯವೆಂದು ಯಾರೂ ನಿರಾಶೆಪಡಬೇಕಾದದ್ದಿಲ್ಲ. ಆತುರಪಡದೆ ತಾಳ್ಮೆಯಿಂದ ಯತ್ನಿಸಬೇಕು. ಅದಕ್ಕೆ ಕಾಲ ಅನಂತವಾಗಿದೆಯಾದ್ದರಿಂದ ಆತುರಕ್ಕೆ ಕಾರಣವಿಲ್ಲ. ಮಾಡುವ ಸಾಧನೆ ಸಾಂಗವಾಗಿ ಸಾಗಬೇಕಾದದ್ದು ಮುಖ್ಯ. ಗಂಡಸಾಗಲಿ, ಹೆಂಗಸಾಗಲಿ, ತನ್ನ ತನ್ನ ಜನ್ಮಾವಸ್ಥೆಗನುಸಾರವಾಗಿ, ತನ್ನ ಮನಸ್ಸೊಪ್ಪಿದಂತೆ, ತನ್ನ ಬುದ್ಧಿಗೆ ಶಕ್ಯವಿರುವಂತೆ ಭಗವಂತನಲ್ಲಿ ಭಕ್ತಿಮಾಡಲಿ; ಯಾವ ದೇವತೆಯನ್ನಾದರೂ ಪೂಜಿಸಲಿ; ಯಾವ ವಿಧಾನದಲ್ಲಿಯಾದರೂ ಪೂಜಿಸಲಿ.

> ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾಽರ್ಚಿತುಮಿಚ್ಛತಿ ।
> ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥
> ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ ।
> ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್ ಹಿ ತಾನ್ ॥
> ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ ॥

"ಯಾರುಯಾರು ಯಾವಯಾವ ದೇವಮೂರ್ತಿಯನ್ನು ಶ್ರದ್ಧೆಯಿಂದ ಅರ್ಚಿಸಲಿಚ್ಛಿಸುತ್ತಾನೋ ಅವನವನ ಆಯಾ ದೇವತಾಶ್ರದ್ಧೆಯನ್ನು ನಾನು ಸ್ಥಿರಪಡಿಸುತ್ತೇನೆ. ಅವನು ಶ್ರದ್ಧೆಯಿಂದ ಆರಾಧಿಸಿದ್ದಾದರೆ ಅವನು ಬೇಡುವ ಇಷ್ಟಾರ್ಥಗಳು ಅವನಿಗೆ ಕೈಗೂಡುತ್ತವೆ. ಆ ವ್ಯವಸ್ಥೆಯನ್ನು ನಾನೇ ಮಾಡಿರಿಸಿದ್ದೇನೆ."

ಈ ವಾಕ್ಯವನ್ನು ನೆನಸಿಕೊಂಡರೆ ನಮ್ಮ ಮತವೈಷಮ್ಯಗಳು ಎಂಥ ಅವಿನಯ, ಎಂಥ ಅವಿಧೇಯತೆ ಎಂಬುದು ಸ್ಪಷ್ಟವಾಗುತ್ತದೆ. ಹಿಂದೂಗಳು ಮಾತ್ರವೇ ಅಲ್ಲ, ಕ್ರಿಸ್ತರೂ ಮುಸಲ್ಮಾನರೂ ಸಹ ಲಕ್ಷ್ಯದಲ್ಲಿರಿಸಬೇಕಾದದ್ದು ಈ ತತ್ತ್ವ. ದೇವತೆಯ ಆಕಾರ ನಿರಾಕಾರಗಳಲ್ಲ ಪ್ರಧಾನವಾದದ್ದು; ಭಕ್ತನ ಭಕ್ತಿ ಶ್ರದ್ಧೆಗಳು ಪ್ರಧಾನ; ಅವನ ಮನೋಭಾವ ಪ್ರಧಾನ; ಅವನ ಭಗವದಾಕಾಂಕ್ಷೆಯ ತೀವ್ರತೆ ಪ್ರಧಾನ.

ಭಗವಂತನಲ್ಲಿ ಮನಸ್ಸಿರಿಸುವುದು ಎಂದರೆ ಭಗವಂತನಲ್ಲದ್ದರಿಂದ– ಭಗವಂತನದಲ್ಲದ್ದರಿಂದ–ಮನಸ್ಸನ್ನು ಬಿಡಿಸುವುದು ಎಂದರ್ಥ. ಹಾಗಾದರೆ ಪತಿಪತ್ನೀಪುತ್ರಾದಿಗಳ ಪಾಡೋ? ಎಂದರೆ, ಆ ಋಣಾನುಬಂಧಗಳು

ಭಗವತ್ಕೃತಗಳಲ್ಲವೋ? ಸರ್ವತ್ರ ಭಗವತ್ಸಮಕ್ಷತೆಯನ್ನು ಕಾಣುವವನು ಎಲ್ಲ ಲೋಕಸಂಬಂಧಗಳನ್ನೂ ಈಶ್ವರಪ್ರಸಾದವೆನ್ನುತ್ತಾನೆ. ಕುಟುಂಬ ಕರ್ತವ್ಯಗಳನ್ನು ಅವನು ಭಗವತ್ಸೇವೆ ಎಂಬ ವ್ರತಬುದ್ಧಿಯಿಂದ ನಡಸುತ್ತಾನೆ. ಭಗವಂತನದಲ್ಲದ್ದು ಅವನ ಪಾಲಿಗೆ ಯಾವುದೂ ಇರದು.

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ ॥
ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ ॥

“ಸಮಸ್ತ ಪ್ರಾಣಿಗಳೂ ಜನನಕಾಲದಲ್ಲಿ–ಎಂದರೆ ಸ್ವಾಭಾವಿಕವಾಗಿ ಇಚ್ಛೆ, ದ್ವೇಷ, ಅಭಿಮಾನ, ಅಸೂಯೆ ಇತ್ಯಾಕಾರಕಗಳಾದ ದ್ವಂದ್ವಗಳಿಗೆ ಅಧೀನರಾಗಿದ್ದುಕೊಂಡು, ವಿವೇಕವನ್ನು ಕಳೆದುಕೊಂಡಿರುತ್ತಾರೆ. ಯಾವ ಜನರ ಪಾಪ ಮುಗಿದು ಬಂದಿದೆಯೋ, ಯಾರು ಪುಣ್ಯ ಮಾಡಿದ್ದಾರೋ ಅವರು ಅಂಥ ದ್ವಂದ್ವಮೋಹದಿಂದ ಬಿಡುಗಡೆಹೊಂದಿ ಈಶ್ವರನಲ್ಲಿ ಶರಣುಹೊಗುತ್ತಾರೆ.”

ತಾತ್ಪರ್ಯ ಇಷ್ಟು. ಭಗವದ್ಭಕ್ತಿಯೆಂದರೆ ಮಮತಾಮೋಹವರ್ಜನೆ–ಭಗವಂತನಿಂದ ಬೇರೆಯಾದದ್ದರಲ್ಲಿ ತಾತ್ಸಾರ. ಬಂಧುಮಿತ್ರ ಪರಿವಾರವೆಲ್ಲ ಈಶ್ವರಪ್ರದತ್ತವಾದ ಪ್ರಸಾದವೆಂಬ ಭಾವನೆ ಬೆಳೆದಂತೆ ಮಮತೆ ಮೋಹಗಳು ಸವೆಯುತ್ತವೆ. ಅವು ಸವೆದಂತೆ ಜೀವವು ಶುದ್ಧವಾಗುತ್ತದೆ. ಜೀವವು ಶುದ್ಧವಾದಂತೆ ತತ್ತ್ವಾನುಸಂಧಾನ ಸುಲಭವಾಗುತ್ತದೆ. ತತ್ತ್ವಜ್ಞಾನವುಳ್ಳವನು ತನ್ನ ಜೀವನದಲ್ಲಿ ಜಗತ್ತಿಗೆ ಸಲ್ಲಬೇಕಾದದ್ದೇನು, ಅಂತರಾತ್ಮಕ್ಕೆ ಸಲ್ಲಬೇಕಾದದ್ದೇನು–ಎಂಬುದನ್ನು ಕಂಡುಕೊಂಡು ಉಭಯ ಹಿತಕರವಾಗಿ ನಿಶ್ಚಿಂತನಾಗುತ್ತಾನೆ. ಅದೇ ಶಾಂತಿ.

ಉಪನಿಷತ್ತಿನಲ್ಲಿ ಸೃಷ್ಟಿಕಾರ್ಯಕ್ಕೆ ಊರ್ಣನಾಭಿ ಎಂಬ ಹುಳುವಿನ ಉದಾಹರಣೆಯನ್ನು ಕೊಟ್ಟಿದೆ. ಊರ್ಣನಾಭಿ (ಉಣ್ಣೆಹೊಕ್ಕಳು) ಜೇಡರಹುಳು. ಹುಳು ತನ್ನೊಳಗಿನ ಅಂಟುರಸವನ್ನು ತಾನೇ ಹೊರಕ್ಕೆ ಹರಿಯಿಸಿ ಅದರಿಂದ ನೂಲು ಮಾಡಿ ಬಲೆ ಹರಡುತ್ತದೆ. ತನ್ನ ರಾಜ್ಯವನ್ನು ತಾನೇ ತನ್ನೊಡಲಿನಿಂದಲೇ ನಿರ್ಮಿಸಿಕೊಂಡು, ತಾನೇ ಅದರ

ರಾಜನೆಂದುಕೊಂಡು, ಅಲ್ಲಿ ಅಧಿಕಾರ ನಡೆಸುತ್ತದೆ. ಈ ನಿರ್ಮಾಣಾವಸರದಲ್ಲಿ ಕರ್ತನು ತಾನೆಂಬುದನ್ನು ಮರೆತುಕೊಳ್ಳುತ್ತದೆ. ಸ್ವಂತ ಸಂತೋಷಕ್ಕಾಗಿ ಹಾಡಿಕೊಳ್ಳುವವನು ತನ್ನ ಕಂಠಧ್ವನಿಯ ಮಾಧುರ್ಯದಲ್ಲಿ ತನ್ನನ್ನು ತಾನೇ ಮರೆತುಕೊಳ್ಳುತ್ತಾನೆ; ಇನ್ನ್ಯಾರ ಹಾಡಿಕೆಯನ್ನೋ ತಾನು ಕೇಳುತ್ತಿರುವಂತೆ ಅನುಭವಪಡುತ್ತಾನೆ. ಇದನ್ನೇ ಆಚಾರ್ಯರು

ವೀಣಾವಾದನವೇಳಾ
ಕಂಪಿತ ಶಿರಸಂ ನಮಾಮಿ ಮಾತಂಗೀಮ್ ॥

ಎಂದು ಸ್ಮರಿಸಿದ್ದಾರೆ. ಲಲಿತಾಮಾತೆ ವೀಣೆ ನುಡಿಸುತ್ತ ನುಡಿಸುತ್ತ ತಾನು ಮಾಡಿಸಿದ ನಾದಮಾಧುರ್ಯಕ್ಕೆ ತಾನೇ ತಲೆಯಾಡಿಸುತ್ತಾಳಂತೆ!

ಜೇಡರಹುಳು ಅದೇ ರೀತಿಯಲ್ಲಿ ತನ್ನ ತಂತ್ರಜಾಲದ ರಾಜ್ಯವನ್ನು ಬೇರೆ ಯಾರೋ ಕಟ್ಟಿದ್ದೆಂದೂ ತಾನು ಅದನ್ನು ಗೆದ್ದದ್ದೆಂದೂ ಭಾವಿಸಿಕೊಳ್ಳಬಹುದು. ಹೀಗೆ ಸ್ವಕಾರ್ಯದ ಚಿತ್ರವಿಚಿತ್ರಗಳಿಂದಲೇ ತತ್ಕರ್ತನು ಅದು ತನ್ನಿಂದ ಬೇರೆ ಎಂದು ಭ್ರಾಂತಿಪಡಬಹುದು. ವಾಸ್ತವದಲ್ಲಿ ಕರ್ತಾ, ಕಿರಣ, ಕಾರ್ಯ–ಮೂರೂ ಮೂಲ ಸ್ವರೂಪದಲ್ಲಿ ಏಕಮಾತ್ರವೇ. ಬ್ರಹ್ಮಚೈತನ್ಯವೇ ಕರ್ತಾ, ಪ್ರಕೃತಿಯೇ ಕರಣ, ಜಗತ್ತು ಕಾರ್ಯ. ಈ ಜಗತ್ಕಾರ್ಯದ ಚಿತ್ರವಿಚಿತ್ರ ವಿಲಾಸಗಳೇ ಮಾಯೆ. ಮಾಯಾವಿಭ್ರಮದಿಂದ ಮೂಲವಸ್ತುವಿನ ಅಖಂಡೈಕಸ್ವರೂಪವು ನಮ್ಮ ಕಣ್ಣಿಗೆ ಮರೆಯಾಗಿದೆ. ಶಾಸ್ತ್ರವು ಮರೆತೆರೆಯನ್ನು ತೋರಿಸಿ, “ಅದನ್ನು ಹರಿದೆಸೆದುಬಿಡು” ಎನ್ನುತ್ತದೆ. ಮೂಲವಸ್ತುವಿನಲ್ಲಿ ನಮ್ಮ ಶ್ರದ್ಧೆ ಬೆಳೆದಂತೆ ಮಾಯಾಪ್ರಭಾವ ನಮ್ಮ ಮೇಲೆ ತಗ್ಗುತ್ತದೆ.

ಬಹುರುಚಿಗಳ ಸವಿಯಲ್ ಅಜಂ ।
ಸಹಸ್ರಮೊಗನಾದನೆಲ್ಲ ಜಗದೊಡಲುಗಳೋಳ್ ॥
ಬಹುವಿಧಪಾಕಗಳಂ ತ- ।
ದ್ಗಹಿಣಿ ಪ್ರಕೃತಿ ಪ್ರಪಂಚಪಾತ್ರೆಯೊಳಡುವಳ್ ॥

ಸಂಗ್ರಹ

ಭಕ್ತಿರಹಸ್ಯಮುಮೀಶ್ವರ- ।
ಶಕ್ತಿವ್ಯಕ್ತಿಪ್ರಕಾರಗಳುಮಂತೆಯೆ ಸ- ॥
ದ್ಭಕ್ತಚತುರ್ವಿಧಮಂ ಸಂ- ।
ಪ್ರೋಕ್ತಂಗಳ್ ಭಗವದಾಸ್ಯದಿಂ ಸಪ್ತಮದೋಳ್ ॥

ಹೃದುದ್ವೇಗಂಗಳಂ ಬಲ್ಲನುದಾರಂ ಕೃಷ್ಣನಾವಗಂ ।
ಮದೀಯ ಹೃದ್ದೋಷಗಳಂ ಶೋಧಿಕೆ ಕ್ಷಮೆದೋರುತಂ ॥

ಅಥ ಅಕ್ಷರಬ್ರಹ್ಮಯೋಗೋ ನಾಮ ಅಷ್ಟಮೋಽಧ್ಯಾಯಃ

ಅರ್ಜುನ ಉವಾಚ-

ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ

॥ ೧ ॥

ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ

॥ ೨ ॥

ಶ್ರೀಭಗವಾನುವಾಚ-

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ

॥ ೩ ॥

ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ

॥ ೪ ॥

ಅಂತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ

॥ ೫ ॥

ಯಂ ಯಂ ವಾಽಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ

॥ ೬ ॥

ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಃ

॥ ೭ ॥

ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ ।
ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್

॥ ೮ ॥

ಕವಿಂ ಪುರಾಣಮನುಶಾಸಿತಾರಮಣೋರಣೀಯಾಂಸಮನುಸ್ಮರೇದ್ಯಃ ।
ಸರ್ವಸ್ಯ ಧಾತಾರಮಚಿಂತ್ಯರೂಪಮಾದಿತ್ಯವರ್ಣಂ ತಮಸಃ ಪರಸ್ತಾತ್

॥ ೯ ॥

ಪ್ರಯಾಣಕಾಲೇ ಮನಸಾಽಚಲೇನ ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ।
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್ ಸ ತಂ ಪರಂ ಪುರುಷಮುಪೈತಿ ದಿವ್ಯಮ್

॥ ೧೦ ॥

ಯದಕ್ಷರಂ ವೇದವಿದೋ ವದಂತಿ ವಿಶಂತಿ ಯದ್ಯತಯೋ ವೀತರಾಗಾಃ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ

॥ ೧೧ ॥

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಮ್

॥ ೧೨ ॥

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್

॥ ೧೩ ॥

ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ

॥ ೧೪ ॥

ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ

॥ ೧೫ ॥

ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯತು ಕೌಂತೇಯ ಪುನರ್ಜನ್ಮನ ವಿದ್ಯತೇ

॥ ೧೬ ॥

ಸಹಸ್ರಯುಗಪರ್ಯಂತಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂತಾಂ ತೇಽಹೋರಾತ್ರವಿದೋ ಜನಾಃ

॥ ೧೭ ॥

ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ

॥ ೧೮ ॥

ಭೂತಾಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ

॥ ೧೯ ॥

ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ

॥ ೨೦ ॥

ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಮ್ ।
ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ

॥ ೨೧ ॥

ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್

॥ ೨೨ ॥

ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ ।
ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ

॥ ೨೩ ॥

ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಮ್ ।
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ

॥ ೨೪ ॥

ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ ।
ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ

॥ ೨೫ ॥

ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಮನ್ಯಯಾಽಽವರ್ತತೇ ಪುನಃ

॥ ೨೬ ॥

ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ

॥ ೨೭ ॥

ವೇದೇಷು ಯಜ್ಞೇಷು ತಪಃಸು ಚೈವ ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಮ್ ।
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀ ಪರಂ ಸ್ಥಾನಮುಪೈತಿ ಚಾದ್ಯಮ್

॥ ೨೮ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಅಕ್ಷರಬ್ರಹ್ಮಯೋಗೋ ನಾಮ ಅಷ್ಟಮೋಽಧ್ಯಾಯಃ

ಬಾರೆಲೆ ಧರ್ಮವತ್ಸಲ ಸುದರ್ಶನಹಸ್ತ ಧನಂಜಯಾಪ್ತ ನೀಂ ।
ಸಾರಿದೆಯಲ್ತೆ ನಾನವತರಿಪ್ಪೆನಧರ್ಮವ ನೀಗಲೆಂದು ನೀಂ ॥
ಕೌರವನಾಶದಿಂದಲತಿದುಷ್ಕರಮೇಂ ಕಲಿನಾಶನಂ ಪ್ರಭೋ ।
ತೋರು ನಿಜಾಯುಧಂಗಳುರು ರೌದ್ರವ ಭೈರವ ಪಾಂಚಜನ್ಯಮಂ ॥

ಸೂಚನೆ

ಬ್ರಹ್ಮವದೇಂ ಜೀವವದೇಂ ।
ಕರ್ಮವದೇಂ ಭೌತ ದೈವ ಯಜ್ಞಂಗಳದೇಂ ॥
ಗಮ್ಯವದೇಂ ಧ್ಯೇಯಮದೇಂ ।
ಸಮ್ಯಗ್ಬೋಧನೆಯನಿಂತು ಪಾರ್ಥಂ ಬೇಡಲ್

॥ ೧ ॥

ಉತ್ತರವನೆಂಟು ಕೇಳ್ಕೆಗ- ।
ಮಿತ್ತು ಬಳಿಕ್ಕೆಂತು ಜೀವಮೀಶಸ್ಮೃತಿಯೊಳ್ ॥
ಚಿತ್ತೈಕಾಗ್ರಾಭ್ಯಾಸದಿ- ।
ನುತ್ತಮಗತಿಗೇರ್ವುದೆಂದು ಹರಿ ಬಿತ್ತರಿಪಂ

॥ ೨ ॥

ಸಾರಾಂಶ

ಪ್ರಣವಾಕ್ಷರೋಪಾಸನೆಯ ಮಹಿಮೆಯನ್ನು ಉಪದೇಶಮಾಡಿದ್ದಾನೆ ಸ್ವಾಮಿ ಎಂಟನೆಯ ಅಧ್ಯಾಯದಲ್ಲಿ. ಪ್ರಣವಮಹಾಮಂತ್ರವು ಸರ್ವಾತ್ಮಕವಾದ ಸಂಕೇತಾಕ್ಷರ. ಧ್ಯಾನಸಾಧನೆಯು ಭಾವನಾಪ್ರಧಾನವಾದದ್ದು. ಆ ಭಾವನಾನುಸಂಧಾನವು ಕ್ರಮಾಭ್ಯಾಸಸಾಧ್ಯ ಎಂಬುದು ಇಲ್ಲಿಯ ಮೂಲತತ್ತ್ವ.

ಪ್ರಕರಣ ೬

ಅಧ್ಯಾಯ ೮ - ಅಕ್ಷರಬ್ರಹ್ಮಯೋಗವೆಂಬ ಪ್ರಣವಾರ್ಥಯೋಗ

ಇದುವರೆಗೆ ಕರ್ಮಾಚರಣರೂಪವಾದ ಬಹಿರಂಗಸಾಧನವನ್ನು ಕುರಿತು ಉಪದೇಶ ಮಾಡಿದ್ದಾಯಿತು. ಎರಡನೆಯ ಅಧ್ಯಾಯದಿಂದ ಏಳರವರೆಗಿನ ಆರು ಅಧ್ಯಾಯಗಳಲ್ಲಿ

ಕರ್ಮ ಮುಖ್ಯ, ಭಕ್ತಿಜ್ಞಾನಗಳು ಪ್ರಾಸಂಗಿಕ. ಒಂಭತ್ತರಿಂದ ಹದಿನೆಂಟನೆಯ ಅಧ್ಯಾಯದವರೆಗೆ ಭಕ್ತಿಜ್ಞಾನರೂಪದ ಅಂತರಂಗಸಾಧನೆಯ ವಿಚಾರವನ್ನು ಹೇಳುವುದಾಗುತ್ತದೆ. ಎಂಟನೆಯ ಅಧ್ಯಾಯವು ಈ ಎರಡು ಘಟ್ಟಗಳ ನಡುವೆ ಸೇತುವೆಯಂತೆ ಇದೆ. ಹಿಂದಿನ ಅಧ್ಯಾಯಗಳಲ್ಲಿ ಆತ್ಮತತ್ತ್ವವನ್ನೂ ಭಗವನ್ಮಹಿಮೆಯನ್ನೂ ಪ್ರತಿಪಾದಿಸಿದೆಯಷ್ಟೆ? ಆ ತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ ಅಂತರಂಗ ಸಾಧನೆಯು ಅವಶ್ಯವಾಗುತ್ತದೆ. ಧ್ಯಾನ ಆ ಸಾಧನ. ಪ್ರಣವಾದಿ ಮಹಾಸಂಕೇತಧ್ಯಾನದಿಂದ ಭಗವತ್ಸ್ವರೂಪವನ್ನು ಕೂಡಿದಷ್ಟುಮಟ್ಟಿಗೆ ಮನಸ್ಸಿಗೆ ತಂದುಕೊಳ್ಳುವ ಉಪಾಯವನ್ನು ಈಗ ತೋರಿಸಲು ಉದ್ಯುಕ್ತನಾಗಿದ್ದಾನೆ ಸ್ವಾಮಿ. ಈ ಅಧ್ಯಾಯವನ್ನು ಪೂರ್ವಿಕರು ಬ್ರಹ್ಮಾಕ್ಷರನಿರ್ದೇಶವೆಂದು ಕರೆದಿರುವುದು ಉಚಿತವಾಗಿದೆ: ಪ್ರಣವವೇ ಬ್ರಹ್ಮಾಕ್ಷರ.

ಈ ಅಧ್ಯಾಯದ ಮುಖ್ಯ ವಿಷಯಗಳು ಇವು:

1. ಕೆಲವು ಪಾರಿಭಾಷಿಕ ಶಬ್ದಗಳು
2. ಅವಸಾನಕ್ಷಣದ ಮಹತ್ತ್ವ
3. ಬ್ರಹ್ಮಾಕ್ಷರೋಪಾಸನೆ
4. ಬ್ರಹ್ಮಸ್ಮೃತಿಪುರಸ್ಸರವಾದ ಕರ್ಮನಿಷ್ಠೆ
5. ಜೀವಕ್ಕಿರುವ ಮಾರ್ಗದ್ವಯ.

ಶ್ರೀಕೃಷ್ಣಸ್ವಾಮಿ ಹಿಂದೆ ಉಪಯೋಗಿಸಿದ್ದ ಕೆಲವು ವಿಶೇಷಪದಗಳ ಅರ್ಥ ಅರ್ಜುನನಿಗೆ ನಿಷ್ಕರ್ಷೆಯಾಗಿ ತಿಳಿದಿರಲಿಲ್ಲವೆಂದು ತೋರುತ್ತದೆ. ನಮಗೆ ಕೆಲವು ಬಳಕೆಯ ಮಾತುಗಳ ಅರ್ಥವು ಉದ್ದಿಷ್ಟವಸ್ತುವನ್ನು ಗುರುತುಹಿಡಿಯುವಷ್ಟು ಮಟ್ಟಿಗೆ ತಿಳಿದಿದ್ದರೂ ಇನ್ನೊಬ್ಬರಿಗೆ ಸರಿಯಾಗಿ ತಿಳಿಸಲಾಗುವಷ್ಟು ತಿಳಿದಿರುವುದಿಲ್ಲ. “ಮನುಷ್ಯ” ಎಂಬ ಪದವನ್ನು ಎಲ್ಲರೂ ಬಳಸುತ್ತಿದ್ದೇವೆ. ಹಾಗೆಂದರೇನು ಎಂದು ಯಾರಾದರೂ ಕೇಳಿದಾಗ ನಾವು ವಿವರಣೆ ಕೊಡಬೇಕೆಂದರೆ ಕಷ್ಟವಾಗುತ್ತದೆ. “ಮನುಷ್ಯ ಒಂದು ಪ್ರಾಣಿ ವಿಶೇಷ” ಎಂದರೆ ಸಾಲದು. “ಅಕ್ಕಿ ಎಂದರೇನು?” “ಅದು ಒಂದು ಧಾನ್ಯವಿಶೇಷ” ಎಂದರೆ ಸಾಲದು. ಇಂಥ ಮಾತುಗಳಿಗೆ ಶಾಸ್ತ್ರದೃಷ್ಟಿಯಿಂದ ನಿಷ್ಕರ್ಷೆಯಾದ ಅರ್ಥವನ್ನು ಹೇಳುವವರು ನಿಘಂಟುಕಾರರು. ಸಾಮಾನ್ಯವಾದ ಮಾತುಗಳ ವಿಚಾರವೇ ಹೀಗಿರುವಾಗ ಪ್ರೌಢಶಾಸ್ತ್ರದಲ್ಲಿ ಉಪಯುಕ್ತವಾದ ಮಾತುಗಳ ವಿವರಣೆ ಇನ್ನೂ ಕಷ್ಟವಾಗಿರಬೇಕು. ಆದರೆ ಆ ಮಾತುಗಳ

ಅರ್ಥವನ್ನು ನ್ಯೂನಾತಿರೇಕಗಳಿಲ್ಲದಂತೆ ನಿಷ್ಕರ್ಷೆಯಿಂದ ತಿಳಿದುಕೊಂಡ ಹೊರತು ಶಾಸ್ತ್ರವ್ಯಾಸಂಗ ಸಾರ್ಥಕವಾಗಲಾರದು. ಇಂಥಾ ಶಾಸ್ತ್ರ ಪ್ರಯುಕ್ತವಾದ ವಿಶೇಷಾರ್ಥವುಳ್ಳ ಶಬ್ದಗಳನ್ನು "ಪರಿಭಾಷೆ" ಎಂದು ಕರೆಯುವುದು ರೂಢಿ. ಕರ್ಮ ಎಂದರೆ ಯಾವುದಾದರೊಂದು ಕೆಲಸ ಎಂಬುದು ಸಾಮಾನ್ಯ ಅರ್ಥ; ಶ್ರುತಿಸ್ಮೃತಿವಿಹಿತವಾಗಿ ಲೋಕಾಂತರಫಲಪ್ರದವಾಗಿರುವ ಕಾರ್ಯವಿಶೇಷ ಎಂಬುದು ಕರ್ಮ ಶಬ್ದದ ಪಾರಿಭಾಷಿಕ ಅರ್ಥ.

ಅರ್ಜುನನ ಪರಿಭಾಷಾರ್ಥದ ಪ್ರಶ್ನೆಗಳು ಮೊದಲನೆಯ ಎರಡು ಶ್ಲೋಕಗಳಲ್ಲಿವೆ. ಅವನ್ನು ವ್ಯಾಖ್ಯಾನಕಾರರು ಕೆಲವರು ಏಳೆಂದೂ ಕೆಲವರು ಎಂಟೆಂದೂ ಲೆಕ್ಕಮಾಡಿದ್ದಾರೆ. ಅರ್ಥದಲ್ಲಿ ಆ ಎರಡು ಪಂಗಡಗಳಿಗೂ ವ್ಯತ್ಯಾಸವೇನೂ ಇಲ್ಲ. ಈಗ ಆ ಪ್ರಶ್ನೆಗಳನ್ನು ಒಂದೊಂದನ್ನಾಗಿ ನೋಡೋಣ.

1. **ಪ್ರಶ್ನೆ:** ಕಿಂ ತದ್ಬ್ರಹ್ಮ?
   "ಆ ಬ್ರಹ್ಮವೆಂಬುದು ಏನು?"
   ಇಲ್ಲಿ "ಆ" ("ತತ್")ಎಂಬುದು ಪೂರ್ವಪ್ರಸ್ತಾವವನ್ನು ಸೂಚಿಸುತ್ತದೆ. ಮೂರನೆಯ ಅಧ್ಯಾಯದಲ್ಲಿ "ಬ್ರಹ್ಮಾಕ್ಷರಸಮುದ್ಭವಮ್" ಎಂದೂ ನಾಲ್ಕನೆಯ ಅಧ್ಯಾಯದಲ್ಲಿ "ಬ್ರಹ್ಮಾರ್ಪಣಂ ಬ್ರಹ್ಮಹವಿಃ" ಎಂದೂ ಇದೆಯಷ್ಟೆ? ಆ ಮಾತಿನ ಅರ್ಥವಿವರಣೆಯನ್ನು ಅರ್ಜುನ ಕೇಳಿದ್ದಾನೆ.
   ಉತ್ತರ: ಅಕ್ಷರಂ ಬ್ರಹ್ಮ ಪರಮಮ್ ।
   "ಯಾವುದು ನಾಶವಿಲ್ಲದ್ದೋ ಮತ್ತು ಯಾವುದು ಸರ್ವೋತ್ಕೃಷ್ಟವಾದದ್ದೋ ಅದು ಬ್ರಹ್ಮ."
   "ಅಕ್ಷರಂ" ಎಂಬ ಮಾತಿನಲ್ಲಿ ಶಾಶ್ವತವಾದದ್ದು ಮತ್ತು ಸರ್ವಗತವಾದದ್ದು ಎಂಬೆರಡರ್ಥಗಳೂ ಸೇರಿವೆ. "ಕ್ಷರ" ಎಂದರೆ ನಾಶ. ಅಕ್ಷರ ಎಂದರೆ ಕಾಲದೃಷ್ಟಿಯಿಂದಲೂ ನಾಶವಿಲ್ಲದ್ದು, ಸ್ಥಾನದೃಷ್ಟಿಯಿಂದಲೂ ನಾಶವಿಲ್ಲದ್ದು. "ಪರಮಮ್" ಎಂದರೆ ಮನುಷ್ಯನು ಬಯಸಬಹುದಾದ ಎಲ್ಲಕ್ಕೂ ಮೂಲವಾಗಿ, ಎಲ್ಲಕ್ಕಿಂತಲೂ ಮೇಲಿನದಾಗಿ ಇರತಕ್ಕದ್ದು. "ಅಣೋರಣೀಯಾನ್ ಮಹತೋ

ಮಹೀಯಾನ್ ।”, “ಅವ್ಯಕ್ತೋಽಯಮಚಿಂತ್ಯೋಽಯಮ್ ।”, “ಅಚಲೋಽಯಂ ಸನಾತನಃ ।”

2. **ಪ್ರಶ್ನೆ:** ಕಿಮಧ್ಯಾತ್ಮಮ್?

   “ಅಧ್ಯಾತ್ಮವೆಂದರೆ ಏನು?”

   ಉತ್ತರ: ಸ್ವಭಾವೋಽಧ್ಯಾತ್ಮಮುಚ್ಯತೇ ।

   “ಮನುಷ್ಯಸ್ವಭಾವವನ್ನು–ಸಮಗ್ರ ರಚನೆಯನ್ನು–ಅಧ್ಯಾತ್ಮವೆಂದು ಕರೆಯುವುದಾಗಿದೆ.” ಮನುಷ್ಯ ಎಂಬುದರಲ್ಲಿ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂತೆ, ಜೀವ, ಆತ್ಮ–ಇವಿಷ್ಟೂ ಸೇರಿರುತ್ತವೆ. ಈ ಸಮೂಹಕ್ಕೆ ಅಧ್ಯಾತ್ಮ ಎಂದು ಹೆಸರು. ಜೀವವು ಯಾವಯಾವ ಸಾಧನ ಉಪಕರಣಗಳಿಂದ ಲೋಕಸಂಪರ್ಕ ಮಾಡಿಕೊಳ್ಳುವುದೂ ವ್ಯವಹಾರ ನಡಸುವುದೂ ಸಾಧ್ಯವಾಗುತ್ತದೋ ಅವುಗಳೆಲ್ಲದರ ಒಟ್ಟೇ ಅಧ್ಯಾತ್ಮ. (ಶಂಕರ ಭಾಷ್ಯದಲ್ಲಿ ಹೀಗಿದೆ:– “ಪರಸ್ಯ ಬ್ರಹ್ಮಣಃ ಪ್ರತಿದೇಹಂ ಪ್ರತ್ಯಗಾತ್ಮಭಾವಃ=ಸ್ವಭಾವಃ ।… ಆತ್ಮಾನಂ ದೇಹಮಧಿಕೃತ್ಯ ಪ್ರತ್ಯಗಾತ್ಮತಯಾ ಪ್ರವೃತ್ತಂ ಪರಮಾರ್ಥ ಬ್ರಹ್ಮಾವಸಾನಂ ವಸ್ತು.”) (೧) ಜೀವದೆಶೆಯಲ್ಲಿರುವ ಆತ್ಮ ಅಧ್ಯಾತ್ಮ. ಜೀವವೆಂಬುದರಲಿ ದೇಹಾದಿಗಳು ಸೇರಿವೆ. (೨) ಆತ್ಮ ಜೀವದಶೆ–ಎಂದರೆ ದೇಹ ಧರಿಸಿರುವ ಸ್ಥಿತಿ–ಅಧ್ಯಾತ್ಮ. ಮನುಷ್ಯನು ಸಾಧಾರಣವಾಗಿ ಯಾವ ಯಾವುದನ್ನು ತನಗೆ ಸಂಬಂಧಮಾಡಿಕೊಂಡಿರುತ್ತಾನೋ ಅದೆಲ್ಲ ಅಧ್ಯಾತ್ಮ.

3. **ಪ್ರಶ್ನೆ:** ಕಿಂ ಕರ್ಮ.

   “ಕರ್ಮವೆಂದರೆ ಏನು?”

   ಉತ್ತರ: ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ।

   “ಪ್ರಾಣಿಗಳು ತಮ್ಮ ಪುನರ್ಜನ್ಮಕ್ಕೆ ಕಾರಣವಾಗುವಂತೆ ಮಾಡುವ ತಮ್ಮತಮ್ಮ ಶಕ್ತಿದ್ರವ್ಯಾದಿಗಳ ವಿನಿಯೋ (ವಿಸರ್ಗ)ವೇ ಕರ್ಮ.”

   ನಮ್ಮ ಲೋಕವ್ಯವಹಾರವು ಕೊಡುಗೆಕೊಳುಗೆಗಳ ರೂಪವಾದದ್ದು. ಮನುಷ್ಯನು ಕ್ಷಣಕ್ಷಣವೂ ದೇಹದಿಂದಲೂ ವಾಕ್ಕಿನಿಂದಲೂ ಮನಸ್ಸಿನಿಂದಲೂ ತನ್ನ ಒಂದಂಶವನ್ನು ಸುತ್ತಮುತ್ತಲಿನ ಜಗತ್ತಿಗೆ ವಿಸರ್ಜನ ಮಾಡುತ್ತಲೇ–ಬಿಟ್ಟುಕೊಡುತ್ತಲೇ–ಇರುತ್ತಾನೆ. ಈ ಸಂತತವಾದ ವಿಸರ್ಜನಕ್ರಿಯೆಯೇ ಕರ್ಮ. ಅವನ ಅಂಶ ಲೋಕಸಮಸ್ತಕ್ಕೆ ಸೇರುವುದರಿಂದ ಅಲ್ಲಿ ಅದರ ಪರಿಣಾಮ ಪ್ರತಿಕ್ರಿಯೆಗಳು ಉಂಟಾಗಿ, ಅವು ರೂಪಾಂತರದಲ್ಲಿ ಅವನಿಗೇ ಕರ್ಮಫಲವಾಗಿ ಹಿಂತಿರುಗಿ ಬರುತ್ತವೆ. ಆ ಪ್ರತಿಫಲವನ್ನು

ಅನುಭವಿಸುವುದಕ್ಕಾಗಿ– ಅ ಋಣವನ್ನು ತೀರಿಸುವುದಕ್ಕಾಗಿ–ಆ ವಾಸನೆಯನ್ನು ಸೇವಿಸುವುದಕ್ಕಾಗಿ ಅವನು ಪುನಃ ಪುನಃ ಜನ್ಮವೆತ್ತಬೇಕಾಗುತ್ತದೆ. ಹೀಗೆ ಪುನರ್ಜನ್ಮಕಾರಣವಾಗುವ ಲೋಕ ವ್ಯವಹಾರ ಯಾವುದೋ ಅದು ಕರ್ಮ. ಅರ್ಥಾತ್ ಪುಣ್ಯಪಾಪಗಳು ಕರ್ಮ.

4. **ಪ್ರಶ್ನೆ:** ಅಧಿಭೂತಂ ಚ ಕಿಂ?
   "ಅಧಿಭೂತವೆಂದರೆ ಏನು?"
   ಉತ್ತರ: ಅಧಿಭೂತಂ ಕ್ಷರೋ ಭಾವಃ ।
   "ಜಗತ್ತಿನಲ್ಲಿ ಯಾವಯಾವುದು ನಾಶವಾಗುತ್ತದೋ ಅದೆಲ್ಲ ಅಧಿಭೂತ."
   "ಕ್ಷರೋ ಭಾವಃ" ಎಂದರೆ ಕ್ಷಯಿಸುವ ಲಕ್ಷಣ. "ಭೂತ" ಎಂದರೆ "ಆಗಿರುವುದು" ಎಂದರ್ಥ. ಇಲ್ಲಿ "ಆಗು" ಎಂಬುದಕ್ಕೂ "ಇರು" ಎಂಬುದಕ್ಕೂ ಇರುವ ಭೇದವನ್ನು ನೋಡಬೇಕು. ಆದದ್ದು ಹೋಗುತ್ತದೆ. ಆದಕಾರಣ ಅದು ಕ್ಷರ. ಹೀಗೆ ಕ್ವಚಿತ್ಕಾಲವಿದ್ದು, ಬಳಿಕ ಇಲ್ಲದೆ ಹೋಗುವುದು ಅಧಿಭೂತ.

5. **ಪ್ರಶ್ನೆ:** ಅಧಿದೈವಂ ಕಿಮುಚ್ಯತೇ?
   "ಅಧಿದೈವವೆಂದು ಕರೆಯುವುದು ಯಾವುದನ್ನು?"
   ಉತ್ತರ: ಪುರುಷಶ್ಚಾಧಿದೈವತಮ್ ।
   "(ವಿರಾಟ್) ಪುರುಷನೇ ಅಧಿದೈವತ."

ಯಾವ ಬ್ರಹ್ಮಚೈತನ್ಯವು ನಮಗೆ ಜಗತ್ತಿನಲ್ಲಿ ಕಾಣಬರುವ ನಾನಾ ದೇಹ ವಸ್ತುಗಳಲ್ಲಿ ಸೇರಿಕೊಂಡು ಅವುಗಳಿಂದ ನಾನಾ ಕ್ರಿಯೆಗಳನ್ನು ನಡೆಯಿಸುತ್ತಿದೆಯೋ ಆ ಜಗತ್ಸಮಷ್ಟ್ಯಾಕಾರಕವಾದ ಬ್ರಹ್ಮದಶೆಯೇ ವಿರಾಟ್ಪುರುಷ. ವೇದದ ಪುರುಷಸೂಕ್ತದಲ್ಲಿಯೂ ಭಗವದ್ಗೀತೆಯ ವಿಶ್ವರೂಪಾಧ್ಯಾಯದಲ್ಲಿಯೂ ವಿರಾಡ್ರೂಪವನ್ನು ವರ್ಣಿಸಿದೆ. ಬ್ರಹ್ಮವಸ್ತುವಿನ ಜಗದ್ರೂಪವೇ ಪುರುಷ. ಅದೇ ಅಧಿದೈವ. ಗೀತೆಯ ಹದಿನೆಂಟನೆಯ ಅಧ್ಯಾಯದ ಹದಿನಾಲ್ಕನೆಯ ಶ್ಲೋಕದಲ್ಲಿ "ದೈವಂ ಚೈವಾತ್ರ ಪಂಚಮಮ್" ಎಂಬಲ್ಲಿ ಇದನ್ನು ಅನ್ವಯಿಸಿಕೊಳ್ಳತಕ್ಕದ್ದು. ಜಗದ್ವ್ಯಾಪಾರಕ್ಕೆ ಮೂಲಭೂತವಾದ, ಜಗದ್ವಿಧಾಯಕವಾದ ಜಗನ್ನಿಯಾಮಕವಾದ ವಿಶ್ವಚೈತನ್ಯದ ಕಾರ್ಯಶಕ್ತಿಯೇ, ಕಾರ್ಯ ಬ್ರಹ್ಮವೇ ಅಧಿವೈವ. ಅದೇ ಈಶ್ವರ.

6. **ಪ್ರಶ್ನೆ:** ಅಧಿಯಜ್ಞಃ ಕಥಮ್?

"ಅಧಿಯಜ್ಞವೆಂಬುದು ಎಂಥಾದ್ದು?"

ಉತ್ತರ: ಅಧಿಯಜ್ಞೋಽಹಮೇವ ।

"ಯಜ್ಞವು ಯಾರನ್ನು ಕುರಿತಿರುತ್ತದೆಯೋ ಅದು ಅಧಿಯಜ್ಞ–ನಾನೇ (ಭಗವಂತ=ಈಶ್ವರ) ಅದು."

ಯಜ್ಞವೆಂದರೆ ಪೂಜೆ. ಪೂಜೆಗೆ ಒಂದು ಪೂಜ್ಯವಸ್ತು ಇರಬೇಕು. ಯಜ್ಞಗಳು ನಾನಾ ವಿಧಗಳೆಂದು ನಾಲ್ಕನೆಯ ಅಧ್ಯಾಯದಲ್ಲಿ ಹೇಳಿದೆಯಷ್ಟೆ? ಒಂದೊಂದು ಯಜ್ಞಕ್ಕೂ ಬೇರೆಬೇರೆಯಾಗಿ ಒಬ್ಬೊಬ್ಬ ದೇವತೆ ಉದ್ದೇಶದಲ್ಲಿರುತ್ತದೆ–ಇಂದ್ರ, ವರುಣ, ಸೋಮ, ಅಗ್ನಿ ಇತ್ಯಾದಿಯಾಗಿ. ಹೀಗೆ ಬೇರೆ ಬೇರೆ ದೇವತೆಗಳಿರುವಾಗ ಬೇರೆ ಬೇರೆ ಯಜ್ಞಕರ್ಮಗಳಲ್ಲಿ ಆರಾಧಿತರಾಗುವವರು ಬೇರೆಬೇರೆಯೋ ಅಥವಾ ಅವರೆಲ್ಲ ಒಂದೇಯೊ? ದೇವತೆಗಳ ಹೆಸರುಗಳು ಬೇರೆಬೇರೆಯಾದರೂ ಪೂಜಿತವಾದದ್ದು ಒಂದೇ ಬ್ರಹ್ಮವಸ್ತು ಎಂದು ಉತ್ತರ. "ಏಕಂ ಸದ್ವಿಪ್ರಾ ಬಹುಧಾ ವದಂತಿ, ಅಗ್ನಿಂ ಯಮಂ ಮಾತರಿಶ್ವಾನಮಾಹುಃ ।"

"ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ."

7. **ಪ್ರಶ್ನೆ:** ಕೋಽತ್ರ ದೇಹೇಽಸ್ಮಿನ್?

"ಈ ದೇಹದಲ್ಲಿ ಇರತಕ್ಕವನು ಯಾರು?"

ಉತ್ತರ: ಅಹಮೇವಾತ್ರ ದೇಹೇ ।

"ಈ ದೇಹದಲ್ಲಿ ಇರತಕ್ಕವನು ನಾನೇ (ಭಗವಂತನೇ)."

ದೇಹವು ಐದುಕೋಶಗಳುಳ್ಳದ್ದು. ಈ ಕೋಶಗಳು ಅಡಕುಪಾತ್ರೆಯಂತೆ–ಒಂದರೊಳಗಿನ್ನೊಂದು, ಅದರೊಳಗೆ ಮತ್ತೊಂದು–ಹೀಗೆ ಇರುತ್ತವೆ. ಈ ಕಾಲದ ಕೆಲವರು ದೊಡ್ಡಮನುಷ್ಯರುಗಳು ಮೇಲೆ ಓವರ್ಕೋಟು, ಅದರೊಳಗೆ ಷಾರ್ಟ್‌ಕೋಟು, ಅದರೊಳಗೆ ವೆಸ್ಟ್‌ಕೋಟು, ಅದರೊಳಗೆ ಷರಟು, ಅದರೊಳಗೆ ಬನಿಯನ್ನು, ಇನ್ನೂ ಒಳಗೆ ಜುಬ್ಬಾ–ಹೀಗೆ ಐದಾರು ಕವಚ ಧರಿಸಿಕೊಂಡಿರುತ್ತಾರೆ. ಹಾಗೆ ಮನುಷ್ಯದೇಹದಲ್ಲಿ ಐದು ಪದರ. ಮೊದಲನೆಯದು ಅನ್ನಮಯಕೋಶ: ಇದು ಹೊರಗಿನದು–ಚರ್ಮ ರಕ್ತ ಮಾಂಸ ಮೂಳೆಗಳದು. ಅದರೊಳಗಿನದು ಪ್ರಾಣಮಯ: ಪ್ರಾಣಾಪಾನಾದಿ ವಾಯುಗಳಿಂದಾದದ್ದು. ಮೂರನೆಯದು ಮನೋಮಯ: ಸುಖದುಃಖಾದ್ಯನುಭವಗಳದು. ನಾಲ್ಕನೆಯದು ವಿಜ್ಞಾನಮಯ, ಎಂದರೆ ಬುದ್ಧಿ

ಇತ್ಯಾದಿಗಳದು. ಐದನೆಯದು ಆನಂದಮಯ, ಆನಂದ ಸ್ವರೂಪದ್ದು. ಈ ಐದಕ್ಕೂ ಒಳಗೆ ಸರ್ವಬೀಜ ಪ್ರಾಯವಾಗಿ ಇರತಕ್ಕದ್ದು ಆತ್ಮವಸ್ತು. ಪಂಚಕೋಶಗಳು ಅದಕ್ಕೆ ಉಪಾಧಿಗಳು. ಅವುಗಳ ಒಳಗಿನ ಒಳಗಡೆ ಇರುವ ಚೈತನ್ಯವೇ ಪರಮಾತ್ಮ.
"ತಸ್ಮಾತ್ಸರ್ವಗತಂ ಬ್ರಹ್ಮ" "ಈಶ್ವರಸ್ಸರ್ವಭೂತಾನಾಂ ಹೃದ್ದೇಶೇ!" "ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ."
೬ನೆಯ ಪ್ರಶ್ನೆಯಲ್ಲಿ ಪ್ರಸಕ್ತವಾದ ಪೂಜಾವಿಷಯವೂ ೭ನೆಯ ಪ್ರಶ್ನೆಯಲ್ಲಿ ಪ್ರಸಕ್ತನಾದ ಪೂಜಕನೂ ಒಂದೇ ತತ್ತ್ವದ ಅವಸ್ಥಾಭೇದಗಳೆಂಬುದನ್ನು ಗಮನಿಸಬೇಕು.

8. **ಪ್ರಶ್ನೆ:** ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ?
"ಮನುಷ್ಯನು ಲೋಕಬಿಟ್ಟು ತೆರಳುವ ಸಮಯದಲ್ಲಿ ನಿನ್ನನ್ನು ತಿಳಿಯುವುದು ಹೇಗೆ?" ನಿನ್ನನ್ನು ಆಗ ಯಾವ ರೂಪದಲ್ಲಿ ಧ್ಯಾನಮಾಡಬೇಕು? ನೀನು ಅನಂತರೂಪಿ; ಅನೇಕ ಲೀಲೆಗಳನ್ನು ನಡಸಿದವನು. ಅದರ ಪೈಕಿ ಯಾವುದನ್ನು ಕಡೆಗಾಲದಲ್ಲಿ ಸ್ಮರಿಸತಕ್ಕದ್ದು?
ಉತ್ತರ: ಅಂತಕಾಲೇ ಚ ಮಾಮೇವ ಸ್ಮರನ್... ಮದ್ಭಾವಂ ಯಾತಿ ।
"ಕಡೆಯ ಘಳಿಗೆಯಲ್ಲಿ ನನ್ನನ್ನು ಯಾವ ರೂಪದಲ್ಲಿ ಸ್ಮರಿಸಿದರೂ ಸಾಕು. ನನ್ನ ಸ್ವರೂಪ ಆಗ ತಿಳಿದುಬರುತ್ತದೆ."
ರೂಪ ಎಂಥಾದ್ದಾದರಾಗಲಿ, ಲೀಲೆ ಎಂಥಾದ್ದಾದರಾಗಲಿ, ಆ ಅನಂತರೂಪ ಲೀಲೆಗಳಲ್ಲಿ ಯಾವ ಒಂದು ಭಗವದ್ರೂಪವನ್ನು ಒಮ್ಮನಸ್ಸಿನಿಂದ ಸ್ಮರಿಸಿಕೊಂಡರೂ ಅದು ಭಗವತ್ಸಾನ್ನಿಧ್ಯವನ್ನು ತೋರಿಸಬಲ್ಲದ್ದಾಗುತ್ತದೆ.
ಇಲ್ಲಿ ಅನುಸಂಧಾನ ಮಾಡಬೇಕಾದದ್ದು ಈ ಅಧ್ಯಾಯದ ಆರನೆಯ ಶ್ಲೋಕವನ್ನು;

> ಯಂ ಯಂ ವಾಽಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
> ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥

"ದೇಹಬಿಡುವ ಕಾಲದಲ್ಲಿ ಭಕ್ತನು ಯಾವ ಭಗವತ್ಸ್ವರೂಪವನ್ನು ಸ್ಮರಣೆಮಾಡಿಕೊಳ್ಳುತ್ತಾನೋ ಆ ರೂಪದಲ್ಲಿಯೇ ಭಗವಂತನು ಅವನಿಗೆ ದರ್ಶನ ಕೊಡುತ್ತಾನೆ."
ಈ ಕಾರಣದಿಂದಲೇ ನಮ್ಮಲ್ಲಿ ಮಕ್ಕಳಿಗೆ ದೇವರ ಹೆಸರನ್ನು ಅಥವಾ ಗುರುಗಳ ಹೆಸರನ್ನು ಇಡುವುದು ಪದ್ಧತಿ. ಮನುಷ್ಯ ತನಗೆ ಅವಸಾನಕಾಲ ಬಂತೆಂದು ತೋರಿದಾಗ

ತನಗೆ ಅತ್ಯಂತ ಪ್ರಿಯರಾದವರನ್ನು ನೆನಸಿಕೊಳ್ಳುವುದು ಸ್ವಾಭಾವಿಕ. ಆ ವ್ಯಾಜದಿಂದಲಾದರೂ ಭಗವನ್ನಾಮ ಉಚ್ಚಾರಣೆಯಾಗಿ ಭಗವನ್ಮಹಿಮೆ ಮನಸ್ಸಿಗೆ ಹೊಳೆಯಲೆಂಬುದು ಪೂರ್ವಿಕರ ಆಶಯ.
ಅಂತ್ಯಕಾಲ ಎಂದೋ, ಯಾವಾಗಲೋ! ಮೃತ್ಯು ನಮಗೆ ಮುನ್ನೆಚ್ಚರಿಕೆ ಕೊಟ್ಟು ಕಾದಿದ್ದು ಆಮೇಲೆ ಬರುವುದಿಲ್ಲ. ಹೇಳದೆ ಕೇಳದೆ ಬರುತ್ತದೆ. ಆದದ್ದರಿಂದ ವಿವೇಕಿ ಯಾವಾಗಲೂ ಅದಕ್ಕೆ ಸಿದ್ಧನಾಗಿರುತ್ತಾನೆ. ಆ ಸಾರ್ವಕಾಲಿಕ ಸಿದ್ಧತೆ ಭಗವತ್ ಸ್ಮೃತಿ.

ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ॥

“ಕ್ಷಣಾಕ್ಷಣದಲ್ಲಿಯೂ ನನ್ನನ್ನು ಸ್ಮರಿಸು; ಸ್ಮರಿಸುತ್ತ ಯುದ್ಧಮಾಡು.”

ಧ್ಯಾನವಿಷಯ

ಸ್ಮರಣೆಗೆ ಒಂದು ಚಿಹ್ನೆಯೋ ರೂಪವೋ ಬೇಕು–ಸಾಮಾನ್ಯ ಜನಕ್ಕೆ. ಆದರೆ ಬ್ರಹ್ಮವಸ್ತು “ಅಚಿಂತ್ಯರೂಪಮ್” –ವರ್ಣಿಸಲಾಗದ್ದು, “ಅನಿರ್ದೇಶ್ಯವಪುಃ”. ಆದರೂ ಎರಡು ಲಕ್ಷಣಗಳನ್ನು ಸೂಚಿಸಿದ್ದಾನೆ ಭಗವಂತ:

ಸರ್ವಸ್ಯ ಧಾತಾರಮಚಿಂತ್ಯರೂಪಂ ಆದಿತ್ಯವರ್ಣಂ ತಮಸಃ ಪರಸ್ತಾತ್ ॥

1. “ಸರ್ವಸ್ಯಧಾತಾರಮ್” ; ಎಲ್ಲವನ್ನೂ ವಿಧಿಸಿ ವ್ಯವಸ್ಥೆಯಲ್ಲಿರಿಸಿ ಪಾಲಿಸುವವನು.
2. “ಆದಿತ್ಯವರ್ಣಮ್” ; ಸೂರ್ಯನಂತೆ ಜ್ಯೋತಿಸ್ವರೂಪಿ.

ಇವು ಹೆಗ್ಗುರುತುಗಳು. ಹಿಂದೆ ಬ್ರಹ್ಮಲಿಂಗಗಳನ್ನು ಎಷ್ಟೋ ಹೇಳಿದೆ:

“ರಸೋಽಹಮಪ್ಸು”, “ಪ್ರಭಾಽಸ್ಮಿ ಶಶಿಸೂರ್ಯಯೋಃ” ಇತ್ಯಾದಿಯಾಗಿ. ಆ ಅನಂತ ಚಿಹ್ನೆಗಳಲ್ಲಿ ಯಾವ ಒಂದು ಚಿಹ್ನೆಯನ್ನು ಮನಸ್ಸಿನಿಂದ ಹಿಡಿದರೂ ಆಗಬಹುದು: “ಯಂ ಯಂ ವಾಽಪಿ ಸ್ಮರನ್ ಭಾವಮ್”. ಚಿತ್ತಸಮಾಧಿ ಮುಖ್ಯ.

ಧ್ಯಾನಯೋಗದಲ್ಲಿ ಸ್ಮರಿಸಿಕೊಳ್ಳಬೇಕಾದದ್ದು ಪ್ರಣವವನ್ನು. “ಪ್ರಣವ” ಎಂದರೆ ಪ್ರಕೃಷ್ಟವಾದ ನುತಿ (“ಣು=ಸ್ತುತೌ”): ಪರಬ್ರಹ್ಮಸ್ತುತಿ.

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ॥

ಭಗವಂತನನ್ನು ಧ್ಯಾನಿಸಿಕೊಂಡು ಓಂಕಾರವನ್ನು ಜಪಿಸಬೇಕಾದದ್ದು.

ಓಮಿತ್ಯೇಕಾಕ್ಷರಂ ಬ್ರಹ್ಮ।

—ಗಾಯಂತ್ರೀ ಮಂತ್ರ

ಓಮಿತಿ ಬ್ರಹ್ಮ। ಓಮಿತೀದಗ್ಂ ಸರ್ವಮ್ ॥

—ತೃತ್ತಿರೀಯೋಪನಿಷತ್ತು

"ಓಮ್ ಎಂಬ ಒಂದಕ್ಷರವು ಪರಬ್ರಹ್ಮಸಂಕೇತ".

"ಓಂ ಎಂದರೆ ಪರಬ್ರಹ್ಮ. ಓಮ್ ಎಂದರೆ ಇದೆಲ್ಲವೂ (ಈ ಸರ್ವ ಪ್ರಪಂಚವೂ)".

ಹೀಗೆ ಕಠ ಮಾಂಡೂಕ್ಯ ಛಾಂದೋಗ್ಯ ಬೃಹದಾರಣ್ಯಕಾದಿ ಎಲ್ಲ ಉಪನಿಷತ್ತುಗಳೂ ಪ್ರಣವದ ಮಹತ್ತ್ವವನ್ನು ಹೇಳಿವೆ.

"ಓಮ್" ಎಂಬುದರಲ್ಲಿ ಮೂರು ವರ್ಣಗಳು ಸೇರಿವೆ: ಅ, ಉ, ಮ್. ಆ ಮೂರು ವರ್ಣಗಳು ಸಂಕೇತಿಸುವ ವಸ್ತುಗಳು ಹೀಗೆ:

1. ಅ = ಸತ್, ಜಗತ್ತು, ಸ್ಥೂಲಪ್ರಪಂಚ, ಭೂಲೋಕ, ಪುರುಷಪ್ರಾಣಿ, ಜಾಗ್ರದವಸ್ಥೆ, ಸತ್ತ್ವಗುಣ, ಬ್ರಹ್ಮದೇವನು.
2. ಉ = ಚಿತ್, ಜೀವ, ಸೂಕ್ಷ್ಮಪ್ರಪಂಚ, ಅಂತರಿಕ್ಷ, ಸ್ತ್ರೀಪ್ರಾಣಿ, ಸ್ವಪ್ನಾವಸ್ಥೆ, ರಜೋಗುಣ, ವಿಷ್ಣುದೇವನು.
3. ಮ್ = ಆನಂದ, ಈಶ್ವರ, ಕಾರಣಪ್ರಪಂಚ, ಆಕಾಶ, ನಪುಂಸಕಪ್ರಾಣಿ, ಸುಷುಪ್ತಿ, ತಮೋಗುಣ, ರುದ್ರದೇವನು.
4. ಓಮ್ (ಮೇಲಿನ ಮೂರರ ಒಟ್ಟು ಸಮವಾಯ) = ಶಾಂತ, ಪರಮಾತ್ಮ, ಅವ್ಯಕ್ತ, ಅಲಿಂಗ, ವಿಶ್ವ, ಅನಂತಪ್ರಕೃತಿ, ವಿರಾಟ್ಪುರುಷ, ತ್ರಿಗುಣಾತೀತ, ಪರಬ್ರಹ್ಮ.

ಹೀಗೆ ಓಂಕಾರವು ಸರ್ವಾತ್ಮಕವಾದ ಸಂಕೇತಾಕ್ಷರ. ಅದು ಸರ್ವಸತ್ತ್ವಾತ್ಮಕವಾದದ್ದು; ಸರ್ವಜ್ಞಾನಾತ್ಮಕವಾದದ್ದು; ಸರ್ವಶಕ್ತ್ಯಾತ್ಮಕವಾದದ್ದು. ಈ ಮಹಾ ಮಂತ್ರದ ರಹಸ್ಯಾರ್ಥವನ್ನು ಅನುಭವಿಗಳಿಂದ ತಿಳಿದುಕೊಳ್ಳಬೇಕು. ನಾನು ಅಂಥ ಅನುಭವಿಯಲ್ಲ.

ಧ್ಯಾನಕ್ಕಾಗಿಯೂ, ಜಪಕ್ಕಾಗಿಯೂ ನಮ್ಮಲ್ಲಿ ಸಂಪ್ರದಾಯದಿಂದ ಬಂದಿರುವ ಓಂ ನಮಃ ಶಿವಾಯ, ಓಂ ನಮೋ ನಾರಾಯಣಾಯ–ಇಂಥಾ ಮಂತ್ರಗಳು ಭಗವಂತನ ಅನಂತ ರೂಪಗಳಲ್ಲಿ ಒಂದೊಂದು ರೂಪವನ್ನು ಒಂದೊಂದು ಎತ್ತಿ ತೋರಿಸುತ್ತವೆ. ಅನಂತವಾದದ್ದನ್ನು ಮನಸ್ಸಿಗೆ ಗೋಚರಪಡಿಸಿಕೊಳ್ಳುವುದು ಕಷ್ಟ. ರಾಮ, ಕೃಷ್ಣ, ಸೋಮೇಶ್ವರ, ಗಣಪತಿ, ಆಂಜನೇಯ–ಇಂಥಾ ಮೂರ್ತಿಗಳನ್ನು ಮನಸ್ಸಿನ ಮುಂದೆ ನಿಲ್ಲಿಸಿಕೊಳ್ಳುವುದು ಅಷ್ಟು ಕಷ್ಟವಾಗಲಾರದು. ವಿಗ್ರಹಗಳೂ ಪಟಗಳೂ ಅದಕ್ಕೆ ಸಹಾಯವಾಗುತ್ತವೆ. ಆದದ್ದರಿಂದ ಸಾಮಾನ್ಯ ಜನ ಅಂಥಾ ಏಕಮೂರ್ತಿ ಧ್ಯಾನದ ಮಂತ್ರಗಳನ್ನು ಹಿಡಿದು ಉಪಾಸನೆ ಮಾಡುತ್ತಾರೆ. ಪ್ರಣವಾಕ್ಷರವಾದರೋ ಮೂರ್ತಿಪ್ರಧಾನವಾದದ್ದಲ್ಲ; ಭಾವನಾಪ್ರಧಾನವಾದದ್ದು. ಅದರಲ್ಲಿ ಪ್ರಪಂಚ ನಿಷ್ಪ್ರಪಂಚಗಳೆರಡೂ ಸೇರಿಕೊಂಡಿವೆ; ಮೂರು ಲೋಕಗಳು, ಮೂರು ಗುಣಗಳು, ಮೂರು ಅವಸ್ಥೆಗಳು, ಮೂರು ದೇವತೆಗಳು–ಹೀಗೆ ಮೂರುಮೂರರ ಗುಂಪುಗಳಾಗಿ ಪ್ರಪಂಚವಸ್ತುಗಳನ್ನು ಗಣಿಸಿ, ಅ, ಉ, ಮ್–ಈ ತ್ರಿವರ್ಣಗಳಿಂದ ತ್ರ್ಯಂಶಗಳ ಒಂದು ವರ್ಗವನ್ನು ಒಂದು ಸಾರಿ ಮನಸ್ಸಿಗೆ ತರುತ್ತದೆ; ಆಮೇಲೆ ಆ ಮೂರರ ಐಕ್ಯವು ಮೂರಕ್ಕಿಂತ ಮೇಲ್ಪಟ್ಟದ್ದೆಂಬುದನ್ನು ಆ ತ್ರಿವರ್ಣಗಳ ಸಂಯುಕ್ತಾಕಾರವು ಮನಸ್ಸಿಗೆ ತರುತ್ತದೆ. ಈ ಭಾವನಾನುಸಂಧಾನವು ಮೊದಮೊದಲು ಅಸಾಧ್ಯವೆನಿಸುತ್ತದೆ. ಸಂತತ ಪ್ರಯತ್ನಾಭ್ಯಾಸಗಳಿಂದ ಅದು ಕೊಂಚಕೊಂಚವಾಗಿ ಸಾಧ್ಯವಾಗುತ್ತದೆ.

ಭಾವನಾಪ್ರಧಾನ

ಧ್ಯಾನದಲ್ಲಿ ಮುಖ್ಯವಾದದ್ದು ಅಕ್ಷರವಲ್ಲ, ಶಬ್ದವಲ್ಲ, ಧ್ವನಿಯಲ್ಲ. ಮುಖ್ಯವಾದದ್ದು ಭಾವನೆ. ಭಾವನೆಯನ್ನು ಮನಸ್ಸಿಗೆ ತರುವುದಕ್ಕಾಗಿ ಅಕ್ಷರ. ಹಾಗೆಯೇ ಭಗವದ್ಭಾವನೆಯನ್ನು ಮನಸ್ಸಿಗೆ ತರುವುದಕ್ಕಾಗಿ ವಿಗ್ರಹ, ಚಿತ್ರಪಟ, ಧೂಪದೀಪಾದಿ ಪೂಜಾಕ್ರಿಯೆಗಳೂ ಭಾವನೆಯನ್ನು ಮನಸ್ಸಿನಲ್ಲಿ ನಿಲ್ಲಿಸುವುದಕ್ಕೋಸ್ಕರವೇ. ಆದದ್ದರಿಂದ ಮನಸ್ಸನ್ನು ಅಕ್ಷರದ ಅರ್ಥದ ಮೇಲೆ–ವಿಗ್ರಹದ ಹಿಂದಿರುವ ಭಾವನೆಯ ಮೇಲೆ–ನಿಲ್ಲಿಸುವುದು ಧ್ಯಾನಯೋಗ.

ಮಂತ್ರಾಕ್ಷರಕ್ಕೆ ಅನೇಕಾರ್ಥಗಳಿರುವುದಕ್ಕಿಂತ ಒಂದೇ ಗೊತ್ತಾದ ಅರ್ಥವಿದ್ದರೆ ಧ್ಯಾನಕ್ಕೆ ಅನುಕೂಲವಲ್ಲವೆ? ಪ್ರಣವಕ್ಕೆ ನಾನಾರ್ಥಗಳು ಸಾಧ್ಯವೆಂದು ಮೇಲೆ ನೋಡಿದೆವು. ಆದರಿಂದ ಮನಸ್ಸು ಚೆದರಿಹೋಗುವುದಿಲ್ಲವೆ?–ಎಂದರೆ ಉತ್ತರ ಹೀಗೆ: ಒಂದು ನಿರ್ದಿಷ್ಟವಾದ ಅರ್ಥವುಳ್ಳ ಮಂತ್ರವು ಪ್ರಾರಂಭಕ್ಕೆ ಸರಿ. ಆದರೆ ಕ್ರಮಕ್ರಮವಾಗಿ ಅರ್ಥ ವಿಸ್ತಾರವಾಗಬೇಕಲ್ಲವೆ? ಮೊದಮೊದಲು “ಓಂ ನಮಃ ಶಿವಾಯ” ಅಥವಾ “ಓಂ ನಮೋ ನಾರಾಯಣಾಯ” ಆಗಲಿ. ಬರಬರುತ್ತ ಮನಸ್ಸಿನ ಗಮನ “ಓಂ” ಎಂಬುದಕ್ಕೆ ಹೆಚ್ಚುಹೆಚ್ಚುತ್ತ ಬೆಳೆಯಲಿ. ಪ್ರಣವದ ನಾನಾರ್ಥಗಳಲ್ಲಿ ಯಾವ ಒಂದರ್ಥ ಮನಸ್ಸಿಗೆ ಹೊಳೆದರೂ ಸರಿ. ಬ್ರಹ್ಮ, ವಿಷ್ಣು, ಶಿವ–ಆಗಲಿ; ಅಥವಾ ಭೂಮಿ, ಅಂತರಿಕ್ಷ. ಆಕಾಶ–ಆಗಲಿ; ಅಥವಾ ಸತ್ತ್ವ, ರಜಸ್ಸು, ತಮಸ್ಸು–ಆಗಲಿ; ಅಥವಾ ತೇಜಸ್ಸು, ಅಪ್ಪು, ಅನ್ನ, –ಆಗಲಿ. ಇಂಥ ತ್ರಿವರ್ಗ ಯಾವುದು ಮೊದಲು ಧ್ಯಾನಕ್ಕೆ ಬಂದರೂ ಅದು ಕ್ರಮೇಣ ವಿಸ್ತರಿಸಿ ಮಿಕ್ಕೆಲ್ಲ ತ್ರಿವರ್ಗಗಳಿಗೂ ವ್ಯಾಪಿಸುತ್ತದೆ; ಮತ್ತು ಎಲ್ಲವನ್ನೂ ಮೀರಿಸುತ್ತದೆ. ಇದು ಅಭ್ಯಾಸದ ಮಹಿಮೆ. ಆಗಲೇ ನಾನು ವಿಜ್ಞಾಪಿಸಿದಂತೆ ಇದರ ಮರ್ಮಗಳನ್ನು ಅನುಭವಸ್ಥರಿಂದ ಕಂಡುಕೊಳ್ಳಬೇಕು. ನಾನು ಅಂಥವನಲ್ಲ. ಈಗ ಮುಂದಿನ ವಿಚಾರಕ್ಕೆ ಹೋಗೋಣ.

> ಅನನ್ಯಚೇತಾಃ ಸತತಂ ಯೋ ಮಾಂ ಭಜತಿ ನಿತ್ಯಶಃ ।
> ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥

“ಮನಸ್ಸನ್ನು ಬೇರೆ ಯಾವುದರ ಕಡೆಗೂ ಹೋಗಬಿಡದೆ, ಯಾವಾಗಲೂ ನನ್ನನ್ನೇ (ಭಗವಂತನನ್ನೇ) ಯಾರು ಅನುಸರಿಸಿಕೊಂಡಿರುತ್ತಾನೋ ಅಂಥವನು ಯೋಗಿ. ಅವನು

ಸರ್ವದಾ ನನ್ನಲ್ಲಿ ಸೇರಿಕೊಂಡಿರುವವನು. ಅವನಿಗೆ ನಾನು ಸುಲಭ”.

ಅಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥

ಬ್ರಹ್ಮಲೋಕ ಮೊದಲ್ಗೊಂಡು ಸಮಸ್ತ ಜಗತ್ತೂ ಪುನಃಪುನಃ ಹುಟ್ಟುತ್ತ ಸಾಯುತ್ತ ಇರತಕ್ಕದ್ದೇ. “ಪುನರಪಿ ಜನನಂ ಪುನರಪಿ ಮರಣಮ್” –ಇದು ಎಲ್ಲರಿಗೂ ಉಂಟು. ಜೀವಾತ್ಮವು ಪರಬ್ರಹ್ಮದಲ್ಲಿ ಸೇರಿಕೊಂಡ ಬಳಿಕ ಅದಿಲ್ಲ. ಮುಕ್ತಜೀವವು, ಎಂದರೆ ಶುದ್ಧಾತ್ಮವು ಎಂದೆಂದಿಗೂ ಭಗವತ್ಸಾನ್ನಿಧ್ಯದಲ್ಲಿಯೇ ಸ್ಥಾಯಿಯಾಗಿರುತ್ತದೆ ಅಥವಾ ಉತ್ತಮಲೋಕಗಳಲ್ಲಿರುತ್ತದೆ. ಈ ಪಾರಲೌಕಿಕ ಗತಿ ಎಂಥಾದ್ದೆಂಬುದನ್ನು ಸ್ವಾಮಿ ಈಗ ಸೂಚನೆ ಮಾಡಹೊರಟಿದ್ದಾನೆ.

ಬ್ರಹ್ಮಸತ್ತ್ವವು ವ್ಯಕ್ತ ಮತ್ತು ಅವ್ಯಕ್ತ ಎಂಬೆರಡು ದಶೆಗಳಲ್ಲಿರತಕ್ಕದ್ದೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದೆ. ವ್ಯಕ್ತ ಎಂದರೆ ದೃಶ್ಯಸತ್ತ್ವ ಅಥವಾ ಪ್ರತ್ಯಕ್ಷಪ್ರಪಂಚ; ಅವ್ಯಕ್ತ ಎಂಬುದು ಅದೃಶ್ಯಸತ್ತ್ವ ಅಥವಾ ಪ್ರಪಂಚಾತೀತ ವಸ್ತು. ಈ ಎರಡಕ್ಕೂ ಸಮಾನವಾಗಿ ಏಕೈಕಾಧಾರವಾಗಿರತಕ್ಕದ್ದು ಸನಾತನ. ಅದೇ ಪರಬ್ರಹ್ಮ. ಆ ಪರಬ್ರಹ್ಮವನ್ನನುಭವಿಸಿಕೊಂಡಿರುವುದೇ ಮೋಕ್ಷ. ಆ ಮೋಕ್ಷವನ್ನು ಸಾಧಿಸಿಕೊಳ್ಳುವುದೇ ಯೋಗಸಿದ್ಧಿ.

ಪರಸ್ತಸ್ಮಾತ್ತು ಭಾವೋಽನ್ಯಃ ಅವ್ಯಕ್ತೋಽವ್ಯಕ್ತಾತ್ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥

“ಅವ್ಯಕ್ತ ವ್ಯಕ್ತಗಳೆರಡಕ್ಕಿಂತಲೂ ಬೇರೆಯಾಗಿ ಶಾಶ್ವತವಾಗಿ ಯಾವುದು ನಾಶ ಹೊಂದುವ ದೇಹಾದಿಗಳೊಳಗಡೆ ತಾನು ನಾಶವಿಲ್ಲದ್ದಾಗಿ ಉಳಿದಿರುತ್ತದೆಯೋ ಅದೇ ಪರಬ್ರಹ್ಮ”.

ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಮ್ ।
ಯಂ ಪ್ರಾಪ್ಯ ನ ನಿವರ್ತನ್ತೇ ತದ್ಧಾಮಂ ಪರಮಂ ಮಮ ॥

ಜಗದತೀತವಾಗಿ, ಅವ್ಯಕ್ತವಾಗಿ, ಅಕ್ಷರವಾಗಿ ಇರುವ ಬ್ರಹ್ಮಸನ್ನಿಧಿಯನ್ನು ಪಡೆದ ಬಳಿಕ ಅಲ್ಲಿಂದ ಹಿಂತಿರುಗುವುದೆಂಬುದಿಲ್ಲ. ಅದೇ ಪರಂಧಾಮ. ಅದೇ ಭಗವತ್ಸನ್ನಿಧಿ. ಅದೇ ಮೋಕ್ಷಪದವಿ. ಆ ಪದವಿಯು ಸಾಧಕನಿಗೆ ಇಲ್ಲಿಯೇ–ಇಹಜನ್ಮದಲ್ಲಿಯೇ–ಭೂಲೋಕದಲ್ಲಿಯೇ–ಬದುಕಿರುವಾಗಲೇ ದೊರೆಯಬಹುದು. ಅಂಥ ಮೋಕ್ಷವೇ ಜೀವನ್ಮುಕ್ತಿ. ಶುಕವಾಮದೇವಾದಿ ಮಹರ್ಷಿಗಳನೇಕರು ಜೀವನ್ಮುಕ್ತರೆಂದು ಶ್ರುತಿ ಪುರಾಣಗಳು ತಿಳಿಸುತ್ತವೆ.

ಹಾಗಾಗದೆ ಹೋದರೂ, ಸಾಧಕನು ಕಾಮಕ್ರೋಧರಹಿತನಾಗಿ ಬ್ರಹ್ಮೈಕನಿಷ್ಠನಾಗಿ ಲೋಕಯಾತ್ರೆಯನ್ನು ಮುಗಿಸಿ ಭೂಲೋಕವನ್ನು ಬಿಟ್ಟ ಬಳಿಕ–ಈಗಿನ ದೇಹ ಬಿದ್ದ ಮೇಲೆ ಮೋಕ್ಷದಶೆಯನ್ನೈದಬಹುದು. ಅಂಥಾದ್ದು ವಿದೇಹಮುಕ್ತಿ.

ಹೀಗೆ ಮೋಕ್ಷ ಎರಡು ಪ್ರಕಾರದ್ದು.

ಮೋಕ್ಷಸಿದ್ಧಿಗೆ ತಿಥಿ ವಾರ ನಕ್ಷತ್ರ ಮುಹೂರ್ತಗಳ ಲೆಕ್ಕ ಸಲ್ಲದು. ಅದು ತಾನಾಗಿ ಆಗತಕ್ಕದ್ದು. ಯಾವ ಹೊರಸಂದರ್ಭವೂ ಅದನ್ನು ತಡೆಯಲಾರದು. ವೇಗಗೊಳಿಸಲೂ ಆರದು. ಅದು ಜೀವಿಯ ಹೃದಯಾಂತರಾಳದಲ್ಲಿ ಸ್ವತಃ ಆಗುವ ಅನುಭವ. ಅದಕ್ಕೆ ಬಾಹ್ಯವಿಧಿ ನಿರ್ಬಂಧಗಳಿಲ್ಲ.

ಇಹಜನ್ಮಕ್ಕಂಟಿಕೊಂಡಿರುವ ಪ್ರಾಕ್ಕರ್ಮಶೇಷಪ್ರಾರಬ್ಧಫಲವನ್ನು ಅನುಭವಿಸಿ ಮುಗಿಸಿ, ದೇಹಪಾತವಾದ ತರುವಾಯ ದೊರೆಯುವ ಮೋಕ್ಷಪದವಿಯೇ ವಿದೇಹ ಮುಕ್ತಿ; ಅದು ಸದ್ಯೋಮುಕ್ತಿಯೆಂದೂ ಕ್ರಮಮುಕ್ತಿಯೆಂದೂ ಎರಡು ವಿಧ.

ಸಾಧಕನು ಇಹಲೋಕದಿಂದ ತೆರಳಿದ ಬಳಿಕ ನೇರವಾಗಿ–ನಡುವೆ ಎಲ್ಲಿಯೂ ತಂಗದೆ–ಬ್ರಹ್ಮನನ್ನು ಸೇರುವುದು ಸದ್ಯೋಮುಕ್ತಿ. ಅದರ ಮಾರ್ಗವೇ ದೇವಯಾನ. ಹಾಗಲ್ಲದೆ ಬೇರೆ ಉತ್ತಮಲೋಕಗಳಲ್ಲಿ ಅಲ್ಲಲ್ಲಿ ನಿಂತು ಮಾಡುವ ಪ್ರಯಾಣವೇ ಕ್ರಮಮುಕ್ತಿ. ಅದೇ ಪಿತೃಯಾನ. ಇದನ್ನು ಸ್ವಾಮಿ ಹೀಗೆ ವರ್ಣಿಸಿದ್ದಾನೆ:

> ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ ॥

ಬ್ರಹ್ಮಪದವಿಯ ಮಾರ್ಗದ ಲಕ್ಷಣಗಳು ಅಗ್ನಿ, ಬೆಳಕು, ಹಗಲು, ಶುಭ್ರತೆ; ಉತ್ತರಾಯಣವೆಂಬ ವರ್ಷಾರ್ಧ.

ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ ॥

ಇತರ ಪುಣ್ಯಲೋಕಗಳ ಮಾರ್ಗದ ಲಕ್ಷಣಗಳು; ಹೊಗೆ, ಇರುಳು, ಕಪ್ಪು, ದಕ್ಷಿಣಾಯನವೆಂಬ ವರ್ಷಾರ್ಧ.

ಶುಕ್ಲಕೃಷ್ಣೇ ಗತೀ ಹ್ಯೇತ್ಯೇ ಜಗತಃ ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಂ ಅನ್ಯಯಾಽಽವರ್ತತೇ ಪುನಃ ॥

ದೇವಯಾನದಿಂದ ಬ್ರಹ್ಮಪ್ರಾಪ್ತಿ, ಪುನರ್ಜನ್ಮರಾಹಿತ್ಯ. ಪಿತೃಯಾನದಿಂದ ಆಗಾಗ ಪುನರ್ಜನ್ಮ ಪ್ರಾಪ್ತಿ. ಪುನಃಪುನಃ ಪುಣ್ಯಸಂಪಾದನೆ, ಪುಣ್ಯಕ್ಷಯ ಮತ್ತೆ ಪುಣ್ಯ ಸಂಪಾದನೆ–ಹೀಗೆ.

ಪಿತೃಯಾನವೆಂದರೆ ಉತ್ತಮಜನ್ಮಗಳ ಮಾರ್ಗ. ಸತ್ಕುಟುಂಬ, ಸತ್ಸಂಪತ್ತು, ಸತ್ಕರ್ಮ, ಸತ್ಪ್ರಜೆ, ಸದ್ಭೋಗ–ಇವು ಪುಣ್ಯಲೋಕದ ಲಕ್ಷಣಗಳು. ಬ್ರಹ್ಮನಿಷ್ಠನು ಯಾವುದೋ ಕಾರಣದಿಂದ ಬ್ರಹ್ಮಪದವಿಯನ್ನು ಕೂಡಲೇ ಪಡೆಯಲಾಗದಿದ್ದರೂ–ಯಾವುದೋ ಕಾರಣದಿಂದ ಅವನು ಇನ್ನೂ ಕೆಲವು ಜನ್ಮಗಳನ್ನೆತ್ತಬೇಕಾಗಿದ್ದರೂ ಅವನು ಅದಕ್ಕಾಗಿ ಕೆಲವು ಸಾರಿ ಊರ್ಧ್ವಲೋಕಗಳನ್ನು ಸೇರುತ್ತಾನೆ. ಮತ್ತೆ ಭೂಲೋಕದಲ್ಲಿ ಪ್ರಶಸ್ತ ಕುಟುಂಬಗಳಲ್ಲಿ ಹುಟ್ಟಿ ಬ್ರಹ್ಮನಿಷ್ಠನಾಗಿ ಬದುಕುತ್ತಾನೆ.

ಪ್ರಾಪ್ಯ ಪುಣ್ಯಕೃತಾಂ ಲೋಕಾನ್ ಉಷಿತ್ವಾ ಶಾಶ್ವತೀಃ ಸಮಾಃ ।
ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥

ಹಾಗೆ ಮೆಟ್ಟಲುಮೆಟ್ಟಲಾಗಿ ಮೇಲ್ಮೇಲಕ್ಕೆ ಹೋಗುತ್ತಾನೆ. ಇದು ಪಿತೃಯಾನದ ಮುಕ್ತಿ ಮಾರ್ಗ. ಅದು ಹೀನವೆಂದಾಗಲಿ ಭಯಂಕರವೆಂದಾಗಲಿ ತಿಳಿಯಬೇಕಾದದ್ದಿಲ್ಲ. ಸತ್ಸಂಸಾರ, ಸತ್ಸಂತಾನ–ಇವು ಪಿತೃದೇವತೆಗಳ ಅನುಗ್ರಹ; ಅದರಿಂದ ಜೀವಸಂಸ್ಕಾರ. ಜೀವಸಂಸ್ಕಾರವೆಂದರೆ ಹೆದರಬೇಕೇನು? ಜೀವಸಂಸ್ಕಾರ ಬೇಡವೆಂದರೆ ಬ್ರಹ್ಮಾನುಭವಕ್ಕೆಲ್ಲ ಅರ್ಹತೆಯಿಲ್ಲ.

ಉತ್ತರಾಯಣದಲ್ಲಾದ ಮರಣವು ಬ್ರಹ್ಮಪ್ರಾಪಕವೆಂದೂ ದಕ್ಷಿಣಾಯನ ಮರಣವು ಪುನರ್ಜನ್ಮನಿಮಿತ್ತವೆಂಬುದೂ ಶ್ರೀಕೃಷ್ಣಾವತಾರಕ್ಕಿಂತ ಹಿಂದಿನಿಂದ ಬಂದಿದ್ದ ನಂಬಿಕೆ. ಅದು ವೇದದಲ್ಲಿದೆ. * ಭೀಷ್ಮರು ಅದನ್ನು ನಂಬಿದ್ದಿರಬೇಕು–ಆದದ್ದರಿಂದಲೇ ಅವರು ಶರತಲ್ಪದ ಯಾತನೆಯನ್ನಾದರೂ ಸಹಿಸಿಕೊಂಡು ಉತ್ತರಾಯಣಕ್ಕಾಗಿ ಕಾದರು.

ಈಗ ನಾವು ಅದನ್ನು ನಂಬಬೇಕೋ, ಬೇಡವೋ? ನಂಬಿದರೆ ಬಾಧಕವಿಲ್ಲ; ಬಿಡಬೇಕಾದ ಕಾರಣವಿಲ್ಲ. ಆ ನಂಬಿಕೆಗೆ ಪ್ರತ್ಯಕ್ಷವಾದ ಆಧಾರ ಕಾಣುತ್ತಿಲ್ಲವೆಂಬುದಷ್ಟೇ ಕಾರಣವಾದಲ್ಲಿ ಅದು ಪುರಾತನಶ್ರದ್ಧೆಯನ್ನು ಅಳಿಸಿಹಾಕಲು ಸಾಲದು. ಅದನ್ನು ಬಿಡುವುದಕ್ಕೂ ಕಾರಣ ತೋರಬೇಕು. ಆ ನಂಬಿಕೆಯಿಂದ ನಮಗೆ ಆಗಿರುವ ಕಷ್ಟವೇನು?

ಯಾವ ಅಭಿಪ್ರಾಯದ ವಿಷಯದಲ್ಲಿಯೇ ಆಗಲಿ ನಮ್ಮ ಮನೋಭಾವ ಮೂರು ತೆರನಾಗಿರಬಹುದು:

1. ನಂಬಿಕೆಯದು
2. ನಂಬಿಕೆ ಬಿಟ್ಟದ್ದು
3. ಅಮಾನತ್ತಿನಲ್ಲಿಟ್ಟದ್ದು (Suspense).

ನಮ್ಮನಮ್ಮ ಇರುವಿಕೆಯ ವಿಷಯದಲ್ಲಿ ನಾವು ನಂಬಿಕೆಯಿಟ್ಟುಕೊಂಡಿದ್ದೇವೆ. ಭೂಗೋಳವನ್ನು ಎಂಟು ಆನೆ ಹೊತ್ತಿವೆ ಎಂಬುದನ್ನು ವಾಸ್ತವವೆನ್ನದೆ, ಕಥೆಯೆನ್ನುತ್ತೇವೆ. ಆದರೆ ಪಂಚಾಂಗಜಾತಕಾದಿಗಳ ವಿಷಯದಲ್ಲಿ ನಾವು ಏನೆಂದೂ ಪ್ರಮಾಣಮಾಡಹೊರಡುವುದಿಲ್ಲ. ಅವು ಸುಳ್ಳೆಂದು ಯಾರಾದರೂ ಖಂಡಿಸಿದರೆ ನಿಜವೆಂದು ನಾವು ರುಜುವಾತು ಮಾಡಿಕೊಡಲಾರೆವು. ಅವು ದಿಟವೆಂದು ಯಾರಾದರೂ ಹಟ ಹಿಡಿದರೆ ಸುಳ್ಳೆಂದೂ ನಾವು ವಾದಿಸಲಾರೆವು. ಬಹುಕಾಲದ ಮತ್ತು ಬಹುಜನದ ಒಂದು ನಂಬಿಕೆಯಿಂದ ನಮಗೆ ಕಷ್ಟವೇನೂ ಆಗದಿರುವ ಪಕ್ಷದಲ್ಲಿ ಆ ನಂಬಿಕೆಯನ್ನು ವಿರೋಧಿಸುವುದಕ್ಕಿಂತ ಅವಶ್ಯವಾದಷ್ಟು ಅನುಸರಿಸುವುದು ಹಿತಮಾರ್ಗ. ಚೀಣೀಯರ ಧಾಳಿಯು ಅಷ್ಟಗ್ರಹಚೇಷ್ಟೆಯೆಂದರೆ ನಾವು ಹಾಗಲ್ಲ ಎಂದು ಸಾಧಿಸಲಾಗದು. ಅದಕ್ಕೂ ಇದಕ್ಕೂ ಸಂಬಂಧವಿಲ್ಲವೆಂದು ಯಾರಾದರೂ ವಾದಿಸಿದರೆ ಅದಕ್ಕೂ ನಾವು ಪ್ರತಿಹೇಳಲಾರೆವು. ನಾವು ಎಣಿಕೆಗೆ ತೆಗೆದುಕೊಳ್ಳಬೇಕಾದದ್ದು ಇಷ್ಟೇ–ಅಷ್ಟಗ್ರಹವ್ಯಾಜದಿಂದ

ಕೆಲ ಮಂದಿಯ ಮನಸ್ಸು ದೇವರ ಕಡೆಗೆ ತಿರುಗಿತು. ಅದಷ್ಟು ಲಾಭವೇ. ಆ ಪೂಜಾಹೋಮಗಳಿಂದ ಕೆಲವರ ಮನಸ್ಸಿಗೆ ಧೈರ್ಯ ಬಂತು, ಅದೂ ಲಾಭವೇ.

ಈ ರೀತಿಯಾಗಿ ನೋಡಬೇಕಾದದ್ದು ಉತ್ತರಾಯಣ–ದೇವಯಾನ, ದಕ್ಷಿಣಾಯನ–ಪಿತೃಯಾನಗಳ ನಂಬಿಕೆಯನ್ನು. ಅದು ಮರಣಾನಂತರದ ಪ್ರಸಕ್ತಿ; ಇಲ್ಲಿ ನಮ್ಮ ಕಣ್ಣಿಗೆ ದೊರೆಯಬಲ್ಲದ್ದಲ್ಲ; ವಸ್ತುತಃ ಉತ್ತರಾಯಣ ದಕ್ಷಿಣಾಯನಗಳಿಗಿರುವ ವ್ಯತ್ಯಾಸ ಎಷ್ಟು ಮಟ್ಟಿನದೋ ನಾವು ಪೂರ್ತಿಯಾಗಿ ಕಾಣಲಾರೆವು. ಖಗೋಳ ವೈಜ್ಞಾನಿಕರೂ ವಾಯುಮಾನ ವೈಜ್ಞಾನಿಕರೂ ನಮಗೆ ಭೌತವ್ಯತ್ಯಾಸಗಳನ್ನು ತಿಳಿಸಿಯಾರು. ಜೀವಗತಿಯ ವ್ಯತ್ಯಾಸಗಳನ್ನು ಅವರು ನಮಗೆ ಹೇಗೆ ತಿಳಿಸಲಾದೀತು?

ಈ ವಿಷಯವನ್ನು ಕುರಿತು ಪ್ರಶ್ನೆ ಮಾಡುವವರ ಮನಸ್ಸಿನಲ್ಲಿರುವುದು ದೇವಯಾನದ ಶ್ರೇಷ್ಠತೆಯನ್ನೂ ಪಿತೃಯಾನದ ಅಶ್ರೇಷ್ಠತೆಯನ್ನೂ ಅವಲಂಬಿಸಿಕೊಂಡಿರುವ ಶಂಕೆ. ಅದರ ಬುಡದಲ್ಲಿರುವುದು ದಕ್ಷಿಣಾಯನದಲ್ಲಿ ಸತ್ತವರಿಗೆ ಅಶ್ರೇಷ್ಠತೆ ಏಕೆ? ಎಂಬುದು. ತಮಗೆ ಮೃತ್ಯು ದಕ್ಷಿಣಾಯನದಲ್ಲಿ ಬಂದುಬಿಟ್ಟರೆ? ಇದು ಅವರ ಭಯ. ಇಲ್ಲಿ ಎರಡು ವಿಷಯ.

1. ಪಿತೃಯಾನವು ನಿಕೃಷ್ಟವಾದದ್ದಲ್ಲ. ತಮ್ಮ ಯೋಗ್ಯತೆ ಅದಕ್ಕಿಂತ ಮೀರಿದ್ದೆಂದು ಯಾರಾದರೂ ತಿಳಿದಿದ್ದರೆ ಆ ತಿಳಿವಳಿಕೆಯೇ ಭ್ರಾಂತಿ. ಅದೇ ಅವರ ಅನರ್ಹತೆಯನ್ನು ಗೊತ್ತುಮಾಡುತ್ತದೆ.
2. ಪಿತೃಯಾನದಿಂದಾಗುವುದು ಲೌಕಿಕ ಭೋಗಭಾಗ್ಯಗಳು ಮತ್ತು ದಾರಾಪುತ್ರಸಂಪತ್ತು. ಅದು ನಮಗೆ ಬೇಡವೆನ್ನುವವರು ಎಷ್ಟು ಮಂದಿ? ಭೀಷ್ಮರ ಮನೋದಾರ್ಢ್ಯವೂ ಮಹಿಮೆಯೂ ಇರುವವರು ಈ ಪ್ರಶ್ನೆ ಎತ್ತಬೇಕಾದದ್ದೇ ಇಲ್ಲ. ಭೀಷ್ಮರು ಸ್ವೇಚ್ಛಾಮರಣಿಗಳು. ಉತ್ತರಾಯಣಮರಣಮಾತ್ರದಿಂದ ಮುಕ್ತಿಯೆಂದು ಯಾರಾದರೂ ತಿಳಿದಿದ್ದಲ್ಲಿ ಆ ಭ್ರಾಂತಿಗೆ ಮದ್ದಿಲ್ಲ. ಮುಖ್ಯವಾಗಿ ಈ ಪ್ರಕರಣದ ಉದ್ದೇಶ ಜನದಲ್ಲಿ ಒಂದು ಉನ್ನತ ಭಾವನೆಯನ್ನುಂಟುಮಾಡಬೇಕೆಂಬುದೇ ಹೊರತು ಪರಮಾರ್ಥತತ್ತ್ವವಲ್ಲ. ಮಿಕ್ಕೆಡೆಗಳಲ್ಲಿರುವಂತೆ ಇಲ್ಲಿಯೂ ಅದು ಅಧಿಕಾರಿಭೇದವನ್ನು ಗಮನಕ್ಕೆ ತರುವ ಒಂದು ಬೋಧನೋಪಾಯ. ತತ್ತ್ವಭಾಗ ಇಷ್ಟು:

ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ॥

ಸಂಗ್ರಹ

ಪಥವೆರಡು ಪರದಿ ಸುಕೃತಿಗೆ ।
ಸಿತಸೌರಂ ದೇವಯಾನಮದು ಮೋಕ್ಷಾರ್ಥಂ ॥
ಪಿತೃಯಾನಂ ಸತ್ಕುಲ ಸಂ- ।
ಸ್ಕೃತಿಗಕ್ಕುಮದುತ್ತರೋತ್ತರಾಭ್ಯುದಯಾರ್ಥಂ

॥ ೧ ॥

ಅಷ್ಟಪ್ರಶ್ನೋತ್ತರದಿಂ ।
ಸ್ಪಷ್ಟಿಲಯಾವೃತ್ತಿ ಜೀವಜನಿಮೃತಿಕಥೆಯಂ ॥
ಸೃಷ್ಟೀಕರಿಸಿದನಚ್ಯುತ- ।
ನಷ್ಟಮಗೀತೆಯಲಿ ಪುಣ್ಯಯಾತ್ರೆಯ ಪರಿಯಂ

॥ ೨ ॥

ಭುವನಘಟಕುಲಾಲಂ ವಿಸ್ಮಯಾಶ್ಚರ್ಯಜಾಲಂ ।
ಭವರಥಗತಿಕೀಲಂ ಸರ್ವಜೀವಾನುಕೂಲಂ ॥
ಸಧನಕೃತಕುಚೇಲಂ ದುಷ್ಟಸಂಹಾರಕಾಲಂ ।
ಪ್ರಕೃತಿಪುರುಷಖೇಲಂ ನಿತ್ಯಧರ್ಮಾದಿಮೂಲಂ ॥

ಅಥ ರಾಜವಿದ್ಯಾರಾಜಗುಹ್ಯಯೋಗೋ ನಾಮ ನವಮೋಽಧ್ಯಾಯಃ

ಶ್ರೀಭಗವಾನುವಾಚ-

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್

॥ ೧ ॥

ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್

॥ ೨ ॥

ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ

॥ ೩ ॥

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ

॥ ೪ ॥

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
ಭೂತಭೃನ್ನ ಚ ಭೂತಸ್ಥೋ ಮಮಾಽಽತ್ಮಾ ಭೂತಭಾವನಃ

॥ ೫ ॥

ಯಥಾಽಽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್ ।
ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ

॥ ೬ ॥

ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಮ್ ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್

॥ ೭ ॥

ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃಪುನಃ ।
ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್

॥ ೮ ॥

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು

॥ ೯ ॥

ಮಯಾಽಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।
ಹೇತುನಾಽನೇನ ಕೌಂತೇಯ ಜಗದ್ವಿಪರಿವರ್ತತೇ

॥ ೧೦ ॥

ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್

॥ ೧೧ ॥

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ

॥ ೧೨ ॥

ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯ ಮನಸೋ ಜ್ಞಾತ್ವಾ ಭೂತಾದಿಮವ್ಯಯಮ್

॥ ೧೩ ॥

ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ

॥ ೧೪ ॥

ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್

॥ ೧೫ ॥

ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಮ್ ।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಮ್

॥ ೧೬ ॥

ಪಿತಾಽಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರ ಋಕ್ ಸಾಮ ಯಜುರೇವ ಚ

॥ ೧೭ ॥

ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ।
ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಮ್

॥ ೧೮ ॥

ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।
ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ

॥ ೧೯ ॥

ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।
ತೇ ಪುಣ್ಯಮಾಸಾದ್ಯ ಸುರೇಂದ್ರಲೋಕ–
ಮಶ್ನಂತಿ ದಿವ್ಯಾನ್ ದಿವಿ ದೇವಭೋಗಾನ್

॥ ೨೦ ॥

ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।
ಏವಂ ತ್ರಯೀ ಧರ್ಮಮನುಪ್ರಪನ್ನಾ
ಗತಾಗತಂ ಕಾಮಕಾಮಾ ಲಂಭಂತೇ

॥ ೨೧ ॥

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್

॥ ೨೨ ॥

ಯೇಽಪ್ಯನ್ಯದೇವತಾಭಕ್ತಾ ಯಜಂತೇ ಶ್ರದ್ಧಯಾಽನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್

॥ ೨೩ ॥

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ನ ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ

॥ ೨೪ ॥

ಯಾಂತಿ ದೇವವ್ರತಾ ದೇವಾನ್ ಪಿತೄನ್ ಯಾಂತಿ ಪಿತೃವ್ರತಾಃ ।
ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಽಪಿ ಮಾಮ್

॥ ೨೫ ॥

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ

॥ ೨೬ ॥

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಮ್

॥ ೨೭ ॥

ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ

॥ ೨೮ ॥

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್

॥ ೨೯ ॥

ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ ವ್ಯವಸಿತೋ ಹಿ ಸಃ

॥ ೩೦ ॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ

॥ ೩೦ ॥

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್

॥ ೩೨ ॥

ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಮ್

॥ ೩೩ ॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ

॥ ೩೪ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ರಾಜವಿದ್ಯಾರಾಜಗುಹ್ಯಯೋಗೋ ನಾಮ ನವಮೋಽಧ್ಯಾಯಃ

ದೇವರ್ಕಳ್ ನೂರ್ವರಿರ್ಪರ್ ಭುವನಪರಿಚರರ್ ಪ್ರಾಣಸಂಪೋಷಕರ್ ತಾಂ ।
ಗೈವರ್ ತಂತಮ್ಮ ಕಾರ್ಯಂಗಳನವರಿಗದೇಂ ಮಾನುಷಾಂತರ್ಯಘೂರ್ಣಂ ॥
ದೈವಕ್ಯಂ ಕೃಷ್ಣನೊರ್ವಂ ನರಹೃದುದಧಿಕಲ್ಲೋಲಮಂ ಕಂಡ ದೈವಂ ।
ಜೀವವ್ಯಾಧಿಜ್ಞವೈದ್ಯಂ ಗುರುವವನುಪದೇಶಂ ಸುಹೃತ್ ಸ್ವಾನುಭೂತಂ ॥

ಸೂಚನೆ

ಸರ್ವಗತಮಿರ್ದುಮ್ ಆತ್ಮಂ ।
ನಿರ್ವಿಕೃತಂ ಸರ್ವಶಕ್ತಮ್ ಅದು ನಿಷ್ಕರ್ಮಂ ॥
ನಿರ್ವೈರಂ ಸರ್ವಸಮಂ ।
ನಿರ್ವೃತಿದಂ ಪತ್ರಸುಮಜಲಾರ್ಪಕರಿಂಗಂ ॥

ಸಾರಾಂಶ

ಜಗದ್ವಸ್ತುಗಳು ಬ್ರಹ್ಮದಲ್ಲಿ ಸೇರಿಕೊಂಡು ತದಾಧಾರದಿಂದ ನಡೆಯುತ್ತಿರುವ ಕಾರಣದಿಂದ ಅವೇ ಬ್ರಹ್ಮವೆಂದು ನಾವು ಭ್ರಾಂತಿಪಡುವುದುಂಟು. ಬ್ರಹ್ಮತತ್ತ್ವಕ್ಕೆ ಸಲ್ಲಬೇಕಾದದ್ದನ್ನು ಜಗದ್ವೈಭವಕ್ಕೆ ಸಲ್ಲಿಸುತ್ತೇನೆ. ಇದೇ ಪ್ರಮಾದ. ಜಗತ್ತು ಬ್ರಹ್ಮಚೈತನ್ಯದ ವಿಕಾರ, ಬ್ರಹ್ಮವು ಜಗದ್ವಸ್ತುಗಳನ್ನೆಲ್ಲ ಮೀರಿದ್ದು–ಎಂಬುದನ್ನು ಸರ್ವದಾ ಸ್ಮರಣೆಯಲ್ಲಿರಿಸಿಕೊಳ್ಳಬೇಕು.

ಯಾರು ತನ್ನನ್ನು ಸಂಪೂರ್ಣವಾಗಿ ಆಶ್ರಯಿಸುತ್ತಾರೋ ಅವರ ಯೋಗಕ್ಷೇಮವೆಲ್ಲದರ ಜವಾಬ್ದಾರಿಯನ್ನೂ ತಾನು ವಹಿಸಿಕೊಂಡಿರುವೆನೆಂದಿದ್ದಾನೆ ಭಗವಂತ. ಇದಕ್ಕಿಂತ ದೊಡ್ಡ ಭರವಸೆ ಇನ್ನೇನು ತಾನೇ ಇದ್ದೀತು?

ಶ್ರದ್ಧೆಯಿಂದ ಕೂಡಿದ ಭಕ್ತಿಯೆಲ್ಲ ತನ್ನನ್ನೇ ಸೇರುವುದೆಂದೂ ಅದಕ್ಕೆ ತಾನೊಲಿಯುವೆನೆಂದೂ ಭಗವಂತನು ಭರವಸೆಕೊಟ್ಟಿದ್ದಾನೆ. ಆಹಾರಸ್ವೀಕಾರ ದಾನಾದಿ ಸಾಮಾನ್ಯ ಲೌಕಿಕ ಕರ್ಮಗಳನ್ನೂ ಕೃಷ್ಣಾರ್ಪಣಬುದ್ಧಿಯಿಂದ ಮಾಡಿದ್ದಾದರೆ. ಅವು ಜೀವಕ್ಕೆ ಸಾರ್ಥಕತೆಯನ್ನು ತರಬಲ್ಲವು. ಈ ಉಪದೇಶದಲ್ಲಿ ಗೀತಾಹೃದಯವನ್ನು ನಾವು ಕಾಣಬಹುದು.

ಪ್ರಕರಣ ೧೦

ಅಧ್ಯಾಯ ೯ - ರಾಜವಿದ್ಯಾರಾಜಗುಹ್ಯಯೋಗವೆಂಬ ಬ್ರಹ್ಮಜಗತ್ಸಂಬಂಧಯೋಗ

ಪೂರ್ವಾಧ್ಯಾಯದಲ್ಲಿ (ಕಿಂ ತದ್ಬ್ರಹ್ಮ) ಬ್ರಹ್ಮವೆಂಬುದೇನು? (ಅಧಿಭೂತಂ ಕಿಂ) ಪ್ರಾಣಿಯೆಂಬುದೇನು?–ಎಂದು ಮೊದಲಾಗಿ ಏಳೆಂಟು ಪ್ರಶ್ನೋತ್ತರಗಳಾದ ಬಳಿಕ, ಜಗಜ್ಜೀವೇಶ್ವರಸಮಸ್ತಾತ್ಮಕವಾದ ಪ್ರಣವಾಕ್ಷರವನ್ನು ಮನಸ್ಸಿನಿಂದ ಅನುಸಂಧಾನ

ಮಾಡತಕ್ಕದ್ದೆಂದು ಉಪದೇಶವಾಯಿತು. ಈಗ ಬ್ರಹ್ಮ–ಪ್ರಕೃತಿ ಸಂಬಂಧವನ್ನು, ಎಂದರೆ ಈಶ್ವರನಿಗೂ ಜಗತ್ತಿಗೂ ಇರುವ ಸಂಬಂಧವನ್ನು ವಿವರಿಸುವುದಾಗುತ್ತದೆ.

ಈ ಅಧ್ಯಾಯದ ವಿಷಯಗಳು ಮುಖ್ಯವಾಗಿ ಇಷ್ಟು:

1. ಬ್ರಹ್ಮದ ಸರ್ವಾವಾಸ್ಯತ್ವ
2. ಜಗತ್ತಿನ ಪ್ರಕೃತ್ಯಧೀನತೆ
3. ಪ್ರಕೃತಿಯ ದ್ವೈವಿಧ್ಯ
4. ಈಶ್ವರನ ಲಭ್ಯತ್ವ
5. ಧರ್ಮದ ಲೌಕಿಕತ್ವ
6. ಭಗವಚ್ಛರಣತ್ವ

> ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
> ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥

–ಎಂದು ಅಧ್ಯಾಯ ಉಪಕ್ರಮವಾಗಿದೆ. ಈಗ ಭಗವಂತ ಹೇಳುವ ವಿಷಯ ಅತ್ಯಂತ ಗುಹ್ಯವಂತೆ! ರಹಸ್ಯವಂತೆ! ಅದೇನು ರಹಸ್ಯ? ವ್ಯಾಪಾರತಂತ್ರವೋ, ಲಾಭಸಂಪಾದನೆಯ ತಂತ್ರವೋ, ಕೀರ್ತಿಪ್ರತಿಷ್ಠೆಗಳದೋ? ಅದು ಯಾವ ಲೌಕಿಕಪ್ರಯೋಜನಕ್ಕೂ ಸೇರಿದ ಉಪಾಯವಲ್ಲ. ಅದು ಆತ್ಮೈಕವಿಷಯದ್ದು. ಆದದ್ದರಿಂದ ಯಾರು ಅರ್ಹರೋ ಅಂಥವರಿಗೆ ಮಾತ್ರ ಹೇಳಬೇಕಾದ ವಿಷಯ ಅದು. ಅಯೋಗ್ಯರಿಗೆ ಹೇಳಿದರೆ ಅವರು ಅದಕ್ಕೆ ಅಪಾರ್ಥ ಮಾಡಿಯಾರು, ಅದನ್ನು ದುರುಪಯೋಗಪಡಿಸಿಯಾರು, ಅಗ್ಗ ಮಾಡಿಯಾರು. ಇದೆಲ್ಲ ಲೋಕಕ್ಕೆ ಹಾನಿಕರ. ಆದದ್ದರಿಂದ ಈ ವಿಷಯವನ್ನು ಪಾತ್ರಾಪಾತ್ರ ವಿಚಾರಮಾಡಿ, ತಕ್ಕವರಿಗೆ ಮಾತ್ರ ಹೇಳಬೇಕಾದದ್ದು ಎಂಬುದು ತಾತ್ಪರ್ಯ.

ಇಲ್ಲಿ ಯಾವ ಗುಟ್ಟನ್ನೋ ಬ್ರಾಹ್ಮಣರು ಬಚ್ಚಿಟ್ಟುಕೊಂಡಿದ್ದಾರೆಂದು ತಿಳಿಯತಕ್ಕದ್ದಲ್ಲ. ನಮ್ಮ ಕಾಲದಲ್ಲಿ ಕೆಲವು ಔಷಧಗಳ ಮಾರಾಟಕ್ಕೆ ಸರಕಾರದ ಕಟ್ಟುಪಾಡು ಉಂಟಷ್ಟೆ? ಆ ಔಷಧಗಳಲ್ಲಿ ರಸ ಗಂಧಕ ಪಾಷಾಣಾದಿ ವಿಷದ್ರವ್ಯಗಳು ಸೇರಿರುತ್ತಾವೆ. ಅಂಥ ಮದ್ದುಗಳ ಸೀಸೆ ಡಬ್ಬಿಗಳ ಮೇಲೆ “ಪಾಯಿಸನ್” Poison “ವಿಷ” ಎಂದು ಚೀಟಿ ಅಂಟಿಸಿರುತ್ತದೆ.

ಶುಂಠಿ ಮೆಣಸು ಜೀರಿಗೆಗಳು ಎಲ್ಲರಿಗೂ ಔಷಧಗಳು. ಯಾರು ಬೇಕಾದರೂ ಅವನ್ನು ಸೇವಿಸಬಹುದು. ರೋಗವಿಲ್ಲದವನು ಸೇವಿಸಿದರೂ ಅವನಿಗೆ ಆದರಿಂದ ಪ್ರಾಣಾಪಾಯವಿಲ್ಲ. "ವಿಷ" ಚೀಟಿಯನ್ನಂಟಿಸಿರುವ ಮದ್ದಾದರೋ ಹಾಗಲ್ಲ, ಅದು ಯಾರಿಗೆ ತತ್ಸಂಬಂಧದ ವ್ಯಾಧಿಯುಂಟೋ ಅಂಥವನಿಗೆ ಮಾತ್ರ ಉಪಯೋಗ; ಮಿಕ್ಕವರಿಗೆ ಅದು ಅಪಾಯ. ಆದದ್ದರಿಂದ ಆ ವಿಷವೈದ್ಯವನ್ನು ಅದಕ್ಕೆ ಅಧಿಕಾರಿಯಾದ ವೈದ್ಯನು ಯಾರಿಗೋಸ್ಕರ ಕ್ರಮವರಿತು ಶಿಪಾರಸು ಮಾಡಿರುತ್ತಾನೋ ಅಂಥವನಿಗೆ ಮಾತ್ರವೇ ಅಂಗಡಿಯವನು ಮಾರಬಹುದೆಂದು ಕಾನೂನು ವಿಧಿಸಿರುತ್ತದೆ.

ಇಂಥಾದ್ದೇ ವೇದಶಾಸ್ತ್ರಗೀತಾದಿಗಳ ವಿಷಯದಲ್ಲಿರುವ ಉಪದೇಶನಿಯಮ. ಅವುಗಳನ್ನು ಪಾತ್ರಾಪಾತ್ರವಿಚಾರಮಾಡಿ ಉಪದೇಶಿಸಬೇಕೇ ಹೊರತು ಯಾರಿಗಂದರವರಿಗೆ ವ್ಯಾಪಾರದ ಸರಕಿನಂತೆ ಹಂಚತಕ್ಕದ್ದಲ್ಲವೆಂಬುದು ನಿಬಂಧನೆಯ ಮರ್ಮ. ಮ್ಯಾಥ್ಯು ಆರ್ನಾಲ್ಡ್ (Matthew Arnold) ಕವಿಯ ಮಾತನ್ನು ನೋಡೋಣವಾಗಲಿ:

Some secrets may the poet tell,
For the World loves new ways;
To tell too deep ones is not well
It knows not what he says.

ಮತ್ತು ಇದು "ಜ್ಞಾನಂ ವಿಜ್ಞಾನಸಹಿತಮ್". ಬರಿಯ ಪುಸ್ತಕಪಾಂಡಿತ್ಯವಲ್ಲ. ಅನುಭವಸಹಿತವಾದ ವಿದ್ಯೆ. ಗುರುಶಾಸ್ತ್ರಾದಿ ಬಾಹ್ಯಸಹಾಯಗಳಿಂದ ಕೇವಲ ಬುದ್ಧಿಯ ದ್ವಾರಾ ಸಂಪಾದಿಸಲಾದದ್ದು ಜ್ಞಾನ. ಅದು (Theory) "ತಿಯೊರಿ" –ಶಾಸ್ತ್ರವಾದ. ಅದರ ಜೊತೆಗೆ ವಿಜ್ಞಾನ–ಎಂದರೆ ಅನುಭವವಿಚಾರಪೂರ್ವಕವಾದ ಜ್ಞಾನ–ಸೇರಬೇಕು. ವಿಚಾರವೆಂದರೆ ಅನುಭವಪರಾಮರ್ಶೆ. ಇದು (Application) "ಅಪ್ಲಿಕೇಷನ್" –ಪ್ರಯೋಗ. ಈಗ ಭಗವಂತ ಹೇಳಹೊರಟಿರುವುದು ಶಾಸ್ತ್ರ ಅನುಭವಗಳೆರಡಕ್ಕೂ ಸಂಮತವಾಗುವ ತತ್ತ್ವವನ್ನು.

ಈ ಉಪದೇಶವು "ರಾಜವಿದ್ಯೆ" ಯಂತೆ! ಹಾಗೆಂದರೆ ಎಲ್ಲ ವಿದ್ಯೆಗಳಿಗೂ ರಾಜಪ್ರಾಯವಾದದ್ದು ಎಂದು. ರಾಜನ ಮಹಿಮೆಯಿಂದ ಹೇಗೆ ಎಲ್ಲ ಜನರೂ ಅವರವರ

ಸ್ಥಾನಗಳಲ್ಲಿದ್ದುಕೊಂಡು, ತಮ್ಮತಮ್ಮ ಕರ್ತವ್ಯಗಳನ್ನು ನಡೆಸಿಕೊಂಡು, ತಮ್ಮತಮ್ಮ ಪಾಲಿಗೆ ಬಂದ ಸುಖವನ್ನು ಪಡಲಾಗುವುದೋ ಹಾಗೆ ಈ ವಿದ್ಯೆಯ ಪ್ರಭಾವದಿಂದ ಮಿಕ್ಕೆಲ್ಲ ವಿದ್ಯೆಗಳಿಗೂ ಶಾಸ್ತ್ರಗಳಿಗೂ ಉಚಿತಸ್ಥಾನಮಾನಗಳು ಗೊತ್ತಾಗುತ್ತದೆ. ಹೀಗೆ ಪ್ರಭುಸ್ಥಾನದಲ್ಲಿರಬೇಕಾದದ್ದು ತತ್ತ್ವವಿದ್ಯೆ.

> ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್ ।
> ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್ ॥

ಇದು ಸಾಕ್ಷಾತ್ತಾಗಿ ತಿಳಿಯಲಾಗುವಂಥಾದ್ದು, ಧರ್ಮವಿಹಿತವಾದದ್ದು, ಸುಲಭವಾಗಿ ಮಾಡಲಾಗುವಂಥಾದ್ದು, ನಷ್ಟತಾರದ್ದು, ನಷ್ಟವಾಗದ್ದು. ಸುಲಭವಾದದ್ದಾದ ಕಾರಣದಿಂದ ಇದನ್ನು ರಾಜಯೋಗವೆಂದೂ ಕರೆಯುವುದುಂಟು. ಇದರಿಂದ ವ್ಯತಿರಿಕ್ತವಾದ ಲಕ್ಷಣವುಳ್ಳದ್ದು ಹಠಯೋಗ. ರಾಜಯೋಗವು ನಯೋಪಾಯ ಬಲ್ಲ ಉಪಾಧ್ಯಾಯ; ಹಠಯೋಗವು ದಂಡಭಯವನ್ನುಂಟುಮಾಡುವ ಉಪಾಧ್ಯಾಯ.

ಇಷ್ಟು ಸೊಗಸಾದ ಆ ವಿದ್ಯೆಯ ಸಾರಾಂಶವೇನು?

> ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
> ಮತ್‌ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥
> ನ ಚ ಮತ್‌ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
> ಭೂತಭೃನ್ನ ಚ ಭೂತಸ್ಥೋ ಮಮಾಽತ್ಮಾ ಭೂತಭಾವನಃ ॥

“(ಅವ್ಯಕ್ತಮೂರ್ತಿನಾ) ಆಕಾರ ಗುಣ ಮೊದಲಾದ ಬಾಹ್ಯ ಲಕ್ಷಣಗಳನ್ನು ತೋರಿಸಿಕೊಳ್ಳದ ನನ್ನಿಂದ (ಬ್ರಹ್ಮಚೈತನ್ಯದಿಂದ) ಈ ಜಗತ್ತೆಲ್ಲವೂ (ತತಮ್) ವಿಸ್ತರಿಸಲ್ಪಟ್ಟಿದೆ, ವ್ಯಾಪಿಸಲ್ಪಟ್ಟಿದೆ”.

“(ಒಂದು ದೃಷ್ಟಿಯಿಂದ) ಎಲ್ಲ ಭೂತ (ಪ್ರಾಣಿ ವಸ್ತು)ಗಳೂ ನನ್ನೊಳಗಡೆ ನೆಲಸಿರುತ್ತವೆ; ನಾನು ಅವುಗಳೊಳಗೆ ನೆಲಸಿಲ್ಲ.”

(ಇನ್ನೊಂದು ದೃಷ್ಟಿಯಿಂದ) ಜಗತ್ತಿನ ಭೂತಗಳು ವಾಸ್ತವವಾಗಿ ನನ್ನೊಳಗಿನವಲ್ಲ. ನೋಡು ನನ್ನ (ಬ್ರಹ್ಮವಸ್ತುವಿನ) ಈಶ್ವರದಶೆಗೆ ಸಂಬಂಧಪಟ್ಟ ಈ (ವಿಚಿತ್ರವಾದ, ವಿಸ್ಮಯಕರವಾದ)

ಯೋಗಸಂಘಟನೆಯನ್ನು. ನನ್ನ ಚೈತನ್ಯವೇ ಭೂತಕೋಟಿಯನ್ನು ಉತ್ಪತ್ತಿ ಮಾಡತಕ್ಕದ್ದು. ಅದೇ ಭೂತಪ್ರಪಂಚವನ್ನು ಧರಿಸಿ (ಭರಿಸಿ) ಕೊಂಡಿರುತ್ತದೆ. ಆದರೆ ಅದು ಭೂತಗಳೊಳಗೆ ನೆಲಸಿಲ್ಲ.

ಇದು ಕ್ಲಿಷ್ಟವಾದ ವಾಕ್ಯ; ತಾಳ್ಮೆಯಿಂದ ಗ್ರಹಿಸಿ ವಿಚಾರಮಾಡಬೇಕಾದದ್ದು.

ಇಲ್ಲಿ ಪ್ರಸಕ್ತವಾಗಿರುವ ಪ್ರಶ್ನೆ ಇರುವಿಕೆಯನ್ನು ಕುರಿತದ್ದು. ಇರುವಿಕೆ ಎಂಬುದು ಸಂಸ್ಕೃತದಲ್ಲಿ ಅಸ್ತಿತ್ವ. ಅದೇ ಸತ್ + ತಾ (ಸತ್ತಾ) ಅಥವಾ ಸತ್ತ್ವ. ಪಾಶ್ಚಾತ್ಯರ ತತ್ತ್ವ ಪ್ರಕ್ರಿಯೆಯಲ್ಲಿ ಸತ್ತಾವಿಷಯದ್ದು ಒಂದು ಮುಖ್ಯಭಾಗ. ಅದನ್ನು ಆನ್ಟಾಲಜಿ (Ontology) ಎಂದು ಕರೆಯುತ್ತಾರೆ. ಇರುವಿಕೆಯ ವಿಷಯದಲ್ಲಿ ಪ್ರಶ್ನೆಯೇನು? ಅದು ಹೀಗೆ:

1. ಒಂದಾನೊಂದು ಪದಾರ್ಥ ಇರಬಹುದು, ಆದರೂ ಯಾರಿಗೂ ಕಾಣಿಸದೆ ಇರಬಹುದು.
2. ಅದು ಕಾಣಿಸಿದರೂ ಇರುವಂತಲ್ಲದೆ ಬೇರೊಂದಾಗಿ ಕಾಣಿಸಬಹುದು.
3. ಅದು ಇದ್ದರೂ ನೆರಳಿನಂತೆ ಇನ್ನ್ಯಾವುದಕ್ಕೋ ಅಂಟಿಕೊಂಡು ಇರಬಹುದು.
4. ಅದು ಮನಸ್ಸಿಗೆ ತೋರಿ ಕಣ್ಣಿಗೆ ತೋರದ್ದಾಗಬಹುದು.
5. ಒಂದು ಕ್ಷಣ ಇರುವಂತೆಯೂ ಇನ್ನೊಂದು ಕ್ಷಣ ಇಲ್ಲದಂತೆಯೂ ಆಗಬಹುದು.

ಹೀಗೆ “ಇರುವುದು” ಅಥವಾ “ಇರುವಿಕೆ” ಎಂಬ (ಸತ್ತಾ) ದಶೆಯ ವಿಷಯದಲ್ಲಿ ಎಷ್ಟೋ ಶಂಕೆಗಳು ಹುಟ್ಟಬಹುದು. ನಮ್ಮ ಜಗತ್ತು ನಿಜವಾಗಿ ಇರುವ ಪದಾರ್ಥವೆ? ಬರಿಯ ತೋರಿಕೆಯೆ? ತೋರಿಕೆಯಾದರೆ ಆ ತೋರಿಕೆಯೂ ಒಂದು ಮಟ್ಟದ ಇರುವಿಕೆಯೇ ಅಲ್ಲವೆ? ತೋರಿಕೆಗೂ ಆಧಾರಸಾಮಾಗ್ರಿ ಒಂದಿರಬೇಕಲ್ಲವೆ? ಅದು ಯಾವುದು? ಇಂಥವು ಇಲ್ಲಿಯ ಪ್ರಶ್ನೆಗಳು.

ಯಾವ ವಸ್ತುವು ತಾನೇತಾನಾಗಿ, ಬೇರೆ ಯಾವುದರ ಆಧಾರವನ್ನೂ ರಕ್ಷಣೆಯನ್ನೂ ಅಪೇಕ್ಷಿಸದೆ ಇರಬಲ್ಲದೋ ಅದರ ಇರುವಿಕೆ ಸ್ವತಂತ್ರಸತ್ತಾ. ಅದು ಹಿಂದೆ ಇತ್ತು, ಈಗ ಇದೆ, ಮುಂದಕ್ಕೂ ಇರುವುದು. ಅದಕ್ಕೆ ಬಾಧೆಯೂ ವಿಕಾರವೂ ನಷ್ಟವೂ ಎಂದೆಂದಿಗೂ ಎಲ್ಲಿಯೂ ಆಗದು. ಇಂಥಾದ್ದು ಬ್ರಹ್ಮಸತ್ತಾ. ಅದು ಸ್ವತಂತ್ರಸತ್ತಾ.

ಯಾವ ಪಾದರ್ಥದ ಇರುವಿಕೆ ಮತ್ತೊಂದರ ಆಶ್ರಯವನ್ನು ಅಪೇಕ್ಷಿಸಿಕೊಂಡಿರುತ್ತದೆಯೋ ಅದರ ಇರುವಿಕೆ ಅಧೀನಸತ್ತಾ. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬ ಅಂಥಾದ್ದು. ವಸ್ತು ಕನ್ನಡಿಯ ಎದುರಿಗೆ ಇರುವಷ್ಟು ಹೊತ್ತು ಪ್ರತಿಬಿಂಬ ಅಲ್ಲಿರುತ್ತದೆ; ವಸ್ತುವನ್ನು ತೆಗೆದುಹಾಕಿದರೆ ಪ್ರತಿಬಿಂಬ ಇರುವುದಿಲ್ಲ. ಗಾಜು–ಗುಲಾಬಿಯ ಉಪಮಾನವನ್ನು ಹಿಂದೆ ಹೇಳಿದ್ದಾಗಿದೆ. ಆ ಹೂವಿರುವವರೆಗೂ ಗಾಜಿನಲ್ಲಿ ಆ ಕೆಂಪುಬಣ್ಣ. ಹೂವಿಲ್ಲದಿದ್ದರೆ ಆ ಕೆಂಬಣ್ಣವಿಲ್ಲ. ಎಲ್ಲ ನೆರಳೂ ಹಾಗೆ, ಬೇರೊಂದು ಘನವಸ್ತುವನ್ನು ಸ್ವಮೂಲವಾಗಿ ಅಪೇಕ್ಷಿಸುತ್ತದೆ. ಈ ಛಾಯಾಕೃತಿಯ ಇರುವಿಕೆ ವಾಸ್ತವವಾಗಿ ಮೂಲ ವಸ್ತುವಿನ ಪ್ರತಿಭಾಸ. ಅದೇ ತೋರಿಕೆ, ಇರುವಿಕೆಯೇ ಬ್ರಹ್ಮ, ತೋರುವಿಕೆಯೇ ಜಗತ್ತು. ವಸ್ತುವಿರುವಾಗ ನೆರಳಿರುತ್ತದೆ. ವಸ್ತು ಹೋದಾಗ ನೆರಳು ಹೋಗುತ್ತದೆ. ಆದರೆ ವಸ್ತುವೇ ನೆರಳಲ್ಲ. ವಸ್ತುವಿನದು ಸ್ವತಂತ್ರಸತ್ತಾ; ನೆರಳಿನದು ಅಧೀನಸತ್ತಾ. ಬ್ರಹ್ಮವಸ್ತುವಿನದು ಸ್ವತಂತ್ರಸತ್ತಾ; ಅದರ ಛಾಯೆಯಂಥಾದ್ದು ಜಗತ್ತು, ಅದರದು ಅಧೀನಸತ್ತಾ. ಈ ವಿವರಣೆಯನ್ನು ಜ್ಞಾಪಕದಲ್ಲಿರಿಸಿಕೊಂಡು ಗ್ರಂಥವನ್ನು ನೋಡೋಣ.

“ಮಯಾ ತತಮಿದಮ್” ಮೊದಲಾದ ಎರಡು ಶ್ಲೋಕಗಳಲ್ಲಿ ಏಳು ಅಂಶಗಳಿವೆ, ಹೀಗೆ:

1. ಮಯಾ ತತಮಿದಮ್
2. ಮತ್‌ಸ್ಥಾನಿ ಸರ್ವಭೂತಾನಿ
3. ನ ಚಾಹಂ ತೇಷ್ವವಸ್ಥಿತಃ
4. ನ ಚ ಮತ್‌ಸ್ಥಾನಿ ಭೂತಾನಿ
5. ಭೂತಭೃತ್
6. ನ ಚ ಭೂತಸ್ಥಃ
7. ಮಮಾಽಽತ್ಮಾಭೂತಭಾವನಃ

ಇವುಗಳಲ್ಲಿ ಒಂದು ಅಸಂಬದ್ಧತೆ ಕಾಣುತ್ತದೆ: “ಮತ್‌ಸ್ಥಾನಿ” – “ನ ಚ ಮತ್‌ಸ್ಥಾನಿ”. ಇಲ್ಲಿ ಹೊಂದಾವಣೆ ಹೇಗೆ? ಏಳು ವಾಕ್ಯಗಳಿಂದಲೂ ಒಂದು ಸಮಂಜಸವಾದ ಸಂಪೂರ್ಣಾರ್ಥ ದೊರೆತೀತೆ? ನೋಡೋಣ.

1. **“ಮಯಾ ತತಮಿದಂ ಸರ್ವಮ್” :** “ಈ ಜಗತ್ತೆಲ್ಲ ಬ್ರಹ್ಮವಸ್ತುವಿನಿಂದ ವಿಸ್ತರಿಸಲ್ಪಟ್ಟಿತು”. ಇದರಲ್ಲಿ ವಿಸ್ತರಿಸಲ್ಪಟ್ಟಿತು. (ತತಮ್) ಎಂಬ ಮಾತು ಒಂದು ಮೂಲಶಕ್ತಿಯನ್ನು ಸೂಚಿಸುವುದರ ಜೊತೆಗೆ, ಒಂದು ಮೂಲದ್ರವ್ಯವನ್ನು ಸೂಚಿಸುತ್ತದೆ. ಬಟ್ಟೆಯೆಂಬುದು ನೂಲಿನ ವಿಸ್ತಾರ; ನೂಲು ಹತ್ತಿಯ ವಿಸ್ತಾರ. ಮೊದಲು ಹತ್ತಿಯೆಂಬ ಮೂಲಸಾಮಗ್ರಿಯಿದ್ದರೆ ಆಮೇಲೆ ನೂಲುವವನ–ನೆಯ್ಯುವವನ–ಶಕ್ತಿ ಪ್ರಯೋಜನಕ್ಕೆ ಬರುತ್ತದೆ. ಪಾತ್ರೆಯೆಂಬುದು ಲೋಹದ ವಿಸ್ತಾರ. ಲೋಹವೆಂಬ ಮೂಲದ್ರವ್ಯವಿದ್ದರೆ ಆಮೇಲೆ ಕಮ್ಮಾರನ ಚಮ್ಮಟಿಗೆಯ ಶಕ್ತಿ ಕೆಲಸಕ್ಕೆ ಬರುತ್ತದೆ. ಹಾಗೆಯೇ ಜಗತ್ಸೃಷ್ಟಿಗೆ ಅವಶ್ಯವಾದ ಮೂಲಶಕ್ತಿ ಬ್ರಹ್ಮಚೈತನ್ಯದ್ದಾಯಿತು. ಅದಕ್ಕೆ ಬೇಕಾದ ಮೂಲಸಾಮಾಗ್ರಿಯೊ? ಎಂದರೆ, ಅದು ಬ್ರಹ್ಮಚೈತನ್ಯದ್ದೇ ಎಂದು ಉತ್ತರ.

   ಲೋಕದಲ್ಲಿ ಹುಟ್ಟಿದ ಪ್ರತಿಯೊಂದಕ್ಕೂ ಎರಡು ಕಾರಣಸ್ಥಾನಗಳಿರುತ್ತವೆಂಬುದು ನಮ್ಮ ಅನುಭವ: ಒಂದು ತಾಯಿ, ಇನ್ನೊಂದು ತಂದೆ. ಒಂದು ಕ್ಷೇತ್ರ, ಇನ್ನೊಂದು ಬೀಜ. ಮನುಷ್ಯಪ್ರಯತ್ನದಿಂದ ಉತ್ಪನ್ನವಾದ ವಸ್ತುಗಳನ್ನು ನೋಡೋಣ. ಮಡಕೆಗೆ ಮಣ್ಣು ಕ್ಷೇತ್ರ. ಕುಂಬಾರನ ಸಾಮರ್ಥ್ಯವೇ ಬೀಜ. ಶಾಸ್ತ್ರಪರಿಭಾಷೆಯಲ್ಲಿ ಮಣ್ಣನ್ನು ಉಪಾದಾನಕಾರಣವೆಂದೂ ಕುಂಬಾರನ ಕೈಚಳಕವನ್ನು ನಿಮಿತ್ತಕಾರಣವೆಂದೂ ಕರೆಯುವುದು ಪದ್ಧತಿ.

   ಬ್ರಹ್ಮವಸ್ತುವಾದರೋ ಮಡಕೆ ಬಟ್ಟೆ ಮೊದಲಾದವುಗಳಂತೆ ಅನ್ಯನಿರ್ಮಿತವಲ್ಲ; ಅದು ಸ್ವತಸ್ಸಿದ್ಧವಾದದ್ದು. ಅದು ತಾನೇ ಎರಡೂ ಬಗೆಯ ಕಾರಣ. ಅದೇ ಉಪಾದಾನ ಕಾರಣ ಅಥವಾ ಕ್ಷೇತ್ರ. ಮತ್ತು ಅದೇ ನಿಮಿತ್ತ ಕಾರಣ ಅಥವಾ ಬೀಜ.

   ಒಂದು ವಸ್ತುವಿನ ಉತ್ಪತ್ತಿಕಾಲದಲ್ಲಿ ಮಾತ್ರ ಕೆಲಸಮಾಡತಕ್ಕದ್ದು ನಿಮಿತ್ತ ಕಾರಣ. ಉತ್ಪನ್ನಪದಾರ್ಥದಲ್ಲಿ ಯಾವಾಗಲೂ ರೂಪಾಂತರದಿಂದ ಅಡಗಿಕೊಂಡಿರತಕ್ಕದ್ದು ಉಪಾದಾನಕಾರಣ. ಮಡಕೆಯೆಂಬ ಪದಾರ್ಥದಲ್ಲಿ ಮಣ್ಣು ಯಾವಾಗಲೂ ಅಂತರ್ಗತವಾಗಿರುತ್ತದೆ. ಅದು ಉಪಾದಾನ, ಕುಂಬಾರನ ಕೈಚಳಕವಾದರೋ ಅದರ ತಯ್ಯಾರಿಯ ಹೊತ್ತಿನಲ್ಲಿ ಮಾತ್ರ ಇದ್ದು ಮುಗಿದದ್ದು. ಅದು ನಿಮಿತ್ತ.

ಒಳ್ಳೆಯದು ಬ್ರಹ್ಮವಸ್ತುವಿನಲ್ಲಿ ಉಪಾದಾನಕಾರಣ ನಿಮಿತ್ತಕಾರಣಗಳೆರಡೂ–ಎಂದರೆ ಮೂಲದ್ರವ್ಯ, ರೂಪಣಸಾಮರ್ಥ್ಯ ಎರಡೂ–ಒಂದಾಗಿ ಸೇರಿಕೊಂಡಿವೆ ಎಂದು ಹೇಳಿದೆವಲ್ಲ? ಅದಕ್ಕೆ ಲೋಕದಲ್ಲಿ ದೃಷ್ಟಾಂತವುಂಟೋ? ಉಂಟು. ಅದನ್ನು ಎಂಟನೆಯ ಪ್ರಕರಣದ ಸಮಾಪ್ತಿಯಲ್ಲಿ ನೋಡಿದ್ದೇವೆ.

> ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ॥
>
> –ಮುಂಡಕೋಪನಿಷತ್ತು

ಜೇಡರಬಲೆಗೆ ನಿಮಿತ್ತಕಾರಣವಾದ ನೂಲೆಳೆಯುವ ಶಕ್ತಿಯೂ, ಉಪಾದಾನ ಕಾರಣವಾದ ನೂಲು ಬಂಕೆರಸವೂ, ಎರಡೂ ಆ (ಉಣ್ಣೆ ಹೊಕ್ಕಳು) ಹುಳುವಿನಲ್ಲಿರತಕ್ಕವೇ. ಹಾಗೆಯೇ ಬ್ರಹ್ಮಚೈತನ್ಯವು ದ್ವಿರೂಪಗಳನ್ನು ತಾಳಬಲ್ಲುದ್ದು, ದ್ವಿವಿಧ ಸಾಮರ್ಥ್ಯವುಳ್ಳದ್ದು. “ತಿಮ್ಮಮ್ಮಗಾರು ತಮಂತುಕು ತಾಮೇ ಲಂಜಲ್ಯೆರಿ” ಎಂದು ಗಾದೆ ಹೇಳುವ ಹಾಗೆ, ಬ್ರಹ್ಮವಸ್ತು ತನ್ನಷ್ಟಕ್ಕೆ ತಾನೇ ಬಣ್ಣಗಳನ್ನೂ ಬಟ್ಟೆಗಳನ್ನೂ ತಯಾರು ಮಾಡಿಕೊಂಡು ತನಗೆ ತಾನೇ ವೇಷ ಕಟ್ಟಿಕೊಂಡಿತೋ ಎಂಬಂತೆ ನಮಗೆ ತೋರುತ್ತದೆ.

ಸಿದ್ಧಾಂತ ಇಷ್ಟು: ಜಗತ್ಸೃಷ್ಟಿಯು ಬ್ರಹ್ಮದ ಸ್ವತಂತ್ರ ಲೀಲೆ. ಆ ಕಾರ್ಯ ಇನ್ನೊಬ್ಬರ ಆಜ್ಞೆಯಿಂದಾಗಲಿ ಪ್ರೇರಣೆಯಿಂದಾಗಲಿ ಭಯದಿಂದಾಗಲಿ ಪ್ರೋತ್ಸಾಹದಿಂದಾಗಲಿ ನಡೆದದ್ದಲ್ಲ. ಬ್ರಹ್ಮಕ್ಕೆ ಬೇರೊಬ್ಬರಿಂದ ಸಾಮಗ್ರಿಯಾಗಲಿ ಸಹಾಯವಾಗಲಿ ಬೇಕಿರಲಿಲ್ಲ.

2. ಇನ್ನು ಎರಡನೆಯ ಅಂಶ: **“ಮತ್‌ಸ್ಥಾನಿ ಸರ್ವಭೂತಾನಿ”** ಇರುವುದಕ್ಕೆಲ್ಲ ಬ್ರಹ್ಮವೇ ಆಶ್ರಯ. ಇರುವುದೆಲ್ಲವನ್ನೂ ಬ್ರಹ್ಮವು ಆವರಿಸಿಕೊಂಡಿದೆ. ಬ್ರಹ್ಮವನ್ನು ಬಿಟ್ಟದ್ದೂ ಬ್ರಹ್ಮದಿಂದ ಹೊರಗಾದದ್ದೂ ಯಾವುದೂ ಇಲ್ಲ, –ಯಾವುದೂ ಇರದು. ಈಶಾವಾಸ್ಯೋಪನಿಷತ್ತಿನ “ಈಶಾವಾಸ್ಯಮಿದಗ್ಂ ಸರ್ವಮ್” ಎಂಬ ವಾಕ್ಯದ ತಾತ್ಪರ್ಯವೂ ಅದೇ. ಇಲ್ಲಿ “ಇರುವುದು” ಎಂಬ ಮಾತು ಯಾವ್ಯಾವುದನ್ನು ನಾವು ಕಾಣುತ್ತೇವೋ, ಅನುಭವಿಸುತ್ತೇವೋ, ಅನುಮಾನಿಸುತ್ತೇವೋ ಆ ಎಲ್ಲವನ್ನೂ ಒಳಕೊಂಡಿರುತ್ತದೆ. ಬ್ರಹ್ಮದಿಂದ ಇದು ಬೇರೆಯಾದದ್ದು ಎಂದು ಯಾವುದನ್ನೂ ಕುರಿತು ಹೇಳುವುದು ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮದ ಹೊರತು ಯಾವುದಕ್ಕೂ ಅಸ್ತಿತ್ವವೇ ಇಲ್ಲ. “ಇದೆ” – “ಅಸ್ತಿ” ಎಂಬ ಕ್ರಿಯಾಪದವನ್ನು ಯಾವ ವಿಶೇಷಣವೂ ಇಲ್ಲದೆ

ಪ್ರಯೋಗಿಸಬಹುದಾದದ್ದು ಬ್ರಹ್ಮ ಎಂಬ ಕರ್ತೃಪದ ಒಂದಕ್ಕೇಯೇ. ಬ್ರಹ್ಮವನ್ನು ಬಿಟ್ಟು ಬೇರೆ ಯಾವುದಕ್ಕೂ ನಿಜವಾದ ಇರುವಿಕೆಯಿಲ್ಲ. ಯಾವ್ಯಾವುದು ಇದೆಯೋ ಅದದು–ತಾನಿರುವಷ್ಟರಮಟ್ಟಿಗೆ–ಬ್ರಹ್ಮದ ಒಳಗಡೆ–ಬ್ರಹ್ಮ ಮಹಿಮಾವರಣದ ಅಂತರಾಳದಲ್ಲಿ–ವಾಯುಮಂಡಲದಲ್ಲಿ ಮೇಘಖಂಡಗಳಿರುವಂತೆ–ಇದೆ. ಎಲ್ಲಕ್ಕೂ ಒಳಗೂ ಹೊರಗೂ ಮೇಲೂ ಕೆಳಗೂ ಸುತ್ತಮುತ್ತಲೂ ಎಲ್ಲೆಲ್ಲೂ ಬ್ರಹ್ಮವೊಂದೇ ಅಖಂಡವಾಗಿ ಅವಿಚ್ಛಿನ್ನವಾಗಿ ವ್ಯಾಪಿಸಿದೆ. ಅದೇ “ಮತ್‌ಸ್ಥಾನಿ ಸರ್ವಭೂತಾನಿ”.

3. ಮೂರನೆಯ ಅಂಶ: **“ನ ಚಾಹಂ ತೇಷು.”** ಬ್ರಹ್ಮದೊಳಗೆ ಭೂತ ಸಮೂಹಗಳು ಸೇರಿಕೊಂಡು ಬ್ರಹ್ಮಾಧಾರದಿಂದ ನಡೆಯುತ್ತಿರುವ ಕಾರಣದಿಂದ ಆ ಭೂತವಸ್ತು ಬ್ರಹ್ಮವೆಂದು ತಿಳಿದರೆ ಅದು ಭ್ರಾಂತಿ. ವಾಸ್ತವವಾಗಿ ಬ್ರಹ್ಮವು ಆ ವಸ್ತುಗಳ ರೂಪಚೇಷ್ಟೆಗಳಿಂದ ಪರಿಮಿತವೂ ಪರಿಚ್ಛಿನ್ನವೂ ಆಗದು. ಬ್ರಹ್ಮವು ಜಗದ್ವಸ್ತುಗಳ ಆಕಾರ–ವಿಕಾರಗಳಿಗೆ ಒಳಪಡದು. ಬ್ರಹ್ಮವು ಆ ಎಲ್ಲ ವಸ್ತುಗಳನ್ನೂ ಮೀರಿದ್ದು. ಜಗತ್ತೆಂಬುದು ಬ್ರಹ್ಮಚೈತನ್ಯದ ವಿಕಾರ. ವಿಕಾರವು ಮೂಲಚೈತನ್ಯವನ್ನು ಕೆಡಿಸಲಾರದು. ಮಡಕೆಯೆಂಬುದು ಮಣ್ಣಿಗಾದ ವಿಕಾರ. ಆ ವಿಕಾರವು ಪೃಥ್ವೀತತ್ತ್ವವನ್ನು ಮಾರ್ಪಡಿಸಲಾರದು. ವಿಕಾರವು ಕ್ಷಣಿಕ; ಮೂಲದ್ರವ್ಯವು ಶಾಶ್ವತ. ಮನುಷ್ಯನಲ್ಲಿ ನಖರೋಮಗಳಿವೆ; ನಖರೋಮಗಳಲ್ಲಿ ಮನುಷ್ಯನಿಲ್ಲ. ಕ್ಷೌರಕಾಲದಲ್ಲಿ ಉಗುರು ಕೂದಲುಗಳನ್ನು ತೆಗೆದುಹಾಕಿದರೂ ಅದರಿಂದ ಜೀವಕ್ಕೇನೂ ವ್ಯತ್ಯಾಸವಿಲ್ಲ. ಸಮುದ್ರದಲ್ಲಿ ನೊರೆ ಬುರುಗುಗಳಿವೆ; ಬುರುಗು ನೊರೆಗಳಲ್ಲಿ ಸಮುದ್ರವಿಲ್ಲ. ನೊರೆ ನೀರ್ಗುಳ್ಳೆಗಳು ಹೋದರೆ ಸಮುದ್ರಕ್ಕೇನೂ ಹಾನಿಯಿಲ್ಲ. ದೇಹಕ್ಕೆ ಕೇಶನಖಗಳೂ ಸಮುದ್ರಕ್ಕೆ ಫೇನಬುದ್ಬುದಗಳೂ ಹೇಗೋ ಬ್ರಹ್ಮಚೈತನ್ಯಕ್ಕೆ ಜಗದ್ವಸ್ತುಗಳು ಹಾಗೆ ಆಗಂತುಕಗಳು, ಹೇಗೋ ಕ್ಷಣಿಕವಾಗಿ ಬಂದವು–ನೈಜವೇ ಆದರೂ ಅಸಾರಗಳು. ಬ್ರಹ್ಮದ ಸತ್ತ್ವವು ಜಗದ್ವಸ್ತುವಿನಲ್ಲಿಲ್ಲ. ನೆಲ್ಲುಹೊಟ್ಟು ಬತ್ತದ ಪೈರಿನಿಂದ ಬಂದದ್ದೇ ಆದರೂ ಅದು ತಾನೇ ನೆಲ್ಲಲ್ಲ, ನೆಲ್ಲಿನ ಒಂದು ಲಕ್ಷಣ ಹೊಟ್ಟಿನಲ್ಲಿ ಕಂಡರೂ, ಅದು ನೆಲ್ಲಿನ ಸಾರಾಂಶವಲ್ಲ.

ಇನ್ನೊಂದು ರೀತಿ ನೋಡೋಣ: ಈಗ ನಮ್ಮ ಆಲೋಚನೆಯಲ್ಲಿರುವ ವಸ್ತುಗಳು ಎರಡಲ್ಲವೆ? ಒಂದು ಬ್ರಹ್ಮ, ಇನ್ನೊಂದು ಜಗತ್ತು. ಅವೆರಡೂ ನದಿಯ ಇಕ್ಕೆಲದ ದಡಗಳಂತೆ ಎದುರುಬದುರಾಗಿವೆ ಎಂದು ಭಾವಿಸೋಣ. ಆ ನದಿಯೇ ಮನುಷ್ಯಜೀವ ಎಂದು ಭಾವಿಸೋಣ. ಬ್ರಹ್ಮದ ದಡದಲ್ಲಿ ನಿಂತು ನದಿಯ ಇನ್ನೊಂದು ದಡವನ್ನು

ನೋಡಿದರೆ ಅದು ಗಟ್ಟಿಕಲ್ಲಿನ ದಡವಲ್ಲದೆ ಕುಸಿಮಣ್ಣಿನ ದಡವೆಂದು ತೋರುತ್ತದೆ. ಹುಲ್ಲುಹಸಿರಿನಿಂದ ಅದು ಕಣ್ಣಿಗೆ ಸೊಗಯಿಸುತ್ತ ಅದು ಹುಡಿಮಣ್ಣಿನದೆಂಬುದನ್ನು ನಮಗೆ ಮರೆಯಿಸುತ್ತದೆ. ಒರಟು ಬಂಡೆಗಿಂತ ಅದು ಲೇಸೆಂದೆನಿಸುತ್ತದೆ. ಆದರೆ ಆ ಹಸಿರುಗಡ್ಡೆಗೆ ಹೋಗಿ ಅಲ್ಲಿ ನಿಂತಾಗ "ಇದು ಗಟ್ಟಿಯಲ್ಲ. ಕುಸಿದುಹೋಗತಕ್ಕದ್ದು; ಎದುರುಗೋಡೆಯ ಹುಟ್ಟುಬಂಡೆಯೇ ಕ್ಷೇಮ" ಎಂದೆನಿಸುತ್ತದೆ. ಗಟ್ಟಿಬಂಡೆ, ಹುಡಿ ಮಣ್ಣು–ಎರಡೂ ಭೂಮಿಯೇ. ಆದರೆ ಭೂಮಿಯ ಸ್ಥಿರತ್ವವೆಂಬ ಗುಣ ಮಣ್ಣು ಮರಳುಗಳಲ್ಲಿಲ್ಲ, ಕಲ್ಲುಬಂಡೆಯಲ್ಲಿದೆ. ಹಾಗೆಯೇ ಬ್ರಹ್ಮವಸ್ತುವಿನ ಸತ್ತ್ವವು ಜಗದತೀತವಾದ ಶುದ್ಧಬ್ರಹ್ಮದಲ್ಲಿದೆ. ಜಗತ್ತಿನಲ್ಲಿ ಆ ಸತ್ತ್ವಪರಿಪೂರ್ಣತೆಯಿಲ್ಲ. ಇದೇ ಅಭಿಪ್ರಾಯವನ್ನೇ ಗೀತೆಯ ಏಳನೆಯ ಅಧ್ಯಾಯದ ಹನ್ನೆರಡನೆಯ ಶ್ಲೋಕ ತಿಳಿಸಿದೆ.

ಮತ್ತ ಏವೇತಿ ತಾನ್ (ತ್ರೀನ್ ಗುಣಾನ್) ವಿದ್ಧಿ ನ ತ್ವಹಂ ತೇಷು–ತೇ ಮಯಿ ॥

"ಸತ್ತ್ವ ರಜಸ್ಸು ತಮಸ್ಸುಗಳೆಂಬ ಗುಣಗಳಲ್ಲಿ ನಾನಿಲ್ಲ (ಬ್ರಹ್ಮವಿಲ್ಲ); ನನ್ನಲ್ಲಿ (ಬ್ರಹ್ಮದಲ್ಲಿ) ಅವು ಉಂಟು".
ಮನುಷ್ಯನಲ್ಲಿ ನಿದ್ದೆ ಕನವರಿಕೆಗಳುಂಟು; ನಿದ್ದೆ ಕನವರಿಕೆಗಳಲ್ಲಿ ಮನುಷ್ಯನಿಲ್ಲ. ಬ್ರಹ್ಮದ ಸತ್ತ್ವಸಾರವು ಬ್ರಹ್ಮಕಾರ್ಯವಾದ ಜಗತ್ತೆಂದು ತಿಳಿಯುವುದು ಭ್ರಾಂತಿ. ಆದರೆ ಜಗತ್ತಿಗೆ ಬ್ರಹ್ಮವಲ್ಲದೆ ಬೇರೆ ಆಧಾರವಿಲ್ಲ.

4. ಇನ್ನು **"ನ ಚ ಮತ್‌ಸ್ಥಾನಿ ಭೂತಾನಿ"** ಹಿಂದೆ "ಮತ್‌ಸ್ಥಾನಿ ಸರ್ವ ಭೂತಾನಿ" – "ಎಲ್ಲ ಭೂತಗಳೂ ನನ್ನಲ್ಲಿರತಕ್ಕವು" ಎಂದು ಹೇಳಿದೆನಲ್ಲವೆ? ಆದರೆ ವಾಸ್ತವವನ್ನು ನೋಡಿದಲ್ಲಿ ಭೂತಗಳು ನನ್ನಲ್ಲಿಲ್ಲ; ಇರುವಂತೆ ತೋರುತ್ತವೆ ಅಷ್ಟೆ. ಆ ತೋರಿಕೆಗೆ ಆಧಾರಸಾಮಗ್ರಿ ಬ್ರಹ್ಮ. ದಾರಿಹೋಕನಿಗೆ ದೂರದಲ್ಲೆಲ್ಲೋ ನೀರು ಹರಿಯುವಂತೆ ಕಾಣುತ್ತದೆ. ಅದು ಬಿಸಿಲ್ಗೊರೆ–ಮರೀಚಿಕೆ. ಅದು ಬರಿಯ ಕಾಣಿಕೆ ಅಷ್ಟೆ; ತೊರೆಯಲ್ಲ. ಆ ತೊರೆಯ ತೋರಿಕೆ ಮೂರು ವಸ್ತುಗಳ ಸಂಮೇಳದಿಂದ ಆದದ್ದು: ಬಿಸಿಲು, ಮರಳು, ದೂರ. ಆ ಮೂರರ ಸಂಗತಪ್ರಭಾವದಿಂದ ಆ ನೀರ ತೋರಿಕೆ. ಜಗತ್ತೂ ಹಾಗೆಯೇ ಒಂದು ವಿಚಿತ್ರವಾದ ತೋರಿಕೆ. ಅದನ್ನೇ ಸ್ವಾಮಿ ಮೇಲಣ ಶ್ಲೋಕದಲ್ಲಿ "ಪಶ್ಯ ಮೇ ಯೋಗಮೈಶ್ವರಮ್" ಎಂದು ನಿರ್ದೇಶ ಮಾಡಿರುವುದು. ಈಶ್ವರಯೋಗದ ಪ್ರಭಾವವೇ

ಜಗನ್ಮಾಯೆ. ಭಾಗವತದ ದ್ವಿತೀಯಸ್ಕಂಧದಲ್ಲಿ ಶುಕರು ಪರೀಕ್ಷಿದ್ರಾಜನನ್ನು ಕುರಿತು ಹೇಳುತ್ತಾರೆ:

> ಆತ್ಮಮಾಯಾಮೃತೇ ರಾಜನ್ ಪರಸ್ಯಾನುಭವಾತ್ಮನಃ ।
> ನ ಘಟೇತಾರ್ಥಸಂಬಂಧಃ ಸ್ವಪ್ನದ್ರಷ್ಟುರಿವಾಂಜಸಾ ॥
> ಬಹುರೂಪ ಇವಾಭಾತಿ ಮಾಯಯಾ ಬಹುರೂಪಯಾ ।
> ರಮಮಾಣೋ ಗುಣೇಷ್ವಸ್ಯಾ ಮಮಾಹಮಿತಿ ಮನ್ಯತೇ ॥

ಕನಸು ಕಂಡವನಿಗೆ ಅವನು ಆಗ ಕಂಡ ವಸ್ತುಗಳು ನಿಜವಾಗಿ ಸೇರಿದುವಲ್ಲ. ಅವನಿಗೂ ಅವಕ್ಕೂ ಸಂಬಂಧವುಂಟಾದದ್ದು ಕೇವಲ ಸ್ವಪ್ನದಿಂದ. ಹಾಗೆಯೇ ಮನುಷ್ಯನಿಗೂ ಜಗತ್ತಿತೂ ಸಂಬಂಧ ಉಂಟಾಗುವುದು ಮಾಯೆಯ ಮೂಲಕ. ಮಾಯೆಯನ್ನು ಬಿಟ್ಟರೆ ಆ ಸಂಬಂಧ ನಿಲ್ಲಲಾರದು. ಆ ಮಾಯೆಯು ಬಹುರೂಪವಾದದ್ದು. ಅದರ ಪ್ರಭಾವದಿಂದ ಜಗತ್ತು ಬಹುರೂಪಗಳಾಗಿ ಕಾಣಿಸಿಕೊಳ್ಳುತ್ತದೆ. ಮನುಷ್ಯನು ಅದರ ರುಚಿ ಗುಣಗಳಲ್ಲಿ ಸಂತೋಷಿಸಿಕೊಂಡು “ನಾನು”, “ನನ್ನದು” ಎಂಬ ಅಭಿಮಾನಗಳಿಂದ ಅದನ್ನು ಗ್ರಹಿಸುತ್ತಾನೆ. ಇರುವುದನ್ನು ಇಲ್ಲವೆಂಬಂತೆ ತೋರಿಸುವುದೂ ಇಲ್ಲದ್ದನ್ನು ಉಂಟೆಂಬಂತೆ ತೋರಿಸುವುದೂ ಮಾಯೆ. ಅದು ದ್ರಷ್ಟಾ, ದೃಶ್ಯ, ದರ್ಶನಗಳೆಂಬ ತ್ರಿವಿಧ ಜಗತ್ತಿನಲ್ಲೂ ಸಹಜವಾಗಿ ಅಲೆಯುತ್ತದೆ; ನೋಡಿಕೊಳ್ಳುವ ಪದಾರ್ಥ ನಡುಗುತ್ತದೆ. ಹೀಗೆ ನೋಟವು ಹೆಚ್ಚೋ ಕಡಮೆಯೋ ಆಗುತ್ತದೆ. ಈ ಹೆಚ್ಚುಕಡಮೆಯೇ ಮಾಯಾಕಾರ್ಯ. ಆ ಮಾಯಾಸಹಾಯದಿಂದ ಜಗತ್ತು ನಮ್ಮ ದೃಷ್ಟಿಯನ್ನಾಕರ್ಷಿಸಿ ಹಿಡಿದುಕೊಂಡು ಬ್ರಹ್ಮವು ಅದಕ್ಕೆ ಗೋಚರಿಸದಂತೆ ಆಗಿದೆ. ನಾವು ಜಗತ್ತಿದೆಯೆಂಬುದನ್ನು ಕ್ಷಣೇಕ್ಷಣೇ ಬುದ್ಧಿಗೆ ತಂದುಕೊಳ್ಳುತ್ತೇವೆ; ಅದರ ಹಿಂದೆ ಬ್ರಹ್ಮವಸ್ತುವಿರುವುದನ್ನು ಮಾತ್ರ ಮರೆಯುತ್ತೇವೆ. ಬ್ರಹ್ಮತತ್ತ್ವಕ್ಕೆ ನಮ್ಮಿಂದ ಸಲ್ಲಬೇಕಾದದ್ದನ್ನು ಜಗದ್ವೈಭವಕ್ಕೆ ಸಲ್ಲಿಸುತ್ತೇವೆ. ಇದೇ ಪ್ರಮಾದ. ಜಗದಾಧಾರವಾದ ಬ್ರಹ್ಮವನ್ನು ಜಗತ್ತಿನೊಡನೆ ಬೆರಸದೆ, ಬ್ರಹ್ಮವ್ಯತಿರಿಕ್ತವಾದದ್ದು ಜಗತ್ತು ಎಂಬುದನ್ನು ಗ್ರಹಿಸುವುದು ಜ್ಞಾನ.

> ಯಥಾ ಮಹಾನ್ತಿ ಭೂತಾನಿ ಭೂತೇಷೂಚ್ಚಾವಚೇಷ್ವನು ।
> ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಮ್ ॥

ಇದು ಭಗವಂತನ ಮಾತು (ಆ ಭಾಗವತ ಪ್ರಕರಣದಲ್ಲಿ): “ಹೇಗೆ ಪೃಥಿವ್ಯಾದಿ ಪಂಚಮಹಾಭೂತಗಳು ದೊಡ್ಡವೂ ಸಣ್ಣವೂ ಆದ ಎಲ್ಲ ಪ್ರಾಣಿಗಳಲ್ಲೂ ಸೇರಿಕೊಂಡೂ ಸೇರದೆಯೂ ಇವೆಯೋ, ಹಾಗೆ ನಾನು ಅವುಗಳಲ್ಲಿ ಸೇರಿಯೂ ಸೇರದೆಯೂ ಇದ್ದೇನೆ”.

ಮಾವಿನ ಮರದ ಬೆಳವಣಿಗೆ ನೆಲ, ನೀರು, ಉಷ್ಣ ಮುಂತಾದ ಪಂಚಮಹಾಭೂತಗಳ ಸಂಸರ್ಗದಿಂದ ಆದದ್ದು. ಆದರೂ ಮಾವಿನಹಣ್ಣನ್ನು ತಿನ್ನುವಾಗ ಅದರಲ್ಲಿ ಪೃಥ್ವಿಯನ್ನಾಗಲಿ ಆಪವನ್ನಾಗಲಿ ತೇಜವನ್ನಾಗಲಿ ಯಾರೂ ಗುರುತಿಸರು. ಪಂಚಭೂತಗಳು ಅದರಲ್ಲಿ “ಪ್ರವಿಷ್ಟಾನ್ಯಪ್ರವಿಷ್ಟಾನಿ” –ಪ್ರವೇಶ ಮಾಡಿವೆ, ಪ್ರವೇಶಮಾಡಿಲ್ಲ. ಬ್ರಹ್ಮವು ಜಗದ್ವಸ್ತುಗಳಲ್ಲಿ ಹಾಗೆ (ತಥಾ ತೇಷು ನ ತೇಷು ಚ).

ಪಾರಿಜಾತದ ಗಿಡ ಪಂಚಮಹಾಭೂತಗಳ ಸಂಸರ್ಗದಿಂದ ಹುಟ್ಟಿಬೆಳೆದದ್ದು. ಆದರೂ ಪಾರಿಜಾತದ ಹೂವನ್ನಾಗಲಿ ಅದರ ವಾಸನೆಯನ್ನಾಗಲಿ ನಾವು ಯಾವ ಒಂದು ಭೂತದ್ದೆಂದೂ ಭಾವಿಸುವುದಿಲ್ಲ. ಪೃಥಿವ್ಯಾದಿಗಳು ಪಾರಿಜಾತದಲ್ಲಿ “ಪ್ರವಿಷ್ಟಾನ್ಯ ಪ್ರವಿಷ್ಟಾನಿ”. ಬ್ರಹ್ಮವು ಜೀವರಾಶಿಗಳಲ್ಲಿ “ತಥಾ ತೇಷು ನ ತೇಷು ಚ”.

ಹೀಗೆಯೇ ಎಲ್ಲ ಮರಗಿಡಗಳ ವಿಷಯದಲ್ಲಿಯೂ ಬ್ರಹ್ಮಸಂಬಂಧವನ್ನು ತಿಳಿಯಬೇಕಾದದ್ದು. ಒಂದು ದೃಷ್ಟಿಯಿಂದ ಆ ಸಂಬಂಧ ಉಂಟು, ಒಂದು ದೃಷ್ಟಿಯಿಂದ ಇಲ್ಲ.

ಹೀಗೆಯೇ ಕ್ರಿಮಿಕೀಟಾದಿಯಾಗಿ ಹಿರಣ್ಯಗರ್ಭ ಪರ್ಯಂತವೂ ಸಮಸ್ತ ಜಗದ್ವಸ್ತುಗಳ ವಿಷಯದಲ್ಲಿಯೂ ಬ್ರಹ್ಮತಾದಾತ್ಮ್ಯವನ್ನು ಭಾವಿಸಬೇಕಾದದ್ದು.

1. ಬ್ರಹ್ಮಭಾವವು ಜಗದ್ವಸ್ತುವಿನಲ್ಲಿ ಪಾರಮಾರ್ಥಿಕವಾಗಿ ಉಂಟು, ವ್ಯಾವಹಾರಿಕವಾಗಿ ಇಲ್ಲ.
2. ಜಗದ್ಭಾವವು ಬ್ರಹ್ಮದಲ್ಲಿ ವ್ಯಾವಹಾರಿಕವಾಗಿ ಉಂಟು, ಪಾರಮಾರ್ಥಿಕವಾಗಿ ಇಲ್ಲ.

ಮುದ್ದು ಮಗು ಆನೆ ಬೇಕೆಂದಳುತ್ತದೆ. ಅಜ್ಜ ಪೇಟೆಗೆ ಹೋಗಿ ಬಚ್ಚಾಣಿ ಬಣ್ಣದ ಆನೆಯನ್ನು ತಂದುಕೊಡುತ್ತಾನೆ. ಮಗುವಿಗೆ ತೃಪ್ತಿಯಾಗುತ್ತದೆ. ಬಂದವರಿಗೆ ಆ ಬೊಂಬೆಯನ್ನು ತೋರಿಸಿ “ಆನೆ”, “ಆನೆ” ಎಂದು ಹೆಮ್ಮೆಪಡುತ್ತ ಹಿಗ್ಗುತ್ತದೆ. ಆ

ಆನೆಯಲ್ಲಿರುವುದೇನೋ ಮರ ಅಥವಾ ಮಣ್ಣು. ಅದನ್ನು ಯಾರಾದರೂ ಮಣ್ಣೆಂದು ಕರೆದಾರೋ? ಪಾತ್ರೆ ತಿಕ್ಕುವುದಕ್ಕೆ "ಒಂದು ಹಿಡಿ ಮಣ್ಣು ತಾ" ಎಂದರೆ ಯಾರಾದರೂ ಆ ಬೊಂಬೆಯನ್ನು ತಂದಾರೆ? ಆ ಬೊಂಬೆಯಲ್ಲಿ ಹೊರನೋಟಕ್ಕೆ ಆನೆಯಿದೆ; ಒಳನೋಟಕ್ಕೆ ಆನೆಯಿಲ್ಲ; ಒಳನೋಟಕ್ಕೆ ಮಣ್ಣಿದೆ, ಹೊರನೋಟಕ್ಕೆ ಮಣ್ಣಿಲ್ಲ. ಒಂದು ದೃಷ್ಟಿಯಿಂದ ಉಂಟು, ಇನ್ನೊಂದು ದೃಷ್ಟಿಯಿಂದ ಇಲ್ಲ.

ಇನ್ನೊಂದು ದೃಷ್ಟಾಂತವನ್ನು ನೋಡೋಣ. ಮಹಾನುಭಾವರಾದ ನಾಟಕದ ವರದಾಚಾರ್ಯರಿದ್ದರು. ಅವರು ರಂಗವೇದಿಕೆಯ ಮೇಲೆ ಹಿರಣ್ಯಕಶಿಪುವಾಗಿ ಬರುತ್ತಿದ್ದರು. ಪ್ರೇಕ್ಷಕರು ಅದಕ್ಕಾಗಿ ಕಾದಿದ್ದು, ಅದು ಬಂದಾಗ ಎವೆಯಿಕ್ಕದೆ ನೋಡುತ್ತಿದ್ದರು. ಅದು ಹಿರಣ್ಯಕಶಿಪುವೆ? ಅಲ್ಲ, ವರದಾಚಾರ್ಯರು. ವರದಾಚಾರ್ಯರೆ? ಅಲ್ಲ, ಹಿರಣ್ಯಕಶಿಪು. ವರದಾಚಾರ್ಯರು ಸೌಮ್ಯಶೀಲರು, ಮೃದು ಮನಸ್ಸಿನವರು, ರಂಗಪ್ರೇಕ್ಷಕರ ಕಣ್ಣಿಗೆ ರಾಕ್ಷಸನಾದವರು ಸ್ನೇಹಿತರ ಮತ್ತು ಆಶ್ರಿತರ ಕಣ್ಣಿಗೆ ಕರುಣಾಳು. ಹಿರಣ್ಯಕಶಿಪು, ಸಾರಂಗಧರ, ದುಷ್ಯಂತ ಮೊದಲಾದವರು ವರದಾಚಾರ್ಯರಲ್ಲಿ "ಪ್ರವಿಷ್ಟಾನ್ಯಪ್ರವಿಷ್ಟಾನಿ".

ಒಂದು ವಸ್ತುವಿನಲ್ಲಿ, ಒಬ್ಬ ಮನುಷ್ಯನಲ್ಲಿ, ನಾಲ್ಕಾರು ಗುಣಗಳಿರುತ್ತವೆ. ಅವುಗಳಲ್ಲಿ ಯಾವ ಒಂದೂ ಅದೇ ಅವನಲ್ಲ. ಬ್ರಹ್ಮಚೈತನ್ಯದಲ್ಲಿ ಅನಂತ ವಸ್ತುರಚನೆಗಳಿವೆ. ಆ ಯಾವ ಒಂದು ರಚನೆಯೂ ಆ ರೂಪದಲ್ಲಿ–ಆ ಚೇಷ್ಟೇಯಲ್ಲಿ–ಆ ಅವಸ್ಥೆಯಲ್ಲಿ ಬ್ರಹ್ಮವಲ್ಲ. ರೂಪ ಚೇಷ್ಟೆ ಅವಸ್ಥೆಗಳು ಬ್ರಹ್ಮೇತರವಾದವು; ಮಾಯೆಗೆ ಸೇರಿದವು.

ಇದೇ ಅಭಿಪ್ರಾಯವನ್ನು ಈ ಕೆಳಗಿನ ಇಂಗ್ಲಿಷ್ ಪದ್ಯವು ಸಂಗ್ರಹವಾಗಿ, ಸುಂದರವಾಗಿ ಹೇಳುತ್ತದೆ:

> All these you are, and each is partly you,
> And none is false, and none is wholly true.

–(ಮೂಲ: ಅಜ್ಞಾತ)

ಹಾಗಾದರೆ ಮಾಯೆ ಬ್ರಹ್ಮದಿಂದ ಬೇರೆಯೋ? ಒಂದರ್ಥದಲ್ಲಿ ಬೇರೆ; ಇನ್ನೊಂದರ್ಥದಲ್ಲಿ ಬೇರೆಯಲ್ಲ. ವಸ್ತುವಿನ ನೆರಳು ವಸ್ತುವಿನಿಂದ ಬೇರೆ. ಆದರೆ ವಸ್ತುವಿಲ್ಲದೆ ನೆರಳಿಲ್ಲವಾದದ್ದರಿಂದ ಎರಡೂ ಬೇರೆಬೇರೆಯಲ್ಲ. ಅಲೆ ಸಮುದ್ರದಿಂದ ಬೇರೆಯೋ? ಅಲೆ ಒಂದು ಕ್ಷಣದ ಲೆಕ್ಕದಿಂದ ಬೇರೆ, ಮರುಕ್ಷಣ ಅದು ಬೇರೆಯಲ್ಲ. ಗಾಳಿ ಬೀಸಿದಾಗ ಮರದ ಎಲೆಗಳು ಅಲುಗಾಡುತ್ತವೆ, ಮುಂಡ ಅಲುಗದೆ ನಿಂತಿರುತ್ತದೆ. ಅಲುಗಾಡುವ ಎಲೆಗಳ ಚಲನೆಗಳು ಫೋಟೋ ಕ್ಯಾಮರಕ್ಕೆ ಸಿಕ್ಕುವುದಿಲ್ಲ. ಮುಂಡ ಸುಲಭವಾಗಿ ಸಿಕ್ಕುತ್ತದೆ. ಮರ ಅಲುಗುತ್ತಿದೆಯೆ? ಅಲುಗುತ್ತಿಲ್ಲ–ಮುಂಡದ ದೃಷ್ಟಿಯಿಂದ. ಎಲೆಯ ದೃಷ್ಟಿಯಿಂದ ಮರ ದೃಢವಾಗಿ ನಿಂತಿದೆಯೆ? ಇಲ್ಲ, ಅಲುಗಾಡುತ್ತಿದೆ. ಹೀಗೆ ಏಕಮೇವಾದ್ವಿತೀಯವಾದ ಬ್ರಹ್ಮವು ತನ್ನ ನೆರಳೆಂಬಂತೆ–ತನ್ನ ಕಡಲ ತೆರೆಯಂಬಂತೆ–ತನ್ನ ಮರದ ತಲೆಯೆಲೆಯೆಂಬಂತೆ–ಒಂದು ತೋರಿಕೆಯನ್ನು ತಾಳುತ್ತದೆ. ಅದು ಮಾಯೆ. ಮಾಯೆ ಬ್ರಹ್ಮವಲ್ಲ; ಬ್ರಹ್ಮವಿಲ್ಲದೆ ಮಾಯೆಯಿಲ್ಲ. ಹೀಗೆ ಮಾಯೆಯು ಉಂಟು ಇಲ್ಲ ಎಂಬ ನಿಷ್ಕರ್ಷೆಗೆ ಶಕ್ಯವಲ್ಲದೆ–ಸತ್ಯ ಅಸತ್ಯಗಳೆರಡೂ ಅಲ್ಲದೆ–ಹೀಗೂ ಗೊತ್ತಿಗೆ ಬಾರದೆ, ಹಾಗೂ ಗೊತ್ತಿಗೆ ಬಾರದೆ ಇರುವುದರಿಂದ ಅದನ್ನು ಅನಿರ್ವಚನೀಯವೆಂದು ಕರೆಯುವುದು ಪದ್ಧತಿ. ಮಾಯೆ ಕವಿದ ಕಣ್ಣಿಗೆ ಜಗತ್ತು ಬ್ರಹ್ಮದಿಂದ ಬೇರೆ, ಮಾಯೆ ಹರಿದ ಕಣ್ಣಿಗೆ ಜಗತ್ತು ಬ್ರಹ್ಮದಿಂದ ಬೇರೆಯಲ್ಲ.

5. **"(ಮಮಾಽಽತ್ಮಾ) ಭೂತ ಭೃತ್" :** ಪ್ರಾಣಿಗಳನ್ನು ಭರಿಸಿರತಕ್ಕದ್ದು–ಹೊತ್ತಿರತಕ್ಕದ್ದು–ಬ್ರಹ್ಮಚೈತನ್ಯ. ಲೋಕವನ್ನು ಉಳಿಸಿ ಕಾಪಾಡಿಕೊಂಡಿರತಕ್ಕದ್ದು ಬ್ರಹ್ಮ, –ಎಂದರೆ ಜಗತ್ತಿನ ಮೇಲಣ ಸರ್ವಾಧಿಕಾರವೂ ಬ್ರಹ್ಮದ್ದು. ಮನುಷ್ಯನಿಗೆ ಆ ಅಧಿಕಾರ ಎಷ್ಟು ಮಾತ್ರವೂ ಇಲ್ಲ.

6. **"(ಮಮಾಽಽತ್ಮಾ) (ಚ) ಭೂತಸ್ಥಃ" :** ಬ್ರಹ್ಮಚೈತನ್ಯವು ಪ್ರಾಣಿರಾಶಿಗಳಲ್ಲಿ ನೆಲಸಿಕೊಂಡಿಲ್ಲ; ಎಂದರೆ ಯಾವ ಪ್ರಾಣಿಯನ್ನೂ ಕುರಿತು "ಇದು ಬ್ರಹ್ಮ" ಎಂದು ಗೊತ್ತು ಹೇಳತಕ್ಕದ್ದಲ್ಲ, ಬ್ರಹ್ಮವು ಸರ್ವಗತವೂ ಸರ್ವವ್ಯಾಪಿಯೂ ಆದದ್ದರಿಂದ, ಅದನ್ನು ಯಾವ ಒಂದರೊಡನೆಯೂ ಬಿಡಿಯಾಗಿ ಬೆರಸಲಾಗದು.

ಈ ಮೇಲಣ ಆರು ವಾಕ್ಯಗಳಲ್ಲಿಯೂ ಬ್ರಹ್ಮವು ಭೂತವೆಂಬುದರಿಂದ ಪ್ರತ್ಯೇಕವಾದದ್ದೆಂಬ ಭಾವನೆ ಅಡಗಿದೆ. ಭೂತವೆಂದರೆ ಪ್ರಾಣಿ, ಜಂತು, ದೇಹಿ, ಜೀವ.

ನಮ್ಮ ಕಾಲದಲ್ಲಿ ಭೂತವೆಂಬ ಮಾತಿಗಿಂತ ಜೀವ ಎಂಬ ಮಾತು ಹೆಚ್ಚು ಬಳಕೆಯಲ್ಲಿದೆ. ಅದನ್ನು ಉಪಯೋಗಿಸಿಕೊಳ್ಳೋಣ.

ನಮ್ಮ ಮುಂದಿರುವ ಮುಖ್ಯ ಪ್ರಶ್ನೆಯು ಜೀವ–ಬ್ರಹ್ಮ ಸಂಬಂಧವನ್ನು ಕುರಿತದ್ದಷ್ಟೆ? ಜೀವವು ನಮಗೆಲ್ಲ ಕೊಂಚಕೊಂಚವಾದರೂ ಅಂತರನುಭವದಲ್ಲಿರುವ ವಸ್ತು. ಬ್ರಹ್ಮವು ಹಾಗೆ ಅನುಭವಕ್ಕೆ ಬಾರದೆ ಕಿವಿಗೆ ಮಾತ್ರ ಕೇಳಿಬಂದಿರುವ ಹೆಸರು. ಅವೆರಡೂ ಅನ್ಯೋನ್ಯ ಏನಾಗಿವೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದಕ್ಕೆ ಮುಂಚೆ ಮೇಲಣ ಪಟ್ಟಿಯ ಏಳನೆಯ ಅಂಶವನ್ನು ನೋಡೋಣ.

7. **“ಮಮಾऽऽತ್ಮಾ ಭೂತಭಾವನಃ” :** ಜೀವಿಗಳ ಏಳುಬೀಳುಗಳಿಗೆ ಕಾರಣವಾದದ್ದು ಬ್ರಹ್ಮಚೈತನ್ಯ. “ಭಾವನಃ” ಎಂದರೆ ಉತ್ಪತ್ತಿ, ವೃದ್ಧಿ, ಧಾರಣೆ, ನಿಯಮನ–ಎಂದು ಮುಂತಾಗಿ ಅರ್ಥ. ಬ್ರಹ್ಮವಸ್ತುವು ಋತಧರ್ಮಗಳ ಬೀಜವನ್ನು ಮನುಷ್ಯ ಸ್ವಭಾವದಲ್ಲಿ ಹುದುಗಿಸಿದೆ. ಋತುವು ಸೃಷ್ಟಿಯೊಳಗಿರುವ ನಿಯಮ. ಕರ್ಮಾ ಕರ್ಮಗಳಿಗೆ ಫಲಾಫಲಗಳುಂಟು, ಅವನ್ನು ಜೀವಿ ಅನುಭವಿಸಬೇಕಾದದ್ದು–ಎಂಬುದು ಋತನಿಯಮ. ಋತದ ಜೀವನಾನ್ವಯವೇ ಧರ್ಮ. ಧರ್ಮಾಧರ್ಮಗಳೇ ಪುಣ್ಯಪಾಪಗಳು, ಅದರಿಂದ ಸ್ವರ್ಗನರಕಗಳು. ಧರ್ಮಾಧರ್ಮಗಳನ್ನನುಸರಿಸಿ ಜೀವಿಗೆ ಉತ್ತಮಗತಿ ಅಧೋಗತಿಗಳು ಎಂಬುದು ಬ್ರಹ್ಮಶಾಸನ. ಈ ಜಗನ್ಮೂಲ ಶಾಸನದ ಕಾರಣದಿಂದ ಬ್ರಹ್ಮಚೈತನ್ಯವು “ಭೂತಭಾವನ” ವಾಗುತ್ತದೆ–ಎಂದರೆ ಆ ಬ್ರಹ್ಮಶಾಸನದಿಂದ ಜೀವದ ಹುಟ್ಟು ಬಾಳುಗಳೂ ಆಗುಹೋಗುಗಳೂ ತೀರ್ಮಾನವಾಗುತ್ತವೆ. ಹೀಗೆ ಬ್ರಹ್ಮವೇ ಜೀವಗತಿಗೆ ನಿರ್ಧಾರಣಾಧಿಕಾರಿ.

ಒಂದು ಉಪಮಾನದಿಂದ

1. “ಮಮಾऽऽತ್ಮಾಭೂತಭೃತ್”
2. “ಮಮಾऽऽತ್ಮಾ ನ (ಚ) ಭೂತಸ್ಥಃ”
3. “ಮಮಾऽऽತ್ಮಾ ಭೂತಭಾವನಃ”

–ಈ ಮೂರು ವಾಕ್ಯಗಳಿಗೂ ಸಮಂಜಸವಾದ ಅರ್ಥವನ್ನು ಕಾಣುವುದಕ್ಕೆ ಸಹಾಯವಾದೀತೆಂದು ತೋರುತ್ತದೆ. ಒಂದು ಸಂಪ್ರದಾಯಸ್ಥ ಕುಟುಂಬವನ್ನು ನೋಡೋಣ. ಅದರಲ್ಲಿ ಒಬ್ಬ ಯಜಮಾನ, ಆತನ ಭಾರ್ಯೆ, ಅವರ ಮಕ್ಕಳು ನಾಲ್ವರೈವರು, ಮೊಮ್ಮಕ್ಕಳು ಆರೆಂಟು ಮಂದಿ–ಹೀಗೆ ಒಟ್ಟು ಹದಿನೈದಿಪ್ಪತ್ತು ಮಂದಿ ಇದ್ದಾರೆ.

1. ಯಜಮಾನ ಯಜಮಾನಿತಿಯನ್ನು ಬಿಟ್ಟು ಮಿಕ್ಕ ಹನ್ನೆರಡು ಹದಿನಾರು ಮಂದಿಗೂ ಆತನು ತಂದೆಯೋ ಅಜ್ಜನೋ ಆಗಿ "ಭೂತಭೃತ್". ಅವರನ್ನು ಸಲಹಿ, ವಿದ್ಯೆ ಬುದ್ಧಿ ಕಲಿಸಿ, ಕಸಬಿನಲ್ಲಿ ನೆಲೆಗೊಳಿಸಿ, ಅವರ ಯೋಗಕ್ಷೇಮಗಳ ಭಾರವನ್ನು ಹೊತ್ತಿದ್ದಾನೆ. ಹೀಗೂ ಅವನು ಅವರೆಲ್ಲರ ವಿಷಯದಲ್ಲಿಯೂ "ಭೂತಭೃತ್".
2. ಆದರೂ ಆತನು ಅವರ ವ್ಯಷ್ಟಿಜೀವನದೊಳಕ್ಕೆ ಹೆಚ್ಚಾಗಿ ಪ್ರವೇಶಿಸುವುದಿಲ್ಲ. ಅವರವರ ವಯಸ್ಸಿಗೂ ಸಂದರ್ಭಕ್ಕೂ ತಕ್ಕಂತೆ ಅವರನ್ನು ಸ್ವತಂತ್ರರನ್ನಾಗಿ ಬಿಟ್ಟಿರುತ್ತಾನೆ. ಮನೆಗೆ ಬಂದ ಸೊಸೆಯರೂ ಅವರವರ ಮಕ್ಕಳೂ ಬಂಧನ ಬಾಧೆಗಳನ್ನನುಭವಿಸದೆ ನಗುಮುಖದಿಂದಿರಲಿ ಎಂದು ಅವನು ಕೋರಿರುತ್ತಾನೆ. "ಅವರವರ ವಿವೇಕದಿಂದ ಅವರು ಬಾಳಿಕೊಳ್ಳಲಿ, ನನಗಾಗಿ ಅವರು ಬದುಕು ನಡಸಬೇಕಾದದ್ದಲ್ಲ; ಅವರ ಹಿತಕ್ಕಾಗಿ ಅವರು ಬದುಕು ನಡೆಸಿಕೊಳ್ಳಲಿ" –ಎಂದು ಆತನು ಎಲ್ಲರನ್ನೂ ಆದಷ್ಟು ಮಟ್ಟಿಗೆ ಅವರ ಸ್ವಂತ ಜಾಗರೂಕತೆ ಸ್ವಂತ ಪ್ರಯತ್ನಗಳಿಗೆ ಬಿಟ್ಟಿರುತ್ತಾನೆ. ತಾನು ಪೋಷಿಸುತ್ತಾನೆ, ಆದರೆ ತನ್ನಿಷ್ಟವನ್ನು ಅವರ ಮೇಲೆ ಹೇರುವುದಿಲ್ಲ. ಇಂಥವನು "ನ (ಚ) ಭೂತಸ್ಥಃ". ಮಕ್ಕಳಲ್ಲಿ ಯಾರಾದರೂ ಬೇರೆಯಾಗಿ ಸಂಸಾರ ನಡಸಬೇಕೆಂದಿಚ್ಛಿಸಿ ಆಸ್ತಿಯಲ್ಲಿ ಪಾಲು ಕೇಳಿದರೆ ನ್ಯಾಯವೆನಿಸಿದ್ದನ್ನು ಸಮಾಧಾನದಿಂದ ಕೊಟ್ಟು "ವಿವೇಕದಿಂದ ಬಾಳಿಕೊಳ್ಳಿರಿ" ಎನ್ನುತ್ತಾನೆ. ಚಿಕ್ಕವರು ತನ್ನನ್ನು ಬೇಕೆಂಬಷ್ಟು ಕಾಲ ಅವರನ್ನು ಬಿಟ್ಟು ತಾನು ಅಲಕ್ ಆಗುತ್ತಾನೆ. ಒಟ್ಟಿನಲ್ಲಿ ಅಲಕ್ ಪ್ರವೃತ್ತಿ ಆತನದು. ಆದದ್ದರಿಂದ ಅವನು "ನ (ಚ) ಭೂತಸ್ಥಃ".
3. ಆತನು ಮಕ್ಕಳಿಗೆ ತಿಳಿವಳಿಕೆ ಕೊಟ್ಟಿರುತ್ತಾನೆ; ಅವರ ಬುದ್ಧಿಯನ್ನು ತಿದ್ದಿರುತ್ತಾನೆ; ವಿವೇಕವನ್ನು ಅಭ್ಯಾಸ ಮಾಡಿಸಿರುತ್ತಾನೆ. ಆತನು ಕೊಟ್ಟ ಹಿತಾಹಿತ ಪ್ರಜ್ಞೆಯೇ ಅವರ ಶ್ರೇಯಸ್ಸಿಗೆ ಕಾರಣವಾಗುತ್ತದೆ. ಅವನು ಕಲಿಸಿದ ನೀತಿಯನ್ನು ಅವರು ಮುರಿದರೆ ಮಣ್ಣು ತಿನ್ನಬೇಕಾಗುತ್ತದೆ. ಆತನು ಮಾಡಿದ ಉಪದೇಶವನ್ನು ಜ್ಞಾಪಕದಲ್ಲಿರಿಸಿಕೊಂಡು

ಉಚಿತವರಿತು ಪಾಲಿಸಿದರೆ ಅವರು ಶುಭಪಡೆಯುತ್ತಾರೆ. ಹೀಗೆ ಆತನು ತನ್ನ ಕುಟುಂಬದ ವಿಷಯದಲ್ಲಿ "ಭೂತಭಾವನಃ" –ಪುರೋಗತಿಗೆ ಕರ್ತ.

ಸಾರಾಂಶ ಇಷ್ಟು:

1. ಜಗತ್ತು ಈಶ್ವರನು (ಬ್ರಹ್ಮ) ತಾನಾಗಿ ಕಟ್ಟಿರುವ ಜೀವಸಂಸಾರ.
2. ಆದರೂ ಆ ಸಂಸಾರದ ತಾಪತ್ರಯಗಳು ಈಶ್ವರನನ್ನಂಟವು.
3. ಸಂಸಾರಕ್ಕೆ ಬೇಕಾದ ಜೀವಿಕಾಸಾಮಗ್ರಿಯನ್ನು ಈಶ್ವರನು ಕಲ್ಪಿಸಿದ್ದಾನೆ.
4. ಸಂಸಾರವು ಸುಗಮವಾಗಲು ಸಾಧಕವಾದ ನೀತಿನಿಯಮಗಳನ್ನು ಈಶ್ವರನು ಪ್ರಕೃತಿ ಕ್ರಮದಲ್ಲಿ ತೋರಿಸಿದ್ದಾನೆ. ಅದೇ ಧರ್ಮ.
5. ಆ ಧರ್ಮಗಳನ್ನರಿತು ಯುಕ್ತಾಯುಕ್ತಗಳನ್ನು ವಿವೇಚಿಸುವ ಬುದ್ಧಿಶಕ್ತಿಯನ್ನು ಮನುಷ್ಯನಿಗೆ ಕೊಟ್ಟಿದ್ದಾನೆ.
6. ಧರ್ಮವಿವೇಕ ಪರಿಪಾಲನೆಗಳಂತೆ ಜೀವಕ್ಕೆ ಹಿತಾಹಿತಪ್ರಾಪ್ತಿ.
7. ಈಶ್ವರನು ಜಗತ್ತಿನಿಂದ ಅಲಕ್ಕಾಗಿರುತ್ತಾನೆ. ಅವನಿಗೆ ಜಗತ್ತಿನಿಂದ ಆಗ ಬೇಕಾದದ್ದೇನೂ ಇಲ್ಲ.
8. ಜಗತ್ತು ಬೇಕಾದದ್ದು ಜೀವಕ್ಕೆ–ಜೀವದ ಸಂಸ್ಕಾರಕ್ಷೇತ್ರವಾಗಿ, ಜೀವದ ಶುದ್ಧಿ ಸಾಧಕವಾಗಿ.
9. ಜೀವಕ್ಕೆ ಸಂಸ್ಕಾರದಿಂದ ಆಗುವ ಲಾಭವು ಸ್ವಮೂಲಸ್ಥಾನಸಾಮೀಪ್ಯ, ಬ್ರಹ್ಮ ಅದರ ಮೂಲಸ್ಥಾನ.
10. ಅದನ್ನು ಮರೆಸಿ ದೂರ ಮಾಡಿರುವುದು ಮಾಯೆ, ಮಾಯೆಯು ವಿಶ್ವ ಪ್ರಕೃತಿಯಲ್ಲಿರುವ ದೃಷ್ಟಿಭ್ರಾಮಕ ಶಕ್ತಿ.

ಬ್ರಹ್ಮ ಜಗತ್ಸಂಬಂಧ, ಬ್ರಹ್ಮಜೀವಸಂಬಂಧ, ಜೀವಜಗತ್ಸಂಬಂಧ–ಈ (Details) ವಿಷಯಾಂಶಗಳನ್ನು ಸಂಕ್ಷೇಪವಾಗಿ ನೋಡಿದ್ದಾಯಿತು. ಇದು ಮುಂದಿನ ಗ್ರಂಥಾಧ್ಯಯನಕ್ಕೆ ಬೇಕಾದ ಸಿದ್ಧತೆ. ಈ ಮೇಲಣ ಅಭಿಪ್ರಾಯಗಳು ಅಲ್ಲಿ ಪುನಃ ಪುನಃ ಬರುತ್ತವಾದದ್ದರಿಂದ ಅವುಗಳ ಹಿನ್ನೆಲೆಯನ್ನು ಮೊದಲೇ ಪರಿಚಯ ಮಾಡಿಕೊಂಡಿದ್ದರೆ ಅನುಕೂಲ.

ವಾಯುಮಂಡಲದಲ್ಲಿ ಮೇಘಗಳಿರುವಂತೆ ಬ್ರಹ್ಮಾವರಣದೊಳಗೆ ಜಗತ್ತಿದೆಯೆಂದು ಮೇಲೆ ಹೇಳಿದ್ದಾಯಿತು. ಅದೇ ವಿಷಯವನ್ನು ಸ್ವಾಮಿ ಈಗ ಇನ್ನೊಂದು ಹೋಲಿಕೆಯಿಂದ

ತಿಳಿಸಿದ್ದಾನೆ:

> ಯಥಾऽऽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್ ।
> ತಥಾ ಸರ್ವಾಣಿ ಭೂತಾನಿ ಮತ್‌ಸ್ಥಾನೀತ್ಯುಪಧಾರಯ ॥

ಆಕಾಶದಂತೆ ಬ್ರಹ್ಮ; ಅದರಲ್ಲಿಯ ವಾಯುವಿನಂತೆ ವಿಶ್ವ.

ಒಳ್ಳೆಯದು. ಬ್ರಹ್ಮವು ಸ್ವತಂತ್ರ; ಜಗತ್ತು ಅಧೀನ. ಈ ಸ್ವತಂತ್ರ–ಅಧೀನ ಸಂಬಂಧವನ್ನು ಕಲ್ಪಿಸಿದವರು ಯಾರು? ಬ್ರಹ್ಮವೇನೋ ಸ್ವಯಂಭೂಃ–ತಾನೇ ತಾನಾಗಿ ಇರತಕ್ಕದ್ದು; ಯಾರಿಂದಲೂ ಹುಟ್ಟಿದ್ದಲ್ಲ; ಯಾರೂ ಮಾಡಿದ್ದಲ್ಲ. ಪ್ರಪಂಚವೂ ಹಾಗೆಯೇನೋ? ಅಥವಾ ಅದು ಮಾಡಿದ್ದಾದ ಪಕ್ಷದಲ್ಲಿ, ಅದನ್ನು ಮಾಡಿದವರು ಯಾರು? ಬ್ರಹ್ಮವೇ.

> ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃಪುನಃ ॥
> ಮಯಾऽಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ॥

ಬ್ರಹ್ಮವು ಈಶ್ವರಭಾವವನ್ನು ತಾಳಿ ತನ್ನ ಪ್ರಕೃತಿಶಕ್ತಿಯಿಂದಲೇ ಜಗತ್ತನ್ನು ಪುನಃಪುನಃ ಸೃಷ್ಟಿ ಮಾಡುತ್ತದೆ. ಪ್ರಕೃತಿಯು ಬ್ರಹ್ಮದ ಅಧ್ಯಕ್ಷತೆಯಲ್ಲಿ ಚರಾಚರ ಪ್ರಪಂಚವನ್ನು ಪ್ರಸವಿಸುತ್ತದೆ.

ಸಾಮಾನ್ಯವಾಗಿ ಸಭಾಪ್ರಸಂಗದಲ್ಲಿ "ಅಧ್ಯಕ್ಷ" ಎಂಬ ಪದವನ್ನು ತದಧಿಕಾರಿಯ ಹೆಸರಾಗಿ ಬಳಸುತ್ತೇವಷ್ಟೆ? ಸಭಾಧ್ಯಕ್ಷನು ಭಾಷಣ ಮಾಡುವವನಲ್ಲ. ಅವನು ಯಾವ ಅಭಿಪ್ರಾಯವನ್ನೂ ಹೇಳುವುದಿಲ್ಲ. ಇತರರು ಭಾಷಣ ಮಾಡುವುದನ್ನು ಕೇಳುತ್ತಿರುತ್ತಾನೆ. ಸಭೆಯ ನಡವಳಿಕೆಯನ್ನು ನೋಡುತ್ತಿರುತ್ತಾನೆ. ಅವನು ಆ ಪೀಠದಲ್ಲಿರುವುದರಿಂದ ಸಭಾ ಮರ್ಯಾದೆ ನೆರವೇರುತ್ತದೆ. ಅಧ್ಯಕ್ಷನು ಇದ್ದುಕೊಂಡು ನೋಡುವವನು; ಮಾಡುವವನಲ್ಲ. ಅವನ ಇರುವಿಕೆಯು ಕ್ರಮವನ್ನು ತಪ್ಪದಂತೆ ನಡಸುತ್ತದೆ. ಹೀಗೆ ಅಧ್ಯಕ್ಷ ಎಂಬ ಪದ ಈ ಪ್ರಕರಣದಲ್ಲಿ ಸಾರ್ಥಕವಾಗಿದೆ.

ಬ್ರಹ್ಮವು ತಾನಾಗಿ ಕೆಲಸಮಾಡುವುದಿಲ್ಲ. ತನ್ನ ಶಕ್ತಿಯ ಒಂದಂಶವಾದ ಪ್ರಕೃತಿಯು ಕೆಲಸಮಾಡುವುದನ್ನು ಬ್ರಹ್ಮವು ನೋಡುತ್ತದೆ. ಆದದ್ದರಿಂದ ಅದು ಅಧ್ಯಕ್ಷ. ಬ್ರಹ್ಮಚೈತನ್ಯದ ಅಪಾರಶಕ್ತಿಯ ಒಂದು ಅಂಶದ ವಿಭೂತಿಯೇ ಪ್ರಕೃತಿ. ಬ್ರಹ್ಮವನ್ನು ಜಗತ್ಕುಟುಂಬದ

ಯಜಮಾನನೆಂದು ಮೇಲೆ ಹೇಳಿದೆ. ಆ ಕುಟುಂಬದ ಯಜಮಾನಿತಿ ಪ್ರಕೃತಿ ಅಥವಾ ಪ್ರಕೃತಿಯೆಂಬುದು ಸುವ್ಯವಸ್ಥಿತರಾಜ್ಯದ ಪ್ರಧಾನಮಂತ್ರಿಯಂತೆ. ಅಧಿಕಾರನಿರ್ವಾಹವೆಲ್ಲ ಮಂತ್ರಿಯದು. ವ್ಯವಸ್ಥಾನಿಬದ್ಧರಾಜ್ಯದ ಪ್ರಭುವಿನಂತೆ (Constitutional Monarch) ಬ್ರಹ್ಮವಸ್ತು ಎಂದು ಹಿಂದೆ ಹೇಳಿದೆ. ವ್ಯವಸ್ಥಾವಿಹಿತನಾದ ಮಹಾರಾಜನಿಗೆ ರಾಜ್ಯಕಾರ್ಯಗಳ ಆಯಾಸವಿಲ್ಲ. ಆ ಕಾರ್ಯಗಳು ಸಚಿವಾಯತ್ತವಾಗಿರುತ್ತವೆ. ಕಳ್ಳಪ್ಪ ಕದ್ದ; ಶಿಪಾಯಪ್ಪ ಅವನ್ನು ಹಿಡಿದ; ನ್ಯಾಯಿಗಪ್ಪ ಆರು ತಿಂಗಳು ಬಂದೀಖಾನೆ ಎಂದು ತೀರ್ಮಾನಿಸಿದ. ಕಳ್ಳಪ್ಪನ ಕೈಗೆ ಬಿತ್ತು ಕಬ್ಬಿಣದ ಬೇಡಿ. ಇದರಲ್ಲಿ ರಾಜ ಮಾಡಿದ್ದೇನು? ಎಲ್ಲವನ್ನೂ ಮಾಡತಕ್ಕದ್ದು ಕಾನೂನು, ಶಾಸನ. ಹಾಗೆಯೇ ಧರ್ಮಶಾಸನದಂತೆ ಕರ್ಮಾಕರ್ಮಗಳಿಗೆ ಫಲಾಫಲಗಳನ್ನು ಪಡೆದುಕೊಂಡು ಜೀವಿಗಳು ನಡೆಯುತ್ತವೆ. ಬ್ರಹ್ಮವಾದರೋ ನಿರ್ಲಿಪ್ತಸಾಕ್ಷಿ ಅದು ಮೇಲಿದ್ದುಕೊಂಡು ನೋಡುತ್ತದೆ, ಆದದ್ದರಿಂದ “ಅಧ್ಯಕ್ಷ”.

> ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।
> ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥

“ನೀರನ್ನು ಬಿಸಿಲಿನಿಂದ ಕಾಯಿಸಿ ಮೇಲಕ್ಕೆಳೆದುಕೊಂಡು ಮೋಡವಾಗಿಸಿ ಆದರಿಂದ ಮಳೆಯ ರೂಪದಲ್ಲಿ ಕೆಳಕ್ಕೆ ಸುರಿಯುವವನು ನಾನು. ಅಮೃತವು ನಾನು; ಮೃತ್ಯುವೂ ನಾನೇ. ಸದ್ವಸ್ತುವು ನಾನು, ಅಸತ್ತೂ ನಾನೇ”.

ಈ ಶ್ಲೋಕವು ಮನನಕ್ಕೆ ಅರ್ಹವಾದದ್ದು. ಮೂರನೆಯ ಅಧ್ಯಾಯದ

> ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯನ್ತೇ ಯಜ್ಞಭಾವಿತಾಃ ॥ (೩-೧೨)
> ಅನ್ನಾದ್ಭವನ್ತಿ ಭೂತಾನಿ ಪರ್ಜನ್ಯಾದನ್ನಸಂಭವಃ ॥ (೩-೧೪)

ಮೊದಲಾದ ವಾಕ್ಯಗಳು ಇಲ್ಲಿ ಸ್ಮರಣೀಯಗಳು.

ಜೀವದ ಅಂತರ್ಯಾಮಿ ಹೇಗೆ ಪರಮೇಶ್ವರನೋ ಜೀವಪೋಷಕನೂ ಹಾಗೆ ಪರಮೇಶ್ವರನೇ. ಸಮಸ್ತ ಜೀವನಸಾಮಗ್ರಿಯನ್ನೂ ಒದಗಿಸಿಕೊಡೂವವನೂ ಅಧಾರನೂ ಈಶ್ವರ.

ಅಷ್ಟೇ ಅಲ್ಲ; ಅವನೇ ಮೃತ್ಯವೂ ಹೌದು. ಕಠೋಪನಿಷತ್ತು ಹೇಳುತ್ತದೆ ಈ ಉಗ್ರಸತ್ಯವನ್ನ:

> ಯಸ್ಯ ಬ್ರಹ್ಮಚ ಕ್ಷತ್ರಂ ಚ
> ಉಭೇ ಭವತ ಓದನಃ ।
> ಮೃತ್ಯುರ್ಯಸ್ಯೋಪಸೇಚನಮ್ ॥

"ಬ್ರಹ್ಮಚೈತನ್ಯದ ಬಾಯಿಗೆ ವಿದ್ವಾಂಸನೂ ಶೂರರೂ ತುತ್ತಾಗತಕ್ಕವರು. ಇತರ ಜೀವಿಗಳು ಊರುಗಾಯಿಯಂತೆ".

ಲೋಕವನ್ನು ನಡಸುವವರು ಯಾರು? ಪ್ರಕೃತಿಯೇ ಲೋಕಚಾಲಕಳು. ಆಕೆ ದ್ವಿರೂಪಿ; ಒಂದು ದೈವೀರೂಪ; ಇದ್ನೊಂದು ಆಸುರೀರೂಪ. ದೈವೀರೂಪವನ್ನಾಶ್ರಯಿಸಿದವರು ಭಗವದ್ಭಕ್ತರಾಗುತ್ತಾರೆ.

> ಭಜನ್ತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥
> ಸತತಂ ಕೀರ್ತಯನ್ತೋ ಮಾಂ ಯತನ್ತಶ್ಚ ದೃಢವ್ರತಾಃ ॥
> ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್ ॥

"ಅವರು ಪರಮೇಶ್ವರನೊಬ್ಬನಲ್ಲಿಯೇ ಮನಸ್ಸಿಟ್ಟು ಸಮಸ್ತ ಜೀವಿಗಳಿಗೂ ಆದಿಮೂಲವು ಬ್ರಹ್ಮವೆಂದು ತಿಳಿದು, ಯಾವಾಗಲೂ ಅದನ್ನೇ ಕೀರ್ತಿಸಿಕೊಂಡು, ನಿಷ್ಠೆಯಿಂದ ಪರಬ್ರಹ್ಮವೆಂಬ ಏಕರೂಪದಲ್ಲಿಯೂ ನಾನಾ ದೇವತೆಗಳೆಂಬ ಬಹುರೂಪಗಳಲ್ಲಿಯೂ ಬಹುವಿಧವಾಗಿ ವಿಶ್ವತೋಮುಖವಾದ ಬ್ರಹ್ಮಚೈತನ್ಯವನ್ನು ಕುರಿತು ಉಪಾಸನೆ ಮಾಡುತ್ತಾರೆ".

ಆಸುರೀರೂಪದ ಪ್ರಕೃತಿಯನ್ನನುಸರಿಸುವವರಾದರೋ, ಮೋಹಪರವಶರಾಗಿ ತಮ್ಮನ್ನು ತಾವೇ ವ್ಯರ್ಥಮಾಡಿಕೊಳ್ಳುತ್ತಾರೆ.

> ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ॥

ರಾಕ್ಷಸರು ಕ್ರೂರರು, ಅಸುರರು, ವಂಚಕರು. ಇವರು ದೇಹವೇ ಆತ್ಮ, ದೇಹ ಭೋಗವೇ ಪರಮ ಭಾಗ್ಯ ಎಂದು ನಂಬಿರುವವರು. ಅಂಥವರಿಗೆ ನರಕ, ತಿರ್ಯಗ್ಯೋನಿಗಳಲ್ಲಿ ಪುನಃ ಪುನರ್ಜನನ–ಇವೇ ಗತಿ.

ಈ ಪ್ರಕೃತಿದ್ವೈವಿಧ್ಯವನ್ನು ಮುಂದೆ ಹದಿನಾರನೆಯ ಅಧ್ಯಾಯದಲ್ಲಿ ವಿಸ್ತರಿಸಿದ್ದಾನೆ ಭಗವಂತ.

ಪ್ರಕೃತಿಯು ಮನುಷ್ಯನನ್ನು ಹೀಗೂ ಹಾಗೂ ಸೆಳೆದಾಡುತ್ತಿದ್ದರೆ ಅವನಿಗೆ ಮುಕ್ತಿ ಹೇಗೆ? ಭಗವದ್ಭಕ್ತರಿಗಿರುವ ಭಾಗ್ಯವನ್ನು ತಿಳಿಸುತ್ತಾನೆ ಸ್ವಾಮಿ. ಆತನೇ ಎಲ್ಲರಿಗೂ.

> ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ।
> ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಮ್ ॥

"ಪರಬ್ರಹ್ಮವೇ ಗತಿ, ಪೋಷಕ, ನೆಲೆಮನೆ, ಆಶ್ರಯ, ಸ್ನೇಹಿತ, ಉತ್ಪತ್ತಿಕಾರಣ, ಲಯಕಾರಣ, ಸ್ಥಿತಿಕಾರಣ, ಕಟ್ಟಕಡೆಯ ನೆಲೆ, ಎಂದೆಂದಿಗೂ ನಾಶವಾದ ಬೀಜರೂಪವಾದ ಮೂಲದ್ರವ್ಯ".

ಯಜ್ಞಾದಿ ವೇದೋಕ್ತ ಕರ್ಮಗಳಿಂದ ಭಗವತ್ಪೂಜೆ ಮಾಡಿದವರು ಸ್ವರ್ಗಾದಿ ಪುಣ್ಯಲೋಕಗಳನ್ನು ಸೇರಿ ಅಲ್ಲಿಯ ವೈಭವವನ್ನನುಭವಿಸಿ–

> ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ ॥

ಹೀಗೆ ಪುಣ್ಯದ ಫಲ ಎಂದೋ ಒಂದು ದಿನ ಮುಗಿವಿಗೆ ಬರತಕ್ಕದ್ದು.

> ಏವಂ ತ್ರಯೀಧರ್ಮಮನುಪ್ರಪನ್ನಾ ಗತಾಗತಂ ಕಾಮಕಾಮಾ ಲಭನ್ತೇ ॥

ಇದನ್ನೇ ಹಿಂದೆ (ಅಧ್ಯಾಯ೨, ಶ್ಲೋಕ ೪೫) "ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ" ಎಂಬಲ್ಲಿ ಸೂಚಿಸಿದ್ದು. ಅರ್ಜುನನಿಗೆ ಆ ನಿಸ್ತ್ರೈಗುಣ್ಯ ಮಾರ್ಗ ಶಕ್ಯವಾಯಿತೋ, ಇಲ್ಲವೋ; ನಮಗಂತೂ ಅದು ಶಕ್ಯವಲ್ಲವೆಂದು ತೋರುತ್ತದೆ. ಸದ್ಯಕ್ಕೆ ನಾವು ತ್ರಿಗುಣಪರಿಧಿಯೊಳಗಿನ ಸತ್ಕರ್ಮಗಳ ವಿಷಯದಲ್ಲಿ ಉದಾಸೀನರಾಗುವುದು ಬೇಡ ಎಂದು ನನ್ನ ಬೇಡಿಕೆ. ನಮ್ಮಂಥ ದುರ್ಬಲರಿಗೂ ವ್ಯಾಕುಲಿತರಿಗೂ ಕೂಡ ಗತಿಯುಂಟೆಂದು ತೋರಿಸಿದ್ದಾನೆ ಭಗವಂತ.

> ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
> ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್

“ಯಾರು ನನ್ನನ್ನು (ಭಗವಂತನನ್ನು) ವಿನಾ ಬೇರಾರನ್ನೂ ಬೇರಾವುದನ್ನೂ ಚಿಂತಿಸದೆ, ಭಗವದುಪಾಸನೆ ಮಾಡುತ್ತಾ ಸರ್ವದಾ ಭಗವಂತನೊಬ್ಬನನ್ನೇ ಹಿಡಿದಿರುತ್ತಾರೋ ಅಂಥಾ ಭಕ್ತರ ಯೋಗಕ್ಷೇಮಗಳ ಭಾರವನ್ನು ನಾನು (ಭಗವಂತ) ವಹಿಸಿಕೊಂಡಿರುತ್ತೇನೆ”.

ಯೋಗವೆಂದರೆ ಇಷ್ಟಹಿತಪ್ರಾಪ್ತಿ. ಕ್ಷೇಮವೆಂದರೆ ಹಿತಸುಖ. ಉದ್ರೇಕಕಾರಿಯಾಗದೆ ಸಮಾಧಾನಕಾರಿಯಾಗುವ ಸೌಖ್ಯಕ್ಕೆ ಕ್ಷೇಮವೆಂದು ಹೆಸರು. ಅದೇ ನಮ್ಮ ನೆಮ್ಮದಿ. ಲಾಭಭೋಗಗಳಿಗಾಗಿಯೇ ಅಲ್ಲವೆ ನಮ್ಮ ಪರದಾಟ ಕಿರಿಕಿರಿಗಳು? “ನಿಮ್ಮ ಹಿತಸಂಪತ್ಸೌಖ್ಯಗಳ ವಿಚಾರದ ಭಾರವನ್ನು ನನಗೊಪ್ಪಿಸಿ ಬಿಡಿ; ನಾನು ಅದನ್ನು ನೋಡಿಕೊಳ್ಳುತ್ತೇನೆ” –ಎನ್ನುತ್ತಾನೆ ಸ್ವಾಮಿ. ಇದಕ್ಕಿಂತ ದೊಡ್ಡ ಭರವಸೆ ಏನಿದ್ದೀತು?

> ಯೇಽಪ್ಯನ್ಯದೇವತಾ ಭಕ್ತಾ ಯಜನ್ತೇ ಶ್ರದ್ಧಯಾಽನ್ವಿತಾಃ ।
> ತೇಽಪಿ ಮಾಮೇವ ಕೌನ್ತೇಯ ಯಜನ್ತ್ಯವಿಧಿಪೂರ್ವಕಮ್ ।

ದಾಸರ “ಹರಿಯ ಕರುಣದೊಳಾದ ಭಾಗ್ಯವ ಹರಿಸಮರ್ಪಣೆ ಮಾಡಿ ಬದುಕಿರೊ”, “ಅನುದಿನದಲಿ ಬಹ ಸುಖದುಃಖ ನಿನದಯ್ಯ”, “ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ” ಮೊದಲಾದ ವಾಕ್ಯಗಳದೆಲ್ಲ ಇದೇ ಭಾವ.

ಈ ಸರ್ವಸ್ವಸಮರ್ಪಣೆಯೇ ಸಂನ್ಯಾಸದ ಲಕ್ಷಣ; ತನ್ನದೆನಿಸಿದ್ದನ್ನು ನಿನ್ನದು ಎಂದು ಭಗವಂತನಿಗೊಪ್ಪಿಸುವುದು.

> ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬನ್ಧನೈಃ ॥

ಭಗವಂತನಿಗೆ ಪಕ್ಷಪಾತವಿಲ್ಲ, ಯಾರಲ್ಲೂ ದ್ವೇಷವಿಲ್ಲ, ಯಾರಲ್ಲೂ ವ್ಯಾಮೋಹವಿಲ್ಲ. ಸರ್ವಸಮನು ಭಗವಂತ. ಅವನೊಲಿಯುವುದು ಭಕ್ತಿಗೆ.

> ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥

“ಯಾರು ನನ್ನಲ್ಲಾದರೆ ನಾನು ಅವನಲ್ಲಿ”. ಭಕ್ತಿಗೂ ಅನುಗ್ರಹಕ್ಕೂ ನಡುವೆ ಅಂತರವಿಲ್ಲ. ಕನ್ನಡಿಯ ಮುಂದೆ ನಿಲ್ಲುವುದಕ್ಕೂ ಅದರಲ್ಲಿ ರೂಪ ಪ್ರತಿಫಲಿಸುವುದಕ್ಕೂ ನಡುವೆ

ಬಿಡುವಿಲ್ಲ. ಉಚ್ಛ್ವಾಸವಾದ ಕೂಡಲೆ ನಿಃಶ್ವಾಸ. ಭಕ್ತನು ದೇವರಲ್ಲಿ ಹೊಕ್ಕರೆ ದೇವರು ಭಕ್ತನೊಳಕ್ಕೆ ಹೊಗುತ್ತಾನೆ.

ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥

ಅನಾಚಾರವೋ ದುರಾಚಾರವೋ ನಡೆದಿರಬಹುದು. ಏನೋ ಕೆಟ್ಟ ಕಾರಣವಿರಬಹುದು. ಯಾವುದೋ ದುಸ್ಸಂದರ್ಭವಿರಬಹುದು. ಅದೆಂತಾದರಿದ್ದು ಕೊಳ್ಳಲಿ. ಒಮ್ಮನಸ್ಸಿನಿಂದ ಭಗವದ್ಭಕ್ತಿ ಮಾಡಿದರೆ ಸಾಕು. ಅದು ಎಲ್ಲವನ್ನೂ ಸರಿಪಡಿಸುತ್ತದೆ. ಅಂಥವನು ಸಾಧುವು.

ಭೂತಲದಿಂದ ವೈಕುಂಠಕ್ಕೆ ದೂರವೆಷ್ಟು? ಒಂದೇ ಗೇಣಂತೆ: ಅದು ದಾಸರ ಅಳತೆ. ಆ ಒಂದು ಗೇಣು ದೂರವನ್ನು ದಾಟಿಸುವುದು ಭಕ್ತಿ.

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾನ್ತಿಂ ನಿಗಚ್ಛತಿ ।
ಕೌನ್ತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥

"ಹಿಂದೆ ನಡೆದದ್ದೇನಾದರಾಗಲಿ, ಭಕ್ತಿ ಉದಯಿಸಿತೆಂದರೆ ಪಾಪದ ನಾಶ. ಆ ಕೂಡಲೆ ಅವನು ಧರ್ಮಾತ್ಮ. ಅವನಿಗೆ ಶಾಶ್ವತವಾದ ಮನಶ್ಶಾಂತಿ. ಅರ್ಜುನ, ಇದು ಪ್ರತಿಜ್ಞೆ. ನನ್ನ ಭಕ್ತನಿಗೆ ಎಂದಿಗೂ ಹಾನಿ ತಾಕದು."

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾನ್ತಿ ಪರಾಂ ಗತಿಮ್ ॥

ಇಲ್ಲಿ ಕೊಂಚ ತಕರಾರೆದ್ದೀತು. ಏನದು? ಸ್ತ್ರೀ ವೈಶ್ಯ ಶೂದ್ರರುಗಳು ಪಾಪಿ ಜಾತಿಗಳ ಕೂಡ ಎಣಿಕೆಯೆ? ಭಗವಂತ ತಾನು "ಸಮೋಽಹಮ್" ಎಂದು ಹೇಳಿಕೊಂಡು ಸ್ತ್ರೀ ವೈಶ್ಯ ಶೂದ್ರರ ಕಡೆಗೆ "ಅಪಿ" (ಕೂಡ) ಎಂದು ಎಡಗೈ ತೋರಿಸುವುದೆ? ಇದು ಪಂಕ್ತಿ ಭೇದವಲ್ಲವೆ? ಪಕ್ಷಪಾತವಲ್ಲವೆ?

ಸಮತ್ವದ ಧರ್ಮಸೂಕ್ಷ್ಮವನ್ನು ಹಿಂದೆ ವಿಚಾರ ಮಾಡಿದ್ದೇವೆ. ಅಂತರಂಗದಲ್ಲಿಯ ಸಮತೆಯು ಸಾರ್ಥಕವಾಗುವುದು ಬಹಿರಂಗದ ತಾರತಮ್ಯಾನುಷ್ಠಾನದಿಂದ. ಸಮಪ್ರೀತಿ,

ಸಂದರ್ಭವಿವೇಕ–ಇದು ಸೂತ್ರ. ಈ ದೃಷ್ಟಿಯಿಂದ ನೋಡೋಣ.

ಬ್ರಾಹ್ಮಣನಿಗೆ ಭಕ್ತಿಶ್ರದ್ಧೆಗಳು ವಂಶಗುಣವಾಗಿಯೂ ಸಮಾಜಪ್ರಭಾವವಾಗಿಯೂ ಇತರರಿಗಿಂತ ಹೆಚ್ಚಾಗಿ ಬಂದಿರುತ್ತವೆ. ದೇಹದಂಡನೆಯೂ ಚಿತ್ತೈಕಾಗ್ರತೆಯೂ ಅವನಿಗೆ ಇತರರಿಗಿಂತ ಸುಲಭ. ಆದದ್ದರಿಂದ ಅವನಿಗೆ ಭಗವತ್ಸಾನ್ನಿಧ್ಯದ ದಾರಿ ಹೆಚ್ಚು ಕಷ್ಟವಾಗಲಾರದು.

ಕ್ಷತ್ರಿಯನಿಗೂ ಹಾಗೆಯೇ. ಬ್ರಾಹ್ಮಣನದು ವಿದ್ಯಾತಪಸ್ಸಾದಂತೆ ಕ್ಷತ್ರಿಯನದು ಶಸ್ತ್ರಾಭ್ಯಾಸ ಶರೀರವ್ಯಾಯಾಮರೂಪವಾದ ತಪಸ್ಸು. ಆ ದೇಹಸಂಸ್ಕಾರ ಮನಸ್ಸಂಸ್ಕಾರಗಳಿಂದ ಭಕ್ತಿ ನಿಷ್ಠೆಗಳು ಇವನಿಗೂ ಬಹು ಕಷ್ಟವಾಗದು.

ಸ್ತ್ರೀಯೋ ಎಂದರೆ, ಆಕೆಗೆ ಪ್ರಕೃತಿರಚನೆಯಿಂದಲೇ ಕೆಲವು ದೈಹಿಕ ನ್ಯೂನತೆಗಳೂ ಮಾನಸಿಕ ಅಸಾಮರ್ಥ್ಯಗಳೂ ಬಂದಿರುತ್ತವೆ. ರಜೋಮಾಲಿನ್ಯ ಸೂತಿಕಾ ಮಾಲಿನ್ಯಾದಿಗಳು ಕಾಯಕ ತಪಸ್ಸಿಗೆ ಭಂಗ ತರುತ್ತವೆ; ಮನಸ್ಸನ್ನು ಕ್ಷೋಭೆಗೊಳಿಸುತ್ತವೆ. ಅದಕ್ಕಿಂತ ಮುಖ್ಯವಾಗಿ ಸ್ತ್ರೀಹೃದಯದಲ್ಲಿ ಪ್ರಕೃತಿಯು ಮಮತಾವಾತ್ಸಲ್ಯಗಳನ್ನು ಪುರುಷ ಹೃದಯದಲ್ಲಿರುವುದಕ್ಕಿಂತ ಹೆಚ್ಚಾಗಿ ತುಂಬಿರುತ್ತದೆ. ಜಗದಭಿವೃದ್ಧಿಗಾಗಿ ಇದು ಅವಶ್ಯ ಯುಕ್ತಿ. ತಂದೆ ಹೇಗಾದರಿದ್ದುಕೊಳ್ಳಲಿ, ತಾಯಿ ಮಮತೆಯಿಟ್ಟಿದ್ದರಲ್ಲವೆ ಮಗುವಿಗೊಂದು ಭವಿಷ್ಯ? ಗಂಡ ಎಂಥವನಾದರಿರಲಿ, ಹೆಂಡತಿ ಪ್ರೀತಿನಿಷ್ಠೆಯಿಂದಿದ್ದರಲ್ಲವೆ ಅದೊಂದು ಮನೆತನ? ಹೀಗೆ ಪ್ರಕೃತಿ ಕರ್ತವ್ಯವಾದ ಜಗದ್ರಕ್ಷಣೆಗೆ ಪ್ರಥಮ ಸಾಧನವಾದದ್ದು ಸ್ತ್ರೀಹೃದಯ. ಅದೇ ಸ್ತ್ರೀಜಾತಿಗಿರುವ ಬಲ. ಅದರೊಡಗೂಡಿಕೊಂಡಿರುತ್ತದೆ ಒಂದು ದುರ್ಬಲ: ಆ ದುರ್ಬಲ ಮನಸ್ಸಿನ ಅನೇಕಾಗ್ರತೆ. ತೆಂಗಿನ ಸೊಸಿಯ ತಲೆ ಏಕಾಗ್ರ. ಮಾವಿನ ಮರವು ಕೊಂಬುಗಳ ಕಾರಣದಿಂದ ಬಹ್ವಗ್ರ. ಸ್ತ್ರೀಗೆ ಗಂಡನೂ ಬೇಕು, ಮಕ್ಕಳೂ ಬೇಕು, ದೇವರೂ ಬೇಕು. ಯಾರನ್ನೂ ಬಿಡಲಾರಳು ಆಕೆ. ಆಕೆಗೆ ದೇವರು ಬೇಕಾದದ್ದು ಗಂಡ ಮಕ್ಕಳಿಗೋಸ್ಕರವಾಗಿ. ಹೀಗೆ ಸ್ತ್ರೀಮನಸ್ಸಿಗೆ ಏಕಾಗ್ರಭಕ್ತಿಯು ಗಂಡಸಿಗಿಂತ ಹೆಚ್ಚು ದುರ್ಬಲ. ಹಾಗಿದ್ದರೂ ಆಕೆ ಕ್ಷಣ ಮಾತ್ರವಾದರೂ ಭಕ್ತಿ ಮಾಡಿದ್ದಾದರೆ ಅದರಿಂದ ಇತರರಿಗೆ ಆಗುವ ಪ್ರಯೋಜನ ಆಕೆಗೂ ಆಗುತ್ತದೆ. ಇದು “ಅಪಿ” (ಕೂಡ) ಎಂಬುದರ ಧ್ವನಿತಾರ್ಥ. ಹೆಚ್ಚು ತಪಸ್ಸು ನಿಷ್ಠೆಗಳು ಸಾಧ್ಯವಿಲ್ಲದಿರುವವರಿಗೂ ಸಹ ದಾರಿಯುಂಟು.

ವೈಶ್ಯವೃತ್ತಿಯೂ ಮನಸ್ಸಿಗೆ ಏಕಾಗ್ರತೆಯನ್ನು ದುರ್ಲಭವಾಗಿಸುತ್ತದೆ. ವೈಶ್ಯನು ನೂರಾರು ಮಂದಿಯೊಡನೆ ವ್ಯವಹಾರವಿರಿಸಿಕೊಳ್ಳಬೇಕಾದವನು, ಅದರಿಂದ ಲಾಭಗಳಿಸಬೇಕಾದವನು. ವ್ಯಾಪಾರದ ಲಾಭನಷ್ಟಗಳ ಚಿಂತೆ ಅವನ ಮನಸ್ಸನ್ನು ಇಬ್ಭಾಗ ಮಾಡುತ್ತದೆ. ಅವನ ಲೋಕಸಂಪರ್ಕಗಳೂ ತೊಡಕಾದವು. ಅವನು ತನ್ನ ಭಕ್ತಿಯಲ್ಲಿ ಲೋಕಕ್ಕೆಂದು ಪಾಲನ್ನು ಕೊಡಬೇಕಾಗುತ್ತದೆ. ಅಷ್ಟು ಕಷ್ಟದ ಸಂದರ್ಭ ಅವನದು. ಅದು ಹಾಗಿದ್ದಾಗ್ಲೂ ಅವನೊಂದು ಕ್ಷಣವಾದರೂ ಏಕಚಿತ್ತದಿಂದ ಭಗವಂತನನ್ನು ಆಶ್ರಯಿಸಿದನೆಂದರೆ ಭಗವದನುಗ್ರಹ ಅವನಿಗೂ ಸಿದ್ಧವಾಗಿರುತ್ತದೆ. ಇದೇ “ಅಪಿ” (ಕೂಡ) ಎಂಬುದರ ಧ್ವನಿಭಾವ.

ಇನ್ನು ಶೂದ್ರಜಾತಿಯ ವಿಷಯದಲ್ಲಿ ಹೆಚ್ಚು ವಿವರಣೆ ಅವಶ್ಯವೇ ಇರದು. ಅವನು– ಶೂದ್ರನೆನಿಸಿಕೊಂಡವನು–ವಿದ್ಯಾಗಂಧವಿಲ್ಲದವನು; ಅದಕ್ಕಿಂತ ಹೆಚ್ಚಾಗಿ ಸುಸಂಸ್ಕೃತ ಸಂಪರ್ಕವಿಲ್ಲದವನು ಮತ್ತು ಯಾವ ಉತ್ತರಬಾಧ್ಯತೆಯೂ (ಜವಾಬ್ದಾರಿಯೂ) ಇಲ್ಲದೆ ಹೇಳಿದಷ್ಟನ್ನು ಮಾಡಿಕೊಂಡಿರುವವನು. ಸರ್ವದಾ ಅನ್ಯಮನುಷ್ಯ ವಿಧೇಯನಾಗಿರುವವನಿಗೆ ಭಗವದುಪಾಸನೆ ಮಾಡಲು ವಿರಾಮವೆಲ್ಲಿ, ಮನಶ್ಶಾಂತಿಯೆಲ್ಲಿ? ಆದರೂ ತನ್ನ ಕರ್ತವ್ಯಗಳ ಒತ್ತಾಯದ ನಡುವೆ ಅವನು ಕ್ಷಣಮಾತ್ರವಾದರೂ ಮನಸ್ಸಿಗೆ ಬಿಡುವು ಮಾಡಿಕೊಂಡು ದೇವರನ್ನು ಮೊರೆಹೊಕ್ಕರೆ ಅವನಿಗೆ ಭಗವದನುಗ್ರಹ ಸಿದ್ಧವಾಗಿರುತ್ತದೆ. ಇಲ್ಲಿಯೂ “ತೇಽಪಿ” (ಅವರು ಕೂಡ) ಎಂಬುದರ ಭಾವವು ಶೂದ್ರನು ನಿಕೃಷ್ಟವೆಂದು ಕಡೆಗಣಿಸುವುದಲ್ಲ; ಅವನು ಶ್ರಮಜೀವಿಯೆಂಬ ಕನಿಕರ.

ಯಾರು ಸರ್ವದಾ ಭಗವದ್ ಚಿಂತನೆಯಲ್ಲಿಯೇ ನಿರತರಾಗಿರುತ್ತಾರೋ ಅವರ ಯೋಗಕ್ಷೇಮಗಳ ಜವಾಬ್ದಾರಿಯನ್ನು ತಾನು ವಹಿಸಿಕೊಂಡಿರುವೆನೆಂದು ಸ್ವಾಮಿ ಉಪದೇಶ ಮಾಡಿದ್ದಾನೆ. ಆರಾಧನವಿಧಾನ ಯಾವುದಾದರೂ ಆಗಲಿ, ಆರಾಧ್ಯ ದೇವತೆ ಯಾರಾದರೂ ಆಗಲಿ, ಶ್ರದ್ಧೆಯಿಂದ ಮಾಡಿದ ಎಲ್ಲ ಪೂಜೆಯೂ ಜಗದೇಕಸ್ವಾಮಿಯಾದ ಭಗವಂತನನ್ನೇ ಸೇರುತ್ತದೆ. ಭಗವದ್ಭಕ್ತಿ ಎಲ್ಲರಿಗೂ ಸಾಧ್ಯ, ಎಲ್ಲರಿಗೂ ಶ್ರೇಯಸ್ಕರ. ಈ ಉಪದೇಶವು, ಪಂಡಿತರಿಗೂ ಪುಷ್ಟರಿಗೂ ಬಲಿಷ್ಠರಿಗೂ ಮಾತ್ರವಲ್ಲ; ಅದು ವಿದ್ಯಾರಹಿತರಿಗೂ ಲೋಕಾಯಾಸಿಗಳಿಗೂ ಎಲ್ಲ ಸಾಮಾನ್ಯ ಜನವರ್ಗಗಳಿಗೂ ಯುಕ್ತವಾದದ್ದು. ಭಗವಂತನು ಸರ್ವಸುಲಭನು, ನಮಗೆ ಇದು ಜೀವನಸೂತ್ರ:

> ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
> ಮಾಮೇವೈಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ ॥
> ಮನವನೆನ್ನೊಳು ನಿಲಿಸು, ಭಕ್ತನಾಗೆನಗೆ ನೀನೆನಗೆ ಸಲ್ಲಿಸೆಲ್ಲ ಪೂಜೆಗಳ, ನಮಿಸೆನಗೆ ।
> ಅನವರತಮಂತೆನ್ನೊಳೆಂದಿರಲ್ ನಿನ್ನಾತ್ಮವನುಭವಿಪ್ಪಯ್ ಮತ್ಪರತೆಯಿನೆನ್ನನೆ ನೀಂ ॥

"ಅರ್ಜುನ, ನಿನ್ನ ಹೊರಕಣ್ಣಿಗೆ ಈಗ ಜಗತ್ತೊಂದೇ ಕಾಣಿಸುತ್ತಿದೆ. ಅದರ ಸಂದರ್ಭ ನಿನ್ನನ್ನು ಪೀಡಿಸುತ್ತಿದೆ. ಒಳಕಣ್ಣಿಂದ ನೋಡು. ಆಗ ಜಗತ್ತಿನ ಹಿಂದುಗಡೆ, ಅದಕ್ಕೆ ಆಶ್ರಯವಾಗಿ, ಅನಂತ ಚೈತನ್ಯವಿರುವುದು ನಿನಗೆ ಗೋಚರವಾಗುತ್ತದೆ. ಆ ಪರ ವಸ್ತುವನ್ನು ಶರಣುಹೊಂದು. ಈ ಘಳಿಗೆಗೆ ಅದು ದೂರವೆನ್ನಿಸಬಹುದು. ನೀನು ಅದರ ಕಡೆಗೆ ಮುಖ ಮಾಡಿ, ಅದನ್ನೇ ನಂಬಿ, ಅದಕ್ಕೆ ಕೈಮುಗಿದು, ಅದರ ದಾರಿಯಲ್ಲಿ ನಡೆ. ಬೇಗ ಅದರ ಸನ್ನಿಧಾನವನ್ನು ಸೇರುವೆ". ಭಗವದಭಿಮುಖವಾದ ಜೀವನವೇ ಧರ್ಮ ಜೀವನ. ಅದೇ ಧನ್ಯಜೀವನ. ಇದು ಗೀತೆಯ ಸಾರ.

> ಸ್ವಾನಂದಾಮೃತ ಭೋಜನ ।
> ಕಾನನಮೊಂದೆಂತು ಸಾಲ್ದುಮೆಂದು ಬ್ರಹ್ಮನ್ ॥
> ನಾನಾಮುಖಿತ್ವಮಂ ಸಂ- ।
> ಧಾನಿಸಲಾಯ್ತೆಲ್ಲ ವಿಶ್ವಮಗಣಿತರೂಪಂ ॥

ಸಂಗ್ರಹ

> ಪೂರ್ಣದೊಳಿಹುವಂಶಂಗಳ್ ।
> ಪೂರ್ಣಮದೆಂತಿರ್ಕುಮಂಶಮಿತಿಯೊಳನಂತಂ ॥
> ಅರ್ಣವದೊಳಿಹುವು ಬಿಂದುಗ- ।
> ಳರ್ಣವಮೆಂತೊಂದು ಬಿಂದುಮಿತಿಯೊಳಗಿರ್ಕುಂ ॥ ೧ ॥

> ಅಣುವಿಹುವೆನಿತೊ ಮಹತ್ತಿನೊ- ।
> ಳಣುವೊಳಗೆಂತಡಗಲಪ್ಪುದು ಮಹದ್ಭೂತಂ ॥
> ತೃಣ ಬೆಳೆವುದು ಭೂತಲದೊಳ್ ।
> ತೃಣದೊಳಗವಿತಿಹುದೆ ಭೂಮಿಗೋಲಮಶೇಷಂ ॥ ೨ ॥

ಬಹುವಿಧವಸ್ತುವಿಕಾರಂ ।
ನಿಹಿತಂಗಳ್ ಬ್ರಹ್ಮಕೋಶದೊಳ್ ಪ್ರಕೃತಿಕೃತಂ ॥
ತುಹಿನ ಹಿಮ ಫೇನ ಬುದ್ಬುದ- ।
ಮಿಹುವಂಬುಧಿಯೊಳದು ಮಿಥ್ಯೆಯಚಿರಮಸಾರಂ ॥ ೩ ॥

ಜಗಮಿರ್ಕುಂ ಬ್ರಹ್ಮದೊಳಾ ।
ಜಗದೊಳಗೆಂತಡಗಲಹುದಖಂಡಂ ಬ್ರಹ್ಮಂ ॥
ಜಗದದ್ರಿಯನೇರ್ವಂ ತ- ।
ನ್ನಗಶಿಖರಂ ಬ್ರಹ್ಮಪಾದಮೆಂದಿರೆ ಧನ್ಯಂ ॥ ೪ ॥

ಸ್ಥಿರಚರಲೋಕಂಗಳ್ಗೀ- ।
ಶ್ವರನಾಶ್ರಯನೆಂಬುದಂ ತದಸ್ಪೃಷ್ಟತೆಯಂ ॥
ಶರಣಾಗತವಾತ್ಸಲ್ಯಮ- ।
ನೊರೆದಂ ಹರಿ ನರನಿಗದುವೆ ನವಮಾಧ್ಯಾಯಂ ॥ ೫ ॥

ಮನುಷ್ಯಸ್ವಭಾವಜ್ಞನಾತಂ ಮನೋಜ್ಞಂ ।
ಸದಾ ಜೀವಸಾಹಾಯ್ಯಶೀಲಂ ಸಲೀಲಂ ॥
ಜನೌಚಿತ್ಯಭೇದಾನುಸಾರೋಪಕಾರಂ ।
ನರಾದರ್ಶಭಾವಂ ಪರಂ ಕೃಷ್ಣದೈವಂ ॥

ಅಥ ವಿಭೂತಿಯೋಗೋ ನಾಮ ದಶಮೋಽಧ್ಯಾಯಃ

ಶ್ರೀಭಗವಾನುವಾಚ-

ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರೀಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ

॥ ೧ ॥

ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ

॥ ೨ ॥

ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್ ।
ಅಸಂಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ

॥ ೩ ॥

ಬುದ್ಧಿರ್ಜ್ಞಾನಮಸಂಮೋಹಃ ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ

॥ ೪ ॥

ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ

॥ ೫ ॥

ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾಃ

॥ ೬ ॥

ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ

॥ ೭ ॥

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾಃ ಭಾವಸಮನ್ವಿತಾಃ

॥ ೮ ॥

ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ

॥ ೯ ॥

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ

॥ ೧೦ ॥

ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ

॥ ೧೧ ॥

ಅರ್ಜುನ ಉವಾಚ-

ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭೂಮ್

॥ ೧೨ ॥

ಅಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ

॥ ೧೩ ॥

ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ।
ನ ಹಿ ತೇ ಭಗವನ್ ವ್ಯಕ್ತಿಂ ವಿದುರ್ದೇವಾ ನ ದಾನವಾಃ

॥ ೧೪ ॥

ಸ್ವಯಮೇವಾಽಽತ್ಮನಾಽಽತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನ ಭೂತೇಶ ದೇವದೇವ ಜಗತ್ಪತೇ

॥ ೧೫ ॥

ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ

॥ ೧೬ ॥

ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।
ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ

॥ ೧೭ ॥

ವಿಸ್ತರೇಣಾಽಽತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತ ಮೇಽಮೃತಮ್

॥ ೧೮ ॥

ಶ್ರೀಭಗವಾನುವಾಚ-

ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ

॥ ೧೯ ॥

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ

॥ ೨೦ ॥

ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ

॥ ೨೧ ॥

ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ

॥ ೨೨ ॥

ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಃ ಶಿಖರಿಣಾಮಹಮ್

॥ ೨೩ ॥

ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ

॥ ೨೪ ॥

ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ।
ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ

॥ ೨೫ ॥

ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾ ಚ ನಾರದಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ

॥ ೨೬ ॥

ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಮ್ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್

॥ ೨೭ ॥

ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ

॥ ೨೮ ॥

ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಮ್ ।
ಪಿತೄಣಾಮರ್ಯಮಾ ಚಾಸ್ಮಿ ಯಮಃ ಸಂಯಮತಾಮಹಮ್

॥ ೨೯ ॥

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಮ್

॥ ೩೦ ॥

ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಮ್ ।
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ

॥ ೩೧ ॥

ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್

॥ ೩೨ ॥

ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ ಧಾತಾಽಹಂ ವಿಶ್ವತೋಮುಖಃ

॥ ೩೩ ॥

ಮೃತ್ಯುಃ ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಮ್ ।
ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ

॥ ೩೪ ॥

ಬೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಮ್ ।
ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಂ ಕುಸುಮಾಕರಃ

॥ ೩೫ ॥

ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ।
ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಮ್

॥ ೩೬ ॥

ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ

॥ ೩೭ ॥

ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಮ್ ।
ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಮ್

॥ ೩೮ ॥

ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ ಸ್ಯಾನ್ಮಯಾ ಭೂತಂ ಚರಾಚರಮ್

॥ ೩೯ ॥

ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ।
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ

॥ ೪೦ ॥

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾಗಚ್ಛ ತ್ವಂ ಮಮ ತೇಜೋಽಂಶಸಂಭವಮ್

॥ ೪೧ ॥

ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನ ಮೇಕಾಂಶೇನ ಸ್ಥಿತೋ ಜಗತ್

॥ ೪೨ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ವಿಭೂತಿಯೋಗೋ ನಾಮ ದಶಮೋಽಧ್ಯಾಯಃ

ಸೂಚನೆ

ನಿಜಮಹಿಮೆಯನೀಶಂ ತಾ- ।
ನಜನವ್ಯಯನಪ್ರಮೇಯನವಿಲಿಪ್ತಂ ಮೇಣ್ ॥
ತ್ರಿಜಗದ್ವ್ಯಾಪ್ತಂ ಶಕ್ತಂ ।
ಭಜನೀಯಂ ಕಾಮ್ಯನೆಂಬುದಂ ಬಣ್ಣಿಸುವಂ ॥

ಸಾರಾಂಶ

ನಮಗಿರುವ ವಿವೇಕಸ್ವಾತಂತ್ರ್ಯದ ಸದುಪಯೋಗವು ಭಗವಂತನ ಸ್ವರೂಪದ, ಅಸಂಗಿತ್ವದ, ಸರ್ವಶಕ್ತಿಮತ್ತ್ವದ ಅರಿವನ್ನು ಸಂಪಾದಿಸುವುದರಲ್ಲಿರುತ್ತದೆ. ಇದಕ್ಕಾಗಿ ಕೆಲವು ಮಾರ್ಗಜ್ಯೋತಿಗಳನ್ನೂ ಧ್ವಜತೋರಣಗಳನ್ನೂ ನಿರ್ದೇಶಿಸಿದ್ದಾನೆ ಭಗವಂತ. ಲೋಕದಲ್ಲಿ ಉತ್ಕೃಷ್ಟವಾದದ್ದೇನೇನುಂಟೋ ಅದನ್ನೆಲ್ಲ ಭಗವತ್ಸಂಕೇತವೆಂದು ತಿಳಿದು ಆ ಮೂಲಕ ಉಪಾಸನೆ ಮಾಡುವುದರಿಂದ ಭಗವದನುಗ್ರಹಸಂಪಾದನೆಯು ಶಕ್ಯವಾಗುತ್ತದೆ.

ಪ್ರಕರಣ ೧೧

ಅಧ್ಯಾಯ ೧೦ - ವಿಭೂತಿಯೋಗವೆಂಬ ಈಶ್ವರವೈಭವಯೋಗ

ಪೂರ್ವಾಧ್ಯಾಗಳಲ್ಲಿ

1. ಸರ್ವಜಗನ್ಮೂಲವಾದ ಬ್ರಹ್ಮಚೈತನ್ಯ ಅಥವಾ ಈಶ್ವರ.
2. ಈಶ್ವರನ ಅಖಿಲಾಶ್ರಯತ್ವ ಅಂತರ್ಯಾಮಿತ್ವಗಳು.
3. ಜೀವದ ಜಗದ್ಭೋಗನಿಯುಕ್ತತ್ವ.
4. ಜೀವಕ್ಕೆ ಈಶ್ವರದರ್ಶನವಾಗದಂತೆ ಪ್ರತಿಬಂಧಕವಾಗಿರುವ ಪ್ರಕೃತಿಮಾಯೆ

ಈ ಮುಖ್ಯವಿಷಯಗಳನ್ನು ಉಪವಿಷಯಗಳೊಡನೆ ಸಾಧಾರಣ ಬಾಹ್ಯರೇಖಾರೂಪದಲ್ಲಿ ನೋಡಿದ್ದಾಯಿತು. ಈಗ ಪರಮೇಶ್ವರನ ಮಹಿಮಾವಿಶೇಷಗಳನ್ನು ನೋಡುವ ಅವಕಾಶ ದೊರೆಯುವುದಾಗಿದೆ.

ಈ ಅಧ್ಯಾಯದ ಮುಖ್ಯ ಸಂಗತಿಗಳು ಹೀಗೆ:

1. ಭಗವಂತನ ಅನಾದಿತ್ವ ಅಸಂಗಿತ್ವಗಳು.
2. ಪ್ರಕೃತಿಯ ದ್ವಂದ್ವತಂತ್ರ.
3. ಭಕ್ತಿಗೆ ಪ್ರತಿಫಲವಾಗಿ ಬುದ್ಧಿಯೋಗ.

4. ಭಗವತ್ಸಾನ್ನಿಧ್ಯಾನ್ವೇಷಿಗೆ ಮಾರ್ಗಜ್ಯೋತಿಗಳು.

ಪೂರ್ವಾಧ್ಯಾಯದ ಒಂದು ಕ್ಲಿಷ್ಟಸಂಗತಿಯನ್ನು ಇಲ್ಲಿ ನೆನಪಿಗೆ ತಂದುಕೊಳ್ಳೋಣ. ಜಗದ್ದೃಷ್ಟಿಯಿಂದ ಈಶ್ವರಭಾವಗಳು ಮೂರು ವಿಧವಾಗಿವೆ:

1. ಈಶ್ವರನು ಜಗದಂತರ್ಯಾಮಿ:

    "ಸರ್ವಭೂತಾತ್ಮಭೂತಾತ್ಮಾ" ॥ (೫-೭)

2. ಆದರೂ ಈಶ್ವರನು ಜಗದ್ವಿಕೃತನಲ್ಲ:

    "ನ ಚ ಮತ್‌ಸ್ಥಾನಿ ಭೂತಾನಿ" (೯-೫)

3. ಈಶ್ವರನು ಸರ್ವಾಶ್ರಯನಾದರೂ ಸರ್ವನಿಸ್ಸಂಗನು:

    "ನ ತ್ವಹಂ ತೇಷು–ತೇ ಮಯಿ" ॥ (೭-೧೨)

ಜಗತ್ತು ಜೀವಭೂಮಿ. ಈ ಜೀವಲೋಕದ ಇರುವಿಕೆಗೂ ಮಾಡುವಿಕೆಗೂ ಆಧಾರವಾಗಿರುವುದು ಬ್ರಹ್ಮಚೈತನ್ಯ. ಹಾಗಿದ್ದರೂ ಜೀವಚೇಷ್ಟೆಗಳೂ ಬ್ರಹ್ಮಕ್ಕಂಟಿದುವಲ್ಲ. ಈ ಚೇಷ್ಟೆಗಳ ಬಾಧ್ಯತೆ (ಜವಾಬ್ದಾರಿ) ಪೂರ್ತಿಯಾಗಿ ಜೀವಗಳದು.

ಬ್ರಹ್ಮಚೈತನ್ಯ ಒಂದು ಬ್ಯಾಂಕಿನಂತೆ. ಅದು ಹಣವನ್ನು ಸಾಲ ಕೊಡುತ್ತದೆ. ಜೀವವು ಬ್ಯಾಂಕಿನ ಗಿರಾಕಿಯಂತೆ. ಗಿರಾಕಿಯಾದವನು ಸಾಲತೆಗೆದ ಹಣವನ್ನು ಚೆನ್ನಾಗಿ ಉಪಯೋಗಿಸಿ ಲಾಭಸಂಪಾದಿಸಿಕೊಳ್ಳುತ್ತಾನೋ, ಇಲ್ಲವೆ ಪೋಲು ಮಾಡಿ ದಿವಾಳಿಯಾಗಿ ಜೈಲಿಗೆ ಹೋಗುತ್ತಾನೋ ಅವನ ಹಣೆಯ ಬರಹ. ಗಿರಾಕಿಯ ವಿವೇಕ ಅವಿವೇಕಗಳ ಫಲಾಫಲಗಳು ಬ್ಯಾಂಕಿಗೆ ತಗಲುವುದಿಲ್ಲ. ಎಂದರೆ ಜೀವಕ್ಕೆ ಸ್ವವಿಷಯದಲ್ಲಿ ಸ್ವಂತಕ್ಕೇ ಜವಾಬ್ದಾರಿಯುಂಟೆಂದೂ ಈಶ್ವರನು ಅಸಂಗನೆಂದೂ ಸಿದ್ಧಾಂತ. ಜೀವ ಚೈತನ್ಯವು ಜಗದ್ವ್ಯವಹಾರನಿಯುಕ್ತವಾದ ವ್ಯಷ್ಟಿ. ವ್ಯವಹಾರನಿಯಾಮಕವಾದದ್ದು ಬ್ರಹ್ಮಚೈತನ್ಯದ ಸಮಷ್ಟ್ಯಾತ್ಮಕವಾದ ಈಶ್ವರದಶೆ. ಆದದ್ದರಿಂದ ಈಶ್ವರಸ್ವರೂಪವನ್ನೂ ಸರ್ವಶಕ್ತಿಮತ್ತ್ವವನ್ನೂ ಜೀವಿ ಅರಿತುಕೊಳ್ಳುವುದು ಅವಶ್ಯಕ. ಅದಕ್ಕಾಗಿ ಕೃಷ್ಣಸ್ವಾಮಿ ಈಗ ಆ ತಿಳಿವಳಿಕೆಯನ್ನು ಅನುಗ್ರಹ ಮಾಡುತ್ತಾನೆ:

ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥
ಭವನ್ತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥
ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ॥

"ಅರ್ಜುನ, ಸಮಸ್ತ ದೇವತೆಗಳಿಗೂ ಮಹರ್ಷಿಗಳಿಗೂ ಆದಿಯಾದವನು ನಾನು (ಈಶ್ವರ) ತಾನೆ!" (ಈಶ್ವರನಿಗೆ ಇನ್ನಾರೂ ಆದಿಯಲ್ಲ. ಅವನೇ ಸರ್ವಮೂಲ. ಅವನು ಎಂದೋ ಒಂದು ದಿನ ಒಂದು ಮುಹೂರ್ತದಲ್ಲಿ ಹುಟ್ಟಿದವನಲ್ಲ. ಯಾವಾಗಲೂ ಎಲ್ಲೆಲ್ಲೂ ಇದ್ದುಕೊಂಡಿರುವವನು).

"ಪ್ರಾಣಿಗಳಲ್ಲಿ ನಾನಾ ಮನೋಭಾವಗಳಿಗೆ ಕಾರಣಗಳೊದಗುವುದು ನನ್ನ ದೆಸೆಯಿಂದಲೇ. ಸುಖ, ದುಃಖ, ಹುಟ್ಟು, ಸಾವು, ಆಗೋಣ, ಹೋಗೋಣ, ಸೇರೋಣ, ಬೇರ್ಪಡೋಣ, ಭಯ, ಅಭಯ–ಇವೆಲ್ಲ ನನ್ನ ಪ್ರಭಾವದಿಂದ".

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ॥

"ಎಲ್ಲಕ್ಕೂ ಜನ್ಮದಾತನು ನಾನು (ಪರಮೇಶ್ವರ). ಎಲ್ಲ ನಡೆಯುವುದೂ ನನ್ನಿಂದಲೇ (ಪರಮೇಶ್ವರನಿಂದಲೇ)".

"ಸರ್ವಸ್ಯ", "ಸರ್ವಂ" ಎಂದರೆ ಅದರಲ್ಲಿ ಯಾವುದನ್ನು ನಾವು ಒಳ್ಳೆಯದೆನ್ನುತ್ತೇವೋ ಅದೂ, ಯಾವುದನ್ನೂ ಕೆಟ್ಟದ್ದೆನ್ನುತ್ತೇವೋ ಅದೂ–ಎರಡೂ ಸೇರಿರುತ್ತವೆ.

ಸೃಷ್ಟಿಯಲ್ಲಿಯೇ ದ್ವಂದ್ವ. ಸರಿತಪ್ಪುಗಳೆರಡೂ ಅದರಲ್ಲಿ ಬೆರಕೆ; ಇಷ್ಟಾನಿಷ್ಟಗಳ ಬೆರಕೆ; ಹಿತಾಹಿತಗಳ ಬೆರಕೆ; ತಥ್ಯಮಿಥ್ಯೆಗಳ ಬೆರಕೆ. ತೈತ್ತಿರಿಯೋಪನಿಷತ್ತು ಅದನ್ನೇ ಹೇಳುತ್ತದೆ.

ಸೋಽಕಾಮಯತ । ಬಹುಸ್ಯಾಂ ಪ್ರಜಾಯೇಯೇತಿ । ... ಇದಗ್ಂ ಸರ್ವಮಸೃಜತ ।
... ಸಚ್ಚತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ವಿಜ್ಞಾನಂ ಚಾವಿಜ್ಞಾನಂ ಚ ॥
ಸತ್ಯಂ ಚಾನೃತಂ ಚ ಸತ್ಯಮಭವತ್ । ಯದಿದಂ ಕಿಂ ಚ । ತತ್ಸತ್ಯಮಿತ್ಯಾಚಕ್ಷತೇ ॥

ಹಾಗಾದರೆ ನಮಗೆ ಈ ಇಕ್ಕಟ್ಟಿನಿಂದ ಬಿಡುಗಡೆ ಹೇಗೆ? ಈಶ್ವರಸಮಕ್ಷತಾ ಸ್ಮೃತಿಯಿಂದ. ಅದನ್ನೀಗ ಹೇಳುವುದಾಗುತ್ತದೆ.

> ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯನ್ತಃ ಪರಸ್ಪರಮ್ ।
> ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥
> ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
> ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥

"ಯಾರು ನನ್ನಲ್ಲಿಯೇ ಮನಸ್ಸಿಟ್ಟು, ನನ್ನಲ್ಲಿಯೇ ಪ್ರಾಣವಿರಿಸಿಕೊಂಡು, ನನ್ನ ವಿಚಾರವನ್ನೇ ಒಬ್ಬರೊಬ್ಬರಿಗೆ ಹೇಳಿಕೊಳ್ಳುತ್ತ, ನನ್ನನ್ನೇ ಯಾವಾಗಲೂ ಸ್ಮರಿಸಿ ಸ್ಮರಿಸಿ ಸಂತೋಷಿಸಿ ಆನಂದಪರವಶರಾಗುತ್ತಾರೋ ಅಂಥಾ ಸಂತತಭಕ್ತಿಯುಳ್ಳವರಿಗೆ ನಾನು ಬುದ್ಧಿಯೋಗವನ್ನು ಅನುಗ್ರಹಿಸುತ್ತೇನೆ. ಅದರಿಂದ ಅವರು ನನ್ನಲ್ಲಿಗೇ ಬರುವರು".

ಇಲ್ಲಿ ಬುದ್ಧಿಯೋಗವೆಂದು ವರ್ಣಿಸಿರುವುದು ಹಿಂದಣ ಅಧ್ಯಾಯದಲ್ಲಿ (೯-೧) "ಜ್ಞಾನಂ ವಿಜ್ಞಾನಸಹಿತಂ" ಎಂದು ಹೇಳಿರುವುದನ್ನೇ. ಅದು ಶಾಸ್ತ್ರವಾಕ್ಯ–ಸ್ವಾನುಭವಗಳ ಸಂಮೇಳನ.

ಇಲ್ಲಿ ನಾವು ಗುರುತಿಟ್ಟುಕೊಳ್ಳಬೇಕಾದ ಸೂತ್ರ ಬುದ್ಧಿಯೋಗಪ್ರಸಾದವನ್ನು ಕುರಿತದ್ದು. ಭಗವಂತನು ಯಾರಿಗೆ ತನ್ನ ಸ್ವರೂಪವನ್ನು ತಿಳಿಸಬೇಕೆಂದು ಸಂಕಲ್ಪಿಸುತ್ತಾನೋ ಅವರಿಗೆ–ಆ ಭಕ್ತರಿಗೆ–ಬುದ್ಧಿಯೋಗದ ಬಲವನ್ನು ಕೊಡುತ್ತಾನೆ, ಎಂದರೆ ಜ್ಞಾನಮಾರ್ಗವನ್ನು ತೋರಿಸುತ್ತಾನೆ. ನಮ್ಮಲ್ಲಿ ಒಂದು ಹಳೆಯ ತಕರಾರು ಉಂಟು: ಜ್ಞಾನದಿಂದ ಭಕ್ತಿಯೆ? ಭಕ್ತಿಯಿಂದ ಜ್ಞಾನವೆ? ಈ ತಕರಾರು ಬರಿಯ ಮೊಂಡಾಟವೆನಿಸುತ್ತದೆ. ವಾಸ್ತವವಾಗಿ ವಿಷಯಜ್ಞಾನಪೂರ್ಣತೆಯಿಂದ ಆ ವಿಷಯದಲ್ಲಿ ಪ್ರೀತಿ ಬೆಳೆಯುವುದೂ ಉಂಟು; ಪ್ರೀತಿ ಹೆಚ್ಚಿದಂತೆಲ್ಲ ಜ್ಞಾನಲಾಭ ಹೆಚ್ಚಾಗುವುದೂ ಉಂಟು. ಭಕ್ತಿಯಿಂದಲೇ ಜ್ಞಾನವೆಂದು ಇಟ್ಟುಕೊಳ್ಳೋಣ; ಜ್ಞಾನೋದಯವಾದ ಮೇಲೆ ಭಕ್ತಿ ಇಳಿದುಹೋಗುತ್ತದೆಯೆ, ಹೆಚ್ಚುತ್ತದೆಯೆ? ಅಥವಾ ಜ್ಞಾನದಿಂದಲೇ ಭಕ್ತಿಯಾಗಲಿ; ಭಕ್ತಿಭರದಲ್ಲಿ ಜ್ಞಾನ ಹಾರಿಹೋಗುತ್ತದೆಯೆ? ಎರಡೂ ಅತಿವಾದಗಳು. ಜ್ಞಾನಭಕ್ತಿಗಳೆರಡೂ ಸಹಚಾರಿಗಳಾಗಿರುವುದು ಸಾಧ್ಯ ಮತ್ತು ಅದೇ ಸಾಮಾನ್ಯ. ಬುದ್ಧಿಯೋಗವು ಭಕ್ತಿಗೆ ಲಭ್ಯವಾದ ಪ್ರತಿಫಲ, ಎಂದರೆ ಭಕ್ತನ ಸ್ವಪ್ರಯತ್ನ ಸಂಪಾದನೆ. ಭಕ್ತಿಯು ತ್ರಿಕರಣಪೂರ್ವಕವಾಗಿದೆ, ಪರಿಪೂರ್ಣವಾಗಿದೆ, ಪರಿಶುದ್ಧವಾಗಿದೆ–ಎಂದರೆ ಅದು ಭಗವಂತನ ಮೆಚ್ಚಿಕೆಗೆ ಯೋಗ್ಯವಾಗಿದೆ ಎಂದರ್ಥ. ಭಗವದನುಗ್ರಹ ಎಂಬುದು ಪಕ್ಷಪಾತವಲ್ಲ; ಅದು ಅರ್ಹತಾಂಗೀಕಾರ, ಅಥವಾ ಯೋಗ್ಯತಾಭಿಜ್ಞತೆ. ಅದೇ ಶಿಷ್ಟಸಂರಕ್ಷಣೆ. ಅದೇ ಭಗವಂತನ ಧರ್ಮಾಭಿಮಾನ.

ಭಕ್ತಿಯೂ ಜ್ಞಾನವೂ ವಾಸ್ತವವಾಗಿ ಎರಡು ಬೇರೆಬೇರೆ ಕ್ರಿಯೆಗಳೆನ್ನುವುದೇ ಅಸಂಗತ. ಎರಡೂ ಎರಡು ಕಣ್ಣುಗಳು ಕೂಡಿದಂತೆ ಒಂದೇ ಕೆಲಸವನ್ನು ಮಾಡುತ್ತವೆ.

ಹಿಂದಿನ ಅಧ್ಯಾಯದಲ್ಲಿ (ಶ್ಲೋ ॥ ೧೨-೧೩) ಹೇಳಿದೆವು, ಪ್ರಕೃತಿದೇವಿ ಜೀವಿಗಳಾಗಿ ಎರಡು ಒಂದಕ್ಕೊಂದು ವಿರೋಧವಾದ ಮಾರ್ಗಗಳನ್ನು ಕಲ್ಪಿಸಿದ್ದಾಳೆಂದು: ಒಂದು ದೈವೀ, ಇನ್ನೊಂದು ಅಸುರೀ. ದೈವೀಪಥವನ್ನು ಹಿಡಿದವರಿಗೆ ಸದ್ಗತಿಯುಂಟು ಎಂದು ಹೇಳಿದ ಮೇಲೆ ದೈವರಾಕ್ಷಸಗಳಿಗಿರುವ ಭೇದವನ್ನು ಕಂಡುಕೊಂಡು, ರಾಕ್ಷಸವನ್ನು ಬಿಟ್ಟು ದೈವವನ್ನೇ ಹಿಡಿದು ನಡೆಯುವಷ್ಟರ ಸ್ವಾತಂತ್ರ್ಯ ಮನುಷ್ಯನಿಗೆ ಉಂಟೆಂದು ಸಿದ್ಧವಾಗುತ್ತದೆ. ಈ ಹಿತಾಹಿತವಿವೇಕವೇ ಪುರುಷಸ್ವಾತಂತ್ರ್ಯದ ಮಸ್ತಕರತ್ನ. ಹಿಂದೆ ಆರನೆಯ ಅಧ್ಯಾಯದಲ್ಲಿ–

ಉದ್ಧರೇದಾತ್ಮನಾಽತ್ಮಾನಮ್ ॥

ಎಂಬಲ್ಲಿಯೂ ಇದೇ ತಾತ್ಪರ್ಯ. ವಿವೇಕಸ್ವಾತಂತ್ರ್ಯವೇನೋ ಪ್ರತಿಯೊಬ್ಬನಿಗೂ ಉಂಟು. ಆದರೆ ಪ್ರತಿಯೊಬ್ಬನೂ ಅದನ್ನು ಉಪಯೋಗಪಡಿಸಿಕೊಳ್ಳುತ್ತಾನೆಯೆ? ಅದನ್ನು ಮರೆತು ಕಳೆದುಕೊಳ್ಳುವವರೇ ಬಹುಮಂದಿ. ರಾಕ್ಷಸೀಮಾರ್ಗದ ಶಕ್ತಿಗಳು ಮೋಹಭ್ರಮೆಗಳನ್ನೊಡ್ಡಿ ಮನುಷ್ಯ ತನ್ನನ್ನು ತಾನು ಮರೆತುಕೊಳ್ಳುವಂತೆ ಮತ್ತುಹಿಡಿಸುತ್ತವೆ. ಆ ಮತ್ತಿನಲ್ಲಿ ಎಚ್ಚರ ತಪ್ಪುತ್ತದೆ. ಸ್ವಾತಂತ್ರ್ಯವಿದ್ದೂ ಅದು ಉಪಯೋಗಕ್ಕೆ ಬಾರದೆ ಹೋಗುತ್ತದೆ, ಅನರ್ಥವನ್ನೇ ತರುತ್ತದೆ. ಜಾಗರೂಕನಿಗೆ ಸ್ವಾತಂತ್ರ್ಯ. ಹಿತಾಹಿತ ವಿವೇಕಕ್ಕಾಗಿ ಆ ಸ್ವಾತಂತ್ರ್ಯ.

ಅರ್ಜುನನ ಮನಸ್ಸು ಈಗೀಗ ಪಕ್ವಕ್ಕೆ ಬರುತ್ತಿದೆ. ಸ್ವಾಮಿಯು

ದದಾಮಿ ಬುದ್ಧಿಯೋಗಮ್ ॥

ಎಂದನಲ್ಲವೆ? ಬುದ್ಧಿಯೋಗವೆಂದರೆ ಏನು? ಬುದ್ಧಿಯು ಅಂತರಂಗಶಕ್ತಿಗಳಲ್ಲೊಂದು. ಮನಸ್ಸು, ಸಂಕಲ್ಪ, ಜ್ಞಾಪಕ ಮೊದಲಾದ ಅಂತರಂಗಶಕ್ತಿಗಳು ಎಷ್ಟೋ ಬಹಿರಂಗವಿಷಯಗಳನ್ನು ಸಂಗ್ರಹಿಸಿಕೊಂಡು ಏನೇನನ್ನೋ ಮಾಡಬೇಕೆಂದು ಚಪಲ ಪಡುತ್ತವೆ. ಆ ನಾನಾ ವಿಷಯಗಳನ್ನು ಬುದ್ಧಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು, ಆ ಸಂಗತಿಗಳನ್ನು ಬಿಡಿಸಿ, ಬೇರ್ಪಡಿಸಿ, ಪರೀಕ್ಷೆಮಾಡಿ, ಅವುಗಳ ಬಲಾಬಲಗಳನ್ನೂ

ಗುಣಾಗುಣಗಳನ್ನೂ ತೂಕ ಮಾಡಿ, ಆ ವಿಷಯಗಳ ಪ್ರಯೋಜಕತೆಯನ್ನು ನಿಶ್ಚಯಿಸುತ್ತದೆ. ಇದೇ ಬುದ್ಧಿಯ ಕೆಲಸ.

ಬುದ್ಧಿರ್ವಿವೇಚನಾರೂಪಾ ಸಾ ಜ್ಞಾನಜನನೀ ಶ್ರುತೌ ॥

ವಸ್ತುಸ್ವರೂಪಜ್ಞಾನವನ್ನು ಸಂಪಾದಿಸುವುದು ಬುದ್ಧಿ. ಬುದ್ಧಿಯೋಗವೆಂದರೆ ಬುದ್ಧಿಯನ್ನು ಪರತತ್ತ್ವದಲ್ಲಿ ಸೇರಿಸುವ ಉಪಾಯ. ಈ ಉಪಾಯವನ್ನು ಭಗವಂತ ವರವಾಗಿ ಅನುಗ್ರಹಿಸುತ್ತಾನಂತೆ, ಆ ವರಪ್ರಸಾದವಿಲ್ಲದೆ ಪರತತ್ತ್ವ ದರ್ಶನವಿಲ್ಲ.

ಬುದ್ಧಿಯೋಗವೆಂದರೆ ಬುದ್ಧಿಯ ಸೂಕ್ಷ್ಮ ಚಮತ್ಕಾರಗಳಲ್ಲ. ಗಣಿತಪ್ರವೀಣರೂ ವಿಜ್ಞಾನಶೋಧಕರೂ ಲಾಯರುಗಳೂ ತಾರ್ಕಿಕರೂ ಎಷ್ಟೆಷ್ಟೋ ಬುದ್ಧಿಸಾಹಸಗಳನ್ನು ಮಾಡುತ್ತಾರೆ. ಬುದ್ಧಿಸಾಹಸವೇ ಅವರ ಜೀವನ. ಆದರೆ ಅದು ಬುದ್ಧಿಯೋಗವಲ್ಲ. ಸಾಮಾನ್ಯವಾಗಿ ಶಾಸ್ತ್ರಪಂಡಿತರ ಬುದ್ಧಿವ್ಯಾಪಾರವು ಭಗವಂತನಿಂದ ವರವನ್ನು ಬೇಡುವುದಿಲ್ಲ. ಅದು ಸ್ವತಂತ್ರವಾಗಿಯೇ ನಡೆಯುತ್ತದೆ. ಆದರೆ ಬುದ್ಧಿಯು ಪರವಸ್ತುವನ್ನು ಕಾಣಬೇಕೆಂದಾಗ ಅದಕ್ಕೆ ದಾರಿ ತೋರಲು ಎದುರುಗಡೆಯಿಂದಲೇ ಬೆಳಕು ಬರಬೇಕು. ಆ ದೀಪಾನುಗ್ರಹವನ್ನೇ ಇಂಗ್ಲಿಷಿನಲ್ಲಿ (Inspiration – ಇನ್‌ಸ್ಪಿರೇಷನ್) ಅಂತಃ ಸ್ಫೂರ್ತಿ, (Revelation – ರೆವೆಲೇಷನ್) ಅಪೌರುಷೇಯ ವಾಕ್ಕು, (Vision – ವಿಷನ್) ದಿವ್ಯದರ್ಶನ–ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಏವಂ ಚ, ಭಗವದ್ದರ್ಶನಲಾಭವು ಭಗವದನುಗ್ರಹದ ಹೊರತು ಇಲ್ಲ. ಉಪನಿಷತ್ತುಗಳದು ಇದೇ ಅಭಿಪ್ರಾಯ:

ಯಮೇವೈಷ ವೃಣುತೇ ತೇನ ಲಭ್ಯಃ ॥

(ಕಠ ೨-೨೩; ಮುಂಡಕ ೩-೨-೩)

ಧಾತುಃ ಪ್ರಸಾದಾನ್ಮಹಿಮಾನಮಾತ್ಮನಃ ॥ (ಕಠ ೨-೨೦)
ಧಾತುಃ ಪ್ರಸಾದಾನ್ಮಹಿಮಾನಮೀಶಮ್ ॥ (ಶ್ವೇತಾಶ್ವತರ ೩-೨೦)

ಹಾಗಾದರೆ ಈಶ್ವರಾನುಗ್ರಹಕ್ಕೆ–ಧಾತೃಪ್ರಸಾದಕ್ಕೆ–ದಾರಿ ಯಾವುದು? ಭಕ್ತಿ, ಉಪಾಸನೆ, ಶರಣಾಗತಿ.

ಈ ಕಾರಣದಿಂದ ಅರ್ಜುನ ಈಗ ಸ್ವಾಮಿಯನ್ನು ಮೊರೆಹೊಕ್ಕ.

ಅಹುಸ್ತ್ವಾಮೃಷಯಃ ಸರ್ವೇ ದೇವರ್ಷಿನಾರದಸ್ತಥಾ ॥
ನ ಹಿ ತೇ ಭಗವನ್ ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥

"ಸ್ವಾಮಿ, ನೀನೇ ಪರಬ್ರಹ್ಮ. ನೀನೇ ಪರಮಗತಿ. ಈ ಮಾತನ್ನು ನಾರದ ವ್ಯಾಸ ಮೊದಲಾದ ಮಹರ್ಷಿಗಳು ಹೇಳಿದ್ದಾರೆ. ನೀನು ಕೂಡ ಹಾಗೆ ಹೇಳಿದ್ದಿ. ನಿನ್ನನ್ನು ಪೂರ್ತಿಯಾಗಿ ಬಲ್ಲವನು ನೀನೊಬ್ಬನೇ ಹೊರತು ಬೇರೆ ಯಾರೂ ಅಲ್ಲ."

ಸ್ವಯಮೇವಾತ್ಮನಾಽಽತ್ಮಾನಂ ವೇತ್ಥ ತ್ವಂ ಪುರುಷೋತ್ತಮ ॥

"ಆದದ್ದರಿಂದ ನಿನ್ನ ಪೂರ್ಣ ಸ್ವರೂಪವನ್ನು ನಾನು ಹೇಗೆ ಕಾಣಲಾದೀತೋ ಅದನ್ನು ನೀನೇ ನನಗೆ ಕಲಿಸಬೇಕು".

ಕಥಂ ವಿದ್ಯಾಮಹಂ ಯೋಗಿನ್ ತ್ವಾಂ ಪರಿಚಿನ್ತಯನ್ ।
ಕೇಷು ಕೇಷು ಚ ಭಾವೇಷು ಚಿನ್ತ್ಯೋಽಸಿ ಭಗವನ್ಮಯಾ ॥

"ಭಗವಂತ, ನಿನ್ನನ್ನು ನಾನು ಹೇಗೆ ತಿಳಿಯಲಿ? ನಿನ್ನನ್ನು ಎಂಥವನೆಂದು ಸರ್ವದಾ ನಾನು ಧ್ಯಾನ ಮಾಡಲಿ? ನಾನು ಯಾವಯಾವ ರೂಪಚಿಹ್ನೆಗಳಿಂದ ನಿನ್ನನ್ನು ಮನಸ್ಸಿಗೆ ರೂಪಗೊಳಿಸಿಕೊಳ್ಳಲಾದೀತು?"

ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಮ್ ॥

"ಜನಾರ್ದನ, ನಿನ್ನನ್ನು ಕುರಿತ ಯೋಗವಿದ್ಯೆಯನ್ನು ನೀನೇ ವಿವರಿಸು. ಅದು ನನಗೆ ತೃಪ್ತಿಯನ್ನು ಕೊಡುತ್ತದೆ. ಅದಕ್ಕಿಂತ ಬೇರೆ ಅಮೃತವಿಲ್ಲ."

ಈ ಪ್ರಾರ್ಥನೆಗೆ ಉತ್ತರ ಹೇಳಿದ ಶ್ರೀಕೃಷ್ಣಪರಮಾತ್ಮ:

अಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮನ್ತ ಏವ ಚ ॥

"ಅರ್ಜುನ, ಎಲ್ಲ ಪ್ರಾಣಿಗಳ ಅಂತರಂಗಗಳಲ್ಲಿಯೂ ಚೈತನ್ಯರೂಪವಾಗಿರುವ ಪರಮಾತ್ಮ ನಾನು. ಎಲ್ಲ ಪ್ರಾಣಿಗಳಿಗೂ ಮೊದಲು ನಾನು, ಮಧ್ಯವೂ ನಾನು, ಕೊನೆಯೂ ನಾನು".

ಭಗವನ್ಮಹಿಮೆಯನ್ನು ಹೀಗೆ ಸಂಗ್ರಹವಾಗಿ ತಿಳಿಸಿ, ಬಳಿಕ ಆ ಮಹಿಮೆಯ ಮುಖ್ಯ ಲಿಂಗಗಳನ್ನು ತಿಳಿಸಿದ್ದಾನೆ. ಹಿಂದೆ ಏಳನೆಯ ಅಧ್ಯಾಯದಲ್ಲಿ "ರಸೋಽಹ ಮಪ್ಸು", "ಜೀವನಂ ಸರ್ವಭೂತೇಷು" ಮೊದಲಾಗಿ ತೇಜಸ್ಸು, ಬುದ್ಧಿ, ಬಲ, ಧರ್ಮಸಂಮತವಾದ ಕಾಮ–ಇಂಥಾ ಗುಣವಿಶೇಷಗಳನ್ನು ಪರಮೇಶ್ವರಮಹಿಮೆಯ ಸೂಚಕಗಳಾಗಿ ಹೇಳಿದ್ದನಲ್ಲವೆ? ಈಗ ಗುಣಕ್ಕೆ ಬದಲಾಗಿ ವಸ್ತುವಿಶೇಷಗಳನ್ನು ಭಗವಚ್ಚಿಹ್ನೆಗಳಾಗಿ ಹೇಳುತ್ತಾನೆ. ದ್ವಾದಶಾದಿತ್ಯರ ಮಧ್ಯೆ ವಿಷ್ಣು; ನಕ್ಷತ್ರಗಳ ನಡುವೆ ಚಂದ್ರ; ಇಂದ್ರಿಯಗಳಲ್ಲಿ ಮನಸ್ಸು; ಬೆಟ್ಟಗಳಲ್ಲಿ ಮೇರು; ಸೇನಾನಾಯಕರಲ್ಲಿ ಕುಮಾರಸ್ವಾಮಿ; ಯಜ್ಞಕರ್ಮಗಳಲ್ಲಿ ಜಪಕ್ರಿಯೆ; ಮರಗಳಲ್ಲಿ ಅಶ್ವತ್ಥ; ವಂಶಾಭಿವೃದ್ಧಿಕಾರರಲ್ಲಿ ಮನ್ಮಥ; ಅಕ್ಷರಮಾಲಿಕೆಯಲ್ಲಿ ಅಕಾರ; ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆ; ಸ್ತ್ರೀಯರಲ್ಲಿ ಅವರಿಗೆ ಸಹಜವಾದ ಶ್ಲಾಘನೋತ್ಸಾಹ, ಕಾಂತಿ, ಸರಸವಾಣಿ–ಇವು; ಸ್ಪರ್ಧೆಗಾರರ ಪಂಥ; ಜಯಾಕಾಂಕ್ಷಿಗಳ ನೀತಿಯುಕ್ತಿ; ರಹಸ್ಯವಂತರ ಮೌನ; ಜ್ಞಾನವಂತರ ಜ್ಞಾನ–ಹೀಗೆ ನಾನಾ ಮನುಷ್ಯ ವರ್ಗಗಳಲ್ಲಿ ಯಾವುದು ಯಾವುದು ಪರಮೋತ್ಕೃಷ್ಟವೋ ಅದೆಲ್ಲ ತಾನೇ-ಪರಮಾತ್ಮ ಮಹಿಮೆಯ ಅಂಶವೇ–ಎಂದು ಹೆಗ್ಗುರುತು ಕೊಟ್ಟು, ಅರ್ಜುನನಿಗೆ ಈಶ್ವರ ಸಮಕ್ಷತಾನುಭವವನ್ನು ಸುಲಭ ಮಾಡಿಸಿದ.

ಇಲ್ಲಿ ನಾವು ಗಮನಕ್ಕೆ ತಂದುಕೊಳ್ಳಬೇಕಾದ ವಿಶೇಷಸಂಗತಿ ಒಂದಿದೆ. ಸೃಷ್ಟಿಯಲ್ಲಿ ದೈವ, ರಾಕ್ಷಸ ಎರಡೂ ಇದೆಯೆಂದು ಸ್ವಾಮಿ ಹೇಳಿದನಲ್ಲವೆ? ಪ್ರಕೃತಿಯಲ್ಲಿಯೂ ಹಾಗೆಯೇ ಎರಡೂ ಮಾರ್ಗಗಳೆಂದು ತಿಳಿಸಿದನಲ್ಲವೆ? ಆದರೆ ತನ್ನ ವಿಭೂತಿಗಳನ್ನು ನಿರ್ದೇಶಿಸುವಲ್ಲಿ ಸ್ವಾಮಿ ಅಸುರ ರಾಕ್ಷಸಾಂಶಗಳನ್ನು ಜ್ಞಾಪಕಕ್ಕೆ ತಾರದೆ ಶುದ್ಧ ದೈವಾಂಶಗಳನ್ನು ಮಾತ್ರವೇ ತೋರಿಸಿದ್ದಾನೆ. ಇದರ ಮರ್ಮವನ್ನು ನಾವು ಮನಸ್ಸಿನಲ್ಲಿಡಬೇಕು.

ನ ತ್ವಹಂ ತೇಷು–ತೇ ಮಯಿ ॥

“ನಾನು ಅವುಗಳಲ್ಲಿಲ್ಲ; ಅವು ನನ್ನೊಳಗಿವೆ”.

ದೇಹದಲ್ಲಿ ರಕ್ತಮಾಂಸಗಳಿವೆ; ಮಲಮೂತ್ರಗಳೂ ಇವೆ. ಆದರೆ ಜೀವಚೈತನ್ಯದ ಅಧಿಷ್ಠಾನ ರಕ್ತಮಾಂಸಗಳಲ್ಲಿರುತ್ತದೆ. ಮಲಮೂತ್ರಗಳು ಚೈತನ್ಯಾಶ್ರಯಗಳಲ್ಲ, ವಿಸರ್ಜನೀಯಗಳು. ಹಾಗೆಯೇ ಭಗವಚ್ಛರೀರದಲ್ಲಿ ಶ್ರೇಷ್ಠಾಂಶಗಳೂ ಇವೆ, ನಿಕೃಷ್ಟಾಂಶಗಳೂ ಇವೆ. ಭಗವನ್ಮಹಿಮೆ ಇರುವುದು ಶ್ರೇಷ್ಠಾಂಶಗಳಲ್ಲ, ನಿಕೃಷ್ಟಾಂಶಗಳಲ್ಲಲ್ಲ. ನಿಕೃಷ್ಟಾಂಶಗಳು ಕ್ವಚಿತ್ಕಾಲಮಾತ್ರದವು, ಶಾಶ್ವತಗಳಲ್ಲ. ಆದದ್ದರಿಂದ ಭಗವದ್ಗುಣಾನುಭವ ಬೇಕೆನ್ನುವವರು ಪವಿತ್ರವೂ ಮಂಗಳವೂ ಆದ ಜಗದಂಶಗಳನ್ನು ಉಪಾಸನೆಮಾಡಬೇಕು. ಭಗವತ್ಪ್ರಕಾಶ ಯಾವ ಜಗದ್ವಸ್ತುವಿನ ಮೇಲೆ ಬಿದ್ದಿದೆಯೋ ಅದು ಶ್ರೇಷ್ಠ; ಭಗವತ್ಪ್ರಕಾಶಕ್ಕೆ ಸಿಕ್ಕದೆ ಇರುವ ಜಗದ್ವಸ್ತುವು ಶ್ರೇಷ್ಠವಲ್ಲ, ಶ್ರೇಷ್ಠವಾದದ್ದರ ಮೈನೆರಳು–ಅದು ಉಪಾಸ್ಯವಲ್ಲ. ಹೀಗೆ ಲೋಕದ ಗುಣದೋಷಮಿಶ್ರಣದಲ್ಲಿ ದೈವಿಕಭಾಗವನ್ನು ಕಂಡುಕೊಳ್ಳುವುದು ಸುಲಭವಾಗಬೇಕೆಂದು ಸ್ವಾಮಿ ಪ್ರಕೃತಿಯ ಉತ್ತಮಾಂಶಗಳನ್ನೇ ತನ್ನ ಹೆಗ್ಗುರುತಾಗಿ ಹೇಳಿದ್ದಾನೆ.

> ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
> ನ ತದಸ್ತಿ ವಿನಾ ಯತ್ ಸ್ಯಾತ್ ಮಯಾ ಭೂತಂ ಚರಾಚರಮ್ ॥
> ನಾನ್ತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ॥

“ಅರ್ಜುನ, ಸಮಸ್ತ ಜೀವಕೋಟಿಗೂ ಬೀಜಪ್ರಾಯನಾದವನು ನಾನು. ನನ್ನ ದಿವ್ಯ ಲೀಲಾವಿಭೂತಿಗಳಿಗೆ ಮುಗಿವಿಲ್ಲ. ಕೆಲವನ್ನು ನಿನಗೆ ಉದಾಹರಣೆ ಕೊಟ್ಟಿದ್ದೇನೆ”.

> ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
> ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥
> ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್ ॥

“ಲೋಕದಲ್ಲಿ ಎಲ್ಲೆಲ್ಲಿ ಮಹತ್ತ್ವವುಂಟೋ, ಎಲ್ಲೆಲ್ಲಿ ಸತ್ತ್ವಾತಿಶಯವುಂಟೋ, ಎಲ್ಲೆಲ್ಲಿ ಸೌಭಾಗ್ಯ ಸಂತೋಷಗಳುಂಟೋ, ಎಲ್ಲೆಲ್ಲಿ ವೀರ್ಯಶೌರ್ಯಗಳುಂಟೋ ಆ ಎಲ್ಲವೂ ನನ್ನ ತೇಜಸ್ಸಿನ ಒಂದು ಕಿರಣದ ಕಾರ್ಯವೆಂದು–ಅದೆಲ್ಲ ನನ್ನ ಗುರುತೆಂದು ತಿಳಿದುಕೋ. ನಾನು ಈ ಸಮಸ್ತ ಜಗತ್ತನ್ನೂ ನನ್ನ ಒಂದು ಕ್ಷಣಮಾತ್ರದಿಂದ ಧರಿಸಿ ಹಿಡಿದಿದ್ದೇನೆ”.

ಹೀಗೆ ಶ್ರೀಕೃಷ್ಣಭಗವಂತ ಅರ್ಜುನನ ವ್ಯಾಜದಿಂದ ಸಮಸ್ತ ಮನುಷ್ಯಲೋಕಕ್ಕೂ ದೈವಾಸುರ ಲಕ್ಷಣವಿವೇಕವನ್ನೂ ದೈವಮಾರ್ಗಧ್ವಜತೋರಣಗಳನ್ನೂ ತಿಳಿಸಿದ್ದಾನೆ.

ಇಂದ್ರಿಯದ್ವಾರತಶ್ಚಿತ್ತೇ ಬಹಿರ್ದ್ರಾವತಿ ಸತ್ಯಪಿ ॥
ಈಶದೃಷ್ಟಿ ವಿಧಾನಾಯ ವಿಭೂತೀರ್ಧಶಮೇಽಬ್ರವೀತ್ ॥

ಮನಖಗಮ್ ಇಂದ್ರಿಯವಾತಾ- ।
ಯನಗಳಿನತ್ತಿತ್ತ ಪಾರ್ವುದರಿಯದೆ ತನ್ನಾ।
ಮನೆ ಸಿರಿಯನೆಂದು ಭಗವ- ।
ದ್ಧ್ವನಚಿಹ್ನಂಗಳ ನರಂಗೆ ತೋರ್ದಂ ಕೃಷ್ಣಂ ॥

–ಶ್ರೀಧರ ವ್ಯಾಖ್ಯಾವಚನ

ಸಂಗ್ರಹ

ಸ್ವವಿಭೂತಿಯ ಭಗವಂತಂ ।
ಪ್ರವಚಿಸಿದಂ ಪ್ರಕಟವಸ್ತುಗುಣಲಿಂಗಗಳಿಂ ॥
ಭುವನಂ ತನ್ನೇಕಾಂಶದಿ- ।
ನವತರಿಸಿಹುದೆನ್ನುತದುವೆ ದಶಮಾಧ್ಯಾಯಂ ॥

ಪೃಥಕ್ಪೃಥಗ್ಜನಾಂತರಂಗಸೂಕ್ಷ್ಮನಾದವೇದನಂ ।
ಸಹಾನುಭೂತಿಪೂರ್ಣನಂತು ತತ್ಸಮುದ್ಧೃತಿಕ್ಷಮಂ ॥
ಸುಹೃತ್ತಮಂ ಮಹಾತ್ಮನಾ ಹೃಷೀಕರಾಜ್ಯನಾಯಕಂ ।
ವಿರಾಜಿಕಾ ವಿಧಾಯಕಂ ಸದಾಸ್ಮದೀಯಚಿತ್ತದೋಳ್ ॥

ಅಥ ವಿಶ್ವರೂಪದರ್ಶನಯೋಗೋ ನಾಮ ಏಕಾದಶೋಽಧ್ಯಾಯಃ

ಅರ್ಜುನ ಉವಾಚ-

ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ

॥ ೧ ॥

ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಮ್

॥ ೨ ॥

ಏವಮೇತದ್ಯಥಾಽಽತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ

॥ ೩ ॥

ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಮವ್ಯಯಮ್

॥ ೪ ॥

ಶ್ರೀಭಗವಾನುವಾಚ-

ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ

॥ ೫ ॥

ಪಶ್ಯಾದಿತ್ಯಾನ್ವಸೂನ್ ರುದ್ರಾನಶ್ವಿನೌ ಮರುತಸ್ತಥಾ ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಶ್ಚರ್ಯಾಣಿ ಭಾರತ

॥ ೬ ॥

ಇಹೈಕಸ್ಥಂ ಜಗತ್ ಕೃತ್ಸ್ನಂ ಪಶ್ಯಾದ್ಯ ಸಚರಾಚರಮ್ ।
ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ

॥ ೭ ॥

ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್

॥ ೮ ॥

ಸಂಜಯ ಉವಾಚ-

ಏವಮುಕ್ತ್ವಾ ತತೋ ರಾಜನ್ ಮಹಾಯೋಗೇಶ್ವರೋ ಹರಿಃ ।
ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಮ್

॥ ೯ ॥

ಅನೇಕವಕ್ತ್ರನಯನಮನೇಕಾದ್ಭುತದರ್ಶನಮ್ ।
ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್

॥ ೧೦ ॥

ದಿವ್ಯಮಾಲಾಂಬರಧರಂ ದಿವ್ಯಗಂಧಾನುಲೇಪನಮ್ ।
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಮ್

॥ ೧೧ ॥

ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ

॥ ೧೨ ॥

ತತ್ರೈಕಸ್ಥಂ ಜಗತ್ ಕೃತ್ಸ್ನಂ, ಪ್ರವಿಭಕ್ತಮನೇಕಧಾ ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ

॥ ೧೩ ॥

ತತಃ ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯಃ ।
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ

॥ ೧೪ ॥

ಅರ್ಜುನ ಉವಾಚ-

ಪಶ್ಯಾಮಿ ದೇವಾಂಸ್ತವ ದೇವ ದೇಹೇ
ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಸ್ಥ–
ಮೃಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್

॥ ೧೫ ॥

ಅನೇಕಬಾಹೂದರವಕ್ತ್ರನೇತ್ರಂ
ಪಶ್ಯಾಮಿ ತ್ವಾಂ ಸರ್ವತೋಽನಂತರೂಪಮ್ ।
ನಾಂತಂ ನ ಮಧ್ಯಂ ನ ಪುನಸ್ತವಾದಿಂ
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ

॥ ೧೬ ॥

ಕಿರೀಟಿನಂ ಗದಿನಂ ಚಕ್ರಿಣಂ ಚ
ತೇಜೋರಾಶಿಂ ಸರ್ವತೋ ದೀಪ್ತಿಮಂತಮ್ ।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾ–
ದ್ದೀಪ್ತಾನಲಾರ್ಕದ್ಯುತಿಮಪ್ರಮೇಯಮ್

॥ ೧೭ ॥

ತ್ವಮಕ್ಷರಂ ಪರಮಂ ವೇದಿತವ್ಯಂ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ

॥ ೧೮ ॥

ಅನಾದಿಮಧ್ಯಾಂತಮನಂತವೀರ್ಯ–
ಮನಂತಬಾಹುಂ ಶಶಿಸೂರ್ಯನೇತ್ರಮ್ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ
ಸ್ವತೇಜಸಾ ವಿಶ್ವಮಿದಂ ತಪಂತಮ್

॥ ೧೯ ॥

ದ್ಯಾವಾಪೃಥಿವ್ಯೋರಿದಮಂತರಂ ಹಿ
ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ ।
ದೃಷ್ಟ್ವಾಽದ್ಭುತಂ ರೂಪಮುಗ್ರಂ ತವೇದಂ
ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್

॥ ೨೦ ॥

ಅಮೀ ಹಿ ತ್ವಾಂ ಸುರಸಂಘಾ ವಿಶಂತಿ
ಕೇಚಿದ್ಭೀತಾಃ ಪ್ರಾಂಜಲಯೋ ಗೃಣಂತಿ ।
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ
ಸ್ತುವಂತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ

॥ ೨೧ ॥

ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ
ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ ।
ಗಂಧರ್ವಯಕ್ಷಾಸುರಸಿದ್ಧಸಂಘಾ
ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ

॥ ೨೨ ॥

ರೂಪಂ ಮಹತ್ತೇ ಬಹುವಕ್ತ್ರನೇತ್ರಂ
ಮಹಾಬಾಹೋ ಬಹುಬಾಹೂರುಪಾದಯಮ್ ।
ಬಹೂದರಂ ಬಹುದಂಷ್ಟ್ರಾಕರಾಲಂ
ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಽಹಮ್

॥ ೨೩ ॥

ನಭಃಸ್ಪೃಶಂ ದೀಪ್ತಮನೇಕವರ್ಣಂ
ವ್ಯಾತ್ತಾನನಂ ದೀಪ್ತವಿಶಾಲನೇತ್ರಮ್ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ
ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ

॥ ೨೪ ॥

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ
ದೃಷ್ಟ್ವೈವ ಕಾಲಾನಲಸಂನಿಭಾನಿ ।
ದಿಶೋ ನ ಜಾನೇ ನ ಲಭೇ ಚ ಶರ್ಮ
ಪ್ರಸೀದ ದೇವೇಶ ಜಗನ್ನಿವಾಸ

॥ ೨೫ ॥

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ
ಸರ್ವೇ ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಽಸೌ
ಸಹಾಸ್ಮದೀಯೈರಪಿ ಯೋಧಮುಖ್ಯೈಃ

॥ ೨೬ ॥

ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ
ದಂಷ್ಟ್ರಾಕರಾಲಾನಿ ಭಯಾನಕಾನಿ ।
ಕೇಚಿದ್ವಿಲಗ್ನಾ ದಶನಾಂತರೇಷು
ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ

॥ ೨೭ ॥

ಯಥಾ ನದೀನಾಂ ಬಹವೋಽಂಬುವೇಗಾಃ
ಸಮುದ್ರಮೇವಾಭಿಮುಖಾ ದ್ರವಂತಿ ।
ತಥಾ ತವಾಮೀ ನರಲೋಕವೀರಾ
ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ

॥ ೨೮ ॥

ಯಥಾ ಪ್ರದೀಪ್ತಂ ಜ್ವಲನಂ ಪತಂಗಾ
ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಾ–
ಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ

॥ ೨೯ ॥

ಲೇಲಿಹ್ಯಸೇ ಗ್ರಸಮಾನಃ ಸಮಂತಾ–
ಲ್ಲೋಕಾನ್ ಸಮಗ್ರಾನ್ ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ ಸಮಗ್ರಂ
ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ

॥ ೩೦ ॥

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ
ನಮೋಽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವಂತಮಾದ್ಯಂ
ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್

॥ ೩೧ ॥

ಶ್ರೀಭಗವಾನುವಾಚ-

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ
ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾ ನ ಭವಿಷ್ಯಂತಿ ಸರ್ವೇ
ಯೇಽವಸ್ಥಿತಾನ್ ಪ್ರತ್ಯನೀಕೇಷು ಯೋಧಾಃ

॥ ೩೨ ॥

ತಸ್ಮಾತ್ತ್ವ ಮುತ್ತಿಷ್ಠ ಯಶೋ ಲಭಸ್ವ
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।

ಮಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್

॥ ೩೩ ॥

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾಽನ್ಯಾನಪಿ ಯೋಧವೀರಾನ್ ।
ಮಾಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ
ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್

॥ ೩೪ ॥

ಸಂಜಯ ಉವಾಚ-

ಏತಚ್ಛ್ರುತ್ವಾ ವಚನಂ ಕೇಶವಸ್ಯ
ಕೃತಾಂಜಲಿರ್ವೇಪಮಾನಃ ಕಿರೀಟೀ ।
ನಮಸ್ಕೃತ್ವಾ ಭೂಯ ಏವಾಹ ಕೃಷ್ಣಂ
ಸಗದ್ಗದಂ ಭೀತಭೀತಃ ಪ್ರಣಮ್ಯ

॥ ೩೫ ॥

ಅರ್ಜುನ ಉವಾಚ-

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ
ಜಗತ್ ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ
ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ

॥ ೩೬ ॥

ಕಸ್ಮಾಚ್ಚ ತೇ ನ ನಮೇರನ್ ಮಹಾತ್ಮನ್
ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ ।

ಅನಂತ ದೇವೇಶ ಜಗನ್ನಿವಾಸ
ತ್ವಮಕ್ಷರಂ ಸದಸತ್ತತ್ಪರಂ ಯತ್

॥ ೩೭ ॥

ತ್ವಮಾದಿದೇವಃ ಪುರುಷಃ ಪುರಾಣ–
ಸ್ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ವೇತ್ತಾಽಸಿ ವೇದ್ಯಂ ಚ ಪರಂ ಚ ಧಾಮ
ತ್ವಯಾ ತತಂ ವಿಶ್ವಮನಂತರೂಪ

॥ ೩೮ ॥

ವಾಯುರ್ಯಮೋಽಗ್ನಿರ್ವರುಣಃ ಶಶಾಂಕಃ
ಪ್ರಜಾಪತಿಸ್ತ್ವಂ ಪ್ರತಿತಾಮಹಶ್ಚ ।
ನಮೋ ನಮಸ್ತೇಽಸ್ತು ಸಹಸ್ರಕೃತ್ವಃ
ಪುನಶ್ಚ ಭೂಯೋಽಪಿ ನಮೋ ನಮಸ್ತೇ

॥ ೩೯ ॥

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವ ಸಮಾಪ್ನೋಷಿ ತತೋಽಸಿ ಸರ್ವಃ

॥ ೪೦ ॥

ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಾಯಾ ಪ್ರಮಾದಾತ್ ಪ್ರಣಯೇನ ವಾಽಪಿ

॥ ೪೧ ॥

ಯಚ್ಚಾವಹಾಸಾರ್ಥಮಸತ್ಕೃತೋಽಸಿ
ವಿಹಾರಶಯ್ಯಾಸನಭೋಜನೇಷು ।

ಏಕೋಽಥ ವಾಽಪ್ಯಚ್ಯುತ ತತ್ಸಮಕ್ಷಂ
ತತ್ ಕ್ಷಾಮಯೇ ತ್ವಾಮಹಪ್ರಮೇಯಮ್

॥ ೪೨ ॥

ಪಿತಾಽಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವಃ

॥ ೪೩ ॥

ತಸ್ಮಾತ್ ಪ್ರಣಮ್ಯ ಪ್ರಣಿಧಾಯ ಕಾಯಂ
ಪ್ರಸಾದಯೇ ತ್ವಾಮಹಮೀಶಮೀಡ್ಯಮ್ ।
ಪಿತೇವ ಪುತ್ರಸ್ಯ ಸಖೇ ಸಖ್ಯುಃ
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಮ್

॥ ೪೪ ॥

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ
ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ
ಪ್ರಸೀದ ದೇವೇಶ ಜಗನ್ನಿವಾಸ

॥ ೪೫ ॥

ಕಿರೀಟಿನಂ ಗದಿನಂ ಚಕ್ರಹಸ್ತ
ಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ ।
ತೇನೈವ ರೂಪೇಣ ಚತುರ್ಭುಜೇನ
ಸಹಸ್ರಬಾಹೋ ಭವ ವಿಶ್ವಮೂರ್ತೇ

॥ ೪೬ ॥

ಶ್ರೀಭಗವಾನುವಾಚ-

ಮಯಾ ಪ್ರಸನ್ನೇನ ತವಾರ್ಜುನೇದಂ
ರೂಪಂ ಪರಂ ದರ್ಶಿತಮಾತ್ಮಯೋಗಾತ್ ।
ತೇಜೋಮಯಂ ವಿಶ್ವಮನಂತಮಾದ್ಯಂ
ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಮ್

॥ ೪೭ ॥

ನ ವೇದಯಜ್ಞಾಧ್ಯಯನೈರ್ನ ದಾನೈ–
ರ್ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ ।
ಏವಂ ರೂಪಃ ಶಕ್ಯ ಅಹಂ ನೃಲೋಕೇ
ದ್ರಷ್ಟುಂ ತ್ವದನ್ಯೇನ ಕುರುಪ್ರವೀರ

॥ ೪೮ ॥

ಮಾ ತೇ ವ್ಯಥಾ ಮಾ ಚ ವಿಮೂಢಭಾವೋ
ದೃಷ್ಟ್ವಾ ರೂಪಂ ಘೋರಮೀದೃಙ್ಮಮೇದಮ್ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ
ತದೇವ ಮೇ ರೂಪಮಿದಂ ಪ್ರಪಶ್ಯ

॥ ೪೯ ॥

ಸಂಜಯ ಉವಾಚ-

ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ
ಸ್ವಕಂ ರೂಪಂ ದರ್ಶಯಾಮಾಸ ಭೂಯಃ ।
ಆಶ್ವಾಸಯಾಮಾಸ ಚ ಭೀತಮೇನಂ
ಭೂತ್ವಾ ಪುನಃ ಸೌಮ್ಯವಪುರ್ಮಹಾತ್ಮಾ

॥ ೫೦ ॥

ಅರ್ಜುನ ಉವಾಚ-

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ ।
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ

॥ ೫೧ ॥

ಶ್ರೀಭಗವಾನುವಾಚ-

ಸುದುರ್ದರ್ಶಮಿದಂ ರೂಪಂ ದೃಷ್ಟವಾನಸಿ ಯನ್ಮಮ ।
ದೇವಾ ಅಪ್ಯಸ್ಯ ರೂಪಸ್ಯ ನಿತ್ಯಂ ದರ್ಶನಕಾಂಕ್ಷಿಣಃ

॥ ೫೨ ॥

ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ

॥ ೫೩ ॥

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ

॥ ೫೪ ॥

ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ

॥ ೫೫ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ವಿಶ್ವರೂಪದರ್ಶನಯೋಗೋ ನಾಮೈಕಾದಶೋಽಧ್ಯಾಯಃ

ಆವುದೊ ವಿಶ್ವರಹಸ್ಯಂ ।
ಜೀವಾಂಗಣಕಿಳಿದು ಜನದ ಸುಖದುಃಖೇಚ್ಛಾ– ॥
ದ್ಯಾವೇಶದಿ ಸಹಭಾಗಿವೊ- ।
ಲಾವಿರ್ಭವಿಸಿದುದು ಕೃಷ್ಣನೆನಿಪ ವಿಚಿತ್ರಂ ॥

ನರನೋ ನರದೌರ್ಬಲ್ಯವ ।
ಪರಿಹರಿಸಲ್ಬಂದ ವಿಶ್ವದಂತಸ್ಸತ್ತ್ವಂ ॥
ಧರಿಸಿದ ರೂಪೋ ಕೃಷ್ಣಂ ।
ಪರಮಾದ್ಭುತಮೇನೊ ನಮಗೆ ಸತ್ಯಂ ಶರಣಂ ॥

ಸೂಚನೆ

ಬುದ್ಧಿಗೆ ಬಂದೊಡದೇನುಪ- ।
ಲಬ್ಧಮೆ ಮಾನಸಕೆ ಮನಸಿಗಿಹ ವಸ್ತುವು ಸಂ- ॥
ಬದ್ಧಮೆ ನೇತ್ರಕೆ ನೇತ್ರಕೆ ।
ಸಿದ್ಧಂ ತಾನಿರದ ವಸ್ತುವನುಭವಕಿಹುದೇಂ

॥ ೧ ॥

ಪ್ರತ್ಯಕ್ಷಮಿಲ್ಲದ ರಹ- ।
ಸ್ಸತ್ಯಂ ಸಂಪ್ರತ್ಯಯಕ್ಕೆ ದುರ್ಲಭಮದರಿಂ ॥
ತತ್ತ್ವಾರ್ಥಿಗೆ ನಿಜಮಹಿಮೆಯ ।
ತ್ಯಥ್ಯದಿನಾಕಾರಗೊಳಿಸಿದಂ ಭಗವಂತಂ

॥ ೨ ॥

ಸಾರಾಂಶ

ಅರ್ಜುನನು ತನ್ನ ಅಧ್ಯಾತ್ಮವಿಶ್ವಾಸವು ಸ್ಥಿರಪಡಲೆಂದು ವಿಶ್ವರೂಪದ ಪ್ರತ್ಯಕ್ಷದರ್ಶನವನ್ನು ಬೇಡುತ್ತಾನೆ. ಆ ಅನಂತರೂಪದರ್ಶನವನ್ನು ತಾಳಬಲ್ಲ ವಿಶೇಷ ನಯನತೇಜಸ್ಸನ್ನು ಅನುಗ್ರಹಿಸಿ ಶ್ರೀಕೃಷ್ಣ ಭಗವಂತನು ತನ್ನ ಪರಮಾದ್ಭುತ ರೂಪವನ್ನು ಅವನಿಗೆ ಕಾಣಿಸುತ್ತಾನೆ. ಕೇವಲ ಬುದ್ಧಿಯ ತತ್ತ್ವಗ್ರಹಣದಿಂದಾಗದಿದ್ದ ವಿಶೇಷಪರಿಣಾಮ ಪ್ರತ್ಯಕ್ಷಾನುಭವದಿಂದ ಅರ್ಜುನನ ಮೇಲಾಗುತ್ತದೆ; ಭಗವನ್ಮಹಿಮೆಯನ್ನು ಅವನು ಕೊಂಡಾಡುತ್ತಾನೆ.

. . .

ಪ್ರಕರಣ ೧೨

ಅಧ್ಯಾಯ ೧೧ - ವಿಶ್ವರೂಪಸಂದರ್ಶನಯೋಗ

ಗೀತೆಯ ಮೂರನೆಯ ಅಧ್ಯಾಯದಲ್ಲಿ ಪರವಸ್ತುವು ಬುದ್ಧ್ಯತೀತವೆಂದು ಹೇಳಿದೆ:

ಯೋ ಬುದ್ಧೇಃ ಪರತಸ್ತು ಸಃ ॥ (೩–೪೨)

ಹೀಗೆ ತತ್ತ್ವವು ಬುದ್ಧಿಗಿಂತ ಮೇಲ್ಪಟ್ಟಿರುವುದಾದರೆ ಅದನ್ನು ಬುದ್ಧಿ ಹಿಡಿಯುವುದು ಹೇಗೆ?

ಆರನೆಯ ಅಧ್ಯಾಯದಲ್ಲಿ ಬ್ರಹ್ಮಾನುಭವಸುಖವು ಬುದ್ಧಿಗ್ರಾಹ್ಯವೆಂದು ಹೇಳಿದೆ:

ಬುದ್ಧಿಗ್ರಾಹ್ಯಮತೀಂದ್ರಿಯಮ್ ॥ (೬–೨೧)

ಈ ಎರಡೂ ವಾಕ್ಯಗಳಿಗೂ ಕಾಣಬರುವ ಅಸಾಮಂಜಸ್ಯವು ವಿಚಾರದಿಂದ ಪರಿಹಾರ್ಯವಾಗುತ್ತದೆ.

ಬುದ್ಧಿಯು ಮನಸ್ಸಂಯೋಗದಿಂದ ಕೆಲಸಮಾಡತಕ್ಕದ್ದು. ಮನಸ್ಸಾದರೋ ಇಂದ್ರಿಯ ಸಂಪರ್ಕದಿಂದ ಕೆಲಸಮಾಡತಕ್ಕದ್ದು. ಹೀಗೆ ಬುದ್ಧಿಯು ಸಾಮಾನ್ಯವಾಗಿ ಇಂದ್ರಿಯ ಚೇಷ್ಟಿತಗಳಿಗೆ ಒಳಪಟ್ಟಿರುತ್ತದೆ. ಇಂಥಾ ವಿಕೃತಬುದ್ಧಿಯಿಂದ ಮೇಲ್ಪಟ್ಟದ್ದು ಪರವಸ್ತು, ಅದು ಮಲಿನಬುದ್ಧಿಗೆ ಸಿಕ್ಕತಕ್ಕದ್ದಲ್ಲ–ಎಂಬುದು

ಯೋ ಬುದ್ಧೇಃ ಪರತಃ ॥

ಎಂಬುದರ ತಾತ್ಪರ್ಯ. ಆದದ್ದರಿಂದಲೇ ಅಲ್ಲಿಯ ಉಪದೇಶ:

ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥ (೩–೪೩)

ಮೇಲಣ ಎರಡನೆಯ ವಾಕ್ಯದ “ಬುದ್ಧಿಗ್ರಾಹ್ಯಂ” ಎಂಬಲ್ಲಿ ಬುದ್ಧಿಶಬ್ದದಲ್ಲಿ ವಿವಕ್ಷಿತವಾಗಿರುವುದು ನಿರ್ಮಲಬುದ್ಧಿ–ಇಂದ್ರಿಯಸಂಸ್ಪರ್ಶವಿಲ್ಲದ ಬುದ್ಧಿ–ಶುದ್ಧ ಬುದ್ಧಿ, ಇಂಥಾ ಕೇವಲ ಬುದ್ಧಿಸಿದ್ಧವಾದ ಭಾವನೆಯನ್ನು ಇಂಗ್ಲಿಷಿನಲ್ಲಿ “ಕಾನ್‌ಸೆಪ್‌ಟ್” (Intellectual Concept) ಎನ್ನುತ್ತಾರೆ.

ಇಲ್ಲಿ ಇನ್ನೊಂದು ಪ್ರಶ್ನೆ ಹುಟ್ಟುತ್ತದೆ. ಬುದ್ಧಿಗ್ರಾಹ್ಯವಾದದ್ದೆಲ್ಲ ನಮ್ಮ ಅನುಭವಕ್ಕೆ ಸಾಧ್ಯವೋ?

ಅಂಕಗಣಿತದಲ್ಲಿ ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆ ಹಾಕುವುದುಂಟು: ಹತ್ತು ಮಂದಿ ಕೆಲಸಗಾರರು ದಿನಕ್ಕೆ ಎಂಟು ಘಂಟೆಯಂತೆ ಕೆಲಸ ಮಾಡಿ ಒಂದು ತಿಂಗಳಲ್ಲಿ ಒಂದು ಮನೆಯನ್ನು ಕಟ್ಟುತ್ತಾರೆ. ಹತ್ತು ಸಾವಿರ ಮಂದಿ ಹಾಗೆಯೇ ದಿನಕ್ಕೆಂಟು ಘಂಟೆ ಕೆಲಸಮಾಡಿ ಅದೇ ಮನೆಯನ್ನು ಕಟ್ಟಲು ಎಷ್ಟು ದಿನ ಬೇಕಾಗುತ್ತದೆ? ಈ ಪ್ರಶ್ನೆಗೆ ಗಣಿತಶಾಸ್ತ್ರ ಕೊಡುವ ಉತ್ತರ ಬುದ್ಧಿಗ್ರಾಹ್ಯವಾದದ್ದು: ಆದರೆ ಬುದ್ಧಿಮಾತ್ರಗ್ರಾಹ್ಯವಾದದ್ದು, ಅನುಭವಸಾಧ್ಯವಾದದ್ದಲ್ಲ, ಹತ್ತು ಮಂದಿ ನಿಂತು ಕೆಲಸ ಮಾಡಿದಷ್ಟು ಜಾಗದಲ್ಲಿ ಹತ್ತು ಸಾವಿರ ಮಂದಿ ನಿಲ್ಲುವುದಾದರೂ ಸಾಧ್ಯವೋ?

ಗಣಿತಶಾಸ್ತ್ರದಲ್ಲಿ ಸೊನ್ನೆಗೆ ಒಂದು ಬೆಲೆಯುಂಟೆಂದು ನಿಪುಣರು ಹೇಳುತ್ತಾರೆ. ನಿಪುಣರಲ್ಲದವರು ಆ ಬೆಲೆಯನ್ನು ಅನುಭವಕ್ಕೆ ತಂದುಕೊಳ್ಳುವುದು ಹೇಗೆ?

ಸಾಮಾನ್ಯಬುದ್ಧಿಗೆ ಎರಡು ಉಪಾಧಿಗಳಿರುತ್ತವೆ: ಒಂದು ಪಕ್ಕದಲ್ಲಿ ಮನಸ್ಸಿನ ಮೂಲಕ ಇಂದ್ರಿಯಸಂಪರ್ಕ ಕಲುಷಿತವಾಗಿರುವಂತೆ, ಇನ್ನೊಂದು ಪಕ್ಕದಲ್ಲಿ ಅದು ಇಂದ್ರಿಯಾನುಭವವಾದ ಕಾರಣದಿಂದ ದುರ್ಬಲಿತವಾಗಿದೆ. ಯಾವುದು ಶ್ರವಣ ನಯನಾದಿ ಇಂದ್ರಿಯಗಳಿಗೆ ಅಲಭ್ಯವೋ ಅದನ್ನು ಬುದ್ಧಿಯು ಊಹನೆ ಕಲ್ಪನೆಗಳಿಂದ ಕಂಡುಕೊಂಡರೂ ಅದು ಕೊಂಚಮಾತ್ರದ ಜ್ಞಾನ, ಪೂರ್ಣಜ್ಞಾನವಲ್ಲ. ಪೂರ್ಣ ಜ್ಞಾನವು ಅನುಭವದ್ದು.

ಬುದ್ಧಿಗ್ರಾಹ್ಯವಾದದ್ದೆಲ್ಲ ಅನುಭವಗ್ರಾಹ್ಯವಾಗದು. ಬುದ್ಧಿಯು ಯಾವ ತತ್ತ್ವವನ್ನು ಸ್ವತಂತ್ರವಾಗಿ ಗ್ರಹಿಸಿದೆಯೋ ಆ ತತ್ವವು, ಅಲ್ಲಿಂದ ಮನಸ್ಸಿಗಿಳಿಯಬೇಕು; ಮನಸ್ಸಿನಿಂದ

ದೇಹೇಂದ್ರಿಯಗಳ ಅನುಸಂಧಾನಕ್ಕೆ ಇಳಿಯಬೇಕು. ಆಗ ಅನುಭವ. ಅನುಭವವೇ ಪೂರ್ಣಜ್ಞಾನ. ಬುದ್ಧಿ ಮಾತ್ರ ಗೃಹೀತವಾದದ್ದು ಪೂರ್ಣಜ್ಞಾನವಾಗದು.

“ಬುದ್ಧಿಗ್ರಾಹ್ಯಮ್” ಎಂಬುದಕ್ಕೂ “ಬುದ್ಧಿಮಾತ್ರ ಗ್ರಾಹ್ಯಮ್” ಎಂಬುದಕ್ಕೂ ಇರುವ ಭೇದವನ್ನು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಹಾಗೆಯೇ “ಬುದ್ಧಿಗ್ರಾಹ್ಯಮಾತ್ರಮ್” ಅಥವಾ “ಬುದ್ಧಿಗೃಹೀತಮಾತ್ರಮ್” ಎಂಬುದಕ್ಕೂ “ಅನುಭವ ಸಿದ್ಧಮ್” ಎಂಬುದಕ್ಕೂ ಇರುವ ಭೇದವನ್ನು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಬುದ್ಧಿ ಸಿದ್ಧಿಗಿಂತ ಅನುಭವಸಿದ್ಧಿ ದೊಡ್ಡದು. ಗಣಿತಶಾಸ್ತ್ರದ ಉತ್ತರಗಳು ಬುದ್ಧಿಮಾತ್ರ ಗ್ರಾಹ್ಯಗಳು–ಕೇವಲ ಬುದ್ಧಿಗ್ರಾಹ್ಯಗಳು.

ಹೃದಯವು ಅನುಭವಸ್ಥಾನ. ಮನಸ್ಸು ಬುದ್ಧಿಗಳೆರಡೂ ಕೆಲಸಮಾಡಿದ್ದರ ಫಲಿತಾಂಶವು ಅನುಭವವಾಗುವುದು ಹೃದಯದಲ್ಲಿ.

> ಈಶ್ವರಃ ಸರ್ವಭೂತಾನಾಂ ಹೃದ್ದೇಶೇ ।
> ಭಿದ್ಯತೇ ಹೃದಯಗ್ರಂಥಿಃ ॥
> ಅಗ್ನಿರ್ಮೇ ವಾಚಿ ಶ್ರಿತಃ ।
> ವಾಗ್ಘೃದಯೇ । ಹೃದಯಂ ಮಯಿ ॥

–ಇತ್ಯಾದಿ ಶ್ರುತಿಸ್ಮೃತಿವಾಕ್ಯಗಳಿಂದ ಹೃದಯವೇ ಜೀವನಕೇಂದ್ರ, ಹೃದಯವೇ ಅನುಭವರಂಗ, ಹೃದಯವೇ ಸತ್ಯಸಂದರ್ಶಿ–ಎಂದು ಸಿದ್ಧವಾಗುತ್ತದೆ. ಮನಸ್ಸು ಬುದ್ಧಿಗಳಿಗಿಂತ ಹೃದಯ ದೊಡ್ಡದು, ಎರಡನ್ನೂ ಒಳಗೊಂಡಿರುವಂಥಾದ್ದು.

ಪರತತ್ತ್ವ ಶಾಸ್ತ್ರವು ಅನುಭವಪ್ರಧಾನವಾದ ಶಾಸ್ತ್ರ. ಅನುಭವಕ್ಕೆ ಬುದ್ಧಿಗ್ರಾಹ್ಯತೆ ಬೇಕೇಬೇಕು. ಅದರ ಜೊತೆಗೆ ಇನ್ನೂ ಬೇರೆ ಕರಣಸಹಾಯವೂ ಬೇಕು. ಮನುಷ್ಯನ ಬಹಿಷ್ಕರಣಗಳು ಅಂತಃಕರಣಗಳಿಗೆ ಅಧೀನವಾಗಿ, ಅಂತಃಕರಣಗಳು ತಮ್ಮಲ್ಲೊಂದಾದ ಬುದ್ಧಿಯೊಡನೆ ಸಹಕರಿಸಿ–ಹೀಗೆ ಸಮಸ್ತ ಕರಣಗಳೂ ಏಕೀಭವಿಸಿದಾಗ ತತ್ತ್ವಾನುಭೂತಿಯು ಸಾಧ್ಯವಾಗುತ್ತದೆ. ಇದಕ್ಕೆ ದೃಷ್ಟಾಂತರೂಪವಾದದ್ದು ಗೀತೆಯ ಹನ್ನೊಂದನೆಯ ಅಧ್ಯಾಯ–ವಿಶ್ವರೂಪಾಧ್ಯಾಯ.

ಒಂಭತ್ತು ಹತ್ತನೆಯ ಅಧ್ಯಾಯಗಳಲ್ಲಿ "ಜ್ಞಾನಂ ವಿಜ್ಞಾನಸಹಿತಂ", "ಬುದ್ಧಿಯೋಗಂ" – ಇದನ್ನು ವಿಸ್ತರಿಸಿದ್ದಾಯಿತು. ಶಾಸ್ತ್ರದ ಆಧಾರದಿಂದಲೂ ತರ್ಕಯುಕ್ತಿಯಿಂದಲೂ ತತ್ತ್ವಜ್ಞಾನವನ್ನೂ, ಪ್ರಸಿದ್ಧ ವಸ್ತು ಪ್ರಸಿದ್ಧಪುರುಷ ನಿದರ್ಶನಗಳಿಂದ ತತ್ತ್ವವಿಜ್ಞಾನವನ್ನೂ ಪ್ರತಿಪಾದಿಸಿದ್ದಾಯಿತು. ಇದರಿಂದ ಅರ್ಜುನನ ಮನಸ್ಸಿನಲ್ಲಿದ್ದ ಭ್ರಾಂತಿಗಳೂ ಭಯಗಳೂ ನಿರ್ಮೂಲವಾದುವು. ಆದರೂ ಅವನ ಮನಸ್ಸಿನಲ್ಲಿ ತನ್ನನ್ನೇ ಕುರಿತು ಎರಡು ಸಂಶಯಗಳಿದ್ದವೆಂದು ತೋರುತ್ತದೆ. ಮೊದಲನೆಯದು– "ನನಗೆ ಈಗ ಬಂದಿರುವ ನಂಬಿಕೆ ಸ್ಥಿರವಾಗಿ ನಿಂತೀತೆ?" ಎಂಬುದು. ಎರಡನೆಯದು– "ಅಧ್ಯಾತ್ಮವಿದ್ಯೆಗೆ ನನ್ನ ಅರ್ಹತೆ ಎಷ್ಟು ಮಾತ್ರದ್ದು?" ಎಂಬುದು. ಈ ಎರಡು ಶಂಕೆಗಳನ್ನೂ ಹೋಗಲಾಡಿಸಬಲ್ಲ ಒಂದು ಸ್ವಾನುಭವಪ್ರಮಾಣ ಬೇಕೆನ್ನಿಸಿತು ಅರ್ಜುನನಿಗೆ. ಆದದ್ದರಿಂದ ಅವನು ಸ್ವಾಮಿಯ ವಿಶ್ವರೂಪದ ಪ್ರತ್ಯಕ್ಷದರ್ಶನವನ್ನು ಬೇಡಿದ. ಶ್ರೀಕಷ್ಣ ಅದನ್ನು ಅನುಗ್ರಹ ಮಾಡಿದ. ಇದು ಇಲ್ಲಿಯ ವಿಷಯ.

ವಿಷಯವನ್ನು ಹೀಗೆ ಸಂಕ್ಷೇಪವಾಗಿ ಹೇಳಿದರೂ ಈ ಅಧ್ಯಾಯದ ಮಹತ್ತ್ವ ಅತಿಶಯವಾದದ್ದು. ಸಂನ್ಯಾಸಗ್ರಹಣಕಾಲದಲ್ಲಿ ಯೋಗಪಟ್ಟಪ್ರಕರಣದಲ್ಲಿ ವಿಶ್ವರೂಪಾಧ್ಯಾಯವನ್ನು ಪಠಿಸುವುದು ಪೂರ್ಣ ಪದ್ಧತಿ.

ಅರ್ಜುನ ತನ್ನ ಮನಸ್ಸು ನಿರ್ಮಲವಾಯಿತೆಂದು ಸ್ಪಷ್ಟವಾಗಿ ಹೇಳಿದ:

> ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥

ಜೀವವೇನು? ಜಗತ್ತೇನು? ಈಶ್ವರನೇನು? ಸದ್ಗತಿಯೇನು? ಧರ್ಮವೇನು?–ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ದೊರೆತಿತ್ತು. ಯಾವ ಸಂದೇಹವೂ ಉಳಿದಿರಲಿಲ್ಲ. ಆದರೂ ತಾನು ಸ್ಥಿತಪ್ರಜ್ಞನಾಗಬೇಕೆಂಬುದಲ್ಲವೆ ಅರ್ಜುನನ ಆಶಯ? ಪ್ರಾರಂಭದಲ್ಲಿಯೇ ಭಗವಂತ ಆತನನ್ನು ಕುರಿತು–

> ಶ್ರುತಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
> ಸಮಾಧಾವಚಲಾ ಬುದ್ಧಿಃ ತದಾ ಯೋಗಮವಾಪ್ಸ್ಯಸಿ ॥

“ಅವರಿವರಾಡಿದ ಮಾತುಗಳಿಂದಲೂ ಅಲ್ಲಲ್ಲಿ ಕೇಳಿದ ಮಾತುಗಳಿಂದಲೂ ನಿನ್ನ ಬುದ್ಧಿ ನೆಲೆಗೆಟ್ಟಿದೆ. ಅದು ಚೆದರಿಹೋಗದೆ ಒಂದು ನಿಲುಗಡೆಗೆ ಬಂದು ಸ್ಥಿರವಾಗಿ ನಿಂತರೆ ಆಗ ಯೋಗವು ನಿನಗೆ ಶಕ್ಯವಾಗುತ್ತದೆ” –ಎಂದು ಮುನ್ನೆಚ್ಚರಿಕೆ ಕೊಟ್ಟ.

ಅರ್ಜುನ ಅದನ್ನು ಲಾಲಿಸಿ “ಸ್ಥಿತಪ್ರಜ್ಞನ ಲಕ್ಷಣವೇನು?” ಎಂದು ಕೇಳಿದ್ದ: ತಾನು ಸ್ಥಿತಪ್ರಜ್ಞನಾಗಬೇಕು; ಚಲಪ್ರಜ್ಞೆ ಸಾಲದು. ಶ್ರೀಕೃಷ್ಣನ ಉಪದೇಶದಿಂದ ಬಂದ ಪ್ರಜ್ಞೆ ಬೇರೊಬ್ಬರ ಮಾತಿನಿಂದ ಹರಿದುಹೋದೀತು–ಹಳೆಯ ನೀರನ್ನು ಹೊಸ ನೀರು ಕೊಚ್ಚಿಸುವಂತೆ ಆದೀತು, ಬೀದಿಯ ದೀಪ ಬಿರುಗಾಳಿಗೆ ಸಿಕ್ಕಿ ಆರಿ ಹೋದಂತೆ ಆದೀತು. ತಾನು ಕೃಷ್ಣನಿಂದ ಕಲಿತುಕೊಂಡದ್ದು ಹಾಗಾಗದಂತೆ ಅದನ್ನು ದೃಢಪಡಿಸಿಕೊಳ್ಳಬೇಕು. ಇದು ಅರ್ಜುನನ ಮನೋಗತ.

> ಏವಮೇತದ್ಯಥಾऽऽತ್ಥ ತ್ವಮ್ ಆತ್ಮಾನಂ ಪರಮೇಶ್ವರ ।
> ದ್ರಷ್ಟುಮಿಚ್ಛಾಮಿ ತೇ ರೂಪಮ್ ಐಶ್ವರಂ ಪುರುಷೋತ್ತಮ ॥

“ಪರಮೇಶ್ವರ, ನೀವು ನಿನ್ನ ಸ್ವರೂಪವನ್ನು ಕುರಿತು ಏನನ್ನು ಹೇಳಿದ್ದೆಯೋ ಅದನ್ನು ನಾನು ಕಣ್ಣಿನಿಂದ ನೋಡಲಿಷ್ಟವಾಗಿದೆ. ಅದರಿಂದ ನನ್ನ ನಿಶ್ಚಯಬುದ್ಧಿ ದೃಢಪಡುತ್ತದೆ” ಎಂದು ಅರ್ಜುನ ಬೇಡಿದ. ಭಗವಂತ ತನ್ನ ಸ್ವರೂಪವನ್ನು ಕುರಿತು ಹೇಳಿದ್ದದ್ದೇನು?

> ಮತ್ಸ್ಥಾನಿ ಸರ್ವಭೂತಾನಿ ॥
> ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥
> ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
> ಅಹಮಾದಿಶ್ಚ ಮಧ್ಯಂ ಚ ಭೂತಾನಾಮನ್ತ ಏವ ಚ ॥
> ವಿಷ್ಟಭ್ಯಾಹಮಿದಂ ಕೃತ್ಸ್ನಮ್ ಏಕಾಂಶೇನ ಸ್ಥಿತೋ ಜಗತ್ ॥

ಇಂಥಾ ವಾಕ್ಯಗಳು ಭಗವನ್ಮುಖದಿಂದ ಹತ್ತಾರು ಕಡೆ ಬಂದಿವೆ. ಅವುಗಳ ಅರ್ಥವನ್ನು ಪ್ರತ್ಯಕ್ಷಮಾಡಿಕೊಳ್ಳಬೇಕೆಂದು ಅರ್ಜುನನ ಆಶೆ. ಆದರೆ ತಾನು ಅದಕ್ಕೆ ಯೋಗ್ಯನೆ?–ಎಂದು ಸಂದೇಹ.

> ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮ್ ॥

“ಗುರುವೆ, ಅದನ್ನು ನೋಡುವುದು ನನಗೆ ಶಕ್ಯವೆಂದು ನಿನ್ನ ಅಭಿಪ್ರಾಯವಿದ್ದಲ್ಲಿ ಆ ನಿನ್ನ ರೂಪವನ್ನು ತೋರಿಸು”.

ಭಗವಂತ ಆ ಕೂಡಲೆ ಒಪ್ಪಿದ. “ನೂರುನೂರಾಗಿ, ಸಾವಿರಸಾವಿರವಾಗಿ ತೋರಿಸಿಯೇನು, ನೋಡು” ಎಂದ.

> ಇಹೈಕಸ್ಥಂ ಜಗತ್ಕೃತ್ಸ್ನಮ್ ಪಶ್ಯಾದ್ಯ ಸಚರಾಚರಮ್ ।
> ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥

“ನನ್ನ ದೇಹದಲ್ಲಿ ಸಮಸ್ತ ಚರಾಚರಜಗತ್ತೂ ಒಂದೇ ಕಡೆ ಒಟ್ಟಾಗಿರುವುದನ್ನು ನೋಡು. ಇನ್ನೂ ನಿನಗೆ ಏನೇನನ್ನು ನೋಡಬೇಕೆಂದಿಚ್ಛೆಯಿದೆಯೋ ಅದೆಲ್ಲವನ್ನೂ ಇಲ್ಲಿ ಕಾಣುವೆ. ಆದರೆ ನಿನ್ನ ಈಗಿನ ಕಣ್ಣು ಅದನ್ನು ತಾಳಲಾರದು. ಪ್ರಾಕೃತವಾದ ಕಣ್ಣು ಪ್ರಕೃತ್ಯತೀತವಾದ ಅನಂತರೂಪವನ್ನು ನೋಡಿ ಕೋರೈಸೀತು. ಅದರ ಬಲ ಆ ಮಹಾತೇಜಸ್ಸಿಗೆ ಸಾಲಲಾರದು”. ಆದದ್ದರಿಂದ–

> ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥

ಮಾನುಷಕ್ಕಿಂತ ಅತಿಶಯವಾದ ಶಕ್ತಿಯುಳ್ಳ ಚಕ್ಷುಸ್ಸನ್ನು ಕೊಡುತ್ತೇನೆ. ಅದರಿಂದ ನನ್ನ ಈಶ್ವರದಶಾಪ್ರಭಾವವನ್ನು ನೋಡು.

ಇಲ್ಲಿ ಬೇರೆ ಕಣ್ಣೆಂದರೆ ಹೊಸದಾಗಿ ಬೇರೆ ಗುಡ್ಡುಗಳೂ ಬೇರೆ ರೆಪ್ಪೆಗಳೂ ಉಳ್ಳ ಇನ್ನೊಂದು ಜೊತೆ ಕಣ್ಣು ಎಂದು ಭಾವಿಸಬೇಕಾದದ್ದಿಲ್ಲ. ಇದ್ದ ಕಣ್ಣಿಗೆ ಭಗವಂತ ಹೊಸ ತೇಜಶ್ಶಕ್ತಿಯನ್ನು ಕೊಟ್ಟನೆಂದು ಭಾವಿಸಿದರೆ ಸಾಕು. ಇಲ್ಲಿ ನಾವು ಗ್ರಹಿಸಬೇಕಾದ ವಿಷಯ ಇಷ್ಟು: ದೇವರನ್ನು ವರ ಬೇಡುವಾಗ ಆ ವರದ ಸದುಪಯೋಗಕ್ಕೆ ಅವಶ್ಯವಾದ ಸಹನಶಕ್ತಿ ಸಂಯಮಶಕ್ತಿಗಳನ್ನೂ ಬೇಡಿಕೊಳ್ಳಬೇಕು. ನಮ್ಮ ಆಶೆ ಅಪಾರವಾಗಿರುತ್ತದೆ; ಯುಕ್ತಾಯುಕ್ತವಿವೇಕವನ್ನು ಮರೆಯುತ್ತದೆ. ವರ ಕೊಡುವ ದೇವರು ನಮ್ಮ ಯೋಗ್ಯತೆಗೆ ತಕ್ಕಷ್ಟನ್ನು ಮಾತ್ರ ಕೊಟ್ಟರೆ ಅತೃಪ್ತಿಪಡುತ್ತೇವೆ. ಬೇಡಿದಷ್ಟನ್ನೂ ದೇವರು ಕೊಟ್ಟರೆ ನಮ್ಮ ಕೊರಲಿಗೆ ನಾವೇ ಉರುಲು ಹಾಕಿಕೊಂಡಂತಾದೀತು. ಹೊಟ್ಟೆಯ ಶಕ್ತಿಯನ್ನು ಮರೆತುಬಿಟ್ಟು ಔತಣವೆಂದು ಉಂಡರೆ ಹೊಟ್ಟೆ ನೋವು ಸಿದ್ಧ. ಊಟ ಬೇಡುವುದರ ಜೊತೆಗೆ ಅಜೀರ್ಣಕ್ಕೆ

ಔಷಧವನ್ನೂ ಬೇಡಿಕೊಳ್ಳಬೇಕು. ಮಕ್ಕಳಾಗಬೇಕೆಂದು ಹರಕೆ ಹೊರುವಾಗ ಹಿಟ್ಟುಬಟ್ಟೆಗಳಿಗೋಸ್ಕರ ಬೇಡುವುದನ್ನು ಮರೆಯಬಾರದು. ರಾಜ್ಯವನ್ನು ಬೇಡಿಕೊಂಡಾಗ ಸೈನ್ಯವನ್ನೂ ಖಜಾನೆಯನ್ನೂ ಬೇಡಿಕೊಳ್ಳಬೇಕು. ವರ ಕೊಡುವಾಗ ವರದ ಸದುಪಯೋಗಕ್ಕೆ ತಕ್ಕ ಸಾಮರ್ಥ್ಯವನ್ನೂ ಕೊಡುವಂತೆ ಭಗವಂತನನ್ನು ಬೇಡಬೇಕು.

ಅರ್ಜುನನಲ್ಲಿ ಶ್ರೀಕೃಷ್ಣಭಗವಂತನಿಗೆ ಅಪಾರ ಪ್ರೇಮ. ಆದದ್ದರಿಂದ ಮೊದಲು ಅದ್ಭುತ ದರ್ಶನಕ್ಕೆ ಅವಶ್ಯವಾದ ನಯನತೇಜಸ್ಸನ್ನು ಅನುಗ್ರಹಿಸಿ, ಬಳಿಕ ತನ್ನ ಪರಮಾದ್ಭುತ ರೂಪವನ್ನು ತೋರಿಸಿದ. ಆ ರೂಪಾತಿಶಯನ್ನು ಸಂಜಯ ವರ್ಣಿಸಿದ್ದಾನೆ.

> ದಿವಿ ಸೂರ್ಯ ಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
> ಯದಿ ಭಾಃ ಸದೃಶೀ ಸಾ ಸ್ಯಾತ್ ಭಾಸಸ್ತಸ್ಯ ಮಹಾತ್ಮನಃ ॥
> ತತ್ರೈಕಸ್ಥಂ ಜಗತ್ಕೃತ್ಸ್ನಮ್ ಪ್ರವಿಭಕ್ತಮನೇಕಧಾ ।
> ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ ॥

"ಒಂದು ಕ್ಷಣದಲ್ಲಿ ಸಹಸ್ರ ಸೂರ್ಯಮಂಡಲಗಳು ಉದಿಸಿದರೆ ಆಕಾಶವನ್ನು ಎಂಥಾ ಪ್ರಭೆ ತುಂಬುತ್ತದೋ ಅಂಥಾ ಮಹಾಪ್ರಕಾಶ ಹೊರಟಿತು ಆ ಮಹಾತ್ಮನಿಂದ. ಆ ದೇವದೇವನ ಶರೀರದಲ್ಲಿ ಸಮಸ್ತ ಜಗತ್ತೂ ಏಕಾಕಾರವಾಗಿದ್ದನ್ನೂ ಬೇರೆ ಬೇರೆ ವಿಭಾಗಗಳಾಗಿದ್ದದ್ದನ್ನೂ ಸಹ ಅರ್ಜುನ ಆಗ ನೋಡಿದ".

ನೋಡಿ ನಿಬ್ಬೆರಗಾದ; ನಡುಗಿದ; ಪುಲಕಿತನಾದ; ಅಂಜಲಿ ನೀಡಿದ; ಸ್ತೋತ್ರ ಮಾಡಿದ.

> ಪಶ್ಯಾಮಿ ದೇವಾಂಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತವಿಶೇಷಸಂಘಾನ್ ॥
> ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ ಸನಾತನಸ್ತ್ವಂ ಪುರುಷೋ ಮತೋ ಮೇ ॥

"ಓ ಆದಿದೇವನೆ, ನಿನ್ನ ದೇಹದಲ್ಲಿ ಎಲ್ಲ ಪ್ರಾಣಿಜಾತಿಗಳ ಸಮುದಾಯಗಳನ್ನೂ ಕಾಣುತ್ತಿದ್ದೇನೆ. ನೀನು ನಾಶರಹಿತನು; ಶಾಶ್ವತವಾದ ಧರ್ಮವನ್ನು ಕಾಪಾಡುವವನು; ಸನಾತನನು ನೀನೇ ಪರಮಪುರುಷನೆಂದು ಈಗ ತಿಳಿದುಕೊಂಡೆ".

ದ್ಯಾವಾಪೃಥಿವ್ಯೋರಿದಮನ್ತರಂ ಹಿ ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ ।
ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್ ॥

“ಮೇಲಣ ಆಕಾಶ, ಕೆಳಗಣ ಭೂಮಿ, ನಡುವಣ ಅಂತರಿಕ್ಷ–ಇದರಲ್ಲೆಲ್ಲೆಲ್ಲೂ ನೀನು ವ್ಯಾಪಿಸಿದ್ದಿ, ಹಾಗೆಯೇ ಎಲ್ಲ ದಿಕ್ಕುಗಳಲ್ಲೂ ಹರಡಿದ್ದಿ. ಓ ಮಹಾತ್ಮನೆ, ನಿನ್ನ ಈ ಅದ್ಭುತವೂ ಮಹೋಗ್ರವೂ ಆದ ರೂಪವನ್ನು ಕಂಡು ಮೂರುಲೋಕಗಳೂ ತಲ್ಲಣಗೊಂಡಿವೆ.”

ರೂಪಂ ಮಹತ್ತೇ ಬಹುವಕ್ತ್ರನೇತ್ರಂ ಮಹಾಬಾಹೋ ಬಹುಬಾಹೂರುಪಾದಮ್ ।
ಬಹೂದರಂ ಬಹುದಂಷ್ಟ್ರಾಕರಾಲಂ ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಽಹಮ್ ॥

“ನಿನ್ನ ರೂಪವು ಮಹತ್ತಮವಾಗಿದೆ; ಮುಖಗಳು ಲೆಕ್ಕಕ್ಕೆ ಸಿಕ್ಕದಷ್ಟು, ಕಣ್ಣುಗಳು ಎಣಿಸಲಾಗದಷ್ಟು; ನೀಳ್ದೋಳುಗಳು ಸಾವಿರಾರು, ಊರುಪಾದಗಳು ಸಾವಿರಾರು, ಉದರಗಳು ಸಾವಿರಾರು. ಘೋರವಾದ ದವಡೆಗಳು ಸಾವಿರಾರು: ಲೋಕಗಳಿದನ್ನು ನೋಡಿ ವ್ಯಥೆಪಡುತ್ತಿವೆ; ನಾನೂ ಹಾಗೆಯೇ.”

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ ಸರ್ವೇ ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಽಸೌ ಸಹಾಸ್ಮದೀಯೈರಪಿ ಯೋದಮುಖ್ಯೈಃ ॥

“ಈ ಧೃತರಾಷ್ಟ್ರನ ಮಕ್ಕಳು, ಅವರೊಡನೆ ಇರುವ ರಾಜಪರಿವಾರಗಳು, ಭೀಷ್ಮರು, ದ್ರೋಣರು, ಕರ್ಣ, ಪಾಂಡವರೊಡಗೂಡಿದ ಎಲ್ಲ ಯುದ್ಧವೀರರೂ ನಾವೆಲ್ಲರೂ ಏನಾಗುತ್ತಿದ್ದೇವೆ?”

ಲೇಲಿಹ್ಯಸೇ ಗ್ರಸಮಾನಃ ಸಮನ್ತಾತ್ ಲೋಕಾನ್ ಸಮಗ್ರಾನ್ ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ಸಮಗ್ರಂ ಭಾಸಸ್ತವೋಗ್ರಾಃ ಪ್ರತಪನ್ತಿ ವಿಷ್ಣೋ ॥

“ಓ ಮಹಾವಿಷ್ಣುವೆ, ನಾವೆಲ್ಲರೂ ಭಕ್ಷ್ಯಗಳೋ ಎಂಬಂತೆ ಎಲ್ಲ ಪಕ್ಕಗಳಿಂದಲೂ ನಿನ್ನ ನಾಲಿಗೆಗಳಿಂದ ನೆಕ್ಕಲ್ಪಡುತ್ತಿದ್ದೇವೆ; ನಿನ್ನ ಬೆಂಕಿಯುರಿಯ ಮುಖಗಳು ಎಲ್ಲ ಲೋಕಗಳನ್ನೂ ತೇಜಸ್ಸಿನಿಂದ ತುಂಬಿರಲಾಗಿ, ನಿನ್ನ ಉಗ್ರಜ್ವಾಲೆಗಳು ಸಮಸ್ತ ಜಗತ್ತನ್ನೂ ಸುಟ್ಟುಹಾಕುವಂತಿವೆ”.

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ ನಮೋಽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವನ್ತಮಾದ್ಯಂ ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್ ॥

"ಓ ಉಗ್ರರೂಪಿಯೆ, ನೀನು ಯಾರು? ಅದನ್ನು ನನಗೆ ಹೇಳು. ಓ ದೇವತಾ ಶ್ರೇಷ್ಠನೆ, ನಿನಗೆ ನಮಸ್ಕಾರ ಮಾಡುತ್ತೇನೆ, ಪ್ರಸನ್ನನಾಗು. ನಿನ್ನ ಪ್ರವೃತ್ತಿಯನ್ನು ನಾನರಿಯೆ. ಎಲ್ಲಕ್ಕೂ ಮೊದಲಿಗನಾದ ನಿನ್ನನ್ನು ತಿಳಿದುಕೊಳ್ಳಬಯಸುತ್ತೇನೆ."

***

ಪ್ರತ್ಯಕ್ಷಾನುಭವದ ಪರಿಣಾಮವನ್ನು ನೋಡಿದಿರಾ? ಕೇವಲ ಬುದ್ಧಿಸಂಪಾದಿತವಾದ ಜ್ಞಾನಕ್ಕೂ ಚಕ್ಷುರಾವೇದಿತವಾಗಿ ಮನಸ್ಸಿನಿಂದ ಅನುಭೂತವಾದ ವಿಜ್ಞಾನಕ್ಕೂ ಫಲಿತಾಂಶದಲ್ಲಿ ಎಷ್ಟು ಭೇದ! ಅರ್ಜುನನು ವಿಶ್ವರೂಪದರ್ಶನವನ್ನು ಬೇಡಿದಾಗ ಅದು ಹೀಗೆ ಭಯೋತ್ಪಾದಕವಾದೀತೆಂದು ಕೊಂಚವೂ ಅಂದುಕೊಂಡಿರಲಿಲ್ಲ. ಬಾಯಿಂದ ವಾದ ನಡಸುವುದು ಹೇಗೋ ಕಣ್ಣಿಂದ ನೋಟ ನೋಡುವುದು ಹಾಗೆ–ಅಷ್ಟು ಸುಲಭ ಎಂದು ಅವನು ಭಾವಿಸಿಕೊಂಡಿದ್ದ. ನೋಡಿದಾಗ ಆದದ್ದೇನು? ಭಯ, ಕಂಪನ, ದಿಗ್ಭ್ರಮೆ. ಇದರಿಂದ ಅರ್ಜುನ ಮೊದಲು ತಿಳಿದುಕೊಂಡಿದ್ದದ್ದು ಸತ್ಯದ ಪೂರ್ಣ ರೂಪವಲ್ಲ ಎಂಬುದು ಸಿದ್ಧವಾಗುತ್ತದೆ. ಪರಮೇಶ್ವರನ ಸೌಮ್ಯಾಕಾರವನ್ನು ಮಾತ್ರ ಕಂಡಿದ್ದ; ರೌದ್ರವನ್ನು ಕಂಡಿರಲಿಲ್ಲ. ಎರಡು ಮುಖಗಳುಳ್ಳ ವಸ್ತುವಿನ ಒಂದು ಮುಖವನ್ನು ಮಾತ್ರ ಕಂಡಿರುವವನಿಗೆ ಆ ವಸ್ತುವಿನ ಪರಿಪೂರ್ಣಜ್ಞಾನವುಂಟೆಂದು ಹೇಗೆ ಹೇಳಲಾದೀತು? ಎಷ್ಟು ಮುಖಗಳುಂಟೋ ಅಷ್ಟನ್ನೂ–ಅಷ್ಟು ಪಾರ್ಶ್ವಗಳ ಸರ್ವಾಂಗಗಳನ್ನೂ–ನೋಡಿರಬೇಕು ಸತ್ಯಾಪೇಕ್ಷಿ. ತಿಳಿದುಕೊಳ್ಳಬೇಕಾದ ವಿಷಯವನ್ನು ಕುರಿತು ಕಿವಿಯಿಂದ ಕೇಳಿದ್ದರೆ ಸಾಲದು. ಕಣ್ಣಿನಿಂದಲೂ ಕಂಡಿರಬೇಕು; ಕಣ್ಣು ಕಿವಿಗಳಿಂದ ಗ್ರಹಿಸಿದ್ದರೆ ಸಾಲದು, ಬುದ್ಧಿಯಿಂದಲೂ ಗ್ರಹಿಸಿರಬೇಕು; ಬುದ್ಧಿಯ ಗ್ರಹಿಕೆಯಷ್ಟೇ ಸಾಕಾಗದು, ಮನಸ್ಸೂ ಗ್ರಹಿಸಿ ತಾನೂ ಆ ವಿಷಯವೂ ಒಂದುಗೂಡಿ ಒಂದಾಗಬೇಕು; ವಿಷಯದೊಡನೆ ಒಂದಾಗುವುದೇ–ತಾದಾತ್ಮ್ಯವೇ–ಪೂರ್ಣಾನುಭವ. ಹಾಗಾಯಿತು ಅರ್ಜುನನಿಗೆ ಈಗ. ಅದು ವಿಶ್ವರೂಪ ದರ್ಶನದಿಂದ. "ಚಕ್ಷುರ್ವೈ ಸತ್ಯಂ" ಎನ್ನುತ್ತದೆ ಶ್ರುತಿ. ಹಾಗೆಂದರೆ ಕಣ್ಣಿಗೆ ಕಾಣಬಂದದ್ದೆಲ್ಲ ಸತ್ಯವೆಂದಲ್ಲ; ಜ್ಞಾನ ಸಾಧನಗಳಲ್ಲಿ ಚಕ್ಷುಸ್ಸಿಗೂ ಸ್ಥಾನವುಂಟೆಂದು ಅರ್ಥ. ಬುದ್ಧಿ ಊಹನೆಯಿಂದಲೂ ತರ್ಕದಿಂದಲೂ ಮಾಡಿಕೊಂಡ ಸಿದ್ಧಾಂತವಷ್ಟೇ ಸಾಲದು. ಆ

ಸಿದ್ಧಾಂತವು ಚಕ್ಷುಸ್ಸು ಮಾಡುವ ಪರೀಕ್ಷೆಯಿಂದ ದೃಢಪಟ್ಟಾಗ ಸತ್ಯದ ಅನುಭವವಾಗುತ್ತದೆ. ಅರ್ಜುನನಿಗೆ ಅಂಥಾ ಪ್ರತ್ಯಕ್ಷಪ್ರಮಾಣ ಈಗ ದೊರೆಯಿತು.

ಭಗವಂತನು ತಾತ್ಕಾಲಿಕವಾಗಿ ಅರ್ಜುನನ ಕಣ್ಣಿನ ತೇಜಸ್ಸನ್ನು ಹೆಚ್ಚಿಸಿದ್ದರೂ ಅರ್ಜುನನ ಮನುಷ್ಯತ್ವ ಹಿಂದಿದ್ದಂತೆಯೇ ಇತ್ತು. ಮನಸ್ಸಿನ ಬಲವೇನೂ ಹೆಚ್ಚಿರಲಿಲ್ಲ. ಆದದ್ದರಿಂದ ಭಯ. ತಾನು ಬೇಡಿದ್ದೇ ತನ್ನ ಕಣ್ಣೆದುರಿಗೆ ಬಂದಾಗ ಭಯ. ಬ್ರಹ್ಮಾನುಭವವು ಸುಲಭವೆಂಬಂತೆ ಮಾತನಾಡುವವರು ಈ ಸಂದರ್ಭವನ್ನು ಪದೇಪದೇ ಜ್ಞಾಪಕಕ್ಕೆ ತಂದುಕೊಳ್ಳಬೇಕು. ಬ್ರಹ್ಮವು ಅಂಗಡಿಯ ಸರಕಲ್ಲ. ಬ್ರಹ್ಮಾನುಭವವು ಕ್ರಯಕೊಟ್ಟು ಕೊಳ್ಳಲಾಗತಕ್ಕದ್ದಲ್ಲ. ಬ್ರಹ್ಮವಸ್ತುವನ್ನು ಅಗ್ಗ ಮಾಡಿದರೆ ನಷ್ಟವು ಬ್ರಹ್ಮಕ್ಕಲ್ಲ; ನಮಗೆ. ಆದದ್ದರಿಂದ ಬ್ರಹ್ಮವನ್ನು ಕುರಿತೂ ಮೋಕ್ಷವನ್ನು ಕುರಿತೂ ಮಾತನಾಡುವುದನ್ನೂ ಆ ಮಾತು ಕೇಳುವುದನ್ನೂ ನಾವು ಮಿತಿಯಲ್ಲಿರಿಸಿಕೊಳ್ಳುವುದು ಒಳ್ಳೆಯದು.

ಅರ್ಜುನ ಹಾಗೆ ಭೀತನಾಗಿ

> ಆಖ್ಯಾಹಿ ಮೇ ಕೋ ಭವಾನುಗ್ರರೂಪಃ ॥

ಎಂದು ಕೇಳಿದಾಗ ಭಗವಂತ ಕನಿಕರಿಸಿ ಪ್ರತ್ಯುತ್ತರವನ್ನು ಕರುಣಿಸಿದ:

> ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ ।
> ಋತೇಽಪಿ ತ್ವಾ ನ ಭವಿಷ್ಯನ್ತಿ ಸರ್ವೇ ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥

“ಲೋಕಗಳನ್ನು ಕ್ಷಯಮಾಡಿಸುವವನೂ ಹಾಗೆಯೇ ವೃದ್ಧಿಗೊಳಿಸುವವನೂ ಆದ ಕಾಲಪುರುಷನು ನಾನು. ಈಗ ಲೋಕಸಂಹಾರಕ್ಕೆ ಹೊರಟ್ಟಿದ್ದೇನೆ. ಯುದ್ಧದಲ್ಲಿ ನೀನಿಲ್ಲದಿದ್ದರೂ ಈಗ ಶತ್ರುಸೈನ್ಯದಲ್ಲಿರುವ ಯೋಧರು ಯಾರೂ ಉಳಿಯಲಾರರು.”

> ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।
> ಮಯ್ಯೈವೈತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥

“ಆದದ್ದರಿಂದ ಏಳು; ಯುದ್ಧದಲ್ಲಿ ಸೇರಿ ಯಶಸ್ಸನ್ನು ಗಳಿಸಿಕೋ. ಶತ್ರುಗಳನ್ನು ಗೆದ್ದು ರಾಜ್ಯಸಂಪತ್ತನ್ನು ಸಮೃದ್ಧಿಯಾಗಿ ಅನುಭವಿಸು. ನಿನ್ನ ಶತ್ರುಪಕ್ಷದವರು ಮೊದಲೇ ನನ್ನಿಂದ

ಹತರಾಗಿದ್ದಾರೆ. ನೀನು ಈಗ ಬರಬೇಕಾದದ್ದು ನೆವಕ್ಕಾಗಿ ಮಾತ್ರ”.

ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥

“ನನ್ನಿಂದಲೇ ಧ್ವಂಸವಾಗಿದ್ದಾರೆ ಶತ್ರುಗಳು; ಅವರನ್ನು ಗೆಲ್ಲುವ ಕೆಲಸ ನಿಜವಾಗಿ ಮುಗಿದಿದೆ. ಅವರ ಚಿಂತೆಯನ್ನು ಬಿಡು; ಅವರಿಗಾಗಿ ವ್ಯಥೆ ಬೇಡ. ಯುದ್ಧಕ್ಕೆ ಬಾ”.

ಈಶ್ವರನನ್ನು “ಶಾಶ್ವತಧರ್ಮಗೋಪ್ತಾ” ಎಂದು ಅರ್ಜುನನೇ ಒಪ್ಪಿಕೊಂಡನಷ್ಟೆ? (ಶ್ಲೋ ॥ ೧೮) ಧರ್ಮವನ್ನು ಕಾಪಾಡುವ ಜವಾಬ್ದಾರಿ ಈಶ್ವರನದು, ಅರ್ಜುನನದಲ್ಲ; ಭೀಷ್ಮಾದಿಗಳದು ಸಹ ಅಲ್ಲ. ಧರ್ಮಸಂಸ್ಥಾಪನೆಗಾಗಿ ಆಗಬೇಕಾಗಿದ್ದದ್ದನ್ನೆಲ್ಲ ಸಂಕಲ್ಪಿಸಿ ತಂತ್ರಯೋಜನೆ (ಪ್ಲ್ಯಾನ್) ಮಾಡಿದ್ದಾಗಿತ್ತು. ಅರ್ಜುನನು ಒಲ್ಲೆನೆಂದ ಮಾತ್ರಕ್ಕೆ ಅದು ನಿಲ್ಲುವುದಾಗಿರಲಿಲ್ಲ. ಇಂಥಾದ್ದೇ ದೈವವಿಧಿ. ಅದನ್ನೇ ಮುಂದೆ “ದೈವಂ ಚೈವಾತ್ರ ಪಂಚಮಮ್” (ಅ ॥ ೧೮, ಶ್ಲೋ ॥ ೧೪) ಎಂದು ಸ್ವಾಮಿ ಹೇಳಿದ್ದಾನೆ. ವ್ಯಕ್ತಿಮನುಷ್ಯನ ಜೀವನದಲ್ಲಿಯೂ ಜನಜನಾಂಗಗಳ ಚರಿತ್ರೆಯಲ್ಲಿಯೂ ದೈವವೇ ಕಡೆಯ ನಿರ್ಣಾಯಕ. ದೈವವನ್ನಂಗೀಕರಿಸದಿರುವುದೇ ಅಹಂಕಾರ. ಇದನ್ನು ಅರ್ಜುನ ಕಂಡುಕೊಂಡ.

ಲೋಕಸಂಸ್ಥಿತಿಗೆ ಒಂದು ಯುದ್ಧ ಅನಿವಾರ್ಯವಾಗಿತ್ತು. ಅದು ನಡೆದ ಹೊರತು ಮನುಷ್ಯಲೋಕಕ್ಕೆ ಸಾಮಾನ್ಯವೂ ಶಾಶ್ವತವೂ ಆದ ಧರ್ಮವು ಜಗತ್ತಿನಲ್ಲಿ ಉಳಿಯುತ್ತಿರಲಿಲ್ಲ. ಅದು ಒಬ್ಬ ಅರ್ಜುನನಿಗಾಗಿಯಾಗಲಿ ಅಥವಾ ಐವರು ಪಾಂಡವರಿಗೋಸ್ಕರವಾಗಿಯಾಗಲಿ ಒದಗಿದ ಯುದ್ಧವಲ್ಲ. ಅದರಲ್ಲಿ ಅರ್ಜುನನಿಗಿದ್ದ ಪಾತ್ರವು ಕಾರಣರೂಪದ್ದಲ್ಲ, ಉಪಕರಣರೂಪದ್ದು. ಎಂಥ ಯುದ್ಧಕ್ಕೂ ಎರಡು ಕಕ್ಷಿ ಬೇಕು. ಒಂದು ಕಕ್ಷಿ ಸಿದ್ಧವಾಗಿತ್ತು: ಇನ್ನೊಂದು ಅಲ್ಲಾಡುತ್ತಿತ್ತು. ಇದನ್ನು ದೃಢಪಡಿಸುವುದು ಶಾಶ್ವತ ಧರ್ಮಗೋಪ್ತನ ಸಂಕಲ್ಪಯೋಜನೆಗೆ ಅವಶ್ಯವಾಗಿತ್ತು.

ಸಾಂಖ್ಯೋಪನ್ಯಾಸ ಕರ್ಮೋಪನ್ಯಾಸ ಧ್ಯಾನೋಪನ್ಯಾಸಾದಿಗಳಿಂದ ಹೊಳೆಯದಿದ್ದ ಜಗನ್ಮರ್ಮ ಈಗ ಅರ್ಜುನನ ಮನಸ್ಸಿಗೆ ಹೊಳೆಯಿತು. ಭಗವಂತ ಜಗನ್ನಿಯಾಮಕ. ಆತ ನಮ್ಮಲ್ಲಿ ಅನುಗ್ರಹಮಾಡಿದ್ದೆಂದರೆ ನಮಗೊಂದು ಧರ್ಮಕರ್ತವ್ಯವನ್ನು ನಿಯಮಿಸಿದ್ದು. ಅದನ್ನು ನಾವು ಮಾಡೆವೆಂದರೆ ನಿಂತುಹೋಗುವುದು ಧರ್ಮವಲ್ಲ, ನಮ್ಮ ಜೀವ ಪ್ರಗತಿ.

ನಾವು ಬಿಟ್ಟರೆ ಭಗವಂತನಿಗೆ ಬೇರೆ ಗತಿಯಿಲ್ಲದೆ ಹೋಗುವುದಿಲ್ಲ; ಗತಿಯಿಲ್ಲದೆ ಹೋಗುವುದು ನಮಗೆ. ಇಂಥಾ ಸದವಕಾಶ ಬಂದಾಗ ಅದು ನಮಗೆ ಧರ್ಮ ವಿಧಿ. ಇದನ್ನು ಅರ್ಜುನ ಮನಗಂಡು ತಾನು ಬಹುದೂರ ಪರೀಕ್ಷಿಸಿ ಅಪಚಾರ ಮಾಡಿದ್ದಾಯಿತೆಂದು ಪಶ್ಚಾತ್ತಾಪ ಪಟ್ಟ.

ಯಚ್ಚಾವಹಾಸಾರ್ಥಮಸತ್ಕೃತೋಽಸಿ ವಿಹಾರಶಯ್ಯಾಸನಭೋಜನೇಷು ।
ಏಕೋಽಥವಾಽಪ್ಯಚ್ಯುತ ತತ್ಸಮಕ್ಷಂ ತತ್ ಕ್ಷಾಮಯೇ ತ್ವಾಮಹಮಪ್ರಮೇಯಮ್ ॥

"ಹೇ ಕೃಷ್ಣ, ನೀನು ಅದ್ಭುತಮಹಿಮೆಯುಳ್ಳವನು. ನಾವಿಬ್ಬರೂ ವಿಹಾರದಲ್ಲಿದ್ದಾಗ, ಮಲಗಿದ್ದಾಗ, ಸುಖವಾಗಿ ಕುಳಿತಿದ್ದಾಗ, ಊಟ ಮಾಡಿದಾಗ, ನೀನೊಬ್ಬನೇ ಇದ್ದಾಗ, ಇತರ ಜನವಿದ್ದಾಗ, ನಾನು ಹಾಸ್ಯಕ್ಕಾಗಿ ಮರ್ಯಾದೆ ಮೀರಿ ನಡೆದದ್ದುಂಟು. ಅದನ್ನೆಲ್ಲ ನೀನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ".

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ ॥
ಕಿರೀಟಿನಂ ಗದಿನಂ ಚಕ್ರಹಸ್ತಮ್ ॥

"ಹಿಂದೆ ಎಂದೂ ಯಾರೂ ಕಾಣಲಾಗದೆ ಇದ್ದದ್ದನ್ನು ಈಗ ನಾನು ಕಂಡು ಸಂತೋಷಿಸಿದ್ದೇನೆ. ಹಾಗೆಯೇ ಭಯದಿಂದ ಮನಸ್ಸಿನಲ್ಲಿ ಕುಗ್ಗಿದ್ದೇನೆ. ಭಗವಂತ, ನೀನು ಹಿಂದೆ ಗದಾಧಾರಿಯಾಗಿ, ಚಕ್ರಹಸ್ತನಾಗಿ, ಕಿರೀಟ ತೊಟ್ಟು ಮೆರೆದ ನಿನ್ನ ಸಾಮಾನ್ಯರೂಪವನ್ನು ತೋರಿಸು".

ಶ್ರೀಕೃಷ್ಣ ಸುಪ್ರೀತನಾದ: ಅರ್ಜುನ ಈಗ ದಾರಿಗೆ ಬಂದ; ಅವನ ಅಂತರಂಗ ಪರಿವರ್ತನೆ (Conversion) ಪೂರ್ಣವಾಯಿತು. ಇನ್ನು ಅವನು ಕೃತ್ಯಕರಣಕ್ಕೆ ಸಿದ್ಧನಾದಾನೆಂಬ ಭರವಸೆ ಸ್ವಾಮಿಗೆ ಬಂತು.

ಮಾ ತೇ ವ್ಯಥಾ ಮಾಚ ವಿಮೂಢಭಾವೋ ದೃಷ್ಟ್ವಾ ರೂಪಂ ಘೋರಮೀದೃಙ್ಮಮೇದಮ್ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ ತದೇವ ಮೇ ರೂಪಮಿದಂ ಪ್ರಪಶ್ಯ ॥

“ಕಳವಳ ಬಿಡು; ಭ್ರಾಂತಿ ಬಿಡು; ಭಯ ಬಿಡು; ಸಂತೋಷಚಿತ್ತನಾಗು. ನನ್ನ ಘೋರಾಕಾರವನ್ನು ನೋಡಿ ಭೀತನಾದ ನೀನು ಈಗ ಪುನಃ ನನ್ನ ಸೌಮ್ಯಾಕಾರವನ್ನು ನೋಡಿ ಸಂಪ್ರೀತನಾಗು”.

ಭಗವಂತ ಪ್ರಸನ್ನನಾಗಿ ಮತ್ತೆ ತನ್ನ ಲೌಕಿಕ ರೂಪವನ್ನು ತಾಳಿದ. ಅರ್ಜುನನೆಂದ:

> ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ ।
> ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ ।

“ಜನಾರ್ದನ, ಈಗ ನನಗೆ ಕಳವಳ ಹೋಗಿ ನೆಮ್ಮದಿಯಾಯಿತು. ನಿನ್ನ ಸೌಮ್ಯವುಳ್ಳ ಮಾನುಷರೂಪವನ್ನು ನೋಡಿ ನನ್ನ ಮನಸ್ಸು ತನ್ನ ಸಾಮಾನ್ಯ ಸಮಾಧಾನಕ್ಕೆ ಬಂದಿದೆ”.

ಭಗವಂತ ಹೇಳಿದ: “ಅರ್ಜುನ, ವೇದಗಳಿಂದ, ತಪೋದಾನಯಜ್ಞಾದಿ ಪುಣ್ಯಗಳಿಂದ ಸಾಧಿಸಲಿಕ್ಕಾಗದಂಥ ವಿಶೇಷವನ್ನು ನೀನು ನೋಡಿದವನಾದೆ. ಇಂಥಾ ಭಗವತ್ಸ್ವರೂಪಾನುಭವಕ್ಕೆ ಭಕ್ತಿಯೊಂದೇ–ಅನನ್ಯವಾದ ಭಕ್ತಿಯೊಂದೇ–ಮಾರ್ಗ”.

> ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
> ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥

“ಯಾರು ನನ್ನ (ಭಗವಂತನ) ಕರ್ಮಗಳನ್ನು ಮಾಡುತ್ತ, ನನ್ನನ್ನೇ ಸರ್ವೋತ್ಕೃಷ್ಟ ಹಿತವೆಂದು ನಂಬಿ, ನನ್ನ ಭಕ್ತನಾಗಿ, ಭಗವದಿತರವಾದದ್ದರ ಸಂಗವನ್ನು ಬಿಟ್ಟು, ಯಾವ ಪ್ರಾಣಿಯಲ್ಲಿಯೂ ವೈರವಿಲ್ಲದೆ ಜೀವಿಸುತ್ತಾನೋ ಅವನು ನನ್ನನ್ನೇ ಸೇರುತ್ತಾನೆ”.

ವಿಶ್ವರೂಪದರ್ಶನದಿಂದ ಅರ್ಜುನನಿಗೆ ಒಂದು ಮಹಾಮಹಿಮೆಯ ಆಂತರಿಕಾನುಭವವಾಯಿತು. ಆದರೆ ವಿಶ್ವರೂಪದ ಹಿಂದುಗಡೆ–ವಿಶ್ವರೂಪಕ್ಕೂ ಆಧಾರವಾಗಿ ವಿಶ್ವಾತೀತ ತತ್ತ್ವ ಒಂದಿದೆಯೆಂಬುದನ್ನು ನಾವು ಮರೆಯತಕ್ಕದ್ದಲ್ಲ. ವಿಶ್ವ, ವಿಶ್ವಾತೀತ–ಎರಡೂ ಜ್ಞಾಪಕದಲ್ಲಿರಬೇಕಾದುವೇ. ಅದು ವಾಸ್ತವವಾಗಿ ಎರಡಲ್ಲ, ಒಂದೇ. ವಿಶ್ವಕ್ಕೆ ರೂಪವುಂಟು, ಆದದ್ದರಿಂದ ಅದು ದರ್ಶನಸಾಧ್ಯವಾದದ್ದು. ವಿಶ್ವಾತೀತಕ್ಕೆ ರೂಪವಿಲ್ಲ, ಆದದ್ದರಿಂದ ಅದು ದರ್ಶನಕ್ಕೆ ಅಸಾಧ್ಯವಾದದ್ದು.

ರೂಪವೆಂದರೆ ಒಂದು ಗೊತ್ತಾದ ಎಲ್ಲೆಯ ಗೆರೆ–ಒಂದು ಅವಧಿರೇಖೆ, ಒಂದು ವಿಸ್ತಾರ ಪರಿಮಿತಿ. ಹೀಗೆ ರೂಪವು ಸಾಂತ, ಶುದ್ಧಸತ್ತ್ವವು ಅನಂತ–ಅದು ಮೇರೆ ಮಿತಿ ಇಲ್ಲದ್ದು. ಅದಕ್ಕೆ ರೂಪ ತರುವುದು ಹೇಗೆ? ರೂಪ ಬಂದರೆ ಅನಂತ ಹೋಗಿ ಸಾಂತವಾಗುತ್ತದೆ. ಹೀಗೆ ವಿಶ್ವಾತೀತತತ್ತ್ವವು ಕಣ್ಣುಕಿವಿಗಳಿಗೆ ದುರ್ಲಭ. ಹಾಗಾದರೆ ಅದರ ಅನುಭವ ಬರುವುದು ಹೇಗೆ? ಅದು ಮನಸ್ಸುಬುದ್ಧಿಗಳು ತಪಸ್ಸುಮಾಡಿದರೆ ಅವುಗಳಿಗೆ ಗೋಚರವಾಗುತ್ತದೆ. ಮನೋಬುದ್ಧಿಗಳ ತಪಸ್ಸೇ ಭಕ್ತಿ. ಆ ತಪಸ್ಸಿಗೆ ಒಂದು ಸುಲಭವಾದ ಆಶ್ರಯಸ್ಥಾನ ಬೇಕು, ಅದೇ ಒಂದು ಆಕೃತಿ, ಒಂದು ಮೂರ್ತಿ. ಗುಡಿಯಲ್ಲಿ ಪ್ರದಕ್ಷಿಣೆ ಮಾಡಲಿಕ್ಕೆ ಕೇಂದ್ರವಾಗಿ ಒಂದು ದೇವತಾಪ್ರತಿಮೆಯಿರುವಂತೆ ಸಾಮಾನ್ಯರ ಮನೋಬುದ್ಧಿಗಳ ಪ್ರದಕ್ಷಿಣೆಗೆ ವಿಶ್ವಮೂರ್ತಿ ಆಲಂಬನವಾಗುತ್ತದೆ. ವಿಶ್ವಮೂರ್ತಿಯ ಸೇವೆಯೇ ಧರ್ಮ. ವಿಶ್ವಾಧಿಕತತ್ತ್ವಸೇವೆಯೇ ಅಧಿಧರ್ಮ. ವಿಶ್ವ ಜೀವನದಲ್ಲಿ ಸಹಭಾಗಿಯಾದವನು ವಿಶ್ವಾತೀತವನ್ನೂ ಕಾಣುವನು. ವಿಶ್ವವೇ ಜೀವಿಯನ್ನು ವಿಶ್ವಾತೀತಕ್ಕೊಯ್ಯುವ ಸೇತುವೆ.

> ವಿಶ್ವಾಕಾರಾನುಭವದೆ ।
> ವಿಶ್ವಾತೀತಾನುಭೂತಿ ಸಮನಿಕುಮದರಿಂ ॥
> ವಿಶ್ವಾಸವೃದ್ಧಿಗೆ ನರಂ- ।
> ಗೀಶ್ವರನುಗ್ರಾದ್ಭುತಾಕೃತಿಯ ಕಾಣಿಸಿದಂ ॥

ನಮ್ಮ ವ್ಯಾಸಂಗದ ಪ್ರಾರಂಭದಲ್ಲಿ "ಈ ಗ್ರಂಥವು ಶಾಸ್ತ್ರವಲ್ಲವೆ? ಇದು ಗೀತೆಯಾದದ್ದು ಹೇಗೆ?" –ಎಂದು ಪ್ರಶ್ನೆಯೆತ್ತಿದೆವು. ಆ ಪ್ರಶ್ನೆಗೆ ಉತ್ತರವನ್ನು ಕೊಂಚ ಮಟ್ಟಿಗೆ ಈ ವಿಶ್ವರೂಪಾಧ್ಯಾಯದಲ್ಲಿ ಕಂಡಿದ್ದೇವೆ. ಗೀತೆ ಎಂಬುದು ಒಂದು ಕಾವ್ಯಪ್ರಭೇದ. ಯಾವ ವಾಕ್ಪ್ರಬಂಧವು ಸಂಗೀತದ ಸಹಕಾರವನ್ನು ಪಡೆದುಕೊಂಡು, ಅದನ್ನು ಕೇಳುವವನ ಅಂತರಂಗದಲ್ಲಿ ಭಾವಚಿತ್ರಗಳನ್ನೆಬ್ಬಿಸಿ ಆಪ್ಯಾಯನವುಂಟುಮಾಡಬಲ್ಲದೋ ಅದು ಗೀತ ಅಥವಾ ಹಾಡು. ಅದು ಚಿತ್ತಸಮಾಧಾನಕರವಾದ ಒಂದು ವಿಶೇಷ ಅನುಭವವನ್ನು ನಮ್ಮೊಳಗೆ ಉಂಟಾಗಿಸಬೇಕು. ಅರ್ಜುನನಿಗೆ ವಿಶ್ವರೂಪದರ್ಶನದಿಂದ ಮನಸ್ಸಿನ ವ್ಯಥೆ ಕಳೆದು, ಚಿಂತೆ ಕಳೆದು, ಭಯಸಂದೇಹಗಳು ಕಳೆದು, ನಿಶ್ಚಯತತ್ತ್ವವನ್ನು ಕಂಡ ಆನಂದ ಉಂಟಾಯಿತು. ಪ್ರಯಾಣಿಕನು ಒಂಟಿಯಾಗಿ ದೇಶದಿಂದ ದೇಶಕ್ಕೆ ನಡೆದು ಹೋಗುತ್ತಿರುವಾಗ ಮಧ್ಯೆ ರಾತ್ರಿಯಲ್ಲಿ ಕಗ್ಗಾಡಿನೊಳಗೆ ಸಿಕ್ಕಿ ದಿಕ್ಕುಗೆಟ್ಟು ಬಳಲಿತೊಳಲಿ ತಾನು

ಹುಲಿಯ ಪಾಲಾದೆನೆಂದು ತಿಳಿದುಕೊಂಡಿರುವಾಗ ಸ್ನೇಹಿತನೊಬ್ಬನು ಬಂದು ಬೆಳಕು ತಂದು ಸುಗಮವಾದ ದಾರಿಯಲ್ಲಿ ಅವನನ್ನು ಉದ್ದಿಷ್ಟಸ್ಥಾನಕ್ಕೆ ತಲುಪಿಸಿದಾಗ ಅವನ ಮನಸ್ಸಿನಲ್ಲಿ ಎಂಥ ಭಾವನೆಯುಂಟಾಗಬಹುದೋ ಅಂಥಾದ್ದು ಈಗ ಅರ್ಜುನನಿಗೆ ಆಯಿತು. ಆ ಅನುಭವವನ್ನು ವ್ಯಾಸರ ವಚನರೀತಿ ನಮ್ಮಲ್ಲಿ ಪ್ರತಿಬಿಂಬವಾಗಿಸುತ್ತದೆ. ಆ ಸನ್ನಿವೇಶದ ಮುಖ್ಯರಸ ಶಾಂತಿ; ಶಾಂತಿಗೆ ಕರುಣೆ ಅದ್ಭುತಗಳು ಪ್ರೇರಕ ಪೋಷಕಗಳಾದ ಉಪರಸಗಳು. ಶಾಂತವು ಒಂದು ರಸವೆ?–ಎಂದು ಒಂದು ಪ್ರಶ್ನೆಯುಂಟು.ಅದರ ಚರ್ಚೆಗೆ ಸದ್ಯಃ ಇಲ್ಲಿ ಸ್ಥಳವಿಲ್ಲ. ಶಾಂತವು ರಸಮಾತ್ರವಲ್ಲ, ಪರಮರಸ–ಅಧಿರಸ–ಎಂಬುದು ಅರ್ಜುನನ ಮಾತಿನಿಂದ ಸ್ಪಷ್ಟಪಡುತ್ತದೆ. ಶಾಂತರಸವು ಇತರ ಕಾವ್ಯಕಲಾರಸಗಳಿಂದ ಒಂದಂಶದಲ್ಲಿ ವಿಲಕ್ಷಣವಾದದ್ದು. ಶೃಂಗಾರಾದಿಗಳಂತೆ ಅದು ಸರ್ವಜನವಶೀಕರಣಸಮರ್ಥವಾದದ್ದಲ್ಲ. ಯಾರಿಗೆ ಅಶಾಂತಿಯ ಅನುಭವವುಂಟೋ ಅಂಥವರಿಗೆ ಮಾತ್ರ ಶಾಂತಿಯ ಸ್ವರೂಪ ವೇದ್ಯವಾಗುತ್ತದೆ. ವಿರಹಾದಿಗಳು ಅಶಾಂತಿಯಲ್ಲವೆ?–ಎಂದರೆ, ಹೌದು; ಆದರೆ ಅವು ಕ್ವಚಿತ್ಕಾಲದ ಕ್ವಚಿದಂಶದ ಅಶಾಂತಿಗಳು; ಕ್ವಚಿಲ್ಲಾಭದಿಂದ ಹೋಗುತ್ತವೆ. ಅರ್ಜುನನಿಗೆ ಆಗಿದ್ದ ಅಶಾಂತಿ ಹಾಗೆ ಕ್ವಾಚಿತ್ಕವಾದದ್ದಲ್ಲ, ಜೀವವನ್ನು ಅಮೂಲಾಗ್ರವಾಗಿ ಹಿಡಿದು ಅಲ್ಲಾಡಿಸಿದ್ದದ್ದು. ಅದು ಯಾವುದೋ ಒಂದು ಪದಾರ್ಥ ತನಗೆ ಬೇಕೆಂಬ ಕಾಮನಾಮೂಲವಾದದ್ದಲ್ಲ; ಜೀವಿತ ಸಾರ್ಥಕ್ಯವನ್ನು ಕುರಿತದ್ದು. ಯಾರಿಗೆ ಜೀವಿತದ ಮರ್ಮವೇನು? ಲಕ್ಷ್ಯವೇನು? ಸಾರ್ಥಕತೆ ಬರುವುದು ಹೇಗೆ?–ಎಂಬ ಪ್ರಶ್ನೆಗಳು ಅಶಾಂತಿಯನ್ನುಂಟುಮಾಡಿವೆಯೋ ಅಂಥವರಿಗೆ ಗೀತೆಯ ಶಾಂತಿ. ಈ ಶಾಂತಿಗೆ ಪ್ರಧಾನಕಾರಣವಾದದ್ದು ಶಾಸ್ತ್ರತರ್ಕವಲ್ಲ; ಕೇವಲ ಬುದ್ಧಿಸಾಧ್ಯವಾದ ವಾದ ಪ್ರತಿವಾದಗಳಲ್ಲ. ಇಲ್ಲಿ ಕಾರ್ಯಕಾರಿಯಾದದ್ದು ಅಂತರಂಗಸಮಸ್ತದ ಒಂದು ವಿಶೇಷಾಕಾರದ ಅನುಭವ. ಬುದ್ಧಿ ಅಂತರಂಗಕ್ಕೆ ದ್ವಾರಪ್ರಾಯ ಮಾತ್ರವಾಗಿತ್ತು. ಆ ಬುದ್ಧಿದ್ವಾರದಿಂದ ಉಪದೇಶವು ಹೃದಯದೊಳಕ್ಕೆ ಪ್ರವೇಶಿಸಿದ ಕಾರಣ ಅದು ಶಾಸ್ತ್ರವಾಯಿತು. ಆ ಉಪದೇಶವು ಸಮಸ್ತ ಜ್ಞಾನೇಂದ್ರಿಯಗಳನ್ನೂ ಮನೋಬುದ್ಧ್ಯಹಂಕಾರಾದಿ ವೇದನಕಾರಣಗಳನ್ನೆಲ್ಲವನ್ನೂ ಸ್ವಾಧೀನಪಡಿಸಿಕೊಂಡು ಮಹದ್ದರ್ಶನದಲ್ಲಿ ತಲ್ಲೀನಮಾಡಿದ ಕಾರಣ ಅದು ಕಾವ್ಯಪ್ರಾಯವಾಯಿತು. ತಲ್ಲೀನತಾ ಸಂಪಾದನೆಯೇ ಕಾವ್ಯಕಲೆಯ ಪರಮೋತ್ತಮ ಕಾರ್ಯ. ಈ ವಿಚಾರವನ್ನು ಮತ್ತೊಮ್ಮೆ ನೋಡಲು ಮುಂದೆ ಅವಕಾಶ ದೊರೆತೀತು.

ವಿಶ್ವರೂಪಾಧ್ಯಾಯದ ಮುಖ್ಯವಸ್ತುವು ಬ್ರಹ್ಮದ ವಿರಾಟ್‌ಸ್ವರೂಪ. ವಿರಾಡ್ರೂಪದ ವರ್ಣನೆ ವೇದಗಳಲ್ಲಿ ಎಷ್ಟೋಕಡೆ ಬರುತ್ತದೆ. ಮುಖ್ಯವಾದ ಎರಡು ಪ್ರಕರಣಗಳನ್ನು ಇಲ್ಲಿ ಸೂಚಿಸಬಹುದು. ಮೊದಲನೆಯದು ಪುರುಷಸೂಕ್ತ.

> ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
> ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಮ್ ॥

ಭಗವದ್ಗೀತೆಯ ಹತ್ತು–ಹನ್ನೊಂದನೆಯ ಅಧ್ಯಾಯಗಳು ಪುರುಷಸೂಕ್ತದ ವಿಸ್ತರಣೆ ಎಂದು ಹೇಳಬಹುದು. ಗೀತೆಯ ಮೂರನೆಯ ಅಧ್ಯಾಯದಲ್ಲಿ ಬರುವ

> ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ ॥

ಇತ್ಯಾದಿ ವಾಕ್ಯಗಳ ಮೂಲವನ್ನು ಪುರುಷಸೂಕ್ತದಲ್ಲಿ ಕಾಣಬಹುದು.

> ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ॥

ವೇದದಲ್ಲಿ ಭಗವಂತನ ವಿಶ್ವರೂಪವನ್ನು ಪ್ರಶಂಸೆ ಮಾಡುವ ಇನ್ನೊಂದು ಪ್ರಕರಣವು ಶತರುದ್ರೀಯ. ಇದರಲ್ಲಿ ಜಗತ್ತಿನಲ್ಲಿ ನಮಗೆ ಕಾಣುವ ಸಕಲ ಪ್ರಾಣಿವರ್ಗವೂ ಮನುಷ್ಯನ ನಾನಾ ಆಕಾರವಿಕಾರಗಳೂ ಭಗವಂತನ ಲೀಲೆ ಎಂದು ಘೋಷಿತವಾಗಿದೆ.

> ನಮ ಆಕ್ಖಿದತೇ ಚ ಪ್ರಕ್ಖಿದತೇ ಚ ॥

"ಹೋ" ಎಂದು ಅಳುವವನೂ ಗೋಳಾಡುವವನೂ ಭಗವಂತನ ಸ್ವರೂಪಿಗಳಂತೆ !

> ನಮೋ ವಃ ಕಿರಿಕೇಭ್ಯೋ ದೇವಾನಾಗ್ಂ ಹೃದಯೇಭ್ಯೋ ... ॥

"ಕಿಲ ಕಿಲ" ನಗುವವನೂ ದೇವತಾವೇಶಗಳನ್ನು ತಾಳುವವನೂ ಭಗವದ್ರೂಪಿಗಳಂತೆ !

> ತಸ್ಕರಾಣಾಂ ಪತಯೇ ನಮಃ ।
> ವಂಚತೇ ಪರಿವಂಚತೇ ಸ್ತಾಯೂನಾಂ ಪತಯೇ ನಮಃ ॥

ಮೋಸಗಾರನೂ ಕಳ್ಳನೂ ಭಗವತ್ಸ್ವರೂಪಿಗಳಂತೆ !

ಭಗವಂತನು ಘೋರನೂ ರುದ್ರನೂ ಭೀಮನೂ ಉಗ್ರನೂ ಆದಂತೆ ಶಿವನೂ ಹೌದು, ಮೃಡ–ಸುಖಸ್ವರೂಪಿಯೂ ಹೌದು. ಈ ಕೊನೆಯಿಂದ ಆ ಕೊನೆಯವರೆಗೆ ಎಲ್ಲವೂ ಉಂಟು ಅವನಲ್ಲಿ.

ವ್ರೀಹಯಶ್ಚ ಮೇ ಯವಾಶ್ಚ ಮೇ ಮಾಷಾಶ್ಚ ಮೇ
ತಿಲಾಶ್ಚ ಮೇ ಮುದ್ಗಾಶ್ಚ ಮೇ ॥

ಹೀಗೆ ಎಲ್ಲವನ್ನೂ ಕೊಡತಕ್ಕವನು ಅವನು. ಸರ್ವಸಮೃದ್ಧನಾದವನು ಭಗವಂತ. ರುದ್ರಾಧ್ಯಾಯ ಚಮಕಾಧ್ಯಾಯಗಳು ವಿಶ್ವರೂಪಾಧ್ಯಾಯಕ್ಕೆ ಮತ್ತಷ್ಟು ಪರಿಪೋಷಕವಾಗಿ ಬ್ರಹ್ಮರಹಸ್ಯವನ್ನು ನಮಗೆ ಪರಿಚಿತಗಳಾದ ವಸ್ತುವಿಷಯಗಳ ಮೂಲಕ ವಿಶದಪಡಿಸಬಲ್ಲವಾಗಿವೆ.

ಸಂಗ್ರಹ

ಈಶ್ವರತಂತ್ರಮಲಂಘ್ಯಂ ।
ಭೀಷ್ಮಾದ್ಭುತಚಿತ್ರಮೆಂದು ಕಣ್ಗೊಪ್ಪಿಸುತಂ ॥
ವಿಶ್ವಾಸವ ದೃಢಗೆಯ್ದಂ ।
ವಿಶ್ವಾಕಾರದಿನಮೇಯನೇಕಾದಶದೊಳ್ ॥

ತ್ರಿಭುವನರಮಣೀಯಂ ರುಕ್ಮಿಣೀಶ್ಲಿಷ್ಟಕಾಯಂ ।
ಅನುಪಮಿತನಮೇಯಂ ವೇಣುಗಾನಾನುಮೇಯಂ ॥
ವಿರಚಿತಬಹುಮಾಯಂ ವಿಶ್ವಮಾಯಾನಪಾಯಂ ।
ಕವಿಬುಧಜನಗೇಯಂ ಕೃಷ್ಣನಸ್ಮತ್ಸಹಾಯಂ ॥

ಅಥ ಭಕ್ತಿಯೋಗೋ ನಾಮ ದ್ವಾದಶೋಽಧ್ಯಾಯಃ

ಅರ್ಜುನ ಉವಾಚ-

ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ

॥ ೧ ॥

ಶ್ರೀಭಗವಾನುವಾಚ-

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ

॥ ೨ ॥

ಯೇ ತ್ವಕ್ಷರಮನಿರ್ದೇಶಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್

॥ ೩ ॥

ಸಂನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ।
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ

॥ ೪ ॥

ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ

॥ ೫ ॥

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ

॥ ೬ ॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಮ್

॥ ೭ ॥

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ

॥ ೮ ॥

ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಽಽಪ್ತುಂ ಧನಂಜಯ

॥ ೯ ॥

ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ

॥ ೧೦ ॥

ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್

॥ ೧೧ ॥

ಶ್ರೇಯೋ ಹಿ ಜ್ಞಾನಮಭ್ಯಾಸಾಜ್ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಮ್

॥ ೧೨ ॥

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ

॥ ೧೩ ॥

ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ

॥ ೧೪ ॥

ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ

॥ ೧೫ ॥

ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।
ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ

॥ ೧೬ ॥

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ

॥ ೧೭ ॥

ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ

॥ ೧೮ ॥

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ

॥ ೧೯ ॥

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ

॥ ೨೦ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಭಕ್ತಿಯೋಗೋ ನಾಮ ದ್ವಾದಶೋಽಧ್ಯಾಯಃ

ಧ್ಯಾನಾಭ್ಯಾಸವಶೀಕೃತೇನ ಮನಸಾ ತನ್ನಿರ್ಗುಣಂ ನಿಷ್ಕ್ರಿಯಂ ।
ಜ್ಯೋತಿಃ ಕಿಂಚನ ಯೋಗಿನೋ ಯದಿ ಪರಂ ಪಶ್ಯಂತಿ ಪಶ್ಯಂತು ತೇ ॥
ಅಸ್ಮಾಕಂ ತು ತದೇವ ಲೋಚನಚಮತ್ಕಾರಾಯ ಭೂಯಾಚ್ಚಿರಂ ।
ಕಾಲಿಂದೀಪುಲಿನೋದರೇ ಕಿಮಪಿ ಯನ್ನೀಲಂ ಮಹೋ ಧಾವತಿ ॥

ಧ್ಯಾನಾಭ್ಯಾಸದೆ ತತ್ತ್ವಮಂ ಹೃದಯದೊಳ್ ತಾಮಾ ನಿರಾಕಾರಮಂ ।
ಕಾಣಲ್ಕಪ್ಪೊಡೆ ಕಾಣ್ಗೆ ಯೋಗಿವರರಾಂ ಸಾಮಾನ್ಯರೆಮ್ಮಕ್ಷಿಗಾ ॥
ವೇಣುಸ್ವಾನಸುಧಾಪ್ರಸಾದಿ ಯಮುನಾಕುಂಜೋದರಾಮೋದಿ ಮೇ- ।
ಘಾನೀಲದ್ಯುತಿ ನಾಟ್ಯವಾಡುಗೆ ಸದಾ ನಾಂ ಧನ್ಯರಾ ಲೀಲೆಯಿಂ ॥

–ಶ್ರೀಮಧುಸೂದನಸರಸ್ವತೀವಾಕ್ಯ

ಸೂಚನೆ

ಏಕನನಾಕಾರಂ ವಿಭು ।
ಲೋಕಾನುಗ್ರಹಕೆ ದಿವ್ಯ ವಿವಿಧಾಕಾರಂ ॥
ಸಾಕಲ್ಯವ ಶಕಲದೊಳಂ ।
ಸ್ವೀಕರಿಸಲ್ಕಹುದು ಭಕ್ತಿಶಮವಿನಯಮಿರಲ್ ॥

ಸಾರಾಂಶ

ನಮಗೆ ದೊರೆತ ಸುಖವೆಲ್ಲ ಈಶ್ವರಪ್ರಸಾದ, ದುಃಖವು ಆತನು ನಮಗೆ ವಿಧಿಸಿರುವ ಜೀವ ಶೋಧನೆ–ಈ ಭಾವನೆಯಿಂದ ಜಗದನುಭವಗಳನ್ನು ಕಾಣುವುದೇ ಕರ್ಮಫಲತ್ಯಾಗ. ಇದು ಜಾಗರೂಕವಾದ ಕರ್ತವ್ಯನಿರ್ಣಯವನ್ನೂ ಧರ್ಮೈಕನಿಷ್ಠೆಯನ್ನೂ ಫಲಾಫಲಸಮತ್ವದೃಷ್ಟಿಯನ್ನೂ ಈಶ್ವರಾರ್ಪಣಬುದ್ಧಿಯನ್ನೂ ಅಪೇಕ್ಷಿಸುತ್ತದೆ. ಕ್ರಮಕ್ರಮವಾಗಿ ಅಹಂತೆಯ ಸಂಬಂಧವನ್ನು ಕಳೆದು ಈಶ್ವರಸಂಬಂಧವನ್ನು ಪ್ರತ್ಯಕ್ಷೀಕಾರಮಾಡಿಕೊಳ್ಳುವ ವಿಧಾನವನ್ನು ಕೃಷ್ಣಭಗವಂತನು ಉಪದೇಶ ಮಾಡಿದ್ದಾನೆ.

ಪ್ರಕರಣ ೧೨

ಅಧ್ಯಾಯ ೧೨ - ಭಕ್ತಿಯೋಗವೆಂಬ ಭಕ್ತಿಸೋಪಾನಯೋಗ

ವಿಶ್ವರೂಪಾಧ್ಯಾಯದ ಪರಿಸಮಾಪ್ತಿಯಲ್ಲಿ ನಾವು ಒಂದು ವಿಶೇಷಾಂಶವನ್ನು ಜ್ಞಾಪಕಕ್ಕೆ ತಂದುಕೊಂಡೆವು. ಸದ್ವಸ್ತುವು ದ್ವಿಪ್ರಕಾರವಾದದ್ದು: ಒಂದು ವಿಶ್ವರೂಪ, ಇನ್ನೊಂದು ವಿಶ್ವಾತೀತ. ವಿಶ್ವರೂಪವೇ ದೃಶ್ಯಸತ್ಯ; ಅದೇ ವ್ಯಕ್ತ; ಅದೇ ಈಶ್ವರ ಯೋಗ. ವಿಶ್ವಾತೀತವೇ ಅದೃಶ್ಯಸತ್ಯ; ಅವ್ಯಕ್ತ; ಅದೇ ಪರಬ್ರಹ್ಮ. ಈ ಎರಡರಲ್ಲಿ ಯಾವುದು ತನಗೆ ಉಪಾಸ್ಯವಾದದ್ದು?–ಎಂಬುದು ಈಗ ಅರ್ಜುನನ ಪ್ರಶ್ನೆ. ಅದಕ್ಕೆ ಸ್ವಾಮಿ ಪ್ರತ್ಯುತ್ತರ ಹೇಳುತ್ತಾನೆ ಈ ಅಧ್ಯಾಯದಲ್ಲಿ. ಇದರ ಮುಖ್ಯ ಸಂಗತಿಗಳು ನಾಲ್ಕು:

1. ನಿರ್ಗುಣೋಪಾಸನೆಯ ಕ್ಲಿಷ್ಟತೆ
2. ಸಗುಣೋಪಾಸನೆಯ ಹೆಚ್ಚು ಸುಲಭತೆ
3. ಉಪಾಸನಾಸೋಪಾನಗಳು
4. ಉಪಾಸಕನು ಸಂಪಾದಿಸಿಕೊಳ್ಳಬೇಕಾದ ಗುಣಸಂಪತ್ತು.

ಅರ್ಜುನನು ಹೀಗೆ ಕೇಳಿದ: “ಮಹಾನುಭಾವ, ಯಾವುದನ್ನು ನಾನು ನಂಬಲಿ? ‘ಮತ್ಕರ್ಮಕೃತ್ ಮತ್ಪರಮಃ ಮದ್ಭಕ್ತಃ’ ಎಂದು ಹೇಳುತ್ತಿ. ಇಲ್ಲಿ ‘ಮತ್’ ಎಂದರೆ ಯಾರು? ವ್ಯಕ್ತರೂಪಿಯಾಗಿ ವಿಶ್ವಮಯನಾಗಿ ಕಾಣಿಸುತ್ತಿರುವ ಈಶ್ವರನಾದ ನಿನ್ನನ್ನು-ನಿನ್ನ ಆಕಾರವನ್ನು-ನಾನು ಆಶ್ರಯಿಸಲೆ? ಅಥವಾ ಅವ್ಯಕ್ತವಾಗಿ ನಿಷ್ಪ್ರಪಂಚವಾಗಿ ಅದೃಶ್ಯವಾಗಿರುವ ಶುದ್ಧಬ್ರಹ್ಮವೆಂಬುದನ್ನು ಆಶ್ರಯಿಸಲೆ? ಎರಡು ಮಾರ್ಗಗಳನ್ನೂ ನೀನು ಉಪದೇಶಿಸಿದ್ದಿ. ಯಾವುದು ಅವೆರಡರಲ್ಲಿ ಉತ್ತಮ?”

ತೇಷಾಂ ಕೇ ಯುಗವಿತ್ತಮಾಃ ॥

ಸ್ವಾಮಿಯ ಉತ್ತರ ಹೀಗೆ: ಅರ್ಜುನ, ಒಂದೆಡೆಗೆ ಪ್ರಯಾಣಮಾಡಲು ಅನೇಕ ಮಾರ್ಗಗಳಿರುವಾಗ ಯಾವ ಒಂದನ್ನು ಗೊತ್ತು ಮಾಡಬೇಕೆಂಬುದು ಪ್ರಯಾಣಿಕನ ದೇಹಬಲ ಮನೋಬಲಗಳನ್ನು ಅನುಸರಿಸಬೇಕಲ್ಲವೆ? ಒಂದು ದಾರಿ ಕಡಿದಾಗಿ, ಹಳ್ಳಕೊಳ್ಳ

ಕಲ್ಲುಮುಳ್ಳಗಳಿಂದ ಕಷ್ಟವಾಗಿರುತ್ತದೆ; ಆದರೆ ಅದು ಇನ್ನೊಂದು ದಾರಿಗಿಂತ ಹತ್ತಿರದ್ದಾಗಿರುತ್ತದೆ. ಬಲಿಷ್ಠನಿಗೂ ಅವಸರದಲ್ಲಿರುವವನಿಗೂ ಈ ದಾರಿ ಉತ್ತಮವೆನಿಸಬಹುದು–ದೂರ ಕಡಿಮೆಯಾದದ್ದರಿಂದ. ಇನ್ನೊಬ್ಬನು ದುರ್ಬಲನಾಗಿರುತ್ತಾನೆ; ಅವನು ನಿರಾಯಾಸತೆಯೇ ಮುಖ್ಯವೆನ್ನುತ್ತಾನೆ; ಅವನಿಗೆ ಬಿಡುವು ಹೆಚ್ಚಾಗಿರುತ್ತದೆ. ಅಂಥವನಿಗೆ ಬಳಸುದಾರಿಯೇ ಉತ್ತಮ. ಅದು ಹೆಚ್ಚು ಹೊತ್ತು ತೆಗೆದುಕೊಂಡರೂ ಮೈಗೆ ಘಾಸಿಯಿಲ್ಲ. ಮನುಷ್ಯಜೀವವು ಸದ್ಗತಿಗಾಗಿ ಮಾಡುವ ಯಾತ್ರೆಯೂ ಹಾಗೆಯೇ. ಅವ್ಯಕ್ತದ ಮಾರ್ಗ ಹೆಚ್ಚು ಕಷ್ಟಪಡಬಲ್ಲವರಿಗೆ ಉತ್ತಮ; ಅಷ್ಟಕ್ಕೆ ಶಕ್ತಿಯಿಲ್ಲದವರಿಗೆ ವ್ಯಕ್ತದ ಮಾರ್ಗವೇ ಉತ್ತಮ. ಇಬ್ಬರೂ ಪರಮಪದವಿಯನ್ನು ಪಡೆಯತಕ್ಕವರೇ: ಒಬ್ಬರು ನೇರವಾಗಿ, ಇನ್ನೊಬ್ಬರು ಕ್ರಮಕ್ರಮವಾಗಿ:

> ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
> ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥

"ಯಾರು ಯಾವುದಾದರೊಂದು ಈಶ್ವರಾವತಾರದಲ್ಲಿ ಮನಸ್ಸು ನಿಲ್ಲಿಸಿ ಸಂತತವಾಗಿ ಅಲ್ಲಿ ಸೇರಿಕೊಂಡು ನಿಶ್ಚಲಶ್ರದ್ಧೆಯಿಂದ ಸಾಕಾರಬ್ರಹ್ಮವನ್ನು ಉಪಾಸಿಸುತ್ತಾರೋ ಅವರು ಈಶ್ವರನಿಗೆ ಅತ್ಯಂತ ಸಮೀಪದವರು".

> ಯೇ ತ್ವಕ್ಷರಮನಿರ್ದೇಶ್ಯಂ ಅವ್ಯಕ್ತಂ ಪರ್ಯುಪಾಸತೇ ।
> ತೇ ಪ್ರಾಪ್ನುವನ್ತಿ ಮಾಮೇವ ಸರ್ವಭೂತಹಿತೇ ರತಾಃ ॥

"ಯಾರು ಅವಿನಾಶಿಯೂ ಅವರ್ಣನೀಯವೂ ಅವ್ಯಕ್ತವೂ ಆದ ನಿರಾಕಾರವನ್ನು ಉಪಾಸಿಸುತ್ತಾರೋ ಆ ಸರ್ವಲೋಕಹಿತಕಾರಿಗಳು ಈಶ್ವರನನ್ನೇ ಸೇರುತ್ತಾರೆ".

ಎರಡು ಪಂಥಗಳವರಿಗೂ ಕಡೆಯ ಪರಿಣಾಮಾದಲ್ಲಿ ವ್ಯತ್ಯಾಸವಿಲ್ಲ; ವೇಗದಲ್ಲಿ ಕೊಂಚ ವ್ಯತ್ಯಾಸ. ಆದರೆ ವೇಗ ಹೆಚ್ಚಾದದ್ದು ಕಷ್ಟದ ದಾರಿ; ಇನ್ನೊಂದು ದಾರಿಯಲ್ಲಿ ವೇಗ ಕಡಮೆಯಾದರೂ ಕಷ್ಟವೂ ಹಾಗೆಯೇ ಕಡಮೆ. ಶೀಘ್ರಮಾರ್ಗವನ್ನೇ ಏಕೆ ಹಿಡಿಯಬಾರದು?

> ಕ್ಲೇಶೋಽಧಿಕತರಸ್ತೇಷಾಂ ಅವ್ಯಕ್ತಾಸಕ್ತಚೇತಸಾಮ್ ।
> ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥

ಸದ್ಗತಿಯ ದಾರಿ ಎಂತಾದರೂ ಕಷ್ಟವೇ. ಎರಡು ದಾರಿಗಳೂ ಮನೋನಿಗ್ರಹವನ್ನೂ ಭೋಗತ್ಯಾಗವನ್ನೂ ಆತ್ಮಸಂಯಮವನ್ನೂ ಬಯಸುತ್ತವೆ. ಉಪ್ಪು ಹುಳಿಕಾರಗಳಿಂದ ಬದುಕುವ ದೇಹವಿರುವವರೆಗೂ ಇಂದ್ರಿಯದಮನವು ದುರ್ಲಭ. ಆದದ್ದರಿಂದ ಭಗವದುಪಾಸನೆ ಹೇಗಿದ್ದರೂ ಕಷ್ಟಸಾಧ್ಯವಾದದ್ದು. ಅದರಲ್ಲಿ ಅವ್ಯಕ್ತೋಪಾಸನೆಯಂತೂ ವ್ಯಕ್ತೋಪಾಸನೆಗಿಂತ ಗಹನತರವಾದದ್ದು. ಅದರ ಗಹನತೆ ಎರಡು ವಿಧವಾದದ್ದು. ಮೊದಲನೆಯದು ಬುದ್ಧಿ ಬಲದ್ದು. ಅವ್ಯಕ್ತವೂ ಅನಿರ್ದೇಶ್ಯವೂ ಅಚಿಂತ್ಯವೂ ಆದದ್ದನ್ನು ಗ್ರಹಿಸಬಲ್ಲ ಬುದ್ಧಿಯು ಸಾಮಾನ್ಯವಲ್ಲ. ಪರತತ್ತ್ವವನ್ನು ವೇದ–

ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ ॥
ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ॥

“ಯಾವುದನ್ನು ಮುಟ್ಟಲಾಗದೆ ಮಾತು, ಮನಸ್ಸು–ಎರಡೂ ಹಿಂತಿರುಗಿಬರುತ್ತವೆಯೋ” ; “ಯಾವುದನ್ನು ಮನಸ್ಸು ಹಿಡಿಯಲಾರದೋ ಮತ್ತು ಮನಸ್ಸಿನ ತಿಳಿವು ಯಾವುದರಿಂದ ಉಂಟಾಗುತ್ತದೆಯೋ” –ಎಂಬೀ ರೀತಿಯಲ್ಲಿ ಬ್ರಹ್ಮವು ಅತ್ಯಂತ ರಹಸ್ಯ ವಸ್ತುವೆಂದು ಹೇಳಿದೆ. ಅದನ್ನು ಬುದ್ಧಿ ನಿಶ್ಶಂಕವಾಗಿ ಕಂಡುಕೊಳ್ಳುವುದು ಬಹುಕಷ್ಟದ ಸಾಧನೆ. ಬುದ್ಧಿಗೆ ಅದು ಸಾಧ್ಯವಾಯಿತೆಂದು ನಾವು ಭಾವಿಸಿಕೊಂಡರೂ ಎರಡನೆಯ ಕಷ್ಟ ಇನ್ನೊಂದಿದೆ. ಅದು ಅನುಸಂಧಾನದ್ದು. ಬ್ರಹ್ಮವನ್ನು ಅನುಭವಿಸಬೇಕು. ಆಗಲೇ ಅದು ಸತ್ಯಜ್ಞಾನ. “ಸಂನಿಯಮ್ಯೇಂದ್ರಿಯಗ್ರಾಮಮ್”, “ಸರ್ವತ್ರ ಸಮಬುದ್ಧಯಃ”, “ಸರ್ವಭೂತಹಿತೇರತಾಃ” ಆಗಬೇಕು. ಇದು ಯಾರಿಗೆ ಸುಲಭ? ದೇಹದಲ್ಲಿ ಕ್ಷಣೇಕ್ಷಣೇ ಉತ್ಪನ್ನವಾಗುತ್ತದೆ ನಾನಾ ಕಾಮರಾಗಮೋಹಗಳು. ಪ್ರಕೃತಿಯ ಮಾಯಾಕಾಂತಿಗಳು ಕ್ಷಣೇಕ್ಷಣೇ ಕಣ್ಣನ್ನು ಇತ್ತತ್ತ ಚೆದರಿಸಿ ತತ್ತ್ವಸ್ಮೃತಿಯನ್ನು ತಪ್ಪಿಸುತ್ತವೆ. ಯಾರು ಮಾಯಾಧಿಕಾರವನ್ನು ಮೀರಿಲ್ಲವೋ ಅವನು, ಯಾರು ಮಾಯೆಯನ್ನು ಜಯಿಸಿದವರೋ ಅವರಂತೆ ತಾನು–ಎಂದಂದುಕೊಂಡರೆ, ಅವನಿಗೆ ಬೆಟ್ಟ ಹತ್ತಹೊರಟ ಹೆಳವನ ಗತಿ ತಪ್ಪದು. ಆದದ್ದರಿಂದ ಅವ್ಯಕ್ತಮಾರ್ಗದ ಸಾಹಸಕ್ಕಿಂತ ವ್ಯಕ್ತೋಪಾಸನೆಯ ನಮ್ರತೆ ಕ್ಷೇಮಕರ.

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯನ್ತ ಉಪಾಸತೇ ॥

तेषामहं समुद्धर्ता मृत्युसंसारसागरात्।
भवामि न चिरात् पार्थ मय्यावेशितचेतसाम्॥

“ಯಾರಾದರೆ ತಾವು ಮಾಡಿದ್ದನ್ನೆಲ್ಲವನ್ನೂ ಭಗವಂತನಲ್ಲಿ ಸಮರ್ಪಿಸಿ, ಎಲ್ಲದರಲ್ಲಿಯೂ ಭಗವದಾಜ್ಞೆಯನ್ನು ಬೇಡುತ್ತ, ಬೇರಾವುದರಲ್ಲಿಯೂ ಸೇರಿಕೊಳ್ಳದೆ, ಭಗವದ್ಧ್ಯಾನದಲ್ಲಿ ನಿರತರಾಗಿ, ಭಗವಂತನಲ್ಲಿಯೇ ಮನಸ್ಸನ್ನು ನೆಲೆಗೊಳಿಸುತ್ತಾರೋ ಅಂಥವರನ್ನು ಭಗವಂತನು ತಡಮಾಡದೆ (ನ ಚಿರಾತ್) ಕೈಹಿಡಿದು ತನ್ನೆಡೆಗೆ ಕರೆದುಕೊಳ್ಳುತ್ತಾನೆ”.

ಈ ಉಪಾಸನಾಕ್ರಮ ಸರ್ವಸುಲಭವಾದದ್ದೋ? ಶ್ರೀಕೃಷ್ಣ ಹಾಗೆ ಬಗೆದಿರಲಿಲ್ಲ.

अथ चित्तं समधातुं न शक्नोषि मयि स्थिरम्।
अभ्यासयोगेन ततो मामिच्छाऽऽप्तुं धनंजय॥

“ಸ್ಥಿರವಾಗಿ, ನಿರಂತರವಾಗಿ, ಈಶ್ವರನಲ್ಲಿ ಮನಸ್ಸನ್ನು ನಿಲ್ಲಿಸಲು ನಿನಗೆ ಶಕ್ಯವಾಗದಿದ್ದರೆ, ಶಕ್ಯವಾದಾಗ, ಶಕ್ಯವಾದಷ್ಟು ಅದನ್ನು ಮಾಡು. ಅಭ್ಯಾಸದಿಂದ ಚಿತ್ತೈಕಾಗ್ರತೆ ಬರುತ್ತದೆ”.

ಅಭ್ಯಾಸವೇನು ಸುಲಭವೆ? ನಮ್ಮ ಮನೆಗಳಲ್ಲಿ ದೇವರ ಪೂಜೆಗೆಂದು ಮಡಿಯುಟ್ಟು ಕುಳಿತವರಿಗೆಲ್ಲ ಅಭ್ಯಾಸ ದುಸ್ಸಾಧ್ಯವೆಂದು ಗೊತ್ತಿದೆ. ನಮ್ಮೊಡನೆ ಮಾತನಾಡದವರ, ನಮ್ಮ ಚೇಷ್ಟೆಗೆ ಪ್ರತಿಚೇಷ್ಟೆ ಮಾಡದವರ ಮೇಲೆ ಮನಸ್ಸನ್ನು ಬಹುಕಾಲ ನಿಲ್ಲಿಸುವುದು ಕಷ್ಟ. ಯುವಜನರಿಗೆ ಅವರವರ ಪ್ರಿಯರಲ್ಲಿ ಮನಸ್ಸು ಕೊಂಚಕಾಲ ನಿಂತಿರುತ್ತದೆ. ಅದಕ್ಕೆ ಕಾರಣ ಅಂಗಜನ್ಯವಾದದ್ದು. ಅಲ್ಲಿ ಧ್ವನಿಗೆ ಪ್ರತಿಧ್ವನಿ, ಸನ್ನೆಗೆ ಮರುಸನ್ನೆ ಬರುತ್ತದೆ. ಭಗವಂತನಲ್ಲಿ ಅಂಥಾ ಮೋಹಾಕರ್ಷಣೆಯುಂಟೆ? ಭಗವಂತ ತಾನಾಗಿ ಯಾರನ್ನು ಆಕರ್ಷಿಸಿಕೊಳ್ಳುತ್ತಾನೋ ಅವರು ಪುಣ್ಯಶಾಲಿಗಳು. ಅವರ ಮಾತು ನಮಗೆ ಅನ್ವಯಿಸುವುದಲ್ಲ. ಅಷ್ಟು ಪುಣ್ಯವಿಲ್ಲದವರ ಪಾಡನ್ನು ನೋಡೋಣ. ಇವರು ತಾವಾಗಿ ಭಗವಂತನನ್ನು ಹುಡುಕಿಕೊಂಡು ಹೋಗಬೇಕು. ಕಷ್ಟಕಾರ್ಪಣ್ಯಗಳು ಬಂದಾಗ ಒಂದು ಕ್ಷಣ ನಮ್ಮ ಮನಸ್ಸು ದೇವರ ಕಡೆಗೆ ತಿರುಗುತ್ತದೆ, ನಿಜ. ಆದರೆ ಮರುಕ್ಷಣವೇ ಅದು ಅಲ್ಲಿಂದ ಮರಳಿ ಬೇರೊಂದು ಕಡೆಗೆ ಹೊರಡುತ್ತದೆ. ಹೀಗೆ ಚಂಚಲವಾದ ಮನಸ್ಸನ್ನು ಹಿಡಿದು ನಿಲ್ಲಿಸುವುದು ಹೇಗೆ? ಅದನ್ನು ಒಂದು ಕರ್ಮಕ್ಕೆ–ಒಂದು ಸತ್ಕಾರ್ಯಕ್ಕೆ ಜೋಡಿಸುವುದು ಒಂದು ಉಪಾಯ.

ಕೈಮೈಗಳು ಒಂದು ಕೆಲಸಕ್ಕೆ ತೊಡಗಿರುವಾಗ ಮನಸ್ಸು ಅದರಲ್ಲಿ ಸೇರಿಕೊಂಡು ಅತ್ತಿತ್ತ ತಿರುಗದೆ ಇರುತ್ತದೆ. ಬಡಗಿ, ಯಂತ್ರಗಾರ, ಗಾರೆಕಾರ, ಬೇಸಾಯಗಾರ–ಇಂಥವರ ಮನಸ್ಸು ಆಯಾ ಹೊತ್ತಿನ ಕೆಲಸದಲ್ಲಿ ಸೇರಿಕೊಂಡು ತದೇಕಾಯತ್ತವಾಗಿರುತ್ತದೆ. ಆದದ್ದರಿಂದ, ಅರ್ಜುನ. "ಮತ್ಕರ್ಮ ಪರಮೋಭವ". ಭಗವತ್ಸೇವಾರೂಪವಾಗಿ ಕರ್ಮಗಳನ್ನು ಮಾಡು. ಭಗವಂತನ ಪ್ರೀತಿಯೇ ಮುಖ್ಯವೆಂದೆಣಿಸಿ ಕರ್ಮಮಾಡು.

ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥

"ಈಶ್ವರನಿಗೆ ಸಲ್ಲಿಸಬೇಕಾದ ಕರ್ತವ್ಯವೆಂದು ಲೌಕಿಕ ವೈದಿಕ ಕರ್ಮಗಳನ್ನು ಮಾಡು. ಆದರಿಂದ ನಿನಗೆ ಪರಮಾರ್ಥಸಿದ್ಧಿಯಾಗುತ್ತದೆ".

ಈ ಲೋಕ ಒಂದು ಬಡಗಿಯ ಕಾರಖಾನೆ; ನೀನು ಅದರಲ್ಲಿ ಬಡಗಿ. ನಿನ್ನ ಕೆಲಸದ ಮೇಲೆ ಮನಸ್ಸಿಟ್ಟು ಮಾಲೀಕನನ್ನು ಮೆಚ್ಚಿಸಲು ದುಡಿ. ಆ ದುಡಿತದಿಂತ ಇಹದಲ್ಲಿ ಜೀವಿಕೆ, ಪರದಲ್ಲಿ ಪ್ರಸಾದ. ಹೀಗೆ ಕರ್ಮಸಂಸ್ಕಾರ. ಅದೇ ಎಲ್ಲ ಸಂಸ್ಕಾರಗಳಲ್ಲಿಯೂ ದೊಡ್ಡದು.

ಹಾಗಾದರೆ ಇದು ಸುಲಭಮಾರ್ಗವೋ–ಭಗವದೇಕೋದ್ದಿಷ್ಟವಾದ ಕರ್ತವ್ಯಾಚರಣೆ? ಅದೂ ಕಷ್ಟವೆಂದು ಶ್ರೀಕೃಷ್ಣನ ಮನಸ್ಸಿನಲ್ಲಿಯೇ ಶಂಕೆಯಿತ್ತು. ಭಗವಂತನು ಕಣ್ಣೆದುರಿಗಿಲ್ಲ; ಧರ್ಮವೆಂಬುದೂ ಕಣ್ಣೆದುರಿಗಿಲ್ಲ. ಕೇವಲ ಭಗವದರ್ಥವಾಗಿ–ಕೇವಲ ಧರ್ಮಾರ್ಥವಾಗಿ–ಕೂಲಿ ಕೊಡುವ ಮೇಸ್ತ್ರಿಯೋ ಮಾಲೀಕನೋ ಎದುರಿಗಿಲ್ಲದಾಗಲೂ ಮನಸ್ಸಿನಿಂದ ದುಡಿಯುವ ಸ್ವಾಮಿಭಕ್ತನಾದ ಜೀತಗಾರನಂತೆ–ಎಂದರೆ ಸ್ವಾರ್ಥ ಚಿಂತೆಯ ಸೋಂಕು ಕೊಂಚವೂ ಇಲ್ಲದೆ ಕರ್ತವ್ಯೈಕಧ್ಯಾನದಿಂದ ಕರ್ಮ ಮಾಡುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಯಾವುದೋ ಯತ್ಕಿಂಚಿತ್ತು ಪ್ರಯೋಜನವನ್ನು ಬಯಸಿಯೇ ಬಹುಮಂದಿ ಕರ್ಮ ಮಾಡುವುದು. ಅವರು ಹಾಗೆ ಮಾಡಲಿ, ಆದರೆ ಆ ಕರ್ಮದ ಫಲಾಫಲಗಳು ಈಶ್ವರಾಧೀನವೆಂದು ಮಾಡಲಿ. ಇಷ್ಟಾರ್ಥ ತಮಗೆ ಕೈಗೂಡಿದಾಗ ಅದು ಸ್ವಸಂಪಾದಿತವಲ್ಲ, ಈಶ್ವರಾನುಗ್ರಹ–ಎಂದು ತಿಳಿಯಲಿ. ಇಷ್ಟ ನೆರವೇರದೆಹೋದಾಗ ಅದು ತಮಗೆ ಸಲ್ಲಬೇಕಾಗಿದ್ದ ಶಿಕ್ಷೆ, ಅದರಿಂದ ತಮ್ಮ ದೋಷ ಸವೆಯುತ್ತದೆ–ಎಂದು ತಿಳಿಯಲಿ. ಹೀಗೆ ಫಲಾಫಲಗಳೆರಡೂ ಈಶ್ವರಾಧೀನಗಳೇ ಹೊರತು ಸ್ವವಶಗಳಲ್ಲವೆಂದು ನಂಬಿ ಈಶ್ವರಸ್ಮರಣೆಯಲ್ಲಿ ಬದುಕಲಿ.

ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥

“ನಾನು ಮಾಡಿದವನು, ನನ್ನ ಸಾಧನೆ–ಎಂಬೀ ತೆರದ ಅಹಂಕಾರವನ್ನು (ಯತ ಮಾಡಿ) ಅದುಮಿಟ್ಟು, ಬಂದ ಫಲಾಫಲಗಳನ್ನು ನನ್ನ ಸ್ವಂತದ್ದಲ್ಲ, ಭಗವದಾಜ್ಞೆಯೆಂದು ಸ್ವೀಕರಿಸು. ಎಂದರೆ ಸುಖದುಃಖಗಳಲ್ಲಿ ಭಗವಚ್ಛರಣನಾಗು”.

ಕರ್ಮಫಲತ್ಯಾಗವೆಂದರೆ ಏನು? ಇದನ್ನು ನಾವು ನಮ್ಮಗಳ ಮನಸ್ಸಿಗೇ ವಿಶದ ಪಡಿಸಿಕೊಳ್ಳಬೇಕು.

ತ್ಯಕ್ತ್ವಾ ಕರ್ಮಫಲಾಸಂಗಮ್ ॥
ಯುಕ್ತಃ ಕರ್ಮಫಲಂ ತ್ಯಕ್ತ್ವಾ ॥
ಮಾ ಫಲೇಷು ಕದಾಚನ
ಮಾ ಕರ್ಮಫಲಹೇತುರ್ಭೂಃ ॥
ಅನಾಶ್ರಿತಃ ಕರ್ಮಫಲಮ್ ॥

ಹೀಗೆ ಪದೇಪದೇ ಬಂದಿದೆ ಈ ಉಪದೇಶ. ಕರ್ಮಫಲವನ್ನು ಬಿಡುವುದು ಎಂದರೆ ಏನು? ಅಡಿಗೆ ಮಾಡಿ ಅದನ್ನು ಊಟಮಾಡದೆ ಆಚೆಗೆಸೆಯುವುದೆ? ತೋಟ ಬೆಳಸಿ, ಬಳಿಕ ಗಿಡ ಹಣ್ಣು ಬಿಟ್ಟರೆ ಅದನ್ನು ತಿಪ್ಪೆಗೆ ಹಾಕುವುದೇ? ಹಾಗಲ್ಲ. ತಾನು ಅಟ್ಟ ಅಡಿಗೆಯನ್ನು ತಾನೊಬ್ಬನೇ ತಿನ್ನದೆ ಇತರರೊಡನೆ ಹಂಚಿಕೊಂಡು ಊಟ ಮಾಡತಕ್ಕದ್ದು ಎಂಬುದಾದರೆ ಅದು ಸರಿ. ಆದರೆ ತಾನೂ ಅದನ್ನು ಮೂಸಬಹುದಷ್ಟೆ? ಅಥವಾ ತಾನು ಮಾಡಿದ ಪಾಯಸವನ್ನು ತನ್ನ ನಾಲಿಗೆಗೆ ಸೋಕಿಸಿದರೂ ಆಗ ಅದು ಖಾರವೆಂದೋ ಕಹಿಯೆಂದೋ ಹೇಳಿಕೊಂಡು ಮುಖವನ್ನು ಸೊಟ್ಟುಮಾಡಿಕೊಳ್ಳಬೇಕೋ? ಸುಖಪಡಬಾರದೊ? ಸುಖಪಟ್ಟರೂ ಸುಖವೆಂದು ಹೇಳಿಕೊಳ್ಳಬಾರದೊ? ಹೂವನ್ನು ಹೇಸಿಗೆಯೆಂಬುದೇ ಧರ್ಮವೆ? ಅನ್ನವನ್ನು ಮಣ್ಣು ಎನ್ನುವುದೇ ಕರ್ಮಫಲತ್ಯಾಗವೇ?

ಕರ್ಮಫಲತ್ಯಾಗವೆಂಬುದರ ಘಟಕಾಂಶಗಳೇನೆಂದು ಸ್ವಲ್ಪ ಸಾವಕಾಶವಾಗಿ ವಿಚಾರ ಮಾಡಬೇಕು. ಕರ್ಮಫಲತ್ಯಾಗವೆಂಬ ಸಾಧನೆಯಲ್ಲಿ ನಾಲ್ಕಂಶಗಳಿವೆ. ಅವನ್ನು

ಸ್ಪಷ್ಟಪಡಿಸಿಕೊಳ್ಳದಿದ್ದರೆ “ಕರ್ಮಫಲತ್ಯಾಗ” ಎಂಬುದು ಒಂದು ಬರಿಯ ಮಾತಾಗಿ–ಕಿವಿಗೆ ಗಂಭೀರ ಶಬ್ದಪ್ರಯೋಗಮಾತ್ರವಾಗಿ–ನಿಲ್ಲುತ್ತದೆ. ಆ ಅಂಶಗಳನ್ನು ನೋಡೋಣ.

1. ಕರ್ಮವೆಂದರೆ ಕರ್ತವ್ಯಕರ್ಮ. ಯಾವ ಕಾರ್ಯವನ್ನು ಮಾಡದೆ ಬಿಟ್ಟರೆ ದೋಷವಾದೀತೋ ಅದು ಕರ್ತವ್ಯ. ಕರ್ತವ್ಯಕ್ಕೆ ಮುಖ್ಯ ನಿರ್ಣಾಯಕಗಳು ಮೂರು. ಮೊದಲನೆಯದು ನಮ್ಮೊಳಗೆ ಉಂಟಾದ ಶುಭ್ರಪ್ರೇರಣೆ–ಈ ಕೆಲಸ ನಡೆದರೆ ಎಲ್ಲರಿಗೂ ಚೆನ್ನು ಎಂದೆನ್ನಿಸುವುದು. ಎರಡನೆಯದು ನಮಗಿರುವ ಶಕ್ತಿಸಂಪತ್ತುಗಳು. ಮೂರನೆಯದು ನಮ್ಮ ಹೊರಗಣ ಲೋಕಕ್ಕೆ–ಕುಟುಂಬಕ್ಕೆ, ಸಮಾಜಕ್ಕೆ, ದೇಶಕ್ಕೆ–ಇರುವ ಜೀವನಾವಶ್ಯಕತೆಗಳ ತಿಳಿವು. ನಮ್ಮ ಶಕ್ತಿಸಂಪತ್ತುಗಳನ್ನು ಇತರರ ಜೀವನಸೌಕರ್ಯಕ್ಕಾಗಿ ವಿನಿಯೋಗಿಸುವ ಕಾರ್ಯವೇ ಕರ್ತವ್ಯ. ಹೀಗೆ ಕರ್ತವ್ಯನಿಶ್ಚಯ ಮಾಡುವುದರಲ್ಲಿ ನಾವು ಪ್ರಮಾದ ಮಾಡುವುದುಂಟು. ನಮ್ಮ ಯೋಗ್ಯತೆಗೆ ಮೀರಿದ್ದಕ್ಕೆ ಕೈಹಚ್ಚುತ್ತೇವೆ; ಅಥವಾ ಅವಶ್ಯವಿಲ್ಲದ ಕಡೆ ನಮ್ಮ ಲೋಕೋಪಕಾರ ಪ್ರವೃತ್ತಿಯನ್ನು ಪ್ರದರ್ಶಿಸುತ್ತೇವೆ. ಹೀಗೆ ಕರ್ತವ್ಯವಲ್ಲದ್ದಕ್ಕೆ ತೊಡಗುವುದಾಗುತ್ತದೆ; ಕರ್ತವ್ಯವಾದದ್ದನ್ನು ಮರೆಯುವುದೂ ಆಗುತ್ತದೆ. ಅನವಶ್ಯವಾದ ಕರ್ಮವನ್ನು ಕೈಕೊಳ್ಳುವುದರಿಂದ ದೋಷಸಂಭವ ಹೆಚ್ಚಾಗುತ್ತದೆ. ಕರ್ಮವೆಂದರೆ ಲೋಕಸಂಪರ್ಕ, ಲೋಕಸಂಪರ್ಕವೆಂದರೆ ಮತ್ತೊಬ್ಬರ ಜೀವನದಲ್ಲಿ ಪ್ರವೇಶ ಮಾಡುವುದು. ಹೀಗೆ ತಾನು ಮಾಡಹೊರಟ ಕೆಲಸದ ಅವಸರದಲ್ಲಿ ತಾನು ಯಾರುಯಾರ ಹಿತಾಹಿತಗಳನ್ನೋ ಅಂಟಿಸಿಕೊಳ್ಳಬೇಕಾಗಿ ಬರುತ್ತದೆ. ಲಕ್ಷಮಲ್ಲಿಗೆಯ ಪೂಜೆಯೆಂದರೆ ಯಾವ ಯಾವ ತೋಟಕ್ಕೆ ನುಗ್ಗಿ ಯಾರುಯಾರೊಡನೆಯೋ ಗುದ್ದ್ಯಾಡಬೇಕಾಗುತ್ತದೆ. ಸಹಸ್ರ ಜನಸಂತರ್ಪಣೆಯೆಂದರೆ ಎಂಥೆಂಥವರ ಕಾಲನ್ನೋ ಕಟ್ಟಬೇಕಾಗುತ್ತದೆ. ಹೀಗೆ ಪುಣ್ಯದ ಉದ್ದೇಶವು ಕೂಡ ಕಾರ್ಯಪ್ರಸಂಗದಲ್ಲಿ ಪಾಪಸಂಪರ್ಕವನ್ನುಂಟು ಮಾಡಿಸುತ್ತದೆ. ಆದದ್ದರಿಂದ ಕರ್ತವ್ಯಾಕರ್ತವ್ಯನಿರ್ಣಯದಲ್ಲಿ ಜಾಗರೂಕರಾಗಿರಬೇಕೆಂಬುದು ಮೊದಲನೆಯ ಅಂಶ. ಕರ್ತವ್ಯವಾದದ್ದನ್ನು ಬಿಡಬಾರದು; ಕರ್ತವ್ಯವಲ್ಲದ್ದನ್ನು ಕಟ್ಟಿಕೊಳ್ಳಬಾರದು.
2. ಎರಡನೆಯದಾಗಿ, ಕರ್ತವ್ಯವನ್ನು ನಿಶ್ಚಯಿಸಿಕೊಂಡ ಮೇಲೆ ಅದಕ್ಕೆ ಹೊರಟರೆ ಪ್ರಯೋಜನವಾದೀತೆ?–ಎಂದು ಚಿಂತಿಸುತ್ತ ನಿಲ್ಲಬಾರದು. ಜಯವೋ ಅಪಜಯವೋ, ಧರ್ಮವಾದದ್ದನ್ನು ಮಾಡಲೇಬೇಕು. ನಮ್ಮ ಮನಸ್ಸಾಕ್ಷಿಗೆ

ಧರ್ಮವೆನ್ನಿಸಿದ್ದನ್ನು ನೂರು ಮಂದಿ ವಿರೋಧಿಸಿದರೂ–ನೂರು ಕಡೆಯಿಂದ ಅದಕ್ಕೆ ಭಂಗಬರುವಂತಿದ್ದರೂ, –ನಮ್ಮ ಪಾಲಿಗೆ ಆ ಕಾರ್ಯ ಭಗವದಾಜ್ಞೆ ಎಂದು ಮನಸ್ಸನ್ನು ದೃಢಪಡಿಸಿಕೊಂಡು ಅದನ್ನು ನಡಸಬೇಕು. ಧರ್ಮವಾದ ಕಾರ್ಯ ಅದಕ್ಕೆ ಸೋಲು ಬಂದ ಕಾರಣದಿಂದ ಅಧರ್ಮವಾಗದು. ಧರ್ಮದ ಧರ್ಮತ್ವ–ಕರ್ತವ್ಯದ ಕರ್ತವ್ಯತ್ವ– ಅದರ ಲಾಭನಷ್ಟಗಳನ್ನು ಅವಲಂಬಿಸಿದ್ದಲ್ಲ. ಧರ್ಮವು ವಿಶ್ವಜೀವನದ ಸತ್ಯವನ್ನವಲಂಬಿಸಿದ್ದು; ಭಗವಂತನನ್ನವಲಂಬಿಸಿದ್ದು. ಆದದ್ದರಿಂದ ಕರ್ತವ್ಯಮಾಡುವುದು ಭಗವಂತನ ಸೇವೆಯೆಂದು. "ಪರಮೇಶ್ವರಪ್ರೀತ್ಯರ್ಥಮ್" "ಶ್ರೀಕೃಷ್ಣಾರ್ಪಣಮಸ್ತು" –ಇದು ಕರ್ತವ್ಯದ ಕ್ರಮ.

3. ಮೂರನೆಯದಾಗಿ, ಮಾಡಿದ ಕರ್ಮದ ಫಲದ ವಿಷಯದಲ್ಲಿ ಚಿಂತೆ ಇರಬಾರದು. ಫಲಾಫಲಗಳು ದೈವಾಯತ್ತ. ನಮ್ಮ ಪ್ರಾಚೀನ ಎಂಥಾದ್ದೋ! ನಮ್ಮ ಕರ್ಮಕ್ಕೆ ಸಂಬಂಧಪಟ್ಟ ಇತರ ಜನರ ಪ್ರಾಪ್ತಿ ಎಂಥಾದ್ದೋ! ಲೋಕಜೀವನದಲ್ಲಿ ಈ ಕಾರ್ಯಕಾರಣ ಸಂಬಂಧಗಳನ್ನು ಅಮೂಲಾಗ್ರವಾಗಿ ತಿಳಿಯಬಲ್ಲ ಮನುಷ್ಯ ಯಾವನೂ ಇಲ್ಲ. ನಾನಾ ಜೀವಿಗಳ ಪ್ರಾರಬ್ಧಜನಿತಗಳಾದ ಪ್ರಾಪ್ಯಪ್ರಾಪಕ ಭಾವಗಳಂತೆ ಕರ್ಮ ಫಲಗಳಾಗುತ್ತವೆ. ಅವುಗಳಿಂದ ಮನೋವಿಕಾರಕ್ಕೆ ಒಳಗಾಗಬಾರದೆಂಬುದು ತತ್ತ್ವ. ಯಾವುದು ಬಂದರೂ ಭಗವದ್ವಿಧಿಯಿಂದ ಬಂದದ್ದು. ಆದದ್ದರಿಂದ ಅದಕ್ಕೆ ತಲೆಬಾಗಬೇಕಾದದ್ದು. ಅಸಮಾಧಾನಪಟ್ಟರೆ ದೈವದಲ್ಲಿ ಅವಿಧೇಯತೆಯಾಗುತ್ತದೆ. ಆದದ್ದರಿಂದ ಕರ್ಮಫಲದ ವಿಷಯದಲ್ಲಿ ಉದಾಸೀನನಾಗಿರಬೇಕು. ಅದರಿಂದ ಮನಸ್ಸಿನ ಸಮಾಧಾನವನ್ನು ಕೆಡಿಸಿಕೊಳ್ಳಬಾರದು.

   ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ॥
   ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥

4. ನಾಲ್ಕನೆಯದಾಗಿ, ಬಂದದ್ದನ್ನು ಸ್ವೀಕರಿಸಬೇಕು. ಅದು ಈಶ್ವರಪ್ರಸಾದವೆಂದು ಸ್ವೀಕರಿಸಬೇಕು.

   ತೇನ ತ್ಯಕ್ತೇನ ಭುಂಜೀಥಾಃ ॥

ಇದು ಸುಖಪಡಬೇಡವೆಂಬ ಮಾತಲ್ಲ. ಸುಖಪಡಬಹುದು–ಆದರೆ ಗುಡಿಯಲ್ಲಿ ದೊರೆತ ನೈವೇದ್ಯವೆಂಬ ಭಾವನೆಯಿಂದ ಸುಖಪಡಬಹುದು. ಇದನ್ನೇ ಮಹಾನುಭಾವರಾದ

ಕನಕದಾಸರು ಹೇಳಿದ್ದು:

> ಷಡುರಸದನ್ನಕೆ ನಲಿದಾಡುವ ಜಿಹ್ವೆ।
> ಕಡುರುಚಿಗೊಂಬುವ ರುಚಿಗುಣ ನಿನದಯ್ಯ॥

ಜಗದ್ವಸ್ತುಗಳ ರಸಕಾಂತಿಗಳೂ ಅವುಗಳನ್ನನುಭವಿಸುವ ಇಂದ್ರಿಯ ರುಚಿಶಕ್ತಿಗಳೂ ಭಗವಂತನವು.

> ಅನ್ನಂ ಚ ಬ್ರಹ್ಮ। ಭೋಕ್ತಾ ಚ ಬ್ರಹ್ಮ॥

ಆದದ್ದರಿಂದಲೇ–

> ಬ್ರಹ್ಮಾರ್ಪಣಂ ಬ್ರಹ್ಮಹವಿಃ ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ॥

ಹೀಗಿರುವುದರಿಂದ ನೀನು– “ನನ್ನನ್ನು ಸಂತೋಷಪಡಿಸುತ್ತಿರುವ ವಸ್ತುವೂ ಅದರಲ್ಲಿ ಸವಿಯನ್ನು ಕಾಣುವ ನನ್ನ ಚೇತನವೂ ಎರಡೂ ಸ್ವಾಮಿಯ ವರ” –ಎಂದು ಸುಖಪಡು. ಸ್ವತ್ತುಗಾರ ಈಶ್ವರ, ನಾನಲ್ಲ; ನಾನು ತಿರುಕ–ಇದೇ ನಮ್ಮಲ್ಲಿರುವ ಒಂದು ರೂಢಿಯ ತಾತ್ಪರ್ಯ. ಹಿಂದೂ ಜನ, ಮಾಡಿದ ಅಡಿಗೆಯನ್ನೂ ತಿನ್ನಬಯಸಿದ ಹಣ್ಣುಹಂಪಲನ್ನೂ ಮುಡಿಯಬೇಕೆನಿಸಿದ ಹೂವನ್ನೂ ಮೊದಲು ದೇವರಿಗರ್ಪಿಸಿ ಆ ಬಳಿಕ ಅದನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ. ಮುಸಲ್ಮಾನರಲ್ಲೂ ಈ (ಬಿಸ್ಮಿಲ್ಲಾ) ಪದ್ಧತಿಯುಂಟು; ಕ್ರೈಸ್ತರಲ್ಲಿಯೂ (ಗ್ರೇಸ್) ಉಂಟು. ಸುಖಸಾಮಗ್ರಿ ನನ್ನ ಸ್ವತ್ತಲ್ಲ; ನನ್ನ ಸಂಪಾದನೆಯಲ್ಲ; ಭಗವಂತನ ಸ್ವತ್ತು; ಭಗವಂತ ಕೊಟ್ಟ ವರ–ಹೀಗೆ ಭಾವಿಸಿ ದೊರೆತದ್ದನ್ನು ಅನುಭವಿಸಿದವನಿಗೆ ಪಾಪಶಂಕೆಯಿರದು. ನನ್ನ ಕರ್ಮದಿಂದ ಬಂದ ಫಲವಾದರೂ ಅದರ ಸ್ವತ್ತುಗಾರಿಕೆ ನನ್ನದಲ್ಲವೆಂಬ ಬುದ್ಧಿಯೇ ಕರ್ಮಫಲತ್ಯಾಗ ಬುದ್ಧಿ. ಫಲಕ್ಕೆ ಅಹಂತೆಯ ಸಂಬಂಧವನ್ನು ಕಳೆದು, ಈಶ್ವರಸಂಬಂಧವನ್ನು ಲಕ್ಷ್ಯದಲ್ಲಿ ಇರಿಸಿಕೊಳ್ಳುವುದೇ ಕರ್ಮಫಲತ್ಯಾಗ.

ಹೀಗೆ ಕರ್ಮಫಲತ್ಯಾಗ ನಾಲ್ಕು ಅಂಶಗಳುಳ್ಳದ್ದು:

1. ಕರ್ತವ್ಯವಿವೇಕ

2. ಫಲಾಫಲಸಮತ್ವ
3. ಕೃಷ್ಣಾರ್ಪಣಬುದ್ಧಿ
4. ಪ್ರಸಾದಸ್ವೀಕಾರ.

ಸುಖಸಮಯದಲ್ಲಿ ಭಗವಂತನನ್ನು ಸ್ಮರಿಸಿ ಅದು ಆತನ ಪ್ರಸಾದವೆಂದುಕೊಳ್ಳುವುದೂ, ದುಃಖದಲ್ಲಿ ಭಗವಂತನನ್ನು ಸ್ಮರಿಸಿ ಆತ ವಿಧಿಸಿದ ಜೀವಶೋಧನೆಯೆಂದುಕೊಳ್ಳುವುದೂ ಫಲತ್ಯಾಗದ ಸಾರಾಂಶ.

ಹೀಗೆ ಮೆಟ್ಟಲುಮೆಟ್ಟಲಾಗಿದೆ ಉಪದೇಶ. ಅತ್ಯುನ್ನತಿಯಲ್ಲಿ ಅವ್ಯಕ್ತೋಪಾಸನೆ. ಎರಡನೆಯ ಮೆಟ್ಟಲು ಸಾಕಾರೇಶ್ವರಸಮಾಶ್ರಯಣ. ಮೂರನೆಯದು ಈಶ್ವರಚಿಂತನಾಭ್ಯಾಸ. ನಾಲ್ಕನೆಯದು ಈಶ್ವರಸೇವಾಕರ್ತವ್ಯತೆ. ಐದನೆಯದು ಈಶ್ವರಾಜ್ಞಾದರ್ಶನ.

ಅಭ್ಯಾಸಕ್ಕಿಂತ ಮೇಲಿನದು ಜ್ಞಾನ; ಜ್ಞಾನಕ್ಕೆ ಮೇಲ್ಪಟ್ಟದ್ದು ಧ್ಯಾನ; ಧ್ಯಾನಕ್ಕಿಂತ ಮೇಲಿನದು ಕರ್ಮಫಲತ್ಯಾಗ; ತ್ಯಾಗದಿಂದ ಫಲಿಸತಕ್ಕದ್ದು ಶಾಂತಿ; ಶಾಂತಿಯೇ ಪರಮಫಲ.

ಅಭ್ಯಾಸವೆಂದರೆ ಸ್ವತಂತ್ರ ವಿಚಾರ ವಿಮರ್ಶೆಗಳಿಲ್ಲದೆ ಇತರರಿಂದ ದೊರೆತ ಉಪದೇಶವನ್ನು ನಂಬಿ ಅನುಸರಿಸುವುದು. ಜ್ಞಾನವೆಂಬುದು ಆ ಉಪದೇಶವನ್ನು ಸ್ವತ ವಿಚಾರದಿಂದ ಸ್ವಕೀಯ ಮಾಡಿಕೊಂಡದ್ದು. ಧ್ಯಾನವೆಂಬುದು ಅಂಥಾ ನಿಶ್ಚಿತ ತತ್ತ್ವಜ್ಞಾನವನ್ನು ಸಂತತವಾಗಿ ದೃಷ್ಟಿಯಲ್ಲಿರಿಸಿಕೊಂಡಿರುವುದು. ತತ್ತ್ವವು ಹಾಗೆ ದೃಢವಾಗಿ ದೃಷ್ಟಿಯಲ್ಲಿ ನಿಂತಾಗ ಸ್ವಾರ್ಥಸ್ಮರಣೆ ತೊಲಗುತ್ತದೆ. ಹಾಗೆ ಅಹಂಕಾರಮಮಕಾರಗಳು ಶೂನ್ಯವಾಗಿ ಜೀವಸರ್ವಸ್ವವೂ ಪರಮಾತ್ಮಾರ್ಪಿತವಾದಾಗ ಶಾಂತಿ ಸ್ವತಸ್ಸಿದ್ಧವಾಗುತ್ತದೆ.

ಭಕ್ತಿಗೆ ಅನೇಕ ಫಲಗಳುಂಟು: ಭೋಗ, ಐಶ್ವರ್ಯ, ಕೀರ್ತಿ, ಆಯುಸ್ಸು, ಸಂತಾನ, ಇಷ್ಟಪ್ರಾಪ್ತಿ, ಅನಿಷ್ಟನಿವಾರಣೆ, ಪಾಪಕ್ಷಯ, ಸ್ವರ್ಗಪ್ರಾಪ್ತಿ–ಹೀಗೆ ಎಷ್ಟೆಷ್ಟೋ ಪ್ರಯೋಜನಗಳುಂಟು. ಎಲ್ಲಕ್ಕಿಂತ ಮೇಲಿನದು ಆತ್ಮಶಾಂತಿ. ಶಾಂತಿಗಾಗಿ ಭಕ್ತಿಮಾಡುವವರ ಲಕ್ಷಣಗಳನ್ನು ಸ್ವಾಮಿ “ಅದ್ವೇಷ್ಟಾ ಸರ್ವಭೂತಾನಾಂ” ಎಂಬಲ್ಲಿಂದ “ತೇಽತೀವ ಮೇ ಪ್ರಿಯಾಃ” ಎಂಬಲ್ಲಿಯವರಗಿನ ಎಂಟು ಶ್ಲೋಕಗಳಲ್ಲಿ ಹೇಳುತ್ತಾನೆ–ಅವು ನಮ್ಮ ಲಕ್ಷ್ಯದಲ್ಲಿರಬೇಕೆಂದು:

ಅದ್ವೇಷ್ಟಾ ಸರ್ವಭೂತಾನಾಮ್: ಯಾವ ಪ್ರಾಣಿಯಲ್ಲಿಯೂ ದ್ವೇಷಮಾಡದವನು;

ಮೈತ್ರಃ : ಎಲ್ಲರಿಗೂ ಸ್ನೇಹಿತ;

ಕರುಣ (ಏವ ಚ) : ದಯಾಶಾಲಿ; ಸ್ನೇಹ ಸಮಾನರಿಗಾಯಿತು, ಕನಿಕರ ಎಲ್ಲರಿಗೂ;

ನಿರ್ಮಮಃ : "ನನ್ನದು" ಎಂಬುದಿಲ್ಲದವನು;

ನಿರಹಂಕಾರಃ : "ನಾನು", "ನಾನು" ಎಂಬ ಮಾತು ಅಳಿದವನು;

ಸಮದುಃಖಸುಖಃ : ದುಃಖದಲ್ಲಿ ಕುಗ್ಗದೆ ಸುಖದಲ್ಲಿ ಹಿಗ್ಗದೆ ಒಂದೇ ಮನಃಸ್ಥಿತಿಯುಳ್ಳವನು;

ಕ್ಷಮೀ : ತನಗೆ ಅಪಕಾರ ಮಾಡಿದವರಲ್ಲಿ ತಾನು ಆ ಅಪಕಾರವನ್ನು ಕಂಡವನಲ್ಲವೆಂಬಂತೆ ನಡೆದುಕೊಳ್ಳುವವನು;

ಸಂತುಷ್ಟಃ ಸತತಮ್ : ಸದಾ ಸಂತೋಷಿ;

ಯೋಗೀ : ಭಗವಂತನಲ್ಲಿ ಮನಸ್ಸನ್ನು ಸೇರಿಸಿರುವನು;

ಯತಾತ್ಮಾ: ತನ್ನನ್ನು ತಾನು ಹದ್ದಿನಲ್ಲಿರಿಸಿಕೊಂಡವನು;

ದೃಢನಿಶ್ಚಯಃ : ವಿಚಾರದಿಂದ ಸಂದೇಹಗಳನ್ನು ಹೋಗಲಾಡಿಸಿಕೊಂಡು ನಂಬಿಕೆಯಲ್ಲಿರುವವನು;

ಮಯ್ಯರ್ಪಿತಮನೋಬುದ್ಧಿಃ : ಮನಸ್ಸನ್ನೂ ಬುದ್ಧಿಯನ್ನೂ ಪರಮೇಶ್ವರನಿಗೆ ಒಪ್ಪಿಸಿರುವವನು–

(ಯೋ) ಮದ್ಭಕ್ತಃ ಇಂಥಾ ನನ್ನ ಭಕ್ತನು

ಸ ಮೇ ಪ್ರಿಯಃ : ನನಗೆ ಪ್ರಿಯನಾದವನು.

ಯಸ್ಮಾನ್ನೋದ್ವಿಜತೇ ಲೋಕಃ : ಯಾರಿಂದ ಲೋಕಕ್ಕೆ ಕೋಪತಾಪಗಳಾಗುವುದಿಲ್ಲವೋ; ಮತ್ತು

ಲೋಕಾನ್ನೋದ್ವಿಜತೇ ಚ ಯಃ : ಲೋಕಕಾರಣದಿಂದ ಯಾರು ಕೋಪತಾಪಗಳನ್ನು ಮಾಡಿಕೊಳ್ಳುವುದಿಲ್ಲವೋ;

ಹರ್ಷಾಮರ್ಷಭಯೋದ್ವೇಗೈರ್ಮುಕ್ತಃ ಯಃ : ಮೈಮರೆತ ಸಂತಸ, ರೇಗಾಟ, ಭಯ, ಕೆರಳಿಕೆ– ಇಂಥಾ ಮನೋವಿಕಾರಗಳು ಯಾರಿಗಿಲ್ಲವೋ–

ಸ ಚ ಮೇ ಪ್ರಿಯಃ : ಅಂಥವನು ನನಗೆ ಪ್ರಿಯನಾದವನು.
ಅನಪೇಕ್ಷಃ : ಕಾಮನೆಗಳಿಲ್ಲದವನು;
ಶುಚಿಃ : ಒಳಗೂ ಹೊರಗೂ ನಿರ್ಮಲನಾಗಿರುವವನು;
ದಕ್ಷಃ : ಕರ್ತವ್ಯಕರ್ಮದಲ್ಲಿ ಸಮರ್ಥನಾದವನು;
ಉದಾಸೀನಃ : ಸ್ವವಿಷಯದಲ್ಲಿ ನಿಶ್ಚಿಂತನಾದವನು;
ಗತವ್ಯಥಃ : ಮನಸ್ಸನ್ನು ಖಿನ್ನ ಮಾಡಿಕೊಳ್ಳದವನು;

ಸರ್ವಾರಂಭಪರತ್ಯಾಗೀ: ತನಗೆ ನಿಯತವಲ್ಲದ ಮತ್ತು ಸ್ವಾರ್ಥೋದ್ದೇಶವುಳ್ಳ ಸಾಹಸಪ್ರಯತ್ನಗಳಿಗೆ ಕೈಹಚ್ಚದವನು–

ಯೋ ಮದ್ಭಕ್ತಃ ಸ ಮೇ ಪ್ರಿಯಃ : ಅಂಥಾ ಭಕ್ತನು ನನಗೆ ಪ್ರಿಯನಾದವನು.
ಯೋ ನ ಹೃಷ್ಯತಿ: ಯಾರು ಹರ್ಷಾತಿರೇಕಕ್ಕೆ ವಶನಲ್ಲವೋ;
ನ ದ್ವೇಷ್ಟಿ: ದ್ವೇಷಮಾಡನೋ;
ನ ಶೋಚತಿ: ಶೋಕಪರವಶನೂ ಆಗನೋ;
ನ ಕಾಂಕ್ಷತಿ: ಆಶಾಗ್ರಸ್ತನೂ ಅಲ್ಲವೋ;
ಶುಭಾಶುಭಪರಿತ್ಯಾಗೀ : ಶುಭ ಅಶುಭಗಳ ಭೇದವನ್ನು ಎಣಿಸನೋ–

ಭಕ್ತಿಮಾನ್ ಯಃ ಸ ಮೇ ಪ್ರಿಯಃ : ಅಂಥ ಭಕ್ತನು ನನಗೆ ಪ್ರಿಯನಾದವನು.

ಸಮಃ ಶತ್ರೌ ಚ ಮಿತ್ರೇ ಚಃ (ಯಾರು) ಮಿತ್ರರಲ್ಲಿ ಹೇಗೋ ಶತ್ರುಗಳಲ್ಲಿಯೂ ಹಾಗೆಯೇ ಸಮವಾಗಿ ನ್ಯಾಯಸ್ಥನೋ;

ತಥಾ ಮಾನಾಪಮಾನಯೋಃ : ಮಾನಾಪಮಾನಗಳ ವಿಷಯದಲ್ಲಿಯೂ ಹಾಗೆ ನಿರ್ವಿಕಾರಿಯೋ;

ಶೀತೋಷ್ಣಸುಖದುಃಖೇಷು ಸಮಃ : ಜಗತ್ತಿನ ಎಲ್ಲ ದ್ವಂದ್ವಗಳಲ್ಲಿಯೂ ಹಾಗೆಯೇ ಸಮಾಧಾನದಿಂದಿರುತ್ತಾನೋ;

ಸಂಗವಿವರ್ಜಿತಃ : ಯಾವ ಲೋಕಸಂಬಂಧಕ್ಕೂ ಅಂಟಿಕೊಂಡವನಲ್ಲವೋ;

ತುಲ್ಯನಿಂದಾಸ್ತುತಿಃ : ನಿಂದೆ ಸ್ತೋತ್ರಗಳೆರಡರಿಂದಲೂ ಮನಸ್ಸಲುಗಿಸಿಕೊಳ್ಳದ (ತುಲ್ಯ) ಒಂದೇ ಸಮನಾದ ಮನಸ್ಸುಳ್ಳವನೋ;

ಮೌನೀ: ಮಾತನ್ನು ಮಿತಮಾಡಿ ಮನನಧ್ಯಾನಗಳಲ್ಲಿ ನಿಂತವನೋ;

ಸಂತುಷ್ಟೋ ಯೇನ ಕೇನಚಿತ್ : ಎಷ್ಟು ದೊರೆತರೆ ಅಷ್ಟರಿಂದ, ಏನು ದೊರತರೆ ಅದರಿಂದ ತೃಪ್ತಿಪಡುವವನೋ;

ಅನಿಕೇತಃ : ತನ್ನ ಮನೆ, ತನ್ನ ಜನ ಎಂಬ ಸಂಕುಚಿತಭಾವನೆಯೂ ಸ್ವಾಭಿಮಾನವೂ ಇಲ್ಲದವನೋ;

ಸ್ಥಿರಮತಿಃ : ದೃಢಬುದ್ಧಿಯುಳ್ಳವನೋ–

ಭಕ್ತಿಮಾನ್ ಮೇ ಪ್ರಿಯೋ ನರಃ : ಅಂಥಾ ಭಕ್ತನು ನನಗೆ ಪ್ರಿಯನಾದವನು.

ಯೇ ತು ಧರ್ಮ್ಯಾಮೃತಮಿದಮ್ : ಯಾರಾದರೆ ಈ ಅಮೃತೋಪಮವಾದ ಧರ್ಮಾದೇಶವನ್ನು

ಯಥೋಕ್ತಂ ಪರ್ಯುಪಾಸತೇ : ಹೇಳಿದಂತೆ ಸಾಂಗವಾಗಿ ನಡಸುತ್ತಾರೋ;
ಶ್ರದ್ದಧಾನಾಃ : ಶ್ರದ್ಧಾಳುಗಳಾಗಿರುತ್ತಾರೋ;

ಮತ್ಪರಮಾಃ : ಭಗವತ್ತತ್ಪರರಾಗಿರುತ್ತಾರೋ–

ಭಕ್ತಾ ತೇಽತೀವ ಮೇ ಪ್ರಿಯಾಃ : ಆ ಭಕ್ತರು ನನಗೆ ಅತ್ಯಂತ ಪ್ರಿಯರಾದವರು.

ಈ ಎಂಟು ಶ್ಲೋಕಗಳೂ ಗೀತಾಕ್ಷೀರಸಮುದ್ರದ ಅಮೃತಕಲಶ. ಮಹಾತ್ಮಗಾಂಧಿಯವರಿಗೆ ಎರಡನೆಯ ಅಧ್ಯಾಯದ "ಪ್ರಜಾಹಾತಿ ಯದಾ ಕಾಮಾನ್". ಇತ್ಯಾದಿಯಾದ ಹದಿನೆಂಟು "ಸ್ಥಿತಪ್ರಜ್ಞ" ಶ್ಲೋಕಗಳು ಪರಮಪ್ರಿಯವಾಗಿದ್ದಂತೆ ಈ ಹನ್ನೆರಡನೆಯ ಅಧ್ಯಾಯದ "ಅದ್ವೇಷ್ಟಾ" ಇತ್ಯಾದಿಯಾದ ಎಂಟು ಶ್ಲೋಕಗಳು ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳವರಿಗೆ ಪರಮಪ್ರಿಯವಾಗಿದ್ದವು. ಲೋಕದ ಚೇಷ್ಟೆಗಳಿಂದ ಮನಸ್ಸು ಬೇಸರಪಟ್ಟಿದ್ದಾಗ, ಹಿಡಿದ ಕಾರ್ಯಕ್ಕೆ ಭಂಗಭಯ ತೋರಿದಾಗ, ಜನ ಅಕಾರಣವಾಗಿ ಆಕ್ರೋಶ ಮಾಡಿದಾಗ, ಸ್ನೇಹಿತರು ಖಿನ್ನರಾಗಿದ್ದಾಗ, ಯಾವ ಕಾರಣದಿಂದಲಾದರೂ ಅಂತರಂಗದಲ್ಲಿ ಅಶಾಂತಿಯಾದಾಗ ಶಾಸ್ತ್ರಿಗಳವರು ಈ ಶ್ಲೋಕಗಳನ್ನು ನೆನೆಸಿಕೊಳ್ಳುತ್ತಿದ್ದರು. ಅದರಲ್ಲಿಯೂ "ತುಲ್ಯನಿಂದಾಸ್ತುತಿಃ" ಎಂಬ ನೀತಿಸೂತ್ರ ನಮ್ಮದೇಶದ ಸಾರ್ವಜನಿಕ ಕಾರ್ಯಸ್ಥರಿಗೆ ತುಂಬ ಮುಖ್ಯವಾದದ್ದೆಂದು ಪದೇಪದೇ ಅವರು ಹೇಳುತ್ತಿದ್ದರು. ಅವರ ವಿಷಯದಲ್ಲಿ ನಾನು ಇಲ್ಲಿ ಒಂದು ಮಾತನ್ನು ಹೇಳುವುದು ಅನುಚಿತವಾಗದೆಂದು ತಾವು ಅನುಮತಿ ಕೊಡುವುದಾದರೆ, ಅದನ್ನು ಅರಿಕೆ ಮಾಡುತ್ತೇನೆ: ಶ್ರೀನಿವಾಸಶಾಸ್ತ್ರಿಗಳು ಆ ಸೂತ್ರವನ್ನು ಸಂಪೂರ್ಣವಾಗಿ ಅನುಸರಿಸಿದ್ದವರು.

ಅದ್ವೇಷ್ಟೇತ್ಯಾದಿ ಗುಣಗಳನ್ನು ನಾವು ಎಷ್ಟು ಮಾತ್ರ ಸಂಪಾದಿಸಿಕೊಳ್ಳಲಾದೀತೋ ಯಾರು ಹೇಳಬಲ್ಲರು? ಆ ಗುಣಗಳನ್ನು ನಾವು ಪದೇಪದೇ ಸ್ಮರಿಸಿ ಅನುಸರಿಸ ಯತ್ನಿಸಿದರೆ ಈಶ್ವರ ನಮ್ಮಲ್ಲಿ ಕನಿಕರಿಸಿಯಾನೆಂಬ ನಂಬಿಕೆ ನನಗುಂಟು.

ಸಂಗ್ರಹ

ಭಗವದುಪಾಸ್ತಿಯ ಲಕ್ಷ್ಯಂ ।
ಸಗುಣಮೊ ನಿರ್ಗುಣಮೊ ಯುಕ್ತಮೆನೆ ಭಜಕಜನ- ॥
ಸ್ವಗತರುಚಿಶಕ್ತಿಮಿತಿಯಿಂ ।
ನಿಗದಿತಮರ್ಹತೆಯಿನೆಂಬುದು ದ್ವಾದಶಕಂ ॥

ಸರ್ವಾಂತಃಸ್ಥಂ ಪ್ರಕೃತಿರಸಿಕಂ ವಿಶ್ವಲೀಲಾವಿಲಾಸಂ ।
ಜೀವೋತ್ಕರ್ಷಕ್ರಮನಯವಿದಂ ಸಾನುಕಂಪಂ ಶರಣ್ಯಂ ॥
ಮೇಘಶ್ಯಾಮಾಕೃತಿಯೊಳು ತಟಿದ್ದೀಪ್ತಿವೋಲ್ ತೋರೆ ನೇತ್ರಂ ।
ವ್ಯಕ್ತಾವ್ಯಕ್ತಂಗಳ ಮಿಳಿತದಿಂ ಸೃಷ್ಟಿವೋಲ್ ಕೃಷ್ಣರೂಪಂ ॥

ದ್ವಿತೀಯ ಷಟ್ಕ ಸಂಗ್ರಹ

ಪ್ರಾಣಾಯಾಮಾದ್ಯನುಸಂ- ।
ಧಾನಗಳಿಂದೇಕಲಕ್ಷ್ಯದೊಳ್ ಮನವಿರಿಪಾ ॥
ಧ್ಯಾನಸ್ಥಿತಭಕ್ತಿಗೆ ತ- ।
ತ್ತ್ವಾನುಭವಂ ಸುಲಭಮೆಂದು ಮಧ್ಯಮಷಟ್ಕಂ ॥

ಜೀವವೇಂ ಬ್ರಹ್ಮಂ ಸ್ವವೈಭವದ ಸುಖವನುಣೆ
ಸಾವಯವದಿಂದಾದ ವೇಷದ ವಿನೋದಂ ।
ಆ ವಿನೋದದಿ ಭಾಗಗೊಳುತೆ ಧರ್ಮದ ನಯದೆ
ಕೇವಲಾತ್ಮವನರಸಲದುವೆ ಶುಭಯೋಗಂ ॥

ಸಕಲಹಿತವಿಚಾರಂ ಸತ್ಯಧರ್ಮಾಧಿಕಾರಂ ।
ದುರಿತವನಕುಠಾರಂ ಜೀವಿತೋದ್ಧಾರಧೀರಂ ॥
ಶರಣಜನವಿಹಾರಂ ಶಾಂತಿಸೌಖ್ಯಪ್ರಸಾರಂ ।
ಕವಿಬುಧಗಲಹಾರಂ ಕೃಷ್ಣಗೀತಾವತಾರಂ ॥

ಅಥ ಕ್ಷೇತ್ರಕ್ಷೇತ್ರಜ್ಞವಿಭಾಗಯೋಗೋ ನಾಮ ತ್ರಯೋದಶೋಽಧ್ಯಾಯಃ

ಶ್ರೀಭಗವಾನುವಾಚ-

ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ

॥ ೧ ॥

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ

॥ ೨ ॥

ತತ್ ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್ ।
ಸ ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು

॥ ೩ ॥

ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್ ।
ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತೈಃ

॥ ೪ ॥

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ

॥ ೫ ॥

ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ।
ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್

॥ ೬ ॥

ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಮ್ ।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ

॥ ೭ ॥

ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ ।
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್

॥ ೮ ॥

ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು ।
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು

॥ ೯ ॥

ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ

॥ ೧೦ ॥

ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।
ಏತಜ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ

॥ ೧೧ ॥

ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ

॥ ೧೨ ॥

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ

॥ ೧೩ ॥

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಮ್ ।
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ

॥ ೧೪ ॥

ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್

॥ ೧೫ ॥

ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್ ।
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ

॥ ೧೬ ॥

ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಮ್

॥ ೧೭ ॥

ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ ।
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ

॥ ೧೮ ॥

ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿ ಸಂಭವಾನ್

॥ ೧೯ ॥

ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ

॥ ೨೦ ॥

ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ।
ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು

॥ ೨೦ ॥

ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ

॥ ೨೨ ॥

ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ

॥ ೨೩ ॥

ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ

॥ ೨೪ ॥

ಅನ್ಯೇ ತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ ।
ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ

॥ ೨೫ ॥

ಯಾವತ್ಸಂಜಾಯತೇ ಕಿಂಚಿತ್ಸತ್ತ್ವಂ ಸ್ಥಾವರಜಂಗಮಮ್ ।
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ತದ್ವಿದ್ಧಿ ಭರತರ್ಷಭ

॥ ೨೬ ॥

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ

॥ ೨೭ ॥

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿ ನಸ್ತ್ಯಾತ್ಮನಾಽಽತ್ಮಾನಂ ತತೋ ಯಾತಿ ಪರಾಂ ಗತಿಮ್

॥ ೨೮ ॥

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತಥಾಽಽತ್ಮಾನಮಕರ್ತಾರಂ ಸ ಪಶ್ಯತಿ

॥ ೨೯ ॥

ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ

॥ ೩೦ ॥

ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ ।
ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ

॥ ೩೦ ॥

ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋದೇಹೇ ತಥಾಽಽತ್ಮಾ ನೋಪಲಿಪ್ಯತೇ

॥ ೩೨ ॥

ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ

॥ ೩೩ ॥

ಕ್ಷೇತ್ರಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕ್ಷುಷಾ ।
ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್

॥ ೩೪ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಕ್ಷೇತ್ರಕ್ಷೇತ್ರಜ್ಞವಿಭಾಗಯೋಗೋ ನಾಮ ತ್ರಯೋದಶೋಽಧ್ಯಾಯಃ

ಏಕಮೇವಾದ್ವಯಮರೂಪಂ ಬ್ರಹ್ಮಮವ್ಯಯಮಕ್ರಿಯಂ
ಸ್ವೀಕರಿಸಿ ನಿಜಭೋಗಕೆಂದು ಶರೀರವಿವಿಧಸಹಸ್ರಮಂ ॥
ಪ್ರಾಕೃತಾಸ್ವಾದ್ಯಗಳ ಮಧುವಿಂ ತನ್ನನೇ ತಾಂ ಮರೆತವೋಲ್ ।
ಲೋಕಜೀವನಸಿಂಧುವೀಚಿಯೊಳಾತ್ಮದೀ ಡೋಲೋತ್ಸವಂ ॥

ಸೂಚನೆ

ಪರಚೈತನ್ಯಂ ಪ್ರಕೃತೀ- ।
ಶ್ವರಸಂಯೋಗದಲಿ ಪರಿದು ಬರಲಿದು ವಿಶ್ವಂ ॥
ಪರಿಚಿಂತ್ಯಗಳೀ ತನುವಿ- ।
ಸ್ತರಗಳುಮಖಿಲಾದಿಸತ್ತ್ವಮುಂ ಪ್ರತ್ಯಂಶಂ ॥

ಸಾರಾಂಶ

ಜ್ಞಾನಸಂಪಾದನವಿಧಾನ, ಜ್ಞಾನವಿಷಯವಾದ ಪರಮತತ್ತ್ವ, ಜ್ಞಾನದಿಂದ ಸಿದ್ಧಿಸುವ ಧರ್ಮಾಧಿಧರ್ಮವಿವೇಕ–ಇವನ್ನು ಕುರಿತದ್ದು ಭಗವಂತನ ಉಪದೇಶ. ಪ್ರಪಂಚಕಾರ್ಯವೆಲ್ಲ ಪ್ರಕೃತಿ ಪುರುಷಸಂಯೋಗಜನ್ಯವಾದದ್ದು. ಆ ಸಂಯೋಗಪ್ರಕಾರಗಳು ಅಮಿತವಾದದ್ದರಿಂದ ಜಗದ್ವಸ್ತುಗಳಲ್ಲಿಯೂ ಜೀವಭೂತಗಳಲ್ಲಿಯೂ ನಮಗೆ ತೋರುವ ಪ್ರತ್ಯೇಕತೆಗಳೂ ಅಮಿತ. ಈ ಪ್ರತ್ಯೇಕತೆಗಳ ಅಂತಃಸ್ಥವಾದ, ಸರ್ವಾಧಾರವಾದ ಏಕೈಕ ಮಹಾಚೈತನ್ಯದ ಸಂದರ್ಶನೋಪಾಯ ಗೀತೆಯಲ್ಲಿ ಉಪದಿಷ್ಟವಾಗಿದೆ.

ಸಂಸಾರಸಸ್ಯಕ್ಕೆ ಪ್ರಕೃತಿಯೇ ಕೃಷಿಭೂಮಿ; ಆತ್ಮವೇ ಕೃಷಿಕಾರ. ಜ್ಞಾನಸ್ವರೂಪದ ಆತ್ಮ ಚೈತನ್ಯವು ಸಮಾನನಿವೇದಕ–ಅದು ಉಭಯತ್ರ ಸಮಾನವಾಗಿರುವುದರಿಂದಲೇ ಕ್ಷೇತ್ರಜ್ಞನಿಗೆ ಸ್ವಕ್ಷೇತ್ರದ ಹಾಗೂ ಇತರ ಕ್ಷೇತ್ರಕ್ಷೇತ್ರಜ್ಞರ ಅರಿವುಂಟಾಗುವುದು. ಜಗತ್ತಿನ ನಾನಾ ಅಂಶಗಳನ್ನು ಕಟ್ಟಿಹಿಡಿದಿರುವ ಸೂತ್ರಶಕ್ತಿ ಪರಮಾತ್ಮ. ಕ್ಷೇತ್ರವೆಂಬ ಪ್ರಕೃತಿಯ ಘಟಕ ಸಾಮಗ್ರಿಯನ್ನು ನಿರ್ದೇಶ ಮಾಡಿ ಭಗವಂತನು ಆತ್ಮತತ್ತ್ವವನ್ನು ಕಂಡುಕೊಳ್ಳಬೇಕೆನ್ನುವವರಿಗೆ ಇರಬೇಕಾದ ಅಮಾನಿತ್ವ, ಅದಂಭಿತ್ವ ಇತ್ಯಾದಿ ಸಿದ್ಧತೆಗಳನ್ನು ತಿಳಿಸುತ್ತಾನೆ.

ಕೆಲವರು ಬುದ್ಧಿಸಾಹಸದಿಂದ ಮಾಯೆಯ ಸ್ವರೂಪವನ್ನು ಕಂಡುಕೊಂಡು ಜೀವಸಾಫಲ್ಯ ಪಡೆಯುತ್ತಾರೆ. ಇನ್ನು ಕೆಲವರು ಧ್ಯಾನಾಭ್ಯಾಸದ ಮೂಲಕ ಪರಮಾತ್ಮ ಸಂದರ್ಶನ ಪಡೆಯುತ್ತಾರೆ. ಮತ್ತೆ ಕೆಲವರು ಇತರರಿಂದ ಆತ್ಮಪ್ರಭಾವವನ್ನು ಕೇಳಿ ಅರಿತು ಉಪಾಸನೆಮಾಡಿ ಸಿದ್ಧಿಪಡೆಯುತ್ತಾರೆ. ಉಪಾಸನೆ ಸರ್ವಮುಖ್ಯ–ಅದು ಬೆಳೆದಂತೆಲ್ಲ ಭಗವದನುಭೂತಿ ನೆರೆದು ಬರುತ್ತದೆ.

ಮಾಯೆಯೆಂಬುದು ಜೀವನಿಗೂ ಪರಮಾತ್ಮನಿಗೂ ನಡುವೆ ಪ್ರಕೃತಿ ನಿಲ್ಲಿಸಿರುವ ಗೋಡೆ. ತ್ರಿಗುಣಗಳೆಂಬ ಇಟ್ಟಿಗೆಗಳಿಂದಾದದ್ದು ಅದು. ಆತ್ಮಸ್ವರೂಪವನ್ನು ತಿಳಿಯಲಿಚ್ಛಿಸುವವರಿಗೆ ತ್ರಿಗುಣಗಳನ್ನು ಕುರಿತ ತಿಳಿವಳಿಕೆ ಆವಶ್ಯಕ.

ಪ್ರಕರಣ ೧೪

ಅಧ್ಯಾಯ ೧೩ - ಕ್ಷೇತ್ರಕ್ಷೇತ್ರಜ್ಞಯೋಗವೆಂಬ ಪ್ರಕೃತಿಪುರುಷವಿವೇಕಯೋಗ

ಈ ಅಧ್ಯಾಯದಲ್ಲಿ ಗೀತೆಯ ಜ್ಞಾನವಿಚಾರಭಾಗ ಪ್ರಾರಂಭವಾಗುತ್ತದೆ. ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳನ್ನು ಕರ್ಮಷಟ್ಕ, ಭಕ್ತಿಷಟ್ಕ, ಜ್ಞಾನಷಟ್ಕ ಎಂದು ಮೂರು ಸಮಭಾಗವಾಗಿ ನೋಡುವುದು ಒಂದು ಪದ್ಧತಿ. ಷಟ್ಕವೆಂದರೆ ಆರು ಅಧ್ಯಾಯಗಳ ಸಮೂಹ. ಆಯಾ ಷಟ್ಕದಲ್ಲಿ ಆಯಾ ವಿಷಯ–ಕರ್ಮ, ಅಥವಾ ಭಕ್ತಿ, ಅಥವಾ ಜ್ಞಾನ–ಪ್ರಧಾನವೆಂದೂ, ಮಿಕ್ಕೆರಡು ವಿಷಯಗಳೂ ಅಲ್ಲಿ ಪ್ರಾಸಂಗಿಕಗಳೆಂದೂ ತಾತ್ಪರ್ಯ. ಸಮಗ್ರ ದೃಷ್ಟಿಯಲ್ಲಿ ಕರ್ಮ, ಭಕ್ತಿ, ಜ್ಞಾನ ಇವು ಮೂರೂ ಒಂದು ಒಲೆಯ ಮೂರು ಮೇಲ್ಗುಪ್ಪೆಗಳಂತೆ ಅಥಾವ ಮೂರೂ ಮೂಲೆಕಲ್ಲುಗಳಂತೆ ಮೂರೂ ಏಕಕಾಲದಲ್ಲಿ ಅವಿನಾಭಾವದಿಂದ ಉಪಯುಕ್ತವಾಗತಕ್ಕವು. ಅವು ಕಣ್ಣಿಗೆ ಬೇರೆಬೇರೆಯಾದರೂ ಕೆಲಸದಲ್ಲಿ ಪ್ರತ್ಯೇಕವಾಗದೆ ಏಕೀಭವಿಸತಕ್ಕವು. ಆ ಮೂರನ್ನು ಬೇರೆಬೇರೆಯಾಗಿ ತೆಗೆದುಕೊಳ್ಳುವುದು ತರ್ಕವಿಚಾರಕ್ಕೆ ಮಾತ್ರ ಅನುಕೂಲ, ಅನುಷ್ಠಾನಾನುಭವಗಳಿಗಲ್ಲ. ಹೀಗೆ ಹದಿಮೂರನೆಯ ಅಧ್ಯಾಯದಿಂದ ಹದಿನೆಂಟರವರೆಗಿನ ಗ್ರಂಥವು ತತ್ತ್ವಜ್ಞಾನವಿಶದೀಕರಣಕ್ಕೆ ಸಹಾಯ ಕೊಡತಕ್ಕದ್ದು.

ಪ್ರಕೃತ ಅಧ್ಯಾಯದ ಮುಖ್ಯ ವಿಷಯ ಜ್ಞಾನ. ಜ್ಞಾನವೆಂಬುದೇನು? ಅದು ಒಂದು ಬುದ್ಧಿಕಾರ್ಯ. ಒಂದು ಪ್ರಾಣಿ ತನ್ನಿಂದ ಬೇರೆಯಾದದ್ದೆಂದು ತೋರಿದ ಒಂದಾನೊಂದಾ ಪ್ರಾಣಿಯನ್ನೋ ಪದಾರ್ಥವನ್ನೋ ಸಂಗತಿಯನ್ನೋ ಬುದ್ಧಿಯಿಂದ ಗ್ರಹಿಸಿದರೆ ಅದು ಜ್ಞಾನ. ನಮ್ಮ ಅಂತರಂಗದಲ್ಲಿ ಮುಖ್ಯವಾದ ಶಕ್ತಿಗಳು ಎರಡು: ಒಂದು ಮನಸ್ಸು, ಇನ್ನೊಂದು ಬುದ್ಧಿ. ಕೊರತೆಯನ್ನೋ ಬಯಕೆಯನ್ನೋ ನೋವನ್ನೋ ಪಡುವುದು ಮನಸ್ಸು. ಹಾಗೆಯೇ ಸುಖಸಂತೋಷಗಳೂ ಪ್ರೀತಿದ್ವೇಷಗಳೂ ಮನಸ್ಸಿನ ಕಾರ್ಯ. ಮನಸ್ಸು ತನಗೆ ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ತಂದೊಪ್ಪಿಸಿದ ವರದಿಗಳಿಂದ ಕೊರತೆ ಕೋರಿಕೆಗಳನ್ನೂ ತೃಪ್ತಿ ಸಂತೋಷಗಳನ್ನೂ ಪಡುತ್ತದೆ. ಮನಸ್ಸು ಹೀಗೆ ಇಂದ್ರಿಯಗಳಿಂದಲೂ ತನ್ನ ಜ್ಞಾಪಕದಿಂದಲೂ ಸಂಪಾದಿಸಿಕೊಂಡ ವಿಷಯ ಸಂಗತಿಗಳನ್ನು ಒಟ್ಟುಗೂಡಿಸಿ ನೋಡಿ ಅವುಗಳ ಸ್ವರೂಪ ಯೋಗ್ಯತೆಗಳನ್ನು ಗೊತ್ತುಪಡಿಸಿ ತಿಳಿಸುವುದು ಬುದ್ಧಿ. ಮನಸ್ಸೂ ಬುದ್ಧಿಯೂ ಬೇರೆಬೇರೆ ವಸ್ತುಗಳಲ್ಲ. ಎರಡೂ ಒಂದೇ ಕಾಗದ ಹಾಳೆಯ ಎರಡು ಪಕ್ಕಗಳು.

ಒಂದು ಪಕ್ಕದ ಕಾರ್ಯವನ್ನು ಮನಸ್ಸಿನದೆಂದು ಗುರುತು ಹಚ್ಚಿ "ವೇದನೆ" ಎಂದು ಕರೆಯುವುದೂ, ಇನ್ನೊಂದು ಪಕ್ಕದ ಕಾರ್ಯವನ್ನು ಬುದ್ಧಿಯದೆಂದು ಗುರುತಿಸಿ "ಜ್ಞಾನ" ಎಂದು ಕರೆಯುವುದೂ ಶಾಸ್ತ್ರಸಂಕೇತ. ಯೌಗಿಕಾರ್ಥದಲ್ಲಿ ವೇದನೆಯೂ ಜ್ಞಾನವೂ ಒಂದೇ ಆದರೂ ರೂಢಿಯ ಪರಿಭಾಷೆಯಲ್ಲಿ ಕೊಂಚ ಬೇರೆಬೇರೆ.

ಮಗು ಹಸಿವಾದಾಗ ಅಳುವುದು ಮನಸ್ಸಿನ ಕಾರ್ಯ. ತಾಯಿ ಹತ್ತಿರ ಬಂದಾಗ ಹಾಲು ತಂದಾಳೆಂದು ಅಳು ನಿಲ್ಲುವಂತೆ ಮಾಡುವುದು ಬುದ್ಧಿಯ ಕಾರ್ಯ. ಮಗುವಿಗೆ ರೋಗ ಬಂತೆಂದು ತಾಯನ್ನು ಕೊರಗಿಸುವುದು ಮನಸ್ಸು. ಆಗ ತಂದೆಯನ್ನು ವೈದ್ಯನ ಬಳಿಗೆ ಕಳುಹಿಸಿ ಔಷಧ ತರಿಸುವುದು ಬುದ್ಧಿ. ದುಷ್ಯಂತನು ಶಕುಂತಲೆಯನ್ನು ಕಂಡಾಗ ಮೋಹಕ್ಕೆ ಸಿಕ್ಕಿ ಗೋಳಾಡುವಂತೆ ಮಾಡಿದ್ದು ಮನಸ್ಸು. ಬಳಿಕ ಆಕೆ ತನ್ನನ್ನು ತೋಟದ ದುಂಬಿ ಕಾಡುತ್ತಿಯೆಂದು ಪುಕಾರು ಮಾಡಿದಾಗ ಅದನ್ನೇ ನೆವ ಮಾಡಿಕೊಂಡು– "ನಾನು ಇಲ್ಲಿರಲಾಗಿ ತಪಸ್ವಿ ಕನ್ಯೆಯನ್ನು ಕಾಡಿಸುವವನು ಯಾವನು?" ಎಂದು ಪ್ರತಾಪ ಕೊಚ್ಚಿ ಮುಂದಕ್ಕೆ ಬರುವಂತೆ ಮಾಡಿದ್ದು ಬುದ್ಧಿ.

ಮನಸ್ಸು ಸಂಗ್ರಹಿಸಿದ ವಸ್ತುಗಳನ್ನು ಕಾರ್ಯಾರ್ಥವಾಗಿ ಸಂಯೋಜನೆ ಮಾಡಿ ಒದಗಿಸತಕ್ಕದ್ದು ಬುದ್ಧಿ. ಈ ಕಾರ್ಯಾವಸರದಲ್ಲಿ ಬುದ್ಧಿಯು ವಸ್ತುಗಳ ಸ್ವರೂಪವನ್ನೂ ಸ್ವಭಾವವನ್ನೂ ಕಾರ್ಯಾಕಾರ್ಯಯೋಗ್ಯತೆಗಳನ್ನೂ ವಿಚಾರಮಾಡುತ್ತದೆ. ಈ ವಿಚಾರರೂಪವಾದ ಬುದ್ಧಿವೃತ್ತಿಯ ಫಲಿತಾಂಶವೇ ಜ್ಞಾನ.

ಭಕ್ತಿಯು ಮುಖ್ಯವಾಗಿ ಮನೋವೃತ್ತಿ. ಜ್ಞಾನವು ಮುಖ್ಯವಾಗಿ ಬುದ್ಧಿವೃತ್ತಿ. ಕರ್ಮವು ಮನೋಬುದ್ಧಿಪ್ರಚೋದಿತವಾದ ದೈಹಿಕ ವೃತ್ತಿ.

ಈಗ ಗ್ರಂಥವಿಚಾರಕ್ಕೆ ಹೋಗೋಣ. ಜ್ಞಾನಕ್ಕೆ ವಿಷಯವಾಗಲರ್ಹವಾದದ್ದೇನೆಂಬುದನ್ನು ಭಗವಂತ ಗ್ರಂಥಾರಂಭದಲ್ಲಿಯೇ ಸೂಚಿಸಿದ್ದಾನೆ (ಅ ॥ ೨, ಶ್ಲೋ ॥ ೨೦) :

> ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ॥

ದೇಹ ಒಂದು, ಆ ದೇಹಕ್ಕಧಿಕಾರಿಯಾದ ದೇಹಿ–ಅಥವಾ ಆತ್ಮ–ಇನ್ನೊಂದು. ದೇಹವು ವಿಕಾರ ವಿನಾಶಗಳಿಗೆ ವಶವಾದದ್ದು. ದೇಹಿಯು–ಆತ್ಮವು–ಹಾಗಲ್ಲದೆ ಶಾಶ್ವತವಾಗಿರತಕ್ಕದ್ದು.

ಪರಬ್ರಹ್ಮವಸ್ತುವು ಅತಿ ಸೂಕ್ಷ್ಮವಾದ್ದರಿಂದ, ಅದು ವರ್ಣನೆಗೆ ದೊರಕದ್ದಾದದ್ದರಿಂದ ಭಗವಂತನು ಕೆಲವು ಆಪಾತವಿರುದ್ಧವಾಕ್ಯಗಳ ನಡುನಡುವೆ ಅದನ್ನು ಕುರಿತ ಸೂಚನೆಗಳನ್ನಿರಿಸಿದ್ದಾನೆ. ಪುನಃಪುನರ್ಮನನದಿಂದಲೇ ಆ ಸೂಚನೆಗಳ ನಡುವೆ ಅವಿತಿರುವ ರಹಸ್ಯವನ್ನು ನಾವು ಗ್ರಹಿಸಲಾಗುವುದು.

ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥

“ಪರಬ್ರಹ್ಮವು ಆದಿಯಿಲ್ಲದ್ದು. ಅದು ಇರುವುದಲ್ಲವೆಂದೂ ಇಲ್ಲದ್ದಲ್ಲವೆಂದೂ ಹೇಳಲ್ಪಡುತ್ತದೆ”.

ಇಲ್ಲಿಯ ಮೊದಲನೆಯ ಭಾಗವನ್ನು “ಅನಾದಿ + ಮತ್ಪರಂ + ಬ್ರಹ್ಮ” ಎಂಬುದಾಗಿಯಾದರೂ ವಿಭಾಗಿಸಬಹುದು. ಆಗ “ಅನಾದಿಯೂ, ಮತ್ತು ನನ್ನ (ಮತ್) ಈಗಿನ ಆದಿಯುಳ್ಳ ಕೃಷ್ಣಾವತಾರಕ್ಕಿಂತ (ಪರಂ) ಮೇಲ್ಪಟ್ಟದ್ದಾಗಿಯೂ ಇರುವುದು ಬ್ರಹ್ಮ” –ಎಂದು ಅರ್ಥ ಹೇಳಬಹುದು.

ಅದಕ್ಕಿಂತ ತೊಡಕಾದದ್ದು ಮೇಲಣ ಎರಡನೆಯ ಭಾಗ. ಅದರಲ್ಲಿ

ನ + ಸತ್ + ತತ್ + ನ + ಅಸತ್ (ಉಚ್ಯತೇ) ॥

ಇಷ್ಟು ಮಾತುಗಳಿವೆ. ಅರ್ಥ ಹೀಗೆ:

ತತ್ = ಆ ಬ್ರಹ್ಮವು

ನ ಸತ್ = ಇಲ್ಲವೋ ಎನ್ನಿಸುವಂತಿದೆ–ಎಂದರೆ ಪ್ರತ್ಯಕ್ಷವಾಗಿ ಕಾಣದೆ ಅಪ್ರತ್ಯಕ್ಷವಾಗಿದೆ; ಪ್ರಕೃತಿಶಕ್ತಿಯು ನೆಯ್ದು ಮುಸುಕು ತೊಡಿಸಿದ ಜಗತ್ತೆಂಬ ಕಂಬಳಿಯೊಳಗಡೆ ಬ್ರಹ್ಮವು ಗೂಢವಾಗಿದೆ. ನಮಗೆ ಕಾಣುವ ಆ ಹೊದಿಕೆ ನಾಶವಿಕಾರಗಳನ್ನು ಪಡೆಯುತ್ತದೆ. ಆದದ್ದರಿಂದ ಅದು ಅಸತ್. ಸದ್ವಸ್ತುವಾದ ಬ್ರಹ್ಮವು ಅಸತ್ತಾದ ಪ್ರಪಂಚದೊಳಗೆ ಅವಿತುಕೊಂಡು ತಾನಿಲ್ಲವೆಂದೆನಿಸುವಂತೆ ಆಗಿದೆ. ಆದದ್ದರಿಂದ “ನ ಸತ್”.

ನ ಅಸತ್ = ವಾಸ್ತವದಲ್ಲಿ ಅದು ಇಲ್ಲದ್ದಲ್ಲ. ಸರ್ವಕಾಲಗಳಲ್ಲಿಯೂ ಸರ್ವತ್ರ ಇದ್ದುಕೊಂಡಿದೆ. ಕಾಣಿಸದ್ದಾದರೂ ಇಲ್ಲದ್ದಲ್ಲ.

"ನ ಸತ್ ತತ್" ಎಂಬಲ್ಲಿ "ಸತ್" ಎಂದರೆ ಇಂದ್ರಿಯಗೋಚರವಾಗಿರುವ ವಸ್ತು. ಬ್ರಹ್ಮವು ಇಂದ್ರಿಯಗಳ ಪಾಲಿಗೆ ಇರುವುದಲ್ಲ. ಇದೇ ಅಭಿಪ್ರಾಯವೇ ಶ್ರುತಿಯಲ್ಲಿದೆ:

> ಅಸದ್ವಾ ಇದಮಗ್ರ ಅಸೀತ್ । ತತೋ ವೈ ಸದಜಾಯತ ॥

"ಮೊದಲು ಅಸತ್ತೇ ಅಲ್ಲವೇ ಇದ್ದದ್ದು? ಅದರಿಂದ ಸತ್ ಉಂಟಾಯಿತು".

"ಇದ್ದದ್ದು" (ಅಸೀತ್) ಎಂಬ ಕ್ರಿಯಾಪದದಿಂದ ಏನೋ ಒಂದು ಇತ್ತು ಎಂಬುದು ಸ್ಪಷ್ಟವಾಗಿದೆ. ಆದರೆ ಅದು ಏನೆಂದು ತಿಳಿದುಬರುವಂತಿರಲಿಲ್ಲ. ಅದು ರೂಪ ಗುಣ ಲಿಂಗಗಳೊಂದೂ ಇಲ್ಲದ್ದಾಗಿ ಇತ್ತು. ಮೊದಲು ಇದ್ದದ್ದು ಸರ್ವಶೂನ್ಯವಲ್ಲ. ಕಣ್ಣು ಕಿವಿಗಳಿಗೆ ಗೋಚರವಾಗದ್ದು ಏನೋ ಒಂದು ಇತ್ತು. ಹಾಗೆ ಅದು ಕಾಣಬಾರದೆ ಇದ್ದದ್ದರಿಂದ ಅಸತ್ ಎನ್ನಿಸಿಕೊಂಡಿತು. ಅಸತ್ ಎಂಬುದೇ ಅವ್ಯಕ್ತ. ಯಾವುದು ತಾನು ಇದ್ದುಕೊಂಡು ಮೇಲಕ್ಕೆ ಕಾಣಿಸಿಕೊಂಡಿಲ್ಲವೋ ಆ ಗೂಢವಸ್ತುವೇ ಅವ್ಯಕ್ತ. ಅದೇ ಅಸತ್. ಇಲ್ಲಿ ಅಸತ್ ಎಂದರೆ ಅತ್ಯಂತಾಭಾವವಲ್ಲ, ಸಾಪೇಕ್ಷಾಭಾವ. ಸೃಷ್ಟ್ಯನಂತರದ ದೃಷ್ಟಿಯಿಂದ ಸೃಷ್ಟಿ ಪೂರ್ವದಲ್ಲಿಯ ಅಭಾವ.

ಬ್ರಹ್ಮವು ಹೇಗಿದೆ?

> ಸರ್ವತಃ ಪಾಣಿಪಾದಂ ತತ್ ಸರ್ವತೋಽಕ್ಷಿಶಿರೋಮುಖಮ್ ।
> ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥

"ಎಲ್ಲೆಲ್ಲೂ ಅದರ ಕೈಕಾಲುಗಳಿವೆ; ಎಲ್ಲೆಲ್ಲೂ ಅದರ ಕಣ್ಣು ತಲೆಗಳು. ಅದು 'ಸರ್ವಮಾವೃತ್ಯ ತಿಷ್ಠತಿ' –ಎಲ್ಲವನ್ನೂ ಆವರಿಸಿಕೊಂಡಿದೆ." ಇಲ್ಲಿ ಪುರುಷಸೂಕ್ತದ "ಸಹಸ್ರಶೀರ್ಷಾಪುರುಷಃ" ವಾಕ್ಯವನ್ನೂ ಗೀತೆಯ ವಿಶ್ವರೂಪಾಧ್ಯಾಯವನ್ನೂ ಸ್ಮರಿಸಬಹುದು.

> ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಮ್ ।
> ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ ॥

“ಎಲ್ಲ ಇಂದ್ರಿಯಕಾರ್ಯಗಳಲ್ಲಿಯೂ ಅದು ಹೊಳೆಯುತ್ತಿದೆ; ಆದರೆ ಅದು ಇಂದ್ರಿಯಾವಯವಗಳಿಲ್ಲದ್ದು. ಅದು ಯಾವುದಕ್ಕೂ ಅಂಟಿಕೊಂಡಿಲ್ಲ, ಆದರೂ ಎಲ್ಲವನ್ನೂ ಹೊತ್ತಿದೆ. ಅದು ಗುಣವಿಲ್ಲದ್ದು, ಆದರೆ ಗುಣಗಳನ್ನನುಭವಿಸಬಲ್ಲದ್ದು”.

> ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್ ।
> ಭೂತಭರ್ತೃ ಚ ತಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥

“ಅದು ಅಖಂಡ ವಸ್ತು; ಆದರೂ ಪ್ರಾಣಿಗಳಲ್ಲಿ ಖಂಡಖಂಡವಾಗಿ ಹಂಚಿದಂತೆ ಕಾಣುತ್ತದೆ. ಪ್ರಾಣಿಗಳನ್ನು ಧರಿಸಿ ಪೋಷಿಸತಕ್ಕದ್ದು. ಅದೇ ಪ್ರಾಣಿಗಳನ್ನು ತಿನ್ನುತ್ತದೆ, ಮರಳಿ ಅದೇ ಅವುಗಳ ಹುಟ್ಟನ್ನು ಆಗಿಸುತ್ತದೆ”.

> ಜ್ಯೋತಿಷಾಮಪಿ ತಜ್ಜ್ಯೋತಿಃ ತಮಸಃ ಪರಮ್ (ಉಚ್ಯತೇ) ॥

“ಎಲ್ಲ ಬೆಳಕುಗಳಿಗೂ ಅದು ಬೆಳಕು. ಅದು ಎಲ್ಲ ಕತ್ತಲೆಗಳಿಗಿಂತಲೂ ಆಚಿನದು, ಮೇಲಿನದು”.

ಇಂಥಾದ್ದು ಜ್ಞೇಯ, ವರ್ಣನೆಗೆ ಶಕ್ಯವಲ್ಲದ್ದು, ವಿವರಣೆಗೆ ದೊರಕದ್ದು.

ಈ ಮೇಲಿನ ವಾಕ್ಯಗಳು ಕಾವ್ಯವಲ್ಲವೆಂದು ಕಾವ್ಯವನ್ನು ಬಲ್ಲವರು ಯಾರು ಹೇಳಿಯಾರು?

ಜ್ಞಾನಮೂಲ ಯಾವುದು? ಸರ್ವನಿವೇದಕ ಯಾವುದು? ಎಂದರೆ, ಎಲ್ಲವನ್ನೂ ತಿಳಿಯಪಡಿಸುವ ಮತ್ತು ಎಲ್ಲರಿಗೂ ತಿಳಿಯಪಡಿಸುವ ಶಕ್ತಿಸಾಧನ ಯಾವುದು?

> ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
> ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥

“ಒಬ್ಬ ಸೂರ್ಯನು ಸಮಸ್ತ ಜಗತ್ತನ್ನೂ ಬೆಳಗಿಸುವಂತೆ ಕ್ಷೇತ್ರಿಯು (ಆತ್ಮನು) ಕ್ಷೇತ್ರವನ್ನೆಲ್ಲವನ್ನೂ ಬೆಳಗಿಸುತ್ತಾನೆ”.

“ನಾವು ಒಬ್ಬರಿಗೊಬ್ಬರು ಕಾಣಬರುವುದು ಹೇಗೆ? ಕಣ್ಣಿರುವುದರಿಂದ ಎಂದು ತಿಳಿದುಕೊಂಡಿದ್ದೇವೆ. ಬರಿಯ ಕಣ್ಣು ಸಾಲದು. ಅಮಾವಾಸ್ಯೆಯ ರಾತ್ರಿ ದೀಪವಿಲ್ಲದಾಗ ಒಬ್ಬರನ್ನೊಬ್ಬರು ಕಾಣಲಾಗುವುದಿಲ್ಲ. ನಮ್ಮ ಕಣ್ಣು ಕೆಲಸ ಮಾಡಬೇಕಾದರೆ ಅದಕ್ಕೆ ಸೂರ್ಯನೋ ದೀಪವೋ ನೋಟಕ್ಕೂ ನೋಡುವವನಿಗೂ ಸಮಾನನಿವೇದಕವಾಗಿರಬೇಕು. ಕಣ್ಣ ಹೊಳಪೂ ಸೂರ್ಯನ ಅಥವಾ ದೀಪದ ಬೆಳಕೂ ಸೇರಿ ಮನಸ್ಸಿನ ಮೇಲೆ ಪರಿಣಾಮ ಮಾಡುತ್ತವೆ. ಮನಸ್ಸಿಗೆ ಆ ಪರಿಣಾಮ ಮಾಡಿಸಿಕೊಳ್ಳುವ ಯೋಗ್ಯತೆ ಎಂದರೆ ವೇದನಸಾಮರ್ಥ್ಯ–ಎಲ್ಲಿಂದ ಬರುತ್ತದೆ? ಒಳಗಿರುವ ಪರಮಾತ್ಮನಿಂದ. ಆದದ್ದರಿಂದಲೇ ಅಂತರಾತ್ಮನನ್ನು ಪರಂಜ್ಯೋತಿ ಎಂದು ಕರೆಯುವುದು. ಇದನ್ನೇ ಬೃಹದಾರಣ್ಯಕೋಪನಿಷತ್ತಿನಲ್ಲಿ

> ಅತ್ರಾಯಂ ಪುರುಷಃ ಸ್ವಯಂಜ್ಯೋತಿರ್ಭವತಿ ॥

ಎಂದು ಸಿದ್ಧಾಂತಮಾಡಿದೆ. ಆ ಉಪನಿಷತ್ತಿನ ಜ್ಯೋತಿರ್ಬ್ರಾಹ್ಮಣವೆಂಬ ಈ ಪ್ರಕರಣವನ್ನು ಒಂದು ಸಣ್ಣ ಶ್ಲೋಕದಲ್ಲಿ ಸಂಗ್ರಹಿಸಿದ್ದಾರೆ:

> ಕಿಂ ಜ್ಯೋತಿಸ್ತವ ಭಾನುಮಾನ್ ಅಹನಿ ಮೇ ರಾತ್ರೌ ಪ್ರದೀಪಾದಿಕಮ್ ।
> ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ ।
> ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ ।
> ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥

ಗುರುವು ಶಿಷ್ಯನನ್ನು ಕೇಳುತ್ತಾನೆ : ನೀನು ಯಾವ ಬೆಳಕಿನಿಂದ ಪದಾರ್ಥಗಳನ್ನು ನೋಡುತ್ತಿ?

ಉತ್ತರ : ಸೂರ್ಯನಿಂದ.

ಪ್ರ : ರಾತ್ರಿಯಲ್ಲೋ?

ಉ: ದೀಪ, ಬೆಂಕಿ ಇತ್ಯಾದಿಗಳಿಂದ.

ಪ್ರ : ಸರಿ, ಆದರೆ ಆ ಸೂರ್ಯನನ್ನೂ ಆ ದೀಪವನ್ನೂ ನೀನು ನೋಡುವುದು ಯಾವ ಬೆಳಕಿನಿಂದ?

ಉ : ಕಣ್ಣಿನಿಂದ.

ಪ್ರ : ಕಣ್ಣು ಮುಚ್ಚಿಕೊಂಡಾಗ ನೀನು ಪದಾರ್ಥಗಳನ್ನು ಗುರುತಿಸುವುದು ಹೇಗೆ?

ಉ : ಬುದ್ಧಿಯಿಂದ.

ಪ್ರ : ಆ ಬುದ್ಧಿಯನ್ನು ನೀನು ಕಂಡುಕೊಂಡದ್ದು ಹೇಗೆ?

ಉ : ನನ್ನ ಒಳಗಿರುವ ಆತ್ಮದ ಪ್ರಕಾಶದಿಂದ.

ಪ್ರ : ಹಾಗಾದರೆ ನೀನೇ ಪರಂಜ್ಯೋತಿಯಷ್ಟೆ?

ಉ: ಹೌದು, ಗುರುವೆ. ಪರಂಜ್ಯೋತಿಯು ನಾನೇ ಆಗಿದ್ದೇನೆ.

ಮೇಲಣ ಶ್ಲೋಕದ ಸ್ವಲ್ಪ ಭಿನ್ನವಾದ ಇನ್ನೊಂದು ಪಾಠವನ್ನು ಶಂಕರಾಚಾರ್ಯರದೆಂದು ಹೇಳುವ ಶತಶ್ಲೋಕೀಗ್ರಂಥದಲ್ಲಿ ಕಾಣಬಹುದು.

ಈ ಪರಮವಸ್ತುವನ್ನೇ ಗೀತಾಚಾರ್ಯರು ಹೇಳುತ್ತಾರೆ:

> ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಮ್ ॥

ಮೂರೂ ಒಂದೇ ಆತ್ಮವಸ್ತುವಿನ ಸ್ಥಾನಭೇದಗಳು. ಅದೇ ಜ್ಞಾನ, ಅದೇ ಜ್ಞೇಯ, ಅದೇ ಜ್ಞಾನಗಮ್ಯ; ಅದು ಎಲ್ಲರ ಹೃದಯಗಳಲ್ಲಿಯೂ ನೆಲಸಿರುತ್ತದೆ.

ಈ ಪ್ರಕರಣವನ್ನು ಕೊಂಚ ಸಾವಧಾನವಾಗಿ ನೋಡಬೇಕು.

1. ಜ್ಞಾನಂ ಎಂದರೆ (ಮುಂದೆ ಹೇಳುವ ವಿಷಯವನ್ನು ಕುರಿತ) ಜ್ಞಾನವನ್ನು ಸಂಪಾದಿಸುವ ಸಾಧನ ಅಥವಾ ವಿಧಾನ. ಈ ವಿಧಾನವನ್ನು "ಅಮಾನಿತ್ವಂ, ಅದಂಭಿತ್ವಂ" ಮೊದಲಾದ ನೀತಿಗುಣೋಪದೇಶಗಳಿಂದ ತಿಳಿಸಿದೆ. ಶಮದಮಾದಿ ಅಂತರಂಗಸಾಧನಗಳೂ ಯಜ್ಞ ದಾನ ತಪಸ್ಸು ಮೊದಲಾದ ಬಹಿರಂಗಸಾಧನಗಳೂ ಇಲ್ಲಿ ವಿವಕ್ಷಿತವಾದವು. ಜ್ಞಾನ ಎಂದರೆ ಜ್ಞಾನಕ್ಕೆ ಸಾಧಕವಾದ ಸ್ವಶಿಕ್ಷಣ (Self-discipline).

2. ಜ್ಞೇಯಂ : ಇದು ಜ್ಞಾನ ಯಾವ ವಿಷಯವನ್ನು ಕುರಿತದ್ದೋ ಆ ವಿಷಯ.

ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥

ಯಾವ ಒಂದು ವಸ್ತುವನ್ನು ತಿಳಿದುಕೊಂಡರೆ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರೆತೀತೋ ಅದು ಪರಮತತ್ತ್ವ. ಅದೇ ಜ್ಞೇಯ.

ಕಸ್ಮಿನ್ನು... ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ ॥

–ಮುಂಡಕೋಪನಿಷತ್ತು

ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮ್ ಅವಿಜ್ಞಾತಂ ವಿಜ್ಞಾತಮ್ ॥

–ಛಾಂದೋಗ್ಯೋಪನಿಷತ್ತು

ಆತ್ಮನೋ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಮ್ ॥

–ಬೃಹದಾರಣ್ಯಕೋಪನಿಷತ್ತು

“ಸರ್ವಂ” ಎಂದರೆ ನಾವು ಯಾವಯಾವುದನ್ನು “ಇದೆ” ಎಂದು ತಿಳಿದುಕೊಂಡಿದ್ದೇವೋ ಅದರಲ್ಲಿ ಯಾವ ಒಂದನ್ನೂ ಬಿಡದೆ ಎಲ್ಲವನ್ನೂ–ಎಂದು ಅರ್ಥ. ಆತ್ಮವೆಂಬುದರ ಸ್ವರೂಪವನ್ನು ಪೂರ್ತಿಯಾಗಿ ತಿಳಿದುಕೊಂಡಾಗ ಮಿಕ್ಕೆಲ್ಲದರ ಅರ್ಥವಿವರಣೆಯೂ ನಮಗೆ ಅದರಿಂದ ದೊರೆಯುತ್ತದೆ. ಆ ಆತ್ಮವೇ ಪರಬ್ರಹ್ಮ. ಅದೇ ಜ್ಞೇಯ. ಅದೇ ಸಮಸ್ತಸತ್ತಾಕ್ಕೂ–ಇರುವಿಕೆಗೂ–ಮೂಲಾಧಾರ. ಆ ಬ್ರಹ್ಮವಸ್ತುವಿನ ಸ್ವರೂಪವನ್ನು ತಿಳಿದುಕೊಂಡಾಗ ಸಮಸ್ತವಸ್ತುಸ್ವರೂಪಗಳೂ ಸಮಸ್ತಜೀವನ ವ್ಯಾಪಾರಗಳೂ ನಮಗೆ ಯಥಾರ್ಥವಾಗಿ ಸಮಗ್ರವಾಗಿ ಗೊತ್ತಾಗುತ್ತವೆ. ಆ ಮೂಲ ಯಥಾರ್ಥವೇ ಜ್ಞೇಯ. ಅದು ಪರಬ್ರಹ್ಮ.

3. ಜ್ಞಾನಗಮ್ಯಂ : ಆತ್ಮಸ್ವರೂಪವನ್ನು ತಿಳಿದುಕೊಂಡದ್ದರಿಂದ ಏನು ಪ್ರಯೋಜನ? ಜೀವನಮೂಲದ ಮತ್ತು ಜೀವಸಾಮಗ್ರಿಯ ಸ್ವರೂಪವೆಂಥಾದ್ದು ಎಂಬುದನ್ನು ತಿಳಿದುಕೊಂಡರೆ ಜೀವನವನ್ನು ಹೇಗೆ ನಡಸುವುದು ಸರಿ, ಹೇಗೆ ನಡಸುವುದು ತಪ್ಪು, ಜೀವನವು ಸಾರ್ಥಕವಾಗುವ ಬಗೆ ಹೇಗೆ–ಎಂಬುದನ್ನು ಗೊತ್ತುಮಾಡಿಕೊಳ್ಳಲಾಗುತ್ತದೆ.

ಈ ಧರ್ಮಾಧರ್ಮ ಅಧಿಧರ್ಮಗಳ ವಿವೇಕವೇ ತತ್ತ್ವಜ್ಞಾನದಿಂದ ನಮಗಾಗುವ ಪ್ರಯೋಜನ.

ಹೀಗೆ

1. ಜ್ಞಾನಕ್ಕೆ ಬೇಕಾದ ಸಿದ್ಧತೆ.
2. ಜ್ಞಾನದ ವಿಷಯವಾದ ಪರಮತತ್ತ್ವ ಮತ್ತು
3. ಜ್ಞಾನದ ಪ್ರಯೋಜನವಾದ ಧರ್ಮ ಧರ್ಮಾತೀತಗಳ ವಿಜ್ಞಾನ

–ಇವನ್ನು ಕುರಿತ ತಿಳಿವಳಿಕೆ ನಮಗೆ ಅವಶ್ಯವಾಗಿದೆ,

ಅಧ್ಯಾಯಾರಂಭದಲ್ಲಿ ಕ್ಷೇತ್ರ, ಕ್ಷೇತ್ರಜ್ಞ–ಎಂಬ ಮಾತುಗಳನ್ನಲ್ಲವೆ ಉಪಯೋಗಿಸಿದ್ದು? ಅದಕ್ಕೆ ಕೆಲವು ಪರ್ಯಾಯಪದಗಳು ಉಪಯೋಗವನ್ನು ನೋಡಿದ್ದೇವೆ. ಈ ಪಾರಿಭಾಷಿಕ ಶಬ್ದಗಳನ್ನು ಈಗ ಒಂದು ಸಾರಿ ಜ್ಞಾಪಕಕ್ಕೆ ತಂದುಕೊಳ್ಳೋಣ:

	I	II	III
(೧)	ಕ್ಷೇತ್ರ	- ಕ್ಷೇತ್ರಜ್ಞ, ಕ್ಷೇತ್ರಿ	- ಜೀವಾತ್ಮ
(೨)	ದೇಹ	- ದೇಹಿ	ಜೀವಾತ್ಮ
(೩)	ಶರೀರ	- ಶರೀರಿ	- ಜೀವಾತ್ಮ
(೪)	ಜಗತ್ತು	- ಸೂತ್ರಾತ್ಮ	- ಈಶ್ವರ
(೫)	ಪ್ರಕೃತಿ	- ಪುರುಷ	- ಪುರುಷೋತ್ತಮ

ಉಪನಿಷತ್ತುಗಳಲ್ಲಿ ನಾವು ನೋಡಿದ್ದೇವೆ, ಸದ್ವಸ್ತುವು ನಮಗೆ ದ್ವಿರೂಪದಲ್ಲಿ ಗ್ರಾಹ್ಯವಾಗಿದೆ–ಎಂದು.

ಏತತ್ಸರ್ವಂ ಯನ್ಮೂರ್ತಂ ಚಾಮೂರ್ತಂ ॥

–ಪ್ರಶ್ನೋಪನಿಷತ್ತು

ದ್ವೇ ವಾವ ಬ್ರಹ್ಮಣೋ ರೂಪೇ ।
ಮೂರ್ತಂ ಚೈವಾಮೂರ್ತಂ ಚ ॥

–ಬೃಹದಾರಣ್ಯಕೋಪನಿಷತ್ತು

ಇದನ್ನೇ ೧೨ನೆಯ ಶ್ಲೋಕದಲ್ಲಿ–

ನ ಸತ್ ತತ್ । ನ ಅಸತ್ ॥

–ಎಂದು ವರ್ಣಿಸಿದ್ದನ್ನು ಮೇಲೆ ನೋಡಿದ್ದೇವೆ. "ನ ಸತ್" ಎಂಬುದರಲ್ಲಿ ಪ್ರಕೃತಿಯ ಸೂಚನೆಯೂ "ನ ಅಸತ್" ಎಂಬುದರಲ್ಲಿ ಪುರುಷನ (ಜೀವಾತ್ಮನ) ಸೂಚನೆಯೂ ಅಡಗಿವೆ. ಇದೇ ವಿಚಾರ ಈಗ ಮುಂಬರಿಯುತ್ತದೆ.

ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್ ॥

"ಸಕಲಜಗನ್ಮೂಲವಾದ ಪರಬ್ರಹ್ಮವು ಹೇಗೆ ಅನಾದಿಯೋ ತತ್ಕಾರ್ಯವಾದ ಪ್ರಕೃತಿ ಪುರು (ಜೀವ)ರುಗಳಿಬ್ಬರೂ ಹಾಗೆ ಅನಾದಿ. ಲೋಕದಲ್ಲಾಗುವ ಎಲ್ಲ ಬದಲಾವಣೆಗಳೂ ಎಲ್ಲ ಗುಣಪ್ರಭಾವಗಳೂ ಪ್ರಕೃತಿಯಿಂದಾದುವೆಂದು ತಿಳಿ".

ಅನಾದಿ ಎಂದರೆ ಅದಿಯಿಲ್ಲದ್ದು, ಮೊದಲೆಂಬುದೇ ಇಲ್ಲದ್ದು–ಹಾಗೆಂದರೆ ಕಾಲದ ಬಾಧೆಗೆ ಒಳಪಡದ್ದಾಗಿ ಯಾವಾಗಲೂ ಇದ್ದು ಕೊಂಡಿರುವಂಥಾದ್ದು.

ಪ್ರಕೃತಿಗಾಗಲಿ ಜಗತ್ತಿಗಾಗಲಿ ಹುಟ್ಟಿದ ಹಬ್ಬ ಯಾವತ್ತು? ಅವು ಹುಟ್ಟಿದುವೇ ಅಲ್ಲ, ಅವು ಇರುವವು–ಸ್ವತ ಏವ (ತಾವು ತಾವೇ ಆಗಿ) ಇರುವವು.

ಅವು ಹುಟ್ಟಿದುವಲ್ಲವಾದರೆ ಸಾಯುವವೂ ಅಲ್ಲವೋ? ಅಲ್ಲ. ಅವಕ್ಕೆ ಸಾವಿಲ್ಲ. ಆದರೆ ಅವುಗಳ ಹುಟ್ಟು ಎಷ್ಟು ಮಟ್ಟಿನ ನಿಜವೋ ಅವುಗಳ ಸಾವೂ ಅಷ್ಟುಮಟ್ಟಿನ ನಿಜ–ಎಂದರೆ ಹುಟ್ಟು ಸಾವುಗಳೆಂಬವು ಕೊಂಚಕೊಂಚದ ವಿಕಾರಗಳು, ಸದ್ವಸ್ತುವಿನ ನಿಜಸ್ವರೂಪಗಳಲ್ಲ.

ಸದ್ವಸ್ತುವನ್ನರಿತವನ ಕಣ್ಣಿಗೆ ಸೃಷ್ಟಿ ಪ್ರಲಯಗಳು ಪ್ರಕೃತಿಯೆಂಬ ಬ್ರಹ್ಮಶಕ್ತಿಯ ಕ್ಷಣಮಾತ್ರದ ಪ್ರಕಟವಿಕಟಗಳು. ಅದೇ ಮಾಯೆ. ಅದು ಉಂಟು ಎಂದರೆ ಉಂಟು, ಇಲ್ಲವೆಂದರೆ ಇಲ್ಲ. ಈ ವಿಚಾರವನ್ನು ಆಗಲೇ ನೋಡಿದ್ದಾಗಿದೆ.

ಪ್ರಕೃತಿಯ ಮಹಿಮೆ ಎಂಥಾದ್ದು?

> ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ॥

ಲೋಕವಸ್ತುಗಳ ಗುಣಕಾರ್ಯವಿಕಾರಗಳೆಲ್ಲ ಪ್ರಕೃತಿಯ ಅಧಿಕಾರವ್ಯಾಪ್ತಿಗೆ (ಜ್ಯೂರಿಸ್‌ಡಿಕ್ಷನ್) ಸೇರಿದವು. ಎಲ್ಲ ಕಾರ್ಯಗಳಿಗೂ, ಎಲ್ಲ ಕಾರಣಗಳಿಗೂ ಎಲ್ಲ ಕರ್ತೃತ್ವಗಳಿಗೂ ಮೂಲಭೂತವಾದದ್ದು ಪ್ರಕೃತಿಯೆಂಬ ಬ್ರಹ್ಮಚೈತನ್ಯದ ನೈಜ ವ್ಯಾಪಾರ.

ಜೀವನೋ? ಎಂದರೆ–

> ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥

ಸುಖದುಃಖಾನುಭವಗಳನ್ನು ಸಂಪಾದಿಸಿಕೊಳ್ಳುವವನು ಜೀವ. ಪ್ರಕೃತಿಯು ಪ್ರೇರಣೆ ಪ್ರೋತ್ಸಾಹನಗಳನ್ನು ಒದಗಿಸುತ್ತಾಳೆ. ಆ ಪ್ರೋತ್ಸಾಹಗಳ ಮಧ್ಯೆ ಮನುಷ್ಯನು ವಿವೇಕ ಮಾಡಿಯೋ ವಿವೇಕಮಾಡದೆಯೋ ನಡೆದುಕೊಂಡು ತನ್ನ ಸುಖದುಃಖಗಳನ್ನು ತಾನೇ ಸಂಪಾದಿಸಿಕೊಳ್ಳುತ್ತಾನೆ.

> ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ।
> ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು ॥

"ಮನುಷ್ಯನು ಪ್ರಕೃತಿಗೆ ಮರುಳಾದಾಗ ಪ್ರಕೃತಿಗುಣಗಳನ್ನು ಅನುಭವಿಸುತ್ತಾನೆ. ಅವನು ಎಂಥ ಪ್ರಾಣಿಯಾಗಿ, ಎಂಥ ಮನೆತನದಲ್ಲಿ ಹುಟ್ಟುತ್ತಾನೆಂಬುದು ಅವನು ಪ್ರಕೃತಿಯ ಯಾವ ಗುಣಗಳನ್ನು ಸ್ವೀಕರಿಸಿಕೊಳ್ಳುತ್ತಾನೆ–ಎಂಬುದರಿಂದ ಗೊತ್ತಾಗುತ್ತದೆ".

ಹೀಗೆ ಪುರುಷನ–ಎಂದರೆ ಜೀವನ–ಭವಿಷ್ಯ ಅವನ ಯುಕ್ತಾಯುಕ್ತಾವಿವೇಕವನ್ನು, ಅವನ ಗುಣತಾರತಮ್ಯ ವಿವೇಚನೆಯನ್ನು ಅವಲಂಬಿಸಿರುತ್ತದೆ.

ಪ್ರಕೃತಿಯ ಪ್ರೇರಣೆ, ಜೀವನ ಪ್ರತ್ಯುತ್ತರಬಾಧ್ಯತೆ (ಜವಾಬ್ದಾರಿ) ಈ ಎರಡನ್ನೂ ನೋಡಿದ್ದಾಯಿತು. ಅದೇ ನಮ್ಮೆಲ್ಲರ ಬಾಳು. ಇನ್ನುಳಿದಿರುವ ವಿಚಾರ ಈಶ್ವರತತ್ತ್ವ ಅಥವಾ ಪುರುಷೋತ್ತಮತತ್ತ್ವ.

> ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
> ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥

ಎಲ್ಲಕ್ಕೂ ಅಧ್ಯಕ್ಷ–ಎಂದರೆ ತತ್ತತ್ಕರ್ಮಕ್ಕೆ ತತ್ತತ್ಫಲ ದೊರೆಯುವಂತೆ ನೋಡುವವನು–ಮಹೇಶ್ವರ. ಅವನು ತನಗಾಗಿ ಯಾವುದನ್ನೂ ಬೇಕೆನ್ನುವವನಲ್ಲ, ಬೇಡವೆನ್ನುವವನಲ್ಲ. ಹಾಗೆಯೇ ಅವನು "ಅನುಮಂತಾ" ಎಂದರೆ ತಾನು ತಟಸ್ಥನಾಗಿದ್ದುಕೊಂಡು ಯಾವುದಕ್ಕೂ "ತಥಾಽಸ್ತು" ಎಂದು ಅನುಮೋದಿಸುವವನು. "ನಿನಗೆ ಬೇಕೆನ್ನಿಸಿದ್ದನ್ನು ಮಾಡಿಕೋ; ಮಾಡಿಕೊಂಡದ್ದನ್ನುಣ್ಣು" ಎನ್ನುವವನು. ಜೀವಲೀಲೆಯನ್ನು ತೊಟ್ಟು ಲೋಕವ್ಯಾಪಾರಗಳನ್ನು ಭರಿಸುವವನಂತೆಯೂ, ಕರ್ಮಫಲವನ್ನು ಭುಜಿಸುವವನಂತೆಯೂ, ಇರುತ್ತಾನೆ. ಆದರೂ ಅವನು ಎಲ್ಲಕ್ಕೂ ಅಧಿಪತಿ; ಯಾವುದಕ್ಕೂ ಒಳಪಟ್ಟವನಲ್ಲ.ಆ ಮಹೇಶ್ವರನೇ ದೇಹದೊಳಗಿನ ಜೀವದಶಾತೀತನಾದ ಪರಮಪುರುಷ. ಅವನನ್ನೇ ಪರಮಾತ್ಮನೆಂದು ಕರೆಯುವುದು.

ಹೀಗೆ ಪರಬ್ರಹ್ಮವು ಪ್ರಕೃತಿ, ಜೀವ, ಈಶ್ವರ–ಎಂಬ ಮೂರು ರೂಪಗಳಿಂದ ಜಗದ್ವ್ಯಾಪಾರವನ್ನು ನಡಸುತ್ತಿದೆ.

> ಯಾವತ್ಸಂಜಾಯತೇ ಕಿಂಚಿತ್ಸತ್ತ್ವಂ ಸ್ಥಾವರಜಂಗಮಮ್ ॥
> ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ (ತದ್ವಿದ್ಧಿ ಭರತರ್ಷಭ) ॥

ಈ ಲೋಕದಲ್ಲಿ ಯಾವಯಾವುದು ಹುಟ್ಟುತ್ತದೆಯೋ ಅದು ಜಂಗಮಪ್ರಾಣಿಯೋ ಸ್ಥಾವರವಸ್ತುವೋ ಯಾವುದಾದರೂ, ಅದರ ಹುಟ್ಟಿಗೆ ಕಾರಣವಾದದ್ದು ಕ್ಷೇತ್ರಕ್ಷೇತ್ರಜ್ಞರ ಸಂಯೋಗ–ಪ್ರಕೃತಿಪುರುಷರ ಸಂಯೋಗ–ಜಗತ್ತು ಜೀವ ಈ ಇಬ್ಬರ ಸಂಯೋಗ. ಎಂದರೆ ಪ್ರಪಂಚಕಾರ್ಯದಲ್ಲಿ ಅವರಿಬ್ಬರೂ ಸಹಭಾಗಿಗಳು.

ನಾನಾರೂಪವಾದದ್ದಲ್ಲವೆ ಪ್ರಪಂಚ? ಪ್ರಕೃತಿ ಜೀವರುಗಳ ಸಂಯೋಗ ಪ್ರಕಾರಗಳು ಹಾಗೆಯೇ ಅನಂತವಾದವು. ಪ್ರಕೃತಿಯ ವೇಷಚೇಷ್ಟಿತಗಳಿಗೆ ಮಿತಿಯಿಲ್ಲ; ಆದದ್ದರಿಂದ ಜೀವದ ಪ್ರತಿವೇಷ ಪ್ರತಿಚೇಷ್ಟಿತಗಳಿಗೂ ಲೆಕ್ಕವಿಲ್ಲ. ಹಾಗಾದದ್ದರಿಂದ ಪ್ರಾಣಿಗಳ ಸಂಖ್ಯೆಗೂ ವೈವಿಧ್ಯಕ್ಕೂ ಮಿತಿಯಿಲ್ಲ. ಹೀಗೆ ಅಸಂಖ್ಯೇಯ ವಸ್ತುಗಳೂ ಜೀವಭೂತಗಳೂ ಜಗತ್ತಿನಲ್ಲಿ ಒಂದರಿಂದೊಂದು ಬೇರೆಯಾಗಿ, ಏಕಮೂಲವಲ್ಲವೆಂಬಂತೆ, ಕಾಣಬರುತ್ತವೆ. ಈ ಪ್ರತ್ಯಕ್ಷ ನಾನಾತ್ವದ ಕಾರಣದಿಂದ ನಮ್ಮಲ್ಲಿ ಸ್ವಕೀಯಪರಕೀಯ ಭೇದಗಳೂ ಪ್ರಿಯಾಪ್ರಿಯಭೇದಗಳೂ ಬೆಳೆದಿವೆ. ಅದರಿಂದ ರಾಗದ್ವೇಷಗಳು, ಅದರಿಂದ ಪುಣ್ಯಪಾಪಗಳು. ಹೀಗಾದದ್ದು ಸಂಸಾರಸಾಗರ. ಅದರ ಅಲೆಯ ಹೊಡೆತದ ನಡುವೆ ಜೀವಕ್ಕೆ ನೆಮ್ಮದಿಯೆಲ್ಲಿ?

ಯದಾ ಭೂತಪೃಥಗ್ಭಾವಮ್ ಏಕಸ್ಥಮನುಪಶ್ಯತಿ ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥

"ಯಾವಾಗ ಮನುಷ್ಯನು ಅಸಂಖ್ಯಾತ ಪ್ರಾಣಿಗಳ ಪ್ರತ್ಯೇಕತೆಗಳನ್ನು ಏಕೈಕ ಮಹಾಚೈತನ್ಯದೊಳಗಿನ ತೋರಿಕೆ ಎಂಬಂತೆ–ಸಮುದ್ರದೊಳಗಿನ ಅಲೆಸುಳಿಗಳೆಂಬಂತೆ–ಕಾಣುತ್ತಾನೋ ಆಗ ಅವನಿಗೆ ವಿಸ್ತಾರವಾದ ಬ್ರಹ್ಮಸಂದರ್ಶನ ಲಭಿಸುತ್ತದೆ".

ಅದೇ ಭೇದಮಧ್ಯದಲ್ಲಿ ಅಭೇದದರ್ಶನ.

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ॥

"ಪರಮೇಶ್ವರನಾದ ಆತ್ಮವು ಸಮಸ್ತ ಪ್ರಾಣಿಗಳಲ್ಲಿಯೂ ಸಮಾನವಾಗಿ ನೆಲೆಗೊಂಡಿರುತ್ತದೆ. ವಿಕಾರ ವಿನಾಶಗಳನ್ನನುಭವಿಸುವ ದೇಹದೊಳಗಡೆ ಅದು ವ್ಯತ್ಯಾಸ ನಾಶಗಳಿಲ್ಲದೆ ಏಕರೂಪದಲ್ಲಿರುತ್ತದೆ. ಅದನ್ನು ಕಂಡಾತನು ತತ್ತ್ವವರಿತವನು".

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿನಸ್ತ್ಯಾತ್ಮನಾऽऽತ್ಮಾನಂ ತತೋ ಯಾತಿ ಪರಾಂ ಗತಿಮ್ ॥

“ಈಶ್ವರನನ್ನು ಎಲ್ಲೆಡೆಯೂ ಸಮನಾಗಿ ಕಾಣುವವನು–ಈಶ್ವರಸಾನ್ನಿಧ್ಯವನ್ನು ಎಲ್ಲೆಲ್ಲಿಯೂ ಒಂದೇ ಪ್ರಕಾರ ಅನುಭವಿಸಲರಿತವನು–ಯಾರಿಗೂ ಹಾನಿಮಾಡಲಾರನು. ಏಕೆಂದರೆ ಬೇರೆಬೇರೆ ಎಂದು ತೋರುವ ಜೀವಾತ್ಮಗಳನ್ನು ಅವನು ಪರಮಾತ್ಮಾನುಭವದಲ್ಲಿ ಏಕೀಕೃತವಾಗಿಸಿರುತ್ತಾನೆ. ಅದೇ ಪರಮೋತ್ತಮದಶೆಗೆ ದಾರಿ”.

ನಮ್ಮ ಪ್ರಪಂಚದ ಪ್ರತಿದಿವಸದ ಪ್ರತಿಕ್ಷಣದ ಜನನಮರಣಾದಿ ವಿಕಾರಗಳೂ ಜೀವಿಗಳ ಪರಸ್ಪರ ವ್ಯವಹಾರ ಪರಿಣಾಮಗಳೂ ಮಿಕ್ಕೆಲ್ಲ ಜಗದ್ವ್ಯಾಪಾರಗಳೂ ಪ್ರಕೃತಿ ಪುರುಷರ, ಲೋಕಜೀವಗಳ–ದೇಹದೇಹಿಗಳ ಸಂಯೋಗದ ಪ್ರಭಾವವೆಂದು ಮೇಲೆ ನೋಡಿದೆವಲ್ಲವೆ? ಈ ನಿತ್ಯಜಗತ್ಕಾರ್ಯದ ಪ್ರವಾಹದಲ್ಲಿ ಪರಮಾತ್ಮನು ಭಾಗವೇನು? ಆತ್ಮನಿಗೆ ಯಾವ ಭಾಗವೂ ಇಲ್ಲ. ಆತ್ಮನು ನಿಸ್ಸಂಗನು, ನಿರ್ಲಿಪ್ತನು.

> ಅನಾದಿತ್ವಾತ್ ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ ।
> ಶರೀರಸ್ಥೋಽಪಿ ಕೌನ್ತೇಯ ನ ಕರೋತಿ ನ ಲಿಪ್ಯತೇ ॥

“ಪರಮಾತ್ಮನು ಆದಿ–ಮಧ್ಯ–ಅಂತರಹಿತನು, ಗುಣರಹಿತನು, ವಿಕಾರರಹಿತನು. ಅವನು ಶರೀರದೊಳಗೆ, ಜೀವೋಪಾದಿಗಳ ನಡುವೆ ಇದ್ದಾಗ್ಗೂ ಅವನು ಸ್ವತಃ ಏನನ್ನೂ ಮಾಡುವವನಲ್ಲ; ಯಾವುದೂ ಅವನಿಗೆ ಅಂಟಿಕೊಳ್ಳುವುದಿಲ್ಲ”.

ಮೇಲೆ ಹೇಳಿರುವಂಥ ಕ್ಷೇತ್ರಕ್ಷೇತ್ರಜ್ಞಾದಿ ವಸ್ತುದ್ವಯಸಂಸರ್ಗ ಸಂಘರ್ಷಣೆಗಳು ಪ್ರಕೃತಿ ಜೀವರುಗಳಿಗೆ ಸೇರಿದುವು. ಈ ಎರಡರಿಂದಲೂ ಬೇರೆಯಾದವನು ಪರಮಾತ್ಮ.

ಸದ್ವಸ್ತುವು ತ್ರಿಪ್ರಾಕಾರಗಳಲ್ಲಿ ಗ್ರಾಹ್ಯವಾಗಿದೆ ಎಂದು ಏಳನೆಯ ಅಧ್ಯಾಯದಲ್ಲಿ ನೋಡಿದೆವು.

1. ಅಪರಾಪ್ರಕೃತಿ–ಅಥವಾ ಜಡಪ್ರಪಂಚ.
2. ಪರಾಪ್ರಕೃತಿ–ಅಥವಾ ಜೀವಚೈತನ್ಯ.
3. ಉಭಯಪ್ರಕೃತ್ಯಾಶ್ರಯವೂ, ಹಾಗೆಯೇ ಉಭಯಪ್ರಕೃತಿವ್ಯತಿರಿಕ್ತವೂ ಆದ ಪರಬ್ರಹ್ಮ.

ಅಲ್ಲಿಯ ವಾಕ್ಯಗಳನ್ನು ಜ್ಞಾಪಕಕ್ಕೆ ತಂದುಕೊಳ್ಳೋಣ:

1. ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥
ಅಪರೇಯಮ್ ॥

ಇದೇ Physical Nature ಅಥವಾ ಭೌತಪ್ರಕೃತಿ. ಇದು ಅಚೇತನ. ಇದರಿಂದ ವ್ಯತಿರಿಕ್ತವಾದದ್ದು ಚೇತನ ಅಥವಾ ಆತ್ಮ.

2. ಇತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।
ಜೀವಭೂತಾಂ (ಮಹಾಬಾಹೋ) ಯಯೇದಂ ಧಾರ್ಯತೇ ಜಗತ್ ॥

ಇದು ಭಗವತ್ಪ್ರಕೃತಿಯ ಚೇತನಭಾಗ.

3. ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥

ಇದೇ ಭಗವಂತನ ಸೂತ್ರಾತ್ಮರೂಪ ಅಥವಾ ಪರಮಾತ್ಮಸ್ವರೂಪ.

ಹೀಗೆ ಸದ್ವಸ್ತುವು

1. ಪಾಂಚಭೌತಿಕ ಪ್ರಪಂಚ,
2. ಜೀವಾತ್ಮ,
3. ಪರಮಾತ್ಮ

–ಎಂಬ ತ್ರಿಪ್ರಕಾರಗಳಲ್ಲಿ ಗ್ರಾಹ್ಯವಾಗಿದೆ. ಸದ್ವಸ್ತುವು ಹೀಗೆ ಏಕವೆಂದೋ ಅನೇಕವೆಂದೋ ನಾವು ತಿಳಿದುಕೊಳ್ಳುತ್ತೇವಲ್ಲ–ಈ ತಿಳಿವಳಿಕೆ ನಮಗೆ ಬರುವುದು ಹೇಗೆ? ಜ್ಞಾನಕ್ಕೆ ಮೂಲವೆಲ್ಲಿ?

ಒಂದು ಸೂಕ್ಷ್ಮವೂ ಗಹನವೂ ಆದ ವಿಚಾರವನ್ನು ನಾವು ತಿಳಿದುಕೊಳ್ಳ ಹೊರಟಾಗ, ಆ ವಿಚಾರಕ್ಕೆ ಸಂಬಂಧಪಟ್ಟ ಪ್ರತ್ಯಕ್ಷಸಂಗತಿಯಿಂದ ವಿಚಾರವನ್ನು ಆರಂಭಮಾಡಿ ಪರೋಕ್ಷದ ಕಡೆಗೆ ಹೋಗುವುದು ಸೌಕರ್ಯ. ಆದದ್ದರಿಂದ ಸ್ವಾಮಿ ಈಗ ನಮಗೆಲ್ಲ ತಿಳಿದೇ ಇರುವ ಒಂದು ಸಂಗತಿಯಿಂದ ಆರಂಭಿಸುತ್ತಾನೆ:

1. ಇದಂ ಶರೀರಂ ಕೌನ್ತೇಯಂ ಕ್ಷೇತ್ರಮಿತ್ಯಭಿಧೀಯತೇ ॥

2. ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥

3. ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ॥

ಮೇಲೆ ನಾವು ನೋಡಿದಂತೆ ದೇಹ, ದೇಹಿ, ಪರಮಾತ್ಮ–ಇವು ಇಲ್ಲಿಯ ವಿಷಯಗಳು. ಈ ಮೂರನ್ನೂ ಜ್ಞಾನಸಂಪಾದನದೃಷ್ಟಿಯಿಂದ ನೋಡುವುದಾಗುತ್ತದೆ.

ಮೊದಲು "ಇದಂ ಶರೀರಂ" –ಶರೀರವೇ ದೇಹ. ಅದು ಕ್ಷೇತ್ರ, ಆಧಾರಭೂಮಿ, ಜಮೀನು. ಎಲ್ಲ ಬೆಳವಣಿಗೆಗೂ ಅಲ್ಲಿ ಉತ್ಪತ್ತಿ ಅಭಿವೃದ್ಧಿಗಳು. ಶರೀರವಿಲ್ಲದೆ ಜೀವವಿಲ್ಲ. ಶರೀರವೆಂಬ ವ್ಯಾಪಾರಸಾಧನವು ಸ್ಥೂಲ, ಸೂಕ್ಷ್ಮ, ಲೈಂಗ–ಎಂದು ಮೂರು ಪದರಗಳಾಗಿವೆ. ಆತ್ಮವು ಅದರೊಳಗಡೆ ಸಿಕ್ಕಿಕೊಂಡಿರುವ ಸ್ಥಿತಿಯಲ್ಲಿ ಜೀವ. ಹೀಗೆ ಸಮಸ್ತ ಪ್ರಾಣಿವರ್ಗಕ್ಕೂ ಮೊದಲು ಇರಬೇಕಾದ ಆಧಾರ ಶರೀರ. ಅದೇ ಪ್ರಕೃತಿ. ಅಪರಾಪ್ರಕೃತಿಯನ್ನು ಯೋನಿಯೆಂದೂ ಪರಮಾತ್ಮನನ್ನು ಬೀಜವೆಂದೂ ಕರೆದಿದೆ.

ಏತದ್ಯೋನೀನಿ ಭೂತಾನಿ ॥ (೭-೬)
ಬೀಜಂ ಮಾಂ ಸರ್ವಭೂತಾನಾಮ್ ॥ (೭-೧೦)

ಪ್ರಕೃತಿಯೇ ಯೋನಿ; ಪರಮಾತ್ಮನೇ ಬೀಜ. ಪ್ರಕೃತಿಯೇ ಕ್ಷೇತ್ರ, ಎಂದರೆ ಸಂಸಾರಸಸ್ಯದ ಕೃಷಿಭೂಮಿ; ಪರಮಾತ್ಮನೇ ಕ್ಷೇತ್ರಜ್ಞ, ಎಂದರೆ ಕೃಷಿಕಾರ.

ಜೀವಾತ್ಮವನ್ನು ಮೊದಲು ದೇಹಿ, ದೇಹವಂತ–ಎಂದು ಕರೆದಿತ್ತು. ಈಗ ಕ್ಷೇತ್ರಜ್ಞ ಎಂಬ ಪದವನ್ನು ಉಪಯೋಗಿಸಿದೆ. ವ್ಯತ್ಯಾಸವೇನು? ಅದು "ಜ್ಞ" ಎಂಬ ಪದಾಂಶದಲ್ಲಿದೆ. ದೇಹಿ ಎಂಬುದರಲ್ಲಿ ಈ ಜ್ಞಾನಕ್ರಿಯೆಯ ಸೂಚನೆ ಪ್ರಕಾಶವಾಗಿಲ್ಲ. "ಜ್ಞ" ಎಂದರೆ ತಿಳಿದವನು. "ಈ ಕ್ಷೇತ್ರ ನನ್ನದು; ನಾನು ಇದನ್ನಾಳತಕ್ಕವನು; ಇದನ್ನಾಳಬೇಕಾದದ್ದು ಹೀಗೆ" –ಎಂದು ಯಾರು ಆಲೋಚನೆ ಮಾಡುತ್ತಾನೋ ಅವನು ಕ್ಷೇತ್ರಜ್ಞ–ಜೀವಾಂತರ್ಗತನಾದ ಆತ್ಮ.

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ॥

ಇಲ್ಲಿ ಕ್ಷೇತ್ರ ಮೊದಲನೆಯ ಪದಾರ್ಥ. ಕ್ಷೇತ್ರಜ್ಞ ಎರಡನೆಯ ಪದಾರ್ಥ. ಹೀಗೆ ಎರಡು ಪದಾರ್ಥಗಳಿಲ್ಲದ ಕಡೆ ಜ್ಞಾನಕಾರ್ಯಕ್ಕೆ ಆಸ್ಪದವಿಲ್ಲ. ("ಜ್ಞಾ = ಅವಬೋಧನೇ" ತಿಳಿಯುವುದು). "ತಿಳಿಯುವುದು" ಎಂಬ ಕೆಲಸ ಎರಡು ವಸ್ತುಗಳನ್ನು ಬಯಸುತ್ತದೆ: ತಿಳಿದುಕೊಳ್ಳುವವನೊಬ್ಬ; ತಿಳಿದುಕೊಳ್ಳಲ್ಪಡಬೇಕಾದ ವಸ್ತು ಅಥವಾ ಪ್ರಾಣಿ, ಅಥವಾ ಸಂಗತಿ ಒಂದು. ತಿಳಿದುಕೊಳ್ಳುವವನು ಜ್ಞಾತಾ, ತಿಳಿದುಕೊಳ್ಳಲ್ಪಡಬೇಕಾದದ್ದು ಜ್ಞೇಯ. ನಾವು ಈ ಜ್ಞಾತಾ-ಜ್ಞೇಯ ಎಂಬ ಪದಗಳನ್ನಿಟ್ಟುಕೊಂಡರೆ ಪದಬಾಹುಳ್ಯದ ಅವಾಂತರ ಕೊಂಚ ಕಡಮೆಯಾಗಿ ಚರ್ಚೆ ಶೀಘ್ರವಾಗಿ ನಡೆಯಬಹುದು.

ಜ್ಞಾತೃವಿಗೆ ಜ್ಞೇಯವು ಲಭ್ಯವಾಗುವುದು ಹೇಗೆ? ಇದು ದೊಡ್ಡ ವಿಚಾರ. ಎರಡು ಪದಾರ್ಥಗಳಿರುವಲ್ಲಿ ಒಂದಕ್ಕೂ ಇನ್ನೊಂದಕ್ಕೂ ಮನಸ್ಸು ಬುದ್ಧಿಗಳ ಮೂಲಕ ಸಂಬಂಧವಾಗುವುದಲ್ಲವೆ ಜ್ಞಾನ? ಆ ಸಂಬಂಧಕ್ಕೆ ಸಾಧನ ಯಾವುದು? ಈಗ ನಾನು ಈ ಗೋಖಲೆ ಸಂಸ್ಥೆಯ ಕಟ್ಟಡದಲ್ಲಿ ಕುಳಿತು ಆಕಾಶವಾಣಿಯ ಕಟ್ಟಡದಲ್ಲಿರುವ ಒಬ್ಬರೊಡನೆ ಮಾತನಾಡಲಾಗುತ್ತದೆ. ಟೆಲಿಫೋನ್ ತಂತಿಯ ಮೂಲಕ ಆತನಿಗೂ ನನಗೂ ಸಂಬಂಧ. ನನ್ನ ಧ್ವನಿಯನ್ನು ಆತನಿಗೆ, ಆತನ ಧ್ವನಿಯನ್ನು ನನಗೆ ತಲಪಿಸುವ ಆ ಸಾಧನವನ್ನು ನಿವೇದಕ (Communicator) ಎಂದು ಕರೆಯೋಣ. ನಿವೇದಕವೆಂದರೆ ವಿದಿತಮಾಡತಕ್ಕದ್ದು–ವೇದ್ಯಮಾಡತಕ್ಕದ್ದು–ತಿಳಿಯಪಡಿಸಬಲ್ಲದ್ದು ಎಂದರ್ಥ. ಆ ತಂತಿ ಎರಡು ಕಡೆಗಳಿಗೂ ಅಂಟಿಕೊಂಡು ಎರಡಕ್ಕೂ ಸಮಾನಸಂಬದ್ಧವಾಗಿರುತ್ತದೆ. ನಮ್ಮ ಈಗಿನ ಪ್ರಸಂಗದಲ್ಲಿ ಶರೀರವು ಕ್ಷೇತ್ರ; ಆತ್ಮವು ಕ್ಷೇತ್ರಜ್ಞ. ಆತ್ಮಕ್ಕೆ ಶರೀರವಿಷಯವು ವಿದಿತವಾಗಬೇಕಾದರೆ ಆ ಎರಡಕ್ಕೂ ನಡುವೆ ಒಂದು ನಿವೇದಕ ತಂತಿ Communication Chord ಇರಬೇಕಲ್ಲವೆ? ಯಾವುದದು? ನಿವೇದಕವು ಇಕ್ಕಡೆಗಳಿಗೂ ಸೇರಿದ್ದಾಗಿ ಎರಡಕ್ಕೂ ಸಮಾನವಾಗಿ, ಎರಡನ್ನೂ ತನ್ನೊಳಗೆ ಸೇರಿಸಿಕೊಂಡದ್ದಾಗಿರಬೇಕು. ಶರೀರ, ಜೀವ–ಈ ಎರಡರ ನಡುವೆ ಅದು ಯಾವುದು? ಅದೇ ಪರಮಾತ್ಮ.

ಇನ್ನೊಂದು ದೃಷ್ಟಾಂತವನ್ನು ನೋಡೋಣ. ಈಗ ನಾನು ಮಾತನಾಡುತ್ತಿದ್ದೇನೆ; ತಾವೆಲ್ಲ ದಯಮಾಡಿ ಕೇಳುತ್ತಿದ್ದೀರಿ. ನಮ್ಮಿಬ್ಬರ ನಡುವೆ ನಿವೇದಕ ಯಾವುದು? ಧ್ವನಿ ಎಂದರೆ ಸಾಲದು. ನಾನು ಗ್ರೀಕ್ ಭಾಷೆಯಲ್ಲೋ ಲ್ಯಾಟಿನ್ ಭಾಷೆಯಲ್ಲೋ ಮಾತನಾಡಿದರೆ ನಿಮಗೆ ತಲಪುವುದು ಬರಿಯ ಸದ್ದು–ಅರ್ಥವಿಲ್ಲದ ಶಬ್ದ. ಆಗ ನನ್ನ ಬಾಯಿಂದ ಹೊರಟದ್ದು ನಿಮ್ಮ

ಕಿವಿಯನ್ನು ಮುಟ್ಟೀತೇ ಹೊರತು ನಿಮ್ಮ ಮನಸ್ಸನ್ನು ಮುಟ್ಟಲಾರದು. ನನ್ನ ಮನಸ್ಸಿಗೂ ನಿಮ್ಮ ಮನಸ್ಸುಗಳಿಗೂ ನಡುವೆ ಒಂದು ನಿವೇದಕವಿದ್ದಲ್ಲದೆ ನನ್ನ ಉದ್ದೇಶ ನೆರವೇರಲಾರದು. ಅಂಥಾ ನಿವೇದಕ ಕನ್ನಡ ಭಾಷೆ. ಕನ್ನಡ ನಮ್ಮಿಬ್ಬರಿಗೂ ಸಮಾನಸಾಧನ. ಆದದ್ದರಿಂದ ಅದು ಎರಡು ಪಕ್ಕದ ಮನಸ್ಸುಗಳಿಗೂ ಸಂಬಂಧವುಂಟುಮಾಡಬಲ್ಲದ್ದಾಗುತ್ತದೆ. ಸಮಾನಭಾಷೆಯೇ ನಮಗಿರುವ ಸಮಾನನಿವೇದಕ.

ಹಾಗೆ ಕ್ಷೇತ್ರಕ್ಕೂ ಕ್ಷೇತ್ರಜ್ಞನಿಗೂ ನಡುವೆ ಉಭಯಸಮಾನವಾದ ನಿವೇದಕ ಯಾವುದು? ಅದು ಆತ್ಮಚೈತನ್ಯ. ಜ್ಞಾನಸ್ವರೂಪಿಯೇ ಆದ ಆತ್ಮಚೈತನ್ಯ ಉಭಯತ್ರ ಸಮಾನವಾಗಿರುವುದರಿಂದ ಒಬ್ಬ ಕ್ಷೇತ್ರಜ್ಞನು ಸ್ವಕ್ಷೇತ್ರವನ್ನು ಇತರ ಕ್ಷೇತ್ರಕ್ಷೇತ್ರಜ್ಞರುಗಳನ್ನೂ ಅರಿಯಬಲ್ಲವನಾಗಿರುತ್ತಾನೆ. ಇದೇ ಏಳನೆಯ ಅಧ್ಯಾಯದಲ್ಲಿಯ

> ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥

ಎಂಬ ವಾಕ್ಯದ ತಾತ್ಪರ್ಯ. ನಾನಾ ಬಣ್ಣ ನಾನಾ ರೂಪಗಳ ಮಣಿಗಳನ್ನು ಒಂದು ಹಾರವಾಗಿ ಸೇರಿಸಿರುವುದು ಒಳಗಿರುವ ನೂಲು. ನೂಲನ್ನು ಕಿತ್ತರೆ ಮಣಿಗಳು ಬೇರೆಬೇರೆಯಾಗಿ ಸಂಬಂಧವಿಲ್ಲದೆ ಚಲ್ಲಾಪಿಲ್ಲಿಯಾಗಿ ಬಿದ್ದುಹೋಗುತ್ತದೆ. ಜಗತ್ತಿನ ನಾನಾ ಅಂಶಗಳೂ ಹಾಗೆಯೇ. ಅವನ್ನೆಲ್ಲ ಹಿಡಿದು ಒಂದಾಗಿ ಕಟ್ಟಿರುವ ಸೂತ್ರಶಕ್ತಿ ಪರಮಾತ್ಮ. ಆ ಆತ್ಮವೇ ಜ್ಞಾನಸಂಬಂಧವನ್ನು ಕಲ್ಪಿಸಿರುವ ಸರ್ವಸಾಮಾನ್ಯ ನಿವೇದಕ. ಆದದ್ದರಿಂದ ಅದನ್ನು ಶಾಸ್ತ್ರವು ಸೂತ್ರಾತ್ಮವೆಂದು ಕರೆಯುತ್ತದೆ.

ಹೀಗೆ ಇಲ್ಲಿ ಗಮನದಲ್ಲಿರಬೇಕಾದ ತತ್ತ್ವಗಳು ಮೂರು:

1. ಕ್ಷೇತ್ರ–ಎಂದರೆ ಜಗತ್ಪ್ರಕೃತಿ.
2. ಕ್ಷೇತ್ರಜ್ಞ–ಎಂದರೆ ಜೀವಾತ್ಮ.
3. ಸಕಲ ಕ್ಷೇತ್ರ ಕ್ಷೇತ್ರಜ್ಞರೊಳಗೂ ಸಮಾನವ್ಯಾಪಿಯಾಗಿರುವ ಸೂತ್ರಾತ್ಮನೆಂಬ ಪರಮಾತ್ಮ.

ಈ ಮೂರರ ವರ್ಣನೆ ವಿವರಣೆಗಳನ್ನೂ ಭಗವಂತ ಕೊಟ್ಟಿದ್ದಾನೆ. ಮೊದಲು ಪ್ರಕೃತಿ.

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ ॥

ಇವು ಒಟ್ಟು ಇಪ್ಪತ್ತುನಾಲ್ಕು ಪದಾರ್ಥಗಳು: [ಪಂಚಮಹಾಭೂತಗಳು]

1. ಭೂಮಿ
2. ನೀರು
3. ಅಗ್ನಿ
4. ವಾಯು
5. ಆಕಾಶ
6. ಅಹಂಕಾರ ("ನಾನು" "ನಾನು" ಎನ್ನುವ ತತ್ತ್ವ)
7. ಬುದ್ಧಿ
8. ಅವ್ಯಕ್ತ (ರೂಪಗೊಳ್ಳದೆ ಇರುವ ಪ್ರಕೃತಿ ದ್ರವ್ಯ–ಅದು ಅಮಾನತ್ತಿನಲ್ಲಿರುವ Reserve ಗೂಢವಾದ, ಅನೂಹ್ಯವಾದ ಸೃಷ್ಟಿಶಕ್ತಿ); [ಪಂಚಜ್ಞಾನೇಂದ್ರಿಯಗಳು]
9. ಕಣ್ಣು
10. ಕಿವಿ
11. ಮೂಗು
12. ನಾಲಗೆ
13. ಚರ್ಮ; [ಪಂಚಕರ್ಮೇಂದ್ರಿಯಗಳು]
14. ವಾಕ್ಕು
15. ಕೈ
16. ಕಾಲು
17. ಪಾಯು
18. ಜನಕಾಂಗ; [ಅಧೀಂದ್ರಿಯ]
19. ಮನಸ್ಸು [ವಿಷಯಪಂಚಕ]
20. ಶಬ್ದ
21. ಸ್ಪರ್ಶ

22. ರೂಪ
23. ರಸ
24. ಗಂಧ.

ಇಲ್ಲಿ ಭಗವಂತನು ಕ್ಷೇತ್ರವೆಂಬ ಪ್ರಕೃತಿಯ ಘಟಕಸಾಮಗ್ರಿಗಳನ್ನು ನಿರ್ದೇಶಿಸಿದ್ದಾನೆ. ಅವುಗಳಲ್ಲಿ "ಅವ್ಯಕ್ತ" ಎಂಬುದೊಂದು. ಮಿಕ್ಕ ಪ್ರಕೃತ್ಯಂಶಗಳಲ್ಲಿ ಕೆಲವು–ಪಂಚಭೂತಾದಿಗಳು–ಎಲ್ಲರಿಗೂ ಪ್ರತ್ಯಕ್ಷವಾದವು; ಕೆಲವು–ಇಚ್ಛಾದ್ವೇಷಾದಿಗಳು–ಅನುಭವ ಮಾತ್ರ ಗೋಚರವಾದವು. "ಅವ್ಯಕ್ತ" ಅಂಥಾದ್ದಲ್ಲ, ಏನದು?

ವ್ಯಕ್ತವಾಗದೆ ಇರುವುದು ಅವ್ಯಕ್ತ. ಸ್ಪಷ್ಟಪಡದ ವಾಸ್ತವಿಕಾಂಶ ಅವ್ಯಕ್ತ. ಯಾವುದು ತಾನು ಇದ್ದುಕೊಂಡು ಕಾಣಿಸಿಕೊಳ್ಳುತ್ತಿಲ್ಲವೋ, ಯಾವುದು ಕಾಣಬಾರದೆ ಹೋದರೂ ಇದೆಯೋ, ಆ ಗೂಢಶಕ್ತಿಯೇ ಅವ್ಯಕ್ತ. ಅದನ್ನು ಬ್ರಹ್ಮಶಕ್ತಿಯ ಗುಪ್ತ ನಿಧಿ, ರಿಸರ್ವ್ (ಕಾಯ್ದಿಟ್ಟ ನಿಧಿ) ಎಂದು ಕರೆಯಬಹುದು. ಒಂದೆರಡು ದೃಷ್ಟಾಂತಗಳನ್ನು ನೋಡೋಣ. ನಾವೆಲ್ಲ ದಿನದಿನವೂ ನೀರನ್ನು ನೋಡುತ್ತಲೇ ಉಪಯೋಗಿಸುತ್ತಲೇ ಇದ್ದೇವೆ. ಕೆರೆ ಬಾವಿಗಳನ್ನು ಕಂಡಿದ್ದೇವೆ. ಆದರೆ ಜೋಗದ ಜಲಪಾತದ ಎದುರಿಗೋ ಸಮುದ್ರದ ತೀರದಲ್ಲಿಯೋ ನಿಂತು ನೋಡುವಾಗ ಕೆರೆ ಬಾವಿಗಳಲ್ಲಿ ಕಾಣದ ಒಂದು ಅದ್ಭುತವನ್ನು ಅನುಭವಿಸುತ್ತೇವೆ. ಇಂಥಾ ಅಂತರಂಗಪರಿಣಾಮವನ್ನುಂಟು ಮಾಡುವ ಶಕ್ತಿ ಕೆರೆಬಾವಿಗಳ ನೀರಿನಲ್ಲಿ ಅವ್ಯಕ್ತವಾಗಿದ್ದದ್ದು ನದೀಸಮುದ್ರಗಳಲ್ಲಿ ರಾಶೀಕೃತವಾಗಿ ಪ್ರಚಲಿತವಾದಾಗ ನಮ್ಮ ಮನಸ್ಸಿನೊಳಗಡೆ ವ್ಯಕ್ತಪಟ್ಟಿತು.

ನೀರೆಂಬ ವಸ್ತು ರಸಾಯನಶಾಸ್ತ್ರಜ್ಞನ ಪಾಲಿಗೆ H_2O (ಜಲಜನಕ ೨ + ಆಮ್ಲಜನಕ ೧) ಬಾಯಾರಿದವನ ಪಾಲಿಗೆ ಅದು ಅಮೃತ. ಆ ಆಪ್ಯಾಯನಶಕ್ತಿ ಜಲಜನಕ ಆಮ್ಲಜನಕಗಳೆಂಬ ಅನಿಲಗಳಲ್ಲಿ ಅವ್ಯಕ್ತವಾಗಿದ್ದು ಅವೆರಡಕ್ಕೂ ಕುಡಿದವನ ನಾಲಗೆಯ ಸಂಯೋಗವಾದಾಗ ಅವನ ಮನಸ್ಸಿಗೆ ವ್ಯಕ್ತವಾಯಿತು.

ಸೌಂದರ್ಯವೆಂಬುದೂ ಅವ್ಯಕ್ತದ ವ್ಯಕ್ತದೆಶೆ. ಕಣ್ಣು ಕಿವಿ ಬಾಯಿ ಮೂಗು ಕೆನ್ನೆ ಕೂದಲು–ಇವು ಎಲ್ಲ ಮುಖಗಳಿಗೂ ಉಂಟಾದ ಸಹಜಸಂಪತ್ತು. ಶಸ್ತ್ರವೈದ್ಯನ ದೃಷ್ಟಿಗೆ ಎಲ್ಲ ಮೈಗಳೂ ಏಕಪ್ರಕಾರವಾಗಿ ಚರ್ಮ ರಕ್ತ ನಾಳ ಮೂಳೆ–ಇಂಥವು. ರಾಸಾಯನಿಕನ ಕಣ್ಣಿಗೆ ಒಬ್ಬ

ಮನುಷ್ಯನ ಅವಯವದ ಮೂಲಸಾಮಗ್ರಿಗೂ ಇನ್ನೊಬ್ಬನದಕ್ಕೂ ವ್ಯತ್ಯಾಸವೇನೂ ತೋರುವುದಿಲ್ಲ. ರೂಪರಸಿಕನು ಅದನ್ನೊಪ್ಪಿಯಾನೆ? ಶಸ್ತ್ರವೈದ್ಯ ರಾಸಾಯನಿಕರ ವಿಶ್ಲೇಷಣಕ್ರಿಯೆಗೆ ಸಿಕ್ಕದಿರುವ ಅವಯವಾತೀತವಾದ ಗುಣವೊಂದು ಅಲ್ಲಿ ಸೇರಿಕೊಂಡಿದ್ದರೆ ಅದು ಸುಂದರ, ಇಲ್ಲದಿದ್ದರೆ ಕುರೂಪ. ಆ ಗುಣ ಒಂದು ಕಾಂತಿ, ಒಂದು ಚಲನೆ, ಒಂದು ಭಾವಸೂಚನೆ. ಮುನಿದಿದ್ದ ಮುಖ ಯಾರನ್ನೋ ಕಂಡಾಗ ಪ್ರಸನ್ನವಾಗುತ್ತದೆ. ಸಾಮಾನ್ಯವೆನಿಸಿದ್ದ ಮುಖವನ್ನು ಯಾರೋ ನೋಡಿದಾಗ ಅಲ್ಲಿ ಲಾವಣ್ಯ ಸುಳಿದಾಡುತ್ತದೆ. ಅದು ನೋಡುವವನ ಪುಣ್ಯ. ಅವ್ಯಕ್ತವಾಗಿದ್ದ ಸೊಬಗು ಯಾವುದೋ ಒಂದು ಅಪೂರ್ವಯೋಗದಿಂದ ನೋಡುವವನ ಅಂತರಂಗಕ್ಕೆ ವ್ಯಕ್ತಪಡುತ್ತದೆ.

ಇಂಥಾದ್ದು ಅವ್ಯಕ್ತ. ಅದು ರಹಸ್ಯವಾಗಿದ್ದುಕೊಂಡು ಜಗತ್ತಿನಲ್ಲಿ ಸಂತತವಾಗಿ ಕಾಲಾನುಕ್ರಮದಲ್ಲಿ ಪರಿಣಾಮಗೊಳ್ಳುತ್ತಿರುವ ಭಗವಚ್ಛಕ್ತಿ. ಅದು ಪ್ರಕೃತಿಯ ಅಂತಶ್ಚಲನೆ.

ಈ ಅವ್ಯಕ್ತಕೋಟಿಯಲ್ಲಿ ಮನುಷ್ಯನ ಬುದ್ಧಿವಿಕಾಸಫಲಿತಗಳನ್ನು ಸೇರಿಸಬಹುದು. ಜಲಬಾಷ್ಪಶಕ್ತಿ, ಭೂತೈಲಶಕ್ತಿ, ವಿದ್ಯುಚ್ಛಕ್ತಿ—ಈ ಯಂತ್ರಚಾಲಕ ಶಕ್ತಿಗಳು ಪೂರ್ವ ಕಾಲದಲ್ಲಿ—ನೂರಿನ್ನೂರು ವರ್ಷಗಳ ಹಿಂದೆ ಅವ್ಯಕ್ತವಾಗಿದ್ದವು. ಮನುಷ್ಯಬುದ್ಧಿಯು ಕಾಲಪ್ರಸರಣಪರಿಣಾಮವಾಗಿ ಪರಿಪಾಕಹೊಂದಿ ವಿಜ್ಞಾನವಿದ್ಯೆ ಬೆಳೆದಂತೆ ಅದು ಅವ್ಯಕ್ತವಾಗಿದ್ದ ಶಕ್ತಿಗಳನ್ನು ಕಂಡುಕೊಂಡು ವ್ಯಕ್ತಪಡಿಸಿತು. ರೈಲು, ಜಹಜು, ಮೋಟಾರು, ಏರೋಪ್ಲೇನ್, ಸ್ಪುಟ್ನಿಕ್—ಇವೆಲ್ಲ ಅವ್ಯಕ್ತವಾಗಿದ್ದದ್ದು ವ್ಯಕ್ತವಾದದ್ದಕ್ಕೆ ನಿದರ್ಶನಗಳು.

ಹುಳಿಮಾವಿನ ಕಾಯಲ್ಲಿ ಸಿಹಿ ಅವ್ಯಕ್ತವಾಗಿರುತ್ತದೆ. ಕಾಲಗತಿಯಿಂದ ಆ ಸಿಹಿ ಕ್ರಮಕ್ರಮವಾಗಿ ವ್ಯಕ್ತವಾಗುತ್ತದೆ. ಹೊಸ ನೆಲ್ಲಿನಲ್ಲಿ ರುಚಿ ಪಚ್ಯತೆಗಳು ಅವ್ಯಕ್ತವಾಗಿರುತ್ತವೆ. ಆರೆಂಟು ತಿಂಗಳು ಕಳೆದ ಬಳಿಕ ಅದೇ ನೆಲ್ಲಿನ ಅಕ್ಕಿ ರುಚಿಕರವೂ ಸುಲಭಪಕ್ವವೂ ಆಗುತ್ತದೆ.

ಹೀಗೆ ಮೊದಮೊದಲು ಗುಪ್ತವಾಗಿದ್ದು ಕಾಲಕ್ರಮ ಪರಿಣಾಮದಿಂದ ವ್ಯಕ್ತಪಡುವ ಪ್ರಕೃತಿಶಕ್ತಿಯೇ ಅವ್ಯಕ್ತ. ಅದನ್ನು ಮೂಲಪ್ರಕೃತಿ—ಪ್ರಕೃತಿಯ ಪಿಂಡಾವಸ್ಥೆ—ಎಂದು ಭಾವಿಸಬಹುದು.

> ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ।

ಅವ್ಯಕ್ತವೆಂದರೆ ಪ್ರಕೃತಿಯ ಅಪಾರವಾದ ಗುಪ್ತಶಕ್ತಿ. ಅದರ ಪ್ರಭಾವದಿಂದಲೇ ಪ್ರಪಂಚದ ನಿತ್ಯನವೀನತೆ. ಅವ್ಯಕ್ತವನ್ನು ಪ್ರಕೃತಿಯ ಜಗನ್ನವೀಕರಣಶಕ್ತಿ ಎಂದು ವರ್ಣಿಸಬಹುದು.

ಮೇಲೆ ಹೇಳಿದ ೨೪ ತತ್ತ್ವಗಳ ಜೊತೆಗೆ ಸೇರಬೇಕಾದ ಅಂತರಂಗಕಾರ್ಯಗಳು ಮತ್ತು ಅನುಭವಗಳು ಬೇರೆ ಇವೆ:

ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ॥

ಸಂಘಾತವೆಂದರೆ ಒಟ್ಟು ಕೂಟ, ಸಂಘ, ದೇಹದೊಟ್ಟಿನ ನಾನಾ ಚೇಷ್ಟಿತಗಳು. ಚೇತನಾ ಎಂದರೆ ಅಂಗಾಂಗಗಳಲ್ಲಿ ಹರಿಯುವ ಬಲಪ್ರವಾಹ. ಧೃತಿ ಎಂದರೆ ಉದ್ದೇಶ ಸ್ಥೈರ್ಯ.

ಏತತ್ಕ್ಷೇತ್ರಂ ಸಮಾಸೇನ ಸವಿಕಾರಮ್ (ಉದಾಹೃತಮ್) ॥

ಹೀಗೆ ಶರೀರರೂಪವಾದ ಸ್ವರೂಪಲಕ್ಷಣಗಳನ್ನು ವಿವರಿಸಿದ್ದಾದ ಮೇಲೆ ಕ್ಷೇತ್ರಜ್ಞನಾದ ಜೀವಾತ್ಮನಿಗೆ ಅವನ ಜ್ಞಾನಶಕ್ತಿಯನ್ನು ಕೊಡುವ ಪರಮಾತ್ಮನ ಸ್ವರೂಪಲಕ್ಷಣಗಳನ್ನು ಹೇಳುವುದಕ್ಕೆ ಮುಂಚೆ–ಆ ಆತ್ಮತತ್ತ್ವವನ್ನು ಕಂಡುಕೊಳ್ಳಬೇಕೆಂಬವನಿಗೆ ಇರಬೇಕಾದ ಸಿದ್ಧತೆಗಳನ್ನು ತಿಳಿಸುತ್ತಾನೆ ಭಗವಂತ. ಏಕೆಂದರೆ, ಈ ಮನಶ್ಶಿಕ್ಷಣವೂ ಈ ಅಂತರಂಗ ಶುದ್ಧಿಯೂ ಇಲ್ಲದವನಿಗೆ ಆತ್ಮಜ್ಞಾನವೆಂಬುದೂ ಬ್ರಹ್ಮಜ್ಞಾನವೆಂಬುದೂ ಕೇವಲ (Phrases) ಶಬ್ದಖಂಡಗಳಾಗಿ ನಿಲ್ಲುವುವೇ ಹೊರತು ಎಂದಿಗೂ ಅನುಭೂತಸತ್ಯಗಳಾಗಲಾರವು.

ಸಿದ್ಧತೆಗಳಲ್ಲಿ ನಕಾರಪೂರ್ವಕವಾದವು (ನೆಗ್ಯಟಿವ್) ಕೆಲವು. ಸಕಾರಪೂರ್ವಕವಾದವು (ಪಾಸಿಟಿವ್) ಕೆಲವು:

ಅಮಾನಿತ್ವಮದಂಭಿತ್ವಮ್ ಅಹಿಂಸಾ ಕ್ಷಾನ್ತಿರಾರ್ಜವಮ್ ।
ಆಚಾರ್ಯೋಽಪಾಸನಂ ಶೌಚಮ್ ಸ್ಥೈರ್ಯಮಾತ್ಮವಿನಿಗ್ರಹಃ ॥

ನಕಾರಪೂರ್ವಕವೆಂದರೆ “ಬೇಡ”, “ಇಲ್ಲ”, “ಕೂಡದು” –ಎಂಬ ರೂಪದ್ದು.

ಅಮಾನಿತ್ವ: ತಾನು ಉತ್ತಮನು ಎಂದುಕೊಳ್ಳುವುದು ಸ್ವಾಭಿಮಾನ, ಅದನ್ನು ಬಿಟ್ಟಿರುವುದು ಅಮಾನಿತ್ವ. ಅದೇ ವಿನೀತತೆ, ನಮ್ರತೆ, ಅದಂಭಿತ್ವ: ತನ್ನಲ್ಲಿರುವ ಗುಣವಸ್ತುಗಳನ್ನು ಇತರರಿಗೆ

ತೋರಿಸಿಕೊಳ್ಳಬೇಕೆಂಬ ಆಶೆ ದಂಭ. ಇದನ್ನು ಬಿಟ್ಟಿರಬೇಕು. ಅಹಿಂಸೆ, ಕ್ಷಮಾಗುಣ, ಆರ್ಜವ–ಎಂದರೆ ನಡೆನುಡಿಗಳಲ್ಲಿ ಕುಟಿಲವಿಲ್ಲದೆ ಸರಳವಾಗಿ, ಋಜುವಾಗಿ ಇರುವುದು, ಗುರುಸೇವೆ, ಕಾಯಶುದ್ಧಿ ಮನಶ್ಶುದ್ಧಿಗಳು, ಸ್ಥಿರಚಿತ್ತತೆ, ಮೈಮರೆಯದೆ ದುಡುಕದೆ ಇರುವುದು, ವಿಷಯಲಂಪಟನಾಗದೆ ಇರುವುದು, “ನಾನು” “ನಾನು” ಎಂದುಕೊಳ್ಳದಿರುವುದು, ಮಡದಿ ಮಕ್ಕಳು ಮನೆ ಮಳಿಗೆಗಳ ವಿಷಯದಲ್ಲಿ ವ್ಯಾಮೋಹವಿಲ್ಲದಿರುವುದು, ಇಷ್ಟಾನಿಷ್ಟಗಳಿಂದ ವಿಕಾರಪಡದಿರುವುದು–ಈ ತೆರನಾದ ಸಂಯಮಗಳು ನಕಾರಪೂರ್ವಕ ಸಾಧನೆಗಳು.

ಸಕಾರಪೂರ್ವಕ ಸಾಧನೆಗಳು “ಬೇಕು”, “ಇರಲಿ”, “ತಕ್ಕದ್ದು” –ಎಂಬ ರೂಪದ ನೀತಿಗುಣಗಳು. ಅವು ಹೀಗೆ:

> ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।

ಭಗವಂತನಲ್ಲಿ ಅನನ್ಯವಾದ ಭಕ್ತಿ, ಸಂತೆ ಗೊಂದಲದಿಂದ ದೂರವಿರುವುದು, ಏಕಾಂತ ಮೌನ.

> ಅಧ್ಯಾತ್ಮಜ್ಞಾನನಿತ್ಯತ್ವಮ್ ತತ್ತ್ವಜ್ಞಾನಾರ್ಥದರ್ಶನಮ್ ।
> ಏತಜ್ಜ್ಞಾನಮಿತಿ ಪ್ರೋಕ್ತಮ್ ಅಜ್ಞಾನಂಯದತೋಽನ್ಯಥಾ ॥

ಇಲ್ಲಿ “ಜ್ಞಾನಮ್” ಎಂದರೆ ಜ್ಞಾನಸಾಧನ, ಜ್ಞಾನಸಂಪಾದನೋಪಾಯ. “ತತ್ತ್ವಜ್ಞಾನಾರ್ಥದರ್ಶನಮ್” ಎಂದರೆ ಏನು? “ಜ್ಞಾನನಿತ್ಯತ್ವಮ್ (ನಿಷ್ಠತ್ವಮ್)” ಎಂದರೆ ಪಾಂಡಿತ್ಯನಿಷ್ಠೆ, ವಿದ್ಯಾಪ್ರಾವೀಣ್ಯ ಎಂದು ಬೇಕಾದರೆ ಅರ್ಥವಾಗಲಿ. “ಅರ್ಥ ದರ್ಶನಮ್” ಎಂಬುದೇನು? ಅದಕ್ಕೆ “ಅರ್ಥಪ್ರತ್ಯಕ್ಷೀಕರಣ” ಎಂದು ಭಾವ: ಅರ್ಥದ ಸಾಕ್ಷಾತ್ತಾದ ಅನುಭವಾಭ್ಯಾಸ. ಬುದ್ಧಿವೃತ್ತಿಯಿಂದ ತಿಳಿಯಬಂದ ತತ್ತ್ವವನ್ನು ದಿನದಿನದ ನಡವಳಿಕೆಯಲ್ಲಿ ಅನುಸರಿಸಿ ಅಭ್ಯಾಸ ಮಾಡಿಕೊಳ್ಳುವುದು ಅನುಸಂಧಾನ. ಶ್ಲೋಕಗಳನ್ನು ಹೇಳುವುದೂ ಶ್ಲೋಕಾರ್ಥ ಹೇಳುವುದೂ ಅನುಭವವಾಗದು. ತತ್ತ್ವಜ್ಞಾನವು ಬಹಿರ್ಮುಖವಾಗಿದ್ದರೆ ಸಾಲದು, ಅಂತರ್ಮುಖವಾಗಬೇಕು.

ತತ್ತ್ವವನ್ನು ರುಜುವಾತು ಮಾಡಿಕೊಡಿ, ದೇವರನ್ನು “ಪ್ರೂವ್” (Prove) ಮಾಡಿ ತೋರಿಸಿ ಎಂದು ಯಾರಾದರೂ ಕೇಳಿದರೆ ನಾವು ಮೇಲಿನ ಗುಣಸಿದ್ಧತೆಗಳ ಪಟ್ಟಿಯನ್ನು ತೋರಿಸಿ–

ಇದರಲ್ಲಿ ನೀವು ಯಾವ ಯಾವುದರಲ್ಲಿ ತೇರ್ಗಡೆ ಪಡೆದಿದ್ದೀರಿ? ಎಂದು ಕೇಳಬೇಕಾಗುತ್ತದೆ. ಆ ಪರೀಕ್ಷೆಯಲ್ಲಿ ತೇರ್ಗಡೆ ಆಗದವರು ಮೊದಲು ತಮ್ಮನ್ನು ತಾವು ತಯಾರು ಮಾಡಿಕೊಳ್ಳಲಿ. ಬೇನೆಯಿಂದ ಕಣ್ಣು ಕಟ್ಟಿಕೊಂಡಿರುವವರಿಗೆ ಕನ್ನಡಕ ಏನು ಮಾಡೀತು?

ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

ಅಮಾನಿತ್ವವೂ ಅದಂಭಿತ್ವವೂ ಆರ್ಜವವೂ ಸುಲಭಗಳಲ್ಲ. ನಾವು ಗತಿ ತಪ್ಪುವುದು ಸಣ್ಣಸಣ್ಣವೆಂದು ತೋರುವ ದುರಭ್ಯಾಸಗಳಿಂದ. ಮಹಾಪಾತಕ ಮಾಡಿದವನಿಗೆ ಸದ್ಗತಿ ಬೇಗ ಬಂದೀತು. ರಾವಣ ಹಿರಣ್ಯಕಶಿಪುಗಳಿಗೆ ಬೇಗ ಬಿಡುಗಡೆಯಾಯಿತು. ನಾವು ಮಹಾಪಾಪಕ್ಕೆ ಹೆದರುತ್ತೇವೆ. ಸಣ್ಣ ಸಾಧನೆಯಲ್ಲಿ ಉಪೇಕ್ಷೆ ಮಾಡುತ್ತೇವೆ. ಸಣ್ಣ ಸುಳ್ಳುಗಳನ್ನು ಸುಲಭವಾಗಿ ಹೇಳುತ್ತೇವೆ. ಅದರಿಂದ ಯಾರಿಗೂ ನಷ್ಟವಿಲ್ಲವೆಂದುಕೊಳ್ಳುತ್ತೇವೆ. ಸಣ್ಣ ಕುಟಿಲಗಳೂ ವಕ್ರಗಳೂ ನಮ್ಮ ಜೀವವನ್ನು ಸೊಟ್ಟು ಮಾಡುತ್ತವೆ; ನಲುಗಿಸುತ್ತವೆ. ಜೀವ ಒಂದು ತಂತಿಯ ಹಾಗೆ: ಅದನ್ನು ಸುಲಭವಾಗಿ ಬಾಗಿಸಬಹುದು; ಆಮೇಲೆ ಅದನ್ನು ನೇರ್ಪಡಿಸುವುದು ಕಷ್ಟ. ಜೀವ ಒಂದು ಕಾಗದದ ಹಾಗೆ : ಅದನ್ನು ಮಡಿಸುವುದು ಸುಲಭ; ಬಳಿಕ ಅದರ ಸುಕ್ಕುಸುಕ್ಕುಗಳನ್ನು ಕಳೆದು ಸರಿಪಡಿಸುವುದು ಕಷ್ಟ.ಪರಮಾತ್ಮದರ್ಶನ ಬೇಕೆನ್ನುವವರು ಮೊದಲು ಜೀವದ ಸೊಟ್ಟು ಸುಕ್ಕುಗಳನ್ನು ಕಳೆದುಕೊಳ್ಳಬೇಕು. ಮೇಲಿನ ಪಟ್ಟಿಯಲ್ಲಿರುವ ನಕಾರಪೂರ್ವಕವಾದ ಸಿದ್ಧತೆಗಳೆಲ್ಲ ಬಹುಕಾಲದ ಮತ್ತು ಬಹು ಎಚ್ಚರಿಕೆಯ ಅಭ್ಯಾಸವನ್ನಪೇಕ್ಷಿಸುತ್ತವೆ. ತತ್ತ್ವವನ್ನು ಕಾಣಬೇಕಾದರೆ ಜೀವಕ್ಕಾಗುತ್ತಿರುವ ದುರಭ್ಯಾಸಗಳನ್ನು ಮೊದಲು ಬಿಡಿಸಬೇಕು. ಆತ್ಮಪರೀಕ್ಷೆ–ಆತ್ಮಶೋಧನೆ–ತತ್ತ್ವದರ್ಶನಕ್ಕೆ ಮೊದಲನೆಯ ಮೆಟ್ಟಲು.

ಜ್ಞಾನಸಾಧನಗಳನ್ನು ತಿಳಿಸಿದ್ದಾದ ಮೇಲೆ ಜ್ಞೇಯದ ನಿರೂಪಣೆ. ಜ್ಞೇಯವೆಂದರೆ ಜ್ಞಾನವಿಷಯ–ಯಾವುದನ್ನು ನಾವು ತಿಳಿದುಕೊಳ್ಳಬೇಕೋ ಅದು. ಅದು ಯಾವುದು? ಸರ್ವಜ್ಞಾನಮೂಲವಾದ ಪರಮಾತ್ಮವಸ್ತು. ಅದನ್ನು ಸ್ವಾಮಿ ಸೂಚಿಸಿದ್ದಾನೆ. ಅದು ಸೂಚನೆ ಮಾತ್ರ, ವಿವರಣೆಯಲ್ಲ. ವಿವರಣೆ ವರ್ಣನೆಗಳು ಅಸಾಧ್ಯ- ಅಷ್ಟು ಸೂಕ್ಷ್ಮವಾದದ್ದು ಆ ವಸ್ತು:

ಸೂಕ್ಷ್ಮತ್ವಾತ್ ತದವಿಜ್ಞೇಯಮ್ ।

ಕರ್ಮಯೋಗಾಧ್ಯಾಯದಲ್ಲಿ ನಾವು ನೋಡಿದೆವು:

> ಪ್ರಕೃತೇಃ ಕ್ರಿಯಮಾಣಾನಿ ಕರ್ಮಾಣಿ ॥
> ಗುಣಾ ಗುಣೇಷು ವರ್ತನ್ತೇ ॥

ಒಂದು ಕಡೆ ಬಹಿಷ್ಪ್ರಕೃತಿ ಗುಣಗಳು, ಇನ್ನೊಂದು ಕಡೆ ಜೀವದ ಅಂತಃಪ್ರವೃತ್ತಿ ಗುಣಗಳಾದ ಪ್ರಾಕ್ಕರ್ಮವಾಸನಾದಿಗಳು. ಈ ಎರಡು ಗುಣಸಮುದಾಯಗಳ ನಡುವಣ ಸಂಸರ್ಗ ಸಂಘರ್ಷಣೆಗಳೇ ಜಗಜ್ಜೀವನ. ಆತ್ಮ ಈ ಎರಡರಲ್ಲಾವ ಪಕ್ಕಕ್ಕೂ ಸೇರದೆ ತಟಸ್ಥನಾಗಿರುವ ಸಾಕ್ಷಿ.

> ಯಥಾ ಸರ್ವಗತಂ ಸೌಕ್ಷ್ಯಾತ್ ಆಕಾಶಂ ನೋಪಲಿಪ್ಯತೇ ।
> ಸರ್ವತ್ರಾವಸ್ಥಿತೋ ದೇಹೇ ತಥಾಽಽತ್ಮಾ ನೋಪಲಿಪ್ಯತೇ ॥

"ಆಕಾಶವೆಂಬ ಮಹಾಭೂತದ್ರವ್ಯವು ಅತಿ ಸೂಕ್ಷ್ಮವಾಗಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತದೆಯಾದರೂ ಯಾವುದರಿಂದಲೂ ಅದು ಸೋಕಲ್ಪಡದು. ಹಾಗೆಯೇ ಆತ್ಮವು ಎಲ್ಲ ದೇಹಗಳಲ್ಲಿಯೂ ನೆಲಸಿದ್ದರೂ ಅದು ಯಾವ ದೇಹಾಂಶದಿಂದಲೂ ದೇಹ ಚೇಷ್ಟೆಯಿಂದಲೂ ಸೋಕಿಸಿಕೊಳ್ಳದು".

> ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
> ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥

"ಒಬ್ಬ ಸೂರ್ಯನು ಈ ಎಲ್ಲ ಲೋಕವನ್ನೂ ಬೆಳಗಿಸುತ್ತಾನೆ. (ಅವನು ಅದನ್ನು ಮುಟ್ಟಿದರೂ ಅದು ಅವನನ್ನು ಮುಟ್ಟಲಾರದು); ಹಾಗೆಯೇ ಕ್ಷೇತ್ರಿಯು (ಆತ್ಮವು) ಎಲ್ಲವನ್ನೂ ತನ್ನ ಚೈತನ್ಯದಿಂದ ಪ್ರಕಾಶಗೊಳಿಸುತ್ತದೆ: ಆದಾಗ್ಗೂ ತಾನು ಅದರಿಂದ ಸೋಕಲ್ಪಡುವುದಿಲ್ಲ".

ಈಗ ನಾವು ಈವರೆಗೂ ನೋಡಿದ ಜಿಜ್ಞಾಸಾ ಘಟ್ಟಗಳನ್ನು ಸಂಗ್ರಹವಾಗಿ ಜ್ಞಾಪಕಕ್ಕೆ ತಂದುಕೊಳ್ಳೋಣ. ಅವು ನಾಲ್ಕು:

1. **ಪ್ರಕೃತಿ:** ಪಾಂಚಭೌತಿಕವಾದ ಜಗತ್ಸಾಮಗ್ರಿ, ಜಡವಾದದ್ದು; ಬೇರೊಂದಕ್ಕೆ ಆಶ್ರಯಸ್ಥಾನವಾದದ್ದು; ಶರೀರ ಮತ್ತು ತದ್ಗುಣಸಮೂಹ. ಸ್ವತಃ ಅಚೇತನ.

2. **ಜೀವ:** ಜಡಜಗತ್ತಿನಲ್ಲಿ ಮನೆಮಾಡಿಕೊಂಡು ತನ್ನ ಕರ್ಮದಂತೆ ಫಲವುಣ್ಣುತ್ತ ತ್ರಿಗುಣಪ್ರೇರಿತವಾಗಿ ಬಾಳು ನಡೆಸಿಕೊಳ್ಳುತ್ತಿರುವ ಸಚೇತನವಸ್ತು.
3. **ಈಶ್ವರ:** ಎಲ್ಲ ಜಡಚೇತನಗಳಿಗೂ ಒಳಗಣ ಅಂತರ್ಯಾಮಿಯಾಗಿಯೂ ಹೊರಗಣ ವಿಧಾಯಕ ಪ್ರಭುವಾಗಿಯೂ ಇದ್ದುಕೊಂಡು ಜಗಜ್ಜೀವಗಳನ್ನು ಆಳುತ್ತಿರುವ ಸೂತ್ರಾತ್ಮ ಅಥವಾ ಪರಮಾತ್ಮ. ಇದನ್ನು ಕಾರ್ಯಬ್ರಹ್ಮವೆಂದೂ ಶಬಲಬ್ರಹ್ಮವೆಂದೂ ಕರೆಯುತ್ತಾರೆ.
4. **ಪರಬ್ರಹ್ಮ:** ಸಕಲ ಜಗಲ್ಲೀಲೆಯೂ ಯಾವ ಮಹಾಚೈತನ್ಯದ ಅಂಶಮಾತ್ರದ ಮಹಿಮಪ್ರಕಟನೆಯೋ, –ಯಾವ ಅಪಾರ ಸೂರ್ಯಪ್ರಭೆಯ ಒಂದು ಕಿರಣದ ವಿವರ್ತವೇ ಸಮಸ್ತಜಗಜ್ಜೀವನವೋ–ಆ ಶಾಶ್ವತವು ಮೂಲಚೈತನ್ಯ. ಇದನ್ನು ಕಾರಣಬ್ರಹ್ಮವೆಂದೂ ಶುದ್ಧಬ್ರಹ್ಮವೆಂದೂ ಕರೆಯುತ್ತಾರೆ.

ಹೀಗೆ ಪರತತ್ತ್ವಕ್ಕೆ ನಾಲ್ಕು ಪಕ್ಕಗಳು. ಈ ನಾಲ್ಕೂ ಅನಾದಿಗಳು. ಅವುಗಳಲ್ಲಿ ಪೂರ್ವಪೂರ್ವಗಳಾದವು ಉತ್ತರೋತ್ತರ ಘಟ್ಟಗಳ ದೃಷ್ಟಿಯಿಂದ ನಿಸ್ಸಾರವೆನಿಸುತ್ತವೆ. ಮೊದಲ ಮೂರರಿಂದ ಬ್ರಹ್ಮಭಿನ್ನವಾದ ಸಂಸಾರವುಂಟಾಗುತ್ತದೆ. ಜೀವಕ್ಕೆ ಬ್ರಹ್ಮ ಸಂದರ್ಶನವಾದಾಗ ಆ ಸಂಸಾರವು ಅನನುಭೂತವಾಗುತ್ತದೆ. ಬ್ರಹ್ಮಜ್ಞನಿಗೆ ಸಂಸಾರದ ಕಷ್ಟಭಾರವು ಹೋಗಿ ಅದು ಲೀಲಾವಿಲಾಸದಂತಾಗುತ್ತದೆ. ಅರ್ಥಾತ್, ಮೇಲಣ ನಾಲ್ಕೂ ಅನಾದಿಗಳಾದರೂ ಅವುಗಳಲ್ಲಿಯ ಮೂರರ ಸಂಸಾರಸಂಬದ್ಧತ್ವವು ಅನಂತವಲ್ಲ, ಸಾಂತ. ನಾಲ್ಕನೆಯದರಿಂದ ಮೂರರ ಬಲವು ಕೊನೆಗಾಣುತ್ತದೆ.

ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥

“ಯಾರು ಪುರುಷ (ಜೀವ) ಸ್ವರೂಪವನ್ನೂ ಗುಣಮಯ ಪ್ರಕೃತಿಯ ಸ್ವರೂಪವನ್ನೂ ಮೇಲೆ ಹೇಳಿದಂತೆ ಯಥಾವತ್ತಾಗಿ ತಿಳಿದುಕೊಂಡಿದ್ದಾನೋ ಅವನು ಹೇಗಿದ್ದಾಗ್ಗೂ ಪುನರ್ಜನ್ಮವಿಲ್ಲದವನು; ಎಂದರೆ ಅವನಿಗೆ ಸ್ವಾರ್ಥವಿರದು. ಅವನು ನಿರಹಂಕಾರಿಯಾದದ್ದರಿಂದ ಮುಕ್ತನು”.

ಧ್ಯಾನೇನಾಽಽತ್ಮನಿ ಪಶ್ಯನ್ತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥

"ಕೆಲವರು ಪರಮಾತ್ಮನನ್ನು ಧ್ಯಾನಾಭ್ಯಾಸದಿಂದ ಕಂಡುಕೊಳ್ಳುತ್ತಾರೆ; ಕೆಲವರು ತಮ್ಮ ಮನಸ್ಸಿನಿಂದ; ಇತರರು ಸಾಂಖ್ಯರೂಪದ ವಸ್ತುಪರೀಕ್ಷಣಾದಿ ಬುದ್ಧಿಕಾರ್ಯದಿಂದ; ಮತ್ತೆ ಬೇರೆಯ ಜನ ಕರ್ಮಯೋಗದಿಂದ ಆತ್ಮವನ್ನು ಕಾಣುತ್ತಾರೆ".

ಅನ್ಯೇ ತ್ವೇವಮಜಾನನ್ತಃ ಶ್ರುತ್ವಾನ್ಯೇಭ್ಯ ಉಪಾಸತೇ ।
ತೇಽಪಿ ಚಾತಿತರನ್ತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥

"ಯಾರು ಹಾಗೆ ಧ್ಯಾನದಿಂದಾಗಲಿ ಮನೋಭಾವದಿಂದಾಗಲಿ ಬುದ್ಧಿಯುಕ್ತಿಯಿಂದಾಗಲಿ ಕರ್ಮಯೊಗದಿಂದಲಾಗಲಿ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಲು ಸಮರ್ಥರಲ್ಲವೊ, ಯಾರು ಇತರರಿಂದ, ಎಂದರೆ ಗುರುಮಿತ್ರಾದಿಗಳಿಂದ ಆತ್ಮಪ್ರಭಾವನ್ನು ಕೇಳಿ ತಿಳಿದುಕೊಂಡು ಉಪಾಸನೆ ಮಾಡುತ್ತಾರೋ ಅಂಥಾ ಉಪದೇಶಾಭ್ಯಾಸಿಗಳು ಸಹ ಮೃತ್ಯುವನ್ನು–ಎಂದರೆ ವಿನಶ್ಯವಾದ ಸಂಸಾರಕಷ್ಟವನ್ನು–ದಾಟುತ್ತಾರೆ".

ಉಪಾಸನೆ ಸರ್ವಮುಖ್ಯ. ಉಪಾಸನೆ ಎಂಬ ಮಾತಿನ ಅರ್ಥ "ಹತ್ತಿರವಿರುವುದು". ಹಿಂದೆ ಸಮಕ್ಷತಾಭ್ಯಾಸ ಎಂದು ಹೇಳಿದೆವಲ್ಲ–ಅದೇ ಉಪಾಸನೆ. ಪೂಜ್ಯವಸ್ತುವಿನ ಅಥವಾ ಪ್ರಿಯವಸ್ತುವಿನ ಬಳಿ ಮನಸಾ ನೆಲಸಿರುವುದು ಉಪಾಸನೆ: "ಹಾಜರ್ ಭಾಷಿ" – Practice of the Presence of God. ಅದು ಸಮಕ್ಷತಾಭ್ಯಾಸ, ಉಪಾಸನೆ.

ಭಗವದುಪಾಸನೆ ಬೆಳೆದಂತೆ ಜಗದ್ವಾಸನೆ ಕಳೆಯುತ್ತದೆ; ಜಗದ್ವಾಸನೆ ಕಳೆದಂತೆ ಬ್ರಹ್ಮಾನುಭೂತಿ ನೆರೆದು ಬರುತ್ತದೆ.

ಪುರುಷ ಪ್ರಕೃತಿಯರಾಡುವ ।
ಸರಸದ ನದಿ ಜೀವವಸತಿ ತನ್ನಾತ್ಮವನಾರ್ ॥
ಪರಿಸರದಿಂ ಪ್ರತ್ಯೇಕಿಸಿ ।
ನಿರುಪಾಧಿಯೊಳಿರಿಸಲರಿತನೋ ಮುಕ್ತನವಂ ॥

ಸಂಗ್ರಹ

ಕ್ಷೇತ್ರಂ ಕ್ಷೇತ್ರಜ್ಞಂ ಪ್ರಭು- ।
ವೀ ತ್ರ್ಯಂಶಗಳ ಸ್ವರೂಪ ಸಂಬಂಧಗಳಂ ॥
ನಿಸ್ತ್ರಿಗುಣ ಪರಾತ್ಮವನುಂ ।
ವಿಸ್ತಾರದಿ ಪೇಳ್ವುದೀ ತ್ರಯೋದಶಗೀತಂ ॥

ಮಾನವಾಂತರ್ಬಹಿಶ್ಚೇಷ್ಟಾಮರ್ಮಪಂಡಿತನಚ್ಯುತಂ ।
ನ್ಯೂನಾಧಿಕ್ಯಂಗಳಂ ಕೃಷ್ಣಂ ಸಂಸ್ಕರಿಕ್ಕೆಮ್ಮೊಳಾವಗಂ ॥

ಅಥ ಗುಣತ್ರಯ ವಿಭಾಗಯೋಗೋ ನಾಮ ಚತುರ್ದಶೋಽಧ್ಯಾಯಃ

ಶ್ರೀಭಗವಾನುವಾಚ-

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಮ್ ।
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ

॥ ೧ ॥

ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ।
ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ

॥ ೨ ॥

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ

॥ ೩ ॥

ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ ।
ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ

॥ ೪ ॥

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್

॥ ೫ ॥

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ

॥ ೬ ॥

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್

॥ ೭ ॥

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ

॥ ೮ ॥

ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ

॥ ೯ ॥

ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
ರಜಸ್ಸತ್ತ್ವಂ ತಮಶ್ಚೈವ ತಮಸ್ಸತ್ತ್ವಂ ರಜಸ್ತಥಾ

॥ ೧೦ ॥

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ

॥ ೧೧ ॥

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ

॥ ೧೨ ॥

ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೆ ವಿವೃದ್ಧೇ ಕುರುನಂದನ

॥ ೧೩ ॥

ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಂ ಲೋಕಾನಮಲಾನ್ ಪ್ರತಿಪದ್ಯತೇ

॥ ೧೪ ॥

ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ ।
ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ

॥ ೧೫ ॥

ಕರ್ಮಣಃ ಸುಕೃತಸ್ಯಾಹುಃ ಸಾತ್ತ್ವಿಕಂ ನಿರ್ಮಲಂ ಫಲಮ್ ।
ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಮ್

॥ ೧೬ ॥

ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ ।
ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ

॥ ೧೭ ॥

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ

॥ ೧೮ ॥

ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।
ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ

॥ ೧೯ ॥

ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ

॥ ೨೦ ॥

ಅರ್ಜುನ ಉವಾಚ-

ಕೈರ್ಲಿಂಗೈಸ್ತ್ರೀನ್ ಗುಣಾನೇತಾನತೀತೋ ಭವತಿ ಪ್ರಭೋ ।
ಕಿಮಾಚಾರಃ ಕಥಂ ಚೈತಾಂಸ್ತ್ರೀನ್ ಗುಣಾನತಿವರ್ತತೇ

॥ ೨೧ ॥

ಶ್ರೀಭಗವಾನುವಾಚ-

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ

॥ ೨೨ ॥

ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವ ಯೋऽವತಿಷ್ಠತಿ ನೇಂಗತೇ

॥ ೨೩ ॥

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾऽऽತ್ಮಸಂಸ್ತುತಿಃ

॥ ೨೪ ॥

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ

॥ ೨೫ ॥

ಮಾಂ ಚ ಯೋऽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ

॥ ೨೬ ॥

ಬ್ರಹ್ಮಣೋ ಹಿ ಪ್ರತಿಷ್ಠಾऽಹಮಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಗುಣತ್ರಯವಿಭಾಗಯೋಗೋ ನಾಮ ಚತುರ್ದಶೋऽಧ್ಯಾಯಃ

ವಂಶೀಭೂಷಿತಕರಾನ್ನವನೀರದಾಭಾತ್
ಪೀತಾಂಬರಾದರುಣಬಿಂಬಫಲಾಧರೋಷ್ಠಾತ್ ॥

ಮುಗ್ಧೇಂದುಸುಂದರಮುಖಾದರವಿಂದನೇತ್ರಾತ್
ಕೃಷ್ಣಾತ್ಪರಂ ಕಿಮಪಿ ತತ್ತ್ವ ಮಹಂ ನ ಜಾನೇ ॥

–ಮಧುಸೂದನಸರಸ್ವತೀ

ಸೂಚನೆ

ಪಿತ್ತ ಕಫ ವಾತ ಧಾತು- ।
ವ್ಯತ್ಯಾಸಂಗಳ್ಗೆ ದೇಹಮೆಚ್ಚರಮಿರುವೋಲ್ ॥
ಸತ್ತ್ವಾದಿ ಗುಣವಿಕಾರಕೆ ।
ಚಿತ್ತಂ ಜಾಗೃತಿಯ ತಾಳ್ದೊಡಾತ್ಮೋದ್ಧಾರಂ

॥ ೧ ॥

ಗುಣ ಮೂರುಂ ಪ್ರಾಕೃತಗಳ್ ।
ಕೆಣಕುತ್ತಿಹುವೆಲ್ಲ ಜೀವಗಳನನವರತಂ ॥
ತನು ಮನ ಚೇಷ್ಟಿಪುವದರಿಂ- ।
ದನಪಾಯಂ ದೇಹಿಯಂತರಾತ್ಮನಸಂಗಂ

॥ ೨ ॥

ಸಾರಾಂಶ

ಜಗತ್ತಿನಲ್ಲಿ ವಿಜೃಂಭಿಸುತ್ತಿರುವ ಅಶಾಂತಿ ಅಲ್ಲೋಲಕಲ್ಲೋಲಗಳ ಕಾರಣಸ್ಥಾನವಿರುವುದು ಜಗತ್ತನ್ನಾಗಿಸಿರುವ ಸತ್ತ್ವರಜಸ್ತಮೋಗುಣಗಳ ಅಸಮಸಂಮಿಶ್ರಣದಲ್ಲಿ ಎಂಬ ಸಂಗತಿಯನ್ನು ಲೋಕಶಾಂತಿ, ಸರ್ವೋದಯ ಎಂದು ಹಂಬಲಿಸುವ, ಅದಕ್ಕಾಗಿ ಸಮ್ಮೇಳನಗಳನ್ನು ನಡೆಸುವ ರಾಜಕೀಯಸ್ಥರು ಗಮನಕ್ಕೆ ತಂದುಕೊಳ್ಳಬೇಕು. ಸತ್ತ್ವೋತ್ಕರ್ಷಕ್ಕೆ ಗಮನವನ್ನು ತಿರುಗಿಸಿದರೆ ಶಾಂತಿ ತಾನಾಗಿ ಲಭಿಸೀತು. ಕಜ್ಜಿಯಿಂದ ನರಳುತ್ತಿರುವವನಿಗೆ ಪುನುಗಿನಿಂದ ಗುಣವಾಗದು.

ಪ್ರಕರಣ ೧೫

ಅಧ್ಯಾಯ ೧೪ - ಗುಣತ್ರಯವಿಭಾಗಯೋಗವೆಂಬ ತ್ರಿಗುಣತಂತ್ರಜಾಗರೂಕಯೋಗ

ಈ ಅಧ್ಯಾಯವು ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಪ್ರಕೃತಿ ಗುಣಗಳ ಪ್ರಭಾವವನ್ನು ಕುರಿತದ್ದು. ಈ ತ್ರಿಗುಣಗಳನ್ನು ಭಗವಂತ ಮೊದಲಿನಿಂದಲೂ ಪ್ರಶಂಸೆ ಮಾಡುತ್ತ ಬಂದಿದ್ದಾನೆ. ಮೂರನೆಯ ಅಧ್ಯಾಯದಲ್ಲಿ ನೋಡಿದೆವು:

> ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥

"ಎಲ್ಲರೂ ಪ್ರಕೃತ್ಯಧೀನರಾಗಿ ಪ್ರಕೃತಿಗುಣಗಳಿಂದ ಕೆಲಸ ನಡಸತಕ್ಕವರೇ ಹೊರತು ಪ್ರಕೃತಿಯಿಂದ ಸ್ವತಂತ್ರರಾದವರು ಯಾರೂ ಅಲ್ಲ".

ಪುನಃ ಅದೇ ಅಧ್ಯಾಯದಲ್ಲಿ–

> ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
> ಗುಣಾ ಗುಣೇಷು ವರ್ತನ್ತ ಇತಿ ಮತ್ವಾ ನ ಸಜ್ಜತೇ ॥

"ಎಲ್ಲ ಕರ್ಮಗಳೂ ಪ್ರಕೃತಿಯ ಗುಣಗಳಿಂದ ಮಾಡಲ್ಪಟ್ಟವು". "ಮನುಷ್ಯನ ಅಂತಃಪ್ರಕೃತಿಯ ಗುಣಗಳೂ ಬಹಿಷ್ಪ್ರಕೃತಿಯ ಗುಣಗಳೂ ಪರಸ್ಪರ ವರ್ತನೆ ಪ್ರತಿ ವರ್ತನೆಗಳಾಗಿ ಕರ್ಮಮಾಡುತ್ತವೆ, ಅವು ಆತ್ಮಕ್ಕೆ ಅಂಟುವುವಲ್ಲ ಎಂದು ತತ್ತ್ವಜ್ಞನು ತಿಳಿದಿರುತ್ತಾನೆ".

ಹೀಗೆ ಪದೇಪದೇ ಸ್ವಾಮಿ ಮನುಷ್ಯನೊಳಗಣ ಆತ್ಮವಸ್ತುವನ್ನೂ ಅವನ ಕಾರ್ಯಕರಣಗಳನ್ನೂ ಪ್ರತ್ಯೇಕಮಾಡಿದ್ದಾನೆ.

ಏಳನೆಯ ಅಧ್ಯಾಯದಲ್ಲಿ ಮತ್ತೆ:

ತ್ರಿಭಿರ್ಗುಣಮಯೈರ್ಭಾವೈಃ ಏಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥
ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥

"ಈ ತ್ರಿಗುಣಗಳ ನಾನಾ ಕಾರ್ಯರೂಪಗಳು ಎಲ್ಲ ಜಗತ್ತಿಗೂ ಮೋಹ ಕವಿಸಿರುವುದರಿಂದ ಜೀವಿಗೆ ಆತ್ಮಸ್ವರೂಪ ಗೊತ್ತಿಲ್ಲದಂತಾಗಿದೆ. ತ್ರಿಗುಣಪ್ರಭಾವವೇ ಮಾಯೆ, ಅದನ್ನು ದಾಟಿ ಆಚೆಗೆ ಹೋಗುವುದು ಕಷ್ಟಸಾಧ್ಯ; ಆದರೆ ಅಸಾಧ್ಯವಲ್ಲ. ಭಗವಂತನೊಬ್ಬನನ್ನೇ ಯಾರು ಆಶ್ರಯಿಸಿಕೊಂಡಿರುತ್ತಾರೋ ಅವರು ಈ ಮಾಯೆಯನ್ನು ದಾಟಬಲ್ಲವರಾಗುತ್ತಾರೆ".

ಇದರ ತಾತ್ಪರ್ಯವೇನು? ಜೀವನಿಗೂ ಪರಮಾತ್ಮನಿಗೂ ನಡುವೆ ಅಡ್ಡವಾಗಿ ನಿಂತಿರುವ ಗೋಡೆ ಪ್ರಕೃತಿ ಕಟ್ಟಿದ್ದು. ಆ ಗೋಡೆಯ ಇಟ್ಟಿಗೆಗಳೇ ತ್ರಿಗುಣಗಳು. ಪರಮಾತ್ಮದರ್ಶನ ಬೇಕೆನ್ನುವವರು ಆ ಗೋಡೆಯನ್ನು ದಾಟುವುದಕ್ಕಾಗಿ ಶ್ರಮ ಪಡಬೇಕು.

ಆ ಮಾಯಾಕುಡ್ಯದ ವಿವರಣೆಯೇ ಹದಿನಾಲ್ಕನೆಯ ಅಧ್ಯಾಯದ ಮುಖ್ಯ ವಿಷಯ.

ಈ ಅಧ್ಯಾಯ ಸಣ್ಣದು. ಇಲ್ಲಿ ವಾದಕ್ಕೆ ಅವಕಾಶ ಹೆಚ್ಚಾಗಿಲ್ಲ. ಆದದ್ದರಿಂದ ಭಾಷ್ಯವ್ಯಾಖ್ಯಾನಗಳು ಇಲ್ಲಿ ವಿಪುಲವಾಗಿಲ್ಲ. ಈ ಸಂದರ್ಭದಿಂದ ಈ ಅಧ್ಯಾಯ ಅಷ್ಟು ಮುಖ್ಯವಲ್ಲವೆಂದು ತಿಳಿಯತಕ್ಕದ್ದಲ್ಲ. ನನ್ನ ಅಭಿಪ್ರಾಯದಲ್ಲಿ ಈ ತ್ರಿಗುಣಪ್ರಶಂಸೆ ನಮ್ಮ ತತ್ತ್ವ ವಿಚಾರಕ್ಕೆ ಮೂಲಭೂತವಾದದ್ದು. ಗ್ರೀಕ್ ತಾತ್ತ್ವಿಕಶಿರೋಮಣಿಯಾದ ಪ್ಲೇಟೊ (Plato) ಮನುಷ್ಯನ ಸ್ವಭಾವವು ತ್ರಿಗುಣಮಯವಾದದ್ದೆಂದೂ ರಾಜ್ಯಾಂಗ ರಚನೆಯಲ್ಲಿ ಆ ತ್ರಿಗುಣಪ್ರಭಾವಗಳನ್ನು ಗಣನೆಗೆ ತಂದುಕೊಳ್ಳತಕ್ಕದ್ದೆಂದೂ ಹೇಳಿದ್ದಾನೆ. ಇದನ್ನು "ರಿಪಬ್ಲಿಕ್" (*The Republic*) ಗ್ರಂಥದಲ್ಲಿ ನೋಡಬಹುದು. ಮನುಷ್ಯ ಜೀವನಕ್ಕೆ ರೂಪುಕೊಡುವ ಶಕ್ತಿಗಳೇ ಸಹಜ ಗುಣಗಳು. ಜಗತ್ತಿನ ಸಮಸ್ತ ಚೇಷ್ಟೆಗಳಿಗೂ ಸಮಸ್ತ ಚರ್ಯೆಗಳಿಗೂ ಜನ್ಮಸ್ಥಾನ ಈ ತ್ರಿಗುಣಗಳು. ಇವುಗಳ ಸ್ವಭಾವವನ್ನು ನಾವು ಚೆನ್ನಾಗಿ ಕಂಡುಕೊಳ್ಳದಿದ್ದರೆ ಜೀವದ ಸ್ವರೂಪ ನಮಗೆ ತಿಳಿಯಲಾರದು. ಅದು ತಿಳಿಯದಿದ್ದಾಗ ನಮ್ಮ ಲೋಕವ್ಯವಸ್ಥೆ ಸರಿಯಾಗದು. ಆತ್ಮತತ್ತ್ವವು ನಮಗೆ ದೂರದಲ್ಲಿಯೇ ಇರುತ್ತದೆ. ಆದದ್ದರಿಂದಲೇ ಸ್ವಾಮಿ ಹೇಳಿದ್ದು:

> ಯಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ ।
> ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯ ಮಾಗತಾಃ ॥

ಈ ಗುಣಸೂಕ್ಷ್ಮಗಳನ್ನರಿತದ್ದರಿಂದ ಎಲ್ಲ ಮಹರ್ಷಿಗಳೂ ಪರಮಸಿದ್ಧಿ ಪಡೆದು ಈಶ್ವರಸದೃಶರೇ ಆದರಂತೆ.

ಇಲ್ಲಿ ಗುಣವೆಂಬುದು ಒಬ್ಬ ಮನುಷ್ಯನಿಗೆ ಇನ್ನೊಬ್ಬ ಮನುಷ್ಯನಿಂದ ಬಂದ ಗುಣವಲ್ಲ; ಮನುಷ್ಯನು ಸ್ವಾನುಭವದಿಂದಲೋ ಅನ್ಯಾನುಕರಣದಿಂದಲೋ ಕಲಿತುಕೊಂಡ ಗುಣವೂ ಅಲ್ಲ; ಮೊದಲು ತನ್ನಲ್ಲಿಲ್ಲದೆ ಇದ್ದು ಆಮೇಲೆ ಹೇಗೋ ಏಕೋ ಅಭ್ಯಾಸಮಾಡಿಕೊಂಡ ಗುಣವಲ್ಲ. ಇಲ್ಲಿ ಹೇಳಹೊರಟಿರುವುದು ನೈಜಗುಣವನ್ನು ಕುರಿತು; ಸ್ವಭಾವಸಿದ್ಧವಾಗಿ, ಹುಟ್ಟಿನಿಂದಲೇ ಬಂದಿರುವ ಗುಣವನ್ನು ಕುರಿತು.

ಹಿಂದಿನ ಅಧ್ಯಾಯದಲ್ಲಿ ಕ್ಷೇತ್ರ, ಕ್ಷೇತ್ರಜ್ಞ ಎಂಬ ಎರಡು ಜಗದ್ವಿಭಾಗಗಳನ್ನು ವಿವೇಚಿಸಿದ್ದಾಯಿತಷ್ಟೆ? ಕ್ಷೇತ್ರಜ್ಞನಾದ ಜೀವನ ಪ್ರತಿದಿವಸದ ಜೀವಿತಕ್ರಿಯೆಯಲ್ಲಿ ಕ್ಷೇತ್ರದ–ಎಂದರೆ–ಪ್ರಕೃತಿಯ–ಪ್ರಭಾವ ಎಷ್ಟುಮಟ್ಟಿಗೆ ಇರುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಈಗ ನಮಗೆ ಸಂಗತವಾಗಿದೆ. ಕ್ಷೇತ್ರಪ್ರಭಾವವೇ ಗುಣತ್ರಯ. ಈ ಕ್ಷೇತ್ರ ಸ್ವರೂಪ ಮಹಿಮೆಗಳನ್ನು ಈಗ ಸ್ವಾಮಿ ತೋರಿಸುತ್ತಾನೆ. ಕ್ಷೇತ್ರವೆಂದರೆ ಪ್ರಕೃತಿ-ವಿಶ್ವಪ್ರಕೃತಿ. ಅದೇ ಜಗತ್ಸಾಮಗ್ರಿ. ಜಗತ್ಸಾಮಗ್ರಿಯ ಪ್ರಥಮಾವಸ್ಥೆಯೇ ಮಹತ್. ಕುಂಬಾರನ ಕೈಗೆ ಜೇಡಿಮಣ್ಣು ಹೇಗೋ ಈಶ್ವರನ ಕೈಗೆ ಮಹತ್ತೆಂಬ ದ್ರವ್ಯ ಹಾಗೆ.

> ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ ।
> ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥

“ಪ್ರಕೃತಿಯ ಮಹತ್ತು ಎಂಬ ಹೆಸರುಳ್ಳ ಮೂಲಾವಸ್ಥೆಯೇ ನನ್ನ ಉಪಯೋಗಕ್ಕೆ ಯೋನಿ. ಅದರಲ್ಲಿ ನಾನು ಗರ್ಭವನ್ನಿರಿಸುತ್ತೇನೆ. ಸಮಸ್ತಪ್ರಾಣಿಗಳಿಗೂ ಅದು ಜನ್ಮಸ್ಥಾನ”.

“ಮಹದ್ಬ್ರಹ್ಮ”. “ಮಹದ್ಯೋನಿ” ಈ ಪದಗಳಲ್ಲಿ ಮಹತ್ ಎಂದರೆ ಮೂಲ ಪ್ರಕೃತಿ ಎಂದಿಟ್ಟುಕೊಳ್ಳಬೇಕು. ಜಗತ್ಸೃಷ್ಟಿಯನ್ನು ಕುರಿತ ವೃತ್ತಾಂತವೆಲ್ಲ–ಸಾಮನ್ಯ ಜನಬೋಧೆಗಾಗಿ–ಮಹರ್ಷಿಗಳು ಅಳವಡಿಸಿದ ಮನೋಬುದ್ಧಿಕಲ್ಪನೆ. ಸೃಷ್ಟಿಕಾರ್ಯ ಎಂದೋ ಒಂದು ಗೊತ್ತಾದ

ದಿನ ಒಂದು ಗೊತ್ತಾದ ಮೂಹರ್ತದಲ್ಲಿ ಪ್ರಾರಂಭವಾಯಿತು; ಅದಕ್ಕೆ ಹಿಂದೆ ಸೃಷ್ಟಿ ಆಗಿರಲಿಲ್ಲ; ಏನೇನೂ ಇರಲಿಲ್ಲ–ಎಂದು ಭಾವಿಸತಕ್ಕದ್ದಲ್ಲ. ಸೃಷ್ಟಿ ಅನಾದಿ. ಅದು ಯಾವಾಗಲೂ ಇದ್ದುಕೊಂಡಿದೆ; ಅದು ಕ್ಷಣೇಕ್ಷಣೇ ರೂಪವ್ಯತ್ಯಾಸ ಮಾಡಿಕೊಳ್ಳುತ್ತಲೂ ಇದೆ. ಅದರ ಸ್ವರೂಪವನ್ನು ನಾವು ಪರೀಕ್ಷಿಸಬೇಕಾದರೆ ಯಾವುದಾದರೊಂದು ಪ್ರಾರಂಭವೇಳೆಯನ್ನು ನಮ್ಮ ಮನಸ್ಸಿಗೆ ಗೊತ್ತು ಮಾಡಿಕೊಂಡು ಅಲ್ಲಿಂದ ಮುಂದೆ ಸಾಗಬೇಕು–ಕಥನಸೌಲಭ್ಯಕ್ಕಾಗಿ. ಹಾಗೆ ಕೃತಕಕಥಾ ಪ್ರಾರಂಭದಿಂದ ನೋಡಿದರೆ ಸೃಷ್ಟಿ ಕ್ರಮದಲ್ಲಿ ಮೊದಲಿದ್ದದ್ದು ಶುದ್ಧಬ್ರಹ್ಮ; ಅದೇ ಕಾರಣಬ್ರಹ್ಮ. ಅದರ ಅನಂತರದ ಅವಸ್ಥೆಯೇ ಕಾರ್ಯಬ್ರಹ್ಮ. ಆಗಲೇ ಬ್ರಹ್ಮಸಂಕಲ್ಪ. ಸಂಕಲ್ಪ ವಿಶಿಷ್ಟವಾದ ಬ್ರಹ್ಮಭಾವವೇ ಶಬಲಬ್ರಹ್ಮ. ಅದರ ಶಕ್ತಿರಾಶಿಯೇ ಅವ್ಯಕ್ತ.

> ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ॥ (೮-೧೮)

ಅವ್ಯಕ್ತದಿಂದ ಮಹತ್ತು. ಅದು ಅವ್ಯಾಕೃತ, ಎಂದರೆ ಅಂಗಾಂಗ ಸ್ಪಷ್ಟವಾಗದೆ ಇರುವ ಪಿಂಡದಶೆ. ಮಹತ್ತಿನಿಂದ ಅಹಂಕಾರ; ಅದರಿಂದ ಪಂಚತನ್ಮಾತ್ರಗಳು, ಅದರಿಂದ ಪಂಚಮಹಾಭೂತಗಳು, ಅದರಿಂದ ಜಗತ್ತು.

ಹೀಗೆ ಸೃಷ್ಟಿಯ ಕ್ರಮಪರಂಪರೆ.

> ಮಹತಃ ಪರಮವ್ಯಕ್ತಮ್ ॥

–ಕಠೋಪನಿಷತ್ತು

> ಪ್ರಾಕೃತಮನ್ನಂ ತ್ರಿಗುಣಭೇದಪರಿಣಾಮತ್ವಾತ್ ಮಹದಾದ್ಯಮ್ ॥

–ಮೈತ್ರಾಯಣ್ಯುಪನಿಷತ್ತು

ಈಗ ಗೀತಾವಾಕ್ಯಕ್ಕೆ ಹೋಗೋಣ.

> ಸರ್ವಯೋನಿಷು ಕೌನ್ತೇಯ ಮೂರ್ತಯಃ ಸಂಭವನ್ತಿ ಯಾಃ ।
> ತಾಸಾಂ ಬ್ರಹ್ಮ ಮಹದ್ಯೋನಿಃ ಅಹಂ ಬೀಜಪ್ರದಃ ಪಿತಾ ॥

ಎಲ್ಲೆಲ್ಲಿ ಏನೇನು ಹುಟ್ಟುತ್ತದೆಯೋ—ಅದರ ಆಕಾರವೆಂಥಾದ್ದಾದರಾಗಲಿ, ಕ್ರಿಯೆ ಎಂಥಾದ್ದಾದರಾಗಲಿ—ಅದಕ್ಕೆಲ್ಲ ಮೊದಲ ತಾಯಿ ಮಹತ್ತೆಂಬ ಪ್ರಕೃತಿ: ಮೊದಲ ತಂದೆ ಈಶ್ವರ ಅಥವಾ ಪುರುಷ. ಅವರೇ ಆದಿದಂಪತಿಗಳು. ಅವರು ಅನಾದಿ ದಂಪತಿಗಳೂ ಹೌದು. ಪ್ರಪಂಚದ ಎಲ್ಲ ದಂಪತಿಗಳೂ ಪ್ರಕೃತಿ ಈಶ್ವರರೇ. ಅವರನ್ನೇ ಬ್ರಹ್ಮ–ಸರಸ್ವತಿಯರೆಂದೂ ವಿಷ್ಣು–ಲಕ್ಷ್ಮಿಯರೆಂದೂ ಶಿವ–ಗೌರಿಯರೆಂದೂ ಲೋಕ ಕರೆಯುತ್ತದೆ.

ಆ ದಂಪತಿಗಳಿಬ್ಬರೂ ಬೇರೆಬೇರೆಯಾದ ಇಬ್ಬರೆ, ಅಥವಾ ಇಬ್ಬರಂತೆ ಕಾಣಿಸಿಕೊಳ್ಳುವ ಒಬ್ಬರೇಯೆ? ಇದು ದೊಡ್ಡ ಪ್ರಶ್ನೆ. ಅದನ್ನು ಮುಂದೆ ನೋಡೋಣ. ಈಗ ಆ ಇಬ್ಬರಲ್ಲಿ ಜಗಜ್ಜನ್ಮಕ್ಕೆ ಕ್ಷೇತ್ರಪ್ರಾಯವಾದ ಪ್ರಕೃತಿಯ ಸ್ವರೂಪವನ್ನು ನೋಡೋಣ.

> ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
> ನಿಬಧ್ನನ್ತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥

“ಸತ್ತ್ವ, ರಜಸ್ಸು, ತಮಸ್ಸು—ಈ ಗುಣಗಳು ಪ್ರಕೃತಿಯಿಂದ ಹುಟ್ಟಿದುವಾಗಿ, ದೇಹಿಯಾದ ಆತ್ಮನು ಅವಿಕಾರ್ಯನಾಗಿದ್ದರೂ ಅವನನ್ನು ದೇಹದಲ್ಲಿ ಕಟ್ಟಿಹಾಕುತ್ತವೆ. ಹೀಗೆ ಅವಿಕಾರ್ಯನು ವಿಕೃತನಾಗುತ್ತಾನೆ. ಅವಿಕಾರ್ಯವಾದ ವಸ್ತುವಿಗೆ ವಿಕಾರ ತರುವುದು ಪ್ರಕೃತಿಯ ತ್ರಿಗುಣ ಮಹಿಮೆ”.

ಇದು ನಮ್ಮ ಜ್ಞಾಪಕದಲ್ಲಿ ನಿಲ್ಲಬೇಕಾದ ಸೂತ್ರ. ಪ್ರಪಂಚವು ಪಂಚಭೂತಾತ್ಮಕವಾದದ್ದು ಎಂಬುದಕ್ಕಿಂತ ಪ್ರಪಂಚಬಂಧನವು ತ್ರಿಗುಣಾತ್ಮಕವಾದದ್ದು ಎಂಬುದನ್ನು ವಿಚಾರ ಮಾಡಿ ಗ್ರಹಿಸುವುದು ಹೆಚ್ಚು ಮುಖ್ಯ.

ಗುಣವೆಂಬುದೇನು?

ಗುಣವೆಂದರೆ ಏನು? ಒಂದು ವಸ್ತುವಿನಲ್ಲಿರುವ ಯಾವ ಸಹಜಶಕ್ತಿಯು, ಅಥವಾ ಯಾವ ನೈಜಲಕ್ಷಣವು, ಆ ವಸ್ತುವಿಗೆ ಇನ್ನೊಂದು ವಸ್ತುವಿನೊಡನೆ ಸ್ನೇಹಸಂಬಂಧವನ್ನೋ ವೈರಸಂಬಂಧವನ್ನೋ ಉಂಟುಮಾಡಬಲ್ಲದ್ದಾಗಿರುತ್ತದೆಯೋ ಆ ಶಕ್ತಿಯು ಅಥವಾ ಆ ಲಕ್ಷಣವು ಆ ವಸ್ತುವಿನ ಗುಣವೆನಿಸುತ್ತದೆ. ಹೀಗೆ ಗುಣವು ಸ್ವಭಾವ ಸಿದ್ಧವಾದ ಅನ್ಯಾಕರ್ಷಕ ಶಕ್ತಿ ಅಥವಾ ಅನ್ಯಾಪಕರ್ಷಕ ಶಕ್ತಿ. ಅದು ಒಬ್ಬ Counter part

ಪ್ರತಿಯೋಗಿಯನ್ನಪೇಕ್ಷಿಸುತ್ತದೆ. ಪ್ರೇಮವು ಪಾತ್ರವ್ಯಕ್ತಿಯನ್ನಪೇಕ್ಷಿಸುತ್ತದೆ; ಸೌಂದರ್ಯವು ರೂಪರಸಿಕನನ್ನಪೇಕ್ಷಿಸುತ್ತದೆ; ಶೌರ್ಯವು ಸ್ಪರ್ಧಿಯನ್ನು; ಪಾಂಡಿತ್ಯವು ಶಿಷ್ಯನನ್ನು; ಔದಾರ್ಯವು ಆಶ್ರಿತನನ್ನು; ದಂಭವು ಪ್ರೇಕ್ಷಕನನ್ನು; ಭೋಜನರುಚಿ ಭೋಕ್ತನನ್ನು; ಕತ್ತಲೆಯು ಬೆಳಕನ್ನು; ದುಃಖವು ನಿವಾರಕನನ್ನು; ಸುಖವು ನವೀಕಾರಕನನ್ನು; ಅಪ್ರಸಿದ್ಧಿಯು ಕೀರ್ತಿಯನ್ನು–ಹೀಗೆ. ಅನ್ಯಾಹ್ವಾನವೋ ಅನ್ಯೋದ್ವೇಜನವೋ ಗುಣದ ಕಾರ್ಯ. ಹೀಗೆ ಗುಣವು ಸದ್ವಿತೀಯವಾದದ್ದು. ಬೃಹದಾರಣ್ಯಕೋಪನಿಷತ್ತಿನಲ್ಲಿರುವ (೩-೨) ಗ್ರಹ–ಅತಿಗ್ರಹ ಪ್ರಸ್ತಾವವು ಗುಣಮಹಿಮೆಯನ್ನು ಕುರಿತದ್ದು. ಅದು ದ್ವಿಪಕ್ಷವುಳ್ಳ ಸಂಬಂಧ. ಅದ್ವಿತೀಯವಾದದ್ದು ಬ್ರಹ್ಮ. ಸದ್ವಿತೀಯವಾದದ್ದು ಗುಣ. ಗುಣದಿಂದ ಜಗತ್ತು. ಗುಣದಿಂದ ಸಂಸಾರ. ಎದುವರೆಗೆ ಗುಣವುಂಟೋ ಅದುವರೆಗೆ ಪ್ರಪಂಚವುಂಟು. ಗುಣಾತೀತನಾದವನು ಪ್ರಪಂಚಾತೀತನಾಗಬಲ್ಲವನು. (ಪುಟ 209-210 ನೋಡಿರಿ.)

ನಮ್ಮ ಈಗಿನ ಪ್ರಕರಣದಲ್ಲಿ ಗುಣವೆಂಬುದು ಸಹಜಪ್ರವೃತ್ತಿ; ಅದು ಮನುಷ್ಯನ ಅಂತರಂಗದಲ್ಲಿ ಸ್ವತಃ ಕಾಣಿಸಿಕೊಳ್ಳುವ ಪ್ರವೃತ್ತಿ, ಅಥವಾ ಪ್ರೇರಣೆ, ಅಥವಾ ವಾಸನೆ. ಗುಣವೆಂಬುದು ಅಂತರ್ವಾಸನೆ ಎನ್ನಬಹುದು. ಅದನ್ನು ಇಂಗ್ಲಿಷಿನಲ್ಲಿ ಕ್ವಾಲಿಟಿ (Quality) ಎನ್ನುತ್ತಾರೆ. ಇಂಪಲ್ಸ್ (Impulse) ಅಥವಾ ಪ್ರೊಪೆನ್ಸಿಟಿ (Propensity) ಎನ್ನುವುದು ಇನ್ನೂ ಸಮಂಜಸ. ಇಲ್ಲಿ ವಿವಕ್ಷಿತವಾಗಿರುವ ಗುಣವೆಂಬುದು ಮನುಷ್ಯನ ಒಳಗಡೆ ಆಳದಿಂದ ಮೇಲಕ್ಕೆ ಎದ್ದು ಬರುವ ಶಕ್ತಿ. ಆ ಅಂತರಂಗವಾಸನೆಯ ಕಾರ್ಯಫಲಿತಗಳು ಎರಡು:

1. ಪ್ರಾಚೀನದ ಕ್ಷಯ
2. ಭವಿಷ್ಯದ ಅಂಕುರ.

ಸಹಜಗುಣವು ಜೀವಿಯ ಪೂರ್ವಜನ್ಮಸಂಸ್ಕಾರವನ್ನು ಹೊರಕ್ಕೆ ತಂದು ಮುಗಿಸುತ್ತದೆ. ಸಂಸ್ಕಾರವೆಂದರೆ ಜೀವಕ್ಕೆ ಆಗಿರುವ ಶೋಧನೆ ಶಿಕ್ಷಣಗಳು ಮತ್ತು ಅನುಭವಾಭ್ಯಾಸಗಳು. ಪ್ರತಿಯೊಂದು ಜೀವವೂ ಅನಾದಿ ಕಾಲದಿಂದ ನಾನಾ ಜನ್ಮಜನ್ಮಾಂತರಗಳನ್ನು ತಾಳಿ ಜೀವಿಸಿ ಪುನಃಪುನಃ ಜಗತ್ಸಂಪರ್ಕದಿಂದ ಹೀಗೂ ಹಾಗೂ ಪರಿಣಾಮ ಪಡೆದುಕೊಂಡು ಬಂದಿರುತ್ತದೆ. ಹೀಗೆ ಬಂದ ಪರಿಣಾಮಗಳನ್ನು ವಾಸನೆಯೆಂದು ಕರೆಯುವುದು ರೂಢಿ. ಇಂಥಾ ಪೂರ್ವಸಂಸ್ಕಾರವಾಸನೆಗಳನ್ನು ಅಭಿವ್ಯಕ್ತಿಯ ಮೂಲಕ ವ್ಯಯ ಮಾಡಿ

ಮುಗಿಸುವುದು ಸಹಜ ಗುಣದ ಒಂದು ಕಾರ್ಯ. ಇಹ ಜನ್ಮದಲ್ಲಿ ಆ ಜೀವ ಮತ್ತೆ ಲೋಕಸಂಪರ್ಕ ಪಡೆದಾಗ ಅದರ ಪೂರ್ವಫಲಿತವಾದ ಗುಣಗಳು ಇತರ ಜೀವಗಳ ಸಂಪರ್ಕದಲ್ಲಿ ಪ್ರಯೋಗವಾಗುತ್ತವೆ. ಈ ಇತರ ಜೀವಗಳು ತಮ್ಮತಮ್ಮ ನೈಜದಂತೆ ಪ್ರತಿಕ್ರಿಯೆ ತೋರುತ್ತವೆ. ಈ ಲೋಕಪ್ರತಿಕ್ರಿಯೆ ನಮ್ಮ ಜೀವಕ್ಕೆ ಹೊಸ ಸಂಸ್ಕಾರವಾಗಿಸುತ್ತದೆ. ಈ ತೆರದ ನೂತನ ಸಂಸ್ಕಾರವೇ ಭವಿಷ್ಯದ ಅಂಕುರ. ಹೀಗೆ ನಮ್ಮ ಅಂತಃಪ್ರವೃತ್ತಿಗಳು ಅಥವಾ ನೈಜ ಗುಣಗಳು–ಒಂದು ಕಡೆ ಪೂರ್ವ ಸಂಸ್ಕಾರ ಫಲಿತಗಳು, ಇನ್ನೊಂದು ಕಡೆ ಭವಿಷ್ಯಜ್ಜನ್ಮಬೀಜಗಳು.

ಗುಣವೆಂದರೆ ಒಂದು ವಸ್ತುವಿನಲ್ಲಿರುವ ನಿಶ್ಚಿತಪರಿಣಾಮಕಾರಕವಾದ ಅಂತಶ್ಶಕ್ತಿ ಎಂದು ಸಾಮಾನ್ಯವಾದ ಅರ್ಥ: ಚಂದನದಲ್ಲಿ ಪರಿಮಳ, ನೀರಿನಲ್ಲಿ ಶೀತಲ ಇತ್ಯಾದಿ. ಗುಣವೆಂದರೆ ಹಗ್ಗ ಅಥವಾ ನೂಲು ಎಂದೂ ಅರ್ಥವುಂಟೂ. ಕಟ್ಟುವುದೂ ನೂಲಿನ ಕೆಲಸ. ಆದದ್ದರಿಂದ “ಗುಣಾಃ ನಿಬಧ್ನನ್ತಿ” ಎಂಬ ಮಾತು ಹೀಗೂ ಯುಕ್ತವಾಗಿದೆ.

ಗುಣಗಳು ಮೂರೆಂಬುದು ಕೇವಲ ತತ್ತ್ವದ ಮಾತು. ವಾಸ್ತವದಲ್ಲಿ ಒಂದೊಂದು ಗುಣವೂ ಬೇರೆಬೇರೆಯಾಗಿ, ಬೆರಕೆಯಿಲ್ಲದೆ, ಎಲ್ಲಿಯೂ ದೊರೆಯುವುದಿಲ್ಲ. ಬೆಂಗಳೂರಿನ ವಾತಾವರಣದಲ್ಲಿ ಬರಿಯ ಗಾಳಿ ಎಲ್ಲಿದೆ? ಅದರಲ್ಲೂ ಬಸ್ ರಸ್ತೆಗಳಲ್ಲಿ ಚತುರ್ದ್ರವ್ಯಗಳು ಏಕವಾಗಿ ನೆರೆದಿರುತ್ತವೆ; ಬಸ್ಸಿನ ಮುಖದಿಂದ ಕಟಕಟಾಯಿತ, ಶರೀರಮಧ್ಯದಿಂದ ರಸ್ತೆಯ ಧೂಳು, ಪೃಷ್ಠಭಾಗದಿಂದ ಡೆಯಿಸಲ್ ಧೂಮ, ಅದರೊಡನೆ ಘಾಟಾದ ಪರಿಮಳ–ಈ ನಾಲ್ಕೂ ಯಾವಾಗಲೂ ಜೊತೆಜೊತೆಯಾಗಿರುತ್ತವೆ, ಒಂದನ್ನು ಬಿಟ್ಟು ಇನ್ನೊಂದಿರುವುದಿಲ್ಲ. ನಮ್ಮ ತ್ರಿಗುಣಗಳೂ ಹಾಗೆಯೇ–ಸರ್ವದಾ ಸಹಸಂಚಾರಿಗಳು. ಎಲ್ಲೆಲ್ಲೂ ಮೂರೂ ಬೆರೆತುಕೊಂಡೇ ಇರುತ್ತವೆ. ಜೀವಗಳೆಷ್ಟೋ ಬೆರಕೆಗಳು ಅಷ್ಟು ರೀತಿ. ಒಂದೊಂದು ಜೀವದ ಸ್ವಭಾವದಲ್ಲಿಯೂ ಗುಣಗಳ ಪರಸ್ಪರ ಪರಿಣಾಮಗಳು ಒಂದೊಂದು ಲೆಕ್ಕ. ಅನಂತ ಜೀವಗಳು; ಅನಂತ ಗುಣಮಿಶ್ರಣಪರಿಮಾಣಗಳು.

ತ್ರಿಗುಣಗಳಲ್ಲಿ ಯಾವ ಒಂದೂ ಅದೊಂದೇ ಆಗಿದ್ದಾಗ ಜಗತ್ಕಾರ್ಯ ನಡೆಯುವುದಿಲ್ಲ. ಹಾಗೆಯೇ ಆ ಮೂರೂ ಸಮಸಮವಾಗಿದ್ದಾಗಲೂ ಜಗತ್ಕಾರ್ಯ ನಡೆಯುವುದಿಲ್ಲ. ಇದು ಬಹು ಮುಖ್ಯವಾದ ಸಂಗತಿ. ಜಗತ್ತು ಜಗತ್ತಾಗಬೇಕಾದರೆ–ಎಂದರೆ ಅದು ಚಲಿಸುತ್ತಿರಬೇಕಾದರೆ–ಎರಡು ಸಂದರ್ಭಗಳು ಅವಶ್ಯಕ:

1. ಗುಣಗಳು ಬೆರೆತೇ ಇರಬೇಕು
2. ಅವು ಸಮಸಮವಾಗಿ ಬೆರೆತಿರಕೂಡದು; ವಿಷಮದಲ್ಲಿರಬೇಕು. ಹೀಗೆ ತ್ರಿಗುಣಗಳ ಅಸಮ ಸಂಮಿಶ್ರಣವೇ ಜಗನ್ನಿಯಮ.

ಹೀಗಿರುವಲ್ಲಿ ವಿವೇಕಿಯ ಕರ್ತವ್ಯವೇನು? ಸತ್ತ್ವವು ಶ್ರೇಯಸ್ಕರವೆಂದು ಅವನಿಗೆ ಗೊತ್ತಿದೆ. ರಜಸ್ಸುತಮಸ್ಸುಗಳು ತಪ್ಪಿದ್ದಲ್ಲವೆಂದೂ ಅವನು ಬಲ್ಲ. ಹೀಗೆ ಮೂರೂ ಅನಿವಾರ್ಯವಾಗಿ, ಅವುಗಳಲ್ಲೊಂದು ಮಾತ್ರ ಅಪೇಕ್ಷಣೀಯವಾಗಿರುವಾಗ, ಅವನ ವಿವೇಕದಿಂದ ಆಗಬಹುದಾದ ಉಪಕಾರವು ಸತ್ತ್ವಗುಣದ ಉತ್ಕರ್ಷಸಾಧನೆ. ಲೋಕದಲ್ಲಿ ಸತ್ತ್ವಾಂಶ ಹೆಚ್ಚುವಂತೆಯೂ ಅದರೊಡನೆ ರಜಸ್ಸಿನ ಅಂಶವು ತಮಸ್ಸಿಗಿಂತ ಹೆಚ್ಚಾಗಿ ಬೆರೆಯುವಂತೆಯೂ ತನ್ನಿಂದ ಸಾಧ್ಯವಾದಷ್ಟು ಅಳವಡಿಸಬೇಕು. ಇಷ್ಟೇ ಅವನಿಗಿರುವ ಸ್ವಾತಂತ್ರ್ಯ.

ಶುದ್ಧಸತ್ತ್ವವು ಪ್ರಪಂಚವ್ಯವಹಾರದಲ್ಲಿ ಏನನ್ನೂ ಸಾಧಿಸಲಾರದು. ಅದು ಸಾರ್ಥಕವಾಗಬೇಕಾದರೆ ಅದಕ್ಕೆ ರಜಸ್ಸಿನ ಸಹಾಯ ಆವಶ್ಯಕ. ಆದದ್ದರಿಂದ ರಜಸ್ಸು ಕೂಡಿದಷ್ಟು ಹೆಚ್ಚಾಗಿ ಸತ್ತ್ವಕ್ಕೆ ಪರಿಚಾರಕನಾಗುವಂತೆ ನಡೆದುಕೊಳ್ಳಬೇಕು. ಸತ್ತ್ವಕ್ಕೆ ರಜೋಗುಣವು ಮೇಲಧಿಕಾರಿಯಾಗಬಾರದು. ಇದನ್ನೇ ಶಾಸ್ತ್ರದಲ್ಲಿ "ಬ್ರಹ್ಮಕ್ಷತ್ರಮ್" ಎಂದು ಹೇಳಿರುವುದು. ಇದನ್ನು ಬೃಹದಾರಣ್ಯಕ (೧-೪) ಸ್ಪಷ್ಟಪಡಿಸುತ್ತದೆ.

> ಬ್ರಹ್ಮವಾ ಇದಮಗ್ರ ಆಸೀತ್ ಏಕಮೇವ । ತದೇಕಗ್ಂ ಸನ್ನವ್ಯಭವತ್ । ತಚ್ಛ್ರೇಯೋ ರೂಪಮ್ ಅತ್ಯಸೃಜತ । ಕ್ಷತ್ರಮ್ । ಯಾನ್ಯೇತಾನಿ ದೇವತ್ರಾಕ್ಷತ್ರಾಣಿ ಧರ್ಮಂ ತದೇತತ್ ಕ್ಷತ್ರಸ್ಯ ಕ್ಷತ್ರಮ್ । ಯದ್ಧರ್ಮಃ–ತದೇತತ್ ಬ್ರಹ್ಮಕ್ಷತ್ರಮ್ ।...

"ಮೊದಲು ಇದ್ದದ್ದು ಬ್ರಹ್ಮ. ಆಗ ಅದು ಒಂದೇ ಇತ್ತು. ಅದು ಒಂದು ಶ್ರೇಷ್ಠವಾದರೂಪವನ್ನು ಸೃಷ್ಟಿಮಾಡಿತು. ಅದೇ ಕ್ಷತ್ರ. ಯಾವ ಗುಣಗಳು ದೇವತೆಗಳನ್ನು ಸಹ ಕಾಪಾಡಬಲ್ಲವಾದವೋ ಅವೇ ಕ್ಷತ್ರ. ಅದು ಹೇಗೆಂದರೆ, ಧರ್ಮದ ಪರಿಪಾಲನೆ ಕ್ಷತ್ರದ ಮೂಲಕ ಆಗತಕ್ಕದ್ದೇ ಹೊರತು ಕೇವಲ ಬ್ರಾಹ್ಮಣ್ಯದಿಂದ ಆಗತಕ್ಕದ್ದಲ್ಲ. ಬ್ರಾಹ್ಮಣ್ಯವೆಂಬುದು ಶುದ್ಧಸತ್ತ್ವ. ಜಗತ್ತಿನಲ್ಲಿ ಧರ್ಮ ನೆಲಸಬೇಕಾದರೆ. ಎಂದರೆ ನಾನಾ ಪ್ರಕೃತಿ ಶಕ್ತಿರೂಪಗಳಾದ ದೇವತೆಗಳಿಗೆ ಮನುಷ್ಯನ ವಿಧೇಯತೆ ಸಲ್ಲಬೇಕಾದರೆ, ಬ್ರಹ್ಮಗುಣವಾದ ಸತ್ತ್ವದ ಜೊತೆಗೆ ಕ್ಷತ್ರಗುಣವಾದ

ರಜೋಗುಣವು ಒಂದುಗೂಡಬೇಕು. ಶುದ್ಧ ಸತ್ತ್ವ ಲೋಕಕಾರ್ಯಕ್ಕೆ ಸಾಲದು”. ಈಗ ತ್ರಿಗುಣಸ್ವರೂಪಭೇದಗಳನ್ನು ನೋಡೋಣ. ಅವುಗಳನ್ನು ಹನ್ನೆರಡು ಶ್ಲೋಕಗಳಲ್ಲಿ ವರ್ಣಿಸಿದೆ. ಅವುಗಳ ಸಾರಾಂಶ ಹೀಗೆ:

ಗುಣ:	**ಸ್ವಭಾವ:**	**ಲಕ್ಷಣ:**	**ಕಾರ್ಯ:**	**ಫಲ:**	**ಗತಿ:**	**ಪರಿಣಾಮ:**
೧ ಸತ್ತ್ವ	ನಿರ್ಮಲ	ಪ್ರಕಾಶ	ಜ್ಞಾನ	ಸುಖ	ಊರ್ಧ್ವಲೋಕ-ಸ್ವರ್ಗಾದಿ,	ಶಾಂತಿ
೨ ರಜಸ್ಸು	ಕಾಮ ಕ್ರೋಧಗಳು	ಅತಿರೇಕ, ಆವೇಶ	ಕರ್ಮಪ್ರವೃತ್ತಿ	ತೃಷ್ಣೆ, ಉದ್ವೇಗ	ಮಧ್ಯಸ್ಥಲೋಕ-ಭೂಮಿ.	ಪರಿಭ್ರಮಣೆ
೩ ತಮಸ್ಸು	ಮೋಹ	ಅಪ್ರವೃತ್ತಿ	ಅಜ್ಞಾನ	ಪ್ರಮಾದ, ಆಲಸ್ಯ, ನಿದ್ರೆ	ಅಧೋಲೋಕ-ನರಕಾದಿ.	ದುಃಖ

ಈ ತ್ರಿಗುಣಗಳು ಯಾವಾಗಲೂ ಮಿಶ್ರಿತವಾಗಿರುತ್ತವೆ–ವಿಷಮಪ್ರಮಾಣದಲ್ಲಿರುತ್ತವೆ, ಸಮಪ್ರಮಾಣದಲ್ಲಿರುವುದಿಲ್ಲ–ಎಂದು ಹೇಳಿದೆವಷ್ಟೆ?

> ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
> ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ ॥

“ರಜಸ್ಸುತಮಸ್ಸುಗಳನ್ನು ಅದುಮಿ ಸತ್ತ್ವಗುಣ ಮೇಲಕ್ಕೆ ಬರುತ್ತದೆ; ರಜೋಗುಣವು ಸತ್ತ್ವ ತಮಸ್ಸುಗಳನ್ನು ಕೆಳಕ್ಕೆ ತಳ್ಳುತ್ತದೆ; ತಮೋಗುಣವು ಸತ್ತ್ವರಜಸ್ಸುಗಳೆರಡನ್ನೂ ತುಳಿದುಹಾಕುತ್ತದೆ. ಈ ಗುಣಸ್ಪರ್ಧೆಗಳಿಂದಲೇ ಜಗದ್ವ್ಯಾಪಾರ”. ತ್ರಿಗುಣಗಳು ಸಮಸಮವಾದಲ್ಲಿ ಜಗತ್ತು ನಿಂತುಹೋದೀತು. ಬ್ರಹ್ಮಸೂತ್ರಗಳಲ್ಲಿ–

> ಅಂಗಿತ್ವಾನುಪಪತ್ತೇಶ್ಚ

ಎಂಬ ಸೂತ್ರದ ಮೇಲಣ ಭಾಷ್ಯದಲ್ಲಿ ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ಇದೇ ಅಭಿಪ್ರಾಯ ಸೂಚಿಸಿದ್ದಾರೆ:

> ಗುಣಾನಾಮುತ್ಕರ್ಷನಿಕರ್ಷನಿಬಂಧನಾಂಗಾಂಗಿಭಾವಾದ್ಧಿ ಜಗತ್ಪ್ರವೃತ್ತಿಃ।
> ಸಾಮ್ಯಾವಸ್ಥಾನಾಂ ಸತ್ತ್ವರಜಸ್ತಮಸಾಮ್ ಅನ್ಯೋನ್ಯಾಧಿಕ್ಯನ್ಯೂನತ್ವಾಭಾವಾತ್
> ಅಂಗಾಂಗಿಭಾವಾನುಪಪತ್ತೇಃ ನ ಜಗತ್ಸರ್ಗ ಉಪಪದ್ಯತೇ।

–ರಾಮಾನುಜಭಾಷ್ಯ

ಈ ತತ್ತ್ವವನ್ನು– "ಭೂಲೋಲಕದಲ್ಲಿ ಯುದ್ಧ ನಿಂತುಹೋಗಬೇಕು, ಶಾಂತಿ ಸಂಸ್ಥಿತವಾಗಬೇಕು, ಸರ್ವೋದಯವಾಗಬೇಕು" ಎಂದು ಮೊದಲಾಗಿ ಹಂಬಲಿಸುತ್ತಿರುವ ಮಹಾಶಯರು ಗಮನಕ್ಕೆ ತಂದುಕೊಳ್ಳಬೇಕು. ಹೊಟ್ಟೆಯಲ್ಲಿ ಮಲವೂ ರಕ್ತದಲ್ಲಿ ಕೀವೂ ತಲೆಯಲ್ಲಿ ಹೇನೂ ತುಂಬಿರುವಾಗ, ಎಲ್ಲರಿಗೂ ಫೇಸ್‌ಪೌಡರು ಡಬ್ಬಿಗಳನ್ನು ಹಂಚಿ ಸುಖವಾಗಿರಿ ಎಂದರೆ ಹೇಗೋ ರಾಜಸ ತಾಮಸಗಳು ಅಂತರಂಗದಲ್ಲಿ ತುಂಬಿರುವಾಗ ಜಗಚ್ಛಾಂತಿಗಾಗಿ ಹಂಬಲಿಸುವುದು ಹಾಗೆ. ನ್ಯೂಕ್ಲಿಯರ್ ಬಾಂಬನ್ನು ಬಿಸಾಟರೆ ಏನಾಗುತ್ತದೆ, ಎದೆಯ ಒಳಗೆ ಹಾಲಾಹಲ ಕುದಿಯುತ್ತಿರುವಾಗ?

ಹಾಗಾದರೆ ಶಾಂತಿ ಬೇಡವೆ? ಎಂದು ಕೇಳಬೇಡಿ. ಶಾಂತಿ ಯಾರಿಗೆ ಬೇಡ? ವೇದ ಮತಸ್ಥರಿಗೆ ಶಾಂತಿಗಿಂತ ಶ್ರೇಷ್ಠವಾದ ಸಂಪತ್ತಿಲ್ಲ, ಶಾಂತಿಗಿಂತ ದೊಡ್ಡದಾದ ಸೌಖ್ಯವಿಲ್ಲ.

> ಪೃಥವೀ ಶಾನ್ತಾ ಸಾಽಗ್ನಿನಾ ಶಾನ್ತಾ ಸಾ ಮೇ ಶಾನ್ತಾ ಶುಚಗ್ಂ ಶಮಯತು।...
> ಪೃಥಿವೀ ಶಾನ್ತಾರನ್ತರಿಕ್ಷಗ್ಂ ಶಾನ್ತಿರ್ದ್ಯೌಃ ಶಾನ್ತಿರ್ದಿಶಶ್ಶಾನ್ತಿಃ... ಪುರುಷಶ್ಶಾನ್ತಿರ್ಬ್ರಹ್ಮಶಾನ್ತಿ
> ರ್ಬ್ರಾಹ್ಮಣಶ್ಶಾನ್ತಿಶ್ಶಾನ್ತಿರೇವ ಶಾನ್ತಿಶ್ಶಾನ್ತಿರ್ಮೇ ಅಸ್ತು ಶಾನ್ತಿಃ॥

ಇದು ವೇದಮಹರ್ಷಿಗಳ ನಿತ್ಯದ ಪ್ರಾರ್ಥನೆ. ಅದು ಬಿಟ್ಟಿ ಫಲಿಸುವುದಲ್ಲ. ಆ ಶಾಂತಿಯ ಸಂಪಾದನೆಗೆ ದಾರಿಯನ್ನು ಅವರು ತೋರಿಸಿದ್ದಾರೆ:

> ಶ್ರೀಶ್ಚ ಹ್ರೀಶ್ಚ ಧೃತಿಶ್ಚ ತಪೋ ಮೇಧಾ ಪ್ರತಿಷ್ಠಾ ಶ್ರದ್ಧಾ ಸತ್ಯಂ ಧರ್ಮಶ್ಚೈತಾನಿ॥

ಇದು ಕಷ್ಟದ ದಾರಿ, ಈ ದಾರಿಯನ್ನಂಗೀಕರಿಸಿ ನಡೆಯುವ ಜನಕ್ಕೆ ಶಾಂತಿಯ ಭರವಸೆಯುಂಟು. ಶಾಂತಿಯನ್ನು ಸಂಪಾದಿಸುವ ಮಾರ್ಗ ರಾಜಕೀಯಸ್ಥರದಲ್ಲ. ರಾಜಕೀಯಸ್ಥರಿಗೆ ಬೇಕಾದದ್ದು ಸ್ವಜಯ, –ಶತ್ರುಪರಾಜಯ, –ಶಾಂತಿಯಲ್ಲ. ಕಜ್ಜಿ

ಬಂದವನಿಗೆ, ಕೆರೆಯಬಾರದು ಎಂದು ಉಪದೇಶ ಕೊಡುತ್ತಿದ್ದರೆ ಕಜ್ಜಿ ವಾಸಿಯಾಗುತ್ತದೆಯೇ? ಮೇಲೆ ಪುನುಗು ಪಚ್ಚಕರ್ಪೂರ ಲೇಪಿಸಿದರೆ ವಾಸಿಯಾಗುತ್ತದೆಯೆ? ಹೊಟ್ಟೆಯೊಳಕ್ಕೆ ಬೀಳಬೇಕು ರಕ್ತಶೋಧಕವಾದ, ಕ್ರಿಮಿನಾಶಕವಾದ ಔಷಧ. ಲೋಕ ಶಾಂತಿ ಬೇಕೆನ್ನುವವರಿಗೆ ತಕ್ಕ ದಾರಿಯೂ ಅಂಥಾದ್ದೇ. ಮೊದಲು ಅವರು ತಾವು ತ್ರಿಗುಣಾತೀತರಾಗಿ ರಾಜಸತಾಮಸಸ್ವಭಾವಸ್ಥರನ್ನು ಸತ್ತ್ವಮಾರ್ಗಕ್ಕೆ ತರಬೇಕು. ಅಂಥವರ್ಯಾರು, ಅವರೆಲ್ಲಿಯಾದರೂ ಇದ್ದಾರೇನು?

ಭಗವಂತ ಹೇಳಿದ:

> ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।
> ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥

"ತ್ರಿಗುಣಗಳ ಹೊರತಾಗಿ ಕಾರ್ಯಕಾರಿಯಾದವರು ಜಗತ್ತಿನಲ್ಲಿ ಬೇರೆ ಯಾರೂ ಇಲ್ಲವೆಂಬುದನ್ನೂ, ಗುಣಗಳಿಗಿಂತ ಮೇಲ್ಪಟ್ಟವನು ಯಾರುಂಟೆಂಬುದನ್ನೂ, ಯಾವಾತನು ಚೆನ್ನಾಗಿ ಕಂಡುಕೊಂಡಿರುತ್ತಾನೋ ಅವನು ಈಶ್ವರಸಾನ್ನಿಧ್ಯವನ್ನೈದುತ್ತಾನೆ".

ಇಲ್ಲಿ ಒಂದು ವಿಚಾರ ಪ್ರಸಕ್ತವಾಗಿದೆ. ತ್ರಿಗುಣಗಳನ್ನು ಮೀರಬೇಕು–ಅತೀತನಾಗಬೇಕು–ಎಂಬುದು ಸ್ವಾಮಿಯ ಉಪದೇಶ. ಒಳ್ಳೆಯದು. ಆ ಮೀರುವುದೆಂಬುದೂ ಒಂದು ಗುಣದಿಂದ ಅಲ್ಲವೆ? ಎಂದರೆ, ಒಂದು ಬಗೆಯ ಸಾಮರ್ಥ್ಯದಿಂದ ಅಲ್ಲವೆ? ಆ ಶಕ್ತಿ ಸಾಮರ್ಥ್ಯವು ಗುಣವಲ್ಲವೆ? ಅದೆಂಥ ಗುಣ?

ಅದು ಸತ್ತ್ವಗುಣ, ಸತ್ತ್ವದ ಆಧಿಕ್ಯ. ಸತ್ತ್ವಾಧಿಕ್ಯದಿಂದ ಪಡೆಯಲಾಗುವ ಉತ್ತಮ ದಶೆ ಒಂದುಂಟಷ್ಟೆ? ಆ ದಶೆಯ ಗುಣ ಯಾವುದು? ಅದೂ ಸತ್ತ್ವವೇ. ಸತ್ತ್ವವನ್ನು ಸತ್ತ್ವೋನ್ನತಿಯಿಂದ ಪಡೆಯುವುದು. ಹಾಗೆಂದರೇನು?

ಸತ್ತ್ವ ಎರಡು ವಿಧ: ಒಂದು ರಜಸ್ಸು ತಮಸ್ಸುಗಳೊಡನೆ ಇಷ್ಟೋ ಅಷ್ಟೋ ಸಹವಾಸದಲ್ಲಿರುವುದು; ಇನ್ನೊಂದು ರಾಜಸತಾಮಸಗಳ ಸ್ಪೃಕ್ಕೇ ಇಲ್ಲದೆ ತಾನೇ ತಾನಾಗಿ ಸಂಪೂರ್ಣವಾಗಿರುವುದು. ಮೊದಲನೆಯದು ಮಿಶ್ರಸತ್ತ್ವ ಅಥವಾ ಪ್ರಾಕೃತ ಸತ್ತ್ವ.

ಎರಡನೆಯದು ಶುದ್ಧಸತ್ತ್ವ ಅಥವಾ ಬ್ರಾಹ್ಮೀಸತ್ತ್ವ. ಮಿಶ್ರಸತ್ತ್ವವನ್ನು ಮಿಶ್ರಿತಾಂಶಗಳಿಂದ ಬೇರ್ಪಡಿಸಿ ಶುದ್ಧಗೊಳಿಸಿ ಬಲಪಡಿಸಿದಾಗ ಅದು ಬ್ರಾಹ್ಮೀದಶೆಗೆ ಯುಕ್ತವಾಗುತ್ತದೆ.

ಇಲ್ಲಿ "ದಾಟಬೇಕು", "ಮೀರಬೇಕು", "ಅತೀತನಾಗಬೇಕು" –ಎಂದು ಹೇಳುವುದು ರಜಸ್ಸು ತಮಸ್ಸುಗಳನ್ನು ಮಾತ್ರವೇ ಅಲ್ಲ. ಆ ಗುಣಗಳೊಡನೆ ಸಂಪೃಕ್ತವಾಗಿ ಶಬಲಿತವಾಗಿರುವ ಸತ್ತ್ವಾಂಶಕ್ಕೂ ಈ ಉಪದೇಶ ಅನ್ವಯಿಸುತ್ತದೆ. ಬ್ರಹ್ಮಾನುಭವಕ್ಕೆ ಬೇಕಾದದ್ದು ಸತ್ತ್ವತನ್ಮಾತ್ರ. ಶುದ್ಧಸತ್ತ್ವದ ರೂಪವನ್ನು ಮುಂದೆ ಹದಿನೇಳನೆಯ ಅಧ್ಯಾಯದಲ್ಲಿ ವಿವರಿಸುವುದಾಗುತ್ತದೆ:

> ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ ॥

ಈಗ, ಹದಿನಾಲ್ಕನೆಯ ಅಧ್ಯಾಯದಲ್ಲಿ ಮುಂದೆ ಹೋಗೋಣ.

> ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
> ಜನ್ಮಮೃತ್ಯುಜರಾದುಃಖೈಃ ವಿಮುಕ್ತೋಽಮೃತಮಶ್ನುತೇ ॥

"ತ್ರಿಗುಣಗಳು ದೇಹದಲ್ಲಿ ಹುಟ್ಟಿದವು. ದೇಹಿಯಾದ ಆತ್ಮನು ಅವುಗಳನ್ನು ದಾಟಿ ಮುಂದಕ್ಕೆ ಹೋದರೆ ಎಲ್ಲ ದುಃಖದುರಿತಗಳಿಂದಲೂ ಬಿಡುಗಡೆ ಪಡೆದು ಅಮೃತವನ್ನು ಸೇರುತ್ತಾನೆ".

ಇದರ ಮೇಲೆ ಅರ್ಜುನ ಕೇಳಿದ: "ಪ್ರಭುವೆ, ಗುಣಾತೀತನ ಗುರುತುಗಳೇನು? ಅವನ ನಡವಳಿಕೆ ಎಂಥಾದ್ದು?"

ಈಗ ಭಗವಂತನು ತ್ರಿಗುಣಗಳನ್ನು ಗೆದ್ದು ಮೀರುವ ಉಪಾಯವನ್ನು ಸೂಚಿಸುತ್ತಾನೆ:

> ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
> ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥

"ಪ್ರಕಾಶವೇ ಸತ್ತ್ವ ಗುಣ, ಪ್ರವೃತ್ತಿಯೇ ರಜಸ್ಸು, ಮೋಹವೇ ತಮಸ್ಸು–ಈ ಮೂರರಲ್ಲಿ ಯಾವುದು ತನ್ನ ಸುತ್ತಮುತ್ತ ಕೆಲಸ ಮಾಡ ಹೊರಟರೂ ಅದನ್ನು ತತ್ತ್ವಜ್ಞಾನಿಯು ದ್ವೇಷಿಸುವುದೂ ಇಲ್ಲ; ಕೆಲಸ ಮಾಡದೆ ಇದ್ದದ್ದನ್ನು ಬೇಕೆನ್ನುವುದೂ ಇಲ್ಲ".

ಉದಾಸೀನವದಾಸೀನಃ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತನ್ತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥

ಅವನು ಉದಾಸೀನನಂತೆ ಇರುತ್ತಾನೆ. ಉದಾಸೀನ "ನಾಗಿ" ಅಲ್ಲ; ಉದಾಸೀನ "ನಂತೆ". ಇಲ್ಲಿ (ವತ್) "ಅಂತೆ" ಎಂಬುದು ಜ್ಞಾಪಕಾರ್ಹವಾದದ್ದು. ಉದಾಸೀನನಾಗಿರುವುದು ಎಂದರೆ "ಅಂತರಂಗದಲ್ಲಿ ಲೋಕಕಾರುಣ್ಯವಿಲ್ಲದೆ, ಧರ್ಮಾಸಕ್ತಿಯಿಲ್ಲದೆ" ಎಂದಾಗುತ್ತದೆ. ಹಾಗಿರಬಾರದು. ಹಾಗಿರುವುದು ಎಂದು ಅರ್ಥಮಾಡಿಕೊಂಡರೆ ಹಿಂದೆ ಭಗವಂತನು ಮಾಡಿದ ಕರ್ಮಕರ್ತವ್ಯತೆಯ ಉಪದೇಶಕ್ಕೆ ವಿರೋಧವಾಗುತ್ತದೆ. ಉದಾಸೀನನಿಗೆ ಕರ್ತವ್ಯವೆಂಬುದುಂಟೆ? ಅವನು ಕರ್ತವ್ಯವೆಂಬುದನ್ನು ಅಂಗೀಕರಿಸಿಕೊಳ್ಳದವನು. ಕರ್ತವ್ಯವನ್ನು ಶ್ರದ್ಧಾಸಕ್ತಿಗಳಿಂದ ಮಾಡಬೇಕು; ಆದರೆ ಫಲಾಫಲವಿಷಯದಲ್ಲಿ ಅಪೇಕ್ಷೆಯಿಲ್ಲದೆ ಉಪೇಕ್ಷೆಯಿರಬೇಕು. ಇದು ಉದಾಸೀನ "ವತ್" ಎಂಬುದರಲ್ಲಿ "ವತ್" ಪ್ರತ್ಯಯದ ಭಾವ. ಅಂತರಂಗದಲ್ಲಿ ವಿಕಾರ ಪಡೆಯದೆ ಇರಬೇಕು. ಉದಾಸೀನನ ಮನಸ್ಸು ಹೇಗೆ ನಿರ್ವಿಕಾರವೋ ಹಾಗೆ ಫಲವಿಷಯದಲ್ಲಿ ನಿರ್ವಿಕಾರಿಯಾಗಿರುವವನು ತತ್ತ್ವಜ್ಞ. ಅವನ ಮನಸ್ಸು ತ್ರಿಗುಣಚೇಷ್ಟಿತಿಗಳಿಂದ ವಿಚಲಿಸುವುದಿಲ್ಲ. ಸಾಮಾನ್ಯ ಜನರು ಗುಣವಿಕಾರಗಳಿಗೆ ದಾಸರಾಗಿ ಅಲುಗಾಡಿದಂತೆ ಅವನು ಅಲುಗಾಡುವುದಿಲ್ಲ. ಹುಚ್ಚಾಸ್ಪತ್ರೆಯಲ್ಲಿರುವವರ ಗೋಳಾಟವನ್ನೂ ನಗು ಕೇಕೆಗಳನ್ನೂ ಹರಟೆ ಹಾಡುಗಳನ್ನೂ ಕೇಳಿದ ಹುಚ್ಚನಲ್ಲದವನು– ಅಥವಾ ತಾನು ಹುಚ್ಚನಲ್ಲವೆಂದು ನಂಬಿಕೊಂಡಿರುವವನು–ಅದೆಲ್ಲ ಹುಚ್ಚಾಟವೆಂದೂ ಆ ಮೆದುಳಿನ ಹುಳು ಅವನನ್ನು ಹಾಗೆ ಆಡಿಸುತ್ತದೆಯೆಂದೂ ಹೇಗೆ ಭಾವಿಸುತ್ತಾನೋ, ಹಾಗೆ ಗುಣಾತೀತನು ಲೋಕಜನರ ಉದ್ರೇಕ ಸಂಭ್ರಮಗಳನ್ನು ನೋಡಿ– "ಅದು ಪ್ರಕೃತಿ ಆಡಿಸುವ ಆಟ, ಪ್ರಕೃತಿಗುಣದ ಹುಳು ತಲೆಹೊಕ್ಕಿದೆ" ಎಂದುಕೊಂಡು ಕದಲದೆ ಇರುತ್ತಾನೆ.

ಈ ಮನೋವೃತ್ತಿ ಬರುವುದು ಹೇಗೆ? ಸಂತತವಾದ ಬ್ರಹ್ಮಸ್ಮೃತಿ ಬ್ರಹ್ಮ ಸಾನ್ನಿಧ್ಯಾಭ್ಯಾಸಗಳಿಂದ:

ಬ್ರಹ್ಮಣೋ ಹಿ ಪ್ರತಿಷ್ಠಾಽಹಮ್ ಅಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾನ್ತಿಕಸ್ಯ ಚ ॥

“ಶ್ರೀಕೃಷ್ಣಭಗವಂತನೇ ಪರಬ್ರಹ್ಮದ ಪ್ರತ್ಯಕ್ಷ ಮೂರ್ತಿ. ವಿಕಾರವಿನಾಶಗಳೊಂದೂ ಇಲ್ಲದ ಪರಮಸತ್ತ್ವ ಅವನು; ಅವನೇ ಶಾಶ್ವತಧರ್ಮದ ಮೂಲಸ್ಥಾನ; ಅಖಂಡಾನಂದದ ನಿರಂತರ ಸ್ರವಂತಿ (ಊಟೆ)”.

ಇದನ್ನು ಸಂತತವಾಗಿ ಮನಸ್ಸಿನಲ್ಲಿ ಧರಿಸಿದವನಿಗೆ ತ್ರಿಗುಣಗಳೂ, ಅವು ಉದ್ರೇಕ ಪಡಿಸುವ ಕಾಮಕ್ರೋಧ ರಾಗದ್ವೇಷಗಳೂ, ಅವುಗಳಿಂದ ಉತ್ಪನ್ನವಾಗುವ ವಿಕಾರ ಚೇಷ್ಟೆಗಳೂ ಎಲ್ಲವೂ ಆತ್ಮೇತರವೆಂಬುದು ಸ್ಪಷ್ಟವಾಗಿ ತೋರುತ್ತ, ಅವನ ದೃಷ್ಟಿಯು ಧರ್ಮವೊಂದರಲ್ಲೇ ನಿವಿಷ್ಟವಾಗಿ, ಕ್ರಮೇಣ ಆತ್ಮಸಂಯಮಾಭ್ಯಾಸವಾಗಿ, ಶುದ್ಧ ಸತ್ತ್ವದ ಪರಮೋನ್ನತಿಯಿಂದ ಅವನಿಗೆ ಪರಮಾತ್ಮಸಂದರ್ಶನವಾಗುತ್ತದೆ.

ವ್ಯಾಧಿಯ ಸ್ವರೂಪ ತಿಳಿದ ಬಳಿಕ ಚಿಕಿತ್ಸೆ ಸುಲಭವಾಗುವಂತೆ ತ್ರಿಗುಣತಂತ್ರ ತಿಳಿದ ಮೇಲೆ ಆತ್ಮಚಿಕಿತ್ಸೆ ಸುಲಭವಾಗುತ್ತದೆಂಬುದು ಭಗವಂತನ ಆಶಯವೆನಿಸುತ್ತದೆ ಗೀತಾವಾಕ್ಯದಿಂದ. ನಮಗೆಲ್ಲ ಹಾಗಾಗಲಿ ಶ್ರೀಕೃಷ್ಣಕೃಪೆಯಿಂದ.

ಸತ್ತ್ವರಜಸ್ತಮಸಂಗತಿ- ।
ವಿಸ್ತರ ಜಗಮ್, ಅದರ ರುಚಿತೆ ಜೀವಕೆ ಬಂಧಂ ॥
ಸತ್ತ್ವೋದ್ಧೃತಿಯಭ್ಯಸನದೆ ।
ನಿಸ್ತ್ರಿಗುಣಂ ಪ್ರಕೃತಿತಂತ್ರಬಂಧವಿಗಳನಂ ॥

ಸಂಗ್ರಹ

ಸತ್ತ್ವರಜ ತಮಗಳೆಂಬ ಗು- ।
ಣತ್ರಯದಿಂ ಪ್ರಕೃತಿ ಜೀವಿಗಂ ಜಗಕಂ ಗಂ- ॥
ಟಿಟ್ಟು ಕೃತ್ರಿಮದೆ ಪರಾ- ।
ತ್ಮಾಪ್ತಿಗೆ ತಡೆಯಪ್ಪ ಬಗೆ ಚತುರ್ದಶಗೀತಂ ॥

ರಸಿಕಸುಹೃದುಪೇಯಂ ರಾಧಿಕಾಭಾಗಧೇಯಂ ।
ಶ್ರುತಿಶತಪರಿಗೇಯಂ ಸರ್ವದಾ ಸತ್ಸಹಾಯಂ ॥

ಶುಭಗುಣಸಮವಾಯಂ ಸಚ್ಚಿದಾನಂದಕಾಯಂ ।
ಶರಣಜನವಿಧೇಯಂ ಕೃಷ್ಣನಸ್ಮತ್ಸಖಾಯಂ ॥

ಅಥ ಪುರುಷೋತ್ತಮಯೋಗೋ ನಾಮ ಪಂಚದಶೋಽಧ್ಯಾಯಃ

ಶ್ರೀಭಗವಾನುವಾಚ-

ಊರ್ಧ್ವಮೂಲಮಧಶ್ಶಾಖಮಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್
॥ ೧ ॥

ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ
ಗುಣಪ್ರವೃದ್ಧಾ ವಿಷಯಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ
ಕರ್ಮಾನುಬಂಧೀನಿ ಮನುಷ್ಯಲೋಕೇ
॥ ೨ ॥

ನ ರೂಪಮಸ್ಯೇಹ ತಥೋಪಲಭ್ಯತೇ
ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲ-
ಮಸಂಗಶಸ್ತ್ರೇಣ ದೃಢೇನ ಛಿತ್ವಾ
॥ ೩ ॥

ತತಃ ಪದಂ ತತ್ಪರಿಮಾರ್ಗಿತವ್ಯಂ
ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ
ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ
॥ ೪ ॥

ನಿರ್ಮಾನಮೋಹಾ ಜಿತಸಂಗದೋಷಾ
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।

ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈ-
ರ್ಗಚ್ಛಂತ್ಯಮೂಢಾಃ ಪದಮವ್ಯಯಂ ತತ್

॥ ೫ ॥

ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ಗತ್ವಾನ ನಿವರ್ತಂತೇ ತದ್ಧಾಮ ಪರಮಂ ಮಮ

॥ ೬ ॥

ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
ಮನಷ್ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ

॥ ೭ ॥

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್

॥ ೮ ॥

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ

॥ ೯ ॥

ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನುಪಶ್ಯಂತಿ ಜ್ಞಾನಚಕ್ಷುಷಃ

॥ ೧೦ ॥

ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಮ್ ।
ಯತಂತೋಽಪ್ಯಕೃತಾತ್ಮಾನೋ ನೈನಂ ಪಶ್ಯಂತ್ಯಚೇತಸಃ

॥ ೧೧ ॥

ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್

॥ ೧೨ ॥

ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ ।
ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ

॥ ೧೩ ॥

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್

॥ ೧೪ ॥

ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ
ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ
ವೇದಾಂತಕೃದ್ವೇದವಿದೇವ ಚಾಹಮ್

॥ ೧೫ ॥

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ

॥ ೧೬ ॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ

॥ ೧೭ ॥

ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ

॥ ೧೮ ॥

ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ

॥ ೧೯ ॥

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ

॥ ೨೦ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಪುರುಷೋತ್ತಮಯೋಗೋ ನಾಮ ಪಂಚದಶೋಽಧ್ಯಾಯಃ

ಪರಾಕೃತನಮದ್ಬಂಧಂ ಪರಂ ಬ್ರಹ್ಮ ನರಾಕೃತಿ ।
ಸೌಂದರ್ಯಸಾರಸರ್ವಸ್ವಂ ವಂದೇ ನಂದಾತ್ಮಜಂ ಮಹಃ ॥

–ಶ್ರೀಮಧುಸೂಧನಸರಸ್ವತೀ

ಸೂಚನೆ

ಅಶ್ವತ್ಥದಂತೆ ಜಟಿಲಂ ।
ವಿಶ್ವದ ಸಂಸಾರವೃಕ್ಷಮಂತು ವಿಶಾಲಂ ॥
ನಶ್ವರಮದು ಶಾಖೆಗಳೊಳ್ ।
ಶಾಶ್ವತಮದು ಮೂಲಕಂದದೊಳಗಿದು ಚಿತ್ರಂ ॥

ಸಾರಾಂಶ

ನಮ್ಮ ಈಗಿನ ಜೀವನಸಂದರ್ಭಗಳು ನಾವೇ ಉಂಟುಮಾಡಿಕೊಂಡವೆಂಬುದನ್ನೂ ಈಗಿನ ನಡವಳಿಕೆಯೇ ಭವಿಷ್ಯತ್ತನ್ನು ನಿರ್ಣಯಮಾಡತಕ್ಕದ್ದೆಂಬುದನ್ನೂ ಮರೆತು, ಮನಸ್ಸು ಬಂದಂತೆಲ್ಲ ನಡೆಯುತ್ತೇವೆ. ಸಂಸಾರಮೂಲವು ಬ್ರಹ್ಮದಲ್ಲಿರುವುದೆಂಬುದನ್ನು ಸುಂದರವಾದ ರೂಪಕವೊಂದರ ಮೂಲಕ ಸ್ವಾಮಿ ಉಪದೇಶ ಮಾಡಿದ್ದಾನೆ. ಬ್ರಹ್ಮಜನ್ಯವಾದ ಸಂಸಾರವನ್ನು ಕಲುಷಿತ ಮಾಡುವವರು ನಾವು. ಆ ಕಲುಷಸಂಬಂಧದಿಂದ ಬಿಡುಗಡೆ ಅಸಂಗಾಭ್ಯಾಸದಿಂದ ಸಾಧ್ಯ. ಅಸಂಗದಿಂದಿರುವವನಿಗೆ ಜಗತ್ತು ಭಾರವಾಗದೆ ವಿನೋದಸ್ಥಾನವಾಗುತ್ತದೆ.

ಪ್ರಕರಣ ೧೬

ಅಧ್ಯಾಯ ೧೫ - ಪುರುಷೋತ್ತಮಯೋಗವೆಂಬ ಅಶ್ವತ್ಥಮೂಲೋಪಾಸನಯೋಗ

ಪೂರ್ವಧ್ಯಾಯದ ಪರಿಸಮಾಪ್ತಿಯಲ್ಲಿ ಭಗವಂತನು ತ್ರಿಗುಣತಂತ್ರದಿಂದ ಜೀವನು ಪಾರಾಗುವ ಪರಮೋಪಾಯವನ್ನು ಸೂಚಿಸುತ್ತ, ಕಡೆಯಲ್ಲಿ, ತಾನೇ–ಎಂದರೆ ಪರಮಾತ್ಮನೇ–ಧರ್ಮಕ್ಕೆ ಮೂಲಸ್ಥಾನವೆಂದು ಹೇಳಿದನಲ್ಲವೆ?

> ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾನ್ತಿಕಸ್ಯ ಚ ॥

ಪುರುಷಾರ್ಥಗಳಲ್ಲಿ ಮೊದಲನೆಯದು ಧರ್ಮ, ಕೊನೆಯುದು ಮೋಕ್ಷ. ಎರಡಕ್ಕೂ ಬ್ರಹ್ಮವೇ ನೆಲೆಮನೆ.

> ಬ್ರಹ್ಮಣೋ ಹಿ ಪ್ರತಿಷ್ಠಾಽಹಮ್ ॥

ಬ್ರಹ್ಮವೇ ಜಗದ್ವ್ಯವಸ್ಥೆಯಲ್ಲಿ ಧರ್ಮವಾಗಿ ರೂಪಗೊಂಡಿದೆ ಎಂದು ತಾತ್ಪರ್ಯ. ಬ್ರಹ್ಮವೇ ಧರ್ಮವೆಂಬುದು ಹೇಗೆ? ಅದನ್ನು ಈಗ ಸ್ವಾಮಿ ವಿವರಿಸುತ್ತಾನೆ.

ಧರ್ಮವೆಂಬುದು ಒಂದು ಸಂಬಂಧವಿಧಾನ. ಸಂಬಂಧವುಂಟಾಗಲು ಎರಡು ವಸ್ತುಗಳಿರಬೇಕು. ರಾಬಿನ್‌ಸನ್ ಕ್ರೂಸೊ (Robinson Crusoe) ಕಥೆಯಲ್ಲಿಯ ಮನುಷ್ಯನಂತೆ ಒಬ್ಬಂಟಿಯಾಗಿರುವ ಕಡೆ "ಸಂಬಂಧ" ಎಂಬ ಮಾತಿಗೆ ಅವಕಾಶವೇ ಇಲ್ಲ. ಇಬ್ಬರಾದರೂ ಇದ್ದರೆ ಸಂಬಂಧ. ಒಂದು ನಿರ್ಜನದ್ವೀಪದಲ್ಲಿ ಹೇಗೋ ಏಕಾಕಿಯಾಗಿ ಬಂದು ಸೇರಿದವನು ಕೂಡ ಸ್ನಾನಭೋಜನಾದಿಗಳ ಸಮಯದಲ್ಲಿ ತನ್ನನ್ನು ತಾನೇ ಇಬ್ಭಾಗವಾಗಿ ಎಣಿಸಿಕೊಂಡು, "ನನ್ನ ಮೈಕೊಳಕಾಗಿದೆ, ತೊಳೆದುಕೊಳ್ಳಬೇಕು" ; "ನನ್ನ ಹೊಟ್ಟೆ ಹಸಿಯುತ್ತಿದೆ, ಅದಕ್ಕೆ ಊಟ ಹುಡುಕಬೇಕು" –ಎಂದು ಚಿಂತಿಸುವಾಗ, ತನ್ನ

ಅಂಗಾಂಗಗಳನ್ನು ತಾನು ಎಂಬುದರಿಂದ ಬೇರೆಮಾಡಿಕೊಂಡು ವಸ್ತುವೆರಡನ್ನು ಕಾಣುತ್ತಾನೆ. ಆಗ ತಾನೆಂಬುದಕ್ಕೂ ತನ್ನ ಮೈಗೂ ಸ್ಪರ್ಶೇಂದ್ರಿಯದಿಂದ ಸಂಬಂಧ; ತಾನೆಂಬುದಕ್ಕೂ ತನ್ನ ಹೊಟ್ಟೆಗೂ ಕ್ಷುದ್ಬಾಧೆಯ ಮೂಲಕ ಸಂಬಂಧ. ಹೀಗೆ ಸಂಬಂಧಗಳು ವಸ್ತುಗಳೆರಡರ ನಡುವೆ ಇರುತ್ತವೆ. ಆ ಸಂಬಂಧ ಹೇಗಿದ್ದರೆ ಚೆನ್ನವೋ ಹಾಗಿರುವಾಗ ಅದು ಧರ್ಮವೆನಿಸುತ್ತದೆ. ಧರ್ಮವೆಂಬ ಸಂಬಂಧದಲ್ಲಿ ಒಂದು ಕಡೆ ಜೀವ, ಇನ್ನೊಂದು ಕಡೆ ಜಗತ್ತು ಹೀಗೆ ಎರಡು ವಸ್ತುಗಳು ಸಂಗತಗಳಾಗಿವೆ. ಎರಡನ್ನೂ ಧರಿಸುವುದು ಧರ್ಮ.

ಈ ಸಂಗತಿಯನ್ನು ಬೋಧಿಸುವುದರಲ್ಲಿ ಭಗವಂತ ಒಂದು ರೂಪಕದ ಉಪಾಯವನ್ನು ಉಪಯೋಗಿಸಿದ್ದಾನೆ. ರೂಪಕವೆಂಬುದು ಒಂದು ಬಗೆಯ ವಾಕ್ಯಾಲಂಕಾರ. ವಾಕ್ಯದಲ್ಲಿ ಅಲಂಕಾರವೆಂದರೆ ಒಂದು ಅಪರಿಚಿತವಾದ ಅಥವಾ ಸ್ವಲ್ಪಪರಿಚಿತವಾದ ವಸ್ತುವಿನ ಸ್ವರೂಪವನ್ನು ವಿಶದಪಡಿಸುವುದಕ್ಕೋಸ್ಕರ ಅದಕ್ಕೆ ಇನ್ನೊಂದು ಬಹು ಪರಿಚಿತವಾದ ವಸ್ತುವಿನ ಹೋಲಿಕೆಯನ್ನು ಕೊಡುವುದು. ಅಂಥಾ ಹೋಲಿಕೆಯ ಸಂದರ್ಭದಲ್ಲಿ ಪ್ರಸ್ತುತವಾದ ಎರಡು ವಸ್ತುಗಳಿಗೂ ಭೇದವನ್ನು ತೋರಿಸದೆ, ಒಂದೇ ಇನ್ನೊಂದು ಎಂಬಂತೆ ಮಾತನ್ನು ಉಪಯೋಗಿಸಿದ್ದರೆ ಅದು ರೂಪಕಾಲಂಕಾರ (Metaphor).

> ಶ್ರೀವಧುವಿನಂಬಕ ಚಕೋರಕಂ... ।
> ದೇವಪುರ ಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ ॥

ಇದು ರೂಪಕ. ಇಲ್ಲಿ ಲಕ್ಷ್ಮೀರಮಣನ (ಆಸ್ಯ) ಮುಖದಲ್ಲಿ ಚಂದ್ರಧರ್ಮಗಳನ್ನೆಲ್ಲ ತೋರಿಸಿ, ಅದು ಚಂದ್ರನೆಂದು ಸಾಧಿಸಿದೆ.

ರೂಪಕದಲ್ಲಿ "ಅಭೇದ" "ತಾದ್ರೂಪ್ಯ" ಮೊದಲಾದ ಪ್ರಭೇದಗಳುಂಟು. ಇಲ್ಲಿ ನಾವು ಆ ಅಲಂಕಾರಶಾಸ್ತ್ರದ ಸೂಕ್ಷ್ಮಪ್ರಸಂಗಗಳಿಗೆ ಹೋಗಬೇಕಾದದ್ದಿಲ್ಲ. ನಮಗೆ ಪ್ರಕೃತವಾದದ್ದಿಷ್ಟು: ಚೆನ್ನಾಗಿ ಗೊತ್ತಿಲ್ಲದ ವಸ್ತುವಿಗೆ ಒಂದು ಗೊತ್ತಾದ ರೂಪವನ್ನು ಕೊಡುವ ಮಾತಿನ ಬಗೆ ರೂಪಕ. ಜೀವ, ಧರ್ಮ, ಈಶ್ವರ–ಇವು ಅಪ್ರತ್ಯಕ್ಷವಾದ ವಸ್ತುಗಳು. ಅವುಗಳ ಸ್ವರೂಪವೆಂಥಾದ್ದೆಂಬುದನ್ನು ನಮ್ಮ ಮನಸ್ಸಿಗೆ ಪ್ರತ್ಯಕ್ಷಪಡಿಸುವುದಕ್ಕೋಸ್ಕರ ನಮಗೆ ಪ್ರತ್ಯಕ್ಷವಸ್ತುವಾಗಿರುವ ಒಂದು ವೃಕ್ಷದ ರೂಪದಲ್ಲಿ ಆ ತತ್ತ್ವಗಳನ್ನು ಚಿತ್ರಿಸಿದ್ದಾನೆ ಸ್ವಾಮಿ:

ಊರ್ಧ್ವಮೂಲಮಧಶ್ಶಾಖಂ ಅಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥

"ಒಂದು ಅಶ್ವತ್ಥದ ಮರವಿದೆ. ಅದು ಎಂದೆಂದಿಗೂ ನಾಶವಾಗದ್ದು. ಅದರ ಬೇರುಗಳು ತಲೆಯ ಕಡೆ ಇವೆ; ಕೊಂಬೆಗಳು ಕಾಲಿನ ಕಡೆ. ಅದರ ಎಲೆಗಳೇ ವೇದಗಳು. ಯಾರು ಅದನ್ನು ಬಲ್ಲನೋ ಅವನು ವೇದವನ್ನು ಬಲ್ಲವನು".

ಇದು ತಲೆಕೆಳಗಾದ, ಬುಡಮೇಲಾದ ಮರವಂತೆ ! ಈ ಮರದ ವೈಶಿಷ್ಟ್ಯವನ್ನು ನೋಡಿರಿ. ಇದರ ಬೇರು ಮೂಲ ಮೇಲುಗಡೆ ಎಲ್ಲೋ !–ನಮ್ಮ ಕೈಗೆ, ಕಣ್ಣಿಗೆ ಸಿಕ್ಕುವಂತಿಲ್ಲ. ಕೊಂಬೆರೆಂಬೆಗಳು ಕೆಳಗಡೆ–ನಮಗೆಟುಕುವಂತೆ. ಎಂದರೆ ಜಗತ್ತಿನ ಸಮಸ್ತ ಸಾಮಗ್ರಿಯೂ ಈ ವೃಕ್ಷದ ಕೊಂಬೆರೆಂಬೆಗಳು. ಈ ವೃಕ್ಷವನ್ನು "ಅವ್ಯಯಂ ಪ್ರಾಹುಃ". ಇದು ಎಂದಿಗೂ ವಿಕಾರಪಡದೆ ಇರುವುದು; ನಷ್ಟವಾಗದೆ ಇರುವುದು; ಏಕಾಕಾರವಾಗಿರತಕ್ಕದ್ದು. ವೇದಗಳೇ ಈ ಮರದ ಎಲೆಗಳು. ಇದರ ಸೂಕ್ಷ್ಮವನ್ನು ಯಾರು ತಿಳಿದಿದ್ದಾನೋ ಅವನು ಎಲ್ಲವನ್ನೂ ತಿಳಿದವನು.

ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಗುಣಪ್ರವೃದ್ಧಾ ವಿಷಯಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ ಕರ್ಮಾನುಬಂಧೀನಿ ಮನುಷ್ಯಲೋಕೇ ॥

"ಆ ಮರದ ಕೊಂಬೆಗಳು ಮೇಲಕ್ಕೂ ಕೆಳಕ್ಕೂ ಚಾಚಿಕೊಂಡಿವೆ. ಆ ಮರಕ್ಕೆ ಸತ್ತ್ವರಜಸ್ತಮಗಳೆಂಬ ಗುಣಗಳೇ ಅಭಿವೃದ್ಧಿಪಡಿಸುವ ಸಾರಸಾಮಗ್ರಿ (ಗೊಬ್ಬರ). ಭೋಗ್ಯವಿಷಯಗಳೇ ಅದರ ಚಿಗುರೆಲೆ. ಅದರ ಬಿಳಲು ಬೇರುಗಳು ಮನುಷ್ಯಲೋಕದಲ್ಲಿ ಕರ್ಮಪಾಶಗಳಾಗಿ ಹಬ್ಬಿಕೊಂಡಿವೆ".

ಎಲ್ಲಿಯವರೆಗೆ ಭೂಲೋಕದಲ್ಲಿ ಸತ್ತ್ವ ರಜಸ್ಸು ತಮಸ್ಸುಗಳು ಕೆಲಸ ಮಾಡುತ್ತಿರುತ್ತವೋ ಅಲ್ಲಿಯವರೆಗೆ ಈ ವೃಕ್ಷ ಸೊಂಪಾಗಿ ಬೆಳೆಯುತ್ತಿರುತ್ತದೆ. ಈ ಮರದಲ್ಲಿ ಚಿಗುರುಗಳು "ವಿಷಯಪ್ರವಾಲಾಃ" ; ಹೊಸಹೊಸ ಭೋಗವಿಷಯಗಳು; ಇದು ಬೇಕು, ಅದು ಬೇಕು, ಮತ್ತೊಂದು ಬೇಕು ಎಂಬ ಚಪಲಗಳು; ವಿಧವಿಧವಾದ ಆಶೆಗಳು. ಈ ಮರದ ಬೇರುಗಳೂ ಬಿಳಲುಗಳೂ "ಅನುಸಂತತಾನಿ" –ಅನುಸರಿಸಿಕೊಂಡು ಹೋಗುತ್ತಿವೆಯಂತೆ.

ಯಾವುದನ್ನು? “ಕರ್ಮಾನುಬಂಧೀನಿ”. ನಮ್ಮ ಕರ್ಮಗಳಿಂದ ನಮ್ಮನ್ನೇ ಕಟ್ಟಿ ಹಾಕುತ್ತಿರುತ್ತದೆ ಈ ಮರ. “ಮನುಷ್ಯಲೋಕೇ” –ಮನುಷ್ಯನಿಗೆ ಮೃಗಪಕ್ಷಿಗಳಿಗಿಂತ ಜವಾಬ್ದಾರಿ ಹೆಚ್ಚಾದದ್ದರಿಂದ ಹಾಗೆ ಹೇಳಿದ್ದಾರೆ. ಮೇಲಣ ದೇವಲೋಕಗಳಿಗೂ ಕೆಳಗಣ ತಿರಶ್ಚೀನಲೋಕಗಳಿಗೂ ಮಧ್ಯಸ್ಥವಾದದ್ದು ಮನುಷ್ಯಲೋಕ. ಅಲ್ಲಿಂದ ಮೇಲಕ್ಕೋ ಕೆಳಕ್ಕೋ ಹೋಗುತ್ತಿರುವುದು ಮನುಷ್ಯಜೀವ.

ಜಗದ್ರೂಪವಾದ ಅಶ್ವತ್ಥವೃಕ್ಷದ ಮೂಲವು ಮನುಷ್ಯನ ಹಿಡಿತಕ್ಕೆ ಸಿಕ್ಕತಕ್ಕದ್ದಲ್ಲ. ಇದನ್ನು ತಾನು ಹೊಸದಾಗಿ ಬೆಳೆಸುವುದು ಮನುಷ್ಯನಿಗೆ ಸಾಧ್ಯವಿಲ್ಲ. ಪ್ರಕೃತಿ ಬೆಳಸುತ್ತಿದ್ದಾಳೆ ಇದನ್ನು–ತ್ರಿಗುಣಗಳಿಂದ–ಅನಾದಿಕಾಲದಿಂದ. ಅದರಲ್ಲಿಯ ಹಣ್ಣು ಮಾತ್ರ ಮನುಷ್ಯನ ನಾಲಗೆಗೆ.

“ಸಂಸಾರವೃಕ್ಷದ ಸ್ವಾರಸ್ಯಗಳನ್ನು ನೋಡಿರಿ”. “ಸಂಸಾರ” ಎಂದರೆ ಮಡದಿ ಮಕ್ಕಳು ಎಂದು ಸಂಕೋಚವಾದ ಅರ್ಥಮಾಡಬಾರದು. ಜನನಮರಣರೂಪವಾದ ಜೀವಿತನದೀ ಪ್ರವಾಹವೇ ಸಂಸಾರ. ಜೀವನಾವಸರದಲ್ಲಿ ನಮಗೆ ಯಾವ್ಯಾವುದರ ಸಂಪರ್ಕ ಉಂಟಾಗುತ್ತದೋ ಅದೆಲ್ಲ ಸಂಸಾರವೇ– “ಕರ್ಮಾನುಬಂಧೀನಿ”.

ಯಾವ ಮರವನ್ನಾದರೂ ಹೇಳಬಹುದಾಗಿತ್ತಲ್ಲ. ಅಶ್ವತ್ಥವನ್ನೇ ಏಕೆ ಹೇಳಿದರು? ವೇದಗಳ ಕಾಲದಿಂದ ಪ್ರಸಿದ್ಧವಾದದ್ದು ಈ ಹೋಲಿಕೆ. ಮಹರ್ಷಿಗಳು ಏಕೆ ಇದನ್ನು ಆರಿಸಿಕೊಂಡರು? ಸಂಸಾರಕ್ಕೆ ಉಪಮಾನ ಕೊಡಲು ಅಶ್ವತ್ಥವನ್ನೇ ಆರಿಸಿ ಕೊಂಡದ್ದರ ವಿಶೇಷವೇನು? ಇತರ ಮರಗಳಿಗಿಂತ ಅಶ್ವತ್ಥದ ಹೋಲಿಕೆ ಸಂಸಾರ ಸಂದರ್ಭಗಳಿಗೆ ಹೆಚ್ಚಾಗಿ ಹೊಂದುತ್ತದೆ. ನಾಲ್ಕು ವಿಶೇಷ ಲಕ್ಷಣಗಳಿಂದ ಕೂಡಿದೆ ಈ ಮಹಾವೃಕ್ಷ–ಎಂದು ಹೇಳಬಹುದು. ನಾಲ್ಕು ಧರ್ಮಗಳು ಅಶ್ವತ್ಥವೃಕ್ಷಕ್ಕೂ ಸಂಸಾರಕ್ಕೂ ಸಮಾನವಾಗಿವೆ:

1. **ಬಹುಕಾಲಿಕತ್ವ:** ಅಶ್ವತ್ಥವು ದೀರ್ಘಾಯುಸ್ಸುಳ್ಳದ್ದು. ಒಂದು ಪಕ್ಕ ಬಾಡುತ್ತಿದ್ದರೆ ಇನ್ನೊಂದು ಪಕ್ಕ ಚಿಗುರುತ್ತಿರುತ್ತದೆ. ಸಂಸಾರವೂ ಹಾಗೆ ಒಂದು ಕಡೆಯಲ್ಲಿಲ್ಲದಿದ್ದರೆ ಇನ್ನೊಂದು ಕಡೆ ಬೆಳೆಯುತ್ತಿರುತ್ತದೆ; ಸಂತಾನಪರಂಪರೆಯಿಂದ ದೀರ್ಘಜೀವಿ.
2. **ಬಹುವಿಸ್ತೃತತ್ವ:** ಅಶ್ವತ್ಥದ ಕೊಂಬೆ ಕವಲುಗಳೂ ಬೇರು ಬಿಳಲುಗಳೂ ಬಹುದೂರ ಹರಡಿಕೊಂಡಿರುತ್ತವೆ. ಸಂಸಾರಶಾಖೆಗಳೂ ಹಾಗೆಯೇ–ಎಲ್ಲಿಂದೆಲ್ಲಿಗೋ ಹಬ್ಬಿಕೊಂಡಿರುತ್ತವೆ.

3. **ಬಹುಗ್ರಂಥಿಲತ್ವ:** ಅಶ್ವತ್ಥದಲ್ಲಿ ಕೊಂಬೆಗಳೂ ಬಿಳಲುಗಳೂ ಸೊಟ್ಟುಸೊಟ್ಟಾಗಿ ಜಡೆಜಡೆಯಾಗಿ ಗಂಟುಗಂಟಾಗಿರುತ್ತವೆ. ಸಂಸಾರದ ಸಿಕ್ಕುಗಳೂ ತೊಡಕುಗಳೂ ಹಾಗೇ. ಅದೇ ಋಣಾನುಬಂಧದ ಎಳೆತಸೆಳೆತಗಳು.
4. **ಬಹುಪೋಷಕತ್ವ:** ಅಶ್ವತ್ಥವು ಬಗೆಬಗೆಯ ಪಕ್ಷಿಗಳಿಗೂ ಕ್ರಿಮಿಕೀಟಗಳಿಗೂ ಆಸರೆಕೊಟ್ಟು ಕಾಪಾಡುತ್ತದೆ. ಸಂಸಾರವೂ ಹಾಗೆ. ಬಂಧುಮಿತ್ರ ಅತಿಥಿ ಆಗಂತುಕರಿಗೂ ನಾನಾ ವೃತ್ತಿವ್ಯಾಪಾರಕರ್ತರಿಗೂ ಆಶ್ರಯವಾಗಿ ಪೋಷಕವಾಗುತ್ತದೆ.

ಹೀಗೆ ಹೋಲಿಕೆ ಉಚಿತವಾಗಿದೆ. ಇದು ಆರ್ಷೇಯವಾದ ರೂಪಕ. ಯಜುರಾರಣ್ಯಕದಲ್ಲಿ ಹೀಗಿದೆ:

> ಊರ್ಧ್ವಮೂಲಮವಾಕ್‌ಶಾಖಮ್ । ವೃಕ್ಷಂ ಯೋ ವೇದ ಸಂಪ್ರತಿ । ನ ಸ ಜಾತು ಜನಃ ಶ್ರದ್ದಧ್ಯಾತ್ । ಮೃತ್ಯುರ್ಮಾ ಮಾರಯಾದಿತಿಃ ॥

"ಸರ್ವೋನ್ನತಭಾಗದಲ್ಲಿ ಬುಡದ ಬೇರು, ಅಧೋಭಾಗದಲ್ಲಿ ಕೊಂಬೆಗಳು–ಹೀಗಿರುವ ಮರದ ಮರ್ಮವನ್ನು ಯಾರು ತಿಳಿದಿದ್ದಾನೋ ಅವನ ಮನಸ್ಸಿನಲ್ಲಿ ತನ್ನನ್ನು ಮೃತ್ಯು ಹೊಡೆದೀತೆಂಬ ಭಯವಿರದು. ಏಕೆಂದರೆ ಆ ವೃಕ್ಷದ ಮೂಲವಿರುವುದು ಶಾಶ್ವತ ಬ್ರಹ್ಮ ಚೈತನ್ಯದಲ್ಲಿ ಎಂದು ಅವನು ಬಲ್ಲ".

ಭಗವಂತನು ಹೇಳಿದ ಮಾತಿನ ಅಭಿಪ್ರಾಯವೂ ಇದೇ. ಈ ಜಗತ್ತು ಪರಬ್ರಹ್ಮ ವಸ್ತುವಿನಿಂದಾದದ್ದೆಂದು ತಿಳಿದಿರುವವನು ಮರಣಕ್ಕೆ ಭಯಪಡಬೇಕಾದದ್ದಿಲ್ಲ. ಕೊಂಬೆ ಬಾಡಿ ಉದುರಿ ಹೋದರೆ ಮರದ ಅಸ್ತಿತ್ವಕ್ಕೆ ಭಯವಿಲ್ಲ. ಹಾಗೆಯೇ ಮನುಷ್ಯನ ಮರಣದಿಂದ ಮೂಲಚೈತನ್ಯಕ್ಕೇನೂ ಅಪಾಯವಿಲ್ಲ. ಜ್ಞಾನಿಯು ಹೀಗೆ ಆತ್ಮದ ನಿತ್ಯತ್ವವನ್ನು ಕಂಡುಕೊಂಡಿರುತ್ತಾನೆ. ಇದೇ ಎರಡನೆಯ ಅಧ್ಯಾಯದ "ನೈನಂ ಛಿಂದಂತಿ ಶಸ್ತ್ರಾಣಿ", "ಅಚ್ಛೇದ್ಯೋಽಯಮದಾಹ್ಯೋಽಯಮ್" ಮೊದಲಾದ ವಾಕ್ಯಗಳ ತಾತ್ಪರ್ಯ. ಉಪನಿಷತ್ತುಗಳಲ್ಲಿಯೂ ಇದನ್ನೇ ಹೇಳಿದ್ದಾರೆ. ಕಠೋಪನಿಷತ್ತಿನಲ್ಲಿ ಸ್ಪಷ್ಟವಾಗಿದೆ:

> ಊರ್ಧ್ವಮೂಲೋಽವಾಕ್‌ಶಾಖ ಏಷೋಽಶ್ವತ್ಥಃ ಸನಾತನಃ ।
> ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ॥

ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ ॥

"ಮೇಲೆ ಬೇರು, ಕೆಳಗೆ ಕೊಂಬೆ. ಈ ಅಶ್ವತ್ಥವು ಶಾಶ್ವತವಾದದ್ದು. ಅದೇ ಜ್ಯೋತಿ. ಅದೇ ಬ್ರಹ್ಮ. ಅದೇ ಅಮೃತ. ಜಗತ್ತುಗಳೆಲ್ಲ ಅದನ್ನಾಶ್ರಯಿಸಿವೆ. ಅದನ್ನು ಮೀರಿದ್ದು ಯಾವುದೂ ಇಲ್ಲ".

ಹೀಗೆ ವೇದಗಳಿಂದ ಪ್ರಶಸ್ತವಾಗಿರುವ ಮಹಾವೃಕ್ಷಕ್ಕೆ ಅಶ್ವತ್ಥ ಎಂದು ಹೆಸರಿಟ್ಟಿರುವುದರ ಭಾವವೇನು? "ಶ್ವಃ" ಎಂದರೆ ನಾಳೆ. "ಶ್ವಸ್ಥ" ಎಂದರೆ ಇಂದಿರುವಂತೆ ನಾಳೆ ಇರುವುದು. "ಅಶ್ವತ್ಥ" ಎಂದರೆ ಈ ದಿನವಿರುವಂತೆ ನಾಳೆ ಇರಲಾರದ್ದು. ಒಂದು ಘಳಿಗೆ ಇರುವಂತೆ ಮರುಘಳಿಗೆ ಇರಲಾರದ್ದು–ಎಂದರೆ ಕ್ಷಣೇಕ್ಷಣೇ ಮಾರ್ಪಡುತ್ತಿರುವುದು, ಚಂಚಲವಾದದ್ದು ಎಂದರ್ಥ.

ನ ಶ್ವೋಽಪಿ ಸ್ಥಾತಾ ಇತ್ಯಶ್ವತ್ಥಃ ತಂ ಕ್ಷಣಪ್ರಧ್ವಂಸಿನಮಶ್ವತ್ಥಮ್

–ಶಾಂಕರಭಾಷ್ಯ

ಜಗತ್ತು ಎಂದರೂ ಅದೇ ಅರ್ಥ: ಚಲಿಸುತ್ತಿರುವುದು, ತಿರುಗುತ್ತಿರುವುದು, ಬದಲಾಯಿಸುತ್ತಿರುವುದು.

ಯಾವ ಬ್ರಹ್ಮವಸ್ತುವು ತತ್ತ್ವದಲ್ಲಿ–ಸ್ವಸ್ವರೂಪದಲ್ಲಿ–ಸ್ಥಿರವೋ, ಏಕಾಕಾರವೋ, ನಿರ್ವಿಕಾರಿಯೋ ಅದು ಕಾರ್ಯದಶೆಯಲ್ಲಿ ಚಲನಶೀಲ, ಬಹುರೂಪಿ, ಸಂಸಾರವಿಕಾರಿ. ಯಾವುದು ನಮ್ಮ ಕಣ್ಣಿಗೆ ಹುಟ್ಟುವಂತೆ, ಸಾಯುವಂತೆ, ನಗುವಂತೆ, ನೋವು ಪಡುವಂತೆ, ಸಾಹಸಮಾಡುವಂತೆ, ಬೇಸತ್ತಂತೆ, ಸೋತಂತೆ, ಗೆದ್ದಂತ, ನೂರಾರು ಅವಸ್ಥೆಗಳಲ್ಲಿರುವಂತೆ ಕಾಣುತ್ತಿದೆಯೋ ಅದರ ಮೂಲವಸ್ತು, ಹುಟ್ಟಿಲ್ಲದ್ದು, ಸಾವಿಲ್ಲದ್ದು, ಆಯಾಸವಿಲ್ಲದ್ದು, ಲೋಕಸಂದರ್ಭಗಳ ಹೆಚ್ಚು ಕಡಮೆಗಳಿಗೆ ಒಳಗಾಗದ್ದು, ಏಕೈಕರೂಪದಲ್ಲಿರತಕ್ಕದ್ದು, ಶಾಂತವಾದದ್ದು.

ಆ ಮೂಲವಸ್ತುವನ್ನು ನಮ್ಮ ಲಕ್ಷ್ಯಕ್ಕೆ ತರುವುದಕ್ಕಾಗಿಯೇ "ಊರ್ಧ್ವಮೂಲಮ್" ಎಂದು ಹೇಳಿರುವುದು.

ಇಲ್ಲಿ ಒಂದು ಪ್ರಶ್ನೆ: ಊರ್ಧ್ವ ಎಂದರೆ ನಮ್ಮ ತಲೆಯ ದಿಕ್ಕು–ಆಕಾಶದ ದಿಕ್ಕು–ಎಂದಲ್ಲವೆ ಅರ್ಥ? ಅದರಲ್ಲಿ ಶ್ರೇಷ್ಠವೇನು? ಮತ್ತು ಬ್ರಹ್ಮಪದಾರ್ಥ ಕೆಳಗಡೆ ಇರಲಾರದೋ? ಬ್ರಹ್ಮಕ್ಕೂ ಮೇಲು ಕೆಳಗು ಎಂಬ ತಾರತಮ್ಯ ಉಂಟೋ? ಅದು ಸರ್ವತ್ರ ಸಮವಲ್ಲವೋ?–ಎಂದು ಕೇಳಬಹುದು. ಇದಕ್ಕುತ್ತರ ಹೀಗೆ: ಬ್ರಹ್ಮವಸ್ತು ಸರ್ವಗತವಾದದ್ದು, ಅದಕ್ಕೆ ದಿಗ್ಭೇದವಿಲ್ಲ. ಸ್ಥಲವಿಭಾಗವೇ ಅದಕ್ಕಿಲ್ಲ. ಮೇಲೆ ಕೆಳಗೆ ಎಂಬ ಭೇದಗಳೆಲ್ಲ ನಮ್ಮದು–ಮನುಷ್ಯಕಲ್ಪನೆ. ನಮ್ಮ ದೃಷ್ಟಿಯಿಂದ ಯಾವುದು ಶ್ರೇಷ್ಠವೆನಿಸುತ್ತದೆಯೋ ಅದನ್ನು ನಾವು "ಮೇಲು", "ಮೇಲೆ", "ತಲೆದೆಸೆ" ಎನ್ನುತ್ತೇವೆ. ಪೂಜಾರ್ಹವಾದದ್ದನ್ನು ಉನ್ನತವಾಗಿರಿಸುವುದರಿಂದ ನಮ್ಮ ಮನಸ್ಸಿಗೇ ಒಂದು ಸಂತೋಷವಾಗುತ್ತದೆ. ವಾಸ್ತವವಾಗಿ ಬ್ರಹ್ಮಕ್ಕೆ ಮೇಲೆಂಬುದೂ ಇಲ್ಲ, ಕೆಳಗೆಂಬುದೂ ಇಲ್ಲ, ಅದು ಸರ್ವವ್ಯಾಪಿ. ನಮ್ಮ ಭಕ್ತಿಯ ತೃಪ್ತಿಗಾಗಿ ನಾವು ಅದನ್ನು ಉತ್ಕೃಷ್ಟಸ್ಥಾನದಲ್ಲಿ ಭಾವಿಸುತ್ತೇವೆ. ತೈತ್ತಿರೀಯ ಹೀಗೆನ್ನುತ್ತದೆ:

> ಸತ್ಯಂ ಜ್ಞಾನಮನನ್ತಂ ಬ್ರಹ್ಮ।
> ಯೋ ವೇದ ನಿಹಿತಂ ಗುಹಾಯಾಂ ಪರಮೇವ್ಯೋಮನ್।
> ಸೋऽಶ್ನುತೇ ಸರ್ವಾನ್ ಕಾಮಾನ್॥

ಬ್ರಹ್ಮವಸ್ತು ಅತ್ಯಂತ ರಹಸ್ಯವಾದದ್ದು; ಮಾತಿಗೂ ಮನಸ್ಸಿಗೂ ಸಹ ದೊರಕದ್ದು. ಅಂಥಾದ್ದನ್ನು ನಮಗೆ ಗುರುತುಮಾಡಿಕೊಡಬೇಕಾದರೆ ಒಂದು ಸರ್ವೋತ್ಕೃಷ್ಟಸ್ಥಾನವನ್ನು ಕೈಬೆರಳಿನಿಂದ ತೋರಿಸಬೇಕು. ಆ ದಿಗ್ದರ್ಶನದ ಮಾತು "ಗುಹಾಯಾಂ ಪರಮೇವ್ಯೋಮನ್" ಎಂಬುದು. "ಊರ್ಧ್ವಮೂಲಮ್" ಎಂಬುದರ ಭಾವವಾದರೂ ಇದೇಯೇ.

ಭಗವದ್ಗೀತೆಯಲ್ಲಿರುವ ಸಂಸಾರವೃಕ್ಷವರ್ಣನೆಯನ್ನು ಭಾಗವತಕವಿ ಇನ್ನೂ ವಿಸ್ತರಿಸಿ ಚಮತ್ಕಾರದಿಂದ ಹೇಳಿದ್ದಾನೆ. ಶ್ರೀಕೃಷ್ಣಸ್ವಾಮಿ ದೇವಕೀಗರ್ಭಸ್ಥನಾಗಿರುವಾಗ ಚತುರ್ಮುಖಬ್ರಹ್ಮಾದಿದೇವತೆಗಳು ಬಂದು ಸ್ತೋತ್ರ ಮಾಡಿದರಂತೆ: "ಭಗವಂತ, ನೀನು ಜಗದ್ರೂಪವಾದ ಸಂಸಾರವೃಕ್ಷದ ಮೂಲಬೀಜ". ಈ ವೃಕ್ಷವು ಎಂಥಾದ್ದು?

> ಏಕಾಯನೋऽಸೌ ದ್ವಿಫಲಸ್ತ್ರಿಮೂಲಶ್ಚತೂರಸಃ ಪಂಚಶಿಫಷ್ಷಡಾತ್ಮಾ।
> ಸಪ್ತತ್ವಗಷ್ಟಾವಿಟಪೋ ನವಾಕ್ಷೋ ದಶಚ್ಛದೋ ದ್ವಿಖಗೋ ಹ್ಯಾದಿವೃಕ್ಷಃ॥

ಏಕಾಯನಃ: ಒಂದೇ ಆಶ್ರಯಭೂಮಿ. ಅದು ಮೂಲಪ್ರಕೃತಿ.

ದ್ವಿಫಲಃ: ಎರಡು ಹಣ್ಣುಗಳು–ಸುಖದುಃಖರೂಪವಾದವು.

ತ್ರಿಮೂಲಃ: ಮೂರು ಬೇರುಗಳು–ಸತ್ತ್ವ, ರಜಸ್ಸು, ತಮಸ್ಸು. ತ್ರಿಗುಣಗಳೆಂಬ ಈ ಬೇರುಗಳನ್ನು ಯಾವನು ಹೊಡೆದುಹಾಕುತ್ತಾನೋ ಅವನಿಗೆ ಪ್ರಪಂಚವಿಲ್ಲ.

ಚತೂರಸಃ: ನಾಲ್ಕು ರುಚಿ–ಧರ್ಮ, ಅರ್ಥ, ಕಾಮ, ಮೋಕ್ಷ.

ಪಂಚಶಿಫ: ಐದು ಬಿಳಲುಗಳು–ಪಂಚೇಂದ್ರಿಯಗಳು.

ಷಡಾತ್ಮಾ: ಆರು ಹುಟ್ಟುಲಕ್ಷಣಗಳು (Characteristic Qualities); ಹಸಿವು, ಬಾಯಾರಿಕೆ, ಆಯಾಸ, ಮೋಹ, ಮುಪ್ಪು, ಸಾವು–ಷಡೂರ್ಮಿಗಳು.

ಸಪ್ತತ್ವಕ್: ಏಳು ತೊಗಟೆಗಳು–ಚರ್ಮ, ರಕ್ತ, ಮಾಂಸ, ಕೊಬ್ಬು, ಮೂಳೆ, ನರ, ರೇತಸ್ಸು.

ಅಷ್ಟಾವಿಟಪಃ: ಎಂಟು ಕೊಂಬೆಗಳು–ಪಂಚಭೂತಗಳು ಮತ್ತು ಮನಸ್ಸು ಬುದ್ಧಿ ಅಹಂಕಾರಗಳು–ಗೀತೆಯ “ಭೂಮಿರಾಪೋ” ಇತ್ಯಾದಿ.

ನವಾಕ್ಷಃ: ಒಂಭತ್ತು ರಂಧ್ರಗಳು (ಪೊಟ್ಟರೆ)–ಕಣ್ಣೆರಡು, ಕಿವಿಯೆರಡು, ಮೂಗೆರಡು, ಜಲಮಲದ್ವಾರಗಳೆರಡು, ಬಾಯೊಂದು.

ದಶಚ್ಛದಃ: ಹತ್ತು ಎಲೆಗಳು–ಪ್ರಾಣಾಪಾನಾದಿವಾಯುಗಳೈದು, ನಾಗ ಕೂರ್ಮಾದಿ ಉಪವಾಯುಗಳೈದು.

ದ್ವಿ ಖಗಃ: ಎರಡು ಪಕ್ಷಿಗಳು–ಜೀವಾತ್ಮ, ಪರಮಾತ್ಮ.

ಈ ಪಕ್ಷಿಗಳೂ ಸೇರಿ ಇದಿಷ್ಟು ದೊಡ್ಡ ಸಂಸಾರ, ಇದು ಜಗದಾದಿವೃಕ್ಷ. ಇಂಥ ವೃಕ್ಷವನ್ನು ನೀನು ಸೃಷ್ಟಿಮಾಡಿದೆ ಎಂದು ಬ್ರಹ್ಮಾದಿಗಳು ಕೃಷ್ಣಪರಮಾತ್ಮನನ್ನು ಸ್ತುತಿಸುತ್ತಾರೆ.

> ತ್ವಮೇಕ ಏವಾಸ್ಯ ಸತಃ ಪ್ರಸೂತಿಃ ತ್ವಂ ಸನ್ನಿಧಾನಂ ತಮನುಗ್ರಹಶ್ಚ ॥
> ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ ಪಶ್ಯಂತಿ ನಾನಾ ನ ವಿಪಶ್ಚಿತೋ ಯೇ ॥

ನೀನೊಬ್ಬನೇ ಇದಕ್ಕೆ ಉದ್ಭವಸ್ಥಾನ. ನೀನೇ ಇದಕ್ಕೆ ನೆಲೆಮನೆ. ನೀನೇ ಪರಿಪಾಲಕ. ನಿನ್ನ ಮಾಯೆಯು ಯಾರ ಮನಸ್ಸನ್ನು ಮುಸುಕಿದೆಯೋ ಅವರು ಜಗದ್ವಸ್ತುಗಳನ್ನು ಬೇರೆಬೇರೆಯೆಂದು ನೋಡುತ್ತಾರೆ. ಜ್ಞಾನಿಗಳು ಆ ಪ್ರತ್ಯೇಕತೆಯ ಭ್ರಾಂತಿಗೆ ಸಿಕ್ಕದೆ ನಿನ್ನ ಸರ್ವೈಕಾತ್ಮ್ಯವನ್ನು ಕಾಣುತ್ತಾರೆ.

ಈ ವೃಕ್ಷರೂಪಕವನ್ನು ಕುರಿತ ಪುರಾಣವಾಕ್ಯಗಳು ಇನ್ನೂ ಎಷ್ಟೋ ಇವೆ. ಶಂಕರಾಚಾರ್ಯರು ಕೆಲವನ್ನು ಉದಾಹರಿಸಿದ್ದಾರೆ. ಶ್ರೀಕೃಷನೇ ಹತ್ತನೆಯ ಅಧ್ಯಾಯದಲ್ಲಿ,

> ಅಶ್ವತ್ಥಃ ಸರ್ವವೃಕ್ಷಾಣಾಮ್ ॥

ಎಂದು ಅಶ್ವತ್ಥದ ಮಹಿಮೆಯನ್ನು ನಮಗೆ ತೋರಿಸಿಕೊಟ್ಟಿದ್ದಾನೆ. ಅಶ್ವತ್ಥವು ಅದೃಶ್ಯಬ್ರಹ್ಮದ ದೃಶ್ಯಪ್ರತೀಕ. ಈ ಭಾವನೆಯಿಂದಲೇ ಸಮಸ್ತ ಹಿಂದೂಗಳೂ ಅದನ್ನು ಪವಿತ್ರವೆಂದು ನಂಬಿ ಪೂಜೆ ಪ್ರದಕ್ಷಿಣೆಗಳಿಂದ ಸೇವಿಸುತ್ತಾರೆ, –ಪರಂಗಿಯವರ ಹಾಸ್ಯಕ್ಕೂ ಅವಕಾಶ ಮಾಡಿಕೊಟ್ಟಿದ್ದಾರೆ: "Worshipping trees, stocks and stones" ಎಂದನ್ನಿಸಿಕೊಂಡು. ಪರಂಗಿಜನ ಹೇಳಿದ್ದನ್ನು ಪರಮಪ್ರಮಾಣವೆಂದು ಗ್ರಹಿಸಿರತಕ್ಕ ನಮ್ಮವರೇ ಅವರ ಜೊತೆಗೆ ಸೇರಿಕೊಂಡು ನಮ್ಮನ್ನು ಲೇವಡಿಮಾಡಿರುವುದೂ ಉಂಟು. ಇರಲಿ; ಇದೂ ಅಶ್ವತ್ಥದ ಪ್ರಭಾವವೇ ! ಒಂದು ಕಡೆ ಒಣಗುತ್ತಿರುವುದು, ಇನ್ನೊಂದು ಕಡೆ ಚಿಗುರುತ್ತಿರುವುದು–ಇದು ಅಶ್ವತ್ಥದ ಲಕ್ಷಣ.

ಗೀತೆಯ ವಾಕ್ಯದಲ್ಲಿ ಎರಡಂಶಗಳು ನಮ್ಮ ವಿಶೇಷ ಲಕ್ಷ್ಯಕ್ಕೆ ಬರಬೇಕಾದವು:

1. "ಛಂದಾಂಸಿ ಯಸ್ಯ ಪರ್ಣಾನಿ" – "ವೇದಗಳು ಸಂಸಾರವೃಕ್ಷದ ಎಲೆಯಂತೆ!" ಹಾಗೆಂದರೇನು? ಮರದ ಬಾಳಿನಲ್ಲಿ ಎಲೆಯ ಕೆಲಸ ಅತಿಮುಖ್ಯವಾದದ್ದು. ಎಲೆಯು ಗಿಡವನ್ನು ಕಾಪಾಡುತ್ತದೆ. ವಾತಾವರಣದಿಂದ ಗಿಡದ ಬೆಳವಣಿಗೆಗೆ ಬೇಕಾದ ಸಾಮಗ್ರಿಗಳನ್ನು ಹೀರಿ ಸಂಗ್ರಹ ಮಾಡಿ ಗಿಡದ ಪೋಷಣೆಗೆ ಸಾಧನವಾಗುತ್ತದೆ. ಎಲೆಗಳನ್ನು ಸಂಪೂರ್ಣವಾಗಿ ಕಿತ್ತು ಹಾಕಿದರೆ ಚರ್ಮಸುಲಿದ ಮನುಷ್ಯನಂತಾಗಿ ಗಿಡ

ಸಾಯುತ್ತದೆ. ವೇದಗಳು ಈ ಸಂಸಾರವೃಕ್ಷಕ್ಕೆ ಸಂರಕ್ಷಕಗಳು ಹೇಗೆ? ಧರ್ಮವೇ ನಮ್ಮ ಜೀವನಕ್ಕೆ ಪೋಷಕ. ಅಂಥಾ ಧರ್ಮಕ್ಕೆ ಉಪಲಕ್ಷಣವೇ ವೇದ.

ವೇದೋಽಖಿಲಂ ಧರ್ಮಮೂಲಮ್ ॥

ಆದದ್ದರಿಂದ ಸಂಸಾರವೃಕ್ಷಕ್ಕೆ ಸಂರಕ್ಷಕವಾದದ್ದು ಅದು. ವೇದಶಾಸ್ತ್ರಗಳಿಂದ ಧರ್ಮ; ಧರ್ಮದಿಂದ ಜಗತ್ತಿನ ಸುವ್ಯವಸ್ಥೆ. ಯಾವುದು ಸಂಸಾರವೃಕ್ಷಕ್ಕೆ ಮೂಲಕಾರಣವೋ ಆ ಬ್ರಹ್ಮಚೈತನ್ಯವೇ ಧರ್ಮಕ್ಕೂ ಧರ್ಮಬೋಧಕ ಶಾಸ್ತ್ರಕ್ಕೂ ಮೂಲಕಾರಣ. ಧರ್ಮವನ್ನು ನಡಸುವುದರಿಂದಲೇ ಸಂಸಾರ ನಿಂತಿರುವುದು. ಹೀಗೆ ವೇದಗಳಿಂದಲೇ ಸಮಾಜದಲ್ಲಿ ಒಂದು ವ್ಯವಸ್ಥೆಯಿರುವುದು. ಸಮಾಜವ್ಯವಸ್ಥೆಯ ಈ ಕಟ್ಟುಪಾಡಿಲ್ಲದಿದ್ದರೆ ಸಮಾಜವು ಛಿದ್ರಛಿದ್ರವಾಗಿಹೋಗುತ್ತದೆ. ಉಪನಿಷತ್ತಿನಲ್ಲಿಯೂ ಈ ಅಭಿಪ್ರಾಯವನ್ನು ನೋಡಿದ್ದೇವೆ. ಪ್ರಪಂಚವನ್ನು ವಿರಾಟ್ಪುರುಷನು ಸೃಷ್ಟಿಮಾಡಿದ. ಸೃಷ್ಟಿಯಾದ ಜಂತುಗಳು ಒಂದನ್ನೊಂದು ಭಕ್ಷಣ ಮಾಡಲಾರಂಭಿಸಿದುವಂತೆ. ಈ ಅವ್ಯವಸ್ಥೆಯನ್ನು ನೋಡಿ ಅವನಿಗನ್ನಿಸಿತು: "ನಾನು ಇಷ್ಟೆಲ್ಲ ಕೆಲಸ ಮಾಡಿದವನು ಪೋಲೀಸಿನವರನ್ನಿಡಲು ಮರೆತುಬಿಟ್ಟೆನಲ್ಲಾ!" ಹೀಗೆಂದುಕೊಂಡು ಅವನು ಧರ್ಮವನ್ನು ಸೃಷ್ಟಿಮಾಡಿದ. ಬೃಹದಾರಣ್ಯಕೋಪನಿಷತ್ತಿನಲ್ಲಿ ಇದನ್ನು ಕಥಾರೂಪದಲ್ಲಿ ಹೇಳಿದ್ದಾರೆ. ಧರ್ಮವೇ ಜನಗಳನ್ನು ಕಾಪಾಡತಕ್ಕದ್ದು. ಆದದ್ದರಿಂದ ಇಲ್ಲಿ ಹೇಳಿದರು: "ಛಂದಾಂಸಿ ಯಸ್ಯ ಪರ್ಣಾನಿ" –ಎಂದು.

ಈ ಸಂಸಾರವೃಕ್ಷವು ಇಂಥ ಮಹಿಮೆಯುಳ್ಳದ್ದಾದರೂ ಅದನ್ನು ಕಡಿಯತಕ್ಕದ್ದೆಂಬ ಉಗ್ರವಾದ ಮಾತೊಂದು ಬರುತ್ತದೆ ಇಲ್ಲಿ:

ಅಸಂಗಶಸ್ತ್ರೇಣ ದೃಢೇನ ಛಿತ್ವಾ ॥

ಹಾಗೆಂದರೆ ಈ ಸಂಸಾರವೃಕ್ಷ ತುಚ್ಛವಾದದ್ದು, ಇದನ್ನು ಕಡಿದುಹಾಕಿಬಿಡಬೇಕು ಎಂದು ಮೇಲಕ್ಕೆ ತೋರಬಹುದಾದ ಅರ್ಥ. ವಾಸ್ತವವಾಗಿ ಅರ್ಥ ಅದಲ್ಲ. ಭಗವಂತನು ಸೃಷ್ಟಿ ಮಾಡಿದ ಆ ವೃಕ್ಷವನ್ನು ನಾವು ಕಡಿದುಹಾಕುವುದಕ್ಕೆ ಹೇಗಾದೀತು? ಅದರ ರಕ್ಷಣೆಗಾಗಿ ವೇದಶಾಸ್ತ್ರರೂಪದಲ್ಲಿ ವ್ಯವಸ್ಥೆ ಮಾಡಿದ್ದಾನೆ ಭಗವಂತ. ಸಂಸಾರದ ಮೂಲವು

ಬ್ರಹ್ಮದಲ್ಲಿರುವುದರಿಂದ ಸಂಸಾರವು ಪೂಜ್ಯವಾದದ್ದು. ಅದರ ಮೂಲವು ಪರಮೋತ್ಕೃಷ್ಟವಾದದ್ದು. ನಾವು ಅದನ್ನು ಕಲುಷಿತ ಮಾಡುತ್ತೇವೆ ಅಷ್ಟೆ. ಆ ಕಲುಷ ಸಂಬಂಧದಿಂದ ನಾವು ತಪ್ಪಿಸಿಕೊಳ್ಳುವುದು ಹೇಗೆ?–ಎಂಬುದು ಪ್ರಶ್ನೆ. ಅದಕ್ಕೆ ಉತ್ತರ "ಅಸಂಗಶಸ್ತ್ರೇಣ ಛಿತ್ವಾ" ಎಂದು. ಸಂಸಾರ ನಿರ್ವಾಹದಲ್ಲಿ ಅಸಂಗವು ಉಪಾಯ.

2. ನಮ್ಮ ವಿಶೇಷಲಕ್ಷ್ಯಕ್ಕೆ ಅರ್ಹವಾದ ಇನ್ನೊಂದು ಮಾತು "ಕರ್ಮಾನುಬಂಧೀನಿ ಮನುಷ್ಯಲೋಕೇ" ಎಂಬುದು. ಲೋಕದಲ್ಲಿ ನಮ್ಮನ್ನು ಬಿಗಿಯುವ ಎಲ್ಲ ಸ್ನೇಹ ಶೃಂಖಲೆಗಳೂ ಹಾಗೆಯೇ ದ್ವೇಷಾಪಾಶಗಳೂ ಎಲ್ಲ ಸಂಬಂಧಗಳೂ ಪೂರ್ವ ಕರ್ಮಫಲಿತಗಳು. ಪ್ರಾಚೀನ ಶೇಷ, ಪ್ರಾಚೀನ ಋಣ, ಪ್ರಾಚೀನ ವಾಸನೆ–ಈ ಪ್ರಾಕ್ಕರ್ಮಫಲಿತಗಳಿಂದ ನಮಗೆ ಜೀವನದಲ್ಲೊದಗುವ ಸಿಕ್ಕು ತೊಡಕು ತೊಡರುಗಳು. ಲೋಕದಲ್ಲಿ ನಾವು ಕಷ್ಟಸುಖಗಳನ್ನನುಭವಿಸುತ್ತೇವೆ. ಅದಕ್ಕೆಲ್ಲ ನಾವು ಜವಾಬ್ದಾರರಲ್ಲ, ಅದು ಎಲ್ಲಿಂದಲೋ ಹೇಗೋ ಬಂದುಬಿಟ್ಟಿದೆ ಎಂಬ ಹಾಗೆ ನಡವಳಿಕೆ ನಡೆಯುತ್ತೇವೆ. ಆ ಹೊತ್ತಿನಲ್ಲಿ ವಾಸ್ತವ ಸಂಗತಿ ನಮಗೆ ಮರೆತುಹೋಗುತ್ತದೆ. ವಾಸ್ತವವಾದರೋ ನಾವು ಅನುಭವಿಸುವುದೆಲ್ಲ ಪ್ರಾಚೀನಕರ್ಮಶೇಷವೆಂಬುದು. ಆದದ್ದರಿಂದ ಜವಾಬ್ದಾರಿ ನಮ್ಮದೇ.

ಅನಂತವಾದದ್ದು ಈ ಸಂಸಾರ, ಅನಾದಿಯಾದದ್ದು ಇದು–ಎಂದು ಹೇಳುತ್ತಾರೆ. ಏಕೆ? ಇದು ಬ್ರಹ್ಮಕಾರ್ಯವಾದದ್ದರಿಂದ. ಹಾಗಾದರೆ ಇದರಿಂದ ಸೇರಿಕೊಂಡಿರುವ ನಮ್ಮ ಪಾಡೇನು? ಸರ್ವದಾ ಇದರಲ್ಲಿಯೇ ಇದ್ದುಬಿಡುವುದೋ? ಇದರಿಂದೇನಾದರೂ ಬಿಡುಗಡೆ ಉಂಟೋ?– ಎಂದರೆ ಹೇಳುತ್ತಾರೆ; ಬಿಡುಗಡೆ ಉಂಟು. ಬಿಡುಗಡೆ ಬೇಕೆಂದು ಯಾರು ತೀವ್ರವಾಗಿ ಅಪೇಕ್ಷೆಪಡುತ್ತಾರೋ ಅವರಿಗೆ ಬಿಡುಗಡೆಯ ಅವಕಾಶವುಂಟು. ಯಾರಿಗೆ ಬಿಡುಗಡೆ ಬೇಕೋ ಅವರಿಗೆ ಬಿಡುಗಡೆ. ಯಾರು "ಬಿಡುಗಡೆಯೆಂದರೆ ಏನು? ನಮಗಿಲ್ಲೇ ಚೆನ್ನಾಗಿದೆ" ಎನ್ನುತ್ತಾರೋ ಅವರಿಗೆ "ಒಳ್ಳೆಯದು; ನೀವಿಲ್ಲೇ ಇರಿ" ಎನ್ನುತ್ತಾನೆ ಭಗವಂತ. ಬಿಡುಗಡೆ ಬೇಕೆನ್ನುವವರಿಗೆ ಅದು ಆಗುವುದು ಹೇಗೆ? ಬಿಡುಗಡೆಯಾದರೆ ಜಗತ್ತು ಹೋಗಿಬಿಡುತ್ತದೋ? ಜಗತ್ತು ಎಲ್ಲೂ ಹೋಗುವುದಿಲ್ಲ. ನಮಗೆ ಜಗತ್ತಿನ ವಿಷಯದಲ್ಲಿರುವ ಭ್ರಾಂತಿ ಹೋಗುತ್ತದೆ, ಅಷ್ಟೆ. ಜಗತ್ತನ್ನು ಸೃಷ್ಟಿ ಮಾಡಿದವರು ಅದನ್ನು ಕಾಪಾಡುತ್ತಲೇ ಇರುತ್ತಾರೆ. ಅದನ್ನು ನಾಶಪಡಿಸುವುದು ನಮ್ಮಿಂದ ಸಾಧ್ಯವಿಲ್ಲ. ನಾಶಪಡಿಸಬೇಕಾದದ್ದಾದರೂ ಏಕೆ? ಜಗದ್ವಿಷಯದಲ್ಲಿ ನಾವಿಟ್ಟುಕೊಂಡಿರುವ ಭ್ರಾಂತಿಯನ್ನು ನಾಶಪಡಿಸಿಕೊಂಡರೆ ಸಾಕು.

ನಮ್ಮ ಪಾಲಿಗೆ ಜಗತ್ಕಷ್ಟವಿಲ್ಲದಂತಾದರೆ ಸರಿ. ಜಗನ್ನಾಶವನ್ನು ನಾವು ಬಯಸಬೇಕಾದದ್ದಿಲ್ಲ. ಯಾವ ಕಾರಣದಿಂದ ಜಗತ್ತು ಕೆಟ್ಟದ್ದು, ಜಗತ್ತು ಭಾರವಾಗಿದೆ ಎಂದುಕೊಳ್ಳುತ್ತೇವೋ ಆ ಕಾರಣ ನಮ್ಮ ಪಾಲಿಗೆ ಅನ್ವಯಿಸದ ಹಾಗೆ ಮಾಡಿಕೊಂಡರೆ ಸಾಕು. ಮೋಕ್ಷವೆಂದರೂ ಅದೇ. ಯಾರಿಗೆ ಜಗತ್ತು ಭಾರವಲ್ಲವೋ ಅವನಿಗೆ ಜಗತ್ತು ಒಂದು ವಿನೋದಸ್ಥಾನ. ಅವನು ಜಗದ್ವಿನಾಶವನ್ನು ಬಯಸಲಾರ.

ಮೇಲೆ ಭಾಗವತಶ್ಲೋಕದಲ್ಲಿ "ದ್ವಿಖಗೋ ಹ್ಯಾದಿವೃಕ್ಷಃ" ಎಂದಿರುವುದನ್ನು ನೋಡಿದ್ದೇವೆ. ವೃಕ್ಷ ಎಂದ ಮೇಲೆ ಪಕ್ಷಿ ಅದರಲ್ಲಿ ಸ್ವಾಭಾವಿಕವಾಗಿ ಬರುತ್ತದೆ. ಈ ಎರಡು ಪಕ್ಷಿಗಳು ಎಂಬ ಉಪಮಾನವೂ ವೇದದಿಂದ ಬಂದದ್ದೇ. ಮುಂಡಕೋಪನಿಷತ್ತು ಸಂಸಾರ ವೃಕ್ಷದಲ್ಲಿ ಕಾಣುವ ಎರಡು ಪಕ್ಷಿಗಳನ್ನು ವರ್ಣಿಸುತ್ತದೆ:

> ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ॥

ವೇದದಲ್ಲಿ ಬೇರೆಕಡೆಯೂ ಈ ಪಕ್ಷಿದ್ವಯದ ಪ್ರಸಕ್ತಿ ಬಂದಿದೆ.

ಎರಡು ಪಕ್ಷಿಗಳು: ದೂರದಿಂದ ನೋಡುವುದಕ್ಕೆ, –ಮೇಲ್ನೋಟಕ್ಕೆ ಎರಡೂ ಒಂದೇ ರೀತಿ ಇವೆ. ಅವುಗಳ ಅಂತರಂಗದ ಧರ್ಮಗಳು ಮಾತ್ರ ಬೇರೆಬೇರೆ. ಬಹಿರಂಗ ಲಕ್ಷಣಗಳೆರಡಕ್ಕೂ ಒಂದೇ: "ಸಯುಜಾ" ಯಾವುದು ಆ ಎರಡು ಪಕ್ಷಿಗಳು? ಅದನ್ನೇ ಇಲ್ಲಿ ಹೇಳುತ್ತಾನೆ ಭಗವಂತ:

> ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ॥
> ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥
> ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
> ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

1. ಕ್ಷರವೆಂಬುದು ಜೀವ: ಕ್ಷರವೆಂದರೆ ನಶಿಸಿಹೋಗತಕ್ಕದ್ದು. ನಾಶಹೊಂದುವ ದೇಹ ಧರಿಸಿ ಕರ್ಮ ವಿಕರ್ಮಗಳನ್ನು ಮಾಡುತ್ತ, ಫಲಾಫಲಗಳನ್ನನುಭವಿಸುತ್ತ, ಗೋಳಿಡುತ್ತ, ಕೇಕೆ ಹಾಕಿ ಕಿರಿಚುತ್ತ, ಅಬ್ಬರಿಸಿ ಸಾಹಸ ಮಾಡುತ್ತ ಇರುವ ಜೀವವೆಂಬ ವಿಶ್ವಚೈತನ್ಯಾಂಶ. ಅದು "ಕ್ಷರ" ಎಂದರೆ ಸವೆಯಿಸಿ ಹೋಗಲಾಡಿಸಿಕೊಳ್ಳಲಾಗುವ ಸ್ಥಿತಿ.

ಅದು ತಾತ್ಕಾಲಕ್ಕೆ ಉಂಟು; ಉತ್ತರೋತ್ತರ ಅದನ್ನು ಕಳಚಿ ಹಾಕಲಾಗುತ್ತದೆ. ಈ ಕ್ವಚಿತ್ಕಾಲದ ವಿಕೃತದಶೆಯಲ್ಲಿರುವ ಆತ್ಮವು ಜೀವಾತ್ಮ. ಅದು ಜಡದೊಳಗೆ ಸೇರಿಕೊಂಡಿರುವ ಚೈತನ್ಯ. ದೇಹದ ಅಂಗಾಂಗಗಳು, ಇಂದ್ರಿಯಗಳು, ಮನೋಬುದ್ಧ್ಯಹಂಕಾರಗಳು–ಇವೆಲ್ಲದರಲ್ಲೂ ತುಂಬಿಕೊಂಡು, ಎಲ್ಲವನ್ನೂ ನಡಸುತ್ತಿರುವ ಜೀವ ಚೈತನ್ಯವೇ ಕ್ಷರ.

2. ಅಕ್ಷರವೆಂಬುದು ಅದೇ ವಿಶ್ವಚೈತನ್ಯಾಂಶದ ಅಸಂಗಸ್ಥಿತಿ. ನಶಿಸುವ ಕ್ಷರ ದೇಹದ ಒಳಗಡೆ ನಾಶವಿಲ್ಲದೆ ಗೂಢವಾಗಿರುತ್ತದೆ, ಆದದ್ದರಿಂದ ಅದನ್ನು ಕೂಟಸ್ಥ ಎಂದು ಕರೆಯುವುದು. ಅಕ್ಷರ ಅಲ್ಲಿರುವುದರಿಂದಲೇ ಕ್ಷರದ ವ್ಯಾಪಾರ. ಕ್ಷರಕ್ಕೆ ಆಧಾರವಾಗಿದ್ದುಕೊಂಡು ಕ್ಷರದ ಪುಣ್ಯಪಾಪಾನುಭವಗಳಿಗೆ ಸಿಕ್ಕದೆ ಪ್ರತ್ಯೇಕವಾಗಿರುವ ನಿರ್ವಿಕಾರ ಸಾಕ್ಷಿದಶೆಯೇ ಸೂತ್ರಾತ್ಮ. ಅದೇ ಕೂಟಾತ್ಮ. ಯಾವುದು ದೇಹದಲ್ಲಿ ದೇಹಿಯೋ ಕ್ಷೇತ್ರದಲ್ಲಿ ಕ್ಷೇತ್ರಜ್ಞನೋ ಅದು ಅಕ್ಷರ. ಆ ಅಕ್ಷರ ಚೈತನ್ಯವನ್ನು ಉಪಯೋಗಮಾಡತಕ್ಕದ್ದು ಕ್ಷರವೆಂಬ ಜೀವ. ಬ್ಯಾಂಕು ಹಣವನ್ನು ಕೊಡುತ್ತದೆ. ಹಣ ಕೊಡುವುದಷ್ಟೇ ಬ್ಯಾಂಕಿನ ಕೆಲಸ. ಹಣವನ್ನು ಹೀಗೆಯೇ ಉಪಯೋಗಿಸಬೇಕು ಎಂದು ಬ್ಯಾಂಕಿನವರು ಹೇಳುವುದಿಲ್ಲ. ಒಳ್ಳೆಯದಕ್ಕೂ ಉಪಯೋಗಿಸಬಹುದು, ಕೆಟ್ಟದ್ದಕ್ಕೂ ಉಪಯೋಗಿಸಬಹುದು. ಉಪಯೋಗವು ಹಣ ತೆಗೆದುಕೊಂಡವನ ಜವಾಬ್ದಾರಿ. ಬ್ಯಾಂಕಿಗೆ ಅದರ ಸೋಕಿಲ್ಲ. ಅಂಥಾದ್ದು ಅಕ್ಷರ.

ಜೀವಾತ್ಮ ಕೂಟಾತ್ಮಗಳೆರಡೂ ವ್ಯಷ್ಟಿಭಾವಗಳು–ಎಂದರೆ ಪ್ರತಿಯೊಂದು ಪ್ರಾಣಿಯನ್ನೂ ಬಿಡಿಬಿಡಿಯಾಗಿ ತೆಗೆದುಕೊಂಡು ನೋಡಿದಾಗ ಬರುವ ಭಾವನೆಗಳು.

3. ಪರಮಾತ್ಮನೆಂಬುದು ಜೀವಾಂತರ್ಗತಗಳಾದ ಚೈತನ್ಯಾಂಶಗಳ ಸಮಷ್ಟಿ–ಎಂದರೆ ಒಟ್ಟು ಭಾವನೆ. ಒಂದು ರೂಪಾಯಿನ ನಯೆ ಪೈಸೆಗಳನ್ನು ಒಂದೊಂದಾಗಿ ನೂರೆಣಿಸಿದರೆ ಆ ಒಂದೊಂದು ವ್ಯಷ್ಟಿ. ಆ ನೂರು ಸೇರಿದ ಒಂದು ನಾಣ್ಯವು ಸಮಷ್ಟಿ. ಜೀವಗಳಲ್ಲಿರುವ ಜೀವಲಕ್ಷಣಗಳನ್ನೆಲ್ಲ ಬೇರೆ ಮಾಡಿ ಬಿಸಾಟರೆ ಏನು ಉಳಿಯುತ್ತದೆಯೋ ಆ ಉಳಿದ ಸಾರ ಭಾಗಗಳನ್ನೆಲ್ಲ ಒಟ್ಟು ಮಾಡಿ ಒಂದಾಗಿ ನೋಡಿದರೆ ಅದು ಪರಮಾತ್ಮ.

ವ್ಯಷ್ಟಿಯ ಲಕ್ಷಣಗಳೇ ಬೇರೆ, ಸಮಷ್ಟಿಯ ಲಕ್ಷಣಗಳೇ ಬೇರೆ–ಎಂಬುದನ್ನು ನಾವು ಗಮನಿಸಬೇಕು.

ನೂರು ಬಿಡಿಪೈಸೆಗಳ ಲಕ್ಷಣಗಳೇ ಬೇರೆ, ಒಂದು ಬಂದಾ ರೂಪಾಯಿನ ಲಕ್ಷಣಗಳೇ ಬೇರೆ. ಅಂಗಡಿಗೆ ಹೋಗಿ ಸಾಮಾನು ಕೊಂಡುಕೊಳ್ಳುವ ವೇಳೆಯಲ್ಲಿ ಎರಡರ ಬೆಲೆಯೂ ಒಂದೇ. ಇಂಗ್ಲಿಷಿನಲ್ಲಿ Tweleve of the one and a dozen of the other (ಇದು ಹನ್ನೆರಡು, ಅದು ಡಜನ್ನು) ಎನ್ನುವ ಹಾಗೆ. ಎರಡೂ ಪೇಟೆಯಲ್ಲಿ ಒಂದೇ ಸಮ. ಆದರೆ ನಾವು ನಾಣ್ಯವನ್ನೆಣಿಸಿಕೊಡಬೇಕಾದಾಗ ಕಾಲದ ದೃಷ್ಟಿಯಿಂದ, ಹಣವನ್ನು ಜೇಬಿನಲ್ಲಿ ಹೊರಬೇಕಾದಾಗ ಭಾರದ ದೃಷ್ಟಿಯಿಂದ, ಬ್ರಾಹ್ಮಣರಿಗೆ ದಕ್ಷಿಣೆ ಕೊಡಬೇಕೆಂದಾಗ ಮನಸ್ಸಂತೃಪ್ತಿಯ ದೃಷ್ಟಿಯಿಂದ, ರೂಪಾಯಿ ರೂಪಾಯೇ, ನಯೆ ಪೈಸೆ ನಯೆಪೈಸೆಯೇ. ಹಾಗೆಯೇ ಪರಮಾತ್ಮವಸ್ತುವೂ ಕ್ಷರ ಅಕ್ಷರಗಳೂ ವ್ಯವಹಾರ ದಶೆಯಲ್ಲಿ ಬೇರೆಬೇರೆ; ಪರಮಾರ್ಥದಲ್ಲಿ ಎರಡೂ ಒಂದೇ. ಒಟ್ಟಾಗಿದ್ದುಕೊಂಡು ಭಾಗವಾಗದೆ, ವಿಕಾರಪಡದೆ ಎಲ್ಲ ಕಾಲ ಎಲ್ಲ ಸಂದರ್ಭಗಳಲ್ಲಿಯೂ ನಿಲ್ಲುವುದು ಕ್ಷರಪುರುಷ ಅಕ್ಷರಪುರುಷರಿಬ್ಬರಿಂದಲೂ ಬೇರೆಯಾಗಿ ಆ ಇಬ್ಬರಿಗಿಂತಲೂ ಮೇಲ್ಗಡೆ ಇರುವ ಪುರುಷೋತ್ತಮ. ಆ ಉತ್ತಮ ಪುರುಷನೇ ಪರಮಾತ್ಮ. ಆತನೇ ಮೂರು ಲೋಕಗಳಲ್ಲಿಯೂ ತುಂಬಿಕೊಂಡು ಮೂರು ಲೋಕಗಳನ್ನೂ ಉಳಿಸಿ ಕಾಪಾಡುತ್ತಿರುವವನು.

ಭೌತವಿಜ್ಞಾನದ (Physics) ಭಾಷೆಯಲ್ಲಿ ಹೇಳಬಹುದಾದರೆ ಪರಮಾತ್ಮವನ್ನು ಗರ್ಭಗೂಢಶಕ್ತಿ (Potential Energy) ಎಂದೂ, ಜೀವಾತ್ಮನನ್ನು ಚಲವ್ಯಕ್ತಶಕ್ತಿ (Kinetic Energy) ಎಂದೂ ಭಾವಿಸಬಹುದು. ಒಂದು ಸಮುದ್ರ, ಇನ್ನೊಂದು ಅಲೆಯ ಹನಿ. ವಸ್ತು ಒಂದೇ, ರೂಪವೆರಡು.

ಜೀವವೆಂಬುದು ಬ್ರಹ್ಮಚೈತನ್ಯದ ಅಂಶವೆಂಬುದನ್ನು ಸ್ವಾಮಿ ಸ್ಪಷ್ಟಪಡಿಸಿದ್ದಾನೆ.

> ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
> ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥

“ನನ್ನ (ಬ್ರಹ್ಮದ) ಅಂಶವೇ ಪ್ರಾಣಿಪ್ರಪಂಚದಲ್ಲಿ ಜೀವವಾಗಿರುವ ಶಾಶ್ವತ ಸತ್ತ್ವ. ಅದು ಪ್ರಕೃತಿಯಲ್ಲಿರುವ ಪಂಚೇಂದ್ರಿಯಗಳನ್ನೂ ಆರನೆಯದಾದ ಮನಸ್ಸನ್ನೂ ಸ್ವಾಧೀನಪಡಿಸಿಕೊಂಡು ಆಳುತ್ತದೆ”.

ದೇಹದ ಅಂಗಾಂಗಗಳಲ್ಲೂ ಅಂತಃಕರಣವೃತ್ತಿಗಳಲ್ಲೂ ಸಂಚರಿಸಿ ಕೆಲಸ ಮಾಡುವ ಚೈತನ್ಯ ಜೀವದ್ದು. ಜೀವದ ಚೈತನ್ಯ ಪರಮಾತ್ಮನದು. ಮೂಲಬ್ರಹ್ಮಚೈತನ್ಯವು ನಶ್ವರಗಳಾದ ಶರೀರಕರಣೋಪಕರಣಗಳ ಮೂಲಕ ಹರಿದು ವ್ಯಕ್ತಗೊಂಡಾಗ ಕ್ಷರವೆನ್ನಿಸುತ್ತದೆ.

ಬ್ರಹ್ಮವು ಏಕೆ ಹಾಗೆ ಜೀವವಾಗುತ್ತದೆ? ಅದಕ್ಕೇನಾದರೂ ಉದ್ದೇಶವುಂಟೆ? ಯಾರ ಆಜ್ಞೆಯಿಂದಲಾದರೂ ಹಾಗೆ ಮಾಡುತ್ತದೆಯೆ? ಯಾವ ಭಯದಿಂದಲಾದರೂನೆ? ಯಾವ ಆಶೆಯಿಂದಲಾದರೂನೆ? ಹಾಗಿರಲಾರದು. ಬ್ರಹ್ಮದ ವಿನಾ ಯಾವುದಕ್ಕೂ ಯಾರಿಗೂ ಎಲ್ಲಿಯೂ ಅಸ್ತಿತ್ವವೇ ಇಲ್ಲ. ಇರುವುದೆಲ್ಲ ಬ್ರಹ್ಮವೇ. ಎಲ್ಲೆಲ್ಲಿಯೂ ಬ್ರಹ್ಮವೇ. ಬೇರೊಬ್ಬ ಯಾರೂ ಎಲ್ಲಿಯೂ ಇಲ್ಲದಾಗ ಭಯವೇನು? ತಾನೇ ಸರ್ವಶಕ್ತವಾಗಿರುವಾಗ ಅಪೇಕ್ಷೆಯೇನು? ಜಗತ್ಸೃಷ್ಟಿಯ ಕಾರಣವೇನಿದ್ದೀತು?

ಬೃಹದಾರಣ್ಯಕೋಪನಿಷತ್ತು ಹೀಗೆ ಹೇಳುತ್ತದೆ:

> ಸ ವೈ ನೈವ ರೇಮೇ । ಏಕಾಕೀ ನ ರಮತೇ ।
> ಸ ದ್ವಿತೀಯಮೈಚ್ಛತ್ ॥

“(ಬ್ರಹ್ಮವಸ್ತು ಮೊದಲು ಒಂದೇ ಇತ್ತು). ಸಂತೋಷಪಡಲಿಲ್ಲ. ಒಬ್ಬಂಟಿಯಾದವನಿಗೆ ಸಂತೋಷವಿಲ್ಲ. ಅದಕ್ಕೋಸ್ಕರ ಇನ್ನೊಬ್ಬನನ್ನು ಸಂಗಾತಿಯಾಗಿ ಬಯಸಿತು”.

ಹಾಗೆ ಬ್ರಹ್ಮವು ತಾನಾಗಿ ಮಾಡಿಕೊಂಡ ಸಂಗಾತಿ ಜಗತ್ತು. ತೈತ್ತೀರಿಯ ಹೀಗೆನ್ನುತ್ತದೆ.

> ಸೋऽಕಾಮಯತ ।
> ಬಹು ಸ್ಯಾಮ್ ಪ್ರಜಾಯೇಯೇತಿ ।
> … ತದಾऽऽತ್ಮಾನಂ ಸ್ವಯಮಕುರುತ ।
> ತಸ್ಮಾತ್ತತ್ಸುಕೃತಮುಚ್ಯತೇ ॥

“ಬ್ರಹ್ಮವು ಒಂದೇ ಆಗಿದ್ದುಕೊಂಡು ‘ನಾನು ಅನೇಕವಾಗಿ ಹುಟ್ಟಿಯೇನು’ ಎಂದು ಬಯಸಿತು”. “ಆಗ ತನ್ನನ್ನು ತಾನೇ (ಬಹುಪ್ರಕಾರವಾಗಿ ಜಗತ್ತಾಗಿ) ಮಾಡಿಕೊಂಡಿತು. ಅದು ಹಾಗೆ ಒಳ್ಳೆಯದನ್ನು ಮಾಡಿತು (ಸುಕೃತಮ್) ಎಂದು ತಿಳಿದವರು ಹೇಳುತ್ತಾರೆ”.

ದೇವಸ್ಯೈಷ ಸ್ವಭಾವೋಽಯಮ್ ॥

“ಅದು ಭಗವಂತನ ಸ್ವಯಂವ್ಯಕ್ತಿ”. ಆತನಿಗೆ ಯಾವ ಕೊರತೆಯೂ ಯಾವ ಭೀತಿಯೂ ಇಲ್ಲದಿದ್ದರೂ, ಬೇರೊಬ್ಬರ ಅಪೇಕ್ಷೆಯಾಗಲಿ ಆವಶ್ಯಕತೆಯಾಗಲಿ ಇಲ್ಲದಿದ್ದರೂ ನೈಜಲೀಲೆಗಾಗಿ ಜಗದ್ರಚನೆ ಮಾಡಿ ಜೀವನಾಟಕವನ್ನಾಡುತ್ತಾನೆ.

ಲೋಕವತ್ ತು ಲೀಲಾಕೈವಲ್ಯಮ್ ॥

–ಬ್ರಹ್ಮಸೂತ್ರ

ಲೋಕದ ಜನರು ಕೇವಲ ಲೀಲಾವಿನೋದಕ್ಕಾಗಿ ಮಾಡುವಂತೆ (ಈಶ್ವರನು ಬೇರೆ ಯಾವ ಪ್ರಯೋಜನವನ್ನೂ ಅಪೇಕ್ಷಿಸದೆ ಸ್ವತಂತ್ರವಾಗಿ ಲೀಲಾರ್ಥವಾಗಿ ಜಗತ್ತನ್ನು ರಚಿಸಿದ್ದಾನೆ).

ತೊಟ್ಟಿಲಿನಲ್ಲಿ ಮಲಗಿರುವ ಮಗು ನಗುತ್ತ ಇತ್ತತ್ತ ನೋಡುತ್ತ ಕೈಕಾಲುಗಳನ್ನು ಅಲ್ಲಾಡಿಸಿ ಸಂತೋಷಪಡುತ್ತದೆ. ಆ ಆಟ ಯಾರನ್ನು ಉದ್ದೇಶಿಸಿದ್ದು? ಮಗು ಮತ್ತೊಬ್ಬರ ಅರಿವೇ ಇಲ್ಲದೆ ತನ್ನ ಮೈ ಆರೋಗ್ಯಶಕ್ತಿ ಚೆನ್ನಾಗಿರುವುದರಿಂದ ಆ ಸ್ವಸಂತೋಷಕ್ಕಾಗಿ ಹಾಗೆ ಮಾಡುತ್ತದೆ. ಮತ್ತೊಬ್ಬರ ಯೋಚನೆಯೇ ಇಲ್ಲದೆ ಕೇವಲ ಆತ್ಮಸಂತೋಷಕ್ಕೋಸ್ಕರ ಮಾಡುವ ಚೇಷ್ಟೆಯು ಲೀಲೆ.

ರೂಪವತಿ ತನ್ನ ಕೊಟ್ಟಡಿಯಲ್ಲಿ ಒಬ್ಬಳೇ ಇದ್ದಾಗ ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಳ್ಳುತ್ತಾಳೆ. ನಾವು ಒಬ್ಬರೇ ಇದ್ದಾಗ ನಮ್ಮನಮ್ಮ ಕೊರಕೊರ ಗಂಟಲಿನಿಂದಲೇ ಪದ್ಯವನ್ನೋ ಹಾಡನ್ನೋ ಹಾಡಿ ಸಣ್ಣ ಸಂಗೀತ ಮಾಡಿಕೊಳ್ಳುತ್ತೇವೆ. ಭಾಗ್ಯಶಾಲಿ ತನ್ನ ಮನೆಯವರೆಲ್ಲ ನಿದ್ದೆ ಹೋಗುತ್ತಿರುವಾಗ ತನ್ನ ಕೋಣೆಯ ಬಾಗಿಲನ್ನು ಮುಚ್ಚಿ ತನ್ನ ವಸ್ತ್ರಾಭರಣಗಳನ್ನೆಲ್ಲ ಪೆಟ್ಟಿಗೆಯಿಂದ ಹೊರಕ್ಕೆ ತೆಗೆದು ತೆಗೆದು ನೋಡಿ ನೋಡಿ ಉಲ್ಲಾಸಪಡುತ್ತಾನೆ. ನಿದ್ರಿಸುತ್ತಿರುವ ಮಕ್ಕಳನ್ನು ತಂದೆ ತಾಯಿಯರು ನೋಡಿ ನೋಡಿ

ಹಿಗ್ಗುತಾರೆ. ಹೀಗೆ ಅನ್ಯಾಪೇಕ್ಷೆಯಿಲ್ಲದೆ, ಅನ್ಯೋದ್ದೇಶವಿಲ್ಲದೆ, ತಮ್ಮ ಸ್ವಂತ ಆನಂದಕ್ಕಾಗಿ ತಮ್ಮತಮ್ಮ ರೂಪವಸ್ತು ಪ್ರಭಾವಗಳನ್ನು ನೋಡಿ ನೆನೆದು ತೃಪ್ತಿಪಟ್ಟುಕೊಳ್ಳುವುದು ಮನುಷ್ಯ ಸ್ವಭಾವದಲ್ಲಿದೆ. ಪರಬ್ರಹ್ಮವಸ್ತು ಹಾಗೆ ಸ್ವಶಕ್ತಿಯ ಪ್ರಭಾವವನ್ನು ನೋಡಿ ಸಂತೋಷಿಸುವ ಲೀಲೆಯನ್ನಾಡುತ್ತದೆ. ಲೀಲೆ ಎಂದರೆ ಏನು? ಅನ್ಯಸ್ಮೃತಿಯಿಲ್ಲದ, ಅನ್ಯ ಸಹಾಯ ಬೇಡದ, ಅನ್ಯೋದ್ದಿಷ್ಟವಲ್ಲದ ಸ್ವಸಂತೋಷಕಾರ್ಯ. ಈ ರೀತಿಯಾಗಿ ಜಗತ್ತು ಬ್ರಹ್ಮಲೀಲೆ. ಆ ಲೀಲೆಯಲ್ಲಿ ಅಭಿವ್ಯಕ್ತವಾಗಿರುವ ಚೈತನ್ಯವನ್ನು

1. ಜೀವಾತ್ಮ
2. ಕೂಟಾತ್ಮ ಅಥವಾ ಅಂತರಾತ್ಮ
3. ಪರಮಾತ್ಮ ಅಥವಾ ಪರಮೇಶ್ವರ

–ಎಂದು ಮೂರು ದಶೆಗಳಲ್ಲಿ ಭಾವಿಸಬಹುದು. ಇವುಗಳಲ್ಲಿ ಸಂಸಾರ ಸಂಪರ್ಕವಿರುವುದು ಜೀವದಶೆಗೆ. ಸಂಸಾರವೆಂದರೆ ಜಗತ್ಸಂಬಂಧ.

ಈಗ ಉಪಸಂಹಾರ ಮಾಡೋಣ. ಸಂಸಾರವೃಕ್ಷದೊಳಗೆ ಜೀವ ಸೇರಿಕೊಂಡಿದೆ. ಆ ವೃಕ್ಷದ ಮೂಲ "ಪರಮೇ ವ್ಯೋಮನ್" –ಪರಮೋತ್ತಮ ಸ್ಥಾನದಲ್ಲಿದೆ. ಕೆಳ ಭಾಗದಲ್ಲಿ ಜಗದ್ರೂಪದಲ್ಲಿ ಕೊಂಬೆರೆಂಬೆಗಳಿವೆ. ಮೇಲುಮೇಲಕ್ಕೆ ಹತ್ತಿ ಆ ಊರ್ಧ್ವಾಗ್ರವನ್ನು ಸೇರಿಕೊಂಡರೆ ಆಗ ಆ ಮರದ ಹುಳಿಕಹಿಗಳಿಂದ, ಅದರ ಕೊಳೆನಾತಗಳಿಂದ, ಕ್ರಿಮಿಕೀಟಗಳ ಬಾಧೆಯಿಂದ ಜೀವಕ್ಕೆ ಬಿಡುಗಡೆ. ಅದೇ ಮೋಕ್ಷ. ಅಗ್ರಸ್ಥಾನಕ್ಕೆ ಹೋಗುವುದು ವಿವೇಕ ಸಾಹಸದಿಂದ. ಆದರೆ ಅದು ಹೇಗಾದೀತು? ಕತ್ತಲೆಯಾಗಿದೆ; ಮರ ಅಲ್ಲಲ್ಲಿ ಗಂಟು ಗಂಟಾಗಿ ತೊಡಕುತೊಡಕಾಗಿದೆ. ಇದರಲ್ಲಿ ಸೇರಿಕೊಂಡು ಜೀವನು ಭ್ರಾಂತನಾಗಿದ್ದಾನೆ. ಹಣ್ಣು ಕಣ್ಣಿಗೆ ಕಂಡಿತೆಂದರೆ ನಾಲ್ಕು ಹಣ್ಣು ಹೆಚ್ಚಾಗಿ ತಿಂದು ಹೊಟ್ಟೆ ನೋವನ್ನನುಭವಿಸುತ್ತಾನೆ; "ಕೊಳಕು ಈ ಜಗತ್ತು" ಎಂದುಕೊಳ್ಳುತ್ತಾನೆ. ಈ ತಂಟೆಗಳಿಗೆ ಸಿಕ್ಕಿಕೊಳ್ಳಬಾರದು–ಜಗತ್ತನ್ನು ಮೀರಬೇಕು; ಯಾವ ಮೂಲದಿಂದ ಜಗತ್ತು ಬಂದಿದೆಯೋ ಆ ಮೂಲವನ್ನು ಸೇರಿಕೊಳ್ಳಬೇಕು; ಆಗ ರೆಂಬೆ ಕೊಂಬೆ ಬಿಳಲುಗಳ ಕಾಟ ಇರುವುದಿಲ್ಲ. ಆ ಸ್ಥಿತಿಯನ್ನು ಸಂಪಾದಿಸುವುದು ಹೇಗೆ?

> ಅಶ್ವತ್ಥಮೇನಂ ಸುವಿರೂಢಮೂಲಂ ಅಸಂಗಶಸ್ತ್ರೇಣ ದೃಢೇನ ಛಿತ್ವಾ।
> ತತಃ ಪದಂ ತತ್ಪರಿಮಾರ್ಗಿತವ್ಯಂ ಯಸ್ಮಿನ್ ಗತಾ ನ ನಿವರ್ತನ್ತಿ ಭೂಯಃ ॥

"ಆಳವಾಗಿ ಬೇರಿಳಿಸಿರುವ ಈ ಅಶ್ವತ್ಥವೃಕ್ಷವನ್ನು ಕಡಿಯುವುದು ಯಾವ ಆಯುಧದಿಂದ? 'ಅಸಂಗ' (ಅದು ನನ್ನದಲ್ಲ) ಎಂಬ ಕೊಡಲಿಯಿಂದ. ಅದೇ ಅಭಿಮಾನತ್ಯಾಗ, ಅದೇ ಮಮತಾತ್ಯಾಗ. ಆ ಆಯುಧದಿಂದ ಕೊಂಬೆ ಕಡಿದು ಆ ಪೊದೆ ಪಂಜರದಲ್ಲಿ ಕಂಡಿ ಮಾಡಿಕೊಂಡು ಅದರ ಮೂಲಕ ಹೊರಕ್ಕೆ ಹೊರಟು ಬ್ರಹ್ಮಾನುಭವಪದವಿಗೆ ದಾರಿಮಾಡಿಕೊಳ್ಳತಕ್ಕದ್ದು".

ನನ್ನದಲ್ಲ ಜಗತ್ತು ಎಂಬ ಭಾವನೆಯೇ "ಅಸಂಗ". ಜಗತ್ತನ್ನು ಮಾಡಿದವರು ಯಾರು? ಪರಬ್ರಹ್ಮವಸ್ತು. ಆದದ್ದರಿಂದ ಅದು ನನ್ನದಲ್ಲ. ಜಗತ್ತಿನಿಂದ ಹೊರಕ್ಕೆ ದಾರಿ ಹುಡುಕಬೇಕು. ಆದರೆ "ಛಂದಾಂಸಿ" ಎಂಬುದನ್ನೇನು ಮಾಡಬೇಕು? ಅಂದರೆ ವೇದಶಾಸ್ತ್ರಗಳು, ಅರ್ಥತ್ ಧರ್ಮ–ಅದನ್ನು ಉಪಯೋಗಿಸಿಕೊಂಡು ಮೂಲಕ್ಕೆ ಹೋಗಬೇಕು. ನಮ್ಮ ಗಮನವಿರಬೇಕಾದದ್ದು ಮೂಲಸ್ಥಾನದ ಮೇಲೆ. "ನನ್ನದಲ್ಲ ಈ ವೃಕ್ಷ; ಅದು ಎಲ್ಲಿಂದಲೋ ಬಂದಿದೆ, ಏತಕ್ಕೋ ಬಂದಿದೆ. ಯಾರಿಗೋ ಸೇರಿದೆ. ನನ್ನ ಸ್ವತ್ತಲ್ಲ ಅದು." ಹೀಗೆಂದುಕೊಳ್ಳುವುದೇ "ಛಂದಾಂಸಿ" ಯ ಉಪಯೋಗ. ಈಶೋಪನಿಷತ್ತು ಕೇಳುವಂತೆ–

> ಕಸ್ಯಸ್ವಿತ್ ಧನಮ್ ॥

"ಯಾರದು ಈ ಒಡವೆ?" ನಾನೇನು ಸೃಷ್ಟಿ ಮಾಡಲಿಲ್ಲವಲ್ಲ ಇದನ್ನ! ಈಶ್ವರನದು ಈ ಒಡವೆ. ನಾನು ಏನಿದ್ದರೂ ಸೇವೆ ಮಾಡಬೇಕಾದವನು. ಅಶ್ವತ್ಥಕ್ಕೆ ಬುಡದ ಜಗಲಿ ಕಟ್ಟುವುದು ನನ್ನ ಕೆಲಸ. ನೀರೆರೆಯುವುದು ನನ್ನ ಕೆಲಸ, ಕಸ ತೆಗೆಯುವುದು ನನ್ನ ಕೆಲಸ. ಅದು ಯಾರ ಸಂತೋಷಕ್ಕಾಗಿ? ಅದರ ಮೂಲಕರ್ತನ ಸಂತೋಷಕ್ಕಾಗಿ. ಆದರಿಂದ ವೃಕ್ಷ ಬೆಳೆಯುತ್ತದೆ. ಹಾಗೆ ಅದು ಬೆಳೆದಾಗ ಅದರ ನೆರಳುಗಾಳಿಗಳು ಎಷ್ಟೋ ಜೀವಗಳಿಗೆ ಸುಖಕರವಾಗುತ್ತವೆ. ಹೇಳಿದ ಕೆಲಸ ಮಾಡುವುದಷ್ಟೇ ನನ್ನ ಜವಾಬ್ದಾರಿ. ಧರ್ಮವೊಂದಿದೆ; ಅದಕ್ಕೆ ನಾನು ವಿಧೇಯನಾಗಿರತಕ್ಕದ್ದು. ಮಾವಿನ ತೋಟದಲ್ಲಿ ಕೆಲಸಕ್ಕೆ ಸೇರಿದ ಮಾಲಿ "ಕಸಿ ಮಾವಿನ ಗಿಡ ಏಕೆ ಹಾಕಿಸಲಿಲ್ಲ ಸ್ವಾಮಿ?" "ಈ ಹಣ್ಣನ್ನು ಮಾರ್ಕೆಟ್ಟಿಗೆ ಹಾಕುತ್ತೀರೋ, ಇಲ್ಲ ನೀವೇ ತಿಂದುಬಿಡುತ್ತಿರೋ?" –ಈ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ.

ಧರ್ಮವನ್ನು ಪರಿಪಾಲನೆ ಮಾಡಿದರೆ ಕೊಂಬೆಗಳು ರೆಂಬೆಗಳು ನಮಗೆ ಪ್ರತಿಬಂಧಕಗಳಾಗುವುದಿಲ್ಲ. ನಮಗೆ ಅನುಕೂಲಗಳಾಗುತ್ತವೆ. ಅದರ ಮೂಲಕವೇ ನಾವು ಮೂಲವನ್ನು ಕಾಣುವುದು ಸಾಧ್ಯ. ಧರ್ಮದ ಮೂಲಕವೇ ನಮಗೆ ಪರಮಾತ್ಮದರ್ಶನವಾಗತಕ್ಕದ್ದು. ಸರ್ವೋತ್ಕೃಷ್ಟವಾದ ಧರ್ಮವೇ ಅಸಂಗ.

ಇನ್ನೊಂದು ಉಪನಿಷತ್ತು ಹೇಳುತ್ತದೆ:

> ಮಮೇತಿ ಬಧ್ಯತೇ ಜನ್ತುಃ
> ನ ಮಮೇತಿ ವಿಮುಚ್ಯತೇ ॥

"ಮಮ" ಎಂದುಕೊಂಡಾಗ ಹಗ್ಗವಾಗಿದ್ದದ್ದು "ನ ಮಮ" ಎಂದಾಗ ಹೂಮಾಲೆಯಾಗುತ್ತದೆ. ಮೋಕ್ಷವೆಂಬುದು ಒಂದು ಮನೋಭಾವನಾಪ್ರಕಾರ. ಮನಸ್ಸು ಒಂದು ಬಗೆಯಾಗಿದ್ದರೆ ಬಿಗಿತ; ಇನ್ನೊಂದು ಬಗೆಯಾದರೆ ಬಿಡುಗಡೆ. ಸಂಸಾರವೃಕ್ಷದ ವಿಷಯಪ್ರವಾಲಗಳು "ಮಮ" ಎನ್ನುವುದನ್ನು ತಂದು ಸೇರಿಸುತ್ತವೆ ನಮ್ಮಲ್ಲಿ. ಆ ವಿಷಯಪ್ರವಾಲಗಳು ಸೊಗಸಾದವು, ಸವಿಯಾದವು, ಪ್ರಿಯವಾದವು, ಶ್ಲಾಘ್ಯವಾದವು. ಅವು ಅಡಿಗಡಿಗೂ ನಮ್ಮ ಮುಂದೆ ಬಂದು ಮೋಹವನ್ನುಂಟುಮಾಡುತ್ತವೆ. ಆಗ ನಮಗೆ "ಆಹಾ! ಎಷ್ಟು ಚೆನ್ನಾಗಿದೆ ಈ ಲೋಕ! ಇದನ್ನು ಬಿಡುವುದೆಂದರೆ ಏನು? ಅದು ಹೇಗಾದೀತು? ಇದನ್ನು ನನ್ನದಾಗಿ ಮಾಡಿಕೊಳ್ಳಬೇಕು. ಇದು ನನಗೆ ನನಗೇ ಇರಬೇಕು" ಎಂದೆನಿಸುತ್ತದೆ. "ನನ್ನ ಗಂಡ ಜಾಣ", "ನನ್ನ ಹೆಂಡತಿ ಚೆಲುವೆ", "ನನ್ನ ಮಗ ಪ್ರಚಂಡ" –ಹೀಗೆಲ್ಲ ಅಂದುಕೊಂಡು ಹೆಮ್ಮೆ ಪಡಬೇಕೆಂದೆನಿಸುತ್ತದೆ. ಇಂಥಾ ಸಮಯಗಳಲ್ಲಿ ನಾವು ಎಚ್ಚರದಿಂದಿರಬೇಕು. ಯಾರದು ಈ ಸಿರಿ? ಯಾರು ಮಾಡಿಸಿದರು ಈ ಬಾಂಧವ್ಯವನ್ನ? ಎಲ್ಲಿಂದ ಬಂತು ಮಗನ ಪಾಂಡಿತ್ಯ, ಮಗಳ ಚೆಲುವು? ಇದಾವುದೂ ನನ್ನದಂತೂ ಅಲ್ಲ. ಅದು ನನ್ನ ಸಂಪಾದನೆಯಲ್ಲ. ಅದೆಲ್ಲ ಈಶ್ವರಪ್ರಸಾದ, ಈಶ್ವರೇಚ್ಛೆ ಎಂದುಕೊಳ್ಳುವಷ್ಟು ಅಸಂಗವನ್ನು ನಾವು ಅಭ್ಯಾಸ ಮಾಡಿಕೊಳ್ಳಬೇಕು.

"ಪರಿಮಾರ್ಗಿತವ್ಯಮ್" ಎಂದಿದ್ದಾರೆ. ಸುತ್ತಿಸುತ್ತಿ ಹುಡುಕಬೇಕಂತೆ. ಸುಲಭವಾಗಿ ಸಿಕ್ಕತಕ್ಕದ್ದಲ್ಲ ಪರಮಪದವಿ. ಸಂಸಾರಪ್ರವೃತ್ತಿ ಎಲ್ಲಿಂದ ಇಳಿದುಬಂದಿದೆಯೋ ಅಲ್ಲಿಗೆ ಮರಳಿ ಮರ ಹತ್ತಿ ಹೋಗಬೇಕಾದದ್ದು. ಯಾವ ವೃಕ್ಷದಲ್ಲಿ ಮನುಷ್ಯ ಇದ್ದಾನೋ ಆ ವೃಕ್ಷವನ್ನು ಅವನು "ಇದು

ನನ್ನದಲ್ಲ; ಇದು ನನ್ನ ಭೋಗಕ್ಕೆ ಬೇಡ; ಇದರಿಂದ ನನಗೆ ಶೋಧನ ಚಿಕಿತ್ಸೆಯಾಗಲಿ" – ಹೀಗೆಂದು ಭಾವಿಸಿಕೊಳ್ಳುವುದೇ ಬ್ರಹ್ಮಾನ್ವೇಷಣೆಯ ದಾರಿ.

ಇಷ್ಟನ್ನು ಹೇಳಿ ಭಗವಂತ ತನ್ನ ಸ್ವರೂಪವನ್ನು ತಿಳಿಯಪಡಿಸುತ್ತಾನೆ:

> ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ ॥

"ನಾನು ಪೃಥ್ವಿಯಲ್ಲಿ ಪ್ರವೇಶ ಮಾಡಿ ಸಮಸ್ತ ಪ್ರಾಣಿಗಳನ್ನೂ ನನ್ನ ಶಕ್ತಿಯಿಂದ ಧರಿಸಿ ನಿಲ್ಲಿಸಿದ್ದೇನೆ".

> ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
> ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥

"ನಾನೇ (ಈಶ್ವರನೇ) ಪ್ರಾಣಿಗಳ ದೇಹಗಳಲ್ಲಿ ಉದರಾಗ್ನಿ ರೂಪವನ್ನು ತಾಳಿಕೊಂಡು ಪ್ರಾಣ, ಅಪಾನ ಮೊದಲಾದ ಪಂಚವಾಯುಗಳೊಡನೆ ಸೇರಿ ಆಯಾ ಪ್ರಾಣಿಯು ತಿಂದ ಅನ್ನವನ್ನು ಜೀರ್ಣಪಡಿಸುತ್ತೇನೆ".

"ವೈಶ್ವಾನರ" ಎಂದರೆ ವಿಶ್ವ (ಸಮಸ್ತ) ಪ್ರಾಣಿಗಳ ಒಳಗಡೆಯೂ ಸಹಜವಾಗಿರುವ ತೇಜಸ್ಸು–ಉಷ್ಣಶಕ್ತಿ–ಎಂದರ್ಥ. ಕರಚರಣಾದಿ ಅವಯವಗಳಿಗೆ ಶಕ್ತಿ ಬರುವುದು ಆಹಾರ ಪರಿಣಾಮದಿಂದ. ಆ ಪರಿಣಾಮವು ಆಹಾರವಸ್ತುಗಳು ಜೀರ್ಣವಾಗುವುದರಿಂದ. ಜೀರ್ಣವು ಜಠರಸ್ಥವಾದ ಉಷ್ಣದಿಂದ. ಆ ಜಾಠರಾಗ್ನಿಯು ಈಶ್ವರ ಪ್ರಭಾವ.

"ಅನ್ನಂ ಚತುರ್ವಿಧಂ" ಎಂಬಲ್ಲಿ

1. ಆಗಿದು ತಿನ್ನುವುದು
2. ನೆಕ್ಕುವುದು
3. ಕುಡಿಯುವುದು
4. ಚಪ್ಪರಿಸುವುದು (ಜುರ್ರುವುದು)–ಎಂದಾಗಲಿ;

1. ಬೇಯಿಸಿದ್ದು

2. ಹುರಿದದ್ದು
3. ಕರಿದದ್ದು
4. ಹಸಿಯದು–ಎಂದಾಗಲಿ;

1. ಧಾನ್ಯ
2. ಶಾಕ
3. ಕ್ಷೀರಾದಿ
4. ಮಾಂಸಾದಿ–ಎಂದಾಗಲಿ;

1. ಸಿಹಿ
2. ಕಾರ
3. ಉಪ್ಪು
4. ಹುಳಿ–ಎಂದಾಗಲಿ;

1. ಉತ್ಪತ್ತಿಸ್ಥಾನ
2. ಪಕ್ವಕ್ರಮ
3. ಭುಕ್ತಿಕ್ರಮ
4. ರುಚಿ–ಎಂದಾಗಲಿ ಭಾವಿಸಬಹುದು.

ಒಟ್ಟಿನಲ್ಲಿ ಜಡವಸ್ತುಗಳನ್ನು ಜೈವೋಪಯೋಗಕ್ಕೆ ಪರಿವರ್ತನಗೊಳಿಸುವ ಚೈತನ್ಯ ಈಶ್ವರನದು–ಎಂದರೆ ಸಮಸ್ತಜಗದ್ವ್ಯಾಪಾರವೂ ಪರಮಾತ್ಮಶಕ್ತಿಯ ಸ್ವಾಭಿವ್ಯಕ್ತಿ ಎಂದು ತಾತ್ಪರ್ಯ.

ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ॥

"ಜನಗಳ ಹೃದಯದಲ್ಲಿ ನಾನು ನೆಲಸಿ ಅವರ ಜ್ಞಾಪಕಶಕ್ತಿ, ಜ್ಞಾನಶಕ್ತಿ, ಊಹಾಪೋಹನಶಕ್ತಿ–ಎಂದರೆ ಒಂದು ಅಭಿಪ್ರಾಯವನ್ನು ಮಾಡಿಕೊಳ್ಳುವ ಅಥವಾ ತಳ್ಳಿಹಾಕುವ ವಿವೇಕ–ಈ ಬುದ್ಧಿಶಕ್ತಿಗಳೆಲ್ಲ ನನ್ನಿಂದ ಉಂಟಾಗುತ್ತವೆ".

ಯಸ್ಮಾತ್ ಕ್ಷರಮತೀऽಹಮ್ ಅಕ್ಷರಾದಪಿ ಚೋತ್ತಮಃ ।
ಅತೋऽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥

"ಬ್ರಹ್ಮವಸ್ತುವು ಕ್ಷರಕ್ಕಿಂತಲೂ, ಎಂದರೆ ಜೀವಕ್ಕಿಂತಲೂ ಮತ್ತು ಅಕ್ಷರಾತ್ ಎಂದರೆ ಜಡಾವರಣದೊಳಗಿನ ಕೂಟಸ್ಥಚೇತನಕ್ಕಿಂತಲೂ ಮೇಲ್ಪಟ್ಟದ್ದಾಗಿದೆ. ಆದದ್ದರಿಂದಲೇ ವೇದಗಳೂ ಲೋಕಗಳೂ ಬ್ರಹ್ಮವಸ್ತುವನ್ನು ಪುರುಷೋತ್ತಮನೆಂದು ಕರೆಯುತ್ತವೆ".

ವ್ಯಾಸರಿಗೆ ಈ ಅಧ್ಯಾಯದಲ್ಲಿ ತುಂಬಾ ಇಷ್ಟವೆಂದು ತೋರುತ್ತದೆ. ಇಲ್ಲಿಯ ಅನೇಕ ಶ್ಲೋಕಗಳು ನಿಜವಾದ ಗೀತಗಳಾಗಿವೆ. ತಾಳಬದ್ಧವಾಗಿ ತರಂಗಗತಿಯಲ್ಲಿ ಹರಿಯುತ್ತವೆ.

ನಿರ್ಮಾನಮೋಹಾ ಜಿತಸಂಗದೋಷಾ
ಅಧ್ಯಾತ್ಮನಿತ್ಯಾ ವಿನಿವೃತ್ತ ಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ
ಗಚ್ಛನ್ತ್ಯ ಮೂಢಾಃ ಪದಮವ್ಯಯಂ ತತ್

(ಸಾಂಗತ್ಯ)

ನಿರ್ಮಾನಮೋಹರು ಜಿತಸಂಗದೋಷರು
ಪರಮಾತ್ಮನಿಷ್ಠರು ಗತಕಾಮರು ।
ಸುಖದುಃಖಾದಿದ್ವಂದ್ವಬಂಧವಿಮುಕ್ತರು
ಸೇರ್ವರವ್ಯಯಪದವನು ಧೀರರು ॥

ಸಂಗ್ರಹ

ಕ್ಷರವನುಮಕ್ಷರವನುಮಾ- ।
ಯೆರಡನುಮಾವರಿಸಿ ಧರಿಸಿ ನೆರೆದಿರ್ಪ ಪರಾ- ॥
ತ್ಪರವಸ್ತುಪದವ ಬಣ್ಣಿಪ ।
ಪುರುಷೋತ್ತಮಯೋಗವಿವೃತಿ ಪಂಚದಶೋಕ್ತಂ ॥

ಮಾನುಷ್ಯಹೃನ್ಮರ್ಮಸಮಗ್ರವೇತ್ತಂ ।
ನಾನಾಜನಾಕೂತವಿದಾಪ್ತಮಿತ್ರಂ ॥
ಸಾನುಗ್ರಹಂ ರೂಪವ ತಾಳ್ದನೀಶಂ ।
ಶ್ರೀನಂದಗೋಪಪ್ರಿಯನಪ್ರಮೇಯಂ ॥

ಅಥ ದೈವಾಸುರಸಂಪದ್ವಿಭಾಗಯೋಗೋ ನಾಮ ಷೋಡಶೋಽಧ್ಯಾಯಃ

ಶ್ರೀಭಗವಾನುವಾಚ-

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್

॥ ೧ ॥

ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್

॥ ೨ ॥

ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ

॥ ೩ ॥

ದಂಭೋ ದರ್ಪೋಽತಿಮಾನಶ್ಚ ಕ್ರೋಧಃ ಪಾರುಷ್ಯಮೇವಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್

॥ ೪ ॥

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ ।
ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ

॥ ೫ ॥

ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು

॥ ೬ ॥

ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।
ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ

॥ ೭ ॥

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಮ್

॥ ೮ ॥

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ

॥ ೯ ॥

ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ।
ಮೋಹಾದ್ಗೃಹೀತ್ವಾಸದ್ಗ್ರಾಹಾನ್ ಪ್ರವರ್ತಂತೇಽಶುಚಿವ್ರತಾಃ

॥ ೧೦ ॥

ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ ।
ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ

॥ ೧೧ ॥

ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್

॥ ೧೨ ॥

ಇದಮದ್ಯ ಮಯಾ ಲಬ್ಧಮಿಮಂ ಪ್ರಾಪ್ಸ್ಯೇ ಮನೋರಥಮ್ ।
ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಮ್

॥ ೧೩ ॥

ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ ।
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ

॥ ೧೪ ॥

ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ

॥ ೧೫ ॥

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ

॥ ೧೬ ॥

ಆತ್ಮಸಂಭಾವಿತಾಃ ಸ್ತಬ್ಧಾ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಮ್

॥ ೧೭ ॥

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ

॥ ೧೮ ॥

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು

॥ ೧೯ ॥

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್

॥ ೨೦ ॥

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್

॥ ೨೧ ॥

ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ ।
ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂ ಗತಿಮ್

॥ ೨೨ ॥

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್

॥ ೨೩ ॥

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ

॥ ೨೪ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ದೈವಾಸುರಸಂಪದ್ವಿಭಾಗಯೋಗೋ ನಾಮ ಷೋಡಶೋಽಧ್ಯಾಯಃ

ಸೂಚನೆ

ಮನುಜಂ ದೇವಾಸುರಲ- ।
ಕ್ಷಣಮಿಶ್ರಿತನವನ ಜಗಕೆ ಕಟ್ಟುವ ಸಂಪ- ॥
ದ್ಗುಣಮಾಸುರಮದರಿಂ ಮೋ- ।
ಚನೆಯಾಗಿಪ ಸಂಯಮಾದಿಗಳ ದೈವ್ಯಧನಂ

॥ ೧ ॥

ಗಗನದಿ ತೇಲುವ ಪಂಜರ ।
ಜಗಮಿದು ನಿಕರ್ಮಫಲವನದರೊಳಗುಣುವಾ ॥
ಖಗ ಜೀವಂ ಗೂಡೊಡೆದದು ।
ನೆಗೆದೇರಲ್ ದೊರೆಗುಮದಕನಂತದ ಸೌಖ್ಯಂ

॥ ೨ ॥

ಪಂಜರದೊಳಗುಣಿಸುಗಳಾ ।
ನಂಜುಂ ಜೇನುಂ ಖಗಕ್ಕೆ ಮತ್ತೇರಿಸುಗುಂ ॥
ಮುಂಜಾಗೃತಿಯಿಂ ನೀನದ- ।
ಕಂಜದೆ ಕೈಸಾಗಿದಂತೆ ಸವೆಯಿಸು ಗೂಡಂ

॥ ೩ ॥

ಸಾರಾಂಶ

ದೈವಾಂಶ ಆಸುರಾಂಶಗಳ ಮಿಶ್ರಣವೇ ಮನುಷ್ಯ. ಮನುಷ್ಯಲೋಕ ಅವನಿಗೆ ಸ್ವಸಂಸ್ಕಾರ ಸ್ಥಾನ. ಪ್ರಕೃತಿ ಅವನನ್ನು ತ್ರಿಗುಣಪ್ರಭಾವಗಳಿಗೀಡು ಮಾಡಿ ಅವನು ತನ್ನ ದೈವಾಂಶ ಪ್ರಭಾವದಿಂದ ಪ್ರಗತಿಗೋ ಅಸುರಾಂಶಪ್ರಭಾವದಿಂದ ಅಪಗತಿಗೋ ಹೋಗುವಂತೆ ಮಾಡುತ್ತಾಳೆ. ಪ್ರಗತಿಯನ್ನೋ ಅಪಗತಿಯನ್ನೋ ವಿವೇಕ ಮಾಡಿ ವರಿಸಿಕೊಳ್ಳುವ ಸ್ವಾತಂತ್ರ್ಯ ಮನುಷ್ಯನಿಗುಂಟು.

ಈಶ್ವರಾಂಗೀಕಾರ, ಈಶ್ವರವಿಧೇಯತೆ ಈ ಎರಡಂಶಗಳನ್ನೊಳಗೊಂಡ ಧರ್ಮಮಾರ್ಗವು ದೈವಾಸುರಗುಣಪರಾಮರ್ಶೆಯಿಂದ ಗೋಚರವಾಗತಕ್ಕದ್ದು. ಧರ್ಮನಿರ್ಣಯಕ್ಕೆ ಸಹಾಯಕಗಳಾದ ವೇದಶಾಸ್ತ್ರಾದಿಗಳನ್ನು ಕಡೆಗಣಿಸಿದ್ದರಿಂದ ಪುಣ್ಯಪಾಪಗಳ ಪರಿವೆ ಮಾಯವಾಗಿದೆ. ಈ ಸಂಗತಿಯಲ್ಲಿ ಕಾಣಬಹುದು ಈ ಹೊತ್ತಿನ ಪ್ರಪಂಚದ ಬಹುಪ್ರಕಾರದ ದುರವಸ್ಥೆಗಳ ಬೀಜವನ್ನ. ಇಂದ್ರಿಯಾತೀತ ತತ್ತ್ವಜ್ಞಾನಕ್ಕೆ ಏಕೈಕಸಾಧನವಾದ ವೇದದ ಕಡೆಗೂ, ತತ್ತ್ವಾನುಸಂಧಾನವು ಅಪೇಕ್ಷಿಸುವ ಮನೋಬುದ್ಧಿಸಿದ್ಧತೆಗಳನ್ನು ಬೋಧಿಸುವ ಶಾಸ್ತ್ರಾದಿಗಳ ಕಡೆಗೂ ಮಾನವತೆಯ ಗಮನ ಈಗಲಾದರೂ ಹರಿದೀತೆ?

ಯಾವ ದೃಷ್ಟಿಯಿಂದ ನೋಡಿದರೂ ಬುದ್ಧಿಕಾರ್ಯವು ಅವಶ್ಯವೆಂಬುದು ನಿರ್ವಿವಾದ. ಆದರೆ ಅತೀಂದ್ರಿಯತತ್ತ್ವಗ್ರಹಣಕ್ಕೆ ಬುದ್ಧಿ ಒದಗಬೇಕಾದರೆ ಅದು ವೇದಾಂಗೀಕಾರವೆಂಬ ಆವರಣಕ್ಕೆ ಒಳಪಡಬೇಕಾಗುತ್ತದೆ. ಶಾಸ್ತ್ರದಿಂದ ಬುದ್ಧಿಗೊದಗುವ ನೀತಿಬಲವು ತತ್ತ್ವಾನುಸಂಧಾನಕ್ಕೆ ಪೋಷಕವಾಗುತ್ತದೆ. ವೇಗವರ್ಧಕವಾಗುತ್ತದೆ. ಲೌಕಿಕವಾದ ಇಂದ್ರಿಯಕ್ಷೇತ್ರಗಳಲ್ಲಿ ಪುರುಷಬುದ್ಧಿಯು ಪ್ರಧಾನ; ಅಲೌಕಿಕ ಕ್ಷೇತ್ರಗಳಲ್ಲಿ ವೇದಶಾಸ್ತ್ರಗಳು ಪ್ರಧಾನ. ತತ್ತ್ವಾನುಕೂಲವಾದ, ತತ್ತ್ವಾಭಿಮುಖವಾದ ಬುದ್ಧಿವ್ಯಾಪಾರವು ಸರ್ವಥಾ ಅಪೇಕ್ಷಣೀಯವೇ.

ಪ್ರಕರಣ ೧೭

ಅಧ್ಯಾಯ ೧೬ - ದೈವಾಸುರಸಂಪದ್ವಿಭಾಗಯೋಗವೆಂಬ

ದೈವಾಸುರಭೇದವಿವೇಕಯೋಗ

ಪ್ರಕೃತಿಯು ಮನುಷ್ಯಚರ್ಯೆಯಲ್ಲಿ ಎರಡು ವಿಧವಾಗಿ ವ್ಯಕ್ತಪಡುತ್ತದೆ ಎಂದು ಒಂಭತ್ತನೆಯ ಅಧ್ಯಾಯದ ೧೦-೧೩ನೆಯ ಶ್ಲೋಕಗಳಲ್ಲಿ ನೋಡಿದ್ದೇವೆ. ಒಂದು "ಆಸುರೀಂ ರಾಕ್ಷಸೀಂ ಚೈವ" ಎಂಬ ವಿಧ; ಇನ್ನೊಂದು "ದೈವೀಂ" ಎಂಬ ವಿಧ. ಉಭಯ ವಿಧಗಳೂ ಪ್ರಕೃತಿಯ ಅಭಿವ್ಯಕ್ತಿಯೇ. ಅವೆರಡೂ ಮನುಷ್ಯರಲ್ಲಿ ಬೇರೆಬೇರೆಯಾಗಿಯಾಗಲಿ ಬೆರೆತುಕೊಂಡಾಗಲಿ ಇರುವುದಕ್ಕೆ ಕಾರಣವು ಜೀವಿಯ ಪೂರ್ವಕರ್ಮ. ಕರ್ಮದಂತೆ ಜನ್ಮ; ಪುಣ್ಯದಿಂದ ಉತ್ತಮಜನ್ಮ; ಪಾಪದಿಂದ ನೀಚಜನ್ಮ.

ಶುಚೀನಾಂ ಶ್ರೀಮತಾಂ ಗೇಹೇ ॥ (೬-೪೧)

ಎಂಬಲ್ಲಿ ಸೂಚಿತವಾಗಿರುವುದು ಈ ಅಭಿಪ್ರಾಯವೇ. ಕೆಲವರು ಸತ್ಕರ್ಮ ಮಾಡಬೇಕೆಂಬ ಉದ್ದೇಶದಿಂದಲೇ, ಭಗವದ್ಭಕ್ತಿಯಿಂದ ಕೂಡಿಯೇ, ಒಂದಾನೊಂದು ಪುಣ್ಯ ಕರ್ಮವನ್ನು ಮಾಡಿದರೂ ಅದು ಸಫಲವಾಗದೆ ಹೋದ ಸಂದರ್ಭಗಳಿವೆಯಲ್ಲ?–ಎಂದರೆ, ಅಂಥವರು ಮಾಡಿದ ಪುಣ್ಯ ವ್ಯರ್ಥವಾಗಲಿಲ್ಲ; ಅದರ ಫಲ ಇದ್ದೇ ಇದೆ; ಸತ್ಕುಲದಲ್ಲಿ, ಶುಚಿಯಾಗಿರತಕ್ಕವರ ಕುಲದಲ್ಲಿ, ಶ್ರೀಮಂತರ ಎಂದರೆ ಕಾಂತಿವಂತರಾದವರ, ಒಳ್ಳೆಯ ಲಕ್ಷಣವುಳ್ಳವರ ಕುಂಟುಂಬದಲ್ಲಿ ಜನ್ಮವೆತ್ತುವುದು–ಇತ್ಯಾದಿ ಜನ್ಮಾಂತರ ಫಲಗಳು ಕೆಲವು ಸಂದರ್ಭಗಳಲ್ಲಿ ಪುಣ್ಯಕರ್ಮಕ್ಕೆ ಬರುತ್ತವೆ.

ಈ ಪೂರ್ವಾಪರ ಜನ್ಮಜನ್ಮಾಂತರಗಳ ಕಾರಣಕಾರ್ಯಸಂಬಂಧವನ್ನು ಹದಿನಾರನೆಯ ಅಧ್ಯಾಯವು ತಿಳಿಸುತ್ತದೆ.

ಮೊದಲು ಉತ್ತಮಜನ್ಮದ ಲಕ್ಷಣಗಳನ್ನು ಭಗವಂತನು ಹೇಳುತ್ತಾನೆ:

ಅಭಯಂ ಸತ್ತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥

“ಅಭಯಂ” ಎಂದರೆ ಸತ್ಯವನ್ನು ಹೇಳುವುದರಲ್ಲಿಯೂ ಧರ್ಮವನ್ನು ಆಚರಿಸುವುದರಲ್ಲಿಯೂ ಭಯಕ್ಕೆ ಎಡೆಕೊಡದಿರುವುದು. ಭಯವಿದ್ದಾಗ ಸತ್ಯವು ಹಿಂಜರಿಯುತ್ತದೆ. ಸತ್ಯಕ್ಕೂ ನ್ಯಾಯಕ್ಕೂ ಮೊದಲು ಬೇಕಾದದ್ದು ನಿರ್ಭೀತಿ. ಸತ್ಯ ಹೇಳಿದರೆ ಕೇಡಾದೀತೆಂದು ಅನೇಕ ಸಂದರ್ಭಗಳಲ್ಲಿ ಜನರು ಭಯಪಡುತ್ತಾರೆ. Fear of consequence ಎನ್ನುವುದು ಇದನ್ನೇ. ಇನ್ನೊಬ್ಬರೇನೆಂದುಕೊಂಡಾರೋ ಎಂಬ ಭಯ–ಉಪಾಯವಾಗಿ ಏನೋ ಒಂದು ಹೇಳಿಬಿಡೋಣ ಎಂಬ ಚಾಲಾಕಿನ ಮನೋಭಾವ–ಈ ಹೊತ್ತಿನ ಪ್ರಪಂಚದಲ್ಲಿ ಬಲವಾಗಿದೆ. ಅದು ಹೋಗಿ ನಾನು ಭಗವಂತನಿಗೆ ವಿಧೇಯನಾಗಿರಬೇಕು, ಅವನು ನನ್ನನ್ನು ಕಾಪಾಡುತ್ತಾನೆ–ಎಂಬ ಬಲವಾದ ನಂಬಿಕೆಯಿರಬೇಕು. ಆ ನಂಬಿಕೆಯಿದ್ದರೆ ಮನಸ್ಸಿಗೆ ನಿರ್ಭೀತತೆ ಬರುತ್ತದೆ. ಗಾಂಧಿಯವರಲ್ಲಿ ಈ ನಿರ್ಭೀತತೆಯನ್ನು ಕಾಣಬಹುದು. ಭಗವಂತನನ್ನು ನಂಬಿದವನ ಲಕ್ಷಣ ಇದು.

> ಅಭಯಂ ವೈ ಬ್ರಹ್ಮ ।। (ಬೃ. ಉ.)

ಅಭಯವೆಂದರೆ ಅಧಿಕ ಪ್ರಸಂಗಿತನವಲ್ಲ–ಉದ್ಧತತ್ವವಲ್ಲ; ವಿನಯಪೂರ್ವಕವಾದ ನಿರ್ಭೀತತೆ ಅದು; ಸತ್ಯದ ಧೈರ್ಯ ಅದು.

“ಸತ್ತ್ವಸಂಶುದ್ಧಿಃ” : ಮನಸ್ಸನ್ನು ನಿರ್ಮಲವಾಗಿ, ಪ್ರಕಾಶವಾಗಿ, ಜಾಗರೂಕವಾಗಿ ಇರಿಸಿಕೊಳ್ಳುವುದು–ಸ್ವಾರ್ಥಕೃತ್ರಿಮಗಳಿಲ್ಲದಂತೆ ಎಚ್ಚರದಿಂದಲೂ ಪ್ರಸನ್ನವಾಗಿಯೂ ಮನಸ್ಸನ್ನಿರಿಸುವುದು. ಬೆಟ್ಟದಿಂದ ಹರಿದುಬರುವ ನೀರಿನ ಹಾಗೆ ಮನಸ್ಸು ನಿರ್ಮಲವಾಗಿರಬೇಕು. ಅದೇ ಪ್ರಸನ್ನತೆ. ಮನಸ್ಸಿನಲ್ಲಿ ವಕ್ರತೆಗಳು ಸಂದೇಹಗಳು ಕುಟಿಲಗಳೂ ಇರಬಾರದು.

“ಜ್ಞಾನಯೋಗವ್ಯವಸ್ಥಿತಿಃ” : ಜೀವನದ ಪರಮತತ್ತ್ವವನ್ನು ಕುರಿತ ವಿಚಾರಚಿಂತನೆಗಳಲ್ಲಿಯೂ ಅದನ್ನು ಜೀವನದಲ್ಲಿ ಅನುಸಂಧಾನ ಮಾಡುವುದರಲ್ಲಿಯೂ ನಿರಂತರವಾದ ನಿಷ್ಠೆ. “ಈ ತತ್ತ್ವವನ್ನು ನಾನು ತಿಳಿದುಕೊಳ್ಳಬೇಕು, ಅದಕ್ಕೆ ಏನು ಸಾಧನೆ ಬೇಕೋ ಅದನ್ನು ಮಾಡುತ್ತೇನೆ, ಈ ತತ್ತ್ವವನ್ನು ಸಾಧಿಸಿಯೇ ಸಾಧಿಸುತ್ತೇನೆ” – ಎಂಬ ತೀವ್ರ ತತ್ತ್ವ ಕುತೂಹಲವೂ ಪ್ರಯಾಸಸಿದ್ಧತೆಯೂ ಇರಬೇಕು.

“ದಾನಂ” : ತನ್ನದೆಂಬ ಸ್ವತ್ತನ್ನು ಉಚಿತರಾದ ಇತರರ ಉಪಯೋಗಕ್ಕಾಗಿ ಕೊಡುವುದು. ಇದೂ ದೈವಸ್ವಭಾವದ ಲಕ್ಷಣ. ಬೃಹದಾರಣ್ಯಕದಲ್ಲಿ ನೋಡಿದ್ದೇವೆ: “ದಾಮ್ಯತ ದತ್ತ ದಯಧ್ವಮ್” –ಎಂದು. ದಮ ದೇವತೆಗಳಿಗೆ ಕೊಟ್ಟ ಉಪದೇಶ; ದಾನ ಮನುಷ್ಯರಿಗೆ ಉಪದೇಶ; ದಯೆ ಅಸುರರಿಗೆ. ಹೀಗೆ ಮನುಷ್ಯರಲ್ಲಿ ಅಭ್ಯಾಸಕ್ಕೆ ಬರಬೇಕಾದ ದೈವೀಗುಣ ದಾನ. ಈ ಗುಣ ಇದ್ದರೆಯೇ ನಮಗೆ ಹೃದಯ ಕರಗಿದೆ, ನಾವು ಬೇರೆ ಜೀವಗಳಲ್ಲಿ ಸಹಾನೂಭುತಿ ಉಳ್ಳವರಾಗಿದ್ದೇವೆ ಎಂದು ಸಿದ್ಧವಾಗುವುದು.

ಈಗಿನ ಕಾಲದಲ್ಲಿ ವಿರಳವಾಗುತ್ತಿರುವ ಗುಣಗಳ ಪೈಕಿ ದಾನವೂ ಒಂದು. ಪುರೋಹಿತವೃತ್ತಿಯನ್ನು “ಪ್ರೀಸ್‌ಟ್‌ಕ್ರ್ಯಾಫ್‌ಟ್” (Priestcraft) ಕಸಬಿನ ತಂತ್ರ ಎಂದು ಕರೆದು, ಅವರಿಗೆ ಕಾಸು ಬೇಕು, ಅದಕ್ಕಾಗಿ ಈ ಉಠಾವಣೆ ಎಬ್ಬಿಸುತ್ತಾರೆ ಎಂದು ಅವರ ಮೇಲೆ ಅಪವಾದ ಹೊರಿಸುತ್ತೇವೆ. ಟಿ.ಎಚ್. ಗ್ರೀನ್ ಎಂಬ ಆಂಗ್ಲೇಯ ತಾತ್ತ್ವಿಕ ಹೇಳಿದ್ದಾನೆ: ನಮ್ಮಲ್ಲಿ ಅನೇಕರಿಗೆ ಮನಸ್ಸಿನಲ್ಲಿ ಒಳ್ಳೊಳ್ಳೆಯ ಉದ್ದೇಶಗಳಿರುತ್ತವೆ; ಆದರೆ ಅವು ಮಾತಿನಲ್ಲಿ ಪರ್ಯವಸಾನ ಹೊಂದುತ್ತವೆ, ಕೆಲಸದಲ್ಲಿ ಹೊರಪಡುವುದಿಲ್ಲ. ಜಪಾನ್ ದೇಶದವರಲ್ಲಿ ಕಥೆಯೊಂದುಂಟಂತೆ: ಯಾರೋ ಒಬ್ಬ ಯಾವಾಗಲೂ ದೊಡ್ಡದೊಡ್ಡ ಮಾತುಗಳನ್ನಾಡುತ್ತಲೇ ಜೀವನವನ್ನೆಲ್ಲ ಕಳೆದನಂತೆ. ಅವನು ಯಮಲೋಕಕ್ಕೆ ಹೋದಾಗ ಅಲ್ಲಿಯ ಬರಿಯ ಬಾಯಿ ನಾಲಗೆ ಆಡಿಸುತ್ತಿದ್ದವರ ಕೋಣೆಯೊಳಕ್ಕೆ ಅವನನ್ನು ದಬ್ಬಿದರಂತೆ. ಎತ್ತ ತಿರುಗಿದರೂ ಬಾಯಲ್ಲಿ ನಾಲಗೆ ಅಲ್ಲಾಡುತ್ತಿದೆ; ಎಲ್ಲಿ ನೋಡಿದರೂ ತೆರೆದ ತುಟಿ, ಅಲುಗಾಡುತ್ತಿರುವ ನಾಲಗೆ. “ಇದೇಕೆ?” ಎಂದು ಅವನು ಕೇಳಿದ್ದಕ್ಕೆ ಅವರೆಂದರು: “ಅಯ್ಯಾ, ಇಷ್ಟೇ ತಾನೆ ನೀನು ಭೂಲೋಕದಲ್ಲಿ ಮಾಡಿದ್ದು?” ಗ್ರೀನ್ ಹೇಳುತ್ತಾನೆ: ದೊಡ್ಡ ವಿಷಯಗಳನ್ನು ಕುರಿತು ಬಹಳ ಹೆಚ್ಚು ಮಾತನಾಡಬಾರದಂತೆ. ಮಾತು ಹೆಚ್ಚಿದಂತೆ ನೀತಿ ಕುಗ್ಗುತ್ತದೆ.

ನಮ್ಮ ಪೂರ್ವಿಕರು ದಾನಗುಣವನ್ನು ಬಹಳವಾಗಿ ಪ್ರಶಂಸೆ ಮಾಡಿದ್ದಾರೆ. ಅದರಲ್ಲಿಯೂ ಗುಪ್ತದಾನವನ್ನು. ಮನೆಯಲ್ಲಿ ಮುದುಕಿಯಾದಾಕೆ, ಮಿಕ್ಕವರದೆಲ್ಲ ಊಟ ಮುಗಿದ ಮೇಲೆ, ತಾನು ತನಗೆಂದು ಬಡಿಸಿಕೊಂಡಿದ್ದದ್ದರಲ್ಲಿ ಒಂದಷ್ಟನ್ನು ತೆಗೆದು ಭಿಕ್ಷದವರಿಗೋ ಬೇರೊಂದು ಪ್ರಾಣಿಗೋ ಕೊಟ್ಟ ಹೊರತು ಊಟಕ್ಕೆ ಕುಳಿತುಕೊಳ್ಳುತ್ತಿರಲಿಲ್ಲ, ಅದೇ ಭೂತಬಲಿ.

“ದಮಃ” : ಇಂದ್ರಿಯಗಳನ್ನು ತನ್ನ ಅಧಿಕಾರದೊಳಗೆ ಇರಿಸಿಕೊಂಡಿರುವುದು.

“ಯಜ್ಞಃ” : ಈಶ್ವರಪೂಜೆ. Sacrifice ಎಂಬ ಮಾತನ್ನು ಇಂಗ್ಲಿಷಿನಲ್ಲಿ ಉಪಯೋಗಿಸುತ್ತಾರೆ. ಹಾಗೆಂದರೆ ಆಹುತಿ, ಬಲಿ. ಅಹಂಕಾರ ಮಮಕಾರಗಳನ್ನು ಬಲಿಕೊಡಬೇಕೆಂದರ್ಥ.

“ಸ್ವಾಧ್ಯಾಯಃ” : ತನ್ನ ವೃತ್ತಿಗೆ ಸಂಬಂಧಪಟ್ಟ ಶಾಸ್ತ್ರವ್ಯಾಸಂಗ, ಗ್ರಂಥಕಾಲ ಕ್ಷೇಪ–ನಾನು ತಿಳಿದುಕೊಳ್ಳಬೇಕಾದದ್ದು ಅಪಾರವಾಗಿದೆಯೆಂಬ ಅಂತರಂಗನಮ್ರತೆ; ಅದು ಬುದ್ಧಿಯ ಕೃಷಿಗೆ ಸಾಧಕ. “ಸ್ವ” ಎಂದರೆ ತನಗೆ ಸಂಬಂಧಪಟ್ಟಿದ್ದರ ಅಧ್ಯಯನ. ಬ್ರಾಹ್ಮಣನಿಗೆ ಮುಖ್ಯವಾಗಿ ವೇದದ ಸ್ವಶಾಖಾಧ್ಯಯನ. ಇಂಜಿನಿಯರುಗಳಿಗೆ ಶಿಲ್ಪ; ಡಾಕ್ಟರುಗಳಿಗೆ ಆಯುರ್ವೇದ. ನಮ್ಮಲ್ಲಿ ಧನುರ್ವೇದ, ನಾನಾ ವಿಧದ ಶಿಲ್ಪ, ಆಯುರ್ವೇದ–ಇವೆಲ್ಲವನ್ನೂ ಉಪವೇದಗಳೆಂದೇ ಗಣನೆ ಮಾಡಿದ್ದಾರೆ.

“ತಪಃ” : ಧ್ಯೇಯವಸ್ತುವಿನ ವಿನಾ ಬೇರಾವುದನ್ನೂ ಸ್ಮರಿಸದ ತದೇಕನಿಷ್ಠೆ ತಾನು ಸಂಪಾದಿಸಿದ್ದನ್ನು ಇತರರಿಗೆ ಕೊಡುವುದನ್ನು ಹೇಗೆ ಅಭ್ಯಾಸ ಮಾಡಿಕೊಳ್ಳಬೇಕೋ ಹಾಗೆಯೇ ತನಗೆ ಬೇಕೆನಿಸುವ ಉಪಭೋಗಗಳನ್ನು ಕಡಮೆ ಮಾಡುವುದನ್ನೂ ಕಲಿಯಬೇಕು ಮತ್ತು ಉದ್ದೇಶಕ್ಕಾಗಿ ಹಗಲಿರುಳೂ ಶ್ರಮಿಸಬೇಕು. ಸಂತತವಾದ ಸಂಕಲ್ಪಾನುಸಂಧಾನವೇ ತಪಸ್ಸು.

“ಆರ್ಜವಮ್” : ಕುಟಿಲಕಪಟಗಳಿಲ್ಲದೆ ಅಂತಸ್ಸಾಕ್ಷಿ ನುಡಿದಂತೆ ನಡೆಯುವ ಸರಳ ವರ್ತನೆ. ಮೇಲೆ ಹೇಳಿದ ಗುಣಗಳ ಜೊತೆಗೆ–

> ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾನ್ತಿರಪೈಶುನಮ್ ।
> ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥

“ಅಪೈಶುನಮ್” : ಎಂದರೆ ಚಾಡಿಹೇಳುವ ಚಾಳಿ ಇಲ್ಲದಿರುವುದು. ಅಲೋಲುಪ್ತ್ವವೆಂದರೆ ಲಂಪಟನಾಗದಿರುವುದು, ಮೈಮರೆತುಕೊಳ್ಳದಿರುವುದು. ಹಾಗೆಂದರೆ ಸುಖಪಡಬಾರದೆಂದು ಅಭಿಪ್ರಾಯವಲ್ಲ. ವಿಷಯಭೋಗದಲ್ಲಿ ಲೋಲನಾಗಬಾರದು ಅಷ್ಟೆ. “ಹ್ರೀಃ” ಎಂದರೆ ಲಜ್ಜೆ. ಇದು ಬಹಳ ದೊಡ್ಡ ಗುಣ. ಮನುಷ್ಯನಿಗೆ ಸಹಜವಾಗಿ ಭಗವಂತನಿಂದ ಬಂದಿರುವ ಒಂದು ಅನುಗ್ರಹ ಇದು. ಯಾರಾದರೂ ಏನಾದರೂ ಅಂದುಕೊಂಡಾರು–ಎಂಬ ಹೆದರಿಕೆಯಿಂದ ಹೊರಟ ಮರ್ಯಾದೆ. ಈ ಹೊತ್ತು ಪ್ರಪಂಚದಲ್ಲಿ ಸಭ್ಯತೆ ಇನ್ನೂ ಅಲ್ಪಸ್ವಲ್ಪವಾದರೂ ಉಳಿದುಕೊಂಡಿದ್ದರೆ ಅದು ಈ ಹ್ರೀಗುಣದಿಂದ. ಸಮಸ್ತ ಮರ್ಯಾದೆಗಳಿಗೂ

ಮೂಲದಲ್ಲಿರುವ ಗುಣ ಇದು. ಅದಕ್ಕಾಗಿಯೇ ವೇದದಲ್ಲಿ ಇದನ್ನು ವಿಶೇಷವಾಗಿ ಪ್ರಶಂಸೆಮಾಡಿರುವುದು.

ತೇಜಃ ಕ್ಷಮಾ ಧೃತಿಃ ಶೌಚಮ್ ಅದ್ರೋಹೋ ನಾತಿಮಾನಿತಾ ।
ಭವನ್ತಿ ಸಂಪದಂ ದೈವೀಮ್ ಅಭಿಜಾತಸ್ಯ ಭಾರತ ॥

ತೇಜಸ್ಸು, ಕ್ಷಮೆ, ಧೈರ್ಯ, ಶುಚಿತ್ವ, ನಿರ್ವಂಚನೆ, "ನ+ಅತಿಮಾನಿತಾ" ಎಂದರೆ ಸ್ವಾಭಿಮಾನ ವ್ಯಾಮೋಹಗಳನ್ನು ಬೆಳಸಿಕೊಳ್ಳದಿರುವುದು. ಸ್ವಲ್ಪಮಟ್ಟಿನ ಮಾನಿತೆ ಅನಿವಾರ್ಯ. ಅದನ್ನು ಹೆಚ್ಚು ಬೆಳಸಿಕೊಳ್ಳಬಾರದು. ಮಾನಿತೆ ಪೂರ್ತಿಯಾಗಿ ಇಲ್ಲದೆ ಹೋದರೆ ತಂದೆ ಮಕ್ಕಳ ಪ್ರೀತಿಯೇ ಸಾಧ್ಯವಾಗದೆಹೋದೀತು. ಅತಿಯಾದ ಅಭಿಮಾನ ಕೂಡದೆನ್ನುತ್ತಾರೆ.

ಇವೆಲ್ಲ ಸಾತ್ತ್ವಿಕಗುಣಗಳು. ಅವೇ ದೈವೀಸಂಪತ್ತು. "ಅಭಿಜಾತ" ಎಂದರೆ ಪುಣ್ಯಮಾಡಿ ಹುಟ್ಟಿದವನು. ಅಂಥವನಲ್ಲಿ ದೈವಗುಣಗಳು ಇರುತ್ತವೆ. ತಾನು ಸತ್ಕುಲಪ್ರಸೂತನೆಂದು ಯಾರು ತಿಳಿದುಕೊಂಡು ಅದಕ್ಕೆ ತಕ್ಕ ನಡವಳಿಕೆ ನಡೆಯುತ್ತಾನೋ ಅವನಿಗೆ, –ದೈವವನ್ನು ಉದ್ದೇಶಿಸಿ ದೇವಾರಾಧನೆಗೆ ತಕ್ಕ ಅರ್ಹತೆಯನ್ನು ಯಾರು ಸಂಪಾದಿಸಿಕೊಂಡಿದ್ದಾನೋ ಅವನಿಗೆ, –ಈ ಸಂಪತ್ತುಂಟಾಗುತ್ತದೆ. ಅದು ಜೀವಕ್ಕಿರುವ ಕಟ್ಟುಗಳನ್ನು ಬಿಡಿಸುತ್ತದೆ. ಇವಿಷ್ಟು ದೈವೀ ಸಂಪತ್ತು.

ಈ ಗುಣಸಂಪತ್ತಿಗೆ ವಿರುದ್ಧಗಳಾದವು ಆಸುರೀ ಗುಣಗಳು.

ದಂಭೋ ದರ್ಪೋಽತಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥

ದಂಭವೆಂದರೆ ಗರ್ವಪ್ರದರ್ಶನ; ಇತರರಲ್ಲಿ ಇಲ್ಲದ್ದು ತನ್ನಲ್ಲಿ ಉಂಟೆಂಬ ಸ್ವಾಭಿಮಾನ. ದರ್ಪವೆಂದರೆ ಮನಸ್ಸಿನ ಕಾಠಿನ್ಯ, ಮನಸ್ಸಿನ ಕೊಬ್ಬು, ಇತರರು ತನಗಿಂತ ಕೀಳಾದವರೆಂಬ ಭಾವನೆ. ಅತಿಶಯವಾದ ವ್ಯಾಮೋಹ, ಜಿದ್ದು, ಕ್ರೂರತೆ, ಜ್ಞಾನಶೂನ್ಯತೆ, ವಿಚಾರಶೂನ್ಯತೆ- ಇವೆಲ್ಲ ತಾಮಸಗುಣಗಳು. ಅವು ಪೂರ್ವಜನ್ಮಗಳ ಪಾಪದ ಫಲ. ಅವು ಜೀವಕ್ಕಿರುವ ಕಟ್ಟುಗಳನ್ನು ಇನ್ನಷ್ಟು ಬಿಗಿಮಾಡುತ್ತವೆ.

ಇಷ್ಟು ಹೇಳಿ ಈಗ ಈ ಎರಡು ಜಾತಿಗುಣಗಳ ಪರಿಣಾಮಗಳೇನೆಂಬುದನ್ನು ಹೇಳುತ್ತಾನೆ ಸ್ವಾಮಿ:

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಽಸುರೀ ಮತಾ ।
ಮಾ ಶುಚಃ ಸಂಪದಂ ದೈವೀಂ ಅಭಿಜಾತೋಽಸಿ ಪಾಂಡವ ॥

“ಮೋಕ್ಷಕ್ಕೆ ಸಾಧಕವಾಗತಕ್ಕವು ದೈವೀಗುಣಗಳು. ಬಂದನಕ್ಕೆ ಕಾರಣವಾಗತಕ್ಕದ್ದು ಆಸುರೀಗುಣ. ಅರ್ಜುನ, ನೀನು ಮೋಕ್ಷಸಂಪಾದನೆಗೆ ಅರ್ಹನು ಹೌದೋ ಅಲ್ಲವೋ ಎಂದು ಸಂದೇಹಿಸಿ ಶೋಕಿಸಬೇಡ. ನೀನು ದೈವೀಗುಣಗಳುಳ್ಳವನಾಗಿ ಹುಟ್ಟಿದ್ದಿ. ನಿನಗೆ ಮೋಕ್ಷಮಾರ್ಗಾರ್ಹತೆಯುಂಟು.”

ಇಲ್ಲಿ ಒಂದು ವಿಚಾರ, ಭಗವಂತನು ದೈವೀಗುಣಗಳನ್ನು ಪಟ್ಟಿಮಾಡಿ ಹೇಳಿದ; ಆಸುರೀ ಗುಣಗಳನ್ನು ಸೂಚಿಸಿದ; ಮುಂದೆ ಇನ್ನೂ ವರ್ಣಿಸುವವನಾಗಿದ್ದಾನೆ. ಮಾನುಷೀ ಗುಣಗಳನ್ನು ಮಾತ್ರ ಏಕೆ ಹೇಳಲಿಲ್ಲ? ಮಾನುಷೀ ಎಂಬ ಗುಣಗಳಿಲ್ಲವೋ? –ಎಂದರೆ, ಹೇಳಿರುವ ಗುಣಗಳೆಲ್ಲವೂ ಮಾನುಷವೇ.ದೈವಜಾತಿಯಲ್ಲಾಗಲಿ ಆಸುರ ಜಾತಿಯಲ್ಲಾಗಲಿ ಸೇರಿಸಲಾಗದ ಮನುಷ್ಯ ಗುಣ ಒಂದೂ ಇಲ್ಲ. ದೈವಾಂಶ ಆಸುರಾಂಶಗಳ ಮಿಶ್ರಣವೇ ಮನುಷ್ಯ. ಇದನ್ನೇ ಶ್ರುತಿ ಹೇಳಿರುವುದು:

ಪುಣ್ಯೇನ ಪುಣ್ಯಂ ಲೋಕಂ ನಯತಿ । ಪಾಪೇನ ಪಾಪಮ್ । ಉಭಾಭ್ಯಾಮೇವ ಮನುಷ್ಯ ಲೋಕಮ್ ॥

–ಪ್ರಶ್ನೋಪನಿಷತ್ತು

ಎರಡೂ ಮಿಶ್ರವಾದರೆ ಅವನು ಮನುಷ್ಯಲೋಕಕ್ಕೆ ಬರುತ್ತಾನೆ. ಇದು ಅವನಿಗೆ ಒಂದು ಅವಕಾಶ: ಇಲ್ಲಿಂದ ಉತ್ತಮಗತಿಗೆ ಬೇಕಾದರೂ ಹತ್ತಬಹುದು, ಅಧೋಗತಿಗೆ ಬೇಕಾದರೂ ಇಳಿಯಬಹುದು. ಭಗವಂತ ಮನುಷ್ಯನಿಗೆ ಜಗದ್ವ್ಯವಸ್ಥೆಯಲ್ಲಿ ಈ ಸ್ವಾತಂತ್ರ್ಯ ಕೊಟ್ಟಿದ್ದಾನೆ. ಬೃಹದಾರಣ್ಯಕವೂ ಇದನ್ನು ಹೇಳುತ್ತದೆ:

> ಸವಾ...ಕಾಮಮಯೋಽಕಾಮಮಯಃ ಕ್ರೋಧಮಯೋಽಕ್ರೋಧಮಯೋ
> ಧರ್ಮಮಯೋಽಧರ್ಮಮಯಃ ಸರ್ವಮಯಸ್ತದ್ಯದೇತದಿದಂಮಯೋಽದೋಮಯ
> ಇತಿ ಯಥಾಕಾರೀ ಯಥಾಚಾರೀ ತಥಾ ಭವತಿ ॥

ಗುಣಗಳನ್ನು ಇಷ್ಟೇ ಎಂದು ಪಟ್ಟಿಮಾಡುವುದಕ್ಕಾಗುವುದಿಲ್ಲವೆಂದು ಸೂಚಿಸಲು "ಇದಂಮಯಃ ಅದೋಮಯಃ" ಎಂದಿದ್ದಾರೆ. ಬೇಕಾದ್ದು ಬೇಡದ್ದು ಎಲ್ಲ ಮನುಷ್ಯನಲ್ಲಿ ತುಂಬಿಬಿಟ್ಟಿದೆ. ಅವನು ಏನು ಮಾಡುತ್ತಾನೋ ಹೇಗೆ ನಡೆಯುತ್ತಾನೋ ಹಾಗೆ ಆಗುತ್ತಾನೆ.

ಮನುಷ್ಯ ಹೀಗೆ ದೈವಕ್ಕೂ ಆಸುರಕ್ಕೂ ಮಧ್ಯೆ ಉಭಯಮಿಶ್ರನಾಗಿರುವುದರಿಂದ ಅವನು ನಿಂತಲ್ಲಿ ನಿಲ್ಲಲಾಗದೆ ಪ್ರತಿಕ್ಷಣವೂ ಮೇಲಕ್ಕೋ ಕೆಳಕ್ಕೋ ಸಾಗುತ್ತಿರಬೇಕಾಗಿದೆ.

ಪ್ಲೇಟೋ (Plato) ತಾತ್ತ್ವಿಕನದೂ ಇದೇ ಬೋಧನೆ:

"In the human soul, there is a better and also a worse principle; and when the better has the worse under control, then a man is said to be master of himself (which is a term of praise); but when owing to evil education or association, the better principle, which is also the smaller, is overwhelmed by the greater mass of the worse–in this case he is blamed and is called the slave of self and unprincipled."

–*The Republic, book IV*

ಇದೇ ಭಾವನೆ ಬ್ರೌನಿಂಗ್ (Browning) ಕವಿಯ "ಎ ಡೆತ್ ಇನ್ ದಿ ಡೆಸರ್ಟ್" – (A Death in the Desert) ಕವನದಲ್ಲಿ ಕಾಣಬರುತ್ತದೆ:

> Man is not God, but hath God's end to serve, –
> A master to obey, a course to take, –
> Somewhat to cast off, somewhat to become.

Grant this, that man must pass from old to new,
From vain to real, from mistake to fact,
From what once seemed good to what now proves best.
How could man have pregression otherwise?
Progress, man's distinctive mark alone,
Not God's and not the beasts: God is, they are;
Man partly is and wholly hopes to be.

ಗೀತೆ ಆಸುರವೆಂದದ್ದನ್ನು ಬ್ರೌನಿಂಗ್ "ಪಾಶವ" "ತಿರ್ಯಗ್ಜಂತುವಿನಂಥ" ಎಂದು ವರ್ಣಿಸಿದ್ದಾನೆ. ಮನುಷ್ಯನನ್ನು ಕ್ಷಣಕ್ಷಣವೂ ದೈವಾಂಶವು ಮೇಲಕ್ಕೋ ಅಥವಾ ಆಸುರ–ಪಾಶವ ಕೆಳಕ್ಕೋ ಸೆಳೆಯುತ್ತಿರುತ್ತದೆ. ಮೇಲಕ್ಕೇರಿದರೆ ಪ್ರಗತಿ; ಕೆಳಕ್ಕಿಳಿದರೆ ಅಪಗತಿ. ಪ್ರಗತಿಯೂ ಬೇಡ, ಅಪಗತಿಯೂ ಬೇಡ ಎಂದು ಒಂದು ಕ್ಷಣವೂ ಅವನಿರಲಾಗದು. ಇದ್ದಲ್ಲಿಯೇ ಇರುವುದು ಆಗದು. ಪ್ರಕೃತಿ ಅವನನ್ನು ಸುಮ್ಮನೆ ಬಿಡಬೇಕಲ್ಲ? ತ್ರಿಗುಣಗಳೆಂಬ ತ್ರಿಶೂಲದಿಂದ ಚುಚ್ಚಿ ಚುಚ್ಚಿ ಪರಿದಾಡಿಸುತ್ತಿರುತ್ತಾಳೆ. ದೈವಾಸುರಗಳೆರಡೂ ಪ್ರಕೃತಿಶಕ್ತಿಗಳು:

ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ ॥

ಮನುಷ್ಯನನ್ನು ಪ್ರಕೃತಿ ಒಂದು ಜಿಡ್ಡುಗಂಬದ (Greasy Pole) ಮೇಲೆ ಇರಿಸಿದ್ದಾಳೆ. ಅವನು ಅದನ್ನಪ್ಪಿಕೊಂಡು ಒಂದೇ ಕಡೆ ಕುಳಿತಿರಲಾಗದು; ಕಂಬಕ್ಕೆ ಕೈಮುಗಿದು ಗಟ್ಟಿಮನಸ್ಸಿನಿಂದ ಮೇಲಕ್ಕೆ ಮೇಲಕ್ಕೆ ಸರಿಯುತ್ತಿರಬೇಕು. ಒಂದರೆನಿಮಿಷ ಮೈಮರೆತರೆ ಸರ್ರನೆ ಕೆಳಕ್ಕೆ ಜಾರಿ ಬರುತ್ತಾನೆ. ಈ ಅಪಾಯಕ್ರೀಡೆ ನಮ್ಮ ನಿತ್ಯಜೀವನ.

ದೇವತೆಗಳಿಗೆ ಈ ಅಪಾಯವಿಲ್ಲ. ಏಕೆಂದರೆ ಅವರಿರುವುದೇ ಜಗತ್ತಿನ ಮೇಲ್ಗಡೆ -ಊರ್ಧ್ವಲೋಕಗಳಲ್ಲಿ. ಅವರು ಅಲ್ಲಿಂದ ಇಳಿಯುವವರಲ್ಲ. ಅವರಿಳಿದು ಬಂದರೆ ಜಗದ್ವ್ಯವಸ್ಥೆ ತಪ್ಪಿ ವಿಪರೀತವಾಗುತ್ತದೆ. ಸೂರ್ಯಚಂದ್ರರೂ ಮೇಘವಿದ್ಯುತ್ತುಗಳೂ ವಾಯುವರುಣರೂ ಅವರವರ ನಿಯತಕಾರ್ಯಗಳನ್ನು ಸರ್ವದಾ ನಡಸುತ್ತಿರಬೇಕೆಂದು ಪ್ರಕೃತಿ ವಿಧಿ. ಅವರು ಅದರಲ್ಲಿ ತಪ್ಪು ಮಾಡಲಾರರು. ಅವರಿಗೆ ಅಪಗತಿಯಿಲ್ಲ.

ಇನ್ನು ಅಸುರರೋ ಎಂದರೆ ಅವರಿಗೆ ಪ್ರಗತಿ ಎಂಬುದರ ಅರಿವೇ ಇಲ್ಲ, ಉಚ್ಚ ನೀಚ ವಿವೇಕವೇ ಇಲ್ಲ. "ನಾವು ಕೀಳಾಗಿದ್ದೇವಲ್ಲ, ಇನ್ನೂ ಕೆಳಕ್ಕೆ ಬಿದ್ದೇವಲ್ಲ!" ಎಂಬ ಚಿಂತೆ ಕೂಡ ಅವರಿಗಿಲ್ಲ. ಅಂಥಾದ್ದು ಆಸುರಮೋಹ ಅಥವಾ ಪಾಶವಭ್ರಮೆ. ಅವರು ತಿರ್ಯಗ್ಯೋನಿಗಳಲ್ಲಿಯೇ ಹುಟ್ಟಿ ಹುಟ್ಟಿ, ಹಾಗೆ ಪಾಪಶೇಷ ಕ್ಷಯವಾದಾಗ, ಎಂದೋ ಒಂದು ದಿನ ಮಾನವಜನ್ಮಕ್ಕೆ ಬಂದು. ಆ ಬಳಿಕ ಪ್ರಗತಿ ಅಪಗತಿಗಳ ವಿವೇಕಕ್ಕೆ ಅರ್ಹರಾದಾರು. ಅದು ಅನಿಶ್ಚಿತವಾದ ಭವಿಷ್ಯ.

ಪ್ರಗತಿಯನ್ನೋ ಅಪಗತಿಯನ್ನೋ ವಿವೇಕ ಮಾಡಿ ಸ್ವಬುದ್ಧಿಪೂರ್ವಕವಾಗಿ ತನ್ನ ಭವಿಷ್ಯಗತಿಯನ್ನು ವರಿಸುವ ಸ್ವಾತಂತ್ರ್ಯ ಮನುಷ್ಯನಿಗೆ ಸೇರಿದ್ದು. ಅದು ದೇವತೆಗಳಿಗೆ ಅವಶ್ಯವಲ್ಲ; ಅಸುರರಿಗೆ ಸಾಧ್ಯವಲ್ಲ. ಪ್ರಗತಿ ಎಂಬ ದಶೆ ಸೃಷ್ಟಿಯಲ್ಲಿ ಮನುಷ್ಯಜಾತಿಯೊಂದಕ್ಕೇ ಸೇರಿದ ಅವಕಾಶ.

ಈ ತತ್ತ್ವವನ್ನು ಸೂಚಿಸಿದ ಬಳಿಕ ಭಗವಂತ ಅಸುರಸಂಪತ್ತಿನ ದುರ್ಲಕ್ಷಣಗಳನ್ನು ಬಣ್ಣಿಸುತ್ತಾನೆ–ಬಹುಶಃ ಸಾಮಾನ್ಯ ಜನವನ್ನು ಭಯಪಡಿಸಿ ಎಚ್ಚರಿಸುವುದಕ್ಕಾಗಿ ಎಂದು ನಾವು ಭಾವಿಸಬೇಕಾಗಿದೆ. ಅರ್ಜುನನಿಗೆ ಭಯೋತ್ಪಾದನೆ ಅವಶ್ಯವಿರಲಿಲ್ಲ. ಅವನು ಆಸುರಪ್ರವೃತ್ತಿಯನ್ನು ತೋರಿರಲಿಲ್ಲ. ಅವನು ದೈವೀಸಂಪತ್ತುಂಟಾದವನೆಂಬುದರಲ್ಲಿ ಸಂದೇಹವೇ ಇಲ್ಲ. ಇದನ್ನು ಶ್ರೀಕೃಷ್ಣನೇ ಹೇಳಿದನಲ್ಲವೆ? ಸತ್ಯಪ್ರೇಮ, ಧರ್ಮ, ಶ್ರದ್ಧೆ, ಜೀವಕಾರುಣ್ಯ–ಇವೆಲ್ಲ ಅರ್ಜುನನಲ್ಲಿ ಸ್ಪಷ್ಟವಾಗಿದ್ದ ಗುಣಗಳು. ಆದದ್ದರಿಂದ ಅವನ ಹೊರತು ಮಿಕ್ಕ ಮನುಷ್ಯಲೋಕವನ್ನು ಭಗವಂತ ಉದ್ದೇಶಿಸಿರಬೇಕು. ನನ್ನ ಮನಸ್ಸಿಗೆ ಶ್ರೀಕೃಷ್ಣನು ಕ್ರಿಸ್ತಶಕ ೧೯೬೩ನೆಯ ವರ್ಷದ ಭೂಲೋಕವನ್ನು ಉದ್ದೇಶಿಸಿ ಮಾತನಾಡಿದನೆಂದೆನಿಸುತ್ತದೆ. ಗೀತೆಯ ಮಾತನ್ನು ನೋಡಿದರೆ ನಿಮಗೂ ಹಾಗನ್ನಿಸೀತೆಂದು ನನ್ನ ಊಹೆ.

> ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
> ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಮ್ ॥

"ಸತ್ಯವೆಂದರೇನು? ಸತ್ಯವೆಂಬುದೇ ಇಲ್ಲ. ಸತ್ಯವೆಂಬುದಿದ್ದರೆ ಅದನ್ನು ಕಂಡವರ್ಯಾರು? ಜಗತ್ತಿಗೆ ಈಶ್ವರನೆಲ್ಲಿದ್ದಾನೆ? ಇದು ಅನಾಯಕ ರಾಜ್ಯ. ಇದಕ್ಕೆ ಗೊತ್ತುಗುರಿ ಇಲ್ಲ (ಅಪ್ರತಿಷ್ಠಮ್); ಧರ್ಮವೆಂಬ ವ್ಯವಸ್ಥೆ ಕೃತ್ರಿಮ. ಜಗತ್ತಿನಲ್ಲಿರುವುದೆಲ್ಲ ಹೇಗೆ ಹೇಗೋ

ಆಗಿಬಂದವು; ಅವುಗಳಲ್ಲಿ ಒಂದು ಸಂಬಂಧಕ್ರಮವಿಲ್ಲ: ವೇದದಲ್ಲಿ ಹೇಳಿರುವ 'ಆಕಾಶಾದ್ವಾಯುಃ', ಮೊದಲಾದ ರೀತಿಯ ಅಥವಾ ಜನ್ಮಾಂತರ ಋಣಾನುಬಂಧ ರೂಪದ ಪೂರ್ವಾಪರಸಂಬಂಧವಿಲ್ಲ. ಹಾಗಾದರೆ ಪ್ರಾಣಿಗಳಿವೆಯಲ್ಲ–ಎನ್ನುವೆಯೋ? ಅದೆಲ್ಲ ಸ್ತ್ರೀ ಪುರುಷರ ಕಾಮದ ಪ್ರಭಾವ" –ಹೀಗೆನ್ನುತ್ತಾರೆ ಅಸುರರು. ಅದೇ ನಾಸ್ತಿಕವಾದ. ಅದೇ ಚಾರ್ವಾಕಮತ.

ಋತವಿಧಿಯಂತೆ ಉಂಟಾಗುವ ಕರ್ಮಾನುಬಂಧದಿಂದಲೂ ಋಣಾನುಬಂಧದಿಂದಲೂ ಜೀವಗಳು ಜನ್ಮತಾಳುತ್ತವೆ, ಪರಸ್ಪರ ಸಂಬದ್ಧಗಳಾಗಿರುತ್ತವೆ, ಕರ್ಮ ಸೂತ್ರವು ಜಗತ್ತೆಲ್ಲವನ್ನೂ ಒಂದೇ ಮೂಟೆಯನ್ನಾಗಿ ಕಟ್ಟಿದೆ–ಎಂಬುದನ್ನು ಅವರು ಅಂಗೀಕರಿಸುವುದಿಲ್ಲ.

"ಅಪರಸ್ಪರಸಂಭೂತಂ" ಎಂಬ ಮಾತಿಗೆ ಎರಡರ್ಥಗಳು ಸಾಧ್ಯ ತೋರುತ್ತವೆ. ಮೊದಲನೆಯ ಅರ್ಥ "ಸ್ತ್ರೀಪುರುಷರ ಸಂಯೋಗದಿಂದ" ಎಂದು: (ಅಪರಃ + ಚ + ಪರಃ + ಚ)– "ಒಂದೂ ಇನ್ನೊಂದೂ ಕೂಡಿದ್ದರಿಂದ ಆದದ್ದು" ಎಂದರ್ಥ. ಈ ಪದದ ಪಕ್ಕದಲ್ಲಿ "ಕಾಮಹೈತುಕಮ್" ಎಂಬ ಮಾತಿರುವುದರಿಂದ ಸ್ತ್ರೀಪುಂಯೋಗವೆಂದು ಭಾವ. ಇನ್ನೊಂದರ್ಥ ಒಂದಕ್ಕೊಂದಕ್ಕೆ ಯಾವ ಸಂಬಂಧವೂ ಇಲ್ಲ, ಯಾದೃಚ್ಛಿಕವಾಗಿ, ಆಕಸ್ಮಿಕವಾಗಿ, ಹೇಗೆಹೇಗೋ ಬಂದು ಸೇರಿಕೊಂಡಿವೆ–ಎಂಬುದು.

ಪುರಾತನ ಗ್ರೀಸ್ ದೇಶದಲ್ಲಿ ಅಟಾಮಿಸ್‌ಟ್ (ಪರಮಾಣುವಾದಿ) ಎಂಬ ಮತದವರಿದ್ದರು. ಅವರು ಈಶ್ವರನ ಅಸ್ತಿತ್ವವನ್ನು ಅಂಗೀಕರಿಸಿರಲಿಲ್ಲ. ಜಗತ್ತು ಹೇಗಾಯಿತು? ಎಂದರೆ, ಅಣುಪರಮಾಣುಗಳ ಸಂಯೋಗವಿಯೋಗಗಳಿಂದ ಜಗತ್ತು ಆಗುತ್ತ ಹೋಗುತ್ತ, ಮತ್ತೆ ಆಗುತ್ತ ಮತ್ತೆ ಹೋಗುತ್ತ ಇದೆ. ಪರಮಾಣುಗಳು ಹಾಗೆ ಮಾಡುವುದಕ್ಕೆ ಕಾರಣ ಅವುಗಳ ಸ್ವಾಭಾವಿಕ ರಚನೆ–ಅವುಗಳ ಅಂತಃಸ್ವಭಾವ. ಅವುಗಳನ್ನು ನಡೆಸುವ ಅಥವಾ ನಿಲ್ಲಿಸುವ ಶಕ್ತಿ ಅವುಗಳ ಹೊರಗಡೆಯದಾವುದೂ ಅಲ್ಲ. ಅವು ಸ್ವತಃ ಸೇರಿಕೊಳ್ಳುತ್ತವೆ. ಸ್ವತಃ ಬೇರ್ಪಡುತ್ತವೆ. ಅವುಗಳಿಗೆ ನಿಯಾಮಕನು ಬೇರೆ ಯಾರೂ ಇಲ್ಲ.

ಲೋಕದಲ್ಲಿ ನಾನಾ ವಸ್ತು ನಾನಾ ಜೀವಿಗಳ ಸಂಘಟನೆ ವಿಘಟನೆಗಳು ಕ್ಷಣಕ್ಷಣವೂ ನಡೆಯುತ್ತಿರುತ್ತವಲ್ಲ? ಅದಕ್ಕೆ ಕಾರಣ ಯಾವುದು? ಅದು ಅಕಾರಣ, ಆಕಸ್ಮಿಕ–ಎನ್ನುವವನು

ನಾಸ್ತಿಕ. ಅದು ಆಯಾ ಜೀವಿಗಳ ಪೂರ್ವಾರ್ಜಿತ ಎನ್ನುವವನು ಆಸ್ತಿಕ. ಆಸ್ತಿಕನ ಮತದಲ್ಲಿ ಅಕಾರಣ ಘಟನೆ ಯಾವುದೂ ಅಲ್ಲ.

ಶ್ರೀಮದ್ರಾಮಾಯಣದಲ್ಲಿ ಭರತನು ರಾಮನನ್ನು ಅಯ್ಯೋಧ್ಯೆಗೆ ಹಿಂತಿರುಗಿ ಬಂದು ರಾಜನಾಗಬೇಕೆಂದು ಬೇಡಿಕೊಂಡಾಗ, ಶ್ರೀರಾಮನು ಅದು ಆಗದೆಂದು ಹೇಳ ಹೊರಟು ದಶರಥಮರಣ ಪ್ರಸಕ್ತಿಯಲ್ಲಿ ಹೀಗೆನ್ನುತ್ತಾನೆ:

> ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹಾರ್ಣವೇ ।
> ಸಮೇತ್ಯ ಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ ॥
> ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ॥

"ಮಹಾಸಮುದ್ರದಲ್ಲಿ ಮರದ ಮುಂಡಗಳೆರಡು ಹೇಗೆ ಎಲ್ಲಿಂದೆಲ್ಲಿಂದಲೋ ಬಂದು, ಕೊಂಚ ದೂರ ಒಟ್ಟಿಗೆ ಸಾಗಿ, ಬಳಿಕ ಬೇರೆಬೇರೆಯಾಗಿ ಎಲ್ಲಿಗೆಲ್ಲಿಗೋ ಹೋಗುತ್ತವೆಯೋ, ಹಾಗೆ ಪತ್ನಿ ಪುತ್ರ ಬಂಧುಗಳೂ ಸಂಪತ್ತೂ ಕೊಂಚಕಾಲ ಕೂಡಿದ್ದು ಅಗಲತಕ್ಕವು. ಈ ಸೇರೋಣ ಅಗಲೋಣಗಳು ಸಂಸಾರದ ಸ್ವಭಾವ. ಸಂಸಾರದಲ್ಲಿ ಯಾವುದೂ ಶಾಶ್ವತವಲ್ಲ; ಧರ್ಮವೊಂದೇ ಶಾಶ್ವತ". ಹೀಗೆಂದು ಶ್ರೀರಾಮನ ಮತ.

ಈ ರಾಮವಾಕ್ಯಾದಲ್ಲಿ ಉಪಮಾನವಾಗಿ ಹೇಳಿರುವ ಮರದ ದಿಮ್ಮಿಗಳಿಗೆ ಚಾಲಕವಾದದ್ದು ಜಲಪ್ರವಾಹದ ರಭಸ. ಒಂದೊಂದು ನದಿ ಒಂದೊಂದು ದಿಮ್ಮಿಯನ್ನು ತಂದು ಸಮುದ್ರದೊಳಕ್ಕೆ ತಳ್ಳಿತು. ಲೋಕದಲ್ಲಿಯ ಪ್ರಾಣಿಗಳನ್ನಾದರೋ, ಅವರವರ ಪೂರ್ವ ಜನ್ಮದ ಋಣಶೇಷಗಳೂ ಪುಣ್ಯಪಾಪಬಾಧ್ಯತೆಗಳೂ ನಾನಾ ಸಂಪರ್ಕಗಳಿಗೆ ತಂದಿರಿಸಿವೆ; ಎಲ್ಲ ಸ್ನೇಹಬಾಂಧವ್ಯಗಳಿಗೂ ಎಲ್ಲ ವೈರವೈಷಮ್ಯಗಳಿಗೂ ಪ್ರಾಚೀನಕಾರಣ ಉಂಟೆಂಬುದು ವೈದಿಕಮತ. ಅಂಥ ಕಾರಣವೇನೂ ಇಲ್ಲವೆಂಬುದು ಭೌತಕೇವಲಿಗಳ ಮತ. ಪ್ರತ್ಯಕ್ಷವೆಷ್ಟೋ ಅಷ್ಟೇ ಜೀವನ ಎನ್ನುವವರು ಭೌತಿಕೇವಲಿಗಳು (Materialists).

ಭೌತಕೇವಲಿಗಳು ಜಗತ್ತು ಕೇವಲ ಪರಮಾಣುಸಂಘಟನೆಯೆನ್ನುತ್ತಾರೆ; ಮರಣವೆಂಬುದೂ ಪ್ರಲಯವೆಂಬುದೂ ಪರಮಾಣುವಿಘಟನೆಯೆನ್ನುತ್ತಾರೆ. ಘಟನೆಗೂ ವಿಘಟನೆಗೂ ಕಾರಣವು ಪರಮಾಣುವಿನ ಸ್ವಭಾವದ ಹೊರತು ಬೇರೆಯಲ್ಲ. ಅವುಗಳಲ್ಲಿ ಸ್ವಾಭಾವಿಕವಾಗಿರುವ

ಸಂಯೋಗಶಕ್ತಿ ಅಥವಾ ಭೌತಶಾಸ್ತ್ರ ಪರಿಭಾಷೆಯ ವ್ಯಾಲೆನ್ಸಿ (Valency) ಅವು ಹಾಗೆ ವರ್ತಿಸುವಂತೆ ಮಾಡುತ್ತದೆ. ಅದನ್ನು ಹಾಗೆ ರಚನೆ ಮಾಡಿದವರು ಯಾರು? ಯಾರೋ ಯಾರಿಗೂ ಗೊತ್ತಿಲ್ಲ. ಅಂಥಾ ಪರಮಾಣುಗಳ ಆಕರ್ಷಣೆ ವಿಕರ್ಷಣೆಗಳೇ ಪ್ರಪಂಚ. ಮನುಷ್ಯನೂ ಅಷ್ಟೇ. ಅವನ ಮನಸ್ಸೂ ಅಷ್ಟೇ. ಅದೂ ಪರಮಾಣು ಚೇಷ್ಟಿತವೇ. ಪರಮಾಣುಗಳು ಹೀಗೆ ಆಡಿ ಆಡಿ ಎಂದೋ ಒಂದು ದಿನ ಶಕ್ತಿಯುಡುಗಿ ನಿಶ್ಚೇಷ್ಟವಾಗಬಹುದು. ಅದೇ ಮೃತ್ಯು. ಅದು ಬರುವವರೆಗೆ ಮನುಷ್ಯನಿಗೆ ಯಾವುದು ಸುಖವೆನಿಸುತ್ತದೆಯೋ ಅದೇ ಒಳ್ಳೇಯದು. ಪುಣ್ಯವೆಂಬುದೂ ಪಾಪವೆಂಬುದೂ ಪುನರ್ಜನ್ಮವೆಂಬುದೂ ಕಟ್ಟುಕಥೆ, ಸತ್ತಮೇಲೆ ಏನೂ ಇಲ್ಲ.

ಇದು ಪರಮಾಣುವಾದದ ಸಂಗ್ರಹ. ಅದು ಶೂನ್ಯವಾದ; ಏಕೆಂದರೆ ಜಗತ್ತಿಗೆ ಹಿಂದೆ ಶೂನ್ಯ ಮುಂದೆ ಶೂನ್ಯ ಎಂಬುದು ಅದರ ಮತ. ಅದು ನಾಸ್ತಿಕವಾದ; ಏಕೆಂದರೆ ಅದು ತಾತ್ಕಾಲಿಕ ಮಾತ್ರದ ಭೌತಪರಮಾಣುಗಳಿಂದ ವಿಲಕ್ಷಣವಾದ ಆತ್ಮವಸ್ತುವಿನ ಅಸ್ತಿತ್ವವನ್ನು ಒಪ್ಪುವುದಿಲ್ಲ. ಅದು ಭೌತಸರ್ವತಾವಾದ (Materialism) ಕಾಮ್ಯುನಿಸ್ಟ್ (Communist) ಪಂಥವರು ಕೇವಲ ಭೌತಸರ್ವತಾವಾದಿಗಳು, ದೈವಶ್ರದ್ಧಾ ವಿರೋಧಿಗಳು ಎಂಬುದು ಪ್ರಸಿದ್ಧವಾದ ಸಂಗತಿ.

ಭೌತಸರ್ವತಾವಾದಿಗಳಿಗೂ ನಾಸ್ತಿಕರಿಗೂ ಶ್ರುತಿ ಹೇಳುವ ಪ್ರತ್ಯುತ್ತರ ಇದು:

> ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್ । ಅಸ್ತಿ ಬ್ರಹ್ಮೇತಿ ಚೇದ್ವೇದ ।
> ಸನ್ತಮೇನಂ ತತೋ ವಿದುಃ ॥

–ತೈತ್ತಿರೀಯೋಪನಿಷತ್ತು

“ಬ್ರಹ್ಮವಿಲ್ಲವೆಂದು ತಿಳಿದವನು ತಾನೇ ಇಲ್ಲದೆ ಹೋಗುತ್ತಾನೆ. ಬ್ರಹ್ಮವುಂಟೆಂದು ತಿಳಿದವನು ಆ ರಹಸ್ಯಸದ್ವವಸ್ತುವಿನ ಪೂರ್ಣಸ್ವರೂಪವನ್ನು ತಿಳಿಯಲರ್ಹನಾಗುತ್ತಾನೆ”.

ಜಗತ್ತೂ ಮನುಷ್ಯನೂ ಸರ್ವಮೂಲವಾದ ಬ್ರಹ್ಮವಸ್ತುವಿನ ಲೇಶಾಂಶ. ಮೂಲವೇ ಇಲ್ಲದಿದ್ದರೆ ಅಂಶವೆಲ್ಲಿ? ಅದಿಲ್ಲದಿದ್ದರೆ ತಾನೂ ಇಲ್ಲ. ಅದು ನಂಬಿದವರಿಗೆ ದೊರೆಯುತ್ತದೆ. ನಂಬದೆ ಬಿಟ್ಟವರಿಗಿಲ್ಲ. ದೇವರನ್ನು ನಂಬೆವೆನ್ನುವವರು ಸ್ವಪ್ರತಿಷ್ಠೆ ಸ್ವಸುಖಗಳನ್ನು ಮಾತ್ರ

ನಂಬಿಕೊಂಡಿರುತ್ತಾರೆ. ಅಂಥಾ ಅಹಮೇಕನಿಷ್ಠರೇ–ಆ ಸ್ವದೇಹೈಕಾಭಿಮಾನಿಗಳೇ–ಅಸುರರು. ನಮ್ಮ ಇಂದಿನ ಭೂಲೋಕದಲ್ಲಿ ಭಗವಂತನ ಆಸುರವರ್ಣನೆ ಯಾವಯಾವ ಜನಾಂಗಕ್ಕೆ ಹೊಂದುತ್ತದೆಯೋ ನೋಡೋಣ:

> ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ॥
> ಚಿಂತಾಮಪರಿಮೇಯಾಂ ಚ ಪ್ರಲಯಾನ್ತಾಮುಪಾಶ್ರಿತಾಃ ।
> ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ ॥
> ಈಹನ್ತೇ ಕಾಮಾಭೋಗಾರ್ಥಂ ಅನ್ಯಾಯೇನಾರ್ಥಸಂಚಯಾನ್ ॥

"ಅವರ ಕಾಮನೆಗಳು ಪೂರಯಿಸುವುವಲ್ಲ. ಅವರ ಜಂಭಕ್ಕೂ ಮದಕ್ಕೂ ಕೊನೆಮೊದಲಿಲ್ಲ. ಅವರಿಗೆ ಜಗತ್ತು ಪ್ರಲಯವಾಗುವವರೆಗೂ ಮಿತಿಮೇರೆಯಿಲ್ಲದಷ್ಟು ಸಂಕಲ್ಪ ಚಿಂತೆಗಳು. ಕಾಮಭೋಗವೇ ಪರಮಪುರುಷಾರ್ಥವೆಂದು ಅವರು ನಿಶ್ಚಯಿಸಿ, ಅದಕ್ಕೆ ಅವಶ್ಯವಾದ ದ್ರವ್ಯಸಾಮಗ್ರಿಯನ್ನು ಅನ್ಯಾಯಮಾರ್ಗದಲ್ಲಿ ಸಂಪಾದಿಸಿಕೊಳ್ಳಲಿಚ್ಛಿಸುತ್ತಾರೆ".

ಈ ಹೊತ್ತಿನ ನಾನಾ ದೇಶಗಳ ವರ್ಣನೆಯೇ ಅಲ್ಲವೆ ಇದು? ಯೂರೋಪು ಅಮೆರಿಕಗಳನ್ನು ಇಂಡಿಯವು ಅನುಕರಣಮಾಡಬೇಕೆಂಬುದು ಕಾಮಸ್ಪರ್ಧೆಯಲ್ಲಲ್ಲದಿದ್ದರೆ ಇನ್ನಾವುದರಲ್ಲಿ?

ಅವರ ಜಂಭ ಹೇಗೆ?

> ಅಸೌ ಮಯಾ ಹತಃ ಶತ್ರುಃ ಹನಿಷ್ಯೇ ಚಾಪರಾನಪಿ ।
> ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ॥
> ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
> ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥

"ನಾನು ಈ ಶತ್ರುವನ್ನು ಬಡಿದುಹಾಕಿದೆ; ಇನ್ನು ಆ ಶತ್ರುವನ್ನು ಹೊಡೆಯುವೆ. (ತಿಬೆಟ್ಟನ್ನು ನುಂಗಿದೆ; ಇಂಡಿಯಕ್ಕೆ ಬಾಯಿ ಹಾಕಿದ್ದೇನೆ). ನಾನೇ ಪ್ರಭು. ನಾನೇ ಭೋಗಶಾಲಿ, ನಾನೇ ಜಯಶಾಲಿ. ನಾನು ಬಲಿಷ್ಠ, ನಾನು ಸುಖಕ್ಕಾಗಿ ಹುಟ್ಟಿರುವವನು. ನಾನು ಸಂಪನ್ನ. ನಾನೇ ಕುಲವಂತ. ಯಾರಿದ್ದಾರೆ ನನಗೆ ಸರಿತೂಗಬಲ್ಲವರು? ಬೇಕು ಬೇಕಾದ ಯಜ್ಞಗಳು ನಾನು

ಮಾಡುತ್ತೇನೆ; ಬೇಕುಬೇಕಾದ ದಾನಗಳನ್ನು ನಾನು ಕೊಡುತ್ತೇನೆ; ಬೇಕುಬೇಕಾದ ವೈಭವಗಳನ್ನು ನಾನು ಪಡುತ್ತೇನೆ. ಹೀಗೆ ಆಡಿಸುತ್ತದೆ ಅವನಿಂದ ಅಜ್ಞಾನದ ಮೋಹ".

ಅಸುರರು ಆಗಾಗ ಪೂಜೆಮಾಡುವುದುಂಟು. ರಾವಣಾದಿ ರಾಕ್ಷಸರು ಪೂಜೆ ಮಾಡಿದವರಲ್ಲವೆ? ಪೂಜೆ ತಪಸ್ಸುಗಳಿಂದಲೇ ಅಲ್ಲವೆ ಅವರು ವರಗಳನ್ನು ಸಂಪಾದಿಸಿದ್ದು? ಆದರೆ ಆ ಪೂಜೆ ಎಂಥಾದ್ದು?

> ಮೋಹಾದ್ ಗೃಹೀತ್ವಾಸದ್ಗ್ರಾಹಾನ್ ಪ್ರವರ್ತನ್ತೇಽಶುಚಿವ್ರತಾಃ ।
> ಯಜನ್ತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಮ್ ॥

"ಸತ್ಪುರುಷರು ಯಾವುದನ್ನು ಬೇಡವೆನ್ನುತ್ತಾರೋ ಅಂಥಾದ್ದನ್ನೇ ಅಸುರರು ಮೋಹಿಸಿ ಬೇಡಿ, ಭೂತಪ್ರೇತಪೂಜೆ ಮೊದಲಾದ ಅಶುಚಿವ್ರತಗಳನ್ನು ಮಾಡಿಸುತ್ತಾರೆ. ಲೋಕದ ಹೊಗಳಿಕೆಗೋಸ್ಕರ ಶಾಸ್ತ್ರಸಂಪ್ರದಾಯಗಳನ್ನು ಬಿಟ್ಟು ಯಜ್ಞಾದಿ ಕರ್ಮಗಳನ್ನು ಮಾಡುತ್ತಾರೆ. ಅದು ಹೆಸರಿಗೆ ಯಜ್ಞ, ವಾಸ್ತವದಲ್ಲಿ ಡಂಭಾಚಾರ".

ಮಂತ್ರವಿಲ್ಲದ ಸಂಧ್ಯಾವಂದನೆಗೆ ಮತ್ತೊಂದು ತಂಬಿಗೆ ನೀರಂತೆ! ಹಸಿವೆಂದವರಿಗೆ ಊಟವಿಲ್ಲ; ಕಣ್ಣು ಕುಕ್ಕುವ ಹಾಗೆ ಚಪ್ಪರದ ತುಂಬ ಎಲೆಕ್ಟ್ರಿಕ್ ದೀಪ. ಶ್ರೀಕೃಷ್ಣನ ಕಾಲದಲ್ಲಿ ಇಂಥಾದ್ದು ನಡೆಯುತ್ತಿತ್ತೆ? ಇರಲಾರದು. ಪರಮಾತ್ಮ ತ್ರಿಕಾಲಜ್ಞಾನಿ. ನಮ್ಮ ಇಂದಿನ ಕಾಲವನ್ನು ಆತ ಊಹಾನೇತ್ರದಿಂದ ನೋಡಿ ಹಾಗೆ ಹೇಳಿರಬೇಕೆನ್ನಿಸುತ್ತದೆ.

> ಮಮಾತ್ಮಪರದೇಹೇಷು ಪ್ರದ್ವಿಷನ್ತೋಽಭ್ಯಸೂಯಕಾಃ ॥

"ತಮ್ಮೊಳಗೂ ಇತರರೊಳಗೂ ಇರುವ ಪರವಸ್ತುವನ್ನು ದ್ವೇಷಿಸಿ ಅಸೂಯೆ ಪಡುತ್ತಾರೆ".

ಇದು ಭೌತಸರ್ವತಾವಾದಿಗಳ (Materialists) ಮುಖ್ಯಲಕ್ಷಣ. ಅವರು ತಮ್ಮ ದೇಹಗಳ ಅಂತರಾಂತರದಲ್ಲಿಯಾಗಲಿ ಇತರರಲ್ಲಿಯಾಗಲಿ ಪರಮಾತ್ಮ ಚೈತನ್ಯವಿರುವುದನ್ನು ಗೌರವಿಸದೆ ದ್ವೇಷಿಸಿ ಭಗವದ್ವಿಷಯದಲ್ಲಿ ಅಸಹನೆಯಿಂದ ನಡೆಯುತ್ತಾರೆ–ಹಿರಣ್ಯಕಶಿಪು ನಡೆದಂತೆ. ಅಂಥವರಿಗೆ ಅಧೋಗತಿ ಕಾದಿರುತ್ತದೆ.

> ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
> ಮಾಮಪ್ರಾಪ್ಯೈವ ಕೌನ್ತೇಯ ತತೋ ಯಾನ್ತ್ಯಧಮಾಂ ಗತಿಮ್ ॥

ಅಂಥವರಿಗೆ ಪರಮಾತ್ಮಲಾಭವಾಗದು. ಅವರು ತಿರ್ಯಗ್ಜಾತಿಗಳಲ್ಲಿ ಪುನಃಪುನಃ ಜನ್ಮವೆತ್ತಿ ಅಧೋಗತಿಗೆ ಹೋಗುತ್ತಾರೆ.

ಭವದಂಗೀಕಾರ, ಭಗವದ್ವಿಧಿಸ್ವೀಕಾರ–ಇವೆರಡು ತತ್ತ್ವಗಳು ಜಗಜ್ಜೀವನ ವಿಚಾರ ಶೋಧನೆಯಿಂದ–ದೈವಾಸುರಗುಣವಿಮರ್ಶನೆಯಿಂದ–ಬೋಧ್ಯವಾಗುತ್ತವೆ. ಮೊದಲು ಪರಮಾತ್ಮವಸ್ತು ಸರ್ವತ್ರ ವ್ಯಾಪಿಸಿ, ಸರ್ವಕಾರಕವಾಗಿ, ಸರ್ವೇಶ್ವರನಾಗಿರುತ್ತದೆ ಎಂಬುದನ್ನು ಮನಸಾ ಅಂಗೀಕರಿಸಬೇಕು; ಎರಡನೆಯದಾಗಿ, ಆ ಭಗವದಂಗೀಕಾರದ ಫಲಿತಾಂಶವಾಗಿ, ಭಗವದಾಜ್ಞೆಗೆ ತ್ರಿಕರಣಪೂರ್ವಕವಾಗಿ ವಿಧೇಯನಾಗಬೇಕು.

ಇದಕ್ಕೆ ಪ್ರತಿಬಂಧಕವಾಗುವ ಮನುಷ್ಯಸಹಜ ಗುಣಗಳು ಮೂರು:

> ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
> ಕಾಮಃ ಕ್ರೋಧಸ್ತಥಾ ಲೋಭಃ ತಸ್ಮಾದೇತತ್ತ್ರಯಂ ತ್ಯಜೇತ್ ॥

"ನರಕಕ್ಕಿರುವ ಬಾಗಿಲುಗಳು ಮೂರು: ಕಾಮವೊಂದು, ಕ್ರೋಧವೊಂದು, ಲೋಭವೊಂದು. ಇವೇ ಆತ್ಮಕ್ಕೆ ಕೇಡು ಮಾಡತಕ್ಕವು. ಆದದ್ದರಿಂದ ಅವನ್ನು ತೊರೆಯಬೇಕು".

ಕಾಮವೆಂದರೆ ಭೋಗಾಭಿಲಾಷೆ. ಎಲ್ಲೇನು ಸುಖವೋ, ಯಾವುದರಲ್ಲೇನು ಸೊಗಸೋ ನೋಡಿಯೇ ತೀರಬೇಕೆಂಬ ಚಪಲ. ಆ ಚಪಲ ಸಾಗದಿದ್ದರೆ ರೋಷ–ದೀರ್ಘರೋಷ. ಅದೇ ಕ್ರೋಧ, ತನಗೆ ಬೇಕಾದದ್ದು ಯಾರದಾದರಾಗಲಿ, ಎಲ್ಲಿಯಾದರಿರಲಿ, ಅದನ್ನು ವಶಪಡಿಸಿಕೊಳ್ಳಬೇಕೆಂಬುದು ಲೋಭ. ರಾವಣ ಮೂರಕ್ಕೂ ಆದರ್ಶ. ಕೀಚಕನಲ್ಲಿ ಕಾಮಪ್ರಧಾನ; ಕಂಸನಲ್ಲಿ ಕ್ರೋಧ; ಧುರ್ಯೋಧನನಲ್ಲಿ ಲೋಭ.

ಕಾಮಕ್ರೋಧಲೋಭಗಳ ಜೊತೆಗೆ ಮೋಹ (ಎಂದರೆ ಅವಿಚಾರದ ಆತುರ), ಮದ (ಗರ್ವದಿಂದ ಮೈಮರೆಯುವುದು), ಮಾತ್ಸರ್ಯ (ಕರುಬು, ಅಸೂಯೆ)–ಈ ಮೂರನ್ನೂ ಸೇರಿಸಿ ಅರಿಷಡ್ವರ್ಗವೆಂದು ಹೇಳುವುದುಂಟು. ಈ ಆರೂ ಪ್ರತಿಯೊಬ್ಬ ಮನುಷ್ಯನ ಒಳಗೂ

ಅವಿತುಕೊಂಡು ಹೊಂಚುಹಾಕುತ್ತ, ಅವನು ಎಚ್ಚತ್ತುಕೊಳ್ಳುವ ಮುಂಚೆ ಅವನ ದೈವೀ ಸಂಪತ್ತನ್ನು ಅಪಹರಿಸುವ ಕಳ್ಳರು. ಈ ಅಂತಶ್ಶತ್ರುಗಳ ವಿಷಯದಲ್ಲಿ ಎಚ್ಚರವಿರಿಸಬೇಕು. ಆಗ ಸಾಧ್ಯವಾಗುತ್ತದೆ ಆತ್ಮಶ್ರೇಯಸ್ಸು.

ಕಾಮಾದಿಗಳ ತ್ಯಾಗದಿಂದ ಶೋಧನೆಯಾಯಿತು. ಅದು ನಕಾರ ರೂಪದ Negative ಕಾರ್ಯ. ಅದಾದಮೇಲೆ ನಡೆಯಬೇಕಾದದ್ದು ಸಾಧನೆ. ಅದು ಸಕಾರರೂಪದ್ದು (Positive). ಅದಕ್ಕೆ ಮಾರ್ಗವನ್ನು ಶಾಸ್ತ್ರದಿಂದ ತಿಳಿಯಬೇಕು.

> ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
> ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಪಾತ್ರೆ ತೊಳೆದದ್ದು ಸಾರ್ಥಕವಾಗುವುದು ಅದರಲ್ಲಿ ಒಳ್ಳೆಯ ಅಡಿಗೆಯಾದಾಗ. ಅಡಿಗೆ ಚೆನ್ನಾಗಬೇಕಾದರೆ ಪಾಕಶಾಸ್ತ್ರಜ್ಞಾನವಿರಬೇಕು–ಓದಿನಿಂದಲೂ ರೂಢಿ ಅನುಭವಗಳಿಂದಲೂ ಆ ಶಾಸ್ತ್ರವನ್ನು ಕಲಿತಿರಬೇಕು. ಹಾಗೆಯೇ ನಮ್ಮ ಜೀವನ ಚೆನ್ನಾಗಬೇಕಾದರೆ ಅದರ ಸೊಗಸುಗಳೆಂಥವು, ಸೊಟ್ಟುಗಳೆಂಥವು–ತಿಳಿದುಕೊಳ್ಳಬೇಕು.

"ಅರ್ಜುನ, ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು–ಎಂಬುದನ್ನು ನಿನಗೆ ತಿಳಿಸಿಕೊಡಲು ಇರುವ ಗುರು ಶಾಸ್ತ್ರ. ಅದನ್ನನುಸರಿಸಿ ಕರ್ಮ ಮಾಡು."

ಇಲ್ಲಿ ಶಾಸ್ತ್ರವೆಂದರೆ ನಾಲ್ಕು ಉಪದೇಶಕರ್ತರ ಸಮೂಹ:

> ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।
> ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಮ್ ॥

–ಮನುಸ್ಮೃತಿ

1. ವೇದಗಳು
2. ಸ್ಮೃತಿಗಳು
3. ಸಾಧುಶಿಷ್ಟರ ಸಂಪ್ರದಾಯ
4. ಮನುಷ್ಯನ ಸ್ವಂತವಾದ ಆತ್ಮದೃಷ್ಟಿಯ ಹಿತಾಹಿತವಿವೇಕ

–ಈ ನಾಲ್ಕೂ ಸೇರಿದಾಗ ಧರ್ಮ ನಿಷ್ಕರ್ಷೆಯಾಗುತ್ತದೆ.

ಶ್ರುತಿಸ್ಮೃತಿಗಳ ಮಾರ್ಗದರ್ಶನವಿಲ್ಲದೆ ಕೇವಲ ಸ್ವಂತವಿವೇಕದಿಂದಲೇ ಧರ್ಮ ನಿರ್ಣಯ ಮಾಡುವುದು ಸಾಮಾನ್ಯ ಜನಕ್ಕೆ ಸಾಧ್ಯವಾಗದು. ಅವರಿಗಿರುವ ಜ್ಞಾನ ಕೊಂಚಮಟ್ಟಿನದು: ಅವರ ಬುದ್ಧಿ ಸಾಮರ್ಥ್ಯ ಮಿತವಾದುದು; ಅವರ ಸ್ವಭಾವ ಕಾಮಕ್ರೋಧಲೋಭಾದಿಗಳಿಂದ ಕೂಡಿ ಪ್ರಮಾದವಶವಾದದ್ದು; ಆದದ್ದರಿಂದ ಪೂರ್ವಿಕ ವಚನ ವೃದ್ಧಾಚಾರಗಳು ಮೂಲಪ್ರಮಾಣಗಳಾಗುತ್ತವೆ. ಅವು ಧರ್ಮದ ಹೆದ್ದಾರಿಗಳನ್ನು ತೋರಿಸುತ್ತವೆ. ಅವುಗಳನ್ನು ಬಿಟ್ಟವನ ದಾರಿ ಕ್ಷೇಮದ ದಾರಿಯಾಗದು.

> ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
> ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್ ॥

“ಯಾರು ಶಾಸ್ತ್ರದ ಆಜ್ಞೆಯನ್ನು ಉಲ್ಲಂಘಿಸಿ, ಮನುಸ್ಸು ಹೋದಂತೆಲ್ಲ ನಡೆಯುತ್ತಾನೋ ಅವನಿಗೆ ತತ್ತ್ವ ದೊರೆಯದು, ಸುಖ ಬಾರದು, ಸದ್ಗತಿಯಾಗದು.”

ಶಾಸ್ತ್ರವನ್ನು ಲೋಕ ಗೌರವಿಸಿದ್ದರಿಂದ ಲೋಕವನ್ನು ಶಾಸ್ತ್ರ ಪಾಲಿಸಿದೆ. ಯಾವ ದಿನ ನಮ್ಮ ಜನ “ಶಾಸ್ತ್ರದಲ್ಲೇನಿದೆ?”, “ಅದೆಲ್ಲ ಮೂಢಾಚಾರ” –ಎಂದು ಹಳಿದರೋ ಅಂದು ಮೊದಲಾಯಿತು ನಮ್ಮ ನೆಮ್ಮದಿಗೆ ಕೊನೆ. ಪುಣ್ಯಪ್ರೀತಿ, ಪಾಪಭೀತಿ–ಇವು ನಮ್ಮ ಮನಸ್ಸಿನಿಂದ ಎಂದು ಕಳಚಿಹೋಯಿತೋ ಅಂದಾಯಿತು ನಮ್ಮಲ್ಲಿ ಅಶಾಂತಿಗೆ ನೆಲೆಮನೆ. “ಸ್ವರ್ಗವೆಂದರೇನು? ಅದೊಂದು ಆಟದ ಬೊಂಬೆ: ನರಕವೆಂದರೇನು? ಅದೊಂದು ಬೆದರುಗುಮ್ಮ” –ಎಂದು ನಮ್ಮ ವಿದ್ಯೋನ್ನತರೊ ಸುಪ್ರತಿಷ್ಠಿತರೂ ಸಾರುವುದಕ್ಕೆ ಹೊರಟಾಗ ಜನಜೀವನದ ಅಡಿಪಾಯಕ್ಕೆ ಏಟು ಬಿತ್ತು. ಹಾಗೆ ಕದಲಿದ್ದು ಈಗ ದಿಕ್ಕು ದಿವಾಣವಿಲ್ಲದೆ ಹೋಗುತ್ತಿದೆ. ಶಾಸ್ತ್ರವನ್ನು ಬಿಟ್ಟಿದ್ದರಿಂದ ನಮಗೆ ಆಗಿರುವ ಪರಿಣಾಮ ಇಂಥಾದ್ದು. ಅದು ಹಳ್ಳಿಹಳ್ಳಿಯಲ್ಲಿಯೂ ಬೀದಿಬೀದಿಯಲ್ಲಿಯೂ ಕಾಣುತ್ತಿದೆ. ಧರ್ಮ ಹೋಯಿತು, ಕಾನೂನು ಬಂತು.

ಈ ದಿವಸದ ಪ್ರಪಂಚಸ್ಥಿತಿಯ ದೃಷ್ಟಿಯಿಂದ ನೋಡಿದರೆ ಗೀತೆಯ ದೈವಾಸುರ ಭೇದಾಧ್ಯಾಯದಷ್ಟು ಮುಖ್ಯವಾದ ಗ್ರಂಥ ನಮಗೆ ಬೇರೆ ಯಾವುದೂ ಅಲ್ಲವೆನ್ನಿಸುತ್ತದೆ.

ಲೋಕಜೀವನ ನಮಗೆ ಸಹ್ಯವಾಗಬೇಕಾದರೆ ಅದಕ್ಕೆ ಮೊದಲು ಅವಶ್ಯವಾದದ್ದು ಪುಣ್ಯಪಾಪ ವಿವೇಕ. ಪಾಶ್ಚಾತ್ಯ ದೇಶಗಳ ವಿಜ್ಞಾನ ಸಾಧನೆಗಳಿಂದ ದೇಹಭೋಗ ಲಾಲಸೆಗೆ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹ ದೊರೆತಿದೆ. ಆ ಭೋಗಮನೋವೃತ್ತಿಗೆ ಅನುಕೂಲವಾಗುವಂತೆ ಆ ಜನರ ಸಮಾಜಸಂಸ್ಥೆಗಳೂ ರಾಜ್ಯಸೂತ್ರಗಳೂ ಏರ್ಪಟ್ಟಿವೆ. "ಸ್ಟ್ಯಾಂಡರ್ಡ್ ಆಫ್ ಲಿವಿಂಗ್" (Standard of Living) ಎಂದರೆ ದೈಹಿಕಜೀವನದ ಅಂತಸ್ತು. ಅದನ್ನು ಮೇಲಕ್ಕೆ ಏರಿಸಬೇಕೆಂಬುದೇ ಈಗ ದೊಡ್ಡ ಕೂಗಾಗಿದೆ. ಹೀಗೆ ಭೋಗೈಕತತ್ಪರತೆಯೇ ಜೀವನದ ಮುಖ್ಯಸೂತ್ರವಾದ ಮೇಲೆ ಅದರ ಸಂಪಾದನೆಗೆ ಯಾವ ದಾರಿ ಸಾಧಕವಾಗುತ್ತದೆಯೋ ಅದೇ ಕರ್ತವ್ಯವೆನಿಸುತ್ತದೆ. ಇದರಲ್ಲಿ ಅಧರ್ಮವೇ ಧರ್ಮವೆಂಬ ಭ್ರಾಂತಿಯು ಪ್ರಚಾರಕ್ಕೆ ಬರುವಂತಾಗಿದೆ. ಈ ಮಹಾ ವಿಪರ್ಯಾಸದಿಂದ ಜನವನ್ನುಳಿಸಬೇಕಾದರೆ ಕೆಲವರಾದರೂ ದೈವಾಸುರದ ಭೇದವನ್ನು ಲಕ್ಷ್ಯಕ್ಕೆ ತಂದುಕೊಂಡು ಆಸುರಾಂಶವನ್ನು ತೊಲಗಿಸಿ ದೈವಾಂಶವು ಹೆಚ್ಚುಹೆಚ್ಚಾಗಿ ಜನರ ಅಂಗೀಕಾರಕ್ಕೆ ಬರುವಂತೆ ಯತ್ನಿಸಬೇಕು. ಮಹರ್ಷಿಗಳ ನಿತ್ಯಸಂಕಲ್ಪ ಹೀಗೆ:

> ಅನೃತಾತ್ಸತ್ಯಮುಪೈಮಿ ।
> ಮಾನುಷಾದ್ದೈವ್ಯಮುಪೈಮಿ ॥

–ತೈತ್ತಿರೀಯಬ್ರಾಹ್ಮಣ

"ಅನೃತದಿಂದ ಸತ್ಯಕ್ಕೆ ಹೋಗಲಿಚ್ಛಿಸುತ್ತೇನೆ; ಮನುಷ್ಯತ್ವದಿಂದ ದೇವತ್ವವನ್ನು ಪಡೆಯಲಿಚ್ಛಿಸುತ್ತೇನೆ".

ಯಾವುದು ಸ್ವಸ್ವಭಾವದ್ದಲ್ಲವೋ, ಯಾವುದು ಕೃತಕವೋ, ಅದು ಅನೃತ. ಅನ್ಯಾನುಕರಣೆ ಅನೃತ. ಯಾವುದು ಸ್ವಸ್ವಭಾವಕ್ಕೆ ಯುಕ್ತವೋ ಅದು ಸತ್ಯ. ಸ್ವಧರ್ಮವು ಸತ್ಯ. ಸ್ವಧರ್ಮ ಯಾವುದೆಂಬುದನ್ನು ವಿವೇಕಮಾಡದೆ ಜಗದ್ಭೋಗಭಾಗ್ಯಗಳ ಮೋಹದಿಂದ ಪರಕೀಯರ ಮಾರ್ಗವನ್ನು ಹಿಡಿಯುವುದು ಅನೃತ, ಅಧರ್ಮ. ಜಗದ್ವೈಭವಗಳ ಮಾಯಾ ಮೋಹಗಳು ನಮ್ಮನ್ನು ಅಧರ್ಮಕ್ಕೆ ಎಳೆದಾವು. ಹಾಗಾಗದೆ ಸ್ವಧರ್ಮದಲ್ಲಿ ನಮ್ಮನ್ನು ನಿಲ್ಲಿಸು, ದೇವರೆ– ಎಂದು ಋಷಿಗಳ ಪ್ರಾರ್ಥನೆ.

ಹಾಗೆಯೇ ಮನುಷ್ಯತ್ವದ ಆಶಾಪಾಶಗಳು ನಮ್ಮನ್ನು ಅಸುರ ಮಾರ್ಗಕ್ಕೆ ಎಳೆದಾವು. ಹಾಗಾಗದೆ ದೈವಮಾರ್ಗದಲ್ಲಿ ನಮ್ಮ ಗಮನವಿರುವಂತೆ ಮಾಡು, ದೇವರೆ–ಇದು ಋಷಿಗಳ ಪ್ರಾರ್ಥನೆ.

ಅಧ್ಯಾಯಪಂಕ್ತಿ ಇಲ್ಲಿಗೆ ಮುಗಿಯಿತು. ಆದರೆ ಕೊಂಚ ವಿವರಣೆಯನ್ನಪೇಕ್ಷಿಸುವ ಪಂಕ್ತಿ ಒಂದಿದೆ: "ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ।"

ಶಾಸ್ತ್ರಪ್ರಾಮಾಣ್ಯ

ಶಾಸ್ತ್ರವೇ ಪ್ರಮಾಣವಾದಲ್ಲಿ ನಮ್ಮ ಬುದ್ಧಿ ಮಾಡಬೇಕಾದದ್ದೇನು? ಬುದ್ಧಿಯ ಸ್ವತಂತ್ರ ವಿಚಾರಕ್ಕೆ ಅವಕಾಶ ಬೇಡವೇ? ಈ ಪ್ರಶ್ನೆಗಳಿಗೆ ಹಿಂದೆ ಉತ್ತರ ಹೇಳಿದ್ದಾಗಿದೆ. ಈಗ ಅದನ್ನು ಸಂಕ್ಷೇಪವಾಗಿ ಜ್ಞಾಪಕಕ್ಕೆ ತಂದುಕೊಳ್ಳೋಣ.

ಮನುಷ್ಯಬುದ್ಧಿ ಕೆಲಸ ಮಾಡುವುದಕ್ಕೆ ವಿಷಯಸಾಮಗ್ರಿ ಬೇಕು. ಎಲ್ಲಿ ವಿಷಯವು ಶೂನ್ಯವೋ ಅಲ್ಲಿ ಬುದ್ಧಿ ಏನನ್ನೂ ಮಾಡಲಾರದು. ಬುದ್ಧಿಗೆ ಕಾರ್ಯಸಾಮಗ್ರಿಯನ್ನು ಒದಗಿಸುವುದು ಮನಸ್ಸು. ಮನಸ್ಸಿಗೆ ಸಾಮಗ್ರಿಯನ್ನೊದಗಿಸುವವು ಇಂದ್ರಿಯಗಳು. ಇಂದ್ರಿಯಗಳು ವಿಷಯಸಂಪಾದನೆ ಮಾಡದೆ ಇದ್ದರೆ ಮನಸ್ಸಿನ ಕ್ಷೇತ್ರ ಖಾಲಿ. ಮನಸ್ಸು ನಿರುದ್ಯೋಗಿಯಾಗಿ ಸುಮ್ಮನಾದರೆ ಬುದ್ಧಿಯೂ ಸುಮ್ಮನಿರಬೇಕಾದದ್ದೇ. ಬುದ್ಧಿಯ ಕರ್ಮಕ್ಷೇತ್ರ ಹೀಗೆ ಪರಿಮಿತವಾಗಿದೆ. ಜೀವ, ಆತ್ಮ, ಈಶ್ವರ, ಜನ್ಮಾಂತರ, ಲೋಕಾಂತರ. ಈ ವಿಷಯಗಳು ಅದಕ್ಕೆ ದೂರವಾದವು. ಇಂದ್ರಿಯಗಳು ಆ ರಹಸ್ಯಗಳನ್ನು ಮುಟ್ಟಲಾರವು. ಇಂದ್ರಿಯಗಳೇ ಹೊಗದ ಕಡೆ ಮನಸ್ಸು ಹೇಗೆ ಹೊಕ್ಕೀತು? ಹೀಗೆ ಪರತತ್ತ್ವವು ಬುದ್ಧಿಯ ಹಿಡಿತಕ್ಕೆ ಸಿಕ್ಕಲಾರದು.

ಅಷ್ಟೇ ಅಲ್ಲ; ಇಂದ್ರಿಯಗಳು ಬುದ್ಧಿಯನ್ನು ಸೆರೆಹಿಡಿಯಬಲ್ಲವು. ಭೋಗಮೋಹಗಳಲ್ಲಿ ಮನಸ್ಸನ್ನು ಸಿಕ್ಕಿಸಿ, ಜೀವನದಲ್ಲಿ ಪರತತ್ತ್ವವೊಂದುಂಟೆಂಬುದನ್ನೇ ಅವು ಮರೆಯಿಸಿ ಬಿಡುತ್ತವೆ. ಹೀಗೂ–ಇಂದ್ರಿಯಾಧೀನತೆಯ ಕಾರಣದಿಂದ, –ಬುದ್ಧಿಗೆ ಅಸಾಮರ್ಥ್ಯ. ಆದದ್ದರಿಂದಲೇ ಇಂದ್ರಿಯಗಳನ್ನು ನಿಗ್ರಹಿಸಬೇಕೆಂದು ಸ್ವಾಮಿ ಪದೇಪದೇ ಉಪದೇಶಮಾಡಿರುವುದು.

ಜೀವನದ ಪರಮರಹಸ್ಯತತ್ತ್ವವನ್ನು ಕಾಣಬೇಕೆಂದರೆ ಅದು ಕೇವಲ ಬುದ್ಧಿಗೆ ಶಕ್ಯವಾದ ಕಾರ್ಯವಲ್ಲ. ಅತೀಂದ್ರಿಯವಸ್ತುಜ್ಞಾನಕ್ಕೆ ವೇದವೊಂದೇ ಸಾಧನ. ವೇದವು ಪರವಸ್ತುವನ್ನು ಸಾಕ್ಷಾತ್ತಾಗಿ ಕಂಡವರ ವಾಕ್ಕು, ತತ್ತ್ವದರ್ಶಿಗಳ ವಾಕ್ಕು. ಅದನ್ನು ಗ್ರಹಿಸಿದಲ್ಲದೆ ನಮಗೆ ತತ್ತ್ವಜ್ಞಾನವಿಲ್ಲ. ಆದರೆ ಬುದ್ಧಿ ಅಲ್ಲಿ ಬೇಕಿಲ್ಲವೋ? ಬೇಕೇ ಬೇಕು. ಪರಿಶುದ್ಧವಾದ ಬುದ್ಧಿಯಿಲ್ಲದವನಿಗೆ ವೇದವಾಕ್ಯವು ಅರ್ಥವನ್ನು ಕೊಡದು. ವೇದಾಕ್ಷರದಲ್ಲಿ ಅಡಗಿರುವ ಗೂಢವನ್ನು ಸಮಂಜಸವಾಗಿ ಗ್ರಹಿಸಿ ಸ್ವಾಧೀನಪಡಿಸಿಕೊಳ್ಳುವ ಕೆಲಸ ಬುದ್ಧಿಗೆ ಸೇರಿದ್ದು.

ಶಾಸ್ತ್ರವು ಮಾಡುವ ಉಪಕಾರ ಎರಡು:

1. ತತ್ತ್ವ ಸೂಕ್ಷ್ಮವನ್ನು ತಿಳಿಸುವುದು
2. ಆ ತತ್ತ್ವವನ್ನು ನಾವು ಅನುಭವಕ್ಕೆ ತಂದುಕೊಳ್ಳುವುದಕ್ಕಾಗಿ ಸಂಸ್ಕಾರ ಸಿದ್ಧತೆಗಳನ್ನು ತಿಳಿಸುವುದು.

ನಮ್ಮ ತತ್ತ್ವಗ್ರಹಣವು ನಮ್ಮ ಬುದ್ಧಿಸಿದ್ಧತೆ ನೀತಿಸಿದ್ಧತೆಗಳಿಗೆ ತಕ್ಕಂತೆ ಇರುತ್ತದೆ. ಅಧಿಕಾರಿಯಂತೆ ಉಪದೇಶ (ಅಧಿಕಾರವೆಂದರೆ ಯೋಗ್ಯತೆ). ಈ ಸೂತ್ರವನ್ನನುಸರಿಸಿ ಹಿಡಿಯಬೇಕಾದದ್ದು ಶಾಸ್ತ್ರವನ್ನ. ಅಧಿಕಾರಾಭಿವೃದ್ಧಿ, ಉಪದೇಶೌಚಿತ್ಯ–ಇವೆರಡೂ ಶಾಸ್ತ್ರದ ಉದ್ದೇಶಗಳು.

ಬುದ್ಧಿಯ ಕಾರ್ಯಗಳೆರಡು:

1. ವೇದವಚನದ ಅರ್ಥಗ್ರಹಣ
2. ಗ್ರಾಹ್ಯವಾದ ಅರ್ಥವನ್ನು ಯುಕ್ತಿ ಅನುಭವಗಳ ಮೂಲಕ ವಿಮರ್ಶೆ ಮಾಡಿ ದೃಢಪಡಿಸುವುದು.

ಶಾಸ್ತ್ರವಿಷಯದಲ್ಲಿ ನಮ್ಮ ಮನೋಭಾವವು ಎರಡಂಶಗಳನ್ನೊಳಗೊಂಡಿರಬೇಕು:

1. ಶ್ರದ್ಧೆ,
2. ವಿವೇಕ.

ಶ್ರದ್ಧೆಯೆಂದರೆ ನಂಬಿಕೆ. ತಾಯಿ ಬಡಿಸಿದ ಅಡಿಗೆಯನ್ನೂ ಒಳ್ಳೆಯ ವೈದ್ಯನು ಕೊಟ್ಟ ಔಷಧವನ್ನೂ ಎಂಥ ವಿಶ್ವಾಸದಿಂದ ಗ್ರಹಿಸುತ್ತೇವೋ ಅಂಥ ವಿಶ್ವಾಸದಿಂದ ಶಾಸ್ತ್ರೋಪದೇಶವನ್ನು ಗ್ರಹಿಸಬೇಕು. ಆದಾದ ಬಳಿಕ, ಆ ಊಟದಿಂದ ಅಥವಾ ಆ ಔಷಧದಿಂದ ನಮಗೆ ಆದ ಅನುಭವಗಳನ್ನು, ಕಾರ್ಯಕಾರಣ ಸಂಬಂಧ ವಿಚಾರದ ಮೂಲಕ, ಅವಶ್ಯ ತೋರಿದಂತೆ ಬದಲಾಯಿಸಿಕೊಳ್ಳುವ ರೀತಿಯಲ್ಲಿ, ನಮ್ಮ ಶಾಸ್ತ್ರಾರ್ಥ ವಿಚಾರವನ್ನು ಪುನಃಪುನಃ ಪರಿಷ್ಕಾರಪಡಿಸಿಕೊಳ್ಳಬೇಕು. ಇದು ಬುದ್ಧಿಕಾರ್ಯ. ಹೀಗೆ "ಶಾಸ್ತ್ರಂ ಪ್ರಮಾಣಂ" ಎಂದು ಹೇಳಿದ್ದರಿಂದ, "ಬುದ್ಧಿರಪ್ರಮಾಣಂ" ಎಂದು ಹೇಳಿದಂತೆ ಭಾವಿಸತಕ್ಕದ್ದಲ್ಲ. ಕೇವಲ ಬುದ್ಧಿ ಸಾಕಾಗಲಾರದು ಎಂದಷ್ಟೇ ಅರ್ಥ. ಬುದ್ಧಿ ಬೇಕು– ಅವಶ್ಯವಾಗಿ ಬೇಕು. ಆದರೆ ಅದಷ್ಟೇ ಸಾಕಾಗದು. ಅದರ ಕಾರ್ಯಕ್ಕೆ ಮೂಲಸಾಮಗ್ರಿಯು ಶಾಸ್ತ್ರದಿಂದಲೇ ಬರಬೇಕು ಎಂದು ತಾತ್ಪರ್ಯ. ಶಾಸ್ತ್ರವಾಕ್ಯಕ್ಕೆ ಸಮಂಜಸವಾಗಿ ಅರ್ಥ ಹೇಳಬಲ್ಲದ್ದು ಬುದ್ಧಿ.

ಆದದ್ದರಿಂದ ಶಾಸ್ತ್ರಶ್ರದ್ಧೆಯೆಂದರೆ ಬುದ್ಧಿ ವಿರಾಮವೆಂದು ಅರ್ಥವಾಗದು. ಭಗವಂತನೇ ಬುದ್ಧಿಯ ಕಾರ್ಯವೆಂಥಾದ್ದೆಂಬುದನ್ನು ಆರನೆಯ ಅಧ್ಯಾಯದಲ್ಲಿ (ಶ್ಲೋ ॥ ೨೧) ಸೂಚಿಸಿದ್ದಾನೆ.

> ಬುದ್ಧಿಗ್ರಾಹ್ಯಮ್ ಅತೀಂದ್ರಿಯಮ್ ॥

ಆತ್ಮಸ್ವರೂಪವು ಅತೀಂದ್ರಿಯವಾದದ್ದು. ಅದು ಮನಸ್ಸಿಗೂ ದೊರೆಯಲಾರದ್ದು. ಉಪನಿಷತ್ತು–

> ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ॥

ಎಂದೂ,

> ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ ॥

ಎಂದೂ ಹೇಳಿ ಮನಸ್ಸು ಇಂದ್ರಿಯಗಳ ಅಸಾಮರ್ಥ್ಯವನ್ನು ತಿಳಿಸಿದೆ. ಬುದ್ಧಿಯಾದರೋ ಮನಸ್ಸಿಗಿಂತ ಸೂಕ್ಷ್ಮವೇದಿಯಾದದ್ದು.

ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥

ಮನುಷ್ಯನಿಗಿರುವ ಜ್ಞಾನಸಾಧನಗಳಲ್ಲಿ ಪರತತ್ತ್ವಕ್ಕೆ ಅತ್ಯಂತ ಸಮೀಪವಾದದ್ದು ಬುದ್ಧಿ. ಅದು ಸರಿಯಾಗಿ ಕಾರ್ಯ ನಡಸದೆ ಹೋದರೆ ಬಾವಿಯಿಂದ ನೀರು ಸೇದುವ ಹಗ್ಗ ಕುಣಿಕೆಯಿಲ್ಲದ್ದಾದಂತೆ. ಬುದ್ಧಿಕ್ರಿಯೆಯಿಲ್ಲದೆ ತತ್ತ್ವ ಲಾಭವಾಗದು. ಬುದ್ಧಿ ಸರಿಯಾಗಿ ನಡೆಯುವುದೆಂದರೆ ಏನು? ಅದು ತತ್ತ್ವದ ಕಡೆಗೆ ಮುಖ ಮಾಡಿಕೊಂಡಿರುವುದು, –ತತ್ತ್ವವನ್ನು ಕಾಣಬೇಕೆಂಬ ದೃಢಸಂಕಲ್ಪದಿಂದ ನಡೆಯುವುದು. ಅದೇ ಶ್ರದ್ಧೆ. ಹಾಗೆ ಮಾಡದೆ ತತ್ತ್ವದ ಕಡೆಗೆ ಬೆನ್ನು ತಿರುಗಿಸಿದರೆ, ಬುದ್ಧಿ ನಮಗೆ ಸಹಾಯ ಮಾಡುವುದಕ್ಕೆ ಪ್ರತಿಯಾಗಿ ವಿಘಾತವನ್ನೇ ಮಾಡೀತು. ಬುದ್ಧಿಯು ಶಾಸ್ತ್ರದ ಮುಖ್ಯ ತಾತ್ಪರ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ಕೆಲಸ ಮಾಡತಕ್ಕದ್ದೆಂಬುದು ಸೂತ್ರ. ಶಾಸ್ತ್ರದ ಮುಖ್ಯ ವಿಷಯವು ಇಂದ್ರಿಯಾತೀತವಾದದ್ದು–ಅಲೌಕಿಕವಾದದ್ದು. ಮೂಲವಿಷಯಜ್ಞಾನಕ್ಕೆ ಶಾಸ್ತ್ರವನ್ನು ಬಿಟ್ಟರೆ ನಮಗೆ ಅನ್ಯಥಾಗತಿಯಿಲ್ಲ. ಆದದ್ದರಿಂದ ಶಾಸ್ತ್ರವಾಕ್ಯವು ಅನಿವಾರ್ಯ. ಆದರೆ ವಾಕ್ಯಾರ್ಥವು ಬುದ್ಧಿಪರಿಶ್ರಮವಿಲ್ಲದೆ ಅಲಭ್ಯ. ಈ ಮಾತನ್ನು ಮನುಮಹರ್ಷಿಗಳೇ ಹೇಳಿದ್ದಾರೆ:

ಪ್ರತ್ಯಕ್ಷಂ ಚಾನುಮಾನಂ ಚ ಶಾಸ್ತ್ರಂ ಚ ವಿವಿಧಾಗಮಮ್ ।
ತ್ರಯಂ ಸುವಿದಿತಂ ಕಾರ್ಯಂ ಧರ್ಮಶುದ್ಧಿಮಭೀಪ್ಸತಾ ॥
ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ ।
ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ ॥

–ಮನುಸ್ಮೃತಿ

1. ಪ್ರತ್ಯಕ್ಷವಾಗಿ ಕಾಣುವ ಲೋಕಸಂದರ್ಭ
2. ಅದನ್ನು ಬಿಡಿಸಿ ಪರೀಕ್ಷಿಸಿದಾಗ ತಿಳಿದು ಬರುವ (ಅನುಮಾನ) ಸಂಗತಿ
3. ವೇದಾರ್ಥಕ್ಕೆ ಸಹಾಯಗಳಾದ ಸ್ಮೃತಿಪುರಾಣೇತಿಹಾಸಾದಿ ಗ್ರಂಥಸಾಹಿತ್ಯ

–ಈ ಮೂರನ್ನೂ ಅವಲಂಬಿಸಬೇಕು ಧರ್ಮಶುದ್ಧಿ ಬೇಕೆನ್ನುವವರು.

"ಮಹರ್ಷಿಗಳ ಉಪದೇಶವನ್ನು, ಅದರ ಮೂಲತತ್ತ್ವಕ್ಕೆ ಹಾನಿತಾರದ ರೀತಿಯಲ್ಲಿ ತರ್ಕದಿಂದ ಸಿದ್ಧಾಂತ ಮಾಡುವವನೇ ಧರ್ಮವನ್ನು ತಿಳಿಯುವವನು; ಮಿಕ್ಕವರಲ್ಲ".

ಕೇವಲಂ ಶಾಸ್ತ್ರಮಾಶ್ರಿತ್ಯ ನ ಕರ್ತವ್ಯಾ ವಿನಿಶ್ಚಯಃ ।
ಯುಕ್ತಿಹೀನವಿಚಾರೇ ತು ಧರ್ಮಹಾನಿಃ ಪ್ರಜಾಯತೇ ॥

–ಮನುಸ್ಮೃತಿ

ಹೀಗೆ ಬುದ್ಧಿಕಾರ್ಯದ ಆವಶ್ಯಕತೆ ಸ್ಪಷ್ಟವಾಗಿದೆ. ಪ್ರತ್ಯಕ್ಷಪ್ರಮಾಣ, ಅನುಮಾನ ಪ್ರಮಾಣ, ಸ್ಮೃತೀತಿಹಾಸಾದಿ ಪ್ರಮಾಣ–ಇವೆಲ್ಲ ಬುದ್ಧಿಕಾರ್ಯಗಳು.

ಶಸ್ತ್ರವೈದ್ಯನು ಕೊರಳನ್ನು ಕೊಯ್ದುಹಾಕದೆ ಶಸ್ತ್ರಪ್ರಯೋಗ ಮಾಡತಕ್ಕದ್ದೆಂದರೆ ಅವನ ಚಿಕಿತ್ಸಾಸ್ವಾತಂತ್ರ್ಯವನ್ನು ಕಿತ್ತುಕೊಂಡಂತಾಗುತ್ತದೆಯೆ? ಉಪಾಧ್ಯಾಯನು ಶಿಷ್ಯನಿಗೆ ಅಂಗಹಾನಿಯಾಗದಂತೆ ದಂಡನೆ ಮಾಡಬಹುದೆಂದರೆ ಅವನ ಶಿಕ್ಷಣ ಸ್ವಾತಂತ್ರ್ಯಕ್ಕೆ ಭಂಗ ತಂದಂತಾಗುತ್ತದೆಯೆ? ಸಾಲಮಾಡದೆ, ತಿರುಪೆಗೆ ಹೋಗದೆ ದಾನ ಮಾಡೆಂದರೆ ಔದಾರ್ಯಸ್ವಾತಂತ್ರ್ಯಕ್ಕೆ ಹಾನಿಯೆ? ಹಾಗೆಯೇ ಸ್ವಬುದ್ಧಿಯಿಂದ ಧರ್ಮವೃಕ್ಷದ ಬೇರಿಗೆ ಕೊಡಲಿ ಹಾಕಬೇಡವೆಂದರೆ ಅದರ ಕೊಂಬೆಗಳ ಮೇಲಣ ಹುಳುಕು ಕೊಳಕುಗಳನ್ನೂ ತೆಗೆಯಬೇಡವೆಂದಾಗುವುದಿಲ್ಲ. ಬುದ್ಧಿವ್ಯಾಪಾರವು ತತ್ತ್ವಾನುಸಾರಿಯಾಗಬೇಕೆಂಬುದಷ್ಟೇ ತಾತ್ಪರ್ಯ. ಇದೇ ಮಾತನ್ನೇ ಶಂಕರಾಚಾರ್ಯರದೆಂದು ಹೇಳುವ ಒಂದು ಶ್ಲೋಕ ಹೇಳುತ್ತದೆ:

ದುಸ್ತರ್ಕಾತ್ಸುವಿರಮ್ಯತಾಂ ಶ್ರುತಿಮತಸ್ತರ್ಕೋಽನುಸಂಧೀಯತಾಮ್ ॥

ಎಂಥ ಪ್ರಚಂಡಬುದ್ಧಿಯಾದರೂ ಸ್ವತಂತ್ರವಾಗಿ ಅತೀಂದ್ರಿಯವಸ್ತುವನ್ನು ಕಾಣಲಾರದು. ಅದು ಆ ತತ್ತ್ವವನ್ನು ವೇದದಿಂದಲೇ ಗ್ರಹಿಸಬೇಕು. ಈ ಒಂದು ಅನಿವಾರ್ಯ ನಿರ್ಬಂಧವನ್ನು ವಿನಾಯಿಸಿದರೆ ಬುದ್ಧಿಯು ಸರ್ವಸ್ವತಂತ್ರವಾಗಿ “ಕೆಲಸ ಮಾಡಬಹುದು” ಮಾತ್ರವಲ್ಲ; “ಕೆಲಸ ಮಾಡಬೇಕು”.

ಕಾರ್ಯಸಾಮಗ್ರಿ ಮಾತ್ರವೇ ಅಲ್ಲ; ಕಾರ್ಯಯೋಗ್ಯತೆಯೂ ಬುದ್ಧಿಗೆ ಶಾಸ್ತ್ರದಿಂದಲೇ ಬರತಕ್ಕದ್ದು. ಸ್ಮೃತ್ಯಾದಿ ಶಾಸ್ತ್ರಗಳು ವಿಧಿಸುವ ಸಂಸ್ಕಾರಗಳಿಂದ ಮನಸ್ಸು ಶುದ್ಧವಾಗುತ್ತದೆ. ಲೋಕದ ಕಾಮಲೋಭಗಳೂ ರಾಗದ್ವೇಷಗಳೂ ಸವೆದು, ಇಂದ್ರಿಯಗಳ ಉರವಣೆ ತಗ್ಗುತ್ತದೆ. ಇಂದ್ರಿಯಗಳಲ್ಲಿ ಆಸುರಪ್ರವೃತ್ತಿ ತಗ್ಗಿದಂತೆ ಮನಸ್ಸಿನಲ್ಲಿ ದೈವಿಕ ಪ್ರವೃತ್ತಿ ಹೆಚ್ಚುತ್ತದೆ. ಮನಸ್ಸು

ದೇವಮಾರ್ಗದ ಕಡೆಗೆ ತಿರುಗಿದಾಗ ಬುದ್ಧಿಯು ತತ್ತ್ವ ವಿವೇಕಕ್ಕೆ ಸಮರ್ಥವಾಗುತ್ತದೆ. ಹೀಗೆ ಬುದ್ಧಿಯ ಕಾರ್ಯದ್ರವ್ಯ ಮಾತ್ರವೇ ಅಲ್ಲ, ಅದರ ನೀತಿಸಾಮರ್ಥ್ಯವೂ ಶಾಸ್ತ್ರದ ಮುಖಾಂತರವೇ ಬರಬೇಕಾಗಿದೆ.

ಬುದ್ಧಿ, ಶಾಸ್ತ್ರ–ಇವೆರಡೂ ಅನ್ಯೋನ್ಯಾವಶ್ಯಕಗಳು. ಒಂದು ಸಾರ್ಥಕವಾಗಬೇಕಾದರೆ ಅದಕ್ಕೆ ಇನ್ನೊಂದರ ಸಹಕಾರ ಬೇಕು. ಬುದ್ಧಿಯಿಲ್ಲದೆ ಶಾಸ್ತ್ರಕ್ಕೆ ಸರಿಯಾದ ಅರ್ಥವಾಗದು. ಶಾಸ್ತ್ರವಿಲ್ಲದಿದ್ದಲ್ಲಿ ಬುದ್ಧಿಗೆ ಕಾರ್ಯದ್ರವ್ಯವೇ ಇಲ್ಲದೆ ಹೋಗುತ್ತದೆ. ಇಲ್ಲಿ ಪ್ರಸಕ್ತವಾಗಿರುವ ವಿಷಯವು ಇಂದ್ರಿಯಾತೀತವಾದದ್ದು. ಅಲೌಕಿಕವಾದದ್ದು. ಅದನ್ನು ಲೋಕಕ್ಕೆ ಬೋಧಿಸಬೇಕಾದರೆ ಕೆಲವು ಮೂಲಸೂಚನೆಗಳಾದರೂ ಆಧಾರವಾಗಿ ಬೇಕಾಗುತ್ತದೆ. ಮನೆಯ ಕಟ್ಟಡಕ್ಕೆ ತಳಪಾಯ (Foundation) ಹೇಗೋ ಭಗವದ್ವಿಷಯಕ್ಕೆ ವೇದ ಹಾಗೆ. ಆದರೆ ತಳಪಾಯವೇ ಮನೆಯಲ್ಲ. ಪುರುಷಬುದ್ಧಿಯ ವ್ಯಾಖ್ಯಾನ ವಿವರಣೆಗಳು ಮನೆಯಂತೆ. ಈ ಉಪಮಾನವನ್ನು ಕೊಂಚ ಬದಲಾಯಿಸಿ, ವೇದವು ಸಮಸ್ತ ಜೀವನಕ್ಕೂ ಆಧಾರವಾಗಿರುವ ಭೂಮಿಯೆಂದೂ ನಮ್ಮ ಬುದ್ಧಿ ಕಾರ್ಯಗಳಾದ ಮತ ಮತಾಂತರಗಳು ಆ ಆಧಾರ ಭೂಮಿಯ ಮೇಲೆ ನಿಂತಿರುವ ಕಟ್ಟಡಗಳೆಂದೂ ಹೇಳಬಹುದು. ಭೂಮಿಯಿಲ್ಲದೆ ಮನೆಯಿಲ್ಲ. ಮನೆಯಿಲ್ಲದೆ ಭೂಮಿಗೆ ಸಾರ್ಥಕತೆಯಿಲ್ಲ. ಹೀಗೆ ಶಾಸ್ತ್ರವಾಕ್ಯವೂ ಪುರುಷವಿವೇಕವೂ ಪರಸ್ಪರ ಸಹಕಾರಿಗಳು.

ಒಂದು ಎಚ್ಚರಿಕೆಯ ಮಾತು ಇಲ್ಲಿ ಅವಶ್ಯವೆನ್ನಿಸುತ್ತದೆ. ಸಂಸ್ಕೃತ ಭಾಷೆಯಲ್ಲಿ ಶ್ಲೋಕರೂಪದಲ್ಲಿ ಹೇಳಿರುವುದೆಲ್ಲ ಶಾಸ್ತ್ರವೆಂದು ಭಾವಿಸಬಾರದು. ಯಾವುದು ಮಹರ್ಷಿ ವಚನವೆಂದು ಅನೂಚಾನವಾಗಿ ಬಂದಿದೆಯೋ ಅದು ಮಾತ್ರ ಶಾಸ್ತ್ರ. ಮಿಕ್ಕದ್ದಕ್ಕೆ ಆ ಪ್ರಮಾಣಗೌರವವಿಲ್ಲ. ಶಾಸ್ತ್ರಕ್ಕೆ ವಿಧೇಯನಾಗಬೇಕೆಂಬುದು ಸರಿ. ಆದರೆ ನಿಜವಾದ ಶಾಸ್ತ್ರವಾಕ್ಯ ಯಾವುದು, ಚಾಟುವಾಕ್ಯ ಯಾವುದು–ಇದನ್ನು ಮೊದಲು ವಿಚಾರ ಮಾಡಬೇಕು. ವೇದಗ್ರಂಥದಲ್ಲಿಯೇ ಪ್ರಮಾಣತಾರತಮ್ಯಕ್ಕೆ ಅವಕಾಶವುಂಟು. ಅದರಲ್ಲಿಯ ಪ್ರಬಲತಮ ಪ್ರಮಾಣಗಳನ್ನು ಗೊತ್ತುಮಾಡಿಕೊಂಡು, ಮಿಕ್ಕವುಗಳನ್ನು ಆ ಪರಮ ಪ್ರಮಾಣದ ದೃಷ್ಟಿಯಿಂದ ನೋಡಬೇಕು. ಹೀಗೆ ಶಾಸ್ತ್ರವಿಧೇಯತೆಯೂ ಬುದ್ಧಿಯ ಪರಿಶ್ರಮವನ್ನಪೇಕ್ಷಿಸುತ್ತದೆ. ಆದದ್ದರಿಂದಲೇ ಸ್ಮೃತಿವ್ಯಾಖ್ಯಾನಕಾರರು.

ಇತಿಕರ್ತವ್ಯತಾಭಾಗಂ ಮೀಮಾಂಸಾ ಪೂರಯಿಷ್ಯತಿ ।।

–ಎಂದು ಬುದ್ಧಿಗೂ ತತ್ತ್ವಾನ್ವೇಷಣೆಯಲ್ಲಿಕಾರ್ಯಭಾಗವುಂಟೆಂದು ಸಮ್ಮತಿಸಿದ್ದಾರೆ.

***

ಅನೃತಾತ್ಸತ್ಯಮುಪೈಮಿ । ಮಾನುಷಾದ್ದೈವ್ಯಮುಪೈಮಿ ॥

ಇದು ನಮ್ಮ ನಿರಂತರ ಜಪವಾಗಿರಲಿ.

(ಸಾಂಗತ್ಯ)

ದೈವಾಸುರಂಗಳ ರಣರಂಗವೊ ನರ
ಜೀವಿತಭೂಮಿ ತಾನೆಂದುಂ ।
ಜೀವಮೂಲವ ನೆನೆದಾಕಡೆ ಮತಿಯನು
ಧಾವಿಪ್ಪನೀತಿಯೆ ಚೆಂದಂ ॥

ಭೂವೈಭವಂಗಳಿಂದಾತ್ಮವ ಮರೆಯಿಪು–
ದಾಸುರಾಹಂಭಾವಬಂಧಂ ।
ದೈವಪಥಂ ಧರ್ಮ ಶ್ರಮಕಾರಿಯಾದೊಡಂ
ಮಾನುಷ್ಯಾತೀತದಾನಂದಂ ॥

ಸಂಗ್ರಹ

ಆದಿತ್ಯ ದೈತ್ಯ ಸಂಪದ್- ।
ಭೇದಂಗಳ್ ಮನುಜಚಿತ್ತಮಂ ಭ್ರಮೆಗೊಳಿಸಲ್ ॥
ವೇದಮೆ ಕಾರ್ಯಾಕಾರ್ಯವಿ- ।
ಬೋಧನೆಗಾಧಾರಮೆಂದು ಷೋಡಶಗೀತಂ ॥

ಕುಸುಮವಿಶಿಖತಾತಂ ಸತ್ಯಭಾಮಾನಿಕೇತಂ ।
ರಸಿಕಹೃದನುಭೂತಂ ಪಾರ್ಥಸೌಭದ್ರದೂತಂ ॥
ಭವಜಲನಿಧಿಪೋತಂ ದ್ವಂದ್ವಮೇಘಪ್ರವಾತಂ ।
ಭುವನವಿಧಿವಿಧಾತಂ ಧರ್ಮಸಂಗ್ರಾಮಗೀತಂ ॥

ಅಥ ಶ್ರದ್ಧಾತ್ರಯವಿಭಾಗಯೋಗೋ ನಾಮ ಸಪ್ತದಶೋಽಧ್ಯಾಯಃ

ಅರ್ಜುನ ಉವಾಚ-

ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜಂತೇ ಶ್ರದ್ಧಯಾಽನ್ವಿತಾಃ ।
ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ

॥ ೧ ॥

ಶ್ರೀಭಗವಾನುವಾಚ-

ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು

॥ ೨ ॥

ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।
ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ

॥ ೩ ॥

ಯಜಂತೇ ಸಾತ್ತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।
ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ

॥ ೪ ॥

ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ ।
ದಂಭಾಹಂಕಾರಸಂಯುಕ್ತಾಃ ಕಾಮರಾಗಬಲಾನ್ವಿತಾಃ

॥ ೫ ॥

ಕರ್ಷಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ ।
ಮಾಂ ಚೈವಾಂತಶ್ಶರೀರಸ್ಥಂ ತಾನ್ ವಿದ್ಧ್ಯಾಸುರನಿಶ್ಚಯಾನ್

॥ ೬ ॥

ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ ।
ಯಜ್ಞಸ್ತಪಸ್ತಥಾ ದಾನಂ ತೇಷಾಂ ಭೇದಮಿಮಂ ಶೃಣು

॥ ೭ ॥

ಆಯುಸ್ಸತ್ತ್ವ ಬಲಾರೋಗ್ಯಸುಖಪ್ರೀತಿವಿವರ್ಧನಾಃ ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ

॥ ೮ ॥

ಕಟ್ವಮ್ಲಲವಣಾತ್ಯುಷ್ಣತೀಕ್ಷ್ಣರೂಕ್ಷವಿದಾಹಿನಃ ।
ಆಹಾರಾ ರಾಜಸಸ್ಯೇಷ್ಟಾ ದುಃಖಶೋಕಾಮಯಪ್ರದಾಃ

॥ ೯ ॥

ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್

॥ ೧೦ ॥

ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।
ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ತ್ವಿಕಃ

॥ ೧೧ ॥

ಅಭಿಸಂಧಾಯ ತು ಫಲಂ ದಂಭಾರ್ಥಮಪಿ ಚೈವ ಯತ್ ।
ಇಜ್ಯತೇ ಭರತಶ್ರೇಷ್ಠ ತಂ ಯಜ್ಞಂ ವಿದ್ಧಿ ರಾಜಸಮ್

॥ ೧೨ ॥

ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಮ್ ।
ಶ್ರದ್ಧಾವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ

॥ ೧೩ ॥

ದೇವದ್ವಿಜಗುರುಪ್ರಾಜ್ಞಪೂಜನಂ ಶೌಚಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ

॥ ೧೪ ॥

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ

॥ ೧೫ ॥

ಮನಃಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತತ್ತಪೋ ಮಾನಸಮುಚ್ಯತೇ

॥ ೧೬ ॥

ಶ್ರದ್ಧಯಾ ಪರಯಾ ತಪ್ತಂ ತಪಸ್ತತ್ತ್ರಿವಿಧಂ ನರೈಃ ।
ಅಫಲಾಕಾಂಕ್ಷಿಭಿರ್ಯುಕ್ತೈಃ ಸಾತ್ತ್ವಿಕಂ ಪರಿಚಕ್ಷತೇ

॥ ೧೭ ॥

ಸತ್ಕಾರಮಾನಪೂಜಾರ್ಥಂ ತಪೋ ದಂಭೇನ ಚೈವ ಯತ್ ।
ಕ್ರಿಯತೇ ತದಿಹ ಪ್ರೋಕ್ತಂ ರಾಜಸಂ ಚಲಮಧ್ರುವಮ್

॥ ೧೮ ॥

ಮೂಢಗ್ರಾಹೇಣಾತ್ಮನೋ ಯತ್ಪೀಡಯಾ ಕ್ರಿಯತೇ ತಪಃ ।
ಪರಸ್ಯೋತ್ಸಾದನಾರ್ಥಂ ವಾ ತತ್ತಾಮಸಮುದಾಹೃತಮ್

॥ ೧೯ ॥

ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್

॥ ೨೦ ॥

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್

॥ ೨೧ ॥

ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್

॥ ೨೨ ॥

ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ।
ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ

॥ ೨೩ ॥

ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನತಪಃಕ್ರಿಯಾಃ ।
ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಮ್

॥ ೨೪ ॥

ತದಿತ್ಯನಭಿಸಂಧಾಯ ಫಲಂ ಯಜ್ಞತಪಃಕ್ರಿಯಾಃ ।
ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ

॥ ೨೫ ॥

ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ ಪ್ರಯುಜ್ಯತೇ ।
ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ

॥ ೨೬ ॥

ಯಜ್ಞೇ ತಪಸಿ ದಾನೇ ಚ ಸ್ಥಿತಿಃ ಸದಿತಿ ಚೋಚ್ಯತೇ ।
ಕರ್ಮ ಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ

॥ ೨೭ ॥

ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ

॥ ೨೮ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು
ಶ್ರದ್ಧಾತ್ರಯವಿಭಾಗಯೋಗೋ ನಾಮ ಸಪ್ತದಶೋಽಧ್ಯಾಯಃ

ಸೂಚನೆ

ಶ್ರದ್ಧೆಯೊಳಮಿರ್ಪುದು ತ್ರೈ- ।
ವಿಧ್ಯಂ ಪ್ರಕೃತಿಜಗುಣತ್ರಯಾಗತಮದರಿಂ ॥

ಬುದ್ಧಿ ಸಮಂತೋಽಂತತ್ಸದ್- ।
ಬದ್ಧಮಿರಲ್ ಶ್ರದ್ಧೆಯದುವೆ ಸಂಸಿದ್ಧಿಕರಂ ॥

ಪ್ರಕರಣ ೧೮

ಅಧ್ಯಾಯ ೧೭ - ಶ್ರದ್ಧಾತ್ರಯವಿಭಾಗಯೋಗವೆಂಬ ಶ್ರದ್ಧಾತ್ರಯವಿವೇಕಯೋಗ

ಈ ಅಧ್ಯಾಯದ ವಿಷಯ ಶ್ರದ್ಧೆ–ತ್ರಿವಿಧಶ್ರದ್ಧೆ.

ಶ್ರದ್ಧೆಯೆಂದರೆ ನಂಬಿಕೆ ಅಥವಾ ವಿಶ್ವಾಸ. ಇಂಗ್ಲಿಷಿನಲ್ಲಿ ಇದನ್ನೇ Faith ಎನ್ನುವುದು. ಹಾಗೆಂದರೆ ವಿಚಾರಕ್ಕೆ ಪೂರ್ವಭಾವಿಯಾಗಿ, ಪ್ರಶ್ನಪರೀಕ್ಷೆಗಳಿಲ್ಲದೆ ಇರಿಸಿದ ನಂಬಿಕೆ. ಇಂಥಾದ್ದು ಕ್ರೈಸ್ತಮಹಮ್ಮದೀಯರಲ್ಲಿಯೂ ಉಂಟು. ಒಂದಾನೊಂದು ವಸ್ತುವಿನ ಅಥವಾ ಸಂಗತಿಯ ಇರುವಿಕೆಗೆ ಪ್ರತ್ಯಕ್ಷಾದಿ ಪ್ರಮಾಣಗಳ ರುಜುವಾತಿಲ್ಲದಿದ್ದರೂ ಆ ವಸ್ತು ಅಥವಾ ಆ ಸಂಗತಿ ಉಂಟೆಂದೂ ಅದು ಕೆಲಸಮಾಡಬಲ್ಲದ್ದೆಂದೂ ಭಾವಿಸಿ ನಡೆದರೆ ಆ ಭಾವನೆ ಶ್ರದ್ಧೆಯೆನಿಸುತ್ತದೆ.

ಹೀಗಾದರೆ ಶ್ರದ್ಧೆಯೆಂಬುದು ಕುರುಡುನಂಬಿಕೆ, ಅಂಧವಿಶ್ವಾಸ–ಎಂದು ತೋರುತ್ತದಲ್ಲವೆ? ಅದು ಬುದ್ಧಿವಿಚಾರಕ್ಕೆ ವೈರಿಯೆಂದು ತೋರುತ್ತದಲ್ಲವೆ?

ಒಳ್ಳೆಯದು. ಬುದ್ಧಿಯು ಮನುಷ್ಯನಿಗಿರುವ ಜ್ಞಾನ ಸಾಧನಗಳಲ್ಲಿ ಅತ್ಯಂತ ಮುಖ್ಯವಾದದ್ದೆಂದು ಹಿಂದೆ ಒಪ್ಪಿಕೊಂಡದ್ದಾಗಿದೆ. ಆದರೆ ಬುದ್ಧಿಯ ಸಾಮರ್ಥ್ಯಕ್ಕೆ ಪರಿಮಿತಿಯುಂಟೆಂಬುದನ್ನೂ ನೋಡಿದ್ದೇವೆ. ಬುದ್ಧಿಯು ಸ್ವತಂತ್ರವಾಗಿ ಪ್ರವೇಶ ಮಾಡಲಾಗದಿರುವ ಜಾಗಗಳು ಎಷ್ಟೋ ಇವೆ. ಜೀವ, ಆತ್ಮ, ಈಶ್ವರ, ಪುಣ್ಯ, ಪಾಪ, ಜನ್ಮಾಂತರ, ಲೋಕಾಂತರ–ಇಂಥ ವಿಚಾರಕ್ಷೇತ್ರಗಳೊಳಕ್ಕೆ ಬುದ್ಧಿಗೆ ಸ್ವತಂತ್ರಪ್ರವೇಶವಿಲ್ಲ. ಏಕೆಂದರೆ ಅವುಗಳನ್ನು ಇಂದ್ರಿಯಗಳು

ಹಿಡಿದುಕೊಳ್ಳಲಾರವು, ಮನಸ್ಸೂ ಮುಟ್ಟಲಾರದು. ಹೀಗೆ ಆ ಕ್ಷೇತ್ರಗಳು ಬುದ್ಧಿಗೆ ದೂರ. ಆ ಕ್ಷೇತ್ರಗಳಲ್ಲಿ ಬುದ್ಧಿಯು ಸಂಚಾರಮಾಡಬೇಕೆಂದರೆ ಆ ಕ್ಷೇತ್ರಗಳನ್ನು ಚೆನ್ನಾಗಿ ಬಲ್ಲವರು ಅದನ್ನು ಅಲ್ಲಿಗೆ ಕರೆದುಕೊಂಡುಹೋಗಬೇಕು. ಅಂಥಾ ಆಪ್ತಪ್ರಾಜ್ಞರೇ ವೇದ ಶಾಸ್ತ್ರ ಗುರು ಶಿಷ್ಟಸಂಪ್ರದಾಯಗಳು. ಬುದ್ಧ್ಯತೀತವಾದ ವಿಷಯಗಳಲ್ಲಿ ಈ ಆಪ್ತಪ್ರಾಜ್ಞರು ನಮಗೆ ಬೇಡವೆಂದರೆ ಕಾಡುಕತ್ತಲೆಯಲ್ಲಿ ನಮಗೆ ಬೆಳಕು ಬೇಕಿಲ್ಲವೆಂದಂತೆ ಆಗುತ್ತದೆ. ಎಲ್ಲಿ

ನಾನ್ಯಃ ಪಂಥಾ ವಿದ್ಯತೇಽಯನಾಯ

–ಎಂದು ಲೋಕಾನುಭವ ಹೇಳುತ್ತದೋ ಅಲ್ಲಿ ಗುರು ಶಾಸ್ತ್ರಗಳೇ ನಮಗೆ ದಿಕ್ಕು. ಅವರನ್ನು ಹಾಗೆ ಅಂಗೀಕರಿಸುವ ಮನೋವೃತ್ತಿಯೇ ಶ್ರದ್ಧೆ. ಶ್ರದ್ಧೆ ಇಲ್ಲದವನಿಗೆ ಮಾಡಿದ ಉಪದೇಶ ಬಂಡೆಯ ಮೇಲೆ ಬಿತ್ತಿದ ಧಾನ್ಯದಂತೆ ವ್ಯರ್ಥವಾಗುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಮಾಡಿದ ಬೋಧನೆ ಸಾರ್ಥಕವಾಗಬೇಕಾದರೆ ಆ ಬೋಧನೆಯಲ್ಲಿ ಅರ್ಜುನನಿಗೆ ಶ್ರದ್ಧೆಯುಂಟೆಂಬುದನ್ನು ದೃಢಪಡಿಸಿಕೊಳ್ಳುವುದಕ್ಕೋಸ್ಕರ, ಭಗವಂತನು ಈಗ–ಗೀತಾ ಶಾಸ್ತ್ರಸಮಾಪ್ತಿಗೆ ಮುಂಚೆ–ಶ್ರದ್ಧಾತ್ರಯವಿವರಣೆಯನ್ನು ಅನುಗ್ರಹಿಸಿದ್ದಾನೆ, ಅರ್ಜುನನ ವ್ಯಾಜದಿಂದ ನಮಗೆ.

ಯಾವ ಸಂದರ್ಭದಲ್ಲಿ ಶಾಸ್ತ್ರೋಪದೇಶವೂ ಸ್ವತಂತ್ರಬುದ್ಧಿ ನಿರ್ಧಾರವೂ ಒಂದೇ ಆಗಿರುತ್ತದೆಯೋ ಅಲ್ಲಿ ತಕರಾರಿಗೆ ಕಾರಣವಿಲ್ಲ. ಆದರೆ ಪ್ರಕೃತ ಲೋಕಸಂದರ್ಭಗಳಲ್ಲಿ ಶಾಸ್ತ್ರಕ್ಕೂ ಲೌಕಿಕ ಬುದ್ಧಿಗೂ ಐಕಮತ್ಯ ಕಡಮೆಯಾಗಿದೆ. ಶಾಸ್ತ್ರವು ಬ್ರಾಹ್ಮಣನಿಗೆ ಸಮುದ್ರಯಾನವನ್ನು ನಿಷೇಧಿಸುತ್ತದೆ; ಬುದ್ಧಿ ಅದು ಅವಶ್ಯವೆನ್ನುತ್ತದೆ. ಶಾಸ್ತ್ರವು ವರ್ಣಾಶ್ರಮವ್ಯವಸ್ಥೆ ಯುಕ್ತವೆನ್ನುತ್ತದೆ; ಬುದ್ಧಿ ಅದು ಅಯುಕ್ತವೆನ್ನುತ್ತದೆ. ಶಾಸ್ತ್ರವು ಗಂಡಸಿಗೆ ಶಿಖೆಯನ್ನು ವಿಧಿಸುತ್ತದೆ; ಬುದ್ಧಿ ಬೈತಲೆಯೇ ಸೊಗಸೆನ್ನುತ್ತದೆ. ಶಾಸ್ತ್ರವು ಹೆಂಗಸಿಗೆ ಕರಿಮಣಿಯನ್ನು ತೊಡಿಸುತ್ತದೆ; ಬುದ್ಧಿ ಅದು ಅನಾಗರಿಕವೆನ್ನುತ್ತದೆ. ಶಾಸ್ತ್ರವು ವಿವಾಹ ಸೂತ್ರವನ್ನು ಅವಿಚ್ಛೇದ್ಯವೆನ್ನುತ್ತದೆ; ಬುದ್ಧಿ ಅದು ಐಚ್ಛಿಕ ಸಂಬಂಧವೆನ್ನುತ್ತದೆ–ಹೀಗೆ ಸಾವಿರ ದೃಷ್ಟಾಂತಗಳನ್ನು ಹೇಳಬಹುದು. ಇಂಥಾ ದ್ವೈಧಗಳಲ್ಲಿ ಹಿತದ ಮಾರ್ಗ ಯಾವುದು? ಶಾಸ್ತ್ರದ್ದೆ, ಸ್ವಬುದ್ಧಿಯದೆ?

ನಮ್ಮ ಜೀವನಕ್ಷೇತ್ರದಲ್ಲಿ ಶಾಸ್ತ್ರಕ್ಕೂ ಕಾರ್ಯವುಂಟು, ಸ್ವಬುದ್ಧಿಗೂ ಕಾರ್ಯವುಂಟು. ಹಾಗಾಗದ ಪಕ್ಷದಲ್ಲಿ ಆ ಎರಡೂ ಒಂದೇ ಜಾಗದಲ್ಲಿ ಕಾರ್ಯ ಮಾಡತಕ್ಕದ್ದೆ, ಅಥವಾ ಎರಡಕ್ಕೂ ಬೇರೆಬೇರೆ ಜಾಗಗಳುಂಟೆ? ಇದನ್ನು ವಿಚಾರ ಮಾಡಬೇಕಾಗುತ್ತದೆ.

ಬುದ್ಧಿಯ ವಿಚಾರ ಬಂದಾಗ ಒಂದು ಸಂಗತಿಯನ್ನು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಬುದ್ಧಿ ಕೆಲಸ ಮಾಡಲು ಕಾರ್ಯದ್ರವ್ಯ ಬೇಕು. ಕುಂಬಾರನು ಎಷ್ಟೇ ನಿಪುಣನಾದರೂ ಜೇಡಿಮಣ್ಣಿಲ್ಲದ ಕಡೆ ಅವನಿಗೆ ಕೆಲಸವಿಲ್ಲ. ಬಡಗಿಗೆ ಮರದ ದಿಮ್ಮಿಯಿಲ್ಲದಿದ್ದರೆ ಕೆಲಸವಿರದು. ಕೃಷಿಕನಿಗೆ ನೆಲ, ವರ್ತಕನಿಗೆ ಸರಕು. ವೈದ್ಯನಿಗೆ ಮೂಲಿಕೆ–ಹೀಗೆ ಪ್ರತಿಯೊಬ್ಬ ವೃತ್ತಿಕರ್ತನಿಗೂ ಒಂದೊಂದು ಕಾರ್ಯದ್ರವ್ಯ ಬೇಕು. ಬುದ್ಧಿಗೂ ಹಾಗೆಯೇ ಒಂದು ಕಾರ್ಯದ್ರವ್ಯ ಬೇಕು. ಅದನ್ನೊದಗಿಸುವುದು ಮನಸ್ಸು. ಮೊದಲು ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ಜಗದ್ವಸ್ತುಗಳನ್ನು ಕುರಿತು ಜ್ಞಾನವನ್ನು ಸಂಪಾದಿಸಿ, ಆ ತಿಳಿವಳಿಕೆಯನ್ನು ಮನಸ್ಸಿಗೆ ವರದಿ ಮಾಡುತ್ತವೆ. ಮನಸ್ಸು ಆ ವರದಿಯನ್ನು ಬುದ್ಧಿಗೆ ಒಪ್ಪಿಸುತ್ತದೆ. ಮನಸ್ಸು ತನ್ನ ಇಷ್ಟಾನಿಷ್ಟಗಳನ್ನು ಬುದ್ಧಿಗೆ ಹೇಳಿಕೊಳ್ಳುತ್ತದೆ. ಪೂರ್ವದ ಜ್ಞಾಪಕವೂ ಮನಸ್ಸಿನ ಜೊತೆಗೆ ಸೇರಿ ಬುದ್ಧಿಗೆ ತಿಳಿವಳಿಕೆ ಕೊಡುತ್ತದೆ. ಹೀಗೆ ಇಂದ್ರಿಯಗಳು, ಮನಸ್ಸು, ಪೂರ್ವಸ್ಮೃತಿ–ಇವೆಲ್ಲ ಒದಗಿಸಿದ ತಿಳಿವಳಿಕೆ ಬುದ್ಧಿಗೆ ಕಾರ್ಯದ್ರವ್ಯವಾಗುತ್ತದೆ. ಎಂದರೆ ಏನಾಯಿತು? ಎಲ್ಲಿ ಇಂದ್ರಿಯ ಮನಸ್ಸುಗಳು ಕೆಲಸ ಮಾಡಲಾರವೋ ಅಲ್ಲಿ ಬುದ್ಧಿಗೆ ಕೆಲಸವಿಲ್ಲ ಎಂದಾಯಿತು. ಹೀಗೆ ಬುದ್ಧಿಯ ಕಾರ್ಯರಂಗಕ್ಕೆ ಮಿತಿಮೇರೆ ಗೊತ್ತಾಯಿತು.

ಹಿಂದೆ ನೋಡಿದ್ದೇವೆ ಸತ್ಯವು ದ್ವಿವಿಧವಾದದ್ದು ಎಂದು. ಒಂದು ದೃಶ್ಯ ಸತ್ಯ, ಇನ್ನೊಂದು ಅದೃಶ್ಯ ಸತ್ಯ. ದೃಶ್ಯಸತ್ಯವು ಇಂದ್ರಿಯಗೋಚರವಾದದ್ದು; ಅದು ಪ್ರತ್ಯಕ್ಷ ಪ್ರಪಂಚ. ಅದೃಶ್ಯ ಸತ್ಯವು ಇಂದ್ರಿಯಗೋಚರವಲ್ಲದ್ದು; ಅದು ಪ್ರಪಂಚಾತೀತವಾದ ರಹಸ್ಯ ಚೈತನ್ಯ. ನಾವು ಅದನ್ನು ಕಾಣೆವು: ಅದರ ಶಕ್ತಿ ಪರಿಣಾಮಗಳನ್ನು ಮಾತ್ರ ನಮ್ಮ ಲೋಕದ ಜೀವನದಲ್ಲಿ ಕಾಣುತ್ತಿದ್ದೇವೆ.

ಹೀಗೆ ನಮ್ಮ ಜೀವಿತ ವ್ಯಾಪಾರಗಳಲ್ಲಿ ಕೆಲವು ದೃಶ್ಯಸತ್ಯದ, ಎಂದರೆ ಪ್ರತ್ಯಕ್ಷ ಪ್ರಪಂಚದ ಕ್ಷೇತ್ರಕ್ಕೆ ಸೇರಿದವು. ಇದು ಇಂದ್ರಿಯಪ್ರಾಪ್ಯಕ್ಷೇತ್ರ; ಬುದ್ಧಿಗಮ್ಯವಾದ ಕ್ಷೇತ್ರ.

ಇನ್ನು ಕೆಲವು ವ್ಯಾಪಾರಗಳು ಪ್ರಪಂಚಾತೀತಕ್ಷೇತ್ರಕ್ಕೆ ಸಂಬಂಧಪಟ್ಟವು. ಅಲ್ಲಿಗೆ ಇಂದ್ರಿಯಗಳಿಗೆ ಪ್ರವೇಶವಿಲ್ಲ, ಅಲ್ಲಿ ಕೇವಲ ಬುದ್ಧಿಕಾರ್ಯಕ್ಕೆ ಸ್ಥಳವಿಲ್ಲ.

ಈ ಕ್ಷೇತ್ರ ವಿವೇಕದಿಂದ ನಾವು ಅಧಿಕಾರ ವ್ಯಾಪ್ತಿಯನ್ನು ವಿಭಾಗ ಮಾಡಬಹುದು. ಯಾವ ಕಾರ್ಯಕ್ಷೇತ್ರವು ಇಂದ್ರಿಯಗೋಚರವಾಗಿ ಬುದ್ಧಿಕಾರ್ಯಕ್ಕೆ ಆಸ್ಪದಕೊಡುವುದಾಗಿರುತ್ತದೆಯೋ ಅಲ್ಲಿ ಪುರುಷ ಬುದ್ಧಿಗೆ ಮೊದಲನೆಯ ಸ್ಥಾನ; ಶಾಸ್ತ್ರಾಚಾರಗಳಿಗೆ ಅಲ್ಲಿ ಎರಡನೆಯ ಸ್ಥಾನ. ಎಲ್ಲಿ ಇಂದ್ರಿಯ ಪ್ರವೇಶವಿಲ್ಲವೋ, ಎಲ್ಲಿ ಬುದ್ಧಿಕಾರ್ಯಕ್ಕೆ ದ್ರವ್ಯಸಾಮಗ್ರಿಯಿಲ್ಲವೋ ಅಲ್ಲಿ ವೇದಶಾಸ್ತ್ರಕ್ಕೆ ಮೊದಲನೆಯ ಸ್ಥಾನ; ಪುರುಷಬುದ್ಧಿಗೆ ಅಲ್ಲಿ ಎರಡನೆಯ ಸ್ಥಾನ.

ಜೀವ, ಈಶ್ವರ, ಪುಣ್ಯ, ಪಾಪ, ಸ್ವರ್ಗ, ನರಕ–ಇವು ಪ್ರತ್ಯಕ್ಷವಸ್ತುಗಳಲ್ಲ. ಅವು ಇಂದ್ರಿಯಗಳ ಹಿಡಿತಕ್ಕೆ ಸಿಕ್ಕುವವಲ್ಲ. ಆದದ್ದರಿಂದ ಬುದ್ಧಿಯ ಸ್ವತಂತ್ರ ಕಾರ್ಯಕ್ಕೆ ಅಲ್ಲಿ ಅವಕಾಶವಿಲ್ಲ. ಸ್ಪುಟ್ನಿಕ್ಕುಗಳೂ ಚಂದ್ರಾದಿ ಗ್ರಹಪರಿಧಿಗಳನ್ನು ಭೇದಿಸುವೆವೆಂಬ ಆಕಾಶಯಾನಗಳೂ ಅಧ್ಯಾತ್ಮಪ್ರಪಂಚವನ್ನು ಮುಟ್ಟಲಾರವು. ಅದರ ದಿಕ್ಕನ್ನೇ ಕಾಣಲಾರವು. ಆ ರಹಸ್ಯರಾಜ್ಯದಲ್ಲಿ ಶಾಸ್ತ್ರ ಹೇಳಿದ್ದನ್ನು ಅರ್ಥ ಮಾಡಿಕೊಳ್ಳುವ ಅಧಿಕಾರ ಪುರುಷಬುದ್ಧಿಗಿಲ್ಲ. ಜೀವದ ಪೂರ್ವಾಪರ ರಹಸ್ಯಗಳ ವಿಷಯದಲ್ಲಿ ಪುರುಷಬುದ್ಧಿ ಸ್ವತಂತ್ರಿಸಿ ಊಹಾಪೋಹತರ್ಕಗಳಿಂದ ಸತ್ಯವನ್ನೂ ಧರ್ಮವನ್ನೂ ನಿರ್ಣಯಿಸುವೆನೆಂದರೆ, ಆ ನಿರ್ಣಯವು ಆಧಾರ ಸಾಲದ್ದಾಗುತ್ತದೆ. ಹಾಗೆ ಅದು ಸಂಶಯಗ್ರಸ್ತವಾಗುತ್ತದೆ.

ಮನುಷ್ಯಬುದ್ಧಿಗೆ ಎರಡು ಸ್ವಾಭಾವಿಕವಾದ ನ್ಯೂನತೆಗಳುಂಟು: ಒಂದು ಕಾರ್ಯ ಸಾಮಗ್ರಿಯ ಅಪೂರ್ಣತೆ. ಇನ್ನೊಂದು ದೃಷ್ಟಿ ಶಕ್ತಿಯ ಅಪೂರ್ಣತೆ.

ಬುದ್ಧಿಗಿರುವ ಕಾರ್ಯವು ಮುಖ್ಯವಾಗಿ ವಸ್ತುಪರೀಕ್ಷೆ ಮತ್ತು ಯೋಗ್ಯತಾ ನಿರ್ಣಯ. ಪರೀಕ್ಷೆಗೆ ವಿಷಯ ಬೇಕು. ಆ ವಿಷಯವನ್ನು ಬುದ್ಧಿ ಸ್ವತಂತ್ರವಾಗಿ ಕಲ್ಪಿಸಿಕೊಳ್ಳಲಾರದು. ಏಕೆಂದರೆ ಅದಕ್ಕೆ ನೇರವಾಗಿ ಲೋಕಸಂಪರ್ಕವಿಲ್ಲ. ಬುದ್ಧಿಗೆ ಪರೀಕ್ಷಾ ಸಾಮಗ್ರಿಯನ್ನು ಮನಸ್ಸೋ ಸ್ಮೃತಿಯೋ ತಂದು ಒದಗಿಸಬೇಕು. ಮನಸ್ಸೂ ಸ್ಮೃತಿಯೂ ವಿಷಯ ಸಾಮಗ್ರಿಯನ್ನು ಇಂದ್ರಿಯಗಳ ಮೂಲಕ ಸಂಗ್ರಹಿಸಬೇಕು. ಹೀಗೆ ಬುದ್ಧಿಗೆ ವಿಚಾರ ಸಾಮಗ್ರಿಯನ್ನೊದಗಿಸುವ ಚಾರರು ಇಂದ್ರಿಯಗಳು. ಇಂದ್ರಿಯ ಶಕ್ತಿಗಳಾದರೋ ಅತಿ ಪರಿಮಿತವಾದವು ಮತ್ತು

ಭೋಗೇಚ್ಛಾಕಲುಷಿತವಾದವು. ನಮ್ಮ ಕಣ್ಣು ಒಂದು ಕ್ಷಣದಲ್ಲಿ ಒಂದು ಪದಾರ್ಥದ ಒಂದು ಪಕ್ಕವನ್ನು ಮಾತ್ರ ಕಾಣಬಲ್ಲದು. ಅದರ ಎಲ್ಲ ಪಕ್ಕಗಳನ್ನೂ ಒಂದೇ ತಡವೆ ಕಾಣಲಾರದು. ಕಣ್ಣ ನೋಟ ಕೊಂಚ ದೂರ ಹರಡೀತು–ಹತ್ತು ಮಾರೋ ನೂರು ಮಾರೋ ನೂರು ಗಾವುದವೋ ಸಾಗೀತು; ಅಲ್ಲಿಂದಾಚೆಗೆ ಸಾಗಲಾರದು. ಹೀಗೆ ನೇತ್ರಸಾಮರ್ಥ್ಯವು ಏಕಮುಖದ್ದು ಮತ್ತು ಪರಿಮಿತಪ್ರದೇಶದ್ದು. ಮನುಷ್ಯನ ಎಲ್ಲ ಇಂದ್ರಿಯಗಳ ಸಾಮರ್ಥ್ಯವೂ ಅಂಥಾದ್ದೇ: ಏಕಮುಖದ್ದು ಮತ್ತು ಮಿತಪ್ರದೇಶದ್ದು. ಆದದ್ದರಿಂದ ಇಂದ್ರಿಯ ಕರಣಗಳು ಸಂಗ್ರಹಿಸಿ ತಂದು ಬುದ್ಧಿಗೆ ದೊರಕಿಸುವ ವಿಚಾರ ಸಾಮಗ್ರಿ ಏಕಪಕ್ಷದ್ದು ಮತ್ತು ಸ್ವಲ್ಪ ಪ್ರದೇಶದ್ದು, ಪದಾರ್ಥದ ಪರಿಪೂರ್ಣಸ್ವರೂಪದ್ದಲ್ಲ. ಹೀಗಿರುವುದರಿಂದ ಬುದ್ಧಿಯ ಕಾರ್ಯದ್ರವ್ಯದಲ್ಲಿಯೇ ನ್ಯೂನತೆ ಅನಿವಾರ್ಯವಾಗಿರುತ್ತದೆ.

ಅಷ್ಟೇ ಅಲ್ಲ. ಇಂದ್ರಿಯಗಳು ಭೋಗಾಭಿಲಾಷಿಗಳು; ಆದದ್ದರಿಂದ ಅವು ವಿಷಯ ಗ್ರಹಣ ಮಾಡುವಲ್ಲೂ ಪಕ್ಷಪಾತ ವ್ಯಾಮೋಹಾದಿ ದೋಷಗಳಿಗೆ ಆಸ್ಪದ ಕೊಡುತ್ತದೆ.

ಇನ್ನು ಬುದ್ಧಿಯ ಕಾರ್ಯಶಕ್ತಿಯಾದರೂ ತಲಸ್ಪರ್ಶ ಮಾಡಬಲ್ಲದ್ದೋ ಎಂದರೆ, ಅದೂ ಅಲ್ಲ. ದೇಹಕ್ಕೆ ಜಾಡ್ಯ ಬರುವಂತೆ ಬುದ್ಧಿಗೂ ಜಾಡ್ಯ ಮಾಂದ್ಯಗಳು ಬರುತ್ತವೆ. ಭಾಗಭಾಗ ಮಾತ್ರವಾಗಿ ತನಗೆ ದೊರೆತ ಸಾಮಗ್ರಿಯನ್ನು ಪರೀಕ್ಷಿಸಿ ನೋಡುವಲ್ಲಿ ಬುದ್ಧಿಯ ಆಲಸ್ಯ ವಿಸ್ಮೃತಿ ಪೂರ್ವಾಗ್ರಹ ಮೊದಲಾದ ದೋಷಕಾರಣಗಳಿಂದ ಪ್ರಮಾದಕ್ಕೊಳಪಡಬಹುದಾಗಿದೆ.

ಬುದ್ಧಿಯ ಕಾರ್ಯವಿಧಾನದಲ್ಲಿ ನಾಲ್ಕು ಸಂಗತಿಗಳಿರುತ್ತವೆ. ಮೊದಲನೆಯದು ವಸ್ತು ವಿಶ್ಲೇಷಣೆ–ಎಂದರೆ ವಿಚಾರಗ್ರಸ್ತವಾದ ವಸ್ತುವಿನ ರಚನೆಯಲ್ಲಿ ಸೇರಿರುವ ನಾನಾ ದ್ರವ್ಯಾಂಶಗಳನ್ನು ಪ್ರತ್ಯೇಕ ಮಾಡಿ ವಿಂಗಡಿಸುವುದು. ಇದೇ (Analaysis) "ಅನ್ಯಾಲಿಸಿಸ್". ಎರಡನೆಯದು ವರ್ಗೀಕರಣ–ಎಂದರೆ ವಸ್ತ್ವಂತರ್ಗತವಾದ ನಾನಾ ಅಂಶಗಳನ್ನೂ ಅವುಗಳ ಸ್ವಭಾವಲಕ್ಷಣಗಳನ್ನೂ ಅನುಸರಿಸಿ ಜಾತಿಜಾತಿಯಾಗಿ ವಿಂಗಡಿಸುವುದು. ಇದೇ "ಕ್ಲ್ಯಾಸಿಫಿಕೇಷನ್" (Classification). ಮೂರನೆಯ ಬುದ್ಧಿ ಸಂಗತಿಯು ಕಾರ್ಯಕಾರಣಸಂಬಂಧನಿಷ್ಕರ್ಷೆ. ಒಂದಾನೊಂದು ಪದಾರ್ಥದಲ್ಲಿ ಯಾವ ದ್ರವ್ಯಾಂಶ ಎಷ್ಟು ಪ್ರಮಾಣದಲ್ಲಿದೆ? ಅದು ಇನ್ನೊಂದು ದ್ರವ್ಯಾಂಶದ ಎಷ್ಟಕ್ಕೆ ಸೋಕಿದರೆ ಏನು ಪರಿಣಾಮವಾಗುತ್ತದೆ?–ಇದನ್ನು ಗೊತ್ತು ಮಾಡುವುದು. ಇದು "ಕಾಸ್ಯಾಲಿಟಿ" (Causality) ನಾಲ್ಕನೆಯ ಬುದ್ಧಿ ಸಂಗತಿಯು ಕಾರ್ಯಾಕಾರ್ಯನಿರ್ಣಯ. ಪ್ರಸಕ್ತ ವಸ್ತು ಸಂಯೋಗದಲ್ಲಿ

ಕಾರ್ಯಕಾರಣ ಸರಣಿಯನ್ನು ನೋಡಿ, ಉದ್ದಿಷ್ಟ ಪ್ರಯತ್ನದಿಂದ ಬರಬಹುದಾದ ಫಲಿತಾಂಶದಲ್ಲಿ ಒಳ್ಳೆಯದೆಷ್ಟು, ಕೆಟ್ಟದ್ದೆಷ್ಟು, ಅದು ಯುಕ್ತವೆ, ಅಯುಕ್ತವೆ–ಎಂಬುದನ್ನು ನಿಷ್ಕರ್ಷೆಮಾಡುವುದು. ಇದು ಯೋಗ್ಯತಾ ನಿರ್ಣಯ– "ವ್ಯಾಲ್ಯೂ ಜಡ್‌ಜ್‌ಮೆಂಟ್" (Value Judgement). ಈ ನಾಲ್ಕು ಬುದ್ಧಿ ಸಂಗತಿಗಳೂ ನಡೆಯುವುದು ಅದರ ಕೈಗೆ ವಸ್ತು ಸಿಕ್ಕಿದ ಮೇಲೆ ತಾನೆ? ಯಾವ ವಿಷಯವು ಇಂದ್ರಿಯ ಮನಸ್ಸುಗಳಿಗೆ ಲಭ್ಯವೋ ಅದನ್ನು ಬುದ್ಧಿಯಿಂದ ಪರೀಕ್ಷಿಸಲಾಗುತ್ತದೆ. ನಮ್ಮ ಪ್ರತ್ಯಕ್ಷ ಪ್ರಪಂಚದ ವಸ್ತುಗಳು ಅಂಥವು. ಪುರುಷ ಬುದ್ಧಿ ಅವುಗಳನ್ನು ಗ್ರಹಿಸಿ ತರ್ಕಸಿದ್ಧಾಂತಗಳನ್ನು ಮಾಡೀತು. ಆದರೆ ತನ್ನ ಹಿಡಿತಕ್ಕೆ ಸಿಕ್ಕದ ವಸ್ತುಗಳ ವಿಷಯದಲ್ಲಿ ಬುದ್ಧಿಯ ಕೆಲಸ ಸಾಗದು. ಯಾವುದು ಇಂದ್ರಿಯಾನುಭವಕ್ಕೆ ಸಿಕ್ಕುವುದಲ್ಲವೋ ಅದರ ಮೇಲೆ ಬುದ್ಧಿಗೆ ಅಧಿಕಾರವಿಲ್ಲ. ನಾನಾ ಆಧ್ಯಾತ್ಮಿಕ ಸಂಗತಿಗಳು ಇಂದ್ರಿಯಾತೀತಗಳು. ನಮ್ಮ ಕಣ್ಣು ಕಿವಿ ಕೈಗಳು ಅಧ್ಯಾತ್ಮತತ್ತ್ವಗಳನ್ನು ಸೋಕಲಾರವು. ಮನಸ್ಸೂ ಸೋಕಲಾರದು. ಅಧ್ಯಾತ್ಮವೆಂಬುದೊಂದಿದೆ ಎಂದು ಮನಸ್ಸು ಸೂಚಿಸಬಹುದು. ಬುದ್ಧಿ ಅದನ್ನೊಪ್ಪಬಹುದು. ಆದರೂ ಅಧ್ಯಾತ್ಮವು ಬುದ್ಧಿಗೆ ಸ್ವಾಧೀನವಾಯಿತೆನ್ನಲಾಗದು.

ಆತ್ಮತತ್ತ್ವವೂ ಈಶ್ವರತತ್ತ್ವವೂ ಜೀವಪ್ರಗತ್ಯಪ್ರಗತಿತತ್ತ್ವವೂ ಇಂದ್ರಿಯ ಸ್ಪರ್ಶಕ್ಕೆ ಸಿಕ್ಕುವವಲ್ಲ. ಆದರೆ ಇಂದ್ರಿಯಗಳು ಆ ತತ್ತ್ವಗಳ ಕಾರ್ಯಫಲಗಳನ್ನು ಅನುಭವಿಸುತ್ತವೆ. ಆ ಅನುಭವದ ಆಧಾರಿಂದ ಬುದ್ಧಿಯು ತತ್ತ್ವ ಮೂಲವನ್ನು ಊಹಿಸಿ ಗ್ರಹಿಸುತ್ತದೆ. ಅಧ್ಯಾತ್ಮತತ್ತ್ವವೂ ಹೀಗೆ ಬುದ್ಧಿಗ್ರಾಹ್ಯವೇ ಹೊರತು ಬುದ್ಧ್ಯಧೀನವಲ್ಲ. ಅದು ಬುದ್ಧಿಗ್ರಾಹ್ಯವಾಗುವುದೂ ಕೂಡ ಆಸ್ತಿಕ ಶಾಸ್ತ್ರವನ್ನಂಗೀಕರಿಸಿದಾಗ. ನಾಸ್ತಿಕರಿಗೆ ಬುದ್ಧಿಯಿಲ್ಲವೆಂದಲ್ಲ. ಆದರೆ ಅವರಿಗೆ ಶಾಸ್ತ್ರಶ್ರದ್ಧೆಯಿಲ್ಲದ್ದರಿಂದ ಅಧ್ಯಾತ್ಮತತ್ತ್ವವು ಗಾಹ್ಯವಾಗಲಾರದು. ಗ್ರಾಹ್ಯವಾಗಿದ್ದಿದ್ದರೆ ಅವರು ನಾಸ್ತಿಕರಾಗುತ್ತಿರಲಿಲ್ಲ. ಅಧ್ಯಾತ್ಮತತ್ತ್ವವು ಗ್ರಾಹ್ಯವಾಗುವುದು ಶಾಸ್ತ್ರಾಂಗೀಕಾರವಾಗಿರುವಾಗಲೇ. ಆತ್ಮಚೈತನ್ಯವುಂಟೆಂದು ರುಜುವಾತು ಮಾಡಿಕೊಡಲು ಹೊರಗಣ ಸಾಕ್ಷ್ಯ ಯಾವುದೂ ಇಲ್ಲ; ಶಾಸ್ತ್ರ ವಾಕ್ಯವೊಂದೇ ಅಲ್ಲಿರುವ ಸಾಕ್ಷ್ಯ. ಜೀವವುಂಟೆಂದು ಅದನ್ನು ಕೈಯಿಂದ ತೋರಿಸಿ ಇನ್ನೊಬ್ಬರ ಕೈಯಲ್ಲಿರಿಸುವುದು ಹೇಗೆ? ಸ್ವರ್ಗವೋ ನರಕವೋ ಉಂಟೆಂದು ಹೊರ ಪ್ರಪಂಚದಲ್ಲಿ ಬೆಟ್ಟಿಟ್ಟು ರುಜುವಾತು ಕೊಡುವುದು ಹೇಗೆ? ಜನ್ಮಾಂತರವನ್ನು ತೋರಿಸಲು ದಾಖಲೆಗಳೆಲ್ಲಿವೆ? ದೇವರಿದ್ದಾನೆಂದು ಪ್ರಹ್ಲಾದನು ಪ್ರತ್ಯಕ್ಷ ಪಡಿಸಿದನೆಂದು ಪುರಾಣ ಹೇಳುತ್ತದೆ. ನಮಗೆ ದೇವರನ್ನು ಪ್ರತ್ಯಕ್ಷವಾಗಿ ರುಜುವಾತು ಮಾಡಿಸಬಲ್ಲವರು ಎಲ್ಲಿದ್ದಾರೆ? ಈ ಎಲ್ಲ ಭಾವನೆಗಳೂ–ಜೀವ, ದೈವ, ಆತ್ಮ,

ಬ್ರಹ್ಮ, ಪುಣ್ಯ, ಪಾಪ, ಸ್ವರ್ಗ, ನರಕ ಇವೆಲ್ಲವೂ–ವೇದದಿಂದ ನಮಗೆ ಬಂದಿರುವ ತಿಳಿವಳಿಕೆ. ಅವು ಪುರುಷ ಬುದ್ಧಿಸಿದ್ಧಗಳಲ್ಲ. ಹೀಗೆ ಪರತತ್ತ್ವವನ್ನು ಹುಡುಕುವವರಿಗೂ ತತ್ತ್ವಾನುಸಾರವಾಗಿ ಜೀವಿತವನ್ನು ನಡೆಸಿಕೊಳ್ಳಬೇಕೆನ್ನುವವರಿಗೂ ವೇದವು ಮೂಲಪ್ರಮಾಣವಾಗುತ್ತದೆ. ಮನುಷ್ಯಬುದ್ಧಿಯ ಶಂಕಾಪ್ರಮಾದಾದಿ ದೋಷಸಂಭವವನ್ನು ದೃಷ್ಟಿಯಲ್ಲಿರಿಸಿಕೊಂಡೇ ಭಗವಾನ್ ವ್ಯಾಸ ಮಹರ್ಷಿಗಳು–

> ತರ್ಕಾಪ್ರತಿಷ್ಠಾನಾತ್

ಇತ್ಯಾದಿ ಸೂತ್ರದಲ್ಲಿ ಮನುಷ್ಯ ಬುದ್ಧಿಯು ಪರಮತತ್ತ್ವ ನಿರ್ಧಾರಕ್ಕೆ ಸಾಲದೆಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಇದರ ಮೇಲೆ ಶಂಕರಾಚಾರ್ಯರ ಭಾಷ್ಯ ಹೀಗಿದೆ:

> ಪುರುಷೋತ್ಪ್ರೇಕ್ಷಾಮಾತ್ರನಿಬಂಧನಾಸ್ತರ್ಕಾ ಅಪ್ರತಿಷ್ಠಾ ಭವಂತಿ ।
> ಉತ್ಪ್ರೇಕ್ಷಾಯಾಃ ನಿರಂಕುಶತ್ವಾತ್ ।
> ... ಪುರುಷಮತಿವೈರೂಪ್ಯಾತ್ ।
> ... ಕಪಿಲಕಣಭುಕ್ ಪ್ರಭೃತೀನಾಂ ಪರಸ್ಪರವಿಪ್ರತಿಪತ್ತಿದರ್ಶನಾತ್ ।
> ತರ್ಕಾಣಾಮಪ್ರತಿಷ್ಠಿತತ್ವಂ ತರ್ಕೇಣೈವಪ್ರತಿಷ್ಠಾಪ್ಯತೇ ।
> ಸರ್ವತರ್ಕಾಽಪ್ರತಿಷ್ಠಾಯಾಂ ಚ ಲೋಕವ್ಯವಹಾರೋಚ್ಛೇದಪ್ರಸಂಗಃ ॥

"ಮನುಷ್ಯನ ಊಹೆ ಉತ್ಪ್ರೇಕ್ಷೆಗಳಿಂದ ಆದದ್ದು ತರ್ಕಸರಣಿ. ಆ ಊಹೆಗಳಿಗೆ ಅಡ್ಡಿ ಆತಂಕಗಳಿಲ್ಲದ್ದರಿಂದ ತರ್ಕಕ್ಕೆ ನೆಲೆ ನಿಲುಗಡೆ ಇಲ್ಲದೆಹೋಗುತ್ತದೆ. ಮನುಷ್ಯಬುದ್ಧಿ ನಾನಾ ರೂಪಗಳನ್ನು ತಾಳುತ್ತದೆ. ಹಾಗಿರುವುದರಿಂದಲೇ ಕಪಿಲಮಹರ್ಷಿಗಳ ವಾದವನ್ನು ಕಣಾದಮಹರ್ಷಿಗಳು ಒಪ್ಪಿಕೊಳ್ಳಲಾಗಲಿಲ್ಲ. ಹೀಗೆ ಮನುಷ್ಯಬುದ್ಧಿ ಕಾರ್ಯವಾದ ತರ್ಕವು ತಾನೇ ಪರತತ್ತ್ವವನ್ನು ನಿಶ್ಚಯಿಸಲು ಅಸಮರ್ಥವೆಂಬುದು ತರ್ಕಮರ್ಯಾದೆಯಿಂದಲೇ ಸಿದ್ಧವಾಗುತ್ತದೆ. ತರ್ಕವೆಲ್ಲಿಯೂ ಬೇಡವೆಂದರೆ ಲೋಕ ವ್ಯವಹಾರವೇ ಅಸಾಧ್ಯವಾಗುತ್ತದೆ".

ಹೀಗಿರಲಾಗಿ ಬುದ್ಧಿಕಾರ್ಯವಾದ ತರ್ಕವು ಕೆಲವೆಡೆ ಅವಶ್ಯ. ಇನ್ನು ಕೆಲವೆಡೆ ಅಸಾಧ್ಯ. ಈ ಸಂಧಿಯಲ್ಲಿ ನಮಗಿರುವ ಗತಿ ವೇದವೊಂದೇ.

ಅತೀಂದ್ರಿಯವಿಷಯಕ ಜ್ಞಾನವು ವೇದದಿಂದಲೇ ಉಂಟಾಗತಕ್ಕದ್ದು:

ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೇ ।
ಏನಂ ವಿದನ್ತಿ ವೇದೇನ ತಸ್ಮಾದ್ವೇದಸ್ಯ ವೇದತಾ ॥

“ಯಾವ ಪುರುಷಾರ್ಥಮಾರ್ಗವನ್ನು ನಾವು ಪ್ರತ್ಯಕ್ಷಜಗದ್ವಸ್ತುಪರೀಕ್ಷೆಯಿಂದಲಾಗಲಿ ಪ್ರತ್ಯಕ್ಷಸಂಗತಿಗಳ ಆಧಾರದಿಂದ ಮಾಡಿದ ಊಹಾಪೋಹಗಳಿಂದಾಗಲಿ ತಿಳಿದುಕೊಳ್ಳಲಾಗುವುದಿಲ್ಲವೋ, –ಯಾವ ಪರಮೋದ್ದೇಶಕ್ಕೆ ಉಪಾಯವನ್ನು ಬರಿಯ ತರ್ಕ ತಿಳಿಸಿಕೊಡಲಾರದೋ, –ಆ ಅಲೌಕಿಕ ವಿಷಯವನ್ನು ವೇದದಿಂದ ತಿಳಿದುಕೊಳ್ಳಲಾಗುತ್ತದೆ. ಹೀಗಿರುವುದರಿಂದಲೇ ವೇದಗಳ ವೇದತ್ವ”.

ಇದು ಸಿದ್ಧಾಂತ, ಅತೀಂದ್ರಿಯವಿಚಾರಗಳಲ್ಲಿ ವೇದವೇ ಪ್ರಮಾಣ ಅಥವಾ ವೇದದ ಮುಖ್ಯಾಧಿಕಾರ ಅಧ್ಯಾತ್ಮ ವಿಚಾರಗಳಲ್ಲಿ. ಯಾವ ನಮ್ಮ ಪ್ರಶ್ನೆಗಳು ಆಧ್ಯಾತ್ಮಿಕವಲ್ಲದೆ ಐಹಿಕಮಾತ್ರದವೋ–ಇಂಗ್ಲಿಷಿನಲ್ಲಿ ಹೇಳುವಂತೆ (Secular) “ಸೆಕ್ಯುಲರ್” (ಲೌಕಿಕ) ಮಾತ್ರವೋ–ಅಲ್ಲಿ ಪುರುಷಬುದ್ಧಿಯ ವಿವೇಕಕ್ಕೆ ಪ್ರಥಮಸ್ಥಾನ.

ಹಾಗಾದರೆ ವೇದಶಾಸ್ತ್ರಗಳನ್ನವಲಂಬಿಸಿದವರಿಗೆ ಆ ಮಾರ್ಗದಲ್ಲಿ ಬುದ್ಧಿಯು ಸಹಾಯಮಾಡಬೇಕಾದದ್ದಿಲ್ಲವೋ? ಉಂಟೇ ಉಂಟು. ಬುದ್ಧಿಕಾರ್ಯ ಅಲ್ಲಿಯೂ ಅನಿವಾರ್ಯ. ಆದರೆ ಬುದ್ಧಿ ಆ ಕಾರ್ಯವನ್ನು ವೇದದ ಆವರಣದೊಳಗಡೆ ನಡೆಸಬೇಕಾದದ್ದು. ಹುಲ್ಲುಗಾವಲಿನಲ್ಲಿ ಮೇವಿಗಾಗಿ ಬಿಟ್ಟ ಕರು ಓಡಾಡಬಾರದೊ? ಓಡಾಡಬಹುದು ಮತ್ತು ಓಡಾಡಬೇಕು. ಆದರೆ ಬೇಲಿಯನ್ನು ದಾಟಿ ಹೋಗಬಾರದು. ಬೇಲಿಯನ್ನು ಮರೆತರೆ ಹುಲಿ ಚಿರತೆಗಳು ಹಿಡಿದಾವು. ಹುಲ್ಲುಗಾವಲಿನ ಸರಹದ್ದಿನೊಳಗೆ ದನಕರುಗಳ ಸ್ವಾತಂತ್ರ್ಯ; ವೇದಪ್ರಾಕಾರದ ಒಳಗಡೆ ಪುರುಷಬುದ್ಧಿಯ ಸ್ವಾತಂತ್ರ್ಯ; ಸ್ವಾತಂತ್ರ್ಯವು ಇಲ್ಲಿ ಕರ್ತವ್ಯಸಾಪೇಕ್ಷವಾದದ್ದು. ಪುರುಷಬುದ್ಧಿಯು ಸ್ವತಂತ್ರವಾಗಿ ಕೆಲಸಮಾಡಿದಲ್ಲದೆ ವೇದಾರ್ಥವು ಸ್ಪಷ್ಟವಾಗದು. ಇದು ಮನುವಚನ:

ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ ।
ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ ॥

ಈ ಮನುವಾಕ್ಯದ ವ್ಯಾಖ್ಯಾನದಲ್ಲಿ ಕುಲ್ಲೂಕಭಟ್ಟರು ಭಟ್ಟವಾರ್ತಿಕಕಾರರ ಅಭಿಪ್ರಾಯವನ್ನು ಉದಾಹರಿಸಿದ್ದಾರೆ:

ಧರ್ಮೇ ಪ್ರಮೀಯಮಾಣೇ ಹಿ ವೇದೇನ ಕರಣಾತ್ಮನಾ ।
ಇತಿಕರ್ತವ್ಯತಾಭಾಗಂ ಮೀಮಾಂಸಾ ಪೂರಯಿಷ್ಯತಿ ॥

"ಧರ್ಮವನ್ನು ತಿಳಿಯಲು ವೇದವೇ ಸಾಧನ. ಅದರಿಂದ ತಿಳಿದುಬಂದದ್ದರ ಪ್ರಯೋಗಾನುಷ್ಠಾನವನ್ನು ಮೀಮಾಂಸಾರೂಪವಾದ ಬುದ್ಧಿಕಾರ್ಯವು ಗೊತ್ತು ಮಾಡುತ್ತದೆ".

ತೀರ್ಮಾನ ಇಷ್ಟು: ಯಾವ ಕರ್ಮಕ್ಷೇತ್ರದಲ್ಲಿ ಅಧ್ಯಾತ್ಮವಿಷಯವೇ ಪ್ರಧಾನವೋ- ಎಲ್ಲಿ ಜೀವ, ಈಶ್ವರ, ಪುಣ್ಯ, ಪಾಪ, ಸ್ವರ್ಗ, ನರಕ, ಪುನರ್ಜನ್ಮ, ಮೋಕ್ಷ ಇಂಥಾ ವಿಚಾರಗಳು ಮುಖ್ಯವೋ–ಅಲ್ಲಿ ವೇದಶಾಸ್ತ್ರಶ್ರದ್ಧೆ ಪ್ರಧಾನವಾಗುತ್ತದೆ. ಪುರುಷಬುದ್ಧಿ ಅಲ್ಲಿ ಶಾಸ್ತ್ರಕ್ಕೆ ಸಹಾಯವಾಗಿರುತ್ತದೆ. ಎಲ್ಲಿ ಜೀವದ ಸದ್ಗತಿಯ ಪ್ರಶ್ನೆ ಸಾಕ್ಷಾತ್ತಾಗಿ ಬಾರದೆ, ಲೌಕಿಕ ಲಾಭಾಲಾಭಗಳೇ ತಾತ್ಪರ್ಯವೋ ಅಲ್ಲಿ ಬುದ್ಧಿಯ ಸ್ವತಂತ್ರ ವಿಚಕ್ಷಣೆ ಪ್ರಧಾನವಾಗುತ್ತದೆ. ಹೀಗೆ ನಮ್ಮ ಜೀವನದ ಕೆಲವು ಕ್ಷೇತ್ರಗಳಲ್ಲಿ ಮೊದಲು ಶಾಸ್ತ್ರ ಶ್ರದ್ಧೆಯೂ ಅದನ್ನನುಸರಿಸಿ ಸ್ವಬುದ್ಧಿಯೂ ಹೊಂದಿಕೊಂಡಿರಬೇಕು. ಇನ್ನು ಕೆಲವು ಕ್ಷೇತ್ರಗಳಲ್ಲಿ ಬುದ್ಧಿವಿವೇಕವು ಪಟುವಾಗಿ, ದೃಢವಾಗಿ, ವೇದಶಾಸ್ತ್ರಗಳಿಗೆ ವಿರೋಧವಾಗದಂತೆ ಜೀವನವನ್ನು ಸಾಗಿಸಬೇಕು. ಹೀಗೆ ಶ್ರದ್ಧೆಬುದ್ಧಿಗಳೆರಡರ ಸಮನ್ವಯ; ಹೀಗೆ ವೈದಿಕ ಲೌಕಿಕೋಪಾಯಗಳ ಸಮನ್ವಯ.

ಈಗ ಅರ್ಜುನನ ವಿಷಯಕ್ಕೆ ಹೋಗೋಣ. ವೇದಶಾಸ್ತ್ರ ಶ್ರದ್ಧೆಯಿಂದ ಅವನು ಕ್ಷತ್ರಿಯ ಧರ್ಮವನ್ನು ನಡಸಬೇಕಾದದ್ದು. ಆತ್ಮಚೈತನ್ಯ ನಾಶವಿಲ್ಲದ್ದು; ಅದು ನಿತ್ಯವಾದದ್ದು; ಅದರ ಪರಿಪೂರ್ಣಸ್ವರೂಪದರ್ಶನವೇ ಜೀವಕ್ಕಾಗಬಹುದಾದ ಪರಮಲಾಭ; ಆ ಲಾಭ ದೊರೆಯಬೇಕಾದರೆ ಜೀವಾವಸ್ಥೆಯ ಕಶ್ಮಲಕಳಂಕಗಳು ಹೋಗಬೇಕು; ಆ ಜೀವ ಪರಿಶೋಧನೆಗಾಗಿ ಧರ್ಮ; ಧರ್ಮದಲ್ಲಿ ಸ್ವಧರ್ಮ; ಇದಿಷ್ಟು ವೇದಶಾಸ್ತ್ರದ ಉಪದೇಶ. ಅದು ಸ್ವಬುದ್ಧಿ ಸಿದ್ಧಾಂತವಲ್ಲ; ಶಾಸ್ತ್ರಶ್ರದ್ಧೆ. ಅರ್ಜುನನು ಯುದ್ಧಕರ್ಮಕ್ಕೆ ಸಿದ್ಧನಾಗುವುದು ಶಾಸ್ತ್ರಶ್ರದ್ಧೆ.

ಸಿದ್ಧನಾಗಿ ಯುದ್ಧರಂಗದಲ್ಲಿ ನಿಂತ ಬಳಿಕ ಸೇನಾವ್ಯೂಹಗಳನ್ನು ಹೇಗೆ ರಚಿಸಬೇಕು, ಸೇನಾಪತಿತ್ವಕ್ಕೆ ಯಾರನ್ನು ತರಬೇಕು, ಯಾವ ಶಸ್ತ್ರವನ್ನು ಪ್ರಯೋಗಿಸಬೇಕು, ಎದುರುಗಡೆಯ ಯಾವ ಅಸ್ತ್ರಕ್ಕೆ ತನ್ನ ಕಡೆಯ ಯಾವ ಪ್ರತ್ಯಸ್ತ್ರ–ಇಂಥಾ ಪ್ರಶ್ನೆಗಳೆಲ್ಲ ಕೇವಲ ಸ್ವಬುದ್ಧಿಚಾತುರ್ಯದಿಂದ ನಿರ್ಣೀತವಾಗತಕ್ಕವು.

ತತ್ತ್ವಜ್ಞಾನಕ್ಕೆ ಶಾಸ್ತ್ರ; ಲೋಕವಿನಿಯೋಗಕ್ಕೆ ಬುದ್ಧಿ.

ನಮ್ಮಂಥ ಸಾಮಾನ್ಯ ಸಣ್ಣ ಜನರ ಗೃಹಕೃತ್ಯಗಳಲ್ಲೂ ಅಷ್ಟೇ ಸರಿ. ಮದುವೆಯಾಗಬೇಕಾದರೆ ಹೆಣ್ಣು ಗಂಡುಗಳ ಹೊಂದಿಕೆ ಶಾಸ್ತ್ರವಿಷಯ; ಮುಹೂರ್ತ ಮಾಂಗಲ್ಯಗಳು ಶಾಸ್ತ್ರವಿಷಯ. ಬೀಗರನ್ನು ಹೇಗೆ ಒಲಿಸಿಕೊಳ್ಳಬೇಕು; ಭೋಜನಕ್ಕೆ ಏನೇನು ತರತೀಪು ಆಗಬೇಕು, ಯಾರ್ಯಾರನ್ನು ಕರೆಯಬೇಕು? ಸ್ವಗೃಹದಲ್ಲಿಯೆ, ಶ್ರೀರಾಮಮಂದಿರದಲ್ಲಿಯೆ? ಹಣ ಸಾಲ ತರುವುದೆ, ಸಾಮಾನೇ ಸಾಲವೆ? ಬಡ್ಡಿ ಹತ್ತು ಕೊಡೋಣವೆ, ಹನ್ನೆರಡು ಕೊಡೋಣವೆ?–ಇಂಥಾ ಪ್ರಶ್ನೆಗಳೆಲ್ಲ ಲೌಕಿಕ ಬುದ್ಧಿವಂತಿಗೆ ಸೇರಿದವು. ಇದರಲ್ಲಿ ಸುಳ್ಳು, ವಂಚನೆ ಇಲ್ಲದಿದ್ದರೆ ಸಾಕು. ಹೀಗೆ ನಮ್ಮನಮ್ಮ ನಿತ್ಯಕರ್ತವ್ಯಗಳಲ್ಲಿ ಶಾಸ್ತ್ರಕ್ಕೊಂದು ಸ್ಥಾನವುಂಟು; ಸ್ವಬುದ್ಧಿಗೂ ಒಂದು ಸ್ಥಾನವುಂಟು. ಬಹುಶಃ ಎಲ್ಲೆಲ್ಲೂ ಎರಡೂ ಜೊತೆಜೊತೆಯಾಗಿಯೇ ಇರಬೇಕಾದವು. ಶಾಸ್ತ್ರಶ್ರದ್ಧೆಗೂ ಸ್ವಬುದ್ಧಿವಿವೇಕಕ್ಕೂ ವಿರೋಧವೇನೂ ಇರಬೇಕಾದದ್ದಿಲ್ಲ. ಅವೆರಡೂ ಪರಸ್ಪರ ಪರಿಪೂರಕಗಳು. ಈ ವಿಷಯವನ್ನು ಕುರಿತು ಇಷ್ಟು ಹೇಳಬೇಕಾದ್ದೇಕೆಂದರೆ, ನಮ್ಮ ಸಮಾಜದ ಮನಸ್ಸು ಈ ಹೊತ್ತು ಒಂದು ನಿಶ್ಚಯವಿಲ್ಲದೆ ಭ್ರಾಂತವಾಗಿ ತಲ್ಲಣಿಸುತ್ತಿದೆ. ಯಾವುದು ಸರಿ–ಶಾಸ್ತ್ರವೆ, ಲೋಕಮಾರ್ಗವೆ? ಶ್ರದ್ಧೆಯಿಡೋಣವೆ, ಸ್ವತಂತ್ರವಿಚಾರ ಮಾಡೋಣವೆ? ವೇದವೆ, ವಿಜ್ಞಾನವೆ? ಪೂರ್ವದ ನೆಮ್ಮದಿಯೆ? ವರ್ತಮಾನ ಕಾಲದ ಮೆರಗುಮೆರೆತವೆ? ಇದು ನಮ್ಮನ್ನೆಲ್ಲ ಕಾಡಿಸುತ್ತಿರುವ ದ್ವಂದ್ವ. ಇದರಿಂದ ನಾವು ಪಾರಾಗಬೇಕಾದರೆ ವೇದಶಾಸ್ತ್ರಗಳ ಅಧಿಕಾರಕ್ಷೇತ್ರ ಯಾವುದು, ಪುರುಷಬುದ್ಧಿಯ ಕ್ಷೇತ್ರ ಯಾವುದು ಎಂಬುದನ್ನು ನಮ್ಮ ಮನಸ್ಸುಗಳಿಗೆ ವಿಶದಪಡಿಸಿಕೊಂಡಿರಬೇಕು.

ಅರ್ಜುನ ಈಗ ಕೇಳಿದ:

> ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜನ್ತೇ ಶ್ರದ್ಧಯಾಽನ್ವಿತಾಃ ।
> ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ ॥

ಲೋಕದಲ್ಲಿ ಕೆಲ ಮಂದಿಗೆ ಶ್ರದ್ಧೆಯಿರುತ್ತದೆ. ಆದರೆ ಅದು ಶಾಸ್ತ್ರವಿಧಿಯಲ್ಲಲ್ಲ, ತಾವೇ ಕಲ್ಪಿಸಿಕೊಂಡ ಇನ್ಯಾವುದೋ ಒಂದರಲ್ಲಿ. ಅಂಥವರ ಪಾಡೇನು?

ಇಂಥವರನ್ನು ನಾವು ಈಗ ನಮ್ಮ ಸುತ್ತಮುತ್ತ ಆಗಾಗ ನೋಡುತ್ತಿದ್ದೇವೆ. ಹೊಸಹೊಸ ಉಪದೇಶಕರು ಬರುತ್ತಿದ್ದಾರೆ. ಹೊಸಹೊಸ ಉಪಾಸನೆಗಳನ್ನು ತರುತ್ತಿದ್ದಾರೆ. ಪರಿಮಳ ದಾಡಿಕಾ ಸ್ವಾಮಿಗಳು. ಎಂಟು ದಿನ ಕಾಲಿಗೆ ಮುದ್ರೆ ಹಾಕಿ ಕುಳಿತ ಗಟ್ಟಿತಿಷ್ಠೆ ಸ್ವಾಮಿಗಳು, ಜಡಿಮಳೆಯಂತೆ ವಾಗ್ಧಾರೆ ಸುರಿಯುವ ಬೈರಿಗೆ ಸ್ವಾಮಿಗಳು, ಯಂತ್ರ ಮಂತ್ರ ಯಕ್ಷಿಣೀಸ್ವಾಮಿಗಳು, ಪವಾಡಪ್ರಚಂಡಸ್ವಾಮಿಗಳು–ಇಂಥವರು ಲೋಕಾಕರ್ಷಣ ಸಮರ್ಥರಾಗಿದ್ದಾರೆ.

ಶೃಂಗೇರಿಯ ಶ್ರೀ ಶಿವಾಭಿನವನೃಸಿಂಹಭಾರತಿಗಳವರು–

> ಕಾಷಾಯವಸ್ತ್ರೇಣ ಕರಾತ್ತದಂಡಕಮಂಡಲುಭ್ಯಾಂ ಜಪಮಾಲಯಾ ಚ ।
> ವಿಭ್ರಾಮಯನ್ತಂ ಗೃಹಿಣಾಂ ಕದಂಬಂ ಮಾಂ ಪಾಹಿ ಪೃಥ್ವೀಧರರಾಜಪುತ್ರಿ ॥

"ಪಾರ್ವತೀದೇವಿ, ನಾನು ಮಾಡುತ್ತಿರುವುದೇನು? ಮೈ ಮೇಲೆ ಕಾವಿಬಟ್ಟೆ, ಕೈಯಲ್ಲಿ ಕಮಂಡಲುಪಾತ್ರೆ, ಸಂನ್ಯಾಸದಂಡ, ಜಪಸರ–ಇದರಿಂದ ಗೃಹಸ್ಥ ಜನರಿಗೆ ಭ್ರಾಂತಿಯುಂಟುಮಾಡುತ್ತಿದ್ದೇನೆ. ಇಂಥವನನ್ನು ನೀನೇ ಕಾಪಾಡಬೇಕು" –ಎಂದು ಬೇಡಿದರು. ಅವರ ಬಾಯಿಂದ ಸ್ವಾಹಂಕಾರಖಂಡನೆಯಾಗಿ ಬಂದ ಆ ವಿನಯವಾಕ್ಕು ಯಾರ ವಿಷಯದಲ್ಲಿ ಅಕ್ಷರಶಃ ಯಥಾರ್ಥವೋ ಅಂಥವರು ಈಗ ತಾವು ಲೋಕೋದ್ಧಾರಕರ್ತರೆಂದು ಮುಂದೆ ಬರುತ್ತಿದ್ದಾರೆ. ಇಂಥ ಸಮಯದಲ್ಲಿ ಜಾಗರೂಕತೆ ನಮಗೆ ಕರ್ತವ್ಯವಾಗುತ್ತದೆ. ಶ್ರದ್ಧೆಗೆ ಪಾತ್ರಾಪಾತ್ರತಾರತಮ್ಯವುಂಟು. ಸತ್ಪಾತ್ರಶ್ರದ್ಧೆಯಿಂದ ಜೀವೋದ್ಧಾರ; ದುಷ್ಪಾತ್ರಶ್ರದ್ಧೆಯಿಂದ ಜೀವಾವನತಿ.

> ಶ್ರದ್ಧಾಮಯೋಽಯಂ ಪುರುಷಃ । ಯೋ ಯಚ್ಛ್ರದ್ಧಃ ಸ ಏವ ಸಃ ॥

ಮನುಷ್ಯ ಎಂದರೆ ಅವನಿಗಿರುವ ನಂಬಿಕೆ. ಯಾವೊಬ್ಬನು ಯಾವುದಕ್ಕೆ ಹೆಚ್ಚು ಬೆಲೆಕೊಟ್ಟು ಅದೇ ತನಗೆ ದೊಡ್ಡದೆಂದು ನಂಬಿಕೊಂಡಿರುತ್ತಾನೋ ಅದರಂತೆಯೇ ಅವನ ಪಾಡಾಗುತ್ತದೆ.

ಯಾವುದರಲ್ಲಿ ಅವನಿಗೆ ನಂಬಿಕೆಯೋ ಅದೇ ಅವನ ಗತಿ. ಅವನವನ ಶ್ರದ್ಧೆಯಂತೆ ಅವನವನು. ಆದದ್ದರಿಂದ ಶ್ರದ್ಧೆಯಲ್ಲಿಯೂ ಬುದ್ಧಿಜಾಗರೂಕತೆ ಇರಬೇಕು.

ಶ್ರದ್ಧೆ ಮೂರುವಿಧ–ಸಾತ್ತ್ವಿಕ, ರಾಜಸ, ತಾಮಸ. ಹೀಗೆ: ದೇವತೆಗಳನ್ನು ಪೂಜಿಸುವವರು ಸಾತ್ತ್ವಿಕರು; ಯಕ್ಷರಕ್ಷೋಗಣಗಳನ್ನು ಪೂಜಿಸುವವರು ರಾಜಸರು; ಭೂತಪ್ರೇತಗಳನ್ನು ಪೂಜಿಸುವವರು ತಾಮಸರು. ಉಗ್ರವ್ರತಗಳನ್ನೂ ಘೋರಬಲಿಗಳನ್ನೂ ಹಠದ ತಪಸ್ಸುಗಳನ್ನೂ ಮಾಡುವವರು ತಾಮಸರು, ಸಾತ್ತ್ವಿಕರಲ್ಲ. ಅವೆಲ್ಲ ರಾಕ್ಷಸಕೃತ್ಯಗಳು, ಕಾಮಪ್ರೇರಿತಗಳು, ಅಹಂಕಾರಪೂರಿತಗಳು, ಪಾಪಪರಿಣಾಮಗಳು.

ಪೂಜೋಪಾಸನೆಗಳಲ್ಲಿ ಹೇಗೋ ಆಹಾರವಿಹಾರಗಳಲ್ಲಿಯೂ ಹಾಗೆಯೇ ಗುಣಭೇದವುಂಟು. ಮನಸ್ಸು ದೇಹಗಳ ಸುಸ್ಥಿತಿ ಆಹಾರಾನುಗುಣವಾಗಿರುತ್ತದೆ:

> ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ ॥

ರಸವಂತವಾಗಿ, ಜಿಡ್ಡುಳ್ಳದ್ದಾಗಿ, ರಕ್ತಮಾಂಸಗಳಲ್ಲಿ ಬೆರೆತುಕೊಳ್ಳತಕ್ಕದ್ದಾಗಿ, ಹೃದಯಕ್ಕೆ ಬಲಕೊಡಬಲ್ಲದ್ದಾಗಿರುವ ಆಹಾರವು ಸಾತ್ತ್ವಿಕ. ಆಯುಸ್ಸು, ಚೈತನ್ಯ, ಬಲ, ಸುಖ, ಪ್ರೀತಿ–ಇವು ಬೇಕಾದರೆ ಭೋಜ್ಯವಸ್ತು ಸಾತ್ತ್ವಿಕವಾಗಿರಬೇಕು.

ಈ ಭೋಜನಾದರ್ಶವನ್ನು ಗೀತಾಭ್ಯಾಸಿಗಳು ಮರೆಯತಕ್ಕದ್ದಲ್ಲ. ತಾಮಸಾಹಾರವನ್ನು ಸೇವಿಸುತ್ತ ಸಾತ್ತ್ವಿಕಶ್ರೇಷ್ಠತೆಯನ್ನು ಕೊಂಡಾಡುವುದು ನಿರರ್ಥಕ. ಮನುಷ್ಯನ ಗುಣಬಲ ಪ್ರವೃತ್ತಿಗಳೆಲ್ಲ ಅವನು ತಿನ್ನುವ ಆಹಾರಕ್ಕನುಸಾರವಾಗಿರುತ್ತವೆ. ಎಂಥ ಅನಾರೋಗ್ಯಕ್ಕೂ ಮೊದಲ ಔಷಧ ತಕ್ಕ ಆಹಾರ:

> ಅನ್ನಗ್ಂ ಹಿ ಭೂತಾನಾಂ ಜ್ಯೇಷ್ಠಮ್ ।
> ತಸ್ಮಾತ್ಸರ್ವೌಷಧಮುಚ್ಯತೇ ॥

ನಮ್ಮ ಜನದಲ್ಲಿ ಸಾಂಪ್ರದಾಯಿಕವಾಗಿ ಬಂದಿರುವ ಆಹಾರ ಕ್ರಮ ಸರ್ವೋತ್ತಮವಾದದ್ದೆಂದು ಈಗಿನ ಡಾಕ್ಟರುಗಳೂ ಹೇಳುತ್ತಾರೆ. ಮನೆಯಲ್ಲಿ ಭತ್ತ ಕುಟ್ಟಿಸಿ ಆದ ಅಕ್ಕಿ, ಬೀಸುವ ಕಲ್ಲಿನಲ್ಲಿ ಬೀಸಿ ಆದ ಹಿಟ್ಟು, ತುಪ್ಪವೆಂಬ ಒಂದಾನೊಂದು (ಈಗ ಅಪರೂಪವಾಗಿರುವ) ಪದಾರ್ಥ,

ಮರದ ಗಾಣದಲ್ಲಿ ಎಳ್ಳಿನಿಂದ ತೆಗೆದ ಒಳ್ಳೆಣ್ಣೆ–ಇವು ಸಾತ್ವಿಕಗಳು. ಬೇಳೆಯ ಹುಳಿ, ಸಾರು, ಒಬ್ಬಟ್ಟು, ಕೋಸುಂಬರಿಗಳು–ಇವು ಆರೋಗ್ಯಕರವಂತೆ. ಈ ಪೂರ್ವಕಾಲದ ಪರಿತವಣೆಗಳನ್ನು ಡಾಕ್ಟರುಗಳು "ಬ್ಯಾಲನ್ಸ್‌ಡ್ ಡಯೆಟ್" (Balanced diet). "ಸರ್ವಾಂಶಸಮಪ್ರಮಾಣದ ಆಹಾರ" ಎನ್ನುತ್ತಾರೆ. ನಮ್ಮ ನವನಾಗರಿಕತೆಯಲ್ಲಿ ಇವು ಹೋಗಿ ಬಿಸ್ಕತ್ ಪೆಪ್ಪರ್ಮೆಂಟಗಳೂ ಇತರ ಅವಾಚ್ಯ ವಸ್ತುಗಳೂ ನಮ್ಮ ತರತೀಪುಗಳಾಗಿವೆ. ಹಿಂದಿನ ಕಾಲದ ಅಡಿಗೆಗೆ ಮನಸ್ಸಿನಲ್ಲಿ ತಾಳ್ಮೆಯೂ ರಟ್ಟೆಯಲ್ಲಿ ಶಕ್ತಿಯೂ ಹೃದಯದಲ್ಲಿ ಅಡಿಗೆಯು ಮಹತ್ತ್ವದ ಕೆಲಸವೆಂಬ ಗೌರವ ಬುದ್ಧಿಯೂ ಇರಬೇಕು. ಮೇಲ್ತಳುಕಿನ ಮೆರುಗು ನಾಜೂಕಿನ ಈ ಕಾಲದಲ್ಲಿ ಆ ಹಳೆಯ ಮುದುಕಿಯ ಗುಣಗಳನ್ನು ಹೇಗೆ ನಿರೀಕ್ಷಿಸಲಾದೀತು?

ಅಶಾಂತಿ, ಉದ್ರೇಕ, ಆಯಾಸ–ಇವು ಬೇಕಾದರೆ ಹುಳಿ, ಉಪ್ಪು, ಖಾರ, ಬಿಸಿ, ಗಟ್ಟಿ ಇಂಥಾದ್ದನ್ನು ಸೇವಿಸಬಹುದು. ಇದು ರಾಜಸ.

ತಂಗಳು, ಹಳಸಲು, ಒಣಕಲು, ಎಂಜಲು–ಇವು ತಾಮಸರ ಆಹಾರ.

ಯಜ್ಞ ದಾನಕ್ರಿಯೆಗಳಲ್ಲಿಯೂ ಮೂರು ವಿಧ:

> ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।
> ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ತ್ವಿಕಃ ॥

ಪ್ರತಿಫಲದ ನಿರೀಕ್ಷೆಯಿಲ್ಲದೆ, ಶಾಸ್ತ್ರೋಕ್ತವಿಧಾನದಲ್ಲಿ ಕೇವಲಕರ್ತವ್ಯವೆಂಬ ಭಾವನೆಯಿಟ್ಟುಕೊಂಡು ಮನಸ್ಸಮಾಧಾನದಿಂದ ಮಾಡಿದ ಯಜ್ಞವೇ ಸಾತ್ತ್ವಿಕ ಶ್ರದ್ಧೆಯದು.

ಫಲಕ್ಕಾಗಿಯೂ ಜಂಭಕ್ಕಾಗಿಯೂ ಲೋಕದ ಹೊಗಳಿಕೆಗಾಗಿಯೂ ಮಾಡಿದ್ದು ರಾಜಸ.

ಮಂತ್ರವಿಲ್ಲದೆ, ದಕ್ಷಿಣೆಯಿಲ್ಲದೆ, ಶುಚಿಯಿಲ್ಲದೆ, ನಿಯಮವಿಲ್ಲದೆ, ಮನಸ್ಸು ಹೋದಂತೆ ಮಾಡಿದ್ದು ತಾಮಸ.

ತಪಸ್ಸೂ ಹಾಗೆಯೇ ತ್ರಿವಿಧ.

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥

ಮನೋವಾಕ್ಕಾಯಕರ್ಮಗಳಲ್ಲಿ ತನ್ನನ್ನು ತಾನು ಹದ್ದಿನಲ್ಲಿರಿಸಿಕೊಂಡು ಉದ್ವೇಗಕ್ಕವಕಾಶ ಕೊಡದೆ ಪ್ರಸನ್ನಚಿತ್ತನಾಗಿರುವುದು ಸಾತ್ತ್ವಿಕ ತಪಸ್ಸು.

ಸತ್ಕಾರಮಾನಪೂಜಾರ್ಥವಾದದ್ದು ರಾಜಸ.

ಆಗ್ರಹದಿಂದಲೂ ಇನ್ನೊಬ್ಬರಿಗೆ ಹಾನಿತರಬೇಕೆಂದೂ ಮಾಡಿದ ತಪಸ್ಸು ತಾಮಸ. ರಾಕ್ಷಸರದು ಇಂಥಾದ್ದು.

ದಾನವೂ ತ್ರಿವಿಧ :

ದಾತವ್ಯಮಿತಿ ಯದ್ದಾನಂ ದೀಯೇತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥

ಪ್ರತ್ಯುಪಕಾರ ಮಾಡಲಶಕ್ತನಾದ ಮನುಷ್ಯನಿಗೆ, ಅವನ ಸಮಯಸಂದರ್ಭಗಳನ್ನು ವಿಚಾರಮಾಡಿ, ಪಾತ್ರಾಪಾತ್ರಯೋಗ್ಯತೆಯನ್ನು ಅರಿತುಕೊಂಡು, ದಾನವು ತನಗೆ ಕರ್ತವ್ಯವೆಂಬ ಬುದ್ಧಿಯಿಂದ ಮಾಡಿದರೆ ಆ ದಾನವು ಸಾತ್ತ್ವಿಕ.

ಪ್ರತ್ಯುಪಕಾರನಿರೀಕ್ಷೆಯಿಂದಲೋ ಅಲಕ್ಷ್ಯದಿಂದಲೋ ಪಾತ್ರಾಪಾತ್ರ ವಿವೇಚನೆಯಿಲ್ಲದಯೋ ಮಾಡುವ ದಾನಗಳು ರಾಜಸ ತಾಮಸಗಳು.

ಹೀಗೆ ತ್ರಿವಿಧಶ್ರದ್ಧೆಗಳೂ ಹೇಗೆಹೇಗೆ ಪೂಜ್ಯವಸ್ತುಗಳ ವಿಷಯದಲ್ಲಿಯೂ ಪೂಜಾವಿಧಾನ ವಿಷಯದಲ್ಲಿಯೂ ಯಜ್ಞ ದಾನ ತಪಸ್ಸುಗಳ ವಿಷಯದಲ್ಲಿಯೂ ವ್ಯಕ್ತ ಪಡುತ್ತದೆ ಎಂಬುದನ್ನು ಸ್ವಾಮಿ ದೃಷ್ಟಾಂತಪೂರ್ವಕವಾಗಿ ತೋರಿಸಿ, ಈಗ ಆ ತ್ರಿಗುಣಗಳನ್ನೂ ಮೀರಿದ ಪರಮಾರ್ಥಜ್ಞಾನಿಯ ಉಪಾಸನಾಮಾರ್ಗವನ್ನು ದಿಗ್ದರ್ಶನ ಮಾಡಿಸುತ್ತಾನೆ.

ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಃ ತ್ರಿವಿಧಃ ಸ್ಮೃತಃ ।
ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ ॥

ಪರಬ್ರಹ್ಮವನ್ನು ಮೂರು ಗುರುತುಮಾತುಗಳಿಂದ ತಿಳಿಯಪಡಿಸುವುದು ಪುರಾತನ ಪದ್ಧತಿ

1. ಓಮ್
2. ತತ್
3. ಸತ್

–ಈ ಮೂರು ಆ ಗುರುತುಮಾತುಗಳು. ಆ ಪರಬ್ರಹ್ಮವಿಧಿಯಿಂದ ಸೃಷ್ಟಿಕಾಲದಲ್ಲಿ ನಿಯುಕ್ತರಾದವರು ಬ್ರಹ್ಮವಿದ್ಯೋಪದೇಶಕರ್ತರು (ಬ್ರಾಹ್ಮಣರು); ಹಾಗೆಯೇ ಬ್ರಹ್ಮವಿಷಯಕ ವಾಙ್ಮಯವಾದ ವೇದಶಾಸ್ತ್ರಗಳು ಮತ್ತು ಬ್ರಹ್ಮಪೂಜಾರೂಪಗಳಾದ ಯಜ್ಞಕ್ರಿಯೆಗಳು ಸಹ.

ಎಂದರೆ ಲೋಕದಲ್ಲಿ ಯಾವಯಾವ ವಾಕ್ಕು, ಯಾವಯಾವ ಗ್ರಂಥ, ಯಾವಯಾವ ಪ್ರಯತ್ನ ಭಗವತ್ಪ್ರಯುಕ್ತವಾದದ್ದೋ–ಯಾವಯಾವುದು ಪೂಜಾರ್ಹವೋ–ಯಾವಯಾವುದು ಪವಿತ್ರವೋ ಅದೆಲ್ಲ “ಓಂ ತತ್ ಸತ್” ಎಂಬುದರಲ್ಲಿ ಸೇರಿದ್ದು: ಭಗತ್ಪ್ರೇರಣೆಯಿಂದ ಆದದ್ದು ಮತ್ತು ಭಗವದರ್ಪಿತವಾದದ್ದು–ಎಂದು ತಾತ್ಪರ್ಯ.

ಈಗ ಕೊಂಚವಾಗಿಯಾದರೂ ಅರ್ಥ ವಿಚಾರ ಮಾಡೋಣ.

(೧) ಓಮ್

> (ತಸ್ಮಾತ್) ಓಮ್ ಇತ್ಯುದಾಹೃತ್ಯ ಯಜ್ಞದಾನತಪಃಕ್ರಿಯಾಃ ॥

“ಬ್ರಹ್ಮೋಪಾಸಕರು ‘ಓಂ’ ಕಾರೋಚ್ಚಾರಣೆಯಿಂದ ಯಜ್ಞದಾನತಪಸ್ಸುಗಳನ್ನು ನಡಸುತ್ತಾರೆ”.

ಓಂಕಾರದ ಅರ್ಥ ವಿವರಣೆಯನ್ನು ಎಂಟನೆಯ ಅಧ್ಯಾಯದಲ್ಲಿ– “ಓಮಿತ್ಯೇಕಾ ಕ್ಷರಂ ಬ್ರಹ್ಮ” ಎಂಬಲ್ಲಿ (ಪು. 279) –ನೋಡಿದ್ದಾಗಿದೆ. ಓಂ ಎಂಬಕ್ಷರದಲ್ಲಿ ಅ+ಉ+ಮ್ ಎಂಬ ಮೂರಂಶಗಳಿವೆ. ಅವುಗಳನ್ನು ಒಂದೊಂದಾಗಿ ಗ್ರಹಿಸುವಾಗ ಬ್ರಹ್ಮ–ವಿಷ್ಣು–ಮಹೇಶ್ವರ ಎಂದೂ, ಸತ್ತ್ವ–ರಜಸ್ಸು–ತಮಸ್ಸು ಎಂದೂ, ಜಾಗ್ರತ್–ಸ್ವಪ್ನ–ಸುಷುಪ್ತಿ ಎಂದೂ, ಭೂಮಿ–ಅಂತರಿಕ್ಷ–ಆಕಾಶ ಎಂದೂ, ಸ್ವರ್ಗ ಮರ್ತ್ಯ–ಪಾತಾಳ ಎಂದೂ, ತೇಜಸ್ಸು–ಅಪ್ಪು–ಅನ್ನ ಎಂದೂ, ಪುಮಾನ್–ಸ್ತ್ರೀ–ನಪುಂಸಕ ಎಂದೂ, ದಿವಸ–ರಾತ್ರಿ–ಸಂಜೆ ಎಂದೂ ಹೀಗೆ ವಿಶ್ವಪ್ರಪಂಚದ ಎಲ್ಲ ಭಾಗ ಎಲ್ಲ ಗುಣ ಎಲ್ಲ ಲಕ್ಷಣಗಳನ್ನೂ ಮೂರುಮೂರರ ಗುಂಪಾಗಿ

ಮನಸ್ಸಿಗೆ ತಂದುಕೊಳ್ಳಬಹುದು. ಆ ಮೂರಂಶಗಳೂ ಒಟ್ಟುಗೂಡಿದ ‘ಓಮ್’ ಸಮಗ್ರರೂಪದಿಂದ ವಿಶ್ವಪ್ರಪಂಚದ ಹೊರಗೆ ಅದನ್ನಾವರಿಸಿಕೊಂಡಿರುವ ವಿಶ್ವಾತೀತಭಾವವನ್ನು ಮನಸ್ಸಿಗೆ ತಂದುಕೊಳ್ಳಬಹುದು. ಹೀಗೆ ಓಂಕಾರವು ವಿಶ್ವವಿಶ್ವಾತೀತಗಳ–ವ್ಯಕ್ತಶಕ್ತಿ ಅವ್ಯಕ್ತ ಶಕ್ತಿಗಳ–ದೃಶ್ಯಸತ್ಯ ಅದೃಶ್ಯಸತ್ಯಗಳ–ಸಮಗ್ರ ಸಂಪೂರ್ಣ ಪ್ರತೀಕವಾಗುತ್ತದೆ.

(೨) ತತ್

> ತತ್ + ಇತಿ (ಅನಭಿಸಂಧಾಯ ಫಲಂ) ಯಜ್ಞ ತಪಃಕ್ರಿಯಾಃ ।
> ದಾನಕ್ರಿಯಾಶ್ಚ ವಿವಿಧಾಃ ಕ್ರಿಯನ್ತೇ ಮೋಕ್ಷಕಾಂಕ್ಷಿಭಿಃ ॥

"ಮೋಕ್ಷಾರ್ಥಿಗಳು ಯಜ್ಞದಾನತಪಸ್ಸುಗಳನ್ನು ಬೇರೆ ಯಾವ ಫಲವನ್ನೂ ಬೇಡದೆ 'ತತ್' ಪದಾನುಸಂಧಾನದಿಂದ ಮಾಡುತ್ತಾರೆ".

"ತತ್" ಎಂದರೆ ಕನ್ನಡದ "ಅದು" ಅಥವಾ "ಆ". ಯಾವ ಪದಾರ್ಥ ನಮಗೆಲ್ಲ ಚೆನ್ನಾಗಿ ತಿಳಿದದ್ದೋ ಅದನ್ನು ಕುರಿತು ಪ್ರಸ್ತಾವಿಸುವಾಗ "ಅದು", "ಆ" ಎನ್ನುತ್ತೇವೆ. (ಉದಾ: ಆ ಹೊತ್ತು, ಆ ಮನುಷ್ಯ–ಹೀಗೆ.) ಬ್ರಹ್ಮವಸ್ತು ಪ್ರಸಿದ್ಧವಾದದ್ದು; ಪ್ರತ್ಯಕ್ಷವಾಗಿಲ್ಲದ್ದು. ಈ ಎರಡು ಕಾರಣಗಳಿಂದಲೂ "ತತ್" ಪದವು ಅದಕ್ಕೆ ಯುಕ್ತವಾಗಿದೆ. ಇನ್ನೂ ಒಂದು ಸ್ವಾರಸ್ಯವುಂಟು. ಯಾವ ವಸ್ತುವಿಗೆ ಗೊತ್ತಾದ ಹೆಸರಿಲ್ಲವೋ, ಯಾವುದರ ಸ್ವರೂಪವನ್ನು ಯಥಾವತ್ತಾಗಿ ತಿಳಿಸಬಲ್ಲ ಮಾತು ಮನುಷ್ಯ ಭಾಷೆಯಲ್ಲಿಲ್ಲವೋ, ಅಂಥಾ ವಿಶೇಷವಸ್ತುವನ್ನು "ತತ್" – "ಅದು", "ಅದು" –ಎಂದೇ ವ್ಯವಹರಿಸಬೇಕಾಗಿದೆ. ಪೂರ್ವಕಾಲದ ಮರ್ಯಾದಾವಂತರಲ್ಲಿ ಹೆಂಡತಿಯಾದವಳು ಗಂಡನನ್ನು ಹೆಸರು ಹಿಡಿದು ಹೇಳದೆ "ಅವರು" ಎನ್ನುವುದೂ ಗಂಡನಾದವನೂ ಹಾಗೆಯೇ ಹೆಂಡತಿಯನ್ನು ಹೆಸರು ಹೇಳದೆ "ಆಕೆ", "ಅವಳು" ಎನ್ನುವುದೂ ವಾಡಿಕೆಯಾಗಿತ್ತು. ಬ್ರಹ್ಮ ವಸ್ತುವನ್ನು ತಿಳಿದವರು ಆ ಮರ್ಯಾದೆಯಲ್ಲಿ "ತತ್" (ಅದು) ಎನ್ನುವುದು ಸಂಪ್ರದಾಯ.

ತತ್ತ್ವ ಎಂದರೆ "ಅದು ಅದಾಗಿರುವುದು" (ತತ್+ತ್ವ). ನಮ್ಮ ದೃಷ್ಟಿಯಲ್ಲಿರುವ ಪದಾರ್ಥದಿಂದ ಅದರ ವೇಷ ಬಣ್ಣಗಳನ್ನು ಕಳೆದು, ಅದರ ಗುಣಚೇಷ್ಟೆಗಳನ್ನು ಮರೆತು, ಅದು ತಾನೇತಾನಾಗಿ–ತಾನುತಾನೇ ಆಗಿ–ತನ್ನಿಂತ ಬೇರೆಯಾದ ಯಾವುದರ ಸಂಬಂಧವೂ ಇಲ್ಲದೆ, –ಹೇಗಿದೆಯೋ ಹಾಗೆ, –ನಿರುಪಾಧಿಕವಾಗಿ, ಸ್ವಸ್ವಭಾವದಲ್ಲಿರುವ ಸ್ಥಿತಿಯೇ ತತ್+ತ್ವ (ತನ್ನತನ). ಅಂಥಾದ್ದು ಬ್ರಹ್ಮವಸ್ತು.

(೨) ಸತ್

ಸದ್ಭಾವೇ ಸಾಧುಭಾವೇ ಚ ಸತ್ + ಇತ್ಯೇತತ್ಪ್ರಯುಜ್ಯತೇ ।
ಪ್ರಶಸ್ತೇ ಕರ್ಮಣಿ ತಥಾ ಸತ್ + ಶಬ್ದಃ ಪಾರ್ಥ ಯುಜ್ಯತೇ ॥
ಯಜ್ಞೇ ತಪಸಿ ದಾನೇ ಚ ಸ್ಥಿತಿಃ ಸತ್ + ಇತಿ ಚ ಉಚ್ಯತೇ ।
ಕರ್ಮ ಚೈವ ತದರ್ಥೀಯಂ ಸತ್ + ಇತ್ಯೇವ ಅಭಿಧೀಯತೇ ॥

ಸತ್ ಶಬ್ಧಕ್ಕೆ ಎರಡರ್ಥಗಳು:

1. ಶಾಶ್ವತವಾದ ಅಸ್ತಿತ್ವ ಯಾವುದಕ್ಕುಂಟೋ ಅದು ಸತ್. ಸತ್ ಎಂದರೆ ಇರುವುದು–ಎಂದೆಂದಿಗೂ ಯಾವಾಗಲೂ ಒಂದೇ ರೂಪದಲ್ಲಿರುವುದು. ಅದೇ ಸತ್ಯ. ಪರಬ್ರಹ್ಮವೇ ಪರಮಸತ್ಯ. ಅದು “ಸತ್ಯಸ್ಯ ಸತ್ಯಂ”.
2. ಸಾಧುವಾದದ್ದು ಯಾವುದೋ–ಒಳ್ಳೆಯದು ಯಾವುದೋ–ಅದು “ಸತ್” (ಉದಾ: ಸಜ್ಜನ, ಸತ್ಕರ್ಮ ಇತ್ಯಾದಿ). ಈ ಅರ್ಥ ಮೊದಲನೆಯ ಅರ್ಥದಿಂದ ಬಂದದ್ದು. ಸತ್ಯವಾದದ್ದೇ ಒಳ್ಳೆಯದು; ಅಸತ್ಯ ಒಳ್ಳೆಯದಾಗದು. ಯಾವುದು ಶಾಶ್ವತವೋ ಅದೇ ಒಳ್ಳೆಯದು; ಕ್ಷಣಿಕವಾದದ್ದು ಅಷ್ಟು ಒಳ್ಳೆಯದಲ್ಲ. ಪರಮಾತ್ಮನು ಸತ್ಯ, ಶಾಶ್ವತ. ಆದದ್ದರಿಂದ ಯಾವ ಕಾರ್ಯ, ಯಾವ ವಸ್ತು, ಯಾವ ಸಂಗತಿ ಪರಮಾತ್ಮನಿಗೆ ಸಂಬಂಧಪಟ್ಟದ್ದೋ ಅದು ಸಾಧು; ಅದು ಶ್ರೇಷ್ಠ. ಯಾವುದು ನಮ್ಮನ್ನು ಸದ್ವಸ್ತುವಿನ ಕಡೆಗೆ ನಡೆಯಿಸುತ್ತದೆಯೋ, –ಯಾವುದು ನಮಗೆ ಸದ್ವಸ್ತುವಿನ ಪ್ರಸಾದವನ್ನು ದೊರಕಿಸುತ್ತದೆಯೋ, –ಅದು ಸತ್. ಅದು ನಿಜವಾದ ಒಳ್ಳೆಯದು. ಎಲ್ಲ ಶುಭಗಳೂ, ಎಲ್ಲ ಒಳ್ಳೆಯದೂ ನಮಗೆ ಬರುವುದು ಸದ್ವಸ್ತುವಿನಿಂದ. ಬ್ರಹ್ಮವು ಸರ್ವಮಂಗಲನಿಧಿ, ಎಲ್ಲ ಒಳ್ಳೆಯದಕ್ಕೂ ಅದು ಮೂಲ. ಆದದ್ದರಿಂದ ಬ್ರಹ್ಮದ ಪೂಜೆ ಸತ್+ಕರ್ಮ.

“ಶಾಶ್ವತಾಸ್ತಿತ್ವವನ್ನು ಸೂಚಿಸುವುದಕ್ಕೂ ಸಾಧು (ಯೋಗ್ಯ, ಉಚಿತ) ಎಂಬರ್ಥವನ್ನು ಸೂಚಿಸುವುದಕ್ಕೂ ‘ಸತ್’ ಪದವು ಪ್ರಯುಕ್ತವಾಗುತ್ತದೆ. ಹಾಗೆಯೇ ಪ್ರಶಸ್ತ ಕಾರ್ಯಕ್ಕೂ ‘ಸತ್’ ಪದವು ಪ್ರಯುಕ್ತವಾಗುತ್ತದೆ. ಆದದ್ದರಿಂದ ಯಜ್ಞ ದಾನ ತಪಸ್ಸುಗಳಿಗೂ ಭಗವದರ್ಪಿತವಾದ ಎಲ್ಲ ಕರ್ಮಗಳಿಗೂ ‘ಸತ್’ ಎಂಬ ಪದ ಸಲ್ಲುತ್ತದೆ”.

ಸಂಸ್ಕೃತದ “ಸತ್” ಎಂಬ ಪದಕ್ಕೂ ಕನ್ನಡದ “ಉಳ್” ಎಂಬ ಪದಕ್ಕೂ ಇರುವ ಹೋಲಿಕೆಯನ್ನು ನೋಡತಕ್ಕದ್ದು. ಕನ್ನಡದಲ್ಲಿ “ಉಳ್” ಎಂದರೆ “ಇರುವುದು” ಎಂದರ್ಥ. (ಉದಾ: “ಹಣವುಳ್ಳ”, “ಗುಣವುಳ್ಳ” ಇತ್ಯಾದಿ.) ಇದರಿಂದಲೇ “ಉಂಟು” ಎಂಬ ಕ್ರಿಯಾಪದ. “ಉಳ್” ಎಂಬುದರಿಂದಲೇ “ಒಳ್” “ಒಳ್ಳೆಯದು”. ಯಾವುದು ಎಂದೆಂದಿಗೂ ಉಂಟಾಗಿರತಕ್ಕದ್ದೋ, ಯಾವುದು ಬಹುಕಾಲ ಬಾಳತಕ್ಕದ್ದೋ ಅದಕ್ಕೆ ಸಂಬಂಧಪಟ್ಟದ್ದು–ಅದರ ಅಂಶವನ್ನು ನಮಗೆ ದೊರಕಿಸಬಲ್ಲದ್ದು–ಅದರ ಬಳಿಗೆ ನಮ್ಮನ್ನು ಕರೆದುಕೊಂಡುಹೋಗತಕ್ಕದ್ದು “ಒಳ್”, “ಒಳ್ಳೆಯದು”.

ಹೀಗೆ ‘ಓಂತತ್ಸತ್’ ಪದವು ಎಲ್ಲ ದೃಷ್ಟಿಗಳಿಂದಲೂ ಶ್ರದ್ಧಾರ್ಹವಾಗಿದೆ. ಅದು ಸರ್ವಪ್ರಪಂಚವಾಚಕವಾದದ್ದು; ಸರ್ವದೇವತಾವಾಚಕವಾದದ್ದು; ಸರ್ವಾತ್ಮವಾಚಕವಾದದ್ದು; ಸರ್ವವಾಚಕವಾದದ್ದು. ಆದದ್ದರಿಂದ ಯಾವ ದೇವತೆಯನ್ನುದ್ದೇಶಿಸಿದರೂ ಯಾವ ಧರ್ಮವನ್ನುದ್ದೇಶಿಸಿದರೂ ಆ ಪದತ್ರಯವನ್ನು ಅದಕ್ಕೆ ಅನ್ವಯಿಸಲಾಗುತ್ತದೆ. ಅದರಲ್ಲಿ ಶ್ರದ್ಧೆಯನ್ನಿರಿಸುವುದು ಸತ್ಯನಿಷ್ಠನಿಗೆ ಇಷ್ಟಕರ್ತವ್ಯವೆಂದು ಶಬ್ದಾರ್ಥವೇ ಸಾರುತ್ತದೆ. ಅಂಥಾ ಮಹಾಮಂತ್ರದಲ್ಲಿರಿಸಿದ ಶ್ರದ್ಧೆಯು ಜೀವತಾರಕವಾಗುತ್ತದೆ.

ಯಾವುದಾದರೊಂದರಲ್ಲಿ ಶ್ರದ್ಧೆಯಿಟ್ಟು ನಡೆದರೆ ಮುಂದಿನ ಸದ್ಗತಿ ಸುಲಭವಾಗುತ್ತದೆ. ಶ್ರದ್ಧೆಯಿಲ್ಲದೆ ಏನು ಮಾಡಿದರೂ ಅದು ಅಸತ್ತು. ಅದರಿಂದ ಇಹಲೋಕ ಸಾಧನೆಯೂ ಇಲ್ಲ, ಪರಲೋಕ ಸಾಧನೆಯೂ ಇಲ್ಲ.

(ಸಾಂಗತ್ಯ)

ಸತ್ತ್ವರಜಸ್ತಮವ್ಯತ್ಯಾಸ ಜೀವಕೆ
ಸ್ವಸ್ತಿವಿಭಂಗವೆಂದರಿತು ।
ನಿತ್ಯಾಭ್ಯಾಸದೆ ಮಿಶ್ರಸತ್ತ್ವಾಂಶದಿಂ ಶುದ್ಧ–
ಸತ್ತ್ವಕೇರಲು ಅದು ಮುಕ್ತಿ ॥

ತ್ರಿಗುಣವ ಮೀರ್ದನು ಜಗವನೆ ಮೀರ್ವನು
ಪ್ರಕೃತಿಗೆ ಸೋಲದನವನು ।

ಪಗೆಯಿಲ್ಲ ದಿಗಿಲಿಲ್ಲ ದುಗುಡವಿಲ್ಲಾತಂಗೆ
ಭಗವದ್ವಿಲಾಸವೆಲ್ಲೆಡೆಯುಂ ॥

ಶ್ರದ್ಧೆಯೆಂತಿರ್ಪುದೊ ಪುರುಷನಂತಿರ್ಪನು
ಉದ್ಧರಿಕುಂ ಶ್ರದ್ಧೆ ಶುದ್ಧಂ ।
ಶ್ರದ್ಧೆಯಿನವನೋಂತತ್ಸದ್ಧ್ಯಾನವಂಗೈದು
ಸದ್ಧರ್ಮಗಳನಾಚರಿಪ್ಪಂ ॥

ಓಂಪದಮಖಿಲವ್ಯಕ್ತಾವ್ಯಕ್ತ–ಸ್ಥಿರ–ಚರ
ವಿಶ್ವ–ವಿಶ್ವಾತೀತ ಬ್ರಹ್ಮಂ ।
ತತ್‌ಪದಂ ನುಡಿಗೊಳಪಡದ ವಸ್ತುವ ತೋರ್ಪ
ಗುರುತದು ಅದು ತಾನೆ ತತ್ತ್ವಂ ॥

ಸತ್‌ಪದಂ ಸತ್ಯಮನಂತಮವಿಕ್ರಿಯ–
ಮದ್ವಯಮಖಿಲಾಂತರಾತ್ಮಂ ।
ಈ ತ್ರಿಪದಾರ್ಥದ ಸ್ವಾನುಭೂತಿಯಿನ್ ಎಲ್ಲ
ಕರ್ತವ್ಯವೆಸಪುದೆ ಸತ್ತ್ವಂ ॥

ಸಾತ್ತ್ವಿಕಶ್ರದ್ಧೆಯಿನಹುದು ಜೀವೋದ್ಧೃತಿ
ರಾಜಸತಾಮಸಮಧಮಂ ।
ಶ್ರದ್ಧೆ ಬುದ್ಧಿಗೆ ಸ್ಫೂರ್ತಿ ಬುದ್ಧಿ ಶ್ರದ್ಧೆಗೆ ಶಕ್ತಿ
ಶ್ರದ್ಧಾಬುದ್ಧ್ಯೈಕ್ಯದೆ ಸಿದ್ಧಿ॥

ಸಂಗ್ರಹ

ಓಂತತ್ಸತ್ಪದಸಂಸ್ಮೃತಿ ।
ಸಂತತಮಿರ್ಪವನ ಯಜ್ಞದಾನತಪಂಗಳ್ ॥
ಸ್ವಾಂತಕೆ ಶುಚಿರುಚಿ ಬಲಗಳ ।
ಸಂತಸವಂ ಕುಡುವುವಿಂತು ಸಪ್ತದಶಾಂಶಂ ॥

ಮನುಷ್ಯಾಂತರಂಗೋಚ್ಚನೀಚಂಗಳಂ ಶಿ– ।
ಕ್ಷಣೋಪಾಯಮಂ ಯೋಗ್ಯತಾಮಾನಮಂ ತಾ– ॥
ನನಂತಸ್ವತಃಪ್ರಜ್ಞೆಯಿಂ ಕಂಡು ಜೀವ– ।
ಕ್ಕನುಗ್ರಾಹಿಯಪ್ಪಂ ಸದಾ ವಾಸುದೇವಂ ॥

ಅಥ ಮೋಕ್ಷಸಂನ್ಯಾಸಯೋಗೋ ನಾಮ ಅಷ್ಟಾದಶೋಽಧ್ಯಾಯಃ

ಅರ್ಜುನ ಉವಾಚ-

ಸಂನ್ಯಾಸಸ್ಯ ಮಹಾಬಾಹೋ ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ ಪೃಥಕ್ಕೇಶಿನಿಷೂದನ

॥ ೧ ॥

ಶ್ರೀಭಗವಾನುವಾಚ-

ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ

॥ ೨ ॥

ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ

॥ ೩ ॥

ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಃ ಸಂಪ್ರಕೀರ್ತಿತಃ

॥ ೪ ॥

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್

॥ ೫ ॥

ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್

॥ ೬ ॥

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ

॥ ೭ ॥

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್

॥ ೮ ॥

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ

॥ ೯ ॥

ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ

॥ ೧೦ ॥

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ

॥ ೧೧ ॥

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್

॥ ೧೨ ॥

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಮ್

॥ ೧೩ ॥

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್

॥ ೧೪ ॥

ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ

॥ ೧೫ ॥

ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ

॥ ೧೬ ॥

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾನ್ ಲೋಕಾನ್ನ ಹಂತಿ ನ ನಿಬಧ್ಯತೇ

॥ ೧೭ ॥

ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ

॥ ೧೮ ॥

ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ ।
ಪ್ರೋಚ್ಯತೇ ಗುಣಸಂಖ್ಯಾನೇ ಯಥಾವಚ್ಛೃಣು ತಾನ್ಯಪಿ

॥ ೧೯ ॥

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್

॥ ೨೦ ॥

ಪೃಥಕ್ತ್ವೇನ ತು ಯಜ್ಜ್ಞಾನಂ ನಾನಾಭಾವಾನ್ ಪೃಥಗ್ವಿಧಾನ್ ।
ವೇತ್ತಿ ಸರ್ವೇಷು ಭೂತೇಷು ತಜ್ಜ್ಞಾನಂ ವಿದ್ಧಿ ರಾಜಸಮ್

॥ ೨೧ ॥

ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೈತುಕಮ್ ।
ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಮ್

॥ ೨೨ ॥

ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ

॥ ೨೩ ॥

ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಮ್

॥ ೨೪ ॥

ಅನುಬಂಧಂ ಕ್ಷಯಂ ಹಿಂಸಾಮನಪೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ ತತ್ತಾಮಸಮುದಾಹೃತಮ್

॥ ೨೫ ॥

ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಂ ಕರ್ತಾ ಸಾತ್ತ್ವಿಕ ಉಚ್ಯತೇ

॥ ೨೬ ॥

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ

॥ ೨೭ ॥

ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋ ನೈಷ್ಕೃತಿಕೋಽಲಸಃ ।
ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ

॥ ೨೮ ॥

ಬುದ್ಧೇರ್ಭೇದಂ ಧೃತೇಶ್ಚೈವ ಗುಣತಸ್ತ್ರಿವಿಧಂ ಶೃಣು ।
ಪ್ರೋಚ್ಯಮಾನಮಶೇಷೇಣ ಪೃಥಕ್ತ್ವೇನ ಧನಂಜಯ

॥ ೨೯ ॥

ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಕಾರ್ಯೇ ಭಯಾಭಯೇ ।
ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ

॥ ೩೦ ॥

ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ ।
ಅಯಥಾವತ್ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ

॥ ೩೧ ॥

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾವೃತಾ ।
ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ

॥ ೩೨ ॥

ಧೃತ್ಯಾ ಯಯಾ ಧಾರಯತೇ ಮನಃಪ್ರಾಣೇಂದ್ರಿಯಕ್ರಿಯಾಃ ।
ಯೋಗೇನಾವ್ಯಭಿಚಾರಿಣ್ಯಾ ಧೃತಿಃ ಸಾ ಪಾರ್ಥ ಸಾತ್ತ್ವಿಕೀ

॥ ೩೩ ॥

ಯಯಾ ತು ಧರ್ಮಕಾಮಾರ್ಥಾನ್ ಧೃತ್ಯಾ ಧಾರಯತೇಽರ್ಜುನ ।
ಪ್ರಸಂಗೇನ ಫಲಾಕಾಂಕ್ಷೀ ಧೃತಿಃ ಸಾ ಪಾರ್ಥ ರಾಜಸೀ

॥ ೩೪ ॥

ಯಯಾ ಸ್ವಪ್ನಂ ಭಯಂ ಶೋಕಂ ವಿಷಾದಂ ಮದಮೇವ ಚ ।
ನ ವಿಮುಂಚತಿ ದುರ್ಮೇಧಾ ಧೃತಿಃ ಸಾ ಪಾರ್ಥ ತಾಮಸೀ

॥ ೩೫ ॥

ಸುಖಂ ತ್ವಿದಾನೀಂ ತ್ರಿವಿಧಂ ಶೃಣು ಮೇ ಭರತರ್ಷಭ ।
ಅಭ್ಯಾಸಾದ್ರಮತೇ ಯತ್ರ ದುಃಖಾಂತಂ ಚ ನಿಗಚ್ಛತಿ

॥ ೩೬ ॥

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್

॥ ೩೭ ॥

ವಿಷಯೇಂದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್

॥ ೩೮ ॥

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಽಽಲಸ್ಯಪ್ರಮಾದೋತ್ಥಂ ತತ್ತಾಮಸಮುದಾಹೃತಮ್

॥ ೩೯ ॥

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ

॥ ೪೦ ॥

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ

॥ ೪೧ ॥

ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್

॥ ೪೨ ॥

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್

॥ ೪೩ ॥

ಕೃಷಿಗೋರಕ್ಷವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್

॥ ೪೪ ॥

ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।
ಸ್ವಕರ್ಮನಿರತಃ ಸಿದ್ಧಿಂ ಯಥಾ ವಿಂದತಿ ತಚ್ಛೃಣು

॥ ೪೫ ॥

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ

॥ ೪೬ ॥

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್

॥ ೪೭ ॥

ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ

॥ ೪೮ ॥

ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ

॥ ೪೯ ॥

ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಽಽಪ್ನೋತಿ ನಿಬೋಧ ಮೇ ।
ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ

॥ ೫೦ ॥

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾಽಽತ್ಮಾನಂ ನಿಯಮ್ಯ ಚ ।
ಶಬ್ದಾದೀನ್ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ

॥ ೫೧ ॥

ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ

॥ ೫೨ ॥

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ

॥ ೫೩ ॥

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್

॥ ೫೪ ॥

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್

॥ ೫೫ ॥

ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್

॥ ೫೬ ॥

ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ ।
ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ

॥ ೫೭ ॥

ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ।
ಅಥ ಚೇತ್ತ್ವಮಹಂಕಾರಾನ್ನ ಶ್ರೋಷ್ಯಸಿ ವಿನಂಕ್ಷ್ಯಸಿ

॥ ೫೮ ॥

ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।
ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ

॥ ೫೯ ॥

ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ ।
ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಽಪಿ ತತ್

॥ ೬೦ ॥

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ

॥ ೬೧ ॥

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್

॥ ೬೨ ॥

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು

॥ ೬೩ ॥

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್

॥ ೬೪ ॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ

॥ ೬೫ ॥

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ

॥ ೬೬ ॥

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ

॥ ೬೭ ॥

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ

॥ ೬೮ ॥

ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ

॥ ೬೯ ॥

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।
ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ

॥ ೭೦ ॥

ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ ।
ಸೋಽಪಿ ಮುಕ್ತಃ ಶುಭಾನ್ ಲೋಕಾನ್ ಪ್ರಾಪ್ನುಯಾತ್ಪುಣ್ಯಕರ್ಮಣಾಮ್

॥ ೭೧ ॥

ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ ।
ಕಚ್ಚಿದಜ್ಞಾನಸಂಮೋಹಃ ಪ್ರಣಷ್ಟಸ್ತೇ ಧನಂಜಯ

॥ ೭೨ ॥

ಅರ್ಜುನ ಉವಾಚ-

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಽಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ

॥ ೭೩ ॥

ಸಂಜಯ ಉವಾಚ-

ಇತ್ಯಹಂ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ ।
ಸಂವಾದಮಿಮಮಶ್ರೌಷಮದ್ಭುತಂ ರೋಮಹರ್ಷಣಮ್

॥ ೭೪ ॥

ವ್ಯಾಸಪ್ರಸಾದಾಚ್ಛ್ರುತವಾನೇತದ್ಗುಹ್ಯಮಹಂ ಪರಮ್ ।
ಯೋಗಂ ಯೋಗೇಶ್ವರಾತ್ ಕೃಷ್ಣಾತ್ಸಾಕ್ಷಾತ್ಕಥಯತಃ ಸ್ವಯಮ್

॥ ೭೫ ॥

ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್ ।
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ

॥ ೭೬ ॥

ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ ।
ವಿಸ್ಮಯೋ ಮೇ ಮಹಾನ್ ರಾಜನ್ ಹೃಷ್ಯಾಮಿ ಚ ಪುನಃಪುನಃ

॥ ೭೭ ॥

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ

॥ ೭೮ ॥

ಇತಿ ಶ್ರೀ ಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಮೋಕ್ಷಸಂನ್ಯಾಸಯೋಗೋ ನಾಮ ಅಷ್ಟಾದಶೋಽಧ್ಯಾಯಃ

ಚಿದಾನಂದಾಕಾರಂ ಜಲದರುಚಿ ಸಾರಂ ಶ್ರುತಿಗಿರಾಮ್ ।
ವ್ರಜಸ್ತ್ರೀಣಾಂ ಹಾರಂ ಭವಜಲಧಿಪಾರಂ ಕೃತಧಿಯಾಮ್ ॥
ವಿಹಂತುಂ ಭೂಭಾರಂ ವಿದಧದವತಾರಂ ಮುಹುರಹೋ ।
ಮಹೋ ವಾರಂವಾರಂ ಭಜತ ಕುಶಲಾರಂಭಕೃತಿನಃ ॥

–ಶ್ರೀ ಮಧುಸೂದನಸರಸ್ವತೀ

ಸೂಚನೆ

ಸಪ್ತದಶಾಧ್ಯಾಯಗಳೊಳ್ ।
ವಿಸ್ತರಿಸಿದ ಧರ್ಮತತ್ತ್ವಗಳನೀಗಳ್ ಸಂ- ॥
ಕ್ಷಿಪ್ತದಿ ಪೇಳ್ವಂ ಗುರು ತ- ।
ನ್ನಾಪ್ತಸಖವ್ಯಾಜದಿಂದೆ ಲೋಕಹಿತಾರ್ಥಂ

॥ ೧ ॥

ಕರ್ಮಸುಮಾರ್ಚನವಿಧಿಯಂ ।
ಧರ್ಮದ ನಿಜಪರಹಿತಾರ್ಥಸಂಸ್ಕಾರಗಳಂ ॥
ನಿರ್ಮಮನಧಿಧರ್ಮತೆಯಂ ।
ನಿರ್ಮಲಿನದ ಯಜ್ಞದಾನತಪಗಳ ವಿಧಿಯಂ

॥ ೨ ॥

ಮನವಾಗ್ದೇಹಂಗಳ ಶಿ- ।
ಕ್ಷಣೆಯಂ ಪ್ರಕೃತಿಯ ವಿಮಿಶ್ರಗುಣಶೋಧನೆಯಂ ॥
ಅನಿತರಭಗವಚ್ಛ್ರದ್ಧೆಯ- ।
ನನುವದಿಪಂ ಹರಿಯಮೋಘಜೀವನನಯಮಂ

॥ ೩ ॥

ಸಾರಾಂಶ

ಜೀವಸಾರ್ಥಕ್ಯಮಾರ್ಗ ದೀಪಿಕೆಯಾದ ಗೀತಾಗ್ರಂಥದ ಈ ಸಮಾಪನಾಧ್ಯಾಯದಲ್ಲಿ ಫಲಾಭಿಸಂಧಿರಹಿತವಾದ, ಈಶ್ವರಸೇವಾಬುದ್ಧಿಯುಕ್ತವಾದ ಕರ್ಮದ ಆವಶ್ಯಕತೆಯನ್ನು ಬೋಧಿಸಿ ಭಗವಂತನು ಜೀವೋತ್ಕರ್ಷಸಾಧನೆಯು ಅಪೇಕ್ಷಿಸುವ ತ್ಯಾಗವು ಕರ್ಮಫಲತ್ಯಾಗವೇ ಹೊರತು ಕರ್ಮತ್ಯಾಗವಲ್ಲವೆಂಬ ತತ್ತ್ವವನ್ನು ಪ್ರತಿಪಾದಿಸಿರುವುದು ಲೌಕಿಕಕರ್ಮನಿರತರಾದ ಜನಸಾಮಾನ್ಯರಿಗೆ ಧೈರ್ಯೋತ್ಸಾಹಪ್ರದವಾದ ಸಂಗತಿಯಾಗಿದೆ. ಜೀವಕ್ಕೆ ಸ್ವಾರ್ಥಶೋಷಣೆಯ ಅವಕಾಶವನ್ನೊದಗಿಸುತ್ತದೆ ಕರ್ಮಾಚರಣೆ. ಜೀವಸಹಜವಾದ ನಾನಾ ಗುಣಶಕ್ತಿಗಳನ್ನು ಲೋಕಹಿತಕ್ಕಾಗಿ ವಿನಿಯೋಗಿಸುವ ಜೀವವ್ಯಾಯಮವೇ ಸತ್ತ್ವೋತ್ಕರ್ಷಕ್ಕೂ ಆ ಮೂಲಕ ಜೀವಸಾರ್ಥಕತೆಗೂ ದಾರಿ.

ವರ್ಣವ್ಯವಸ್ಥೆಗೆ ಜಗದ್ರಚನೆಯಲ್ಲಿಯೇ ಇರುವ ನೈಜಭೇದಗಳು ಆಧಾರ. ಪ್ರಕೃತಿಯ ವೈಶಿಷ್ಟ್ಯಗಳಿಂದ ಸಮಾಜಕ್ಕೆ ಅತ್ಯಧಿಕ ಪ್ರಯೋಜನವಾಗಬೇಕೆಂಬ ಆಶಯವುಳ್ಳ ವ್ಯವಸ್ಥೆ ಅದು. ವ್ಯಕ್ತಿ ಜೀವೋತ್ಕರ್ಷ, ಲೋಕಸಂಸ್ಥಿತಿ–ಇದು ಧರ್ಮಕರ್ಮದ ಧ್ಯೇಯದ್ವಯ. ಅವರವರ ಸ್ವಭಾವಾನುಸಾರವಾದ ಸ್ವಧರ್ಮಾನುಷ್ಠಾನವೇ ಅವರವರಿಗೆ ಆತ್ಮೋದ್ಧಾರಮಾರ್ಗ. ಗೀತಾಶಾಸ್ತ್ರದಲ್ಲಿ ಮುಕುಟ ಪ್ರಾಯವಾದ ಸ್ವಧರ್ಮಬೋಧೆಯು ಎಲ್ಲ ಕ್ಷೇತ್ರಗಳಲ್ಲಿಯೂ ಸಂಕೀರ್ಣತೆಯೂ ಅದಕ್ಷತೆಯೂ ತುಂಬಿರುವ ನಮ್ಮ ಕಾಲಕ್ಕೆ ಪರಮಾವಶ್ಯಕವಾಗಿದ್ದು ಮಹಾಜನಪರಿಗ್ರಹಾರ್ಹವಾಗಿದೆ.

ಸ್ವಕರ್ಮನಿರತತೆ, ಧೃತಿ, ಸಂಯಮ, ನಿರಹಂಕೃತಿ, ಅಪರಿಗ್ರಹ ಮೊದಲಾದುವನ್ನೊಳಕೊಂಡ ಬ್ರಹ್ಮಾನುಭವಸೋಪಾನದ ಶ್ರೇಣಿಬಂಧವನ್ನೂ ಬ್ರಹ್ಮಾನುಭವಿಯ ಸರ್ವಸಮತಾದಿ ಲಕ್ಷಣಗಳನ್ನೂ ಪರಬ್ರಹ್ಮೈಕ ಭಕ್ತಿಯನ್ನೂ ನಿರ್ದೇಶಮಾಡಿ ಭಗವಂತನು

ಧರ್ಮಕರ್ಮಾಚರಣೆಗೂ ಪರಮಾರ್ಥಜ್ಞಾನಕ್ಕೂ ವಿರೋಧವಿಲ್ಲವೆಂದೂ ಪ್ರಕೃತಿನಿಯಂತ್ರಿತ ಕರ್ಮವನ್ನು ನಿರೋಧಿಸುವುದು ನಿಷ್ಪ್ರಯೋಜಕವೆಂದೂ ಸಾರಿದ್ದಾನೆ. ಈ ಉಪದೇಶಾಂಗವಾದ ಜಗದ್ಯಂತ್ರ ರಚನೆಯ ನಿರೂಪಣೆ ಸಂತತಚಿಂತನಾರ್ಹವಾಗಿದೆ.

ಕರ್ಮಾಚರಣೆ ಬ್ರಹ್ಮಜ್ಞಾನಾತ್ಪೂರ್ವವೂ ಉಂಟು, ತದನಂತರವೂ ಉಂಟು: ಜಿಜ್ಞಾಸಾವಸ್ಥೆಯಲ್ಲಿ ಸಾಧನವಾಗಿದ್ದದ್ದು ಜ್ಞಾನಾವಸ್ಥೆಯಲ್ಲಿ ಲಕ್ಷಣವಾಗುತ್ತದೆ. ರಾಗದ್ವೇಷಯುಕ್ತತೆ, ಮನಃ ಪ್ರಸಾದ ಮೊದಲಾದವೆಲ್ಲ ಸಾಧಕನಿಗೆ ಕರ್ತವ್ಯಗಳು, ಶ್ರಮಸಾಧ್ಯಗಳು; ಜ್ಞಾನಿಗೆ ಅವು ಸ್ವಾಭಾವಿಕಗಳು, ಸಂತೋಷವಿಲಾಸಗಳು. ಸಾಧಕನ ದೃಷ್ಟಿ ಅಹಂತಾಮಿಶ್ರವಾದದ್ದು; ಜ್ಞಾನಿಯದು ಸಾರ್ವಾತ್ಮ್ಯದೃಷ್ಟಿ, ಸರ್ವಹಿತದೃಷ್ಟಿ.

ಪ್ರಕರಣ ೧೯

ಅಧ್ಯಾಯ ೧೮ - ಮೋಕ್ಷಸಂನ್ಯಾಸಯೋಗವೆಂಬ ತದೇಕಶರಣತಾಯೋಗ

ಗೀತೆಯ ಕೊನೆಯ ಅಧ್ಯಾಯ ಇದು. ಇದರಲ್ಲಿ ಸ್ವಾಮಿ ಹಿಂದಿನ ಎಲ್ಲ ಅಧ್ಯಾಯಗಳ ಉಪದೇಶಗಳನ್ನೂ ಸಂಗ್ರಹವಾಗಿ ಜ್ಞಾಪಕಕ್ಕೆ ತಂದುಕೊಟ್ಟು, ಪರಿಸಮಾಪ್ತಿಯಲ್ಲಿ ಸರ್ವಸುಲಭವಾದ ಒಂದು ಪರಮೋಪಾಯವನ್ನು ಬೋಧಿಸುತ್ತಾನೆ. ಅದನ್ನು ಒಂದೇ ಮಾತಿನಲ್ಲಿ ಹೇಳಬಹುದಾದರೆ ತದೇಕಶರಣತೆ ಎನ್ನಬಹುದು.

ಈ ಅಧ್ಯಾಯದ ವಿಷಯಗಳು ಹೀಗಿವೆ:

1. ಸಂನ್ಯಾಸಕ್ಕೂ ತ್ಯಾಗಕ್ಕೂ ಇರುವ ಭೇದ.
2. ಕರ್ಮದ ಆವಶ್ಯಕತೆ.
3. ಕರ್ಮದಲ್ಲಿ ದೈವದ ಭಾಗ.

4. ಕರ್ತೃತ್ವವು ಜೀವಲಕ್ಷಣ.
5. ಗುಣತ್ರೈವಿಧ್ಯದಂತೆ
    - ಜ್ಞಾನತ್ರೈವಿಧ್ಯ
    - ಕರ್ಮತ್ರೈವಿಧ್ಯ
    - ಕರ್ತೃತ್ರೈವಿಧ್ಯ
    - ಬುದ್ಧಿತ್ರೈವಿಧ್ಯ
    - ಧೃತಿತ್ರೈವಿಧ್ಯ
    - ಸುಖತ್ರೈವಿಧ್ಯ.
6. ಮನುಷ್ಯರ ಪರಸ್ಪರ ಪ್ರಯೋಜನ–ಅದಕ್ಕಿರತಕ್ಕ ಚಾತುರ್ವರ್ಣ್ಯ ವ್ಯವಸ್ಥೆ.
7. ಸ್ವಧರ್ಮದ ಉತ್ಕೃಷ್ಟತೆ.
8. ಕರ್ಮರೂಪವಾದ ಭಗವತ್ಸೇವೆ.
9. ಅರ್ಜುನನಿಗೆ ಯುದ್ಧದ ಅನಿವಾರ್ಯತೆ.
10. ಈಶ್ವರಮಾಯಾಸ್ವರೂಪ.
11. ಈಶ್ವರೈಕಶರಣತೆ.
12. ಫಲಶ್ರುತಿ.

ಈ ಅಧ್ಯಾಯವು ಪ್ರಾರಂಭವಾಗುವ ಬಗೆಯಲ್ಲಿ ನಮಗೆಲ್ಲ ಒಂದು ಎಚ್ಚರಿಕೆ ಅಡಗಿಕೊಂಡಿದೆ. ಅರ್ಜುನ ಹಿಂದೆ ಎರಡುಮೂರು ಸಾರಿ ತನ್ನ ಸಂದೇಹ ಪರಿಹಾರವಾಯಿತೆಂದೂ ತನಗೆ ಸಮಾಧಾನವಾಯಿತೆಂದೂ ಹೇಳಿದ್ದ.

> ಮೋಹೋಽಯಂ ವಿಗತೋ ಮಮ ॥ (೧೧-೧)
> ಇದಾನೀಮಸ್ಮಿ ಸಂವೃತ್ತಃ ॥ (೧೧-೫೧)

ಅದರೂ ಸಂದೇಹಗಳು ಪದೇಪದೇ ಹುಟ್ಟುತ್ತಲೇ ಇದ್ದವು. ಈಗ ಉಪಸಂಹಾರ ಭಾಗದಲ್ಲಿ ಕೂಡ–

> ಸಂನ್ಯಾಸಸ್ಯ ತತ್ತ್ವಮಿಚ್ಛಾಮಿ ವೇದಿತುಮ್ ತ್ಯಾಗಸ್ಯ ಚ... ॥ (೧೮-೧)

ಸಂನ್ಯಾಸದ ತತ್ತ್ವವೆಂಥಾದ್ದು, ತ್ಯಾಗದ ತತ್ತ್ವವೆಂಥಾದ್ದು?–ಎಂದು ಮತ್ತೆ ಕೇಳಿದ. ಅರ್ಜುನನೇ ಹೀಗೆ ಬೋಧನೆಯಿಂದ ತೃಪ್ತಿಯಾಯಿತೆಂದುಕೊಂಡಿದ್ದದ್ದರ ಮಧ್ಯೇಮಧ್ಯೇ ಹೊಸಹೊಸ ಸಂದೇಹಗಳಿಗೆ ಸಿಕ್ಕಿಕೊಂಡನೆಂದಮೇಲೆ ಸಾಮಾನ್ಯರಾದ ನಮ್ಮ ಮಾತೇನು? ವಿಷಯವೆಲ್ಲ ನಮಗೆ ತಿಳಿದುಬಿಟ್ಟಿದೆ, ಇನ್ನು ಸಂಶಯವಿಲ್ಲ–ಎಂದು ಒಂದು ಕ್ಷಣ ತೋರೀತು. ಅದು ಭ್ರಾಂತೀಯ ತೃಪ್ತಿ; ಉತ್ತರಕ್ಷಣದಲ್ಲಿಯೇ ಇನ್ನೊಂದು ಹೊಸ ಸಂದೇಹ ಬರುತ್ತದೆ; ಹಿಂದೆ ಹೇಳಿದ್ದದ್ದು ಮರೆತುಹೋಗುತ್ತದೆ ಅಥವಾ ಯಾವುದೋ ಒಂದಂಶ ಮನಸ್ಸಿಗೆ ಸ್ಪಷ್ಟಪಟ್ಟಿರುವುದಿಲ್ಲ. ಹೀಗೆ ಪದೇಪದೇ ಶಂಕೆಗಳು ಹುಟ್ಟುತ್ತಿರುತ್ತವೆ. ವಿಷಯ ಗಹನವಾದದ್ದು; ತುಂಬ ಜಡೆಜಡೆಯಾಗಿದೆ. ಇದರ ಪ್ರತಿಯೊಂದು ಅಂಶವೂ ಮನಸ್ಸಿಗೆ ಸ್ಪಷ್ಟವಾದ ಹೊರತು ನಮ್ಮ ನಂಬಿಕೆ ದೃಢಪಡುವುದಿಲ್ಲ. ಆ ಸ್ಪಷ್ಟತೆ ಬರಬೇಕಾದರೆ ಒಂದು ಸಲ ಉಪನ್ಯಾಸ ಕೇಳಿದರೆ ಅಥವಾ ಎರಡು ಸಲ ಗ್ರಂಥವನ್ನು ಓದಿಬಿಟ್ಟರೆ ಸಾಲದು. ಮನಸ್ಸಿನಲ್ಲಿ ಪುನರಾವರ್ತನೆ ಮಾಡಿಕೊಳ್ಳುತ್ತಿರಬೇಕು. ಪದೇ ಪದೇ ಗ್ರಂಥದ ಆಲೋಡನೆ ಆಗುತ್ತಿರಬೇಕು. ಆಲೋಡನೆ ಎಂದರೆ ಕಲಕುವುದು (Stirring). ಗ್ರಂಥವಾಕ್ಯಾರ್ಥದಿಂದ ಮನಸ್ಸನ್ನು ಕಲಕಿ ನೋಡಬೇಕು; ಮನಸ್ಸಿನಿಂದ ಗ್ರಂಥ ವಾಕ್ಯಾರ್ಥವನ್ನು ಕಲಕಿ ನೋಡಬೇಕು. ಹಾಗೆ ಪುನಃಪುನಃ ಮಂಥನ, ಮನನ ಮಾಡಿಕೊಳ್ಳುತ್ತಿದ್ದರೆ ವಿಷಯ ನಮ್ಮ ಸ್ವಾಧೀನಕ್ಕೆ ಬಂದೀತೇ ಹೊರತು ಒಂದೆರಡು ಸಾರಿ ಅಕ್ಷರ ಪರಿಚಯ ಮಾಡಿಕೊಂಡ ಮಾತ್ರದಿಂದ ನಾವು ವಿಷಯಾಧಿಕಾರಿಗಳಾಗಲಾರೆವು.

ಅರ್ಜುನ ಈಗ ಕೇಳಿದ ಪ್ರಶ್ನೆಗೆ ಹಿಂದೆ ಎಷ್ಟೋ ಸಲ ಉತ್ತರ ಹೇಳಿದ್ದಾಗಿತ್ತು. ಐದನೆಯ ಅಧ್ಯಾಯದ ಮುಖ್ಯ ವಿಷಯ ಅದೇ.

> ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
> ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥

“ಕರ್ಮಸಂನ್ಯಾಸ, ಕರ್ಮಯೋಗ–ಎರಡೂ ಮೋಕ್ಷಸಾಧಕಗಳೇ. ಆ ಎರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗ ಮೇಲು”.

ಈ ಅಭಿಪ್ರಾಯವನ್ನು ಸ್ವಾಮಿ ಈಗ ಮತ್ತಷ್ಟು ಸ್ಪಷ್ಟಪಡಿಸುತ್ತಾನೆ–

> ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
> ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥

"ಕಾಮ್ಯಕರ್ಮಗಳನ್ನು ಬಿಡುವುದು ಸಂನ್ಯಾಸ. ಎಲ್ಲ ಕರ್ಮಗಳ ಫಲಸಂಬಂಧವನ್ನು ಬಿಡುವುದು ತ್ಯಾಗ".

ಸಂನ್ಯಾಸಕ್ಕೂ ತ್ಯಾಗಕ್ಕೂ ಒಂದು ಸೂಕ್ಷ್ಮವ್ಯತ್ಯಾಸವನ್ನು ತೋರಿಸುತ್ತಾನೆ ಭಗವಂತ. ಸಾಮಾನ್ಯವಾಗಿ ಎರಡನ್ನೂ ಪರ್ಯಾಯಪದಗಳಾಗಿ ಬಳಸುವುದುಂಟು. ಸ್ಥೂಲದಲ್ಲಿ ಎರಡೂ ಏಕಾರ್ಥಪದಗಳೇ. ಸೂಕ್ಷ್ಮವಾಗಿ ನೋಡಿದರೆ ಕೊಂಚ ವ್ಯತ್ಯಾಸ ಕಂಡು ಬರುತ್ತದೆ. ಆ ವ್ಯತ್ಯಾಸವನ್ನು ಸ್ವಾಮಿ ತೋರಿಸುತ್ತಾನೆ.

ಕರ್ಮ ಅನೇಕ ವಿಧವಾದದ್ದೆಂಬುದನ್ನು ಹಿಂದೆ ಗಮನಿಸಿದ್ದೇವೆ. ಅದರಲ್ಲಿ ಮುಖ್ಯವಾಗಿ ಮೂರು ವಿಧ:

1. **ಲೌಕಿಕ ಕರ್ಮ:** ಇದು ಜೀವಿಕಾವೃತ್ತಿ, ವ್ಯವಹಾರ ನೀತಿ, ಸ್ನೇಹ, ಬಾಂಧವ್ಯ, ನೆರೆಹೊರೆಯ ಸಮಾಧಾನ, ರಾಷ್ಟ್ರಕ್ಷೇಮ, ದೇಶಸುಭಿಕ್ಷತೆ–ಇಂಥ ಸ್ವಾರ್ಥ ಸಂಯಮನಪೂರ್ವಕವಾದ ಸಾರ್ವಜನಿಕಧರ್ಮಗಳ ರೂಪದ ಆತ್ಮಶ್ರಿಕ್ಷಣ.
2. **ವೈದಿಕ ನಿತ್ಯಕರ್ಮ:** ಇದು ಜನದ ವರ್ಣಾಶ್ರಮಾನುಸಾರವಾಗಿ, ತತ್ತನ್ಮತ ಸಂಪ್ರದಾಯಾನುಸಾರವಾಗಿ, ವಿಹಿತವಾಗಿರುವ ಭಗವದುಪಾಸನಾರೂಪವಾದದ್ದು. ಈ ಕರ್ಮಗಳ ಮುಖ್ಯೋದ್ದೇಶ ಜೀವಸಂಸ್ಕಾರ–ಮನಶ್ಶೋಧನೆ, ಮನಶ್ಶಿಕ್ಷಣ.
3. **ವೈದಿಕ ಕಾಮ್ಯಕರ್ಮ:** ಇದೂ ಭಗವದುಪಾಸನೆಯೇ. ಆದರೆ ಆತ್ಮಸಂಸ್ಕಾರಕ್ಕಿಂತ ಕೆಳಮಟ್ಟದ ಒಂದು ಸ್ವಾರ್ಥ ಕಾಮನೆ ಇದರ ಉದ್ದೇಶ. ಐಶ್ವರ್ಯಾರೋಗ್ಯ ಸಂತಾನಪ್ರತಿಷ್ಠೆಗಳಿಗೆಂದು ಮಾಡುವ ನಾನಾ ವ್ರತ ದೀಕ್ಷೆ ಪೂಜೆಗಳು ಈ ಜಾತಿಯವು. ಅಗ್ನಿಷ್ಟೋಮ ಅಶ್ವಮೇಧಾದಿ ಯಜ್ಞನಗಳೂ ಕಾಮ್ಯಗಳೇ.

ಕಾಮ್ಯಕರ್ಮಗಳನ್ನು ಬಿಡತಕ್ಕದ್ದು ಸಂನ್ಯಾಸವೆನ್ನಿಸಿಕೊಳ್ಳುತ್ತದೆ. ಸಂನ್ಯಾಸಿಯಾದವನು ವರಲಕ್ಷ್ಮೀವ್ರತ, ನಾಗಪ್ರತಿಷ್ಠೆ, ಅಶ್ವತ್ಥಪ್ರದಕ್ಷಿಣೆ ಮೊದಲಾದವನ್ನು ಮಾಡಬೇಕಾದದ್ದಿಲ್ಲ. ಅಭಿಲಾಷೆಯಿಂದ ಕೂಡಿದ ಕರ್ಮಗಳು ಸಂನ್ಯಾಸಿಗಿಲ್ಲ; ಜಪ ಸ್ನಾನಾದಿ ನಿತ್ಯಕರ್ಮಗಳುಂಟು.

    ಕಾಮ್ಯಾನಾಂ ಕರ್ಮಣಾಂ ನ್ಯಾಸಮ್ ॥

“ನ್ಯಾಸಮ್” ಎಂದರೆ ಈ ಸಂದರ್ಭದಲ್ಲಿ “ಬಿಡುವುದು” ಎಂದರ್ಥ. ಸಂನ್ಯಾಸ ಶಬ್ದದ ನಿರ್ವಚನವನ್ನು ತೋರಿಸುವುದಕ್ಕಾಗಿ “ನ್ಯಾಸಮ್” ಎಂಬ ಮಾತು ಉಪಯುಕ್ತವಾಗಿದೆ.

ತ್ಯಾಗ ಎನ್ನುವುದು ಯಾವುದು?

    ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಮ್ ॥

ಕರ್ಮತ್ಯಾಗವಲ್ಲ, ಕರ್ಮಫಲತ್ಯಾಗ ಇಲ್ಲಿ ಪ್ರಶಸ್ತವಿಷಯ. ಸಂನ್ಯಾಸಿಯದು ಕಾಮ್ಯಕರ್ಮಮಾತ್ರತ್ಯಾಗ. ತತ್ತ್ವಜ್ಞನದು ಸರ್ವಕರ್ಮಫಲತ್ಯಾಗ. ದೇಹಧಾರಣೆ ಮಾಡಿರುವ ಎಲ್ಲರಿಗೂ ಕರ್ಮ ಅನಿವಾರ್ಯ. ಜ್ಞಾನಿಯೂ ಲೌಕಿಕಕರ್ಮಗಳನ್ನು ಮಾಡುತ್ತಾನೆ. ಏಕೆ? ಆತ್ಮಸಂಸ್ಥಿತಿಗಾಗಿ, ಭಗವತ್ಪ್ರೀತಿಗಾಗಿ, ಲೋಕಸಂಗ್ರಹಕ್ಕಾಗಿ ಕಾಮನೆಗಳಿಲ್ಲದೆ ಕರ್ಮ ಮಾಡುತ್ತಾನೆ. ತ್ಯಾಗಿಯಾದವನು–ಅವನು ಸಂನ್ಯಾಸಿಯ ಕಾಷಾಯಾದಿಗಳನ್ನು ಧರಿಸಿರಲಿ, ಧರಿಸದಿರಲಿ–ಸಮಸ್ತ ಕರ್ಮಗಳ ಫಲಗಳನ್ನೂ ತನ್ನದಲ್ಲವೆಂದು ಪರಮಾತ್ಮಪ್ರೀತಿಗಾಗಿ ಬಿಡುತ್ತಾನೆ.

ಗೃಹಸ್ಥನು ಕಾಮನೆಗಳನ್ನಿಟ್ಟುಕೊಂಡು ಕರ್ಮಗಳನ್ನು ಮಾಡುತ್ತಾನೆ–ಪತ್ನೀಪುತ್ರರಿಗಾಗಿ, ಬಂಧುಮಿತ್ರರಿಗಾಗಿ ಮಾಡುತ್ತಾನೆ. ಅವನು ಆ ಕಾಮನೆಗಳನ್ನಿಟ್ಟುಕೊಂಡಿದ್ದರೆಯೇ ಜಗತ್ತು ನಡೆಯುವುದು. ಕುಟುಂಬಪೋಷಣೆ ಅವನ ಧರ್ಮ. ಆ ಧರ್ಮಕ್ಕೋಸ್ಕರ ಕೆಲವು ಕರ್ಮಗಳನ್ನು ಅವನು ಮಾಡುತ್ತಾನೆ. ಅವನು “ಕರ್ಮಗಳನ್ನು ಮಾಡಬೇಕಾದದ್ದು ಧರ್ಮ, ಮಾಡಿದ್ದೇನೆ; ನನ್ನ ಸ್ವಂತ ಉಪಭೋಗಕ್ಕಾಗಿ ಮಾಡಿಲ್ಲ” – ಎಂದುಕೊಂಡರೆ ಅದು ತ್ಯಾಗ. ಅವನಿಗೆ ಅಂತರಂಗದಲ್ಲಿ ಹಾಗನಿಸಬೇಕು. ಅಧ್ಯಾತ್ಮ ವಿಷಯದಲ್ಲೆಲ್ಲ ಅವರವರ ಅಂತಸ್ಸಾಕ್ಷಿಯೇ ಪ್ರಮಾಣ. ಇತರರಿಗೆ ಹೇಳಬೇಕಾದದ್ದಿಲ್ಲ. ತಾವು ಮಾಡಿದ ಪುಣ್ಯಕಾರ್ಯಗಳನ್ನು ಹೇಳಿಕೊಳ್ಳತಕ್ಕದ್ದಲ್ಲವೆಂದು ಶಾಸ್ತ್ರ ಹೇಳುತ್ತದೆ. ಯಾರು ತಾವು ಮಾಡಿದ ಪುಣ್ಯ ಕಾರ್ಯಗಳನ್ನು ಇತರರಲ್ಲಿ ಹೇಳಿಕೊಳ್ಳುತ್ತಾರೋ ಅವರನ್ನೇ ಮನುಗಳು ಧರ್ಮಧ್ವಜರೆಂದು ಕರೆದಿರುವುದು. ದಾನಧರ್ಮಗಳನ್ನು ಗೂಢವಾಗಿ ಮಾಡತಕ್ಕದ್ದು. ಕ್ರೈಸ್ತರಲ್ಲಿಯೂ ಇದೇ ನೀತಿ ಉಂಟು. ಸಾಮಾನ್ಯ ಪುಣ್ಯಕಾರ್ಯಗಳ ಮಾತೇ ಇದಾದ ಮೇಲೆ

ಆತ್ಮದ ವಿಷಯದಲ್ಲಿ ನಾನು ಜ್ಞಾನಿಯಾಗಿದ್ದೇನೆ, ನಾನು ತ್ಯಾಗಿಯಾಗಿದ್ದೇನೆ–ಎಂದು ಹೇಳಿಕೊಳ್ಳುವುದು ಹೇಗೆ ಸಲ್ಲುತ್ತದೆ?

ತ್ಯಾಗಿ ಎಲ್ಲ ವಿಹಿತಕರ್ಮಗಳನ್ನೂ ಮಾಡುತ್ತಾನೆ; ಯಾವುದರ ಫಲಾಫಲಗಳನ್ನೂ ತನ್ನ ಮನಸ್ಸಿಗೆ ಅಂಟಿಸಿಕೊಳ್ಳುವುದಿಲ್ಲ. ಎಲ್ಲ ಕರ್ಮವೂ ಭಗವತ್ಪೂಜೆ; ಅದರಿಂದ ಬಂದ ಫಲವೋ ಅಫಲವೋ ನನಗೆ ಸೇರಿದ್ದಲ್ಲ; ನಾನು ಮಾಡಿದ ಕರ್ಮ ಭಗವಂತನ ಪ್ರೀತಿಗೋಸ್ಕರ ಮಾಡಿದ್ದು; ಭಗವಂತ ಮಾಡಿಸಿದಂತಾಗಲಿ–ಹೀಗೆ ಯಾರು ಅಂದುಕೊಳ್ಳುತ್ತಾನೋ ಅವನು ತ್ಯಾಗಿ. ಅವನು ಭಗವಂತನಲ್ಲಿಟ್ಟಿರುವ ಪ್ರೀತಿ ಅವನಿಂದ ಕರ್ಮಗಳನ್ನು ಮಾಡಿಸುತ್ತದೆ.

ಗೀತೆಯಲ್ಲಿ ಕರ್ಮಪ್ರಶ್ನೆ ಮತ್ತೆಮತ್ತೆ ಬಂದಿದೆ. ಈ ಹದಿನೆಂಟನೆಯ ಅಧ್ಯಾಯದಲ್ಲಿಯೂ ಬಹುಭಾಗ ಕರ್ಮವಿಷಯಕವಾದದ್ದು. ಇದರಿಂದ ಗೀತೋಪದೇಶವು ನಮ್ಮಂಥ ಸಂಸಾರಿಗಳಿಗೋಸ್ಕರ ಎಂಬುದು ಸಿದ್ಧವಾಗುತ್ತದೆ. ಸಂಸಾರಿಗಳೇ ಕರ್ಮ, ಸಂಸಾರವೇ ಕರ್ಮ.

ನಮ್ಮ ತ್ರಿಮತಾಚಾರ್ಯರುಗಳು ಯತಿಗಳು–ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ್ದವರು. ಅವರಿಗೆ ಸದ್ಯಃ ಲಕ್ಷ್ಯದಲ್ಲಿದ್ದದ್ದು ಮೋಕ್ಷ. ಆದದ್ದರಿಂದ ಗೀತೆ ಅವರಿಗೆ ಮೋಕ್ಷಶಾಸ್ತ್ರವಾಯಿತು. ಗೃಹಸ್ಥಧರ್ಮ ಅವರ ಲಕ್ಷ್ಯದಲ್ಲಿರಲಿಲ್ಲವೆಂದು ಹೇಳಲಾಗದಾದರೂ ಅದು ಅವರ ಪಾಲಿಗೆ ಮೋಕ್ಷಕ್ಕಿಂತ ಕೆಳಗಾಗಿ ದೂರವಾಗಿದ್ದ ಪುರುಷಾರ್ಥ. ಅವರದು ನಿವೃತ್ತಿ ಮಾರ್ಗ–ಕರ್ಮಬಂಧನದಿಂದ ಬಿಡಿಸಿಕೊಳ್ಳುವ ಮಾರ್ಗ. ನಮ್ಮದು ಪ್ರವೃತ್ತಿ ಮಾರ್ಗ–ಕರ್ಮವನ್ನಾಚರಿಸಲೇಬೇಕಾದ ಮಾರ್ಗ. ನಮಗೆ ಧರ್ಮಕರ್ಮ ಸಮೀಪದ್ದು; ಮೋಕ್ಷ ದೂರದ್ದು. ಆದದ್ದರಿಂದ ಗೀತೆಯಲ್ಲಿ ನಮಗೆ ಮುಖ್ಯವಾದ ಭಾಗ ಕರ್ಮೋಪದೇಶ. ಈ ಉಪಸಂಹಾರಾಧ್ಯಾಯದಲ್ಲಿ ಭಗವಂತ ಕರ್ಮತತ್ತ್ವವನ್ನೇ ಹೆಚ್ಚಾಗಿ ಪ್ರತಿಪಾದಿಸಿದ್ದಾನೆ. ಈ ಸಂಗತಿ ಅಸ್ಮದ್ವಿಧರಿಗೆ ಪ್ರೋತ್ಸಾಹಕರವೂ ಧೈರ್ಯಪ್ರದವೂ ಆಗಿದೆ. ಕರ್ಮಸ್ವರೂಪವನ್ನು ವಿವೇಕದಿಂದರಿತು ಹೇಗೆ ನಡಸಬೇಕೋ ಹಾಗೆ ನಡಸಿದರೆ ಮೋಕ್ಷವು ಬರಬೇಕಾದಾಗ ತಾನಾಗಿ ಬರುತ್ತದೆ. ಮೋಕ್ಷದ ಚಿಂತೆ ಸದ್ಯಕ್ಕೆ ಅವಸರವಲ್ಲ.

ಕರ್ಮವು ಎಂಥಾದ್ದಾದರೂ ದೋಷಾಸ್ಪದವಾದದ್ದು, ಆದದ್ದರಿಂದ ಸಕಲ ಕರ್ಮವನ್ನೂ ಬಿಡಬೇಕೆಂದು ಕೆಲವರು ಹೇಳುತ್ತಾರೆ:

ತ್ಯಾಜ್ಯಂ ದೋಷವದಿತ್ಯೇಕೇ ॥

ಇನ್ನು ಕೆಲವರು ಯಜ್ಞದಾನತಪೋರೂಪಗಳಾದ ತ್ರಿವಿಧಕರ್ಮಗಳನ್ನು ಬಿಡಬಾರದೆನ್ನುತ್ತಾರೆ. ಈ ವಿಷಯದಲ್ಲಿ ಭಗವಂತನ ಅಭಿಪ್ರಾಯ ಯಜ್ಞದಾನತಪಸ್ಸುಗಳನ್ನು ಬಿಡತಕ್ಕದ್ದಲ್ಲ, ಮಾಡಲೇಬೇಕಾದದ್ದು ಎಂದು.

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ॥

ಇವು ಸಮಸ್ತರಿಗೂ ಅವರವರ ಸಂದರ್ಭಕ್ಕೆ ತಕ್ಕಂತೆ ನಿತ್ಯಕರ್ಮಗಳು. ಅವು ಲೌಕಿಕವಾಗಬಹುದು, ವೈದಿಕವಾಗಬಹುದು. ಅವು ಕಾಮನೆ ಇಲ್ಲದವು, ಜೀವಸಂಸ್ಕಾರಕಾರಿಗಳು. ಆದದ್ದರಿಂದ ಸರ್ವರಿಗೂ ಅವು ವಿಹಿತಗಳು.

ಕರ್ಮವನ್ನು ಕುರಿತು, ಕರ್ಮಜ್ಞಾನಸಂಬಂಧವನ್ನು ಕುರಿತು, ಕರ್ಮಮೋಕ್ಷ ಸಂಬಂಧವನ್ನು ಕುರಿತು ನಮ್ಮ ಶಾಸ್ತ್ರಗಳಲ್ಲಿ ಇಷ್ಟೊಂದು ತರ್ಕಜಿಜ್ಞಾಸೆ ಬೆಳೆದಿರುವುದರ ಕಾರಣ ಏನು? ನನಗೆ ತಿಳಿದ ಮಟ್ಟಿಗೆ ಇತರ ಮತಗಳ ಗ್ರಂಥಗಳಲ್ಲಿ—ಕ್ರೈಸ್ತರ, ಇಸ್ಲಾಮರ ಮತಗ್ರಂಥಗಳಲ್ಲಿ—ಈ ಪ್ರಶ್ನೆ ಇಷ್ಟು ದೊಡ್ಡದಾಗಿ ಕಾಣಿಸುವುದಿಲ್ಲ. ನಮ್ಮಲ್ಲಿ ಕರ್ಮಾಕರ್ಮಗಳ ಚರ್ಚೆ ಆತ್ಮಶಾಸ್ತ್ರದ ಅಂಗವಾಗಿ ಅದಕ್ಕಿಂತ ಕಡಮೆಯಿಲ್ಲದೆ ಬೆಳೆದಿದೆ. ಶಂಕರಾಚಾರ್ಯರು ತಮ್ಮ ಗ್ರಂಥಗಳಲ್ಲಿ ಕರ್ಮವಿಚಾರಕ್ಕೆ ಹೆಚ್ಚು ಜಾಗ ಕೊಟ್ಟಿದ್ದಾರೆ. ಅದಕ್ಕೆ ಕಾರಣ ಅವರು ಪೂರ್ವಮೀಮಾಂಸಕರ ವಾದಕ್ಕೆ ಉತ್ತರ ಹೇಳಬೇಕಾಗಿದ್ದದ್ದು. ಕರ್ಮ ಬಿಟ್ಟು ಜ್ಞಾನವಿಲ್ಲ, ಕರ್ಮವೇ ಜ್ಞಾನ ಎಂದು ಮೊದಲಾಗಿ ಪೂರ್ವಮೀಮಾಂಸಕರು ವಾದ ಮಾಡಿದರು. ಅದಕ್ಕೆ ಉತ್ತರರೂಪವಾದದ್ದು ಶಂಕರಾಚಾರ್ಯರ ಭಾಷ್ಯಾದಿಗಳು. ಹೀಗೆ ಶಾಸ್ತ್ರ ವಿಪುಲವಾಗಿ ಬೆಳೆಯಿತು.

ಆದರೆ ಈ ತಕರಾರು ಬಹಳ ಹಿಂದಿನ ಕಾಲದಿಂದ ಇದ್ದಂತೆ ಕಾಣುತ್ತದೆ. ಈಶಾವಾಸ್ಯೋಪನಿಷತ್ತಿನಲ್ಲಿ ಹೀಗಿದೆ:

ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದ ಉಭಯಗ್ಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೇ ॥
ವಿದ್ಯಾಂ ಚ ಅವಿದ್ಯಾಂ ಚ ಯಸ್ತದ್ವೇದ ಉಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

ಕಠೋಪನಿಷತ್ತಿನಲ್ಲಿಯೂ ಈ ಪ್ರಸ್ತಾವ ಬರುತ್ತದೆ. ಕರ್ಮವಿಷಯದಲ್ಲಿ ಜಿಜ್ಞಾಸಾಶಾಸ್ತ್ರ ಇಷ್ಟೊಂದು ಬೆಳೆದಿರುವುದಕ್ಕೆ ಏನು ಕಾರಣ? ಸಾವಧಾನವಾಗಿ ವಿಚಾರ ಮಾಡಬೇಕಾದದ್ದಿದು.

ಕರ್ಮವೆಂದರೆ ಲೋಕವ್ಯವಹಾರ–ಲೋಕದಿಂದ ಒಂದಿಷ್ಟನ್ನು ತಾನು ತೆಗೆದುಕೊಳ್ಳುವುದು ಮತ್ತು ಲೋಕಕ್ಕೆ ಒಂದಿಷ್ಟನ್ನು ಕೊಡುವುದು. ಇದೇ ನಮ್ಮ ನಿತ್ಯಜೀವನ. ಈ ದಾನಾದಾನರೂಪವಲ್ಲದ ಜೀವಿತಕರ್ಮ ಯಾವುದೂ ಇಲ್ಲ. ಉಸಿರಾಡುವುದರಲ್ಲಿ ಸಹ ನಾವು ಪ್ರಪಂಚದಿಂದ ಗ್ರಹಿಸುತ್ತೇವೆ, ಪ್ರಪಂಚಕ್ಕೆ ಅನುಗ್ರಹಿಸುತ್ತೇವೆ, ಈ ಸ್ವೀಕರಣ ಸಮರ್ಪಣೋಭಯರೂಪವಾದ ಸಮಸ್ತ ಲೋಕ ವ್ಯವಹಾರಗಳೂ ಜೀವದ ಮೇಲೆ ಪರಿಣಾಮ ಮಾಡುತ್ತವೆ. ಅದು ಎರಡು ಪ್ರಕಾರವಾದ ಪರಿಣಾಮ: ಒಂದು ಸ್ವಾರ್ಥಪೋಷಕ, ಇನ್ನೊಂದು ಸ್ವಾರ್ಥಶೋಷಕ. ನಮ್ಮ ಭೋಗಕ್ಕಾಗಿ, ನಮ್ಮ ಸಂತೋಷಕ್ಕಾಗಿ, ನಮ್ಮ ಲಾಭಕ್ಕಾಗಿ, ನಮ್ಮ ಪುಷ್ಟಿಗಾಗಿ, ನಮ್ಮ ಪ್ರತಿಷ್ಠೆಗಾಗಿ ನಾವು ಮಾಡುವ ಕರ್ಮಗಳೆಲ್ಲ ಸ್ವಾರ್ಥಪೋಷಕಗಳು. ಆ ಉದ್ದೇಶಗಳು ಸಫಲವಾದಾಗ ನಮ್ಮ ಸ್ವಾರ್ಥಕ್ಕೆ ಪ್ರೋತ್ಸಾಹ ದೊರೆಯುತ್ತದೆ. ಹೀಗೆ ಸ್ವಾರ್ಥ ಬೆಳೆದಂತೆಲ್ಲ ನಾವು ಜಗತ್ತಿನಿಂದ ತೆಗೆದುಕೊಳ್ಳುವುದು ಹೆಚ್ಚುತ್ತದೆ, ಜಗತ್ತಿಗೆ ಸಲ್ಲಿಸುವುದು ಕಡಮೆಯಾಗುತ್ತದೆ. ಹೀಗೆ ಪ್ರಪಂಚ ಋಣ ಬೆಳೆಯುತ್ತದೆ; ಸಂಸಾರಸೂತ್ರ ದೀರ್ಘವಾಗುತ್ತದೆ. ಸ್ವಾರ್ಥಪ್ರೇರಿತವಾದ ಲೋಕವ್ಯವಹಾರ ಹೆಚ್ಚಿದಷ್ಟು ಪಾಪಸಂಭವ ಹೆಚ್ಚುತ್ತದೆ. ಪುಣ್ಯಫಲ ವೃದ್ಧಿಯಾದಂತೆಲ್ಲ ಪಾಪಾಕರ್ಷಣೆ ವೃದ್ಧಿಯಾಗುತ್ತದೆ. ಇದು ಕರ್ಮದಲ್ಲಿರುವ ಅಪಾಯ. ಇದು ಸತ್ಕರ್ಮದಲ್ಲಿ ಕೂಡ ಉಂಟು. ಏಕೆಂದರೆ ನಾವು ಮಾಡುವ ವ್ರತಪೂಜಾದಿ ಸತ್ಕರ್ಮಗಳಲ್ಲಿ–ನಮ್ಮ ದೈವಭಕ್ತಿಯ ಅಂತರಾಳದಲ್ಲಿ ಸ್ವಾರ್ಥಾಸಕ್ತಿ ಅವಿತುಕೊಂಡಿರುತ್ತದೆ, ಪಾಯಸದೊಳಗೆ ಕರಗಿದ ಅಫೀಮಿನಂತೆ. ಹಿರಣ್ಯಕಶಿಪು ರಾವಣ ಬಾಣಾಸುರ ಭಸ್ಮಾಸುರಾದಿ ರಾಕ್ಷಸರ ಚರಿತ್ರೆಯೇನು? ಅದು ಪುಣ್ಯದ್ವಾರದಿಂದ ಪಾಪಲೋಕಕ್ಕಿಳಿದ ಕಥೆ. ಅವರು ಮೊದಲು ಬ್ರಹ್ಮವಿಷ್ಣುಶಿವಾದಿ ದೇವತೆಗಳನ್ನು ಪೂಜಿಸಿ ಘೋರವಾದ ತಪಸ್ಸುಗಳನ್ನು ಮಾಡಿ ವರ ಸಂಪಾದಿಸಿಕೊಂಡರು. ಹಾಗೆ ಪುಣ್ಯಫಲವಾಗಿ

ಬಂದ ವರವೇ ಅವರಲ್ಲಿ ಪಾಪೋತ್ತೇಜಕವಾಯಿತು. ತಾಮಸಭಕ್ತಿ, ಮೋಹಾಸಕ್ತಿ, ನರಕ ಪ್ರಾಪ್ತಿ.

ಈ ಪಾಪಸಂಭವತೆಯ ಕಾರಣದಿಂದ ಕರ್ಮದ ಗೊಡವೆಯೇ ನಮಗೆ ಬೇಡ ಎಂಬ ವಾದ ಕೆಲವರದು.

ತ್ಯಾಜ್ಯಂ ದೋಷವದಿತ್ಯೇಕೇ ॥

ಕರ್ಮವನ್ನು ಬಿಟ್ಟರೆ ಮಾತ್ರ ದೋಷವಿಲ್ಲವೋ? ಅದೂ ದೋಷವೇ. ಹೇಗೆಂದರೆ, ಕರ್ಮವರ್ಜನೆಯಿಂದ ಸ್ವಾರ್ಥಶೋಷಣೆಯ ಅವಕಾಶ ಜೀವಕ್ಕೆ ತಪ್ಪಿಹೋಗುತ್ತದೆ. ಸ್ವಾರ್ಥವು ಜೀವಕ್ಕೆ ಅಂಟಿಬಂದದ್ದು–ನಮ್ಮಲ್ಲಿ ಎಷ್ಟೋ ಮಂದಿಗೆ ನೆಗಡಿಯಿರುವಂತೆ. ಲೋಕಸಂಪರ್ಕದಿಂದಲೇ ಸ್ವಾರ್ಥಕ್ಷಯ. ಪ್ರಪಂಚಘರ್ಷಣೆಯು ನಮ್ಮ ಹೃದಯಗ್ರಂಥಿಗಳನ್ನು ಸಡಲಿಸುತ್ತದೆ; ಮನಸ್ಸನ್ನು ಗಟ್ಟಿಯೂ ಮಾಡುತ್ತದೆ. ತಾಪತ್ರಯವೆನ್ನಿಸಿಕೊಂಡಿರುವ ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕ ತಾಪಗಳು ಜೀವವನ್ನು ಕುದಿಸುತ್ತವೆ. ಇದನ್ನೇ ಮಹಾನುಭಾವ ಭರ್ತೃಹರಿ ಸರಸವಚನಗಳಲ್ಲಿ ನಮಗೆ ಬೋಧಿಸಿರುವುದು.

ಮಾತರ್ಮೇದಿನಿ ತಾತ ಮಾರುತ ಸಖೇ ತೇಜಃ ಸುಬಂಧೋ ಜಲ ।
ಭ್ರಾತರ್ವ್ಯೋಮ ನಿಬದ್ಧ ಏವ ಭವತಾಮ್ ಅಂತ್ಯಃ ಪ್ರಣಾಮಾಂಜಲಿಃ ॥
ಯುಷ್ಮತ್ಸಂಗವಶೋಪಜಾತಸುಕೃತಸ್ಫಾರಸ್ಫುರನ್ನಿರ್ಮಲ- ।
ಜ್ಞಾನಾಪಾಸ್ತಸಮಸ್ತ ಮೋಹಮಹಿಮಾ ಲೀಯೇ ಪರಬ್ರಹ್ಮಣಿ ॥

ಇಂಥದು ಕರ್ಮದಿಂದ ಆಗುವ ಮಹೋಪಕಾರ.

ಭರ್ತೃಹರಿಯು ತನಗೆ ಅವಸಾನಕಾಲ ಬಂತೆಂದು ತೋರಿದಾಗ ಅವನು ಕೈಮುಗಿದು ಹೇಳುತ್ತಾನೆ.

“ಅಮ್ಮಾ ಭೂಮಾತೆ, ತಂದೆ ವಾಯುದೇವನೆ, ಸ್ನೇಹಿತನಾದ ಸೂರ್ಯನೆ, ಆಪ್ತ ಬಂಧುವಾದ ಜಲವೆ, ಅಣ್ಣ ಆಕಾಶವೆ, –ಇಗೋ, ನಿಮಗೆ ಈ ನನ್ನ ಕಟ್ಟಕಡೆಯ ನಮಸ್ಕಾರ. (ನಾನು

ನಿಮ್ಮಿಂದ ಉಪಕಾರ ಪಡೆದವನು.) ನಿಮ್ಮಗಳ ಸಂಪರ್ಕದಿಂದ ಉಂಟಾದ ಸಂಸ್ಕಾರದ ಮೂಲಕ ನನ್ನ ಸಹಜವಾದ ಸ್ವಾರ್ಥಮೋಹವು ಕಳಚಿಹೋಗಲಾಗಿ, ಶುದ್ಧವೂ ವಿಸ್ತಾರವೂ ಆದ ತತ್ತ್ವದ ಪ್ರಕಾಶ ನನಗೆ ಲಭಿಸಿತು. ಅದರಿಂದ ನಾನು ಈಗ ಪರಮಾತ್ಮವಸ್ತುವಿನಲ್ಲಿ ಲೀನವಾಗುವುದು ಸಾಧ್ಯವಾಗಿದೆ".

ಜ್ಞಾನಿಯ ಪಾಲಿಗೆ ಸಂಸಾರ ಒಂದು ತಪಸ್ಸು. ಮನೆ ಒಂದು ಕಮ್ಮಾರ ಸಾಲೆ. ಕಮ್ಮಾರನು ಕಬ್ಬಿಣವನ್ನು ಕಾಸಿ ಮೆತುಮಾಡುವಂತೆ, ಸಂಸಾರತಾಪವು ಮನುಷ್ಯ ಸ್ವಭಾವವನ್ನು ಮೆತುಮಾಡುತ್ತದೆ. ಕಮ್ಮಾರನು ಕಾದ ಕಬ್ಬಿಣವನ್ನು ಬಡಿದು ತಟ್ಟಿ ಉಪಯುಕ್ತರೂಪಕ್ಕೆ ತರುವಂತೆ ಲೋಕದ ಏಟು ಪೋಟುಗಳು ಮನುಷ್ಯಸ್ವಭಾವವನ್ನು ತಿದ್ದಿ ಹದಗೊಳಿಸಿ ಲೋಕಪ್ರಯೋಜನಕ್ಕೊದಗಿಸುತ್ತವೆ.

ಬಸವಣ್ಣನವರ ವಚನ ಹೀಗಿದೆ:

> ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
> ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ.

ಬೆಂಕಿಯ ಕಾವೂ ಚಮ್ಮಟಿಗೆಯ ಪೆಟ್ಟೂ ತಟ್ಟಿದಾಗ ಲೋಹ ನಾಣ್ಯವಾಗುತ್ತದೆ. ಸಾಚಾನಾಣ್ಯಕ್ಕೆ ಇಹಪರಗಳೆರಡರಲ್ಲಿಯೂ ಬೆಲೆಯುಂಟು. ಮಡದಿಮಕ್ಕಳ ಪೇಚಾಟ, ಬಂಧುಬಳಗಗಳ ಕಚ್ಚಾಟ, ಅಂಗಡಿಯವನ ಕೂಡ ಗುದ್ದಾಟ, ಬ್ಯಾಂಕುಗಳಲ್ಲಿ ಬಂಡಾಟ, ಆಫೀಸುಗಳಲ್ಲಿ ಒದ್ದಾಟ–ಈ ಎಲ್ಲ ಆಟಗಳೂ ಜೀವದ ಗಟ್ಟಿಗಂಟುಗಳನ್ನು ಹಿಸುಕಿ, ಬೇಯಿಸಿ, ಮೆತುಮಾಡುತ್ತವೆ; ಜೀವದ ಸೊಟ್ಟುಗಳನ್ನು ನೇರ ಮಾಡಿ, ಅಳ್ಳಕಗಳನ್ನು ದಟ್ಟವಾಗಿಸುತ್ತವೆ; ಅಹಮೇಕಭಾವವನ್ನು ತೆಳುವು ಮಾಡುತ್ತವೆ; ಮಮತಾಕ್ಷೇತ್ರವನ್ನು ವಿಸ್ತಾರಪಡಿಸುತ್ತವೆ. ಹೀಗೆ ಕರ್ಮದಿಂದ ಆಗುವ ಸ್ವಾರ್ಥಶೋಷಣೆ. ಈ ಕಾರಣದಿಂದ–

> ನ ತ್ಯಾಜ್ಯಮಿತಿ ಚಾಪರೇ ॥

ಕರ್ಮ ಮಾಡಬೇಕೆ, ಬಿಡಬೇಕೆ? ಮೂಗು ಇರಬೇಕೆ, ಅದನ್ನು ಕೊಯ್ದು ಹಾಕಬೇಕೆ? ಅದಿದ್ದರೆ ನೆಗಡಿ; ಅದಿಲ್ಲದಿದ್ದರೆ ಉಸಿರೂ ಇಲ್ಲ. ಕರ್ಮ ಮಾಡಿದರೆ ಸ್ವಾರ್ಥ ಪ್ರೋತ್ಸಾಹ. ಕರ್ಮಮಾಡದಿದ್ದರೆ ಇರುವ ಸ್ವಾರ್ಥ ಅಳಿದುಹೋಗುವ ಹಾಗಿಲ್ಲ. ಹೀಗೂ ಅಪಾಯ, ಹಾಗೂ

ಅಪಾಯ. ಇದರಲ್ಲಿ ಉಪಾಯವೇನೆಂದರೆ ಕರ್ಮದಲ್ಲಿ ಸೇರಿಕೊಳ್ಳುವ ಸ್ವಾರ್ಥಾಂಶವನ್ನು ತಡೆದಿಡುವುದು. ಅದೇ ಸಿದ್ಧಾಂತ.

> ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ॥

ಯಜ್ಞವೆಂದರೆ ದೇವಪೂಜೆ; ದಾನವೆಂದರೆ ಲೋಕಸಂತೋಷಣ; ತಪಸ್ಸೆಂದರೆ ಆತ್ಮ ಸಂಯಮ. ದೈವ, ಲೋಕ, ಜೀವ–ಈ ಮೂರು ಮನುಷ್ಯಜೀವನದ ಘಟಕಾಂಶಗಳು. ಅವುಗಳ ಸೇವೆ ಕರ್ತವ್ಯ: ಎಂದಿಗೂ ಬಿಡತಕ್ಕದ್ದಲ್ಲ, ಮಾಡಲೇಬೇಕು. ಯಜ್ಞವೂ ದಾನವೂ ತಪಸ್ಸೂ ಬುದ್ಧಿಶಾಲಿಗೆ ಪಾವನಗಳು, ಎಂದರೆ ಪರಿಶುದ್ಧಿಕಾರಿಗಳು. ಆ ಕರ್ಮಗಳನ್ನು ವಿವೇಕದಿಂದ, ಅರ್ಥಜ್ಞಾನಪೂರ್ವಕವಾಗಿ ಮಾಡಿದರೆ ಅವು ಸ್ವಾರ್ಥದೋಷಗಳನ್ನು ನೀಗಿ ಜೀವಶೋಧಕಗಳಾಗುತ್ತವೆ.

ಸಂಸಾರನಿರ್ವಾಹ ಒಂದು ವ್ರತ. ವಿವಾಹವು ಒಂದು ಧರ್ಮಸಂಸ್ಕಾರ. ಅದರಿಂದ ಉಂಟಾಗುವ ಲೋಕಸಂಬಂಧಗಳು ಧರ್ಮಾವಕಾಶಗಳು. ಹೀಗೆ ಭಾವಿಸಿ ಮಾಡಿದ ಗೃಹಕೃತ್ಯ ಒಂದು ತಪಸ್ಸು. ಅದನ್ನು ಯಜ್ಞವೆಂದೂ ತಿಳಿಯಬಹುದು. ಜ್ಞಾನಿಯ ಸಮಸ್ತ ಜೀವನವೂ ಅವನ ಎಲ್ಲ ಲೌಕಿಕ ವ್ಯವಹಾರಗಳೂ ಒಂದು ಮಹಾಯಜ್ಞವೆಂದು ವೇದವೇ ಪ್ರಶಂಸೆ ಮಾಡಿರುವುದನ್ನು ಆಗಲೇ ನೋಡಿದ್ದೇವೆ.

> ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ॥

ಇತ್ಯಾದಿಯಾಗಿ.

> ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
> ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥

"ಯಜ್ಞದಾನತಪೋರೂಪಕ್ರಿಯೆಗಳನ್ನು ಕರ್ತವ್ಯಬುದ್ಧಿಯಿಂದ ಮಾಡುವುದು ಸರ್ವೋತ್ತಮಮಾರ್ಗ. ಆದರೆ ಒಂದು ನಿಯಮವುಂಟು: ಅವುಗಳಲ್ಲಿ ಅಹಂಭಾವದ ಸಂಗವಿರಬಾರದು, ಫಲಚಿಂತೆ ಇರಬಾರದು".

“ಕರ್ತವ್ಯಾನಿ” ಎಂಬಲ್ಲಿ “ತವ್ಯ” ಪ್ರತ್ಯಯ ಉಪಯೋಗಿಸಿರುವುದನ್ನು ಗಮನಿಸಬೇಕು. ಕಡ್ಡಾಯವಾಗಿ ಮಾಡಲೇಬೇಕೆಂದು ಅದರಿಂದ ಧ್ವನಿತವಾಗುತ್ತದೆ. “ಮಾಡುವವನು ನಾನು, ಪ್ರಯೋಜನ ನನಗೆ” –ಎಂಬುದು ಮಾತ್ರ ಇರಬಾರದು. ಈ ಅಹಂಭಾವತ್ಯಾಗಫಲಸಂಬಂಧತ್ಯಾಗಗಳೇ ಕರ್ಮಯೋಗದಲ್ಲಿರಬೇಕಾದ ಕೌಶಲ. ಅದೊಂದು ಹುನ್ನರು. ಅದೇ– ।

ಯೋಗಃ ಕರ್ಮಸು ಕೌಶಲಮ್ ॥

ಮಾಡುವುದರಲ್ಲಿ ಶ್ರದ್ಧೆ, ಉತ್ಸಾಹ; ಫಲದಲ್ಲಿ ಉಪೇಕ್ಷೆ, ನಿಶ್ಚಿಂತೆ.

ಮನುಷ್ಯನ ಎಲ್ಲ ಜೀವಿತಕ್ಷೇತ್ರಗಳಲ್ಲಿಯೂ ಇರುವಂತೆ ಕರ್ಮದಲ್ಲಿಯೂ ಸತ್ತ್ವ ರಜಸ್ಸು ತಪಸ್ಸುಗಳ ಪ್ರಭಾವವುಂಟು.

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ॥

ನಿಯತಕರ್ಮವನ್ನು ಯಾರೂ ಎಂದಿಗೂ ಬಿಡತಕ್ಕದ್ದಲ್ಲ. ಈ ಮಾತು ಸಂಧ್ಯಾವಂದನಾದಿ ವರ್ಣಾಶ್ರಮಕರ್ಮಗಳ ವಿಷಯಕ್ಕೆ ಮಾತ್ರವೇ ಅಲ್ಲ, ಜೀವಿಕಾವೃತ್ತಿ ಸಮಾಜಹಿತ ಮೊದಲಾದ ಎಲ್ಲ ಲೌಕಿಕಕರ್ತವ್ಯವಗಳಿಗೂ ಅನ್ವಯಿಸುತ್ತದೆ. ಸ್ವಧರ್ಮ ಕರ್ಮವು ಎಲ್ಲರಿಗೂ ನಿತ್ಯವಿಹಿತವಾದದ್ದು. ವಿಹಿತಕರ್ಮವನ್ನು ಆಚಾರಮಾತ್ರದ್ದೆಂದಾಗಲಿ ಅದು ಅಮುಖ್ಯವೆಂದಾಗಲಿ ಲೋಪಮಾಡುವುದು ತಾಮಸತ್ಯಾಗ.

ಮೋಹಾತ್ತಸ್ಯ ಪರಿತ್ಯಾಗಃ ತಾಮಸಃ ಪರಿಕೀರ್ತಿತಃ ।

ಇಂದಿನ ಕಾಲದಲ್ಲಿ ದೇವಸ್ಥಾನಗಮನ ತೀರ್ಥಯಾತ್ರೆ ಮೊದಲಾದ ಸತ್ಕರ್ಮಗಳ ವಿಷಯದಲ್ಲಿ ನಮಗೆ ಇಂಥ ತ್ಯಾಗಬುದ್ಧಿ ಬರುತ್ತಿದೆ. ಅದು ಮೋಹಮೂರ್ಖತೆಗಳ ಕಾರ್ಯ. ಅದು ತಾಮಸ.

ಅದು ಮಾತ್ರವಲ್ಲದೆ ದೇಹಾಯಾಸಭಯದಿಂದಲೂ ಸ್ನಾನಾಚಾರಾದಿಗಳಲ್ಲಿ ಲೋಪ ಮಾಡುತ್ತೇವೆ. ಇದು ರಾಜಸತ್ಯಾಗ. ನಮ್ಮ ದೇಶದ ವಿದ್ಯಾವಂತರಲ್ಲಿ ಇದನ್ನು ಹೆಚ್ಚಾಗಿಯೇ ನೋಡಬಹುದು.

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ ತ್ಯಜೇತ್ ॥

ಸಾಷ್ಟಾಂಗವಾಗಿ ನಮಸ್ಕಾರ ಮಾಡಿದರೆ ಆಯಾಸವಾಗುತ್ತದೆ. ಭಕ್ತಿಯಿದ್ದರೆ ಕೈಮುಗಿದರೆ ಸಾಲದೆ? ಕೈಮುಗಿಯುವ ಶ್ರಮ ತಾನೆ ಏಕೆ? ಒಂದು ಕೈಸನ್ನೆ ಸಾಲದೆ? ಕೈಸನ್ನೆ ಏಕೆ? ಹಲ್ಲು ಕಿರಿದರೆ ಸಾಲದೆ? ತುಟಿ ಬಿರಿದರೆ ಸಾಲದೆ? ಹುಬ್ಬು ಹಾರಿಸಿದರೆ ಸಾಲದೆ? ದೇವರಿಗೆ ನಮ್ಮ ವಿಷಯ ಗೊತ್ತೇ ಇದೆ. ಅವನು ಸರ್ವಜ್ಞ. ಅವನಿಗೆ ನಮ್ಮ ಮೈಮುದಿರು ಕೈಸನ್ನೆಗಳ ಆವಶ್ಯಕತೆಯೇನಿದೆ? ಇಂಥಾದ್ದು ನಮ್ಮ ಕಾಲದ ಮನೋಗತ. ಸುಲಭದಲ್ಲಿ ಸ್ವರ್ಗಸೂರೆ: "ಸೂಕ್ಷ್ಮಂ ಲೋ ಮೋಕ್ಷಂ".

ಇದಕ್ಕೆ ಭಗವಂತನ ಒಪ್ಪಿಕೆಯಿಲ್ಲವಂತೆ!

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥
ನ ದ್ವೇಷ್ಟ್ಯ ಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥

"ಯಾವ ಕಾರ್ಯವು ಸಂದರ್ಭವಿವೇಕದಿಂದಲೂ ಶಾಸ್ತ್ರೋಪದೇಶದಿಂದಲೂ ತಾನು ಮಾಡಲೇಬೇಕಾದ ಕರ್ತವ್ಯವಾಗುತ್ತದೆಯೋ ಅದನ್ನು ಆಚರಿಸುವುದರಲ್ಲಿ ಅಹಂಭಾವವನ್ನೂ ಫಲಸಂಗವನ್ನೂ ತ್ಯಜಿಸುವುದೇ ಸಾತ್ತ್ವಿಕತ್ಯಾಗ. ಅಂಥಾ ಸಾತ್ತ್ವಿಕ ತ್ಯಾಗಿಯು ತನಗೆ ನಿಯತವಾದ ಕಾರ್ಯವು ದುಃಖಕರವೋ ಅಸಹ್ಯವೋ ಆಗಿದೆ ಎಂದು ಅದನ್ನು ದ್ವೇಷಿಸುವುದಿಲ್ಲ; ಅದು ಸುಖಕರವೆಂದು ಅದನ್ನು ತಗಲಿಸಿಕೊಳ್ಳುವುದಿಲ್ಲ." ಏಕಾದಶಿ ಬಂತೆಂದು ಕುಗ್ಗುವುದಿಲ್ಲ; ದ್ವಾದಶಿ ಬಂತೆಂದು ಹಿಗ್ಗುವುದಿಲ್ಲ. ಆಸ್ಪತ್ರೆಯ ಉದ್ಯೋಗವೆಂದು ಹೆದರುವುದಿಲ್ಲ; ನಾಟಕಶಾಲೆಯ ಉದ್ಯೋಗವೆಂದು ಮೆರೆಯುವುದಿಲ್ಲ. ಹೆಣ ಹೊರಬೇಕಾದೀತೆಂದು ಓಡಿಹೋಗುವುದಿಲ್ಲ; ಮದುವೆಯ ಮೆರವಣಿಗೆಯೆಂದು ಮುಂದೆ ನಿಲ್ಲುವುದಿಲ್ಲ. ಅವನು ಶುಭಾಶುಭಸಮನಾಗಿರುತ್ತಾನೆ, ಎಂದರೆ ದ್ವಂದ್ವ ಪರಿಣಾಮಗಳಿಂದ ದೂರವಿರುತ್ತಾನೆ. ಭೇದಗಣನೆಯನ್ನು ತ್ಯಜಿಸಿರುತ್ತಾನೆ. "ಅವನು ಎಲ್ಲ ಸಂದೇಹಗಳನ್ನೂ ಕತ್ತರಿಸಿ ಹಾಕಿ ಕೇವಲ ಸತ್ತ್ವನಿಷ್ಠನಾಗಿರುತ್ತಾನೆ".

ಈ ಸಾತ್ತ್ವಿಕತ್ಯಾಗಪೂರ್ವಕವಾದ ಕರ್ಮನಿಷ್ಠೆಗೆ ಈ ಅಧ್ಯಾಯದಲ್ಲಿಯೂ ಹಿಂದಿನ ಅಧ್ಯಾಯಗಳಲ್ಲಿಯೂ ಭಗವಂತ ಕೊಟ್ಟಿರುವ ಪ್ರಾಶಸ್ತ್ಯವನ್ನು ನೋಡಿದರೆ ಗೀತೆಯು ಜೀವನಧರ್ಮಗ್ರಂಥವೆಂಬ ನಮ್ಮ ಅಭಿಪ್ರಾಯವು ಸ್ಥಿರಪಡುತ್ತದೆ. ಕರ್ಮ ಎಲ್ಲ ಮನುಷ್ಯರಿಗೂ ಅಷ್ಟೋ ಇಷ್ಟೋ ಅನಿವಾರ್ಯವಾಗಿರುತ್ತದೆ.

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ॥

ಕರ್ಮದ ಅನಿವಾರ್ಯತೆ ಪ್ರತಿಯೊಬ್ಬನಿಗೂ ಕೊಂಚವಾದರೂ ಇದ್ದೇ ಇರುತ್ತದೆ. ಹಾಗಾದ ಮೇಲೆ ಅದರ ಪಾಪಸಂಭವತೆಯಿಂದ ತಪ್ಪಿಸಿಕೊಳ್ಳುವುದು ಹೇಗೆ? ಫಲ ಮಾತ್ರ ತ್ಯಾಗದಿಂದ. ಮಾಡಬೇಕಾದದ್ದನ್ನು ಮಾಡಿಬಿಡೋಣ, ಆದರೆ ಉಪಯೋಗದ ವಿಚಾರ ನಮಗೆ ಸೇರಿದ್ದಲ್ಲ. ನಾವು ಕರ್ತವ್ಯವಿಧಿಗೆ ದಾಸರು. ಹೇಳಿದ್ದನ್ನು ಮಾಡುವುದೆಷ್ಟೋ ಅಷ್ಟೇ ನಮ್ಮ ಪಾಲು. ಮಿಕ್ಕದ್ದು ನಮ್ಮದಲ್ಲ. ಭಗವಂತನ ಸತ್ರದಲ್ಲಿ ನಿತ್ಯ ಸಮಾರಾಧನೆ ನಡೆಯುತ್ತಿದೆ. ಪಾರುಪತ್ಯಗಾರ ಬಂದು "ಎಂಜಲು ಬಳಿಯೋ ಗುಂಡಾ" ಎಂದರೆ "ಉಂಡೋರೆಷ್ಟು ಮಂದಿ?" ಎಂದು ಕೇಳುವ ಅಧಿಕಾರ ಗುಂಡನದಲ್ಲ.

ಈ ಮೇಲಣ ಉಪದೇಶವನ್ನು ನಮ್ಮ ಇಂದಿನ ರಾಷ್ಟ್ರಕರ್ತವ್ಯಗಳಿಗೆ ಅನ್ವಯಿಸಿ ನೋಡೋಣ. ಪ್ರಜಾಪ್ರತಿನಿಧಿಗಳನ್ನು ವರಿಸಬೇಕಾದ ದಿವಸ, ಈ ಹೊತ್ತು ರಜಾ ಎಂದು ನಿದ್ದೆಯಲ್ಲಿಯೋ ಇಸ್ಪೀಟಿನಲ್ಲಿಯೋ ಇದ್ದುಕೊಂಡು ಚುನಾವಣೆಯನ್ನು ಮರೆತೇ ಬಿಡುವುದು ತಾಮಸತ್ಯಾಗ. "ಬಿಸಿಲಿನಲ್ಲಿ ಯಾರಯ್ಯಾ ಅಷ್ಟು ದೂರ ನಡೆದು ಅಷ್ಟು ಹೊತ್ತು ಕಳೆಯೋರು–ಅಲ್ಲಿ ಬೇರೆ ಅಷ್ಟುದ್ದ ಕ್ಯೂ" ಎಂದು ಚುನಾವಣೆಗೆ ಹೋಗದೆ, ಅದು ಜ್ಞಾಪಕವಿದ್ದರೂ ಪ್ರಯಾಸಭಯದಿಂದ ಕರ್ಮಲೋಪ ಮಾಡುವುದು ರಾಜಸತ್ಯಾಗ. ಚುನಾವಣೆಯ ಸ್ಥಳಕ್ಕೆ ಹೋಗಿ, ಉಮೇದುವಾರರ ಪೈಕಿ ಯಾರು ಯೋಗ್ಯನೆಂದು ತನ್ನ ಮನಸ್ಸಾಕ್ಷಿಗೆ ತೋರುತ್ತದೆಯೋ ಅವನಿಗೆ–ಅವನಿಗೆ ಜಯವೋ ಅಪಜಯವೋ ಹೇಗಾದರಾಗಿಕೊಳ್ಳಲಿ, ಅವನು ಅರ್ಹನು–ಎಂದು ವೋಟು ಕೊಡುವವನ ತ್ಯಾಗ–ಫಲಾಫಲ ಚಿಂತೆಯನ್ನು ಬಿಡುವ ತ್ಯಾಗ–ಸಾತ್ತ್ವಿಕತ್ಯಾಗ. ಅವನು ತತ್ತ್ವನಿಷ್ಠ.

ನಮ್ಮ ಊರಿನ ಕೊಳಚು ರೊಚ್ಚುಗಳ ವಿಷಯ ನೋಡೋಣ. "ಯಾರೇನು ಮಾಡುವುದಕ್ಕಾಗುತ್ತದೆ; ಬೆಂಕಿಬಿದ್ದು ಹೋಗಲಿ" –ಎನ್ನುವ ಚಿಂತಾತ್ಯಾಗ ತಾಮಸ ತ್ಯಾಗ.

ಬೀದಿಮೂಲೆಗಳಲ್ಲಿ ನಿಂತು ಮ್ಯುನಿಸಿಪಾಲಿಟಿಯ ಮೇಲೆ ಗೊಣಗುಟೀಕೆ ಮಾಡಿ ಅಷ್ಟಕ್ಕೆ ಕೈಬಿಡುವ ತ್ಯಾಗ ರಾಜಸತ್ಯತ್ಯಾಗ. ಮಾತಿನಲ್ಲಿ ಮುಗಿದುಹೋಗುತ್ತದೆ ಇವರ ರಾಷ್ಟ್ರಕಪ್ರೇಮ. ಇನ್ನು ಕೆಲವರು ಸಜ್ಜನರಿರುತ್ತಾರೆ. ಅವರು ವರದಿ ವಿವರಣೆ ಬರೆದು, ಪ್ರಕಟಿಸಿ, ಅಧಿಕಾರಿಗಳನ್ನು ಚುಚ್ಚಿ ಎಬ್ಬಿಸುವ ಚಟುವಟಿಕೆಯಲ್ಲಿ ತೋರುವ ಶ್ರಮಭಯತ್ಯಾಗವೂ ನಿಷ್ಠುರಭಯತ್ಯಾಗವೂ ಸಾತ್ತ್ವಿಕತ್ಯಾಗಗಳು.

***

ನಾವು ಮಾಡಿದ ಕರ್ಮ ಎಂಥಾದ್ದೇ ಆಗಲಿ, ಅದಕ್ಕೊಂದು ಫಲವಿರಲೇ ಇರುತ್ತದೆ. ಯಾರಿಗೆ? ಫಲಸಂಗಿಗೆ; ಫಲತ್ಯಾಗಿಗಲ್ಲ.

> ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
> ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥

ಹೀಗೆ ದುಃಖವೂ ಸಂತೋಷವೂ ಉಭಯಮಿಶ್ರವೂ ಫಲಾಪೇಕ್ಷೆಯಿಂದ ಕರ್ಮ ಮಾಡುವವನಿಗೆ ಇಹದಲ್ಲೋ ಪರದಲ್ಲೋ ಉಂಟೇ ಉಂಟು. ತ್ಯಾಗಿಯಾದವನಿಗೆ-ಸಂನ್ಯಾಸಿಗೆ–ಅದಿಲ್ಲ. ಏಕೆಂದರೆ ತ್ಯಾಗಿಯೂ ಸಂನ್ಯಾಸಿಯೂ ಕಾಮನೆಗಳನ್ನೂ ಫಲಚಿಂತನೆಗಳನ್ನೂ ತ್ಯಜಿಸಿದವರು: ಅವರು ಬೇಡವೆಂದದ್ದು ಅವರ ಪಾಲಿಗಿಲ್ಲ.

ನಾವು ಅಂಥಾ ಧೀರರೋ? ಅಲ್ಲ. ಭಗವಂತನ ಉಪದೇಶ ಬೇಕಾಗಿರುವುದು ನಮ್ಮಂಥ ಲೋಕಾಸಕ್ತರಿಗೆ. ನಾವು ಫಲಾಫಲಚಿಂತಕರು. ಆದದ್ದರಿಂದ ನಾವು ತಿಳಿದುಕೊಳ್ಳಬೇಕಾಗಿದೆ ಕರ್ಮದ ಅಂಗವಿವರಣೆ ಫಲವಿವರಣೆಗಳನ್ನ. ಕರ್ಮದ ಬಾಧ್ಯತೆ ಯಾರಿಗೆ ಸೇರಿದ್ದು? ಕರ್ಮದ ಪರಿಣಾಮಕಾರಣಗಳು ಯಾರುಯಾರು–ಯಾವಯಾವುವು? ಕರ್ತನೆ? ಕಾರಕನೆ? ಪ್ರೇರಕನೆ? ಅನುಮೋದಕನೆ? ಸಹಾಯಕರ್ತರೆ? ಕಾರ್ಯಸಂವಿಧಾನವೆ? ನಮಗೆ ಈ ಫಲಾಫಲಕಾರಣವಿವರಣೆ ಅವಶ್ಯವಾಗಿದೆ. ಯಾವ ಒಂದು ಕರ್ಮವೂ ಯಾವೊಬ್ಬ ಮನುಷ್ಯನಿಂದಲೂ ಅನ್ಯಸಹಾಯವಿಲ್ಲದೆ ಆಗತಕ್ಕದ್ದಲ್ಲ. ಅನೇಕ ಜನವಸ್ತುಸಹಕಾರದಿಂದ ಆಗತಕ್ಕದ್ದು ಕರ್ಮ. ಅದು ದೊಡ್ಡದಾಗಲಿ, ಸುಲಭದ್ದಾಗಲಿ, ಸಣ್ಣದಾಗಲಿ, ಕಷ್ಟದ್ದಾಗಲಿ,

ಎಂಥಾದ್ದಾದರಾಗಲಿ, ಅದರಲ್ಲಿ ಅನೇಕ ಮಂದಿ ಭಾಗಸ್ಥರಿರುತ್ತಾರೆ. ಆ ಭಾಗಸ್ಥರನ್ನು ಐದು ಗುಂಪಾಗಿ ವಿಂಗಡಿಸಬಹುದು.

> ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
> ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥

ಈ ಶ್ಲೋಕವನ್ನು ಅರ್ಥಮಾಡಿಕೊಳ್ಳುವುದರಲ್ಲಿ ನಾವು ನಮ್ಮ ಪೂರ್ವವ್ಯಾಖ್ಯಾನಕಾರರುಗಳ ದಾರಿಯಿಂದ ಸ್ವಲ್ಪ ಬೇರೆಯಾದ ದಾರಿಯನ್ನು ಹಿಡಿಯಬೇಕಾಗಿದೆಯೆಂದು ನನಗನ್ನಿಸುತ್ತದೆ; ಅದೇಕೆಂದರೆ ಅವರಿಗೂ ನಮಗೂ ಇರುವ ದೃಷ್ಟಿಭೇದದ ಕಾರಣದಿಂದ. ನಮ್ಮ ಪೂರ್ವಾಚಾರ್ಯರುಗಳ ದೃಷ್ಟಿಯಲ್ಲಿ ಮೋಕ್ಷಸಿದ್ಧಿಯು ಮುಖ್ಯ ವಿಷಯ; ಜೀವನ ಕರ್ಮವು ಗೌಣವಿಷಯ. ಅಸ್ಮದ್ವಿಧರ ದೃಷ್ಟಿಯಲ್ಲಿ ಜೀವನಕರ್ಮವು ಮುಖ್ಯ ವಿಷಯ; ಮೋಕ್ಷವು ಸದ್ಯಕ್ಕೆ ಗೌಣವಿಷಯ. ನೆಲ ತುಳಿದ ಮೇಲಲ್ಲವೆ ಮಹಡಿ ಹತ್ತುವ ಯೋಚನೆ? ಅಟ್ಟಕ್ಕೆ ಹತ್ತಲಾರದವರು ಗಗನಕ್ಕೆ ಹಾರಿಯಾರೆ? ಮತಾಚಾರ್ಯರುಗಳಿಗೆ ಮೋಕ್ಷ ಸಮೀಪ, ಕರ್ಮ ದೂರ; ನಮಗಾದರೋ ಕರ್ಮ ಸಮೀಪ, ಮೋಕ್ಷ ದೂರ. ಅವರಿಗೆ ಅನ್ವಯಿಸುವುದು ನಮಗೆ ಅನ್ವಯಿಸಲಾರದು. ಸಂನ್ಯಾಸಿಗಳ ಸದ್ಯಶ್ಚಿಂತೆ ಕರ್ಮ ವಿಸರ್ಜನೆಯಲ್ಲಿ; ಸಂಸಾರಿಗಳ ಸದ್ಯಶ್ಚಿಂತೆ ಸತ್ಕರ್ಮಾಚರಣೆಯಲ್ಲಿ. ಸಂಸಾರವೆಂದರೆಯೇ ಕರ್ಮ–ನಾನಾ ವೈದಿಕ ಲೌಕಿಕ ಕರ್ಮಕಲಾಪ.

ಸಂಸಾರಿಗಳು ಹೀಗೆ ಸಂನ್ಯಾಸಿಗಳಿಂದ ವಿಲಕ್ಷಣರಾದದ್ದರಿಂದ ಕರ್ಮಪ್ರಸ್ತಾವದಲ್ಲಿ ಸಂಸಾರಿಗಳ ಕುತೂಹಲಾದರಗಳು ಸಂನ್ಯಾಸಿಗಳದಕ್ಕಿಂತ ಬೇರೆಯಾಗಿರುತ್ತವೆ. ಆದರೆ ಈ ಸಂಸಾರಿಪಕ್ಷದಿಂದ ಮೇಲಣ ಕರ್ಮಾವಯವವಾಕ್ಯಕ್ಕೆ ತೋರಿಬರುವ ಅರ್ಥವು ಸಂನ್ಯಾಸಪಕ್ಷಕ್ಕೆ ಪ್ರತಿಕೂಲವಾದದ್ದಾಗಲಿ ಅಸಂಗತವಾದದ್ದಾಗಲಿ ಅಲ್ಲ. ನಮ್ಮ ದಾರಿ ಆ ದಾರಿಯಿಂದ ಬೇರೆಯಾದದ್ದಷ್ಟೇ ಹೊರತು ಅದಕ್ಕೆ ವಿರೋಧವಾದದ್ದಲ್ಲ. ಈ ಹೊಸ ದಾರಿ ಈಗಣ ಕಾಲದವರಿಗೆ ಹೆಚ್ಚಿನ ಸಾಮಂಜಸ್ಯವನ್ನು ಕೊಡುತ್ತದೆ. ಈಗ ಶ್ಲೋಕದ ಮಾತುಗಳನ್ನು ಒಂದೊಂದಾಗಿ ನೋಡೋಣ.

1. **ಅಧಿಷ್ಠಾನಂ:** ಪೂರ್ವಿಕರು ಇದಕ್ಕೆ ಶರೀರವೆಂದು ಹೇಳಿದ್ದಾರೆ. ಮುಂದಿನ ಶ್ಲೋಕದಲ್ಲಿ “ಶರೀರವಾಙ್ಮನೋಭಿಃ” ಎಂದು ಸ್ಪಷ್ಟವಾಗಿರುವುದರಿಂದ “ಅಧಿಷ್ಠಾನಂ” ಎಂಬ ಪದಕ್ಕೆ

ಶರೀರವೆಂದು ಅದೇ ಅರ್ಥ ಹೇಳುವುದರಲ್ಲಿ ಸ್ವಾರಸ್ಯ ಕಡಮೆ. ಪುನರುಕ್ತಿಯ ಆವಶ್ಯಕತೆ ಇಲ್ಲಿಲ್ಲ. ಅದಕ್ಕೆ ಬದಲಾಗಿ “ಅಧಿಷ್ಠಾನಂ” ಎಂದರೆ ಪ್ರೇರಕಕಾರಕಸನ್ನಿವೇಶ ಎಂದು ಹೇಳುವುದು ಯುಕ್ತವಾಗುತ್ತದೆ. ಅದು ಇಂಗ್ಲಿಷಿನಲ್ಲಿ ಹೇಳುವಂತೆ ಸಿಚ್ಯುಯೇಷನ್ (Situation, Circumstances) –ಸಂದರ್ಭಪರಿಸ್ಥಿತಿ. ಕರ್ಮಪ್ರವೃತ್ತಿಯನ್ನು ಆ ಸಂದರ್ಭವು ಪ್ರಚೋದಿಸುತ್ತದೆ. “ಅಧಿಷ್ಠಾನಂ” ಎಂದರೆ ಕರ್ಮಾಧಾರಸಂದರ್ಭ; ಕಾರ್ಯ ಸನ್ನಿವೇಶ.

2. **ಕರ್ತಾ:** ಇಲ್ಲಿ ಪೂರ್ವಿಕರಿಗೂ ನಮಗೂ ಅಭಿಪ್ರಾಯಭೇದವಿಲ್ಲ. “ಕರ್ತಾ” ಎಂದರೆ ಮಾಡತಕ್ಕವನು, ಯಾರು ಕರ್ಮವನ್ನು ಕೈಕೊಂಡಿರುತ್ತಾನೋ ಆ ಮನುಷ್ಯ. ಅವನೇ ಕಾರ್ಯಾಕಾರ್ಯಫಲಬಾಧ್ಯನು. “ಕರ್ತಾ” ಎಂಬುದರಲ್ಲಿ ಜೀವಲಕ್ಷಣೋಪಾಧಿಗಳು– ಪೂರ್ವಜನ್ಮಗಳ ಪುಣ್ಯಪಾಪಶೇಷಗಳು, ಅವುಗಳ ಋಣಾನುಬಂಧಗಳು, ಮನೋವಾಸನೆಗಳು, ತ್ರಿಗುಣಮಿಶ್ರಣಗಳು ಇವೆಲ್ಲ–ಸೇರಿರುತ್ತವೆಂಬುದನ್ನು ಜ್ಞಾಪಕದಲ್ಲಿರಿಕೊಳ್ಳಬೇಕು. “ಕರ್ತಾ” ಎಂಬುದು ಶುದ್ಧಾತ್ಮವಲ್ಲ; ಕರ್ಮವಾಸನಾಬದ್ಧವಾದ ಜೀವ. ಆದದ್ದರಿಂದಲೇ ಫಲಾಫಲಬಾಧ್ಯತೆ. ಶುದ್ಧಾತ್ಮಕ್ಕೆ ಕರ್ತೃತ್ವ ಭೋಕ್ತೃತ್ವಗಳಿಲ್ಲ. ನಾನಾ ಪೂರ್ವವಾಸನಾಋಣಸಂಚಯಸಮೇತನಾದ ಜೀವನು “ಕರ್ತಾ”.
3. **ಕರಣಂ ಚ ಪೃಥಗ್ವಿಧಮ್:** ಬೇರೆಬೇರೆ ಬಗೆಯ ಉಪಕರಣ ಸಾಧನಗಳು. ಪೂರ್ವಿಕರು ಕರಣವೆಂದರೆ ಚಕ್ಷುರಾದಿ ಇಂದ್ರಿಯಗಳೆಂದು ಅರ್ಥ ಮಾಡಿದ್ದಾರೆ. ಆದರೆ, ಮೇಲೆ ನೋಡಿದಂತೆ, ಈ ಇಂದ್ರಿಯಪ್ರಸ್ತಾವ ಮುಂದಿನ ಶ್ಲೋಕದ “ಶರೀರ ವಾಙ್ಮನೋಭಿಃ” ಎಂಬುದರಲ್ಲಿ ಅಡಗಿದೆ. ಆದಕಾರಣ ಬೇರೆ ಅರ್ಥಕ್ಕೆ ಇಲ್ಲಿ ಅವಕಾಶವುಂಟು. ಒಂದು ಕೆಲಸಕ್ಕೆ ಸಹಾಯಕರ್ತರಾಗಿ ನಿಂತ ಜನವೂ ವಸ್ತುಸಾಮಗ್ರಿಯೂ ಒಟ್ಟಿಗೆ ಉಪಕರಣ ಅಥವಾ ಸಾಧನಸಂಪತ್ತು.
4. **ವಿವಿಧಾಶ್ಚ ಪೃಥಕ್ಚೇಷ್ಟಾ:** ಪೂರ್ವಿಕರು ಇಲ್ಲಿ ಪ್ರಾಣಾಪಾನಾದಿ ವಾಯುಗಳಿಂದ ಆದ ಉಚ್ಛ್ವಾಸ ನಿಃಶ್ವಾಸ ಜೃಂಭಣ ವಿಕ್ಷಾವಾದಿ ವಾತವಿಕಾರಗಳೆಂದು ಭಾವಿಸಿದ್ದಾರೆ. ಕರ್ಮದ ಫಲಾಫಲಗಳಿಗೆ ಈ ಆಕಳಿಕೆ ತೂಕಡಿಕೆಗಳು ಕಾರಣವೆಂದು ಹೇಳುವುದಕ್ಕಿಂತ ಬೇರೆ ಹೇಳುವುದು ಯುಕ್ತ ಕಾಣುತ್ತದೆ. ಪ್ರಾಣಾಪಾನಾದಿ ವಾತಚಲಿತಗಳು “ಶರೀರವಾಕ್” ಎಂಬ ಮುಂದಿನ ಪದದಲ್ಲಿ ಅಂತರ್ಗತವಾಗಿವೆ. ಚೇಷ್ಟೆಯೆಂಬ ಮಾತಿಗೆ ಉಪಾಯಯೋಜನೆ ಎಂಬ ಅರ್ಥ ಸಾಧುವಾಗುತ್ತದೆ. ಇಂಗ್ಲಿಷಿನಲ್ಲಿ

ಯಾವುದನ್ನು Plan of action, programme, policy, strategy, tactics ಎಂದು ಮೊದಲಾಗಿ ಹೇಳುತ್ತಾರೋ ಆ ವಿಧಾನ, ಆ ಸಂಧಾನ, ಆ ನಯನೀತಿಯೇ ಇಲ್ಲಿ ಸಂಗತವಾದದ್ದು. ಚದುರಂಗದ ಆಟದಲ್ಲಿ ಪ್ಯಾದೆ ನಡಸುವ ಚಮತ್ಕಾರ ಹೇಗೋ ಹಾಗೆ. "ವಿವಿಧಾಶ್ಚ ಪೃಥಕ್ಚೇಷ್ಟಾಃ" ಎಂದರೆ ಸಾಮ ದಾನ ಭೇದ ದಂಡಾದಿ ನಾನಾ ಕಾರ್ಯೋಪಾಯಗಳು, ಕಾರ್ಯನೀತಿ.

5. **ದೈವಂ:** ಪೂರ್ವವ್ಯಾಖ್ಯಾನಕರ್ತರು ಇದಕ್ಕೆ ಚಕ್ಷುರಾದೀಂದ್ರಿಯವರ್ಗದ ಅಭಿಮಾನದೇವತೆಗಳಾದ ಸೂರ್ಯಚಂದ್ರಾದಿಗಳು, ಅಥವಾ ಜೀವದ ಅಂತರ್ಯಾಮಿಯಾದ ಚೈತನ್ಯ ಎಂದು ಹೇಳಿದ್ದಾರೆ. ಇಷ್ಟು ಮಾತ್ರದಿಂದ ಕರ್ಮಫಲಸಂಗತಿಯನ್ನು ಕುರಿತು ಯಾವ ವಿಶೇಷಾಂಶವನ್ನೂ ತೋರಿಸಿದಂತಾಗಲಿಲ್ಲ. ಸೂರ್ಯಚಂದ್ರಾದಿ ದಿವ್ಯಶಕ್ತಿಗಳೂ ಅಂತರ್ಯಾಮಿಚೈತನ್ಯವೂ ಇವೆ; ಅವು ಖಂಡಿತವಾಗಿ ಇವೆ; ಕರ್ಮದಲ್ಲಿ ಭಾಗಿಗಳಾಗಿಯೂ ಇವೆ–ಎಂಬುದು ಸರ್ವವಿದಿತವಾಗಿದೆ. "ಶರೀರವಾಙ್ಮನೋಭಿಃ" ಎಂಬ ಪದದಲ್ಲಿ ವಿವಕ್ಷಿತವಾದದ್ದು ಮೃತಶರೀರವಲ್ಲ. ಜೀವಂತ ಶರೀರ. ಜೀವವಿದ್ದ ಮೇಲೆ ಇಂದ್ರಿಯಗಳೂ ತದಭಿಮಾನದೇವತೆಗಳೂ ಅಂತರಾತ್ಮವೂ ಸ್ವತಸ್ಸಿದ್ಧವಾಗುತ್ತವೆ, ಅವುಗಳಲ್ಲದೆ ಹೇಳಲ್ಪಡಬೇಕಾದ ವಸ್ತು ಬೇರೊಂದಿದೆ. ಅದು ಜಗದ್ವಿಧಿ, ಅದೇ ದೈವ. ಯೋಗ ವಾಸಿಷ್ಠದಲ್ಲಿ ಹೀಗಿದೆ:

ಪ್ರಾಕ್ತನಂ ಪೌರುಷಂ ತದ್ವೈ ದೈವಶಬ್ದೇನ ಕಥ್ಯತೇ ॥

ಕರ್ಮದಲ್ಲಿ ಭಾಗಸ್ಥರಾದವರೂ ಕರ್ಮಫಲದಲ್ಲಿ ಭಾಗಸ್ಥರಾಗಬೇಕಾದವರೂ ತಮ್ಮತಮ್ಮ ಪೂರ್ವಾರ್ಜಿತದಂತೆ ಪಡೆಯಬೇಕಾಗುವ ಸತ್ಫಲದುಷ್ಫಲಗಳನ್ನು ವಿಧಾಯಕ ಮಾಡುವ ಅಧಿಕಾರಶಕ್ತಿ ಯಾವುದುಂಟೋ ಅದೇ ದೈವ. ಅದೇ ವಿಧಿ. ಅದು ಜಗನ್ನಿಯಮಾಧಿದೇವತೆ. ಭಗವಂತ ಹನ್ನೊಂದನೆಯ ಅಧ್ಯಾಯದಲ್ಲಿ–

ಮಯೈವೈತೇ ನಿಹತಾಃ ಪೂರ್ವಮೇವ ॥

"ನೀನು ಯುದ್ಧ ಮಾಡದೆಹೋದರೆ ಯುದ್ಧವೇನೂ ನಿಂತುಹೋಗುವುದಿಲ್ಲ; ಯಾರು ಯಾರು ನಿನ್ನಿಂದ ಹತರಾಗಬೇಕಾಗಿಯೋ ಅವರು ನೀನು ಯುದ್ಧ ಮಾಡದೆಹೋದರೆ ಜೀವಂತರಾಗಿ

ಉಳಿಯುತ್ತಾರೆಂದು ತಿಳಿಯಬೇಡ; ಅವರನ್ನೆಲ್ಲ ಆಗಲೇ ಕೊಂದದ್ದಾಗಿದೆ” –ಎಂದು ಹೇಳಿದಾಗ ಇನ್ನೂ ನಡೆಯದಿದ್ದ ಯುದ್ಧದ ಫಲಿತಾಂಶವನ್ನು ತತ್ಪೂರ್ವದಲ್ಲಿಯೇ ಯಾವ ಸರ್ವವಿಧಾಯಕ ಅಧಿಕಾರಿ ಗೊತ್ತುಮಾಡಿತ್ತೋ ಅದೇ “ದೈವ”. ಯಾವ ಸರ್ವಶಕ್ತನನ್ನು ವೇದವು–

> ಯಾಥಾತಥ್ಯತೋಽರ್ಥಾನ್ ವ್ಯದಧಾತ್ ಶಾಶ್ವತೀಭ್ಯಃ ಸಮಾಭ್ಯಃ ।

ಎಂದೂ

> ಧಾತಾ ಯಥಾಪೂರ್ವಮಕಲ್ಪಯತ್ ॥

ಎಂದು ಸ್ಮರಿಸಿದೆಯೋ ಆ ವಿಧಾತನೇ “ದೈವ”. ಅದನ್ನೇ ನಾವು ಅದೃಷ್ಟ, ವಿಧಿ, ಪ್ರಾಚೀನ, ಪ್ರಾಪ್ತಿ, ನಿಯತಿ, ಯೋಗ, ಹಣೆಯಬರಹ, ಪುರಾಕೃತ ಮೊದಲಾದ ಹೆಸರುಗಳಿಂದ ಕರೆಯುತ್ತೇವೆ. “ದೈವ” ಎಂದರೆ ಜಗನ್ನಿಯಂತ್ರಣಶಾಸನ, ಜಗನ್ನಿಯಾಮಕ ವಿಧಿ–ಎಂದು ಹೇಳಿದರೆ ಸಮಂಜಸವಾಗುತ್ತದೆ. ಯಾವುದನ್ನು ಇಂಗ್ಲಿಷಿನಲ್ಲಿ ಡೆಸ್ಟಿನಿ (Destiny, Providence) ಎನ್ನುತ್ತಾರೋ ಅದು ವಿಧಿ, ವಿಧಾತ, “ದೈವ”.

ದೈವಶಬ್ದಕ್ಕೆ ಬೇರೆ ಬೇರೆ ಕಡೆಗಳಲ್ಲಿ ಬೇರೆಬೇರೆ ಅರ್ಥವಿದ್ದರೂ ಒಟ್ಟಿನಲ್ಲಿ ಆ ಎಲ್ಲ ಅರ್ಥಗಳೂ ಅದೃಷ್ಟ ಎಂಬುದರಲ್ಲಿ ಪರ್ಯವಸಾನವಾಗುತ್ತದೆ. ಕರ್ಮವಿಧಿ, ಭಗವದನುಗ್ರಹ–ಇವೆರಡೂ ಅದೃಷ್ಟದ ಎರಡು ಪ್ರಕಾರಗಳು. ಎರಡೂ ಪ್ರತ್ಯಕ್ಷದರ್ಶನಕ್ಕೆ ಸಿಕ್ಕತಕ್ಕವಲ್ಲ. ಮಹಾಭಾರತದ ಆದಿಪರ್ವದ ಈ ಕೆಳಗಣ ವಾಕ್ಯವು ಇಲ್ಲಿ ಮನನೀಯವಾಗಿದೆ:

> ದೈವೇ ಪುರುಷಕಾರೇ ಚ ಲೋಕೋಽಯಂ ಸಂಪ್ರತಿಷ್ಠಿತಃ ।
> ತತ್ರ ದೈವಂ ತು ವಿಧಿನಾ ಕಾಲಯುಕ್ತೇನ ಲಭ್ಯತೇ ॥

–ಆದಿಪರ್ವ (೧೨೨-೨೧)

ಪೂರ್ವಕರ್ಮದ ಫಲವೇ ಆಗಲಿ, ಭಗವದನುಗ್ರಹವೇ ಆಗಲಿ ನಮ್ಮ ಕಾಲಗಣನೆಗೆ ಸಿಕ್ಕತಕ್ಕವಲ್ಲ. ಅವುಗಳ ಪರಿಪಕ್ವಕಾಲ ಯಾವುದೋ ಇರುತ್ತದೆ. ಅದು ನಮಗೆ

ಗೊತ್ತಾಗಲಾರದು. ಅದರ (ಟೈಮ್ ಟೇಬಲ್) ವೇಳಾಪಟ್ಟಿಕೆಯಂತೆ ಅದು ಸ್ವತಂತ್ರವಾಗಿ ಕೆಲಸ ಮಾಡುತ್ತದೆ.

ಈ ಪಂಚಾಂಗತತ್ತ್ವವನ್ನು ಒಂದು ದೃಷ್ಟಾಂತಕ್ಕೆ ಅನ್ವಯಿಸಿ ನೋಡೋಣ. ಕುರುಕ್ಷೇತ್ರ ಯುದ್ಧದಲ್ಲಿ–

1. **ಅಧಿಷ್ಠಾನ:** ಪಾಂಡವ ಕೌರವರ ಧರ್ಮವಿಷಯಕ ವಿವಾದ. ಪಾಂಡವರಿಗೆ ಸಲ್ಲಬೇಕಾಗಿದ್ದ ರಾಜ್ಯಪದವಿಯ ನ್ಯಾಯ; ಕೌರವರಿಗೆ ಅದನ್ನು ಸಲ್ಲಿಸಲಾಗದೆಂಬವೈರ. ಈ ಧರ್ಮಕಾರಣದ ಸಂದರ್ಭವೇ ಆ ಯುದ್ಧದ ಅಧಿಷ್ಠಾನ.
2. **ಕರ್ತಾ:** ಧರ್ಮರಾಯ.
3. **ಕರಣ:** ಭೀಮಾರ್ಜುನಾದಿಗಳೂ, ಪಾಂಡವರ ಕಡೆ ಸಹಾಯವಾಗಿ ನಿಂತ ದ್ರುಪದ ಇತ್ಯಾದಿಗಳೂ ಕೌರವರ ಕಡೆ ಸಹಾಯರಾಗಿ ನಿಂತ ಭೀಷ್ಮದ್ರೋಣಾದಿಗಳೂ ಎಲ್ಲರೂ ಕರಣಕೋಟಿಯಲ್ಲಿ ಸೇರತಕ್ಕವರು.
4. **ಚೇಷ್ಟೆ, ಉಪಾಯ:** ಯುಧಿಷ್ಠಿರನು ಭೀಷ್ಮರ ಆಶೀರ್ವಾದ ಬೇಡಿದ್ದು; ದ್ರೋಣರಿಗೆ ಅಶ್ವತ್ಥಾಮವಧೆಯ ವಾರ್ತೆಯನ್ನು ಶ್ರುತಪಡಿಸಿದ್ದು; ಸೈನ್ಯಗಳ ನಾನಾ ವ್ಯೂಹರಚನೆಗಳು; ಶಸ್ತ್ರಾಸ್ತ್ರಯೋಜನಚಮತ್ಕಾರಗಳು; ಅರ್ಜುನನು ಪಾಶುಪತಾದಿ ನಾನಾ ಅಸ್ತ್ರಗಳನ್ನು ಬೇಡಿತಂದದ್ದು ಇತ್ಯಾದಿ ಸಂಧಾನೋಪಾಯಗಳು "ಪೃಥಕ್ಚೇಷ್ಟಾಃ".
5. **ದೈವ:** ಶ್ರೀಕೃಷ್ಣ ನಡಸಿದ ತಂತ್ರಸಂಧಾನಗಳು; ಮಹಾದೇವನು ಪಾಶುಪತಾಸ್ತ್ರವನ್ನು ಕೊಟ್ಟದ್ದು, ಯುದ್ಧಭೂಮಿಯಲ್ಲಿ ಭೈರವರುದ್ರನಾಗಿ ಪ್ರತ್ಯಕ್ಷ ಸಹಾಯಕ್ಕೆ ಬಂದದ್ದು– ಇದೆಲ್ಲ ದೈವ. ಇಲ್ಲಿ ಫಲಾಫಲಸಂಗ ಇಲ್ಲ–ಶ್ರೀಕೃಷ್ಣನಿಗೂ ಇಲ್ಲ, ಮಹಾದೇವನಿಗೂ ಇಲ್ಲ. ಕೇವಲ ಧರ್ಮಸಂರಕ್ಷಣೆಗಾಗಿ ಬಂದವರು ಅವರು: ಒಂದು ಧರ್ಮವಿಧಿಯನ್ನು ಲೋಕದಲ್ಲಿ ನಿಲ್ಲಿಸಬೇಕು ಎಂಬ ಮಹೋದ್ದೇಶದಿಂದ ಬಂದವರು. ದೈವವು ಧರ್ಮವಿಧಿಪರವಾದದ್ದು. (ಪು.98, 191-194 ನೋಡಿ)

ಇದರ ಭಾವವೇನು? ಮನುಷ್ಯನ ಎಲ್ಲ ಆಲೋಚನೆ ಎಲ್ಲ ಯೋಜನೆಗಳೂ ಜಗತ್ಪ್ರಯುಕ್ತವಾದ ಒಂದು ಅಮಾನುಷವಾದ ನಿತ್ಯವಿಧಿಗೆ ಒಳಪಟ್ಟಿದ್ದು–ಎಂದು; ಪೌರುಷೇಯದ ಗತಿ ಅಪೌರುಷೇಯದ ಅಧಿಕಾರಕ್ಕೊಳಪಟ್ಟಿದ್ದು–ಎಂದು.

ಒಂದು ಮದುವೆಯ ವಿಷಯದಲ್ಲಿ ಈ ಪಂಚಾವಯವಗಳು ಯಾವುವೆಂದು ನೋಡೋಣ. ಕನ್ಯೆಯ ಪ್ರಾಪ್ತವಯಸ್ಕತೆ, ತಂದೆಯ ಶಾಸ್ತ್ರೀಯಕರ್ತವ್ಯತೆ–ಇವು ಅಧಿಷ್ಠಾನ. ತಂದೆಯೇ ಕರ್ತ. ಆತ ಹುಡುಕಿ ಗೊತ್ತು ಮಾಡಿದ ವರನೇ ಕರಣ. ಮಧ್ಯಸ್ಥಗಾರರೂ ಎರಡು ಕಡೆಗಳ ಸ್ನೇಹಿತರೂ ಕರಣಕೋಟಿಯವರು. ವರನನ್ನು ಸಂಪಾದಿಸುವುದಕ್ಕಾಗಿ ಅವನ ತಂದೆತಾಯಿ ಮೊದಲಾದವರಿಗೆ ಹಾಕಿದ ಧೂಪ, ವಾಗ್ದಾನಮಾಡಿದ ವರದಕ್ಷಿಣೆ, ಒಪ್ಪಿಸಿದ ನೈವೇದ್ಯಾದಿಗಳು ವಿವಿಧ ಉಪಾಯಚೇಷ್ಟೆಗಳು. ಇನ್ನು ದೈವ, ಲಗ್ನದ ವೇಳೆಗೆ ವಧುವಿಗೋ ವರನಿಗೋ ಮೂರ್ಛೆಯೋ ಜ್ವರವೋ ಸೂತಕಾದಿದುರ್ವಾರ್ತೆಗಳೋ ಬಾರದೆ ನಿರ್ವಿಘ್ನವಾಗಿ ಮದುವೆ ನೆರವೇರುವುದು ದೈವಕೃಪೆ.

ಭೋಜನವಿಷಯವನ್ನು ನೋಡೋಣ. ಹೊಟ್ಟೆಯ ಹಸಿವೂ ನಾಲಗೆಯ ನಸೆಯೂ ಅಧಿಷ್ಠಾನ. ಹಸಿವಾದವನು ಕರ್ತ. ಅಡಿಗೆಮಾಡುವವರೂ ಪಾತ್ರೆ ಪರಿಕರಣಗಳೂ ಕರಣ. ಆ ಸಾಮಗ್ರಿಯನ್ನು ಸಂಪಾದಿಸುವುದಕ್ಕಾಗಿ ಅಂಗಡಿಯಲ್ಲಿ ಸಾಲಸೋಲಗಳಿಗಾಗಿ ಹಲ್ಲು ಕಿರಿಯುವುದೂ ಸಾಮಾನನ್ನು ಸಿದ್ಧಪಡಿಸಿಕೊಳ್ಳುವುದಕ್ಕಾಗಿ ಕೆಲಸಗಾರರನ್ನು ಪುಸಲಾಯಿಸುವುದೂ ಉಪಾಯಚೇಷ್ಟೆಗಳು. ಅಡಿಗೆ ಸಿದ್ಧವಾಗಿ ಭೋಜನಕಾಲ ಬಂದಾಗ ಊಟಕ್ಕೆಂದು ಕುಳಿತವನಿಗೆ ಹೊಟ್ಟೆಶೂಲೆ ಬಾರದಿರುವುದೂ ದುಃಖವಾರ್ತೆ ಬಾರದಿರುವುದೂ ಕಾಲಭಕ್ಷಕ ಭೇಟಿಗಾರರು (Visitors) ಬಂದು ಕಾಡಿಸದಿರುವುದೂ ದೈವಾನುಗ್ರಹ.

ದೈವಾನುಗ್ರಹದ ಉದಾಹರಣೆಗಿಂತ ದೈವಾಗ್ರಹದ ಉದಾಹರಣೆಗಳು ಎಷ್ಟೋ ಬಹುವಾಗಿ ಎಲ್ಲರ ಅನುಭವದಲ್ಲಿಯೂ ಇವೆ.

ತಾತ್ಪರ್ಯಾಂಶ ಇಷ್ಟು. ದೈವ ಪರೋಕ್ಷವಾದದ್ದು, ಆಕಸ್ಮಿಕವಾಗಿ ಬರತಕ್ಕದ್ದು, ಕಾರ್ಯಕಾರಣತರ್ಕಕ್ಕೆ ಸಿಕ್ಕಿಬೀಳದ್ದು. "ಆಕಸ್ಮಿಕ" ಶಬ್ದಾರ್ಥವೇ ಅದು: "ಕಸ್ಮಾತ್" ಎಂದರೆ ಎಲ್ಲಿಂದ ಎಂದರ್ಥ. "ಅಕಸ್ಮಾತ್" ಎಂದರೆ ಎಲ್ಲಿಂದ ಬಂದದ್ದೋ ಯಾರಿಗೂ ಗೊತ್ತಿಲ್ಲ–ಎಂದರ್ಥ. ಅದಕ್ಕೆ ಕಾರ್ಯಕಾರಣಭಾವಗಳನ್ನು ಹೇಳುವುದು ಸಾಧ್ಯವಿಲ್ಲ. ಅದು ಪ್ರತ್ಯಕ್ಷವಾಗಿಲ್ಲದ್ದರಿಂದ ಸಾಮಾನ್ಯವಾಗಿ ದೈವವನ್ನು ನಾವು ಮರೆಯುತ್ತೇವೆ. ಅದನ್ನು ನಾವು ಜ್ಞಾಪಕದಲ್ಲಿರಿಸಿಕೊಂಡು ಕರ್ಮ ಮಾಡಿದರೆ, ನಿರಾಶೆ ಒಂದು ವೇಳೆ ಬಂದರೆ ಆ ನಿರಾಶೆಯ

ಹೊಡೆತದ ವೇಗ ನಮಗೆ ದುಸ್ಸಹವಾಗುವುದಿಲ್ಲ. ದೈವವನ್ನು ಮರೆತು ಕರ್ಮಮಾಡುವವನಿಗೆ ಪ್ರಯತ್ನ ಭಂಗವಾದರೆ ಅದರ ದುಃಖ ಅವನಿಗೆ ದುರ್ಭರವಾಗುತ್ತದೆ.

ಶರೀರವಾಙ್ಮನೋಭಿರ್ಯತ್ ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥

"ಮನುಷ್ಯನು ಪ್ರಾರಂಭಮಾಡಿದ ಕೆಲಸ ದೇಹದ್ದೇ ಆಗಲಿ, ಮನಸ್ಸಿನದೇ ಆಗಲಿ–ಅದು ನ್ಯಾಯವಾದದ್ದಾಗಲಿ ತದ್ವಿರುದ್ಧವಾದದ್ದಾಗಲಿ–ಅದರ ಫಲಾಫಲಗಳಿಗೆ ಕಾರಣ ಹುಡುಕಬೇಕಾದದ್ದು ಮೇಲೆ ಹೇಳಿದ ಪಂಚಾವಯವಗಳಲ್ಲಿ".

1. **ಅಧಿಷ್ಠಾನ, ಕಾರ್ಯ ಸನ್ನಿವೇಶ:** ಅದರ ಬಲಾಬಲಗಳ ತೋಲನ ನಿಷ್ಕರ್ಷೆಗಳಲ್ಲಿ ನಾವು ಪ್ರಮಾದ ಮಾಡಿರಬಹುದು. ಆಗ ಪ್ರಯತ್ನ ಕೆಡುತ್ತದೆ.
2. **ಕರ್ತೃ:** ಅವನ ಶ್ರದ್ಧೋತ್ಸಾಹಗಳು ಬದಲಾಯಿಸಬಹುದು. ಅರ್ಜುನನೇ ಸಾಕ್ಷಿ.
3. **ಕರಣ:** ಮಿತ್ರರೂ ಸಹಾಯಕರ್ತರೂ ವ್ಯತ್ಯಾಸವಾಗಬಹುದು. ದುರ್ಯೋಧನನು ಶಲ್ಯನನ್ನು ನಂಬಿದ್ದ. ಶಲ್ಯನು ಕರ್ಣಸಾರಥಿಯಾಗಿ ಕೈಕೊಟ್ಟ. ಕರ್ಣನಲ್ಲಿ ದಿವ್ಯಾಸ್ತ್ರವಿತ್ತು. ಸಮಯಕ್ಕೆ ತೋರದೆ ಹೋಯಿತು.
4. **ಉಪಾಯಚೇಷ್ಟೆ:** ಮ್ಯಾಕ್‌ಬೆತ್ತನ ಕಥೆಯಲ್ಲಿ ಸೈನ್ಯದ ಕಾಲಾಳುಗಳು ಮರಗಳನ್ನು ಕಡಿದು ಆ ಕೊಂಬೆರೆಂಬೆಗಳನ್ನು ಮರೆಮಾಡಿಕೊಂಡು ನಡೆದರು: ಕಾಡು ನಡೆದು ಬರುತ್ತಿದೆಯೆಂದು ಶತ್ರುಗಳು ಭ್ರಮಿಸಿ ಓಡಿದರು. ಮೈಸೂರಿನ ಚರಿತ್ರೆಯಲ್ಲಿ ಒಬ್ಬ ರಾಜರು ಎತ್ತಿನ ಕೊಂಬುಗಳಿಗೆ ಪಂಜುಗಳನ್ನು ಕಟ್ಟಿಸಿ ಶತ್ರುಗಳ ಮೇಲೆ ನುಗ್ಗಿಸಿದರಂತೆ. ಶತ್ರುಗಳು ಅದನ್ನು ಕೊಳ್ಳಿದೆವ್ವಗಳ ಪಡೆಯೆಂದು ಭ್ರಮಿಸಿ ಹೆದರಿ ಓಡಿ ಹೋದರು. "ಪೃಥಕ್ಚೇಷ್ಟಾ".
5. ಈ ಮೇಲಣ ನಾಲ್ಕು ಕಾರ್ಯಾಂಗಗಳೂ ಮನುಷ್ಯಾಧೀನಗಳು. ಅವೆಲ್ಲ ಸರಿಯಾಗಿದ್ದರೂ ದೈವ ಅನುಕೂಲವಾಗದಿದ್ದರೆ ಎಲ್ಲ ವ್ಯರ್ಥ.

ಸರ್ವಂ ನಿಷ್ಫಲಿತಂ ತದೇವ ವಿಧಿನಾ ದೈವೇ ಬಲೇ ದುರ್ಬಲೇ ॥

ದೈವವು ಪ್ರತಿಕೂಲವಾಗುವುದೇಕೆ? ಪ್ರಸಕ್ತ ಕರ್ಮದ ಸಂಬಂಧವುಳ್ಳ ಎಲ್ಲರ ಪೂರ್ವ ಕರ್ಮಗಳೂ ಪ್ರತ್ಯೇಕವಾಗಿಯೋ ಸಾಮೂಹಿಕವಾಗಿಯೋ ಪ್ರತಿಕೂಲವಾಗಿರುವುದರಿಂದ ಕರ್ಮವು ಬಹುಶಃ ಏಕವ್ಯಕ್ತಿ ಮಾತ್ರದ್ದಲ್ಲ. ಕರ್ಮಫಲವೂ ಏಕವ್ಯಕ್ತಿ ಮಾತ್ರದ್ದಲ್ಲ.

ಒಂದು ಮಹಾಕರ್ಮದಲ್ಲಿ ಸಾವಿರ ಮಂದಿಯ ಅದೃಷ್ಟಗಳು ಸೇರಿಕೊಂಡಿರಬಹುದು. ನಮ್ಮಲ್ಲಿ ತೀರ್ಥಯಾತ್ರೆಗೆ ಹೊರಡುವವರೂ ದೇವಸ್ಥಾನ ಕಟ್ಟಿಸುವುದು ಮೊದಲಾದ ಪುಣ್ಯಕಾರ್ಯಗಳಲ್ಲಿ ತೊಡಗುವವರೂ ಮೊದಲು ನಾಲ್ಕು ಮನೆಗಳಿಂದ ಭಿಕ್ಷೆ ತೆಗೆದುಕೊಳ್ಳುವುದು ಪೂರ್ವದಿಂದ ಬಂದಿರುವ ರೂಢಿ. ಏಕೆ? ಭಿಕ್ಷೆ ನೀಡುವವರಲ್ಲಿ ಕೆಲವರಾದರೂ ಪುಣ್ಯವಂತರಿರಬಹುದು; ಅವರ ಪುಣ್ಯದಿಂದ ಆ ಕಾರ್ಯ ನಿರ್ವಿಘ್ನವಾಗಿ ನಡೆಯಲಿ–ಇದು ಅಭಿಪ್ರಾಯ. ಒಬ್ಬ ಕರ್ತ, ಸಾವಿರಮಂದಿ ಸಹಕಾರಿಗಳು, ಅನುಮೋದಕರು. ಇವರಿಗೆ ಫಲದಲ್ಲಿ ಭಾಗವುಂಟು. ಹೀಗೆ ಸಾಮೂಹಿಕ ಕರ್ಮಫಲಿತವಾಗಿ ದೈವ ಬರುತ್ತದೆ.

> ಕರ್ತಾ ಕಾರಯಿತಾ ಚೈವ ಪ್ರೇರಕಶ್ಚಾನುಮೋದಕಃ ।
> ಸುಕೃತೇ ದುಷ್ಕೃತೇ ಚೈವ ಚತ್ವಾರಃ ಸಮಭಾಗಿನಃ ॥

ದೈವವು ವಿಶ್ವಧರ್ಮಪರಿಪೋಷಣೆಗಾಗಿ ವ್ಯಕ್ತಿ ಕರ್ಮಫಲಾಫಲಗಳನ್ನು ಬದಲಾಯಿಸಬಹುದು. ದೈವದ ಮಾತು ಹಾಗಿರಲಿ. ಅದು ಮನುಷ್ಯ ಪರೀಕ್ಷೆ ವಿಚಾರಣೆಗಳಿಗೆ ಸಿಕ್ಕತಕ್ಕದ್ದಲ್ಲ. ಮನುಷ್ಯಾಧೀನಗಳಾದ ನಾಲ್ಕು ಅಂಶಗಳನ್ನು ಈಗ ನೋಡೋಣ. ಕರ್ಮಸಿದ್ಧಿಗೆ ಆ ಚತುರಂಶಗಳೂ ಅನುಕೂಲವಾಗಿ ಸಹಕರಿಸಬೇಕು. ಅವುಗಳಲ್ಲಿ ಯಾವ ಒಂದು ಕೆಟ್ಟರೂ ಕಾರ್ಯವು ವ್ಯರ್ಥವಾಗಬಹುದು, ವಿಷಮವೇ ಆದರೂ ಆಗಬಹುದು.

1. ಅಧಿಷ್ಠಾನವು ಅಥವಾ ಸಂದರ್ಭವು ಮೊದಲು ಅನುಕೂಲವೆಂದು ತೋರಿದ್ದು ಕರ್ಮಾನುಷ್ಠಾನದಲ್ಲಿ ಮಧ್ಯೆ ಪ್ರತಿಕೂಲಿಸಬಹುದು.
2. ಕರ್ತನಿಗೇ ಬುದ್ಧಿ ಬದಲಾಗಬಹುದು ಅಥವಾ ಶಕ್ತಿ ಇಳಿದುಹೋಗಬಹುದು.
3. ಅವನ ಕರಣಗಳು, ಎಂದರೆ ಸಹಾಯಸಾಮಗ್ರಿ ಕೆಟ್ಟುಹೋಗಬಹುದು.
4. ಮೂರೂ ಸರಿಯಾಗಿದ್ದರೂ ಅವನ ಕಾರ್ಯವಿಧಾನದಲ್ಲಿ ದೋಷವಿರಬಹುದು. ಹೀಗೆ ಒಂದು ಕರ್ಮ ಸಫಲವಾಗುವುದಕ್ಕಾಗಲಿ ನಿಷ್ಫಲವಾಗುವುದಕ್ಕಾಗಲಿ ದುಷ್ಫಲವೇ

ಆಗುವುದಕ್ಕಾಗಲಿ ಕಾರಣವು ಕರ್ತನೊಬ್ಬನೇ ಅಲ್ಲ. ಅವನ ಸಹಭಾಗಿಗಳು ಇತರ ಮೂವರೂ–ಅಥವಾ ಆ ಮೂರರಲ್ಲಿ ಯಾರೋ ಒಬ್ಬರೋ ಇಬ್ಬರೋ ಕಾರಣವಿರಬಹುದು. ದೈವವನ್ನು ವಿನಾಯಿಸಿದರೂ ಮಾನುಷಕಾರಣಗಳಿಂದಲೇ ಕೆಲಸ ಕೆಡಬಹುದು.

ತತ್ರೈವಂ ಸತಿ ಕರ್ತಾರಂ ಆತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾತ್ ನ ಸ ಪಶ್ಯತಿ ದುರ್ಮತಿಃ ॥

“ವಸ್ತುಸಂಗತಿ ಹೀಗೆ ಬಹುಮಂದಿಯದಾಗಿರಲಾಗಿ ತಾನೇ–ತಾನೊಬ್ಬನೇ–ತನ್ನೊಳಗಣ ಜೀವಾತ್ಮವೇ–ಕರ್ತನೆಂದು ಯಾರು ತಿಳಿದುಕೊಳ್ಳುತ್ತಾನೋ ಅವನು ಬುದ್ಧಿಸಂಸ್ಕಾರವಿಲ್ಲದವನು. ಅಂಥ ಮೂರ್ಖನಿಗೆ ಯಥಾರ್ಥ ತಿಳಿಯಲಾರದು”.

ಇಲ್ಲಿ ಎರಡಂಶ:

1. ಕರ್ತನು ತಾನೊಬ್ಬನಾಗಿ ಇಲ್ಲ; ಅವನೊಡನೆ ಸೇರಿದ ಭಾಗಸ್ಥರು ಇತರರಿದ್ದಾರೆ.
2. ತಾನು ಎಂಬುದೂ ಜೀವಾಂಶವೇ ಹೊರತು ಕೇವಲ ಆತ್ಮವಲ್ಲ.

ಯಾವುದು ಒಂದು ಜೀವದೊಳಗಣ ಆತ್ಮವೋ ಅದೇ ಎಲ್ಲ ಜೀವಕೋಟಿಯೊಳಗೂ ಇರುವ ಆತ್ಮಚೈತನ್ಯ. ಆತ್ಮಚೈತನ್ಯವು ಅಖಂಡವಾಗಿ ಏಕಾಕಾರವಾಗಿ ಅವಿಚ್ಛೇದ್ಯವಾಗಿರುತ್ತದೆ. ಯಾರು ಈ ಗೂಢವಾದ ಸಾರ್ವಾತ್ಮ್ಯವನ್ನು ಕಂಡುಕೊಂಡಿದ್ದಾನೋ ಅವನು ಜೀವದ ಕರ್ತೃಕಾರ್ಯಸಂಬಂಧಗಳನ್ನು ಅಮುಖ್ಯವೆಂದು, ಗೌಣವೆಂದು, ಕಾರ್ಯಾವಸರಕ್ಕೆ ಒಳಪಟ್ಟದ್ದೆಂದು, ಹಾಗೆ ಪ್ರಾಸಂಗಿಕಮಾತ್ರದ್ದೆಂದು, ಆದದ್ದರಿಂದ ತಾತ್ಕಾಲಿಕವೆಂದು, ಶಾಶ್ವತವಾದದ್ದಲ್ಲವೆಂದು ಭಾವಿಸುತ್ತಾನೆ.

ಧರ್ಮದ ಪ್ರಶ್ನೆ ಬಂದದ್ದರಿಂದ ತಾನೆ ಈ ವಿಷಯ ಪ್ರಸಕ್ತವಾದದ್ದು? ದುರ್ಯೋಧನನು ಧರ್ಮಿಷ್ಠನಾಗಿ, “ನಿಮಗೆ ಸಲ್ಲಬೇಕಾದದ್ದನ್ನು ಕೊಟ್ಟುಬಿಡುತ್ತೇನೆ, ತೆಗೆದುಕೊಂಡು ಹೋಗಿ” ಎಂದು ನಡೆದುಕೊಂಡಿದ್ದಿದ್ದರೆ ಭಾರತ ಕಥೆಯೇ ನಮಗೆ ತಪ್ಪಿಹೋಗುತ್ತಿತ್ತು. ಭಗವದ್ಗೀತೆಯೇ ನಮಗೆ ದೊರಕುತ್ತಿರಲಿಲ್ಲ. ಆದದ್ದರಿಂದ ದುರ್ಯೋಧನನ ದುರ್ಬುದ್ಧಿಗೋಸ್ಕರ ನಾವು

ಭಗವಂತನನ್ನು ಕೊಂಡಾಡಬೇಕಾಗಿದೆ! ದೈವ ತಂತ್ರಕ್ಕೆ ದುರ್ಯೋಧನನ ದುರ್ಬುದ್ಧಿ ನಿಮಿತ್ತಕಾರಣವಾಯಿತು.

ಆತ್ಮಕ್ಕೆ ಬಂದಿರತಕ್ಕ ಜೀವಾವಸ್ಥೆ ಶಾಶ್ವತವಾದದ್ದಲ್ಲ–ಜೀವಿಯ ಕರ್ತೃತ್ವ ಶಾಶ್ವತವಾದದ್ದಲ್ಲ– ಎಂದು ಜ್ಞಾನಿ ತಿಳಿದುಕೊಳ್ಳುತ್ತಾನೆ.

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾನ್ ಲೋಕಾನ್ ನ ಹನ್ತಿ ನ ನಿಬಧ್ಯತೇ ॥

"ಯಾರಲ್ಲಿ ಕರ್ಮಮಾಡುವವನು ನಾನು ಎಂಬ ಅಹಂಕಾರವಿಲ್ಲವೋ, ಯಾರ ಬುದ್ಧಿಯು ಫಲಾಫಲಚಿಂತನೆಯ ಲೇಪವನ್ನಂಟಿಸಿಕೊಂಡಿಲ್ಲವೋ ಅಂಥವನು ಈ ಲೋಕಗಳನ್ನೆಲ್ಲ ವಧೆ ಮಾಡಿದರೂ ಅವನು ವಧೆ ಮಾಡಿದವನಾಗನು. ಅವನಿಗೆ ಅದು ಸಂಕೋಲೆಯಾಗದು". ಇದು ಅಧಿಧರ್ಮಿಯ ಲಕ್ಷಣ. ಈ ಅಧಿಧರ್ಮವನ್ನು ಮುಂದೆ ನೋಡುವುದಾಗುತ್ತದೆ.

ಇತರ ಜನ ಮಾಡಿದ ವಧೆಯು ಪಾತಕ; ಅದೇ ಕಾರ್ಯವನ್ನು ಜ್ಞಾನಿ ಮಾಡಿದಾಗ ಅದು ಪಾತಕವಾಗದು. ಏಕೆಂದರೆ ಇತರ ಮನುಷ್ಯರ ಆಶೆಯ ಕಾರಣವು ಅಹಂಕಾರ ಮಮಕಾರಗಳು; ಜ್ಞಾನಿಗೆ ಅಹಂಕಾರ ಮಮಕಾರಗಳಿಲ್ಲ. ಜ್ಞಾನಿಯ ಆಶಯ ಸರ್ವಜೀವಸದ್ಗತಿ. ಸರ್ವಜೀವಸದ್ಗತಿಗೆ ಸರ್ವಲೋಕವಧೆ ಅವಶ್ಯವಾದೀತೋ?–ಎಂದರೆ, ಭಗವದ್ವಾಕ್ಯ ಅದು ಅವಶ್ಯವೆಂದು ಹೇಳಿಲ್ಲ. ತತ್ತ್ವವನ್ನು ಒತ್ತಿಹೇಳುವುದಕ್ಕಾಗಿ ಅದು ಒಂದು ಉತ್ಪ್ರೇಕ್ಷಾಲಂಕಾರವನ್ನು ಉಪಯೋಗಿಸಿದೆ. ಆಲಂಕಾರಿಕ ಭಾಷೆಗೆ ಅಕ್ಷರಾರ್ಥ ಸಲ್ಲದು; ತಾತ್ಪರ್ಯಾರ್ಥವೇ ಅಲ್ಲಿ ಸಲ್ಲತಕ್ಕದ್ದು.

ಆತ್ಮತತ್ತ್ವಜ್ಞನು ಪಾಪಿಯಾಗುವುದು ಅಸಾಧ್ಯ; ಏಕೆಂದರೆ ಅವನಲ್ಲಿ ಸ್ವಾರ್ಥಚಿಂತೆ ಪರದ್ವೇಷಗಳಿಲ್ಲ. ಒಂದು ವೇಳೆ ಅವನು ಅಹಂಕಾರಿಗಳು ಮಾಡುವ ದುಷ್ಟಕಾರ್ಯವನ್ನು ಮಾಡಿದರೂ ಆ ಕಾರ್ಯದಲ್ಲಿ ದುಷ್ಟತ್ವವಿರುವುದಿಲ್ಲ. ಪ್ರತಿಯಾಗಿ ಯಾವುದೋ ಸುಷ್ಠುತ್ವವೇ ಇರುತ್ತದೆ. ಸರ್ವಭೂತಹಿತವೊಂದೇ ಆತ್ಮಸ್ವರೂಪಜ್ಞನಿಗಿರಬಹುದಾದ ಆಶಯ. ಆದದ್ದರಿಂದ ಅವನು ಪಾಪಸಂಭವವೇ ಇಲ್ಲದವನು.

ಒಳ್ಳೆಯದು ಕರ್ಮದ ಪಂಚಾಂಗನಿರೂಪಣೆಯಲ್ಲಿ–

ದೈವಂ ಚೈವಾತ್ರ ಪಂಚಮಮ್ ॥

ಎಂದು ದೈವವನ್ನು ಪ್ರತ್ಯೇಕಿಸಿ ಹೇಳಿದೆಯಲ್ಲ–ಈ ವಿಶೇಷಾಂಗವಾದ ದೈವಕ್ಕೆ ಮಿಕ್ಕ ನಾಲ್ಕಂಗಗಳ ಮೇಲೆ ಅಧಿಕಾರವಿಲ್ಲವೋ? ಸನ್ನಿವೇಶ, ಕರ್ತಾ, ಕರಣ, ತಂತ್ರಸಾಧನ–ಈ ನಾಲ್ಕರಲ್ಲಿ ಯಾವುದಾದರೂ ಪ್ರತಿಕೂಲವಾಗಿದ್ದರೆ ಅದನ್ನು ಅನುಕೂಲಪಡಿಸುವ ಅಥವಾ ಅನುಕೂಲವಾಗಿದ್ದರೆ ಅದನ್ನು ಪ್ರತಿಕೂಲಪಡಿಸುವ ಶಕ್ತಿ ದೈವಕ್ಕಿಲ್ಲವೋ? ದೈವ ಸರ್ವಸಮರ್ಥವಾದದ್ದಲ್ಲವೋ? ಎಂದರೆ ಉತ್ತರ ಹೀಗೆ:

ಕರ್ಮದ ಎಲ್ಲ ಪೌರುಷಾಂಶಗಳನ್ನೂ ದೈವ ಪೂರ್ತಿಯಾಗಿ ವಶಪಡಿಸಿಕೊಳ್ಳಲಾಗದು. ಕೊಂಚ ಭಾಗದಲ್ಲಿ ಪೌರುಷಾಂಶವು ದೈವವಶವಾಗಿದ್ದರೂ ಪೌರುಷವೆಲ್ಲವೂ ದೈವಾಧೀನವಾಗದು. ಕರ್ಮದ ಎಲ್ಲ ಅವಯವಗಳನ್ನು ದೈವವೇ ಸ್ವಾಧೀನ ಪಡಿಸಿಕೊಂಡಿದ್ದಾದರೆ ಆಗ ಮನುಷ್ಯನ ಭಾಗಕ್ಕೆ ಉಳಿಯುವುದೇನು? ಅವನಿಗೆ ಆಗ ಪುಣ್ಯಪಾಪಗಳು ಹೇಗೆ ಉಂಟಾದಾವು? ಆಗ ಕರ್ತಾ ಎಂಬ ಕರ್ಮಾಂಗದ ಕರ್ತೃತ್ವವೇ ಇಲ್ಲದೆ ಹೋಗುತ್ತದೆ. ಮನುಷ್ಯನಿಗೆ ಪುಣ್ಯಪಾಪಗಳುಂಟು. ಪುಣ್ಯಪಾಪಗಳಿದ್ದ ಮೇಲೆ ಫಲ ಬಾಧ್ಯತೆ (ಜವಾಬ್ದಾರಿ) ಸ್ವಾತಂತ್ರ್ಯಗಳುಂಟೇ ಉಂಟು; ಸ್ವಂತ ವಿವೇಕಾಧಿಕಾರ ಉಂಟು. ಕರ್ಮದಲ್ಲಿ ಪುರುಷಭಾಗ ಮುಖ್ಯವಾಗಿದ್ದರೆಯೇ ತಾನೆ ಪುರುಷನಿಗೆ ಪುಣ್ಯಾಪುಣ್ಯಸಂಬಂಧ? ಕರ್ತನು ಹೀಗೆ ಯುಕ್ತಾಯುಕ್ತ ವಿವೇಚನೆಯ ವಿಷಯದಲ್ಲಿ ಅಷ್ಟಿಷ್ಟು ಸ್ವತಂತ್ರನು. ಮನುಷ್ಯನಿಗೆ ತನ್ನ ಪ್ರಗತಿ ದುರ್ಗತಿಗಳನ್ನು ಸ್ವಬುದ್ಧಿಯಿಂದ ಕಂಡು ಸಂಪಾದಿಸಿಕೊಳ್ಳುವಷ್ಟು ಸ್ವಾತಂತ್ರ್ಯವುಂಟೆಂದು ಬ್ರಹ್ಮಸೂತ್ರಾದಿ ಪ್ರಮಾಣ ವಾಕ್ಯಗಳಿವೆ:

ಕರ್ತಾ ಶಾಸ್ತ್ರಾರ್ಥವತ್ತ್ವಾತ್ ॥

ಶಾಸ್ತ್ರ ಏನು ಹೇಳಿದೆ? ಪುಣ್ಯಪಾಪಗಳುಂಟೆಂದು ಹೇಳಿದೆ; ಫಲಾಫಲಗಳುಂಟೆಂದು ಹೇಳಿದೆ; ಸುಖದುಃಖಗಳು ಧರ್ಮಾಧರ್ಮಗಳಿಗನುಸಾರವಾಗಿರುತ್ತವೆಂದು ಹೇಳಿದೆ. ಆದದ್ದರಿಂದ ಈ ಧರ್ಮಾಧರ್ಮಭೋಧನೆಗೆ ಸಾರ್ಥಕತೆ ಬರಬೇಕಾದರೆ ಧರ್ಮಾಧರ್ಮಗಳನ್ನು ಗ್ರಹಿಸಿ, ಸನ್ನಿವೇಶವಿವೇಕದಿಂದ ಇದು ಧರ್ಮ, ಇದು ಅಧರ್ಮ ಎಂದು ನಿರ್ಣಯ ಮಾಡುವ ಅಧಿಕಾರ ಮನುಷ್ಯನಿಗಿರಬೇಕು. ಆ ಸ್ವಾತಂತ್ರ್ಯ ಮನುಷ್ಯನಿಗೆ ಇಲ್ಲದೆ ಹೋದರೆ ಅವನು ಧರ್ಮಕ್ಕಾಗಲಿ ಅಧರ್ಮಕ್ಕಾಗಲಿ ಹೊಣೆಗಾರನಾಗುವುದಿಲ್ಲ.

ಈ ಸೂತ್ರದ ಮೇಲಿನ ರಾಮಾನುಜಾಚಾರ್ಯರ ಭಾಷ್ಯದ ಮಾತುಗಳನ್ನು ನೋಡೋಣ. ತ್ರಿಮಸ್ಥರಿಗೂ ಅಭಿಪ್ರಾಯಭೇದವಿರುವುದು ಯಾರಿಗೂ ರುಜುವಾತು ಕೊಡುವುದು ಸಾಧ್ಯವಿಲ್ಲದಿರುವ ಭಾಗದಲ್ಲಿ. ರುಜುವಾತು ಕೊಡುವುದು ಸಾಧ್ಯವಿರುವ ಭಾಗದಲ್ಲಿ ಅವರವರಲ್ಲಿ ಏನೂ ತಕರಾರಿಲ್ಲ. ಹೀಗಿದೆ ಭಗವದ್ರಾಮಾನುಜರ ವಚನ:

> ಶಾಸನಾಚ್ಚ ಶಾಸ್ತ್ರಮ್ । ಶಾಸನಂ ಚ ಪ್ರವರ್ತನಮ್ । ಶಾಸ್ತ್ರಸ್ಯ ಚ ಪ್ರವರ್ತಕತ್ವಂ ಬೋಧಜನನದ್ವಾರೇಣ । ಅಚೇತನಂ ಚ ಪ್ರಧಾನಂ ನ ಬೋಧಯಿತುಂ ಶಕ್ಯಮ್ । ಅತಃ ಶಾಸ್ತ್ರಾಣಾಮರ್ಥವತ್ತ್ವಂ ಭೋಕ್ತುಶ್ಚೇತನಸ್ಯೈವ ಕರ್ತೃತ್ವೇ ಭವೇತ್ ॥
> ಆತ್ಮನಃ ಅಕರ್ತೃತ್ವೇ "ಕುರ್ಯಾತ್", "ನ ಕುರ್ಯಾತ್" ಇತಿ ಶಾಸ್ತ್ರಾನರ್ಥಕ್ಯಂ ಸ್ಯಾತ್ ॥
> ಸ್ವರ್ಗಾಪವರ್ಗಸಾಧನಾನುಷ್ಠಾನವಿಧಾನಶಾಸ್ತ್ರಾಣಾಮ್ ಅರ್ಥವತ್ತ್ವಾಯ, ಕರ್ತೈವಾತ್ಮಾ। ಬೋದ್ಧುರೇವ ಹಿ ಶಾಸನಮ್ ॥

ಶಾಸನವೆಂದರೆ ಆಳುವುದು, ಶಾಸ್ತ್ರವು ನಮ್ಮನ್ನು ಆಳುತ್ತದಾದದ್ದರಿಂದ ಅದಕ್ಕೆ ಆ ಹೆಸರು. ಹೀಗೆ ನಡೆ, ಹಾಗೆ ನಡೆ ಎಂದು ಹೇಳುವುದು ಪ್ರವರ್ತನ. ಶಾಸ್ತ್ರ ಹೇಗೆ ಪ್ರವರ್ತನ ಮಾಡುತ್ತದೆ? "ಬೋಧಜನನದ್ವಾರೇಣ" –ಜ್ಞಾನವುಂಟುಮಾಡುವುದರಮೂಲಕ. ಶಾಸ್ತ್ರವು ಜ್ಞಾನವನ್ನೊದಗಿಸಿ, ಈ ರೀತಿ ಮಾಡು, ಆ ರೀತಿ ಮಾಡಬೇಡ ಎಂದು ಪ್ರೇರಣೆ ಮಾಡುತ್ತದೆ. ಸ್ವಾತಂತ್ರ್ಯ ಇಲ್ಲದ ಜಡವಸ್ತುವಿಗೆ ಬೋಧನೆ ಮಾಡಿ ಏನು ಪ್ರಯೋಜನ? "ಅಚೇತನಂ ಚ ಪ್ರಧಾನಂ ನ ಬೋಧಯಿತುಂ ಶಕ್ಯಮ್" –ಸ್ವತಂತ್ರ ಶಕ್ತಿ ಯಾವುದಕ್ಕಿಲ್ಲವೋ ಅಂಥಾದ್ದಕ್ಕೆ ಬೋಧನೆ ಮಾಡಿ ಫಲವಿಲ್ಲ. "ಅತಃ ಶಾಸ್ತ್ರಾಣಾಂ ಅರ್ಥವತ್ತ್ವಮ್ ಭೋಕ್ತುಶ್ಚೇತನಸ್ಯೈವ ಕರ್ತೃತ್ವೇ ಭವೇತ್" : ಯಾರು ಫಲವನ್ನು ಉಣ್ಣತಕ್ಕವನೋ, ಫಲಭೋಕ್ತೃವೋ ಅವನ ಕರ್ತೃತ್ವದಿಂದ ಶಾಸ್ತ್ರಗಳ ಅರ್ಥವಂತಿಕೆ. ಯಾರಿಗೆ ಕ್ರಿಯಾ ಸ್ವಾತಂತ್ರ್ಯ ಉಂಟೋ ಅಂಥವನಿಗೆ ಇದನ್ನು ಮಾಡು, ಅದನ್ನು ಮಾಡಬೇಡ ಎಂದು ಹೇಳುವುದು ಸಾರ್ಥಕವಾಗುತ್ತದೆ–ಹಾಗೆ ಮಾಡುವ ಅಥವಾ ಬಿಡುವ ಸ್ವಾತಂತ್ರ್ಯ ಅವನಿಗಿರೋಣದರಿಂದ. ಮಾಡತಕ್ಕದ್ದನ್ನು ಅವನು ಸ್ವಂತ ಇಷ್ಟದಿಂದ ಮಾಡುತ್ತಾನೆ; ಬಿಡತಕ್ಕದ್ದನ್ನು ಸ್ವಂತ ಇಷ್ಟದಿಂದ ಬಿಡುತ್ತಾನೆ. ಆದದ್ದರಿಂದ ಮಾಡಿದ್ದರ ಪುಣ್ಯಪಾಪಗಳು ಬಿಟ್ಟಿದ್ದರ ಪುಣ್ಯಪಾಪಗಳು ಅವನಿಗಂಟಿಕೊಳ್ಳುತ್ತವೆ. "ಆತ್ಮನಃಅಕರ್ತೃತ್ವೇ 'ಕುರ್ಯಾತ್', 'ನ ಕುರ್ಯಾತ್' ಇತಿ ಶಾಸ್ತ್ರಾನರ್ಥಕ್ಯಂಸ್ಯಾತ್" –ಕಾರ್ಯ ಮಾಡತಕ್ಕ ಕ್ರಿಯಾ ಸ್ವಾತಂತ್ರ್ಯ ಇಲ್ಲದೆ ಹೋದರೆ ಹೀಗೆ ಮಾಡು, ಹಾಗೆ ಮಾಡಬೇಡ ಎಂದು

ಹೇಳಿದ ಮಾತು ನಿರರ್ಥಕ ತಾನೆ? ಯಾರಿಗೆ ಆ ಮಾತು ಹೇಳಲ್ಪಡುತ್ತದೆಯೋ ಅವನಿಗೆ ಆ ಮಾತನ್ನು ನಡೆಸುವುದಕ್ಕೇ ಆಗಲಿ ಬಿಡುವುದಕ್ಕೇ ಆಗಲಿ ಸ್ವಾತಂತ್ರ್ಯ ಇಲ್ಲದೆ ಹೋದರೆ ವಿಧಿಪ್ರತಿಷೇಧರೂಪವಾದ ಧರ್ಮಶಾಸ್ತ್ರವೆಲ್ಲ ಪ್ರಯೋಜನಾವಕಾಶವಿಲ್ಲದೆ ವ್ಯರ್ಥವಾಗುತ್ತದೆ. "ಬೋದ್ಧ್ಯರೇವ ಹಿ ಶಾಸನಮ್" : ಯಾರು ಬೋಧನೆಗೆ ಅರ್ಹನಾಗಿರುತ್ತಾನೋ ಅವನಿಗೆ ಮಾತ್ರ ಶಾಸ್ತ್ರ. ಆ ಅರ್ಹತೆ ಅವನಿಗೆ ಇಲ್ಲದೆ ಹೋದರೆ ಅವನಿಗೆ ಮಾಡಿದ ಬೋಧನೆ ಕಲ್ಲಿಗೋ ಗೋಡೆಗೋ ಮಾಡಿದಂತೆ. ಹೇಳಿದ ಮಾತನ್ನು ನಡೆಸುವುದಕ್ಕೇ ಆಗಲಿ ಉಲ್ಲಂಘನೆ ಮಾಡುವುದಕ್ಕೇ ಆಗಲಿ ಯಾರಿಗೆ ಸ್ವಾತಂತ್ರ್ಯ ಉಂಟೋ ಅವನಿಗೇ ಶಾಸ್ತ್ರ ಹೇಳತಕ್ಕದ್ದು. ಅದನ್ನು ಉಲ್ಲಂಘನೆ ಮಾಡಿದರೆ ಅದರ ಪಾಪಕ್ಕೆ ಅವನು ಗುರಿಯಾಗುತ್ತಾನೆ; ಅದಕ್ಕೆ ವಿಧೇಯನಾಗಿ ನಡೆದುಕೊಂಡರೆ ಆ ಪುಣ್ಯಕ್ಕೆ ಅವನು ಫಲಭಾಗಿಯಾಗುತ್ತಾನೆ. ಆದದ್ದರಿಂದ ಪುಣ್ಯಪಾಪಗಳು ಯಾರಿಗೆ? ಕ್ರಿಯಾ ಸ್ವಾತಂತ್ರ್ಯ ಯಾರಿಗುಂಟೋ ಅವನಿಗೆ. ಕ್ರಿಯೆ ಎಂದರೆ ಇಲ್ಲಿ ಕಾರ್ಯಾಕಾರ್ಯವಿವೇಕ, ಧರ್ಮಾಧರ್ಮವಿವೇಕ. ಈ ವಿವೇಚನೆ ಯಾರಿಗುಂಟೋ ಅವನಿಗೆ ಶಾಸ್ತ್ರವನ್ನು, ಎಂದರೆ ವಿಧಿನಿಷೇಧಗಳನ್ನು, ಹೇಳಿ ಪ್ರಯೋಜನ. ಈ ಸ್ವಾತಂತ್ರ್ಯ ಇರೋಣದರಿಂದಲೇ ಧರ್ಮಶಾಸ್ತ್ರಗಳು, ನಿಬಂಧನೆಗಳು, ಲೋಕವ್ಯವಸ್ಥೆಗಳು ಅವಶ್ಯಕವಾಗಿರುವುದು. ಮನುಷ್ಯನಿಗಿರತಕ್ಕ ಸ್ವಾತಂತ್ರ್ಯ ಮಿತವಾದದ್ದೇನೋ ಹೌದು. ಏಕೆ? ದೈವದ ಕಾರಣದಿಂದ. ಆದರೆ ಎಷ್ಟು ಸ್ವಾತಂತ್ರ್ಯ ಉಂಟೋ ಅಷ್ಟನ್ನು ಅವನು ಕಾರ್ಯಾಕಾರ್ಯವಿವೇಕಕ್ಕಾಗಿ ಉಪಯೋಗಪಡಿಸಿಕೊಳ್ಳಬೇಕು.

ಪ್ರತಿಯೊಂದು ಕರ್ಮದ ಚರಿತ್ರೆಯಲ್ಲಿಯೂ ಮೂರು ಘಟ್ಟಗಳಿರುತ್ತವೆ. ಪ್ರಾರಂಭ, ಪ್ರವರ್ತನ, ಪರಿಣಾಮ. ಈ ಮೂರರಲ್ಲಿ ಪರಿಣಾಮ ಘಟ್ಟವು ಬಹುಶಃ ದೈವಕ್ಕೆ ಸೇರಿದ್ದು. ಮಿಕ್ಕೆರಡು–ಪ್ರಾರಂಭ, ಪ್ರವರ್ತನ ಇವು–ಮುಖ್ಯವಾಗಿ ಪುರುಷಾಧೀನಗಳು. ಆ ಎರಡು ಘಟ್ಟಗಳ ಸ್ವರೂಪ ಎಂಥಾದ್ದು? ಪ್ರಾರಂಭವು ಅಂತರಂಗದ್ದು–ಜ್ಞಾನಕ್ಷೇತ್ರದ್ದು. ಪ್ರವರ್ತನೆಯು ಬಹಿರಂಗದ್ದು–ಕ್ರಿಯಾಕ್ಷೇತ್ರದ್ದು. ಆದದ್ದರಿಂದ ಈಗ ಜ್ಞಾನಕ್ರಿಯಾ ಕ್ಷೇತ್ರಗಳ ವಿವರಣೆಯನ್ನು ಅನುಗ್ರಹಿಸುತ್ತಾನೆ ಸ್ವಾಮಿ:

> ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।।

ಕರ್ಮಪ್ರೇರಣೆ ಮೂರು ಅಂಶಗಳ ಸಂಯೋಗದಿಂದ ಆಗತಕ್ಕದ್ದು: ತಿಳಿವಳಿಕೆ, ತಿಳಿಯಲ್ಪಡುವ ವಿಷಯ, ತಿಳಿದವನು. ಇದನ್ನೇ "ಜ್ಞಾತ ಜ್ಞೇಯಂ ಪರಿಜ್ಞಾನಂ" ಎಂದಾದರೂ

ಹೇಳಬಹುದು. ನೆಲುವಿನ ಮೇಲೆ ಮುಚ್ಚಿಟ್ಟಿರುವ ಪಾತ್ರೆಯಲ್ಲಿ ಭಕ್ಷ್ಯವಿದೆ. ಇದು ಜ್ಞೇಯ. ಅದು ಹುಡುಗನಿಗೆ ಗೊತ್ತಾಗುತ್ತದೆ. ಅವನು ಜ್ಞಾತಾ. ಅದು ಭಕ್ಷ್ಯದ ಘಮಲಿನಿಂದ ಗೊತ್ತಾದದ್ದು. ಆ ಘಮಲು ಆ ಪಾತ್ರೆಯಿಂದ ಹೊರಟು ಅವನ ಮೂಗನ್ನು ತಲಪಿ, ಆ ಇಂದ್ರಿಯದ ಮೂಲಕ ಮನಸ್ಸನ್ನು ಕೆರಳಿಸಿದ್ದು ಜ್ಞಾನ. ತಿಂಡಿ, ಮೂಗು, ಮನಸ್ಸು ಇವುಗಳ ಸಂಸರ್ಗದಿಂದ ಲಡ್ಡುಕಾತಸ್ಕರಕರ್ಮಪ್ರೇರಣೆ. ಈ ಪ್ರೇರಣೆ ಅಂತರಂಗದೊಳಗೆ ಆಗುವ ಕೆಲಸ. ಅದಾದಮೇಲೆ ಬಹಿರಂಗದ್ದು:

> ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ॥

ಆ ನೆಲುವನ್ನು ಕೈಗೆಟುಕಿಸಿಕೊಳ್ಳಲು ಏರ್ಪಟ್ಟ ಏಣಿ ಮೊದಲಾದ ಸಾಧನಗಳು ಕರಣ; ಪಾತ್ರೆಯೊಳಕ್ಕೆ ಕೈಹಾಕಿ ಭಕ್ಷ್ಯವನ್ನು ತೆಗೆದು ಬಾಯೊಳಕ್ಕೆ ತುರುಕಿದ್ದು ಕರ್ಮ; ಆ ಬಳಿಕ ನಾಲಗೆ ಚಪ್ಪರಿಸಿದವನು ಕರ್ತಾ. ಹೀಗೆ ಕರ್ಮಪೂರಣಕ್ಕೆ ಬೇಕಾದ ಅಂಶಗಳು ಮೂರು.

ಕರ್ಮಚೋದನೆಯು ಜ್ಞಾತಾ, ಜ್ಞಾನ, ಜ್ಞೇಯ ಎಂಬ ಅಂತರಂಗದ ಮೂರಂಶಗಳಿಂದ; ಕರ್ಮಸಾಧನೆಯು ಕರ್ತಾ, ಕರಣ, ಕರ್ಮ ಎಂಬ ಬಹಿರಂಗದ ಮೂರಂಶಗಳಿಂದ. ಒಂದಂಶ ಎರಡು ವರ್ಗಗಳಿಗೂ ಸಮಾನವಾದದ್ದು. ಮೊದಲು ಜೀವಕ್ಕೆ ಜ್ಞಾನಲಾಭವಾಗುತ್ತದೆ. ಆಮೇಲೆ ಜ್ಞಾನದಿಂದ ಕರ್ಮಪ್ರಯತ್ನ ನಡೆಯುತ್ತದೆ.

> ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ ॥

ಇಲ್ಲಿ ಗುಣವೆಂದರೆ ಸತ್ತ್ವರಜಸ್ತಮೋಗುಣಗಳು. ಅವುಗಳ ಭೇದಗಳನ್ನನುಸರಿಸಿದುವು ನಮ್ಮ ಎಲ್ಲ ವ್ಯಾಪಾರಗಳು. ಆದದ್ದರಿಂದ ಜ್ಞಾನ, ಕರ್ಮ, ಕರ್ತಾ—ಈ ಮೂರು ಕರ್ಮಾಂಗಗಳಲ್ಲಿಯ ಗುಣಭೇದಗಳನ್ನು ಈಗ ನಿರೂಪಿಸುವುದಾಗುತ್ತದೆ.

ಮೊದಲು ಜ್ಞಾನತ್ರೈವಿಧ್ಯ.

> ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
> ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥

“ಸಮಸ್ತಪ್ರಾಣಿಗಳಲ್ಲಿಯೂ ಏಕೈಕವೂ ನಿರ್ವಿಕಾರವೂ ಆಗಿರುವ ಆತ್ಮಚೈತನ್ಯವು ವ್ಯಾಪಿಸಿರುವುದನ್ನೂ, ಬೇರೆಬೇರೆ ವಿಭಾಗವಾಗಿರುವ ನಾನಾ ದೇಹಗಳಲ್ಲಿ ಆ ಆತ್ಮವು ಅವಿಭಾಗವಾಗಿ ಅವಿತುಕೊಂಡಿರುವುದನ್ನೂ ಯಾರು ಕಾಣುತ್ತಾನೋ ಅವನ ಜ್ಞಾನವು ಸಾತ್ತ್ವಿಕವಾದದ್ದು.” ಇದು ಪರಮಾರ್ಥತತ್ತ್ವದ ಸಂಪೂರ್ಣಾನುಭವಜ್ಞಾನ.

ಈ ಅಖಂಡವಸ್ತುವಿನ ತಿಳಿವಿಲ್ಲದೆ ನಾನಾ ಜೀವಜಂತುಗಳು ಅನ್ಯೋನ್ಯಸಂಬಂಧವಿಲ್ಲದ ಪ್ರತ್ಯೇಕಭೂತಗಳೆಂದು ಭಾವಿಸುವವನದು ರಾಜಸ ಜ್ಞಾನ.

ಯಾರು ಜಗತ್ತಿನ ಅಸಂಖ್ಯೇಯ ವಸ್ತುಗಳಲ್ಲಿ ಯಾವುದೋ ಒಂದು ಮಾತ್ರವೇ ಸಮಸ್ತವೂ ಎಂಬಂತೆ ನಡೆಯುತ್ತ, ಪೂರ್ಣತತ್ತ್ವವನ್ನು ಬಿಟ್ಟು ಸಣ್ಣ ಅಂಶಮಾತ್ರವನ್ನು ಗ್ರಹಿಸಿಕೊಂಡಿರುತ್ತಾನೋ ಅವನದು ತಾಮಸ ಜ್ಞಾನ.

ತತ್ತ್ವದ ಪೂರ್ಣವಿಸ್ತಾರವನ್ನು ದೃಷ್ಟಿಯಲ್ಲಿರಿಸಿಕೊಂಡದ್ದು ಜ್ಞಾನದ ಸಾತ್ತ್ವಿಕ ರೂಪ.

ಇನ್ನು ಕರ್ಮತ್ರೈವಿಧ್ಯ. ರಾಗದ್ವೇಷಗಳಿಲ್ಲದ್ದಾಗಿ, ಶಾಸ್ತ್ರಸಂಪ್ರದಾಯವಿವೇಕಗಳಿಂದ ನಿಷ್ಕರ್ಷೆಪಟ್ಟದ್ದಾಗಿ, ಅಹಂಕಾರಸಂಗವಿಲ್ಲದೆ, ಪ್ರತಿಫಲನಿರೀಕ್ಷೆಯಿಲ್ಲದೆ ಮಾಡಿದ ಕರ್ಮ ಸಾತ್ತ್ವಿಕ:

> ನಿಯತಂ ಸಂಗರಹಿತಂ ಅರಾಗದ್ವೇಷತಃ ಕೃತಮ್ ।
> ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ ॥

“ಯಾವ ಕರ್ಮವು ನಿಯತವಾದದ್ದೋ–ಎಂದರೆ ಕರ್ತವ್ಯವೋ, ಯಾವ ಕರ್ಮದಲ್ಲಿ ಅಹಂಭಾವಸಂಗವಿಲ್ಲವೋ, ಯಾವ ಕರ್ಮಕ್ಕೆ ರಾಗದ್ವೇಷಗಳು ಕಾರಣವಲ್ಲವೋ ಮತ್ತು ಯಾವ ಕರ್ಮವನ್ನು ಮಾಡುವಾತನಿಗೆ ಪ್ರತಿಫಲಾಕಾಂಕ್ಷೆ ಇಲ್ಲವೋ ಅದು ಸಾತ್ತ್ವಿಕ ಕರ್ಮವೆನಿಸುತ್ತದೆ.”

ಕರ್ಮಯೋಗದ ತತ್ತ್ವಸಮಸ್ತಕ್ಕೂ ಈ ಶ್ಲೋಕ ಸೂತ್ರವಾಗಿದೆ.

ಇನ್ನ್ಯಾವುದೋ ಆಶೆಯನ್ನಿಟ್ಟುಕೊಂಡು ಬಹು ಪ್ರಯಾಸದಿಂದ ಅಹಂಭಾವದೊಡಗೂಡಿ ಮಾಡಿದ ಕರ್ಮ ರಾಜಸ.

ಪೂರ್ವಾಪರವಿಚಾರವಿಲ್ಲದೆ, ಖರ್ಚುವೆಚ್ಚಗಳನ್ನು ಲೆಕ್ಕಿಸದೆ ಇತರರಿಗಾಗುವ ಹಿಂಸೆಯನ್ನೂ ತನ್ನ ಸಾಮರ್ಥ್ಯಕ್ಕಿರುವ ಮಿತಿಮೇರೆಗಳನ್ನೂ ಮರೆತು ಮೂರ್ಖತನದಿಂದಲೋ ಹಟದಿಂದಲೋ ಮಾಡಿದ ಕರ್ಮ ತಾಮಸ.

ಎಂದರೆ, ಯುಕ್ತಾಯುಕ್ತ ವಿವೇಕದಲ್ಲಿ ಎಚ್ಚರವಿಡುವುದು ಸಾತ್ತ್ವಿಕಕರ್ಮದ ಲಕ್ಷಣ.

ಈಗ ಕರ್ತೃತ್ರೈವಿಧ್ಯ. ಮಮತಾವ್ಯಾಮೋಹಗಳಿಂದ ಬಿಡಿಸಿಕೊಂಡು, ನಾನು ನಾನು ಎಂದುಕೊಳ್ಳುವುದನ್ನು ಮರೆತು, ಸ್ಥೈರ್ಯೋತ್ಸಾಹಸಮನ್ವಿತನಾಗಿ, ಜಯಾಪಜಯಗಳಿಂದ ವಿಕಾರಕ್ಕೊಳಗಾಗದೆ ಕರ್ಮ ಮಾಡುವವನು ಸಾತ್ತ್ವಿಕಕರ್ತೃ.

ರಾಗಮೋಹಗಳನ್ನೂ ಫಲಾಭಿಲಾಷೆಗಳನ್ನೂ ಇಟ್ಟುಕೊಂಡವನಾಗಿ, ಹಿಂಸೆಗೂ ಹೀನೋಪಾಯಗಳಿಗೂ ಹೇಸದವನಾಗಿ, ಹರ್ಷದಿಂದ ಹಿಗ್ಗುವವನೂ ಶೋಕದಿಂದ ತಗ್ಗುವವನೂ ಆದವನು ರಾಜಸಕರ್ತೃ.

ಎಚ್ಚರಿಕೆಯಿಲ್ಲದೆ, ಅಹಂಕಾರದಿಂದ ಬೀಗಿ ಕಪಟಿಯಾಗಿ, ಮರ್ಯಾದೆ ಮರೆತು, ಚಟುವಟಿಕೆಯಿಲ್ಲದೆ, ಅತ್ತುಕೊಂಡು, ಕಾಲವಿಳಂಬ ಮಾಡಿಕೊಳ್ಳುವವನು ತಾಮಸಕರ್ತೃ.

ಜ್ಞಾನ, ಕರ್ಮ, ಕರ್ತಾ—ಇವು ಕರ್ಮಪ್ರಸಂಗದಲ್ಲಿ ಮುಖ್ಯಗಳು. ಇನ್ನು ಕರ್ಮ ಸಾಧನೆಯಲ್ಲಿ ಮುಖ್ಯಗಳಾದ ಬುದ್ಧಿ ಧೃತಿಗಳ ತ್ರೈವಿಧ್ಯವನ್ನು ವಿವರಿಸುವುದಾಗುತ್ತದೆ.

> ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।
> ಬಂಧಂ ಮೋಕ್ಷಂ ಚ ಯೋ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ ॥

ಲೋಕವ್ಯವಹಾರದೊಳಕ್ಕೆ (ಪ್ರವೃತ್ತಿ) ಯಾವ ಕಾಲದಲ್ಲಿ ಪ್ರವೇಶಿಸತಕ್ಕದ್ದು, ಎಷ್ಟು ದೂರ ಪ್ರವೇಶಿಸತಕ್ಕದ್ದು; ಯಾವಾಗ (ನಿವೃತ್ತಿ) ಯಾವ ಎಲ್ಲೆಯಲ್ಲಿ ಇನ್ನು ಮುಂದಕ್ಕೆ ಹೋಗದೆ ನಿಲ್ಲಬೇಕಾದದ್ದು; ಯಾವುದು ಅವಶ್ಯಕರ್ತವ್ಯ, ಯಾವ ಕಾರ್ಯ ತ್ಯಾಜ್ಯ; ಯಾವುದಕ್ಕೆ ಹೆದರಬೇಕು, ಎಲ್ಲಿ ನಿರ್ಭೀತನಾಗಿರಬೇಕು; ಯಾವುದು ಆತ್ಮವನ್ನು (ಬಂಧ) ಕಟ್ಟಿ ಬಿಗಿದೀತು, ಯಾವುದು ಆ ಕಟ್ಟನ್ನು (ಮೋಕ್ಷ) ಸಡಿಲಿಸೀತು—ಈ ಧರ್ಮಸೂತ್ರಗಳನ್ನು ಬಲ್ಲ ಬುದ್ಧಿ ಸಾತ್ತ್ವಿಕವಾದದ್ದು.

ಧರ್ಮಾಧರ್ಮಗಳನ್ನೂ ಕಾರ್ಯಾಕಾರ್ಯಗಳನ್ನೂ ತತ್ತ್ವಾನುಸಾರವಾಗಿ ನೋಡದೆ ಆತುರದಿಂದ ತಪ್ಪುತಪ್ಪಾಗಿ ತಿಳಿದುಕೊಳ್ಳುವುದು ರಾಜಸಬುದ್ಧಿ.

ಅಧರ್ಮವನ್ನೇ ಧರ್ಮವೆಂದು ನಂಬಿಕೊಂಡು ಮಂಕುತನದಲ್ಲಿ ಎಲ್ಲವನ್ನೂ ತಲೆಕೆಳಗಾಗಿ ಕಾಣುವುದು ತಾಮಸಬುದ್ಧಿ.

ಅರ್ಜುನನಿಗೆ ಪ್ರಾರಂಭದಲ್ಲಿದ್ದದ್ದು ರಾಜಸಬುದ್ಧಿ. ಸಾತ್ತ್ವಿಕಬುದ್ಧಿಯ ಮುಖ್ಯ ಲಕ್ಷಣವು ತಾರತಮ್ಯಸೂಕ್ಷ್ಮಗ್ರಹಣ. ಆ ವಿವೇಕಗುಣವನ್ನು ಅರ್ಜುನ ಸಂಪಾದಿಸಿಕೊಳ್ಳಬೇಕಾಗಿತ್ತು.

ಧೃತಿಯೆಂದರೆ ಧರಿಸುವ ಸಾಮರ್ಥ್ಯ. ಅದರಲ್ಲಿ ಧೈರ್ಯಸ್ಥೈರ್ಯಗಳೆರಡೂ ಏಕೀಭವಿಸಿರುತ್ತವೆ.

ಮನಸ್ಸು, ಇಂದ್ರಿಯಗಳು, ಪ್ರಾಣವಾಯುಗಳು—ಇವುಗಳನ್ನು ನಿರಂತರಾಭ್ಯಾಸದಿಂದ ನಿಯಮದಲ್ಲಿರಿಸಿಕೊಳ್ಳುವ ಚಿತ್ತಸ್ಥೈರ್ಯವು ಸಾತ್ತ್ವಿಕಧೃತಿ.

ಧರ್ಮಕಾಮಾರ್ಥಗಳಿಗೆ ಸಂಬಂಧಪಟ್ಟ ಕಾರ್ಯಗಳ ವೇಳೆಯಲ್ಲಿ ಆಯಾ ಫಲಗಳನ್ನು ಮಾತ್ರ ದೃಷ್ಟಿಯಲ್ಲಿರಿಸಿದ ತಾತ್ಕಾಲಿಕವಾದ ಧೃತಿಯು ರಾಜಸ. ಗಾಂಧಿಯವರು ಬದುಕಿದ್ದಾಗ ನಾವೆಲ್ಲ ತೋರಿಸಿದ ವ್ರತಬುದ್ಧಿ ರಾಜಸಧೃತಿಗೆ ಉದಾಹರಣೆ. ಅದು ತಾತ್ಕಾಲಿಕ ಪ್ರಯೋಜನವನ್ನು ಮಾತ್ರ ಗಣಿಸತಕ್ಕದ್ದು.

ನಿದ್ದೆ, ಕನವರಿಕೆ, ಕನಸು, ಗೋಳಾಟ, ಜಂಭ ಇವುಗಳನ್ನು ಬಿಡೆನೆಂಬ ಧೃತಿ ತಾಮಸ.

ಸುಖದಲ್ಲಿಯೂ ತ್ರಿವಿಧಗಳುಂಟು.

> ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
> ತತ್ಸುಖಂ ಸಾತ್ತ್ವಿಕಂ ಪ್ರೋಕ್ತಂ ಆತ್ಮಬುದ್ಧಿಪ್ರಸಾದಜಮ್ ॥

ಮನಸ್ಸು ಯಾವ ಸಂಗತಿಯಲ್ಲಿ ನೆಲಸಿ ನಲಿದು ದುಃಖದ ಕೊನೆಯನ್ನು ಕಂಡಿರುತ್ತದೆಯೋ, ಯಾವುದು ಮೊದಮೊದಲು ಕಹಿತೋರಿ ಕಡೆಗೆ ಸಿಹಿತೋರಿ ಅಮೃತವೆನಿಸುತ್ತದೆಯೋ ಅದು ಸಾತ್ತ್ವಿಕಸುಖ. ಅದು ಆತ್ಮಬುದ್ಧಿಪ್ರಸಾದದ ಫಲ. ಆತ್ಮತತ್ತ್ವವನ್ನು ಬುದ್ಧಿಯು ಸಮಗ್ರವಾಗಿ

ಗ್ರಹಿಸಿಕೊಂಡು, ಮನಸ್ಸಿನಲ್ಲಿ ಕಲ್ಮಷವೂ ಸಂಕ್ಷೋಭೆಯೂ ಲೇಶಮಾತ್ರವೂ ಇಲ್ಲದೆ, ಪ್ರಶಾಂತಿ ಪ್ರಸನ್ನತೆಗಳಿಂದ ಉಂಟಾದ ಸುಖ ಸಾತ್ತ್ವಿಕಸುಖ.

ವಿಷಯೋಪಭೋಗದಿಂದ ಉತ್ಪನ್ನವಾಗಿ ಮೊದಮೊದಲು ಸಿಹಿಯಾಗಿ ಕಡೆಗೆ ವಿಷದಂತೆ ಕಹಿಯಾಗುವುದು ರಾಜಸಸುಖ.

ಯಾವ ಸುಖವು ನಿದ್ದೆ, ಸೋಮಾರಿತನ, ಮೈಮರೆತಗಳಿಂದ ಹುಟ್ಟಿದ್ದಾಗಿ, ಜೀವಕ್ಕೆ ಮೋಹಭ್ರಾಂತಿಗಳನ್ನುಂಟುಮಾಡುತ್ತದೆಯೋ ಅದು ತಾಮಸಸುಖ.

ಸ್ವಾರ್ಥತೆ—ಒಂದು ಟಿಪ್ಪಣಿ: ಒಬ್ಬ ಸ್ನೇಹಿತರು ಒಂದು ಪ್ರಶ್ನೆ ಕೇಳಿದ್ದಾರೆ: ಮನುಷ್ಯನಲ್ಲಿ ಸ್ವಾರ್ಥವು ಕೊಂಚ ಮಾತ್ರ ಇರಬೇಕಾದದ್ದೇ ಅಲ್ಲವೆ? ಅದಿಲ್ಲದಿದ್ದರೆ ಬದುಕು ಬೆಳವಣಿಗೆ ಹೇಗೆ?—ಎಂದು. ಉತ್ತರವನ್ನು ಮೂರಂಶಗಳಾಗಿ ಹೇಳಬಹುದು.

ಮೊದಲನೆಯದಾಗಿ, ಸ್ವಾರ್ಥವು ಸ್ವಾಭಾವಿಕವಾಗಿರುವ ಗುಣ. ಅದನ್ನು ತಂದುಕೊಳ್ಳುವುದಕ್ಕಾಗಿ ಯಾರೂ ಪ್ರಯತ್ನವನ್ನೇನೂ ಮಾಡಬೇಕಾಗಿಲ್ಲ. ಅದು ತಾನಾಗಿಯೇ ಹುಟ್ಟುಗುಣವಾಗಿ ಬಂದಿದೆ. ಅದರಿಂದ ಜೀವಕ್ಕೆ ಲಾಭನಷ್ಟಗಳೆರಡೂ ಆಗುತ್ತವೆ. ನಷ್ಟವನ್ನು ಕಡಮೆಮಾಡಿ ಲಾಭವನ್ನು ಹೆಚ್ಚುಮಾಡುವಂತೆ ಅದನ್ನು ತಿದ್ದಬೇಕೆಂಬುದು ಧರ್ಮದ ಉದ್ದೇಶ. ಧರ್ಮವು ಸ್ವಾರ್ಥವನ್ನು ಸಂಪೂರ್ಣವಾಗಿ ಅಳಿಸಿಬಿಡಬೇಕೆಂದು ಹೇಳುವುದಿಲ್ಲ. “ಅಸ್ಮಾಕಂ ಸಹಕುಟುಂಬಾನಾಂ ಕ್ಷೇಮ ಸ್ಥೈರ್ಯ ವೀರ್ಯ ವಿಜಯ ಆರೋಗ್ಯ ಸೌಭಾಗ್ಯ...” ಇತ್ಯಾದಿಯಲ್ಲವೆ ಧರ್ಮಕಾರ್ಯಸಂಕಲ್ಪ?

ಎರಡನೆಯದಾಗಿ, ಬದುಕಬೇಕಾದದ್ದು ಏತಕ್ಕೋಸ್ಕರ? ಬದುಕಿಗೋಸ್ಕರ ಬದುಕೋ, ಬೇರೆ ಉದ್ದೇಶಕ್ಕಾಗಿ ಬದುಕೋ? ಗಿಡಬಳ್ಳಿಗಳೂ ಹಾವುಹಲ್ಲಿಗಳೂ ಬದುಕಿಗೋಸ್ಕರ ಬದುಕುತ್ತವೆ. ಅಂಥಾ ಬದುಕುಗಳ ಜೊತೆಗೆ ಬೇರೆ ಉದ್ದೇಶ ಸೇರದಿದ್ದರೆ ಯಾರಿಗೆ ನಷ್ಟ? ಹಾಗಲ್ಲದೆ ಒಂದು ಬೇರೆ ಉದ್ದೇಶಕ್ಕಾಗಿ ಬದುಕಬೇಕು ಮನುಷ್ಯ—ಎಂಬುದಾದರೆ, ಆ ಉದ್ದೇಶವು ಸ್ವಾರ್ಥಕ್ಕಿಂತ ಮೇಲ್ಪಟ್ಟದ್ದಾಗಿರಬೇಕಾಗುತ್ತದೆ. ಆಗ ಬದುಕಿನ ಗುರಿ ದೊಡ್ಡದಾಗುತ್ತದೆ, ಸ್ವಾರ್ಥ ಆ ಮೇಲ್ಗುರಿಗೆ ಉಪಕರಣ ಮಾತ್ರವಾಗುತ್ತದೆ.

ಮೂರನೆಯದಾಗಿ, ಸ್ವಾರ್ಥವೂ ಸುಖಾದಿಗಳಂತೆ ತ್ರಿವಿಧವಾದದ್ದು.

ತನ್ನ ನಾಲಗೆ, ತನ್ನ ಹಾಸಿಗೆ, ತನ್ನ ಅಲಂಕಾರ, ತನ್ನ ಪ್ರತಿಷ್ಠೆ—ಇದಿಷ್ಟನ್ನೇ ನೋಡುತ್ತ, ಮಿಕ್ಕ ಜಗತ್ತು ತನ್ನ ಸುಖಕ್ಕಾಗಿ ಬೇಕಾದ ಸಾಮಾನೆಂದುಕೊಳ್ಳುವುದು ತಾಮಸಸ್ವಾರ್ಥ. ಅದು ಲೋಕದಿಂದ ತನಗೆ ಬೇಕುಬೇಕಾದದ್ದನ್ನು ತೆಗೆದುಕೊಳ್ಳುತ್ತದೆ, ಲೋಕಕ್ಕೆ ಏನನ್ನೂ ಸಲ್ಲಿಸುವುದಿಲ್ಲ—ಲೋಕಋಣವನ್ನು ತೀರಿಸುವುದಿಲ್ಲ. ಲೋಕದಿಂದ ತನಗಿಷ್ಟು ಪ್ರಯೋಜನವಾಗಿದೆಯಲ್ಲ!—ಎಂಬ ಋಣಬುದ್ಧಿಯೇ ಅದಕ್ಕಿಲ್ಲ.

ತನ್ನ ಮನೆ, ತನ್ನ ಕುಲ, ತನ್ನ ಊರು, ತನ್ನ ದೇಶ—ಎಂಬಷ್ಟುಮಟ್ಟಿಗೆ ತನ್ನತನವನ್ನು ವಿಶಾಲಗೊಳಿಸಿ, ತನ್ನವರೆಂಬವರ ಸುಖದುಃಖಗಳಲ್ಲಿ ಭಾಗಿಯಾಗಿ, ಬಾಳನ್ನು ಲೋಕದ ಒಂದು ಭಾಗದೊಡನೆ ಹಂಚಿಕೊಳ್ಳುವುದು ರಾಜಸಸ್ವಾರ್ಥ. ತಾಮಸಸ್ವಾರ್ಥಕ್ಕಿಂತ ಮೇಲ್ಪಟ್ಟದ್ದು ಇದು. ಇವರೆಲ್ಲ ನಮ್ಮವರೇ, ಇವರು ನಮಗೆ ಬೇಕಾದವರು, ಇವರೆಲ್ಲರೂ ನನ್ನ ಸುಖದುಃಖಗಳಲ್ಲಿ ಭಾಗಿಗಳಾಗಬೇಕು—ಹೀಗೆ ತಾನು, ತನ್ನದು ಎನ್ನುವುದರಲ್ಲಿ ಇತರರನ್ನು, ತನಗೆ ಬೇಕಾದವರನ್ನು, ಹತ್ತಿರದವರನ್ನು ಸೇರಿಸಿಕೊಳ್ಳುತ್ತದೆ; ಅಷ್ಟುಮಟ್ಟಿಗೆ ವಿಸ್ತಾರವಾಗುತ್ತದೆ ಈ ಸ್ವಾರ್ಥ. ಇದು ಲೋಕದಿಂದ ತನಗೆ ಬೇಕಾದಷ್ಟನ್ನು ತೆಗೆದುಕೊಳ್ಳುತ್ತದೆ, ಸಾಧ್ಯ ತೋರಿದಷ್ಟನ್ನು ಲೋಕಕ್ಕೆ ಹಿಂತಿರುಗಿಸುತ್ತದೆ.

ತನ್ನೊಳಗಣ ಆತ್ಮವೇ ಜಗದಾತ್ಮ; ಜಗತ್ತು ಭಗವಂತನ ಲೀಲಾಶರೀರ; ತನ್ನನ್ನು ತಾನು ಅದರಲ್ಲೆಲ್ಲ ಅನುಭವಿಸುತ್ತ ಮನಸಾ ಸರ್ವಮಯನಾಗಬೇಕು—ಎಂಬ ಬ್ರಹ್ಮಾನುಭವಾಭಿಲಾಷೆ ಸಾತ್ತ್ವಿಕಸ್ವಾರ್ಥ. ಅದು ತನ್ನದು ಯಾವುದೂ ಅಲ್ಲವೆಂದು ತಿಳಿದು ಎಲ್ಲವನ್ನೂ ಭಗವಂತನಿಗರ್ಪಿಸಿ ಸಂತೋಷಿಸುತ್ತದೆ, ಅಥವಾ ಎಲ್ಲವೂ ತನ್ನದೇ, ತನ್ನದಲ್ಲದ್ದೂ ತನಗೆ ವಿರೋಧವಾದದ್ದೂ ಯಾವುದೂ ಅಲ್ಲವೆಂದು ಸ್ವಾತ್ಮಸಾರ್ವಾತ್ಮ್ಯವನ್ನು ಆಚರಿಸುತ್ತದೆ. ಮಹನೀಯರಾದ ನೀಲಕಂಠದೀಕ್ಷಿತರ ಮಮತಾಪ್ರಶಂಸೆ ಇಲ್ಲಿ ನಮಗೆ ಜ್ಞಾಪಕಾರ್ಹವಾಗಿದೆ.

> ತ್ಯಕ್ತವ್ಯೋ ಮಮಕಾರಃ ತ್ಯಕ್ತುಂ ಯದಿ ಶಕ್ಯತೇ ನಾಸೌ ।
> ಕರ್ತವ್ಯೋ ಮಮಕಾರಃ ಕಿಂ ತು ಸ ಸರ್ವತ್ರ ಕರ್ತವ್ಯಃ ॥

“ಮಮಕಾರಾದಿರೂಪಿಯಾದ ಸ್ವಾರ್ಥವನ್ನು ತ್ಯಜಿಸತಕ್ಕದ್ದೇ ಸರಿ. ಆದರೂ ಅದನ್ನು ತ್ಯಜಿಸಲಾಗದೆಹೋದಾಗ ಆ ಸ್ವಾರ್ಥವನ್ನು ಆಚರಿಸುವುದೇ ಕರ್ತವ್ಯ. ಆದರೆ ಅದನ್ನು ಸರ್ವತ್ರ ಆಚರಿಸಬೇಕು.” ಸರ್ವಪ್ರಾಣಿಗಳನ್ನೂ ಸ್ವಾತ್ಮೀಯತೆಯೊಳಕ್ಕೆ ಅಂಗೀಕರಿಸಿಕೊಂಡು ಸ್ವಾರ್ಥ

ಮಾಡಬೇಕು. “ಸ್ವ” ಎಂಬುದರಲ್ಲಿ ಸಮಸ್ತ ಜಗತ್ತನ್ನೂ ಒಳಗೊಂಡಿರುವ ಸ್ವಾರ್ಥವು ಸಾತ್ತ್ವಿಕ ಸ್ವಾರ್ಥ.

ಭಗವಂತನು ಹೀಗೆ ಮನುಷ್ಯನ ಜ್ಞಾನ ಕರ್ಮ ಕರ್ತೃತ್ವಗಳಲ್ಲಿಯೂ ಬುದ್ಧಿ ಧೈರ್ಯ ಸುಖಾದಿಗಳಲ್ಲಿಯೂ ಸತ್ತ್ವಗುಣದ ಸ್ವರೂಪವನ್ನು ದೃಷ್ಟಾಂತಪಡಿಸಿ, ಅದರ ಸರ್ವೋತ್ಕೃಷ್ಟತೆಯನ್ನೂ ನಿರೂಪಿಸಿದ ಬಳಿಕ ಸತ್ತ್ವವು ಲೋಕದಲ್ಲಿ ಸಾಮಾನ್ಯವಾದದ್ದೂ ಸುಲಭವಾದದ್ದೂ ಅಲ್ಲವೆಂಬುದನ್ನು ತೋರಿಸಿದ್ದಾನೆ.

ಜೀವಕ್ಕೆ ಸ್ವಭಾವದಿಂದ ಅಂಟಿಕೊಂಡು ಬಂದಿರುವ ತ್ರಿಗುಣಮಲಗಳನ್ನು ಕಳೆದುತೊಳೆದ ಹೊರತು ಆತ್ಮಸ್ವರೂಪದರ್ಶನವಾಗದು ಎಂದು ನೋಡಿದೆವು. ಆ ಮಲವಿಮೋಚನೆ ಸುಲಭವಾಗಿ ಆಗುವ ಕೆಲಸವಲ್ಲ. ಅದು ಬೇಗಬೇಗಲೂ ಆಗುವುದಿಲ್ಲ. ಏಕೆಂದರೆ ತ್ರಿಗುಣ ಮಲಗಳು ಕೋಟ್ಯಂತರ ಪೂರ್ವಜನ್ಮಗಳಿಂದ ಬಂದಿರುತ್ತವೆ. ಅವುಗಳ ಉಪಕ್ಷಯಕ್ಕೆ ಬಹುಕಾಲದ ಸಂತತಪ್ರಯತ್ನ ಬೇಕಾಗುತ್ತದೆ, ಮತ್ತು ಆ ಪ್ರಯತ್ನದಲ್ಲಿ ಒಂದು ವಿಹಿತ ಕ್ರಮವಿರಬೇಕಾಗುತ್ತದೆ. ಆ ಕ್ರಮವೇ ಸ್ವಧರ್ಮ.

ಧರ್ಮದ ತತ್ತ್ವವೇನೆಂದು ಆಗಲೇ ನೋಡಿದ್ದೇವೆ. ಅದನ್ನು ಈಗ ಜ್ಞಾಪಕಕ್ಕೆ ತಂದುಕೊಳ್ಳೋಣ. ಜೀವಕ್ಕೂ ಜಗತ್ತಿಗೂ ನಡುವೆ ಇರಬೇಕಾದ ಅನ್ಯೋನ್ಯಹಿತ ಸಂಬಂಧವೇ ಧರ್ಮ. ಪ್ರತಿಯೊಬ್ಬ ಮನುಷ್ಯನ ಜೀವಕ್ಕೂ ಅದರ ಪೂರ್ವಕರ್ಮಫಲದ ಅಂಶವಾಗಿ ಕೆಲವು ಶಕ್ತಿಗಳೂ ಕೆಲವು ರುಚಿಪ್ರವೃತ್ತಿಗಳೂ ಸ್ವಾಭಾವಿಕವಾಗಿ ಅಂಟಿಕೊಂಡು ಬಂದಿರುತ್ತವೆ. ಈ ಶಕ್ತಿಪ್ರವೃತ್ತ್ಯಭಿರುಚಿಗಳು ತ್ರಿಗುಣಾತ್ಮಕವಾದವು. ಈ ನಾನಾ ಶಕ್ತಿಸಹಜಗುಣಗಳನ್ನು ಲೋಕಕ್ಷೇಮಕ್ಕೆ ಹೊಂದಿಸಿ ನಡೆಯಿಸುವ ಜೀವವ್ಯಾಯಾಮದಲ್ಲಿ ಮಲಗಳು ಸವೆಯುತ್ತವೆ, ಸತ್ತ್ವವು ಪ್ರಬಲಿಸುತ್ತದೆ. ಇದೇ ಧರ್ಮದ ಮುಖ್ಯ ತತ್ತ್ವ. ಒಂದು ಕಡೆ ವ್ಯಕ್ತಿಮನುಷ್ಯ—ಅವನ ಗುಣಶಕ್ತಿಗಳು, ಅವನ ಇಷ್ಟಾನಿಷ್ಟಗಳು, ಅವನ ಪಾಪಶೇಷಗಳು; ಇನ್ನೊಂದು ಕಡೆ ವಿಶ್ವಜಗತ್ತು—ಅದರ ಆಕರ್ಷಣೆಗಳು, ಅದರ ಸಂಘರ್ಷಣೆಗಳು, ಅದರ ಕಷ್ಟಕಾರ್ಪಣ್ಯಗಳು. ಈ ಎರಡು ಕ್ಷೇತ್ರಗಳ ನಡುವೆ, ಉಭಯತ್ರ ಸಮಾನವ್ಯಾಪಿಯಾಗಿರುತ್ತದೆ ಆತ್ಮಚೈತನ್ಯ. ಅದು ಇರ್ಕಡೆಗಳಲ್ಲಿಯೂ ಪ್ರಕೃತಿಯ ಮುಸುಕಿನೊಳಗೆ ಸಿಕ್ಕಿಕೊಂಡು ಗೋಚರವಾಗದೆ ಇರುತ್ತದೆ. ಆ ಆತ್ಮವಸ್ತುವೇ ತತ್ತ್ವ. ಅದನ್ನು ಅನುಭವಕ್ಕೆ—ಸಂತತಸ್ವಾನುಭವಕ್ಕೆ—ತಂದುಕೊಳ್ಳುವುದೇ ಮೋಕ್ಷ. ಆದರೆ ಪ್ರಕೃತಿಯು ಕವಿಸಿರುವ ಹೊದಿಕೆ ಅಭೇದ್ಯವಾದದ್ದು. ಪ್ರಕೃತಿಮಾಯೆ

ಪದರಪದರಗಳಾಗಿ, ಬಣ್ಣಬಣ್ಣಗಳಾಗಿ, ಹೂವಾಗಿ, ಹಣ್ಣಾಗಿ, ಗಂಡಾಗಿ, ಹೆಣ್ಣಾಗಿ, ಹೊನ್ನಾಗಿ, ಹಾಡಾಗಿ ಜೀವದ ಮುಂದೆ ಸುಳಿದಾಡಿ— "ನೋಡು, ನಾನು ಎಷ್ಟು ಸೊಗಸಾಗಿದ್ದೇನೆ; ಎಂಥ ಸುಖ ಕೊಡುತ್ತೇನೆ! ನನ್ನನ್ನು ಬಿಟ್ಟು ಹೋಗುತ್ತೀಯಾ? ಬಾ, ಬಾರೆನ್ನ ಮಗುವೆ" —ಎಂದು ಕರೆಯುತ್ತಿರುತ್ತಾಳೆ. ಆ ಕಾರಣದಿಂದಲೇ ವೇದಾಂತಾಭ್ಯಾಸ ಮಾಡಹೊರಟರೆ ಮೊದಲು—

> ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ॥
> ತಂ ನೋ ಮಿತ್ರಶ್ಶಂ ವರುಣಃ ॥

ಮೊದಲಾದ ಶಾಂತಿಪಾಠಗಳನ್ನು ಹೇಳುವ ಪದ್ಧತಿಯಂತೆ! ಬ್ರಹ್ಮಾನುಸಂಧಾನಕ್ಕೆ ಹೊರಟಿರುವಾಗ ಚಿಲ್ಲರೆ ದೇವತೆಗಳನ್ನು ಸ್ಮರಿಸುವುದೇಕೆ? ನಾವು ಪರಬ್ರಹ್ಮದರ್ಶನಾಕಾಂಕ್ಷಿಗಳಲ್ಲವೆ? ಎಂದರೆ, ಉತ್ತರ ಹೀಗೆ: ಬ್ರಹ್ಮದರ್ಶನಯತ್ನಕ್ಕೆ ಮೊದಲು ಅವಶ್ಯವಾದದ್ದು ಮನಸ್ಸಮಾಧಾನ. ಮನಸ್ಸಿನ ಸಮಾಧಾನಕ್ಕೆ ಮೊದಲು ಅವಶ್ಯವಾದದ್ದು ದೇಹ ಸಮಾಧಾನ. ದೇಹದ ಸುಸ್ಥಿತಿಗೆ ಬೇಕಾದದ್ದು ಲೋಕಸಂಸ್ಥಿತಿ. ಹೀಗೆ ಪರಮಾತ್ಮೋಪಾಸನೆಯೂ ಲೋಕಜೀವನವೂ ಒಂದನ್ನೊಂದು ಬಿಟ್ಟಿರುವವಲ್ಲ; ಒಟ್ಟುಗೂಡಿಯೇ ಇರುತ್ತವೆ. ಈ ಕಾರಣದಿಂದ ಉಪನಿಷದಾರಂಭದ ಶಾಂತಿಮಂತ್ರಗಳು ಇಂದ್ರಮಿತ್ರವರುಣಾದಿ ದೇವತೆಗಳನ್ನು ನಿರ್ವಿಘ್ನತೆಗಾಗಿಯೂ ಅನುಮೋದನೆಗಾಗಿಯೂ ಪ್ರಾರ್ಥಿಸುತ್ತವೆ. ಆ ದೇವತೆಗಳು ಪ್ರಕೃತಿದೇವಿಯ ನಾನಾ ಲೋಕಪ್ರಯುಕ್ತಶಕ್ತಿ ಸ್ವರೂಪಗಳೇ ಅಲ್ಲವೆ? ಆದದ್ದರಿಂದ ಭಕ್ತನು ಹೀಗೆ ಬೇಡುತ್ತಾನೆ: "ಓ ದೇವತೆಗಳಿರಾ, ನಾನು ಪರವಸ್ತುವನ್ನು ಕಂಡರೆ ನಿಮ್ಮನ್ನು ಮರೆತೇನೆಂದು ನೀವು ಶಂಕಿಸಿ ನನ್ನ ಆತ್ಮಪ್ರಗತಿಗೆ ತಡೆಹಾಕಬೇಡಿರಿ. ಯಾವಜ್ಜೀವವೂ ನಾನು ನಿಮಗೆ ಸಲ್ಲಬೇಕಾದದ್ದನ್ನು ಸಲ್ಲಿಸುತ್ತೇನೆ. ನನ್ನ ಲೋಕಜೀವನಕ್ಕೆ ಅನುಕೂಲರಾಗಿದ್ದುಕೊಂಡು ನನ್ನ ಮುಂದಿನ ಗತಿಗೆ ದಾರಿ ಕೊಡಿರಿ." ಇದು ತಾತ್ಪರ್ಯ.

ಪ್ರಕೃತಿ ನಮಗೆ ಅನುಕೂಲಳಾಗಬೇಕು; ನಾವು ಪ್ರಕೃತಿಗೆ ಅಧೀನರಾಗಬಾರದು. ಲೋಕಜೀವನ ಚೆನ್ನಾಗಿ ಸಾಗಬೇಕು. ಆದರೆ ಅದೇ ಸರ್ವಸ್ವವೆಂದು ಅಲ್ಲಿಯೇ ನಿಲ್ಲುವುದಾಗಬಾರದು. ಮುಂದುಮುಂದಕ್ಕೆ ಸಾಗಬೇಕು. ಇದು ಇಲ್ಲಿಯ ತಾತ್ಪರ್ಯ, ನಾವು ಬೇಲೂರು ಮೊದಲಾದ ದೇವಸ್ಥಾನಗಳಿಗೆ ಹೋದಾಗ ಆ ಹೊರಗಡೆಯ ಶಿಲ್ಪಚಮತ್ಕಾರಗಳನ್ನು ನೋಡಿ ಬೆರಗಾಗಿ ಗರ್ಭಗುಡಿಯನ್ನೇ ಮರೆಯುವ ಸಂಭವ ಉಂಟು.

ಪ್ರಕೃತಿಯ ಪುಸಲಾವಣೆಗಳು ಅಂಥವು. ಪ್ರಕೃತಿಯನ್ನು ಮೀರುವುದು ಹೇಗೆ? ಅದಕ್ಕೆ ಒಂದು ಉಪಾಯ ಏರ್ಪಟ್ಟಿದೆ. ಆ ಉಪಾಯವೇ ಧರ್ಮ. ಪ್ರಕೃತಿಯು ಬೀಸುತ್ತಿರುವ ಮೋಹದ ಬಲೆಯಿಂದ ಹೊರಕ್ಕೆ ಬರಬೇಕಾದರೆ ಆಕೆಯ ವಿಷಯದಲ್ಲಿ ಯಾವ ನಯೋಪಾಯಗಳನ್ನನುಸರಿಸಬೇಕೋ ಅದು ಧರ್ಮ. ಜೀವಜಗತ್ಸಂಬಂಧದಲ್ಲಿ ಉಭಯ ಪ್ರಯೋಜಕವಾಗಿ, ಆತ್ಮೋತ್ಕರ್ಷ ಸಾಧಕವಾಗುವ ಕ್ರಮನಿಯಮಗಳೇ ಧರ್ಮ.

ಜೀವಕ್ಕಿರುವ ತ್ರಿಗುಣಮಲಗಳು ಸವೆಯಬೇಕು, ಜೀವದ ಸತ್ತ್ವಶಕ್ತಿಗಳು ಲೋಕಸಂಸ್ಥಿತಿಗೆ ಉಪಯುಕ್ತವಾಗಿ ಬೆಳೆಯಬೇಕು. ತಮಸ್ಸು ಇಳಿದು ರಜಸ್ಸೇರಬೇಕು; ರಜಸ್ಸಿಳಿದು ಸತ್ತ್ವವೇರಬೇಕು. ತಮಸ್ಸೂ ರಜಸ್ಸೂ ಇಳಿದಿಳಿದು ಸತ್ತ್ವವು ಆ ಎರಡಕ್ಕಿಂತ ಮೇಲಿನದಾಗಬೇಕು. ಇದು ಜೀವೋತ್ಕರ್ಷದ ಕ್ರಮ. ರಜಸ್ತಮಗಳನ್ನು ಸವೆಯಿಸುವುದಕ್ಕೂ ಸತ್ತ್ವವನ್ನು ಪ್ರೋತ್ಸಾಹಿಸುವುದಕ್ಕೂ ಇರುವ ಅವಕಾಶವು ಲೋಕಸಂಪರ್ಕ. ಗುಣಮಲಗಳು ಸವೆಯುವುದು ಸುಲಭವಲ್ಲ. ಗಂಧದ ಕೊರಡು ಸವೆಯಬೇಕಾದರೆ ಅದನ್ನು ಸಾಣೆಕಲ್ಲಿನಮೇಲೆ ತೇಯಬೇಕಲ್ಲವೆ? ಹಾಗೆ ನಮ್ಮ ಪೂರ್ವಾರ್ಜಿತಗಳನ್ನು ಲೋಕದ ಬಂಡೆಗಳ ಮೇಲೆ ತೇಯಬೇಕು. ನಮ್ಮ ಸ್ವಭಾವಗಳನ್ನು ತೇಯುವುದರಿಂದ ಅವು ಸವೆಯುತ್ತವೆ; ಹಾಗೆಯೇ ಹರಿತವೂ ಆಗುತ್ತವೆ. ಕತ್ತಿಯನ್ನೋ ಚಾಕುವನ್ನೋ ಸಾಣೆಕಲ್ಲಿನ ಮೇಲೆ ಮಸೆಯುವುದರಿಂದ ಅದು ಸವೆಯುತ್ತದೆ; ಚೂಪೂ ಆಗುತ್ತದೆ. ಹಾಗೆ ಅದರ ಕಾರ್ಯಯೋಗ್ಯತೆ ಹೆಚ್ಚುತ್ತದೆ. ಆತ್ಮವೂ ಹಾಗೆಯೇ. ಲೋಕಕರ್ಮವನ್ನು ವಿಹಿತರೀತಿಯಲ್ಲಿ ಮಾಡುವುದರಿಂದ ರಜಸ್ತಮಗಳು ಸವೆಯುತ್ತವೆ; ಸತ್ತ್ವವೂ ವೃದ್ಧಿಯಾಗುತ್ತದೆ. ಸ್ವಶಕ್ತಿ ಅಭಿವೃದ್ಧಿಯಾಗುತ್ತದೆ; ಆತ್ಮಕ್ಕೆ ಸಂಸ್ಕಾರವಾಗುತ್ತದೆ. ಈ ಎರಡು ಬಗೆಯ ಲಾಭಗಳ ಜೊತೆಗೆ ಮೂರನೆಯ ಪ್ರಯೋಜನವೊಂದಿದೆ: ಅದು ನಮ್ಮ ಗುಣಶಕ್ತಿ ವಿನಿಯೋಗದಿಂದಾಗುವ ಲೋಕೋಪಯೋಗ. ಸತ್ತ್ವವು ಹೀಗೆ ಅಭಿವೃದ್ಧಿಯಾಗುತ್ತದೆ; ಮನಸ್ಸು ವಿಸ್ತಾರವಾಗುತ್ತದೆ; ಆತ್ಮಶಕ್ತಿಯ ಪ್ರಯೋಜಕತೆ-ಪ್ರಯೋಜನ ಯೋಗ್ಯತೆ—ಹೆಚ್ಚುತ್ತದೆ; ಮಲಗಳು ಕ್ಷಯಿಸುತ್ತವೆ; ಅದೇ ದುರಿತಕ್ಷಯ. “ಮಮ ಉಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ.”

ಮಲಗಳೆಂದರೆ ಜನ್ಮಜನ್ಮಾಂತರಗಳಿಂದ ಬಂದಿರುವ ವಾಸನೆಗಳು, ಅಥವಾ ಸ್ವಾಭಾವಿಕ ಪ್ರವೃತ್ತಿಗಳು—ಬಗೆಬಗೆಯ ಅಭಿರುಚಿಗಳು, ಚಪಲಗಳು, ಮೋಹಗಳು ಇತ್ಯಾದಿ. ಹೀಗೆ

ಪೂರ್ವಜನ್ಮದಿಂದ ಬಂದ ವಾಸನೆ ಚಪಲಗಳೇ ಮಲಗಳು. ಅವುಗಳಲ್ಲಿ ಕೆಲವನ್ನು ಅದುಮಿಟ್ಟು ಕಳೆಯಲಾಗುತ್ತದೆ. ಇನ್ನು ಕೆಲವನ್ನು ಭೋಗದಲ್ಲಿ ಉಪಯೋಗಿಸಿಯೇ ಸವೆಯಿಸಬೇಕಾಗುತ್ತದೆ. ಸತ್ತ್ವಶುದ್ಧಿಯೆಂದರೆ ವಾಸನಾಕ್ಷಯ. ವಾಸನೆ ಕ್ಷಯವಾಗುವುದು ಅದನ್ನು ಲೋಕವ್ಯವಹಾರದಲ್ಲಿ ವಿನಿಯೋಗಿಸಿ, ಆ ಚಪಲಗಳನ್ನು ತೀರಿಸಿ ಕಳೆಯುವುದರಿಂದ.

ಹೀಗೆ ಮನುಷ್ಯನ ಲೋಕಬಾಂಧವ್ಯದ ವ್ಯವಸ್ಥೆಯಲ್ಲಿ ತಮೋನಿಗ್ರಹದ ಉಪಾಯವೂ ರಜೋನಿಯಂತ್ರಣದ ಉಪಾಯವೂ ಸತ್ತ್ವೋತ್ತೇಜನದ ಉಪಾಯವೂ ಸೇರಿರಬೇಕು. ಮತ್ತು ಆ ಉಪಾಯಯೋಜನೆಯು ಜೀವದ ಸ್ವಾಭಾವಿಕಯೋಗ್ಯತೆಯನ್ನು ಅನುಸರಿಸಬೇಕು. ಹೀಗೆ ವ್ಯಕ್ತಿಯ ಶಕ್ತಿಸಾಮರ್ಥ್ಯಗಳನ್ನು ಲೋಕಕಾರ್ಯಕ್ಕೆ ಅನುವಾಗಿಸಿ, ತಮಸ್ಸು ರಜಸ್ಸುಗಳ ಕ್ಷಯಕ್ಕೂ ಆತ್ಮಸತ್ತ್ವವಿಕಾಸಕ್ಕೂ ಅನುಕೂಲವಾಗುವ ಜೀವ ಜಗತ್ಸಂಬಂಧ ವ್ಯವಸ್ಥೆ ವರ್ಣವ್ಯವಸ್ಥೆ. ಆ ವ್ಯವಸ್ಥೆಯ ಆಧಾರಭೂಮಿ ಪ್ರಕೃತಿ, —ಅಪ್ರತಿಹತಳಾದ ಪ್ರಕೃತಿ. ಜಗದ್ರಚನೆಯಲ್ಲಿಯೇ ಇರುವ ಭೇದಗಳನ್ನು ಅನುಸರಿಸಿ ಮಾಡಿರುವುದು ಚಾತುರ್ವರ್ಣ್ಯವ್ಯವಸ್ಥೆ ಎಂದು ಭಗವದ್ವಚನಃ

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ॥

ಧರ್ಮವು ವಸ್ತುಸ್ಥಿತಿಗ್ರಾಹಿ, ರಿಯಲಿಸ್ಟ್ (Realist); ಅದು ಫ್ಯಾನ್ಸೀಯಿಸ್ಟ್ (Fancyist) ಉತ್ಪ್ರೇಕ್ಷಾಗ್ರಾಹಿಯಲ್ಲ. ಸೃಷ್ಟಿಯಲ್ಲಿ ಗುಣವೈವಿಧ್ಯ ಕರ್ಮವೈವಿಧ್ಯಗಳಿವೆ. ಒಂದು ಕಡೆ ಮನುಷ್ಯಸ್ವಭಾವದ ಶಕ್ತಿಭೇದ ಯೋಗ್ಯತಾಭೇದಗಳು, ಇನ್ನೊಂದು ಕಡೆ ಲೋಕಾವಶ್ಯಕ ಕಾರ್ಯದ ಉದ್ದೇಶಭೇದ ಪ್ರಯೋಜನಭೇದಗಳು—ಹೀಗೆ ವಿವಿಧತೆಯೂ ಭೇದವೂ ಜಗದ್ರಚನೆಯಲ್ಲಿಯೇ ಇವೆ.

ಗುಣದಲ್ಲಿಯೂ ಶಕ್ತಿಯಲ್ಲಿಯೂ ಹೆಚ್ಚುಕಡಮೆಗಳಿರುವುದು ಪ್ರಕೃತಿಯಥಾರ್ಥ. ಎಲ್ಲರೂ ಸಮಾನರೆನ್ನುವುದು ಉತ್ಪ್ರೇಕ್ಷೆ. ಎಲ್ಲರೂ ಸಮಾನರಾಗಿದ್ದರೆ ಚೆನ್ನಾಗಿರುತ್ತದೆಂದು ಕೆಲವರು ಉತ್ತಮತಾನ್ವೇಷಿಗಳು ವಾದಿಸುತ್ತಾರಲ್ಲವೆ? ಅದು ಹಾಗಾದಾಗ ನಮಗೆ ಈಗಿಗಿಂತ ಹೆಚ್ಚು ದುಃಖವೇ ಗತಿ. ಕೈಯ ಬೆರಳುಗಳೆಲ್ಲ ಉದ್ದದಲ್ಲಿಯೂ ದಪ್ಪದಲ್ಲಿಯೂ ಒಂದೇ ಸಮನಾದರೆ ಪಾತ್ರೆ ಹಿಡಿದುಕೊಳ್ಳಲಾದೀತೆ? ಅನ್ನ ಕಲಸಲಾದೀತೆ? ಎಲ್ಲರೂ ಸಮಾನರಾಗಬೇಕೆಂದು

ಹೇಳುವುದರಲ್ಲಿ ನಮ್ಮ ಅಂತರಂಗದ ಅಭಿಪ್ರಾಯ ನಮ್ಮ ಮೇಲುಗಡೆ ಯಾರಿದ್ದಾರೋ ಅವರ ಜಾಗಕ್ಕೆ ನಾವು ಹೋಗಬೇಕೆಂಬುದೇ ಹೊರತು ನಮಗಿಂತ ಕೆಳಗಿರುವವರು ನಮ್ಮ ಮಟ್ಟಕ್ಕೆ ಹತ್ತಿಬರಬೇಕೆಂಬುದಲ್ಲ. ಸಮಾನತ್ವ, ಸಮಾನತ್ವ ಎಂದು ಲೋಕದಲ್ಲಿ ನಡೆಯುತ್ತಿರುವ ತಕರಾರಿನ ಮರ್ಮ ಇದು. ಸಮಾನತೆ ಎಂಬುದು ಸ್ವಪ್ರತಿಷ್ಠೆ ಎಂಬುದರ ಹೊರಹೊದಿಕೆ.

ಧರ್ಮವು ಈ ಉತ್ಪ್ರೇಕ್ಷೆಯನ್ನನುಸರಿಸಿ ಕೆಲಸಮಾಡತಕ್ಕದ್ದಲ್ಲ. ಗಿಡ್ಡಾಗಿರುವವರು ಗಿಡ್ಡಾಗಿಯೇ ಇದ್ದಾರೆ, ಎತ್ತರವಾಗಿರುವವರು ಎತ್ತರವಾಗಿಯೇ ಇದ್ದಾರೆ, ತೆಳ್ಳಗಿರುವವರು ತೆಳ್ಳಗೇ ಇದ್ದಾರೆ, ದಪ್ಪನಾಗಿರುವವರು ದಪ್ಪನಾಗಿಯೇ ಇದ್ದಾರೆ—ಈ ವಾಸ್ತವಸಂಗತಿಯನ್ನು ಧರ್ಮವು ಗ್ರಹಿಸುತ್ತದೆ. ಕುಳ್ಳನನ್ನು ಆಜಾನುಬಾಹುವೆಂದಾಗಲಿ ಆಜಾನುಬಾಹುವನ್ನು ಕುಳ್ಳನೆಂದಾಗಲಿ ಗ್ರಹಿಸಿ ಅದರಂತೆ ನಡೆಯುವುದು ಧರ್ಮವಾಗದು. ಇವನು ತೇಜಸ್ಸುಳ್ಳವನು, ಇವನು ನಿಸ್ತೇಜಸ, ಇವನಲ್ಲಿ ಈ ವಿಶೇಷಶಕ್ತಿಯಿದೆ, ಇವನು ಸಾಮಾನ್ಯ—ಈ ವಸ್ತುತಾರತಮ್ಯವನ್ನು ಗ್ರಹಿಸಿ, ತದನುಸಾರವಾಗಿ ಧರ್ಮನಿರ್ಣಯ ಮಾಡುವುದಾಗುತ್ತದೆ. ಸತ್ಯ ಎಂದರೆ ಯಥಾರ್ಥಸ್ಥಿತಿ. ಧರ್ಮವೆಂದರೆ ಆ ಯಥಾರ್ಥವನ್ನನುಸರಿಸದ ನಡವಳಿಕೆ. ಹಲ್ಲಿಲ್ಲದವರಿಗೆ ಪುಳ್ಳಂಗಾಯುಂಡೆಯನ್ನೂ ಹಲ್ಲಿರುವವರಿಗೆ ತಂಬಿಟ್ಟನ್ನೂ ಕೊಡುವುದು ಧರ್ಮವಾಗುವುದಿಲ್ಲ. ಜಗದ್ವ್ಯವಹಾರವೆಲ್ಲ ಭೇದಗಳ ಸಮೂಹ. ತಗ್ಗಾಗಿರುವುದಕ್ಕೆ ಎತ್ತರವಾಗಿರುವುದನ್ನು ಹೊಂದಿಸಬೇಕಾಗುತ್ತದೆ: ದುರ್ಬಲವಾಗಿರುವುದಕ್ಕೆ ಸಬಲವಾಗಿರುವುದನ್ನು ಗಂಟಿಡಬೇಕಾಗುತ್ತದೆ. ಇದೇ ಯೋಜನೆ. ಗಾಡಿಗೆ ಎತ್ತುಗಳನ್ನು ಜೋಡಿಸುವವರು ಜಡವಾದ ಒಂದನ್ನೂ ಚುರುಕಾದ ಒಂದನ್ನೂ ಜೊತೆ ಮಾಡುತ್ತಾರೆ. ಜಡವಾದದ್ದೆಲ್ಲ ಒಂದು ಗಾಡಿಗೆ, ಚುರುಕಾದದ್ದೆಲ್ಲ ಬೇರೆ ಗಾಡಿಗೆ ಸೇರಬಾರದು. ಪ್ರಕೃತಿಯ ಕೈಮಾಟದಿಂದ ನಾವು ಸಹಾಯ ಪಡೆದುಕೊಳ್ಳಬೇಕೆಂದು ತಾತ್ಪರ್ಯ. ಕಂಠಧ್ವನಿ ಚೆನ್ನಾಗಿರುವ ಮನುಷ್ಯನಿಗೆ ಸಂಗೀತ ಸುಲಭವಾಗಿ ಬರುತ್ತದೆ. ಅವನಿಗೆ ಗಣಿತಶಾಸ್ತ್ರ ಮಾಡು, ಅಥವಾ ಕಸರತ್ತು ಕುಸ್ತಿಮಾಡು ಎಂದರೆ ಅದು ಸುಲಭವಲ್ಲ. ಆದದ್ದರಿಂದ ಲೋಕವ್ಯವಸ್ಥೆ ಮಾಡುವವರು ಸಮಾಜಕ್ಕೆ ಆಗಬೇಕಾದ ಉಪಕಾರಗಳೇನು, ಅವುಗಳನ್ನು ಮಾಡಲು ಯಾವ್ಯಾವುದಕ್ಕೆ ಯಾರ್ಯಾರು ನೈಜವಾಗಿ ಹೆಚ್ಚು ಸಮರ್ಥರಾಗಿದ್ದಾರೆ—ಇದನ್ನು ಗಣನೆಗೆ ತೆಗೆದುಕೊಳ್ಳುವುದು ಯುಕ್ತ.

ಮನುಷ್ಯ ಸ್ವಭಾವರಚನೆಯಲ್ಲಿ ಕಾಣಬರುವ ಗುಣಸಾಮರ್ಥ್ಯಗಳ ನಾನಾ ವಿಧಗಳೂ ನಾನಾ ಇಯತ್ತೆಗಳೂ ನಾಲ್ಕು ದೊಡ್ಡ ಗುಂಪುಗಳಾಗಿವೆ. ಅವೇ ನಾಲ್ಕು ಜಾತಿಗಳು:

> ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
> ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥

ಆಯಾ ಜನರಲ್ಲಿ ಸ್ವಾಭಾವಿಕವಾಗಿ ಯಾವಯಾವ ಗುಣ ಮುಖ್ಯವಾಗಿದೆಯೋ ಅದನ್ನನುಸರಿಸಿ ಅವರವರಿಗೆ ಕರ್ತವ್ಯನಿರ್ಣಯ ಮಾಡಿದೆ. ಮನುಷ್ಯಶಕ್ತಿಗಳಲ್ಲಿ ನಿರುಪಯೋಗವಾದದ್ದು ಯಾವುದೂ ಇಲ್ಲ; ಅಯೋಗ್ಯನಾದ ಮನುಷ್ಯನಿಲ್ಲ—ಇವೆರಡೂ ಧರ್ಮಶಾಸ್ತ್ರಜ್ಞರು ಅಂಗೀಕರಿಸಿರುವ ಮೂಲತತ್ತ್ವಗಳು.

ಸುತರಾಂ ಕೆಲಸಕ್ಕೆ ಬಾರದವನು ಲೋಕದಲ್ಲಿ ಇಲ್ಲವೇ ಇಲ್ಲ. ಕಷ್ಟವಿರುವುದು ಯೋಗ್ಯತೆಯರಿತು ಯೋಜನೆಮಾಡುವುದರಲ್ಲಿ. ಹಣದ ಮೇಲೆ ಹೆಚ್ಚು ಗಮನವಿರುವವನನ್ನು ವೈಶ್ಯನೆಂದಿದ್ದಾರೆ. ಧೈರ್ಯವಂತನೂ ಬಲಿಷ್ಠನೂ ಆದವನನ್ನು ಕ್ಷತ್ರಿಯನೆಂದಿದ್ದಾರೆ. ಹೀಗೆ ಮನುಷ್ಯನಲ್ಲಿ ಸ್ವಾಭಾವಿಕವಾಗಿರುವ ಗುಣಸಂಪತ್ತನ್ನು ನೋಡಿ ಧರ್ಮಶಾಸ್ತ್ರಕಾರರು ಅದಕ್ಕನುಸಾರವಾಗಿ ಕರ್ತವ್ಯನಿರ್ಣಯ ಮಾಡಿದ್ದಾರೆ.

ಈ ಮಾತು ಹಿಂದೂಸಮಾಜಕ್ಕೆ ಮಾತ್ರ ಅನ್ವಯಿಸುವುದೆಂದು ಭಾವಿಸತಕ್ಕದ್ದಲ್ಲ. ಅದು ಎಲ್ಲ ದೇಶಗಳಲ್ಲಿಯೂ ಎಲ್ಲ ಮನುಷ್ಯಸಮಾಜಗಳಲ್ಲಿಯೂ ಇರುವ ಸಂದರ್ಭವೇ. ಪುರಾತನ ಗ್ರೀಸಿನಲ್ಲಿಯೂ ಈಜಿಪ್ಟ್ ಮೊದಲಾದ ದೇಶಗಳಲ್ಲಿಯೂ ಅದು ಇದ್ದದ್ದೆಂದು ಟಾಯ್ನ್‌ಬೀ (Toynbee) ಮೊದಲಾದ ಚರಿತ್ರಕಾರರ ಗ್ರಂಥಗಳಿಂದ ತಿಳಿದುಬರುತ್ತದೆ. ಕಳೆದ ಇನ್ನೂರು ವರ್ಷಗಳಲ್ಲಿ ಇಂಡಿಯದಲ್ಲಿ ಹೇಗೆ ಸಾಮಾಜಿಕ ವ್ಯತ್ಯಾಸಗಳಾಗಿವೆಯೋ ಹಾಗೆ ಕಳೆದ ಮುನ್ನೂರು ವರ್ಷಗಳಲ್ಲಿ ಇಂಗ್ಲೆಂಡಿನಲ್ಲಿಯೂ ಯೂರೋಪಿನಲ್ಲಿಯೂ ವ್ಯತ್ಯಾಸಗಳಾಗಿವೆ. ಇಂಡಸ್ಟ್ರಿಯಲ್ ರೆವೊಲ್ಯೂಷನ್ (Industrial Revolution) ಎಂಬ ಯಂತ್ರಕಾರ್ಮಿಕ ಸಮಾಜಕ್ರಾಂತಿಯ ಕಾರಣದಿಂದ ಹಿಂದಿನಿಂದ ಬಂದಿದ್ದ ಸಂಪದ್ವ್ಯವಸ್ಥೆ ಬದಲಾಯಿಸಿತು. ಸಂಪದ್ವ್ಯವಸ್ಥೆ ಬದಲಾಯಿಸಿದ್ದರಿಂದ ಜನಗಳ ದರ್ಜೆಗಳು, ಅಂತಸ್ತುಗಳು ಬದಲಾಯಿಸಿದವು. ಇಂಗ್ಲಿಷ್ ಮಹಾಕವಿ ಷೇಕ್ಸ್‌ಪಿಯರಿನ ‘ಟ್ರಾಯಿಲಸ್ ಮತ್ತು ಕ್ರೆಸಿಡ’ (*Troilus and Cressida*) * ನಾಟಕದಲ್ಲಿ ಜಾತಿಮರ್ಯಾದೆ ಹೋಯಿತೆಂದು

ವಿಷಾದಾಲಾಪವಿದೆ. ವರ್ಗತಾರತಮ್ಯ ಎಲ್ಲ ಜನತೆಯಲ್ಲೂ ಉಂಟಾದದ್ದೇ ಎಂದು ತೋರುತ್ತದೆ. ಪಾಶ್ಚಾತ್ಯರು ಅದಕ್ಕೆ ಜಾತಿಯೆಂದು ಹೆಸರಿಟ್ಟಿಲ್ಲ; ಪ್ರಕಟವಾಗಿ ಅದನ್ನು ಗುರುತಿಸಿಲ್ಲ, ಸಂಗತಿಯೇನೋ ಇದೆ; ಆದರೆ ಶಾಸ್ತ್ರೀಯಗಣನೆಗೆ ಬಂದಿಲ್ಲ. ಗೀತೆಯಲ್ಲಿ ಹೇಳಿರುವ ಜಾತಿವಿಭಾಗವು ಎಲ್ಲ ಮನುಷ್ಯ ಸಮಾಜಗಳಿಗೂ ಸ್ವಭಾವಸಿದ್ಧವಾದದ್ದು. ಸ್ವಭಾವಸಿದ್ಧವಾದ ಒಂದು ವಿಂಗಡವನ್ನು ನಮ್ಮ ಪೂರ್ವಿಕರು ಅಂಗೀಕರಿಸಿ ಅದಕ್ಕೆ ಹೆಸರು ಕೊಟ್ಟರು. ಪಾಶ್ಚಾತ್ಯರ ಪೂರ್ವಿಕರು ಅದನ್ನು ಗುರುತಿಸಲಾರದೆ ಅದಕ್ಕೆ ಹೆಸರು ಕೊಟ್ಟಿಲ್ಲ. ಬಳಕೆಯಲ್ಲಿರುವ ಎಷ್ಟೋ ವಸ್ತುಗಳಿಗೂ ಭಾವನೆಗಳಿಗೂ ಹೆಸರುಗಳಿಲ್ಲದಿರುವುದನ್ನು ನೋಡಿದ್ದೇವೆ. ಪಾಶ್ಚಾತ್ಯರಲ್ಲಿ ಬಳಕೆಯಲ್ಲಿರುವ Smith (ಕಮ್ಮಾರ), Mason (ಕಲ್ಕುಟಿಗ), Cook (ಪಾಚಕ) ಮೊದಲಾದ ಅನೇಕ ಹೆಸರುಗಳು ಒಂದಾನೊಂದು ಕಾಲದಲ್ಲಿ ಅವರ ಕಸಬು ಯಾವುದಾಗಿತ್ತೋ ಅದರಿಂದಲೇ ಬಂದವೆನ್ನಲಡ್ಡಿಯಿಲ್ಲ. ಈಗ ಅವರಲ್ಲಿ ಎಲ್ಲ ಸಂಕರವಾಗಿದೆ. ನಮ್ಮಲ್ಲಿ ಸಾಂಕರ್ಯ ಇನ್ನೂ ಅಷ್ಟುದೂರ ಹೋಗಿಲ್ಲ.

ಗೀತೆಯ ಜಾತಿವಿಭಾಗ ಎಲ್ಲ ಮನುಷ್ಯಸಮಾಜಗಳಿಗೂ ಸ್ವಭಾವಸಿದ್ಧವಾದದ್ದೆಂದು ಹೇಳಿದೆವು. ಬ್ರಾಹ್ಮಣಲಕ್ಷಣಗಳಾವುವೆಂದು ನೋಡೋಣ.

> ಶಮೋದಮಸ್ತಪಃ ಶೌಚಂ ಕ್ಷಾನ್ತಿರಾರ್ಜವಮೇವ ಚ ।
> ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥

“ಶಮ, ದಮ, ತಪಸ್ಸು, ಶೌಚ, ಕ್ಷಮೆ, ಆರ್ಜವ, ಬ್ರಹ್ಮಜ್ಞಾನ, ಲೋಕಪ್ರಜ್ಞೆ, ಭಗವದ್ವಿಶ್ವಾಸ—ಯಾರ ಸ್ವಭಾವದಲ್ಲಿ ಈ ಗುಣಗಳುಂಟೋ ಅವನು ಬ್ರಾಹ್ಮಣ.”

ಈ ಗುಣಗಳನ್ನು ಕುರಿತು ಅನೇಕ ಸಾರಿ ಹೇಳಿಯಾಗಿದೆ. ಜ್ಞಾನವೆಂದರೆ ಆತ್ಮಜ್ಞಾನ, ಬ್ರಹ್ಮಜ್ಞಾನ. ವಿಜ್ಞಾನ ಎಂದರೆ ಲೋಕಕಾರ್ಯಗಳಿಗೆ ಸಂಬಂಧಪಟ್ಟ ಜ್ಞಾನ—ಶಿಲ್ಪ, ವೈದ್ಯ ಮೊದಲಾದ ಶಾಸ್ತ್ರಜ್ಞಾನವೆಂದು ಹೇಳಬಹುದು, “ವಿಜ್ಞಾನಂ ಶಿಲ್ಪಶಾಸ್ತ್ರಯೋಃ” ಎಂದು ಹೇಳಿದೆ. ಲೋಕದ ಜೀವನಕ್ಕೆ ಬೇಕಾದ ತಿಳಿವಳಿಕೆಯನ್ನು ವೃದ್ಧಿಪಡಿಸಬೇಕು, ಪ್ರಚಾರಮಾಡಬೇಕು—ಇದು ಬ್ರಾಹ್ಮಣನಿಗೆ ಸ್ವಾಭಾವಿಕವಾಗಿ ಬಂದಿರುವ ಪ್ರವೃತ್ತಿ. ಅವನು ಉಪಾಧ್ಯಾಯ. ಮೊದಲು ತಾನು ತಿಳಿವಳಿಕೆ ಸಂಪಾದಿಸಬೇಕು. ಬಳಿಕ ಇತರರಿಗೆ ಕೊಡಬೇಕು.

> ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿ ತಪಸ್ತದ್ಧಿ ತಪಃ ॥

ಬ್ರಾಹ್ಮಣನ ನೀತಿಗುಣಗಳನ್ನು ಕುರಿತು ವ್ಯಾಸರೇ ಇನ್ನೊಂದು ಕಡೆ ಹೇಳಿದ್ದಾರೆ:

> ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಂ ಯಥೈಕತಾ ಸಮತಾ ಸತ್ಯತಾ ಚ ।
> ಶೀಲಂ ಸ್ಥಿತಿರ್ದಂಡನಿದಾನಮಾರ್ಜವಂ ತತಸ್ತತಶ್ಚೋಪರತಿಃ ಕ್ರಿಯಾಭ್ಯಃ ॥

ಇದಕ್ಕೆ ಸಮಾನವಾದ ವಿತ್ತ, ಎಂದರೆ ಐಶ್ವರ್ಯ, ಬ್ರಾಹ್ಮಣನಿಗೆ ಇನ್ನ್ಯಾವುದೂ ಇಲ್ಲವಂತೆ. ಅದು ಯಾವುದು? ಏಕತಾ ಎಂದರೆ Consistency = ನಿಯಮ ನಿಷ್ಠೆ; ಮನಸ್ಸು, ಮಾತು, ನಡತೆ—ಮೂರರಲ್ಲೂ ಒಂದೇ ಆಗಿ, ಪರಸ್ಪರ ವಿರೋಧವಿಲ್ಲದಿರುವುದು. ಸಮತಾ ಎಂದರೆ ದ್ವಂದ್ವಗಳಿಂದ ಮನೋವಿಕಾರಕ್ಕೊಳಗಾಗದಿರುವುದು. ಸತ್ಯತಾ = ಸತ್ಯನಿಷ್ಠೆ. ಶೀಲ = ಒಳ್ಳೆಯ ನಡವಳಿಕೆ. ಸ್ಥಿತಿ ಎಂದರೆ ಯಾವುದನ್ನಾದರೂ ನಂಬಿದರೆ ಅದರಲ್ಲಿ ಸಂತತವಾಗಿ ನಿರತನಾಗಿರುವುದು, ನಿಷ್ಠನಾಗಿರುವುದು. ದಂಡನಿದಾನವೆಂದರೆ ವಾಗ್ದಂಡ ಮನೋದಂಡ ಕಾಯದಂಡಗಳೆಂಬ ತ್ರಿಪ್ರಕಾರವಾದ ಆತ್ಮಶಿಕ್ಷೆಯಲ್ಲಿ ತಪ್ಪದಿರುವುದು. ಆರ್ಜವ = ಋಜುಸ್ವಭಾವ. ಕೊನೆಯದಾಗಿ ಇನ್ನೊಂದು ಲಕ್ಷಣವನ್ನು ಹೇಳಿದ್ದಾರೆ: "ತತಸ್ತತಶ್ಚೋಪರತಿಃ ಕ್ರಿಯಾಭ್ಯಃ". ಇದು ಬ್ರಾಹ್ಮಣನಿಗೆ ವಿಶಿಷ್ಟವಾದದ್ದು. ಕರ್ಮ ಮಾಡಬೇಕು, ಆಗಾಗ ಕರ್ಮದಿಂದ ವಿರಮಿಸಬೇಕು. ಕರ್ಮಕ್ಕಂಟಿಕೊಳ್ಳದಿರುವುದು ಬ್ರಾಹ್ಮಣನ ವಿಶೇಷ ಲಕ್ಷಣ. (Detachment, withdrawal) ಎಂಬ ಮಾತುಗಳ ಅಭಿಪ್ರಾಯ ಇದೇ. ಭಗವದ್ವಾಕ್ಯದ "ಸಂಗಂ ತ್ಯಕ್ತ್ವಾ" ಎಂಬಲ್ಲಿಯೂ ಇದೇ ವಿವಕ್ಷಿತವಾದದ್ದು. "ಈ ಕೆಲಸ ನನ್ನದಲ್ಲ.ಭಗವಂತ ಆಜ್ಞೆ ಮಾಡಿರುವುದರಿಂದ ಮಾಡಿದ್ದೇನೆ. ಎಷ್ಟರವರೆಗೆ ಕರ್ಮದಲ್ಲಿ ಪ್ರವೇಶ ಮಾಡಬೇಕೋ ಅಷ್ಟು ಮಾಡಿದ್ದಾಗಿದೆ. ಈಗ ವಿರಮಿಸತಕ್ಕದ್ದು" —ಹೀಗೆ ಶ್ರಮೆಯಲ್ಲಿ ವಿಶ್ರಾಂತಿ ಪಡುವ ಮನೋಭಾವ ಬ್ರಾಹ್ಮಣನದಾಗಿರಬೇಕಂತೆ.

ಉಪರಮವಿಲ್ಲದ ನಿರಂತರವಾದ ಕಾರ್ಯೋನ್ಮುಖತೆ ರಾಜಸ. ಅದು ಕ್ಷತ್ರಿಯವೈಶ್ಯರುಗಳ ಗುಣ. ಬ್ರಾಹ್ಮಣನು ಕರ್ತವ್ಯಕರ್ಮವಿರುವಲ್ಲಿ ಮಾತ್ರ ಕರ್ಮನಿಷ್ಠ; ಕರ್ಮಾವಶ್ಯಕತೆಯಿಲ್ಲದಲ್ಲಿ ಭಗವದ್ಧ್ಯಾನನಿಷ್ಠೆ.

ಒಳ್ಳೆಯದು. ಈ ಲಕ್ಷಣಗಳುಳ್ಳವನು ಬ್ರಾಹ್ಮಣನೆಂದು ಹೇಳುವುದಾದರೆ, ಬ್ರಾಹ್ಮಣ ಕುಲವೆನ್ನಿಸಿಕೊಂಡ ಕುಲದಲ್ಲಿ ಹುಟ್ಟಿದವನು ಆ ಹುಟ್ಟಿನ ಕಾರಣದಿಂದಲೇ ಬ್ರಾಹ್ಮಣನೋ? ಇದು ನಾವು ಮುಖಕೊಟ್ಟು ನೋಡಲೇಬೇಕಾದ ಪ್ರಶ್ನೆ. ಅದನ್ನು ತಪ್ಪಿಸಿಕೊಳ್ಳಲಾಗದು. ಕುಲದಿಂದ ಬ್ರಾಹ್ಮಣನೆ, ಗುಣದಿಂದ ಬ್ರಾಹ್ಮಣನೆ? ಗುಣವೇ ಲಕ್ಷ್ಯವೆಂಬುದಕ್ಕೆ ಸಂದೇಹವಿಲ್ಲ. ಕುಲ ಅದಕ್ಕೆ ಅನುಕೂಲವಾಗತಕ್ಕದ್ದೆಂದು ಒಂದು ಅನುಮಿತಿ. ವಂಶಬೀಜವು ಸಂತತಿಯಲ್ಲಿ ಪಾರಂಪರ್ಯವಾಗಿರತಕ್ಕದ್ದೆಂಬುದನ್ನು ಇಂದಿನ ಜೀವವೈಜ್ಞಾನಿಕರು (Biologists) ಬಹುಶಃ ಒಪ್ಪಿಕೊಂಡಿದ್ದಾರೆ. "ಬೀಜವ್ಯತ್ಯಾಸವೋ ಕ್ಷೇತ್ರವ್ಯತ್ಯಾಸವೋ ಆಗಿದ್ದರೆ?" — ಎಂಬುದು ಬೇರೆ ಮಾತು. ಪ್ರಕೃತಕ್ಕೆ ಅಂಥಾ ವ್ಯತ್ಯಾಸದ ವಿಚಾರವನ್ನು ಬೇರೆಯಿಟ್ಟು, ಋಜುವಾದ ವಂಶಾನುಪೂರ್ವಿ ನಡೆದುಬಂದಿದೆ ಎಂದಿಟ್ಟುಕೊಂಡ ಪಕ್ಷದಲ್ಲಿ ಮೇಲೆ ಹೇಳಿದ ಬ್ರಾಹ್ಮಣಗುಣಗಳು ಪೂರ್ವಿಕನಿಂದ ಸಾಂಪ್ರತದವನಿಗೆ ಸಹಜವಾಗಿ ಯತ್ಕಿಂಚಿತ್ತಾದರೂ, ಸಂಕುಚಿತವಾಗಿಯಾದರೂ, ಬಂದಿರುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು.

ಬ್ರಾಹ್ಮಣನೆಂಬವನಿಗೆ ಹೆಚ್ಚಿನ ಪ್ರಾಶಸ್ತ್ಯ ಏಕೆ? ಎಂಬ ಪ್ರಶ್ನೆ ನಮ್ಮ ಕಾಲದಲ್ಲಿ ಪ್ರಬಲಿಸಿದೆ. ಅದಕ್ಕೆ ಉತ್ತರ ಮೇಲಣ ಗುಣವರ್ಣನೆಯಲ್ಲಿದೆ. ಬ್ರಾಹ್ಮಣನು ತಪಸ್ವಿ, ಸತ್ಯನಿಷ್ಠ; ಜ್ಞಾನಪ್ರಧಾನಿ, ಉಪಶಾಂತನು. ಇಂಥವನನ್ನು ಎಲ್ಲ ದೇಶಗಳ ಎಲ್ಲ ಜನರೂ ತಾವಾಗಿ ಗೌರವಿಸುತ್ತಾರೆ. ಆ ಗುಣಗೌರವ ಯಾರೊಬ್ಬರ ನಿರ್ಬಂಧದಿಂದಾಗಲಿ, ಪ್ರೋತ್ಸಾಹದಿಂದಲಾಗಲಿ, ಪ್ರಚಾರವೈಖರಿಯಿಂದಲಾಗಲಿ ಬಂದದ್ದಲ್ಲ. ಮನುಷ್ಯನ ಅಂತರಂಗದಿಂದ ಸ್ವತಃ ಉತ್ಪನ್ನವಾದದ್ದು. ಜಾತಿಮತಾತೀತವಾದ ವಿಶ್ವಮಾನವಸ್ವಭಾವವು ತಾನಾಗಿ ಆ ಗುಣಗಳನ್ನು ಪೂಜಾರ್ಹವೆಂದು ಪರಿಗಣಿಸಿದೆ. ಆ ಗುಣಗಳನ್ನು "ನಾನು ಗೌರವಿಸುವುದಿಲ್ಲ" ಎಂದು ಯಾರಾದರೂ ಹೇಳುವುದಾದರೆ ಅಂಥವನೊಡನೆ ನಮಗೆ ಕಲಹವೇನೂ ಇಲ್ಲ. ಬ್ರಾಹ್ಮಣನು ಶಾಂತನು. ಕ್ಷಮಾಶೀಲನು. ಅವನಿಗೆ ಯಾರೊಡನೆಯೂ ಕಲಹವಿರದು. ಇಂಥ ಗುಣಗಳ ವಿಷಯದಲ್ಲಿ ಜನಕ್ಕೆ ಗೌರವ ಸ್ವಾಭಾವಿಕವಾಗಿ ಹುಟ್ಟುತ್ತದೆ—ಎಂಬುದು ಮನುಷ್ಯಸ್ವಭಾವಕ್ಕೇ ಗೌರವ. ಮನುಷ್ಯ ತಾನು ಸತ್ಯ ಹೇಳದಿದ್ದರೂ ಸತ್ಯ ಹೇಳುವವರಲ್ಲಿ ಗೌರವ ತೋರಿಸುತ್ತಾನೆ. ಏನು ಇದರ ತಾತ್ಪರ್ಯ? ಬೇರೆ ಯಾವುದೋ ಕಾರಣದಿಂದ ಅವನು ಸತ್ಯ ಹೇಳುತ್ತಿಲ್ಲವೇ ಹೊರತು, ಅಂತರಂಗದಲ್ಲಿ ಅವನಿಗೂ ಸತ್ಯದ ವಿಷಯದಲ್ಲಿ ಗೌರವವುಂಟು. ತಾನು ಇತರರಿಗೆ ಸುಳ್ಳು ಹೇಳಿದರೂ ಇತರರು ತನಗೆ

ದಿಟವನ್ನೇ ಹೇಳಬೇಕು, ಸುಳ್ಳಾಡಬಾರದು ಎಂದು ಬಯಸುತ್ತಾನೆ. ಸತ್ಯವಂತರಲ್ಲಿ, ಸತ್ಯದಲ್ಲಿ, ಅಸತ್ಯವಂತನು ತೋರುವ ಗೌರವವೂ ಶ್ರದ್ಧೆಯೂ ಕ್ರಮೇಣ ಅವನಲ್ಲಿ ಕಾಲಾನುಕಾಲಕ್ಕೆ ಸತ್ಯಪ್ರೇಮವಾಗಿ ಪರಿಣಮಿಸುತ್ತದೆ. ಬ್ರಾಹ್ಮಣಗುಣಗಳನ್ನು ಗೌರವಿಸುವುದರಿಂದ ಗೌರವಿಸುವವನಿಗೇ ನೀತಿಲಾಭವುಂಟಾಗುತ್ತದೆ.

ಬ್ರಾಹ್ಮಣನು ಮರ್ಯಾದೆಯನ್ನು ಬೇಡುವವನಲ್ಲ. ಅವನಿಗಿರುವ ಪೂಜ್ಯತೆ ಅವನ ಗುಣಗಳಿಂದ ಬಂದಿರತಕ್ಕದ್ದು. ಅವನು ಪೂಜ್ಯತೆಯನ್ನು ಬೇಡತಕ್ಕದ್ದಲ್ಲ. ಯಾರು “ನಾನು ಬ್ರಾಹ್ಮಣ, ನನ್ನನ್ನು ಪೂಜಿಸಿ” ಎನ್ನುತ್ತಾನೋ ಅವನು ತನ್ನ ಮಾತಿನಿಂದಲೇ ತನ್ನ ಅನರ್ಹತೆಯನ್ನು ತೋರಿಸುತ್ತಾನೆ. ಬಹುಮಾನವನ್ನು ಅಪೇಕ್ಷಿಸುವವನು ಬ್ರಾಹ್ಮಣನಲ್ಲ ಎಂದು ಮನುಗಳ ಮತ. ಅದಕ್ಕೆ ಪ್ರತಿಯಾಗಿ ಅಪಮಾನವನ್ನು ಬಯಸಬೇಕಂತೆ ಬ್ರಾಹ್ಮಣ:

> ಸಂಮಾನಾದ್ಬ್ರಾಹ್ಮಣೋ ನಿತ್ಯಮ್ ಉದ್ವಿಜೇತ ವಿಷಾದಿವ ।
> ಅಮೃತಸ್ಯೇವ ಚಾಕಾಂಕ್ಷೇತ್ ಅವಮಾನಸ್ಯ ಸರ್ವದಾ ॥

–ಮನು, ೨-೧೬೨

ಮಾನಪ್ರತಿಷ್ಠೆಗಳನ್ನು ಬಿಟ್ಟ ಮೇಲೆ ವಿಚಾರಕ್ಕೆ ಬರುವ ಸಂದರ್ಭ ಹಣದ್ದು. ಬ್ರಿಟಿಷ್ ಸರಕಾರ ಬಂದ ಕಾರಣದಿಂದ ನಮ್ಮ ಜನಕ್ಕೆ ತಗಲಿದ ಆಪತ್ತುಗಳಲ್ಲಿ ಬಹುದೊಡ್ಡದು ಯಾವುದೆಂದರೆ ನಮ್ಮ ನೀತಿನಿಷ್ಠೆಯ ದೃಷ್ಟಿಯಿಂದ ಆಗಿರುವ ಮಹಾಕ್ರಾಂತಿ. ಬ್ರಿಟಿಷ್ ಸಂಪರ್ಕ ನಮ್ಮ ಸಮಾಜದ ಮೇಲಂತಸ್ತುಗಳಲ್ಲಿ ಧನಾಕಾಂಕ್ಷೆಯನ್ನು ಕೆರಳಿಸಿತು. ಇಂಗ್ಲಿಷ್ ಜನಕ್ಕೆ ತಮ್ಮ ಭಾಷೆಯನ್ನು ಕಲಿತು, ತಮ್ಮ ಮನೋಗತವನ್ನು ದೇಶೀಯರಿಗೂ ದೇಶೀಯರ ಮನೋಗತವನ್ನು ತಮಗೂ ತಿಳಿಸಿಕೊಡುವುದಕ್ಕೂ, ಲೆಕ್ಕಪತ್ರವ್ಯವಹಾರ ನಡಸುವುದಕ್ಕೂ ಭಾರತೀಯರ ಸಹಾಯ ಬೇಕಾದದ್ದು ಸ್ವಾಭಾವಿಕ. ಅದು ಬ್ರಾಹ್ಮಣರಿಗೆ ಅವಕಾಶವಾಯಿತು. ಅವರು ವಂಶಪಾರಂಪರ್ಯದಿಂದ ವಿದ್ಯಾಭ್ಯಾಸಿಗಳು. ಆದದ್ದರಿಂದ ಹೊಸ ಭಾಷೆ ಹೊಸ ವಿಜ್ಞಾನಗಳನ್ನು ಕಲಿಯುವುದು ಅವರಿಗೆ ಸುಲಭವಾಯಿತು. ಸ್ವಾಭಾವಿಕವಾಗಿ ಬಂದಿದ್ದ ವಿದ್ಯೋತ್ಸಾಹದ ಜೊತೆಗೆ ದ್ರವ್ಯಲಾಭ ಪ್ರೋತ್ಸಾಹ ಸೇರಿತು. ವ್ಯಾಸರು ಹೇಳಿದ್ದ “ವಿತ್ತ” ಮರೆತುಹೋಯಿತು; ರಾಣಿಯ ಮೊಹರಿದ್ದ ವಿತ್ತವನ್ನು ಗಳಿಸಿಕೊಳ್ಳಹೊರಟರು. ಗುಣಸಂಪತ್ತು ಜಾರಿಹೋಗುತ್ತ ಬಂತು. ಬ್ರಾಹ್ಮಣಿಕೆ ವಂಶಮಾತ್ರದ್ದಾಯಿತು. ತಮಗೆ ಬಂದಿದ್ದ

ವಿದ್ಯಾಬುದ್ಧಿ ಸಂಸ್ಕಾರಗಳನ್ನು ಹಣದ ಸಂಪಾದನೆಗೆ ವಿನಿಯೋಗ ಮಾಡಿದರು, ಹಳೆಯದನ್ನು ಮರೆತರು. ಹಳೆಯ ವಿತ್ತವನ್ನು ಅವರು ಕೊಂಚವಾದರೂ ಜ್ಞಾಪಕದಲ್ಲಿ ಇರಿಸಿಕೊಂಡಿದ್ದಿದ್ದರೆ ಈ ಹೊತ್ತು ಬ್ರಾಹ್ಮಣರ ಪಾಡು ಇಂದಿರುವ ಹಾಗಾಗುತ್ತಿರಲಿಲ್ಲ. ತನ್ನ ಸ್ವಕುಲಧನವನ್ನ, —ಸ್ವರೂಪವನ್ನ—ಮರೆತದ್ದರಿಂದ ಬ್ರಾಹ್ಮಣ "ಇವನೂ ಮಿಕ್ಕವರಂತೆಯೇ ಇದ್ದಾನೆ; ಸಾವಿರ ಮಂದಿಯ ಪೈಕಿ ಇವನೂ ಒಬ್ಬ, ಇವನದೇನು ಹೆಚ್ಚುಗಾರಿಕೆ?" ಎನಿಸಿಕೊಂಡ. ಸ್ವಧನವನ್ನು ಅವನು ಮರೆಯದಿದ್ದಿದ್ದರೆ ಇತರರ ಅಪನಿಂದೆಗೂ ಗುರಿಯಾಗುತ್ತಿರಲಿಲ್ಲ, ಯತ್ಕಿಂಚಿತ್ತು ಬ್ರಾಹ್ಮಣ್ಯವೆಂಬುದೂ ಉಳಿಯುತ್ತಿತ್ತು. ಅಧಿಕಾರಸ್ಥಾನಗಳನ್ನು ಬಹುವಾಗಿ ಬ್ರಾಹ್ಮಣರೆಂಬವರು ಆಕ್ರಮಿಸಿಕೊಂಡಿದ್ದಾರೆಂದು ಇತರರು ಪುಕಾರು ಮಾಡಿದರೆ ನಿಜವಾದ ಬ್ರಾಹ್ಮಣ "ಅದು ಹಾಗಾಯಿತಲ್ಲ!" ಎಂದು ವಿಷಾದದಿಂದ ಚಿಂತಿಸಬೇಕಾದದ್ದೇ ಹೊರತು, ಬ್ರಾಹ್ಮಣನೆಂದರೆ ಸಂಪಾದನೆಯಲ್ಲಿ ಸಮರ್ಥ ಎಂದು ವಾದ ಹೂಡಬೇಕಾದದ್ದಿಲ್ಲ. ಬ್ರಾಹ್ಮಣ ಸಮರ್ಥನಾಗಿರಲಿ; ಲೋಕಕಾರ್ಯಗಳಲ್ಲಿ ಯಶಸ್ವಿಯಾಗಲಿ; ಆದರೆ ಆ ಸಾಮರ್ಥ್ಯ ಪ್ರಾಶಸ್ತ್ಯಗಳ ಜೊತೆಗೆ ಅವನು ವಿರಕ್ತಿ ತಪಶ್ಶಾಂತಿಗಳನ್ನೂ ಸರ್ವಲೋಕಮೈತ್ರಿಯನ್ನೂ ಉಳಿಸಿಕೊಂಡಿದ್ದಾನೋ?—ಇದು ಪ್ರಶ್ನೆ. ಲೋಕವ್ಯವಹಾರದಲ್ಲಿ ಪಾಪಸಂಭವ ಹೆಚ್ಚೆಂಬುದಕ್ಕೆ ಕಳೆದ ನೂರೈವತ್ತು ವರ್ಷಗಳ ಬ್ರಾಹ್ಮಣ ಸಮಾಜದ ಕಥೆ ನಿದರ್ಶನವಾಗಿದೆ.

ಕ್ಷತ್ರಿಯನ ಗುಣಗಳು ಶೌರ್ಯ, ಪ್ರತಾಪ, ಧೈರ್ಯ, ಕಾರ್ಯದಕ್ಷತೆ, ಯುದ್ಧಸ್ಥೈರ್ಯ—ಇವು. ಈ ಗುಣಗಳು ಯಾರಲ್ಲಿ ಸಹಜವೋ ಅವನು ಕ್ಷತ್ರಿಯ. ರಾಜ್ಯನಿರ್ವಾಹ ದಕ್ಷತೆ ಅವನಿಂದ ಲೋಕಕ್ಕೆ ಬೇಕಾದದ್ದು. ಹಣದ ಮೇಲೆ ಮುಖ್ಯದೃಷ್ಟಿಯಿರುವ ಬ್ರಾಹ್ಮಣನನ್ನು ಹೇಗೆ ಬ್ರಾಹ್ಮಣವರ್ಗದಲ್ಲಿ ಸೇರಿಸಲಾಗುವುದಿಲ್ಲವೋ ಹಾಗೆ ದಕ್ಷತೆಯಿಲ್ಲದ ಕ್ಷತ್ರಿಯನನ್ನು ಕ್ಷತ್ರಿಯವರ್ಗಕ್ಕೆ ಸೇರಿಸಲಾಗುವುದಿಲ್ಲ.

ಹಾಗೆಯೇ ಕೃಷಿ ವಾಣಿಜ್ಯಾದಿ ಧನಸಂಪತ್ತಿನಲ್ಲಿ ನಿಪುಣನೂ ನಿಷ್ಠನೂ ಆದವನು ವೈಶ್ಯ.

ಯಾರು ಯಾವ ಬಗೆಯ ಕಾರ್ಯದ ಹೊಣೆಗಾರಿಕೆಯನ್ನೂ (Responsibility) ತಾನೇ ಹೊತ್ತುಕೊಳ್ಳಲು ಶಕ್ತಿಯಿಲ್ಲದವನಾಗಿ, ಶಕ್ತರು ಹೇಳಿದಷ್ಟನ್ನು ಯಥಾವತ್ತಾಗಿ ನಡಸುವಷ್ಟು ಮಾತ್ರ ಸಮರ್ಥನೋ ಅವನು ಶೂದ್ರ. ಅವನಿಗೆ ಬುದ್ಧಿಶ್ರಮಕ್ಕಿಂತ ದೇಹಶ್ರಮ ಹೆಚ್ಚು ಸುಲಭ; ಸ್ವತಂತ್ರತೆಗಿಂತ ವಿಧೇಯತೆ ಹೆಚ್ಚು ಸುಲಭ.

ಯಾವ ಒಂದು ಮನುಷ್ಯಸಮಾಜದ ಸುಸ್ಥಿತಿಗಾದರೂ ಅವಶ್ಯವಾದ ಸೇವೆಗಳು ನಾಲ್ಕು ವಿಧದವು: (೧) ವಿದ್ಯೆ, (೨) ಸಂರಕ್ಷಣೆ, (೩) ಧನಧಾನ್ಯಸಮೃದ್ಧಿ, (೪) ಕಾರ್ಮಿಕ ಪರಿವಾರ. ಈ ನಾಲ್ಕರಲ್ಲಿ ಯಾವ ಒಂದು ನ್ಯೂನವಾದರೂ ಸಮಾಜದ ಯೋಗಕ್ಷೇಮಗಳಿಗೆ ನ್ಯೂನತೆ ಬರುತ್ತವೆ. ಅವೆಲ್ಲ ಸಮಾನ ಆವಶ್ಯಕತೆಗಳು, ಅವುಗಳಿಗೆ ಬೇಕಾದ ಪಟುತ್ವಗಳು ಕ್ರಮವಾಗಿ (೧) ಬುದ್ಧಿಶ್ರಮ ಆತ್ಮಸಂಯಮಗಳು, (೨) ಧೈರ್ಯ ಬಾಹುವೀರ್ಯಗಳು, (೩) ಲಾಭಚಿಂತನೆ ಉಪಾಯ ಯೋಜನೆಗಳು, (೪) ದೇಹದಾರ್ಢ್ಯ ವಿಧಿಪರಿಪಾಲನೆಗಳು. ಈ ನಾಲ್ಕು ಬಗೆಯ ಗುಣ ಸಂಪತ್ತುಗಳಲ್ಲಿ ನಾಲ್ಕೂ ಯಾವೊಬ್ಬ ಮನುಷ್ಯನಲ್ಲಿಯೂ ಸರಿಸಮವಾಗಿ ಸೇರಿರಲಾರವು. ಎರಡು ಮೂರು ಕೂಡ ಒಬ್ಬನಲ್ಲಿ ಸೇರಿರುವುದಿಲ್ಲ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಆ ನಾಲ್ಕು ಬಗೆಯ ಗುಣಸಂಪತ್ತುಗಳ ಪೈಕಿ ಯಾವುದೋ ಒಂದು ಬಗೆಯದು ಹೆಚ್ಚಾಗಿಯೂ ಮಿಕ್ಕವು ಕೊಂಚಕೊಂಚವಾಗಿಯೂ ಸೇರಿಸುತ್ತವೆ. ಯಾವ ಬಗೆಯ ಗುಣಸಂಪತ್ತು ಹೆಚ್ಚಾಗಿರುತ್ತದೆಯೋ ಅದರಂತೆ ಕರ್ಮನಿಷ್ಕರ್ಷೆ; ಅದನ್ನು ಅನುಸರಿಸಿ ಜಾತಿನಿಷ್ಕರ್ಷೆ. ಇದು ವರ್ಣವ್ಯವಸ್ಥೆಯ ಅಂತರಂಗ. ಈ ವ್ಯವಸ್ಥೆಯ ಮೂಲಾಭಿಪ್ರಾಯ ಎಲ್ಲ ಜನರೂ ಎಲ್ಲ ಕಾರ್ಯಗಳಿಗೂ ಸಮಾನಸಮರ್ಥರಲ್ಲ—ಎಂಬುದು. ಆದದ್ದರಿಂದ ಜನ ತಮ್ಮಲ್ಲಿ ನೈಜವಾಗಿರುವ ಗುಣಭೇದ ಶಕ್ತಿಭೇದಗಳನ್ನನುಸರಿಸಿ ತಮ್ಮತಮ್ಮ ಜೀವಿಕಾ ವೃತ್ತಿಗಳನ್ನು ಕಂಡುಕೊಳ್ಳಬೇಕಾದದ್ದು.

ಇದು ನಮ್ಮ ಕಾಲದ ಸರ್ವಸಮತಾವಾದಕ್ಕೆ ಕೊಂಚ ಪ್ರತಿಕಕ್ಷಿ. “ಒಬ್ಬ ಮನುಷ್ಯ ಮಾಡಿದ್ದನ್ನು ಇನ್ನೊಬ್ಬ ಮನುಷ್ಯನೂ ಮಾಡಿಯಾನು” (What man has done, man can do) ಎಂಬುದು ಒಂದು ವಾದ. ಅದು ಕೇವಲ ಮನೋಗತವಾದ ಭಾವನೆಯಾಗಿ ನಿಲ್ಲಬಹುದೇ ಹೊರತು ಕಾರ್ಯಗತವಾಗಬಲ್ಲದ್ದಲ್ಲ. ವಾಸುದೇವಾಚಾರ್ಯರು ಹಾಡುತ್ತಿದ್ದರು. ನಾವೆಲ್ಲರೂ ಹಾಗೆಯೇ ಹಾಡಲಾದೀತೋ? ಆದೀತು—ನೂರು ಜನ್ಮಗಳಲ್ಲಿ ಅಭ್ಯಾಸಸಾಧನೆ ಮಾಡಿದರೆ. ಆದರೆ ಅಂದು ಹಾಡುವ ಕೊರಲು ನನ್ನ ಈಗಿನದಲ್ಲ, ಈ ಜನ್ಮದ್ದಲ್ಲ. ಯಂತ್ರನಿರ್ವಹಣೆಯಲ್ಲಿ ಕೌಶಲವಿರುವವನನ್ನು ಸ್ಕೂಲು ಮೇಷ್ಟರಾಗೆನ್ನಬಾರದು. ‘ಮೆಕ್ಯಾನಿಕ್’ ಆದವನು ಯಂತ್ರದಲ್ಲಿ ಕೈಚಳಕ ತೋರಿಸುವವನು. ಸ್ಕೂಲುಮೇಷ್ಟರಾದವನು ಅಂಗೈಯಲ್ಲಿ ಬ್ರಹ್ಮಾಂಡ ತೋರಿಸುವ ವಾಕ್ಯಕೌಶಲವುಳ್ಳವನು. ಯಾರ್ಯಾರಿಗೆ ಯಾವ್ಯಾವುದರಲ್ಲಿ ಸಾಮರ್ಥ್ಯ, ಪ್ರವಣತೆ ಉಂಟೋ ಅವರವರು ಅದದರಲ್ಲಿ ನಿರತರಾಗಿದ್ದರೆ ಸಮಾಜಕ್ಕೆ ಲಾಭ. ಅದೇ ಸರಿಯಾದ ಇಕಾನಮಿ (Economy) —ಅರ್ಥನಿರ್ವಾಹ, ಎಂದರೆ ಕೊಂಚ ಬಂಡವಾಳದಿಂದ ಹೆಚ್ಚು ಲಾಭ

ತೆಗೆಯುವ ವಿದ್ಯೆ. ಕಾಗದಗಳನ್ನು ಸೇರಿಸುವ 'ಪಿನ್' ಗುಂಡುಸೂಜಿ ಯಾರೋ ಒಬ್ಬ ಮನುಷ್ಯ ಮಾಡಿದ್ದು. ನಾನೂ ಒಬ್ಬ ಮನುಷ್ಯ. ನಾನು ಪಿನ್ ಮಾಡುವುದಕ್ಕಾದೀತೋ? ಆದೀತು—ಅಪಾರವಾದ ಸಾಮಗ್ರಿಯನ್ನೊದಗಿಸಿ, ಅನಂತವಾದ ಕಾಲಾವಕಾಶವನ್ನು ಕೊಟ್ಟರೆ ಆದೀತು. ಆದರೆ ಆ ಕೆಲಸಕ್ಕೆ ವಿಶೇಷ ತಯಾರಿಯನ್ನು ಪಡೆದುಕೊಂಡು ಬಂದಿರುವವನು ಅದನ್ನು ನಿಮಿಷಕ್ಕೊಂದು ಸಾವಿರದಂತೆ ಮಾಡುತ್ತಾನೆ. ಕೆಲವರು ಸಂಗೀತಗಾರರು ನಮ್ಮಲ್ಲಿದ್ದಾರೆ. ಬ್ರಹ್ಮದೇವ ಅವರಿಗೆ ಒಳ್ಳೆಯ ಶಾರೀರವನ್ನು ಕೊಡಲು ಮರೆತ. ಯಾವುದೋ ಕಾರಣದಿಂದ ಅವರು ತಮಗೆ ಸಂಗೀತ ಬರುತ್ತದೆಂದುಕೊಂಡುಬಿಟ್ಟಿದ್ದಾರೆ; ಗಂಟಲನ್ನು ತಿದ್ದಿಕೊಳ್ಳಲು ಶ್ರಮಪಡುತ್ತಿದ್ದಾರೆ. ಅವರ ಶ್ರಮವನ್ನು ನಾವು ಕೇಳುತ್ತಿದ್ದೇವೆ; ಅದು ಸಾರ್ಥಕಪಟ್ಟದ್ದನ್ನು ಕೇಳಿ ಆನಂದಿಸುವ ಭಾಗ್ಯ ನಮಗಿನ್ನೂ ಬಂದಿಲ್ಲ. ಹೀಗೆ ನಮ್ಮ ಸಹಜಶಕ್ತಿಗಳನ್ನೂ ಸಹಜನ್ಯೂನತೆಗಳನ್ನೂ ಗಣನೆಗೆ ತಂದುಕೊಳ್ಳದೆ ಮಾಡಹೊರಡುವ ಪ್ರಯತ್ನಗಳು "ಇಕಾನಮಿ" ಆಗದು—ಎಂದರೆ ಸರಿಯಾದ ಅರ್ಥನಿರ್ವಾಹವಾಗದು.

ಮನುಷ್ಯರ ಗುಣ ಶಕ್ತಿ ರುಚಿ ಪ್ರವೃತ್ತಿಗಳ ವೈವಿಧ್ಯಕ್ಕೆ ಜಗದ್ವ್ಯವಸ್ಥೆಯಲ್ಲಿ ಒಂದು ಮಹಾ ಪ್ರಯೋಜನವಿದೆ. ವಿವಿಧತೆಯಿರುವುದರಿಂದಲೇ ಒಬ್ಬ ಮನುಷ್ಯನಿಗೆ ಇನ್ನೊಬ್ಬನ ವಿಷಯದಲ್ಲಿ ಕುತೂಹಲಾದರಣೆ. ಅಸಮಾನತೆ ಇರುವುದರಿಂದಲೇ ಒಬ್ಬ ಮನುಷ್ಯನಿಗೆ ಇನ್ನೊಬ್ಬನ ಸಹಾಯ ಬೇಕೆನ್ನಿಸುತ್ತದೆ. ವಿವಿಧತೆ ಅಸಮಾನತೆಗಳಿರುವುದರಿಂದಲೇ ಪರಸ್ಪರ ಸ್ನೇಹಾಭ್ಯಾಸಕ್ಕೆ ಅವಕಾಶ. ಗ್ರೀಕ್ ತತ್ತ್ವಜ್ಞನಾದ ಪ್ಲೇಟೊ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆಂದು ನೋಡಿದ್ದೇವೆ. ಎಲ್ಲರೂ ಹಾಡುವವರೇ ಆಗಿಬಿಟ್ಟರೆ ಕೇಳುವವರ್ಯಾರು? ಎಲ್ಲರೂ ವೈದ್ಯರೇ ಆಗಿಬಿಟ್ಟರೆ ಚಿಕಿತ್ಸೆಮಾಡಿಸಿಕೊಳ್ಳುವವರಾರು? ಎಲ್ಲರೂ ಉಪಾಧ್ಯಾಯರೇ ಆಗಿಬಿಟ್ಟರೆ ಪಾಠ ಹೇಳಿಸಿಕೊಳ್ಳುವವರ್ಯಾರು? ನಮ್ಮಲ್ಲಿಲ್ಲದಿರುವ ಪದಾರ್ಥವನ್ನು ನಾವು ಇನ್ನೊಬ್ಬರಿಂದ ಬಯಸುತ್ತೇವೆ. ಆದದ್ದರಿಂದಲೇ ಅವರಿಗೂ ನಮಗೂ ಸ್ನೇಹವುಂಟಾಗುತ್ತದೆ. ಅಸಮಾನತೆ ಇರುವುದರಿಂದಲೇ ಜಗತ್ತಿನಲ್ಲಿ ಒಬ್ಬರ ವಿಷಯದಲ್ಲೊಬ್ಬರಿಗೆ ಸ್ನೇಹ ಗೌರವಗಳುಂಟಾಗುವುದು. ನಮ್ಮಲ್ಲಿ ವಿವಿಧತೆ ಇರುವುದರಿಂದ ಒಬ್ಬರಿಗಿನ್ನೊಬ್ಬರು ಬೇಕಾಗಿರುತ್ತದೆ.

ನಮ್ಮ ಕಾಲದಲ್ಲಿ ಐಕಮತ್ಯ, ಸಮಾನತೆ, ಸ್ವಾತಂತ್ರ್ಯ ಮೊದಲಾದ ಮಾತುಗಳನ್ನು ಯಥೇಷ್ಟವಾಗಿ ದುರುಪಯೋಗ ಮಾಡಲಾಗುತ್ತಿದೆ. ಆ ಮಾತುಗಳಿಗೆ ಅರ್ಥವಿಲ್ಲವೆಂದಲ್ಲ;

ಬಹಳ ಸೊಗಸಾದ ಅರ್ಥವಿದೆ. ಆ ಸೊಗಸಾದ ಅರ್ಥವನ್ನು ಜನ ಕಾಣದೆ, ಸಮಯ ಸಂದರ್ಭ ವಿಚಾರಮಾಡದೆ, ಬರಿಯ ಮಾತನ್ನು ನುಡಿಯುತ್ತಿದ್ದಾರೆ. ಗೀತೆಯನ್ನು—

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ॥

ಎಂದೆಲ್ಲ ಹೇಳಿ ಕಟ್ಟು ಕಟ್ಟಿರುವುದಕ್ಕೆ ಇದೇ ಕಾರಣ. ಘನವಾದ ಮಾತುಗಳು ಅವು; ತುಂಬ ಅರ್ಥಪೂರ್ಣವಾದವು. ಸಮಾನತೆ ಎಂಬ ಮಾತು ಅಂಥಾದ್ದು. ಅದಕ್ಕೆ ಅಪಾರ್ಥ ಮಾಡುವುದು ಸುಲಭ. ಆದದ್ದರಿಂದ ಎಚ್ಚರಿರಬೇಕು. ವಿವಿಧತೆ ಅಸಮಾನತೆಗಳು ಪ್ರಕೃತಿಯೇ ಮಾಡಿರುವ ಏರ್ಪಾಟು. ಜನಗಳಲ್ಲಿ ಒಬ್ಬರ ಆವಶ್ಯಕತೆ ಇನ್ನೊಬ್ಬರಿಗುಂಟಾಗುವಂತೆ—ಆ ಮೂಲಕ ಪರಸ್ಪರ ಸ್ನೇಹಸನ್ಮಾನಗಳು ಸಂವರ್ಧಿಸುವಂತೆ—ಪ್ರಕೃತಿ ಮಾಡಿರುವ ವ್ಯವಸ್ಥೆ ಅದು. ಈ ಮಹಾತತ್ತ್ವವನ್ನೇ ಸ್ವಾಮಿ ಕರ್ಮಯೋಗ ಪ್ರಕರಣದಲ್ಲಿ ಸೂಚಿಸಿರುವುದು:

ಪರಸ್ಪರಂ ಭಾವಯನ್ತಃ ಶ್ರೇಯಃ ಪರಮವಾಪ್ಸ್ಯಥ ॥

ವರ್ಣವ್ಯವಸ್ಥೆ ಕರ್ಮವ್ಯವಸ್ಥೆಗಳಲ್ಲಿ ಒಂದು ತಾರತಮ್ಯಭಾವನೆ ಕಾಣುತ್ತದೆ. ಬ್ರಾಹ್ಮಣನು ಮುಖ, ಕ್ಷತ್ರಿಯನು ಭುಜ, ವೈಶ್ಯನು ಕುಕ್ಷಿ, ಶೂದ್ರನು ಪಾದ—ಈ ವಿಧವಾದ ರೂಪಕವರ್ಣನೆ ತಕರಾರಿಗೆ ಕಾರಣವಾಗಿದೆ. ಆ ತಕರಾರು ಅವಿಚಾರದಿಂದ ಹುಟ್ಟಿದ್ದು. ಸಮಾಜದೃಷ್ಟಿಯಿಂದ ಎಲ್ಲ ಕರ್ಮಗಳೂ ಸಮಾನಹಿತಕಾರಿಗಳೇ. ಇಲ್ಲಿ ಧ್ಯೇಯವೇನು? ಮೊದಲು, ವ್ಯಷ್ಟಿಮನುಷ್ಯನಲ್ಲಿರುವ ತ್ರಿಗುಣಮಲ ಸವೆಯಬೇಕೆಂಬುದು; ಎರಡನೆಯದಾಗಿ, ಅವನಲ್ಲಿರುವ ಶಕ್ತಿಯೋಗ್ಯತೆ ವಿಕಸಿತವಾಗಬೇಕೆಂಬುದು; ಮೂರನೆಯದಾಗಿ, ಈ ಎರಡು ಉದ್ದೇಶಗಳೂ ಸಾಗಬೇಕಾದರೆ ಅದಕ್ಕೆ ಲೋಕಸಂಪರ್ಕವೇ ಸಾಧನಭೂಮಿಯೆಂಬುದು; ನಾಲ್ಕನೆಯದಾಗಿ, ಅವನ ಗುಣಶಕ್ತಿಗಳ ಅಭಿವ್ಯಕ್ತಿಯಿಂದ ಲೋಕಕ್ಕೆ ಪ್ರಯೋಜನವಾಗಬೇಕೆಂಬುದು. ಹೀಗೆ ವ್ಯಷ್ಟಿಜೀವದ ಉತ್ಕರ್ಷ, ಲೋಕದ ಸಮಷ್ಟಿಸಂಸ್ಥಿತಿ—ಇವೆರಡು ಧರ್ಮಕರ್ಮದಲ್ಲಿರಬೇಕಾದ ಧ್ಯೇಯಗಳು. ಈ ದೃಷ್ಟಿಯಿಂದ ನೋಡುವವರಿಗೆ ವ್ಯಷ್ಟಿಮನುಷ್ಯನ ದ್ರವ್ಯಲಾಭ ಪ್ರತಿಷ್ಠೆ ಅಧಿಕಾರಗಳು ವಿಶೇಷವಾಗಿ ಗಣನೆಗೆ ಬಾರವು. ಸಮಷ್ಟಿಲೋಕಾರಾಧನೆ ಮುಖ್ಯ; ಭಗವತ್ಸೇವೆ ಮುಖ್ಯ; ಸ್ವಲಾಭಸ್ವಪ್ರತಿಷ್ಠೆಗಳು ಮುಖ್ಯವಲ್ಲ. ನಮ್ಮ ಕರ್ತವ್ಯದ ದಾರಿ ನಮ್ಮ ಸ್ವಭಾವಕ್ಕೆ ಯಾವುದು ಒಗ್ಗುತ್ತದೋ ಅದು.

ಮಗುವಿನ ಪೋಷಣೆಯಲ್ಲಿ ಹಾಲುಕುಡಿಸುವವರು ಶ್ರೇಷ್ಠರು, ತೊಟ್ಟಿಲುಬಟ್ಟೆ ಎತ್ತುವವರು ನಿಕೃಷ್ಟರು ಎಂದುಂಟೋ? ತೊಟ್ಟಿಲು ತೂಗುವವರು ಶ್ರೇಷ್ಠರು, ಹಿತ್ತಲಿಗೆ ಕರೆದುಕೊಂಡುಹೋಗುವವರು ನಿಕೃಷ್ಟರು ಎಂದುಂಟೋ? ಮಗುವಿನಲ್ಲಿ ತಾಯಿಗಿರುವ ಪ್ರೀತಿಯಿಂದ ಆ ಮಗುವಿನ ಸಂತೋಷಕ್ಕಾಗಿ ಆಗಬೇಕಾದ ಎಲ್ಲ ಕೆಲಸಗಳೂ ಆಕೆಗೆ ಒಂದೇ; ಅದರಲ್ಲಿ ತಾರತಮ್ಯಗಣನೆಯೇನೂ ಇರದು. ಭಗವಂತನ ಸೇವೆಯಲ್ಲಿಯೂ ಹಾಗೆಯೇ; ದೊಡ್ಡದು ಚಿಕ್ಕದು ಎಂಬ ಭೇದ ಸಲ್ಲುವುದಿಲ್ಲ. ಆಂಜನೇಯ ಬೆಟ್ಟವೆತ್ತಿದ; ಅಳಿಲು ಮರಳುಹೊತ್ತಿತು.

ನಮ್ಮ ಊರಿನಲ್ಲಿ ಒಬ್ಬಾಕೆಯಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಆಕೆಗೆ ಮನೆ ತಪ್ಪಿತ್ತು. ನನಗೆ ತಿಳಿದಿದ್ದ— Living Saints —ಜೀವಂತ ಸಾಧುಸಂತರ ಪೈಕಿ ಆಕೆ ಒಬ್ಬರು. ಬೆಳಗ್ಗೆ ನಾಲ್ಕು ಘಂಟೆಗೇ ಏಳುತ್ತಿದ್ದರು. ಆ ಊರಿನ ದೇವಸ್ಥಾನಗಳಲ್ಲಿ ಎರಡುಮೂರು ಬಹು ದೊಡ್ಡವು: ಒಂದು ಗುಡಿಯೊಳಗೆ ನಾಲ್ಕಾರು ಸಣ್ಣ ಸಣ್ಣ ಗುಡಿಗಳಿದ್ದುವು. ಹಿಂದಿನ ದಿವಸ ಸಾಯಂಕಾಲ ಆಕೆ ಊರಿನಲ್ಲಿ ಆಕಳುಗಳಿರುವ ಜಾಗಗಳಿಗೆಲ್ಲ ಹೋಗಿ ಗೋಮಯವನ್ನು ಕಲೆಹಾಕಿ ತರುತ್ತಿದ್ದರು. ಬೆಳಕು ಹರಿಯುವುದಕ್ಕೆ ಮುಂಚೆಯೇ ಎದ್ದು ಆ ಸಗಣಿಯನ್ನೂ ಕುಂಟೆಯಿಂದ —ಆಗ ನಲ್ಲಿಗಳಿರಲಿಲ್ಲ—ನೀರನ್ನೂ ಹೊತ್ತು ತಂದು ಪಾತ್ರೆಯಲ್ಲಿ ಕಲಸಿ, ದೇವರ ನಾಮ ಹೇಳಿಕೊಳ್ಳುತ್ತ ದೇವಸ್ಥಾನಕ್ಕೆ ಹೋಗಿ ಆ ಜಾಗವನ್ನೆಲ್ಲ ಗುಡಿಸಿ, ಸಾರಿಸಿ, ರಂಗೋಲಿಯಿಡುತ್ತಿದ್ದರು. ಹೀಗೆ ವಾರದ ಏಳು ದಿನವೂ ಆಕೆಗೆ ಸಂಬಳವಿಲ್ಲದ ಚಾಕರಿ. ತನ್ನ ಹೊಲಗದ್ದೆಯಿಂದ ಬಂದದ್ದು ಆಕೆಯ ಒಪ್ಪೊತ್ತಿನ ಊಟಕ್ಕಾಯಿತು. ಈ ಜೀವನವನ್ನು ಕುರಿತು ಯೋಚನೆಮಾಡಿರಿ. ಸಹಸ್ರ ಬಿಲ್ವಾರ್ಚನೆಗಳನ್ನೂ ಲಕ್ಷಮಲ್ಲಿಗೆ ಅರ್ಚನೆಗಳನ್ನೂ ಮಾಡಿಸುತ್ತಿದ್ದವರ ಭಕ್ತಿ ಹೆಚ್ಚೋ, ಈಕೆಯ ಭಕ್ತಿ ಹೆಚ್ಚೋ? ಭಗವಂತನ ಸೇವೆಯನ್ನು ಬ್ರಾಹ್ಮಣ ಮಾಡಿದ್ದು ಹೆಚ್ಚು, ಉಳಿದವರು ಮಾಡಿದ್ದು ಕಡಮೆ ಎಂದು ಯಾರಾದರೂ ಹೇಳಿಯಾರೋ?

ಈ ಅಭಿಪ್ರಾಯವನ್ನೇ ಬ್ರೌನಿಂಗ್ (Browning) ಕವಿ ತನ್ನ “ಪಿಪ್ಪಾ ಪಾಸಸ್” (Pippa Passes) ಎಂಬ ನಾಟಕಕಾವ್ಯದಲ್ಲಿ ರೂಪಗೊಳಿಸಿದ್ದಾನೆ. ಪಿಪ್ಪಾ (Pippa) ಎನ್ನುವವಳು ಇಟಲಿ ದೇಶದ ಒಂದಾನೊಂದು ಊರಲ್ಲಿ ರೇಷ್ಮೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿಯ ಹುಡುಗಿ. ಅವಳು ತಂದೆ ತಾಯಿ ಯಾರೂ ಇಲ್ಲದ ನಿರ್ಗತಿಕಳು. ಆಕೆಗೆ ವರ್ಷದಲ್ಲಿ ಒಂದೇ ದಿನ ರಜ: ಅದು ವರ್ಷಾದಿಯ ದಿನ. ಒಂದು ಸಲ ವರ್ಷಾದಿ ಬಂತು. ಅವಳು “ಈ

ಒಂದು ದಿನ ನಾನು ತುಂಬ ಸಂತೋಷಪಡಬೇಕು" —ಎಂದಂದುಕೊಂಡು, ನಿರ್ಮಲವಾದ ಹಗುರಮನಸ್ಸಿನಿಂದ ತೋರಿದೆಡೆಗೆ ನಡೆದುಹೋಗುತ್ತಾಳೆ, —ಹಾಡು ಹಾಡಿಕೊಂಡು ಹೋಗುತ್ತಾಳೆ:

God's in His Heaven,
All's right with the world.
ಭಗವಂತನಿಹನು ನಿಜ ಸೊರ್ಗದೊಳಗತ್ತಲ್,
ಜಗವೆಲ್ಲ ಸರಿಯಿಹುದು, ಇದು ಚೆನ್ನವಿತ್ತಲ್.

ಆ ಹಾಡು ಪಾಪಕಾರ್ಯದಲ್ಲಿ ನಿರತರಾಗಿದ್ದ ಕೆಲವರ ಕಿವಿಗೆ ಬಿದ್ದು, ಅವರಿಗೆಲ್ಲ ಕೊಂಚಕೊಂಚ ಪಶ್ಚಾತ್ತಾಪವುಂಟಾಗುತ್ತದೆ. ಅವರನ್ನು ಉದ್ಧಾರ ಮಾಡಬೇಕೆಂಬ ಸಂಕಲ್ಪ ಅವಳಿಗೇನೂ ಇರಲಿಲ್ಲ. ಅಂಥವರಿದ್ದಾರೆಂಬುದರ ಸುಳಿವೇ ಅವಳಿಗಿಲ್ಲ. ಆಕೆಯ ಮನಸ್ಸಿಗೆ ಎಲ್ಲರೂ ಒಳ್ಳೆಯವರೇ. ಕೆಟ್ಟದ್ದೆಂಬುದನ್ನು ಅವಳರಿಯಳು. ಆಕೆ ಹಾಡುತ್ತಿದ್ದ ಹಾಡಿನ ಮಹಿಮೆಯಿಂದ ಅನೇಕರಿಗೆ ಮನಸ್ಸು ಬದಲಾಯಿಸಿತು. ಆ ಹಾಡಿನ ಇನ್ನೊಂದು ಭಾಗ ಇದು:

All service ranks the same with God;
If now, as formerly, He trod
Paradise, His presence fills
Our earth. Each only as God wills
Can work–God's puppets, best and worst
Are we. There is no last nor first.

ನಾವು ಭಗವಂತನ ಕೈಗೊಂಬೆಗಳು, —ಎಲ್ಲರೂ ಅಷ್ಟೇ. ಅದರಲ್ಲಿ ಮೊದಲು ಯಾರು, ಕಡೆ ಯಾರು? ದೇವರ ಲೆಕ್ಕದಲ್ಲಿ ಎಲ್ಲ ಸೇವೆಗಳೂ ಸಮಾನವಾದವೇ. ಯಾರೇನು ಕರ್ಮ ಮಾಡಿದರೂ ಅದು ಭಗವದಿಚ್ಛೆಯಂತೆಯೇ ಆಗತಕ್ಕದ್ದು. "ತೇನ ವಿನಾ ತೃಣಮಪಿ ನ ಚಲತಿ" ಎನ್ನುವುದರ ತಾತ್ಪರ್ಯ ಇದೇ. ಕೇನೋಪನಿಷತ್ತಿನ ಕಥೆಯ ಭಾವವೂ ಇದೇ. ಭಗವಂತನು ಕೆಲವರಿಗೆ ಕಸಗುಡಿಸುವಂತೆ ಆಜ್ಞೆ ಮಾಡುತ್ತಾನೆ. ಇನ್ನು ಕೆಲವರಿಗೆ ನೀರು ಹೊತ್ತು ತರುವಂತೆ

ವಿಧಿಸುತ್ತಾನೆ. ಮತ್ತೆ ಕೆಲವರಿಗೆ ಜಮಖಾನೆ ಹಾಸುವಂತೆ ಅಪ್ಪಣೆ ಮಾಡುತ್ತಾನೆ. ಬೇರೆ ಕೆಲವರನ್ನು ಸುಮ್ಮನೆ ಕುಳಿತಿದ್ದು, ಯಾರಾದರೂ ಬಂದರೆ ಜವಾಬು ಹೇಳಿರೆನ್ನುತ್ತಾನೆ. ನಾವೆಲ್ಲರೂ ಭಗವಂತ ಕೈಗೊಂಬೆಗಳು. ಭಗವಂತನು ಸೂತ್ರ ತಿರುಗಿಸಿದಂತೆಲ್ಲ ನಾವು ಆಡುತ್ತಿದ್ದೇವೆ. ತೀರಾ ನಿಕೃಷ್ಟವಾದದ್ದು ಪ್ರಪಂಚದಲ್ಲಿ ಯಾವುದೂ ಇಲ್ಲ; ಸರ್ವೋತ್ಕೃಷ್ಟವಾದದ್ದೂ ಯಾವುದೂ ಇಲ್ಲ. ಎಲ್ಲವೂ ಸೇವಾದೃಷ್ಟಿಯಿಂದ ಏಕಪ್ರಾಯ. ಇದು ಬ್ರೌನಿಂಗ್ ಕವಿಯ ಮತ. ರಾಮಾಯಣದಲ್ಲಿಯೂ ಇದು ನಿದರ್ಶನವಾಗಿದೆ. ಆಂಜನೇಯ ಬೆಟ್ಟ ತಂದ, ಅಳಿಲು ಮರಳು ತಂದಿತು. ಸಾಮರ್ಥ್ಯದಲ್ಲಿ ಹೆಚ್ಚು ಕಡಮೆ; ಮನೋಭಾವದಲ್ಲಿ ಮಾತ್ರ ಉಭಯಸಮ.

ಮಿಲ್ಟನ್ ಕವಿಗೆ ಕುರುಡುತನ ಬಂತು. ಅವನು ದೇವರನ್ನು ಕೇಳುತ್ತಾನೆ: “ಭಗವಂತ, ನೀನು ನನ್ನ ಕಣ್ಣನ್ನು ಕಿತ್ತುಕೊಂಡುಬಿಟ್ಟೆ, ಹಗಲನ್ನು ನನ್ನಿಂದ ಕಸಿದುಕೊಂಡೆ. ನಿತ್ಯ ರಾತ್ರಿಯಾಗಿದೆ ನನಗೆ. ನಾನೇನು ಸೇವೆ ಮಾಡಲಿ? ಆದರೆ ಒಂದು ಸಮಾಧಾನವುಂಟು:

> ... God doth not need
> Either man's work or his own gifts. Who best
> Bear his mild yoke, they serve Him best. His state
> Is kingly : thousands at His bidding speed
> And post o'er land and ocean without rest;
> They also serve who only stand and wait.

“ಭಗವಂತನಿಗೆ ಅವಶ್ಯವಿಲ್ಲ ಮನುಷ್ಯನ ಸೇವೆ; ಮನುಷ್ಯನು ಕೊಡುವ ನೈವೇದ್ಯ ಕಾಣಿಕೆಗಳು ದೇವರಿಗೆ ಬೇಕಿಲ್ಲ; ಅದರ ಲಾಭವೇನಿದ್ದರೂ ಮಾಡಿದವನಿಗೆ. ಭಗವಂತನು ಒಂದು ಶಿಕ್ಷಾದಂಡವನ್ನು ಮನುಷ್ಯನ ತಲೆಯ ಮೇಲೆ ಹೊರಿಸಿರುತ್ತಾನೆ. ಅದನ್ನು ಯಾರು ಪ್ರತಿಭಟನೆ ಮಾಡದೆ ಸ್ವೀಕಾರ ಮಾಡುತ್ತಾರೋ ಅವರು ಭಗವಂತನ ಸೇವಕರು. ಭಗವಂತನು ಸಾರ್ವಭೌಮ ರಾಜ. ಅವನ ಆಜ್ಞೆ ನಡಸಲು ಸಹಸ್ರಾರು ಮಂದಿ ನೆಲದ ಮೇಲೆಯೂ ಸಮುದ್ರದ ಮೇಲೆಯೂ ಎಲ್ಲ ಕಡೆಯೂ ಧಾವಿಸುತ್ತಿದ್ದಾರೆ. ಅವರೆಲ್ಲರೂ ಭಗವಂತನ ಸೇವಕರೇ. ಆತನು ಯಾವ ಸೇವಕನಿಗಾದರೂ— ‘ನೀನು ಓಡಾಡಬೇಡ, ಒಂದೇ ಕಡೆ ಕೋಲುಕಾರನಂತೆ—ದ್ವಾರಪಾಲಕನಂತೆ—ನಿಂತು ಕಾದಿರು’ ಎಂದು ಅಪ್ಪಣೆ ಕೊಟ್ಟರೆ ಹಾಗೆ

ಮಾಡುವುದೂ ಭಗವಂತನ ಸೇವೆಯೇ. ಕುರುಡನ್ನು ಕೊಟ್ಟ ಭಗವಂತ ನನಗೆ ಒಂದೇ ಕಡೆ ಇರೆಂದು ಆಜ್ಞೆ ಮಾಡಿದ. ಇದೂ ಅವನ ಸೇವೆಯೇ. ನಾನು ಆ ಸೇವೆಯನ್ನು ಸಂತೋಷದಿಂದ ಮಾಡುತ್ತೇನೆ."

ಈ ಇಬ್ಬರು ಇಂಗ್ಲಿಷ್ ಕವಿಗಳ ಅಭಿಪ್ರಾಯವೂ ಆಜ್ಞಾಧಾರಕತ್ವದ್ದು. ಭಗವದ್ವಿಧಿಯಿಂದ ನಮ್ಮ ಪಾಲಿಗೆ ಯಾವ ಸ್ಥಾನ, ಯಾವ ಕುಲವೃತ್ತಿ, ಯಾವ ಲೋಕಕರ್ಮ ಬಂದಿದೆಯೋ ಅದೇ ನಮಗಿರುವ ಆತ್ಮೋದ್ಧಾರದ ಅವಕಾಶ. ಹಾಗೆ ಅದನ್ನು ಉಪಯೋಗಿಸಿಕೊಳ್ಳಬೇಕೆಂಬುದೇ ಗೀತೆಯ ಉಪದೇಶ. ಭಾರತದ ಧರ್ಮವ್ಯಾಧೋಪಾಖ್ಯಾನದ ಉಪದೇಶವೂ ಅದೇ.

ಈಹೊತ್ತು ನಮ್ಮ ಲೋಕವು ಧನಪಿಶಾಚಿಯ ಕೈಗೊಂಬೆಯಾಗಿದೆ. ನಾನಾ ವಿಜ್ಞಾನ ಸಂಧಾನಗಳೂ ಯಂತ್ರೋಪಕರಣಗಳೂ ದ್ರವ್ಯೋತ್ಪತ್ತಿಯಲ್ಲಿ ಪರ್ಯವಸಾನ ಕಾಣುತ್ತಿವೆ. ಅನ್ನ ವಸ್ತ್ರ ವಾಹನ ವೈಭವಗಳು ಎಲ್ಲರಿಗೂ ಜೀವನದ ಹೆಗ್ಗುರಿಯಾಗಿವೆ. ಅದರಲ್ಲಿ ದೇಶದೇಶಗಳಿಗೆ ಸ್ಪರ್ಧೆ : ಮನುಷ್ಯಮನುಷ್ಯರಿಗೆ ಸ್ಪರ್ಧೆ; ಅಣ್ಣನಿಗೆ ತಮ್ಮನಲ್ಲಿ, ತಮ್ಮನಿಗೆ ಅಣ್ಣನಲ್ಲಿ ಸ್ಪರ್ಧೆ. ಈ ಪೋಟಿ ಪೈಪೋಟಿಗಳಲ್ಲಿ ವಂಶವೃತ್ತಿಗಳ ವಿಭಾಗ ರೇಖೆ ಅಳಿಸಿಹೋಗಿದೆ. ಬ್ರಾಹ್ಮಣಕುಲವೃತ್ತಿಯು ಪ್ರೋತ್ಸಾಹವಿಲ್ಲದ್ದಾಗಿದೆ. ಕ್ಷತ್ರಿಯನಿಗೆ ಅವಕಾಶವೇ ಇಲ್ಲವಾಗಿದೆ. ಅವನು ಈ ಹೊತ್ತೆಲ್ಲಿದ್ದಾನೆ? ಈ ಹೊತ್ತಿನ ಯೋಧನು ಬಾಂಬು ಯಂತ್ರದವನು; ಈ ಹೊತ್ತಿನ ರಾಜ್ಯನಿರ್ವಾಹಿ ಪ್ರಜಾಪ್ರತಿನಿಧಿ. ಈಗ ಕ್ಷತ್ರಿಯನಿಗೆ ಕೆಲಸವಿಲ್ಲ. ಶೂದ್ರನೆನ್ನಿಸಿಕೊಳ್ಳಲು ಈಹೊತ್ತು ಯಾರಿಗೂ ಇಷ್ಟವಿಲ್ಲ. ಎಲ್ಲರೂ ಎಲ್ಲರಿಗೂ ಎಲ್ಲದರಲ್ಲಿಯೂ ಸರಿಸಮಾನರೆಂಬುದಲ್ಲವೆ ಇಂದಿನ ಮತ? ಈ ಹೊತ್ತು ಯಾರು ಇನ್ನ್ಯಾರಿಗೆ ಪರಿಚರ್ಯೆಮಾಡಲು ಸಿದ್ಧನಿದ್ದಾನೆ? ಹೀಗೆ ಈಹೊತ್ತು ಲೋಕದಲ್ಲಿ ಉಳಿದಿರುವುದು ವೈಶ್ಯವೃತ್ತಿಯೊಂದೇ. ಅರ್ಥಸಂಪಾದನೆಯೊಂದೇ ಈ ಹೊತ್ತು ಎಲ್ಲರಿಗೂ ಧರ್ಮವೆನಿಸಿದೆ. ಬ್ರಾಹ್ಮಣವಂಶಿಗಳೆಂದು ಹೇಳಿಕೊಳ್ಳುವವರು ಈ ಅರ್ಥಾರ್ಜನೆಯ ದಾರಿಯಲ್ಲಿ ಮುಂದಾಳುಗಳಾಗಿದ್ದಾರೆ. ಇಂಜಿನಿಯರ್, ಡಾಕ್ಟರ್, ಲಾಯರ್—ಇವರ ವೃತ್ತಿಗಳು ಬ್ರಾಹ್ಮಣವೃತ್ತಿಗಳೆಂದು ವಿಶೇಷಿಸಿ ಹೇಳುವಹಾಗಿಲ್ಲ. ಗುಮಾಸ್ತಗಿರಿಯೂ ಬ್ರಾಹ್ಮಣನ ವಿಶೇಷಸ್ವತ್ತೇನೂ ಅಲ್ಲ. ಸರಕಾರಿಯ ಚಾಕರಿ ಬ್ರಾಹ್ಮಣ್ಯದ್ದೆಂದು ಯಾರೂ ವಾದಿಸಲಾರರು. ಬ್ರಿಟಿಷ್ ಜನಾಂಗ ನಮ್ಮ ದೇಶದಲ್ಲಿ ಕಾಲೂರಿದ ಬಳಿಕ, ಅದು ತನ್ನ ಸೇವೆ ಸಹಾಯಗಳಿಗಾಗಿ ದೇಶೀಯರನ್ನು ಕರೆದುಕೊಳ್ಳಬೇಕಾಯಿತು. ಆಗ ವಿದ್ಯಾಸಂಪ್ರದಾಯದಲ್ಲಿ ಆರ್ಷೇಯವಾಗಿ

ಬಂದಿದ್ದ ಬ್ರಾಹ್ಮಣರು ಇಂಗ್ಲಿಷ್ ಕಲಿಯಲು ಮುನ್ನುಗ್ಗಿ ಬಂದು, ಅಧಿಕಾರ ಹುದ್ದೆಗಳನ್ನು ಗಳಿಸಿಕೊಂಡರು. ಇತರ ವರ್ಣಗಳವರು ಅವರನ್ನು ಅನುಕರಿಸಿದರು. ಈ ಸಂದರ್ಭದ ಜೊತೆಗೆ ಯೂರೋಪಿನ ಯಂತ್ರಪರಿಶ್ರಾಮಿಕ ಕ್ರಾಂತಿಯಿಂದ ಹುಟ್ಟಿಕೊಂಡ ಹತ್ತಾರು ಹೊಸಹೊಸ ಕಸಬು ದಾರಿಗಳ ಆಕರ್ಷಣೆ ಸೇರಿಕೊಂಡಿತು. ಹಳೆಯ ವೃತ್ತಿವ್ಯವಸ್ಥೆ ಕುಸಿದುಬಿತ್ತು. ಹೀಗೆ ನಾಲ್ಕಾರು ಬಗೆಯಾಗಿ ಲೋಕದ ಜೀವನ ಹೊಸ ಮುಖವನ್ನು ತಾಳುತ್ತಿದೆ. ಅನ್ನಸಂಪಾದನೆಯ ಚಿಂತೆ ದೊಡ್ಡದಾಗಿ, ಆತ್ಮಸಂದರ್ಶನದ ಚಿಂತೆ ಸಣ್ಣದಾಗಿದೆ. ಕುಕ್ಷಿಯೇ ದೈವ; ಭಕ್ಷ್ಯವೇ ಸ್ವರ್ಗ. ಇದು ಇಂದಿನ ಬ್ರಾಹ್ಮಣ್ಯದ ಪಾಡು:

> ಯೇ ಯೇ ಯುಗೇ ತು ಯೇ ವಿಪ್ರಾ ಯತ್ರ ಯತ್ರ ಚ ಯೇ ದ್ವಿಜಾಃ ।
> ತೇಷಾಂ ನಿಂದಾ ನ ಕರ್ತವ್ಯಾ ಯುಗರೂಪಾ ಹಿ ತೇ ದ್ವಿಜಾಃ ॥

ಇದು ಪರಾಶರವಚನ. ಬ್ರಾಹ್ಮಣನು ಕಾಲವನ್ನು ಮೀರಿದವನಲ್ಲ. ಹಾಗಾದರೆ ಅವನು ಈಗ ತನ್ನ ಕುಲಧರ್ಮಕ್ಕಾಗಿ ಮಾಡಬೇಕಾದದ್ದು ಏನೂ ಇಲ್ಲವೋ? ಕಾಲ ಸ್ಥಿತಿ ತನಗೆ ಪ್ರತಿಕೂಲವಾಗಿದೆಯೆಂದು ಅವನು ಗಾಳಿ ಬೀಸಿದಂತೆ ಓಡಬೇಕಾದದ್ದೋ? ಅದು ಧರ್ಮವಾಗದು.

> ಸರ್ವನಾಶೇ ಸಮುತ್ಪನ್ನೇ ಹ್ಯರ್ಧಂ ತ್ಯಜತಿ ಪಂಡಿತಃ ॥

ಕಾಲವಿಪರ್ಯಾಸದಲ್ಲಿ ಕೂಡ ಎಷ್ಟು ಮಾತ್ರ ಬ್ರಾಹ್ಮಣಧರ್ಮವನ್ನು ಉಳಿಸಿಕೊಳ್ಳಲು ಸಾಧ್ಯವೋ ಅಷ್ಟುಮಟ್ಟಿಗೆ, —ಅದರಲ್ಲಿಯೂ ಹೆಚ್ಚಾದಷ್ಟು, —ಉಳಿಸಿಕೊಳ್ಳಲು ಸರ್ವಪ್ರಯತ್ನಗಳನ್ನೂ ಮಾಡಬೇಕಾದದ್ದೇ ಧರ್ಮ. ಬ್ರಾಹ್ಮಣಿಕೆಯನ್ನು ಎರಡು ದೃಷ್ಟಿಗಳಿಂದ ನೋಡಬಹುದು: ಒಂದು ಅಂತರಂಗದ್ದು, ಇನ್ನೊಂದು ಬಹಿರಂಗದ್ದು. ಅಂತರಂಗದ್ದು (೧) ಸತ್ಯ, (೨) ಶಮ, (೩) ಶೌಚ, (೪) ಲೋಕಮೈತ್ರಿ, (೫) ಜೀವಸಂಸ್ಕಾರ, (೬) ಜ್ಞಾನವಿಜ್ಞಾನಸಾಧನೆ, (೭) ಭಗವದುಪಾಸನೆ, (೮) ವಿರಕ್ತಿ—ಇವುಗಳದು. ಈ ಎಂಟೂ ಆತ್ಮಗುಣಗಳು, ಮನೋಭಾವದ ಗುಣಗಳು. ಬಹಿರಂಗ ಸಂದರ್ಭಗಳು ಎಷ್ಟು ಕೆಟ್ಟವಾದರೂ ಅವುಗಳಿಂದ ಈ ಮನೋಗುಣಗಳು ವ್ಯತ್ಯಾಸಪಡಬೇಕಾದದ್ದಿಲ್ಲ. ಆತ್ಮದ ಮೇಲೆ ಲೋಕವಿಕಾರಗಳಿಗೆ ಅಧಿಕಾರಕೊಡದೆ, ದುರ್ವಿಕಾರಗಳಿಲ್ಲದಂತೆ ಮನಸ್ಸನ್ನು ದೃಢ ನಿಯಮದಲ್ಲಿರಿಸಿಕೊಂಡಿರುವುದೇ ಬ್ರಾಹ್ಮಣಲಕ್ಷಣ. ಅದು ಬ್ರಾಹ್ಮಣನ ಮೊದಲನೆಯ

ಕರ್ತವ್ಯ. ಈ ಲಕ್ಷಣಕ್ಕೆ ಪ್ರತಿಕೂಲವಾಗದಂತೆ ಬಹಿರಂಗವೃತ್ತಿಯನ್ನು ಗೊತ್ತುಮಾಡಿಕೊಂಡು ನಡೆಯಿಸುವುದು ಎರಡನೆಯ ಕರ್ತವ್ಯ. ಜೀವನೋಪಾಯವನ್ನಾರಿಸಿಕೊಳ್ಳುವುದರಲ್ಲಿ, ಲಾಭವೊಂದನ್ನೇ ಗಣಿಸದೆ, ಕೂಡಿದಮಟ್ಟಿಗೂ ಸತ್ಯಶೌಚಾದಿಗಳಿಗೆ ವಿರೋಧ ತಾರದಂಥ ಉದ್ಯೋಗವನ್ನು ಹುಡುಕಬೇಕು. ಹಾಗೆ ಹುಡುಕಿದ ಮೇಲೆ ದೊರೆತದ್ದರಲ್ಲಿ ದಕ್ಷನಾಗಿರಬೇಕು ಮತ್ತು ತೃಪ್ತನಾಗಿರಬೇಕು. ಲಾಭ ಚಿಂತನೆ ದೋಷವಲ್ಲ; ಆದರೆ ಅದು ದೋಷಪ್ರೇರಕವಾಗುವ ಭಯವುಂಟು. ಆ ಭಯದ ಬಗೆಗೆ ಜಾಗರೂಕನಾಗಿದ್ದುಕೊಂಡು, ಕಾರ್ಯದಲ್ಲಿ ಪಟುವಾಗಿರಬೇಕು. ಇದು ಇಂದು ಬ್ರಾಹ್ಮಣನಿಗಿರುವ ಎರಡನೆಯ ಕರ್ತವ್ಯ. ಮೂರನೆಯ ಕರ್ತವ್ಯವೊಂದುಂಟು. ಲೌಕಿಕದ ಕರ್ತವ್ಯಾವಸರದ ನಡುವೆ ದೊರೆಯಲಾದಷ್ಟು ಬಿಡುವನ್ನು ದೊರಕಿಸಿಕೊಂಡು ಅದನ್ನು ವಿನೋದ ಸಂಭ್ರಮಗಳಲ್ಲಿ ಕಳೆಯದೆ, ವೇದಶಾಸ್ತ್ರಾವಗಾಹನೆಗೆ ವಿನಿಯೋಗಿಸಬೇಕು. ವಾರಕ್ಕೊಂದು ದಿನವೋ ಪಕ್ಷಕ್ಕೊಂದು ದಿನವೋ ಬಿಡುವಿಲ್ಲದವರಿಲ್ಲ. ವಾರಕ್ಕೊಂದಿಷ್ಟು ವಿಶ್ರಾಂತಿಕಾಲವನ್ನು ಈಗಣ ಕಾರ್ಮಿಕಶಾಸನವೇ ಒತ್ತಾಯಪಡಿಸುತ್ತದೆ. ಆ ಬಿಡುದಿನದಲ್ಲಿ ಒಂದೆರಡು ಘಂಟೆಗಳ ಸಮಯವನ್ನಾದರೂ ರಾಮಾಯಣ ಭಾರತಗಳಿಗೆ ಮುಡುಪಿಡುವುದು ಎಂಥ ಕಾರ್ಯವಂತನಾದ ಬ್ರಾಹ್ಮಣನಿಗೂ ಅಸಾಧ್ಯವಾಗದು. ಮನಸ್ಸಿದ್ದರೆ ದಾರಿಯಿದೆ. ತಾವು ಬ್ರಾಹ್ಮಣರೆಂದು ಹೇಳಿಕೊಳ್ಳುವವರಿಗೆ ತಮ್ಮ ಮಾತಿನ ಮೇಲೆಯೇ ದೃಷ್ಟಿಯಿದ್ದಲ್ಲಿ, ಆ ಮಾತನ್ನು ಸಾರ್ಥಕಮಾಡುವುದು ಈಗಣ ವಿಪರೀತ ಪರಿಸ್ಥಿತಿಯಲ್ಲಿ ಕೂಡ ಅಸಾಧ್ಯವಲ್ಲ.

ಸತ್ಯಶೌಚಾದಿ ಗುಣಗಳು ಬ್ರಾಹ್ಮಣನ ವಿಶೇಷಸ್ವತ್ತೇನೂ ಅಲ್ಲ. ಇವು ಇತರರೂ ಅಭ್ಯಾಸಮಾಡಬೇಕಾದವೇ. ಆ ಗುಣಗಳು ಬ್ರಾಹ್ಮಣನವೆಂದು ಅವನ್ನು ವಿಶೇಷಿಸಿದ್ದೇಕೆ? ಉತ್ತಮನೂ ಆದರ್ಶಪ್ರಾಯನೂ ಆದ ಬ್ರಾಹ್ಮಣನು ಹೀಗೆ ಮಾಡಿದ್ದಾನೆ; ಅವನಿಗೆ ಆ ಗುಣಗಳು ಸುಲಭವಾಗಿ ಸಿದ್ಧಿಸುತ್ತವೆ; ಮಿಕ್ಕ ವರ್ಗಗಳವರೂ ಪ್ರಯತ್ನಿಸಿ ಅವನಂತಾಗಿ, ಆ ಗುಣಗಳನ್ನು ಸಂಪಾದಿಸಿಕೊಳ್ಳಲಿ—ಇದು ತಾತ್ಪರ್ಯ.

> ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।
> ಸ್ವಕರ್ಮನಿರತಃ ಸಿದ್ಧಿಂ ಯಥಾ ವಿನ್ದತಿ ತಚ್ಛೃಣು ॥

ಅವರವರ ನೈಜಕರ್ಮಗಳಲ್ಲಿ ಅವರವರು ನಿರತರಾಗಿರಬೇಕು. ಒಬ್ಬಾನೊಬ್ಬ ಮನುಷ್ಯನ ಯೋಗ್ಯತೆ ನಿರ್ಧಾರವಾಗುವುದು ಅವನಿಗೊದಗಿರುವ ಕೆಲಸ ದೊಡ್ಡದೇ ಸಣ್ಣದೇ

ಎಂಬುದರಿಂದಲ್ಲ; ಆ ಕೆಲಸ ಎಷ್ಟೇ ಸಣ್ಣದಾಗಿರಲಿ—ಕಡೆಗೆ ಬೀದಿ ಗುಡಿಸುವ ಕೆಲಸವೇ ಆಗಲಿ—ಅವನು ಮಾಡುವ ಕೆಲಸದಲ್ಲಿ ಬರುವ ಗುಣದಿಂದ, ಅವನ ಕೆಲಸದಲ್ಲಿ ಅವನು ತೋರಿಸುವ ಶ್ರದ್ಧೆಯಿಂದ, ಉತ್ಸಾಹದಿಂದ, ದಕ್ಷತೆಯಿಂದ—ಆ ಮನುಷ್ಯನ ಬೆಲೆ ಗೊತ್ತಾಗುತ್ತದೆ.

ಈ ಅಭಿಪ್ರಾಯವನ್ನು ಚಿಂತಿಸುವಲ್ಲಿ ನಮ್ಮ ಪೂಜ್ಯರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ತರುಣ ಇಂಜಿನಿಯರುಗಳನ್ನು ಕುರಿತು ಹೇಳಿದ ಒಂದು ಮಾತು ಸ್ಮರಣೆಗೆ ಬರುತ್ತದೆ.

The bulk of the work in the districts is of a very ordinary character, but it is not on that account to be despised. Many a young engineer may find no higher work to design or construct than a road-culvert or a tank-sluice. A dispensary or a dak bungalow may be his dream in architecture. But whatever the work, if the designs are to be proper and economical, a close study of local conditions and a correct knowledge of how similar work is best done elsewhere are very necessary. The young engineer may lay to heart the advice which Mr. Moberly Bell of the London *Times* gave on a similar occasion. "If your business," said he, "is only to sweep a crossing, remember that it is your duty to make that crossing the best swept in the world." (14-11-1910)

"ಇಂಜಿನಿಯರ್ ಉದ್ಯೋಗಕ್ಕೆ ಸೇರಿದವರಿಗೆ ಮೊದಮೊದಲು ಭಾರೀ ಕೆಲಸಗಳನ್ನು ಒಪ್ಪಿಸುವುದಿಲ್ಲ; ಒಂದು ಸಣ್ಣ ಜಲದಾರಿ, ಒಂದು ಪುಟ್ಟ ಕಟ್ಟಡ, ಒಂದು ಸಣ್ಣ ಸೇತುವೆ—ಇಂಥಾದ್ದನ್ನೇ ಅವರಿಗೆ ಒಪ್ಪಿಸುವುದು. ಆದರೂ ಅದನ್ನು ಅವರು ಸಣ್ಣದೆಂದೂ ತಮ್ಮ ಮಟ್ಟಕ್ಕೆ ಸಾಲದೆಂದೂ ಭಾವಿಸಬಾರದು. ಯೋಗ್ಯತೆ ಗೊತ್ತಾಗುವುದು ಕೆಲಸದ ಗಾತ್ರದಿಂದ ಅಲ್ಲ, ಮಾಡಿದ ಕೆಲಸದಲ್ಲಿರುವ ಗುಣದಿಂದ. ಲಂಡನ್ 'ಟೈಮ್ಸ್' ಪತ್ರಿಕೆಯ ಮೋಬರ್ಲಿ ಬೆಲ್

ಎಂಬಾತನ ಮಾತು ಯುಕ್ತವಾಗಿದೆ. ‘ನೀನು ಮಾಡುವ ಕೆಲಸ ರಸ್ತೆ ಚೌಕ ಗುಡಿಸುವುದಿರಬಹುದು. ಆದರೆ ನೀನು ಗುಡಿಸಿದ ರಸ್ತೆ ಚೌಕ ಪ್ರಪಂಚದ ಎಲ್ಲ ರಸ್ತೆಚೌಕಗಳಿಗಿಂತಲೂ ಚೊಕ್ಕಟವಾದದ್ದೆನಿಸುವಂತೆ ಗುಡಿಸುವುದು ನಿನಗೆ ಕರ್ತವ್ಯವಾಗಿರುತ್ತದೆ.’”

ಇದೇ ಸ್ವಧರ್ಮಾನುಷ್ಠಾನರೂಪವಾದ — ಸ್ವಕರ್ಮಾಚರಣರೂಪವಾದ — ಭಗವತ್ಪೂಜೆ. ಸ್ವಕರ್ಮನಿರತನಾದವನು ಸಿದ್ಧಿಯನ್ನು ಪಡೆಯುತ್ತಾನೆ.

ಸಿದ್ಧಿಯನ್ನು ಪಡೆಯುವುದು ಸ್ವಧರ್ಮಾಚರಣೆಯಿಂದ ಎಂಬುದು ಗೀತೆಯ ಅತಿ ಮುಖ್ಯವಾದ ಉಪದೇಶಗಳಲ್ಲೊಂದು:

> ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
> ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥

“ಸಮಸ್ತ ಪ್ರಾಣಿಗಳಿಗೂ ಅವರವರ ನಡವಳಿಕೆಗಳ ಶಕ್ತಿಯೂ ದಿಕ್ಕೂ ಯಾವ ಮೂಲ ಚೈತನ್ಯದಿಂದ ಬಂದಿರುತ್ತವೋ ಮತ್ತು ಯಾವ ಚೈತನ್ಯವು ಸಮಸ್ತಪ್ರಪಂಚವನ್ನೂ ತನ್ನೊಳಗಿಂದ ವಿಸ್ತಾರಪಡಿಸಿ ಒಳಗೆ ತುಂಬಿಕೊಂಡು ಹೊರಗೆ ಆವರಿಸಿಕೊಂಡಿದೆಯೋ ಆ ಪರವಸ್ತುವನ್ನು ಮನುಷ್ಯನು ತನಗೆ ನೈಜವಾಗಿಯೂ ವಿಹಿತವಾಗಿಯೂ ಬಂದಿರುವ ಕರ್ಮವನ್ನು ಆಚರಿಸುವುದರ ಮೂಲಕ ಪೂಜಿಸಿ ಪರಮಸಿದ್ಧಿಯನ್ನು ಪಡೆಯುತ್ತಾನೆ.”

ಅತ್ಯಂತ ಅರ್ಥಗರ್ಭಿತವಾದ ಶ್ಲೋಕ ಇದು. ಬ್ರಹ್ಮವಸ್ತುವನ್ನು ಕುರಿತು ಇದಕ್ಕಿಂತ ಸೊಗಸಾದ ನಿರೂಪಣೆ ಇನ್ನೆಲ್ಲಿಯೂ ಇರಲಾರದು. ಹಾಗೆಯೇ ಬ್ರಹ್ಮಪೂಜೆಯ ಕ್ರಮದ ನಿರೂಪಣೆಯೂ ಇದಕ್ಕಿಂತ ಸಂಗ್ರಹವಾಗಿ ಮತ್ತೆಲ್ಲಿಯೂ ಇರಲಾರದು. ಸರ್ವ ವ್ಯಾಪಿಯಾದದ್ದು ಬ್ರಹ್ಮವಸ್ತು. ಪ್ರಾಣಿಗಳಿಗೆಲ್ಲ ಹೀಗೆ ಮಾಡು, ಹೀಗೆ ಮಾಡಬೇಡ ಎಂದು ಒಳಗಡೆಯಿಂದುಂಟಾಗುವ ಪ್ರೇರಣೆಗೆಲ್ಲ ಮೂಲವಾದುದ್ದು ಬ್ರಹ್ಮವಸ್ತು. ಜೀವಕ್ಕೆ ಅನಾದಿಯಾಗಿ ಜನ್ಮಜನಾಂತರಗಳಿಂದ ಪರಂಪರೆಯಾಗಿ ಬಂದಿರುವ ಗುಣ ವಾಸನಾಮಲಗಳನ್ನು ಕಳೆದಲ್ಲಿ ಜೀವಕ್ಕೆ ಆತ್ಮಸ್ವರೂಪದರ್ಶನ ದೊರೆಯುತ್ತದೆ. ಆ ಮಲಗಳನ್ನು ಕಳೆಯುವ ಉಪಾಯವೇ ಧರ್ಮ. ಧರ್ಮವು ವರ್ಣವಿಹಿತ ವಂಶವಿಹಿತ ಸ್ವಸ್ವಭಾವಾಗತಗಳಾದ

ಸತ್ಕರ್ಮಸಂಸ್ಕಾರರೂಪಗಳಲ್ಲಿರುತ್ತದೆ. ಹೀಗೆ (೧) ಶಾಸ್ತ್ರ ವಿಹಿತವಾಗಿ, (೨) ಲೋಕಪ್ರಯೋಜಕವಾಗಿ, (೩) ಜೀವಶೋಧಕವಾಗಿರುವ ಸ್ವಕರ್ಮಾಚರಣೆಯಿಂದ ಆತ್ಮಜ್ಞಾನಕ್ಕೆ ದಾರಿಯಾಗುತ್ತದೆ. ಮಾಡಬೇಕಾಗಿರುವ ಕೆಲಸವನ್ನು ದಕ್ಷತೆಯಿಂದ ಮಾಡಬೇಕು.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಭಾವನಿಯತಂ ಕರ್ಮ ಕುರ್ವನ್ ನಾಽಽಪ್ನೋತಿ ಕಿಲ್ಬಿಷಮ್ ॥

"ಸ್ವಧರ್ಮದಲ್ಲಿ ಅಷ್ಟೇನೂ ಗುಣ ತೋರದಿದ್ದರೂ, ಇನ್ನೂ ಚೆನ್ನೆನಿಸುವ ಬೇರೆಯವರ ಧರ್ಮಕ್ಕಿಂತ ಆ ಸ್ವಧರ್ಮವೇ ಶ್ರೇಯಸ್ಕರ. ಸ್ವಭಾವದಿಂದ ಗೊತ್ತಾಗಿರುವ ಕರ್ಮದಿಂದ ಪಾಪ ಬರುವುದಿಲ್ಲ." ಉಪಾಧ್ಯಾಯವೃತ್ತಿಗಿಂತ ಮಾಂಸವಿಕ್ರಯ ಲಾಭಕಾರಿಯಾದರೂ ಅದು ಬ್ರಾಹ್ಮಣನಿಗೆ ಧರ್ಮವಾಗದು. ಮಾಂಸ ಮಾರುವ ಕಸಬಿನವನಿಗೆ ಆ ಕೆಲಸಕ್ಕಿಂತ ನಾಟಕವಾಡುವುದು ಮೇಲೆಂದು ತೋಚಿದರೂ, ಅಷ್ಟು ಇಷ್ಟವಲ್ಲದ ಸ್ವಕುಲ ಕರ್ಮವೇ ಅವನಿಗೆ ಧರ್ಮ. ಅವನ ಧರ್ಮವನ್ನವನು ಮಾಡದಿದ್ದರೆ ಅವನು ಪಾಪಕ್ಕೆ ಗುರಿಯಾಗುತ್ತಾನೆ. ಇದು ಮಹಾಭಾರತದ ಧರ್ಮವ್ಯಾಧೋಪಾಖ್ಯಾನದಲ್ಲಿ ನಿರೂಪಿತವಾಗಿರುವ ತತ್ತ್ವ.

ಸಹಜಂ ಕರ್ಮ ಕೌನ್ತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥

"ಸಹಜವಾಗಿ, ಕುಲಕ್ರಮದಿಂದ ಬಂದಿರುವ ಕರ್ಮವು ಕೊಂಚಮಟ್ಟಿಗೆ ಇತರರ ದೃಷ್ಟಿಯಿಂದ ದೋಷಯುಕ್ತವಾಗಿ ಕಂಡರೂ ಅದನ್ನು ಆ ಕುಲವೃತ್ತಿಯವನು ಬಿಡತಕ್ಕದ್ದಲ್ಲ. ಲೋಕದಲ್ಲಿ ವೃತ್ತಿ ಯಾವುದಾದರೂ ಅದು ಯತ್ಕಿಂಚಿತ್ತಾದರೂ ದೋಷ ಕೂಡಿಕೊಂಡೇ ಇರುತ್ತದಲ್ಲವೆ— ಬೆಂಕಿಯನ್ನು ಹೊಗೆ ಯಾವಾಗಲೂ ಕವಿದಿರುವಂತೆ?"

ಹರಿಶ್ಚಂದ್ರನಿಗೆ ಕಾಲಕರ್ಮಸಂಯೋಗದಿಂದ ಶ್ಮಶಾನದಲ್ಲಿ ಕಾವಲಿರಬೇಕಾದ ಕರ್ಮ ಪ್ರಾಪ್ತವಾಯಿತು. ಅದೇನು ಸಂತೋಷದ ಕೆಲಸವೆ? ನಮಗೆ ಹಾಗೆ ತೋರುವುದಿಲ್ಲ. ಆ ಜಾಗದಲ್ಲಿ ವಿಧಿ ಅವನನ್ನು ತಂದುನಿಲ್ಲಿಸಿದಮೇಲೆ ಆ ಕೆಲಸವನ್ನು ಹೇಗೆ ಮಾಡಬೇಕೋ ಹಾಗೆ ಮಾಡಬೇಕು. ಆದದ್ದರಿಂದ ತನ್ನ ಹೆಂಡತಿ ಚಂದ್ರಮತಿಯು ಮಗ ಲೋಹಿತಾಶ್ವನ ದೇಹವನ್ನು

ಹೊತ್ತುಕೊಂಡು ಬಂದಾಗಲೂ "ಇಲ್ಲಿ ಸಲ್ಲಬೇಕಾದ ರುಸುಮನ್ನು ತೆರಲೇಬೇಕು" ಎಂದ. ಕರ್ತವ್ಯವಿದ್ದಲ್ಲಿ ಇಷ್ಟಾನಿಷ್ಟವಿಚಾರಕ್ಕೆಡೆಯಿಲ್ಲ.

ಮೇಲಣ ಅಭಿಪ್ರಾಯಗಳನ್ನು ಎಲ್ಲ ಸ್ಮೃತಿಗಳೂ ಅಂಗೀಕರಿಸಿವೆ. ಮನುಗಳು ಅದನ್ನು ಸ್ಪಷ್ಟಪಡಿಸಿದ್ದಾರೆ. ಅತ್ರಿಸಂಹಿತೆಯ ಈ ಕೆಳಗಣ ಶ್ಲೋಕಗಳು ವಿಷಯವನ್ನು ಸಂಗ್ರಹವಾಗಿಯೂ ನಿಶ್ಶಂಕವಾಗಿಯೂ ಹೇಳುತ್ತವೆ:

> ಸ್ವಾನಿ ಕರ್ಮಾಣಿ ಕುರ್ವಾಣಾ ದೂರೇ ಸನ್ತೋऽಪಿ ಮಾನವಾಃ ।
> ಪ್ರಿಯಾ ಭವನ್ತಿ ಲೋಕಸ್ಯ ಸ್ವೇ ಸ್ವೇ ಕರ್ಮಣ್ಯವಸ್ಥಿತಾಃ ॥
> ಯೇ ವ್ಯಪೇತಾಃ ಸ್ವಧರ್ಮೇಭ್ಯಃ ಪರಧರ್ಮೇ ವ್ಯವಸ್ಥಿತಾಃ ।
> ತೇಷಾಂ ಶಾಸ್ತಿಕರೋ ರಾಜಾ ಸ್ವರ್ಗಲೋಕೇ ಮಹೀಯತೇ ॥
> ಆತ್ಮೀಯೇ ಸಂಸ್ಥಿತೋ ಧರ್ಮೇ ಶೂದ್ರೋऽಪಿ ಸ್ವರ್ಗಮಶ್ನುತೇ ।
> ಪರಧರ್ಮೋ ಭವೇತ್ ತ್ಯಾಜ್ಯಃ ಸುರೂಪಪರದಾರವತ್ ॥

ಈ ಸ್ವಧರ್ಮದ ತತ್ತ್ವವನ್ನು ಗ್ರೀಕ್ ತಾತ್ತ್ವಿಕನೂ ಪ್ರಪಂಚದ ತತ್ತ್ವಜಿಜ್ಞಾಸು ಮಂಡಲಕ್ಕೆ ಮೂರ್ಧನ್ಯಭೂತನೂ ಆದ ಪ್ಲೇಟೊ (Plato) ತನ್ನ "ರಿಪಬ್ಲಿಕ್" (***The Republic***) ಗ್ರಂಥದಲ್ಲಿ ಪದೇಪದೇ ಸೋಪಪತ್ತಿಕವಾಗಿ, ಸೋದಾಹರಣವಾಗಿ ನಿರೂಪಿಸಿದ್ದಾನೆ:

"Justice is the having and doing of what is a man's own and belongs to him." (Book IV-433 ff.)

ಪಾಪಸ್ಪರ್ಶವಿಲ್ಲದಿರುವ ಕರ್ಮ ಯಾವುದಿದೆ? ಎಲ್ಲ ಕರ್ಮಗಳಲ್ಲಿಯೂ ಯತ್ಕಿಂಚಿತ್ತು ಪಾಪಸಂಭವ ಇದ್ದೇ ಇರುತ್ತದೆ. ಅದು ಹಾಗೆಂಬ ನೆವದಿಂದ ನಾವು ಕರ್ಮಮಾಡೆವೆನ್ನುವ ಹಾಗಿಲ್ಲ. ಕರ್ಮವನ್ನೇನೋ ಮಾಡಲೇ ಮಾಡಬೇಕು. ಅದು ನಮಗೆ ಅಂಟುತ್ತದೆಯೆ, ಇಲ್ಲವೆ– ಎಂಬುದು ಪ್ರಶ್ನೆ. ಅದು ಸ್ವಭಾವದಿಂದ ವಿಹಿತವಾಗಿ ಬಂದದ್ದಾದರೆ ಅಂಟುವುದಿಲ್ಲ. ನಮಗಿಷ್ಟವಿಲ್ಲದ, ಮತ್ತು ಲೋಕಸಾಮಾನ್ಯದ ದೃಷ್ಟಿಯಿಂದ ಶ್ರೇಷ್ಠವೆನ್ನಿಸದ ಕರ್ಮಗಳನ್ನು ಮಾಡಬೇಕಾದ ಸಂದರ್ಭಗಳು ಎಷ್ಟೋ ಬರುತ್ತವೆ. "ಅನಿಷ್ಟಂ ಮಿಶ್ರಂ ಚ" ಎಂದು ಸ್ವಾಮಿ ಹೇಳಿದ್ದಾನೆ. ವಿಹಿತಕರ್ಮ ಎಂಥಾದ್ದಾದರಾಗಲಿ, ಅದರಲ್ಲಿ ನಮ್ಮ ಸ್ವಾರ್ಥದ ಸೋಂಕಿಲ್ಲದಿದ್ದರೆ

ದೋಷವಿಲ್ಲ. ಅದೇ ಫಲತ್ಯಾಗ. ಅದೇ ಸಂನ್ಯಾಸದ ಸಾರಭಾಗ. ಹಾಗೆ ಕರ್ಮಮಾಡುವುದರಿಂದ ತ್ರಿಗುಣಮಲಗಳು ಸವೆಯುತ್ತವೆ, ವಾಸನೆಗಳು ಕ್ಷಯಿಸುತ್ತವೆ, ಆತ್ಮದ ಒಳಗಡೆ ಗೂಢವಾಗಿರುವ ಸತ್ತ್ವಗಳೂ ಸದ್ಗುಣಗಳೂ ಪ್ರಕಾಶಕ್ಕೆ ಬರುತ್ತವೆ, ಲೋಕಸಂಸ್ಥಿತಿಗೆ ಅದು ಅನುಕೂಲವಾಗುತ್ತದೆ. ಆತ್ಮದ ಋಣಮಲಗಳು ಸವೆದು ಅದರಲ್ಲಿರುವ ಸತ್ತ್ವವು ಪ್ರಕಾಶಕ್ಕೆ ಬರೋಣದರಿಂದ ಪರಮಾತ್ಮಸಂದರ್ಶನ ಸುಲಭವಾಗುತ್ತದೆ.

ಸಮಾರಂಭಗಳನ್ನು ಬಿಡತಕ್ಕದ್ದೆಂದು ಹನ್ನೆರಡನೆಯ ಅಧ್ಯಾಯದಲ್ಲಿ ಉಪದೇಶ ಮಾಡಿದ್ದಾನೆ ಭಗವಂತ:

> ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ।

ಸಮಸ್ತ ಸಮಾರಂಭಗಳನ್ನೂ ತ್ಯಜಿಸಬೇಕಂತೆ. ಇದು ಒಂದು ಉಪದೇಶ. ಸಮಾರಂಭ ಎಂಥಾದ್ದಾದರೂ ಅದಕ್ಕೆ ದೋಷ ತಪ್ಪಿದ್ದಲ್ಲ; ಆದದ್ದರಿಂದ ಆ ದೋಷವನ್ನು ಗಣನೆಗೆ ತೆಗೆದುಕೊಳ್ಳದೆ ಯುಕ್ತವಾದ ಸಮಾರಂಭವನ್ನು ಮಾಡಲೇಬೇಕು ಎಂದು ಇಲ್ಲಿಯ ಉಪದೇಶ. ಹೀಗೆ ಮೇಲ್ನೋಟಕ್ಕೆ ಉಪದೇಶ ಇಬ್ಬಗೆಯಾಗಿ ಕಾಣುತ್ತದೆ. ಇಲ್ಲಿ ತೋರುವ ವಿರೋಧವನ್ನು ಪರಿಹಾರಮಾಡುವ ವಾಕ್ಯ ಇನ್ನೊಂದಿದೆ:

> ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
> ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥

ಎಲ್ಲ ಮನುಷ್ಯಕರ್ಮದಲ್ಲಿಯೂ ಯತ್ಕಿಂಚಿತ್ತು ಪಾಪಸಂಭವ ಉಂಟೇ ಉಂಟು. ಹಾಗಿದ್ದರೂ ಆ ದುಸ್ಸಂಭವ ಯತ್ಕಿಂಚಿತ್ತು ಕೂಡ ಇಲ್ಲದಂತೆ ಮಾಡಿಕೊಳ್ಳಲು ಒಂದು ಉಪಾಯವುಂಟು. ಆ ಉಪಾಯವು ನಿಷ್ಕಾಮವಾದ ಮನೋಭಾವ. "ಮಾಡುವವನು ನಾನಲ್ಲ. ಮಾಡುವುದು ನನಗೋಸ್ಕರವಲ್ಲ. ಭಗವದ್ವಿಧೇಯತೆಯಿಂದ ಮಾಡುವುದು. ಪ್ರಕೃತಿಯ ಗುಣಗಳು ಮಾಡಿಸುತ್ತವೆ. ಕರ್ಮವಿಧಿಯಂತೆ ಫಲಾಫಲಗಳು ಬರುತ್ತವೆ. ಯಾವುದು ಬಂದರೂ ಅದಕ್ಕೆ ನಾನು ಸಿದ್ಧನು. ಕರ್ಮನಿರ್ಣಯ ಮಾಡಬೇಕಾದದ್ದು ನನ್ನ ಪ್ರಯೋಜನದ, ನನ್ನ ಭೋಗದ, ನನ್ನ ಪ್ರತಿಷ್ಠೆಯ ದೃಷ್ಟಿಯಿಂದಲ್ಲ. ಪೂರ್ವಾರ್ಜಿತದಿಂದ ಪ್ರಕೃತಿವ್ಯವಸ್ಥೆಯಲ್ಲಿ ನನಗೆ

ದೊರಕಿರುವ ಸ್ಥಾನಾವಕಾಶಗಳ ದೃಷ್ಟಿಯಿಂದ ನನಗೆ ಧರ್ಮನಿರ್ಣಯ. ಅದರಂತೆ ಕರ್ಮ." ಹೀಗೆ ವಿವೇಕಮಾಡಿ ಕರ್ತವ್ಯೈಕಬುದ್ಧಿಯಿಂದ ಮಾಡಿದ ಕರ್ಮದಿಂದ ಪಾಪವಿಲ್ಲ. ಏಕೆಂದರೆ ಅದರಲ್ಲಿ ಅಹಂತೆಯಿಲ್ಲ; ಭಗದ್ವಿಧೇಯತೆಯಿರುತ್ತದೆ. ಇದು ಕರ್ಮಮೀಮಾಂಸೆಯ ತತ್ತ್ವಸಾರ.

> ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
> ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ॥

ನೈಷ್ಕರ್ಮ್ಯ ಎಂಬ ಮಾತನ್ನು ಶಾಸ್ತ್ರದಲ್ಲಿ ಪದೇಪದೇ ಉಪಯೋಗಿಸುತ್ತಾರೆ. ನೈಷ್ಕರ್ಮ್ಯ ಎಂದರೆ ಕರ್ಮ ಮಾಡದೆ ಇದ್ದರೆ ಯಾವ ಪಾಪರಾಹಿತ್ಯವುಂಟೋ ಯಾವ ನಿಶ್ಚಿಂತತೆಯುಂಟೋ ಆ ಸ್ಥಿತಿ, ಕೇವಲ ಜ್ಞಾನವಂತಸ್ಥಿತಿ. ಆ ಸ್ಥಿತಿಯಲ್ಲಿರತಕ್ಕವರಿಗೆ ಕರ್ಮದ ಬಂಧನವಿಲ್ಲ. ಅವರು ಕರ್ಮಮಾಡುವುದಿಲ್ಲವೆಂದು ಅಭಿಪ್ರಾಯವಲ್ಲ; ಅವರಿಗೆ ಕರ್ಮದ ನಿರ್ಬಂಧವಿಲ್ಲವೆಂದು ತಾತ್ಪರ್ಯ. ಅವರು ಕರ್ಮಮಾಡಬಹುದು—ಸ್ವಸಂತೋಷದಿಂದ. ಅವರು ಸ್ವತಂತ್ರರಾಗಿ ಆತ್ಮೌಪಮ್ಯಬುದ್ಧಿಯಿಂದ ಲೋಕಹಿತಾರ್ಥವಾಗಿ ಕರ್ಮಮಾಡುತ್ತಾರೆ. ನಮ್ಮ ಶಾಸ್ತ್ರಗಳಲ್ಲಿ ಕರ್ಮವೆಂದರೆ ಅಗ್ನಿಷ್ಟೋಮ ವಾಜಪೇಯ ಇತ್ಯಾದಿಗಳೆಂದು; ಸತ್ರ ಕಟ್ಟಿಸುವುದು, ವ್ರತ, ದಾನ ಮೊದಲಾದವೆಂದು ಹೇಳುತ್ತಾರೆ. ವಿಶಾಲವಾದ ಅರ್ಥದಲ್ಲಿ ಸಮಸ್ತ ಜೀವನವೂ ಯಜ್ಞಕಾರ್ಯವೆಂದು ಹಿಂದೆ ನೋಡಿದ್ದೇವೆ. ಆದದ್ದರಿಂದ ಕರ್ಮವೆಂಬುದರಲ್ಲಿ ವೈದಿಕಕರ್ಮ, ಲೌಕಿಕ ಕರ್ಮ—ನಿತ್ಯ, ನೈಮಿತ್ತಿಕ, ಕಾಮ್ಯ—ಎಲ್ಲವನ್ನೂ ನಾವು ಗ್ರಹಿಸಬಹುದು. ಮನುಷ್ಯನಿಗೆ ಇಂದ್ರಿಯಗಳೂ ಉಪಕರಣಗಳೂ ಯಥೇಷ್ಟವಾಗಿವೆ. ಅವನ್ನೆಲ್ಲ ಉಪಯೋಗಿಸಿಕೊಂಡು, ಈಶ್ವರಾರಾಧನೆಯಾಗಿ ಕರ್ಮಮಾಡಬೇಕು: "ಸ್ವಕರ್ಮಣಾ ತಮಭ್ಯರ್ಚ್ಯ". ಸ್ವಕರ್ಮದ ಫಲವು ಸ್ವಮನಃಪರಿಪಾಕ. ಆತ್ಮಜ್ಞಾನವು ಗ್ರಂಥವ್ಯಾಸಂಗದಿಂದಲೂ ತರ್ಕಾದಿ ಬುದ್ಧಿ ಸಾಹಸಗಳಿಂದಲೂ ಸಿದ್ಧಿಸುತ್ತದೆಂದು ಸಾಮಾನ್ಯವಾದ ತಿಳಿವಳಿಕೆ: ಪಾಂಡಿತ್ಯ ಬುದ್ಧಿ ಚಮತ್ಕಾರಗಳಿಂದ ಬ್ರಹ್ಮಜ್ಞಾನವುಂಟಾಗುತ್ತದೆಂದುಕೊಳ್ಳುತ್ತೇವೆ. ಇದು ಪ್ರಮಾದ. ಮನಸ್ಸು ಪಕ್ವವಾಗಬೇಕು. ಕೆಲವು ಬೇಳೆಗಳು ಸುಲಭವಾಗಿ ಬೇಯುವುದಿಲ್ಲ; ಸೋಡ (Soda) ಮೊದಲಾದದ್ದೆಲ್ಲ ಬೀಳಬೇಕಾಗುತ್ತದೆ. ಮನಸ್ಸೂ ಹಾಗೆ ಗಟ್ಟಿಯಾಗಿರುತ್ತದೆ; ಅಥವಾ ಮೆತುವಾಗಿರುತ್ತದೆ, ಅದು ಕಲ್ಲಾಗಿದ್ದರೂ ದೋಷವೇ; ತೊಪ್ಪೆತೊಪ್ಪೆಯಾಗಿದ್ದರೂ ದೋಷವೇ. ಕಲ್ಲನ್ನು ಕರಗಿಸಿ

ಮೆತುಮಾಡಬೇಕು; ತೊಪ್ಪೆಯನ್ನು ಒಣಗಿಸಿ ಗಟ್ಟಿಮಾಡಬೇಕು. ಇದು ಲೋಕಾನುಭವದಿಂದಲೇ ಸಾಧ್ಯ. ಕರ್ಮಾವಸರದಲ್ಲಿ ಜಗತ್ಸಂಪರ್ಕವಾಗುತ್ತದೆ; ಆ ಸಂಪರ್ಕದಲ್ಲಿ ಒಂದು ಜೀವಕ್ಕೆ ಇತರ ಜೀವಗಳೊಡನೆ ಘರ್ಷಣೆಗಳಾಗುತ್ತವೆ; ಆ ಘರ್ಷಣೆಗಳಿಂದಲೇ ಜೀವಕ್ಕೆ ಸಂಸ್ಕಾರವಾಗುವುದು. ಹೀಗೆ ಜೀವ ಜೀವಸಂಘರ್ಷಣೆಯಾದರೆ ಒಂದೊಂದು ಜೀವದ ಒಳಗೂ ಇರುವ ಕಶ್ಮಲಗಳು, —ರಾಗ ದ್ವೇಷಾಸೂಯಾದಿ ನಾನಾ ವಿಕಾರಪ್ರವೃತ್ತಿಗಳು–ಹೊರಬೀಳುತ್ತವೆ. ಅಜೀರ್ಣವ್ಯಾಧಿಯಿರತಕ್ಕವನಿಗೆ ವೈದ್ಯರು ನಾನಾ ವಿಧವಾದ ಔಷಧಗಳನ್ನು ಕುಡಿಸಿ ಊರ್ಧ್ವಗತಿಯಿಂದಲೂ ಅಧೋಗತಿಯಿಂದಲೂ ವಿರೇಚನಮಾಡಿಸುತ್ತಾರೆ. ದೇಹದಲ್ಲಿರುವ ಕಶ್ಮಲಗಳು ಹೋಗಬೇಕಾದರೆ ಔಷಧಗಳ, ಧಾತುಮೂಲಿಕೆಗಳ ಸಂಪರ್ಕವಾಗಬೇಕು ಕರುಳಿಗೆ. ಹಾಗೆಯೇ ಜೀವದ ರಜಸ್ತಮೋರೂಪದ ಮಲಗಳು ಹೊರಕ್ಕೆ ಬರಬೇಕಾದರೆ ಜೀವಕ್ಕೂ ಜೀವಕ್ಕೂ ಸಂಘರ್ಷಣೆಯಾಗಬೇಕು. ಕರ್ಮರೂಪದ ಲೋಕಸಂಘರ್ಷಣೆಯಿಂದ ನಮ್ಮೊಳಗಡೆ ಅವಿತುಕೊಂಡಿರುವ ದುರಾಶೆ ದುರಾಗ್ರಹಗಳ ಬೇರುಗಳು ಹೊರಕ್ಕೆ ಬರುತ್ತವೆ. ಆ ಸಂಘರ್ಷಣೆಯಿಂದಲೇ ಮನಸ್ಸಿನ ಪರಿಪಾಕ. ಆತ್ಮವಸ್ತುವಿಗೂ ಜೀವಕ್ಕೂ ಮನಸ್ಸೇ ಸೇತುವೆ. ಜೀವಕ್ಕೂ ಜಗತ್ತಿಗೂ ಮನಸ್ಸೇ ಸೇತುವೆ. ಅದರಿಂದಲೇ ಹೇಳಿರುವುದು:

> ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ॥

ಮೋಕ್ಷವಾಗಬೇಕಾಗಿದ್ದರೂ ಮನಸ್ಸೇ; ಬಂಧನವಾಗಬೇಕಾಗಿದ್ದರೂ ಮನಸ್ಸೇ. ಸೇತುವೆಯ ಮೇಲೆ ಎತ್ತಕಡೆಗೆ ಬೇಕಾದರೂ ಹೋಗಬಹುದು. ಇತ್ತಕಡೆಯಿಂದ ಅತ್ತಕಡೆಗೆ ಹೋದರೆ ಮೋಕ್ಷ; ಅತ್ತಕಡೆಯಿಂದ ಇತ್ತಕಡೆಗೆ ಬಂದರೆ ಬಂಧನ. ಸೇತುವೆ ಒಂದೇ: ಅದು ಮನಸ್ಸು. ಅ ಮನಸ್ಸನ್ನು ಪಕ್ವಪಡಿಸಬೇಕು. ಅದು ನಾನಾ ವಿಧವಾದ ಕರ್ಮದ ಮೂಲಕ ಸಾಧ್ಯ. ಜೀವಶೋಧನೆಗೋಸ್ಕರ ಕರ್ಮ.

> ಮನವ ಶೋಧಿಸಬೇಕೋ ನಿಚ್ಚ । ದಿನದಿನವು ಮಾಡುವ ಪಾಪಪುಣ್ಯದ ವೆಚ್ಚ ॥

ಎಂದು ಹಾಡಿದ್ದಾರೆ ಪುರಂದರದಾಸರು.

ಸಾಮಾನ್ಯವಾಗಿ ನಮಗೆ ತೋರುವುದು ಪುರುಷಾರ್ಥಸಿದ್ಧಿಗೋಸ್ಕರ ಕರ್ಮ ಎಂದು. ಕರ್ಮ ಏಕೆ ಮಾಡಬೇಕು? ಜೀವಿಕೆ ಸಂಪಾದಿಸಿಕೊಳ್ಳುವುದಕ್ಕೆ. ಮತ್ತೂ ಏಕೆ ಮಾಡಬೇಕು? ಸಂಪಾದಿಸಿಕೊಂಡದ್ದು ಸಾಲದೆಹೋದರೆ ಭಗವಂತನು ಇನ್ನೂ ಸ್ವಲ್ಪ ಅನುಗ್ರಹಿಸಿಯಾನೆಂಬ ನಿರೀಕ್ಷೆಯಿಂದ. ಹೀಗೆ ಅನೇಕ ಕಾರಣಗಳಿಂದ ಕರ್ಮ ಮಾಡುತ್ತೇವೆ. ಕೇವಲ ಈಶ್ವರಾರಾಧನೆಯೆಂದು ಸ್ವಕರ್ಮಮಾಡಿರೆಂದು ಭಗವಂತನ ಉಪದೇಶ. ಅಂಥ ಸ್ವಕರ್ಮಾಚರಣೆಯೇ ಆತ್ಮಜ್ಞಾನಕ್ಕೆ ದಾರಿ.

ಜೀವಪರಿಪಾಕವು ಶೂನ್ಯಸ್ಥಳದಲ್ಲಿ (Vacuum) ಆಗುವುದಿಲ್ಲ. ಕರ್ಮವು ನಡೆಯುವುದು ಲೋಕರಂಗದಲ್ಲಿ. ನಿರ್ಜನಪ್ರದೇಶದಲ್ಲಿ ಕರ್ಮವೆಂಬುದಿಲ್ಲ. ಕರ್ಮಪ್ರೇರಣೆ ಉಂಟಾಗುವುದು ಲೋಕಸಂದರ್ಭದಲ್ಲಿ. ಆದದ್ದರಿಂದ ಲೋಕಸಂಸರ್ಗದಲ್ಲಿ ಜೀವವನ್ನು ತೇಯಬೇಕು. ಶ್ರೀಗಂಧದ ಕೊರಡನ್ನು ಸಾಣೆಯಕಲ್ಲಿನ ಮೇಲೆ ನೀರು ಹಾಕಿಕೊಂಡು ತೇದರೆ ಅದು ಸವೆದು ಅದರಿಂದ ಸುಗಂಧವುಂಟಾಗುತ್ತದೆ. ಆ ಸುಗಂಧದಿಂದ ಮರದ ಜನ್ಮ ಸಾರ್ಥಕವಾಗುತ್ತದೆ. ಹಾಗೆಯೇ ಜೀವವು ಜಗಚ್ಛಿಲೆಯ ಮೇಲೆ ತನ್ನ ಶಕ್ತಿಗಳನ್ನು ತೇಯಬೇಕು. ಅದಕ್ಕೆ ಭಗವದ್ಭಕ್ತಿಯೆಂಬ ತೀರ್ಥ ಬೀಳಬೇಕು. ಹಾಗೆ ತೇಯುವುದರಿಂದ ಜೀವದ ಕಶ್ಮಲಗಳು ಹೋಗಿ ಪರಮಾತ್ಮದರ್ಶನಯೋಗ್ಯತೆ ಉಂಟಾಗುತ್ತದೆ. ಆತ್ಮದರ್ಶನವು ಶ್ರಮಸಾಧ್ಯವಾದದ್ದು.

> ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾऽತ್ಮಾನಂ ನಿಯಮ್ಯ ಚ ।
> ಶಬ್ದಾದೀನ್ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥
> ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
> ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥
> ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
> ವಿಮುಚ್ಯ ನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ ॥

ಮೊದಲು "ವಿಶುದ್ಧಯಾ ಬುದ್ಧ್ಯಾ" –ಬುದ್ಧಿ ಸ್ವಚ್ಛವಾಗಿರಬೇಕು, ಎಂದರೆ ಈ ಜಗತ್ತು ಆತ್ಮಾನಾತ್ಮಮಿಶ್ರಣವಾದದ್ದು; ಅದರಲ್ಲಿ ಆತ್ಮ ಯಾವುದು, ಆತ್ಮೇತರವಾದದ್ದು ಯಾವುದು, ಶಾಶ್ವತವಾದದ್ದು ಯಾವುದು, ಕಿಂಚಿತ್ಕಾಲದ್ದು ಯಾವುದು—ಈ ವಿವೇಚನೆ ಬುದ್ಧಿಯಲ್ಲಿ ಸ್ಪಷ್ಟವಾಗಿರಬೇಕು. ಬಳಿಕೆ "ಧೃತ್ಯಾ ಆತ್ಮಾನಂ ನಿಯಮ್ಯ".–ಮನಸ್ಸನ್ನು ದೃಢವಾಗಿ

ಹದ್ದಿನಲ್ಲಿರಿಸಿಕೊಳ್ಳಬೇಕು. ಬುದ್ಧಿ ಮಾಡಿಕೊಂಡ ವಿವೇಕವು ಮರುಕ್ಷಣದಲ್ಲಿ ಹಾರಿಹೋಗುವಂತಾಗಬಾರದು. ಆಮೇಲೆ ಶಬ್ದಾದಿ ಇಂದ್ರಿಯಾಕರ್ಷಣೆಗಳ ನಿರೋಧವಾಗಬೇಕು. ಇದು ಆತ್ಮನಿಯಮನಕ್ಕೆ ಸಹಕಾರಿ. ಇಂದ್ರಿಯಗಳ ಬಲೆಗೆ ಬೀಳಬಾರದು. ಧೃತಿ ಶಬ್ದಕ್ಕೆ ಎರಡರ್ಥಗಳು: ದೃಢವಾಗಿರುವುದು ಎಂದು ಒಂದರ್ಥ; ಧೈರ್ಯದಿಂದಿರುವುದು ಎಂಬುದು ಇನ್ನೊಂದರ್ಥ. ಈ ಸಂದರ್ಭದಲ್ಲಿ ಎರಡರ್ಥಗಳೂ ಅನ್ವಯಿಸುತ್ತವೆ. ಯಾರು ಆತ್ಮನಿಯಮನ ಮಾಡಿಕೊಳ್ಳಲು ಸಿದ್ಧರಾಗಿದ್ದಾರೋ ಅವರಿಗೆ ಭಗವದ್ಗೀತೆಯ ಉಪದೇಶ. ನಮ್ಮ ಮನಸ್ಸು, ಇಚ್ಛಾದ್ವೇಷಗಳು, ಆಗ್ರಹಗಳು, ಆವೇಶಗಳು– ಇವು ಹೋದ ದಾರಿಯಲ್ಲಿ ಹೋಗಿಕೊಳ್ಳಲಿ, ನಮಗೆ ಸಂಪೂರ್ಣ ಸ್ವಾತಂತ್ರ್ಯಬೇಕು–ಈ ಅಭಿಪ್ರಾಯವಿರುವ ಪಕ್ಷಕ್ಕೆ ಈ ಗ್ರಂಥ ಅವರಿಗಲ್ಲ. ತರುವಾಯ "ರಾಗದ್ವೇಷೌ ವ್ಯುದಸ್ಯ." ವ್ಯುದಾಸವೆಂದರೆ ಬಿಸುಟು ಕಳೆಯುವುದು. ಕರ್ಮ ಎಂದರೆ ಜಗತ್ಸಂಬಂಧವಷ್ಟೆ? ಜಗತ್ಸಂಬಂಧಗಳಲ್ಲಿ ಅಭಿಮಾನ ಪಕ್ಷಪಾತಗಳಿರಬಾರದು. ರಾಗದ್ವೇಷಗಳನ್ನು ಬಿಡದಿರುವಾಗ ಸರ್ವತ್ರ ಸಮಬುದ್ಧಿ ಹೇಗೆ ಬಂದೀತು? ಆದದ್ದರಿಂದ ಮನುಷ್ಯಸಂಬಂಧಗಳಲ್ಲಿ ವ್ಯಾಮೋಹಗಳನ್ನೂ ವೈಷಮ್ಯಗಳನ್ನೂ ಬಿಟ್ಟಿರಬೇಕು. ರಾಗವೆಂದರೆ ಅವಿಚಾರ ವ್ಯಾಮೋಹ. ದುಷ್ಟ ವಿಷಯದಲ್ಲಿ ಯಾವ ಮನೋಭಾವವು ವ್ಯಾಮೋಹವೆನ್ನಿಸಿಕೊಳ್ಳುತ್ತದೆಯೋ ಅದೇ ಭಾವವು ಸದ್ವಿಷಯದಲ್ಲಿ ಭಕ್ತಿಯೆಂದೆನಿಸಿಕೊಳ್ಳುತ್ತದೆ.

"ವಿವಿಕ್ತಸೇವೀ" : ವಿವಿಕ್ತವೆಂದರೆ ಗದ್ದಲದಿಂದ ದೂರವಿರುವುದು, –ಹೊರಚ್ಚಾಗಿರುವುದು. ವಿವೇಕ ಮಾಡಬೇಕಾದರೆ ತಾನು ತನ್ನೊಳಗೆ ತನ್ನೊಡನೆಯೇ ವಿಚಾರ ಮಾಡಿಕೊಳ್ಳಬೇಕು. ಇದನ್ನೇ ಶಂಕರಕೃತವೆನಿಸಿದ ಒಂದು ಶ್ಲೋಕದಲ್ಲಿ "ಏಕಾನ್ತೇ ಸುಖಮಾಸ್ಯತಾಮ್" ಎಂದು ಹೇಳಿದೆ. ಇತರರಿಂದ ಮನಸ್ಸಿಗೆ ವಿಕ್ಷೇಪವಾಗಬಾರದೆಂದು ಇದರ ತಾತ್ಪರ್ಯ. ಜ್ಞಾನ ಬೆಳೆಯಬೇಕಾದರೆ ಲೋಕಾನುಭವವೂ, ಜಿಜ್ಞಾಸೆಯೂ ಹೇಗೆ ಆವಶ್ಯಕವೋ ವಿವಿಕ್ತತೆಯೂ ಹಾಗೆಯೇ ಆವಶ್ಯಕ. ವ್ಯಾಸರ ಮಾತನ್ನು ನೋಡಿದ್ದೇವೆ:

ತತಸ್ತತಶ್ಚೋಪರತಿಃ ಕ್ರಿಯಾಭ್ಯಃ ॥

ಗೀತೆಯಲ್ಲಿಯೇ ಹಿಂದೆ ನೋಡಿದ್ದೇವೆ:

ಶನೈಶ್ಶನೈರುಪರಮೇತ್ ಬುದ್ಧ್ಯಾ ಧೃತಿಗೃಹೀತಯಾ ॥ (೬-೨೫)

ಮನಸ್ಸನ್ನು ಕೆಲಸಕಾರ್ಯಗಳಿಂದ ಆಗಾಗ ವಾಪಸ್ ತೆಗೆದುಕೊಳ್ಳುತ್ತಿರಬೇಕು. ಈ ಉಪರಮದಿಂದ ಎರಡು ಪ್ರಯೋಜನ. "ಈ ಕರ್ಮ ನನಗೆ ಅಂಟಿಕೊಂಡಿಲ್ಲ" —ಹೀಗೆಂಬ ಅಂಸಂಗಾಭ್ಯಾಸವಾಗುತ್ತದೆ. ಎರಡನೆಯ ಪ್ರಯೋಜನ ನಾವು ಮಾಡಿ ಆಗಿರುವ ಕರ್ಮದಲ್ಲಿ ಗುಣ ಎಷ್ಟಿದೆ, ದೋಷ ಎಷ್ಟಿದೆ, ಪ್ರಮಾದ ಎಷ್ಟು ಸೇರಿದೆ—ಎಂದು ವಿಮರ್ಶೆಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಸ್ಪೀಟಾಟ ಆಡುವವರಿಗೆ ಆಟವಾದಮೇಲೆ, "ನಾನು ಈ ಎಲೆ ಹಾಕಬಾರದಿತ್ತು, ಆ ಎಲೆ ಹಾಕಬೇಕಾಗಿತ್ತು" ಎಂದೆಲ್ಲ ತೋರುತ್ತದೆ. ಬರವಣಿಗೆ ಬರೆಯುವವನಿಗೆ ಗ್ರಂಥವೆಲ್ಲ ಅಚ್ಚಾದಮೇಲೆ "ಇದನ್ನು ಹಾಗೆ ಬರೆದಿದ್ದಿದ್ದರೆ ಚೆನ್ನಾಗಿತ್ತು; ಅದು ಮುಂಚೆ ಬಂದು ಇದು ಅನಂತರ ಬಂದಿದ್ದಿದ್ದರೆ ಚೆನ್ನಾಗುತ್ತಿತ್ತು" ಮೊದಲಾಗಿ ಅನ್ನಿಸುವುದುಂಟು. ಹೀಗೆ ಆತ್ಮಶೋಧನೆಗೆ ಉಪರಮವು ಸಹಾಯಕವಾಗುತ್ತದೆ. ವಿವಿಕ್ತಸೇವಿತ್ವದಿಂದ ಅಥವಾ ಉಪರಮದಿಂದ (೧) ಅಸಂಗಾಭ್ಯಾಸ, (೨) ಆತ್ಮ ಪರೀಕ್ಷಣಾವಕಾಶ—ಈ ಎರಡು ಪ್ರಯೋಜನಗಳುಂಟು.

"ಲಘ್ವಾಶೀ" : ಧ್ಯಾನಮಾಡಬೇಕೆನ್ನುವವನು ಆಹಾರನಿದ್ರಾದಿಗಳನ್ನು ಲಘುವಾಗಿಟ್ಟುಕೊಂಡಿರಬೇಕು. ಹೊಟ್ಟೆ ಭಾರವಾದರೆ ಮೆದುಳು ತೂಕಡಿಸುತ್ತದೆ. ಬುದ್ಧಿ ಎಚ್ಚತ್ತಿರಬೇಕಾದರೆ ಮೃಷ್ಟಾಶಿಯಾಗಬಾರದು, ಉಪವಾಸಿಯೂ ಆಗಬಾರದು; ಮಿತಾಶಿಯಾಗಬೇಕು. ಇದನ್ನೇ ಹಿಂದೆ "ಯುಕ್ತಾಹಾರವಿಹಾರಸ್ಯ" ಎಂದು ಹೇಳಿದ್ದು. ಹಾಗೆ ದೇಹವನ್ನೂ ಮನಸ್ಸನ್ನೂ ಮಾತನ್ನೂ ಸಹ ನಿಯಮದಲ್ಲಿರಿಸಿಕೊಳ್ಳಬೇಕು. ಮಾತು ಮನಸ್ಸನ್ನು ಬಹಿರ್ಮುಖ ಮಾಡುತ್ತದೆ. ಎಲ್ಲ ಸದ್ದು ಸಪ್ಪುಳವೂ ಮನಸ್ಸನ್ನು ಹೊರಕ್ಕೆಳೆದು ಚೂರು ಚೂರು ಮಾಡಿ ಚದರಿಸುತ್ತದೆ. ಶಾಸ್ತ್ರದ ತರ್ಕವಿತರ್ಕಗಳು ಕೂಡ ಹಾಗೆ ಮಾಡುತ್ತವೆ. ಬಹಿಸ್ಸಂಪರ್ಕಗಳನ್ನು ವರ್ಜಿಸಿ, ತನಗೆ ಏನೂ ಯಾವುದೂ ಬೇಕಿಲ್ಲವೆಂಬ ಭಾವವನ್ನು ಅಭ್ಯಾಸಮಾಡಿಕೊಳ್ಳಬೇಕು. ಅದೇ ವೈರಾಗ್ಯ.

ಯತ್ಕಿಂಚಿತ್ತು ದೇಹಸೌಕರ್ಯಗಳು ಬೇಕಾಗುತ್ತವೆ. ಈ ಅನುಕೂಲತೆಗಳು ಈಶ್ವರದರ್ಶನಕ್ಕೆ ಸಹಕಾರಿಗಳಾಗಿ, ಉಪಕರಣಗಳಾಗಿರುವುದಕ್ಕೆಷ್ಟು ಬೇಕೋ ಅಷ್ಟು ಮಾತ್ರ ಇರಬೇಕು. ಅಷ್ಟಕ್ಕಿಂತ ಅವು ಹೆಚ್ಚಾಗಬಾರದು. ಮನಸ್ಸನ್ನು ಹದ್ದಿನಲ್ಲಿರಿಸಿರಬೇಕಾದರೆ ಅನಾವಶ್ಯಕವಾದ ಆಶೆಗಳನ್ನೂ, ಆತ್ಮಧ್ಯಾನಕ್ಕೆ ಸಂಬಂಧಪಡದ ಚಿಂತೆಗಳನ್ನೂ ಬಿಡಬೇಕು. ವೈರಾಗ್ಯ ಬಂದಂತೆ ಅಹಂಕಾರಾದಿ ಚೇಷ್ಟೆಗಳು ಬಿಟ್ಟುಹೋಗುತ್ತವೆ.

“ಪರಿಗ್ರಹ” ಎಂದರೆ ಇತರರಿಂದ ಏನನ್ನಾದರೂ ಸ್ವೀಕರಿಸುವುದು, ಗಂಟುಕಟ್ಟಿ ಕೈಗಾವಲೆಂದು ಇಟ್ಟುಕೊಳ್ಳುವುದು—ಇತ್ಯಾದಿ. ಇದು ವೈರಾಗ್ಯಕ್ಕೆ ವಿರೋಧ. ಇದಿದ್ದರೆ ಒಂದು ಬಹಿಸ್ಸಂಬಂಧವನ್ನು ಮಾಡಿಕೊಂಡಂತಾಗುತ್ತದೆ. ಅದು ಒಂದು ಬಗೆಯ ಮಮತೆ. ಮಮತೆಯಿಲ್ಲದವನಾಗಿ ನಿಶ್ಚಿಂತನಾಗಿ ಶಾಂತನಾದವನಿಗೆ ಬ್ರಹ್ಮಾನುಭವಾರ್ಹತೆ ಬರುತ್ತದೆ. ಭಗವಂತನನ್ನು ಪೂರ್ತಿ ನಂಬಿದವನಿಗೆ ಬೇರೆ ಕೈಗಾವಲೇಕೆ? “ದೇವರು ಮಾಡಿಸಿದಂತಾಗಲಿ” ಎಂಬುದು ವೈರಾಗ್ಯ. “ನಮ್ಮ ಹುಷಾರಿಯಲ್ಲಿ ನಾವಿರೋಣ—ದೇವರು ಮರೆತಾನೋ ಏನೋ” ಎಂಬವನಿಗೆ ಬೇಕಾದದ್ದು ಪರಿಗ್ರಹ. “ಪೆನ್ಷನ್ ಆದಮೇಲೆ ಅರ್ಧಸಂಬಳವಾಗುತ್ತದೆ, ಅದನ್ನು ಭರ್ತಿಮಾಡುವುದಕ್ಕೋಸ್ಕರ ಕೊಂಚ ಲಂಚ ಸ್ವೀಕರಿಸಿ ಮುಡುಪುಳಿಸಿಕೊಳ್ಳೋಣ” ಎನ್ನುವುದು ಪರಿಗ್ರಹ. “ನ್ಯಾಯವಾಗಿ ದೊರೆತ ಸಂಬಳದಿಂದ ಜೀವನ ನಡಸುತ್ತೇನೆ; ಅದು ತುಪ್ಪಕ್ಕೆ ಸಾಲದೆ ಹೋದರೆ ತುಪ್ಪ ನನಗೆ ಬೇಡ” ಎನ್ನುವುದು ವೈರಾಗ್ಯ.

ಅಪರಿಗ್ರಹದ ಸ್ವರೂಪವನ್ನು ಉಷಸ್ತಿಯ ಕಥೆ ಚೆನ್ನಾಗಿ ವಿಶದಪಡಿಸುತ್ತದೆ. ಆ ಕಥೆ ಛಾಂದೋಗ್ಯೋಪನಿಷತ್ತಿನಲ್ಲಿದೆ.

ಉಷಸ್ತಿ ಎಂಬವನು ಕುರುಪಾಂಚಾಲದೇಶದಲ್ಲಿದ್ದ ಒಬ್ಬ ಬ್ರಾಹ್ಮಣ. ಆ ದೇಶದಲ್ಲಿ ಆಲಿಕಲ್ಲುಮಳೆ ಹೊಡೆದು ಬೆಳೆಯೆಲ್ಲ ನಾಶವಾಯಿತು. ದುರ್ಭಿಕ್ಷ ಬಂತು. ಜನರೆಲ್ಲ ಅನ್ನ ಎಲ್ಲಿ ಸಿಕ್ಕುತ್ತದೆಂದು ಹುಡುಕಿಕೊಂಡು ಹೊರಟರು. ಉಷಸ್ತಿಯೂ ಆತನ ಹೆಂಡತಿಯೂ ಹೊರಟರು. ಉಷಸ್ತಿಗೆ ಕ್ಷುದ್ಬಾಧೆ ಅತೀವವಾಗಿತ್ತು. ಆಕೆ ಹಸಿದು ಹಸಿದು ಹಸಿವೇ ಬತ್ತಿಹೋಗಿತ್ತು; ಅಷ್ಟು ಕಂದಿದ್ದಳು, ಮೈಯೆಲ್ಲ ಕೃಶವಾಗಿ ಸೇದಿಹೋಗಿತ್ತು. ಉಷಸ್ತಿಗೆ ಹಸಿವು ಮಿತಿಮೀರಿ ಏನಾದರೂ ಆಹಾರ ಹೊಟ್ಟೆಗೆ ಬಿದ್ದರೆಯೇ ಬದುಕುವುದೆಂಬ ಸ್ಥಿತಿಯುಂಟಾಯಿತು. ಅಷ್ಟುಹೊತ್ತಿಗೆ ಅವರಿಬ್ಬರೂ ಒಂದು ಮಾವಟಿಗರ (ಇಭ್ಯ) ಗ್ರಾಮಕ್ಕೆ ಬಂದಿದ್ದರು. ಒಬ್ಬ ಮಾವಟಿಗ ಕಾಳು ತಿನ್ನುತ್ತ ಕುಳಿತಿದ್ದ. “ಏನಯ್ಯಾ, ಬಹಳ ಹಸಿವಾಗಿದೆ; ಸ್ವಲ್ಪ ಆಹಾರ ಕೊಡುವೆಯಾ?” ಎಂದು ಉಷಸ್ತಿ ಬೇಡಿದ. ಮಾವಟಿಗನು ತಾನು ತಿನ್ನುತ್ತಿದ್ದ ಬೆಂದ ಅಲಸೊಂದಿಕಾಳಿನಲ್ಲಿ ಒಂದಷ್ಟನ್ನು ತೆಗೆದು ಉಷಸ್ತಿಗೆ ಕೊಟ್ಟ—ಎಂಜಲು. ಇವನಾದರೋ ಬ್ರಾಹ್ಮಣ. ಆದರೆ ಜೀವಾಧಾರಕ್ಕಾಗಿ, ಅವನು ಕೊಟ್ಟದ್ದನ್ನು ಉಷಸ್ತಿ ತೆಗೆದುಕೊಂಡ. ಮಾವಟಿಗನು ಉಷಸ್ತಿಗೆ ಕುಡಿಯಲು ನೀರನ್ನು ನೀಡಿದ. ಉಷಸ್ತಿ ನೀರನ್ನು ಬೇಡವೆಂದ.

ಮಾವಟಿಗನು “ಏನಯ್ಯಾ, ಕಾಳು ತೆಗೆದುಕೊಂಡವನು ನೀರನ್ನು ತೆಗೆದುಕೊಳ್ಳಲಾಗದೆ?” ಎಂದು ಕೇಳಿದ. ಉಷಸ್ತಿ ಹೇಳಿದ: “ನೀರನ್ನು ಕುಡಿಯುವುದೇನೋ ಅವಶ್ಯಕವೇ. ಆದರೆ ನೀರು ಬೇರೆಕಡೆ ದೊರಕುತ್ತದೆ. ಕ್ಷಾಮ ಬಂದಿರುವುದು ನೀರಿಗಲ್ಲ, ಧಾನ್ಯಕ್ಕೆ. ನೀನು ಧಾನ್ಯ ಕೊಟ್ಟೆ. ಅದರಿಂದ ಜೀವಾಧಾರವಾಯಿತು. ನೀರು ಬೇಕಾದರೆ ಊರಾಚೆ ಕೆರೆಗೋ ಕುಂಟೆಗೋ ಹೋಗಿ ಕುಡಿಯುತ್ತೇನೆ. ನನಗೆ ಅವಶ್ಯವಾಗಿದ್ದು ಬೇರೆ ಕಡೆ ಸಿಕ್ಕುವುದನ್ನು ನಿನ್ನಿಂದ ನಾನು ತೆಗೆದುಕೊಳ್ಳಲಾರೆ.” ಇದು ಅಪರಿಗ್ರಹ.

ಆಮೇಲೆ ಉಷಸ್ತಿ ಆ ಬೆಂದಕಾಳಿನಲ್ಲಿ ಸ್ವಲ್ಪವನ್ನು ತಿನ್ನೆಂದು ಹೆಂಡತಿಗೆ ಹೇಳಿದ. ಆಕೆ ತನಗೆ ಬೇಕಿಲ್ಲವೆಂದಳು. ಉಷಸ್ತಿ “ನಾನು ಜೀವಾಧಾರಕ್ಕೆ ಎಷ್ಟು ಬೇಕೋ ಅಷ್ಟು ತಿಂದಿದ್ದೇನೆ; ಕಾಳು ಉಳಿದುಹೋಗಿದೆಯಲ್ಲ?” ಎಂದ. ಆಕೆ ಉಳಿದ ಕಾಳನ್ನು ಮರು ದಿವಸಕ್ಕೆಂದು ತೆಗೆದಿಟ್ಟಳು. ಅವರು ಇನ್ನೂ ಮುಂದೆ ನಡೆದರು. ಮತ್ತೆ ಹಸಿವಾಯಿತು. ಹೆಂಡತಿ ಹಿಂದಿನ ದಿನ ಉಳಿದಿದ್ದ ಕಾಳನ್ನು ಗಂಡನಿಗೆ ಕೊಟ್ಟಳು. ಆ ತಂಗಳನ್ನು ಅವನು ತಿಂದ.

ಜೀವಿಕೆಗೆ ಅವಶ್ಯವಾದಷ್ಟನ್ನು ಮಾತ್ರವೇ ಇತರರಿಂದ ತೆಗೆದುಕೊಳ್ಳಬೇಕು. ಯಾವುದು ಇಲ್ಲದೆಹೋದರೆ ಜೀವಿಕೆಗೆ ಬಾಧಕವಾಗುವುದಿಲ್ಲವೋ ಅದನ್ನು ತೆಗೆದುಕೊಳ್ಳಬಾರದು. ಇದು ಅಪರಿಗ್ರಹದ ಸೂತ್ರ.

ಜೀವನವೆಂದರೆ ಜಗತ್ತಿನೊಡನೆ ನಡೆಯುವ ದಾನ–ಆದಾನರೂಪವಾದ ವ್ಯವಹಾರ ಎಂದು ಹಿಂದೆ ನೋಡಿದ್ದೇವೆ. ನಾವು ಕ್ಷಣೇಕ್ಷಣೇ ನಮ್ಮ ಸುತ್ತಮುತ್ತಣ ಪ್ರಪಂಚದಿಂದ ಏನನ್ನಾದರೂ ಸಂಗ್ರಹಿಸಿಕೊಳ್ಳುತ್ತಲೇ ಇರುತ್ತೇವೆ; ಪ್ರಪಂಚಕ್ಕೆ ಏನನ್ನೋ ಒಂದಷ್ಟು ಹಿಂದಿರುಗಿಸುತ್ತಲೂ ಇರುತ್ತೇವೆ. ನಮ್ಮ ಉಸಿರಾಟದಲ್ಲಿಯೇ ಇದು ಕಾಣುತ್ತದೆ. ಈ ಕೊಳುಕೊಡುಗಳಲ್ಲಿ ನಾವು ಜಗತ್ತಿಗೆ ಕೊಡುವುದು ಹೆಚ್ಚಿ, ಜಗತ್ತಿನಿಂದ ನಾವು ತೆಗೆದುಕೊಳ್ಳುವುದು ಕಡಮೆಯಾಗಬೇಕೆಂಬುದು ಅಪರಿಗ್ರಹದ ತತ್ತ್ವ.

ಬ್ರಹ್ಮಾನುಭವಕ್ಕೆ ಸಾಧನವು ಜೀವನನೀತಿಯೇ ಹೊರತು ಬುದ್ಧಿಕುಶಲತೆಯಲ್ಲ. Intellectual Subtlety ಅಲ್ಲ; Moral Self-discipline. ಇಲ್ಲಿಯೇ ನಾವು ದಾರಿ ತಪ್ಪುವುದು. ವ್ಯಾಕರಣ, ನಿಘಂಟು, ತರ್ಕಚಮತ್ಕಾರ, ವಾದಸರಣಿ, “ವಾಗ್ವೈಖರೀ ಶಬ್ದ ಝರೀ ಶಾಸ್ತ್ರ ವ್ಯಾಖ್ಯಾನಕೌಶಲಮ್” —ಇವುಗಳಲ್ಲಿ ನಾವು ತತ್ತ್ವವನ್ನರಸುತ್ತೇವೆ. ಶ್ಲೋಕ

ಟೀಕೆಗಳನ್ನು ಕಂಠಪಾಠಮಾಡಿ ಸಮಯ ದೊರೆತಾಗ ಉದಾಹರಿಸುತ್ತೇವೆ. ಬ್ರಹ್ಮ, ಮಾಯೆ, ಆತ್ಮ, ಜೀವ, ಜ್ಞಾನ, ಕರ್ಮ, ಪ್ರಕೃತಿ, ಪ್ರಾರಬ್ಧ—ಇಂಥ ಮಾತುಗಳನ್ನು ಹಿಂದುಮುಂದು ನೋಡದೆ ಆಡುತ್ತೇವೆ. ತತ್ತ್ವ ನಮ್ಮ ಅನುಭವಕ್ಕೆ ದೊರೆತಿದೆಯೋ? ದೊರೆತವನ ಲಕ್ಷಣ ಹೀಗಿರುತ್ತದಂತೆ:

> ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
> ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥

"ಅವನು ಯಾವಾಗಲೂ ಪ್ರಸನ್ನನಾಗಿರುತ್ತಾನೆ. ಅವನಿಗೆ ದುಃಖವಿಲ್ಲ, ಆಶೆಯಿಲ್ಲ. ಎಲ್ಲ ಪ್ರಾಣಿಗಳಲ್ಲಿಯೂ ಅವನಿಗೆ ಒಂದೇ ತೆರನಾದ ಪ್ರೀತಿ, ಅವನಿಗೆ ಭಗವಂತನಲ್ಲಿ ಸರ್ವೋತ್ತಮವಾದ ಭಕ್ತಿಯುಂಟಾಗುತ್ತದೆ."

ಅಂಥಾ ಬ್ರಹ್ಮಾನುಭವಿಯ ನಡತೆಗಳೆಲ್ಲವೂ ಪರಬ್ರಹ್ಮಪ್ರೀತಿಯಿಂದ ಉಂಟಾದವು.

"ಪ್ರಸನ್ನ" ಎಂದರೆ ಒಲವು, —ಒಲಿದಿರುವ ಸ್ಥಿತಿ. ಪ್ರಸನ್ನವಾದ ವಸ್ತುವು ನೋಡಿದವರನ್ನು ಪ್ರಸನ್ನಗೊಳಿಸುತ್ತದೆ. ಕೆಲವು ಪದಾರ್ಥಗಳನ್ನ, ಕೆಲವು ದೃಶ್ಯಗಳನ್ನ, ನೋಡಿದರೆ ಮನಸ್ಸು ವಿಕಾರಕ್ಕೊಳಗಾಗುತ್ತದೆ, ಕೋಪ ಬರುತ್ತದೆ. ಅಥವಾ ಮೈಮರೆಯುವಂತೆ ಸಂತೋಷ ಉಂಟಾಗುತ್ತದೆ. ಪ್ರಸನ್ನ ಎಂಬುದು ಮೈಮರೆಯಿಸುವಂಥದಲ್ಲ. ಚಿತ್ತವಿಕಾರವಿಲ್ಲದೆ, ಚಾಂಚಲ್ಯವಿಲ್ಲದೆ ಇರತಕ್ಕ ಸ್ಥಿತಿ ಪ್ರಸನ್ನತೆ. ಶುಭಲೇಖನಗಳಲ್ಲಿ ಮೊದಲು "ಲಕ್ಷ್ಮೀವೆಂಕಟೇಶ್ವರ ಪ್ರಸನ್ನ" ಮೊದಲಾಗಿ ಬರೆಯುವುದುಂಟು. ಭಗವಂತನ ಮನಸ್ಸು ನಮ್ಮ ವಿಷಯದಲ್ಲಿ ಯಾವ ವಿಧವಾದ ಸಂದೇಹಗಳನ್ನೂ ಅಸಮಾಧಾನಗಳನ್ನೂ ಇಟ್ಟುಕೊಳ್ಳದೆ ಒಲಿಯಲಿ ಎಂದು ತಾತ್ಪರ್ಯ. "ಪ್ರಸೀದ", "ಪ್ರಸಾದ" ಮೊದಲಾದ ಮಾತುಗಳ ಅಭಿಪ್ರಾಯವೂ ಇದೇ. ಬ್ರಹ್ಮಾನುಭವ ಇರತಕ್ಕವನ ಲಕ್ಷಣ ಈ ಪ್ರಸನ್ನತೆ ಎಂಬುದು.

ಬ್ರಹ್ಮಾನುಭವವಿರತಕ್ಕವನಿಗೆ ಇದು ಬೇಕೆಂಬ ಆಕಾಂಕ್ಷೆಯೂ ಇಲ್ಲ; ಇದು ಸಿಕ್ಕಲಿಲ್ಲವಲ್ಲ—ಇದು ಹೊರಟುಹೋಗುತ್ತದಲ್ಲ—ಎಂಬ ಶೋಕವೂ ಇಲ್ಲ. ಅವನು ಎಲ್ಲರ ವಿಷಯದಲ್ಲಿಯೂ ಸಮಾನವಾದ ಆದರಣೆಯಿಟ್ಟುಕೊಂಡಿರತಕ್ಕವನು. "ಸಮ" ಶಬ್ದದ ಅರ್ಥವನ್ನು ಹಿಂದೆ ನೋಡಿದ್ದಾಗಿದೆ. ತಪ್ಪರ್ಥಮಾಡುವುದಕ್ಕೆ ಸುಲಭವಾಗಿರುವ ಮಾತುಗಳ

ಪೈಕಿ ಅದು ಒಂದು. ಪ್ರೀತಿಯು ಸಮ; ಪ್ರೀತಿಯ ಕಾರ್ಯರೂಪ ಆಯಾ ಜೀವಿಯ ಸಂಬಂಧಕ್ಕೆ ಅನುಕೂಲವಾಗುವಂತೆ.

> ಮದ್ಭಕ್ತಿಂ ಲಭತೇ ಪರಾಮ್ ॥

ಭಕ್ತಿಯನ್ನು "ಲಭತೇ" ಎಂದು ಹೇಳಿದೆಯಲ್ಲ; ಇದುವರೆಗೂ ಭಕ್ತಿಯಿರಲಿಲ್ಲವೋ?—ಎಂದರೆ, ಇದುವರೆಗಿದ್ದದ್ದು ವ್ಯಭಿಚರಿತವಾದ ಭಕ್ತಿ, ಅನೇಕಾಂತವಾದ ಭಕ್ತಿ. ಬ್ರಹ್ಮಾನುಭವ ಪಡೆದವನು "ಪರಾಂ ಭಕ್ತಿಂ ಲಭತೇ" —ಅನನ್ಯವಾದ ಭಕ್ತಿಯನ್ನು, ಪರಬ್ರಹ್ಮೈಕ ನಿಷ್ಠವಾದ ಭಕ್ತಿಯನ್ನು ಹೊಂದುತ್ತಾನೆ. ಆ ಭಕ್ತಿಯಿಂದ—

> ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
> ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥

ಪರಬ್ರಹ್ಮೈಕಪ್ರೀತಿಯುಳ್ಳವನಾದದ್ದರಿಂದ ಅವನು ಎಲ್ಲೆಲ್ಲಿ ಯಾವಯಾವುದಿದ್ದರೂ ಅದೆಲ್ಲವೂ ಬ್ರಹ್ಮಚೈತನ್ಯದ ಚಿಹ್ನೆಯೇ ಎಂದೆಣಿಸಿಕೊಂಡು ಬ್ರಹ್ಮವಸ್ತುವಿನ ಪರಿಪೂರ್ಣಾನುಭವವನ್ನು ಪಡೆಯುತ್ತಾನೆ. ಅವನಿಗೆ ಇದು ಭಗವತ್ಸ್ವರೂಪ, ಇದು ಭಗವತ್ಕಲಾಭಾಸ, ಇದು ಮಾಯೆ, ಜಗತ್ತು ಈ ಕಾರಣದಿಂದ ಹೀಗಾದದ್ದು, ಜಗತ್ತಿನಲ್ಲಿ ಇಂಥಿಂಥ ಅಂಶಗಳು ಸೇರಿವೆ—ಈ ತಿಳಿವಳಿಕೆ ಉಂಟಾಗುತ್ತದೆ; ಭಗವಂತನ ಪರಮಾರ್ಥಸ್ವರೂಪ, ಜಗತ್ತಿನ ಯಥಾರ್ಥಸ್ವಭಾವ ತಿಳಿಯುತ್ತದೆ.

ಭಗವತ್ಸ್ವರೂಪ ತಿಳಿದವನು ಜಗತ್ತನ್ನು ತೊರೆದು ಧರ್ಮಕರ್ಮಗಳನ್ನು ಬಿಟ್ಟಿರುತ್ತಾನೇನು? ಸರ್ವಥಾ ಹಾಗಲ್ಲ.

> ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ ।
> ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥

"ಅವನು ತನ್ನದೆನಿಸಿರುವ ಜಗತ್ಸಾಮಗ್ರಿಯೆಲ್ಲ ಭಗವತ್ಪ್ರದತ್ತವಾದದ್ದು; ಅದು ಭಗವದರ್ಪಿತವೇ ಆಗಲಿ—ಎಂದು ಯಾವಾಗಲೂ ಎಲ್ಲ ಕರ್ಮಗಳನ್ನೂ ಮಾಡಿಕೊಂಡೇ

ಇರುತ್ತಾನೆ. ಆದದ್ದರಿಂದ ಅವನಿಗೆ ಭಗವದನುಗ್ರಹ ದೊರೆಯಲೇ ದೊರೆಯುತ್ತದೆ. ಅದರಿಂದ ಅವನಿಗೆ ಶಾಶ್ವತವಾಗಿ ಭಗವತ್ಸನ್ನಿಧಿ ಲಭಿಸುತ್ತದೆ."

ಬ್ರಹ್ಮಜ್ಞಾನಕ್ಕೂ ಕರ್ಮಾಚರಣೆಗೂ ವೈಷಮ್ಯ ಏನೂ ಇಲ್ಲವೆಂಬುದೂ ಬ್ರಹ್ಮಾನುಭವದ ಬಾಹ್ಯಾಭಿವ್ಯಕ್ತಿಯೇ ಜ್ಞಾನಿಯ ಕರ್ಮವೆಂಬುದೂ ಈಗ ಸ್ಪಷ್ಟವಾಗಿದೆ. ಇದರಿಂದ ಅರ್ಜುನನ ಕರ್ತವ್ಯ ಏನೆಂಬುದು ಸ್ಫುಟವಾಗಿದೆ. ಅವನು ರಾಜ್ಯಾರ್ಥಿಯೂ ಕಾಮ್ಯಾರ್ಥಿಯೂ ಕೀರ್ತ್ಯರ್ಥಿಯೂ ಆಗದೆ ಕೇವಲ ಮೋಕ್ಷಾರ್ಥಿಯೇ ಆಗಿದ್ದಾಗ್ಗೂ ಕರ್ಮ ಅವನಿಗೆ ಯುಕ್ತವೆಂದು ಸಿದ್ಧವಾಯಿತು. ಇಂಥಾದ್ದು ಧರ್ಮಕರ್ಮ ಅದು ಶಾಸ್ತ್ರಾನುಸರಣ ಭಗವದುಪಾಸನಾದಿ ನಾನಾರೂಪಗಳಲ್ಲಿ ಲೋಕಹಿತದ್ವಾರಾ ಆತ್ಮಹಿತದಲ್ಲಿ ಪರ್ಯವಸಾನ ಹೊಂದುತ್ತದೆ.

ಇದನ್ನು ಸಿದ್ಧಾಂತಮಾಡಿದ ಮೇಲೆ ಈಗ ಭಗವಂತ ಅರ್ಜುನನಿಗೆ ಉಪದೇಶವನ್ನು ಸಂಗ್ರಹವಾಗಿ ನಿರೂಪಿಸಿದ್ದಾನೆ:

> ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ ।
> ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ ॥

"ಅರ್ಜುನ, ಮಾಡಬೇಕಾಗಿರುವುದನ್ನೆಲ್ಲ ನೀನು ಮಾಡು; ಆದರೆ ಅದನ್ನು ಕೃಷ್ಣಾರ್ಪಣವೆಂದು ಮಾಡು; ಮನಸ್ಸಿಟ್ಟು ಮಾಡು; ಬುದ್ಧಿಯೋಗಲಕ್ಷಣವಾದ ಆತ್ಮಾನಾತ್ಮವಿವೇಕವನ್ನಿಟ್ಟುಕೊಂಡು ಮಾಡು; ಜೀವೇಶ್ವರ ವಿವೇಕವನ್ನಿಟ್ಟುಕೊಂಡು ಮಾಡು."

> ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ॥

"ಭಗವಂತನನ್ನು ನೀನು ಮನಸ್ಸಿನಲ್ಲಿರಿಸಿಕೊಂಡು ಬಾಳು ನಡಸುವಾಗ ಕಷ್ಟ ತೊಡಕುಗಳೇನಾದರೂ ಬಂದರೆ ಅದನ್ನು ಭಗವದನುಗ್ರಹವೇ ದಾಟಿಸುತ್ತದೆ."

ಇದನ್ನು ಅಂಗೀಕರಿಸದೆ "ನಾನೇ ಎಲ್ಲಕ್ಕೂ ಕಾರಣಕರ್ತ" ಎಂಬಂತೆ ನಡೆದರೆ ನೀನು ನಾಶಪಡುವೆ.

> ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।
> ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥

" 'ಎಲ್ಲಕ್ಕೂ ಅಧಿಕಾರಿ ನಾನು' ಎಂದು ನೀನು ಭ್ರಮಿಸಿ 'ಯುದ್ಧಮಾಡೆ' ಎಂದು ನಿಂತರೆ ಆ ನಿನ್ನ ಪ್ರತಿಜ್ಞೆ ಸುಳ್ಳಾಗುತ್ತದೆ. ನಿನ್ನೊಳಗೆ ಪ್ರಕೃತಿಸಿದ್ಧವಾಗಿ ಅಡಗಿಕೊಂಡಿರುವ ಕ್ಷಾತ್ರಗುಣ ನಿನ್ನನ್ನು ಆವೇಶಗೊಳಿಸಿ ಮುನ್ನುಗ್ಗಿಸುತ್ತದೆ."

ಮೊದಮೊದಲು ನೀನು ಯುದ್ಧಮಾಡದೆ ಕೈಕಟ್ಟಿಕೊಂಡು ಕುಳಿತಿರಬಹುದು. ಇತರರೇನೋ ಯುದ್ಧಾರಂಭ ಮಾಡಲೇ ಮಾಡುತ್ತಾರೆ. ರಣದುಂದುಭಿ ಮೊಳಗುತ್ತದೆ. ಆನೆಕುದುರೆಗಳು ನುಗ್ಗುತ್ತವೆ. ಸೈನ್ಯಗಳು ಶಸ್ತ್ರಪ್ರಹಾರ ಮಾಡುತ್ತವೆ. ಹಾಹಾಕಾರಗಳು ಹೊರಡುತ್ತವೆ. ಆ ಸದ್ದು ನಿನ್ನ ಕಿವಿಯನ್ನು ಮುಟ್ಟಿದಾಗ, —ಆ ರಕ್ತಪ್ರವಾಹ ನಿನ್ನ ಕಣ್ಣಿಗೆ ಕಾಣಿಸಿದಾಗ, —ನಿನ್ನೊಳಗೆ ಅವಿತುಕೊಂಡಿರುವ ವಂಶಗುಣ ಕೆರಳುತ್ತದೆ. ಆಗ ಏನಾಗುತ್ತದೆ? ಯಾವ ಕೆಲಸವನ್ನು ಸತ್ತ್ವಪ್ರಧಾನವಾಗಿ, ಬ್ರಹ್ಮಾರ್ಪಿತವಾಗಿ ಮಾಡತಕ್ಕದ್ದೆಂದು ಈಗ ನಾನು ಹೇಳುತ್ತಿದ್ದೇನೋ ಅದೇ ಕೆಲಸವನ್ನು ನೀನು ಆಗ ರಾಜಸದ ಆವೇಶದಿಂದ ಪರಬ್ರಹ್ಮಸ್ಮರಣೆಯಿಲ್ಲದೆ ಪ್ರಕೃತಿಪರವಶನಾಗಿ ಮಾಡುವೆ.

> ಸ್ವಭಾವಜೇನ ಕೌನ್ತೇಯ ನಿಬದ್ಧಃ ಸ್ವೇನ ಕರ್ಮಣಾ ।
> ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋऽಪಿ ತತ್ ॥

"ಸ್ವಾಭಾವಿಕವಾಗಿ ನಿನಗೆ ಬಂದಿರತಕ್ಕ ಗುಣಶಕ್ತಿಗಳು ಕ್ಷತ್ರಿಯೋಚಿತವಾದುವು. ಅವುಗಳನ್ನು ಸ್ವಧರ್ಮಕ್ಕೆ ವಿನಿಯೋಗಿಸಬೇಕಾದದ್ದು ನಿನ್ನ ಕರ್ತವ್ಯ. ನೀನು ಅದನ್ನು ಬಿಟ್ಟು, ಯಾವುದೋ ಒಂದು ಮೂಢಭಾವನೆಯನ್ನು ಹಿಡಿದು, ಸ್ವಕರ್ತವ್ಯವನ್ನು ಮರೆತು, ಯಾವ ಕೆಲಸವನ್ನು ಈಗ ಮಾಡೆನೆನ್ನುತ್ತೀಯೋ ಅದೇ ಕೆಲಸವನ್ನು ಆಗ ನೀನು ವಿವೇಕ ಸ್ವಾತಂತ್ರ್ಯವಿಲ್ಲದ ಗಾಣದೆತ್ತಿನಂತೆ ಮಾಡುವೆ."

ಈಗ ಭಗವಂತ ಜಗದ್ಯಂತ್ರದ ಚಲನಚಾಲನ ಚಕ್ರಕೀಲಕಗಳನ್ನು ನಿರೂಪಿಸುತ್ತಾನೆ ಒಂದು ಮಹಾವಾಕ್ಯದಲ್ಲಿ.

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥

ಇಲ್ಲಿ ಈಶ್ವರಕಾರ್ಯವನ್ನು ಎರಡು ವಿಧವೆಂದು ಹೇಳಿದೆ. ಮೊದಲು "ಈಶ್ವರನು ಸಮಸ್ತಪ್ರಾಣಿಗಳಲ್ಲೂ ಹೃದಯಮಧ್ಯಸ್ಥನಾಗಿದ್ದಾನೆ" ಎಂದು. ಭಗವಂತನು ಎಲ್ಲರಲ್ಲಿಯೂ ಅಂತರ್ಯಾಮಿಯಾಗಿ ನೆಲಸಿ, ಸಮಸ್ತ ಜೀವನಕ್ರಿಯೆಗಳಿಗೂ ಮೂಲಶಕ್ತಿಯಾಗಿ ಮೂಲಕಾರಣವಾಗಿದ್ದಾನೆ. ಹಾಗೆ ಆಂತರ್ಯದಲ್ಲಿ ಕುಳಿತು ಏನು ಮಾಡುತ್ತಿದ್ದಾನೆ? ಸುಮ್ಮನೆ ನಿಶ್ಚೇಷ್ಟವಾಗಿ ಕುಳಿತಿದ್ದಾನೆಯೆ? ಇಲ್ಲ. ಇನ್ನೊಂದು ಕೆಲಸಮಾಡುತ್ತಿದ್ದಾನೆ. ಇದು ಎರಡನೆಯದು. ಪುಳ್ಳೆಯಿಂದ ಚುಚ್ಚುತ್ತಾನೆ; ಚಿವುಟಿ ಕಚಗುಳಿಯಿಡುತ್ತಾನೆ. "ಎಲ್ಲರನ್ನೂ ಇತ್ತತ್ತ ಹಾರಾಡಿಸುತ್ತಿದ್ದಾನೆ—ಮಾಯೆಯ ಕೀಲ್ಕುದುರೆಗಳ ಮೇಲೆ ನಮ್ಮನ್ನು ಕೂಡಿಸಿ, (ಭ್ರಾಮಯನ್) ಪರಿದಾಡಿಸುತ್ತಿದ್ದಾನೆ." ಇದು ಭಗವಂತನ ಲೀಲೆ. ಇದು ಮನುಷ್ಯಜೀವನ.

"ಈಶ್ವರಸ್ಸರ್ವಭೂತಾನಾಂ" ಎಂಬಲ್ಲಿ "ಈಶ್ವರ" ಶಬ್ದಕ್ಕೆ ಪರಬ್ರಹ್ಮದ ಪರಮದಶೆಯೆಂದು ಗ್ರಹಿಸತಕ್ಕದ್ದಲ್ಲ. ಈಶ್ವರತ್ವವು ಪರಬ್ರಹ್ಮಲೀಲೆಯ ಒಂದು ರೂಪ ಅಥವಾ ಒಂದು ಅವಸ್ಥೆ. ಅದನ್ನು ಕಾರ್ಯಬ್ರಹ್ಮವೆಂದು ವ್ಯವಹರಿಸುವುದುಂಟು. ಪರಬ್ರಹ್ಮವಸ್ತುವು ನಿಷ್ಕ್ರಿಯವಾದದ್ದು. ಅದು ಜಗತ್ಕಾರ್ಯದಲ್ಲಿ ಪ್ರವೃತ್ತವಾಗಿರುವಂತೆ ತೋರಿದಾಗ ಅದು ಕಾರ್ಯಬ್ರಹ್ಮ ಅಥವಾ ಈಶ್ವರನೆನಿಸಿಕೊಳ್ಳುತ್ತದೆ. ಕಾರ್ಯವೆಂದೂ ಜಗತ್ತೆಂದೂ ನಾವು ಭಾವಿಸಿದಾಗ ಅದರಲ್ಲಿ ಮಾಯೆಯ ಅಂಶ ಸೇರಿಕೊಂಡಿರುತ್ತದೆ. ಇಚ್ಛಾಕ್ರಿಯಾದಿ ವ್ಯಾಪಾರಗಳು ಮಾಯಾಮೂಲಗಳು. ಆದದ್ದರಿಂದ ಈಶ್ವರನೆಂಬುದು ಬ್ರಹ್ಮದ ಮಾಯಾಶಬಲಿತವಾದ ಅವಸ್ಥೆ. ಇದು ಹೀಗಿರುವುದರಿಂದಲೇ ಈಶ್ವರನು ಮಾಯೆಗೆ ಕಾರಣಭೂತನಾಗುತ್ತಾನೆ:

ಈಶ್ವರಃ...ಭ್ರಾಮಯನ್ ಸರ್ವಭೂತಾನಿ...ಮಾಯಯಾ ॥

ಮಾಯೆಯೆಂಬುದು ಜಗತ್ತಿನ ಆಕರ್ಷಣೆ ಅಪಕರ್ಷಣೆಗಳು. ಆ ಆಕರ್ಷಣೆ ಅಪಕರ್ಷಣೆಗಳ ಮೂಲಕಾರಣವಿರುವುದೆಲ್ಲಿ? ಜಗದ್ವಸ್ತುಗಳಲ್ಲಿಯೆ? ಆ ವಸ್ತುಗಳೊಡನೆ ಇಂದ್ರಿಯ ಸಂಸರ್ಗಪಡೆದ ಮನುಷ್ಯನಲ್ಲಿಯೆ? ಎರಡೆಡೆಯಲ್ಲಿಯೂ ಎಂದು ಉತ್ತರ. ಮನುಷ್ಯನಿಗೆ ಎರಡು ಕಾಲಿರುವಂತೆ ಮಾಯೆಗೂ ಎರಡು ಪಾದಗಳು. ಒಂದು ಜಗದ್ವಸ್ತು ರಚನೆಯಲ್ಲಿ

ಊರಿದ್ದು; ಇನ್ನೊಂದು ತದ್ವಸ್ತುಗ್ರಾಹಕನ ಅಂತರಂಗದಲ್ಲಿ ಊರಿದ್ದು. ಎರಡು ಹೆಜ್ಜೆಗಳೂ ಊರಿ ನಿಂತಾಗ ಮಾಯಾಕಾರ್ಯ. ಆ ಕಾರ್ಯವೆಂಥಾದ್ದು? ವಸ್ತುವಿನ ನಿಜಸ್ವರೂಪವನ್ನು ಬಚ್ಚಿಟ್ಟು ಬೇರೊಂದು ವಸ್ತುವಿನ ರೂಪವನ್ನು ಹೊಳೆಯಿಸುವಂಥಾದ್ದು. ಒಬ್ಬಾತ ಕಣ್ಣಿನಲ್ಲಿ ಪೊರೆ ಬೆಳೆದವನು ರಾತ್ರಿ ಬೆಳದಿಂಗಳಲ್ಲಿ ಹೋಗುತ್ತಿರುವಾಗ ಎದುರಿಗೆ ಕೊಂಚ ದೂರದಲ್ಲಿ ಒಬ್ಬ ಸಂನ್ಯಾಸಿ ಬರುತ್ತಿದ್ದರೆ ಅದು ತಮ್ಮ ಮನೆಯ ಅಡಿಗೆಯ ಮಡಿ ಹೆಂಗಸು ಎಂದು ಭ್ರಮಿಸಿದಂತೆ. ಅದು ಮಾಯಾಕಾರ್ಯ.

ಒಬ್ಬ ಮನುಷ್ಯ ಕಾಡುದಾರಿಯಲ್ಲಿ ಸಂಜೆಮಬ್ಬಿನಲ್ಲಿ ನಡೆದು ಬರುತ್ತಿದ್ದಾನೆ. ಅವನ ಕಣ್ಣಿಗೆ ಅಲ್ಲಿ ಒಂದು ಹಾವು ಸುಳಿದಾಡಿದಂತೆ ಕಾಣುತ್ತದೆ. ಅವನು ಹೆದರಿ ಓಟ ಕೀಳುತ್ತಾನೆ. ಆ ವೇಳೆಗೆ ಇನ್ನೊಬ್ಬ ಯಾರೋ ಅಲ್ಲಿಗೆ ಬಂದು ತನ್ನ ಕೈಕೋಲಿನಿಂದ ಆ ವಸ್ತುವನ್ನು ಹೊಡೆಯುತ್ತಾನೆ. ಆಗ ಅದು ಹಾವಲ್ಲ, ಹಗ್ಗ ಎಂದು ಗೊತ್ತಾಗುತ್ತದೆ. ಇದನ್ನು ರಜ್ಜುಸರ್ಪಭ್ರಾಂತಿ ಎನ್ನುತ್ತಾರೆ. ಅದರಲ್ಲಿ ಎರಡು ಕಾರ್ಯಗಳು ಸೇರಿವೆ: ಮೊದಲು ಹಗ್ಗದ ರಜ್ಜುತ್ವ ಕಾಣಿಸದೆಹೋದದ್ದು; ಆಮೇಲೆ ಅಲ್ಲಿ ಸರ್ಪತ್ವ ಹುಟ್ಟಿದ್ದು. ವಸ್ತುಸ್ವರೂಪ ಕಾಣದಂತೆ ಮಾಡಿದ್ದು ಮಾಯೆಯ ಆವರಣಶಕ್ತಿ; ಅದಕ್ಕೆ ಬದಲಾಗಿ ಅನ್ಯವಸ್ತು ಕಾಣುವಂತೆ ಮಾಡಿದ್ದು ಮಾಯೆಯ ವಿಕ್ಷೇಪಶಕ್ತಿ. ಇದ್ದದ್ದನ್ನು ಇಲ್ಲದಂತೆಯೂ ಇಲ್ಲದ ಬೇರೊಂದನ್ನು ಅಲ್ಲಿರುವಂತೆಯೂ ತೋರಿಸುವ ಶಕ್ತಿ ಮಾಯೆಯದು. ಲಾಯರುಗಳು ವಂಚನೆಯ ಒಂದು ಬಗೆಯನ್ನು *"Suppressio veri, suggestio falsi"* (ಇರುವುದರ ಮರೆಮಾಚಿಕೆ, ಇಲ್ಲದ್ದರ ಸೂಚನೆ) ಎಂದು ವರ್ಣಿಸುತ್ತಾರೆ. ಮಾಯೆಯ ಕಾರ್ಯ ಅಂಥಾದ್ದು. ಒಬ್ಬ ಮನುಷ್ಯ ಒಂದು ಮಧ್ಯಾಹ್ನ ಸಮುದ್ರತೀರದಲ್ಲಿ ನಡೆದು ಹೋಗುತ್ತಿರುತ್ತಾನೆ. ಕೊಂಚ ದೂರಲ್ಲಿ ಅವನಿಗೆ ಒಂದು ದೊಡ್ಡ ಹೊಳಪು ಕಾಣುತ್ತದೆ. ಅವನು ಅದು ವಜ್ರವಿರಬೇಕೆಂದು ಅದರ ಬಳಿಗೆ ಧಾವಿಸುತ್ತಾನೆ. ಅಲ್ಲಿ ನೋಡಿದರೆ ಅದೊಂದು ಗಾಜಿನ ಸೀಸೆ. ಅದರ ನುಣ್ಣ ಮೇಲ್ಮೈ, ಸುತ್ತಲಿನ ಮರಳ ಹರವು, ಮೇಲಣ ಸೂರ್ಯಪ್ರಭೆ, ನೋಡಿದ ಕಣ್ಣಿನ ಶಕ್ತಿಯ ಪರಿಮಿತಿ—ಇವಿಷ್ಟೂ ಸೇರಿ ಅವನಿಗೆ ಹಾಗೆ ಭ್ರಾಂತಿಯಾಯಿತು. ಇದ್ದ ಗಾಜಿನ ಗಾಜುತನವನ್ನು ಬಚ್ಚಿಟ್ಟದ್ದೂ ಇಲ್ಲದ ವಜ್ರತನವನ್ನು ಅಲ್ಲಿ ತಂದಿಟ್ಟದ್ದೂ ಮಾಯೆ.

ಇಂಥಾ ಉದಾಹರಣೆಗಳನ್ನು ಎಷ್ಟು ಬೇಕೆಂದರೂ ಕೊಡಬಹುದು. ಸಾಹುಕಾರನೆನ್ನಿಸಿಕೊಂಡವನು ಬಳಸುವ ಸ್ಟೆಯಿನ್‌ಲೆಸ್‌ಸ್ಟೀಲ್ ತಟ್ಟೆಯನ್ನು

ಬೆಳ್ಳಿಯದೆಂದುಕೊಳ್ಳುತ್ತೇವೆ. ಸಂದರ್ಭಮಹಿಮೆಯು ಒಂದು ಲೋಹದಲ್ಲಿ ಇನ್ನೊಂದನ್ನು ಮರೆಯಿಸುತ್ತದೆ.

ನಾವು ಲಾಲ್‌ಬಾಗಿನ ನಡುವೆ ನಿಂತು ಸುತ್ತ ನೋಡಿದರೆ ಏನೋ ಸಂತೋಷವಾಗುತ್ತದೆ. ಆ ಹಸಿರಿನ ರಾಶಿ, ಆ ಗಿಡಬಳ್ಳಿಗಳ ಬಳುಕಾಟ, ಆ ಹೂವು ಚಿಗುರುಗಳ ನಲಿದಾಟ, —ಅವು ನಮ್ಮನ್ನು ಕರೆದಂತೆ, ಮಾತನಾಡಿಸಿದಂತೆ, ಆದರಿಸಿದಂತೆ, ಸರಸವಾಡಿದಂತೆ ನಮಗೆ ಭಾಸವಾಗುತ್ತದೆ. ವಾಸ್ತವವಾಗಿ ಅಲ್ಲಿರುವುದು ತೊಗಟೆ, ನಾರು, ಬಂಕೆ, ಎಲೆ, ಕಡ್ಡಿ, ಕಸ. ಇಂಥಾದ್ದರಿಂದ ಸೊಗಸು ಸರಸಗಳು ತೋರುವುದು ಮಾಯೆ.

ದೇಹಸೌಂದರ್ಯವನ್ನೇ ಪರೀಕ್ಷಿಸೋಣ. ಚರ್ಮ, ಮಾಂಸ, ರಕ್ತ, ಮೂಳೆ—ಇವು ಎಲ್ಲ ದೇಹಗಳಲ್ಲಿಯೂ ಸಮಾನವಾಗಿರುತ್ತವೆ. ನಾವು ಒಂದು ಮುಖವನ್ನು ಇನ್ನೊಂದಕ್ಕಿಂತ ಚೆಂದವೆಂದು ಹೇಳುತ್ತೇವಲ್ಲ, —ಆ ಚೆಂದದ ಆಧಾರ ಯಾವುದು? ದೇಹಸಾಮಗ್ರಿ ಎನ್ನುವಂತಿಲ್ಲ; ಏಕೆಂದರೆ ದೇಹಸಾಮಗ್ರಿ ಎಲ್ಲರಿಗೂ ಒಂದೇ ಸಮನಾಗಿರುತ್ತದೆ. ಆ ಸಾಮಗ್ರಿ ಯಾವುದೋ ಒಂದು ರೇಖಾಭಾವದಿಂದ ಯಾರೋ ಒಬ್ಬರ ಕಣ್ಣಿಗೆ ಚೆಂದವೆನಿಸುತ್ತದೆ, ಎಲ್ಲರ ಕಣ್ಣಿಗೂ ಅಲ್ಲ. ಇಂಥಾ ದೇಹದ ತೋರಿಕೆ ಸೌಂದರ್ಯ ಅಥವಾ ಚೆಂದ. ಚೆಂದವೆಂದುಕೊಂಡವರ ಪಾಲಿಗೆ ಅದು ಚೆಂದ. ಮಿಕ್ಕವರ ಪಾಲಿಗೆ ಅದು ಸಾಮಾನ್ಯವಾದ ತ್ವಙ್ಮಾಂಸ ವಿಕಾರ.

> ಮುಖಂ ಶ್ಲೇಷ್ಮಾಗಾರಂ ತದಪಿ ಚ ಶಶಾಂಕೇನ ತುಲಿತಂ ।
> ಸ್ತನೌ ಮಾಂಸಗ್ರಂಥೀ ಕನಕಕಲಶಾವಿತ್ಯುಪಮಿತೌ ॥

ಇಂಥಾದ್ದು ಮಾಯಾಪ್ರಭಾವ.

ಭಾಗವತಕಾರರು ಮಾಯೆಯನ್ನು ಹೀಗೆ ನಿರ್ದೇಶ ಮಾಡಿದ್ದಾರೆ:

> ಋತೇಽರ್ಥಂ ಯತ್ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।
> ತಂ ವಿದ್ಯಾದಾತ್ಮನೋ ಮಾಯಾಂ... ॥

ಇಲ್ಲಿ ಅರ್ಥವೆಂದರೆ ಯಥಾರ್ಥ, —ವಸ್ತುವು ನಿಜವಾಗಿ ಹೇಗಿದೆಯೋ ಅದು. ಪ್ರತೀತಿಯೆಂದರೆ ಆ ವಸ್ತು ನಮ್ಮ ಮನಸ್ಸಿಗೆ ಹೇಗೆ-ಯಾವ ರೂಪದಲ್ಲಿ—ದೊರೆತಿದೆಯೋ ಅದು. ಅರ್ಥವು ನೈಜರೂಪ, ನಮ್ಮಿಂದ ಸ್ವತಂತ್ರವಾದದ್ದು; ಪ್ರತೀತಿಯು ಗೋಚರರೂಪ, ನಮ್ಮ ಇಂದ್ರಿಯ ಮನಸ್ಸುಗಳನ್ನವಲಂಬಿಸಿದ್ದು.

“ವಸ್ತುವಿನ ಯಥಾರ್ಥವನ್ನು ಬಿಟ್ಟು ಬೇರಾವುದೋ ಒಂದು ವಸ್ತು ನಮಗೆ ಪ್ರತೀ (ಗೋಚರ)ವಾಗಿ, ಹುಡುಕಿ ನೋಡಿದಾಗ ಆ ಇನ್ನೊಂದು ಪದಾರ್ಥವು (ಆತ್ಮನಿ) ಅಂತರಂಗದಲ್ಲಿ ದರ್ಶನಕ್ಕೆ ಸಿಕ್ಕದೆಹೋದರೆ, ಆಗ ಆ ಗೋಚರಿತಮಾತ್ರದ ಅನುಭವವನ್ನು ಮಾಯೆಯೆಂದು ತಿಳಿಯತಕ್ಕದ್ದು.”

ಇದರಿಂದ ಏನು ಹೇಳಿದಂತಾಯಿತು? ಮಾಯೆಯ ಸ್ವರೂಪವು ನಿರ್ಧರಿಸಲಾಗತಕ್ಕದ್ದಲ್ಲವೆಂದು ತಿಳಿಸಿದಂತಾಯಿತು.

ಮಾಯೆ ಸುಳ್ಳೋ? ಪೂರ್ತಿ ಸುಳ್ಳಲ್ಲ. ಅದು ನಿರಾಧಾರವಾದದ್ದಲ್ಲ; ಮತ್ತು ನಿಷ್ಫಲವದದ್ದೂ ಅಲ್ಲ.

ಮಾಯೆ ದಿಟವೋ? ಪೂರ್ತಿ ದಿಟವಲ್ಲ, ನಮ್ಮ ಕಣ್ಣು ಅದಕ್ಕಿರುವ ಆಧಾರದ ಮೇಲೆ ನೆಟ್ಟಾಗ ಅದು ಕರಗಿಹೋಗುತ್ತದೆ. ಅದು ಮಾಡಿದ ಕೆಲಸವು ನಮ್ಮ ಕೈ ಸೋಕಿದೊಡನೆ ಕುಸಿದುಬೀಳುತ್ತದೆ.

ಜಗತ್ತು, ಅದರ ಸೃಷ್ಟಿ, ಅದರ ಸ್ಥಿತಿ, ಅದರ ನಾಶ—ಇವೆಲ್ಲ ಮಾಯಾಪ್ರತೀತಿಗಳೇ. ಜಗತ್ತೆಂಬುದೇ ಮಾಯೆ. ಏಕೆಂದರೆ ಅದಕ್ಕೆ ಸ್ವತಂತ್ರವಾದ ಇರುವಿಕೆಯಿಲ್ಲ. ಅದರ ರೂಪವೇ ಸ್ಥಿರವಾದದ್ದಲ್ಲ; ಅದು ಮೆರೆಯುತ್ತದೆ, ಬಳುಕುತ್ತದೆ, ಅಲೆಯುತ್ತದೆ, ಇಂಗಿಹೋಗುತ್ತದೆ, ಬತ್ತಿಹೋಗುತ್ತದೆ, ಬಗೆಬಗೆಯಾಗಿ ಕಾಣಿಸುತ್ತದೆ; ಎರಡು ಕ್ಷಣ ಇದ್ದಂತಿರುವುದಿಲ್ಲ. ಹೀಗೆ ಜಗತ್ತು ಕ್ಷಣಿಕವಾದದ್ದು. ಅದನ್ನು ನಾವು ಇಲ್ಲವೆನ್ನುವಂತಿಲ್ಲ, ಇದೆಯೆನ್ನುವಂತಿಲ್ಲ. ಇಲ್ಲವೆಂದರೆ ನಮ್ಮ ದೇಹ ಮೊದಲುಗೊಂಡು ಅಸಂಖ್ಯೇಯವಾದ ಭೂತಗಳು ಎದ್ದುನಿಂತು “ನಾವು ಇಲ್ಲವೆ? ಹಾಗಾದರೆ ನೋಡು, ನಿನ್ನನ್ನು ತಿನ್ನುತ್ತೇವೆ, ನಿನ್ನನ್ನು ಬಡಿಯುತ್ತೇವೆ, ನಿನ್ನನ್ನು ಕಚ್ಚುತ್ತೇವೆ” —ಎಂದು ಮುಷ್ಟಾಮುಷ್ಟಿ ಮಾಡಿಕೊಂಡು ಬರುತ್ತವೆ. ಇದು ನಮಗೆಲ್ಲ

ಪ್ರತಿಕ್ಷಣವೂ ಅನುಭವಸಿದ್ಧವಾದ ಸಂಗತಿ. ಇಂಥಾದ್ದನ್ನು ಹೇಗೆ ಇಲ್ಲವೆನ್ನಲಾದೀತು? ಅದಾಗದು.

ಹಾಗಾದರೆ ಪ್ರಪಂಚವನ್ನು ಇದೆಯೆಂದು ನಂಬೋಣವೆ? ಅದನ್ನು ಹಿಡಿದುಕೊಳ್ಳಹೊರಟರೆ ಕೈಚಾಚುವಷ್ಟರೊಳಗಾಗಿ ಅದು ನುಸುಳಿಕೊಂಡು ಹೋಗುತ್ತದೆ. ಭೌತವಿಜ್ಞಾನಿಗಳು ಪ್ರಪಂಚದ ದುರ್ಗ್ರಾಹ್ಯತೆಯನ್ನು ಮನಗಂಡಿದ್ದಾರೆ. ಭೂತಲದ ಮೇಲೆ ನಿಂತು ಚಂದ್ರಗ್ರಹದ ದೂರವನ್ನು ಅಳೆಯೋಣವೆಂದರೆ ದುರ್ಬೀನುಯಂತ್ರವನ್ನು 'ಅ' ಎಂಬ ಚಂದ್ರಬಿಂದುಸ್ಥಾನಕ್ಕೆ ಜೋಡಿಸುವಷ್ಟರಲ್ಲಿ ಗ್ರಹವು 'ಇ' ಬಿಂದುವಿಗೆ ತೆರಳಿರುತ್ತದೆ: 'ಇ' ಬಿಂದುವಿಗೆ ಜೋಡಿಸುವಷ್ಟರಲ್ಲಿ ಗ್ರಹವು 'ಉ' ಬಿಂದುವಿಗೆ ನಡೆದಿರುತ್ತದೆ. ಹೀಗೆ ನಮ್ಮ ಭೂಪ್ರಪಂಚದ ಒಳಗಡೆಯ ಸಂಗತಿಗಳು ಕೂಡ ನಮ್ಮ ಹಿಡಿತಕ್ಕೆ ಸಿಕ್ಕದೆ ಜಾರಿಹೋಗುತ್ತವೆ. ಅದರ ತತ್ತ್ವವೆಲ್ಲಿದೆಯೆಂದು ನಾವು ಕಂಡುಕೊಳ್ಳುವಷ್ಟರೊಳಗಾಗಿ ಅದರ ಸ್ವಭಾವ ಬದಲಾಯಿಸಿರುತ್ತದೆ. ನದಿಯಲ್ಲಿ ನಿಂತವನನ್ನು ಯಾವ ಎರಡು ಕ್ಷಣವೂ ಒಂದೇ ನೀರು ಸೋಕಲಾರದು. ಹೀಗೆ ಕ್ಷಣೇಕ್ಷಣೇ ಬದಲಾಯಿಸುತ್ತಿರುತ್ತದೆ ಜಗತ್ತು. ಅದನ್ನು ಹಿಡಿದುಕೊಳ್ಳುವುದು ಹೇಗೆ?

ಜಗತ್ತು ಇಲ್ಲವೆಂದು ಸಾಧಿಸುವುದು ಹೇಗೆ ಅಶಕ್ಯವೋ ಅದನ್ನು ಉಂಟೆಂದು ಸಾಧಿಸುವುದೂ ಹಾಗೆಯೇ ಅಶಕ್ಯ. ಭೌತದೃಷ್ಟಿ ಹಾಗಿರಲಿ. ಆಧ್ಯಾತ್ಮಿಕ ದೃಷ್ಟಿಯಿಂದ ಸಹ ಪ್ರಪಂಚವು ಸ್ಥಿರವಸ್ತುವಲ್ಲ. ಲೋಕದಲ್ಲಿ ಯಾವುದು ಶಾಶ್ವತ? ಯೌವನವೆ? ಆರೋಗ್ಯವೆ? ಐಶ್ವರ್ಯವೆ? ಅಧಿಕಾರವೆ? ಭೋಗವೆ? ಪ್ರೇಮವೆ? ಎಲ್ಲ ಒಂದೆರಡು ದಿನವಿದ್ದು ಎಂದೋ ಒಂದು ದಿನ ತಮ್ಮತಮ್ಮ ವಿರೋಧಗಳಿಗೆ ಜಾಗ ಬಿಟ್ಟುಕೊಟ್ಟು ತೆರಳುತ್ತವೆ. ಆದದ್ದರಿಂದ ಪ್ರಪಂಚ ಉಂಟೆಂದು ಹೇಗೆ ಸಾಧಿಸಿಯೇವು?

ಜಗತ್ತು ಉಂಟಾದದ್ದೂ ಅಲ್ಲ, ಇಲ್ಲವಾದದ್ದೂ ಅಲ್ಲ. ಉಂಟೆಂದರೆ ಉಂಟು, ಇಲ್ಲವೆಂದರೆ ಇಲ್ಲ. ಉಂಟೆಂದು ನಂಬಿದವನಿಗೆ ಅದು ಒಂದಾನೊಂದು ದಿವಸ ಶೂನ್ಯವಾಗುತ್ತದೆ; ಅದು ಶೂನ್ಯವೆಂದುಕೊಂಡರೆ ಕೂಡಲೆ ಅದು ಭೂತಾಕಾರವಾಗಿ ಬಂದು ಎದುರುನಿಲ್ಲುತ್ತದೆ.

ಯಾವುದು ಹೀಗೆ ಸಂಪೂರ್ಣವಾದ ಅಸ್ತಿತ್ವವನ್ನು ತೋರಲಾರದೋ, ಮತ್ತು ಹಾಗೆಯೇ ನಾಸ್ತಿತ್ವವನ್ನೂ ತೋರುವುದಿಲ್ಲವೋ ಅದು ಮಾಯೆ. ಮಾಯೆಯನ್ನು

ಅತ್ಯಂತಾಭಾವವೆನ್ನಲಾಗದು, ಪೂರ್ತಿ ಸುಳ್ಳೆನ್ನಲಾಗದು—ಅದು ಮೊಲದ ಕೊಂಬಿನಂಥಾದ್ದಲ್ಲ. ಅದಕ್ಕೆ ಕೊಂಚ ಮಾತ್ರದ ಸತ್ಯತ್ವ—ವ್ಯಾವಹಾರಿಕ ಸತ್ಯತ್ವ—ಉಂಟು. ಯಾವವರೆಗೆ ನಾವು ದೇಹಧಾರಿಗಳೋ ಅದುವರೆಗೂ—ಆ ದೇಹಜೀವನದಷ್ಟು ಮಟ್ಟಿಗೆ—ನಾವು ವ್ಯವಹಾರಿಗಳು, ವ್ಯವಹಾರಿಗೆ ಉಂಟಾದದ್ದು ಧರ್ಮ. ಧರ್ಮವನ್ನು ಅರಿತು ವ್ಯವಹಾರ ನಡಸಿದರೆ ದೇಹಜೀವನದ ಭಾರವು ಲಘುವಾಗುತ್ತದೆ: ಜಗತ್ತು ಕಟ್ಟಿಗೆಯ ಹೊರೆಯೆನಿಸದೆ ಹೂವಿನ ಹಾರವೆನಿಸುತ್ತದೆ. ಹಾಗೆ ಹೊರೆಯು ಹಾರವಾಗುವುದು ಯೋಗಿಗೆ—ಜ್ಞಾನಿಗೆ. ಅವನು ಮಾಯೆಯನ್ನು ಮೀರಿದವನು; ಜಗತ್ತಿನ ವ್ಯವಹಾರ ಧರ್ಮವನ್ನು ಅನುಸರಿಸಿ ಬಾಳಿ, ಜಗದವಧಿಗಳನ್ನು ದಾಟಿ ಮೇಲಕ್ಕೆ ಹತ್ತಿದವನು. ಹಾಗೆ ದಾಟುವವರೆಗೂ ಜಗತ್ತುಂಟು, —ಧರ್ಮವುಂಟು. ಧರ್ಮವೆಂಬುದು ಕೂಡ ಮಾಯೆಯ ಪರಿಧಿಯೊಳಗೇ ಸೇರಿದ್ದು. ಮಾಯಾ ಪರಿಧಿಯನ್ನು ದಾಟಿದವನಿಗೆ ಜಗತ್ತಿಲ್ಲ, ಧರ್ಮನಿರ್ಬಂಧವಿಲ್ಲ. ಅವನು ಅಧಿಧರ್ಮಿ, –ಅವಧೂತ, —ಆತ್ಮಕೇವಲಿ, —ಬ್ರಹ್ಮೈಕದರ್ಶಿ, —ಜೀವನ್ಮುಕ್ತ.

ಮಾಯೆಯ ಬಾಳು ಒಂದು ಕ್ಷಣದ್ದು. ಆದರೆ ಆ ಒಂದು ಕ್ಷಣ ನಾವು ಮೈಮರೆತಿದ್ದರೆ ಅದು ಪ್ರಬಲಿಸಿ ನಮ್ಮನ್ನು ನುಂಗಿಹಾಕುತ್ತದೆ. ಆ ಕ್ಷಣ ನಾವು ಜಾಗರೂಕರಾಗಿದ್ದರೆ ಅದು ಸುಳಿವು ತೋರದೆ ತಾನೇ ದೂರ ಸಾಗುತ್ತದೆ.

> ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ ॥ (ಶ್ವೇತಾಶ್ವತರ)

ಇಲ್ಲವೆಂದರೆ ಉಂಟು; ಉಂಟೆಂದರೆ ಇಲ್ಲ—ಇದು ಮಾಯೆಯ ವೈಲಕ್ಷಣ್ಯ. ಆದದ್ದರಿಂದಲೇ ಅದಕ್ಕೆ ಅನಿರ್ವಚನೀಯವೆಂದು ಹೆಸರು. ಅನಿರ್ವಚನೀಯವೆಂದರೆ "ಇದು ಹೀಗೆ" ಎಂದು ನಿಷ್ಕರ್ಷೆಗೆ ಸಿಕ್ಕದ್ದು; ಯಥಾವತ್ತಾಗಿ ವರ್ಣಿಸಲಾಗದ್ದು.

ಒಂದು ಕಥೆ ನೋಡೋಣ.

ಒಂದು ಕಥೆ

ನಮ್ಮೂರಲ್ಲಿ ಜಮೀನ್ದಾರ್ ಶಾಮರಾಯರ ಮನೆಯಲ್ಲಿ ಮದುವೆಯಾಯಿತು. ಶಾಮರಾಯರು ಭಾಗ್ಯವಂತರು, ಮತ್ತು ಧಾರಾಳಿಗಳು. ಅವರ ಬೀಗರು ಭೀಮರಾಯರು; ಅವರೂ ಭಾರೀ ಜಮೀನ್ದಾರರು, ಡಬಡ್ಡಾಳಿಕೆಯಲ್ಲಿ ಕಡಿಮೆಯೇನೂ ಅಲ್ಲ. ಸುಮಾರು ಹದಿನೈದು ಗಾಡಿಯ

ಜನ ಅವರ ಕಡೆಯವರು ಬಂದಿದ್ದರು. ಹೀಗೆ ಹೆಣ್ಣಿನ ಕಡೆಯವರು ನೂರು ಮಂದಿ, ಗಂಡಿನ ಕಡೆಯವರೂ ಕೊಂಚ ಹೆಚ್ಚು ಕಡಮೆ ಅಷ್ಟು ಮಂದಿ. ಇದರ ಜೊತೆಗೆ ಊರ ಜನ ಇನ್ನೂರು ಮುನ್ನೂರು ಮಂದಿ ಸೇರಿ ದೊಡ್ಡ ಸಡಗರವಾಗಿದೆ. ಬಾಜಾಬಜಂತ್ರಿ ಊರಿನ ನಾಲ್ಕೂ ಕಡೆಗಳಿಂದ ಪ್ರತಿಧ್ವನಿತವಾಗಿ ಬರುತ್ತಿದೆ. ವರಪೂಜೆಗಾಗಿ ರಾಮದೇವರ ಗುಡಿಯಲ್ಲಿ ಏರ್ಪಾಟಾಗಿದೆ. ಆಗ ಅಲ್ಲಿ ಹತ್ತಾರು ಮಂದಿ ಒಳ್ಳೊಳ್ಳೆಯ ಉಡುಪುಗಳನ್ನು ಧರಿಸಿ ಜರಿ ರುಮಾಲುಗಳನ್ನೂ ಸರಿಗೆ ಶಲ್ಯಗಳನ್ನೂ ಸಿಂಗರಿಸಿಕೊಂಡು ಮೆರುಗುಮೀಸೆಗಳ ಕೆಳಗೆ ತುಂಬನಗು ನಗುತ್ತ ಓಡಾಡುತ್ತಿದ್ದಾರೆ. ಎಲ್ಲರೂ ಆದರೋತ್ಸಾಹಗಳಿಂದ ಕುಶಲಪ್ರಶ್ನೆ ಮಾಡುತ್ತ ಹರಟುತ್ತಿದ್ದಾರೆ. ಆ ಪೈಕಿ ಒಬ್ಬಾತನನ್ನು ಗುರುತು ಮಾಡಿಕೊಳ್ಳೋಣ. ಆತನ ಹೆಸರು ಗುಂಡೂರಾಯ. ಇವನೂ ಠೀವಿಯ ಮನುಷ್ಯ. ಹುರಿಮೀಸೆ, ಬಿರಿನಗುವು, ಎಲ್ಲರನ್ನೂ ಕೈಕುಲುಕಿಸಿ, ಎಲ್ಲರೊಡನೆಯೂ ಸಲಿಗೆಯಿಂದ ಮಾತನಾಡುತ್ತಿದ್ದಾನೆ. ನೋಡಿದವರೆಲ್ಲ ಆತನನ್ನು ಭಾರೀ ದೊಡ್ಡಮನುಷ್ಯ ಎಂದುಕೊಂಡಿದ್ದಾರೆ. ವರಪೂಜೆ ಮುಗಿದು ಗಂಧಪುಷ್ಪತಾಂಬೂಲ ವಿನಿಯೋಗವಾಗುವ ಕಾಲದಲ್ಲಿ ಗುಂಡೂರಾಯನೂ ಆ ಕಾರ್ಯದಲ್ಲಿ ಸ್ವತಂತ್ರಿಸಿ ಭಾಗನಡಸಿದ. ಅನಂತರ ಭೋಜನಪ್ರಕರಣ. ಅಲ್ಲಿಯೂ ಹಾಗೆಯೇ. ಎಲ್ಲರಿಗೂ ಉಪಚಾರ ಹೇಳುತ್ತಾನೆ. ಬಡಿಸುವವರಿಗೆ ಹುಕುಂ ಕೊಡುತ್ತಾನೆ. ಭೋಜನಶ್ಲೋಕ ಹೇಳಿ ಎಂದು ಅವರಿವರನ್ನು ಬಲವಂತಪಡಿಸುತ್ತಾನೆ. ಊಟವಾದಮೇಲೆ ತಾಂಬೂಲವಿನಿಯೋಗ ಮಾಡಿಸುತ್ತಾನೆ.

ಹೀಗೆ ನಾಲ್ಕು ದಿವಸ ಮದುವೆ ನಡೆಯಿತು. ಗುಂಡೂರಾಯನು ಹೆಣ್ಣಿನ ಮನೆಯವರಲ್ಲಿ ಗಂಡಿನ ಕಡೆಯವನೆನ್ನಿಸಿ, ಗಂಡಿನ ಬಿಡಾರದಲ್ಲಿ ಹೆಣ್ಣಿನ ಕಡೆಯವನೆನ್ನಿಸಿ, ಎರಡೂ ಕಡೆಯ ಬೀಗರುಗಳ ಮೆಚ್ಚಿಕೆಯನ್ನೂ ನಂಬಿಕೆಯನ್ನೂ ಸಂಪಾದಿಸಿಕೊಂಡಿದ್ದಾನೆ. ಎರಡು ಕಡೆಗಳಲ್ಲಿಯೂ "ಗುಂಡೂರಾಯ ಇದ್ದದ್ದರಿಂದ ನಮ್ಮ ಕೆಲಸ ಹಗುರವಾಯಿತು; ಇಂಥ ಸಂದರ್ಭಕ್ಕೆ ಸಹಾಯದ ಮನುಷ್ಯ ಎಂದರೆ ಗುಂಡೂರಾಯನಂಥವನು ಇರಬೇಕು" — ಎಂದು ಕೊಂಡಾಡಿಕೊಳ್ಳುತ್ತಾರೆ.

ಐದನೆಯ ದಿನ ಬೀಗರೂ ಬಂಧುಗಳೂ ಅವರವರ ಸ್ಥಳಗಳಿಗೆ ಹೊರಡಲು ಸಿದ್ಧರಾಗುತ್ತಿದ್ದಾರೆ. ಆಗ ಒಂದು ಕೋಲಾಹಲವೆದ್ದಿತು. ಗಂಡಿನವರ ಬಿಡದಿಯಲ್ಲಿ ವರನಿಗೆ ಕೊಟ್ಟಿದ್ದ ಚಿನ್ನಬೆಳ್ಳಿಯ ವರೋಪಚಾರದ ಸಾಮಗ್ರಿ ಗೈರುವಿಲೆಯಾಗಿದೆ! ಹೆಣ್ಣಿನವರ

ಮನೆಯಲ್ಲಿ ನೋಡಿಕೊಂಡರೆ ವಧುವಿಗೆ ಇಟ್ಟಿದ್ದ ಒಡವೆ ವಸ್ತ್ರಗಳು ಗೈರುವಿಲೆ! ಇಲ್ಲೂ ಬೊಬ್ಬೆ, ಅಲ್ಲೂ ಬೊಬ್ಬೆ. ಎಲ್ಲರೂ "ಆ ಗುಂಡೂರಾಯನನ್ನು ಕರೆಯಿರಿ, ಆತ ಪತ್ತೆ ಮಾಡ್ತ್ಯಾನು" —ಎನ್ನುತ್ತಿದ್ದಾರೆ. ಆ ರಾಯ ಎಲ್ಲಿ? ಯಾರಿಗೂ ಪತ್ತೆಯಿಲ್ಲ. ಭೀಮರಾಯರು ಶಾಮರಾಯರನ್ನು ಕುರಿತು ಎಲ್ಲಿ "ಸ್ವಾಮಿ ನಿಮ್ಮ ಆ ರಾಯರು?" ಎಂದರು. ಶಾಮರಾಯರು "ನಮ್ಮ ರಾಯರು ಯಾರು?" ಎಂದರು. ಬೀಗರು "ಅವರೇ—ಆ ಗುಂಡೂರಾಯರು" ಎಂದರು. ಶಾಮರಾಯರು "ಅಯ್ಯೋ! ಅವರು ನಿಮ್ಮ ಕಡೆಯವರಲ್ಲವೆ? ನಿಮ್ಮ ಕಡೆಯವರೆಂದು ನಾನು ತಿಳಿದುಕೊಂಡಿದ್ದದ್ದು!" ಎಂದರು.

ಶಾಮರಾಯರ ಕಣ್ಣಿಗೆ ಗುಂಡೂರಾಯ ಭೀಮರಾಯರ ಬಳಗ. ಭೀಮರಾಯರ ಕಣ್ಣಿಗೆ ಅವನು ಶಾಮರಾಯರ ಬಳಗ. ವಾಸ್ತವದಲ್ಲಿ ಅವನು ಶಾಮರಾಯರವನೂ ಅಲ್ಲ, ಭೀಮರಾಯರವನೂ ಅಲ್ಲ, ಎಲ್ಲಿಂದಲೋ ಬಂದ. ಏನೇನೋ ಆಟವಾಡಿದ. ಎಲ್ಲಿಗೋ ಹೋದ. ಇದ್ದ ಒಂದೆರಡುದಿನ ಎಲ್ಲರಿಗೂ ಮರುಳು ಮಾಡಿ, ಎಲ್ಲರನ್ನೂ ನಂಬಿಸಿ, ಎಲ್ಲರಿಗೂ ಚಳ್ಳೇಕಾಯಿ ತಿನ್ನಿಸಿದ. ಅದೇ ಮಾಯೆ.

ಗುಂಡೂರಾಯನಿಗೆ ಶಾಪವಿಟ್ಟದ್ದರಿಂದ ವಿಚಾರ ಮುಗಿಯಲಾರದು. ಅವನ ಚಮತ್ಕಾರಕ್ಕೆ ಅವಕಾಶಮಾಡಿ ಪ್ರೋತ್ಸಾಹಿಸಿದವರು ಯಾರು? ಶಾಮರಾಯ ಮಂಕು ಬಡಿದಿದ್ದ; ಭೀಮರಾಯ ಬೆಪ್ಪು ಹಿಡಿದಿದ್ದ. ಅದೇ ಅವಿದ್ಯೆ. ಅವಿದ್ಯೆಯೆಂದರೆ ಓದು ಬರಹ ಬಾರದಿರುವುದಲ್ಲ. ವೇದಶಕ್ತಿಯ ನ್ಯೂನತೆಯೇ ಅವಿದ್ಯೆ. ಹತ್ತು ಮೆಟ್ಟಲು ಹತ್ತಬೇಕಾಗಿದ್ದ ಬುದ್ಧಿ ಆರನೆಯದರಲ್ಲಿ ಕುಸಿದುಬಿದ್ದರೆ ಅದು ಅವಿದ್ಯೆ. ಆತ್ಮದ ಚಿತ್(ಜ್ಞಾನ) ಶಕ್ತಿಯು ಜೀವಜನ್ಮಾಂತರದ ವಾಸನಾಮಲಗಳ ಭಾರದಿಂದ ಕುಗ್ಗಿ ದುರ್ಬಲವಾಗಿದ್ದಾಗ ಅದಕ್ಕೆ ಶಾಸ್ತ್ರದಲ್ಲಿ ಅವಿದ್ಯೆಯೆಂದು ಸಂಕೇತ. ಅದು ಜ್ಞಾನದ ನ್ಯೂನತೆ, ಬುದ್ಧಿಯ ಅಸಾಮರ್ಥ್ಯ.

ಪ್ರಕೃತಿಯ ವಯೋನಿಯಮದಿಂದ ನಮ್ಮ ಬಾಯಲ್ಲಿ ಹಲ್ಲು ಉದುರಿಹೋಗಿದೆ. ಆಗ ಆಕೆ ಬಹು ಆದರಿಸುವವಳಾಗಿ ಒಂದು ಬಾಳೆಯ ಹಣ್ಣಿನೊಳಗಡೆ ಅಫೀಮು ತುಂಡು ಹುದುಗಿಸಿ, ಅದನ್ನು ನಮ್ಮ ಬಾಯೊಳಕ್ಕೆ ತುರುಕುತ್ತಾಳೆ. ನಮಗೆ ಹಲ್ಲಿಲ್ಲದ್ದರಿಂದ ಅಗಿಯಲಾರೆವು. ಅಫೀಮು ನಮಗೆ ತಿಳಿಯದಂತೆ ಗಂಟಲೊಳಕ್ಕೆ ನುಣುಚಿಕೊಳ್ಳುತ್ತದೆ. ಹಣ್ಣು ನಾಲಿಗೆಗೆ ಸೋಕಿದ್ದರಿಂದ ನಾವು ಚಪ್ಪರಿಸಿ ಇನ್ನೂ ಬಾಯಿ ಬಿಡುತ್ತೇವೆ. ಅಫೀಮು ಹೊಟ್ಟೆಗೆ ಸೇರಿ ಅಮಲು ನೆತ್ತಿಗೇರುತ್ತದೆ. ಹಲ್ಲಿಲ್ಲದ್ದು ಅವಿದ್ಯೆ; ಅಫೀಮು ಹಣ್ಣು ಮಾಯೆ. ಅದು ಇದಕ್ಕೆ

ಸಹಕಾರಿ. ಎರಡೂ ಸೇರಿ ನಮ್ಮ ಬುದ್ಧಿಗೆ ವಿಕಾರಿ. ಜಗತ್ತಿನಲ್ಲಿರುವುದು ಮಾಯೆ; ಜೀವನದಲ್ಲಿರುವುದು ಅವಿದ್ಯೆ.

ಮಾಯೆಯೇ ಜಗತ್ತಿನಲ್ಲಿರುವ ಸ್ವಾರಸ್ಯ. ಅದು ಕೆಲಸಮಾಡದಿದ್ದರೆ ಯಾರಿಗೂ ಜೀವನ ಬೇಕೆನ್ನಿಸದು. ನಮ್ಮ ಹಳೆಯ ಕಾಲದ ನಾಟಕಗಳಲ್ಲಿ ರಾಜನ ಪಕ್ಕದಲ್ಲಿ ವಿದೂಷಕ ಒಬ್ಬ ಇರುತ್ತಿದ್ದನಲ್ಲವೆ? ರಾಜನ ಕಾಮಾಭಿಲಾಷೆಗಳನ್ನೆಲ್ಲಾ ಅವನು ಪ್ರೋತ್ಸಾಹಿಸುವುದು; ರಾಜನಿಗೆ ಕುಟಿಲೋಪಾಯಗಳನ್ನು ಹೇಳಿಕೊಡುವುದು; ರಾಜನು ಸಾಹಸಕ್ಕೆ ಹೊರಟಾಗ “ಅದೇ ಸರಿ” ಎನ್ನುವುದು; ಕಡೆಗೆ ರಾಜನು ಹಲ್ಲು ಮುರಿದು ಮೀಶೆ ಹರಿದು ಬಂದಾಗ “ಮಿತ್ರನೆ, ನಾನು ಮೊದಲೇ ಹೇಳಲಿಲ್ಲವೆ ಎಚ್ಚರಿಕೆಯನ್ನ?” ಎಂದು ಮೂದಲಿಸುತ್ತ ತನ್ನ ಒಳೊಳಗೇ ನಗುತ್ತಿರುವುದು—ಇವು ವಿದೂಷಕನ ಕಲ್ಯಾಣಗುಣಗಳು. ನಮ್ಮನಮ್ಮ ಪ್ರಪಂಚಗಳಲ್ಲಿ ಮಾಯೆ ನಮ್ಮ ಪಾಲಿಗೆ ಹಾಗೆ ವಿದೂಷಕ ಪಾತ್ರವನ್ನು ವಹಿಸುತ್ತಾಳೆ. ನಾವು ಬಾಡಿಗೆದಾರರಾಗಿ ವಾಸಕ್ಕೆ ಬಂದ ಮನೆ ಕೊಂಚ ಕಾಲವಾದ ಬಳಿಕ ನಮ್ಮ ಸ್ವಂತದ್ದೇ ಎಂದು ವಾದಿಸಿ ಮಾಲೀಕನೇ ಹೊರಗಿನವನೆನ್ನುವಂತೆ ಮಾಡುತ್ತಾಳೆ. ಜಗತ್ತು ನಮ್ಮ ಸ್ವಂತದ ಸ್ವತ್ತೆಂದು ಭಾವಿಸಿ ಅದಕ್ಕೆ ಬೇರೊಬ್ಬ ಸ್ವಾಮಿ ಇದ್ದಾನೆಂಬುದನ್ನು ಮರೆಯಿಸುತ್ತಾಳೆ. ಮಾಯೆಯಿಂದಲೇ ಲೋಕಕ್ಕೂ ನಮಗೂ ಗಂಟು.

ಮಾಯೆ ನಮ್ಮನ್ನು ತಬ್ಬಿಕೊಳ್ಳುತ್ತಾಳೆ. ನಮಗೆ ಸುಖವಾಗುತ್ತದೆ. ನಾವು ಮೈಮರೆಯುತ್ತೇವೆ. ಆಗ ಆಕೆಯ ಮೃದುವಾದ, ನುಣುಪಾದ, ಸೊಂಪಾದ ಅಂಗಗಳಿಂದ ಮುಳ್ಳುಗಳು ಹೊರಡುತ್ತವೆ. ಆಗ ನಾವು ಹಾ ಹಾ! ಹೋ ಹೋ! ಎಂದು ಅರಚಿ ಅಬ್ಬರವಿಡುತ್ತೇವೆ. ಮಾಯೆ ಆ ಮುಳ್ಳುಗಳನ್ನು ಹಿಂದಕ್ಕೆ ಎಳೆದುಕೊಳ್ಳುತ್ತಾಳೆ. ನಮಗೆ ಮತ್ತೆ ಸುಖ ತೋರುತ್ತದೆ. ಆ ಗಾಢಾಲಿಂಗನವೇ ನಮಗಿರಲಿ ಎಂದುಕೊಂಡು ಮೈಮರೆಯುತ್ತೇವೆ. ಮತ್ತೆ ಹೊರಡುತ್ತವೆ ಆ ಸೂಜಿಯುಗುರು ಮುಳ್ಳು ನವಿರುಗಳು. ಮತ್ತೆ ನಮ್ಮ ಗೋಳಾಟ, ಮತ್ತೆ ಅವಳ ಜೋಗುಳ.

> ಪುನರಪಿ ಹಸಿತಂ ಪುನರಪಿ ರುದಿತಂ
> ಪುನರಪಿ ಮಾಯಾಸೌಧನಿವಸಿತಮ್ ॥

***

ಜಗದ್ಯಂತ್ರದ ಸ್ವರೂಪವನ್ನು ನಿರೂಪಿಸಿರುವ ಭಗವದ್ವಾಕ್ಯದ ಅರ್ಥವ್ಯಾಪನೆಯನ್ನು ವಿಚಾರಮಾಡಹೊರಟು ಮಾಯೆ ಎಂದರೇನೆಂಬುದನ್ನು ಸ್ಥೂಲವಾಗಿ ನೋಡಿಯಾಯಿತು.

> ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
> ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥

ಪುನಃಪುನರ್ಮನನಯೋಗ್ಯವಾದ ವಾಕ್ಯ ಇದು. ಇದನ್ನು ಕುರಿತು ಆಲೋಚನೆ ಮಾಡಿದಷ್ಟೂ ಹೆಚ್ಚುಹೆಚ್ಚು ಅರ್ಥ ಸ್ಫುರಿಸುತ್ತದೆ ಮನಸ್ಸಿಗೆ. ಮಹಾವಾಕ್ಯಪ್ರಾಯವಾದದ್ದು ಈ ಶ್ಲೋಕ.

ಇಲ್ಲಿ ಪ್ರಸ್ತುತವಾಗಿರುವ ಯಂತ್ರ ನಾವು ಸಂತೆಗಳಲ್ಲೂ ಪರಿಷೆಗಳಲ್ಲೂ ನೋಡಿರುವ Merry-go-round ಅಥವಾ ರಂಕುರಾಟಣೆ ಎಂಬಂಥ ವಾಹನ ಕ್ರೀಡಾಯಂತ್ರವೆಂದು ತೋರುತ್ತದೆ. ಒಂದು ಎತ್ತರವಾದ ಕಂಬದ ಮೇಲೆ ವಿಶಾಲವಾದ ಗುಂಡು ಚಪ್ಪರವನ್ನು ಹೊದಿಸಿ. ಆ ಮೇಲ್ಚಪ್ಪರದ ಅಂಚಿನಿಂದ ಹತ್ತಿಪ್ಪತ್ತು ಸಲಾಕಿಗಳನ್ನು ಇಳಿಯಬಿಟ್ಟು, ಸಲಾಕಿಯ ಕೆಳಕೊನೆಗೆ ಕುದುರೆ ಆನೆ ನವಿಲು ಮೊದಲಾದ ಸವಾರಿ ಪ್ರಾಣಿಗಳ ಬೊಂಬೆಮಣೆಗಳನ್ನೂ, ಉಯ್ಯಾಲೆ ತೊಟ್ಟಿಲುಗಳನ್ನೂ ತಗಲಿಸಿರುತ್ತದೆ. ಬಾಲಕರೂ ಇತರ ವಿನೋದಿಗಳೂ ತಮತಮಗೆ ಬೇಕಾದಂತೆ ಆ ಪೀಠಗಳ ಮೇಲೆ ಕೂಡುತ್ತಾರೆ. ಬಳಿಕ ಆ ಯಂತ್ರದ ಚಾಲಕನು ಒಂದು ಕೀಲನ್ನು ತಿರುಗಿಸುತ್ತಾನೆ. ಆಗ ಮೇಲ್ಚಪ್ಪರ ಗಿರಗಿರನೆ ತಿರುಗಲಾರಂಭಿಸುತ್ತದೆ. ಅದರಿಂದ ಓಡುತ್ತಿರುವ ವಾಹನಗಳೂ ವಾಹನಸ್ಥರೂ ಅತಿರಭಸದಿಂದ ಸುತ್ತುವುದಾಗುತ್ತದೆ. ಇಂಥಾ ವಾಹನಕ್ರೀಡಾಯಂತ್ರವು ಮಹಾಭಾರತದ ಕಾಲದಲ್ಲಿ ಇತ್ತೋ ಇಲ್ಲವೋ! ಆ ಉಪಮಾನವಂತೂ ಜಗದ್ಯಂತ್ರಕ್ಕೆ ಬಹು ಚೆನ್ನಾಗಿ ಒಪ್ಪುತ್ತದೆ.

1. ಆ ಯಂತ್ರವು ಬಣ್ಣಬಣ್ಣದ ತೋರಣ ಧ್ವಜಗಳಿಂದಲೂ ಬಗೆ ಬಗೆಯ ಬೊಂಬೆಯ ಅಲಂಕಾರದಿಂದಲೂ ಕಣ್ಣಿಗೆ ಪಸಂದೆನಿರುತ್ತದೆ. ಜಗತ್ತೂ ಹಾಗೇ ನೋಟಕ್ಕೆ ಸೊಗಸು.
2. ರಾಟೆಯ ಯಂತ್ರದ ಕುದುರೆಯ ಮೇಲೆ ಕುಳಿತ ಬಾಲಕನು ಅದು ಕೃತಕವಾದ ಬೊಂಬೆಯಲ್ಲ, ನಿಜವಾದ ಕುದುರೆ ಎಂದು ಭಾವಿಸುತ್ತಾನೆ. ನಾವೂ ಹಾಗೆ ನಮ್ಮ ದೇಹವು ಜಡಪದಾರ್ಥವೆಂಬುದನ್ನು ಮರೆತು ಅದರ ಚೇಷ್ಟೆಗಳೇ ಜೀವನ, ಅದು ಶಾಶ್ವತ ಎಂಬಂತೆ ನಡೆದುಕೊಳ್ಳುತ್ತೇವೆ.

3. ಬಾಲಕನು ತಾನು ಕುದುರೆಯನ್ನು ಓಡಿಸುತ್ತಿರುವವನು, ತಾನು ಅದಕ್ಕೆ ಅಧಿಕಾರಿ—ಎಂದುಕೊಂಡು ಹೇ! ಹೇ!! ಎಂದು ಕೂಗುತ್ತ ಕೈಕಾಲು ಒದರಿಸುತ್ತ, ಯಂತ್ರ ಚಾಲಕನು ಬೇರೆ ಇದ್ದಾನೆಂಬುದನ್ನು ಮರೆಯುತ್ತಾನೆ. ನಾವು ನಮ್ಮ ಜೀವನಕ್ಕೆ ಅಧಿಕಾರಿಗಳು, ನಮ್ಮಿಂದಲೇ ನಮ್ಮ ಸಾಹಸಸಿದ್ಧಿಗಳು, ನಮ್ಮಿಂದಲೇ ನಮ್ಮ ಜಗತ್ತು ಎಂದುಕೊಂಡು ಎಲ್ಲಕ್ಕೂ ಆದಿಕಾರಣವಾದ ಭಗವದ್ವಸ್ತುವನ್ನು ಮರೆಯುತ್ತೇವೆ.
4. ಬಾಲಕನನ್ನು ಬೊಂಬೆ ಸವಾರಿಯ ರಭಸ ಆವರಿಸಿಕೊಳ್ಳುತ್ತದೆ. ಆ ಆವೇಶದಲ್ಲಿ ಅವನು ತಾನು ಹೋಗುತ್ತಿರುವುದೆಲ್ಲಿಗೆ, ಏತಕ್ಕೆ—ಎಂದು ಕೇಳಿಕೊಳ್ಳುವ ವಿವೇಕ ಅವನಿಗೆ ಬರುವುದಿಲ್ಲ. ಅದೇ ಮೋಹ. ನಮಗೂ ಹಾಗೆಯೇ ಜಗದ್ಭೋಗಗಳ ಉದ್ರೇಕ ನಮ್ಮನ್ನು ಆವರಿಸಿಕೊಳ್ಳುತ್ತದೆ. ಜೀವನದ ಉದ್ದೇಶವೇನು, ಅದು ಸಾರ್ಥಕಪಡುವುದು ಹೇಗೆ—ಎಂದು ವಿಚಾರವಿಮರ್ಶೆ ಮಾಡಿಕೊಳ್ಳುವ ಜಾಗರೂಕತೆ ಇಲ್ಲದೆಹೋಗುತ್ತದೆ. ಅದೇ ಮೋಹ. ಸವಾರಿಯ ಯಂತ್ರದ ಭ್ರಮಣವು ಬಾಲಕನಿಗೆ ಮೈಮರೆಯಿಸುತ್ತದೆ. ಪ್ರಪಂಚ ವ್ಯವಹಾರಪರಿಭ್ರಮಣ ನಮ್ಮನ್ನು ಸ್ಮೃತಿ ತಪ್ಪಿಸುತ್ತದೆ. ರಾಟೆಯ ಯಂತ್ರದ ರೂಪ ರಂಗು ರಭಸಗಳು ಮಕ್ಕಳಿಗೆ ಮೋಹಕ; ಲೋಕಸಂಪತ್ತಿನ ರೂಪ ರಂಗು ರಭಸಗಳು ನಮಗೆ ಮೋಹಕ. ಅವರು ಹಿಂದು ಮುಂದು ನೋಡದೆ ಆ ಮೋಹಕ್ಕೆ ವಶರಾಗುತ್ತಾರೆ. ನಾವೂ ತದ್ವದೇವ. ರಾಟೆಯ ಮಾಯೆಯಲ್ಲಿ ಹುಡುಗರಿಗೆ ಯಥಾರ್ಥದ ಮರೆವು, ಅಯಥಾರ್ಥದ ಸುಳಿವು. ಜಗನ್ಮಾಯೆಯಲ್ಲಿ ನಮಗೆ ಮೂಲ ಚೈತನ್ಯದ ಮರೆವು, ಬಹಿಶ್ಚೇಷ್ಟೆಯ ಬೆರಗು.

ಯಂತ್ರದ ಮೇಲೆ ಕುಳಿತವನಿಗೆ ಒಂದು ನಿಯಮಮರ್ಯಾದೆಯುಂಟು. ಅವನು ತನ್ನ ದಾರಿಯಲ್ಲಿ ತಾನು ಹೋಗಬೇಕು, ಹಿಂದಿನವರೆಗೂ ಡಕ್ಕಾಡಿಕ್ಕಿ ಹೊಡೆಯಕೂಡದು. ಇಂಥ ಕಟ್ಟುಪಾಡೇ ಧರ್ಮ. ಆ ನಿಯಮಗಳನ್ನು ಯಾರಾದರೂ ಉಲ್ಲಂಘನೆ ಮಾಡಿದರೆ—ಆ ಕಡೆಯವನು ಈ ಕಡೆಗೆ ವಾಲಿದರೆ, ಮುಂದಿನವನು ಹಿಂದಿನವನಿಗೆ ದಾರಿ ಬಿಡಲು ತಂಟೆ ಮಾಡಿದರೆ; ಅಥವಾ ಮುಂದಿನವರನ್ನು ಹಿಂದಕ್ಕೆಳೆದರೆ—ಅವನಿಗೆ ಯಂತ್ರ ವ್ಯವಸ್ಥಾಪಕನಿರುವುದರ ಸ್ಮರಣೆ ತಪ್ಪಿಹೋಗಿದೆ; ಅದನ್ನು ಅವನಿಗೆ ಜ್ಞಾಪಕಕ್ಕೆ ತರಬೇಕು—ಎಂದರ್ಥ. ಇನ್ನೊಬ್ಬರಿಗೆ ತೊಂದರೆಮಾಡದಂಥ ನಡವಳಿಕೆಯೇ ಧರ್ಮ. ಅದೊಂದು ರೀತಿಯ ನಯ. ಗೀತೆಯಲ್ಲಿಯೇ ಹೇಳಿದೆ— “ಧ್ರುವಾ ನೀತಿಃ.” ಆ ನೀತಿ ತಪ್ಪುವವರಿಗೆ ಅದನ್ನು ಕಲಿಸಬೇಕು. ಇದು ಗೀತಾಚಾರ್ಯರ ಅಭಿಪ್ರಾಯ. ಆ ಯಂತ್ರದ ರಭಸವು

ಹುಚ್ಚುಹಿಡಿಸುವಂಥದು. ನಮ್ಮ ದೇಹ ಜಡವಸ್ತು, ಮರದ ಕುದುರೆಯಂತೆ! ಆ ಯಂತ್ರವನ್ನು ಆರೋಹಣ ಮಾಡಿರುವ ಜೀವಗಳನ್ನು ಪರಿಭ್ರಮಿಸುವಂತೆ ಮಾಡುತ್ತಿದ್ದಾನೆ ಪರಮಾತ್ಮ. ಯಾವುದರಿಂದ? "ಮಾಯಯಾ."

ಬೇಲೂರು ಗುಡಿಗೆ ಹೋಗುತ್ತೇವೆ. ಬಹಿಷ್ಪ್ರಾಕಾರದ ಶಿಲಾಬಾಲೆಯರ ಬೆಡಗಿಗೆ ಮನಸೋತು ಮೂಲದೇವರ ದರ್ಶನಕ್ಕೆ ಹೊತ್ತಿಲ್ಲವೆಂದು ಹಿಂದಿರುಗುತ್ತೇವೆ. ಅದು ರೂಪ ಸೌಂದರ್ಯದ ಮಾಯೆ, ಶೃಂಗಾರಭಾವದ ಮಾಯೆ.

ಭಗವಂತನ ಲೀಲೆಯಲ್ಲಿ ಎರಡು ಕ್ರಿಯೆಗಳಿರುವಂತೆ ತೋರುತ್ತದೆ:

1. ನಮಗೆ ಹುಚ್ಚು ಹಿಡಿಸುವುದು.
2. ನಮಗೆ ಹುಚ್ಚು ಬಿಡಿಸುವುದು.

ತಾನಾಗಿ ಹುಚ್ಚು ಹಿಡಿಸಿದ್ದಾನೆ; ನಾವು ಬೇಕೆಂದರೆ ಹುಚ್ಚು ಬಿಡಿಸುತ್ತಾನೆ. ಎಂಥಾದ್ದು ಆ ಹುಚ್ಚು? ಅದು ರಂಗುರಾಟಣೆಯ ಸವಾರಿಯದು. ಜಗತ್ಪ್ರಕೃತಿಯೇ ರಾಟಣೆ. ಅದರಲ್ಲಿ ರಂಗುರಂಗಿನ ಆನೆ ಕುದುರೆ ನವಿಲು ಹಂಸಗಳಿವೆ. ನಾವು ಅದು ಆಟವೆಂಬುದನ್ನು ಮರೆಯುತ್ತೇವೆ. ಆಟವೆಂದು ಪ್ರಾರಂಭವಾದದ್ದು ಆರ್ಭಟವಾಗುತ್ತದೆ. ಹಿಂದೆ ಭಗವಂತ ಹೇಳಿದಂತೆ—

> ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ॥

ಎಂದೆಲ್ಲ ಭ್ರಾಂತಿಯುಂಟಾಗುತ್ತದೆ. ಮಾಯೆಯು ಪ್ರಕೃತಿಯ ಚೇಷ್ಟೆ ಎಂದು ಹೇಳಿದೆವು. ಅದಷ್ಟೇ ಆಕೆಯ ಕೆಲಸ ಎಂದು ತಿಳಿದರೆ ಅನ್ಯಾಯವಾಗುತ್ತದೆ. ಪ್ರಕೃತಿಯು ಮಾಯಾವತಿಯಾದಂತೆ ಸತ್ಯವತಿಯೂ ಹೌದು. ಆಕೆಯ ಒಂದು ಕೈ ಸತ್ತನ್ನು ತೋರಿಸುತ್ತದೆ, ಇನ್ನೊಂದು ತ್ಯತ್ತನ್ನು ತೋರಿಸುತ್ತದೆ.

> ಸಚ್ಚತ್ಯಚ್ಚಾಭವತ್ ॥

ಒಂದು ಕಣ್ಣು ಕುಟಿಲಸಂಜ್ಞೆಯಾದರೆ ಇನ್ನೊಂದು ಸತ್ಯಸಂಜ್ಞೆಯದು. ಅತ್ತ ಕೃತಕ; ಇತ್ತ ಋತ. ಬಿತ್ತಿದ ಬೀಜದಂತೆ ಮೊಳೆತ ಸಸಿ, ತಂದೆ ತಾಯಿಗಳಂತೆ ಶಿಶುಸಂತತಿ,

ಪಂಚಮಹಾಭೂತಗಳ ತತ್ತತ್ಕಾರ್ಯಕ್ಲೃಪ್ತಿ, ಋತುಚಕ್ರದ ನಿಯತ ಪರಿವರ್ತನೆ, ಸೂರ್ಯಚಂದ್ರಾದಿ ಗ್ರಹಸಂಚಾರನಿಯಮ, ಕೈ ಮಾಡಿದ ಅಡಿಗೆಯಂತೆ ಬಾಯುಣ್ಣುವ ಊಟ—ಇವೆಲ್ಲ ಋತವಿಧಿ.

> ಅನ್ನಾದ್ಭವಂತಿ ಭೂತಾನಿ
> ಪರ್ಜನ್ಯಾದನ್ನಸಂಭವಃ ।
> ಏವಂ ಪ್ರವರ್ತಿತಂ ಚಕ್ರಮ್ ।

ಇವೆಲ್ಲ ಪ್ರಕೃತಿಯ ಋತಭಾವ.

> ಋತಂ ಸತ್ಯಂ ಪರಂ ಬ್ರಹ್ಮ ।

ಪ್ರಕೃತಿಗೆ ಮೂಲವಾದದ್ದು ಬ್ರಹ್ಮವಸ್ತು. ಅದು ಪ್ರಕೃತಿಯಿಂದ ಮೇಲಿರತಕ್ಕದ್ದು. ಪ್ರಕೃತಿಯ ಸದ್ಭಾಗವಾದ ಋತಸತ್ಯವಿಧಿಗಳನ್ನವಲಂಬಿಸಿ ನಡೆದುಕೊಂಡರೆ ಪ್ರಕೃತಿಯನ್ನು ಮೀರುವುದಾಗುತ್ತದೆ. ಹಿಂದೆಯೇ ಹೇಳಿದ್ದಾನೆ ಸ್ವಾಮಿ:

> ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥

ಮಾಯೆಯನ್ನು ಮಾಡಿರುವವನು ಭಗವಂತ. ಆದದ್ದರಿಂದ ಮಾಯೆಯನ್ನು ದಾಟಬೇಕಾದರೆ "ನೀನು ಪ್ರಯೋಗಿಸಿರುವ ಮೋಹನಾಸ್ತ್ರವನ್ನು ನೀನೇ ಹಿಂದಕ್ಕೆ ತೆಗೆದುಕೋ" —ಎಂದು ಭಗವಂತನಲ್ಲಿ ನಾವು ಶರಣುಹೋಗಬೇಕು.

ಅದೇ ಮಾತನ್ನು ಈಗ ಮತ್ತೆ ಹೇಳುತ್ತಾನೆ:

> ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
> ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥

"ಆ ಈಶ್ವರನನ್ನೇ ಮೊರೆಹೋಗು. ಮನಸ್ಸನ್ನೆಲ್ಲ ಅವನಲ್ಲಿರಿಸಿ ಶರಣುಬೀಳು. ಅವನ ಅನುಗ್ರಹದಿಂದ ನೀನು ಶಾಶ್ವತಸ್ಥಾನವನ್ನು ಸೇರಿ ಪರಮಶಾಂತಿಯನ್ನು ಪಡೆಯಲಾದೀತು."

ಇಲ್ಲಿಗೆ ಭಗವಂತನು ಅರ್ಜುನನಿಗೆ ಒದಗಿಸಬೇಕಾಗಿದ್ದ ಜ್ಞಾನಸಾಮಗ್ರಿಯನ್ನು ಒದಗಿಸಿದ್ದಾಯಿತು. ಇನ್ನು ಮುಂದಿನ ನಿರ್ಣಯ ಅರ್ಜುನನಿಂದ ಆಗಬೇಕಾದದ್ದು. ಅವನು ಹಿಡಿಯುವ ದಾರಿ ಮತ್ತೊಬ್ಬರ ನಿರ್ಬಂಧಕ್ಕಾಗಲಿ, ದಾಕ್ಷಿಣ್ಯಕ್ಕಾಗಲಿ ಹಿಡಿದದ್ದಾಗಬಾರದು. ಅರ್ಜುನನ ಪ್ರಾರಂಭಮನೋಭಾವ ಕಾರುಣ್ಯದ್ದು, ಧರ್ಮಶ್ರದ್ಧೆಯದು, ಲೋಕಹಿತದೃಷ್ಟಿಯದು. ಆದರೂ ಆಗ ಅದು ಪ್ರಾಕೃತವಾದ ಅವಿಚಾರದಿಂದ ಉಂಟಾಗಿದ್ದ ಮನೋಭಾವ; ಅವನ ಸ್ವಂತ ವಿವೇಕದಿಂದ ಬಂದದ್ದಲ್ಲ; ಬುದ್ಧಿವಿಚಾರಪೂರ್ವಕವಾಗಿ ಆಗಿದ್ದ ದೃಢನಿಶ್ಚಯವಲ್ಲ. ಮನುಷ್ಯ ಮಾಡುವ ಯಾವ ಕೆಲಸವೇ ಆಗಲಿ, —ಅದು ಎಷ್ಟು ಒಳ್ಳೆಯ ಉದ್ದೇಶದ್ದೇ ಆಗಿರಲಿ—ಅದು ಸಾರ್ಥಕವಾಗಬೇಕಾದರೆ ಅದು ಸ್ವಬುದ್ಧಿಸಮ್ಮತವಾದದ್ದಾಗಿರಬೇಕು. ಆದದ್ದರಿಂದ ಭಗವಂತನ ಉಪಸಂಹಾರವಾಕ್ಯವು ಆಜ್ಞೆಯ ರೂಪದಲ್ಲಿಲ್ಲ, —ವಿಧಿ ನಿಷ್ಕರ್ಷೆಯ ರೂಪದಲ್ಲಿಲ್ಲ, —ಐಚ್ಛಿಕಾವಕಾಶರೂಪದಲ್ಲಿದೆ; ಅರ್ಜುನನ ಸ್ವಂತ ಇಷ್ಟಕ್ಕೆ ಅನುಜ್ಞೆಯಂತೆ ಇದೆ:—

> ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
> ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥

“ಅರ್ಜುನ, ನಿನ್ನ ಶಂಕೆಸಂದೇಹಗಳಿಗೆಲ್ಲ ಸಮಾಧಾನವಾಗಿ ಹೇಳಬಹುದಾದ ತಿಳಿವಳಿಕೆಯನ್ನೆಲ್ಲ ಹೇಳಿದ್ದೇನೆ. ರಹಸ್ಯಗಳಲ್ಲಿ ರಹಸ್ಯವಾದ ಜ್ಞಾನಸಾಮಗ್ರಿಯನ್ನು ನಿನ್ನ ಮುಂದೆ ಇರಿಸಿದ್ದೇನೆ. ಅದನ್ನು ನೀನೇ ಆಮೂಲಾಗ್ರವಾಗಿ ವಿಮರ್ಶೆ ಮಾಡಿಕೊಂಡು ಯುಕ್ತಾಯುಕ್ತಗಳನ್ನು ಪರ್ಯಾಲೋಚಿಸಿ ನಿನಗೆ ಸರಿಯೆನಿಸಿದಂತೆ ಮಾಡು.”

ಈ ಪ್ರಪಂಚ ರಂಗುರಾಟಣೆಯ ಯಂತ್ರ ಎಂಬುದನ್ನು ತೋರಿಸಿದ್ದಾಯಿತು; ಮನುಷ್ಯನು ಅದರ ಸವಾರಿಯಲ್ಲಿ ಸೇರಿಕೊಂಡ ವಿನೋದಾಪೇಕ್ಷಿ ಎಂಬುದನ್ನು ತೋರಿಸಿದ್ದಾಯಿತು; ಸವಾರರಲ್ಲಿ ಸಾತ್ತ್ವಿಕರಿರುವಂತೆ ಧೂರ್ತರೂ ಘಾತಕರೂ ಇರುತ್ತಾರೆಂಬುದನ್ನು ತೋರಿಸಿದ್ದಾಯಿತು; ಆ ವಿನೋದರಭಸದಲ್ಲಿ ಮೈಮರೆತರೆ ಮತ್ತು ತಲೆಗೇರೀತೆಂಬುದನ್ನು ತೋರಿಸಿದ್ದಾಯಿತು: ರಾಟಣೆಯ ಚಲನರಭಸವೇ ಅದರ ವಿನೋದವೆಂಬುದನ್ನು ತೋರಿಸಿದ್ದಾಯಿತು; ಮತ್ತೇರಿದಾಗ ಯಂತ್ರದ ಮೂಲಕರ್ತ ಬೇರೆ ಇದ್ದಾನೆಂಬುದು ಮರೆತುಹೋಗಿ ತಾನೇ ಸ್ವತ್ತುಗಾರನೆಂಬಂತೆ ಮನಸ್ಸಾದೀತೆಂಬುದನ್ನು ತೋರಿಸಿದ್ದಾಯಿತು; ಹೀಗೆ ಮೂಲಕಾರಣ ವಿಸ್ಮೃತಿಯುಂಟಾದಮೇಲೆ ಸವಾರರಲ್ಲಿ ನಾನು ತಾನು ಎಂದು

ಜಗಳವೆದ್ದು ಅನ್ಯೋನ್ಯಬಾಧೆಯಾದೀತೆಂಬುದನ್ನು ತೋರಿಸಿದ್ದಾಯಿತು; ಇಂಥಾ ಕಲಹಸಂದರ್ಭದಲ್ಲಿ ಮೂಲಕರ್ತನ ಮಹಿಮೆಯನ್ನು ಜ್ಞಾಪಕಕ್ಕೆ ತಂದುಕೊಂಡು ದುಷ್ಟರನ್ನು ದಂಡಿಸಿ ಅವರಿಗೂ ಸತ್ಯಸ್ಮರಣೆಯ ಪಾಠವನ್ನು ಕಲಿಸುವುದು ಕರ್ತವ್ಯವೆಂಬುದನ್ನು ತೋರಿಸಿದ್ದಾಯಿತು; ನಯವಿನಯಪೂರ್ವಕವಾದ ಜಗದ್ಯಂತ್ರೋಪಯೋಗವೇ ಧರ್ಮವೆಂಬುದನ್ನು ತೋರಿಸಿದ್ದಾಯಿತು; ಯಂತ್ರಸ್ವಾಮಿಯ ಸ್ಮರಣೆಯೇ ಯಂತ್ರ ಮೋಹಕ್ಕೆ ಚಿಕಿತ್ಸೆ ಎಂಬುದನ್ನು ತೋರಿಸಿದ್ದಾಯಿತು. ಮಾಯಾಮೂಲ, ಮಾಯಾ ನಿರ್ಮೂಲನ— ಎರಡನ್ನೂ ತೋರಿಸಿದ್ದಾಯಿತು. ಇನ್ನು ಉಪದೇಶಕ್ಕಾಗಿ ಉಳಿದದ್ದಾವುದೂ ಇಲ್ಲ. ಈಗ ಉಳಿದಿರುವುದು ಸ್ವಬುದ್ಧಿವಿಚಾರದ ಕರ್ತವ್ಯ ಮಾತ್ರ.

ಯಂತ್ರಸ್ವಾಮಿಯ ಸ್ಮರಣೆಯನ್ನು ನಮಗೆ ತಂದುಕೊಡಲು ಕಷ್ಟಗಳನ್ನೂ ಪೆಟ್ಟುಗಳನ್ನೂ ತಂದಿಡುತ್ತಾನೆ ಭಗವಂತ. ಆದದ್ದರಿಂದಲೇ ಕಷ್ಟವನ್ನು ಬಹುವಿಧವಾಗಿ ಕೊಂಡಾಡಿರುವುದು ಶಾಸ್ತ್ರಗಳಲ್ಲಿ. ಭಾಗವತದಲ್ಲಿ ಭಗವದ್ವಾಕ್ಯ ಹೀಗಿದೆ:

> ಯಸ್ಯಾಹಮನುಗೃಹ್ಣಾಮಿ ಹರಿಷ್ಯೇ ತದ್ಧನಂ ಶನೈಃ ।
> ತತೋಽಧನಂ ತ್ಯಜಂತ್ಯಸ್ಯ ಸ್ವಜನಾ ದುಃಖದುಃಖಿತಮ್ ॥
> ಸ ಯದಾ ವಿತಥೋದ್ಯೋಗೋ ನಿರ್ವಿಣ್ಣಃ ಸ್ಯಾದ್ಧನೇಹಯಾ ।
> ಮತ್ಪರೈಃ ಕೃತಮೈತ್ರಸ್ಯ ಕರಿಷ್ಯೇ ಮದನುಗ್ರಹಮ್ ॥

–ಭಾಗವತ (೧೦: ೮೮-೮೯)

"ಯಾರಿಗೆ ನಾನು ಅನುಗ್ರಹಮಾಡಲಿದ್ದೇನೋ ಅವನ ಹಣವನ್ನು ಅವನು ತಿಳಿಯದಂತೆ ಕಸಿದುಕೊಂಡುಬಿಡುತ್ತೇನೆ. ಹಾಗೆ ಬಡವನಾದ ಅವನನ್ನು ಅವನ ಜನ ತೊರೆಯುತ್ತಾರೆ. ಅವನು ದುಃಖಿತನಾಗುತ್ತಾನೆ; ಧನಾಪೇಕ್ಷೆಯಿಂದ ಕಂಗೆಡುತ್ತಾನೆ; ತನಗೆ ತಕ್ಕ ಉದ್ಯೋಗವಿಲ್ಲದೆ ಸಂಕಟಕ್ಕೊಳಗಾಗುತ್ತಾನೆ. ಆಗ ಅವನು ನನ್ನನ್ನು (ಭಗವಂತನನ್ನು) ನಂಬಿ ಮೊರೆಹೊಕ್ಕು ಬಂದದ್ದಾದರೆ ಅವನಿಗೆ ಆಗ ಅನುಗ್ರಹ ಮಾಡುವೆ."

ಲೋಕೈಶ್ವರ್ಯ ಸಂಪತ್ತುಗಳಿರುವಾಗ ಮನುಷ್ಯ ಅವುಗಳಿಂದಲೇ ತನ್ನ ಜೀವನವೆಂದು ನಂಬಿಕೊಂಡು ದೇವರನ್ನು ಮರೆಯುತ್ತಾನೆ. ತನಗೆ ಮನೆಮಳಿಗೆ ಹೊಲಗದ್ದೆ ದನಕರುಗಳು ಯಥೇಷ್ಟವಾಗಿರುವಾಗ ಭಗವಂತನಿಂದ ಆಗಬೇಕಾದದ್ದೇನು? ಬೇಕಾದದ್ದನ್ನೆಲ್ಲ ಅವು

ಮಾಡಿಸುತ್ತವೆ. ಅವೆಲ್ಲ ಹೇಗೋ ನಷ್ಟವಾಗಿ ಹೋದಮೇಲೆ ದೇವರ ಜ್ಞಾಪಕ ಬರುತ್ತದೆ. “ಸಂಕಟ ಬಂದಾಗ ವೆಂಕಟರಮಣ.” ಆಗ ದೇವರಿಗೆ ಬೆಲೆ. ಅದೇ ಜೀವೋದ್ಧಾರದ ವೇಳೆ. ಗೀತೆಯಲ್ಲಿ ನೋಡಿದ್ದೇವೆ ಇದನ್ನ:

> ಚತುರ್ವಿಧಾ ಭಜನ್ತೇ ಮಾಂ… ।
> ಆರ್ತೋ ಜಿಜ್ಞಾಸುರರ್ಥಾರ್ಥೀ… ॥ (೭.೧೬)

ಭಕ್ತರಲ್ಲಿ ಮೊದಲನೆಯವನು ಆರ್ತ.

ಭಗವಂತನು ಜಗನ್ಮಾಯಾರೂಪದ ರಂಗುರಾಟೆಯನ್ನು ನಿರ್ಮಿಸಿದ್ದೇಕೆ? ಅದರಲ್ಲಿ ನಮ್ಮನ್ನು ಸಿಕ್ಕಿಸಿ, ನಾವು ಅವನನ್ನು ಮರೆಯುವಂತೆ ಮಾಡಿದ್ದೇಕೆ? ಮರೆತೆವೆಂದು ನಮ್ಮನ್ನು ಗೋಳಾಡಿಸುವುದೇಕೆ? ಗೋಳಾಡಿದರೆ ಹಾಗೆ ಮಾಡಬೇಡಿ, ನನ್ನನ್ನು ಹುಡುಕಿ, ಹುಡುಕುವ ದಾರಿ ಇದು ಎಂದು ಹೇಳುವುದೇಕೆ? ಮರೆಮಾಚಿಕೊಳ್ಳುವುದೇಕೆ, ಕಾಡಿ ಕಾಡಿ ಹುಡುಕಿಸಿಕೊಳ್ಳುವುದೇಕೆ?

ಈ ಪ್ರಶ್ನೆಯೂ ನಮ್ಮ ಮಾಯಾನುಭವದ ಒಂದು ವಿಕಾರವೇ. ನಿದ್ರಿಸುವಾಗ ನಮಗೆ ಕನಸಾಗುತ್ತದೆ. ಆಗ ಏನೇನೋ ಕಲವರಿಸಿಕೊಳ್ಳುತ್ತೇವೆ. ಪಕ್ಕದಲ್ಲಿದ್ದವರಿಗೆ ಆ ಕಲವರಿಕೆಯ ಮಾತು ಕೇಳಿಸಿದ್ದರೆ, ನಾವು ಎಚ್ಚೆತ್ತು ಎದ್ದಮೇಲೆ ಅವರು “ಅದೇನು ನೀನು ಒದರಿಕೊಳ್ಳುತ್ತಿದ್ದದ್ದು? ಯಾರನ್ನು ಕಂಡೆ? ಏನಾಯಿತು?” ಎಂದು ಮೊದಲಾಗಿ ನಮ್ಮನ್ನು ಕೇಳುತ್ತಾರೆ. ನಾವು ಅವರಿಗೆ ಸಮಂಜಸವಾದ ಉತ್ತರವನ್ನು ಕೊಡಲಾದೀತೆ? ಕನಸಿನಲ್ಲಿ ಆಗಿದ್ದ ತಿಳಿವಳಿಕೆ ನಿದ್ದೆ ಕಳೆದ ಮೇಲೆ ಅಸಂಬದ್ಧವಾಗುತ್ತದೆ. ಹಾಗೆಯೇ ಜಗನ್ನಿರ್ಮಾಣದ ಕಾರಣವನ್ನು ಕುರಿತ ಪ್ರಶ್ನೆ.

ಪರಮೇಶ್ವರನು ಸರ್ವಶಕ್ತ, ಸರ್ವಸ್ವತಂತ್ರ. ಶಕ್ತಿಯಿರುವಾಗ ಅದು ಏನನ್ನಾದರೂ ಮಾಡುತ್ತಿರುವುದು ಅದರ ಸ್ವಭಾವ. ಸ್ಪಂದನೆಯೇ (Vibration) ಶಕ್ತಿಯ ಲಕ್ಷಣ. ಆ ಕಾರಣದಿಂದ ಜಗತ್ತಿನ ಉತ್ಪತ್ತಿ. ಭಗವಂತನಿಗೆ ಏನು ಉದ್ದೇಶವಿದೆ? ಏನು ಕಾರಣವಿವೆ?—ಎಂಬುದು ಭಗವತ್ಸ್ವರೂಪವನ್ನು ಗ್ರಹಿಸಿದವರಿಗೆ ಅಸಂಗತವಾದ ಪ್ರಶ್ನೆ; ಗ್ರಹಿಸದೆ ಇರುವವರಿಗೆ ಅದು ಅವರ ಮನಸ್ಸು ಬುದ್ಧಿಗಳ ಮಟ್ಟವನ್ನು ಮೀರಿದ ಪ್ರಶ್ನೆ.

ಭಗವಂತನಿಗೆ ಜಗತ್ತಿನಿಂದ ಬೇಕಾದದ್ದು ಏನು? ಎಲ್ಲವೂ ಅವನಲ್ಲಿದೆ. ಎಲ್ಲಕ್ಕೂ ಮೂಲವೇ ಅವನು. ಅವನು ಯಾವುದಕ್ಕಾಗಿ ಕಾರ್ಯ ಮಾಡಬೇಕು?

> ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
> ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ (೩-೨೨)

ಆದರೂ ಭಗವಂತನು ಜಗತ್ತಿಗಾಗಿ, ಜಗತ್ತಿರಬೇಕೆಂದು ಸ್ವಶಕ್ತಿಪ್ರಯೋಗ ಮಾಡುತ್ತಾನೆ. ತನ್ನಲ್ಲಿರುವ ಅನಂತಶಕ್ತಿಗಳನ್ನು ತನಗೆ ತಾನೇ ಅನುಭವಿಸಿಕೊಂಡು ಸಂತೋಷಿಸುವುದು ಭಗವಂತನ ಲೀಲೆ.

ನನಗೆ ತಿಳಿದ ಸಾಹುಕಾರರು ಒಬ್ಬರಿದ್ದರು. ಅವರು ರಾತ್ರಿ ಮನೆಯ ಜನವೆಲ್ಲ ಮಲಗಿ ನಿದ್ದೆ ಹೋದಮೇಲೆ, ತಮ್ಮ ಕೋಣೆಯೊಳಗೆ ಮಿಣುಕು ಬೆಳಕು ಮಡಗಿಕೊಂಡು, ಕಬ್ಬಿಣದ ಪೆಟ್ಟಿಗೆಯ ಬೀಗ ತೆಗೆದು, ಒಳಗಿನಿಂದ ನೋಟುಕಟ್ಟುಗಳನ್ನೂ ರೂಪಾಯಿಗಳನ್ನೂ ಒಡವೆಗಳನ್ನೂ ಒಂದೊಂದಾಗಿ ಸದ್ದಿಲ್ಲದೆ ಹೊರಕ್ಕೆ ತೆಗೆದು, ಕೈಸವರಿ, ಎಣಿಸೆಣಿಸಿ, ತಾವು ಅಷ್ಟಕ್ಕೆಲ್ಲ ಒಡಯರೆಂದು ಹಿಗ್ಗಿ, ಬಳಿಕ ಎಲ್ಲವನ್ನೂ ಕ್ರಮವಾಗಿ ಮೆಲ್ಲಗೆ ಪೆಟ್ಟಿಗೆಯೊಳಕ್ಕೆ ಸೇರಿಸಿ ಬೀಗ ಹಾಕಿ, ಬೀಗದ ಕೈಯನ್ನು ಜನಿವಾರಕ್ಕೆ ಗಂಟುಹಾಕಿಕೊಳ್ಳುತ್ತಿದ್ದರು. ಅವರ ಹಣವನ್ನು ಅವರೇ ನೋಡಿಕೊಳ್ಳುವುದರಲ್ಲಿ ಅವರಿಗೆ ಒಂದು ಆನಂದ.

ಭಗವಂತ ಹಾಗೆ ಎಂದು ತೋರುತ್ತದೆ. ಅವನಿಗೆ ಬೇಕಾದದ್ದು ಯಾವುದೂ ಇಲ್ಲ. ಹೊಸದಾಗಿ ಸಂಪಾದಿಸಿಕೊಳ್ಳಬೇಕಾದದ್ದೂ ಯಾವುದೂ ಇಲ್ಲ. ತನ್ನಲ್ಲಿರುವ ಅನಂತ ಶಕ್ತಿಗಳನ್ನು ತಾನೇ ನೋಡಿ ಆನಂದಪಡಬೇಕೆನಿಸಿ ಜಗತ್ತನ್ನು ಸೃಷ್ಟಿಮಾಡಿರಬೇಕು. ಗೌಡಪಾದಾಚಾರ್ಯರು ಹೇಳುತ್ತಾರೆ:

> ದೇವಸ್ಯೈಷ ಸ್ವಭಾವೋಽಯಂ ಆಪ್ತ ಕಾಮಸ್ಯ ಕಾ ಸ್ಪೃಹಾ ॥

ನಿಜೈಶ್ವರ್ಯಾನುಭವವೇ ಆತ್ಮಕ್ರೀಡೆ, ಆತ್ಮರತಿ. ಇದನ್ನೇ ವ್ಯಾಸರು

> ಲೋಕವತ್ತು ಲೀಲಾಕೈವಲ್ಯಮ್ ॥ (೨ : ೧-೩೩)

ಎಂಬ ಬ್ರಹ್ಮಸೂತ್ರದಲ್ಲಿ ಸೂಚಿಸಿದ್ದಾರೆ.

ಲೋಕದಲ್ಲಿ ಜನರು ಹೇಗೆ ಕೇವಲ ವಿನೋದಕ್ಕಾಗಿ ಅನೇಕ ಕೆಲಸಗಳನ್ನು ಮಾಡುತ್ತಾರೋ ಹಾಗೆಯೇ ಭಗವಂತನು ಕೇವಲ ಆನಂದಪಡುವುದಕ್ಕಾಗಿ ಜಗತ್ತನ್ನು ಸೃಷ್ಟಿಸಿದ್ದಾನೆ. ಆನಂದಪಡುವ ರೀತಿಗಳು ಲೆಕ್ಕವಿಲ್ಲದಷ್ಟು. ಅದಕ್ಕೆ ಕ್ರಮ ನಿಯಮವೇನು?

ಈ ಸೂತ್ರದ ಮೇಲೆ ಭಗವದ್ರಾಮಾನುಜಭಾಷ್ಯ ಹೀಗಿದೆ:

> ಯಥಾ ಲೋಕೇ...ಮಹಾರಾಜಸ್ಯ ಕೇವಲಲೀಲೈಕಪ್ರಯೋಜನಾಃ ಕನ್ದುಕಾದ್ಯಾರಂಭಾ ದೃಶ್ಯನ್ತೇ । ತಥೈವ ಪರಸ್ಯಾಪಿ ಬ್ರಹ್ಮಣಃ ಸ್ವಸಂಕಲ್ಪಮಾತ್ರಾವಕ್ಲೃಪ್ತಜಗಜ್ಜನ್ಮಸ್ಥಿತಿಧ್ವಂಸಾದೇರ್ಲೀಲೈವ ಪ್ರಯೋಜನಮಿತಿ ನಿರವದ್ಯಮ್ ॥

ತೊಟ್ಟಿಲಲ್ಲಿ ಮಲಗಿರುವ ಮಗು ಇತ್ತತ್ತ ಕಣ್ಣು ತಿರುಗಿಸುತ್ತದೆ, ಕೈಕಾಲು ಆಡಿಸುತ್ತದೆ, ನಗುತ್ತದೆ. ಅದಕ್ಕೇನು ಉದ್ದೇಶವಿದ್ದೀತು? ನಮಗೆ ಮುಖೋಲ್ಲಾಸ ಮಾಡಿಸಬೇಕೆಂದೆ? ನಮ್ಮಿಂದ ಸರ್ಟಿಫಿಕೇಟ್ ಪಡೆಯಬೇಕೆಂದೆ? ಅಂಥಾದ್ದೊಂದೂ ಅಲ್ಲ. ಆ ಎಳೆತನದಲ್ಲಿ ಅಷ್ಟೊಂದು ಸ್ವಾರ್ಥಚಿಂತೆ ಅದಕ್ಕೆ ಇರಲಾರದು. ಅದರ ಆಟಪಾಟಗಳು ಆರೋಗ್ಯದ ಪ್ರಕಾಶ, ಅದರ ಅಂತಸ್ಸುಖದ ವಿಕಾಸ, ನೈಜಾನಂದರಸದ ಪ್ರವಾಹ.

ಇನ್ನೊಂದು ಮಾತು: ಈಶ್ವರನನ್ನು “ನೀನು ಜಗತ್ತನ್ನೇಕೆ ಮಾಡಿದೆ?” —ಎಂದು ಕೇಳುವವರು ಯಾರು? ಸುಖಾಸನದಲ್ಲಿ ಕುಳಿತಿರುವ ಯಜಮಾನರನ್ನು “ನೀವು ಕಾಲು ಹೀಗೇಕೆ ಇಳಿಯಬಿಟ್ಟಿದ್ದೀರಿ?” “ಪದ್ಮಾಸನ ಹಾಕಿಕೊಂಡಿರುವುದೇಕೆ?” “ಕೈಯನ್ನು ಹೀಗೇಕೆ ತಿರುಗಿಸಿದ್ದೀರಿ?” —ಈ ಪ್ರಶ್ನೆಗಳನ್ನು ವಿಧೇಯರಾದವರು ಕೇಳುವುದಿಲ್ಲ. ಅವಿಧೇಯರಿಗೆ ಉತ್ತರ ಹೇಳಬೇಕಾದದ್ದಿಲ್ಲ.

ಈಶ್ವರನನ್ನು ಪ್ರಶ್ನೆ ಮಾಡುವವರು ಯಾರು? ದಾಸರೆ? ಆಶ್ರಿತರೆ? ಶರಣಾಗತರೆ? ಅದಕ್ಕಿಂತ ಮುಖ್ಯವಾದ ಪ್ರಶ್ನೆ ಬೇರೆಯಿದೆ. ಈಶ್ವರನ ಉದ್ದೇಶವೇನಾಗಿದ್ದರೆ ಏನು? ಆ ಪ್ರಶ್ನೆ ಇಂಗ್ಲಿಷಿನಲ್ಲಿ ಹೇಳುವಂತೆ Idle Curiosity —ಕಾಲಕ್ಷೇಪ ನಿಮಿತ್ತ: ಹೊತ್ತು ಕಳೆಯುವ ಪ್ರಶ್ನೆ. ಈಶ್ವರನ ಉದ್ದೇಶವೇನಾಗಿದ್ದರೂ ನಾವು ಅದನ್ನು ಬದಲಾಯಿಸುವಂತಿಲ್ಲ; ಅದರಿಂದ ತಪ್ಪಿಸಿಕೊಳ್ಳುವಂತೆಯೂ ಇಲ್ಲ. ಈಶ್ವರನನ್ನು ತಿದ್ದುವುದಕ್ಕೇ ಆಗಲಿ ಅಥವಾ ಅವನ ಮೇಲೆ

“No-confidence” —ಅವಿಶ್ವಾಸನಿರ್ಣಯ ಮಾಡುವುದಕ್ಕೇ ಆಗಲಿ ನಮಗೆ ಅಧಿಕಾರವಿದ್ದರೆ ಆಗ ನಮ್ಮ ಪ್ರಶ್ನೆ ಸಂಗತವಾದೀತು. ಹಾಗಿಲ್ಲದಾಗ ನಮ್ಮ ಪ್ರಶ್ನೆಯೇ ಅಸಂಗತ. ಅಧ್ಯಾತ್ಮಪ್ರಪಂಚದಲ್ಲಿ “ಡೆಮಾಕ್ರಸಿ” ಇಲ್ಲ! ಈಶ್ವರನ ಕೃತಿಯಾದ ಮಾಯೆಯಿಂದಲೇ ನಮಗೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲದಿರುವಾಗ, ಈಶ್ವರನಿಂದ ಹೇಗೆತಾನೆ ತಪ್ಪಿಸಿಕೊಂಡೇವು?

ಹಾಗಾದರೆ ನಮಗಿರುವ ಕರ್ತವ್ಯವೇನು? ನಮಗೊದಗಿರುವ ಪರಿಸ್ಥಿತಿಯನ್ನು ಅಂಗೀಕರಿಸಿ ತೇರ್ಗಡೆಹೊಂದುವುದೊಂದೇ ನಮಗಿರುವ ಉಪಾಯ. ಇಂಥಾ ಪ್ರಶ್ನೆಗಳಿಗೆ ಕಟ್ಟಕಡೆಯ ಉತ್ತರವನ್ನು ವಿದ್ಯಾರಣ್ಯ ಸ್ವಾಮಿಗಳು ಹೀಗೆ ಹೇಳಿದ್ದಾರೆ:

> ಕುತೋ ಜಾತೋಽಯಮಿತಿ ತೇ ದ್ವಿಜ ಮಾಽಸ್ತು ವಿಚಾರಣಾ ।
> ಇಮಾಂ ಕಥಮಹಂ ಹನ್ಮೀತ್ಯೇಷಾ ತೇಽಸ್ತು ವಿಚಾರಣಾ ॥

“ಜಗತ್ತು ಏಕಾಯಿತು? ಏನಿದರ ಉದ್ದೇಶ?—ಎಂಬುದನ್ನೆಲ್ಲ ನಾವು ವಿಚಾರ ಮಾಡಬೇಕಾದದ್ದು. ಕಾರಣ ಯಾವುದೇ ಆಗಿರಲಿ; ನಮಗೆ ಈಗ ಸಂಗತವಾಗಿರುವ ಸ್ಥಿತಿಯಿಂದ ಬಿಡುಗಡೆ ಹೇಗಾದೀತು?—ಎಂಬುದನ್ನು ನಾವು ವಿಚಾರಮಾಡಬೇಕಾದದ್ದು.” ಬಲೆಯಲ್ಲಿ ಸಿಕ್ಕಿಕೊಂಡಿರುವ ಪಕ್ಷಿಯು “ಈ ಬಲೆ ರೇಷ್ಮೆಯಿಂದ ಮಾಡಿದ್ದೆ, ಹತ್ತಿಯದೆ, ನಾರಿನದೆ, ಅಥವಾ ಟೆರಿಲೀನಿನದಿದ್ದೀತೊ? ಇದು ಬೆಂಗಳೂರಿನಲ್ಲಾದದ್ದೊ? ಬೊಂಬಾಯಿನದೊ? ಮ್ಯಾಂಚೆಸ್ಟರಿನದೊ?” —ಎಂದು ಯೋಚನೆ ಮಾಡಬೇಕೋ, ಅಥವಾ ಈ ಬಲೆಯಿಂದ ನಾನು ಹೇಗೆ ಪಾರಾದೇನೆಂದು ಯೋಚಿಸಬೇಕೋ?

ಅರ್ಜುನ ತನ್ನ ಗುರು ಎಂಥವನೆಂಬುದನ್ನು ಸಾಕ್ಷಾತ್ತಾಗಿ ತಿಳಿದಿದ್ದ. ಆತ “ಸರ್ವಸ್ಯಧಾತಾರಮ್ ಅಚಿಂತ್ಯರೂಪಮ್” ಎಂಬುದನ್ನು ಕಣ್ಣಾರ ಕಂಡಿದ್ದ; ಆ ಗುರು “ಶಾಶ್ವತ ಧರ್ಮಗೋಪ್ತಾ” ಎಂಬುದನ್ನು ಮನಸಾರ ಗ್ರಹಿಸಿದ್ದ. ಆದದ್ದರಿಂದ ಅರ್ಜುನನು ಯಾವ ಸೃಷ್ಟಿಕಾರಣವಿಷಯಕ ಪ್ರಶ್ನೆಯನ್ನೂ ಕೇಳಲಿಲ್ಲ. “ಸರ್ವಸ್ಯ ಧಾತಾರಮ್” “ಅಚಿಂತ್ಯ ರೂಪಮ್” “ಶಾಶ್ವತಧರ್ಮಗೋಪ್ತಾ” —ಈ ಮೂರು ಮಾತುಗಳನ್ನು ನಾವು ಮನಸ್ಸಿನಲ್ಲಿ ಧರಿಸಿದ್ದರೆ ನಮ್ಮ ಅನೇಕ ಶಂಕೆಗಳು ಪರಿಹಾರವಾಗುತ್ತವೆ.

ಕೃಷ್ಣಭಗವಂತನು ಮನುಷ್ಯಹೃದಯದ ಸ್ವಭಾವವನ್ನು ತಳಮುಟ್ಟ ಅರಿತಿದ್ದ ಪ್ರಭು. ಇದು ಕೃಷ್ಣಾವತಾರದ ವಿಶೇಷ ಮಹಿಮೆ. ಯಾವಯಾವ ಶಂಕೆಗಳು, ಎಂಥೆಂಥ ಸಂಕಟಗಳು, ಯಾವ ಪ್ರಶ್ನೆಗಳು, ಎಂಥ ಕೋರಿಕೆಗಳು ಮನುಷ್ಯಹೃದಯದಲ್ಲಿ ಸೇರಿಕೊಂಡಿರುತ್ತವೆಂದು ಅರಿತಿದ್ದ ಆತ. ಆದದ್ದರಿಂದಲೇ ಕೃಷ್ಣಾವತಾರವನ್ನು ಪರಿಪೂರ್ಣಾವತಾರವೆನ್ನುವುದು. ಅರ್ಜುನನ ನಡವಳಿಕೆಯಲ್ಲಿ ನಮಗೆ ತೋರುವುದೇನು? ಅವನು ಸಂದೇಹಿ—ಸತ್ಸಂದೇಹಿ, ದುಸ್ಸಂದೇಹಿಯಲ್ಲ, ಆದರೂ ಸಂದೇಹಿ—ಎಂದು. ನಿಶ್ಚಯ ಜ್ಞಾನವಾದರೋ ಸುಲಭವಾಗಿ ಬರತಕ್ಕದ್ದಲ್ಲ. ಅರ್ಜುನನ ಮನಸ್ಸಿನಲ್ಲಿ ಸಂಶಯಶೇಷ ಇನ್ನೂ ಏನಾದರೂ ಉಳಿದುಕೊಂಡಿದ್ದರೆ ಅದೂ ಪರಿಹಾರವಾಗಲಿ ಎಂದು ಈಗ ಸಮಾಪನವಾಕ್ಯವನ್ನು ಹೇಳುತ್ತಾನೆ ಭಗವಂತ. ಹಿಂದೆ ಎಷ್ಟೋ ಸಲ ಮಾಡಿರುವ ಉಪದೇಶವೇ ಇದು:

> ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
> ಮಾಮೇವೈಷ್ಯಸಿ ಸತ್ಯಂ ಪ್ರತಿಜಾನೇ ಪ್ರಿಯೋಽಸಿ ಮೇ ॥
> ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
> ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

“ನನ್ನಲ್ಲಿ ಮನಸ್ಸುಳ್ಳವನಾಗು; ನನ್ನ ಭಕ್ತನಾಗು; ನನ್ನನ್ನು ಪೂಜಿಸುವವನಾಗು; ನನಗೆ ನಮಸ್ಕರಿಸು. ಹಾಗೆ ಮಾಡಿದರೆ ನನ್ನನ್ನೇ ಸೇರುವೆ. ನೀನು ನನಗೆ ಪ್ರಿಯನು, ಆದದ್ದರಿಂದ ನಾನು ಪ್ರತಿಜ್ಞೆಮಾಡಿ ಹೇಳುತ್ತೇನೆ. ಅದು ಸತ್ಯ.”

“ಮಿಕ್ಕೆಲ್ಲ ಧರ್ಮಗಳನ್ನೂ ನೀನು ತ್ಯಜಿಸಿ ನನ್ನನ್ನೊಬ್ಬನನ್ನೇ ಗತಿಯೆಂದು ಮೊರೆ ಹೊಗು. ನಾನು ನಿನ್ನನ್ನು ಎಲ್ಲ ದುರಿತ ದುಃಖಗಳಿಂದಲೂ ಬಿಡುಗಡೆಮಾಡಿಸುತ್ತೇನೆ. ಶೋಕಿಸಬೇಡ.”

ಈ ಭರವಸೆಯ ವಾಕ್ಕಿನಲ್ಲಿ ನಾನು (ಅಹಮ್), ನನ್ನನ್ನು (ಮಾಮ್) ಎಂಬ ಮಾತುಗಳು ತುಂಬಿವೆ. ಇಂಥಾ ಅಹಂಪ್ರಸ್ತಾವಗಳು ಹಿಂದೆಯೂ ಹತ್ತಾರು ಕಡೆ ಬಂದಿವೆ. ಆ ಪ್ರಸ್ತಾವಗಳಲ್ಲಿ ಉದ್ದಿಷ್ಟರಾದವರು ಯಾರು? ಕೃಷ್ಣನೆಂಬ ಒಬ್ಬಾನೊಬ್ಬ ಮನುಷ್ಯನು ಮಾತ್ರವೆ? ಅಥವಾ ಆ ಪ್ರಸಿದ್ಧವಾದ ಹೆಸರನ್ನು ಧರಿಸಿದ್ದ ಒಂದಾನೊಂದು ದೈವಾವತಾರವೆ? ಅಥವಾ ಆ ಕೃಷ್ಣವ್ಯಕ್ತಿ ಯಾವ ಒಂದು ಮಹಾಚೈತನ್ಯದ ಪ್ರತೀಕವೋ ಆ ಮೂಲವಸ್ತುವೆ? ಗೀತೆಯಲ್ಲೆಲ್ಲೆಲ್ಲಿ ಭಗವದ್ವಾಕ್ಯದಲ್ಲಿ ಅಹಮ್, ಮಮ, ಮಾಮ್, ಮತ್, ಮೇ, ಮಯಿ ಇಂಥಾ ಉತ್ತಮಪುರುಷ

ಸರ್ವನಾಮಶಬ್ದಗಳು ಬರುತ್ತವೆಯೋ ಅಲ್ಲೆಲ್ಲ ಪ್ರಸಕ್ತವಾದದ್ದು ಮಾನುಷವಲ್ಲ, ಪರಮೇಶ್ವರವೈಭವ ಎಂದು ತಿಳಿಯತಕ್ಕದ್ದು.

ಕೃಷ್ಣನೆನಲ್ ಗೀತಾರ್ಥದಿ ।
ವಿಷ್ಣುಪರಬ್ರಹ್ಮಸತ್ತ್ವಮದು ನರನಲ್ಲಂ ॥
ಕೃಷ್ಣನೆನೆ ವಿಶ್ವಧಾತಂ ।
ಕೃಷ್ಣಪದಂ ವಿಶ್ವಹೃದಯಮುರಲೀನಾದಂ ॥

ಭಕ್ತಿಯೆಂದರೆ ಸ್ವಾಹಂಕಾರ ವಿಸರ್ಜನೆ

“ಮನ್ಮನಾ ಭವ ಮದ್ಭಕ್ತಃ” — “ನನ್ನ ಭಕ್ತನಾಗು.” ಗೀತಾಚಾರ್ಯನು ಭಕ್ತಿಯನ್ನು ಅಧ್ಯಾಯ ಅಧ್ಯಾಯದಲ್ಲಿಯೂ ಶ್ಲೋಕಶ್ಲೋಕದಲ್ಲಿಯೂ ಉಪದೇಶಿಸಿದ್ದಾನೆ. ಭಕ್ತಿ ಎಂದರೆ ಏನು? ಸಾಮಾನ್ಯವಾಗಿ ನಾವೆಲ್ಲರೂ ಭಕ್ತರೆಂದೇ ನಮ್ಮಷ್ಟಕ್ಕೆ ನಾವು ಭಾವಿಸಿಕೊಂಡಿರುತ್ತೇವೆ. ಗುಡಿಗೆ ಹೋಗುತ್ತೇವೆ; ನಾಮಸ್ಮರಣೆ ಮಾಡುತ್ತೇವೆ; ಏನೂ ತೋಚದೆಹೋದಾಗ “ದೇವರೇ ಗತಿ” ಎನ್ನುತ್ತೇವೆ; ಹಣ ವೆಚ್ಚಮಾಡಿ ಪೂಜೆಹಾಕಿಸುತ್ತೇವೆ. ಇವೆಲ್ಲ ಭಕ್ತಿಯ ಚಿಹ್ನೆಗಳೇ. ಆದರೆ ಅದು ನಿರ್ಮಲಭಕ್ತಿಯೋ? ಸಂಪೂರ್ಣ ಭಕ್ತಿಯೋ? ಭಕ್ತಿಯೇ ನಮಗೆ ಪರಮತಾರಕವಾದದ್ದು. ಆದಕಾರಣ ಅದರ ಸ್ವರೂಪವನ್ನು ವಿಚಾರಮಾಡಿ ತಿಳಿದುಕೊಳ್ಳಬೇಕು.

ಭಕ್ತಿಯೆಂದರೆ ಪ್ರೇಮ—ಭಗವಂತನ ವಿಷಯದಲ್ಲಿ ನಿರ್ಮಲವೂ ಪರಿಪೂರ್ಣವೂ ಆದ ಪ್ರೇಮ.

> ಸಾತ್ವಸ್ಮಿನ್ ಪರಮಪ್ರೇಮರೂಪಾ ॥ —ನಾರದ

“ಪರಮ” ಎಂದರೆ ಪ್ರೇಮವು ತಾನೊಂದೇ ತುಂಬಿಕೊಂಡು ಬೇರಾವುದರ ಮಿಶ್ರಣವೂ ಇಲ್ಲದಿರುವುದು. ನಮ್ಮ ಭಕ್ತಿಯ ಒಳಗಡೆ ಕೊಂಚ ಅಹಂತೆ ಯಾವಾಗಲೂ ಅವಿತುಕೊಂಡಿರುತ್ತದೆ. “ದೇವರನ್ನೇನೋ ನಂಬಬೇಕು, ಆದರೂ ನಮ್ಮ ಹುಷಾರಿನಲ್ಲಿ ನಾವಿರಬೇಕು” —ಇದು ನಮ್ಮ ಸಾಮಾನ್ಯ ಮನೋವೃತ್ತಿ. ದೇವರು ನಮಗೆ ಬುದ್ಧಿ ಕೊಟ್ಟಿಲ್ಲವೆ? ಅದು ಕೆಲಸಮಾಡಬೇಡವೆ? ನಮಗೇನೂ ಜವಾಬ್ದಾರಿಯಿಲ್ಲವೆ? ದೇವರ ಮೇಲೆ ಹೆಚ್ಚು ಭಾರ ಹೊರಿಸುವುದು ಸರಿಯೆ?—ಹೀಗೆಲ್ಲ ತರ್ಕಮಾಡುತ್ತೇವೆ. ಸ್ವವಿವೇಕವು ನಮಗೆ ಕರ್ತವ್ಯ ಹೌದು; ಸ್ವಪ್ರಯತ್ನವು ಕರ್ತವ್ಯ ಹೌದು; ಸ್ವಂತ ಜಾಗರೂಕತೆ ಕರ್ತವ್ಯ ಹೌದು. ಈ ಎಲ್ಲ ಕರ್ತವ್ಯಗಳಿಗಿಂತ ಮೇಲಣ ಕರ್ತವ್ಯ ದೈವೇಚ್ಛಾಂಗೀಕಾರ. ನಮ್ಮೆಲ್ಲ ವಿವೇಕ ಸಾಹಸ ಉಪಾಯಗಳೂ ಫಲಕ್ಕೆ ಬರುವುದು ಭಗವದನುಗ್ರಹದಿಂದ. ಆ ನಮ್ಮ ಪ್ರಯತ್ನಗಳಿಗೆ ಫಲ ಸಲ್ಲುತ್ತದೋ ಇಲ್ಲವೋ ನಿಷ್ಕರ್ಷೆಮಾಡುವುದು ದೈವ. “ದೈವಂ ಚೈವಾತ್ರ ಪಂಚಮಮ್.” ಇದು ಫಲವಿಚಾರದಲ್ಲಿ. ಆ ದೈವನಿಷ್ಕರ್ಷೆ ನಮಗೆ ಪ್ರತಿಕೂಲವೆಂದು ತೋರಿದಾಗಲೂ ಅದನ್ನು ಮನೋವಿಕಾರವಿಲ್ಲದೆ ಸ್ವೀಕರಿಸುವುದು ದೈವಭಕ್ತಿ. ನನಗೇನಾಯಿತು? ನನ್ನ

ಪ್ರಯತ್ನವೇನಾಯಿತು?—ಎಂದು ಕೇಳದೆ ತಾನು ಎಂಬುದನ್ನೇ ಮರೆತಿರುವ ದೈವವಿಶ್ವಾಸವೇ ನಿಜವಾದ, ಪೂರ್ಣವಾದ ಭಕ್ತಿ.

ಭಕ್ತಿಯೂ ಅಹಂಕಾರವೂ ಪರಸ್ಪರ ಪ್ರತಿಕಕ್ಷಿಗಳು. ಒಂದಿರುವ ಕಡೆ ಇನ್ನೊಂದಿರಲಾರದು. ಭಕ್ತಿಯ ಮುಂದೆ ಅಹಂಕೃತಿ ನಿಲ್ಲದು. ಭಕ್ತನ ಅಹಂಕೃತಿ ಭಕ್ತಿಗೆ ಪರಿಚಾರಕ ಮಾತ್ರವಾದದ್ದು. ಹಾಗೆಯೇ ಅಹಂಭಾವವಿರುವ ಕಡೆಗೆ ಭಕ್ತಿ ಬರಲಾರದು. ಅಹಂಕಾರಿಯಾದವನು ಅಷ್ಟಿಷ್ಟು ಭಕ್ತಿಯನ್ನು ತೋರಿದರೆ ಆ ಭಕ್ತಿ ಅವನ ಅಹಂತೆಗೆ ಪರಿಚಾರಕ ಮಾತ್ರವಾದದ್ದು. ಯಾರ ಭಕ್ತಿಯು ಪರಿಶುದ್ಧವೂ ಪರಿಪೂರ್ಣವೂ ಆಗಿರುತ್ತದೆಯೋ ಅವನ ಮನಸ್ಸಿನಲ್ಲೂ ಮಾತಿನಲ್ಲೂ ನಡವಳಿಕೆಯಲ್ಲೂ ಅಹಂಭಾವವು ಎಳ್ಳಷ್ಟೂ ಸುಳಿಯದು. “ಎಲ್ಲವನ್ನೂ ಮಾಡಿಸುವವನು ಭಗವಂತ. ಭಗವದಾಜ್ಞೆ ಇಲ್ಲದೆ ಯಾವುದೂ ಆಗದು. ಭಗವಂತನ ಆಜ್ಞೆಯ ಮುಂದೆ ನನ್ನ ಇಷ್ಟಾನಿಷ್ಟಗಳು ಅಧಿಕಪ್ರಸಂಗಿತನ. ನನಗೆ ಇಷ್ಟವಾದದ್ದು ಬರಲಿ, ಅನಿಷ್ಟವಾದದ್ದೇ ಬರಲಿ, ಯಾವುದು ಎಂಥಾದ್ದು ಬಂದರೂ ಅದು ಈಶ್ವರಪ್ರಸಾದ. ಅದನ್ನು ನಾನು ಸಮಾಧಾನದಿಂದ ಸ್ವೀಕರಿಸಬೇಕಾದದ್ದು” —ಹೀಗೆಂದುಕೊಳ್ಳುತ್ತಾನೆ ಭಕ್ತ. ತಂದೆ ಪೆಪ್ಪರ್ಮೆಂಟು ಕೊಟ್ಟಾಗ ಹೇಗೆ ತಂದೆಯೋ ಏಟು ಕೊಟ್ಟಾಗಲೂ ಹಾಗೆ ತಂದೆ. ವೈದ್ಯನು ಜೇನುತುಪ್ಪ ಕೊಟ್ಟಾಗ ಹೇಗೋ ಶುಂಠಿ ಮೆಣಸು ಕೊಟ್ಟಾಗಲೂ ಹಾಗೆಯೇ ಹಿತಕಾರಿ. ಇಂಥಾದ್ದು ಭಕ್ತನ ವಿಶ್ವಾಸ. ಅದರಲ್ಲಿ “ಅಹಂ” ಎಂದು ಮಾತು ಅಳಿಸಿಹೋಗಿರುತ್ತದೆ. ಭಕ್ತಿಯೆಂದರೆ ಅಹಂಭಾವವಿನಾಶ. ನಾನು, ನನ್ನದು, ನನಗೇನು ಗತಿ? ನನ್ನನ್ನು ನೋಡುವವರು ಯಾರು?—ಇಂಥಾ ಚಿಂತೆಗಳು ಇಮರಿಹೋಗಿ, ಮರಳಿ ಹುಟ್ಟದೆ, ಮನಸ್ಸೆಲ್ಲ ಭಗವಂತನ್ನೊಬ್ಬನನ್ನೇ ಪೂರ್ತಿಯಾಗಿ ನಂಬಿಕೊಂಡಿದ್ದರೆ ಅದು ಭಕ್ತಿ—ನಿರಹಂಕಾರಭಕ್ತಿ.

ಇಲ್ಲಿ ಒಂದು ಪ್ರಶ್ನೆ: “ಸರ್ವಧರ್ಮಾನ್ ಪರಿತ್ಯಜ್ಯ” —ಎಲ್ಲ ಧರ್ಮಗಳನ್ನೂ ತ್ಯಜಿಸಿ, “ಮಾಮ್ ಏಕಂ ಶರಣಂ ವ್ರಜ” —ಭಗವಂತನನ್ನೊಬ್ಬನನ್ನೇ ಶರಣುಹೊಂದು. ಇದು ಉಪದೇಶ. ಒಳ್ಳೆಯದು. “ಎಲ್ಲ ಧರ್ಮಗಳನ್ನೂ ಬಿಟ್ಟು ಶರಣಾಗು” —ಎಂಬುದರಲ್ಲಿ ಏನು ಅಭಿಪ್ರಾಯ? ಶರಣಾಗುವುದು ಒಂದು ಧರ್ಮವಲ್ಲವೋ? ಶರಣಾಗತಿ ಅಧರ್ಮವೋ? ಮೇಲಣ ಶ್ಲೋಕದಲ್ಲಿ “ಸರ್ವಧರ್ಮಾನ್” ಎಂಬುದಕ್ಕೆ ಪ್ರತಿಯಾಗಿ “ಅನ್ಯಧರ್ಮಾನ್” ಎಂದು ಇದ್ದಿದ್ದರೆ ಈ ಪ್ರಶ್ನೆಗೆ ಅವಕಾಶವಿರುತ್ತಿರಲಿಲ್ಲ.

ಶ್ಲೋಕವನ್ನು ಇರುವಂತೆ ಇರಿಸಿಕೊಂಡು, "ಸರ್ವಧರ್ಮಾನ್ ಪರಿತ್ಯಜ್ಯ" ಎಂಬ ಉಪದೇಶವನ್ನೂ "ಶರಣಂ ವ್ರಜ" ಎಂಬ ಉಪದೇಶವನ್ನೂ ಸಮಂಜಸವಾಗಿ ಹೊಂದಿಸಬೇಕಾದರೆ "ಸರ್ವಧರ್ಮಾನ್" ಎಂಬುದಕ್ಕೆ "ಲೋಕದಲ್ಲಿ ಬಳಕೆಯಾಗಿರುವ ವಾದ ವಿವಾದಾಸ್ಪದಗಳಾದ ಧರ್ಮಗಳನ್ನು ಬದಿಗಿರಿಸಿ" ಎಂದೂ, "ಶರಣಂ ವ್ರಜ" ಎಂದರೆ "ಲೋಕಧರ್ಮಗಳನ್ನು ಮೀರಿದ ಒಂದು ವಿಶೇಷ ಸನ್ಮಾರ್ಗವನ್ನು, ಒಂದು ಅಧಿಧರ್ಮವನ್ನು ಅವಲಂಬಿಸು" ಎಂದೂ ಭಾವಿಸಬೇಕಾಗುತ್ತದೆ.

ಜಗಮಿರ್ಪನ್ನಂ ಧರ್ಮಂ ।
ಜಗ ನಿನಗಿರದಂದು ಸರ್ವಮಾತ್ಮೈಕಮಯಂ ॥

ಅರ್ಜುನನು ಸಾಮಾನ್ಯ ಮನುಷ್ಯರಂತಲ್ಲ—ಎರಡು ಲಕ್ಷಣಗಳಲ್ಲಿ: (೧) ಸಂದೇಹಿತೆಯಲ್ಲಿ, (೨) ವಿರಕ್ತತೆಯಲ್ಲಿ. ಮೊದಲನೆಯದಾಗಿ, ಅವನು ವಿಶೇಷಸಂದೇಹಿ. ಪ್ರತಿಯೊಂದು ಉಪದೇಶ ಪ್ರಕರಣದಲ್ಲಿಯೂ ಅವನು ಪದೇಪದೇ ಪ್ರಶ್ನೆ ಹಾಕುತ್ತಿದ್ದ. ಭಗವಂತನು ಕೊಟ್ಟ ಪ್ರತ್ಯುತ್ತರವನ್ನು ಕೇಳುತ್ತಿದ್ದಾಗ ಅವನಿಗೆ ನಂಬಿಕೆ ಬರುತ್ತಿತ್ತು. ಹಾಗೆ ಬಂದ ನಂಬಿಕೆ ಮತ್ತೊಂದು ವಿಚಾರ ಬಂದಾಗ ಹಾರಿಹೋಗುತ್ತಿತ್ತು. ಮತ್ತೆ ಸಂಶಯ, ಮತ್ತೆ ಪ್ರಶ್ನೆ: ಹೀಗೆ ಡೋಲಾಯಿತವಾಗಿತ್ತು ಅವನ ಮನಸ್ಸು. ಹಳೆಯ ಶಂಕೆ ಹೋದರೆ ಹೊಸ ಶಂಕೆ. ಇಂಥವನಿಗೆ ಬರಿಯ ಶಾಸ್ತ್ರೋಕ್ತಿಯಿಂದಲೂ ತರ್ಕದಿಂದಲೂ ವಾದಯುಕ್ತಿಯಿಂದಲೂ ಪ್ರಯೋಜನವಾಗದು. ಅವನಿಗೆ ಮೊದಲು ಆಗಬೇಕಾಗಿದ್ದ ಸಹಾಯ ಶ್ರದ್ಧಾಬಲ. ಶಾಸ್ತ್ರತರ್ಕಗಳಲ್ಲಿ ಅವನಿಗೆ ಇಲ್ಲದಿದ್ದ ವಿಶ್ವಾಸವು ಕೃಷ್ಣಪ್ರೀತಿಯಲ್ಲಿತ್ತು. ಇದನ್ನು ಶ್ರೀಕೃಷ್ಣ ಎಷ್ಟೋ ಸಾರಿ ಕಂಡಿದ್ದ. ತನ್ನ ಸ್ನೇಹವಾತ್ಸಲ್ಯಗಳ ಪ್ರಭಾವದಿಂದ ಅರ್ಜುನನಲ್ಲಿ ಉತ್ಪನ್ನವಾಗಿದ್ದ ವಿಶ್ವಾಸವನ್ನು ಭಗವಚ್ಛ್ರದ್ಧೆಯಾಗಿ ಪರಿವರ್ತಿಸಬೇಕೆಂದು ಸ್ವಾಮಿಯ ಆಶಯ. ಆದದ್ದರಿಂದ ಸ್ವಾಮಿ ಹೇಳಿದ: "ಅರ್ಜುನ, ಕರ್ಮಯೋಗ, ಸಾಂಖ್ಯಯೋಗ, ಧ್ಯಾನಯೋಗ, ಸಂನ್ಯಾಸಯೋಗ, ವರ್ಣಧರ್ಮ, ಕುಲಧರ್ಮ, ಆಶ್ರಮಧರ್ಮ, ಸಗುಣೋಪಾಸನೆ, ನಿರ್ಗುಣೋಪಾಸನೆ— ಈ ನಾನಾ ಜಿಜ್ಞಾಸೆಗಳ ಪ್ರಯಾಸ ನಿನಗೆ ಬೇಕಿಲ್ಲ. ಆ ತಕರಾರುಗಳಿಂದ ನಿನ್ನ ಮನಸ್ಸಿಗೆ ಸಮಾಧಾನ ಬರಲಾರದು. ನಿನಗೆ ನನ್ನಲ್ಲಿ ನಂಬಿಕೆಯುಂಟಷ್ಟೆ? ನನ್ನ ಮಾತಿನಂತೆ ನಡೆದುಬಿಡು. ಯಾವುದು ಹೇಗಾದರೂ ಇದ್ದುಕೊಳ್ಳಲಿ. ತರ್ಕಕ್ಲೇಶ ನಿನಗೆ ಬೇಡ. ನನ್ನನ್ನು ನಂಬಿ ನಡೆದುಕೋ; ಅದರಿಂದ

ಕೇಡಾಗದಂತೆ ನೋಡಿಕೊಳ್ಳುವ ಭಾರ ನನ್ನ ಮೇಲಿನದು. ಶಾಸ್ತ್ರವೇನನ್ನಾದರೂ ಹೇಳಲಿ, ಲೋಕವೇನನ್ನಾದರೂ ಮಾಡಲಿ; ಆ ಚಿಂತೆಗಳನ್ನು ಬದಿಗಿರಿಸು. ನಿನ್ನ ಶ್ರೇಯಸ್ಸು ನನಗೆ ಸೇರಿದ್ದು. "ಮಾಮೇಕಂ ಶರಣಂ ವ್ರಜ." ಭಗವದ್ಭಕ್ತಿಯೊಂದು ಸಂಪೂರ್ಣವಾಗಿ ದೃಢವಾಗಿದ್ದಲ್ಲಿ ಅದು ಎಲ್ಲ ನ್ಯೂನತೆಗಳನ್ನೂ ಸರಿಪಡಿಸಿ, ಎಲ್ಲ ದೋಷಗಳನ್ನೂ ಹೋಗಲಾಡಿಸಿ, ಎಲ್ಲ ಹಿತಗಳನ್ನೂ ಸಂಪಾದಿಸಿಕೊಡುತ್ತದೆ. ಅದು ಎಲ್ಲಕ್ಕಿಂತ ಮೇಲ್ಪಟ್ಟದ್ದು. ಆದದ್ದರಿಂದ ಅದು ಎಲ್ಲ ಸಾಮಾನ್ಯ ಧರ್ಮಗಳಿಗಿಂತ ಮೇಲ್ಪಟ್ಟ, ಎಲ್ಲ ಧರ್ಮಗಳಿಗೂ ಮಸ್ತಕಪ್ರಾಯವಾದ ಅಧಿಧರ್ಮ. ಇದು ಕೇವಲಶ್ರದ್ಧಾರೂಪವಾದದ್ದು. ಇದು ಬಹಿಷ್ಪ್ರಮಾಣಗಳನ್ನೂ ತರ್ಕ ಜಿಜ್ಞಾಸೆಗಳನ್ನೂ ಅಪೇಕ್ಷಿಸುವುದಿಲ್ಲ. ಕೃಷ್ಣನಲ್ಲಿ ನಂಬಿಕೆ, ಸಂಪೂರ್ಣವಾದ ನಂಬಿಕೆ—ಅದೇ ಶರಣಾಗತಿ. ಅದಕ್ಕೆ ಕಾರ್ಯಕಾರಣವಿಚಾರ ಬೇಕಿಲ್ಲ.

> ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ॥

ಭಕ್ತಿಯೆಂಬ ಭಾವೋದ್ರೇಕವು ನಾಲ್ಕಾರು ಅಂತಸ್ತುಗಳಲ್ಲಿರುತ್ತದೆ. ಅದರ ಶಿಖರಾಗ್ರವೇ ಆತ್ಮಸಮರ್ಪಣೆ. ಅದೇ ಆತ್ಮನಿವೇದನ. ಅದೇ ಪ್ರಪತ್ತಿ, ಅಥವಾ ಶರಣಾಗತಿ.

ಇದರಲ್ಲಿ "ನಾನು," "ನನ್ನ ಹಕ್ಕು," "ನನಗೆ ಸಲ್ಲಬೇಕಾದದ್ದು," "ನನ್ನ ಗತಿ," "ನನ್ನ ಶಕ್ತಿ," "ನನ್ನ ಪ್ರಯತ್ನ," "ನನ್ನ ಸಂಕಲ್ಪ" —ಎಂಬುದೆಲ್ಲವೂ ಸಂಪೂರ್ಣವಾಗಿ ಅಳಿಸಿ ಹೋಗಿರಬೇಕು. "ಅಹಮ್" ಆಕಾರದ ಮನೋವೃತ್ತಿ ಸಂಪೂರ್ಣವಾಗಿ ಹೋಗಿರಬೇಕು. ಈ ಮನಃಸ್ಥಿತಿಯನ್ನು ಸಂಪಾದಿಸಿಕೊಳ್ಳುವುದು ಬಹು ಕಷ್ಟ.

ನಮ್ಮ ಭಕ್ತಿಯ ನಡುವೆ ಅಹಂಕಾರದ ಕಣವೊಂದು ಯಾವಾಗಲೂ ಉಳಿದುಕೊಂಡಿರುತ್ತದೆ. "ದೇವರು ವರ ಕೊಟ್ಟಾನು; ಕೊಡದೆ ಬಿಟ್ಟರೂ ಬಿಟ್ಟಾನು!" ದೇವರು ನಮಗೆ ಬೇಕಾದದ್ದರ ಜೊತೆಗೆ ಬೇಡವಾದದ್ದನ್ನೂ ಸೇರಿಸಿ ಕೊಡುವುದುಂಟು" —ಹೀಗೆಲ್ಲ ನಾವು ತರ್ಕಮಾಡಿ, ನಮ್ಮ ಭಕ್ತಿಯನ್ನು ಬೆರಕೆ ಮಾಡುತ್ತೇವೆ. ಇದು ಸಂಪೂರ್ಣವಾದ ಆತ್ಮಸಮರ್ಪಣೆಯಲ್ಲ. ನಾವು ನೀಡುವ ಭಕ್ತಿಯು ಮಿಶ್ರಿತ; ನಮಗೆ ದೊರೆಯುವ ಪ್ರಸಾದವೂ ಮಿಶ್ರಿತ. ಕಲ್ಲು ಬೆರೆತ ಅಕ್ಕಿಯನ್ನು ಹಾಲಿನಲ್ಲಿ ಹಾಕಿ ಬೇಯಿಸಿದರೂ ಸಿದ್ಧವಾಗುವ ಪರಮಾನ್ನ ಕಲ್ಲು ಬೆರೆತೇ ಇರುತ್ತದೆ.

ನಮ್ಮ ಸುಖವು ಪೂರ್ಣವಾಗಬೇಕಾದರೆ ಅಹಂಕಾರವಿಸ್ಮೃತಿಯು ಮೊದಲು ಅವಶ್ಯವಾದ ಸಿದ್ಧತೆ. ಕಾವ್ಯವನ್ನೋದುವಾಗ ಕವಿಲೋಕದಲ್ಲಿ ನಾವು ನಮ್ಮ ನಮ್ಮತನವನ್ನು ಕರಗಿಸಿಬಿಡಬೇಕು. ಅದೇ ತಲ್ಲೀನತೆ. ಅದಿಲ್ಲದೆ "ಕವಿ ಹೇಗೆ ಬರೆದಿದ್ದಾನೋ ನೋಡೋಣ" ಎಂಬ ಪ್ರಾಶ್ನಿಕಬುದ್ಧಿಯೇ ಕ್ಷಣೇ ಕ್ಷಣೇ ಮೇಲೇಳುತ್ತಿದ್ದರೆ ಕಾವ್ಯದಲ್ಲಿರುವ ಸೊಗಸು—ಅದೆಷ್ಟೇಮಟ್ಟಿನದಾಗಿರಲಿ—ನಮ್ಮ ಅನುಭವಕ್ಕೆ ಪೂರ್ತಿಯಾಗಿ ದೊರೆಯಲಾರದು. ಸಂಗೀತಾನುಭವದಲ್ಲಿಯೂ ಹಾಗೆಯೇ. ಹಾಡುಗಾರ ಎಲ್ಲಿ ಸ್ವರ ತಪ್ಪುತ್ತಾನೆ, ಎಲ್ಲಿ ತಾಳ ಎಡವುತ್ತಾನೆ, ಎಲ್ಲಿ ಶ್ರುತಿ ಜಾರುತ್ತಾನೆ—ಇದನ್ನೇ ನೋಡುತ್ತಿದ್ದರೆ ಆ ಹಾಡಿಕೆಯಲ್ಲಿ ಎಂಟಾಣೆಯಷ್ಟು ಸೊಗಸಿದ್ದರೆ ನಮ್ಮ ಪಾಲಿಗೆ ದೊರೆಯುವುದು ಒಂದಾಣೆಯಷ್ಟು ಮಾತ್ರವೇ. ಇದು ಉಭಯಪಕ್ಷಗಳಿಗೂ ಅನ್ಯಾಯವೇ ಸರಿ. ಕಾವ್ಯದಲ್ಲಿಯೋ ಸಂಗೀತದಲ್ಲಿಯೋ ಶಿಲ್ಪಕೃತಿಯಲ್ಲಿಯೋ ಗುಣಭಾಗವೆಷ್ಟುಂಟೋ ಅದಷ್ಟೂ—ಕೊಂಚವೂ ಕೊರೆಯಾಗದೆ—ನಮ್ಮ ಅನುಭವಕ್ಕೆ ಬರಬೇಕಾದರೆ ನಾವು ಮೊದಲು ಆ ಕಲಾಕೃತಿಗೆ ಸಂಪೂರ್ಣವಾಗಿ ಆತ್ಮಸಮರ್ಪಣೆ (Self-surrender) ಮಾಡಿಕೊಳ್ಳಬೇಕು. ಎಂದರೆ ನಮ್ಮ ಅಹಂಭಾವವನ್ನು ಬದಿಗಿರಿಸಬೇಕು.

ಕಲಾರಸಾನುಭವಕ್ಕೇ ಇದು ಅವಶ್ಯವೆಂದಮೇಲೆ ಭಗವದನುಭವಕ್ಕೆ ಅದು ಅತ್ಯಂತಾವಶ್ಯವೆನ್ನಲು ಸಂದೇಹವಿದ್ದೀತೆ?

ಗಜೇಂದ್ರಮೋಕ್ಷದ ಕಥೆ, ಗೋಪೀವಸ್ತ್ರಾಪಹಾರದ ಕಥೆ ಮೊದಲಾದ ಪುರಾಣೋದಾಹರಣೆಗಳು ನಮ್ಮ ಆತ್ಮನಿವೇದನವು ಸರ್ವಸಂಪೂರ್ಣವಾಗಿರಬೇಕು, ಅರ್ಧಮರ್ಧವಾಗಿರಬಾರದು ಎಂದು ಬೋಧಿಸುತ್ತವೆ. ಭಗವತ್ಸನ್ನಿಧಿಯಲ್ಲಿ ಎಲ್ಲ ಅಹಂಭಾವಗಳೂ ಶೂನ್ಯವಾಗಬೇಕು. ನಾಚಿಕೆ, ದರ್ಪ, ಹಟ, ಅಭಿಮಾನ—ಇಂಥವು ಎಳ್ಳಷ್ಟೂ ಇರಬಾರದು. ತಾಯ ಮಡಿಲಲ್ಲಿರುವ ಮಗುವಿನಂತೆ ಭಕ್ತನು ಭಗವಂತನಿಗೆ ವಶನಾಗಬೇಕು, ಶಿಷ್ಯನು ಗುರುವಿಗೆ ವಶನಾಗಬೇಕು, ವಾಚಕನು ಕಾವ್ಯಕ್ಕೆ ವಶನಾಗಬೇಕು. ಆಗ ಪೂರ್ಣ ಲಾಭ.

ಹಾಗಾದರೆ ಪೌರುಷಕ್ಕೆ ಸ್ಥಳವಿಲ್ಲವೊ? ಉಂಟು. ಅವಶ್ಯವಾಗಿ ಉಂಟು. ಪ್ರಯತ್ನದಲ್ಲಿ, ಪೌರುಷವಿವೇಕ, ಪೌರುಷಶಕ್ತಿ. ಫಲದಲ್ಲಿ ದೈವನಿಶ್ಚಯ. ಪೌರುಷದ ಪರಮೋನ್ನತಿಯು ದೈವನಿರ್ಣಯಾಂಗೀಕಾರ. ಪೌರುಷವಿವೇಕದ ಮೇಲ್ತುದಿ ಫಲ ವಿಚಾರತ್ಯಾಗ.

ಸಂಪೂರ್ಣವಾದ ಆತ್ಮಸಮರ್ಪಣೆಯನ್ನರಿಯದವರಿಗೆ ಯಾವ ಮಹದನುಭವವೂ ದೊರೆಯಲಾರದು. ನಿರ್ವಿಚಾರಶ್ರದ್ಧೆಯಿಂದ ಆದ ಶರಣಾಗತಿ ಒಂದು ವಿಧದ ಅಧಿಧರ್ಮ. ಇದು ಸಂದೇಹಗ್ರಸ್ತನಿಗೆ ತಕ್ಕದ್ದು.

ಇನ್ನೊಂದು ವಿಧದ ಅಧಿಧರ್ಮವುಂಟು. ಅದು ಜ್ಞಾನಪೂರ್ಣನಿಗೆ ತಕ್ಕದ್ದು.

ಅರ್ಜುನನ ಬುದ್ಧಿಗೆ ತರ್ಕನಿರ್ಣಯ ಹೇಗೆ ಕಷ್ಟವಾಗಿತ್ತೋ ಅವನ ಮನಸ್ಸಿಗೆ ವಿರಕ್ತಿ ಹಾಗೆ ಸುಲಭವಾಗಿತ್ತು. ಗೀತೆಯ ಪ್ರಥಮಾಧ್ಯಾಯವೆಲ್ಲ ಅದೇ ಅಲ್ಲವೆ? ಅವನಿಗೆ ಯಾವುದರ ಮೇಲೂ ಆಶೆಯಿರಲಿಲ್ಲ. ಇದ್ದ ಆಶೆಗಳೆಲ್ಲ ಕರಗಿ ನಿಶ್ಶೇಷವಾಗಿದ್ದವು. ಅವನಿಗೆ ಯಾವ ಧರ್ಮದಿಂದ ಏನು? ಧರ್ಮ ಬೇಕಾದದ್ದು ಅದನ್ನು ಮಾಡುವವನ ಪ್ರಯೋಜನಕ್ಕಾಗಿ: (೧) ದುಃಖನಿವಾರಣೆಗಾಗಿ, (೨) ಸೌಖ್ಯಲಾಭಕ್ಕಾಗಿ, (೩) ಆತ್ಮಶೋಧನೆಗಾಗಿ. ಯಾರಲ್ಲಿ ಅಹಂಭಾವವು ಲೇಶಮಾತ್ರವೂ ಇಲ್ಲವೋ ಅವನಿಗೆ ಮೂರು ಪ್ರಯೋಜನಗಳೂ ಅಪ್ರಸಕ್ತಗಳು, ಅನಾವಶ್ಯಕಗಳು. “ನ ಕಾಂಕ್ಷೇ ವಿಜಯಂ ಕೃಷ್ಣ,” “ಕಿಂ ಭೋಗೈರ್ಜೀವಿತೇನ ವಾ” —ಎಂದಿದ್ದವನು ಅರ್ಜುನ. ಅವನಿಗೆ ಯಾವ ಇಚ್ಛೆಯೂ ಇಲ್ಲ; ಪಾಪಭಯ ಹೊರತು ಯಾವ ಭಯವೂ ಇಲ್ಲ. ಅಂಥವನಿಗೆ ಯುಕ್ತವಾಗತಕ್ಕ ಉಪದೇಶವು ಸಾರ್ವಾತ್ಮ್ಯಭಾವವೊಂದೇ. ಅವನು ಸರ್ವತ್ರ ಸ್ವಾತ್ಮಾನುಭೂತಿಯಿಂದ ವರ್ತಿಸಬಹುದಾದವನು. ಅಂಥವನನ್ನು ಕುರಿತದ್ದೇ ಈ ಉಪದೇಶ. ಉಪದೇಶಪ್ರಾರಂಭದಲ್ಲಿಯೇ—ಎರಡನೆಯ ಅಧ್ಯಾಯದಲ್ಲಿ—ಹೀಗಿದೆ:

> ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
> ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥ (೨-೪೫)

ವೇದಗಳು ಯಾರು ತ್ರಿಗುಣಗಳಿಗೆ ವಶರಾಗಿದ್ದಾರೋ ಅವರಿಗೆ ತಕ್ಕವು. ವೇದವು ಧರ್ಮವಿಧಿರೂಪವಾದದ್ದು. ಸತ್ತ್ವರಜಸ್ತಮಗಳಿಗೆ ಯಾರು ಅಧೀನರಾಗಿದ್ದಾರೋ ಅವರು ಆ ತ್ರಿಗುಣಮಲಗಳನ್ನು ಕಳೆದುಕೊಳ್ಳುವುದಕ್ಕಾಗಿ ಮಾಡಬೇಕಾದದ್ದು ವೇದೋಕ್ತವಾದ ಧರ್ಮಕರ್ಮ. ಅರ್ಜುನ, ನೀನು ತ್ರಿಗುಣಾತೀತನಾಗು. ಆಗ ವೇದಾದಿ ಬಾಹ್ಯ ವಿಹಿತಧರ್ಮ ನಿನಗೆ ಅನಾವಶ್ಯಕವಾಗುತ್ತದೆ. ಲೋಕಜೀವನದ ದ್ವಂದ್ವಗಳನ್ನು ಮೀರಿದವನಾಗು; ಕೇವಲ

ಸತ್ತ್ವವು (ಒಳ್ಳೆಯತನವು) ಮೂರ್ತೀಭವಿಸಿದಂತೆ ಇರು; ಸ್ವಂತ ಯೋಗಕ್ಷೇಮ ಚಿಂತೆಯ ರೂಪವಾದ ಅಹಂತೆಯನ್ನೂ ಸ್ವಾರ್ಥವನ್ನೂ ತ್ಯಜಿಸು; ಆತ್ಮೈಕನಿಷ್ಠನಾಗು."

ಇದೇ ಅಧಿಧರ್ಮ. ಸಾಮಾನ್ಯ ಧರ್ಮ ವೇದಶಾಸ್ತ್ರಾದಿ ಬಹಿರುಪದೇಶಗಳಂತೆ ರೂಪಗೊಳ್ಳುವ ಸತ್ತ್ವ ಅಥವಾ ಒಳ್ಳೆಯತನ. ಅಧಿಧರ್ಮವು ಅಂಥ ಬಹಿರುಪದೇಶ ಬಾಹ್ಯವಿಧಿಗಳ ಅಪೇಕ್ಷೆಯಿಲ್ಲದೆ ಸ್ವತಃ ಹೊರಟು ಹರಡುವ ಸತ್ತ್ವ ಅಥವಾ ಒಳ್ಳೆಯತನ.

"ಎಲ್ಲ ಧರ್ಮಗಳನ್ನೂ ಪರಿತ್ಯಜಿಸಿ. ನನ್ನನ್ನೊಬ್ಬನನ್ನೇ ಶರಣುಹೊಂದು."

ಹೀಗೆ ಉಪದಿಷ್ಟವಾದ ಶರಣವ್ರಜನವು (ಮೊರೆಹೊಗುವಿಕೆ) ಧರ್ಮವಲ್ಲವೋ? ಅದು ಅಧರ್ಮವೊ? ಎಲ್ಲ ಧರ್ಮಗಳನ್ನೂ ಬಿಡು ಎಂದಮೇಲೆ ಶರಣಾಗತಿಧರ್ಮ ಅದರಲ್ಲಿ ಸೇರಿಲ್ಲವೋ?

ಅದು ಧರ್ಮವೂ ಅಲ್ಲ, ಅಧರ್ಮವೂ ಅಲ್ಲ. ಅದು ಧರ್ಮಾಧರ್ಮಗಳೆರಡಕ್ಕೂ ಮೇಲ್ಪಟ್ಟದ್ದು: ಅದು ಅಧಿಧರ್ಮ.

ಯಾವ ವೃತ್ತಿವರ್ತನೆಗಳು ವೇದಶಾಸ್ತ್ರಾದಿ ಅಧಿಕಾರೋಕ್ತಿಗಳಿಗೆ ವಿಧೇಯತೆಯಿಂದ ನಡೆದಾಗ ಧರ್ಮವೆನಿಸುತ್ತವೆಯೋ ಅದೇ ವೃತ್ತಿವರ್ತನೆಗಳು ಅಂಥಾ ಬಾಹ್ಯ ವಿಧಿ ನಿರ್ಬಂಧ ಭೀತಿಗಳಿಲ್ಲದೆ ಸ್ವತ ಏವ ನಡೆದಾಗ ಅಧಿಧರ್ಮವೆನಿಸುತ್ತವೆ.

ಮೇಲಣ ಗೀತಾವಾಕ್ಯದಲ್ಲಿ

> ಮಾಮ್ + ಏಕಮ್ + ಶರಣಂ + ವ್ರಜ ॥

ಇಲ್ಲಿ "ಮಾಮ್" ಎಂದರೆ "ಪರಬ್ರಹ್ಮವನ್ನು" ಎಂದೇ ಅರ್ಥ. ಶ್ರೀಕೃಷ್ಣನು ಮೂಲದಲ್ಲಿ ಪರಬ್ರಹ್ಮ; ಅವತಾರದಲ್ಲಿ ಕೃಷ್ಣ.

> ಬ್ರಹ್ಮಣೋ ಹಿ ಪ್ರತಿಷ್ಠಾಽಹಮ್ ಅಮೃತಸ್ಯಾವ್ಯಯಸ್ಯ ಚ ।
> ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥ (೧೪-೨೭)

ಯಾರನ್ನು ಶರಣುಹೋಗಬೇಕೆಂದದ್ದು? "ಕೃಷ್ಣಾವತಾರವು ಯಾವ ಪರಬ್ರಹ್ಮದ ಪ್ರತಿಮೆಯೋ, —ಯಾವ ನಿರಾಕಾರ ಬ್ರಹ್ಮಚೈತನ್ಯದ ಘನೀಭೂತಾಕಾರವೇ ಕೃಷ್ಣ ಸ್ವಾಮಿಯೋ, —ಮತ್ತು ಯಾವುದು ಸಮಸ್ತ ಶಾಶ್ವತ ಧರ್ಮಕ್ಕೂ ನೆಲೆಮನೆಯೋ, —ಮತ್ತು ಯಾವುದು ದುಃಖಸ್ಪರ್ಶವೆಷ್ಟುಮಾತ್ರವೂ ಇಲ್ಲದ ಪರಮಸೌಖ್ಯಕ್ಕೆ ಮೂಲ ಸ್ಥಾನವೋ, —ಆ ಅವಿನಾಶಿಯೂ ಅವಿಕಾರ್ಯವೂ ಆದ ಬ್ರಹ್ಮವನ್ನು ಶರಣುಹೋಗಬೇಕಾದದ್ದು."

ಧರ್ಮಮೂಲದಲ್ಲಿಯೇ ಸೇರಿಕೊಂಡಿರುವವನಿಗೆ ಅಧರ್ಮ ಹೇಗೆ ಬಂದಿತು? ಅವನಿಗೆ ಬ್ರಹ್ಮವಸ್ತುವೊಂದಲ್ಲದೆ ಬೇರೆ ಯಾವೊಂದು ವಸ್ತುವೂ ಯಾವೊಂದು ಪ್ರಾಣಿಯೂ ಎಲ್ಲಿಯೂ ಇರದು. ಅಂಥವನಿಗೆ ಪಾಪವೆಲ್ಲಿಂದ ಬರಬೇಕು? ಸಮುದ್ರವು ತನ್ನೊಳಗೆ ಸೇರಿಕೊಂಡ ನಾನಾ ನದಿಗಳ ನಾನಾ ವರ್ಣಗಳನ್ನೂ ನಾನಾ ರುಚಿಗಳನ್ನೂ ನಾನಾ ಗುಣಗಳನ್ನೂ ಅಳಿಸಿಹಾಕಿ ಎಲ್ಲವನ್ನೂ ಒಂದು ಮಾಡುತ್ತದೆ. ಬ್ರಹ್ಮಸಮುದ್ರವು ಹಾಗೆ ತನ್ನ ಶರಣಾಗತರ ಜೀವಗಳ ವ್ಯಕ್ತಿವಿಶೇಷಗಳನ್ನು ಅಳಿಸಿಹಾಕಿ ಏಕಾಕಾರಕ್ಕೆ ತರುತ್ತದೆ.

ಬ್ರಹ್ಮರಸವು ಒಂದು ಅಧಿರಸ. ಅದು ಎಲ್ಲ ರಸ ಅರಸ ವಿರಸಗಳನ್ನೂ ಸಮರಸಪಡಿಸುತ್ತದೆ. ಅದು ಕಲ್ಲನ್ನು ಸಕ್ಕರೆಯಾಗಿಸುತ್ತದೆ; ಕಬ್ಬಿಣವನ್ನು ಚಿನ್ನವಾಗಿಸುತ್ತದೆ. ಬ್ರಹ್ಮತಲ್ಲೀನನಾದವನಲ್ಲಿದ್ದ ದೋಷಗಳು ಮೊದಲೇ ಕರಗಿಹೋಗಿರುತ್ತವೆ.

> ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥ (೪-೩೭)

ಶ್ರುತಿಮತವೂ ಇದೇ. ತೈತ್ತಿರೀಯ ಹೀಗೆನ್ನುತ್ತದೆ:

> ಆನಂದಂ ಬ್ರಹ್ಮಣೋ ವಿದ್ವಾನ್ ।
> ನ ಬಿಭೇತಿ ಕುತಶ್ಚನೇತಿ ।
> ಏತಗ್ಂ ಹ ವಾವ ನ ತಪತಿ ।
> ಕಿಮಹಗ್ಂ ಸಾಧು ನಾಕರವಮ್ ।
> ಕಿಮಹಂ ಪಾಪಮಕರವಮಿತಿ ॥
> ಸ ಯ ಏವಂ ವಿದ್ವಾನೇತೇ ಆತ್ಮಾನಗ್ಗ್ಂ ಸ್ಪೃಣುತೇ ।
> ಉಭೇ ಹ್ಯೇವೈಷ ಏತೇ ಆತ್ಮಾನಗ್ಗ್ಂ ಸ್ಪೃಣುತೇ ॥

ಬ್ರಹ್ಮಸಾನ್ನಿಧ್ಯದ ಆನಂದವನ್ನರಿತವನು ಯಾವುದರಿಂದಲೂ ಭಯಪಡನು. ಆತನು "ನಾನು ಯಾವ ಪುಣ್ಯವನ್ನು ಮಾಡಲಿಲ್ಲ?" ಎಂದಾಗಲಿ "ನಾನು ಎಂಥ ಪಾಪ ಮಾಡಿದೆ!" ಎಂದಾಗಲಿ ಚಿಂತೆಯಿಂದ ಸಂತಾಪಪಡನು. ಬ್ರಹ್ಮಸ್ವರೂಪವನ್ನರಿತವನು ಅದರಿಂದ ತನ್ನಾತ್ಮವನ್ನು ಸಂತೋಷದಲ್ಲಿರಿಸಿಕೊಂಡಿರುತ್ತಾನೆ. ಪುಣ್ಯ ಪಾಪಗಳೆರಡನ್ನೂ ಸರ್ವಜೀವ ಜೀವೋಪಾಧಿಮೂಲವಾದ ಬ್ರಹ್ಮಕ್ಕೊಪ್ಪಿಸಿ ಆತ್ಮಸಮಾಧಾನವನ್ನು ಪಡೆದಿರುತ್ತಾನೆ.

ಇದೇ ಅಧಿಧರ್ಮಿಯ ಸ್ಥಿತಿ. ಆತನು ಏನು ಮಾಡಿದರೂ ಅದು ಶಾಸ್ತ್ರದೃಷ್ಟಿಯಿಂದಲೂ ಲೋಕದೃಷ್ಟಿಯಿಂದಲೂ ಪಾಪವೆನ್ನಿಸಿದರೂ ಆತನಲ್ಲಿ ಪಾಪಬೀಜವಿಲ್ಲದಿರುವ ಕಾರಣದಿಂದ, ಆತನು ಅಹಂಕಾರ ಮಮಕಾರಗಳಿಲ್ಲದವನಾದದ್ದರಿಂದ, ಅವನು ಬ್ರಹ್ಮೈಕನಿಷ್ಠನಾದದ್ದರಿಂದ, —ಅವನಿಂದ ಆದದ್ದು ಪಾಪವಾಗದು. ಅವನು ಸರ್ವತ್ರಾತ್ಮದರ್ಶಿಯಾದದ್ದರಿಂದ ಅವನ ಕ್ರಿಯೆ ಎಂಥದಾದರೂ ಹಿತೋದ್ದಿಷ್ಟವಾದದ್ದೇ ಹೊರತು ಅನ್ಯಥಾ ಆಗಲಾರದು.

> ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
> ಹತ್ವಾಪಿ ಸ ಇಮಾಂಲ್ಲೋಕಾನ್ನ ಹನ್ತಿ ನ ನಿಬಧ್ಯತೇ ॥ (೧೮-೧೭)

ಧರ್ಮಿಷ್ಠನು ವೇದಶಾಸ್ತ್ರ ಗುರ್ವಾಜ್ಞೆ ಸಮಾಜಸಂಪ್ರದಾಯ ಮೊದಲಾದ ಬಹಿಸ್ಸಂಗತಿಗಳಿಗೊಳಪಟ್ಟು ಭಯದಿಂದಲೋ ಆಕಾಂಕ್ಷೆಯಿಂದಲೋ ಸಾಧುಮಾರ್ಗದಲ್ಲಿ ನಡೆಯುತ್ತಾನೆ.

ಅಧಿಧರ್ಮಿಯು ಅಂಥಾ ಭಯನಿರ್ಬಂಧಗಳೂ ಆಶಾಪ್ರತೀಕ್ಷೆಗಳೂ ಇಲ್ಲದೆಯೇ ಆತ್ಮೌಪಮ್ಯಾಭ್ಯಾಸದಿಂದ ಸಾಧುಮಾರ್ಗದಲ್ಲಿ ನಡೆದುಕೊಳ್ಳುತ್ತಾನೆ. ಅವನು ವಿಧಿ ನಿಷೇಧಗಳ ಆವಶ್ಯಕತೆ ಇಲ್ಲದೆಯೇ ಸ್ವತಃ ಲೋಕಹಿತನು.

ಆತ್ಮಜ್ಞಾನಿಯ ಪ್ರಸಕ್ತಿ ಮೂರನೆಯ ಅಧ್ಯಾಯದಲ್ಲಿ—ಕರ್ಮಯೋಗಪ್ರಕರಣದಲ್ಲಿ ಬಂದಿದೆ:

> ಯಸ್ತ್ವಾತ್ಮರತಿರೇವ ಸ್ಯಾತ್ ಆತ್ಮತೃಪ್ತಶ್ಚ ಮಾನವಃ ।
> ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ ॥ (೩-೧೭)

ಇಲ್ಲಿ ಕಾರ್ಯವೆಂದರೆ ಕರ್ತವ್ಯಕರ್ಮ—ಬಾಹ್ಯವಿಧಿಯ ನಿರ್ಬಂಧದಿಂದ ಮಾಡಲೇಬೇಕಾಗಿರುವ ಕರ್ಮ. “ಕಾರ್ಯಂ ನ ವಿದ್ಯತೇ” ಎಂದರೆ ಮತ್ತೊಬ್ಬರ ಆಜ್ಞೆಗೆ ಒಳಪಟ್ಟೋ, ದಂಡನೆಯ ಭಯದಿಂದಲೋ, ಅನುಗ್ರಹದ ಅಪೇಕ್ಷೆಯಿಂದಲೋ ಮಾಡಬೇಕಾದ ಕೆಲಸ ಯಾವುದೂ ಇರದು—ಎಂದರ್ಥ. ಆತ್ಮಜ್ಞಾನಿಯ ಸ್ವಭಾವವೇ ಸೌಜನ್ಯವಾದದ್ದರಿಂದ, ಅವನಲ್ಲಿ ಅಹಂತೆಯೇ ಇಲ್ಲದ್ದರಿಂದ ಅವನು ಮಾಡುವುದೆಲ್ಲ ಸ್ವತಂತ್ರ ಕರ್ಮ, ಮತ್ತು ಅದರಿಂದಾಗುವುದೆಲ್ಲ ಸರ್ವಭೂತಹಿತವೇ ಹೊರತು ಬೇರೆಯಲ್ಲ. ಅವನು ಮಾಡುವುದಕ್ಕೂ ಬಿಡುವುದಕ್ಕೂ ಸ್ವತಂತ್ರನು. ಅವನು ಏನು ಮಾಡಿದರೂ ಏನು ಬಿಟ್ಟರೂ ಅದು ಅಹಂತಾದೃಷ್ಟಿಯದಲ್ಲ, ಸಾರ್ವಾತ್ಮ್ಯದೃಷ್ಟಿಯದು.

ಇಂಥವನನ್ನೇ ಅತ್ಯಾಶ್ರಮಿಯೆಂದೂ ಅವಧೂತನೆಂದೂ ಜೀವನ್ಮುಕ್ತನೆಂದೂ ಶಾಸ್ತ್ರಗಳು ವರ್ಣಿಸಿರುವುದು:

> ಯೋ ವಿಲಂಘ್ಯಾಽಽಶ್ರಮಾನ್ ವರ್ಣಾನ್ ಆತ್ಮನ್ಯೇವ ಸ್ಥಿತಸ್ಸದಾ ।
> ಅತಿವರ್ಣಾಶ್ರಮೀ ಯೋಗೀ ಅವಧೂತಸ್ಸ ಉಚ್ಯತೇ ॥

ಇನ್ನೊಂದು ವಾಕ್ಯ ಹೀಗಿದೆ:

> ತ್ಯಜ ಧರ್ಮಮಧರ್ಮಂ ಚ ತ್ಯಜ ಸತ್ಯಾನೃತೇ ಉಭೇ ।
> ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಿಸಿ ತತ್ತ್ಯಜ ॥

“ಶಾಸ್ತ್ರಾದಿ ಬಹಿಶ್ಚೋದನಾರೂಪದ ಧರ್ಮವನ್ನು ಬಿಡು, ಅಧರ್ಮವನ್ನೂ ಬಿಡು; ಸತ್ಯವನ್ನು ಬಿಡು, ಅಸತ್ಯವನ್ನೂ ಬಿಡು. ಈ ರೀತಿಯ ದ್ವಂದ್ವಗಳನ್ನೆಲ್ಲ ಬಿಟ್ಟು, ಎಂದರೆ ಅವುಗಳ ಭೇದಗಳಿಗೆ ಸಿಕ್ಕಿಕೊಳ್ಳದೆ, ಅವೆಲ್ಲವೂ ಬ್ರಹ್ಮಸೃಷ್ಟಿಯಲ್ಲಿಯ ನಾಮರೂಪಾದಿಗಳ ವಿಕಾರಲಕ್ಷಣಗಳೆಂದು ಬಗೆದು, ಆ ಬ್ರಹ್ಮಲೀಲಾಸ್ಮರಣೆಯಿಂದ ಎಲ್ಲ ಭೇದಗಳನ್ನೂ ತೊರೆದು, ಹಾಗೆ ತೊರೆಯುವವನು ‘ನಾನು’ ಎಂಬ ಯಾವ ಅಹಂಕಾರ ಭಾವವುಂಟೋ ಅದನ್ನೂ ತೊರೆದುಬಿಡು.”

ತ್ಯಾಗಮಾಡುವುದು ಎಂಬುದು ಒಂದು ಕ್ರಿಯೆ. ಕ್ರಿಯೆಗೆ ಒಬ್ಬ ಕರ್ತೃವುಂಟು. ಆ ಕರ್ತೃತ್ವಬುದ್ಧಿಯೇ ಅಹಂಕಾರ. ಅದೂ ಕರಗಿಹೋಗಬೇಕಂತೆ! “ನಾನು” ಎಂಬುದು

ಇಲ್ಲವಾಗಬೇಕಂತೆ.

> ಜ್ಞಾನಾಮೃತೇನ ತೃಪ್ತಸ್ಯ ಕೃತಕೃತ್ಯಸ್ಯ ಯೋಗಿನಃ ।
> ನೈವಾಸ್ತಿ ಕಿಂಚಿತ್ಕರ್ತವ್ಯಂ ಅಸ್ತಿ ಚೇನ್ನ ಸ ತತ್ತ್ವವಿತ್ ॥

–ವಿದ್ಯಾರಣ್ಯ: ಜೀವನ್ಮುಕ್ತಿವಿವೇಕ

ಧರ್ಮನಿರ್ಬಂಧಗಳೆಲ್ಲ ಬ್ರಹ್ಮಜ್ಞಾನಕ್ಕೆ ಪೂರ್ವಭಾವಿಯಾಗಿ. ಹಿಂದೆ ಯಾವುದು ಕರ್ತವ್ಯವಾಗಿತ್ತೋ ಅದು ಜ್ಞಾನಸಿದ್ಧಿಯಾದ ಬಳಿಕ ಸಂತೋಷವಿಲಾಸವಾಗುತ್ತದೆ.

> ವ್ಯವಹಾರೋ ಲೌಕಿಕೋ ವಾ ಶಾಸ್ತ್ರೀಯೋ ವಾಽನ್ಯಥಾಽಪಿ ವಾ ।
> ಮಮಾಕರ್ತುರಲೇಪಸ್ಯ ಯಥಾಽಽರಬ್ಧಂ ಪ್ರವರ್ತತಾಮ್ ॥
> ಅಥವಾ ಕೃತಕೃತ್ಯೇಽಪಿ ಲೋಕಾನುಗ್ರಹಕಾಮ್ಯಯಾ ।
> ಶಾಸ್ತ್ರೀಯೇಣೈವ ಮಾರ್ಗೇಣ ವರ್ತೇಽಹಂ ಮಮ ಕಾ ಕ್ಷತಿಃ ॥

–ಅವಧೂತೋಪನಿಷತ್ತು

ಅವಧೂತನ ಲಕ್ಷಣಗಳನ್ನು ಶುಕಾಷ್ಟಕವೆಂಬ ಪುರಾತನಸ್ತೋತ್ರ ಹೀಗೆ ಹೇಳಿದೆ:

> ಭೇದಾಭೇದೌ ಸಪದಿ ಗಲಿತೌ ಪುಣ್ಯಪಾಪೇ ವಿಶೀರ್ಣೇ ।
> ಮಾಯಾಮೋಹೌ ಕ್ಷಯಮುಪಗತೌ ನಷ್ಟಸಂದೇಹವೃತ್ತೇಃ ॥
> ಶಬ್ದಾತೀತಂ ತ್ರಿಗುಣರಹಿತಂ ಪ್ರಾಪ್ಯ ತತ್ತ್ವಾವಬೋಧಂ ।
> ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ ॥

ಧರ್ಮಗಳು ವೇದಶಾಸ್ತ್ರಗಳಿಂದ ವಿಹಿತವಾದವು. ಅವುಗಳಿಗೆ ನಿಯತಫಲಗಳುಂಟು. ಯಜ್ಞಯಾಗಾದಿ ಕರ್ಮಗಳಿಗೆ ಸ್ವರ್ಗಾದಿ ಪ್ರಯೋಜನಗಳುಂಟು. ಸ್ವಪ್ರಯೋಜನಾಪೇಕ್ಷೆಯಿಲ್ಲದೆ ಮಾಡಿದ ಸತ್ಕರ್ಮ ಪರತತ್ತ್ವಜ್ಞಾನಿಯ ಲಕ್ಷಣವೆಂದು ಪುನಃಪುನಃ ಹೇಳಿದ್ದಾಗಿದೆ. "ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ" — ಎಂಬುದು ಪರಮಾರ್ಥ. "ಅರ್ಜುನ, ನಿನಗೆ ಯಾವ ಸ್ವಾರ್ಥಚಿಂತನೆಯೂ ಇಲ್ಲದೆ ಸರ್ವಾತ್ಮಭಾವವೊಂದೇ ನಿನ್ನಲ್ಲಿ ನೆಲಸಿದ್ದರೆ ನೀನು ಫಲವದ್ಧರ್ಮಗಳಿಂದ ಅತೀತನಾಗಿ

ಪರಮಾತ್ಮಪೂಜಾರೂಪವಾಗಿ ಲೋಕಹಿತಕ್ಕೆ ತೊಡಗು. ಸರ್ವವರ್ಣಾತೀತನೂ ಸರ್ವಾಶ್ರಮಾತೀತನೂ ಕರ್ಮವಿಧಿರಹಿತನೂ ಸರ್ವಸ್ವತಂತ್ರನೂ ಆದ ಅವಧೂತಯೋಗಿಯಂತೆ ಸರ್ವಭೂತಹಿತನಿಷ್ಠನಾಗು." ಇದು ಇನ್ನೊಂದು ವಿಧದ ಅಧಿಧರ್ಮ.

ಶರಣಾಗತಿಯೇ—ಭಗವದೇಕಶರಣತಾಯೋಗವೇ—ಅಧಿಧರ್ಮ. ಅದೇ ಭಕ್ತಿ ಜ್ಞಾನಗಳ ಪರಾಕಾಷ್ಠ ದಶೆ.

ಅಧಿಧರ್ಮಕ್ಕೂ ಧರ್ಮಕ್ಕೂ ಇರುವ ಭೇದಗಳನ್ನು ನೋಡೋಣ.

1. ಧರ್ಮನಿರ್ಣಯಕ್ಕೆ ಶಾಸ್ತ್ರವಾಕ್ಯಗುರುಸಂಪ್ರದಾಯಾದಿ ಬಾಹ್ಯಪ್ರಮಾಣಗಳ ವಿಧಿನಿಷೇಧಗಳು ಅವಶ್ಯವಿರುತ್ತವೆ. ಅಧಿಧರ್ಮಕ್ಕೆ ಅವು ಅವಶ್ಯವಲ್ಲ. ಏಕೆಂದರೆ ಅಧಿಧರ್ಮವು ನೈಜಶ್ರದ್ಧೆಯಿಂದಲೂ ಸತ್ಯಸಾಕ್ಷಾದನುಭವದಿಂದಲೂ ಸ್ವತಂತ್ರವಾಗಿ ನಡೆಯತಕ್ಕದ್ದು.
2. ಎಲ್ಲ ಮನುಷ್ಯಕರ್ಮಕ್ಕೂ ಫಲಸ್ಥಾನ ಎರಡಷ್ಟೆ? ಒಂದು ಮಾಡುವವನದು, ಇನ್ನೊಂದು ಅವನ ಸಹವಾಸಿಲೋಕದ್ದು. ಧರ್ಮಕರ್ಮಫಲದಲ್ಲಿ ಇಬ್ಬರಿಗೂ ಭಾಗವುಂಟು. ಅಧಿಧರ್ಮದಲ್ಲಿ ಈ ದ್ವಿಭಾಗಿತೆಯಿಲ್ಲ. ಧರ್ಮದ ಫಲವನ್ನು ತತ್ಕರ್ತನೂ ತತ್ಸಂಪರ್ಕಿಗಳೂ ಇಬ್ಬರೂ ಅನುಭವಿಸುತ್ತಾರೆ. ಅಧಿಧರ್ಮಿಯು ನಿರಹಂಭಾವಿಯಾದದ್ದರಿಂದ ಅವನು ಮಾಡಿದ್ದರ ಫಲದಲ್ಲಿ ಅವನ ಸ್ವಂತಕ್ಕೆ ಭಾಗವಿರದು; ಆದರೆ ಲೋಕಕ್ಕೆ ಆ ಕರ್ಮದ ಪ್ರಯೋಜನ ಉಂಟೇ ಉಂಟು.
3. ಧರ್ಮಿಯ ಕರ್ಮದಲ್ಲಿ ಅಹಂತಾಸಂಭವ ಅಷ್ಟೋ ಇಷ್ಟೋ ಇದ್ದೀತು, ಅಷ್ಟುಮಟ್ಟಿಗೆ ದೋಷಸಂಭವ ಇದ್ದೀತು. ಅಧಿಧರ್ಮಿಯು ನಿರಹಂಕಾರಿಯೂ ಸತ್ತ್ವಗುಣೈಕಮಯನೂ ಆದದ್ದರಿಂದ ಅವನು ಮಾಡಿದ ಕರ್ಮ ಎಂಥಾದ್ದೇ ಆದರೂ ಅದರಲ್ಲಿ ಕೆಡಕಿರಲಾರದು, ಒಳ್ಳೆಯದೇ ಇರುತ್ತದೆ. ಶುದ್ಧಸತ್ತ್ವದ ಸ್ವತಂತ್ರಾಭಿವ್ಯಕ್ತಿಯೇ ಅಧಿಧರ್ಮ.

ಶರಣಾಗತಿರೂಪವಾದ ಅಧಿಧರ್ಮವು ಎರಡು ಪ್ರಕಾರದ್ದು. ಒಂದು ಆತ್ಮಸಮರ್ಪಣೆ, ಇನ್ನೊಂದು ಸಾರ್ವಾತ್ಮ್ಯ.

1. **ಆತ್ಮಸಮರ್ಪಣೆ:** ಆತ್ಮಸಮರ್ಪಣೆಯೆಂಬುದು ಭಕ್ತಿಯ ಪರಿಪೂರ್ಣ ದಶೆ-ಭಕ್ತಿಯ ಆತ್ಯಂತಿಕ ದಶೆ. ಅದು ನಿರ್ವಿಚಾರಶ್ರದ್ಧೆ—ಕೇವಲಶ್ರದ್ಧೆ. ಅದು ಹೊರಗಣ ಸಾಕ್ಷ್ಯಗಳನ್ನೂ ರುಜುವಾತುಗಳನ್ನೂ ಅಪೇಕ್ಷಿಸುವುದಿಲ್ಲ. ಮಗುವು ಬೇರೆ ಯಾರ ಮಾತಿಗೂ ಕಾಯದೆ ತಾನೇ ತಾನಾಗಿ ತನ್ನ ತಾಯನ್ನು ನಂಬಿಕೊಂಡು, ಮತ್ತಾರನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ಆಕೆಯ ಮಡಿಲಿನಲ್ಲಿ ತನ್ನನ್ನೇ ಮರೆತುಕೊಂಡು ಸುಖಿಸುವಂತೆ ಭಕ್ತನು ಭಗವಂತನನ್ನು ನಂಬಿ, “ಸ್ವಾಮಿ, ನೀನೇ ನನ್ನ ಸರ್ವಸ್ವ; ನಿನ್ನಿಚ್ಛೆಯೇ ನನ್ನಿಚ್ಛೆ” —ಎಂಬ ಭಾವದಿಂದ ಮೊರೆಯಿಟ್ಟು ತನ್ನತನವನ್ನು ಭಗವಂತನಲ್ಲಿ ಕರಗಿಸಿ ಬಿಟ್ಟು ಆನಂದಿಸುವುದು ಆತ್ಮಸಮರ್ಪಣೆ. “ನಾನು” ಎಂಬುದು ಅದರಲ್ಲಿ ಲೀನವಾಗಿ ಹೋಗಿರುತ್ತದೆ. ಈ ಸ್ವಾಹಂತಾ ವಿಲೀನತೆಯೇ ಒಂದು ಬಗೆಯ ಶರಣಾಗತಿ. ಅದಕ್ಕೆ ಬಾಹ್ಯ ಪ್ರಮಾಣಗಳು ಹೇಗೆ ಬೇಕಿಲ್ಲವೋ ಬಾಹ್ಯವಿಧಾನ ನಿಯಮಗಳೂ ಹಾಗೆಯೇ ಬೇಕಿಲ್ಲ. ಭಗವಂತನೊಬ್ಬನನ್ನು ಹೊರತು ಬೇರೆ ಯಾವ ಒಂದನ್ನೂ ಅದು ಅರಿಯದು. ಆದದ್ದರಿಂದಲೇ ಅದಕ್ಕೆ ಏಕಾಂತ ಭಕ್ತಿಯೆಂದು ಹೆಸರು.

   ಅಂಥ ಒಬ್ಬ ಭಕ್ತನ ಪ್ರಾರ್ಥನೆಯನ್ನು ನೋಡಿರಿ:

   > ತ್ವಯಿ ಜನಾರ್ದನ ಭಕ್ತಿರಚಂಚಲಾ ಯದಿ ಭವೇದಫಲಪ್ರವಣಾ ಮಮ ।
   > ಅಭಿಲಷಾಮ್ಯಪವರ್ಗಪರಾಙ್ಮುಖಃ ಪುನರಪೀಹ ಶರೀರಪರಿಗ್ರಹಮ್ ॥

   “ಭಗವಂತ, ನಿನ್ನಲ್ಲಿ ನನಗೆ ನಿಶ್ಚಲವೂ ನಿರಪೇಕ್ಷವೂ ಆದ ಅಕಾರಣಭಕ್ತಿ ಇರುವುದಾದರೆ ನಾನು ಮೋಕ್ಷವನ್ನು ಕೂಡ ಇಚ್ಛಿಸದೆ ಮತ್ತೆ ಶರೀರಧಾರಣೆ ಮಾಡಿಯೇನು.”

   ಈ ಭಕ್ತಿ ಕೇವಲ ಹೃದಯಪ್ರವೃತ್ತಿ. ಅದು ತರ್ಕಪರೀಕ್ಷೆಗಳಿಗಾಗಿ ಕಾದಿರತಕ್ಕದ್ದಲ್ಲ. ಹುಣ್ಣಿಮೆಯ ಚಂದ್ರನನ್ನು ನೋಡಿ ಸಮುದ್ರ ಉಬ್ಬುವಂತೆ ಭಗವಂತನ ಸ್ಮರಣೆಯಿಂದ ಭಕ್ತನ ಹೃದಯರಸ ಉಕ್ಕುತ್ತದೆ. ಅವನ ಅಹಂತೆ ಹೋದದ್ದರಿಂದ ಮೋಹ ಶೋಕಗಳು ತೊಲಗಿ ಅವನಿಗೆ ನಿರತಿಶಯವಾದ ಶಾಂತಿಸೌಖ್ಯ ದೊರೆಯುತ್ತದೆ.

2. **ಸಾರ್ವಾತ್ಮ್ಯ:** ಸಾರ್ವಾತ್ಮ್ಯವು ತತ್ತ್ವಜ್ಞಾನದ ಪರಿಪೂರ್ಣದಶೆ—ಜ್ಞಾನದ ಪರಿಪಕ್ವಫಲ. ಅದು ಶಾಸ್ತ್ರವಿಚಾರ ಜೀವಸಂಸ್ಕಾರಗಳ ಫಲವಾಗಿ ಲಭಿಸಿದ ಬುದ್ಧಿಸಿದ್ಧಾಂತವನ್ನು

ಅನುಸಂಧಾನಮಾಡಿ ಅನುಭವಕ್ಕೆ ತಂದುಕೊಂಡದ್ದು. ಈ ಜ್ಞಾನಿ ಎಲ್ಲೆಲ್ಲೂ ತನ್ನನ್ನೊಬ್ಬನನ್ನೇ ಕಾಣುತ್ತಾನೆ. ತಾಯಿಗೆ ತನ್ನ ಮಕ್ಕಳ ವಿಷಯದಲ್ಲಿ ಎಂಥ ಆತ್ಮೀಯತೆಯೋ ಈ ಜ್ಞಾನಿಗೆ ಲೋಕವಿಷಯದಲ್ಲಿ ಅಂಥ ಭಾವನೆ. ಎಲ್ಲರ ಬಾಳೂ ತನಗೆ ಸೇರಿದ್ದೇ, ತಾಯ ಜೀವನವು ಮಕ್ಕಳ ಜೀವನದಲ್ಲಿ ಹೇಗೆ ಬೇರೆತನವಿಲ್ಲದಂತೆ ಸೇರಿಕೊಂಡಿರುತ್ತದೆಯೋ ಹಾಗೆ ಆತ್ಮಜ್ಞನು ಸಮಸ್ತಭೂತಹಿತದಲ್ಲಿಯೂ ಅಭೇದವಾಗಿ ಸೇರಿಕೊಂಡಿರುತ್ತಾನೆ. ಈ ಸ್ವಾತ್ಮಸರ್ವತ್ರತಾನುಭೂತಿ ಇನ್ನೊಂದು ಬಗೆಯ ಅಧಿಧರ್ಮ. ಅದು ಪರಬ್ರಹ್ಮೈಕಶರಣತೆ.

ಹೀಗೆ ತಾರಕಮಾರ್ಗಗಳು ಮೂರಾಯಿತು: (೧) ಪ್ರಪತ್ತಿಭಕ್ತಿ, (೨) ಶಾಸ್ತ್ರಧರ್ಮ, (೩) ಸ್ವಾತ್ಮಸಾರ್ವಾತ್ಮ್ಯ.

“ಅರ್ಜುನ, ಈ ಮೂರರಲ್ಲಿ ಯಾವ ಮಾರ್ಗವನ್ನಾದರೂ ಹಿಡಿ. ಶಾಸ್ತ್ರಭೇದಗಳಿಗೂ ವಾದಭೇದಗಳಿಗೂ ಹೋಗದೆ ನನ್ನನ್ನು ನಂಬಿ ನನ್ನ ಮಾತಿಗೋಸ್ಕರವಾಗಿ ಯುದ್ಧಮಾಡು. ಅದು ಪ್ರಪತ್ತಿ.

ಅಥವಾ ಕ್ಷತ್ರಿಯನಿಗೆ ಧರ್ಮಯುದ್ಧವು ಕರ್ತವ್ಯವೆಂದು ವೇದಶಾಸ್ತ್ರಗಳು ಹೇಳುತ್ತವೆ. ಲೋಕವು ಭಗವಂತನ ರಾಜ್ಯ. ಇಲ್ಲಿಯ ಜನತೆ ನಿನ್ನ ಸಹಪ್ರಜೆ. ಅವರಲ್ಲಿ ನ್ಯಾಯಸ್ಥಾಪನೆ ಮಾಡುವುದು ಭಗವತ್ಸೇವೆ. ಈ ವಿಚಾರಸರಣಿಯಿಂದಲಾದರೂ ನೀನು ಯುದ್ಧಮಾಡು. ಅದು ಧರ್ಮವಿಧೇಯತೆ.

ಅಥವಾ ತ್ರಿಗುಣಾತೀತನಾಗಿ, ಜಗತ್ತೆಲ್ಲ ಪರಬ್ರಹ್ಮಲೀಲಾವಿಲಾಸವಾದದ್ದರಿಂದ ನೀನು ‘ಆ ವಿಲಾಸಸಾಗರದಲ್ಲಿ ಒಂದು ಅಲೆ ನಾನು. ಆ ಮಹಾಘೂರ್ಣನಸರಣಿಯಲ್ಲಿ ನಾನು ಒಂದು ಸ್ಪಂದಿತ—ಅದರಲ್ಲಿ ನಾನು ಬೆರೆತು ನನ್ನ ನನ್ನತನವನ್ನು ನೀಗಬೇಕು’ —ಎಂಬ ಭಾವದಿಂದಲಾದರೂ ಯುದ್ಧ ಮಾಡು. ಇದು ಬ್ರಹ್ಮಸಮಕ್ಷತಾನುಭೂತಿ. ಇದು ಸ್ವಾತ್ಮಸರ್ವತ್ರತಾನುಭೂತಿ.

ಹೀಗೆ ನಿನಗೆ ದಾರಿಗಳು ಮೂರಿವೆ. ಈ ಮೂರರಲ್ಲಿ ಯಾವುದು ನಿನಗೆ ಒಗ್ಗುತ್ತದೋ, ಯಾವುದಕ್ಕೆ ಸಾಮರ್ಥ್ಯಸಿದ್ಧತೆ ನಿನ್ನಲ್ಲುಂಟೋ, ಯಾವುದು ನಿನ್ನ ಮನಸ್ಸಿಗೆ ರುಚಿಸುತ್ತದೋ

ಅದನ್ನು ನೀನೇ ನಿಷ್ಕರ್ಷೆಮಾಡಿಕೋ.”

ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥

ಹೀಗೆಂದು ಸ್ವಾಮಿ ನುಡಿದು, “ನಿನ್ನ ಅಜ್ಞಾನಸಂಮೋಹ ಈಗ ಬಿಟ್ಟುಹೋಯಿತೆ?” —ಎಂದು ಕೇಳಿದ, ಅರ್ಜುನನು ಪ್ರತ್ಯುತ್ತರವಾಗಿ ಹೀಗೆಂದ:

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ...
ಕರಿಷ್ಯೇ ವಚನಂ ತವ ॥

“ಅಚ್ಯುತ, ನಿನ್ನ ಉಪದೇಶಾನುಗ್ರಹದಿಂದ ನನ್ನ ಸಂದೇಹವೆಲ್ಲವೂ ಕಳೆದುಹೋಗಿದೆ. ಈಗ ನಾನು ನಿನ್ನ ಮಾತಿನಂತೆ ನಡೆಯುವವನು.”

ಬಳಿಕ ಯುದ್ಧಾರಂಭ.

***

ಕೃಷ್ಣಾರ್ಜುನಸಂವಾದವನ್ನು ಕಿವಿಯಾರ ಕೇಳಿದ ಸಂಜಯನು ಧೃತರಾಷ್ಟ್ರರಾಜನಿಗೆ ಹೀಗೆ ಬಿನ್ನಯಿಸಿದ:

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥ (೧೮–೭೮)

ಯೋಗಪತಿ ಕೃಷ್ಣನುಂ ಧನು- ।
ರಾಗಮಪತಿ ಪಾರ್ಥನುಂ ಮತ್ತೈಕ್ಯದೆ ಧರ್ಮೋ- ॥
ದ್ಯೋಗದಿ ತೊಡಗಿಹ ಪಕ್ಷದಿ ।
ಭಾಗ್ಯಶ್ರೀ ನೆಲಸಿ ನಲಿವಳದು ನಿಶ್ಶಂಕಂ ॥

ತತ್ತ್ವವಿವೇಕದ ಯೋಗಂ ।
ಕ್ಷತ್ರಿಯವೀರ್ಯಪ್ರಯೋಗಮೀಯುಭಯಮುಮೇ- ॥

ಕತ್ವದೊಳಿರೆ ಜಯಸುಖಸಂ- ।
ಪತ್ತುಗಳುಂ ಧರ್ಮನೀತಿಯುಂ ಸಂಸಿದ್ಧಂ ॥

॥ ಓಂ ತತ್ಸತ್ ॥

ಸಂಗ್ರಹ

ಹರಿಶರಣತೆ ಸ್ವಕರ್ಮಾ- ।
ಭಿರತತೆ ಮಿತಭೋಗತೃಪ್ತಿಯೀತ್ರಿವ್ರತದಿಂ ॥
ಪರಿಶುದ್ಧಿಯಾಂತು ಜೀವಂ ।
ನಿರಹಂಕೃತಿಯಿಂ ಪರಾತ್ಮಶಾಂತಿಯ ಪಡೆಗುಂ

॥ ೧ ॥

ಗುರುಶಾಸ್ತ್ರವಿಧೇಯತೆಯಿನೊ ।
ಹರಿಪದಕೆ ಸಮರ್ಪ್ಯಮಾತ್ಮಮೆಂಬಾಸ್ಥೆಯಿನೋ ॥
ಪರಿಗತಸಾರ್ವಾತ್ಮ್ಯದಿನೋ ।
ಶರಣಂ ಬ್ರಹ್ಮೈಕಮೆಂದು ಚರಿಸುವನನಘಂ

॥ ೨ ॥

ನಿಷ್ಠಂ ತಾಂ ಬ್ರಹ್ಮದೊಳಿರ- ।
ಲಿಷ್ಟಾನಿಷ್ಟಕೃದಹಂತೆ ನಿರ್ಮೂಲಮಿರಲ್ ॥
ದುಷ್ಟತೆಯವನೆಡೆಯಿರದೆಂ- ।
ಬಷ್ಟಾದಶದಿಂ ಸಮಾಪ್ತಮೀಶ್ವರಗೀತಂ

॥ ೩ ॥

ಭೂತಲಪರಿಶ್ರಮಿಗೆ ಸಂ- ।
ಗೀತಂ ಶ್ರಮಹಾರಿ ಸುಖದಮಂತೆಯೆ ಭಗವ- ॥

ದ್ಗೀತಾಗಾನಂ ಲೋಗರ ।
ಚೇತಃಕ್ಲೇಶಗಳ ಕಳೆದು ಶಾಂತಿಯ ಕುಡುಗುಂ

॥ ೪ ॥

ತೃತೀಯಷಟ್ಕ ಸಂಗ್ರಹ

ಆತ್ಮಾನಾತ್ಮವಿವೇಕಂ ।
ಸತ್ತ್ವಮಯಶ್ರದ್ಧೆ ಭಗವದರ್ಪಿತಜೀವಂ ॥
ತತ್ತ್ವಾಪ್ತಿಗೆ ಸಾಧನಮಿವು ।
ಮುಕ್ತಿಪದಂ ಜ್ಞಾನಮೆಂಬುದಂತಿಮಷಟ್ಕಂ ॥

ವಿವಿಧಮತಗಭೀರಂ ಸಾಮರಸ್ಯಪ್ರಕಾರಂ ।
ಗೃಹಿಯತಿಸಮುದಾರಂ ಸರ್ವಜೀವೋಪಚಾರಂ ॥
ಸುರನರಸಹಕಾರಂ ಸ್ವಾತ್ಮಸಾರ್ವಾತ್ಮ್ಯಸಾರಂ ।
ಭವಜಲನಿಧಿಪಾರಂ ಕೃಷ್ಣಗೀತಾವತಾರಂ ॥

ವೇಣುಸ್ವಾನಸ್ಫುರದಧರದಿಂ ಶಂಖನಿರ್ಘೋಷರೌದ್ರಂ ।
ಗೋಪೀವಸ್ತ್ರಾಹರಣಕರದಿಂ ಚಂಡಚಕ್ರಪ್ರಹಾರಂ ॥
ದ್ವಂದ್ವೈಶ್ವರ್ಯಂಗಳೊಳಮವನಿಂತಿರ್ದುಮದ್ವಂದ್ವಸತ್ತ್ವಂ ।
ಚಾಲಿಕ್ಕೆಮ್ಮಂ ನಿಜಚರಣಕಾವಾಸುದೇವಾಖ್ಯತೇಜಂ ॥

ಕಾಂಡತ್ರಯ ಸಂಗ್ರಹ

ಭಕ್ತಿ ತ್ರಿವಿಧಂ ಧರ್ಮ- ।
ವ್ಯಕ್ತಂ ಧ್ಯಾನಪ್ರಯುಕ್ತಮ್ ಆತ್ಮಜ್ಞಾನೋ- ॥
ಪಾತ್ತಮ್ ಅನುಕ್ರಮದಿಂ ಸಂ- ।
ಪ್ರೋಕ್ತಮಿದಧ್ಯಾಯಷಟ್ಕಕಾಂಡತ್ರಯದಿಂ ॥

ಸ್ವೀಯಮಧುರಸವೀಂಟಿ ಕಾಯಕೋಟಿಗಳಿಂದೆ ।
ಮಾಯೆಯೊಡನಾಡಿ ವಿಶ್ವದೊಳವಳ ನಖದಿಂ ॥

ಗಾಯವಡೆದಳುತಲೆಚ್ಚೆತ್ತು ತತ್ತ್ವವನರಸಿ ।
ಸಾಯುಜ್ಯವೆಳಸುತಿಹುದಾತ್ಮಂ ವಿಚಿತ್ರಂ ॥

ಮಾನುಷ್ಯಾಂತಃಕರಣಬಲದೌರ್ಬಲ್ಯಚಾಪಲ್ಯನಿಮ್ನೋ- ।
ತ್ತಾನೋತ್ತಾಲಂಗಳನರಿತು ಜೀವಾರ್ಹಸಾಹ್ಯಂಗಳಂ ಸಂ- ॥
ಧಾನಿಪ್ಪಾತಂ ಪರಮಪುರುಷಂ ಧರ್ಮರಕ್ಷೈಕದೀಕ್ಷಂ ।
ಸ್ವಾನಂದಾಸೇಚನಚಣ ಘನಶ್ಯಾಮಲಂ ಕೋಮಲಾತ್ಮಂ ॥

ಸೂಚನೆ

ಕಾಲವಿಪರ್ಯಾಸದಿ ಕಲಿ- ।
ಯಾಳಿಕೆಯಲಿ ವರ್ಣವೃತ್ತಿ ಗೃಹಸಂಕರದೊಳ್ ॥
ಬಾಳು ಗುರಿ ತಪ್ಪದಂದದಿ ।
ಚಾಲಿಸಲಿಹ ಬೆಳಕು ನಮಗೆ ಗೀತದೀಪಂ

॥ ೧ ॥

ಕಷ್ಟಂ ಬಹಿರಾಚಾರಂ ।
ದೃಷ್ಟಿಯೊಳಿರ್ಕಂತರಂಗ ಶುಚಿತೆಯದೆಂದುಂ ॥
ದುಷ್ಟಗಳ ನಡುವೆ ಭಗವ- ।
ನ್ನಿಷ್ಠೆಯೊಳಾತ್ಮವನು ನೆಲಸೆ ಗೀತಾಭ್ಯಾಸಂ

॥ ೨ ॥

ಸಾರಾಂಶ

ವರ್ಣವ್ಯವಸ್ಥೆಯ ಶೀರ್ಣಾವಸ್ಥೆ, ನೂತನ ಜೀವಿಕಾವೃತ್ತಿಗಳೊಡಗೂಡಿ ಬಂದಿರುವ ಸಮಸ್ಯೆಗಳು, ಅನ್ಯದೇಶಸಂಪರ್ಕಫಲಿತಗಳಾದ ಹಲವಾರು ಪ್ರಶ್ನೆಗಳು—ಇವುಗಳಿಗೆ ಪರಿಹಾರವು ಗೀತೆಯ ಜೀವನಾನ್ವಯದಿಂದ ದೊರೆಯಬಲ್ಲದು. ಇದು ಗೀತೆಯ ಪ್ರಯೋಜಕತೆಯ ವಿಷಯದಲ್ಲಿ ದೃಢ ವಿಶ್ವಾಸವನ್ನೂ, ಗೀತೆಯಲ್ಲಿಯ ಸರ್ವಲೋಕಕ್ಕೂ ಅನ್ವೇಯಗಳಾದ ಉಪದೇಶಗಳ ವಿಚಾರಪೂರ್ವಕ ಅರ್ಥಗ್ರಹಣವನ್ನೂ ಅಪೇಕ್ಷಿಸುತ್ತದೆ.

ಧರ್ಮತತ್ತ್ವಾಂಗೀಕಾರ, ಭೋಗಪರಿಮಿತಿ ಮೊದಲಾದ ಗೀತೆಯ ಮೂಲಬೋಧೆಗಳು ಸಮಸ್ತ ಮಾನವಲೋಕಕ್ಕೂ ಅನುಸಂಧಾನಾರ್ಹಗಳಾಗಿವೆ.

ರಾಜಕೀಯ ಅವ್ಯವಸ್ಥೆ, ಆರ್ಥಿಕ ಸ್ಪರ್ಧೆ, ಮಾಲಿಕ-ಕಾರ್ಮಿಕ ವಿರಸ, ದ್ರವ್ಯಾರ್ಜನೆಯ ಪ್ರಾಧಾನ್ಯ, ರಾಷ್ಟ್ರಾನ್ಯೋನ್ಯಘರ್ಷಣೆ: ಹೀಗೆ ಮನೋವಿಕ್ಷೇಪಕಾರಣಗಳು ಈ ಹೊತ್ತು ಅನೇಕವಾಗಿದ್ದರೂ ನ್ಯಾಯವಾದ ಜೀವಿಕಾಸಂಪಾದನೆ ಈಹೊತ್ತೂ ಅಸಾಧ್ಯವಲ್ಲ; ಭೋಗಪರಿಮಿತಿ, ಆರ್ಜವ, ಸ್ತ್ರೀಪುರುಷಸಂಬಂಧದ ನೀತಿನೈರ್ಮಲ್ಯ ಮೊದಲಾದವನ್ನು ಕಾಪಾಡಿಕೊಳ್ಳುವುದು ಗೀತಾನುಯಾಯಿಗಳಿಗೆ ಈಹೊತ್ತೂ ಸಾಧ್ಯವೂ ಅವಶ್ಯವೂ ಆಗಿದೆ.

ಗೀತೆಯು ಪೌರುಷಬೋಧಕವಾದದ್ದೆಂದು ಈ ಉಪನ್ಯಾಸಮಾಲಿಕೆಯಲ್ಲಿ ಮೇಲಿಂದಮೇಲೆ ಹೇಳಿದ್ದೇವಷ್ಟೆ? ಈ ಸಮಾಪನ ಪ್ರಕರಣದಲ್ಲಿ ನಮಗೆ ಅವಧಾರ್ಯವಾಗಿರುವುದು ಆ ಬೋಧೆಯೇ. ಭಕ್ತಿಪೂರ್ವಕವಾದ ಪೌರುಷವೇ ತಾರಕ; ಆ ಮಟ್ಟಿಗೆ ಆಧುನಿಕ ವಿಜ್ಞಾನದ ತತ್ತ್ವಶೋಧನಧೈರ್ಯವೂ ಜೀವನೋತ್ಸಾಹವೂ ನಮಗೆ ಗ್ರಾಹ್ಯಾಂಶಗಳಾಗಿವೆ.

ಪ್ರಕರಣ ೨೦

ಉಪಸಂಹಾರ

ಗೀತೆಯನ್ನು ಎರಡನೆಯ ಸಾರಿ ನೋಡಿದ್ದಾಯಿತು. ನಮ್ಮ ಉಪಯೋಗಕ್ಕಾಗಿ ಏನನ್ನು ಸಂಪಾದಿಸಿಕೊಂಡಹಾಗಾಯಿತು?

ನಾವು ತಿಳಿದುಕೊಳ್ಳಹೊರಟ ಶಾಸ್ತ್ರ ಯಾವುದೇ ಆಗಲಿ, ಕಲೆ ಯಾವುದೇ ಆಗಲಿ, ಅದರ ವ್ಯಾಸಂಗಕ್ಕೆ ಎರಡು ಬೇರೆ ಬೇರೆ ದಾರಿಗಳುಂಟು: ಒಂದು ತರ್ಕನಿಶ್ಚಯದ್ದು (Theory = ತಿಯೋರಿ); ಇನ್ನೊಂದು ಪ್ರಯೋಗ ನಿಶ್ಚಯದ್ದು (Practice = ಪ್ರ್ಯಾಕ್ಟಿಸ್). ನಮ್ಮ ನಡಿಗೆಗೆ ಎರಡು ಕಾಲು ಬೇಕಾಗಿರುವಂತೆ, ನಮ್ಮ ವಿದ್ಯಾರ್ಜನೆಗೆ ತರ್ಕ ಮತ್ತು ಪ್ರಯೋಗ—ಇವೆರಡೂ ಬೇಕಾದವು. ಎರಡೂ ಕೂಡಕೂಡಲೇ ನಡೆಯಬೇಕು. ಆದರೂ ಕೆಲಕೆಲವು ವಿದ್ಯೆಗಳಲ್ಲಿ ಸಾಮಾನ್ಯಜನಕ್ಕೆ ತರ್ಕಭಾಗಕ್ಕಿಂತ ಪ್ರಯೋಗ ಭಾಗ ಹೆಚ್ಚು ಮುಖ್ಯವಾಗುತ್ತದೆ. ಉದಾಹರಣೆಗೆ ಸಂಗೀತಶಾಸ್ತ್ರವನ್ನು ನೋಡೋಣ. 'ಸ' ಎಂದರೆ ಇಷ್ಟು ಸ್ಪಂದತರಂಗಗಳು, 'ರಿ' ಎಂದರೆ ಇಷ್ಟು ಸ್ಪಂದನಗಳು, ಅರ್ಧಾಕ್ಷರ ಎಂದರೆ ಇಷ್ಟು ಪರಿಮಾಣ, ಕಾಲಕ್ಷರ ಎಂದರೆ ಇಷ್ಟು—ಈ ಲೆಕ್ಕಾಚಾರಗಳನ್ನೆಲ್ಲ ತಿಳಿದಮೇಲಲ್ಲ ಹಾಡುವವನು ಹಾಡುವುದು. ಅವನು ಹಾಡಿದ ಮೇಲೆ ಲಕ್ಷಣಕಾರರು ಆ ವಿವರಗಳನ್ನು ಲೆಕ್ಕಮಾಡುತ್ತಾರೆ. ಛಂದಶ್ಶಾಸ್ತ್ರದಲ್ಲಿಯೂ ಹಾಗೆಯೇ. ವಾಲ್ಮೀಕಿಗಳು ಈ ವೃತ್ತವನ್ನು ಇಲ್ಲಿ ಹಾಕಬೇಕು ಎಂದು ಮಾತ್ರೆಗಳನ್ನೆಣಿಸಿ ರಚನೆ ಮಾಡಲಿಲ್ಲ. ಅವರಿಗೆ ತೋರಿದಂತೆ ರಚನೆಮಾಡಿದರು; ಆಮೇಲೆ ಛಂದೋವಿದರು ಅದರಲ್ಲಿ ಲಕ್ಷಣವನ್ನು ಹುಡುಕಿ ಹೀಗೆಂದು ಸಿದ್ಧಾಂತಮಾಡಿದರು. ಅವರ ಬಾಯಿಂದ ಹೊರಟ ವಾಕ್ಯ ಶ್ಲೋಕವಾಗಿತ್ತೆಂಬುದು ಅವರಿಗೆ ತಿಳಿದೇ ಇರಲಿಲ್ಲ. ಅವರು ಮಾತ್ರೆಗಳನ್ನು ಲೆಕ್ಕಮಾಡಿ ಆ ಮಾತುಗಳನ್ನಾಡಲಿಲ್ಲ. ಬ್ರಹ್ಮದೇವನು ಬಂದು "ಅಯ್ಯಾ, ನಿನ್ನ ಬಾಯಿಂದ ಹೊರಟು ಬಂದದ್ದು ಶ್ಲೋಕ, ಛಂದೋಬದ್ಧವಾದದ್ದು" ಎಂದು ಹೇಳಬೇಕಾಯಿತಂತೆ.

> ಶ್ಲೋಕ ಏವ ತ್ವಯಾ ಬದ್ಧಃ... ।
> ಮಚ್ಛನ್ದಾದೇವ... ॥

ಮೊದಲು ನಿರ್ಮಾಣ; ಆ ಬಳಿಕ ಲಕ್ಷಣ.

ಲಕ್ಷ್ಯ ಮೊದಲು, ಲಕ್ಷಣ ಆಮೇಲೆ—ಎಂದು ಶಾಸ್ತ್ರಪರಿಭಾಷೆಯಲ್ಲಿ ಹೇಳುತ್ತಾರೆ. ಲಕ್ಷ್ಯದಿಂದ ಲಕ್ಷಣವನ್ನು ನಿಷ್ಪತ್ತಿಮಾಡುವುದು ಸಂಪ್ರದಾಯ.

ಇನ್ನೊಂದು ದೃಷ್ಟಾಂತವನ್ನು ನೋಡೋಣ: ಪಾಕವಿದ್ಯೆ. ಮೊದಲು ಪಾಕಶಾಸ್ತ್ರ, ಆಮೇಲೆ ಭೋಜನವಲ್ಲ. ನಾವು ಪ್ರತಿದಿವಸವೂ ಊಟಮಾಡಿ ಸುಖಿಸುವ ಅಡಿಗೆ ರಾಸಾಯನಿಕತರ್ಕವನ್ನೋದಿದವರು ಮಾಡಿದ್ದಲ್ಲ; ಭೋಜನದಲ್ಲಿ ಪ್ರಯೋಗ ನೋಡಿ ಕಲಿತವರು ಮಾಡಿದ್ದು. ನಮ್ಮ ಮನೆಯ ವಿದ್ಯುದ್ದೀಪವು ವಿದ್ಯುಚ್ಛಾಸ್ತ್ರಜ್ಞರು ಹಾಕಿದ್ದಲ್ಲ. ಅಷ್ಟಿಷ್ಟು ಅನುಭವವುಳ್ಳ ಕಂಟ್ರ್ಯಾಕ್ಟರ್ ಕೆಲಸಗಾರ ಹಾಕಿದ್ದು. ಪ್ರತ್ಯಕ್ಷೋಪಯುಕ್ತಗಳಾದ ಎಲ್ಲ ವಿದ್ಯೆಗಳಲ್ಲಿಯೂ ಕಾರ್ಯಾನುಭವದಿಂದಲೇ ಶಾಸ್ತ್ರಸಾಧನೆ. ಈಜು ಕಲಿಯುವವನು ಜಲಬಲಶಾಸ್ತ್ರಗಳಲ್ಲಿ (Hydrostatics) ಪಂಡಿತನಾಗಿ ಆಮೇಲೆ ನೀರೊಳಗೆ ಕಾಲಿಡುತ್ತೇನೆನ್ನುವವನಲ್ಲ. ನೀರಿನಲ್ಲಿ ಬಿದ್ದು ಒದ್ದಾಡಿಯೇ, ಜಲತರ್ಕವನ್ನು ಓದದೆಯೇ, ಅವನು ತನಗೆ ತಕ್ಕಷ್ಟು ಜಲಸ್ವಭಾವವನ್ನು ಕಂಡುಕೊಳ್ಳುತ್ತಾನೆ. ತತ್ತ್ವವಿದ್ಯೆಯೂ ಅಂಥಾದ್ದೇ: ಇಲ್ಲಿಯೂ ಅನುಷ್ಠಾನವೇ ಅಧಿಕಾರ ಎಂದು ನನ್ನ ನಂಬಿಕೆ. ಈ ಗೋಖಲೆ ಸಂಸ್ಥೆಯಲ್ಲಿ ನಾವು ಅನುಷ್ಠಾನವನ್ನು ಉದ್ದೇಶದಲ್ಲಿ ಇಟ್ಟುಕೊಂಡಿರುವವರು. ನಮ್ಮ ಉದ್ದೇಶವು ತರ್ಕಪ್ರಧಾನವಾದ, —ವಾದಪ್ರಧಾನವಾದ, —ಶಾಸ್ತ್ರ ಗ್ರಂಥದ ಪಾಂಡಿತ್ಯವಲ್ಲ.

ಆತ್ಮಜ್ಞಾನಸಂಪಾದನೆಗೆ ಮೂರು ಸಾಧನಗಳು ಅವಶ್ಯವೆಂದು ಹಿಂದಿನವರ ಮತ: “ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ” ಶ್ರವಣವೆಂದರೆ ಕಿವಿಯಿಂದ ಕೇಳುವುದು. ಮನನವೆಂದರೆ ತತ್ತ್ವವನ್ನು ಕುರಿತು ಚಿಂತನೆಮಾಡುವುದು; ನಿದಿಧ್ಯಾಸನ ಎಂದರೆ ಸರ್ವದಾ ಆ ತತ್ತ್ವವನ್ನು ಸಂತತವಾಗಿ ಸ್ಮರಣೆಯಲ್ಲಿರಿಸಿಕೊಂಡು, ನಡವಳಿಕೆಯಲ್ಲಿ ಅದನ್ನು ಅನುಸಂಧಾನಿಸುವುದು. “ಶ್ರವಣಂ ಲವಣವತ್” ಎಂದು ಪೂರ್ವಿಕ ವಚನ. ಭೋಜನದಲ್ಲಿ ಲವಣಕ್ಕೆ ಎಷ್ಟು ಸ್ಥಾನವೋ ಆತ್ಮವಿದ್ಯಾಸಂಪಾದನೆಯಲ್ಲಿ ಶಾಸ್ತ್ರಶ್ರವಣಕ್ಕೆ ಅಷ್ಟೇ ಸ್ಥಾನ. ಅರ್ಥಮನನ ಅದಕ್ಕಿಂತ ಮುಖ್ಯ. ಇನ್ನೂ ಮುಖ್ಯವಾದದ್ದು ಜೀವನಾನ್ವಯ. ಗೀತಾಶಾಸ್ತ್ರದಲ್ಲಿ ಮುಖ್ಯವಾದದ್ದು ಗ್ರಂಥವಾಕ್ಯವಷ್ಟೇ ಅಲ್ಲ, ಭಾವಾನುಸಂಧಾನ ನಮಗೆ ಮುಖ್ಯ. ಈ ಸಂಸ್ಥೆಯಲ್ಲಿ ಸೇರಿರತಕ್ಕ ನಾವೆಲ್ಲರೂ ಗ್ರಂಥವನ್ನು ನಡವಳಿಕೆಯ ದೃಷ್ಟಿಯಿಂದಲೇ ನೋಡಹೊರಟಿರುವವರು. ಶಾಸ್ತ್ರರೀತಿಯ ವ್ಯಾಸಂಗ ನಮ್ಮ ದೃಷ್ಟಿಯಲ್ಲಿಲ್ಲ. ಗ್ರಂಥವನ್ನು

ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂಬುದೂ ನಮ್ಮ ಉದ್ದೇಶವಲ್ಲ. ನಮ್ಮನಮ್ಮ ಶಕ್ತಿಗೂ ನಮ್ಮನಮ್ಮ ಸಂದರ್ಭಕ್ಕೂ ಗ್ರಂಥ ಎಷ್ಟು ಮಾತ್ರ ಅನ್ವಯಿಸೀತೋ ಅಷ್ಟೇ ನಮ್ಮ ಲಕ್ಷ್ಯದಲ್ಲಿ ಮುಖ್ಯ ಭಾಗ. ಭಗವಂತನ ವಾಕ್ಯ ನಮಗೆ ಪ್ರೋತ್ಸಾಹಕೊಡುತ್ತದೆ:

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ॥ (೨-೪೬)

ಊರ ಸುತ್ತ ಕೆರೆ ಕುಂಟೆಗಳ ತುಂಬ ನೀರು: ಸಿಹಿನೀರು, ಉಪ್ಪುನೀರು, ತಿಳಿನೀರು, ಒಂಡುನೀರು. ಆದರೂ ನಾವು ಅದನ್ನೆಲ್ಲ ಉಪಯೋಗಿಸಲಾಗುತ್ತದೆಯೆ? ನಮ್ಮ ಮನೆಯ ಅಡಿಗೆಗೆ ಯಾವುದೋ, ನಮ್ಮ ಸ್ನಾನಪಾನಾದಿಗಳಿಗೆ ಎಷ್ಟೋ ಅದನ್ನು ಅಷ್ಟು ಮಾತ್ರ ನಾವು ತಂದುಕೊಳ್ಳುತ್ತೇವೆ.

ಶಾಸ್ತ್ರವು ಸಾವಿರ ಉಪದೇಶಗಳನ್ನು ಕೊಡುತ್ತದೆ; ಸಾವಿರ ತತ್ತ್ವಗಳನ್ನು ಚರ್ಚಿಸುತ್ತದೆ. ಅವೆಲ್ಲ ನಮ್ಮ ಶಕ್ತಿಗೆ ದೊರಕತಕ್ಕವಲ್ಲ. ಕೆರೆಯಲ್ಲಿ ನಮ್ಮನ್ನು ಸಾವಿರಸಲ ಮುಳುಗಿಸುವಷ್ಟು ನೀರಿದ್ದರೂ ನಾವು ಕುಡಿಯುವುದು ನಮ್ಮ ಬಾಯಾರಿಕೆ ತೀರಿಸುವಷ್ಟನ್ನು ತಾನೆ? ಸಾವಿರ ಉಪದೇಶಗಳಲ್ಲಿ ನಮಗೆ ಹೊಂದುವುದು ಒಂದೋ, ಎರಡೋ. ಅಷ್ಟನ್ನು ನಾವು ಕಂಡುಕೊಂಡು ಸಾಧಿಸುವ ಪ್ರಯತ್ನ ಮಾಡಿದರೆ ಮುಂದೆ ಮತ್ತಷ್ಟನ್ನು ಸಾಧಿಸಿಕೊಳ್ಳುವ ಯೋಗ್ಯತೆ ನಮಗೆ ಕ್ರಮೇಣ ಬಂದೀತು. ನಮ್ಮ ಪಾಲಿಗೆ ಬಂದದ್ದು ಕೊಂಚವೆಂದು ನಾವು ಕೊರತೆಪಡಬೇಕಾದದ್ದಿಲ್ಲ. ಕೊಂಚವಾದರೂ ಬಂತಲ್ಲ ಎಂದು ಉತ್ಸಾಹಪಡಬೇಕು.

ನಾವು ತರ್ಕಾರ್ಥಿಗಳಲ್ಲವಾದರೆ ಮೋಕ್ಷಾರ್ಥಿಗಳೂ ಅಲ್ಲ—ಸದ್ಯಕ್ಕಂತೂ ಅಲ್ಲ. ನಾವೆಲ್ಲ ಸಂಸಾರಿಗಳು. ನಮ್ಮ ಈಹೊತ್ತಿನ ಸಂದರ್ಭದಲ್ಲಿ ನಾವು ಮಾಡಬೇಕಾದದ್ದೇನು—ಎಂಬುದನ್ನು ಕಂಡುಕೊಂಡು ಮಾಡಿದರೆ ಮೋಕ್ಷಯೋಗ್ಯತೆ ಉತ್ತರೋತ್ತರ ತಾನಾಗಿ ಬರುತ್ತದೆ. ತೋಟಗಾರನು ಗಿಡಕ್ಕೆ ಪಾತಿ ಕೊತ್ತಿ, ನೀರೆರೆದು, ಕಳೆ ತೆಗೆಯುತ್ತಿದ್ದರೆ ಸಾಕು; ಹೂವು ಹಣ್ಣುಗಳಿಗಾಗಿ ಅವನು ಬೇರೆ ಶ್ರಮ ಪಡಬೇಕಾಗಿಲ್ಲ. ಹೂವು ಹಣ್ಣುಗಳನ್ನು ತರುವುದು ಋತುಗತಿ; ಅದು ಸ್ವತಃ ಬರುತ್ತದೆ. ಮೋಕ್ಷ ಬರುವುದೂ ಹಾಗೆಯೇ. ನಮ್ಮ ಧರ್ಮಾಭ್ಯಾಸವು ಪಕ್ವವಾದಂತೆ ನಮಗೆ ಮೋಕ್ಷಫಲ. ನಮ್ಮ ಶ್ರದ್ಧಾಸಕ್ತಿಗಳು ಮೊದಲು ಅಭ್ಯಾಸದಲ್ಲಿರಲಿ. ಅಭ್ಯಾಸವು ತಾಳ್ಮೆಯನ್ನಪೇಕ್ಷಿಸುತ್ತದೆ. ಆತುರಪಟ್ಟರೆ ಅಭ್ಯಾಸ ಕೆಟ್ಟೀತು. ಸಂತತವಾದ ಧರ್ಮಾಭ್ಯಾಸವಿಲ್ಲದೆ ಮೋಕ್ಷಯೋಗ್ಯತೆಯಿಲ್ಲ.

ಗೀತೋಪದೇಶವನ್ನು ನಮ್ಮ ದಿವಸದ ಲೋಕಪರಿಸ್ಥಿತಿಯಲ್ಲಿ ಅಭ್ಯಾಸಕ್ಕೆ ತಂದುಕೊಳ್ಳುವುದು ಹೇಗೆ? ಈ ಹೊತ್ತಿನ ನಮ್ಮ ಸಮಾಜ ಸಂದರ್ಭಗಳು ಕೃಷ್ಣಾರ್ಜುನರ ಕಾಲದ ಸಂದರ್ಭಗಳಿಂದ ಬಹುವಿಧಗಳಲ್ಲಿ ಬಹುವಾಗಿ ವ್ಯತ್ಯಾಸವಾಗಿದೆ. ಆ ವ್ಯತ್ಯಾಸ ಸ್ಥಾನಗಳು ಮುಖ್ಯವಾಗಿ ನಾಲ್ಕು:

1. ಚಾತುರ್ವರ್ಣ್ಯವ್ಯವಸ್ಥೆಯ ಶೈಥಿಲ್ಯ.
2. ಜೀವಿಕಾವೃತ್ತಿಯ ಜಟಿಲಸಂಬಂಧಗಳು.
3. ಸ್ತ್ರೀಜನದ ಸ್ಥಾನಕರ್ತವ್ಯಗಳು.
4. ಪ್ರಾಶ್ನಿಕ ಬುದ್ಧಿವೃತ್ತಿ.

ಚಾತುರ್ವರ್ಣ್ಯವ್ಯವಸ್ಥೆಯು ನಮ್ಮ ಕಾಲದಲ್ಲಿ ನಷ್ಟವಾಗಿಲ್ಲವಾದರೂ ಬಹುಮಟ್ಟಿಗೆ ಶಿಥಿಲವಾಗಿದೆ. ಅದು ನಿಲ್ಲುತ್ತದೆಂಬ ಭರವಸೆಯೇನೂ ತೋರುತ್ತಿಲ್ಲ. ಹಿಂದಿದ್ದ ಜೀವಿಕಾವೃತ್ತಿಗಳು ಈಗಿಲ್ಲ. ಜೀವಿಕೆಯದು ಬಹಳ ದೊಡ್ಡ ಪ್ರಶ್ನೆಯಾಗಿದೆ. ಮಹಾಭಾರತದ ಕಾಲದಿಂದ ಈಗ ಸುಮಾರು ನೂರುವರ್ಷಗಳ ಹಿಂದಿನವರೆಗೂ ಸ್ತ್ರೀಯರಿಗೆ ಇದು ಯುಕ್ತವಾದ ಸ್ಥಾನ ಎಂದು ಒಂದು ಸಂಪ್ರದಾಯ ಬಂದಿತ್ತು. ಈಗ ಆ ಸಂಪ್ರದಾಯ ಬಹುಮಟ್ಟಿಗೆ ಸಡಲಿದೆ. ಅನೇಕ ಕುಟುಂಬಗಳಲ್ಲಿ ಹೆಂಗಸರು ಸ್ಕೂಲು ಮಿಸ್ಟ್ರೆಸ್ಸುಗಳಾಗಿಯೋ ಕಾರ್ಖಾನೆಗಳಲ್ಲಿಯೋ ದುಡಿದು ಬರುತ್ತಾರೆ. ಕುಟುಂಬ ಪೋಷಣೆ ಪ್ರಾಮಾಣಿಕವಾಗಿ ನಡೆಯುತ್ತಿದೆ ಅವರಿಂದ. ಇದನ್ನು ಎಲ್ಲ ದೇಶಗಳಲ್ಲಿಯೂ ಕಾಣಬಹುದಾಗಿದೆ. ಇದು ತಪ್ಪೆಂದು ಹೇಳೋಣವೊ? ಹಿಂದಿನ ಕಾಲದ ರಾಜಕುವರಿಯರು ಸೂರ್ಯನನ್ನೇ ಕಂಡಿರಲಿಲ್ಲವಂತೆ! “ಅಸೂರ್ಯಂ ಪಶ್ಯಾ” ಎಂಬುದು ಅವರಿಗಿದ್ದ ಹೆಸರು. ಹಾಗೆ ಅಂತಃಪುರಗಳಲ್ಲಿ ಬೆಳೆದರು ಅವರು. ಈ ಹೊತ್ತು ಅದು ಸಾಧ್ಯವೋ? ಇಲ್ಲ. ಈಹೊತ್ತಿನ ಪ್ರಾಶ್ನಿಕಬುದ್ಧಿವೃತ್ತಿ ನಾಲ್ಕನೆಯ ಅಂಶ. ಪದ್ಮಾಸನ ಹಾಕಿ ಕುಳಿತುಕೊಳ್ಳಬೇಕೆಂದರೆ, ಏಕೆ?—ಎನ್ನುತ್ತೇವೆ. ಸ್ನಾನಮಾಡಿ ಕಾಫಿ ಕುಡಿಯಬೇಕೆಂದರೆ, ಕಾಫಿ ಕುಡಿದೇ ಏಕೆ ಸ್ನಾನ ಮಾಡಬಾರದು?—ಎನ್ನುತ್ತೇವೆ. ನಮ್ಮ ಪೂರ್ವಿಕರಿಗೆ ಈ ಪ್ರಾಶ್ನಿಕಪ್ರವೃತ್ತಿ ಇರಲಿಲ್ಲವೊ? ಇತ್ತು; ಆದರೆ ಹೇಳಿದ್ದನ್ನು ಅವರು ಒಂದು ಘಟ್ಟದವರೆಗೆ ಪ್ರತಿಪ್ರಶ್ನೆಯಿಲ್ಲದೆ ಅಂಗೀಕಾರಮಾಡುತ್ತಿದ್ದರು. ಪ್ರತಿಯೊಂದಕ್ಕೂ ಕಾರ್ಯಕಾರಣ ಸಂಬಂಧವನ್ನು ತೋರಿಸಬೇಕೆಂದು ಈ ಹೊತ್ತಿನ ಪ್ರಾಶ್ನಿಕಬುದ್ಧಿ ಅಪೇಕ್ಷಿಸುತ್ತದೆ.

ಈ ಎಲ್ಲ ಬದಲಾವಣೆಗಳೂ ನಮ್ಮ ದೇಶಕ್ಕೆ ಯೂರೋಪಿನೊಡನೆ ಉಂಟಾದ ಸಂಪರ್ಕದ ಫಲಿತಾಂಶಗಳೆಂಬುದಕ್ಕೆ ಸಂದೇಹವಿರದು. ಆದರೆ ಆ ವಾದದಿಂದ ನಮ್ಮ ಇಂದಿನ ಕರ್ತವ್ಯ ನಿರ್ಣಯಕ್ಕೆ ಯಾವ ಸಹಾಯವೂ ಆಗದು. ಇಂಡಿಯ-ಯೂರೋಪುಗಳ ಸಂಪರ್ಕ ಬೆಳೆದದ್ದಕ್ಕಾಗಿ ಯಾರೂ ಯಾರನ್ನೂ ಆಕ್ಷೇಪಿಸುವಂತಿಲ್ಲ. ಇತರ ದೇಶಗಳ ಚರಿತ್ರೆಯಲ್ಲಿ ಇಂಥ ಘಟನೆಗಳು ಎಷ್ಟೆಷ್ಟೋ ಆಗಿವೆ. ಮಾನವನ ಬುದ್ಧಿಪ್ರಗತಿಯ ಅವಸರದಲ್ಲಿ, ಪೌರುಷ ಸಾಹಸದ ಅವಸರದಲ್ಲಿ, ಇಂಥ ಸಂಘಟನೆಗಳು ಯಾರೊಬ್ಬರ ಪೂರ್ವಾಲೋಚನೆಯೂ ಇಲ್ಲದೆಯೇ ಹೇಗೆ ಹೇಗೋ ನಡೆಯುತ್ತವೆ. ಅವನ್ನು ದೈವತಂತ್ರವೆಂದು ಹೇಳಬಹುದು. ದೈವಸಂಕಲ್ಪದಿಂದಲೋ, ಜನಜನಾಂಗಗಳ ಪೂರ್ವಕರ್ಮ ಋಣಪ್ರಭಾವದಿಂದಲೋ, ಪೌರುಷ ಸಾಹಸ ವಿಕಾಸದಿಂದಲೋ, ಮತ್ತೆ ಹೇಗೋ ನಮಗೆ ಅನ್ಯದೇಶೀಯ ಸಂಪರ್ಕ ಬಂದದ್ದಂತೂ ಆಯಿತು. ಅದು ನಮ್ಮ ಜನದ ಅಭಿಪ್ರಾಯ ಸಂಪ್ರದಾಯಗಳಲ್ಲಿ ಬದಲಾವಣೆ ತಂದಿರುವುದೂ ದಿಟ. ನಾವು ಈ ವಾಸ್ತವ ಸಾಂಕರ್ಯಸಂಗತಿಯನ್ನು ಅಂಗೀಕರಿಸಬೇಕಾದದ್ದು ಯುಕ್ತ. ಗೊಣಗಾಡಿ ಫಲವಿಲ್ಲ; ಅದು ಉಚಿತವೂ ಅಲ್ಲ. ದೈವಸಂಕಲ್ಪವನ್ನು ನಾವು ಕಾಣೆವು. ದೈವದಲ್ಲಿ ಶ್ರದ್ಧೆಯಾದರೋ ನಮಗೆ ಕರ್ತವ್ಯ.

ಹಾಗೆ ಉಂಟಾಗಿರುವ ಅನ್ಯದೇಶಸಂಪರ್ಕ ಈಗ ಮುಗಿಯುವಂತೆಯೂ ಇಲ್ಲ. ಅದು ಇನ್ನೂ ಬೆಳೆದು ಹರಡುವ ಸೂಚನೆ ತೋರುತ್ತಿದೆ. ಇದು ಅನಿವಾರ್ಯವೆಂಬುದನ್ನು ನಾವು ಗ್ರಹಿಸಬೇಕು. ಇಂಡಿಯ ದೇಶವು ನಮ್ಮ ರಾಜರತ್ನಂ ಕೀರ್ತಿಸಿರುವ ಪುಟ್ನಂಜನು ಹಂಬಲಿಸಿದ ಹಾಗೆ—

ಇದ್ದದ್ರಲ್ಲಾಯಾಗಿ, ನಮ್ಮಷ್ಟಕ್ನಾವಾಗಿ—

ಮಿಕ್ಕ ಜಗತ್ತಿನಿಂದ ಬೇರೆಯಾಗಿ ಇರುವುದು ಇನ್ನು ಮುಂದೆ ಸಾಧ್ಯವಿಲ್ಲ. ದೇಶದೇಶಾಂತರಗಳ ಪ್ರಭಾವದ ಒತ್ತಾಯ ಇಂಡಿಯದ ಮೇಲೆ ಹೆಚ್ಚುಹೆಚ್ಚಾಗುತ್ತದೆ. ಅದನ್ನು ನಾವು ಅಂಗೀಕರಿಸಲೇಬೇಕಾಗಿದೆ.

ಇಂಥ ಧರ್ಮಸಂಕಟದಲ್ಲಿ ನಮ್ಮ ಭಗವದ್ಗೀತೆ ಪರಿಹಾರ ಕೊಡಲಾರದೆ ಹೋದರೆ ಇನ್ನ್ಯಾವ ಗ್ರಂಥವೂ ಕೊಡಲಾರದೆಂದು ತೋರುತ್ತದೆ. ಆ ಗ್ರಂಥಕ್ಕೂ ನಮ್ಮ ಈಹೊತ್ತಿನ ನಡವಳಿಕೆಗೂ ಇರುವ ಸಂಬಂಧವನ್ನು ನಾವು ವಿಚಾರಮಾಡಿ ನೋಡಬೇಕು. ಗೀತೆಯ ತತ್ತ್ವೋಪದೇಶವು

ಸಮಸ್ತಮಾನವಲೋಕಕ್ಕೂ ಅನ್ವಯಿಸಬೇಕಾದರೆ, ಇಂಡಿಯವು ಅನ್ಯದೇಶಸಂಪರ್ಕಾವಕಾಶವನ್ನು ಗೀತಾನೀತಿಯ ಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ವಿದೇಶಸಂಪರ್ಕವನ್ನು ತಪ್ಪಿಸಿಕೊಳ್ಳುವುದಂತೂ ಸಾಧ್ಯವಿಲ್ಲ; ಆದರೆ ಅದನ್ನು ಹದ್ದಿನಲ್ಲಿರಿಸಿ ನಮ್ಮ ಹಿತನಿರ್ಣಯದಂತೆ ವಿದೇಶಗಳನ್ನು ತಿದ್ದಿ ತಿರುಗಿಸಿಕೊಳ್ಳುವುದು ಅಸಾಧ್ಯವಾಗದು. ಅದು ಸಾಧ್ಯ, ಆದರೆ ಕಷ್ಟಸಾಧ್ಯ. ಆ ಪ್ರಯತ್ನಕ್ಕೆ ನಮಗೆ ಮೊದಲು ಇರಬೇಕಾದ ಸಿದ್ಧತೆ ಗೀತೋಪದೇಶದ ಉಪಯುಕ್ತತೆಯ ವಿಷಯದಲ್ಲಿ ನಮ್ಮ ಮನೋನಿಶ್ಚಯ.

ಗೀತೆಯು ಏಕದೇಶೀಯವಾದ ಗ್ರಂಥವಲ್ಲ. ಇದು ಸಮಸ್ತ ಮನುಷ್ಯಲೋಕಕ್ಕೂ ಉಪಕಾರಕವಾದದ್ದು; ಎಲ್ಲ ದೇಶಗಳವರೂ, ಎಲ್ಲ ಅವಸ್ಥೆಗಳಲ್ಲಿರತಕ್ಕವರೂ ಈ ತತ್ವಗಳನ್ನು ಮನ್ನಣೆಮಾಡಬೇಕು, ಅವರಿಗೂ ಈ ತತ್ತ್ವಗಳ ಅನುಸಂಧಾನದಿಂದ ಜೀವನ ಉತ್ತಮವಾಗುತ್ತದೆ—ಎಂಬುದು ನಮ್ಮ ನಂಬಿಕೆ. ಸಮಸ್ತಮಾನವಲೋಕಕ್ಕಾಗಿ ಆದ ಗ್ರಂಥ ಇದು. ಬ್ರಾಹ್ಮಣರಿಗೆ ಮಾತ್ರವೆಂದಾಗಲಿ, ಭಾರತಕ್ಕೆ ಮಾತ್ರವೆಂದಾಗಲಿ, ಹುಟ್ಟಿದ ಗ್ರಂಥವಲ್ಲ ಇದು. ಬರಿಯ ಹಿಂದೂಗಳನ್ನೇ ಉದ್ದೇಶದಲ್ಲಿಟ್ಟುಕೊಂಡು ಭಗವಂತ ಉಪದೇಶಮಾಡಿದ್ದಾನೆಂದರೆ, ಭಗವಂತನಿಗೆ ವೈಷಮ್ಯವನ್ನೂ ಪಕ್ಷಪಾತವನ್ನೂ ಆರೋಪ ಮಾಡಿದಂತಾಗುತ್ತದೆ. ಕೆಲವರಿಗೆ ಉಪದೇಶಮಾಡಕೂಡದೆಂದೇನೋ ಭಗವಂತನು ಹೇಳಿದ್ದಾನೆ—

> ಇದಂ ತೇ ನ+ಅತಪಸ್ಕಾಯ
> ನ+ಅಭಕ್ತಾಯ ಕದಾಚನ ॥ (೧೮–೬೭)

ಎಂದು. ಈ ವಿನಾಯಿತಿಯೂ ಎಲ್ಲ ದೇಶಗಳ ಜನರಿಗೂ ಅನ್ವಯಿಸತಕ್ಕದ್ದೇ ಆಗಿದೆ. ದೇಶಕುಲಗಳಾವುದಾದರಾಗಲಿ, ತಪಸ್ಸಿದ್ದರೆ ಸಾಕು; ಭಕ್ತಿಯಿದ್ದರೆ ಸಾಕು. ಅಂಥವರಿಗೆಲ್ಲ ಗೀತೆಯನ್ನು ಹೇಳಬೇಕಾದದ್ದೇ ಸರಿ. ಅಬ್ರಾಹ್ಮಣರಿಗೆ ಹೇಳಕೂಡದೆಂದು ಭಗವಂತ ವಿಧಿಸಿಲ್ಲ. ಪ್ರತ್ಯುತ, ಎಲ್ಲರಿಗೂ ಹೇಳಬೇಕಾದದ್ದೆಂದೇ ಆಶಯ. ಆದದ್ದರಿಂದ ಪರದೇಶಗಳ ಸಂಪರ್ಕವನ್ನು ನಾವು ಒಪ್ಪಿಕೊಳ್ಳಬೇಕೆಂದು ಸಿದ್ಧವಾಗುತ್ತದೆ. ಗೀತೆಯ ಸರ್ವಮಾನವೋಪಯುಕ್ತ ಭಾಗವನ್ನು ಮನಸ್ಸಿಗೆ ವಿಶದಪಡಿಸಿಕೊಳ್ಳಬೇಕು. ಸಮಸ್ತ

ಮನುಷ್ಯವರ್ಗಕ್ಕೂ ಅನ್ವಯಿಸಬಹುದಾದ ಭಾಗ ಅದರಲ್ಲಿ ಕೆಲವಿದೆ; ಕೆಲವರಿಗೆ ಮಾತ್ರ ಅನ್ವಯಿಸಬಹುದಾದ ಭಾಗ ಕೆಲವಿದೆ.

ಕಾಲವಿಚಾರ

ಕಾಲಸ್ಥಿತಿಯ ವ್ಯತ್ಯಾಸವನ್ನು ನಾವು ಬೇರೆ ಒಂದು ದೃಷ್ಟಿಯಿಂದಲೂ ನೋಡುವುದು ಅವಶ್ಯವಾಗಿದೆ. ಈ ಗೀತೋಪನ್ಯಾಸಮಾಲಿಕೆಯ ಉಪೋದ್ಘಾತಭಾಗದಲ್ಲಿ ಕಾಲ ಮಹಿಮೆಯನ್ನು ಕುರಿತು ಒಂದಿಷ್ಟು ವಿಚಾರಮಾಡಿದೆವು. ಅದನ್ನು ಬೇರೆಕಡೆ ನೋಡಬಹುದು (ಪರಿಶಿಷ್ಟ ೬). ಅದನ್ನು ಈಗ ಜ್ಞಾಪಕಕ್ಕೆ ತಂದುಕೊಳ್ಳೋಣ. ಕಾಲವೆಂದರೆಯೇ ಬದಲಾವಣೆ. ಒಂದಾನೊಂದು ಪದಾರ್ಥದಲ್ಲಿ ಸಹಜವಾಗಿ ಅಂತರ್ಭೂತವಾಗಿರುವ ಗುಣಶಕ್ತಿಗಳು ಸ್ವತಃ ಬಹಿರ್ಭೂತವಾಗಲು ಅವಶ್ಯವಾದ ಕ್ಷಣವಿಕ್ಷಣಾನುಕ್ರಮವೇ ಕಾಲ. ಕಾಯನ್ನು ಹಣ್ಣಾಗಿಸುವ ನಿಮಿಷಪ್ರವಾಹವೇ ಕಾಲ. ಮಾವಿನಕಾಯನ್ನು ಗಿಡದಿಂದ ಬಿಡಿಸಿ ಒಂದು ಕಡೆ ಬೆಚ್ಚನೆ ಇರಿಸಿದ್ದರೆ ಅದರಲ್ಲಿಯ ಹುಳಿಕಣಗಳು ತಾವೇತಾವಾಗಿ ಸಿಹಿಕಣಗಳಾಗುತ್ತವೆ. ಇದೇ "ಮಾಗುವುದು" ಎಂದು ಅವಸ್ಥಾಪರಿವರ್ತನೆ. ಇದಕ್ಕೆ ಯಾರ ಪ್ರಯತ್ನವೂ ಬೇಕಿಲ್ಲ. ಪ್ರಕೃತಿಯೇ ಅದನ್ನು ಮಾಡಿಸುತ್ತದೆ. ಕಾಯನ್ನು ಮಾಗಹಾಕಿದವರಿಂದ ಅದು ಬೇಡುವುದು ಸುಮ್ಮನಿರೋಣವನ್ನ. ಪರಿಪಕ್ವಕ್ಕೆ ಬೇಕಾದದ್ದು ಇತರ ಜನರ ಅಪ್ರವೇಶ (Non-interference). ಇತರರು ತಮ್ಮಷ್ಟಕ್ಕೆ ಉಸಿರನ್ನೆಣಿಸಿಕೊಳ್ಳುತ್ತಿದ್ದರೆ, ಕಣ್ಣುರೆಪ್ಪೆಗಳ ಬಡಿತವನ್ನೆಣಿಸಿಕೊಳ್ಳುತ್ತಿದ್ದರೆ, ಕಾಯಿ ತಾನಾಗಿ ಹಣ್ಣಾಗುತ್ತದೆ. ಅದನ್ನು ಇನ್ನೂ ಹಾಗೆಯೇ ಬಿಟ್ಟರೆ ಅದು ಕೊಳೆತು ಕೆಟ್ಟ ವಾಸನೆ ಬೀರುತ್ತದೆ. ಈ ನೈಜಪರಿಣಾಮಕ್ರಮದ ಅವಕಾಶವೇ ಕಾಲ.

ಹೀಗೆ ಕಾಲವ್ಯತ್ಯಾಸವೆಂಬುದು ವಾಸ್ತವವಾಗಿ ಲೋಕಸ್ವಭಾವದಲ್ಲಿ ಅಡಗಿಕೊಂಡಿರುವ ಗುಣಗಳ ಮತ್ತು ಶಕ್ತಿಗಳ ನೈಜವಿಕಾಸವೇ ಹೊರತು ಬೇರೆ ಹೊರವಸ್ತುವೋ ಹೊರಶಕ್ತಿಯೋ ಯಾವುದೂ ಅಲ್ಲ. ಯೂರೋಪ್ ಅಮೇರಿಕಗಳೂ ಇಂಡಿಯವೂ ಪರಸ್ಪರ ಸಮೀಪಕ್ಕೆ ಬಂದಿರುವುದೂ ಪರಸ್ಪರ ಪ್ರಭಾವಕಾರಿಗಳಾಗಿರುವುದೂ ಮನುಷ್ಯ ಸ್ವಭಾವದ ನೈಜವಿಕಾಸದ ಫಲಿತಾಂಶ. ವಿಶ್ವಮಾನವನ ಸ್ವಭಾವದಲ್ಲಿ ಅಂತರ್ಗತಗಳಾಗಿದ್ದ ಪ್ರವೃತ್ತಿ ಬೀಜಗಳು ತಾವೇ

ತಾವಾಗಿ ಬಲಿತು ಬಹಿರ್ಗತಗಳಾಗುತ್ತಿವೆ. ಇದು ತತ್ತ್ವವಿಚಾರದಿಂದ ತೋರಿಬರುವ ಲೋಕಸಂದರ್ಭವಿವರಣೆ.

ಹೀಗೆ ಇಂಡಿಯ ದೇಶದ ಜನರ ಜೀವನರೀತಿಯಲ್ಲಿ ಉಂಟಾಗಿರುವ ಬದಲಾವಣೆಗಳು ಕಾಲ ಮತ್ತು ಪ್ರಕೃತಿ—ಈ ಎರಡರ ನಿರಂತರವಾದ ಪ್ರಭಾವದಿಂದ ಉತ್ಪನ್ನವಾದವೇ ಹೊರತು ಅದಕ್ಕಾಗಿ ನಾವು ಯಾವ ಒಂದು ಜನವನ್ನಾಗಲಿ ಜವಾಬ್ದಾರರೆಂದು ಎಣಿಸತಕ್ಕದ್ದಲ್ಲ. ಜನಜನಾಂಗಗಳ ಪರಸ್ಪರ ಪ್ರಭಾವಗಳನ್ನೂ ತತ್ಪರಿಣಾಮಗಳನ್ನೂ ಅಪೌರುಷೇಯವೆಂದೇ ಭಾವಿಸುವುದು ಯುಕ್ತವೆನ್ನಿಸುತ್ತದೆ. ಋತುವ್ಯತ್ಯಾಸ ಹೇಗೋ ಲೋಕ ವ್ಯತ್ಯಾಸಗಳೂ ಹಾಗೆಯೇ ಮನುಷ್ಯಕೃತಗಳಲ್ಲ, ಸ್ವಾಭಾವಿಕಗಳು. ಋತುಪರಿವರ್ತನೆಗೆ ತಕ್ಕಂತೆ ಆಹಾರವಸ್ತ್ರವಿಹಾರಗಳನ್ನು ಬದಲಾಯಿಸಿಕೊಳ್ಳುವುದು ಮನುಷ್ಯವಿವೇಕಕ್ಕಿರುವ ಕರ್ತವ್ಯ. ಅದರಂತೆಯೇ ಜೀವನಸಂದರ್ಭಗಳಲ್ಲಿ ವ್ಯತ್ಯಾಸಾವಶ್ಯಕತೆಗಳು ಕಂಡುಬಂದಾಗ ಯಾವುದನ್ನಂಗೀಕರಿಸಬೇಕು, ಎಷ್ಟುಮಾತ್ರ ಅಂಗೀಕರಿಸಬೇಕು—ಎಂಬುದನ್ನು ಕಂಡುಕೊಳ್ಳುವುದು ನಮ್ಮ ವಿವೇಕಕ್ಕಿರುವ ಕರ್ತವ್ಯ. ಪಾಶ್ಚಾತ್ಯರ ಸಂಪರ್ಕದ ಕಾರಣದಿಂದ ನಾವು ನಮ್ಮೊಳಗೆ ಮಾಡಿಕೊಳ್ಳಬೇಕಾದ ತಿದ್ದುಪಾಟುಗಳು ಯಾವುವು? ನಮ್ಮ ಸಂಪ್ರದಾಯಗಳಲ್ಲಿ ಯಾವಯಾವುದನ್ನು ನಾವು ಬಿಡದೆ ಉಳಿಸಿಕೊಂಡು, ಪಾಶ್ಚಾತ್ಯರಲ್ಲಿ ನಾವು ಉಂಟುಮಾಡಬೇಕಾದ ತಿದ್ದುಪಾಟುಗಳು ಯಾವುವು? ಹೀಗೆ ಸ್ವಪರಿಷ್ಕರಣ, ಅನ್ಯಪರಿಷ್ಕರಣಗಳೆರಡೂ ಅವಶ್ಯವೆಂದು ತೋರುತ್ತದೆ. ಆ ಪರಿಷ್ಕರಣದ ಮಾರ್ಗವನ್ನು ಕಂಡುಕೊಳ್ಳುವುದಕ್ಕೆ ನಮಗೆ ಬೇಕಾದ ಬೆಳಕು ಭಗವದ್ಗೀತೆಯಿಂದ ದೊರೆಯುವುದಾಗಿದೆ. ಇಂಥ ವಿಷಮವಾದ ಸಂಧಿಕಾಲದಲ್ಲಿ ಗೀತೆ ನಮಗೆ ಪ್ರಯೋಜಕವಾಗದೆಹೋದರೆ ಅದರ ಮಹತ್ತ್ವಕ್ಕೆ ಊನಬಂದಂತೆಯೇ ಸರಿ.

***

ಮೇಲೆ ಹೇಳಿದ ನಾಲ್ಕು ಪ್ರಕೃತಪ್ರಶ್ನೆಗಳಿಗೆ ಗೀತೆಯನ್ನು ಅನ್ವಯಿಸಿಕೊಳ್ಳುವುದು ಹೇಗೆ ಎಂಬುದನ್ನು ಆಲೋಚಿಸುವುದಕ್ಕೆ ಪೂರ್ವಭಾವಿಯಾಗಿ ಗೀತೋಪದೇಶದ ಸಾರಾಂಶವನ್ನು ಈಗ ಜ್ಞಾಪಕಕ್ಕೆ ತಂದುಕೊಳ್ಳುವುದು ಅವಶ್ಯ.

ಗೀತೋಪದೇಶದ ಸಾರಾಂಶವನ್ನು ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ, ಆ ಮಾತು ಜೀವಸಂಸ್ಕಾರ. ಜೀವವನ್ನು ಪರಿಶೋಧಿಸುವುದು ಮತ್ತು ಜೀವವನ್ನು ಉತ್ತಮ ದಶೆಗೆ ತರುವುದು—ಇದನ್ನು ಕಲಿಸುವುದು ಗೀತೆಯ ಮುಖ್ಯೋದ್ದೇಶ. ಜೀವ ಪ್ರಗತಿ ಎಂದರೂ ಜೀವೋತ್ಕರ್ಷ ಎಂದರೂ ಇದೇ: ಜೀವಕ್ಕೆ ಅನಾದಿಯಾಗಿ ಬಂದು ಮುಸುಕಿರುವ ಮಾಯಾಮೋಹಗಳ ಪೊರೆಯನ್ನು ಕಳಚಿ, ಅದಕ್ಕೆ ಪರಮಾತ್ಮದರ್ಶನಾರ್ಹತೆಯನ್ನು ಕೊಡುವುದು. ಇದೇ ಧರ್ಮ. ಗೀತೆಯು ಧರ್ಮತತ್ತ್ವವನ್ನು ಕುರಿತ ಗ್ರಂಥ. ಜೀವನ ಪ್ರಾಕೃತಮಲಗಳು ಹಿಂದಿನಿಂದ ಬಂದವು. ಈ ಸ್ಥಿತಿ ಹೇಗೆ ಬಂತೆಂದು ವಿಚಾರ ಮಾಡಿ ಪ್ರಯೋಜನವಿಲ್ಲ. ಈ ಸ್ಥಿತಿಯಿಂದ ಬಿಡುಗಡೆ ಹೇಗೆಂದು ಯೋಚನೆ ಮಾಡಬೇಕು.

ಜೀವಕ್ಕೆ ಈಗಿಗಿಂತ ಉತ್ತಮವಾದ ಸ್ಥಿತಿಯನ್ನು ನಾವು ಸಂಪಾದಿಸಿಕೊಳ್ಳಲಾಗುತ್ತದೆ—ಅದು ಧರ್ಮನಿಷ್ಠೆಯಿಂದ. ಇದು ಶಾಸ್ತ್ರ ಕೊಟ್ಟಿರುವ ಭರವಸೆ. ಭಗವದ್ಗೀತೆಯಲ್ಲಿ ಈ ಆಶ್ವಾಸನೆ ಪದೇಪದೇ ಬಂದಿದೆ. ಅದನ್ನು ಮನಸ್ಸಿನಿಂದಲೂ ಬುದ್ಧಿಯಿಂದಲೂ ಗ್ರಹಿಸಿ ದೃಢವಾಗಿರಿಸಿಕೊಳ್ಳುವುದು ನಮಗಿರುವ ಮೊದಲ ಕರ್ತವ್ಯ.

1. ಜೀವಕ್ಕೆ ಉತ್ತಮ ಭವಿಷ್ಯವು ಸಾಧ್ಯ—ಎಂಬುದು ನಮಗೆ ಇಲ್ಲಿ ಮೂಲ ಪ್ರತಿಜ್ಞೆ. ಇದನ್ನು ಇಂಗ್ಲಿಷಿನಲ್ಲಿ (Postulate) ಪಾಸ್ಚುಲೇಟ್ ಎಂದು ಹೇಳುವ ಆಧಾರಸಮ್ಮತಿ ಎಂದಾದರೂ ಇಟ್ಟುಕೊಳ್ಳಬಹುದು. ಒಂದು ವಿಷಯವನ್ನು ವಿಚಾರ ಮಾಡುವಲ್ಲಿ ಉಭಯ ಪಕ್ಷಗಳವರೂ ಯಾವ ವಾಕ್ಯವನ್ನು ಪ್ರಮಾಣವಿವರಣೆಗಳನ್ನಪೇಕ್ಷಿಸದೆ ಪೀಠಿಕೆಯಾಗಿ ಅಂಗೀಕರಿಸಿಕೊಳ್ಳುತ್ತಾರೋ, ಮತ್ತು ಹಾಗಾಗದಲ್ಲಿ ಆ ವಿಚಾರಾರಂಭವೇ ಸಾಧ್ಯವಾಗದೋ, ಆ ಅವಶ್ಯವಾದ ಪೀಠಿಕಾಸಂಗತಿಯೇ ಆಧಾರ ಸಮ್ಮತಿ. ಅದನ್ನಾಶ್ರಯಿಸಿಕೊಂಡು ಮಿಕ್ಕ ವಿಚಾರವೆಲ್ಲ ನಡೆಯುತ್ತದೆ.
   ಜೀವಕ್ಕೆ ಉತ್ತಮ ಭವಿಷ್ಯ ಸಾಧ್ಯವೆಂಬ ಮಾತನ್ನು ಇಂಗ್ಲಿಷಿನಲ್ಲಿ Hypothesis ಎಂದು ಹೇಳುವ ಅರ್ಥಾಪತ್ತಿಯೆಂದಾದರೂ ಇಟ್ಟುಕೊಳ್ಳಬಹುದು. ವಿಚಾರಾವಸರದಲ್ಲಿ ಯಾವ ಮೂಲಾನುಮಿತಿಯನ್ನು ಮೊದಲು ಅಂಗೀಕರಿಸಿಕೊಂಡರೆ ಅದರಿಂದ ಮಿಕ್ಕೆಲ್ಲ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರ ದೊರೆತೀತೋ ಅದು ಅರ್ಥಾಪತ್ತಿ (ಅರ್ಥಸ್ಯ = ಅನುಕ್ತಾರ್ಥಸ್ಯ, ಆಪತ್ತಿಃ = ಪ್ರಾಪ್ತಿಃ । ಅನ್ಯಥಾ ಅನುಪಪದ್ಯಮಾನಸ್ಯ ಅರ್ಥಸ್ಯ ಉಪಪಾದಿಕಾ ಬುದ್ಧಿಕಲ್ಪನಾ ಅರ್ಥಾಪತ್ತಿಃ ।)

ಹೀಗೆ ಶಾಸ್ತ್ರಪ್ರಮಾಣದಿಂದಲಾಗಲಿ ಸ್ವಬುದ್ಧಿನಿಶ್ಚಯದಿಂದಲಾಗಲಿ ಸದ್ಗತಿ ಸಾಧ್ಯತೆಯನ್ನಂಗೀಕರಿಸುವುದು ಪ್ರಥಮ ಸಾಧನೆ.

2. ಉತ್ತಮಗತಿ ಜೀವಕ್ಕುಂಟಾಗಬೇಕಾದರೆ ಅದಕ್ಕೆ ಕೆಲವು ಸಂಸ್ಕಾರಗಳಾಗಬೇಕು. ಆ ಸಂಸ್ಕಾರಗಳ ಸಮೂಹವನ್ನೇ ಧರ್ಮವೆನ್ನುವುದು. ಶಂಕರಾಚಾರ್ಯರ ವಾಕ್ಯವನ್ನು ಹಿಂದೆ ನೋಡಿದ್ದೇವೆ.

   ಜಗತಃ ಸ್ಥಿತಿಕಾರಣಮ್ ಪ್ರಾಣಿನಾಮ್ ಸಾಕಾದಭ್ಯುದಯನಿಃಶ್ರೇಯಸಹೇತುರ್ಯಃ ಸ ಧರ್ಮಃ ॥

3. ಧರ್ಮಗಳು ದ್ವಿಪ್ರಕಾರವಾಗಿರುತ್ತವೆ. ಒಂದು ಸರ್ವಸಾಮಾನ್ಯಪ್ರಕಾರ, ಇನ್ನೊಂದು ಜೀವಪ್ರತ್ಯೇಕಪ್ರಕಾರ.
4. ಎಲ್ಲ ಪ್ರಾಣಿಗಳಿಗೂ ಒಂದೇ ಪಾಂಚಭೌತಪ್ರಪಂಚಕ್ಕೆ ಸೇರಿದುವಾಗಿ, ಅನ್ಯೋನ್ಯ ಸಂಪರ್ಕದಲ್ಲಿ ಜೀವಿಸಿ, ಒಂದೇ ಪೂರ್ವಚರಿತ್ರೆಯುಳ್ಳವಾಗಿರುವುದರಿಂದ ಅವೆಲ್ಲಕ್ಕೂ ಲಭ್ಯಾಲಭ್ಯಗಳೂ ಗತಿಲಕ್ಷ್ಯಗಳೂ ಸಮಾನವಾಗಿರುತ್ತವೆ. ಆದದ್ದರಿಂದ ಅವುಗಳ ಧರ್ಮ ಕರ್ಮಗಳು ಸಮಾನವಾಗಿರುತ್ತವೆ. ಇವೇ ಸಾಮಾನ್ಯ ಧರ್ಮಗಳು. ಸತ್ಯ, ಶೌಚ, ಅಹಿಂಸೆ —ಇವು ಎಲ್ಲರಿಗೂ ಏಕರೀತಿಯಾಗಿ ಅನ್ವಯಿಸತಕ್ಕ ಧರ್ಮಗಳು. ಮುಸಲ್ಮಾನರಿಗೂ ಕ್ರೈಸ್ತರಿಗೂ ಮಿಕ್ಕೆಲ್ಲರಿಗೂ ಏಕಪ್ರಕಾರವಾಗಿ ಅನ್ವಯಿಸುತ್ತವೆ ಈ ಧರ್ಮಗಳು.
5. ಪ್ರತಿಯೊಂದು ಜೀವಿಯದೂ ಎರಡು ಕ್ಷೇತ್ರಗಳು: ಒಂದು ಸಾಮುದಾಯಿಕ ಜೀವನಕ್ಷೇತ್ರ, ಇನ್ನೊಂದು ಪೃಥಕ್ಕಾದ ವೈಯಕ್ತಿಕಜೀವನಕ್ಷೇತ್ರ. ನಾನಾ ಜೀವಗಳಿಗೂ ಪ್ರಪಂಚೈಕ್ಯವಿದ್ದರೂ ಒಂದೊಂದರ ಪೂರ್ವಕರ್ಮವಾಸನೆಯೂ ಋಣ ಸಂಬಂಧಗಳೂ ಪ್ರಾರಬ್ಧಪ್ರಾಪ್ತಿಗಳೂ ಬೇರೆಬೇರೆಯಾಗಿರುತ್ತವೆ. ಈ ಅನಾದಿಯಾದ ಜೀವಕಥೆ ಒಂದೊಂದರದೂ ಅದರದರದೇ ಆಗಿ, ಪ್ರತ್ಯೇಕವಾಗಿರುವುದರಿಂದ, ಒಂದೊಂದು ವ್ಯಷ್ಟಿ ಜೀವಕ್ಕೂ ಸಾಮಾನ್ಯ ಧರ್ಮಗಳ ಜೊತೆಗೆ ಕೆಲವು ವಿಶೇಷಧರ್ಮಗಳು ಸೇರಿರುತ್ತವೆ. ಇವೇ ಸ್ವಸ್ವಧರ್ಮಗಳು.

ವಿಶ್ವಮಾನವ ಧರ್ಮ

ಈಗ ವ್ಯಷ್ಟಿಧರ್ಮ ವಿಶೇಷಧರ್ಮಗಳ ವಿವರಣೆಗೆ ಹೋಗದೆ, ಸರ್ವಮನುಷ್ಯ ಸಾಮಾನ್ಯವಾದ ಧರ್ಮಗಳನ್ನು ನೋಡೋಣ. ಅವು ಗೀತಾಶಾಸ್ತ್ರದ ಮೇರೆಗೆ ಹತ್ತು ಅಂಶಗಳುಳ್ಳವೆಂದು ತೋರುತ್ತದೆ, ಹೀಗೆ:

1. ಆತ್ಮಪಾರಮ್ಯದ ಅಂಗೀಕಾರ.
2. ಈಶ್ವರಾಧಿಕಾರದ ಅಂಗೀಕಾರ.
3. ಧರ್ಮಾಂಗೀಕಾರ.
4. ಭೋಗೇಚ್ಛಾಪರಿಮಿತಿ.
5. ಲೋಕಸಂಸ್ಥಿತಿಕರ್ತವ್ಯತೆ.
6. ಆತ್ಮೌಪಮ್ಯನೀತಿ—ದಾನ.
7. ನಿತ್ಯಜೀವನಸಂಸ್ಕಾರ—ಯಜ್ಞ.
8. ತತ್ತ್ವಚಿಂತನಾಭ್ಯಾಸ—ತಪಸ್ಸು.
9. ಶರಣಾಗತಿ.
10. ಭೋಗಕ್ಕಿಂತ ಶಾಂತಿಯ ಉತ್ಕೃಷ್ಟತೆ,

ಈಗ ಈ ಹತ್ತಂಶಗಳನ್ನು ಕೊಂಚ ವಿಸ್ತರಿಸಿ ನೆನಪಿಗೆ ತಂದುಕೊಳ್ಳೋಣ.

1. **ಆತ್ಮಪಾರಮ್ಯ:** ಆತ್ಮವೆಂಬುದು ಎಲ್ಲ ಪ್ರಾಣಿಗಳಲ್ಲಿಯೂ ಇರುವ ಅಂತಸ್ಸತ್ತ್ವ. ಮನುಷ್ಯನು “ನಾನು”, “ನಾನು” ಎಂದುಕೊಳ್ಳುವಾಗ ಯಾವುದನ್ನು ಉದ್ದೇಶಿಸಿರುತ್ತಾನೋ ಆ ಅಹಂವಸ್ತುವೇ ಜೀವ. ಜೀವವನ್ನೂ ಜೀವಕ್ಕೆ ಆಶ್ರಯವೂ ಉಪಕರಣವೂ ಆದ ದೇಹ ಇಂದ್ರಿಯ ಮನಸ್ಸುಗಳನ್ನೂ ಸಹ ಬಳಕೆಯ ಮಾತಿನಲ್ಲಿ ಆತ್ಮವೆನ್ನುವುದುಂಟು. ಹೀಗೆ ದೇಹಾದಿ ಆವರಣವಿಶಿಷ್ಟವಾದ ಆತ್ಮವು ಜೀವಾತ್ಮವೆನ್ನಿಸಿಕೊಳ್ಳುತ್ತದೆ. ತತ್ತ್ವದಲ್ಲಿ ಜೀವೋಪಾಧಿಗಳಿಂದ ಬೇರೆಯಾದದ್ದು ಆತ್ಮ. ಅದೇ ಶುದ್ಧಾತ್ಮ ಅಥವಾ ಕೇವಲಾತ್ಮ. ದೇಹಾದಿಜೀವೋಪಾಧಿಗಳು ಕೊಂಚಕೊಂಚ

ಕಾಲವಿದ್ದು ನಶಿಸಿಹೋಗತಕ್ಕವು. ಅವು ವಿಕಾರಪಡತಕ್ಕವು. ಆತ್ಮವಾದರೋ ನಾಶವಿಕಾರಗಳಿಲ್ಲದ್ದು:

> ಅಚ್ಛೇದ್ಯೋಽಯಮದಾಹ್ಯೋಽಯಂ ಅಕ್ಲೇದ್ಯೋಽಶೋಷ್ಯ ಏವ ಚ ।
> ನಿತ್ಯಃ ಸರ್ವಗತಃ ಸ್ಥಾಣುಃ ಅಚಲೋಽಯಂ ಸನಾತನಃ ॥ (೨-೨೪)
> ಅವ್ಯಕ್ತೋಽಯಮಚಿಂತ್ಯೋಽಯಂ ಅವಿಕಾರ್ಯೋಽಯಮುಚ್ಯತೇ ॥ (೨-೨೫)
> ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ॥ (೨-೩೦)

ಆದದ್ದರಿಂದ ಮನುಷ್ಯನೆಂಬ ನಾನಾಪದಾರ್ಥಮಿಶ್ರಣದಲ್ಲಿ ಯಾವೊಂದಂಶಕ್ಕೂ ಅಂಟಿಕೊಳ್ಳದೆ, ಎಲ್ಲಕ್ಕೂ ಶಕ್ತಿಪ್ರದವಾಗಿರುವ ಚೈತನ್ಯವೇ ಆತ್ಮ. ಹೀಗೆ ಆತ್ಮವು ಮನುಷ್ಯನ ಅಂಶಗಳಲ್ಲಿ ಎಲ್ಲಕ್ಕಿಂತ ಮೇಲಾದದ್ದು, ಎಲ್ಲಕ್ಕಿಂತ ಮುಖ್ಯವಾದದ್ದು. ಆದದ್ದರಿಂದ ಆತ್ಮಹಿತವೇ ಸರ್ವದಾ ಲಕ್ಷ್ಯದಲ್ಲಿ ಪ್ರಥಮವಾಗಿರಬೇಕಾದದ್ದು.

"ಆತ್ಮ" ಎಂಬ ಶಬ್ದಕ್ಕೆ ಇಂಗ್ಲಿಷಿನಲ್ಲಿ ಸಮಶಬ್ದ ನನಗೆ ತಿಳಿದಮಟ್ಟಿಗೆ ಬೈಬಲ್ ಕೊರಾನುಗಳ ಭಾಷಾಂತರದಲ್ಲಿ ಕಾಣಬರುವುದಿಲ್ಲ. "ಜೀವ" ಎಂಬ ಕಲ್ಪನೆಯನ್ನು ಆ ಮತಗಳವರೂ ಒಪ್ಪಿಕೊಂಡಾರು. ಆತ್ಮವೆಂದರೆ "Soul" (ಸೋಲ್) ಎಂದು ಸಾಮಾನ್ಯವಾಗಿ ಭಾಷಾಂತರಮಾಡುತ್ತಾರೆ. ನಮ್ಮಲ್ಲಿ ಆತ್ಮಶಬ್ದಕ್ಕೆ ಸಂದರ್ಭಾನುಸಾರ ಮನಸ್ಸು ಇತ್ಯಾದಿ ಅರ್ಥಗಳೆಲ್ಲ ಬರುವಂತೆಯೇ "Soul" (ಸೋಲ್) ಎಂಬ ಮಾತಿಗೂ ಅನೇಕ ಅರ್ಥಗಳು ಬರುತ್ತವೆ. ಪ್ರಕೃತಸಂದರ್ಭದಲ್ಲಿಯಾದರೋ ಆತ್ಮವು ಜೀವವೆಂಬುದರ ಒಳಗಡೆ—ಎಲ್ಲ ಜೀವಗಳ ಒಳಗಡೆಯೂ—ಇರುವ ಶುದ್ಧಚೈತನ್ಯ. ಅದು ಬ್ರಹ್ಮವೆಂಬ ಮಹಾವಸ್ತುವಿನ ಏಕದೇಶೀಯವಾದ ಅಂಶ. ಇಲ್ಲಿ ವಿವಕ್ಷಿತವಾದದ್ದು ಸಂಕುಚಿತವಾದ, ಮಲಿನವಾದ ಜೀವಾತ್ಮವಲ್ಲ, ಅದು ಪರಿಶುದ್ಧಾತ್ಮ. ಯಾವ ಅನಂತಚೈತನ್ಯವು ಲೋಕವನ್ನು ನಡಸಿಕೊಂಡಿರುತ್ತದೆಯೋ, ಲೋಕವನ್ನು ಮೀರಿರುತ್ತದೆಯೋ ಅದು ಪರಬ್ರಹ್ಮ. ವಿಶ್ವವ್ಯಾಪಿಯೂ ವಿಶ್ವಾತೀತವೂ ಆದ ಆ ಪರಬ್ರಹ್ಮವಸ್ತುವನ್ನು ಕುರಿತು ನಮಗಿರುವ ಒಂದು ಭಾವನಾವಿಶೇಷವೇ ಆತ್ಮ. ನಮ್ಮ ಸಮಸ್ತ ಜೀವಿತತತ್ತ್ವಗಳೂ ಸಮಸ್ತ ನೀತಿಗಳೂ ಆ ಬ್ರಹ್ಮಾತ್ಮವಸ್ತುವನ್ನು ಅಂಗೀಕಾರಮಾಡುವುದರಿಂದ ಹೊರಪಡುತ್ತವೆ. ಇದು ಗೀತೆಯ ಪ್ರಧಾನೋಪದೇಶಗಳಲ್ಲಿ ಒಂದು. ಮಿಕ್ಕೆಲ್ಲ ಉಪದೇಶಗಳೂ ಈ

ಆತ್ಮಪಾರಮ್ಯೋಪದೇಶದಿಂದ ಸ್ರವಿಸಿಬರುವವು. ಜೀವಾಂತರ್ಗತವಾದ ಆತ್ಮವಸ್ತು ಸರ್ವಶ್ರೇಷ್ಠವಾದದ್ದು. ಅದರ ಪಕ್ಕದಲ್ಲಿ ಮಿಕ್ಕೆಲ್ಲವೂ ತುಚ್ಛ, ನಿಸ್ಸಾರ. ಇದು ಮೊದಲನೆಯ ಉಪದೇಶ.

2. **ಈಶ್ವರಾಧಿಕಾರದ ಅಂಗೀಕಾರ:** ಈಶ್ವರನೆಂಬುದು ಪರಬ್ರಹ್ಮ ಚೈತನ್ಯದ ಕಾರ್ಯರೂಪ. ಯಾವ ಚೈತನ್ಯವು ವ್ಯಷ್ಟಿರೂಪದಲ್ಲಿ—ಬಿಡಿಬಿಡಿಯಾಗಿ—ಜೀವವೆನಿಸಿಕೊಂಡು ಆತ್ಮಪ್ರಕಾಶವಾಗಿರುತ್ತದೆಯೋ ಅದೇ ಚೈತನ್ಯವು ಸರ್ವತ್ರ ವ್ಯಾಪಿಸಿ ಸಮಷ್ಟಿ ರೂಪದಲ್ಲಿ ಪರಮಾತ್ಮನೆನಿಸುತ್ತದೆ. ಅದೇ ಪರಮಾತ್ಮವಸ್ತುವೇ ಜಗಲ್ಲೀಲಾರೂಪದಲ್ಲಿ ಈಶ್ವರನೆನಿಸುತ್ತದೆ. ಜಗದತೀತದಶೆಯಲ್ಲಿ ಅದೇ ಪರಬ್ರಹ್ಮವೆನಿಸುತ್ತದೆ. ಹೀಗೆ ಸಕಲ ಜೀವಾತ್ಮಗಳನ್ನೂ ಸಕಲ ಜಗತ್ತನ್ನೂ ಅಂತರ್ಗತಮಾಡಿಕೊಂಡಿರುವ ಅನಂತವೂ ಅಖಂಡವೂ ಅಪ್ರಮೇಯವೂ ಆದ ಮಹಾಚೈತನ್ಯವನ್ನು ಜಗದೀಶ್ವರರೂಪದಲ್ಲಿ ಜೀವವು ಅಂಗೀಕರಿಸಿದಾಗ ಆ ಜೀವದೊಳಗಿನ ಆತ್ಮಕ್ಕೆ ಸದ್ಗತಿ ಪ್ರಾರಂಭವಾಗುತ್ತದೆ. ಪ್ರಭು ಒಬ್ಬನಿದ್ದಾನೆ, ನಾವು ಆತನಿಗೆ ವಿಧೇಯರಾಗಿರತಕ್ಕದ್ದು, ಜಗತ್ತು ಆತನ ಆಜ್ಞೆಯಂತೆ ನಡೆಯತಕ್ಕದ್ದು—ಇದನ್ನು ಅಂಗೀಕರಿಸಬೇಕು. ಜಗತ್ತಾದರೋ ತನ್ನ ಮಾಯಾಚಿತ್ರಗಳಿಂದ ಈಶ್ವರನನ್ನು ಮರೆಯಿಸಿಬಿಡುತ್ತದೆ; "ಈಶ್ವರೋऽಹಮಹಂ ಭೋಗೀ" ಮೊದಲಾದ ಭ್ರಾಂತಿಗಳೆಲ್ಲ ನಮಗುಂಟಾಗುತ್ತವೆ. ಈಶ್ವರಪ್ರಭುತ್ವವನ್ನು ಅಂಗೀಕರಿಸುವುದೇ ಸದ್ಗತಿಗೆ ಮೊದಲ ಮೆಟ್ಟಲು.

> ಸರ್ವಸ್ಯ ಧಾತಾರಮಚಿಂತ್ಯರೂಪಮ್ ॥ (೮-೯)
> ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ।
> ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಮ್ ॥ (೯-೧೮)
> ಸರ್ವತಃ ಪಾಣಿಪಾದಂ ತತ್...ಸರ್ವಮಾವೃತ್ಯ ತಿಷ್ಠತಿ ॥ (೧೩-೧೪)

ಈಶ್ವರನನ್ನು ನಾವು ಅಂಗೀಕಾರಮಾಡಿದರೆ, ನಮ್ಮ ಯೋಗಕ್ಷೇಮವನ್ನು ತಾನು ನೋಡಿಕೊಳ್ಳುವವನೆಂದು ಆತನು ಹೇಳಿಯೇ ಇದ್ದಾನೆ:

> ಅನನ್ಯಾಶ್ಚಿನ್ತಯನ್ತೋ ಮಾಂ ಯೇ ಜನಾಃ ಪರ್ಯುಪಾಸತೇ ।
> ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ (೯-೨೨)

ಜೀವಕ್ಕೂ ಈಶ್ವರನಿಗೂ ಇರುವ ಸಂಬಂಧ ಎಂಥಾದ್ದೆಂಬುದರ ವಿಷಯದಲ್ಲಿಯೇ ದ್ವೈತ ಅದ್ವೈತ ವಿಶಿಷ್ಟಾದ್ವೈತಗಳ ವಾದವಿವಾದಗಳು. ಆ ಪ್ರಶ್ನೆಯನ್ನು ಬೇರೆಯಾಗಿ ಚರ್ಚಿಸುವುದಾಗುತ್ತದೆ (ಪರಿಶಿಷ್ಟ ೧).

3. **ಧರ್ಮತತ್ತ್ವದ ಅಂಗೀಕಾರ:** ಕ್ರೈಸ್ತಾದಿ ಮತಗಳವರೂ ಇದನ್ನು ಅಂಗೀಕಾರ ಮಾಡುತ್ತಾರೆ—ಈಶ್ವರನಿಗೆ ನಾವು ವಿಧೇಯರಾಗಿರತಕ್ಕದ್ದು ಎಂದು ಒಪ್ಪಿಕೊಳ್ಳುತ್ತಾರೆ. ಅದೊಂದು ಧರ್ಮವೇ. ಧರ್ಮವು ಈಶ್ವರಾಜ್ಞಾರೂಪವಾದದ್ದು, ಜೀವಸಂಸ್ಕಾರರೂಪವಾದದ್ದು—ಜೀವೋತ್ಕರ್ಷಕ್ಕೆ ಅನುಕೂಲವಾದ ನಡವಳಿಕೆ.

> ಶಾಶ್ವತಧರ್ಮಗೋಪ್ತಾ ॥ (೧೧-೧೮)

ಎಂದಲ್ಲವೆ ಪರಮೇಶ್ವರನನ್ನು ಅರ್ಜುನನು ಸ್ತುತಿಸಿರುವುದು? ಲೋಕದಲ್ಲಿ ಅಧರ್ಮಿಗಳೆಷ್ಟೋ ಜನ ಇದ್ದಾರೆ. ಅವರನ್ನು ದಾರಿಗೆ ತರುವುದು ಈಶ್ವರನ ಜವಾಬ್ದಾರಿ:

> ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ।
> ಬ್ರಹ್ಮಣೋ ಹಿ ಪ್ರತಿಷ್ಠಾ...
> ಶಾಶ್ವತಸ್ಯ ಚ ಧರ್ಮಸ್ಯ... ॥ (೧೪-೨೭)

ಧರ್ಮವು ಯಾವ ಕಾಲಕ್ಕೂ ಸಂಪೂರ್ಣವಾಗಿ ನಷ್ಟವಾಗದು; ಆದರೆ ಆಗಾಗ ದುರ್ಬಲವಾಗುವುದುಂಟು.

> ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
> ಅಭ್ಯುತ್ಥಾನಮಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್ ॥ (೪-೭)

ಧರ್ಮವನ್ನು ಉಳಿಸುವ ಜವಾಬ್ದಾರಿ ಈಶ್ವರನದು:

> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
> ಧರ್ಮಸಂಸ್ಥಾಪನಾऽರ್ಥಾಯ ಸಂಭವಾಮಿ ಯುಗೇ ಯುಗೇ ॥ (೪-೮)

ಧರ್ಮವನ್ನು ನಾವು ಅಂಗೀಕಾರಮಾಡಬೇಕಾದದ್ದು.

4. **ಭೋಗೇಚ್ಛಾ ಪರಿಮಿತಿ:** ಈಶ್ವರಪ್ರಭುತ್ವಾಂಗೀಕಾರ ಎಂಬುದರಲ್ಲಿಯೇ ಅಂತರ್ಗತವಾಗಿದೆ ನಮ್ಮ ಆಶೆಗಳಿಗೂ ಭೋಗಗಳಿಗೂ ಮಿತಿಯಿಟ್ಟುಕೊಳ್ಳಬೇಕೆಂಬ ನೀತಿ. ಅದೇ ಧರ್ಮದ ತಿರುಳು. ನಮ್ಮ ಆಶೆಗಳನ್ನೂ ರಾಗದ್ವೇಷಾದಿಗಳನ್ನೂ ಮೋಹಗಳನ್ನೂ ಪದೇ ಪದೇ ಶೋಧನೆ ಮಾಡಿಕೊಳ್ಳುತ್ತಿರಬೇಕು.

> ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
> ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥ (೩-೩೭)

ಎಂದು ಭಗವಂತನು ಸ್ಮೃತಿಲೋಪಕ್ಕವಕಾಶವಿಲ್ಲದಂತೆ ಸ್ಪಷ್ಟಪಡಿಸಿದ್ದಾನೆ. ಕಠೋಪನಿಷತ್ತಿನ ಪ್ರಸಿದ್ಧವಾದ ರೂಪಕವನ್ನು ನಾವು ಜ್ಞಾಪಕಕ್ಕೆ ತಂದುಕೊಳ್ಳಬಹುದು.

> ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
> ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥
> ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ॥

ಇಂದ್ರಿಯಗಳು ಪ್ರಬಲವಾದವು. ಅವು ನಮ್ಮನ್ನು ಇಲ್ಲಿಗಲ್ಲಿಗೆ ಸೆಳೆದುಕೊಂಡು ಹೋಗುತ್ತವೆ. ಅವುಗಳ ಮೇಲೆ ಹತೋಟಿಯಿಟ್ಟುಕೊಳ್ಳಬೇಕು.

5. **ಲೋಕಸಂಸ್ಥಿತಿ:** ಲೋಕ ಇರಬೇಕೆಂದು ತಾನೆ ಭಗವಂತ ಇದನ್ನು ಸೃಷ್ಟಿಸಿರುವುದು?

> ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ (೩-೨೦)
> ಕುರ್ಯಾದ್ವಿದ್ವಾಂಸ್ತಥಾಽಸಕ್ತಃ ಚಿಕೀರ್ಷುರ್ಲೋಕಸಂಗ್ರಹಮ್ ॥ (೩-೨೫)

ಹೀಗೆ ಅನೇಕ ಕಡೆ ಲೋಕಸಂಸ್ಥಿತಿಯ ಕರ್ತವ್ಯತೆ ನಿರ್ದಿಷ್ಟವಾಗಿದೆ. ಮನೆಯು ಶಿಥಿಲವಾಗಿ ಸೋರುತ್ತ, ಬಿದ್ದುಹೋಗುವ ಹಾಗೆ ಕಾಣುತ್ತಿರಬಹುದು. ಅದನ್ನು ಸರಿಪಡಿಸುವುದು ನಮಗೆ ಕರ್ತವ್ಯ. ಲೋಕದ ವಿಷಯದಲ್ಲಿ ಪೂಜ್ಯಬುದ್ಧಿ ಇರಲಿ. ಬ್ರಹ್ಮಪುರಿ ಎಂದಲ್ಲವೆ ಇದಕ್ಕೆ ನಾಮಧೇಯ? ಲೋಕವನ್ನು ಮನ್ನಣೆ ಮಾಡಬೇಕು. ಲೋಕ ಮರ್ಯಾದೆಯನ್ನು ಗೌರವಿಸಬೇಕು. ಅದೇ—

> ಸರ್ವಭೂತಹಿತೇ ರತಾಃ ॥ (೫-೨೫; ೧೨-೪)

6. **ಆತ್ಮೌಪಮ್ಯ:** ಇಂಗ್ಲಿಷಿನಲ್ಲಿ “ಎತಿಕ್ಸ್” (Ethics) “ಮೊರ್ಯಾಲಿಟಿ” (Morality) ಎಂದು ಯಾವುದನ್ನು ಹೇಳುತ್ತೇವೋ ಅದಕ್ಕೆಲ್ಲ ಮೂಲದಲ್ಲಿರತಕ್ಕದ್ದು ಇದು. ಭಗವಂತ ಹೇಳಿದ್ದಾನೆ:

> ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾಽಽತ್ಮನಿ ।
> ಈಕ್ಷತೇ... ॥ (೬-೨೯)

ಆತ್ಮೌಪಮ್ಯದ ಅನುಸಂಧಾನಕ್ಷೇತ್ರವನ್ನು ಕ್ರಮೇಣ ವಿಸ್ತಾರಪಡಿಸಬೇಕು. ಸಾಮಾನ್ಯ ಜನರ ಆತ್ಮೌಪಮ್ಯ ಅದರ ದಾರಾಪುತ್ರಾದಿ ಕುಟುಂಬ, ಇಷ್ಟಮಿತ್ರಮಂಡಲಿ—ಈ ಮಿತಪ್ರಪಂಚದೊಳಗೆ ಅಡಗಿ ಸಂಕೋಚವಾಗಿರುತ್ತದೆ. ಇದು ಕ್ರಮೇಣ ವಿಸ್ತಾರವಾಗಬೇಕು. ಮನುಷ್ಯನು ತನ್ನ ಜೀವಿತಪರಿಧಿಯೊಳಕ್ಕೆ ಆದಷ್ಟು ಮಂದಿಯನ್ನು ಹೆಚ್ಚು ಹೆಚ್ಚಾಗಿ ಬರಮಾಡಿಕೊಂಡು, ತನ್ನ ಹೃದಯದ ಔದಾರ್ಯದಲ್ಲಿ ಅವರಿಗೆಡೆ ಕೊಟ್ಟು, ಕ್ರಮೇಣ ಎಲ್ಲ ಜೀವಗಳನ್ನೂ ತನ್ನೊಡನೆ ಲೋಕಸಹಭಾಗಿಗಳನ್ನಾಗಿ ಮಾಡಿಕೊಳ್ಳಬೇಕು. ಸಮಸ್ತ ನೀತಿಗೂ ಮೂಲದಲ್ಲಿರುವ ಭಾವನೆ ಇದು.

7. **ನಿತ್ಯಜೀವನ—ಯಜ್ಞ:** ಕರ್ಮವೇನೋ ಅವಶ್ಯವಾಗಿ ಮಾಡಲೇ ಬೇಕಾದದ್ದು. ಹೇಗೆ?

> ಸಂಗಂ ತ್ಯಕ್ತ್ವಾ ಫಲಾನಿ ಚ ॥ (೧೮-೬)

ಸ್ವಧರ್ಮರೂಪವಾದ ಕರ್ಮ ಮಾಡಬೇಕು:

> ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥ (೧೮-೪೬)

ಸ್ವಧರ್ಮವನ್ನು ನಿರ್ಣಯಿಸುವುದು ಯಾವುದು? ಶಾಸ್ತ್ರ ಎಂದು ಸಾಮಾನ್ಯವಾಗಿ ಅಂದುಕೊಳ್ಳುತ್ತೇವೆ. ಶಾಸ್ತ್ರ ಹೇಳುವುದಾದರೋ—

> ಇತಿ ಕರ್ತವ್ಯತಾಭಾಗಂ ಮೀಮಾಂಸಾ ಪೂರಯಿಷ್ಯತಿ ॥

ಶಾಸ್ತ್ರವನ್ನು ಜೀವಿತಸಂದರ್ಭಕ್ಕೆ ಅನ್ವಯ ಮಾಡಬೇಕು. ಶಾಸ್ತ್ರಕ್ಕೆ ವಿರೋಧ ಬಾರದಂತೆ, ದೇಶಕಾಲವಿದ್ಯಮಾನಗಳಿಗನುಸಾರವಾಗಿ, ನಾವು ಕರ್ತವ್ಯವನ್ನು ಕಂಡುಕೊಳ್ಳಬೇಕು. ನಿಯತಕರ್ಮ ಅದೇ:

ನಿಯತಂ ಕುರು ಕರ್ಮ ತ್ವಂ ॥ (೩-೮)

ಈ ಹೊತ್ತು ಲೋಕದಲ್ಲಿ ನಾವು ಕಾಣುವ ಅನೇಕ ಕಷ್ಟಗಳ ಮೂಲ ಇಲ್ಲಿದೆ: ಅನಿಯತವಾದದ್ದನ್ನು ನಿಯತವೆಂದು ಗ್ರಹಿಸಿಬಿಡುತ್ತೇವೆ; ನಿಯತವಾದದ್ದೆಷ್ಟನ್ನೋ ಅನಿಯತವೆಂದುಕೊಳ್ಳುತ್ತೇವೆ. ಸರಕಾರಗಳೂ ಈ ತಪ್ಪು ಮಾಡುವುದುಂಟು. ಆಹಾರೋತ್ಪತ್ತಿಯನ್ನು ಅಲಕ್ಷ್ಯ ಮಾಡುತ್ತವೆ; ಯಂತ್ರಕಾರ್ಯಗಳನ್ನು ಬೆಟ್ಟವಾಗಿ ಬೆಳಸುತ್ತವೆ. ಸ್ವದೇಶ ರಕ್ಷಣೆಯನ್ನು ಉಪೇಕ್ಷೆ ಮಾಡುತ್ತವೆ; ದೇಶಾಂತರ ವ್ಯವಹಾರಗಳನ್ನು ಸರಿಪಡಿಸ ಹೊರಡುತ್ತವೆ. ಮನೆಮಕ್ಕಳ ಕೊಳಕನ್ನು ನಾವು ಮರೆಯುತ್ತೇವೆ; ರಾಮಮಂದಿರದ ಸಮಾರಾಧನೆಗೆ ಚಂದಾ ಬೇಡ ಹೊರಡುತ್ತೇವೆ. ನಿಯತವಾವುದೋ ಆಲೋಚನೆಯಿಲ್ಲದೆ ತಿಳಿಯಲಾಗದು. ನಿಯತವನ್ನು ಹುಡುಕಿ ತಿಳಿಯದೆ ಅನಿಯತಕ್ಕೆ ಕೈಹಾಕಿದರೆ ಸ್ವಧರ್ಮವನ್ನು ಬಿಟ್ಟು ಪರಧರ್ಮವನ್ನು ಕೈಕೊಂಡಂತೆ ಆಗುತ್ತದೆ.

ನಿಯತಾನಿಯತದ ಪ್ರಶ್ನೆಗೆ ಕಾರಣವಿಲ್ಲದ ಅವಶ್ಯಕರ್ಮಗಳು ಯಜ್ಞ–ದಾನ ತಪಸ್ಸುಗಳು; ಎಂದರೆ ದೇವಪೂಜೆ, ಲೋಕಸತ್ಕಾರ, ಆತ್ಮಶೋಧನೆ—ಇವು. ಇವು ಎಲ್ಲರಿಗೂ ಯಾವಾಗಲೂ ಕರ್ತವ್ಯಗಳು:

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ॥ (೧೮-೫)
ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥ (೧೮-೬)

ಕರ್ಮಾನುಷ್ಠಾನವು ಅಜ್ಞಾನಿಗಳಿಗೆ, ಅಥವಾ ಅಸಂಪೂರ್ಣಜ್ಞಾನಿಗಳಿಗೆ ಉಪದೇಶವಾದದ್ದೆಂದೂ, ಜ್ಞಾನಿಗೆ ಅಲ್ಲವೆಂದೂ ಕೆಲವರು ವಾದಿಸುವುದುಂಟು. ಈ ವಾದದ ತಾತ್ಪರ್ಯವನ್ನು ಸಕಾರಣವಾಗಿ ವಿವರಿಸಿಕೊಳ್ಳದಿದ್ದಲ್ಲಿ ಪ್ರಮಾದವಾದೀತು. ಆದದ್ದರಿಂದ ಕೊಂಚ ವಿಚಾರ ಮಾಡೋಣ.

ಕರ್ಮವು ಸ್ವಾಭಾವಿಕಾರ್ಥದಲ್ಲಿ ಎಂಥವರಿಗೂ ಉಂಟಾದದ್ದಷ್ಟೆ?

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ॥ (೩-೫)

ಹೀಗೆ ಪ್ರಕೃತಿಯಿಂದಲೇ ಕರ್ಮವು ಅನಿವಾರ್ಯವಾಗಿರುವಾಗ ಮನುಷ್ಯನಿಗಿರುವ ಸ್ವಾತಂತ್ರ್ಯವು ಕರ್ಮವನ್ನು ಬಿಡುವುದರಲ್ಲಲ್ಲ, ಮಾಡಿದ ಕರ್ಮದ ದುಷ್ಫಲಗಳನ್ನು ತಪ್ಪಿಸಿಕೊಳ್ಳುವುದರಲ್ಲಿ. ಹೀಗೆ ಸತ್ಕರ್ಮ ದುಷ್ಕರ್ಮಗಳ ವಿವೇಚನೆ ಅವಶ್ಯವಾಗುತ್ತದೆ. ಆ ವಿವೇಕಕ್ಕೆ ಸಹಾಯಕವಾದದ್ದು ಶಾಸ್ತ್ರ. ಶಾಸ್ತ್ರದಿಂದ ವಿಹಿತವಾದದ್ದು ಸತ್ಕರ್ಮ. ಶಾಸ್ತ್ರವು ವಿಧಿನಿಷೇಧರೂಪವಾದದ್ದು. ಶಾಸ್ತ್ರವಿಹಿತವಾದ ಕರ್ಮವೇ ಧರ್ಮ. ಧರ್ಮಾಚರಣೆಯಿಂದ ಪೂರ್ವಜನ್ಮಮಲವಾಸನೆಗಳು ಕಳೆದು ಜೀವಶೋಧನೆಯಾಗಿ ಮನಸ್ಸು ಪರಮಾರ್ಥ ಜ್ಞಾನಕ್ಕೆ ಅರ್ಹವಾಗುತ್ತದೆ. ಆದದ್ದರಿಂದ ಜ್ಞಾನಾಪೇಕ್ಷಿಗೆ ಕರ್ಮವು ಸಾಧನವಾಯಿತು. ಹೀಗೆ ಅಪೂರ್ಣಜ್ಞಾನಿಗೆ ಉಪದೇಶವು ಯುಕ್ತವಾಯಿತು.

ಜ್ಞಾನಸಿದ್ಧಿಯಾದವನಿಗೋ? ಅಂಥವನಿಗೆ ಕರ್ಮವೇನೋ ಉಂಟು, ಆದರೆ ಉಪದೇಶ ಅನಾವಶ್ಯಕ. ಅವನು ಉಪದೇಶವಿಲ್ಲದೆಯೇ ಸ್ವತಏವ ಕರ್ಮ ಮಾಡುತ್ತಾನೆ. ದೇಹವಿರುವವರೆಗೂ ಕರ್ಮ ಅನಿವಾರ್ಯವಾದದ್ದು. ದೇಹಜೀವನವು ಜಗತ್ಸಂಪರ್ಕವನ್ನು ಒಳಕೊಂಡಿರುತ್ತದೆ. ಅದು ಪರಮಜ್ಞಾನಿಗೂ ತಪ್ಪಿದ್ದಲ್ಲ. ಹಾಗಾದಮೇಲೆ ಅವನ ಜ್ಞಾನದ ವಿಶೇಷವೇನು? ಅದೇನೆಂದರೆ ಜ್ಞಾನಿಯ ಕರ್ಮ ಅವನ ವಿಷಯದಲ್ಲಿ ಫಲಪರಿಣಾಮಿಯಾಗದು. ಸತ್ಕರ್ಮವು ಶಾಸ್ತ್ರದ ವಿಧಿನಿಷೇಧಗಳಿಂದ ಆದದ್ದು ಎಂದಲ್ಲವೆ ಹೇಳಿದ್ದು? ವಿಧಿನಿಷೇಧಗಳು ಬೇಕಾದದ್ದು ಯಾರಿಗೆ? ಯಾರಲ್ಲಿ ಸ್ವಾರ್ಥಾಹಂತಾವಾಸನೆಗಳು ಉಳಿದುಕೊಂಡಿವೆಯೋ ಅವನಿಗೆ. ಪರಿಪೂರ್ಣಜ್ಞಾನಿಯಲ್ಲಿ ಸ್ವಾರ್ಥಾಹಂತೆಗಳು ಲವಲೇಶವೂ ಇರಲಾರವು. ಏಕೆಂದರೆ ಅವನ ದೃಷ್ಟಿಯಲ್ಲಿ ಆತ್ಮೇತರವಾದದ್ದು ಯಾವುದೂ ಇಲ್ಲ.

ದ್ವಿತೀಯಾದ್ವೈ ಭಯಂ ಭವತಿ ॥ (ಬೃ.ಉ.)

ಎಂದು ಶ್ರುತಿ ಹೇಳಿದ ಹಾಗೆ, “ದ್ವಿತೀಯಾದ್ವೈ ಪಾಪಂ ಭವತಿ” ಎಂದು ಹೇಳಬಹುದು. ಏಕೆಂದರೆ ಪಾಪಕ್ಕೆ ಮೂಲಕಾರಣ ಭಯ: ಮತ್ತೊಬ್ಬನಿದ್ದರೆ ಅವನಿಂದ ತನಗೆ ಹಾನಿಯಾದೀತಲ್ಲ ಎಂಬ ಭಯ. ಆ ಭಯದಿಂದ ಅವನ ಮೇಲೆ ರೋಷ. ಎರಡನೆಯವನೊಬ್ಬನಿದ್ದರೆ ಅವನ ಕಾರಣದಿಂದ ಪಾಪಸಂಭವ. ಇರತಕ್ಕದ್ದೆಲ್ಲ ಒಂದೇ—ಬ್ರಹ್ಮವೇ; ತದಿತರವಾದದ್ದು ಯಾವೊಂದೂ ವಾಸ್ತವವಾಗಿ ಇಲ್ಲ; ಆತ್ಮದಿಂದ ಬೇರೆಯಾದ ಜಗತ್ತೆಂಬುದರ ಬೇರೆತನವು ತೋರಿಕೆಯೇ ಹೊರತು ವಾಸ್ತವವಲ್ಲ—ಹೀಗೆ ಯಾರು

ನಂಬಿದ್ದಾನೋ ಅವನಲ್ಲಿ ಅಹಂಕಾರ ಮಮಕಾರಗಳಿಗೆ ಎಡೆಯೇ ಇರದು. ಅವನಿಂದ ಪಾಪ ಯಾರ ವಿಷಯದಲ್ಲಾದೀತು? ಬೇರೊಬ್ಬನಿದ್ದರಲ್ಲವೆ ಅವನ ವಿಷಯದಲ್ಲಿ ಪಾಪ? ಜ್ಞಾನಿಯಿಂದಾದ ಕೆಲಸ ಯಾವುದಾದರೂ ಅದು ನಿಷ್ಪಾಪ. ಅವನ ಕರ್ಮ ಹೇಗಿದ್ದರೂ ಅದು ಕೇವಲ ಸತ್ತ್ವಗುಣವೇ. ಹೀಗೆ ಸತ್ತ್ವೈಕಮಾತ್ರನಾಗಿರುವವನಿಗೆ ವಿಧಿನಿಷೇಧಗಳೇಕೆ? ಕಸ್ತೂರಿಯನ್ನೇನು ಮಾಡಿದರೂ ಅದು ಪರಿಮಳವೇ—ಕೆಟ್ಟ ನಾತವಾಗದು. ನಾರದರು ಏತಕ್ಕಾಗಿ ಬಾಯಿತೆರೆದರೂ ಅದು ಗಾನವೇ; ಅವರು ಶಾಪವಿಡುವುದಾದರೂ ಅದೂ ಶ್ರಾವ್ಯವೇ. ಅವರ ಕಂಠದಿಂದ ಅಪಸ್ವರ ಹೊರಡದು.

ಶಾಸ್ತ್ರವೆಂಬುದೂ ಗುರುವೆಂಬುದೂ ಶಿಷ್ಯಸಂಪ್ರದಾಯವೆಂಬುದೂ ಬಹಿಷ್ಪ್ರಮಾಣಗಳು. ಅವು ಅಜ್ಞಾನಿಗೂ ಅಪೂರ್ಣಜ್ಞಾನಿಗೂ ಅವಶ್ಯವಾದವು. ಸತ್ತ್ವೈಕಮಯನಾದವನಿಗೆ ಈ ಬಾಹ್ಯವಿಧಾಯಕಗಳೂ ಬಾಹ್ಯಪ್ರೇರಕಗಳೂ ಅನಾವಶ್ಯಕಗಳು. ಅವನು ಅಂತಃಪ್ರಮಾಣದಿಂದಲೇ—ಸ್ವಯಮಾಗಿಯೆ—ಯುಕ್ತಾಯುಕ್ತಗಳನ್ನು ನಿಶ್ಚಯಿಸಿಕೊಳ್ಳಬಲ್ಲವನು; ವಿಧಿನಿರ್ಬಂಧಗಳಿಲ್ಲದೆಯೇ ಅವನು ಸತ್ಕರ್ಮ ಮಾಡುವವನು. ಯಾವ ಸತ್ಕರ್ಮವನ್ನು ಸಾಮಾನ್ಯ ಜನ ಶಾಸ್ತ್ರಸಂಪ್ರದಾಯಾದಿ ಬಾಹ್ಯೋಪದೇಶಗಳಿಂದ ಮಾಡುವುದಾಗುತ್ತದೋ ಅದು ಧರ್ಮ. ಬಾಹ್ಯಾಪೇಕ್ಷೆ ಇಲ್ಲದೆಯೆ ನಡೆಯುವ ಸತ್ಕರ್ಮವು ಅಧಿಧರ್ಮ. ಜ್ಞಾನಾಪೇಕ್ಷಿಗೆ ಸತ್ಕರ್ಮವು ಸಾಧನ; ಜ್ಞಾನಸಿದ್ಧನಿಗೆ ಸತ್ಕರ್ಮವು ನೈಜಲಕ್ಷಣ. ಜ್ಞಾನಾರ್ಥಿಯ ಸತ್ಕರ್ಮವು ಪ್ರಯತ್ನಪೂರ್ವಕವಾದದ್ದು; ಜ್ಞಾನಿಯ ಸತ್ಕರ್ಮವು ಅಪ್ರಯತ್ನವಾದ ಸ್ವಭಾವವಿಕಾಸ. ಧರ್ಮವು ಸಾಧನ; ಅಧಿಧರ್ಮವು ಸಿದ್ಧಿ.

ಹೀಗೆ ಜ್ಞಾನಿಗೆ ಕರ್ಮವು ನಿರ್ಬಂಧವಲ್ಲವೆಂಬುದಾಯಿತೇ ಹೊರತು ಅದು ನಿಷಿದ್ಧವೆಂದಾಗಲಿಲ್ಲ. ಯಾವ ಸತ್ಕರ್ಮವನ್ನು ಸಾಧಕನು ಆಶೆಯಿಂದಲೂ ಭಯದಿಂದಲೂ ಪ್ರಯತ್ನಪಟ್ಟು ಮಾಡುತ್ತಾನೋ ಅದೇ ಸತ್ಕರ್ಮವು ತತ್ತ್ವಜ್ಞಾನಿಯಿಂದ ನೈಜಲೀಲೆಯಾಗಿ, ಮೂಗಿನ ಉಚ್ಛ್ವಾಸನಿಃಶ್ವಾಸಗಳಂತೆ ನಿರಾಯಾಸವಾಗಿ ನಡೆಯುತ್ತದೆ. ಸಾಧಕನ ಸತ್ಕರ್ಮದಿಂದ ಅವನಿಗೆ ಫಲವುಂಟು. ಸಿದ್ಧನ ಸತ್ಕರ್ಮದಿಂದ ಲೋಕಕ್ಕೆ ಫಲವುಂಟು—ಅವನಿಗೆ ಆಗಬೇಕಾದ ಫಲ ಯಾವುದೂ ಇಲ್ಲ; ಅವನೇ ಜೀವನ್ಮುಕ್ತ. ಇದೆಲ್ಲ ನಮಗಿಂತ ಮೇಲ್ಪಟ್ಟಿರುವವರ ಮಾತು—ಗಗನಚಾರಿಗಳ ಮಾತು. ಏರೋಪ್ಲೇನಿನಲ್ಲಿ ಕುಳಿತು ಚಂದ್ರಮಂಡಲಕ್ಕೆ ಹಾರುತ್ತಿರುವ ರಷ್ಯನ್ ದಂಪತಿಗಳು ವಾಯುಮಂಡಲ

ಅತಿವಾಯುಮಂಡಲಗಳಲ್ಲಿ ಏನೇನು ಶೀತೋಷ್ಣಾದ್ಯನುಭವಗಳನ್ನು, ಎಂಥೆಂಥ ಶ್ವಾಸಕೋಶ ಆಹಾರಕೋಶಾನುಭವಗಳನ್ನು ಅನುಭವಿಸುತ್ತಾರೆಂಬುದನ್ನು, ಮಣ್ಣುಮುಕ್ಕರಾದ ನಾವು ತಿಳಿಯಲಾದೀತೆ? ಜ್ಞಾನಸಿದ್ಧರ ಅಂತಸ್ತು ಗಗನಸಂಚಾರಿಯದರಂಥಾದ್ದು.

ಸಾಮಾನ್ಯರಾದ ನಮಗೆ ಶ್ರೀಮದಾನಂದತೀರ್ಥರ ಉಪದೇಶವು ಅನುಷ್ಠೇಯವಾಗಿದೆ:

> ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಂ ।
> ಹರಿರೇವ ಪರೋ ಹರಿರೇವ ಗುರುರ್ಹರಿರೇವ ಜಗತ್ಪಿತೃಮಾತೃಗತಿಃ ॥

ಭಗವದ್ಗೀತೆಯ ಸಾರವೆನ್ನಬಹುದು ಈ ಶ್ಲೋಕವನ್ನು. ಹೀಗೆ ಮಾಡಿದ ಕರ್ಮವು ಯಜ್ಞವಾಗುತ್ತದೆ.

(೮) **ತತ್ತ್ವಧ್ಯಾನ:** ಮನಸ್ಸಿಗೆ ಬಹಳ ಅವಶ್ಯವಾದ ಸಂಸ್ಕಾರ ಇದು. ಕೇವಲ ಸ್ವಂತಸಂಸ್ಕಾರಕ್ಕಾಗಿ ಮಾಡಬೇಕಾದದ್ದಿದು. ದಾನಾದಿಗಳಿಂದ ಇತರರಿಗೆ ಯತ್ಕಿಂಚಿತ್ತು ಪ್ರಯೋಜನವಾಗುತ್ತದೆ. ಕೇವಲ ಸ್ವಾರ್ಥಕ್ಕಾಗಿ ಮಾಡಬೇಕಾದದ್ದು ತತ್ತ್ವಧ್ಯಾನ. ದಿವಸಕ್ಕೆ ಕೆಲವು ಘಳಿಗೆಗಳಷ್ಟಾದರೂ ಪ್ರಶಾಂತವಾದ ಕಡೆ ಕುಳಿತು ಭಗವದ್ವಿಷಯವನ್ನು ಕುರಿತು ಚಿಂತನೆ ಮಾಡಬೇಕು. ಕೇವಲ ಗ್ರಂಥವ್ಯಾಸಂಗದಿಂದ ಜ್ಞಾನ ಸಿದ್ಧಿಸದು:

> ಯೋಗೀ ಯುಂಜೀತ ಸತತಂ ಆತ್ಮಾನಂ ರಹಸಿ ಸ್ಥಿತಃ ॥ (೬-೧೦)
> ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್ ॥ (೬-೨೫)

(೯) **ಶರಣಾಗತಿ:** ಇದು ಬಹಳ ಕಷ್ಟವಾದದ್ದು. ಶರಣಾಗತಿಯ ತಾತ್ಪರ್ಯವೂ ಸಂನ್ಯಾಸದ ತಾತ್ಪರ್ಯವೂ ಒಂದೇ.

> ಮನ್ಮನಾ ಭವ ಮದ್ಭಕ್ತಃ ಮದ್ಯಾಜೀ ಮಾಂ ನಮಸ್ಕುರು ॥ (೯-೩೪; ೧೮-೬೫)
> ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್... ॥ (೯-೧೮)
> ಅನನ್ಯಾಶ್ಚಿನ್ತಯನ್ತೋ ಮಾಂ... ॥ (೯-೨೨)
> ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ॥ (೧೮-೬೬)

ಹೀಗೆ ಅನೇಕ ಕಡೆ ಭರವಸೆ ಕೊಟ್ಟಿದ್ದಾನೆ ಭಗವಂತ. "ನನ್ನನ್ನು ನಂಬಿದರೆ ನಿನಗೆ ಯಾವ ಬಾಧೆಯೂ ಇರುವುದಿಲ್ಲ. ನಿನ್ನ ಸ್ನೇಹಿತನಾಗಿ ಹೇಳುತ್ತೇನಯ್ಯ, ನಂಬು ಇದನ್ನು."

ಈ ಮೇಲಣ ಗೀತೆಯ ಅಭಯವಾಕ್ಯವು ಶ್ರೀಮದ್ರಾಮಾಯಣದಲ್ಲಿ ಶ್ರೀರಾಮಚಂದ್ರಮೂರ್ತಿ ಆಡಿದ ಭರವಸೆಯ ಮಾತನ್ನು ಜ್ಞಾಪಕಕ್ಕೆ ತರುವುದಾಗಿದೆ.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ॥
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

–ಯುದ್ಧಕಾಂಡ (೧೮-೩೩)

"ನಿನ್ನನ್ನೊಬ್ಬನನ್ನೇ ನಾನು ನಂಬಿಕೊಂಡಿದ್ದೇನೆ; ನನ್ನನ್ನು ನಾನು ನಂಬಿಕೊಂಡಿಲ್ಲ" —ಇದು ಶರಣಾಗತಿ. ಭಗವಂತನನ್ನು ನಂಬುತ್ತೇವೆನ್ನುವ ವೇಳೆಯಲ್ಲಿ ಇತರರನ್ನು ನಂಬಿಕೊಂಡಿಲ್ಲವೆಂದೇನೋ ಹೇಳಿಯೇವು; ನಮ್ಮನ್ನೂ ನಾವು ನಂಬಿಲ್ಲ ಎನ್ನುವುದು ಸ್ವಲ್ಪ ಕಷ್ಟ. "ನಾನು" ಎನ್ನುವುದು ಹೋಗಬೇಕು. ಇದೇ ಶರಣಾಗತಿ, ಅಥವಾ ಪ್ರಪತ್ತಿ. ಅದು ಭಕ್ತಿಯ ಪರಿಪೂರ್ಣರೂಪ, —ಭಕ್ತಿಯ ಪರಿಶುದ್ಧರೂಪ. ಸಂನ್ಯಾಸ ಎಂದರೂ ಇದೇ. ಅಹಂಕಾರವು ನಿರ್ಮೂಲವಾಗಬೇಕು. ನಮ್ಮ ಸಾಮಾನ್ಯ ಭಕ್ತಿಯಲ್ಲಿ ಅಹಂಕಾರ ಕೊಂಚ ಇರುತ್ತದೆ. ಅದೆಲ್ಲ ಹೋಗಿ, ಭಕ್ತಿಯು ಶುದ್ಧವಾದಾಗ ಅದು ಶರಣಾಗತಿ.

(೧೦) **ಶಾಂತಿಪರಮಾರ್ಥತೆ:** ಭೋಗಕ್ಕೂ ಸುಖಕ್ಕೂ ಮೀರಿದ್ದು ಶಾಂತಿ. ರಾಮಾಯಣವನ್ನೂ ಭಾರತವನ್ನೂ ಓದಿದರೆ ಮನಸ್ಸಿಗಾಗುವುದೇನು? ಸುಖಕ್ಕಿಂತ ದುಃಖವೇ ಹೆಚ್ಚೆಂದು ಹೇಳಬಹುದು. ಸುಖದುಃಖಗಳೆರಡನ್ನೂ ಬಿಟ್ಟು ಇನ್ನೇನಾದರೂ ಅಧಿರಸವುಂಟೋ?—ಎಂದರೆ ಉಂಟು. ಅದು ಶಾಂತಿ. ಶಾಂತಿಯೇ ಪರಮಾರ್ಥವೆಂಬ ಭಾವನೆ ಬರಬೇಕು. ಪರಂಗಿದೇಶಗಳಿಗೂ ನಮ್ಮ ದೇಶಕ್ಕೂ ಇರುವ ಮುಖ್ಯ ಭೇದ ಇಲ್ಲಿ. ಶಾಂತಿಯೇ ಸುಖವೆಂದು ನಮ್ಮ ಮತ:

ಅಶಾನ್ತಸ್ಯ ಕುತಃ ಸುಖಮ್? (೨-೬೬)
ಶಾನ್ತಮು ಲೇಕ ಸೌಖ್ಯಮು ಲೇದು—ತ್ಯಾಗರಾಜರು

ಐರೋಪ್ಯದೇಶಗಳವರ ಸುಖವು ಶಾಂತಿಪ್ರಧಾನವಾದದ್ದಾಗದೆ, ಆವೇಶಪ್ರಧಾನವಾದದ್ದು. ಮ್ಯಾತ್ಯು ಆರ್ನಾಲ್ಡ್ ಇದನ್ನು ಪದೇಪದೇ ವಿಚಾರ ಮಾಡುತ್ತಾನೆ: ನಿಮಗೆ ಬೇಕಾದದ್ದು ಯಾವುದು— **Peace** —ಶಾಂತಿ ಬೇಕೇ? ಅಥವಾ **Enjoyment** —ಭೋಗ ಬೇಕೆ?—ಎಂದು. ಏನೋ ಒಂದು ಬಗೆಯಾಗಿ ಇಂದ್ರಿಯಗಳನ್ನು (Titillation) ಚುಮಚುಮವೆನಿಸುವುದು ಅವರ ಸುಖದ ಕಲ್ಪನೆ. ಮೂಗಿಗೆ ನಸ್ಯ, ನಾಲಿಗೆಗೆ ಹೆಂಡ, ಮೈಗೆ ವೇಗ, ಚರ್ಮಕ್ಕೆ ಘರ್ಷಣೆ, ಮನಸ್ಸಿಗೆ ಸಂಭ್ರಮ ಇದು ಅವರ ಸುಖಾನುಭವ. ಅಂಥ ಉದ್ರೇಕ ಉನ್ಮಾದಗಳನ್ನು ಕಡಮೆಮಾಡಿಕೊಳ್ಳಬೇಕೆಂಬುದು ನಮ್ಮ ಪೂರ್ವಿಕರ ಸುಖಾದರ್ಶ.

> ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ ।
> ನಿರ್ಮಮೋ ನಿರಹಂಕಾರಃ ಸ ಶಾನ್ತಿಮಧಿಗಚ್ಛತಿ ॥ (೨-೭೧)
> ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ… ॥ (೨-೭೨)
> ಯಸ್ಮಾನ್ನೋದ್ವಿಜತೇ ಲೋಕಃ । ಲೋಕಾನ್ನೋದ್ವಿಜತೇ ಚ ಯಃ ॥ (೧೨-೧೫)

ಮೋಕ್ಷದಶೆ ಪರಮಶಾಂತಿಯದು. ಜ್ಞಾನಿಯ ಜೀವನ ಅದು. ಭಿನ್ನಭಿನ್ನಗಳೆಂದು ತೋರುವ ಎಲ್ಲವೂ ಜ್ಞಾನಿಯ ದೃಷ್ಟಿಯಲ್ಲಿ ಏಕೀಕೃತವಾಗಿರುತ್ತವೆ: ಅಂತರ್ಬಹಿರೇಕೀಕರಣ—ಸ್ವಕೀಯ ಪರಕೀಯೈಕೀಕರಣ (Subject–Object Integration) ಪೂರ್ಣಜ್ಞಾನಿಯ ಲಕ್ಷಣ. ಒಳಗು-ಹೊರಗು, ಮೇಲು-ಕೆಳಗು, ನಾನು-ನೀನು, ಅದು-ಇದು—ಇಂಥ ಭೇದಗಳೆಲ್ಲ ಅಂತರಂಗದಲ್ಲಿ ಎಣಿಕೆಗೆ ಬಾರದೆ ಹೋದಾಗ ಬ್ರಹ್ಮದರ್ಶನ. ಆ ಸ್ಥಿತಿ ಪಡೆದವನಿಗೆ ಯಾರಲ್ಲಿಯೂ ದ್ವೇಷವಿಲ್ಲ, ಯಾರನ್ನು ಕಂಡರೂ ಭಯವಿಲ್ಲ. ತನ್ನಿಂದ ಬೇರೆಯಾದದ್ದೊಂದಿದ್ದರಲ್ಲವೆ ಭಯ?

> ದ್ವಿತೀಯಾದ್ವೈ ಭಯಂ ಭವತಿ ॥

ಒಂದೆರಡು ದಿನಗಳಲ್ಲಿ ಸಾಧ್ಯವಿಲ್ಲ ಈ ಬ್ರಾಹ್ಮೀಸ್ಥಿತಿಯನ್ನು ಪಡೆಯುವುದು. ಆದರೆ ಸಂತತವಾಗಿ ನಮ್ಮ ಉದ್ದೇಶದಲ್ಲಿರಬೇಕಾದದ್ದು ಅದು. ಆ ಸ್ಥಿತಿಯನ್ನು ಪಡೆದಿರುವವನು ಅಜಾತಶತ್ರುವಾಗುತ್ತಾನೆ. ಅವನಿಗೆ ಲೋಕವೇ ಕ್ರೀಡಾರಂಗವಾಗುತ್ತದೆ; ಜೀವನವ್ಯಾಪಾರವೆಲ್ಲ ಒಂದು ವಿನೋದವಾಗುತ್ತದೆ.

ಈ ಮೇಲಣ ದಶನಿಷ್ಠೆಗಳ ತಾತ್ಪರ್ಯವು ಜೀವಸಂಸ್ಕಾರ ಮತ್ತು ಜೀವೋನ್ನತಿ; ಅದು ಪರಮಾತ್ಮಸಂದರ್ಶನಕ್ಕೆ ಬೇಕಾದ ಪೂರ್ವಸಿದ್ಧತೆ. ಈ ನಿಷ್ಠೆಗಳನ್ನು ಸಂತತವಾಗಿ ಅಭ್ಯಾಸ ಮಾಡಿದವನಿಗೆ ಅವನವನ ಪ್ರಾಚೀನಭಾಗ್ಯದಂತೆ, ಅವನವನ ಅಭ್ಯಾಸಬಲದಂತೆ, ಭಗವತ್ಸಾನ್ನಿಧ್ಯವು ಸಮೀಪವಾಗುತ್ತದೆ. ಭಗವದ್ಗೀತೆ ಪರವಸ್ತುವನ್ನು ಪಡೆಯಲು ಉಪಾಯ ತೋರಿಸೀತೇ ಹೊರತು ಪರವಸ್ತುವನ್ನೇ ತಂದು ನಮ್ಮ ಕೈಯಲ್ಲಿರಿಸಲಾರದು. ವಸ್ತುಪ್ರಾಪ್ತಿ ಅಪೇಕ್ಷಕನ ಯೋಗ್ಯತೆಯಂತೆ ಆಗತಕ್ಕದ್ದು.

ಹೀಗೆ ಯೋಗ್ಯತಾಸಂಪಾದನಕ್ರಮವನ್ನು ಸಂಕ್ಷೇಪವಾಗಿ ಜ್ಞಾಪಕಕ್ಕೆ ತಂದುಕೊಂಡದ್ದಾದ ಮೇಲೆ, ನಾವು ಹಿಂದೆ ನೋಡಿದ ನಾಲ್ಕು ಬಗೆಯ ಕಾಲವ್ಯತ್ಯಾಸ ಸಂಕಟಗಳನ್ನು ಕೊಂಚ ಪುನರಾಲೋಚನೆ ಮಾಡೋಣ.

೧. ವರ್ಣವಿಭಾಗದ ಶೈಥಿಲ್ಯ

ಗೀತೋಪದೇಶದ ಮುಖ್ಯಾಂಶಗಳಲ್ಲಿ ಅತಿಮುಖ್ಯವಾದದ್ದು ಸ್ವಧರ್ಮನಿಷ್ಠೆ. ಸ್ವಧರ್ಮದ ನಿರ್ಧಾರವಾದರೋ ಅಲ್ಲಿ ಚಾತುರ್ವರ್ಣ್ಯವ್ಯವಸ್ಥೆಯನ್ನು ಅವಲಂಬಿಸಿಕೊಂಡಿದೆ. ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ—ಈ ನಾಲ್ಕು ಜಾತಿಗಳೂ ಬೇರೆ ಬೇರೆಯಾದವು. ಅವುಗಳ ಧರ್ಮಗಳೂ ಬೇರೆಬೇರೆಯಾದವು. ಇದು ಅಲ್ಲಿಯ ಮತ. ಅರ್ಜುನನು ಯುದ್ಧಮಾಡಬೇಕು, —ಯುದ್ಧ ಮಾಡಲೇಬೇಕು, —ಯುದ್ಧ ಮಾಡದಿದ್ದರೆ ಪಾಪ. ಅದು ಹೇಗೆಂದರೆ ಯುದ್ಧವು ಕ್ಷತ್ರಿಯನ ಧರ್ಮ. ಅರ್ಜುನನು ಕ್ಷತ್ರಿಯ, ಅವನಿಗೆ ಯುದ್ಧಕರ್ತವ್ಯತೆ ವರ್ಣಧರ್ಮದಿಂದ ಬಂದದ್ದು. ಹೀಗೆ ಧರ್ಮಾಧರ್ಮ ನಿರ್ಣಯದಲ್ಲಿ ಜಾತಿ ಮುಖ್ಯವೆಂದು ಸಿದ್ಧವಾಯಿತು.

ನಮ್ಮ ಕಾಲದಲ್ಲಾದರೋ ಜಾತಿ ಬಹುವಾಗಿ ಖಿಲವಾಗಿದೆ. ಹಿಂದಿನ ವರ್ಣವ್ಯವಸ್ಥೆ ಈಗ ಸಡಲಿ ಕುಸಿದುಬೀಳುತ್ತಿದೆ. ಈಗ ಧರ್ಮಾಧರ್ಮನಿರ್ಣಯ ಹೇಗೆ—ಎಂದು ಪ್ರಶ್ನೆಯೇಳುವುದು ಸಂಗತವಾಗಿದೆ. ಈಗ ನಡೆದಿರುವ ಜಾತಿಸಾಂಕರ್ಯವನ್ನು ಸರಿಯೆಂದು ಅಂಗೀಕರಿಸೋಣವೆ? ತಪ್ಪೆಂದು ವಿರೋಧಿಸೋಣವೆ? ಇದು ನಮಗಿರುವ ಪ್ರಶ್ನೆ. ಇದಕ್ಕೆ ಸಮಾಧಾನವನ್ನು ಹುಡುಕುವುದರಲ್ಲಿ ಸಾಂಕರ್ಯವೆಂಬುದರ ಸ್ವರೂಪ ಪರಿಣಾಮಗಳನ್ನು ಸಂಕ್ಷೇಪವಾಗಿ ವಿಚಾರ ಮಾಡುವುದು ಸಂಗತವಾಗಿದೆ.

ಸಾಂಕರ್ಯವೆಂದರೆ ಬೆರಕೆ—ಇಲ್ಲಿ ಜಾತಿಕುಲಗಳ ಬೆರಕೆ. ಅದು ಸ್ತ್ರೀಪುರುಷದೇಹಸಂಬಂಧಜನ್ಯವಾದದ್ದು. ಇದು ಎರಡು ತೆರನಾದದ್ದು: (೧) ವಿವಾಹಪೂರ್ವಕವಾದದ್ದು. (೨) ವಿವಾಹಪೂರ್ವಕವಲ್ಲದ್ದು.

ಈ ಎರಡನೆಯ ಬಗೆಯನ್ನು ಕುರಿತು ಹೆಚ್ಚಾಗಿ ಚರ್ಚಿಸಬೇಕಾದದ್ದಿಲ್ಲ. ಅಂಥಾದ್ದನ್ನು ಯಾವ ದೇಶದವರೂ ಮತದವರೂ ಕ್ರಮವ್ಯವಹಾರಕ್ಕಾಗಿ ಒಪ್ಪಿಕೊಂಡಿಲ್ಲ. ಅದು ಅಕ್ರಮವೆಂದೇ ಬಹುಜನದ ಪ್ರಕಟಾಭಿಪ್ರಾಯ. ಅದನ್ನು ಮಾಡಿಕೊಂಡಿರುವವರೂ ಕೂಡ ಅದನ್ನು ಪ್ರಕಟವಾಗಿ ತೋರಿಸದೆ ಮರೆಮಾಚಿಟ್ಟುಕೊಂಡಿರುತ್ತಾರೆ. ಅಂಥಾ ಸಂದರ್ಭ ಹೇಗೋ ಯಾವ ಕಾರಣದಿಂದಲೋ ನಡೆದುಹೋಗುತ್ತದೆ. ಅದು ಸಮಾಜಸಮ್ಮತವಲ್ಲ ಎಂಬಷ್ಟನ್ನು ಮಾತ್ರ ಹೇಳಿ, ವಿವಾಹಪೂರ್ವಕವಾದ ಸಾಂಕರ್ಯದ ವಿಚಾರವನ್ನು ನೋಡೋಣ. ಇಲ್ಲಿ

ಮುಖ್ಯಪ್ರೇರಕವಾಗತಕ್ಕದ್ದು ವಧುವಿನಲ್ಲಿಯೋ ವರನಲ್ಲಿಯೋ, ವರಿಸುವವನ ಅಥವಾ ವರಿಸುವವಳ ಕಣ್ಣಿಗೆ ಕಾಣಬರುವ ಆಕರ್ಷಣೆಗಳು. ಅವು ವಿಶೇಷವಾಗಿ (೧) ರೂಪ, (೨) ಧನ, (೩) ಪ್ರತಿಷ್ಠೆ, (೪) ಅಧಿಕಾರ, (೫) ಕೀರ್ತಿ—ಇವು. ಈ ಗುಣಸಂಪತ್ತುಗಳು ದೂಷ್ಯಗಳಲ್ಲ, ಅಪೇಕ್ಷಣೀಯಗಳೇ. ವಿವಾಹದ ಮುಖ್ಯೋದ್ದೇಶಕ್ಕೆ ಸಾಧಕವಾಗುವಷ್ಟು ಮಟ್ಟಿಗೆ ಅವು ಅವಶ್ಯಗಳೇ ಸರಿ. ಹಾಗಾದರೆ ವಿವಾಹದ ಮುಖ್ಯೋದ್ದೇಶವೇನು?

ವಿವಾಹವು ಒಂದು ಜೀವಸಂಸ್ಕಾರ, ಲೌಕಿಕಾನುಕೂಲಮಾತ್ರದ ವ್ಯವಸ್ಥೆಯಲ್ಲ. ಇದೇ ಹಿಂದೂ ಜನಕ್ಕೂ ದೇಶಾಂತರಗಳವರಿಗೂ ಇರುವ ಮೂಲಭೇದ. ಇಲ್ಲಿ ಮಿಕ್ಕ ಜನದ ದೃಷ್ಟಿಯೇ ಬೇರೆ; ನಮ್ಮ ದೃಷ್ಟಿಯೇ ಬೇರೆ.

ನಮ್ಮಲ್ಲಿ ವಿವಾಹದ ಮುಖ್ಯತತ್ತ್ವ ಅದು ಜೀವಸಂಸ್ಕಾರವೆಂಬುದು—ಎಂದು ಹೇಳಿದೆವು. ಆ ಸಂಸ್ಕಾರದ ಉದ್ದೇಶಗಳು ಮುಖ್ಯವಾಗಿ ನಾಲ್ಕು: (೧) ಧರ್ಮಸಹಭಾಗಿತ್ವ, (೨) ವಂಶಾನುಕ್ರಮ ರಕ್ಷಣೆ, (೩) ಆತ್ಮಾಂತರ್ಗುಣವಿಕಾಸ, (೪) ಸಮಾಜ ಪ್ರಯೋಜನ.

ಇವುಗಳಲ್ಲಿ ಮೊದಲನೆಯ ಎರಡೂ ನಮ್ಮ ಕಾಲದಲ್ಲಿ ಕೆಲಮಂದಿಗೆ ಅಪ್ರಸಕ್ತವೆಂದು ತೋರಬಹುದು. ಧರ್ಮಸಹಭಾಗಿತೆಯೆಂದರೆ ವ್ರತದಾನಾದಿ ಭಗವತ್ಕಾರ್ಯಗಳಲ್ಲಿಯೂ ವಿವಾಹಾದಿ ಸಾಮಾಜಿಕಕಾರ್ಯಗಳಲ್ಲಿಯೂ ಪತಿಪತ್ನಿಯರಿಬ್ಬರೂ ಸಹವರ್ತಿಗಳಾಗಬೇಕೆಂಬುದು. ಭಾರ್ಯೆಯನ್ನು ಬಿಟ್ಟು ಯಾವ ಶಾಸ್ತ್ರಕಾರ್ಯವನ್ನೂ ಮಾಡಲಾಗದು. ಪೂಜೆಪುರಸ್ಕಾರಗಳ ಪರಿಸಮಾಪ್ತಿಯಲ್ಲಿ ಧರ್ಮಪತ್ನಿಯಾದವಳು ಧಾರೆಯೆರೆದು ಕೃಷ್ಣಾರ್ಪಣವೆಂದು ಗಂಡನೊಡನೆ ಕೈಜೋಡಿಸಬೇಕು. ಹೀಗೆ ಸಮಸ್ತ ಧರ್ಮಕಾರ್ಯಗಳಿಗೂ ಅವಶ್ಯವಾಗಿ ಜೊತೆಗೂಡಬೇಕಾದವಳು ವಿವಾಹಿತಪತ್ನಿ.

ವಂಶಧರ್ಮವೆಂದರೆ ಒಂದು ಕಡೆ ಧರ್ಮಪ್ರಜಾಸಂತತಿ; ಇನ್ನೊಂದು ಕಡೆ ಆ ಸಂತಾನದಿಂದ ಸಾಧ್ಯವಾಗುವ ಕುಲಧರ್ಮ ಜಾತಿಧರ್ಮಗಳು ಮತ್ತು ಪೂರ್ವಪಿತೃಶ್ರಾದ್ಧಾದಿಗಳು. ಇದನ್ನೇ

> ಕುಲಕ್ಷಯೇ ಪ್ರಣಶ್ಯನ್ತಿ ಕುಲಧರ್ಮಾಃ ಸನಾತನಾಃ । (೧-೪೦)
> ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
> ಪತನ್ತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥ (೧-೪೨)

—ಎಂಬಲ್ಲಿ ಅರ್ಜುನನು ಸೂಚಿಸಿರುವುದು. ಹೆಚ್ಚು ವಿವರಣೆ ಇಲ್ಲಿ ಅನಾವಶ್ಯಕ.

ವಿವಾಹಸಂಸ್ಕಾರದ ಮತ್ತೊಂದು ಮುಖ್ಯ ಪ್ರಯೋಜನ ಆತ್ಮಗುಣವಿಕಾಸ. ಗಂಡೂಹೆಣ್ಣೂ ಪತಿಪತ್ನಿಯರಾದಲ್ಲಿ ಪರಸ್ಪರ ಗುಣಪರಿಪೂರಕರಾಗುತ್ತಾರೆ; ಅನ್ಯೋನ್ಯಶಿಕ್ಷಕರೂ ಆಗುತ್ತಾರೆ. ದಾಂಪತ್ಯವು ಮೃಧುಮಧುರ ಮಾರ್ಗದಲ್ಲಿ ಕ್ಷಣೇ ಕ್ಷಣೇ ನಡೆಯುತ್ತಿರುವ ನೀತಿಶಿಕ್ಷಣ. ಕಷ್ಟಾನುಭವ ಸುಖಾನುಭವಗಳಲ್ಲಿಯೂ ಚಿಂತೆಯಲ್ಲಿಯೂ ಉದ್ದೇಶಗಳಲ್ಲಿಯೂ ಇಬ್ಬರೂ ಸಹಭಾಗಿಗಳಾಗುವುದರಿಂದ ಇಬ್ಬರ ಹೃದಯಗಳೂ ವಿಕಸಿತಗಳಾಗಿ, ಇಬ್ಬರೂ ಲೋಕಾನುಭವ ಸಂಪಾದಿಸಿ, ಯುಕ್ತಾಯುಕ್ತ ಪರಿಜ್ಞಾನವನ್ನು ಬೆಳಸಿಕೊಳ್ಳುತ್ತಾರೆ. ಅವರಿಬ್ಬರ ಸ್ವಾಭಾವಿಕ ದೋಷಗಳು ಹಾಗೆ ಕ್ರಮೇಣ ಕಳೆದು, ಎರಡು ಜೀವಗಳೂ ಪರಿಪಾಕಕ್ಕೆ ಬರುತ್ತವೆ. ಈ ಜೀವಪರಿಪಾಕದಿಂದ ಮನಸ್ಸು ಕ್ರಮೇಣ ಉನ್ನತವಾಗಿ ತಾತ್ಕಾಲಿಕದಿಂದ ಪರಮಾರ್ಥದ ಕಡೆಗೆ ತಿರುಗುತ್ತದೆ; ಸಣ್ಣ ಸಣ್ಣ ಮಮತೆಗಳಿಂದ ಮನಸ್ಸು ವಿಶಾಲ ಲೋಕಸಹಾನುಭೂತಿಯ ಕಡೆಗೆ ತಿರುಗುತ್ತದೆ. ಇದೇ ಆಧ್ಯಾತ್ಮಿಕ ವಿವೇಕಕ್ಕೆ ದಾರಿ. ಲೋಕನೀತಿಸಮುನ್ನತಿಗೂ ಇದೇ ತಕ್ಕ ಅಭ್ಯಾಸ. ಈ ನೀತಿವಿಕಾಸಗಳೂ ಆಧ್ಯಾತ್ಮಿಕ ಪ್ರಗತಿಯೂ ಅಕ್ರಮಸಂಬಂಧಗಳಿಂದಲೂ ಕಳ್ಳಕೂಡಿಕೆಗಳಿಂದಲೂ ಲಭಿಸಲಾರವು. ಸಂಕರದಾಂಪತ್ಯಕ್ಕೂ ಆ ಪ್ರಯೋಜನಗಳು ಸುಲಭವಲ್ಲ; ಏಕೆಂದರೆ ಅಲ್ಲಿ ಸಮಾಜದ ಪ್ರಭಾವವಿರದು. ದಾಂಪತ್ಯಜೀವನದ ನಾನಾ ಸಂದರ್ಭಗಳಲ್ಲಿ ಬಂಧುಮಿತ್ರರ ಮತ್ತು ನೆರೆಹೊರೆಯ ಸಮಾಜದ ಸಂಪರ್ಕವು ಅವಶ್ಯವಾಗುತ್ತದೆ. ಹಾಗೆ ಬಂದ ಸಮಾಜಸಂಪರ್ಕದಲ್ಲಿ ದಂಪತಿಗಳಿಗೂ ಸಮಾಜಕ್ಕೂ ಪರಸ್ಪರ ಉಪಕಾರವಾಗುತ್ತದೆ. ವಿವಾಹವೆಂಬ ಪದ್ಧತಿಯಿಂದಾಗುವ ಪ್ರಯೋಜನಗಳಲ್ಲಿ ಈ ಸಮಾಜಪ್ರಯೋಜನದೃಷ್ಟಿ ಅತ್ಯಂತ ಮುಖ್ಯವಾದದ್ದು. ಹಿಂದೂ ಜನಕ್ಕೂ ಇತರರಿಗೂ ಇರುವ ಭೇದಗಳಲ್ಲಿ ಇದು ಇನ್ನೊಂದು ಮುಖ್ಯವಾದ ಅಂಶ. ಮಿಕ್ಕ ಜನಕ್ಕೆ ಮದುವೆಯೆಂಬುದು ವೈಯಕ್ತಿಕ ಘಟನೆ. ಹಿಂದೂಗಳಿಗೆ ಮದುವೆಯೆಂಬುದು ಸಾಮಾಜಿಕ ಘಟನೆ.

ನಮ್ಮಲ್ಲಿ ಈಚೀಚಿನ ದೊಡ್ಡ ಮನುಷ್ಯರಲ್ಲಿ ವಿವಾಹವು ವ್ಯಕ್ತಿಮಾತ್ರದ ಪ್ರಸಕ್ತಿ ಎಂಬ ಅಭಿಪ್ರಾಯ ಬರುತ್ತಿದೆ. “ಗಂಡು ಯಾರಾದರಾಗಲಿ, ಹೆಣ್ಣು ಯಾರಾದರಾಗಲಿ, ಅವರವರಿಗಿಷ್ಟವಾದವರನ್ನು ಅವರವರು ಕಟ್ಟಿಕೊಳ್ಳಲಿ; ಅವರಷ್ಟಕ್ಕವರು ಸುಖವಾಗಿದ್ದರೆ ಸಾಕು; ಅವರಿಂದ ನಮಗೇನಾಗಬೇಕು?” —ಎಂಬೀ ರೀತಿಯಲ್ಲಿ ಮಾತನಾಡುವ ರೂಢಿ ಬಂದಿದೆ. ಅದು ತುಷ್ಟಪುಷ್ಟರ ಮಾತು; ಕಷ್ಟಸಂಭವವನ್ನು ಕಾಣದಿರುವವರ ಮಾತು;

ಅದಕ್ಕಿಂತ ಹೆಚ್ಚಾಗಿ, ಜೀವೋತ್ಕರ್ಷದ ಚಿಂತೆಯಿಲ್ಲದವರ ಮಾತು. ಒಂದು ವಿವಾಹವು ಅವರಿಬ್ಬರ ಸಂತೋಷದಷ್ಟುಮಟ್ಟಿನ ಮಾತೆಂಬುದು ದೂರಾಲೋಚನೆಯಿಲ್ಲದ್ದು, ಮತ್ತು ಸಂಕೋಚಭಾವನೆಯದು. ವಿವಾಹವಾಗುವುದು ಸಮಾಜದ ಹಿತಾಭಿವೃದ್ಧಿಗಾಗಿ. ದಾಂಪತ್ಯದಿಂದಾದ ಸಂತಾನಾದಿ ಪರಿಣಾಮಗಳ ನಿರ್ವಾಹಕ್ಕೆ ಸಮಾಜವು ಬಾಧ್ಯಪಟ್ಟಿರುತ್ತದೆ. ಸ್ವಜನದಲ್ಲಿ ದುರ್ಬಲರಾದವರೂ ನಿರ್ಗತಿಕರೂ ಅಂಗಹೀನರೂ ಭಾಗ್ಯಹೀನರೂ ತಮ್ಮ ಜನದ ಕುಟುಂಬ ಯಾವುದಾದರೂ ಚೆನ್ನಾಗಿದ್ದೀತೆ? ತಮಗೆ ಅಲ್ಲಿ ಆಶ್ರಯ ದೊರೆತೀತೆ?—ಎಂದು ನಿರೀಕ್ಷಿಸಿಕೊಂಡಿರುತ್ತಾರೆ. ಒಂದು ಕುಟುಂಬದ ಯೋಗಕ್ಷೇಮಗಳು ಹತ್ತು ಕುಟುಂಬಗಳ ಯೋಗಕ್ಷೇಮಗಳನ್ನು ಅವಲಂಬಿಸಿಕೊಂಡಿರುತ್ತವೆ; ಹಾಗೆಯೇ ಹತ್ತಕ್ಕೆ ಆಶ್ರಯವೂ ಆಗುತ್ತದೆ. ಇದು ಹಿಂದೂ ಅವಿಭಕ್ತ ಕುಟುಂಬದ—ಸಮಷ್ಟಿ ಕುಟುಂಬದ—ಮಹಾಗುಣ. ಅದು ಸಹಭಾಗಿತೆಯನ್ನು ಅಭ್ಯಾಸ ಮಾಡಿಸುತ್ತದೆ. ಅದು ನಾಲ್ವರಲ್ಲಿ ಒಬ್ಬರೊಬ್ಬರಿಗೆ ಕೊಡೋಣ, ಕೂಡಿಕೊಳ್ಳೋಣ, ಸೋಲೋಣ, ಸಹಿಸೋಣ—ಇದನ್ನು ಕಲಿಸುತ್ತದೆ. ಹೀಗೆ ಸಹಕಾರಾಭ್ಯಾಸಕಾರಿಯಾಗಿ, ಸಮಾಜಪರಿಪೋಷಕವಾದ ಕುಟುಂಬಭಾವನೆಗೆ ಮೂಲಸ್ತಂಭದೋಪಾದಿಯಲ್ಲಿರತಕ್ಕದ್ದು ವಿವಾಹಸಂಸ್ಕಾರ. ಆದದ್ದರಿಂದಲೇ ಹರಿಜನರಾದಿಯಾಗಿ ಸಮಸ್ತ ಹಿಂದೂವರ್ಣಗಳಲ್ಲಿಯೂ ವಿವಾಹವೆಂಬುದು ಸಮಸ್ತ ಸಮಾಜಕ್ಕೂ ಸಂಬಂಧಪಟ್ಟ ಘಟನೆಯೆಂದು ಪೂರ್ವಕಾಲದಿಂದ ಭಾವನೆ ಸಾಮಾನ್ಯವಾಗಿ ಬಂದಿದೆ. ವಿವಾಹಕಾಲಕ್ಕೆ ಸ್ವಸಮಾಜಸ್ಥರೆಲ್ಲರನ್ನೂ ಕರೆಯಬೇಕೆಂಬ ನಿರ್ಬಂಧವೂ, ಅವರೆಲ್ಲ ಸೇರಿ ಕನ್ಯಾದಾನಕ್ಕೆ ಅನುಜ್ಞೆ ಕೊಡಬೇಕೆಂಬ ಪದ್ಧತಿಯೂ, ಸರ್ವರೂ ಅದನ್ನು ಹರಸಬೇಕೆಂಬ ಕೋರಿಕೆಯೂ ವಿವಾಹವು ವೈಯಕ್ತಿಕಘಟನೆ ಮಾತ್ರವಲ್ಲ, ಅದು ಸಾಮಾಜಿಕ ಘಟನೆ ಎಂಬುದನ್ನು ಸ್ಥಿರಪಡಿಸುತ್ತವೆ.

ಈ ಮೇಲೆ ಹೇಳಿದ ನಾಲ್ಕು ಸಂಸ್ಕಾರಪ್ರಯೋಜನಗಳ ದೃಷ್ಟಿಯಿಂದ ವಿವಾಹವನ್ನು ನೋಡಿದರೆ, ವಿವಾಹದ ಪರಿಣಾಮಗಳು ದೇಹಮಾತ್ರದವಲ್ಲ, ಆಧ್ಯಾತ್ಮಿಕಗಳು; ಭೋಗ ಮಾತ್ರದವಲ್ಲ, ಜೀವೋತ್ಕರ್ಷದವು—ಎಂಬುದು ಸ್ಪಷ್ಟಪಡುತ್ತದೆ.

ಹೀಗೆ ಆಧ್ಯಾತ್ಮಿಕವೂ ಪಾರಮಾರ್ಥಿಕವೂ ಮನುಷ್ಯಜೀವನದ ಮುಖ್ಯಾಂಶಗಳೆಂದು ಒಪ್ಪಿಕೊಂಡಮೇಲೆ, ವಿವಾಹದಲ್ಲಿ ಮೊದಲು ಗಣ್ಯವಾಗಬೇಕಾದ ಲಕ್ಷಣಗಳು ವಧೂವರರ ಆನುಪೂರ್ವಿ, ಗೃಹಸಂಪ್ರದಾಯ, ಧರ್ಮಸಾಹಚರ್ಯ—ಇವು. ಅವು ಮುಖ್ಯ

ಸಂಗತಿಯಾಗಿ, ರೂಪ, ಸಂಪತ್ತು, ಪ್ರತಿಷ್ಠೆ ಮೊದಲಾದವು ಗೌಣಾಂಶಗಳಾಗುತ್ತವೆ. ಯಾರು ಈ ಜೀವಸಂಸ್ಕಾರ ಸೌಕರ್ಯಗಳನ್ನು ಉಪೇಕ್ಷಿಸಿ, ರೂಪೈಶ್ವರ್ಯಾದಿಗಳಿಗಾಗಿಯೇ ಜಾತಿಕುಲಗಣನೆಯನ್ನು ವರ್ಜಮಾಡುತ್ತಾರೋ ಅವರು ಮುಖ್ಯವಾದದ್ದಕ್ಕೆ ಕೊಡಬೇಕಾದ ಬೆಲೆಯನ್ನು ಗೌಣವಾದದ್ದಕ್ಕೆ ಕೊಡುತ್ತಾರೆ; ತಾತ್ಕಾಲಿಕ ಲಾಭಕ್ಕಾಗಿ ಚಿರಕಾಲದ ಲಾಭವನ್ನು ತೊರೆಯುತ್ತಾರೆ; ದೇಹಭೋಗವನ್ನು ಗಣಿಸಿ ಆತ್ಮೋತ್ಕರ್ಷಕ್ಕೆ ತಡೆಮಾಡಿಕೊಳ್ಳುತ್ತಾರೆ. ಇದು ಜಾತಿಸಾಂಕರ್ಯ ಕುಲಸಾಂಕರ್ಯಗಳಲ್ಲಿರುವ ಅಪಾಯ.

ಧರ್ಮವಿಷಯದಲ್ಲಿ ಭಗವಂತನು—

> ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ॥ (೧೮-೪೭)

ಎಂದು ಹೇಳಿರುವ ಉಪದೇಶವು ವಿವಾಹಪ್ರಕರಣಕ್ಕೂ ಅನ್ವಯಿಸುತ್ತದೆ. ಸ್ವಜಾತಿಯ ಹೆಣ್ಣು ಬೇರೊಂದು ಹೆಣ್ಣಿನಷ್ಟು ರೂಪವತಿಯಲ್ಲದಿದ್ದರೂ, ಸ್ವಜಾತಿಯ ಗಂಡು ಬೇರೊಂದು ಗಂಡಿನಷ್ಟು ಹಣವಂತನೂ ಪ್ರತಿಷ್ಠಾವಂತನೂ ಆಗದಿದ್ದರೂ, ಅವರು ಸ್ವಧರ್ಮಕ್ಕೂ ಸ್ವಸಮಾಜ ಸ್ವಸಂಪ್ರದಾಯಗಳಿಗೂ ಹೆಚ್ಚು ಸುಲಭವಾಗಿ ಒಗ್ಗಿಕೊಳ್ಳುತ್ತಾರೆ. ಆಕೆ ಹೆಚ್ಚು ಇಷ್ಟದಿಂದ ಧರ್ಮಸಹಭಾಗಿಯಾಗುತ್ತಾಳೆ. ಅವನು ಹೆಚ್ಚು ಉತ್ಸಾಹದಿಂದ ಧರ್ಮಪಾಲನೆಗೆ ಒದಗುತ್ತಾನೆ. ಅನ್ಯಜಾತಿಯಾಕೆ ಹೆಚ್ಚು ರೂಪವತಿಯಾಗಿದ್ದರೂ ಧರ್ಮಸಹಭಾಗಿತೆಯೂ ಸಮಾಜದ ಸಹಭಾಗಿತೆಯೂ ಆಕೆಗೆ ಅಷ್ಟು ಸ್ವಾಭಾವಿಕವಾಗದು; ಅಷ್ಟು ಸುಲಭವಾಗದು. ಇದು ಮೂಲತತ್ತ್ವ.

ಇಂಥಾದ್ದು ಸಾಂಕರ್ಯದ ಪ್ರತಿಕೂಲತೆ. ಆದದ್ದರಿಂದಲೇ ಅರ್ಜುನನು

> ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥ (೧-೪೧)

ಎಂದು ಪ್ರಲಾಪಿಸಿದ್ದು.

ಮಹಾಭಾರತದ ವೇಳೆಗೇ ವರ್ಣಸಂಕರವಾಗಿದ್ದದ್ದರ ಲಕ್ಷಣಗಳು ಹೇರಳವಾಗಿ ಕಂಡುಬರುತ್ತವೆ. ಅದು ಪ್ರಕೃತಿಯ ನೈಜದಿಂದ ಆದದ್ದು, ಯಾರೊಬ್ಬರಿಂದಲೂ ಆದದ್ದಲ್ಲ; ಮನುಷ್ಯಚರಿತ್ರೆಯ ಸ್ವತೋವಿಕಾಸದಿಂದ ಆದದ್ದು. ಕಾಲತಂತ್ರವನ್ನು ಆಗಲೇ ನೋಡಿದ್ದೇವೆ.

ಕೊಳೆಯುವುದಕ್ಕೆ ಮೊದಲಾದ ಹಣ್ಣು ಬರಬರ ಇನ್ನಷ್ಟು ಕೊಳೆಯುವಂತೆ, ದ್ವಾಪರಯುಗದಲ್ಲಿ ಮೊದಲಾದ ಸಾಂಕರ್ಯ ಕಲಿಯುಗದಲ್ಲಿ ಮತ್ತೂ ಹೆಚ್ಚುವುದು ಸ್ವಾಭಾವಿಕವೇ ಸರಿ.

ಆದರೆ ಇದನ್ನು ಕುರಿತು ಹಲುಬಿ ಪ್ರಯೋಜನವೇನು? ಈ ವಿಷಯಕ್ಕೆ ಇನ್ನೊಂದು ಪಕ್ಕವಿದೆ. ಅದನ್ನೂ ನೋಡಬೇಕು. ನಮಗೆ ಸಾಂಕರ್ಯ ತೋರುವುದು ಪಟ್ಟಣಿಗರ ಎತ್ತರೆತ್ತರದ ಪ್ರದೇಶಗಳಲ್ಲಿ ಮಾತ್ರ. ಧನಿಕರೂ ಪ್ರತಿಷ್ಠಾವಂತರೂ ಅಧಿಕಾರೋನ್ನತರೂ ಆದ ಜನ ನಾನಾ ಕಾರಣಗಳಿಂದ ಸಾಂಕರ್ಯ ಮಾಡಿಕೊಂಡಿದ್ದಾರೆ. ಇವರು ಪಟ್ಟಣಗಳಲ್ಲಿರುವ ನವನಾಗರಿಕರು. ಇವರನ್ನೊಂದು ಪಕ್ಕಕ್ಕಿಟ್ಟು, ಹಳ್ಳಿಗಾಡುಗಳ ಕಡೆಯೂ ಧನಬಲವಿಲ್ಲದ ಜನವರ್ಗಗಳ ಕಡೆಯೂ ನೋಡಿದರೆ, ಅಲ್ಲಿ ಇನ್ನೂ ಸಾಂಕರ್ಯದ ಅಂಗೀಕಾರ ಹೆಚ್ಚಾಗಿ ಕಾಣಬರುತ್ತಿಲ್ಲ. ಅಲ್ಲಿಯ ಜನ ತಮತಮಗೆ ಅನಾದಿಯಾಗಿ ಬಂದಿರುವ ಕುಲಭೇದ ಜಾತಿಭೇದ ಪಂಗಡದ ಭೇದಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿರುತ್ತಾರೆ. ವೈಶ್ಯರಲ್ಲಿ, ಒಕ್ಕಲಿಗರಲ್ಲಿ, ಕುರುಬರಲ್ಲಿ, ಬಣಜಿಗರಲ್ಲಿ, ಬೋಯಿಗಳಲ್ಲಿ, ನಾಯಿಡುಗಳಲ್ಲಿ, ಇಂಥ ಎಲ್ಲ ಜನವರ್ಗಗಳಲ್ಲಿಯೂ ಹಿಂದಿನಿಂದ ಬಂದ ಬಂಧುಸಂಬಂಧಗಳೂ ಕುಲಾಚಾರಗಳೂ ಶಾಸ್ತ್ರಸಂಜ್ಞೆಗಳೂ ಬಹುಮಟ್ಟಿಗೆ ಹಿಂದಿನಂತೆಯೇ ನಡೆದುಕೊಂಡು ಬಂದಿವೆ. ಸಾಂಕರ್ಯವು ಬ್ರಾಹ್ಮಣ ಜನದಲ್ಲಿ ಬಂದಿರುವಷ್ಟು ಇತರ ಹಿಂದೂ ಜನದಲ್ಲಿ ಬಂದಿಲ್ಲ. ಹೀಗೆ ಹಿಂದೂ ಸಮಾಜದ ಹೆಚ್ಚಿನ ಭಾಗದಲ್ಲಿ ವರ್ಣ ವ್ಯವಸ್ಥೆ ಈಗಲೂ ಭದ್ರವಾಗಿದೆ. ಸಾಂಕರ್ಯವು ಇನ್ನು ಮುಂದಕ್ಕೆ ಅಲ್ಲಿಯೂ ಹರಡಬಹುದಲ್ಲವೆ?—ಎಂದರೆ, ಹರಡಬಹುದು ಎಂದೇ ಹೇಳೋಣ, ಅದು ಹರಡೀತು ಎಂದು ಒಪ್ಪಿಕೊಂಡ ಮಾತ್ರದಿಂದ ಅದು ಹರಡಲು ತಕ್ಕದ್ದು ಎಂದು ಒಪ್ಪಿಕೊಂಡಂತಾಗಲಿಲ್ಲ. ಅನಿವಾರ್ಯವಾದದ್ದೆಲ್ಲ ಅಪೇಕ್ಷಣೀಯವೆಂದು ಸಿದ್ಧವಾಗುವುದಿಲ್ಲ.

ಹಾಗಾದರೆ ಯಾರಿಗೆ ವರ್ಣವ್ಯವಸ್ಥೆಯಲ್ಲಿ ನಂಬಿಕೆ ಉಂಟೋ ಅವರು ಮಾಡಬೇಕಾದದ್ದೇನು? ಅವರ ಕರ್ತವ್ಯ ಎರಡು ವಿಧವಾಗಿದೆ:

1. ಇದುವರೆಗೆ ನಡೆದುಹೋಗಿರುವ ಸಾಂಕರ್ಯವನ್ನೂ ಇನ್ನು ಮುಂದಕ್ಕೆ ಅವರಿಂದ ತಡೆಯಲಾಗದ ಸಾಂಕರ್ಯವನ್ನೂ ಕಾಲದ ಕಾರ್ಯವೆಂದು ಸಹಿಸಬೇಕಾದದ್ದು. ಅಲ್ಲಿ ದ್ವೇಷದಿಂದ ಪ್ರಯೋಜನವಾಗದು. ಅದನ್ನು ವಿರೋಧಿಸಬೇಕಾದದ್ದಿಲ್ಲ,

ಅನುಕರಿಸಬೇಕಾದದ್ದೂ ಇಲ್ಲ. ಅದೊಂದು ನವೀನ ಜಾತಿ; ಅದರಷ್ಟಕ್ಕೆ ಅದು ಇದ್ದುಕೊಳ್ಳುತ್ತದೆ.

2. ಪೂರ್ವಬಾಂಧವ್ಯಗಳನ್ನೂ ವಂಶಪಾರಿಶುದ್ಧ್ಯವನ್ನೂ ಆದಷ್ಟುಮಟ್ಟಿಗೆ ಕಾಪಾಡಿಕೊಳ್ಳಬೇಕಾದದ್ದು ವರ್ಣವಿಶ್ವಾಸಿಗಳಿಗೆ ಪ್ರಧಾನ ಕರ್ತವ್ಯ.

ಜಾತಿಗಳೂ ಅವುಗಳಲ್ಲಿ ಪಂಗಡಗಳೂ ಇರುವುದು ದೋಷವೆಂದೂ ಸಮಾಜಕ್ಕೆ ಅದರಿಂದ ಹಾನಿಯೆಂದೂ ಕೆಲವರು ವಾದಿಸುತ್ತಾರೆ. ಅದು ಭ್ರಾಂತಿಯವಾದ ಎಂಬುದರಲ್ಲಿ ನನಗೆ ಸಂದೇಹವಿಲ್ಲ.

ಸಣ್ಣ ಸಣ್ಣ ವರ್ಗವಿಭಾಗಗಳು ಎರಡು ದೃಷ್ಟಿಯಿಂದ ಪ್ರಯೋಜನಕರವಾದವು. ಮೊದಲನೆಯದಾಗಿ, ಆಯಾ ಪಂಗಡದಲ್ಲಿ ಕೆಲಕೆಲವು ವಿಶೇಷ ಗುಣಶಕ್ತಿಗಳೂ ಕೆಲಕೆಲವು ಕುಶಲತೆ ನಿಪುಣತೆಗಳೂ ಕುಲಪರಂಪರೆಯಿಂದ ಬೆಳೆದು ಬಂದು, ತೀಕ್ಷ್ಣತೆಯನ್ನೂ ಸೂಕ್ಷ್ಮತೆಯನ್ನೂ ಪಡೆಯುತ್ತವೆ. ಇದೇ ಕುಲಕಸಬು ಎಂಬುದರ ಗುಣಾಂಶ. ಒಂದು ಕೆಲಸದಲ್ಲಿ ನಿಪುಣತೆ ಬೆಳೆಯುವುದು ಒಳಪಂಗಡಗಳಲ್ಲಾಗುವ **Specialization** — ಕೃಷಿವಿಶೇಷದ ಆಧಿಕ್ಯದಿಂದ ಮತ್ತು ಅಲ್ಲಿಯ ಗೃಹವಾತಾವರಣಪ್ರಭಾವದಿಂದ. ಇದಕ್ಕೆ ಉದಾಹರಣೆಗಳು ಇಂಗ್ಲೆಂಡಿನ ಕಸಬುದಾರಿಯ ಪರಿಸ್ಥಿತಿಯಲ್ಲಿ ಈಹೊತ್ತಿಗೂ ಕಾಣಬರುತ್ತವೆಂದು ಬಲ್ಲವರು ಹೇಳುತ್ತಾರೆ.

ಜಾತಿಪಂಗಡಗಳಿಂದಾಗುವ ಎರಡನೆಯ ಪ್ರಯೋಜನವೆಂದರೆ ಅದು ಆ ಜನಕ್ಕೆ ಒಂದು (Security) ಸುರಕ್ಷಿತತೆಯ ಭಾವನೆಯನ್ನೂ (Intimacy) ಆಪ್ತತೆಯ ಭಾವನೆಯನ್ನೂ ಕೊಡುತ್ತದೆ. ಭಾವನಾವಿಶಾಲತೆಯನ್ನೂ ವಿಸ್ತಾರಜೀವನವನ್ನೂ ಎಲ್ಲರೂ ಹೊಗಳುತ್ತೇವೆ. ಆ ಉತ್ಸಾಹದಲ್ಲಿ ವಾತಾವರಣ ಪರಿಮಿತಿಯ ಬೆಲೆಯನ್ನೂ ಮನಸ್ಸಿನ ಪರಿಸರಸ್ವೀಯತೆಯ ಬೆಲೆಯನ್ನೂ ಮರೆಯುತ್ತೇವೆ. ಸಾಮಾನ್ಯ ಮನುಷ್ಯನ ಜೀವನದಲ್ಲಿ ವಿಸ್ತಾರವಾದದ್ದಕ್ಕೆ ಹೇಗೆ ಒಂದು ಜಾಗವುಂಟೋ ಪರಿಮಿತವಾದದ್ದಕ್ಕೂ ಹಾಗೆ ಒಂದು ಜಾಗವುಂಟು. ವಾಸದ ಮನೆಯಲ್ಲಿ ಮನೆಯವರೆಲ್ಲರೂ ಬಂಧು ಅತಿಥಿಗಳೂ ಒಟ್ಟಿಗೆ ಕೂಡಲಾಗುವಂತೆ ನಡುಮನೆ ದೊಡ್ಡದಾಗಿರುವುದು ಅವಶ್ಯ. ಹಾಗೆಯೇ ಮನೆಯಲ್ಲಿ ದಂಪತಿಗಳಿಗಾಗಿಯೂ ಹುಡುಗರು ಮಕ್ಕಳಿಗಾಗಿಯೂ ಸಣ್ಣ ಸಣ್ಣ ಕೋಣೆಗಳಿರುವುದೂ ಅವಶ್ಯ.

ಒಬ್ಬಾನೊಬ್ಬ ಮಹಾರಾಜರು ಹೊಸದಾಗಿ ಅರಮನೆ ಕಟ್ಟಿಸಿದರಂತೆ. ತಮ್ಮ ಸ್ನೇಹಿತರಾದ ಇನ್ನೊಬ್ಬ ಮಹಾರಾಜರನ್ನು ಅಲ್ಲಿಗೆ ಬರಮಾಡಿಕೊಂಡು ಆ ಅತಿಥಿಗೆ ಹೊಸ ಅರಮನೆಯ ನಾನಾ ಭಾಗಗಳನ್ನು ತೋರಿಸುತ್ತಿದ್ದರಂತೆ. ಎಲ್ಲಿ ಹೋದರೂ ವಿಶಾಲವಾದ ಸಭಾಂಗಣಗಳು; ವಿಸ್ತಾರವಾದ ಮಂಟಪಗಳು; ಎಲ್ಲೆಲ್ಲೂ ಬೆಳಕು; ಎಲ್ಲೆಲ್ಲೂ ಗಾಳಿ. ಇದನ್ನೆಲ್ಲ ನೋಡಿಯಾದಮೇಲೆ ಅತಿಥಿ ಮಹಾರಾಜರು ಮಾಲೀಕ ಮಹಾರಾಜರನ್ನು ಹೀಗೆ ಕೇಳಿದರು:

"ಅರಮನೆ ಬಹು ಸೊಗಸಾಗಿದೆ. ಆದರೆ ನೀವು ವಾಸಮಾಡುವುದೆಲ್ಲಿ?"

"ಇಲ್ಲೇ."

"ಏನಯ್ಯ, ಇಷ್ಟು ದೊಡ್ಡ ಹಾಲುಗಳಲ್ಲಿ ಯಾರಾದರೂ ವಾಸಮಾಡುತ್ತಾರೆಯೆ? ಇಲ್ಲಿ ಸಭೆ ನಡೆಯಬಹುದು, ಒಡ್ಡೋಲಗವಾಗಬಹುದು. ವಾಸಮಾಡುವುದು ಬೇರೆಯ ಮಾತಲ್ಲವೆ?"

"ಹಾಗೆಂದರೆ?"

"ವಾಸಮಾಡುವುದೆಂದರೆ ಆಪ್ತತೆ, ಗೋಪ್ಯ. ನೀವು ನಿಮ್ಮ ಹೆಂಡತಿಯೊಡನೆ ಸರಸವಾಡಬೇಕಾದರೆ ಅದಕ್ಕೆ ಅಂತರಂಗ ಬೇಡವೆ? ಈ ಬಟ್ಟಬಯಲಿನಲ್ಲಾಗುತ್ತದಯೆ ಅದು?"

ಇಂಥಾದ್ದು ಪರಿಮಿತ ಸ್ಥಳದ ಪ್ರಯೋಜನ. ಜಾತಿಯ ಪಂಗಡ ಒಳಪಂಗಡಗಳಲ್ಲಿ ಮನುಷ್ಯನಿಗೆ ಒಂದು ಆತ್ಮೀಯತೆಯ ಭಾವವುಂಟಾಗುತ್ತದೆ. "ನಾನು", "ನನ್ನವರು" ಎಂಬ ಅಭಿಮಾನವುಂಟಾಗುತ್ತದೆ. ಈ ಆಪ್ತತೆ ಮಮತೆಗಳೇ ಎಲ್ಲ ಜೀವನೋತ್ಸಾಹಕ್ಕೂ ಮೂಲಪ್ರೇರಕಗಳು. ಜಾತಿಪಂಗಡ ತಪ್ಪಾದರೆ ಭಾರತೀಯತೆಯೆನ್ನುವುದೇನು? ದೇಶೀಯತೆಯೆನ್ನುವುದೇನು? ಅವೂ ಮನುಷ್ಯವರ್ಗದ ವಿಭಾಗಗಳೇ. ಕೇವಲ ತತ್ತ್ವದೃಷ್ಟಿಯಿಂದ ನೋಡಿದರೆ ಕೆಳಗೆ ನೆಲ, ಮೇಲೆ ಆಕಾಶ—ಇವೆರಡೇ ಮನುಷ್ಯನಿಗಿರುವ ಮೇರೆಗಳು. ಅವೆರಡನ್ನೂ ನೋಡಿ, ಮನೆಕಟ್ಟಿಕೊಳ್ಳದೆ, ಬಟ್ಟಬಯಲಿನಲ್ಲಿ ಬದುಕುವವನು ಯಾರು? ದೇಹದ ವಾಸಕ್ಕೆ ಮನೆ ಹೇಗೋ, ನೆರೆಹೊರೆ ಹೇಗೋ, ಮನಸ್ಸಿನ ವಾಸಕ್ಕೆ ಜಾತಿ ಹಾಗೆ, ಬಂಧುಮಂಡಲಿ ಹಾಗೆ. ಸರ್ವತ್ರ ಸಮದರ್ಶನವು ಪೂರ್ಣಜ್ಞಾನಿಯ ವೃತ್ತಿ. ಕುಲ ಗೃಹ ಸಮಾಜಗಳು ಇನ್ನೂ ಜ್ಞಾನವನ್ನು ಸಂಪಾದಿಸುತ್ತಿರುವವನಿಗೆ ಬೇಕಾಗಿರುವ ಸಾಧನಗಳು.

ಸಾರಾಂಶ ಇಷ್ಟು: ಜಾತಿವ್ಯವಸ್ಥೆ ವರ್ಣವ್ಯವಸ್ಥೆಗಳಲ್ಲಿ ಮೂಲತಃ ದೋಷವಿಲ್ಲ, ಗುಣವುಂಟು. ಐರೋಪ್ಯರ ಜೀವವಿಜ್ಞಾನ ವಂಶವಿಜ್ಞಾನಗಳು ಇದಕ್ಕೆ ವಿರೋಧವಾಗಿ ಏನನ್ನೂ ಕಂಡಿಲ್ಲ. ಐರೋಪ್ಯರಲ್ಲಿಯೂ ಸಮಾಜವಿಭಾಗ ವರ್ಗವಿಭಾಗಗಳುಂಟು; ನಮ್ಮಲ್ಲಿಯಷ್ಟು ಶಾಸ್ತ್ರೋಕ್ತವಾಗಿಲ್ಲದಿದ್ದರೂ ಜನರೂಢಿಯಲ್ಲಿ ಬಹುಮಟ್ಟಿಗೆ ಉಂಟು. ಅವರಲ್ಲಿ ಅದು ಹೇಗಾದರಿದ್ದುಕೊಳ್ಳಲಿ, ಅದನ್ನು ನಾವು ಅನುಕರಣೆ ಮಾಡಬೇಕಾದದ್ದಿಲ್ಲ. ಆದರೆ ಕಾಲವಶದಿಂದ ಬಂದಿರುವ ಸಂದರ್ಭವ್ಯತ್ಯಾಸಗಳಿಗೆ ತಕ್ಕಂತೆ ತಿದ್ದಿ ಹೊಂದಿಕೊಳ್ಳಬೇಕಾದದ್ದು ನಮಗೆ ಈಗ ಕರ್ತವ್ಯವಾಗಿದೆ. ಲೋಕದಲ್ಲಿ ಕ್ಷತ್ರಿಯ ರಾಜರು ಎಂದು ಮುಗಿದರೋ ಅಂದು ಮನುಸ್ಮೃತಿಯ ಅಧಿಕಾರ ಮುಗಿಯಿತು. ಈಗ ಜಾತಿಯೇನಿದ್ದರೂ ವ್ಯಷ್ಟಿಜನದ ಜೀವನ ಕ್ಷೇತ್ರದಲ್ಲಿ—ವಿವಾಹಾದಿ ಸಂಬಂಧಗಳಲ್ಲಿ—ನಿಂತಿದೆ. ಅದರಿಂದ ರಾಷ್ಟ್ರಕ್ಕೆ ಯಾವ ಅನನುಕೂಲತೆಯೂ ಆಗುವಂತಿಲ್ಲ. ಆ ಪುರಾತನ ವ್ಯವಸ್ಥೆಯನ್ನು ಒಡೆಯುವುದು ಅವಶ್ಯವಲ್ಲ; ಅಪಾಯಕಾರಿ.

೨. ಜೀವಿಕಾವೃತ್ತಿಗಳ ಜಟಿಲಸಂಬಂಧಗಳು

ಭಗವದ್ಗೀತೆಯ ಕಾಲದಲ್ಲೇಕೆ, ನಮ್ಮ ಮುತ್ತಜ್ಜಂದಿರ ಕಾಲದಲ್ಲಿ—ಈಗ್ಗೆ ಇನ್ನೂರು ವರ್ಷಗಳ ಹಿಂದಿನವರೆಗೂ ಜೀವಿಕಾವೃತ್ತಿಯ ಪ್ರಶ್ನೆ ನಮ್ಮ ದೇಶದಲ್ಲಿ ಜಟಿಲವಾಗಿರಲಿಲ್ಲ. ಆಗ (೧) ಯಂತ್ರಪ್ರಾಬಲ್ಯವಿರಲಿಲ್ಲ; (೨) ವಾಣಿಜ್ಯಸ್ಪರ್ಧೆಯಿರಲಿಲ್ಲ; (೩) ಪ್ರಯಾಣಸೌಲಭ್ಯವಿರಲಿಲ್ಲ; (೪) ಪ್ರಜಾಬಾಹುಳ್ಯವೂ ಇರಲಿಲ್ಲ. ಆಗ ಇದ್ದ ವೃತ್ತಿಗಳು ಮುಖ್ಯವಾಗಿ ಮೂರೇ ಎಂದು ಹೇಳಬಹುದು.

ಬ್ರಾಹ್ಮಣನದು ಜೀವಿಕಾವೃತ್ತಿಯೆಂಬ ಎಣಿಕೆಯೇ ಅಸಂಗತ. ಅವನು ವಿದ್ಯೈತಪಸ್ಸುಗಳಿಗಾಗಿ ಜೀವನವನ್ನು ಮುಡುಪು ತೆಗೆದಿಟ್ಟವನು. ಕಾಡಿನ ಫಲಮೂಲಾದಿಗಳಿಂದಲೂ ರಾಜನೂ ವೈಶ್ಯನೂ ತಾವಾಗಿ ಕೊಟ್ಟಷ್ಟರಿಂದಲೂ ಅವನು ಹೊಟ್ಟೆ ಹೊರೆದುಕೊಳ್ಳುತ್ತಿದ್ದವನು. ಅರ್ಥಸಂಪಾದನೆಯ ದೃಷ್ಟಿಯಿಂದ ಅವನು ಗಣನೆಗೆ ಹೆಚ್ಚಾಗಿ ಸಿಕ್ಕತಕ್ಕವನಲ್ಲ. ಕೇವಲ ಅರ್ಥಶಾಸ್ತ್ರದ ದೃಷ್ಟಿಯಿಂದ ಅವನನ್ನು ಸೊನ್ನೆಯೆನ್ನಬಹುದು; ಋಣಪ್ರಾಯ (Liability) ನೆಂದೂ ಹೇಳಬಹುದು.

ಕ್ಷತ್ರಿಯನು ಇತರರ ಸಂಪಾದನೆಯಲ್ಲಿ ಭಾಗಾರ್ಹನಾಗಿದ್ದವನು. ಅರ್ಥಸಂಪಾದನೆಯ ದೃಷ್ಟಿಯಿಂದ ಅವನ ಸ್ಥಿತಿ ಬಹುಮಟ್ಟಿಗೆ ಬ್ರಾಹ್ಮಣನ ಸ್ಥಿತಿಯಂತೆಯೇ. ಗರಡಿ ಸಾಮು ಮಾಡುವುದು, ಬೇಟೆಯಾಡುವುದು, ಆನೆ ಕುದುರೆ ಸವಾರಿ ಹೋಗುವುದು, ಯುದ್ಧಕ್ಕೆ ಕಾಲು ಕೆರೆಯುತ್ತಿರುವುದು, ದರ್ಪಾಧಿಕಾರ ನಡಸುವುದು—ಇದು ಕ್ಷತ್ರಿಯ ವೃತ್ತಿ. ಇದರಲ್ಲಿ ದ್ರವ್ಯಾರ್ಜನೆಯ ಭಾಗವೆಲ್ಲಿ?

ಹೀಗೆ ಸಂಪತ್ತಿನ ದೃಷ್ಟಿಯಿಂದಲೂ ಜೀವಿಕಾವೃತ್ತಿಯ ದೃಷ್ಟಿಯಿಂದಲೂ ಗಣನೆಗೆ ಬರುವವು ವೈಶ್ಯ ಶೂದ್ರ ವೃತ್ತಿಗಳೆರಡೇ. ಆ ಎರಡು ಜಾತಿಗಳನ್ನೂ ನಮ್ಮ ಇಂದಿನ ಆರ್ಥಿಕ ಪರಿಭಾಷೆಯಲ್ಲಿ ಕ್ರಮವಾಗಿ ಬಂಡವಾಳಗಾರರು (Capital) —ಕೂಲಿಗಾರರು (Labour), ಅಥವಾ ಧನಿಕರು-ಕಾರ್ಮಿಕರು, ಎಂದು ಕರೆಯಬಹುದು. ಅವರಿಗೆ ಆ ಕಾಲದಲ್ಲಿದ್ದ ವೃತ್ತಿ—

> ಕೃಷಿಗೋರಕ್ಷವಾಣಿಜ್ಯಮ್ ॥ (೧೮-೪೪)

ಇವುಗಳಿಗೆ ಉಪಾಂಗಗಳಾಗಿ ಜೋಯಿಸ, ವೈದ್ಯ, ನಾಯಿಂದ, ನೇಯಿಗೆಕಾರ, ಬೋಯಿ, ಬಡಗಿ, ಕಮ್ಮಾರ, ಅಕ್ಕಸಾಲೆ, ತಳವಾರ, ತೋಟಿ ಮೊದಲಾದ ಚಿಲ್ಲರೆ ಕಸಬುಗಳಿದ್ದುವು. ಎಲ್ಲ ವೃತ್ತಿಗಳೂ ವಂಶಪಾರಂಪರ್ಯವಾಗಿ ನಡೆಯುತ್ತಿದ್ದುವು. ನಾಯಿಂದನು ಬಡಗಿಯಾಗುತ್ತಿರಲಿಲ್ಲ. ಕಮ್ಮಾರನು ವೈದ್ಯನಾಗುತ್ತಿರಲಿಲ್ಲ. ಜೋಯಿಸನು ಮೇಳಗಾರನಾಗುತ್ತಿರಲಿಲ್ಲ. ಎಲ್ಲರಿಗೂ ಹುಟ್ಟಿನಿಂದ ಕಸಬು.

ಈಹೊತ್ತು ಇದೆಲ್ಲ ಬದಲಾಯಿಸಿದೆ. ಭೂತಾಕಾರದ ಯಂತ್ರಗಳೂ, ಪರಮಾಣು ಯಂತ್ರಗಳೂ, ರಾಸಾಯನಿಕದ್ರವ್ಯಗಳೂ, ಜಲಬಾಷ್ಪ-ತೈಲಬಾಷ್ಪ ಯಂತ್ರಶಿಲ್ಪಗಳೂ ನಮ್ಮ ಕಾಲದಲ್ಲಿ ಬಂದು, ದೇಶದಲ್ಲಿ ಸಾವಿರಾರು ಕಸಬುಗಳಿಗೆ ಅವಕಾಶ ಮಾಡಿಕೊಟ್ಟಿವೆ. ಪ್ರಜೆ ನಿಬಿಡವಾಗಿ ಬೆಳೆದು ಜೀವನೋಪಾಯದ ಕಷ್ಟವನ್ನು ದುರ್ಭರವನ್ನಾಗಿ ಮಾಡಿದೆ. ಈಹೊತ್ತು ಶ್ರೋತ್ರಿಯಬ್ರಾಹ್ಮಣನು ಕಾರ್ಖಾನೆಯಲ್ಲಿ ಯಂತ್ರ ಚಾಲಕನಾಗಿದ್ದಾನೆ. ಕ್ಷತ್ರಿಯನು ಮೋಟಾರು ನಡಸುವವನಾಗಿದ್ದಾನೆ. ಹುಟ್ಟುಕ್ಷೌರಿಕನು ವೈದ್ಯನಾಗುತ್ತಾನೆ, ಹುಟ್ಟುಬಡಗಿಯು ವಕೀಲನಾಗುತ್ತಾನೆ. ಜನ ಎಂದೂ ಕಂಡು ಕೇಳದ ವೃತ್ತಿಗಳನ್ನು ಹಿಡಿದು ಹೊಟ್ಟೆ ಹೊರೆದುಕೊಳ್ಳಬೇಕಾಗಿದೆ. ಈಗ ಮಾಡತಕ್ಕದ್ದೇನು?

ಈ ಪ್ರಶ್ನೆ ನಮ್ಮನ್ನು ರಾಜಕೀಯಕ್ಕೆ ಕೊಂಡೊಯ್ಯುತ್ತದೆ. ಏಕೆಂದರೆ ಈ ಕಾಲದಲ್ಲಿ ದೇಶದ ಸಂಪದ್ವ್ಯವಸ್ಥೆಯೆಲ್ಲವೂ ಸರಕಾರದ ಕೈಯಲ್ಲಿ ಸೇರಿದೆ. ಪೂರ್ವಕಾಲಕ್ಕೂ ನಮ್ಮ ಕಾಲಕ್ಕೂ ಇರುವ ವ್ಯತ್ಯಾಸ ಮುಖ್ಯವಾಗಿ ಎರಡು ಅಂಶಗಳಲ್ಲಿ:

1. ಆಗ ಜನದ ಆರ್ಥಿಕ ವ್ಯವಸ್ಥೆ ಸರಳವಾಗಿತ್ತು. ಆಗ ಮುಖ್ಯವಾಗಿದ್ದದ್ದು ಕೃಷಿ; ಅದನ್ನಂಟಿಕೊಂಡು ಕೆಲವು ಸಣ್ಣ ಸಣ್ಣ ವೃತ್ತಿಗಳು—ಇಷ್ಟೇ ಇದ್ದದ್ದು. ಇದು ತತ್ತತ್ಪ್ರದೇಶ ಮಾತ್ರವ್ಯಾಪಿಯಾಗಿದ್ದದ್ದು; ದೂರ ಸ್ಥಳಗಳಿಗೂ ಪರದೇಶಗಳಿಗೂ ವ್ಯಾಪಿಸಿರಲಿಲ್ಲ. ಆದದ್ದರಿಂದ ಅದರ ನಿರ್ವಾಹ ಸರಳವಾಗಿ ಸುಲಭವಾಗಿತ್ತು. ಈಗ ದೇಶದ ಪ್ರತಿಯೊಂದು ಊರೂ ಹತ್ತಾರು ಪರದೇಶ ವ್ಯಾಪಾರಗಳ ಕೇಂದ್ರಸ್ಥಾನವಾಗಿದೆ. ಯಾವ ಹಳ್ಳಿಗೆ ನಾವು ಹೋದರೂ ಅಲ್ಲಿ ಅಮೇರಿಕದ, ಸ್ವಿಟ್ಸರ್ಲೆಂಡಿನ, ಇಂಗ್ಲೆಂಡಿನ, ಜರ್ಮನಿಯ, ಇನ್ನೂ ಯಾವ ಯಾವುದೋ ದೇಶಗಳ ಸರಕುಗಳು ಕಣ್ಣಿಗೆ ಬೀಳುತ್ತವೆ. ಹೀಗೆ ಆರ್ಥಿಕದೃಷ್ಟಿಯಿಂದ ಇಂದಿನದು ಜಟಿಲಪ್ರಪಂಚ.

2. ಎರಡನೆಯದಾಗಿ ಪೂರ್ವಕಾಲದಲ್ಲಿ ದೇಶದ ಸಂಪದ್ವ್ಯವಸ್ಥೆಯ ಅಧಿಕಾರ ಏಕೈಕರಾಜನ ವಶವಾಗಿತ್ತು. ಆಗ ರಾಜನು ಜನದ ಆರ್ಥಿಕ ಜೀವಿತಕ್ಕೆ ಕೈಹಾಕುತ್ತಲೇ ಇರಲಿಲ್ಲ. ಭಾರಿ ಕೆರೆಗಳು, ಭಾರಿ ತೋಪು, ದೊಡ್ಡ ರಸ್ತೆ—ಇವಿಷ್ಟನ್ನು ರಾಜಾಜ್ಞೆ ನಡಸುತ್ತಿತ್ತೆಂದು ತೋರುತ್ತದೆ. ಆಗಿನ ರಾಜರೂ ಆಗಿನ ಪ್ರಜೆಗಳೂ ಪೂರ್ವದಿಂದ ಬೆಳೆದುಕೊಂಡು ಬಂದಿದ್ದ ಶಾಸ್ತ್ರಸಂಪ್ರದಾಯಗಳನ್ನು, ಅದು ತಮಗೆ ಸ್ವಭಾವಾಗತವೇ ಎಂಬಂತೆ, ಅನುಸರಿಸಿ ನಡೆದುಕೊಳ್ಳುತ್ತಿದ್ದರು. ಹೀಗಿದ್ದದ್ದರಿಂದ ಪುರಾತನ ಕುಲವೃತ್ತಿಗಳು ಒಂದು ತಲೆಮಾರಿನಲ್ಲಿದ್ದದ್ದು ಹಾಗೆಯೇ ಇನ್ನೊಂದು ತಲೆಮಾರಿಗೂ ಇಳಿದು ಬಂದು, ಏಕಪ್ರಕಾರವಾಗಿ ಜೀವಿಕಾವೃತ್ತಿ ಸಾಗುತ್ತಿತ್ತು. ಆ ಪಾರಂಪರ್ಯವ್ಯವಸ್ಥೆಗೆ ವ್ಯಾಘಾತ ತರುವ ಕಾರಣಗಳು ಹಿಂದೆ ಎಂದೂ ಇರಲಿಲ್ಲ. ಚೋಳರಾಜನು ಚಾಲುಕ್ಯನ ಮೇಲೆ ದಂಡೆತ್ತಿ ಬರಲಿ, ಕದಂಬರಾಜನು ರಾಷ್ಟ್ರಕೂಟವನ್ನು ಹೊಡೆಯಲಿ, ಈ ರಾಜ-ರಾಜವಿರೋಧಗಳು ಪ್ರಜಾಜನದ ಆರ್ಥಿಕ ವ್ಯವಸ್ಥೆಯನ್ನು ಅಲ್ಲಾಡಿಸುತ್ತಿರಲಿಲ್ಲ.

ಈಗಲಾದರೋ ಪ್ರಜಾಸರ್ಕಾರ ಬಂದು ನಮ್ಮ ಜೀವನದಲ್ಲಿ ನಿತ್ಯಸಂಕ್ಷೋಭೆಯನ್ನು ತುಂಬಿದೆ. ರಾಜ ಆಳಿದ್ದು ಏಕನಾಯಕ ರಾಜ್ಯ; ಪ್ರಜಾರಾಜ್ಯವು ಬಹುನಾಯಕ ರಾಜ್ಯ. ಆ ಬಹುನಾಯಕರಲ್ಲಿ ಏಕಮತ ಬರುವುದು ದುರ್ಲಭ, —ಸಂಪದ್ವಿಚಾರದಲ್ಲಂತೂ ಅತ್ಯಂತ ದುರ್ಲಭ. ಆದದ್ದರಿಂದ ತರ್ಕದಲ್ಲಿ ಬಹುನಾಯಕವೆನಿಸಿದ್ದು ಪ್ರಯೋಗದಲ್ಲಿ ಅನಾಯಕವೇ ಆಗುತ್ತದೆ. ಕೆಲವರು ಭೂವ್ಯವಸಾಯವೆನ್ನುತ್ತಾರೆ; ಇನ್ನು ಕೆಲವರು ಯಂತ್ರ ಕಾರ್ಖಾನೆಗಳೆನ್ನುತ್ತಾರೆ; ಮತ್ತೆ ಕೆಲವರು ವ್ಯವಸಾಯ ಯಂತ್ರೋತ್ಪನ್ನಗಳು ಹೇಗಾದರಾಗಲಿ, ಪರದೇಶಗಳಿಗೆ ರಫ್ತುಮಾಡಿ ಆದಾಯಮಾಡಿಕೊಳ್ಳುವುದು ಮುಖ್ಯವೆನ್ನುತ್ತಾರೆ. ಹೀಗೆ ಕೆಲವರು ತಿಟ್ಟಿಗೆಳೆಯುತ್ತಾರೆ, ಕೆಲವರು ಹಳ್ಳಕ್ಕೆಳೆಯುತ್ತಾರೆ. ಅವರ ನಡುವೆ ಬಹುಮಂದಿಯ ಯೋಗಕ್ಷೇಮಗಳು ಚದರಿ ಚಲ್ಲಾಪಿಲ್ಲಿಯಾಗುತ್ತವೆ.

ಈ ಕಷ್ಟವನ್ನು ಪರಿಹಾರಮಾಡಬೇಕಾದರೆ ಎರಡು ಸಂಘಟನೆಗಳು ನಡೆಯಬೇಕು:

(೧) ಕೃಷಿ, ಯಂತ್ರಕರ್ಮ, ವಾಣಿಜ್ಯ—ಈ ಮೂರರ ಸ್ಪರ್ಧೆಯಲ್ಲಿ ಉತ್ತಮವಾದ ಆರ್ಥಿಕ ವ್ಯವಸ್ಥೆ ಎಂಥಾದ್ದು ಎಂಬ ಪ್ರಶ್ನೆಗೆ ನಿಷ್ಕರ್ಷೆಯಾದ ಪ್ರತ್ಯುತ್ತರ ಸಿದ್ಧವಾಗಬೇಕು. (೨) ಆ ನಿಷ್ಕರ್ಷೆಯನ್ನು ಮಹಾಜನ ಅಂಗೀಕರಿಸಿ ಅದನ್ನು ಸರಕಾರಗಳು ನಡಸುವಂತೆ ಒತ್ತಾಯ

ಮಾಡಬೇಕು. ಇವೆರಡೂ ಸುಲಭವಾಗಿ ಆಗುವ ಮಾರ್ಪಾಟುಗಳೆ? ಒಂದೆರಡು ವರ್ಷಗಳ ಒಳಗಾಗಿ ಅದು ಸಾಧ್ಯವೆ? ಯಾರಿಗೂ ಹಾಗೆ ತೋರದು.

ಯಂತ್ರ ಕಾರ್ಖಾನೆಗಳ ನ್ಯೂನತೆ ಒಂದು ಕೇಡಾದರೆ ಯಂತ್ರ ಕಾರ್ಖಾನೆಗಳ ಪ್ರಾಬಲ್ಯ ಇನ್ನೊಂದು ಕೇಡು. ಪಾಶ್ಚಾತ್ಯ ದೇಶಗಳಲ್ಲಿ ಯಂತ್ರಕರ್ಮ ಅತಿಯಾಗಿ, ಮನುಷ್ಯಜೀವನದ ಮನುಷ್ಯತ್ವ ಕುಗ್ಗಿಹೋಗುತ್ತಿದೆ.

1. ಯಾವ ಯೂರೋಪ್ ದೇಶಗಳಿಂದ ನಾವು ಈಗಣ ಸಂಪದ್ವ್ಯವಸ್ಥೆಯನ್ನು ಅನುಕರಣ ಮಾಡುತ್ತಿದ್ದೇವೋ ಆ ದೇಶಗಳಲ್ಲಿಯೇ ಆ ವ್ಯವಸ್ಥೆ ಶಿಥಿಲವಾಗಲು ಪ್ರಾರಂಭವಾಗಿದೆ. ನಾನಾ ದೇಶಗಳ ವ್ಯಾಪಾರದ ಪೋಟಿ ಪೈಪೋಟಿಗಳಿಗೋಸ್ಕರ ಎಲ್ಲೆಲ್ಲೂ ಯಂತ್ರಕಾರ್ಖಾನೆಗಳು ತಮ್ಮತಮ್ಮ ಸರಕುಗಳನ್ನು ಹೆಚ್ಚು ಹೆಚ್ಚಾಗಿ ಉತ್ಪನ್ನ ಮಾಡಬೇಕಾಗಿದೆ. ಈ ಅವಸರದಲ್ಲಿ ಕಾರ್ಮಿಕರ ಬಿಗಿದರ್ಪಗಳು ಹೆಚ್ಚುತ್ತಿವೆ; ಮಾಲೀಕರಿಗೂ ಅವರಿಗೂ ಘರ್ಷಣೆ ಬೆಳೆಯುತ್ತಿದೆ.
2. ದೊಡ್ಡ ಕಾರ್ಖಾನೆಯಲ್ಲಿ ಕೆಲಸ ಮಾಡುವವನು ತನ್ನ ದೇಹಜೀವನಕ್ಕಾಗಿ ಬೇಕಾದದ್ದನ್ನೇನೋ ಗಳಿಸುತ್ತಾನೆ. ಆದರೆ ಆ ಸಂಪಾದನೆಯಲ್ಲಿ ಅವನು ಮನಸ್ಸಿನ ಬೆಳವಣಿಗೆಗೂ ನೀತಿಯ ವಿಕಾಸಕ್ಕೂ ಅವಕಾಶವಿಲ್ಲದವನಾಗಿದ್ದಾನೆ. ಅವನಿಗೆ ದೊರೆಯುವ ವಾರಕ್ಕೊಂದು ಬಿಡುವಿನ ದಿವಸ ಅವನು ಚೆನ್ನಾಗಿ ತಿಂದು ಕುಡಿದು ನಿದ್ರಿಸಿ ದಣಿವು ಮರೆಯುವುದಕ್ಕೆ ಸಾಕಾಗುತ್ತದೆ. ಅವನಿಗೆ ಕಾವ್ಯಕಲಾಭ್ಯಾಸಕ್ಕೂ ಮಾನವಸಂಸ್ಕೃತಿಯನ್ನು ಸಂಪಾದಿಸಿಕೊಳ್ಳುವುದಕ್ಕೂ ಆಧ್ಯಾತ್ಮಿಕ ಶಿಕ್ಷಣಕ್ಕೂ ವಿಶ್ರಾಂತಿಯೆಲ್ಲಿ? ಕಾರ್ಖಾನೆಯಲ್ಲಿ ಸೇರಿದ ಮನುಷ್ಯ ಗಾಣದೆತ್ತಾಗುತ್ತಾನೆ. ಗಾಣದ ಎತ್ತು ತನ್ನ ಸುತ್ತನ್ನು ತಿರುಗುವಾಗಲೂ ಮೆಲುಕುಹಾಕಿಕೊಂಡಿರಬಹುದು. ಅವನೂ ಹಾಗೆ ಪೆಪ್ಪರ್ಮಿಂಟು ಚಪ್ಪರಿಸುತ್ತಿರಬಹುದು, ಅಷ್ಟೇ. ಅದಕ್ಕಿಂತ ಹೆಚ್ಚಿನ ಸ್ನೇಹಸರಸತೆಗಳಿಂದ ಅವನ ಪಾಲಿಗೆ ದುರ್ಲಭ. ಈ ಮಾನವತ್ವದ ವೈಪರೀತ್ಯವನ್ನು ಪಾಶ್ಚಾತ್ಯರು ಕಂಡುಕೊಳ್ಳಲು ಪ್ರಾರಂಭವಾಗಿದೆ.
3. ಈಗ ಪ್ರಪಂಚದ ಎಲ್ಲ ದೇಶಗಳೂ ಯಂತ್ರೋತ್ಪತ್ತಿಯಲ್ಲಿ ತಾವು ತಾವು ಮುಂದೆ ಬರಬೇಕೆಂದು ಹೆಣಗಾಡುತ್ತಿವೆ. ಎಲ್ಲರೂ ಬಟ್ಟೆಯ ಕಾರ್ಖಾನೆಗಳನ್ನು ಕಟ್ಟುವವರೇ. ಎಲ್ಲರೂ ಕಬ್ಬಿಣ ಉಕ್ಕು ತಯಾರು ಮಾಡುವವರೇ. ಎಲ್ಲರೂ ರೈಲು ಮೋಟಾರುಗಳನ್ನು

> ಜೋಡಿಸುವವರೇ. ಹಿಂದುಳಿದಿದ್ದ ದೇಶಗಳೆಲ್ಲ—ಆಫ್ರಿಕದಲ್ಲಿ, ಏಷಿಯದಲ್ಲಿ—ಹೀಗೆ ಮುಂದೆ ಬಂದು ಕಾರ್ಖಾನೆಗಳನ್ನು ಕಟ್ಟಿ, ತಮತಮಗೆ ಬೇಕಾದ ಸರಕುಗಳನ್ನು ತಾವು ತಾವೇ ತಯಾರು ಮಾಡಿಕೊಂಡು, ಪರದೇಶಗಳಿಗೂ ರಫ್ತುಮಾಡಬೇಕೆಂದು ಸಾಹಸ ಮಾಡುತ್ತಿವೆ. ಅವೂ ಸ್ಪರ್ಧೆಗೆ ನಿಂತಮೇಲೆ ಕೊಳ್ಳುವವರು ಯಾರು? ಮಾರುವವರು ಯಾರು? ಲಾಭಗಿಟ್ಟಿಸುವವರು ಯಾರು? ಹೀಗೆ ದೇಶವಿದೇಶ ಘರ್ಷಣೆ ತಪ್ಪಿದ್ದಲ್ಲ. ಈಹೊತ್ತು ಪ್ರಪಂಚದಲ್ಲಿ ಜನಜನಾಂಗಗಳಿಗೆ ನಡೆಯುತ್ತಿರುವ ಹೋರಾಟಗಳಿಗೆಲ್ಲ ಮೂಲಕಾರಣ ಆರ್ಥಿಕಸ್ಪರ್ಧೆ. ಎಲ್ಲ ದೇಶಗಳಿಗೂ ತಮ್ಮತಮ್ಮ ಕಾರ್ಖಾನೆಗಳಿಗಾಗಿ ಕಚ್ಚಾ ಸರಕುಗಳನ್ನು ಸಂಗ್ರಹ ಮಾಡಿಕೊಳ್ಳಬೇಕೆಂದು ಮೊದಲನೆಯ ಬಡಿದಾಟ. ಆಮೇಲೆ ತಾವು ತಯಾರುಮಾಡಿದ ಸರಕುಗಳಿಗಾಗಿ ಗಿರಾಕಿಗಳನ್ನು ವಶಪಡಿಸಿಕೊಳ್ಳಬೇಕೆಂದು ಎರಡನೆಯ ಬಡಿದಾಟ. ಇದು ಈ ಹೊತ್ತಿನ ರಾಷ್ಟ್ರಾನ್ಯೋನ್ಯರಂಗದ ದೃಶ್ಯ. ಪ್ರಪಂಚ ಶಾಂತಿಯೆಂದು ಹಾರೈಸುವ ಸಾಧುಸಜ್ಜನರು ಇದನ್ನು ಆಲೋಚಿಸಬೇಕು. ಅವರು ಯುದ್ಧ ಬೇಡವೆನ್ನುತ್ತಾರೆ; ಬಾಂಬು ತ್ಯಜಿಸುವ ಒಪ್ಪಂದವಾಗಲಿ ಎನ್ನುತ್ತಾರೆ; ಶಸ್ತ್ರಾಸ್ತ್ರ ಬಿಡೋಣವೆನ್ನುತ್ತಾರೆ. ಅದರಿಂದ ಬಂದೀತೆ ಶಾಂತಿ? ಹೊಟ್ಟೆಯಲ್ಲಿ ಆಶೆ ತಳಮಳಿಸುತ್ತಿರುವಾಗ, ತೋಳಿನಲ್ಲಿ ಬಲ ತುಂಬಿ ತುಳುಕುತ್ತಿರುವಾಗ, ಮನಸ್ಸಿನಲ್ಲಿ ಸ್ಪರ್ಧೆ ಕುದಿಯುತ್ತಿರುವಾಗ ಶಾಂತಿಪಾಠವು ಶಾಂತಿಯನ್ನು ಅಣಕಿಸಿದಂತೆಯೇ ಆದೀತು. ಪ್ರಪಂಚಶಾಂತಿಗೆ ಮೊದಲು ಬೇಕಾದದ್ದು ಈ ಸಂಪತ್ತಿನ ಸ್ಪರ್ಧೆಯ ನಿವಾರಣೆ. ಅದಕ್ಕೆ ಸಾಧುಸಂತರ ಉಪದೇಶ ಸಾಲದು. ಕಷ್ಟಾನುಭವದ ಶಿಕ್ಷಣವೂ ಜನಜನಾಂಗಗಳಿಗೆ ಬೇಕು. ಆ ಶಿಕ್ಷೆ ಎಂದಿಗೆ ಆದೀತೋ, ಹೇಗೆ ಆದೀತೋ, ಎಂದು ಸಫಲವಾದೀತೋ ತಿಳಿಯಬಲ್ಲವರು ಯಾರು?

ಈ ವಿಷಮಪರಿಸ್ಥಿತಿಯಲ್ಲಿ ಗೀತಾನುಯಾಯಿಗಳ ಕರ್ತವ್ಯವು ಸ್ಪಷ್ಟವಾಗಿದೆ. ಲೋಕಸಂದರ್ಭಗಳ ವೈಪರೀತ್ಯದಿಂದ ಅವರು ಎದೆಗುಂದಿ ದಿಙ್ಮೂಢರಾಗಿ ನಿಲ್ಲತಕ್ಕದ್ದಲ್ಲ. ಸಾರ್ವದೇಶಿಕ ಸಾಮೂಹಿಕ ಪ್ರಶ್ನೆಗಳನ್ನು ಅವರು ದೈವಕ್ಕೊಪ್ಪಿಸಿ ಸ್ವಸ್ವಜೀವಿಕಾ ವೃತ್ತಿಗಳನ್ನು ಸ್ವಸ್ವಗುಣಸಾಮರ್ಥ್ಯಗಳಿಗೆ ತಕ್ಕಂತೆ ಆರಿಸಿಕೊಳ್ಳುವುದು ಯುಕ್ತವಾಗಿದೆ. ಹುಟ್ಟಿನಿಂದ ಬ್ರಾಹ್ಮಣನೇ ಆಗಲಿ, ಕ್ಷತ್ರಿಯನೇ ಆಗಲಿ, ಶೂದ್ರನೇ ಆಗಲಿ, ಜೀವಿಕಾ ವೃತ್ತಿಗೆ ಯಾವುದು ಆಯಾ ಕಾಲದಲ್ಲಿ ಅನುಕೂಲವೆಂದು ತೋರುತ್ತದೋ ಅದನ್ನು ಅವಲಂಬಿಸಲಿ. ಆ ವೃತ್ತಿಯಿಂದ ಅವನ ಮುಖ್ಯ ಧರ್ಮಕ್ಕೆ ಹಾನಿ ಬಾರದಿದ್ದರೆ ಸಾಕು. ಇಲ್ಲಿ

ಮುಖ್ಯಧರ್ಮವೆಂಬುದು ಸಕಲರಿಗೂ ಅನ್ವಯಿಸತಕ್ಕ ಧರ್ಮ. ಅದನ್ನು ಹಿಂದೆ ತಕ್ಕಷ್ಟು ವಿವರಣೆ ಮಾಡಿದ್ದಾಗಿದೆ. ಕಾಲವೆಂಥಾದ್ದಾದರೂ ಅನ್ನವಸ್ತ್ರಗಳಿಗಾಗಿಯೂ ಕುಟುಂಬಭರಣಕ್ಕಾಗಿಯೂ ನ್ಯಾಯಮಾರ್ಗದಲ್ಲಿ ದ್ರವ್ಯಸಂಪಾದನೆ ಮಾಡುವುದು ಪ್ರತಿಯೊಬ್ಬನಿಗೂ ಕರ್ತವ್ಯವಾಗಿದೆ. ಧರ್ಮಗಳಲ್ಲಿ ಮೊದಲನೆಯದು ಜೀವನಸಂಪಾದನೆ. ಜೀವನಕ್ಕಾಗಿ ಸ್ವಶ್ರಮದಿಂದ ಸಂಪಾದಿಸದವನು ಪರಾನ್ನಕ್ಕೆ ಕಾದಿರಬೇಕಾಗುತ್ತದೆ, ಅಥವಾ ಕಳ್ಳತನ ಮಾಡಬೇಕಾಗುತ್ತದೆ. ಅವೇ ಪರಿಗ್ರಹ ಸ್ತೇಯಗಳು. ಗೀತೆ ಉಪದೇಶಿಸಿರುವುದು ಅಸ್ತೇಯ ಅಪರಿಗ್ರಹಗಳನ್ನು, ಎಂದರೆ ನ್ಯಾಯವಾದ ಸ್ವಜೀವಿಕಾ ಸಂಪಾದನೆಯನ್ನು.

ಕುಶಲಾತ್ + ನ ಪ್ರಮದಿತವ್ಯಮ್ । ಭೂತ್ಯೈನ ಪ್ರಮದಿತವ್ಯಮ್ ॥ (ತೈ. ಉ.)

ಇದು ವೇದದ ಆಜ್ಞೆ. ಕಾಲಪರಿಸ್ಥಿತಿಗಳು ವಿಷಮವಾಗಿದ್ದಾಗ ಆ ಕರ್ತವ್ಯಕ್ಕೆ ಅನ್ವಯಿಸುವ ಸೂತ್ರವೇ ಆಪದ್ಧರ್ಮ. ಸ್ವವರ್ಣವೃತ್ತಿ ಸಾಧ್ಯವಿಲ್ಲದಾಗ, ತದ್ವಿರುದ್ಧವಲ್ಲದ ಬೇರೊಂದು ಸಾಧ್ಯವಾದ ವೃತ್ತಿಯನ್ನವಲಂಬಿಸತಕ್ಕದ್ದು. ವರ್ಣವೃತ್ತಿ ಮುಖ್ಯ; ಅದಕ್ಕಿಂತ ಮುಖ್ಯ ನ್ಯಾಯಸಮ್ಮತವಾದ ಜೀವಿಕೆ—ಅಪರಿಗ್ರಹದಿಂದಲೂ ಅಸ್ತೇಯದಿಂದಲೂ ಕೂಡಿದ ಜೀವಿಕೆ. ಅದು ಜೀವಪರಿಶುದ್ಧಿಗೂ ಅಧ್ಯಾತ್ಮಚಿಂತನೆಗೂ ಪ್ರತಿಕೂಲವಾಗದಿದ್ದರೆ ಸಾಕು.

೩. ಸ್ತ್ರೀಕರ್ತವ್ಯದ ಪ್ರಶ್ನೆ

ಮೇಲೆ ವರ್ಣವ್ಯವಸ್ಥೆ ವೃತ್ತಿವ್ಯವಸ್ಥೆಗಳನ್ನು ಕುರಿತು ಹೇಳಿದ್ದೇ ಸ್ತ್ರೀವಿಚಾರಕ್ಕೂ ಅನ್ವಯಿಸುತ್ತದೆ. ನಮ್ಮ ಸೋದರಿಯರು ಸಂಪ್ರದಾಯವನ್ನು ಕೂಡಿದ ಮಟ್ಟಿಗೂ ಕಾಪಾಡಿಕೊಳ್ಳಬೇಕೆಂಬುದು ಇಲ್ಲಿಯೂ ವಿಹಿತವಾಗಿದೆ. ನಮ್ಮ ಸಮಾಜದ ಆರ್ಥಿಕ ಯೋಜನೆಗಳು ಬದಲಾಯಿಸುತ್ತಿರುವ ಕಾಲದಲ್ಲಿ ಸ್ತ್ರೀಜನರ ಯೋಗಕ್ಷೇಮಸಾಧನೆ ಪೂರ್ವದಲ್ಲಿ ಇದ್ದಂತೆಯೇ ಆದೀತೆಂದು ಭಾವಿಸುವುದು ಅವಿಚಾರದ ಮಾತು. ಹಿಂದಿನ ಕಾಲದಲ್ಲಿ ಕುಟುಂಬ ಪೋಷಣೆಯಾಗುತ್ತಿದ್ದಂತೆ ಈಗ ಆಗುವುದು ದುಸ್ಸಾಧ್ಯವಾಗಿದೆ. ಇಂದಿನ ಲೋಕಸಂದರ್ಭದಲ್ಲಿ ಹೆಂಗಸು ಕುಟುಂಬಭರಣಕ್ಕಾಗಿ ಅಷ್ಟಿಷ್ಟು ದ್ರವ್ಯಸಂಪಾದನೆ ಮಾಡುವುದರಲ್ಲಿ ದೋಷವಿಲ್ಲ. ಎಷ್ಟೋ ಸನ್ನಿವೇಶಗಳಲ್ಲಿ ಅದು ಅವಶ್ಯವೇ ಆಗುತ್ತದೆ. ಆದರೆ ಆ ಸಂಪಾದನೆ ಸತ್ಯವಂತವೂ ಮಾನವಂತವೂ ಆದ ದಾರಿಗಳಲ್ಲಿ ನಡೆಯಬೇಕು. ಮರ್ಯಾದೆಯನ್ನು ತಪ್ಪಿಸುವ ಆಶೋದ್ರೇಕಗಳು ಈಗ ಹೇರಳವಾಗಿವೆ. ಮನೆಯ ಹೊರಗಡೆ, ಕಾರ್ಖಾನೆ ಕಾರ್ಯಾಲಯಗಳಲ್ಲಿ, ಬಗೆಬಗೆಯ ಜನದ ನಡುವೆ ಹೆಂಗಸು ಕೆಲಸ ಮಾಡಬೇಕಾಗಿರುವಲ್ಲಿ, ಮರ್ಯಾದಾಭಂಗದ ಪ್ರೇರಣೆಗಳೂ ಅಪನೀತಿಪ್ರೋತ್ಸಾಹನಗಳೂ ಪದೇಪದೇ ಕಣ್ಣಿಗೆ ಬೀಳುತ್ತವೆ. ಅವುಗಳನ್ನೆದುರಿಸಿ ಹಿಮ್ಮೆಟ್ಟಿಸುವಷ್ಟು ಮನೋದಾರ್ಢ್ಯ ವ್ರತನಿಷ್ಠೆಗಳು ಇದ್ದಲ್ಲಿ ಹೆಂಗಸು ಕುಟುಂಬಭರಣಕ್ಕಾಗಿ ಒಂದು ವೃತ್ತಿಯನ್ನವಲಂಬಿಸುವುದರಲ್ಲಿ ಯಾವ ಅನೌಚಿತ್ಯವೂ ಇಲ್ಲ. ಆ ವೃತ್ತಿಯನ್ನಾರಿಸಿಕೊಳ್ಳುವುದರಲ್ಲಿ ಗುಣದೋಷತಾರತಮ್ಯವನ್ನು ವಿಮರ್ಶೆಯಿಂದ ನೋಡಬೇಕು. ಆತ್ಮೋತ್ಕರ್ಷದ ದೃಷ್ಟಿಯಿಂದ ಗುಣದೋಷತಾರತಮ್ಯ ವಿವೇಕಮಾಡಿ ನಡೆಯಬೇಕೆಂಬುದು ಸ್ತ್ರೀಪುರುಷರಿಬ್ಬರ ವೃತ್ತಿವರಣಕ್ಕೂ ಅನ್ವಯಿಸುತ್ತವೆ. ಆದರೂ ಸ್ತ್ರೀಯರ ಬಾಧ್ಯತೆ ಹೆಚ್ಚಿನದು. ಅರ್ಜುನ ಏನು ಹೇಳಿದ?

> ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥ (೧-೪೧)

ಮನುಸ್ಮೃತ್ಯಾದಿಗಳಲ್ಲಿ ಸ್ತ್ರೀಸ್ವಾತಂತ್ರ್ಯವನ್ನು ಸಂಕೋಚಪಡಿಸಿರುವ ವಾಕ್ಯಗಳ ಆಶಯವೂ ಇಷ್ಟೇಯೇ.

ಯೇಸುಕ್ರಿಸ್ತನು ಬೋಧನೆ ಮಾಡುತ್ತಿದ್ದಾಗ ಆತನ ವಿರೋಧಿಗಳು ಕೆಲವರು ಬಂದು, ಆತನನ್ನು ರಾಜಕೀಯದ ಅಪರಾಧಕ್ಕೆ ಸಿಕ್ಕಿಸಬೇಕೆಂಬ ಒಳತಂತ್ರದಿಂದ, ಒಂದು ಪ್ರಶ್ನೆ ಹಾಕಿದರು: "ಅಯ್ಯಾ, ನೀನು ಜಗದೀಶ್ವರನ ಪ್ರತಿನಿಧಿಯೆಂದೂ ಸ್ವಾಮಿಯ ಮಗನೆಂದೂ ಹೇಳಿಕೊಳ್ಳುತ್ತಿರುವೆ. ಆದರೆ ನಮ್ಮನ್ನು ಆಳುತ್ತಿರುವ ರಾಜನು ರೋಮ್ ಚಕ್ರಾಧಿಪತ್ಯದ ಸೀಸರ್ ಪ್ರಭು. ಈಗ ನಾವು ಕಪ್ಪಕಾಣಿಕೆಗಳನ್ನು ಯಾರಿಗೆ ಸಲ್ಲಿಸಬೇಕು? ನಿನಗೋ, ಸೀಸರನ ಪ್ರತಿನಿಧಿಗೋ?" ಅದಕ್ಕೆ ಯೇಸು ಕೊಟ್ಟ ಉತ್ತರ ಹೀಗೆ:

Render to Caesar the things that are Caesar's and to God the things that are God's (*Mark* : XII. 17)

"ಸೀಸರನಿಗೆ ಸಲ್ಲತಕ್ಕದ್ದು ಯಾವುದೋ ಅದನ್ನು ಸೀಸರನಿಗೆ ಸಲ್ಲಿಸಿ; ಭಗವಂತನಿಗೆ ಸಲ್ಲತಕ್ಕದ್ದು ಯಾವುದೋ ಅದನ್ನು ಭಗವಂತನಿಗೆ ಸಲ್ಲಿಸಿ."

ಈ ದ್ವಿಭಾಗವಿವೇಚನೆ ಗೀತಾಭ್ಯಾಸಿಗೂ ಯುಕ್ತವಾಗುತ್ತದೆ. ಜಗತ್ತಿಗೆ ಸಲ್ಲಬೇಕಾದದ್ದನ್ನು ಜಗತ್ತಿಗೆ ಸಲ್ಲಿಸತಕ್ಕದ್ದು: ಎಂದರೆ ಸಮಾಜಮರ್ಯಾದೆ, ವ್ಯವಹಾರ ನೀತಿ ಮೊದಲಾದ ಧರ್ಮಗಳನ್ನು ಜಗದ್ವಿಷಯದಲ್ಲಿ ಸಲ್ಲಿಸತಕ್ಕದ್ದು. ಅಂತರಾತ್ಮಕ್ಕೆ ಸಲ್ಲತಕ್ಕ ವಿರಕ್ತಿ, ಇಂದ್ರಿಯಸಂಯಮ, ನಿರಭಿಮಾನ ಮೊದಲಾದ ಜೀವಸಂಸ್ಕಾರಗಳನ್ನು ಅಂತರಾತ್ಮವಿಷಯದಲ್ಲಿ ಸಲ್ಲಿಸತಕ್ಕದ್ದು. ವ್ಯಾವಹಾರಿಕಕ್ಕೆ ವ್ಯಾವಹಾರಿಕ; ಪಾರಮಾರ್ಥಿಕಕ್ಕೆ ಪಾರಮಾರ್ಥಿಕ.

ಸ್ತ್ರೀಯರ ಅತಿಸ್ವಾತಂತ್ರ್ಯದ ಅನರ್ಥಗಳು ಎಷ್ಟು ದೂರ ಹೋದಾವೆಂಬುದಕ್ಕೆ ಈಚೆಗೆ (೧೯೬೪) ಇಂಗ್ಲೆಂಡಿನಲ್ಲಿ ಒಬ್ಬಾನೊಬ್ಬ ಮಂತ್ರಿಗೂ ಒಬ್ಬ ಸ್ವೈರಿಣಿಗೂ ನಡೆದ ಅವಾಚ್ಯಪ್ರಕರಣವೂ ಅಮೆರಿಕದ ಕೆಲವು ಅಪಸ್ಮಾರಪ್ರಕರಣಗಳೂ ನಿದರ್ಶನವನ್ನೊದಗಿಸುತ್ತವೆ. ಸ್ತ್ರೀಪುರುಷರ ಅನ್ಯೋನ್ಯ ನೀತಿನಿಷ್ಠೆಗಳ ವಿಷಯದಲ್ಲಿ ಹಿಂದೂಗಳು ಪರಂಗಿ ಜನವನ್ನು ಮೇಲ್ಪಂಕ್ತಿಯಾಗಿಟ್ಟುಕೊಳ್ಳತಕ್ಕದ್ದಲ್ಲ. ಅವರಲ್ಲಿ ನೀತಿನಿರ್ಮಲತೆಗಳು ಇಲ್ಲವೆಂದಲ್ಲ. ಅವರು ತಮ್ಮ ಆದರ್ಶಗಳಿಂದ ಸಡಲಿ ಇಳಿದಿದ್ದರೆ ನಾವು ಅದನ್ನು ಅನುಕರಿಸಬೇಕಾದದ್ದಿಲ್ಲ.

ಐಶ್ವರ್ಯಭೋಗಗಳು ಅತಿಯಾಗಿ, ಜೀವನಕ್ಕೆ ಮುಖ್ಯೋದ್ದೇಶವಾದಲ್ಲಿ ನೀತಿ ನಿಷ್ಠೆಯ ಅಭ್ಯಾಸ ತಪ್ಪಿಹೋಗುತ್ತದೆ. ಅದು ಎಲ್ಲ ಬಗೆಯ ಪತನಕ್ಕೂ ಪ್ರಾರಂಭ. ಎಷ್ಟೋ ಪ್ರಾಚೀನ ಜನಪದಗಳು ಪ್ರಬಲವಾಗಿದ್ದವು ನೀತಿಸ್ಖಾಲಿತ್ಯದ ಕಾರಣದಿಂದ ಕ್ಷೀಣಿಸಿ ನಶಿಸಿ ಹೋದದ್ದರ ದೃಷ್ಟಾಂತಗಳು ಚರಿತ್ರೆಯಲ್ಲಿವೆ. ರೋಮ್ ಚಕ್ರಾಧಿಪತ್ಯವೇ ಹಾಗೆ ನೀತಿಭ್ರಷ್ಟತೆಯಿಂದ ಹಾಳಾಯಿತೆಂದು ಹೇಳುತ್ತಾರೆ. ಇದನ್ನು ನಾವು ನೆನಪಿನಲ್ಲಿರಿಸಿಕೊಂಡು ಸ್ತ್ರೀಪುರುಷಸಂಬಂಧದ ನೀತಿನೈರ್ಮಲ್ಯಗಳನ್ನು ಕಾಪಾಡಿಕೊಳ್ಳಬೇಕಾದದ್ದು ದೇಶಾಭಿಮಾನದ ದೃಷ್ಟಿಯಿಂದ ಸಹ ಕರ್ತವ್ಯವಾಗಿದೆ.

೪. ಸ್ತ್ರೀಪುರುಷಸಂಬಂಧವಿಚಾರ

ಲೋಕದಲ್ಲಿ ಈಚೆಗೆ (ಸೋಷಲಿಸ್‌ಮ್) ಸಮಾಜವಾದಿಮತ ಎಂಬ ಒಂದು ಪಂಥ ಎದ್ದು ಗದ್ದಲಮಾಡುತ್ತಿದೆಯಷ್ಟೆ? ಅದು ಯೂರೋಪು ದೇಶದ ಯಂತ್ರಕಾರ್ಮಿಕ ಪರಿಸ್ಥಿತಿಗಳಲ್ಲಿ ಉತ್ಪನ್ನವಾಗಿ, ಅಲ್ಲಿಗೆ ಅನಿವಾರ್ಯವಾದದ್ದೆನ್ನಬಹುದಾದರೂ, ಭರತಖಂಡದಲ್ಲಿ ಅನ್ಯಾನುಕರಣಪ್ರತಿಭೆಯು ಪ್ರಬಲವಾಗಿರುವುದರಿಂದ, ಇಲ್ಲಿಗೂ ಆ ಮತವನ್ನು ಅನ್ವಯಿಸಬೇಕೆನ್ನುವ ಜನ ಪ್ರಬಲರಾಗಿದ್ದಾರೆ. ಆ ಮತದ ಒಂದು ಮೂಲತತ್ತ್ವವು ಸರ್ವಸಮತ್ವ. ಈ ತತ್ತ್ವವು ನಮ್ಮ ಕುಟುಂಬಗಳಲ್ಲಿ ಪತಿಪತ್ನಿಯರಿಬ್ಬರಿಗೂ ನಡುವೆ ಹೊಕ್ಕು, ಏಕೈಕವಾಗಿದ್ದ ಸಂಸ್ಥೆಯನ್ನು ದ್ವಿಭಾಗಮಾಡಿದೆ. ಈಗ ಗಂಡನ ಲೆಕ್ಕವೇ ಬೇರೆ, ಹೆಂಡತಿಯ ಲೆಕ್ಕವೇ ಬೇರೆ. ಪೂರ್ವದಲ್ಲಿ ಮದುವೆ ಮೊದಲಾದ ಸಂದರ್ಭಗಳಲ್ಲಿ ಬಂಧುಮಿತ್ರರಿಗೆ ಆಹ್ವಾನ ಕಳಿಸುವಾಗ ಅದು ಕುಟುಂಬದ ಯಜಮಾನನೊಬ್ಬನ ಹೆಸರಿನಲ್ಲಿ ಹೋಗುತ್ತಿತ್ತು. ಆತನು ಆ ಕುಟುಂಬದ ಎಲ್ಲ ಗಂಡು ಜನ ಎಲ್ಲ ಹೆಣ್ಣು ಜನಕ್ಕೂ ಪ್ರತಿನಿಧಿಯಾಗಿರುತ್ತಿದ್ದ. ಈಗ ಮಿಸ್ಟರ್ ಬೇರೆ, ಮಿಸೆಸ್ ಬೇರೆ. ಅದರಲ್ಲಿ ಇನ್ನೂ ಒಂದು ವಿಚಿತ್ರ: ಮೊದಲು ಮಿಸೆಸ್, ಏಕೆಂದರೆ ಸ್ತ್ರೀಗೌರವಕ್ಕಾಗಿ; ಆಮೇಲೆ ಮಿಸ್ಟರ್, —ಇವನು ಆ ಇಬ್ಬರಲ್ಲಿ ಮೊದಲು ಹುಟ್ಟಿದವನಾಗಿ ತನ್ನ ಹೆಸರನ್ನು ಆಕೆಗೆ ಕೊಡುವವನಾಗಿದ್ದಾಗ್ಯೂ. ಈ ಹೊಸ ನಮೂನೆ ಐರೋಪ್ಯರಲ್ಲಿ ಇನ್ನೂ ಬಂದಂತಿಲ್ಲ. ಅವರಲ್ಲಿ ಅನುಕ್ರಮ ಇನ್ನೂ ಮೊದಲು ಮಿಸ್ಟರ್ ಆದಮೇಲೆ ಮಿಸೆಸ್. ಪರಂಗಿ ಮರ್ಯಾದೆಯನ್ನು ಇನ್ನೂ ಉತ್ತಮಮಾಡುತ್ತೇವೆಂದು ನಮ್ಮವರು ಶ್ರೀಮತಿ ಮತ್ತು ಶ್ರೀಮಾನ್ ಗೋಪುಂಗವರಾವ್ ಎಂದು ಬರೆಯಲಾರಂಭವಾಗಿದೆ. ಇದು ಸುಸಂಗತವಿರಬಹುದು, ಅಲ್ಲವೆನ್ನುವವರೂ ಇದ್ದಾರು. ಅದು ಹೇಗಾದರಾಗಲಿ. ಈ ದಾಂಪತ್ಯ ವಿಭಜನೆ ನಮ್ಮ ಶಾಸ್ತ್ರಕ್ಕೆ ಹೊಂದತಕ್ಕದ್ದಲ್ಲವೆಂದು ಮಾತ್ರ ಹೇಳಬಹುದು.

ಪತಿಪತ್ನಿಯರಿಬ್ಬರೂ ಇಬ್ಬರು ಪ್ರತ್ಯೇಕ ವ್ಯಕ್ತಿಗಳಲ್ಲ, ಏಕೈಕ ವ್ಯಕ್ತಿ ಎಂಬುದು ನಮ್ಮ ಶಾಸ್ತ್ರದ ತಾತ್ಪರ್ಯ. ಶುಭಾಶುಭಗಳೆರಡರಲ್ಲಿಯೂ ಇಬ್ಬರೂ ಒಬ್ಬನಂತೆ ಸೇರಿ ನಡೆಯಬೇಕಾದವರು. ವಿವಾಹಿತನಾದವನು ವಿಧುರನಾದರೆ ಯಜ್ಞದಾನಾದಿ ಕರ್ಮಗಳಿಗೆ ಅನರ್ಹನಾಗುತ್ತಾನೆ. ಗೃಹಸ್ಥೋಚಿತವಾದ ಎಲ್ಲ ಕರ್ಮಗಳಿಗೂ ಪತ್ನೀಸಹವರ್ತಿತ್ವವು ಆವಶ್ಯಕ. ಪತ್ನೀರಹಿತನಾದ

ಬ್ರಾಹ್ಮಣನು ದಾನಸ್ವೀಕಾರಾದ್ಯಧಿಕಾರಗಳಿಗೆ ಅನರ್ಹನು. ಪತ್ನಿ ಇರುವಾಗಲೂ ಆಕೆ ಬಹಿಷ್ಠೆಯಾದಾಗ ಆ ಮೈಲಿಗೆ ಪತಿಯನ್ನಂಟಿರುತ್ತದೆ. ಆಗ ಅವನು ಶ್ರಾದ್ಧನಿಮಂತ್ರಣ ಮೊದಲಾದ ಆಹ್ವಾನಗಳಿಗೆ ಅನರ್ಹನಾಗುತ್ತಾನೆ. ಇದರಿಂದ ಹೊರಡುವ ತತ್ತ್ವ ಇಷ್ಟು: ಪತಿಪತ್ನಿಯರು ಶಾಸ್ತ್ರದಲ್ಲಿ ಅವಿಭಾಜ್ಯವಾದ ಏಕೈಕ ವಸ್ತು. ಅವರು ಪ್ರತ್ಯೇಕ ಪ್ರತ್ಯೇಕವಾಗಿ ಗಣನೆಮಾಡಿಸಿಕೊಳ್ಳುವುದು ಕುಟುಂಬವಿಭಜನೆ. ಸಮಾನತ್ವಕ್ಕೆ ಆಶೆಪಟ್ಟು ಐಕ್ಯಭಾವವನ್ನು ತೊರೆಯುವುದು ಹೇಗೆ ಶ್ರೇಯಸ್ಕರವೋ ಅದನ್ನು ನಮ್ಮ ನವನಾಗರಿಕರು ಆಲೋಚಿಸಿ ತಿಳಿಸಬೇಕಾದದ್ದು.

೫. ಪ್ರಾಶ್ನಿಕಬುದ್ಧಿ

ವಸ್ತುಗಳ ಮತ್ತು ಸಂಗತಿಗಳ ಸ್ವರೂಪಯಥಾರ್ಥವನ್ನು ಅವುಗಳ ಗುಣಸ್ವಭಾವ ಪರೀಕ್ಷೆಯಿಂದಲೂ ಕಾರ್ಯಕಾರಣವಿಮರ್ಶೆಯಿಂದಲೂ ಗೊತ್ತುಮಾಡಬೇಕೆಂಬುದು ಪ್ರಾಶ್ನಿಕಬುದ್ಧಿವೃತ್ತಿ. ಅದನ್ನು ನಾನು ದೋಷವೆಂದು ಭಾವಿಸಲಾರೆ. ಅದು ಯುಕ್ತವೇ. ಸಮಾಧಾನ ತೋರದ ಕಾರಣದಿಂದ ಪ್ರಶ್ನೆಯೇ ಅಯುಕ್ತವೆಂದು ವಾದಿಸುವುದು ಬುದ್ಧಿಯ ಪ್ರಾಮಾಣಿಕತೆಯಾಗದು. ಈ ಪ್ರಾಶ್ನಿಕಬುದ್ಧಿ ನವನಾಗರಿಕತೆಯದೇನಲ್ಲ. ನಮ್ಮಲ್ಲಿ ಪ್ರಾಚೀನ ಕಾಲದಿಂದ ಅನೂಚಾನವಾಗಿ ಬಂದಿರುವ ಬುದ್ಧಿವೃತ್ತಿ ಅದು. ಉಪನಿಷತ್ತುಗಳೆಲ್ಲ ಪ್ರಶ್ನೋತ್ತರಮಯವಾಗಿವೆ. ವೇದವೇ ಹಾಗಿದೆ:

> ಕ್ವೇದಮಭ್ರಂ ನಿವಿಶತೇ ।
> ಕಿಗ್ಂಸ್ವಿದಾಸೀತ್ ಪೂರ್ವಚಿತ್ತಿಃ ।
> ಕೋಽಂತರಿಕ್ಷೇ ಶಬ್ದಂ ಕರೋತೀತಿ ।

ಇಂಥ ಪ್ರಶ್ನೆಗಳು ವೇದದಲ್ಲಿ ಯಥೇಷ್ಟವಾಗಿವೆ.

ಪ್ರಶ್ನೋಪನಿಷತ್ತಿನ ಈ ವಾಕ್ಯವನ್ನು ನೋಡೋಣ. ಇದು ಗುರುವು ಶಿಷ್ಯನಿಗೆ ಕೊಟ್ಟ ಪೀಠಿಕಾಸೂಚನೆ:

> ಯಥಾಕಾಮಂ ಪ್ರಶ್ನಾನ್ ಪೃಚ್ಛಥ ।
> ವಿಯದಿ ವಿಜ್ಞಾಸ್ಯಾಮಃ ಸರ್ವಂ ಹ ವೋ ವಕ್ಷ್ಯಾಮ ಇತಿ ॥

ನಮಗೆ ಉತ್ತರ ದೊರೆಯದಿರುವ ಪ್ರಶ್ನೆಯನ್ನು ಚರ್ಚಿಸುವುದು ಹೇಗೆ ಸ್ವಾಭಾವಿಕವೋ ಹಾಗೆ ಕರ್ತವ್ಯವೂ ಆಗಿದೆ. ಆದರೆ ಇಲ್ಲಿ ಒಂದು ವಿಶೇಷಸಂಗತಿಯುಂಟು. ನಮ್ಮ ಬುದ್ಧಿಗೆ ಗೋಚರಿಸುವ ವಿಷಯಗಳು ಎರಡು ಬಗೆಯವು: ಒಂದು ಇಂದ್ರಿಯ ಲಭ್ಯವಾಗಿ ಪ್ರತ್ಯಕ್ಷಪರೀಕ್ಷೆಗೆ ಅರ್ಹವಾದದ್ದು. ಇನ್ನೊಂದು ಇಂದ್ರಿಯಾತೀತವಾಗಿ ಪ್ರತ್ಯಕ್ಷಸಂಗ್ರಹಣಕ್ಕೆ ದೊರೆಯಲಾರದ್ದು. ಈ ಎರಡನೆಯದೇ ಆತ್ಮವಿದ್ಯೆ, —ದೈವವಿದ್ಯೆ, —ಲೋಕಾಂತರ ವಿದ್ಯೆ. ಈ

ರಹಸ್ಯವಿಚಾರಗಳಲ್ಲಿ ಶಾಸ್ತ್ರೋಪದೇಶಗಳು ಪ್ರಮಾಣವೆಂಬುದನ್ನು ಹಿಂದೆ ನಾಲ್ಕಾರು ಕಡೆ ಹೇಳಿಯಾಗಿದೆ.

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ॥ (೧೬-೨೪)

ಎಲ್ಲಿ ವಿಷಯವು ಪ್ರತ್ಯಕ್ಷವಾದದ್ದೋ ಅಲ್ಲಿ ವಸ್ತುಸ್ವರೂಪಪರೀಕ್ಷೆ ಕರ್ತವ್ಯವೇ ಆಗಿರುತ್ತದೆ. ಇದೇ ನಮ್ಮ ಈಗಿನ ಕಾಲದ ವಿಜ್ಞಾನ, ಅಥವಾ ಸಯನ್ಸ್ (Science).

ಇಲ್ಲಿ ಒಂದು ಎಚ್ಚರಿಕೆ ಅವಶ್ಯ. ಪ್ರತ್ಯಕ್ಷಪ್ರಪಂಚಕ್ಕೆ ಅನ್ವಯಿಸುವ ತರ್ಕಪರೀಕ್ಷಾ ವಿಧಾನಗಳನ್ನು ಪ್ರತ್ಯಕ್ಷಾತೀತಕ್ಕೆ ತರಲಾಗದು. (ಸಯನ್ಸ್) ಭೌತವಿಜ್ಞಾನದ ಪರೀಕ್ಷಾ ಪ್ರಮಾಣಗಳೇ ಬೇರೆ, ಅಧ್ಯಾತ್ಮದ್ದೇ ಬೇರೆ; ಅದೇಕೆಂದರೆ ಆ ಎರಡರ ವಸ್ತುಸ್ವಭಾವ ಬೇರೆಬೇರೆ. ಇಂದ್ರಿಯಗ್ರಾಹ್ಯವಾದದ್ದಕ್ಕೂ ಇಂದ್ರಿಯಗ್ರಾಹ್ಯವಲ್ಲದ್ದಕ್ಕೂ ಇರುವ ಭೇದದ ಕಾರಣದಿಂದ ಆ ಎರಡು ಕ್ಷೇತ್ರಗಳಲ್ಲಿ ಒಂದರ ಪರೀಕ್ಷಾಕ್ರಮ ಇನ್ನೊಂದರಲ್ಲಿ ಸಲ್ಲದು. ಆದರೆ ಕಾರ್ಯಕಾರಣಭಾವದ ವಿಚಾರಣೆ ಪರೀಕ್ಷಣೆಗಳು ಎರಡು ಕ್ಷೇತ್ರಗಳಲ್ಲಿಯೂ ಉಂಟು.

ಭೌತವಿಜ್ಞಾನದಲ್ಲಿ—ಪ್ರತ್ಯಕ್ಷದ ಆಧಾರದಿಂದ ಅದರ ಅಂತರಂಗದ ಕಡೆಗೆ ಗಮನ.
ಆತ್ಮವಿಜ್ಞಾನದಲ್ಲಿ—ಶಾಸ್ತ್ರದಿಂದ ಜಿಜ್ಞಾಸುವಿನ ಅಂತರಂಗಾನುಭವದ ಕಡೆಗೆ ಗಮನ.
ಎರಡರಲ್ಲಿಯೂ ವಿಚಾರಿಯ ಅನುಭವವೇ ಪರಮಪ್ರಮಾಣ.

ಇನ್ನೊಂದು ಭ್ರಾಂತಿಯ ವಿಷಯದಲ್ಲಿಯೂ ಎಚ್ಚರ ಅವಶ್ಯ. ಅದ್ಭುತಕ್ರಿಯೆಗಳಿಗೂ ಆತ್ಮಜ್ಞಾನಕ್ಕೂ ಸಂಬಂಧವಿಲ್ಲ. ವಿಶೇಷ ತಪಸ್ಸುಗಳಿಂದಲೂ ಯೋಗಾಭ್ಯಾಸದಿಂದಲೂ ಮಂತ್ರೋಪಾಸನೆಗಳಿಂದಲೂ ವಿಶೇಷಶಕ್ತಿಗಳು ಬಂದಾವೆಂದು ಇಟ್ಟುಕೊಳ್ಳೋಣ. ಹಾವು ಚೇಳುಗಳ ವಿಷಗಳನ್ನು ಮಂತ್ರಹಾಕಿ ಹೋಗಲಾಡಿಸೋಣ; ವಿಭೂತಿ ಕುಂಕುಮಗಳಿಂದ ಜ್ವರ ಬಿಡಿಸೋಣ; ಬರಿಗೈಯಿಂದ ಹಣ್ಣುಹಂಪಲು ಚಿನ್ನ ರನ್ನ ಹೊರಡಿಸೋಣ; ಹೂವು ಪ್ರಸಾದ ಕೊಟ್ಟು ಕಾನೂನು ವಿಧಿಸುವ ದಂಡನೆಯಿಂದ ತಪ್ಪಿಸೋಣ; —ಹೀಗೆ ವ್ಯಾಪಾರ ಲಾಭ, ಸಂಬಳ ಬಡ್ತಿ, ಸಂತಾನಪ್ರಾಪ್ತಿ ಮುಂತಾದ ಅಭೀಷ್ಟಗಳನ್ನು ಕಣ್ಣನೋಟ, ಕೈಯಸೋಕು, ಬಾಯ ವಾಕ್ಕುಗಳಿಂದ ನೆರವೇರಿಸೋಣ; ಹಾಗೆಯೇ ಎಂಟು ದಿನ ಕೂತಲ್ಲಿಯೇ ಕೂತು ಉಪವಾಸವಿರೋಣ; ಶ್ವಾಸಸ್ತಂಭನಮಾಡೋಣ; ಮೂಗಿನಿಂದ ನೀರು ಕುಡಿದು ಕಿವಿಯಿಂದ

ಉಗಿಯೋಣ—ಇಂಥಾ ಅದ್ಭುತಕ್ರಿಯೆಗಳನ್ನು ತಾವು ನೋಡಿ ಬಲ್ಲವರೆಂದು ಹೇಳಿಕೊಳ್ಳುವ ಜನ ಹೇರಳವಾಗಿಯೇ ಇದ್ದಾರೆ. ಅವರು ಹೇಳುವ ಶಕ್ತಿ ಸಿದ್ಧಿಗಳು ವಾಸ್ತವಿಕವೇ ಇರಬಹುದು. ಹಾಗಾದರೂ ಅವು ತತ್ತ್ವಜ್ಞಾನಕ್ಕೆ ಪ್ರಮಾಣವಲ್ಲ ಎಂಬುದನ್ನು ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ತತ್ತ್ವಜ್ಞನು ಯಾವ ಅದ್ಭುತವನ್ನೂ ಕಾಣದವನಾಗಿರಬಹುದು; ಅವನ ಪಾಲಿಗೆ ಜಗಲ್ಲೀಲೆಯೇ ಅದ್ಭುತಗಳಲ್ಲಿ ಅದ್ಭುತ. ವೇದವೆಲ್ಲ ಈ ಅದ್ಭುತದ ಕಥೆಯೇ. ಅದ್ಭುತಕಾರಿಗೆ ತತ್ತ್ವವಿಚಾರವು ದೂರದ ಸಂಗತಿಯಾಗಿರಬಹುದು.

ಇನ್ನು ಕೆಲವು ಸಂದರ್ಭಗಳಿವೆ. ಅವು ಪ್ರತ್ಯಕ್ಷ-ಅಪ್ರತ್ಯಕ್ಷ ಮಿಶ್ರಣಗಳು; ಮಂತ್ರಪ್ರಭಾವ, ಜ್ಯೋತಿಷ, ಶಕುನ, ಸಾಮುದ್ರಿಕ ಮೊದಲಾದವು. ಇವುಗಳನ್ನು ನಂಬತಕ್ಕದ್ದೆ, ಬಿಡತಕ್ಕದ್ದೆ? ನಿಜವಾದ ಕಷ್ಟ ತೋರುವುದು ಇಲ್ಲಿ. ಇಂಥ ಪ್ರಸಂಗದಲ್ಲಿ ನನ್ನ ತಿಳಿವಳಿಕೆ ಹೀಗಿದೆ: ಪುರಾತನವಾಗಿ ಬಂದದ್ದನ್ನು ನಡಸಿದರೆ ಪ್ರತ್ಯಕ್ಷಹಾನಿಯೇನೂ ತೋರದಿದ್ದಲ್ಲಿ ಅದನ್ನು ಕೂಡಿದಮಟ್ಟಿಗೆ ನಡಸುವುದು; ಅದು ಹಾನಿಕರವೆಂದು ಸಿದ್ಧವಾದಲ್ಲಿ ಅದರ ವಿಷಯದಲ್ಲಿ ಉಪೇಕ್ಷೆಯಿಂದಿರುವುದು. ಇಂಥ ವಿಷಯಗಳಲ್ಲಿ ಒಂದು ಖಂಡಿತವಾದ ಮತ್ತು ಸರ್ವತ್ರಯುಕ್ತವಾದ ನಿರ್ಣಯವನ್ನು ಮಾಡುವುದು ಸಾಮಾನ್ಯವಾಗಿ ಅವಶ್ಯವೇ ಆಗದು. ಅಪರೂಪವಾಗಿ ಸಂದೇಹಗಳು ಬರುವುದುಂಟು. ಅಂಥ ಸನ್ನಿವೇಶಗಳಿಗಾಗಿ ನಾನು ಮಾಡಿಕೊಂಡಿರುವ ಸೂತ್ರ ಹೀಗಿದೆ. ನಮ್ಮ ನಂಬಿಕೆಯನ್ನು ಬಯಸುವ ಸಂದರ್ಭಗಳು ಮೂರು ತೆರದವು:

1. ನಂಬಲರ್ಹವಾದವೆಂದು ಅನುಭವಾದಿ ಪ್ರಮಾಣಗಳಿಂದ ದೃಢಪಟ್ಟಿರುವವು. ಅಲ್ಲಿ ನಂಬಿಕೆ ಕರ್ತವ್ಯ.
2. ಅನುಭವಪ್ರಮಾಣಗಳ ಬಲವಿಲ್ಲದೆಯೂ ಪರೀಕ್ಷೆ ಪ್ರಯೋಗಗಳಿಂದ ಅಸಿದ್ಧವಾಗಿಯೂ ತೋರಿರುವುವು. ಇಲ್ಲಿ ನಂಬಿಕೆ ಸಲ್ಲುವುದಿಲ್ಲ. ಇಂಥ ಭಾವನೆಗಳನ್ನು ತಳ್ಳಿಹಾಕಬಹುದು.
3. ಪರೀಕ್ಷೆಗೆ ಬೇಕಾದ ಪ್ರಯೋಗಗಳು ಇನ್ನೂ ತಕ್ಕಷ್ಟು ನಡೆಯದೆ ಇರುವುವು. ಅಲ್ಲಿ ಪೂರ್ಣವಾದ ನಂಬಿಕೆ ಸಾಧ್ಯವಿಲ್ಲ; ಪೂರ್ಣ ಅಪನಂಬಿಕೆಯೂ ಸಾಧ್ಯವಿಲ್ಲ. ಇಂಥ ವಿಷಯದಲ್ಲಿ ನಮ್ಮ ನಿರ್ಣಯವನ್ನು ಅಮಾನತ್ತಿನಲ್ಲಿಡುವುದು, ಎಂದರೆ ತಟಸ್ಥವಾಗಿರುವುದು. ಕಾರ್ಯಸಂದರ್ಭ ಬಂದಾಗ ಸಂಪ್ರದಾಯಪಾಲನೆಗಾಗಿಯೂ ಸಮಾಜದ ಸಮಾಧಾನಕ್ಕಾಗಿಯೂ ಎಷ್ಟು ಮಾತ್ರ ಅವಶ್ಯವೋ ಅಷ್ಟು ಮಾತ್ರ

ತಾತ್ಕಾಲಿಕವಾಗಿ ನಡಸುವುದು. ಉತ್ತರೋತ್ತರ ಹೆಚ್ಚು ಪ್ರಮಾಣ ಹೆಚ್ಚು ಅನುಭವ ಬಂದಾಗ ಪುನರ್ವಿಮರ್ಶೆಯಿಂದ ಆ ಪೂರ್ವಭಾವನೆಯನ್ನು ತಿದ್ದಿ ಪರಿಷ್ಕಾರಪಡಿಸಿಕೊಳ್ಳುವುದು.

ಪ್ರಾಶ್ನಿಕಮನೋವೃತ್ತಿಯಿಂದಾಗಲಿ ವಿಜ್ಞಾನದ ನವನವೀನ ತರ್ಕಾನುಸಂಧಾನಗಳಿಂದಾಗಲಿ ಸಿದ್ಧಾಂತಗಳಿಂದಾಗಲಿ ಗೀತೋಪದೇಶದ ಒಳಮೈಕಟ್ಟಿಗೆ ಎಷ್ಟು ಮಾತ್ರವೂ ಬಾಧೆ ಬರಲಾರದೆಂದು ನನಗೆ ನಂಬಿಕೆ ದೃಢವಾಗಿದೆ. ಏಕೆಂದರೆ ಆತ್ಮವಿಚಾರವೂ ಜಗದ್ವಿಚಾರವೂ ಪ್ರಪ್ರತ್ಯೇಕವಾದವು. ಆದರೆ ಪರಸ್ಪರ ವಿರೋಧಿಗಳಲ್ಲ. ಮನುಷ್ಯಜೀವನದಲ್ಲಿ ಅವೆರಡೂ ಕೂಡಿಕೊಂಡಿರುತ್ತವೆ. ಜೀವದಶೆಯಲ್ಲಿ ಹೊರಗಣ ಜಗತ್ತಿನ ಅಂಶವೂ ಒಳಗಣ ಆತ್ಮಚೈತನ್ಯದ ಅಂಶವೂ ಬೆರೆತುಕೊಂಡಿರುತ್ತವೆ. ಆತ್ಮಾನಾತ್ಮವಿವೇಕವುಳ್ಳ ಮನುಷ್ಯನು ತನ್ನ ಜೀವನಕ್ಷೇತ್ರವನ್ನು ಎರಡು ರಂಗಗಳಾಗಿ ವಿಭಾಗಿಸಿಕೊಂಡಿರುತ್ತಾನೆ: ಒಂದು ಜಗದ್ರಂಗ; ಇನ್ನೊಂದು ಅಂತರಾತ್ಮರಂಗ. ಜಗದ್ರಂಗದಲ್ಲಿ ತಾರತಮ್ಯಭೇದಗಳನ್ನು ಗಣಿಸಿ ವಿವೇಚಿಸುತ್ತಾನೆ; ಇದು ವ್ಯಾವಹಾರಿಕ. ಅಂತರಾತ್ಮರಂಗದಲ್ಲಿ ಆತ್ಮೈಕ್ಯವನ್ನು ಅನುಸಂಧಾನಮಾಡುತ್ತಾನೆ; ಇದು ಪಾರಮಾರ್ಥಿಕ.

ವಿಜ್ಞಾನದ ಸಿದ್ಧಾಂತಗಳೂ ಆರ್ಥಿಕ ಸಾಮಾಜಿಕ ವ್ಯವಸ್ಥೆಗಳೂ ಜಗದ್ರಂಗಕ್ಕೆ ಸೇರಿದವು. ಅವು ವ್ಯಾವಹಾರಿಕ. ಈ ವ್ಯಾವಹಾರಿಕದಿಂದ ಬಾಧೆಪಡದಂತೆ ಕಾಪಾಡಲರ್ಹವಾದದ್ದು ಪಾರಮಾರ್ಥಿಕವಾದ ಆಧ್ಯಾತ್ಮಿಕ ದೃಷ್ಟಿ ಅಥವಾ ಪರಬ್ರಹ್ಮಸ್ಮೃತಿ.

ಲೋಕವು ವಿಕಾರವಶವಾದದ್ದು; ಆತ್ಮವು ನಿರ್ವಿಕಾರವಾದದ್ದು. ವಿಕಾರ್ಯ ಪ್ರಪಂಚದ ಮಧ್ಯದಲ್ಲಿ ಅವಿಕಾರ್ಯಸತ್ಯವನ್ನು ಸ್ಮರಣೆಯಲ್ಲಿರಿಸಿಕೊಂಡು ನಡೆದರೆ ಆ ಸ್ಮರಣೆ ಜೀವಾತ್ಮಕ್ಕೆ ವಜ್ರಕವಚವಾಗಿ, ಜಗದ್ವಿಕಾರದ ಪೆಟ್ಟುಗಳು ಅದಕ್ಕೆ ತಾಕದಂತೆ ಅದನ್ನು ಸಂರಕ್ಷಿಸುತ್ತದೆ. ಹಾಗೆಯೇ ಪರಮಾತ್ಮಸ್ಮರಣೆಯೊಡಗೂಡಿ ನಡೆದ ಜಗದ್ವ್ಯವಹಾರಗಳು ಜೀವಬಾಧಕಗಳಾಗದೆ ಜಗತ್ಕಲ್ಯಾಣಗಳಾಗುತ್ತವೆ.

೬. ಆಚಾರಕ್ಕಿಂತ ತತ್ತ್ವ ಮುಖ್ಯ

ಕಾಲವ್ಯತ್ಯಾಸದ ಸಂಕಟಗಳು ಏನೆಂದರೂ ನಮ್ಮ ಬಹಿರಂಗಜೀವನಕ್ಕೆ ಸಂಬಂಧಪಟ್ಟವು, ಅಂತರಂಗಜೀವನವನ್ನು ಅವು ಕೆಡಿಸಬೇಕಾದದ್ದಿಲ್ಲ—ಎಂಬುದನ್ನು ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಜಾತಿಸಾಂಕರ್ಯ, ಜೀವಿಕಾವೃತ್ತಿಗಳ ಅವ್ಯವಸ್ಥೆ, ಸ್ತ್ರೀಯರ ಉದ್ಯೋಗಸ್ವಾತಂತ್ರ್ಯ—ಇವೆಲ್ಲ ಬಹಿರಾಚಾರಕ್ಕೆ ಸೇರಿದವು; ಅವುಗಳ ಪರಿಣಾಮವು ಅಂತಸ್ತತ್ತ್ವದ ಮೇಲೆ ಇಲ್ಲ. ತತ್ತ್ವವು ಅಬಾಧ್ಯ, ಅವಿಕಾರ್ಯ. ಆದದ್ದರಿಂದಲೇ ಅದು ಸನಾತನ ಧರ್ಮ—ಶಾಶ್ವತ ಧರ್ಮ. ಸತ್ಯ, ಶೌಚ, ಶಮ, ದಮ, ಜ್ಞಾನ, ವ್ರತ, ಭೂತದಯೆ, ಲೋಕಸಹಾನುಭೂತಿ, ಆತ್ಮೌಪಮ್ಯ, ತತ್ತ್ವದೃಷ್ಟಿ, ಭಗವನ್ನಿಷ್ಠೆ—ಇವುಗಳನ್ನು ಕಾಲಗತಿ ಬಾಧಿಸಲಾರದು. ಜಾತಿ ಯಾವುದಾದರಾಗಲಿ, ಉದ್ಯೋಗವಾವುದಾದರಾಗಲಿ, ಸ್ತ್ರೀಯಾಗಲಿ, ಪುರುಷನಾಗಲಿ, ಅವರ ಬಾಹ್ಯಸನ್ನಿವೇಶಗಳು ಎಂತಾದರಿರಲಿ, ಬಹಿರಾಚಾರಗಳು ಹೇಗಾದರೂ ಮಾರ್ಪಡಲಿ—ಯಾರು ಸತ್ಯ ಶೌಚ ಇಂದ್ರಿಯಸಂಯಮ ಭಗವನ್ನಿಷ್ಠೆಗಳನ್ನು ಸರ್ವದಾ ಅನುಷ್ಠಾನದಲ್ಲಿರಿಸಿಕೊಂಡಿರುತ್ತಾರೋ ಅವರು ಗೀತೆಯ ಭಕ್ತರೇ ಸರಿ. ಬಹಿರಾಚಾರದಲ್ಲಿ ವ್ಯತ್ಯಾಸವಾಯಿತೆಂದು ಅವರು ಕೊರಗಬೇಕಾದದ್ದಿಲ್ಲ. ತತ್ತ್ವವು ನಮಗೆ ಮುಖ್ಯ. ತತ್ತ್ವಕ್ಕೆ ಹಾನಿ ತಂದುಕೊಳ್ಳದೆ ಅದರ ಜೊತೆಗೆ ಆಚಾರವ್ಯವಹಾರಗಳನ್ನು ಎಷ್ಟು ಸಾಧ್ಯವೋ ಅಷ್ಟು ಅನುಗೂಡಿಸಿಕೊಳ್ಳಬೇಕೆಂಬುದು ಸಿದ್ಧಾಂತ. ಆಚಾರವೆಂಬ ಕಾರಣದಿಂದ ವಿಜ್ಞಾನಾಭಿವೃದ್ಧಿಗೂ ಸಂಪತ್ಸಾಧನೆಗೂ, ಸಮಾಜಪ್ರಗತಿಗೂ ಪ್ರತಿಬಂಧಕ ತಂದುಕೊಳ್ಳಬಾರದು. ಆಧ್ಯಾತ್ಮಿಕ ಲೌಕಿಕಗಳೆರಡೂ ಅನ್ಯೋನ್ಯ ಸಹಕಾರಿಗಳಾಗುವಂತೆ ಸಮನ್ವಯ ತರುವುದು ನಮ್ಮ ಪ್ರಯತ್ನವಾಗಬೇಕು. ಜೀವನವಿಧಾನಗಳಲ್ಲಿಯೂ ಸಾಮಾಜಿಕ ಸಂದರ್ಭಗಳಲ್ಲಿಯೂ ಯಾವ ವ್ಯತ್ಯಾಸಗಳಾದರೂ ಆಗಿಕೊಳ್ಳಲಿ. ಅಂತರಾತ್ಮಪಾರಮ್ಯ, ಈಶ್ವರಪ್ರಭುತ್ವಾಂಗೀಕಾರ, ಧರ್ಮಶ್ರದ್ಧೆ, ಸ್ವಾರ್ಥಪರಿಮಿತಿ—ಈ ನಾಲ್ಕು ತತ್ತ್ವಗಳು ಉಳಿದರೆ ಗೀತೋಪದೇಶ ಉಳಿಯುತ್ತದೆಂದು ಧಾರಾಳವಾಗಿ ಹೇಳಬಹುದು. ಮನುಷ್ಯ ಅಮೇರಿಕದಲ್ಲಿರಲಿ, ರಷ್ಯದಲ್ಲಿರಲಿ, ಗುಮಾಸ್ತನಾಗಿರಲಿ, ಯಂತ್ರಕರ್ಮಿಯಾಗಿರಲಿ, ಆಕಾಶ ವೈಮಾನಿಕನಾಗಿರಲಿ; ಆತ್ಮ, ಈಶ್ವರ, ಧರ್ಮ, ಭೋಗೇಚ್ಛಾಪರಿಮಿತಿ—ಇವಿಷ್ಟನ್ನು ಸರ್ವದಾ ಮನಸ್ಸಿನಲ್ಲಿ ಧರಿಸಿ ಬದುಕು ಮಾಡಿದರೆ ಆತನಿಂದ ಪಾಪ ನಡೆಯುವುದು ಅಸಾಧ್ಯ;

ಆತನಿಂದ ನಡೆಯುವುದೆಲ್ಲ ಪುಣ್ಯವೇ ಆಗುತ್ತದೆ. ಇದನ್ನೇ ಶಂಕರಾಚಾರ್ಯರು ಬಹಳ ಸೊಗಸಾದ ಒಂದು ಶ್ಲೋಕದಲ್ಲಿ ಹೇಳಿದ್ದಾರೆ:

> ಯೋಗರತೋ ವಾ ಭೋಗರತೋ ವಾ ಸಂಗರತೋ ವಾ ಸಂಗವಿಹೀನಃ ।
> ಯಸ್ಯ ಬ್ರಹ್ಮಣಿ ರಮತೇ ಚಿತ್ತಂ ನನ್ದತಿ ನನ್ದತಿ ನನ್ದತ್ಯೇವ ॥

ಬ್ರಹ್ಮಾನುಸ್ಮರಣೆ ಬಹಳ ದೊಡ್ಡದು.

> ಪೂರ್ಣಕಲ್ಯಾಣರೂಪಿತ್ವಾತ್ ನಿತ್ಯಕಲ್ಯಾಣಸಂಶ್ರಯಾತ್ ।
> ಸ್ಮರ್ತೄಣಾಂ ವರದತ್ವಾಚ್ಚ ಬ್ರಹ್ಮ ತನ್ಮಂಗಲಂ ವಿಧುಃ ॥

೭. ಪೌರುಷವೇ ತಾರಕ

ಪರಿಸಮಾಪನೆಯಲ್ಲಿ ವಿಶೇಷವಾಗಿ ಹೇಳಬೇಕಾದ ಮಾತು ಒಂದಿದೆ. ಅದು ಗೀತೆಯು ಪೌರುಷಬೋಧಕವಾದದ್ದೆಂಬುದನ್ನು ಕುರಿತದ್ದು. ಪ್ರಪಂಚದ ಅಸ್ತವ್ಯಸ್ತತೆಗಳೂ ಜೀವನದ ತೊಡಕುಗಳೂ ಮನುಷ್ಯಸ್ವಭಾವದ ಚಪಲ ಕುಟಿಲಗಳೂ ಕೆರಳುತ್ತಿರುವ ನಮ್ಮ ಕಾಲದಲ್ಲಿ ಸಾಮಾನ್ಯ ಜನರಿಗೆ ಬದುಕಿನಲ್ಲಿ ಬೇಗ ಬೇಸರ ಬರುತ್ತದೆ. ಸಂಸಾರವನ್ನು ಬಿಟ್ಟು ಎಲ್ಲಿಯಾದರೂ ತೊಲಗಿಹೋಗಲಾದೀತೆ?—ಎನ್ನಿಸುತ್ತದೆ. ಜನ, ಮನೆ, ವ್ಯಾಪಾರ, ಉಪದೇಶ—ಯಾವುದೂ ಬೇಡವೆನಿಸುತ್ತದೆ. ಒಬ್ಬಾನೊಬ್ಬ ಕಷ್ಟಜೀವಿ ತನ್ನ ಸ್ನೇಹಿತನಿಗೆ ಆಪ್ತಪತ್ರದಲ್ಲಿ ಹೀಗೆ ಬರೆದಿದ್ದಾರೆ:

> "ಯುದ್ಧದ ಸುದ್ದಿ, ನೆರೆಯವರ ಕೆಟ್ಟ ನಡತೆ, ಆಹಾರಾದಿಗಳ ಬೆಲೆಯ ಏರಿಕೆ, ಸರಕಾರದ ಅನ್ಯಾಯ—ಇಂಥ ಮಾತುಗಳನ್ನು ಕೇಳಿಕೇಳಿ ನನಗೆ ಬೇಸರವಾಗಿದೆ. ಎಲ್ಲಾದರೂ ಹೋಗಿಬಿಡೋಣವೆಂದರೆ ಎಲ್ಲಿಗೆ ಹೋಗಲಿ?"

ಇದಕ್ಕೆ ಪ್ರತ್ಯುತ್ತರವೇನು? "ಲೋಕದ ವಿಚಾರ ಎಲ್ಲಾದರೂ ಹೋಗಿಕೊಳ್ಳಲಿ. ನೀನು ಅದಕ್ಕೆ ಕಿವಿಕೊಡಬೇಡ. ನೀನು ಆಫೀಸೋ ಅಂಗಡಿಯೋ ಆದಮೇಲೆ ಗುಡಿಗೋ ಮಠಕ್ಕೋ ಹೋಗು. ಪ್ರದಕ್ಷಿಣೆ ಮಾಡು. ಪುರಾಣ ಕೇಳು. ರಾಮಕೋಟಿ ಬರಿ. ರಾಮಧ್ಯಾನ ಮಾಡು. ಲೋಕದ ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ." —ಇದು ಹಳಬರ ಉಪದೇಶ. ಇದು ಗೀತಾನುಸಾರಿಯಾದದ್ದಲ್ಲವೆಂದು ನನ್ನ ಮತ. ತಪ್ಪಿಸಿಕೊಂಡು ಹೋಗು ಎಂದು ಹೇಳುವುದು ಗೀತಾಚಾರ್ಯನನ್ನು ಅನುಸರಿಸುವ ನಡವಳಿಕೆಯಲ್ಲ. ಗೀತೆಯ ಉಪದೇಶವೇನು?

> ಮಾಮನುಸ್ಮರ ಯುದ್ಧ್ಯ ಚ ॥ (೮-೭)
> ತತೋ ಯುದ್ಧಾಯ ಯುಜ್ಯಸ್ವ ॥ (೨-೩೮)
> ತಸ್ಮಾದ್ಯುದ್ಧ್ಯಸ್ವ ಭಾರತ ॥ (೨-೧೮)

ಹೀಗೆ ಒಂದು ಕಡೆಯಲ್ಲ, ಎರಡು ಕಡೆಯಲ್ಲ; ಹತ್ತಾರು ಕಡೆ ಮತ್ತೆಮತ್ತೆ ಮೇಲೆ ಮೇಲೆ ಯುದ್ಧವು ಕರ್ತವ್ಯವೆಂದು—ಯುದ್ಧವೇ ಕರ್ತವ್ಯವೆಂದು—ಯುದ್ಧವು ಕರ್ತವ್ಯವೇ ಎಂದು-ಉಪದೇಶವಿದೆ. ಆ ಉಪದೇಶ ಕ್ಷತ್ರಿಯನಿಗೆ ಆದದ್ದಲ್ಲವೆ? ನಾವು ಕ್ಷತ್ರಿಯರಲ್ಲವಲ್ಲ?—

ಎನ್ನಲಾಗದು. ಕ್ಷತ್ರಿಯನು ಶಸ್ತ್ರಾಸ್ತ್ರಗಳಿಂದ ಯುದ್ಧಮಾಡಿದರೆ ಬ್ರಾಹ್ಮಣನು ವಸಿಷ್ಠರಂತೆಯೋ ದ್ರೋಣರಂತೆಯೋ ಚಾಣಕ್ಯನಂತೆಯೋ ತಪೋಬಲ ವಿದ್ಯಾಬಲ ವಿವೇಕಬಲಗಳಿಂದ ಯುದ್ಧಮಾಡಬೇಕಾದವನು. ಕ್ಷತ್ರಿಯನ ಯುದ್ಧ ದೇಹದ್ದು. ಬ್ರಾಹ್ಮಣನ ಯುದ್ಧ ಮನಸ್ಸು ಬುದ್ಧಿಗಳದು. ಯುದ್ಧವೆಂಬುದರ ತಾತ್ಪರ್ಯವೇನು? ಯಾವುದು ಜೀವಕ್ಕೂ ಜೀವನಕ್ಕೂ ವಿರೋಧಿಯಾಗಿ ನಿಲ್ಲುತ್ತದೋ, ಯಾವುದು ಸತ್ಯ ನ್ಯಾಯಗಳಿಗೆ ತಡೆಗಟ್ಟುತ್ತದೋ ಅದನ್ನು ಮುರಿಯುವುದು ಯುದ್ಧ. ದುರ್ಯೋಧನನ ಅನ್ಯಾಯವನ್ನು ಮುರಿಯಲು ಶ್ರಮಿಸಿದವರು ಯುಧಿಷ್ಠಿರ ಭೀಮ ಮೊದಲಾದ ಕ್ಷತ್ರಿಯರು ಮಾತ್ರವೇ ಅಲ್ಲ; ವ್ಯಾಸ ಕೃಪ ದ್ರೋಣಾದಿ ಬ್ರಾಹ್ಮಣರೂ, ಯುಯುತ್ಸುವಿದುರಾದಿ ಬ್ರಾಹ್ಮಣೇತರರೂ—ಹೀಗೆ ಕ್ಷತ್ರಿಯೇತರರೂ ಸೇರಿದ್ದರು. ಕ್ಷತ್ರಿಯರು ಬಾಹುಯುದ್ಧ ಮಾಡಿದರೆ ಇತರರು ಮನೋಯುದ್ಧ ಬುದ್ಧಿಯುದ್ಧಗಳನ್ನು ಮಾಡಿದರು. ತಾತ್ಪರ್ಯ ಇದು: ಲೋಕದಲ್ಲಿ ಅನ್ಯಾಯ, ಅಸತ್ಯ, ದುಷ್ಟತನ, ಅಜ್ಞಾನ, ಪ್ರಮಾದ, ಭ್ರಾಂತಿ, ಅಪನೀತಿ—ಇವು ಎಲ್ಲಿದ್ದರೂ ಅವುಗಳನ್ನು ಎದುರಿಸಿ ಹೋರತಕ್ಕದ್ದೇ ಹೊರತು ಅವುಗಳಿಗೆ ಹೆದರಿ ಅವು ಬಲಿಷ್ಠವೆಂದು ಓಡಿಹೋಗತಕ್ಕದ್ದಲ್ಲ. ಹಾಗೆ ಓಡಿಹೋದರೆ ಆ ದೋಷಗಳನ್ನು ಅಂಗೀಕರಿಸಿದಂತೆಯೇ ಸರಿ. ಸಾಮಾನ್ಯವಾಗಿರುವ ಒಂದು ಗಾದೆ ನಮ್ಮ ನ್ಯೂನತೆಯನ್ನು ತೋರಿಸುತ್ತದೆ: “ದುಷ್ಟರನ್ನು ಕಂಡರೆ ದೂರ ಹೋಗು” ಇದು ನಮ್ಮ ಬುದ್ಧಿವಾದ. ನಾನು ಚಿಕ್ಕಂದಿನಲ್ಲಿ ಸ್ಕೂಲಿಗೆ ಮಣ್ಣು ಹೊರುತ್ತಿದ್ದಾಗ ಕಲಿಸುತ್ತಿದ್ದ ಪದ್ಯ ಇದು:

ತೇರ ಕಂಡರೆ ತೊಲಗು ಮಾರೈದನಾ ಕ್ಷಣವೆ ।
ವಾರುವಕೆ ದೂರ ಸರಿ ನೂರೈದು ಮಾರು ॥
ವಾರಣಕೆ ನೀಂ ಸಾರು ಮೂರುಸಾವಿರವನ್ನು ।
ಊರ ಬಿಡು ದುರ್ಜನರ ಸೇರದಿರು ಸಖನೇ ॥

ಇದು ಸ್ವಕ್ಷೇಮವನ್ನು ಬೋಧಿಸುವುದಾಯಿತೇ ಹೊರತು, ಧೀರನೀತಿಯನ್ನು ಬೋಧಿಸುವುದಾಗಲಿಲ್ಲ. ಸ್ವಜೀವರಕ್ಷಣೆ ಕರ್ತವ್ಯವೆಂಬುದು ನಿರ್ವಿವಾದವಾಗಿದೆ. ಆತ್ಮ ಸಂರಕ್ಷಣೆ ಪ್ರಥಮ ಕರ್ತವ್ಯವೇ ಸರಿ. ಆದರೆ ಯಾವ ದೃಷ್ಟಿಯಿಂದ ಅದು ಕರ್ತವ್ಯ? ಯಾವುದಕ್ಕಾಗಿ ಕರ್ತವ್ಯ? ಜೀವಿಸುವುದಷ್ಟೇ ಉದ್ದೇಶವೋ, ಅಥವಾ ಜೀವನಕ್ಕೆ ಬೇರೊಂದು ಗುರಿಯುಂಟೊ? ಜೀವಕ್ಕೆ ಒಂದು ಪರಮಾರ್ಥ ಉಂಟೆಂಬುದಾದರೆ ನಮ್ಮ ಆತ್ಮರಕ್ಷಣೆಯು

ಆ ಪರಮಾರ್ಥಕ್ಕಾಗಿ ಕರ್ತವ್ಯ ಎಂಬುದನ್ನು ಅಂಗೀಕರಿಸಬೇಕಾಗುತ್ತದೆ. ಆ ಪರಮಾರ್ಥಸಿದ್ಧಿಗಾಗಿ ಸ್ವಕ್ಷೇಮದ ಉಪಾಯದ ಜೊತೆಗೆ, ಒಂದು ಸ್ವಕರ್ತವ್ಯದ ಧೀರತೆಯೂ ಸೇರಬೇಕು. ಕ್ಷೇಮಚಿಂತನೆಯಲ್ಲಿ ಕರ್ತವ್ಯವನ್ನು ಮರೆಯುವುದು ಹೇಡಿತನ ಮಾತ್ರವೇ ಅಲ್ಲ, ಮೂಢತನವೂ ಹೌದು. ಅಪಾಯದಿಂದಲೋ ಕಷ್ಟ ಭಯದಿಂದಲೋ ಕರ್ತವ್ಯವನ್ನು ಬಿಟ್ಟು ಓಡಿಹೋಗಿ ರಮಧ್ಯಾನ ಮಾಡುವೆನೆಂಬುದು ಹಿತಸಾಧಕವಾಗದು.

> ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ ತ್ಯಜೇತ್ ।
> ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥ (೧೮-೮)

ಪೌರುಷವು ಸಾತ್ತ್ವಿಕದ ಲಕ್ಷಣ. ಅನ್ಯಾಯ ಅಪನೀತಿಗಳನ್ನೆದುರಿಸಿದರೆ ಫಲವುಂಟೆ?—ಎಂಬ ಚಿಂತೆ ಗೀತೋಪದೇಶಕ್ಕೆ ತೀರಾ ವಿರೋಧ. ಫಲವೋ ವಿಫಲವೋ, ಗೆಲವೋ ಸೋಲೋ, ಲಾಭವೋ ನಷ್ಟವೋ, ದೇವರು ಮಾಡಿಸಿದಂತಾಗಲಿ; ಹೋರುವುದು ನನ್ನ ಕರ್ತವ್ಯ—ಎನ್ನುವವನು ಧೀರ. ಮಿಲ್ಟನ್ (Milton) ಕವಿ ಹೀಗೆ ಹೇಳಿದ್ದಾನೆ:

> I cannot praise a fugitive and cloistered virtue, unexercised and unbreathed, that never sallies out and seeks her adversary.

> ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
> ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ (೨-೩)

—ಈ ಉಪದೇಶ ಅರ್ಜುನನಿಗೆ ಎಷ್ಟು ಆವಶ್ಯಕವಾಗಿತ್ತೋ ನಮಗೂ ಈಹೊತ್ತು ಅಷ್ಟು ಆವಶ್ಯಕವಾಗಿದೆ. ಪ್ರಜಾರಾಜ್ಯವೆಂದರೆ ತೊಡಕು ಬಡಿದಾಟಗಳ ರಾಜ್ಯ: ಸಾವಿರ ಸ್ವಾರ್ಥ ಸೈನ್ಯಗಳ ಘರ್ಷಣೆಯ ರಾಜ್ಯ. ಅದು ನಿತ್ಯರಣರಂಗ. ಅದರಲ್ಲಿ ಜನತೆಗೆ ಜೀವಿತವು ಸಹ್ಯವಾಗಬೇಕಾದರೆ ಜನದಲ್ಲಿ ಸಾತ್ವಿಕರಾದವರು ಪೌರುಷಶೀಲರಾಗಬೇಕು. “ನಮಗ್ಯಾಕಪ್ಪ ರಾಜಕೀಯ? ನಮಗ್ಯಾಕಪ್ಪ ಸರಕಾರದ ಗೊಡವೆ? ನಮಗ್ಯಾಕಪ್ಪ ಬಲವದ್ವಿರೋಧ?” ಹೀಗೆ ಮಾತನಾಡುವ ಜನ ಹೆಚ್ಚಾದರೆ ಪ್ರಜಾರಾಜ್ಯ ಹೇಗೆ ಚೆನ್ನಾಗಿ ಬಾಳೀತು? ಆದದ್ದರಿಂದ—

> ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುದ್ಧ್ಯ ಚ ॥ (೮-೭)

ಇದು ನಮಗೆ ತಾರಕಮಂತ್ರ. ಪೌರುಷವೇ ತಾರಕ. ಎಲ್ಲ ಕಷ್ಟಗಳಲ್ಲಿಯೂ ಎಲ್ಲ ಸಂಕಟಗಳಲ್ಲಿಯೂ ಭಕ್ತಿಪೂರ್ವಕ ಪೌರುಷ; ಮನೋವಿಕಾರರಹಿತ ಪೌರುಷ; ಶಾಂತಿ ಸಮನ್ವಿತ ಪೌರುಷ—ಇದು ತಾರಕ.

ನವನಾಗರಿಕತೆಯ ವಿಷಯದಲ್ಲಿ ಗೀತಾಮತಸ್ಥರ ಪ್ರತಿವರ್ತನೆ ಎಂಥಾದ್ದಾಗಿರಬೇಕು?

1. ಉಪೇಕ್ಷೆಯೆ?
2. ವಿರೋಧವೆ?
3. ಅನುಕರಣೆಯೇ?
4. ವಿವೇಕದ ಸವ್ಯವಹಾರವೆ?

ಉಪೇಕ್ಷೆ ಸಾಧ್ಯವಾಗದು. ಯೂರೋಪು ಅಮೆರಿಕ ಮೊದಲಾದ ಪರದೇಶಗಳವರು ಇಲ್ಲಿಗೆ ನಮ್ಮ ಆಹ್ವಾನದ ಮೇಲೆ ಬಂದವರಲ್ಲ. ಅವರು ಬಂದಾಗ ನಾವು ತಡೆಗಟ್ಟಲಿಲ್ಲ. ನೂರಾರು ವರ್ಷ ಅವರ ಸಹವಾಸವನ್ನು ಅಂಗೀಕರಿಸಿದ್ದೇವೆ. ಈಗ ಅವರನ್ನೆಲ್ಲ ಹಿಂದಕ್ಕೆ ಕಳುಹಿಸಬೇಕೆಂದರೆ ನಮ್ಮವರಲ್ಲಿಯೇ ಬಹುಮಂದಿ ಒಪ್ಪಲಾರರು. ವಿದೇಶ ಸಂಪರ್ಕ ನಮಗೆ ಬೇಡವೆನ್ನುವುದು ಸಾಧ್ಯವಲ್ಲ, ಸಾಧ್ಯವಾದರೂ ಯುಕ್ತವಲ್ಲ.

> ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥
> ಬಾಂಧವಾ ವಿಷ್ಣುಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

ಇದು ಗೀತೆ ಒಪ್ಪುವ ಮತ. ಹೀಗೆ ವಿದೇಶೀಯ ಸಹವಾಸ ಅನಿವಾರ್ಯವಾಗಿಯೂ ಎಷ್ಟೋ ಅಂಶಗಳಲ್ಲಿ ಉಪಾದೇಯವಾಗಿಯೂ ಇರುವಾಗ, ನಾವು ಅವರಲ್ಲಿ ಉದಾಸೀನರಾಗಿರಬಹುದೆ? ನಾವು ಉದಾಸೀನರಾದರೂ ಅವರು ನಮ್ಮಲ್ಲಿ ಉದಾಸೀನರಾಗಿರಬೇಕಲ್ಲ! ಮುದುಕಿ ಮಡಿಯುಟ್ಟು ಅಂಗಳದಲ್ಲಿ ತುಳಸೀಕಟ್ಟೆಯ ಬಳಿ ಕುಳಿತು "ಯಾರೂ ನನ್ನನ್ನು ಮುಟ್ಟಬೇಡಿ, ಮೈಲಿಗೆ ಮಾಡಬೇಡಿ" ಎಂದು ಸಾರಿಸಾರಿ ಕೂಗಿ ಹೇಳುತ್ತಿದ್ದರೂ, ಮನೆಯ ಮಕ್ಕಳು ಅದನ್ನು ಕೇಳುತ್ತಾರೆಯೆ? ಅವರ ಚೆಂಡಾಟದ ಸಂಭ್ರಮದಲ್ಲಿ ಆಕೆಯ ಮೇಲೆ ಚೆಂಡು ಬೀಳುವುದು ತಪ್ಪೀತೆ? ಜೂಟ್ ಆಟದ ಓಡಾಟದಲ್ಲಿ

ಆಕೆಗೆ ಮೈಸೋಕದಿರುವುದು ಆದೀತೆ? ಇಂದಿನ ಪ್ರಪಂಚದ ಸಂತೆಯಲ್ಲಿ ಭಾರತ ಜನ ಮಾತ್ರ ಮಡಿಯುಳಿಸಿಕೊಂಡಿರುವುದು ಸಾಧ್ಯವಾಗದು. ಪ್ರಪಂಚದೊಡನೆ ಬಾಳಬೇಕು.

ವಿರೋಧವೂ ಅಷ್ಟೇ—ಇನ್ನೂ ಹೆಚ್ಚು—ಅಸಾಧ್ಯ. ನಮ್ಮಲ್ಲಿ ನವನಾಗರಿಕತೆ ಬೇಡವೆನ್ನುವವರಿಗಿಂತ ಬೇಕೆನ್ನುವವರ ಸಂಖ್ಯೆಯೇ ಹೆಚ್ಚು. ನಿತ್ಯಕ್ಷೌರ, ಬೆಡ್ ಕಾಫಿ, ಬಿಸ್ಕತ್ತು, ರಿಸ್ಟ್‌ವಾಚು, ಮೋಟಾರು, ರೈಲು, ಟೆಲೆಗ್ರಾಫು, ಫೋಟೋಗ್ರಾಫು—ಇವು ಯಾರಿಗೆ ಬೇಡ? ಮಠದ ಸ್ವಾಮಿಗಳಿಗೂ ಅದು ಬೇಡದ್ದಲ್ಲ. ಯಾರಿಗೆ ತಾನೆ ಅದು ಯಾಕೆ ಬೇಡವಾಗಬೇಕು? ಹೀಗೆ ನವನಾಗರಿಕತೆ ನಮ್ಮ ಸಾಮಾನ್ಯ ಜೀವನದಲ್ಲಿ ಸೇರಿ ಹೋಗಿರುವಾಗ ನಾವು ಅದನ್ನು ವಿರೋಧಿಸುವುದು ಎಂದರೆ ಏನು?

ಅನುಕರಣವೋ? ಅದು ಈಗಾಗಲೇ ಹೆಚ್ಚಾಗಿ ನಡೆಯುತ್ತಿದೆ. ಉಡಿಗೆ ತೊಡಿಗೆ ಮೇಜು ಕುರ್ಚಿ ಮೊದಲಾದ ಬಾಹ್ಯಪರಿಕರಸಾಮಗ್ರಿಯಲ್ಲಿ ಮಾತ್ರವೇ ಅಲ್ಲ, ಸಾಮಾಜಿಕ ಮರ್ಯಾದೆಗಳಲ್ಲಿ, ಮನಸ್ಸಿನ ಉದ್ದೇಶ ಭಾವನೆಗಳಲ್ಲಿ ಸಹ ಯೂರೋಪಿಯನರಂತೆ ಆಗಬೇಕೆಂಬ ಉತ್ಸಾಹ ನೂರರಲ್ಲಿ ತೊಂಭತ್ತು ಮಂದಿಗೆ ಇದೆ. ವಿದ್ಯಾವಂತವರ್ಗದಲ್ಲಿ ಅದು ಹೆಚ್ಚಾಗಿದೆ. ಪಟ್ಟಣಿಗ ಹೆಂಗಸರಲ್ಲಿ ಅತಿಯೇ ಆಗಿದೆ; ತುಟಿ ಉಗುರುಗಳಿಗೆ ರಂಗು ಹಚ್ಚುವುದು, ಅರಿಶಿನಕುಂಕುಮ ಹಣೆಗೆ ಹಚ್ಚದಿರುವುದು ಇತ್ಯಾದಿ. ಸಮಾಜದ ಮೇಲ್ದರ್ಜೆಗಳನ್ನು ಕೆಳದರ್ಜೆಗಳವರು ಅನುಕರಿಸುವುದು ಸ್ವಾಭಾವಿಕವೇ ಆಗಿದೆ. ಕಾರ್ಖಾನೆ ಕೈಗಾರಿಕೆ ವ್ಯಾಪಾರ ಸಂಪದ್ವ್ಯವಸ್ಥೆಗಳಲ್ಲಿ ಇಂಡಿಯವು ರಷ್ಯದಂತೆ, ಅಮೇರಿಕದಂತೆ, ಜರ್ಮನಿಯಂತೆ, ಜಪಾನಿನಂತೆ ಆಗಬೇಕೆಂದು ರಾಜ್ಯಾಧಿಕಾರಸ್ಥರು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಹಾಗಾಗುವುದು ಶಕ್ಯವೋ ಅಲ್ಲವೋ ಅದು ಬೇರೆಯ ಮಾತು. ಉದ್ದೇಶ ಸಂಕಲ್ಪವಂತೂ ಉಂಟು. ಹೀಗೆ ಹತ್ತಾರು ವರ್ಷ ಅನುಕರಣೆ ನಡೆದರೆ ಭಾರತೀಯತೆ ಎಂಬ ವೈಶಿಷ್ಟ್ಯವೇ ಅಳಿಸಿಹೋಗಿ ಜಗತ್ತಿನ ಕಲಬೆರಕೆಯಲ್ಲಿ ಗೀತಾರಾಜ್ಯವೂ ಇಂಗಿಹೋದೀತು.

ನಾಗರಿಕತೆ ಎಂದರೆ ಏನು? ಅದು ಒಂದು ಜನತೆಯ ಸಭ್ಯ ಗುಣಶೀಲಗಳ ವಿಶಿಷ್ಟ ರೂಪ. ಒಂದು ಜನಾಂಗವು ಪ್ರಕೃತಿಯಿಂದ ತನಗೆ ಬಂದಿರುವ ಗುಣಗಳನ್ನೂ ಶಕ್ತಿಗಳನ್ನೂ ಸಂಪತ್ತುಗಳನ್ನೂ ಕಾರ್ಯಸಂದರ್ಭಗಳನ್ನೂ ಲೋಕಕ್ಕೆ ಬಾಧೆಯಾಗದಂತೆಯೂ ಲೋಕಕ್ಕೆ ಸಹಾಯವಾಗುವಂತೆಯೂ ಬೆಳೆಸಿಕೊಂಡು, ತನ್ನ ಜೀವನವನ್ನು ಅದಕ್ಕೆ ತಕ್ಕಂತೆ ತಿದ್ದಿಕೊಂಡರೆ, ಆ ಸುಸಂಸ್ಕೃತ ಜೀವನಸಂಧಾನವೇ ನಾಗರಿಕತೆಯೆನಿಸುತ್ತದೆ. ಪ್ರಕೃತಿಯು

ನಾನಾದೇಶಗಳ ನಾನಾ ಜನ ಜನಾಂಗಗಳಲ್ಲಿ ನಾನಾವಿಧದ ಗುಣವಿಶೇಷ ಶಕ್ತಿ ವಿಶೇಷಗಳನ್ನು ಹಂಚಿರುತ್ತಾಳೆ. ಇದರಿಂದ ಜಗತ್ತಿನಲ್ಲಿ ನಾಗರಿಕತೆಯ ನಾನಾತ್ವ. ಆ ನಾನಾತ್ವದ ಕಾರಣದಿಂದ ಒಂದು ಜನಾಂಗವು ಮಿಕ್ಕ ಜನಾಂಗಗಳಿಗೆ ಅವಶ್ಯವೆನಿಸಿ, ಬೆಲೆಯುಳ್ಳದ್ದಾಗುತ್ತದೆ. ಹೀಗೆ ಪ್ರತ್ಯೇಕ ದೇಶವೈಶಿಷ್ಟ್ಯವು ಲೋಕಸಂಸ್ಥಿತಿಗೆ ಪ್ರಯೋಜನಕಾರಿಯಾಗುತ್ತದೆ. ಜಗಜ್ಜೀವನದಲ್ಲಿ ಇಂಡಿಯದಿಂದ ಆಗಬೇಕಾದ ಸಹಕಾರ ಒಂದಿದೆ. ಇಂಡಿಯವು ಅನ್ಯಾನುಕರಣ ಮಾಡಿ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡರೆ ಅದು ಲೋಕಕ್ಕೆ ಆ ಸಹಕಾರವನ್ನು ನೀಡಲು ಅಸಮರ್ಥವಾಗುತ್ತದೆ. ಇಂಡಿಯವು ನವನಾಗರಿಕತೆಯ ವ್ಯಾಮೋಹಕ್ಕೆ ಒಳಗಾಗದೆ, ಪಾಶ್ಚಾತ್ಯರ ಅಂಧಾನುಕಾರಿಯಾಗದೆ, ತನ್ನ ಆಧ್ಯಾತ್ಮಿಕ ವೈಶಿಷ್ಟ್ಯವನ್ನು ತಾನು ಸರ್ವಪ್ರಯತ್ನಗಳಿಂದಲೂ ಕಾಪಾಡಿ ಬೆಳಸಿಕೊಂಡರೆ ಆಗ ಇಂಡಿಯವು ಲೋಕದೃಷ್ಟಿಯಲ್ಲಿ ಗಣ್ಯವಾಗುತ್ತದೆ.

ಈಗ ಪಾಶ್ಚಾತ್ಯ ನಾಗರಿಕತೆಗೂ ಭಾರತೀಯ ನಾಗರಿಕತೆಗೂ ಇರುವ ಲಕ್ಷಣ ವ್ಯತ್ಯಾಸಗಳನ್ನು ನೋಡೋಣ:

1. ಪಾಶ್ಚಾತ್ಯ ನಾಗರಿಕತೆಯು ಪ್ರತ್ಯಕ್ಷಪ್ರಮಾಣಾಶ್ರಯಗಳಾದ ಭೌತವಿಜ್ಞಾನ ಸಿದ್ಧಾಂತಗಳ ಆಧಾರದ ಮೇಲೆ ನಿಂತಿದೆ. ಭಾರತೀಯ ನಾಗರಿಕತೆಯು ಪರೋಕ್ಷ ಸತ್ಯಗಳಾದ ಆತ್ಮತತ್ತ್ವಗಳನ್ನು ಅವಲಂಬಿಸಿಕೊಂಡು ನಿಂತಿದೆ.
2. ಪಾಶ್ಚಾತ್ಯನಿಗೆ ಲೋಕಭೋಗವು ಮುಖ್ಯ ಲಕ್ಷ್ಯ; ಭಗವದುಪಾಸನೆ ಅದಕ್ಕೆ ಸಾಧನರೂಪವಾದ ಒಂದು ಉಪಾಯ. ಭಾರತೀಯನಿಗೆ ಭಗವದುಪಾಸನೆ ಮುಖ್ಯ ಧ್ಯೇಯ; ಲೋಕಭೋಗ ಅದಕ್ಕೆ ಪ್ರಾಸಂಗಿಕವಾಗಿ ಒದಗುವ ತಾತ್ಕಾಲಿಕ ಪ್ರೋತ್ಸಾಹ.
3. ಪಾಶ್ಚಾತ್ಯನು ಇಹಲೋಕದ ದೃಷ್ಟಿಯಿಂದ ಲೋಕಾತೀತಕ್ಕೆ ಬೆಲೆ ಕಟ್ಟುತ್ತಾನೆ. ಭಾರತೀಯನು ಲೋಕಾತೀತದ ದೃಷ್ಟಿಯಿಂದ ಇಹಲೋಕಕ್ಕೆ ಬೆಲೆ ಕೊಡಬೇಕಾದವನು.

ಹೀಗೆ ಮೂಲದಲ್ಲಿಯೇ ಭೇದ. ಆದರೆ ಆ ಭೇದದಿಂದ ವಿರೋಧವೆಂದು ಸಿದ್ಧವಾಗುವುದಿಲ್ಲ. ಹಾಲೂ ಜೇನೂ ಬೇರೆಬೇರೆ, ಆದರೆ ವೈರಿಗಳಲ್ಲ. ಒಂದಕ್ಕೊಂದು ಸಹಕಾರಿಯಾಗಬಹುದು; ಸಹಕಾರಿಯಾದರೆ ಚೆನ್ನ. ಮನುಷ್ಯಮನುಷ್ಯಭೇದವೂ ಹಾಗೆಯೇ; ದೇಶವಿದೇಶಭೇದವೂ ಹಾಗೆಯೇ.

ಯಾವ ಒಂದು ನಾಗರಿಕತೆಯೂ ಸರ್ವಾಂಗಸಂಪೂರ್ಣವಾದದ್ದಲ್ಲ. ಒಂದೊಂದರಲ್ಲಿ ಒಂದೊಂದು ಗುಣಾಂಶ ಅತಿಶಯವಾಗಿರುವಂತೆ, ಒಂದೊಂದು ನ್ಯೂನತೆಯೂ ಇರುತ್ತದೆ. ಹೀಗಿರುವುದರಿಂದಲೇ ಮಾನವಪ್ರಪಂಚದ ನಾನಾ ನಾಗರಿಕತೆಗಳು ಒಂದಕ್ಕೊಂದು ಬೇಕಾದವಾಗಿರುವುದು. ಇದೇ ನಾನಾತ್ವದ ಉಪಯೋಗ: ಅದು ಅನ್ಯೋನ್ಯಸಹಾಯತೆಗೆ ಪ್ರೇರಕವಾಗುತ್ತದೆಂಬುದು.

ಎಲ್ಲ ನಾಗರಿಕತೆಗಳೂ ಮನುಷ್ಯಪ್ರಗತಿಯ ವಿವಿಧ ರೂಪಗಳು. ಎಲ್ಲ ದೇಶಗಳಲ್ಲೂ ಎಲ್ಲ ಕಾಲಗಳಲ್ಲೂ ಎಲ್ಲ ಜಾತಿಗಳಲ್ಲೂ ಎಲ್ಲ ವರ್ಗಗಳಲ್ಲೂ ಮನುಷ್ಯನು ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂದು ಪದೇಪದೇ ಪ್ರಯತ್ನಿಸುವುದು ಸ್ವಭಾವ ಪ್ರೇರಣೆಯಿಂದ. ಅ ಪ್ರೇರಣೆಯು ಆತ್ಮದಲ್ಲಿ ಅಂತರ್ಗತವಾಗಿರುವ ಚಿಚ್ಛಕ್ತಿ, ಆನಂದ ಪ್ರವೃತ್ತಿಗಳ ಅಂಕುರ. ಅದು ಭೂಗುಣ ವಾಯುಗುಣ ಋತುಗುಣಾದಿ ಸಂದರ್ಭಭೇದಗಳ ಕಾರಣದಿಂದ ನಾನಾ ಜನಾಂಗಗಳಲ್ಲಿ, ನಾನಾ ವೃಕ್ಷಗಳೆಂಬಂತೆ, ನಾನಾರೂಪ ತಾಳಿರುತ್ತದೆ. ಆದದ್ದರಿಂದ ನಾವು ಐರೋಪ್ಯಾದಿ ಪರದೇಶಗಳ ನಾಗರಿಕತೆಗಳನ್ನು ದೂಷಿಸತಕ್ಕದ್ದಲ್ಲ; ಅವುಗಳನ್ನು ಹೇಗಿದ್ದರೆ ಹಾಗೆ ಅನುಕರಿಸತಕ್ಕದ್ದೂ ಅಲ್ಲ. ಎಲ್ಲ ಮನುಷ್ಯ ಸ್ವಭಾವದಲ್ಲೂ ಇರುವಂತೆ ಎಲ್ಲ ನಾಗರಿಕತೆಗಳಲ್ಲೂ ದೈವಾಂಶ ಅಸುರಾಂಶಗಳೆರಡೂ ಬೆರೆತುಕೊಂಡಿರುತ್ತವೆ. ಆದದ್ದರಿಂದ ಪ್ರತಿಯೊಂದು ದೇಶದ ನಾಗರಿಕತೆಯನ್ನೂ ನಾವು ಪರೀಕ್ಷಿಸಿ, ಅದರಲ್ಲಿ ದೈವಾಂಶ ಯಾವುದು, ಅಸುರಾಂಶ ಯಾವುದು ಎಂದು ನೋಡಬೇಕಾದದ್ದು ಕರ್ತವ್ಯ. ಯಾವುದು ಜೀವವನ್ನು ಪರಮಾತ್ಮನ ಕಡೆಗೆ ತಿರುಗಿಸಬಲ್ಲದೋ ಅದು ದೈವ. ಯಾವುದು ಜೀವವನ್ನು ಪರಮಾತ್ಮನ ದಿಕ್ಕಿಗೆ ನಾವು ಬೆನ್ನು ತಿರುಗಿಸುವಂತೆ ಮಾಡೀತೋ ಅದು ಆಸುರ. ಇದರ ವಿಸ್ತಾರವಿವರಣೆಯನ್ನು ಹಿಂದೆ ಹದಿನಾರನೆಯ ಅಧ್ಯಾಯದಲ್ಲಿ ನೋಡಿದ್ದೇವೆ. ಗೀತೋಪಾಸಕನಿಗೆ ದೈವಾಂಶವೆಲ್ಲಿದ್ದರೂ ಗ್ರಾಹ್ಯ; ಆಸುರಾಂಶವೆಲ್ಲಿದ್ದರೂ ತ್ಯಾಜ್ಯ. ಈ ಸೂತ್ರವನ್ನು ನಾವು ನವನಾಗರಿಕತೆಗೆ ಅನ್ವಯಿಸಬೇಕಾದದ್ದು. ಮನುಷ್ಯಪ್ರಪಂಚದ ಎಲ್ಲ ನಾಗರಿಕತೆಗಳೂ ಪರಸ್ಪರ ಪರಿಪೂರಕಗಳು ಎಂದರೆ ಎಲ್ಲ ದೇಶ ಎಲ್ಲ ಜನತೆಗಳಲ್ಲೂ ದೈವಾಂಶವು ಅಷ್ಟೋ ಇಷ್ಟೋ ಉಂಟೇ ಉಂಟು ಎಂದು ಅಂಗೀಕರಿಸಿದಂತಾಯಿತು. ಪಾಶ್ಚಾತ್ಯರಲ್ಲಿ (Science) ಭೌತವಿಜ್ಞಾನದ ಪ್ರಧಾನಲಕ್ಷಣಗಳಾದ ಪ್ರಕೃತಿಪರೀಕ್ಷಾಸಾಹಸ, ತತ್ತ್ವಶೋಧನಧೈರ್ಯ, ಇಹದಲ್ಲಿರುವಾಗ ಇಹಜೀವನವನ್ನು ಸಾಧ್ಯವಾದಷ್ಟು ಸೊಗಸುಮಾಡಬೇಕೆಂಬ ಜೀವನೋತ್ಸಾಹ—ಇವು ನಮಗೆ ಗ್ರಾಹ್ಯಗಳೆನ್ನಲು ನಾವು

ಹಿಂಜರಿಯಬೇಕಾದದ್ದಿಲ್ಲ. ನವನಾಗರಿಕತೆಯ ವಿಷಯದಲ್ಲಿ ಗ್ರಾಹ್ಯಾಗ್ರಾಹ್ಯವಿವೇಕ ಪೂರ್ವಕವಾದ ಸವ್ಯವಹಾರವೇ ನಮಗೆ ಯುಕ್ತವಾಗಿರುವ ಪ್ರತಿವರ್ತನೆ. ಅಲ್ಲಿ ಬ್ರಹ್ಮಾತ್ಮ ಸಂಸ್ಕೃತಿಯೇ ನಮಗಿರುವ ಮಾರ್ಗಜ್ಯೋತಿ.

ಮಂಗಲಂ ಭಗವದ್ಗೀತಾ ತಾತ್ಪರ್ಯಂ ಧರ್ಮವಿಸ್ತರಂ ।
ಮಂಗಲಂ ಕೃಷ್ಣಮಾಹಾತ್ಮ್ಯಸ್ಮರಣಂ ಪಾವನಂ ಜಯಂ ॥

ಹರಿಶರಣತೆ ಭೋಗೇಚ್ಛಾ- ।
ಪರಿಮಿತಿ ತರತಮವಿವೇಕಮುದ್ದಿಷ್ಟಗಳೋಳ್ ॥
ಪರಿನಿಷ್ಠೆ ನಿಯತಕರ್ಮದಿ ।
ನಿರಹಂಕೃತಿ ನಿಜಹಿತಾಪ್ತಿ ಪರಹಿತಕೃತಿಯೋಳ್ ॥

ಶ್ರದ್ಧಾಳುತೆ ಜೀವನದೋಳ್ ।
ಯುದ್ಧೋತ್ಸುಕಧೈರ್ಯಮಹಿತವಾಹಿನಿಯಿದಿರೋಳ್ ॥
ನಿರ್ದ್ವಂದ್ವತೆ ಫಲಗತಿಯೋಳ್ ।
ಹಾರ್ದತೆ ಸಂಸೃಷ್ಟಲೋಕಸಹಭಾಗಿತೆಯೋಳ್ ॥

ಈ ದಶಧರ್ಮಾಭ್ಯಸನಕೆ ।
ಸಾಧಕಮಪ್ಪೆಲ್ಲ ವೃತ್ತಿ ವಿಷಯಂ ಗ್ರಾಹ್ಯಂ ॥
ಬಾಧಕಮೆಲ್ಲಂ ತ್ಯಾಜ್ಯಂ ।
ಶೋಧನಬೋಧನಗಳಿಂದೆ ಪೌರುಷಭಾಗ್ಯಂ ॥

ನರದೈವಂ ಗುರುದೈವಂ
ಪರದೈವಂ ವಿಶ್ವಧರ ಪರಾತ್ಪರ ದೈವಂ ॥
ಪರಮಾತ್ಮಮಹಾದೈವಂ
ಶರಣಂ ಶ್ರೀಕೃಷ್ಣದೈವಮಸ್ಮದ್ದೈವಂ ॥

ಶ್ರೀಮತ್ಪರಬ್ರಹ್ಮಶಕ್ತಿ ಸ್ವಯಂವ್ಯಕ್ತಿ
ತಾಂ ಪ್ರಕೃತಿಯದರಿಂದೆ ವಿಶ್ವಜಾತಂ ।
ವಿಶ್ವದಂತರ್ಯಾಮಿತೆಯಿನಾತ್ಮನೆನಿಸಿ ವಿ-

ಶ್ವಪ್ರಭುತೆಯಿಂ ಬ್ರಹ್ಮನೀಶನೆನಿಕುಂ।
ಬ್ರಹ್ಮಪ್ರಕೃತಿವಿಮಿಶ್ರಣಮೆ ವಿಶ್ವಸಮಷ್ಟಿ-
ಯಾತ್ಮತನುಮಿಶ್ರಣಂ ವ್ಯಷ್ಟಿಜೀವಂ।
ಆತ್ಮವಂ ಬ್ರಹ್ಮಕಂ ದೇಹವಂ ವಿಶ್ವಕ್ಕ-
ಮನುಗೊಳಿಸೆ ಜೀವಿಗದು ಪರಮಶುಭದಂ॥

ಜೀವಿಯಂತೆಸಗಲಾಗದವೊಲದನತ್ತಲಿತ್ತಲ್।
ಧಾವಂತ ಬಡಿಯಿಪಾ ಪ್ರಕೃತಿಮೋಹಗಳೆ ಮಾಯೆ॥
ಮಾಯೆಯಾ ಸ್ವರ್ಣಪಾಶವ ಪರಿಯುವಸಿಯೆ ಧರ್ಮಂ।
ಸ್ವೀಯಧರ್ಮದೆ ಜೀವಿ ಪಡೆಗುಂ ಪರಾತ್ಮಪದವಂ॥

ಬ್ರಹ್ಮತತ್ಪ್ರಕೃತಿದಾಂಪತ್ಯದ ಪ್ರಜೆ ಲೋಕ
ಮವರ ಶಿಶು ಜೀವಮುಭಯಾಂಶ ಮಿಶ್ರಂ।
ಬ್ರಾಹ್ಮಿಕ ಚಿದಾನಂದಮಿಹುದಂತರಾತ್ಮದೊಳ್
ದೇಹೇಂದ್ರಿಯಂಗಳೊಳ್ ಪ್ರಕೃತಿತಂತ್ರಂ।
ಇದು ಜೀವದೊಳ್ ವಿಷಮಮದರಿಂ ಭವಭ್ರಮಣೆ
ಯದರೊಳೇ ಬ್ರಹ್ಮಮಾಯಾ ವಿಲಾಸಂ।
ಅಂತಶ್ಚಿದಂಶಮಾನಂದದೊಡಗೂಡಿ ತನು
ಮಲವ ನೀಗುವ ಜೀವನಿಯತಿ ಧರ್ಮಂ।
ಚಿದಚಿತ್ಸುಖಾಸುಖಂ ಜೀವರಚನೆಯೊಳಗಿಹವು।
ಲೋಕರುಚಿಗಳನಂತಸುಖನಿಧಿಗೆ ಕರೆವ ದೂತರ್।
ಜಗವನೋಲಗಿಸು ಧರ್ಮದಿನಹುದು ಬಂಧಮೋಕ್ಷಂ।
ನಿಜವಿವೇಕದಿನೆ ಜೀವಂ ಪಡೆವುದಾತ್ಮಹಿತಮಂ॥

ಪರಿಶಿಷ್ಟ ೧

ಮತತ್ರಯವಿಚಾರ

ಸಾಮರಸ್ಯದ ದೃಷ್ಟಿ

ನಮ್ಮಲ್ಲಿ—ಅದರಲ್ಲಿಯೂ ಬ್ರಾಹ್ಮಣಜಾತಿಯವರಲ್ಲಿ—ಅವರಲ್ಲಿಯೂ ಮತತತ್ತ್ವವನ್ನು ತಾವು ಬಲ್ಲವರೆಂದು ತಿಳಿದುಕೊಂಡಿರುವವರಲ್ಲಿ—ಕೆಲವರಿಗೆ ಗೀತೆ ಉಪನಿಷತ್ತು ಮೊದಲಾದ ತತ್ತ್ವಶಾಸ್ತ್ರಗ್ರಂಥಗಳ ವಿಚಾರ ಬಂದಾಗ, ಅದೇನು ದ್ವೈತವೆ? ಅದ್ವೈತವೆ? ವಿಶಿಷ್ಟಾದ್ವೈತವೇ? —ಎಂದು ತಕರಾರೆಬ್ಬಿಸುವುದು ರೂಢಿಯಾಗಿ ಬಂದಿದೆ. ಹಿಂದೆ ನಾನು ಪುರುಷಸೂಕ್ತಾದಿ ವೈದಿಕಸಾಹಿತ್ಯದ ಕನ್ನಡ ಭಾವಾನುವಾದವನ್ನು ಬರೆದಾಗ ಬಹುಮಂದಿ ಹೀಗೆ ಪ್ರಶ್ನೆ ಕೇಳಿದ್ದರು. ನಾನು ಎರಡು ಬಗೆಯಾಗಿ ಉತ್ತರ ಕೊಡುತ್ತಿದ್ದೆ:

1. ದ್ವೈತಾದ್ವೈತವಿಶಿಷ್ಟಾದ್ವೈತಗಳು ಪರಸ್ಪರ ವಿರುದ್ಧಗಳಲ್ಲ, ಪ್ರತ್ಯೇಕಗಳು ಮಾತ್ರ. ಅವುಗಳನ್ನು ಮೂರನ್ನೂ ಸಮರಸದೃಷ್ಟಿಯಿಂದ ನೋಡುವುದು ಅಸಾಧ್ಯವಲ್ಲ. ಆ ಮೂರರಲ್ಲಿ ಯಾವುದನ್ನಾದರೂ ಜನರು ಅವರವರ ಅಭಿರುಚಿಯಂತೆ, ಅವರವರ, ಅನುಭವಗಳಿಂದ, ತಮತಮಗೆ ತಕ್ಕಂತೆ ಆರಿಸಿಕೊಳ್ಳಬಹುದು. ತತ್ತ್ವಾರ್ಥಕ್ಕೆ ತ್ರಿಮತಗಳ ಭೇದದೃಷ್ಟಿಯಲ್ಲದೆ ಸಾಮರಸ್ಯದ ದೃಷ್ಟಿಯೊಂದುಂಟು. ಅದು ನಮ್ಮ ದಾರಿ. ಇದು ನನ್ನ ಮೊದಲನೆಯ ಉತ್ತರ.
2. ನನ್ನ ಎರಡನೆಯ ಉತ್ತರ ಕೊಂಚ ಧಾರ್ಷ್ಟ್ಯದ್ದೆಂದು ಕೆಲವರಿಗೆ ತೋರೀತೋ ಹೇಗೋ! ಅದು ಈ ರೀತಿ: ಪ್ರಶ್ನೆ ಕೇಳುವವರನ್ನು ಕುರಿತು ನಾನು ಕೇಳುವುದು— “ನೀವು ಯಾವ ಸಿದ್ಧಾಂತವನ್ನು ಸ್ವಾನುಭವದಿಂದ ಕಂಡುಕೊಂಡಿದ್ದೀರಿ? ನಿಮ್ಮ ಪರಾಮರ್ಶೆ ಯಾವುದರಲ್ಲಿ ಪೂರ್ತಿಯಾಗಿದೆ ಎಂಬುದನ್ನು ನನಗೆ ತಿಳಿಸಿದರೆ, ನಿಮಗೊಪ್ಪುವ ಜವಾಬನ್ನು ನಾನು ಕೊಟ್ಟೇನು.” ನನ್ನ ಪ್ರತಿಪ್ರಶ್ನೆಯ ತಾತ್ಪರ್ಯವನ್ನು ಮೂಲಪ್ರಾಶ್ನಿಕರು

> ಸರಿಯಾಗಿ ಸ್ನೇಹಭಾವದಿಂದ ಗ್ರಹಿಸಿದರೆಂದು ನಾನು ನಂಬಿಕೊಂಡಿದ್ದೇನೆ. ತತ್ತ್ವಾನ್ವೇಷಿಗೆ ಗ್ರಂಥವಾಕ್ಯಕ್ಕಿಂತ ಸ್ವಾನುಭವ ಹೆಚ್ಚು ಮುಖ್ಯ. ವಾಕ್ಯವನ್ನು ಅನುಭವಾನುಸಾರ ಗ್ರಹಿಸಬೇಕು.

ಒಂದಾನೊಂದು ಮತದ ನಿಜಸ್ವರೂಪ ಗೊತ್ತಾಗುವುದು ಅದರ ಫಲದಿಂದ: ಗಿಡದ ಜಾತಿ ಗೊತ್ತಾಗುವುದು ಹಣ್ಣಿನ ರುಚಿಯಿಂದ, ಹೂವಿಲ ಘಮಲಿನಿಂದ. ಆ ಮತವು ತನ್ಮತಸ್ಥನ ದಿನದಿನದ ನಡವಳಿಕೆಯಲ್ಲಿ ರೂಪಗೊಂಡು, ಅವನ ಮನಸ್ಸಿಗೆ ಒಂದು ನೆಮ್ಮದಿಯನ್ನೂ, ಅವನ ಜೀವನಕ್ಕೆ ಒಂದು ಕಾಂತಿಯನ್ನೂ ತರಬೇಕು. ಯಾವ ತತ್ತ್ವವು ಅನುಭವಕ್ಕೆ ಬಾರದೆ, ಗ್ರಂಥಸ್ಥಮಾತ್ರವಾಗಿ, ಕೇವಲ ತರ್ಕಪ್ರಯುಕ್ತವಾಗಿ ಉಳಿದುಕೊಂಡಿರುತ್ತದೆಯೋ ಆ ತತ್ತ್ವವು ಎಷ್ಟೇ ವಾದಬಲವುಳ್ಳದ್ದಾದರೂ ಕೇವಲ ಬುದ್ಧಿತೃಪ್ತಿಗೇ ಹೊರತು ಜೀವನಪ್ರಯುಕ್ತವಾಗಲಾರದು. ಗೀತೆಯು ಲೋಕಜೀವನ ಪ್ರಯುಕ್ತವಾದ ಗ್ರಂಥವೆಂಬುದು ನಮ್ಮ ತಳಹದಿಯ ನಂಬಿಕೆ. ಈ ಆಧಾರದ ಮೇಲೆ ನಾವು ಅದರ ಅರ್ಥವಿಚಾರಕ್ಕೆ ತೊಡಗತಕ್ಕವರು.

ಆಸ್ತಿಕತೆ

ದ್ವೈತಾದ್ವೈತವಿಶಿಷ್ಟಾದ್ವೈತಗಳು ಮೂರೂ ಆಸ್ತಿಕಮತಗಳೆಂಬುದನ್ನು ಮೊದಲು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಆ ಮೂರರಲ್ಲಿ ಯಾವುದೂ ನಾಸ್ತಿಕತೆಯನ್ನು ಪ್ರೋತ್ಸಾಹಿಸುವುದಲ್ಲ.

ಆಸ್ತಿಕತೆಯೆಂದರೆ ಏನು? "ಆಸ್ತಿಕ" ಎಂಬ ಮಾತು ಅಸ್ತಿ = ಉಂಟು ಎಂಬುದರಿಂದ ಬಂದದ್ದಲ್ಲವೆ? ಜಗತ್ತು ಶೂನ್ಯವಲ್ಲ; ಜೀವನವೆಂಬುದು ಶೂನ್ಯವಲ್ಲ; ಜೀವ ಜಗತ್ತುಗಳಿಗೆ ಆಧಾರವಾಗಿರುವ ದೇವರು ಎಂಬುದು ಶೂನ್ಯವಲ್ಲ. ನಾವು ಇದ್ದೇವೆ; ಜಗತ್ತು ಇದೆ; ಅವೆರಡಕ್ಕೂ ಅರ್ಥವಿದೆ; ಅವೆರಡಕ್ಕೂ ಒಡೆಯನಾದ ದೇವರು ಎಂಬ ಒಂದು ಮಹಾಚೈತನ್ಯ ಇದೆ. ಹೀಗೆ "ಉಂಟು" (ಅಸ್ತಿ) ಎಂಬ ನಂಬಿಕೆಯೇ ಆಸ್ತಿಕತೆ. ಇದನ್ನು ಇಂಗ್ಲೀಷಿನಲ್ಲಿ ಪಾಸಿಟಿವ್ (Positive) ಎಂದು ಹೇಳುತ್ತಾರೆ. ಯಾರು ಅಸ್ತ್ಯರ್ಥಕಮನೋಭಾವವುಳ್ಳವರೋ ಅವರು ಆಸ್ತಿಕರು. ಅವರಿಗೆ ಉಪಯುಕ್ತವಾಗತಕ್ಕದ್ದು ಭಗವದ್ಗೀತೆ. ಯಾರು ಏನೂ ಇಲ್ಲ, ಜಗತ್ತು ಧೂಳುಗುಡ್ಡೆ, ದೇವರೆಂಬುದು ಕಥೆ, ಜೀವವೆಂಬುದು ಕಲ್ಪನೆ, ಧರ್ಮವೆಂಬುದು ಭ್ರಾಂತಿ, ವಾಸ್ತವವಾಗಿ ಎಲ್ಲ ಶೂನ್ಯ, ಮಣ್ಣುಗುಡ್ಡೆ ಮರಳುಗುಡ್ಡೆಗಳು. ಅವು ಈ ಘಳಿಗೆ ಇವೆ, ಇನ್ನೊಂದು ಘಳಿಗೆಗೆ ಶೂನ್ಯ—ಹೀಗೆನ್ನುತ್ತಾರೋ ಅವರು ನಾಸ್ತಿಕರು. ಅದೇ ನಾಸ್ತ್ಯರ್ಥಕ (ನೆಗೆಟಿವ್ = Negative) ಮನೋವೃತ್ತಿ. ಆಸ್ತಿಕತೆ ಕೊಂಚವೂ ಇಲ್ಲದೆ ನಾಸ್ತಿಕ್ಯವನ್ನೇ ಸಂಪೂರ್ಣವಾಗಿ ಅಂಗೀಕರಿಸಿರುವವರನ್ನು ಭಗವದ್ಗೀತೆಯು ಆಸ್ತಿಕ್ಯಕ್ಕೆ ಪರಿವರ್ತನೆ ಮಾಡೀತೆಂದು ನಾನು ಹೇಳಲಾರೆ.

ನಾಸ್ತಿಕ್ಯವು ವಿಚಾರತತ್ಪರರಿಗೆ ಬಹುಕಾಲವಿರುವುದಲ್ಲವೆಂದು ನನಗನ್ನಿಸುತ್ತದೆ. ನಾಸ್ತಿಕನು ದೇವರೆಂಬುದರ ವಿಷಯದಲ್ಲಿ "ನಾಸ್ತಿ" ಎಂದು ವಾದಿಸಿಯಾನೇ ಹೊರತು ತಾನು ಎಂಬುದರ ವಿಷಯದಲ್ಲಿ "ನಾಸ್ತಿ" ಎನ್ನಲಾರ. ತಾನಿದ್ದರಲ್ಲವೆ ಅಸ್ತಿಯೆಂದೋ ನಾಸ್ತಿಯೆಂದೋ ವಾದ? ತಾನು ಮಾತ್ರವಾದರೂ "ಅಸ್ತಿ" ಎಂದೇ ಅವನು ಹೇಳಿಯಾನು. ಪಾಶ್ಚಾತ್ಯ ತತ್ತ್ವವಿಚಾರಿಯಾದ ಡೆಕಾರ್ಟೆ ಎಂಬಾತನು ಆಸ್ತಿಕನು. ಆತ ಹೇಳಿದನಂತೆ: (*Cogito, ergo sum*) "ನಾನು ಇದ್ದೇನೆ, ಏಕೆಂದರೆ ನಾನು ಆಲೋಚಿಸುತ್ತಿದ್ದೇನೆ."

ಇದೆಯೋ ಇಲ್ಲವೋ ಎಂದು ಪ್ರಶ್ನೆ ಮಾಡುವವನು ತಾನಾದರೂ ಇರಬೇಕಷ್ಟೆ. ಅವನೇ ಇಲ್ಲದಿದ್ದರೆ ಪ್ರಶ್ನಿಸುವವರು ಯಾರು? ಇದೇ ಆಸ್ತಿಕತೆಯ ಪ್ರಾರಂಭ.

ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್ ॥
ಅಸ್ತಿ ಬ್ರಹ್ಮೇತಿ ಚೇದ್ವೇದ । ಸನ್ತಮೇನಂ ತತೋ ವಿದುಃ ॥ (ತೈ. ಉ.)

ನಾಸ್ತಿಕನು ನಾಸ್ತಿ ಎನ್ನುವುದು ತನ್ನಿಂದ ಬೇರೆಯಾದ ದೇವರು ಎಂಬುದನ್ನು, ಕುರಿತು; ತನ್ನನ್ನು ಕುರಿತಲ್ಲ. ಹಾಗಾದರೆ ನಾಸ್ತಿಕನ ಪಾಲಿಗೆ ಅವನೇ ದೇವರೆಂದಾಯಿತು; ಏಕೆಂದರೆ ಅವನು ತನ್ನ ಬುದ್ಧಿ ಎಲ್ಲಕ್ಕೂ ಮೇಲ್ಪಟ್ಟದ್ದು, ಅದು ಎಲ್ಲವನ್ನೂ ನೋಡಬಲ್ಲದ್ದು, ಎಲ್ಲವನ್ನೂ ಹಿಡಿಯಬಲ್ಲದ್ದು; ಯಾವುದನ್ನು ಅದು ಹಿಡಿಯಲಾರದೋ ಅದು ಇಲ್ಲವೇ ಇಲ್ಲ—ಎಂದು ತನ್ನ ಬುದ್ಧಿಸಾಮರ್ಥ್ಯಗಳನ್ನು ನಂಬಿಕೊಂಡಿರುತ್ತಾನೆ. ಅವನು ಭಗವದ್ವಿಷಯದಲ್ಲಿ ನಾಸ್ತಿಕ, ಸ್ವವಿಷಯದಲ್ಲಿ ಆಸ್ತಿಕ.

ನಾಸ್ತಿಕವಾದವು ಈಗ ಪ್ರಪಂಚದಲ್ಲಿ ವಿಚಾರವಂತರಲ್ಲಿ ಅಳಿಸಿಹೋಗುತ್ತಿದೆಯೆಂದು ಹೇಳಬಹುದೆನಿಸುತ್ತದೆ. ಪಾಶ್ಚಾತ್ಯ ವಿಜ್ಞಾನದ ಬೆಳವಣಿಗೆಯ ಒಂದಾನೊಂದು ಹಂತದಲ್ಲಿ ಅದು ನಾಸ್ತಿಕವಾದಕ್ಕೆ ಪ್ರೋತ್ಸಾಹಕೊಡುವಂತಿತ್ತು. ಅದು ಇನ್ನೂ ಮುಂದಕ್ಕೆ ಹೋಗಿ ಈಗ ಆಸ್ತಿಕತೆಯ ಕಡೆಗೆ ತಿರುಗುವಂತಿದೆ. ಮನುಷ್ಯಬುದ್ಧಿಯು ವಿಶ್ವದ ಕಣಕಣವನ್ನೂ ಭೇದಿಸಿ, ಛೇದಿಸಿ, ಪರೀಕ್ಷಿಸಿ, ಪ್ರಕೃತಿಮರ್ಮವನ್ನು ಹೊರಗೆಡಹಬಲ್ಲದ್ದು—ಎಂಬ ನಂಬಿಕೆ ಆಗ ಇತ್ತು. ವೈಜ್ಞಾನಿಕನಿಗೆ ಭೌತಪ್ರಪಂಚದಲ್ಲಿ ಆಗ ಜಯದ ಮೇಲೆ ಜಯ ಕೈಗೂಡುತ್ತಿತ್ತು. ಅವನು ಆಕಾಶಮಂಡಲವನ್ನು ಭೇದಿಸಿ, ಗ್ರಹಗ್ರಹಾಂತರ ಸಂಚಾರಗಳನ್ನು ಅಳೆಯುವೆನೆಂದು ಹೊರಟ. ವಿದ್ಯುಚ್ಛಕ್ತಿಯನ್ನು ಘನರೂಪಕ್ಕೆ ತರಬಲ್ಲವನಾದ. ಹಬೆಯಿಂದ ಯಂತ್ರಚಲನೆ ಮಾಡಿಸಿದ. ರಾಸಾಯನಿಕ ದ್ರವ್ಯಗಳಿಂದ ಅಪೂರ್ವ ವೈದ್ಯಸಾಮಗ್ರಿಗಳನ್ನೂ ಹಾಗೆಯೇ ಯುದ್ಧಸಾಮಗ್ರಿಗಳನ್ನೂ ತಯಾರುಮಾಡಿದ. ಹೊಸಹೊಸ ಯಂತ್ರಸಾಧನಗಳನ್ನೂ ಶಿಲ್ಪಚಮತ್ಕಾರಗಳನ್ನೂ ಕಲ್ಪಿಸಿದ. ರೋಗಕ್ಕೆ ಹೊಸಹೊಸ ಶಸ್ತ್ರಚಿಕಿತ್ಸೆಗಳನ್ನು ನಡಸಿದ. ಮನುಷ್ಯದೇಹದ ಮೂಳೆ ನರನಾಳಗಳನ್ನು ಬಿಡಿಬಿಡಿಸಿ, ಅಳೆದಳೆದು ಲೆಕ್ಕಿಸಿದ. ಹೀಗೆ ವಿಜ್ಞಾನ ಪ್ರಗತಿಯು ಪರಂಪರೆಯಾಗಿ ನುಗ್ಗಿ ಮುಂದಕ್ಕೆ ಬಂದದ್ದರಿಂದ, ವಿಜ್ಞಾನದ ಮುಂದೆ ಪ್ರಕೃತಿಯ ಮರ್ಮ ಯಾವುದೂ ಉಳಿಯದು, ಮನುಷ್ಯಬುದ್ಧಿಗೆ ಅಲಭ್ಯವಾದದ್ದು ಯಾವುದೂ ಇರಲಾರದು—ಎಂಬ ಉತ್ಕಟವಾದ ಆತ್ಮವಿಶ್ವಾಸ ಮನುಷ್ಯನಲ್ಲುಂಟಾಯಿತು.

ಅಜ್ಞೇಯಕರು

ಆದರೆ ಈ ವಿಜಯಪರಂಪರೆಯ ನಡುವೆ ವೈಜ್ಞಾನಿಕನಿಗೆ ತನಗೆ ತಿಳಿಯದ್ದೂ ಇನ್ನೂ ಏನೋ ಉಂಟೆಂಬ ಸಂಶಯ ಅವನ ಮನಸ್ಸಿನಲ್ಲೊಂದು ಕಡೆ ಅವನನ್ನು ಕಾಡುತ್ತಲೇ ಇತ್ತು. ವೈಜ್ಞಾನಿಕರಲ್ಲಿ ಜಗನ್ಮೂಲವನ್ನೇ ಹುಡುಕಬೇಕೆಂದು ಹೊರಟವರು ಕೆಲವರು ಯಾವಾಗಲೂ ಇರಲೇ ಇದ್ದರು. ಸಾಕ್ರಟೀಸನಿಗೆ ಹಿಂದಿನ ಕಾಲದಿಂದ–ಎಂದರೆ ಈಗ್ಗೆ ಮೂರು ಸಾವಿರ ವರ್ಷಗಳ ಹಿಂದಿನಿಂದ—ತತ್ತ್ವಾನ್ವೇಷಿಗಳು ಪಾಶ್ಚಾತ್ಯ ಚರಿತ್ರೆಯಲ್ಲಿ ಆಗಾಗ ತಲೆಯೆತ್ತುತ್ತಲೇ ಇದ್ದಾರೆ. ಅಂಥವರು ಈ ಹೊತ್ತಿಗೂ ವೈಜ್ಞಾನಿಕರಲ್ಲಿ ಇದ್ದಾರೆ. ಅವರ ಅನ್ವೇಷಣ ಪರೀಕ್ಷಣಗಳು ಈಗಲೂ ಸಾಗುತ್ತಿವೆ. ಅವರಲ್ಲಿ ಮುಖ್ಯರಾದ ಆಧುನಿಕರು ನ್ಯೂಟನ್, ಡಾರ್ವಿನ್, ಐನ್‌ಸ್ಟೈನ್, ಷ್ರೋಡಿಂಗರ್, ಎಡಿಂಗ್‌ಟನ್ ಇತ್ಯಾದಿಗಳು. ಇವರು ಭೌತದ್ರವ್ಯವನ್ನು ಕಣಕಣವಾಗಿ ಒಡೆದು, ಅಣುವಣುವಾಗಿ ವಿಂಗಡಿಸಿ, ಪರಮಾಣುವಿಗೆ ಗರ್ಭನಿರ್ಭೇದ ಮಾಡಿಸಿ ನೋಡಿದ್ದಾರೆ. ಜಗಚ್ಛಕ್ತಿ ಅದರಲ್ಲೆಲ್ಲಿ ಎಂಬುದು ಅವರಿಗೆ ಕಾಣಬಾರದೆ, ಅವರು ಅದೆಲ್ಲೋ ಇರಬೇಕೆಂದು—ಅದು ಹೇಗೋ ಇರಲೇಬೇಕೆಂದು—ಊಹೆಮಾಡುತ್ತಿದ್ದಾರೆ. ಏನೋ ಒಂದು ಇದೆ; ಅದು ನಮ್ಮ ಕೈಗೆ ಸಿಕ್ಕದೆ ಇದೆ; ಅದು ನಮ್ಮೊಳಗೆ, ನಮ್ಮ ನಡುವೆಯೇ, ನಮ್ಮ ಕಣ್ಣನ್ನು ತಪ್ಪಿಸಿಕೊಂಡು ಸುಳಿದಾಡುತ್ತಿದೆ; ಆದರೆ ಅದು “ಇದೆ” ಎಂಬುದು ಖಂಡಿತ; ಅದು ರಹಸ್ಯ ಎಂಬುದೂ ಖಂಡಿತ—ಹೀಗೆ ವೈಜ್ಞಾನಿಕರಲ್ಲಿ ಕೆಲವರು ನಾಸ್ತಿಕ್ಯದಿಂದಲೂ ಅಜ್ಞೇಯತ್ವ (Agnosticism) ಅಜ್ಞಾತತ್ವ–ಅನಿರ್ಣೇಯತ್ವವಾದದಿಂದಲೂ ಆಸ್ತಿಕ್ಯದ ಕಡೆಗೆ ತಿರುಗುತ್ತಿದ್ದಾರೆ.

ಇಲ್ಲಿ ಉಪನಿಷತ್ತಿನ ಕಥೆ ಜ್ಞಾಪಕಕ್ಕೆ ಬರುತ್ತದೆ. ಆಲದ ಮರದ ಹಣ್ಣೊಂದನ್ನು ತೆಗೆದುಕೋ. ಅದು ಬಹಳ ಸಣ್ಣದು. ಅದನ್ನೊಡೆ. ಒಳಗೆ ತುಂಬ ಬಹು ಸಣ್ಣ ಬೀಜಗಳು ಕಾಣುತ್ತವೆ. ಆ ಒಂದು ಬೀಜವನ್ನು ಜಜ್ಜು. ಏನು ಕಾಣುತ್ತದೆ ಅದರಲ್ಲಿ? ಹಿಟ್ಟು ಕಾಣುತ್ತದೆ. ಆ ಹಿಟ್ಟಿನ ಕಣದಲ್ಲೇನಿದೆ? ಅಣುವಿದೆ, ಪರಮಾಣುವಿದೆ. ಮತ್ತೇನೂ ಕಾಣಬರುವುದಿಲ್ಲ. ಹಾಗಾದರೆ ಆ ಆಲದ ಮರ ಹುಟ್ಟಿದ್ದು ಯಾವುದರಿಂದ? ಆ ಬೀಜದಿಂದ. ಆ ಬೀಜದ ಹಿಟ್ಟಿನ ಒಳಗಡೆ ಏನೋ ಒಂದು ಅಡಗಿರುತ್ತದೆ. ಆ ಅದೃಶ್ಯಶಕ್ತಿಯನ್ನೇ ನಾವು ಬ್ರಹ್ಮಚೈತನ್ಯವೆನ್ನುತ್ತೇವೆ.

ಕಠೋಪನಿಷತ್ತಿನ ಈ ವಾಕ್ಯವನ್ನು ನೋಡಿರಿ:

> ಯೇನ ರೂಪಂ ರಸಂ ಗಂಧಂ । ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ॥
> ಏತೇನೈವ ವಿಜಾನಾತಿ ಕಿಮತ್ರ ಪರಿಶಿಷ್ಯತೆ । ಏತದ್ವೈ ತತ್ ॥ ...
> ದೇಹಾದ್ವಿಮುಚ್ಯಮಾನಸ್ಯ ಕಿಮತ್ರ ಪರಿಶಿಷ್ಯತೇ ॥ ಏತದ್ವೈ ತತ್ ॥

"ಅಳಿದ ಬಳಿಕ ಉಳಿಯುವುದೇನು? ಅದೇ ಇದು." "ಏತದ್ವೈತತ್." ಹೀಗೆ ಏನೋ ಒಂದು ಉಂಟು ಎಂದು ಶಂಕಿಸುವವರು, ಅದು ಉಂಟಾದರೂ ತಿಳಿಯಲಾಗದ್ದೆಂಬವರು, ತಿಳಿವಿಗೆ ಸಿಕ್ಕದ್ದು ಎಂಬವರು ಈಗಣ ಕೆಲವರು ವೈಜ್ಞಾನಿಕರು. ಇಂಥವರನ್ನು (Agnostics) ಅಜ್ಞೇಯತಾವಾದಿಗಳು ಅಥವಾ ಅಜ್ಞೇಯಕರು ಎಂದು ಕರೆಯೋಣ. ಅವರು "ದೇವರಿದ್ದಾನೆಂದು ನಾವು ಹೇಳಲಾರೆವು. ದೇವರಿಲ್ಲವೆಂದೂ ಹೇಳಲಾರೆವು. ಯಾವ ವಸ್ತುವನ್ನು ದೇವರೆನ್ನಬಹುದೋ ಅದು ನಮ್ಮ ಅರಿವಿಗೆ ದೊರಕತಕ್ಕದ್ದಲ್ಲ" —ಎನ್ನುತ್ತಾರೆ. ಅವರು ದೇವರನ್ನು (Suspense) ಅಮಾನತ್ತಿನಲ್ಲಿಟ್ಟಿರುತ್ತಾರೆ. ಕೈಗೆ ದೊರೆಯಲಾರದ್ದನ್ನು, ಅರಿವಿಗೆ ಬರಲಾರದ್ದನ್ನು ಕುರಿತು ನಿಶ್ಚಯ ಮಾಡುವುದು ಹೇಗೆ? ವೈಜ್ಞಾನಿಕರಲ್ಲಿ ಬಹು ಮಂದಿ ಈ ಜಾತಿಯವರು.

ಆದರೆ ಈ ವಿಚಾರದಲ್ಲಿ ನಿಶ್ಚಯಜ್ಞಾನವು ಸಾಧ್ಯವಲ್ಲವೆಂದು ಅವರು ಹೇಳುವುದು ವಿಶೇಷವಾಗಿ ಕ್ರೈಸ್ತಮತದ ಸಂದರ್ಭದಲ್ಲಿ. ಕ್ರೈಸ್ತವೇದವಾದ ಬೈಬಲಿನಲ್ಲಿ ಜಗತ್ಸೃಷ್ಟಿಯ ಕಾಲದ ನಿರ್ಣಯವಿದೆ; ಸೃಷ್ಟಿಕ್ರಮದ ವರ್ಣನೆಯಿದೆ. ಅದರಿಂದ ಭೂಗೋಳದ ವಯೋಮಾನವನ್ನು ಗೊತ್ತುಮಾಡಿ ಅದಕ್ಕೂ ಭೂವಿಜ್ಞಾನ (Geology) ಮೊದಲಾದ ವಿಜ್ಞಾನಪರೀಕ್ಷೆಗಳಿಂದ ಗೊತ್ತಾಗುವ ವಯೋನಿರ್ಣಯಕ್ಕೂ ತಾರ್ಕಣ್ಯ ಬಾರದಿರುವುದರಿಂದ, ಆ ವೈಜ್ಞಾನಿಕರಿಗೆ ಬೈಬಲಿನಲ್ಲಿ ಅಪನಂಬಿಕೆಯುಂಟಾಗಿದೆ. ವೈಜ್ಞಾನಿಕರು ಪ್ರತ್ಯಕ್ಷಪ್ರಮಾಣಿಗಳು. ಅವರಿಗೆ ಯಾವ ವಿಷಯಕ್ಕೂ ಕಣ್ಣಾರ ರುಜುವಾತು ಬೇಕು. ಕ್ರೈಸ್ತಮತದ ಪ್ರಕಾರ ದೇವರು ಸ್ವರ್ಗದಲ್ಲಿ—ಭೂಮಂಡಲದಿಂದ ದೂರವಾಗಿ—ಮನುಷ್ಯನಿಗೆ ಹೊರಗಡೆ ಎಲ್ಲೋ ದೂರವಾಗಿದ್ದುಕೊಂಡು—ಅಲ್ಲಿಂದ ನಮ್ಮ ಲೋಕವನ್ನಾಳುತ್ತಿದ್ದಾನೆ—ಇಂಗ್ಲಂಡಿನ ರಾಜ ಇಂಡಿಯವನ್ನಾಳುತ್ತಿದ್ದಂತೆ—ಎಂಬ ಭಾವನೆ ದೊಡ್ಡದಾಗಿದೆ. ಈ ಭಾವನೆಗೆ ಆಧಾರವೆಲ್ಲಿ?—ಎಂದು ಕೇಳುತ್ತಾನೆ ವೈಜ್ಞಾನಿಕ. ದೇವರ ಅಸ್ತಿತ್ವಕ್ಕೆ ಸಾಕ್ಷಾತ್ತಾದ ರುಜುವಾತು ಎಲ್ಲಿಯೂ ಕಾಣುತ್ತಿಲ್ಲ. ಆದರೆ ದೇವರು ಇಲ್ಲವೆನ್ನುವುದಕ್ಕೂ ವೈಜ್ಞಾನಿಕನು ಸಿದ್ಧನಾಗಿಲ್ಲ. ಏಕೆಂದರೆ ಪ್ರತ್ಯಕ್ಷವಾದ ಭೌತವಸ್ತುವಿನ ಅಣು

ಪರಮಾಣುಗಳ ಹಿಂದೆ ಏನೋ ಒಂದು ರಹಸ್ಯ ಚೈತನ್ಯ ಇರುವಂತೆ ಅವನಿಗೂ ತೋರುತ್ತದೆ. ಅದು ಈಹೊತ್ತು ರಹಸ್ಯವಾಗಿದೆ, ಆದರೆ ನಾಳೆ ಅದನ್ನು ಭೇದಿಸಲಾದೀತೋ ಹೇಗೋ! ಎಂಬ ಶಂಕೆ ಅಥವಾ ಆಶೆ ಇದ್ದೇ ಇದೆ. ಹೀಗೆ ವಿಜ್ಞಾನಸಿದ್ಧಾಂತವು ಆಸ್ತಿಕ್ಯ–ನಾಸ್ತಿಕ್ಯಗಳ ನಡುವೆ ಉಭಯದೂರವಾಗಿ ನಿಂತಿದೆ.

ವೇದವೇದಾಂತಗಳ ಸಿದ್ಧಾಂತವು ನಾಸ್ತಿಕ್ಯವನ್ನು ಒಪ್ಪುವುದಿಲ್ಲ, ವಿಜ್ಞಾನಿಯ ತಾಟಸ್ಥ್ಯವನ್ನೂ ಒಪ್ಪುವುದಿಲ್ಲ. ಅದು ಸಂಪೂರ್ಣವಾಗಿ ಆಸ್ತಿಕ ಮತ. ಆದದ್ದರಿಂದ ಭಗವದ್ಗೀತೆಯ ಪ್ರಯೋಜನವೇನಿದ್ದರೂ ಆಸ್ತಿಕರಿಗೆ ಮಾತ್ರ.

> ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ॥

ಎಂಬಲ್ಲಿ "ನ+ಅಭಕ್ತಾಯ" ಎಂಬುದರ ತಾತ್ಪರ್ಯ ಇದೇ.

ವೇದಾಂತವು ಕ್ರೈಸ್ತಮತಕ್ಕೆ ವಿರೋಧಿಯಲ್ಲ. ಮುಸಲ್ಮಾನ್ ಮತಕ್ಕೂ ವಿರೋಧಿಯಲ್ಲ. ಭಗವತ್ತತ್ತ್ವವು ಮನುಷ್ಯನ ಹೊರಗಡೆ ಇದೆಯೆಂದರೂ ವೇದಾಂತವು ಅದು ತಪ್ಪೆನ್ನುವುದಿಲ್ಲ.

> ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

ವೈಕುಂಠವನ್ನು ಯಾವನಾದರೂ ತನ್ನಿಂದ ಹೊರಗಡೆ ಇರುವ ಲೋಕ ಎಂದು ಭಾವಿಸುವುದಾದರೆ ಭಾವಿಸಿಕೊಳ್ಳಲಿ. ಅದರಿಂದ ನಷ್ಟವೇನೂ ಆಗದು. ಈಹೊತ್ತು ವೈಕುಂಠವನ್ನು ಹೊರಗಡೆ ಕಾಣುವವನು ನಾಳೆಯೋ ನಾಳಿದ್ದೋ ಅದನ್ನು ತನ್ನ ಒಳಗಡೆ ಕಾಣಬಲ್ಲವನಾಗುತ್ತಾನೆ. ಹೊರಗಡೆಯ ಅಭ್ಯಾಸ ಒಳಗಡೆಯ ಅನುಭವಕ್ಕೆ ದಾರಿ ಮಾಡುತ್ತದೆ. ಸಾಕಾರವೇ ನಿರಾಕಾರಕ್ಕೆ ದಾರಿ. ಇದು ಗೀತೆಯ ಮತ. ಹೀಗೆ ಕ್ರೈಸ್ತತತ್ತ್ವದ ಯಾವ ಅಂಶವು ವಿಜ್ಞಾನಿಯ ಅಪನಂಬಿಕೆಗೆ ಆಸ್ಪದವಾಗಿದೆಯೋ ಆ ಅಂಶವು ಗೀತಾಮತದಲ್ಲಿ ಸೋಪಾನ ಪಂಕ್ತಿಯ ಒಂದು ಮೆಟ್ಟಿಲಿನಂತೆ ಗ್ರಾಹ್ಯವಾಗಿರುತ್ತದೆ.

ಆದರೂ ಗೀತೆಯು ನಾಸ್ತಿಕರನ್ನೂ ಅಜ್ಞೇಯಕರನ್ನೂ ಆಸ್ತಿಕಶತ್ರುಗಳೆಂದು ಗಣಿಸಲಾರದು. ನಾಸ್ತಿಕರೆಂಬವರು ಪ್ರಯಾಣ ಹೊರಟು ದಾರಿತಪ್ಪಿದವರು; ಅಜ್ಞೇಯಕರು ಎರಡು ರಸ್ತೆ

ಸೇರುವ ಕಡೆ ದಿಗ್ಭ್ರಮೆ ಹಿಡಿದು ನಿಂತವರು. ಅವರಿಬ್ಬರೂ ಇನ್ನೂ ಒಂದೆರಡು ಹೆಜ್ಜೆ ಮುಂದಕ್ಕೆ ನಡೆದಮೇಲೆ ದಾರಿ ತಿದ್ದಿಕೊಂಡು ಆಸ್ತಿಕರ ದಾರಿಗೇ ಬಂದು ಸೇರುವವರು.

ಮಮ ವರ್ತ್ಮಾನುವರ್ತನ್ತೆ ಮನುಷ್ಯಾಃ ಪಾರ್ಥ ಸರ್ವಶಃ ।

ಹಿರಣ್ಯಕಶಿಪು, ರಾವಣ, ಕಂಸ, ಶಿಶುಪಾಲಾದಿಗಳೂ ಕಾಲಾನುಕಾಲಕ್ಕೆ ಭಗವದ್ದರ್ಶನವನ್ನು ಪಡೆದರು. ಇದೇ ಉಪನಿಷತ್ತಿನ ತಾತ್ಪರ್ಯ:

ಸತ್ಯಮೇವ ಜಯತೇ । ನಾನೃತಮ್ ॥

ಸತ್ಯದಲ್ಲಿ ಸ್ವತಃ ಉಳಿದುಕೊಳ್ಳುವ ಶಕ್ತಿಯಿರುತ್ತದೆ. ಅದನ್ನು ಯಾರೂ ಅಳಿಸಲಾರರು; ಅದನ್ನು ಉಳಿಸಲು ಯಾರೊಬ್ಬರೂ ಬೇಕಿಲ್ಲ. ಅದು ಸ್ವಯಂ ಸಮರ್ಥವಾದದ್ದು. ಅದು ತಾನೇ ತನ್ನನ್ನು ಅಂಗೀಕಾರಮಾಡಿಸಿಕೊಳ್ಳುತ್ತದೆ. ಅಸತ್ಯವು ತಾನಾಗಿಯೇ ಬಿದ್ದುಹೋಗುತ್ತದೆ. ಸತ್ಯವು ಸ್ವತಃ ಶಾಶ್ವತ. ಅಸತ್ಯವು ಸ್ವತಃ ಕ್ಷಣಿಕ.

ಸತ್ಯವು ಅಶ್ವತ್ಥ ಆಲ ಮೊದಲಾದ ಮರಗಳಂತೆ. ಅಸತ್ಯವು ಮಂತ್ರಿ ಗವರ್ನರುಗಳ ನೇತ್ರೋತ್ಸವಕ್ಕೋಸ್ಕರ ಊರಿನಲ್ಲಿ ಅಲ್ಲಲ್ಲಿ ನೆಟ್ಟಿರುವ ಮರ ಕಡಿದ ಮುಂಡಗಳಂತೆ. ಆ ಮುಂಡದ ಎಲೆ ಹೂಗಳು ಒಂದು ಘಂಟೆ ಹಸಿರುಹಸಿರಾಗಿದ್ದು ಬಳಿಕ ತಾವೇ ಬಾಡಿ ಬೀಳುತ್ತವೆ. ಅದನ್ನು ಬಾಡಿಸಲು ಯಾರ ಪ್ರಯತ್ನವೂ ಬೇಕಿಲ್ಲ. ನಾಸ್ತಿಕ್ಯದ ಪಾಡೂ ಅಷ್ಟೇ. ನಾಸ್ತಿಕನೂ ಅಜ್ಞೇಯಕನೂ ಹುಡುಕಿ ಹುಡುಕಿ ಬಳಲಿ ಬೇಸತ್ತು ಕಡೆಗೆ ಆಸ್ತಿಕ್ಯಕ್ಕೆ ಬರಲೇಬೇಕು. **ಅವರ ಹುಡುಕಾಟದ ಉದ್ವೇಗವೇ ಅವರನ್ನು ಬದುಕಿಸುತ್ತದೆ.** ವಿಜ್ಞಾನಿಯ ಸಂದೇಹವು ಅವನ ಸತ್ಯಕುತೂಹಲದ ಒಂದು ಉತ್ಕಟ ರೂಪ. ಎದುವರೆಗೆ ಸತ್ಯಶ್ರದ್ಧೆಯುಂಟೋ ಅದುವರೆಗೆ ಸಂದೇಹಪರಿಹಾರದ ಆಶೆಯುಂಟು.

ಈ ಮಾತನ್ನು ಇಲ್ಲಿ ಹೇಳುವುದು ನಮ್ಮ ಅಂತರಂಗಜೀವನದಲ್ಲಿ ಸಂದೇಹಕ್ಕೆ ಇರುವ ಸ್ಥಾನವನ್ನು ತೋರಿಸುವುದಕ್ಕಾಗಿ. ಸತ್ಯಾನ್ವೇಷಣೆಯಲ್ಲಿ ಸಂದೇಹಕ್ಕೂ ಒಂದು ಸ್ಥಾನವುಂಟು.

ಈಗ್ಗೆ ಎರಡು ವರ್ಷದ ಹಿಂದೆ ಜಪಾನ್ ದೇಶದ ಯಾವುದೋ ಯೂನಿವರ್ಸಿಟಿಯ ಒಬ್ಬ ಪ್ರೌಢ ವಿದ್ಯಾರ್ಥಿ ನನ್ನ ಬಳಿಗೆ ಬಂದ. ವಯಸ್ಸು ೩೦-೩೫. ಇಂಡಿಯ ದೇಶದ ಸಂಸ್ಕೃತಿ

ಚರಿತ್ರೆಗಳನ್ನು ಕುರಿತು ವಿಷಯಸಂಗ್ರಹ ಮಾಡುವುದಕ್ಕೆಂದು ಆತನನ್ನು ಆ ವಿಶ್ವವಿದ್ಯಾನಿಲಯವು ಕಳುಹಿಸಿತ್ತಂತೆ. ಆತನಿಗೆ ನನ್ನ ಹೆಸರನ್ನು ಯಾರು ಹೇಳಿದರೋ ನನಗೆ ತಿಳಿಯದು. ಆತ ನನ್ನ ಮನೆಗೆ ಬಂದಬಳಿಕ ಸ್ವಾಗತಿಸಿ ಮರ್ಯಾದೆ ತೋರಿಸುವುದು ನನಗೆ ಕರ್ತವ್ಯವಾಯಿತು. ಆತ ಅನೇಕ ಪ್ರಶ್ನೆಗಳನ್ನು ಹಾಕಿದ. ರಾಜಕೀಯ, ಆರ್ಥಿಕ ಯೋಜನೆ, ಶಿಲ್ಪಕಲೆ, ಸಂಸ್ಕೃತಿ, ನಮ್ಮ ದೇಶದ ಸಾಹಿತ್ಯ, ನಾಟಕ, ಗುಡಿಗಳು, ಮಠಗಳು—ಈ ಅನೇಕ ವಿಷಯಗಳನ್ನು ಕುರಿತು ಪ್ರಶ್ನೆ ಹಾಕಿದ. ಸುಮಾರು ಎರಡು ಎರಡೂವರೆ ಘಂಟೆ ಹೊತ್ತು ಮಾತನಾಡಿದ ಬಳಿಕ, ತಾನು ಬೇರೆಕಡೆಗೆ ಹೋಗಬೇಕೆಂದು ಆತ ಅಪ್ಪಣೆ ಕೇಳಿ ಎದ್ದುನಿಂತ. ನಾನೂ ಎದ್ದು ನಿಂತು ಸ್ನೇಹಭಾವದಿಂದ ಕೈಕುಲುಕಿ, “ದೇವರು ನಿಮಗೆ ಒಳ್ಳೆಯದು ಮಾಡಲಿ” ಎಂದು ಹರಸಿದೆ. ಆತ ನನ್ನ ಮುಖವನ್ನು ದಿಟ್ಟಿಸಿ ನೋಡಿ, “ನಿಮಗೆ ಅದರಲ್ಲಿ ನಂಬಿಕೆ ಇದೆಯೆ?” ಎಂದು ಕೇಳಿದ.

ನಾನು: “ಅದೊಂದರಲ್ಲಿಯೇ ನನಗೆ ನಂಬಿಕೆ ಪೂರ್ಣವಾಗಿರುವುದು. ನಿಮಗೆ ನಂಬಿಕೆ ಇಲ್ಲವೆ?”

ಆತ: (ಮತ್ತೆ ಕುಳಿತು, ಕೊಂಚ ಯೋಚಿಸಿ) “ಈ ವಿಷಯವನ್ನು ಕುರಿತು ನಾನು ಹೆಚ್ಚಾಗಿ ಆಲೋಚಿಸಿಲ್ಲ. ಆದರೆ ನೀವು ನಂಬಿಕೆಯುಂಟೆನ್ನುತ್ತೀರಿ. ಆ ನಂಬಿಕೆ ಎಂಥಾದ್ದು?”

ನಾನು: “ಆ ನಂಬಿಕೆ ನನ್ನ ಒಳ ಅನುಭವದ ಆಧಾರವುಳ್ಳದ್ದು.”

ಆತ: “ಆ ಅನುಭವ ಎಂದರೆ?”

ನಾನು: “ನನ್ನ ಹರಕೆಯ ಮಾತಿನಲ್ಲಿ ನಾನು ಪದಗಳು ಎರಡನ್ನುಪಯೋಗಿಸಿದ್ದೇನೆ. ‘ದೇವರು’ ಎಂಬುದೊಂದು; ‘ಒಳ್ಳೆಯದು’ ಎಂಬುದೊಂದು. ಒಳ್ಳೆಯದೆಂಬುದು ಒಂದು ಉಂಟೆಂದು ನೀವು ಒಪ್ಪಿಕೊಂಡರೆ ಆ ಒಳ್ಳೆಯದಕ್ಕೆ ಮೂಲಕಾರಣ ಯಾವುದೋ ಅದನ್ನು ನಾನು ‘ದೇವರು’ ಎಂದು ಕರೆಯುತ್ತೇನೆ. ‘ಒಳ್ಳೆಯದು’ ಎನ್ನುವುದನ್ನೊಪ್ಪಿಕೊಳ್ಳುತ್ತೀರೋ?”

ಆತ: (ಕಿರುನಗೆಯಿಂದ ನನ್ನ ಕಡೆಯೇ ನೋಡುತ್ತಿದ್ದ.)

ನಾನು: "ನೀವು ಈಗ ಕುಡಿದ ಕಾಫಿ ಚೆನ್ನಾಗಿತ್ತೆಂದು ಹೇಳಿದಿರಿ. ಆ ಚೆನ್ನು ಎಂಬುದೇ ಒಳ್ಳೆಯದು. ಆ ಅನುಭವದ ಹಿಂದಿರುವುದೇ ದೇವರು."

ಆತ: (ಇನ್ನೂ ಕುತೂಹಲದಿಂದ ನೋಡುತ್ತಿದ್ದ.)

ನಾನು: "ಇಂಡಿಯದ ವಿಷಯವನ್ನು ತಿಳಿದುಕೊಳ್ಳಬೇಕೆಂದಲ್ಲವೆ ನೀವು ಬಂದಿರುವುದು?"

ಆತ: "ಹೌದು."

ನಾನು: "ತಿಳಿವಳಿಕೆ ಒಳ್ಳೆಯದೆಂಬ ಕಾರಣದಿಂದ ತಾನೆ ನೀವಿಷ್ಟು ಶ್ರಮವನ್ನೂ ವೆಚ್ಚವನ್ನೂ ಪಡುತ್ತಿರುವುದು? ತಿಳಿವಳಿಕೆ ಏತಕ್ಕಾಗಿ."

ಆತ: "ತಿಳಿವಳಿಕೆ ಇಂಡಿಯ–ಜಪಾನುಗಳ ಸ್ನೇಹಕ್ಕಾಗಿ."

ನಾನು: "ಸಂತೋಷ. ಹಾಗಾದರೆ ಸ್ನೇಹ ಒಳ್ಳೆಯದು ತಾನೆ? ಸ್ನೇಹವೇ ದೇವರು."

ಆತ: "ಹಾಗಾದರೆ ಯಾವಯಾವುದು ದೇವರು?"

ನಾನು: "ಯಾವಯಾವುದನ್ನು ನೀವು ಒಳ್ಳೆಯದೆಂದು ತಿಳಿದುಕೊಂಡಿದ್ದೀರೋ—ಯಾವಯಾವುದಕ್ಕಾಗಿ ನೀವು ಬುದ್ಧಿಯನ್ನೂ ಶಕ್ತಿಯನ್ನೂ ಧನವನ್ನೂ ಕಾಲವನ್ನೂ ವೆಚ್ಚಮಾಡಲು ಸಿದ್ಧರಾಗಿರುತ್ತೀರೋ—ಅದೆಲ್ಲ ದೇವರು. ನಿಮ್ಮ ಮನಸ್ಸಿಗೆ ಉತ್ತಮವೆಂದು, —ಉತ್ತಮದಲ್ಲಿ ಇನ್ನೂ ಉತ್ತಮವೆಂದು, ಯಾವುದು ಪರಮೋತ್ತಮವೆಂದು—ತೋರುತ್ತದೆಯೋ ಆ ಉತ್ತಮತೆಗಳ ಪರ್ವತರಾಶಿಯೇ ದೇವರು. ಬೆಟ್ಟವನ್ನು ಹತ್ತಬೇಕು. ಮೇಲುಮೇಲಕ್ಕೆ ಹೋದಂತೆಲ್ಲ ಬೆಟ್ಟದ ಸ್ವರೂಪ ಹೆಚ್ಚು ಹೆಚ್ಚು ಅನುಭವಕ್ಕೆ ಬರುತ್ತದೆ."

ಆತ: (ಐದು ನಿಮಿಷ ಏನನ್ನೂ ಹೇಳಲಿಲ್ಲ. ಆಮೇಲೆ ಪುನಃ ಎದ್ದು ನಿಂತು) "ನನಗೆ ಯಾರೂ ಹೀಗೆ ಹೇಳಿರಲಿಲ್ಲ. ನಾನು ನಿಮಗೆ ತುಂಬ ಕೃತಜ್ಞ." (ಎಂದು ಎರಡು ಕೈಗಳನ್ನೂ ಜೋಡಿಸಿ ನಮಸ್ಕಾರ ಮಾಡಿ ಪ್ರೀತಿಯನ್ನು ಮುಖಭಾವದಲ್ಲಿ ತೋರಿಸಿ ಹೊರಟುಹೋದ.)

ಆತ್ಮವಸ್ತುವಿನಲ್ಲಿ “ಚಿತ್” ಎಂಬ ತಿಳಿವಳಿಕೆಯ ಗುಣವೂ “ಆನಂದ” ಎಂಬ ಒಳ್ಳೆಯದರ ಗುಣವೂ ಸ್ವತಃ ಅಂತರ್ಗತವಾಗಿರುತ್ತವೆ. ಅವೆರಡೂ ಸತ್ಯದ ಎರಡು ಮುಖಗಳು. ಪ್ರತಿಯೊಂದು ಜೀವದಲ್ಲೂ ಅಂತರ್ಗತವಾಗಿರುವ ಆತ್ಮವು ಸತ್ಯಜ್ಞಾನಾನಂದ ಸ್ವರೂಪಿಯಾದದ್ದೆಂದು ಯಾರು ನಂಬಿರುತ್ತಾರೋ ಅವರು ನಾಸ್ತಿಕರನ್ನೂ ಅಜ್ಞೇಯಕರನ್ನೂ ಅನುತಾಪದಿಂದ—ಎಮ್.ಎ., ಎಮ್.ಎಸ್ಸಿ. ತರಗತಿಗಳವರು ಪ್ರೈಮರಿ ಸೆಕೆಂಡರಿ ತರಗತಿಯ ವಿದ್ಯಾರ್ಥಿಗಳನ್ನು ನೋಡುವ ಸೋದರವಾತ್ಸಲ್ಯದೃಷ್ಟಿಯಿಂದ—ನೋಡುತ್ತಾರೆ.

ಮತತ್ರಯವಿವಾದಗಳು

ಅದ್ವೈತ, ವಿಶಿಷ್ಟಾದ್ವೈತ, ದ್ವೈತ—ಇವು ವೇದಾಂತದ ಮತಪ್ರಭೇದಗಳಲ್ಲಿ ಮುಖ್ಯವಾದವು. ಈ ಮೂರಲ್ಲದೆ ಶಕ್ತಿವಿಶಿಷ್ಟಾದ್ವೈತ, ಶುದ್ಧಾದ್ವೈತ, ಭೇದಾಭೇದ ಮೊದಲಾದ ಒಳಭೇದಗಳೂ ಉಂಟು; ಅವು ಇಲ್ಲಿ ನಮಗೆ ಅಪ್ರಕೃತ. ಸಮಗ್ರದೃಷ್ಟಿಯಿಂದ ನೋಡಿದರೆ ಈಗ ಹೇಳಿದ ಮೂರು ಸಿದ್ಧಾಂತಗಳು ವೇದಾಂತಪರ್ವತಶ್ರೇಣಿಯ ಮೂರು ಉನ್ನತ ಶಿಖರಗಳಂತೆ ಎದ್ದು ಕಾಣುತ್ತವೆ.

ವೇದಾಂತದ ತತ್ತ್ವಚಿಂತನೆಯು ಎಂದೋ ಒಂದು ದಿನ, ಯಾರೋ ಒಬ್ಬ ಆಚಾರ್ಯರ ಭಾಷ್ಯದ ಮೂಲಕ, ಅಖಂಡವಾಗಿ, ಸಮಗ್ರವಾಗಿ, ಏಕಾಕಾರವಾಗಿ ಹೊರ ಹೊರಟಿತೆಂದು ಭಾವಿಸುವುದು ಯುಕ್ತವಾಗದು. ನಮಗೆ ತಿಳಿದಿರುವ ಪ್ರಸಿದ್ಧ ಭಾಷ್ಯಕಾರರುಗಳಾದ ಶಂಕರ ರಾಮಾನುಜ ಮಧ್ವರಲ್ಲಿ ಶಂಕರರು ಮಿಕ್ಕಿಬ್ಬರಿಗಿಂತಲೂ ಪ್ರಾಚೀನರೆಂಬುದು ನಿರ್ವಿವಾದವಾಗಿದೆ. ಆದರೆ ಅದ್ವೈತವನ್ನು ಕಂಡುಹಿಡಿದವರು ಶಂಕರರು, —ಅವರಿಗೆ ಹಿಂದೆ ಅದ್ವೈತವಿರಲಿಲ್ಲ—ಎಂದು ಭಾವಿಸಿದರೆ ತಪ್ಪಾದೀತು. ಶಂಕರರಿಗಿಂತ ಹಿಂದಿನವರು ಭರ್ತೃಪ್ರಪಂಚ, ಭರ್ತೃಹರಿ ಮೊದಲಾದ ಅದ್ವೈತವಾದಿಗಳು ಅನೇಕರು ಇದ್ದರೆಂದು ತಿಳಿದುಬರುತ್ತದೆ. ಶಂಕರರ ಪರಮಗುರುಗಳಾದ ಗೌಡಪಾದಾಚಾರ್ಯರು ಅದ್ವೈತಸಿದ್ಧಾಂತಿಗಳೆಂದು ಅವರ ಕಾರಿಕೆಗಳಿಂದ ಗೊತ್ತಾಗುತ್ತದೆ.

ಶಂಕರರ ಮಾತು ಹಾಗಿರಲಿ, ಅವರ ಭಾಷ್ಯಕ್ಕೆ ಮೂಲಗ್ರಂಥವಾದ ಶಾರೀರಕ (ಬ್ರಹ್ಮ)ಸೂತ್ರಗಳನ್ನು ರಚಿಸಿದ ವ್ಯಾಸಮಹರ್ಷಿಗಳೇ ಆ ಗ್ರಂಥದಲ್ಲಿ ಜೈಮಿನಿ, ಬಾದರಿ, ಔಡುಲೋಮಿ, ಕಾಶಕೃತ್ಸ್ನ ಮುಂತಾದ ಅನೇಕ ಮಂದಿ ಪುರಾತನ ತಾತ್ತ್ವಿಕರನ್ನು ಸ್ಮರಿಸಿದ್ದಾರೆ. ಇದರಿಂದ ಹೊರಡುವ ಸಿದ್ಧಾಂತವೇನೆಂದರೆ, ನಮ್ಮ ಪೂರ್ವಿಕರಲ್ಲಿ ತತ್ತ್ವವಿಚಾರ ಪ್ರಾರಂಭವಾದದ್ದು ಈ ತ್ರಿಮತಾಚಾರ್ಯರುಗಳ ಕಾಲಗಳಲ್ಲಲ್ಲ. ಅದರ ಉಪಕ್ರಮ ವೇದದ ಪೂರ್ವಕಾಂಡದಲ್ಲಿಯೇ ಆಗಿತ್ತು—ಎಂದು ಋಗ್ವೇದಸಂಹಿತೆಯ

> ನಾಸದಾಸೀನ್ನೋ ಸದಾಸೀತ್

ಮೊದಲಾದ ಸೂಕ್ತಗಳಲ್ಲಿ, “ಕಸ್ಮೈ ದೇವಾಯ” ಸೂಕ್ತದಲ್ಲಿ, ಪುರುಷಸೂಕ್ತದಲ್ಲಿ, ಅರುಣಾಧ್ಯಾಯದಲ್ಲಿ, ರುದ್ರಾಧ್ಯಾಯದಲ್ಲಿ, —ಹೀಗೆ ನೂರಾರು ಕಡೆ ಪರಮಾರ್ಥತತ್ತ್ವ ಚಿಂತನೆ ಎದ್ದು ಕಾಣುತ್ತದೆ. ವೇದದ ಉತ್ತರಕಾಂಡವಾದ ಉಪನಿಷತ್ತುಗಳಲ್ಲಿ ಆ ಚಿಂತನೆ ಮುಂಬರಿದು ಸ್ಪಷ್ಟರೂಪವನ್ನು ತಾಳಿಕೊಂಡಿದೆ. ಅಲ್ಲಿಂದೀಚೆಗೆ ಆ ಚಿಂತನ ಪ್ರವಾಹವು ಗಂಗಾದಿಮಹಾನದಿಗಳಂತೆ ಭಾಗವಿಭಾಗವಾಗಿ ಹರಿದು ಬಂದಿದೆ. ಹೀಗೆ ಶಂಕರಾಚಾರ್ಯರಿಗೆ ಹಿಂದೆಯೇ ಬಹುಶಾಖೆಗಳಾಗಿದ್ದ ತತ್ತ್ವವಿಚಾರಗಂಗೆಯು ಶಂಕರಾಚಾರ್ಯರಿಂದೀಚೆಗೆ ಇನ್ನೂ ಕೆಲವು ಹೊಸ ಮುಖಗಳನ್ನು ತಾಳಿದೆ. ನದೀಮುಖಗಳು ನೂರಾದರೂ ನೀರು ಒಂದೇ: ಒಂದು ಪರ್ವತದಿಂದ ಧಾರಾಕಾರವಾಗಿ ಹರಿದು ಬಂದ ಏಕೈಕ ಜಲರಾಶಿಯೇ. ಹೀಗೆಂದರೆ ಏನು? ಈಹೊತ್ತು ನಮಗೆ ಲಭ್ಯವಾಗಿರುವ ವೇದಾಂತಮತತ್ರಯವು ತತ್ತದಾಚಾರ್ಯಕಲ್ಪಿತಗಳಲ್ಲ; ತತ್ಪೂರ್ವಿಕರಾದ ಮಹರ್ಷಿಗಳ ಕಾಲದಿಂದ ಅನುಸ್ಯೂತವಾಗಿ ಬೆಳೆದುಕೊಂಡುಬಂದಿರುವ ವಿಚಾರಪರಂಪರೆ ಅದು.

ಒಬ್ಬಾನೊಬ್ಬ ತತ್ತ್ವಚಿಂತಕನು ವೇದವಾಕ್ಯದ ಆಧಾರದಿಂದ ಸ್ಥಾಪನೆಮಾಡಿದ ಮತವನ್ನು ಆತನ ತರುವಾಯ ಬಂದ ಒಬ್ಬ ವಿಚಾರಿ ಬಹುಭಾಗದಲ್ಲಿ ಅಂಗೀಕರಿಸಿರುತ್ತಾನೆ. ಅಥವಾ ನಿರಾಕರಿಸಿರುತ್ತಾನೆ. ಅಂಗೀಕರಿಸಿದವನು ತನ್ನ ಪೂರ್ವಾಚಾರ್ಯರ ವಾದ ಸರಣಿಗಳಲ್ಲಿ ಲೋಪವೆಂದು ತನಗೆ ತೋರಿದ್ದಕ್ಕೆ ಅಧ್ಯಾಹಾರ ಸೂಚಿಸಿ, ಇತರರು ಮಾಡಿದ್ದ ಖಂಡನೆಗಳಿಗೆ ತಾನು ಸಮಾಧಾನ ಹೇಳಿ, ಹಿಂದಿನ ಗ್ರಂಥದಲ್ಲಿ ಸ್ಪಷ್ಟವಾಗಿಲ್ಲವೆಂದು ತೋರಿದ ಅಂಶಗಳನ್ನು ತಾನು ಸ್ಪಷ್ಟಪಡಿಸಿ—ಹೀಗೆ ಗ್ರಂಥವನ್ನು ಬೆಳಸಿರುತ್ತಾನೆ. ಪೂರ್ವಾಚಾರ್ಯರ ತತ್ತ್ವಪ್ರತಿಪಾದನೆಯು ಈ ರೀತಿ ತಚ್ಛಿಷ್ಯರಿಂದ ವಿಸ್ತಾರಪಟ್ಟು ಬಲಪಟ್ಟಿರುತ್ತದೆ. ಈ ವಾದ ಸಮರ್ಥನಾವಸರದಲ್ಲಿ ಶಿಷ್ಯನು ಸ್ವಮತಾನುಕೂಲವಾದ ಹೊಸ ಅಭಿಪ್ರಾಯಗಳನ್ನೂ ಹೊಸ ಯುಕ್ತಿಗಳನ್ನೂ ಜೋಡಿಸಿರುತ್ತಾನೆ. ಹೀಗೆ ತತ್ತ್ವಚಿಂತನ ಸಾಹಿತ್ಯ ಬೆಳೆದಿರುತ್ತದೆ. ಹೊಸಹೊಸ ಕಕ್ಷಿಗಳು, ಹೊಸಹೊಸ ಸಮಾಧಾನಗಳು—ಇದು ವಾದಕಥೆ. ಸಿದ್ಧಾಂತದ ಮುಖ್ಯ ಭಾಗವು ಸ್ಥಾಯಿಯಾಗಿದ್ದರೂ ತತ್ಪರಿಪೋಷಕಗಳಾದ ಪ್ರಸಂಗಗಳು ಆಗಿಂದಾಗ್ಗೆ ಬೆಳೆಯುತ್ತಿರುತ್ತವೆ. ಈ ಬೆಳವಣಿಗೆಯಲ್ಲಿ ಸಣ್ಣಸಣ್ಣ ಮತಪ್ರಭೇದಗಳು ಸ್ವಾಭಾವಿಕವಾಗಿ ಬರುತ್ತವೆ. ಇದಕ್ಕೆ ಉದಾಹರಣೆ ಅದ್ವೈತಿಗಳಲ್ಲಿರುವ ವಿವರಣಪ್ರಸ್ಥಾನ ಭಾಮತೀಪ್ರಸ್ಥಾನಗಳೆಂಬ ಕಿಂಚಿತ್ಪ್ರಭೇದ. ಹಾಗೆಯೇ ವಿಶಿಷ್ಟಾದ್ವೈತಿಗಳಲ್ಲಿ ತೆಂಗಲೆ-ವಡಗಲೆಗಳ ಪ್ರಭೇದ. ಈ ಕಿಂಚಿತ್ಪ್ರಭೇದಗಳಿಂದ ಮುಖ್ಯ ಸಿದ್ಧಾಂತಕ್ಕೇನೂ ಬಾಧೆಯಿಲ್ಲ.

ಪೂರ್ವಭಾಷ್ಯಕಾರನ ಮತವನ್ನು ಮುಖ್ಯ ಭಾಗದಲ್ಲಿ ಒಪ್ಪದೆ ನಿರಾಕರಿಸಿರುವ ತತ್ತ್ವವಿಚಾರಿಯು ಪ್ರತ್ಯೇಕ ಮತವನ್ನೇ ಪ್ರತಿಪಾದಿಸ ಹೊರಡುತ್ತಾನೆ. ಇದಕ್ಕೆ ಉದಾಹರಣೆ ಶಾಂಕರಮತದಿಂದ ರಾಮಾನುಜರು ಕೊಂಚ ಭಾಗದಲ್ಲಿ ಪ್ರತ್ಯೇಕವಾದದ್ದು; ಶಂಕರ ರಾಮಾನುಜೋಭಯರಿಂದ ಮಧ್ವಾಚಾರ್ಯರು ಭಿನ್ನಿಸಿ ಬೇರೆಯಾದದ್ದು.

ಈ ಸಮಗ್ರಚರಿತ್ರೆಯಿಂದ ಹೊರಡುವುದು ಇಷ್ಟು: ವೇದಾಧಾರವು ತ್ರಿಮತಸ್ಥರಿಗೂ ಅವಶ್ಯವಾದದ್ದಾದರೂ, ವೇದಾರ್ಥನಿರ್ಣಯದಲ್ಲಿ ಪುರುಷಬುದ್ಧಿಗೆ ಸಹಜವಾದ ಪ್ರವೃತ್ತಿ ನಾನಾತ್ವವು ಸ್ವತಂತ್ರವಾಗಿ ಸಾಗಿದ್ದರಿಂದ, ವೇದಾಂತದಲ್ಲಿ ಮತಭೇದವು ಸ್ವಾಭಾವಿಕವಾಯಿತು. ಮತಭೇದಕ್ಕೆ ಮುಖ್ಯ ಕಾರಣ ಮತಿಭೇದ. ಮತಿಭೇದ ಎಂದರೆ ಬುದ್ಧಿಸಾಮರ್ಥ್ಯದ ಭೇದ. ಮತ್ತು ಬುದ್ಧಿಗೆ ಮನಸ್ಸಂಸರ್ಗದಿಂದ ಉಂಟಾಗುವ ಪ್ರವೃತ್ತಿಭೇದ, ಮನೋವಾಸನಾಭೇದಗಳಿಗೆ ಹೇತುವಾದದ್ದು ಪೂರ್ವಜನ್ಮಸಂಸ್ಕಾರ ಭೇದ. ಹೀಗೆ ಆಳಾಳವಾಗಿ ಇಳಿದಂತೆಲ್ಲ ಮತಿಭೇದದ ಕಾರಣವನ್ನು ನಿಷ್ಕರ್ಷೆಮಾಡುವುದು ಕಷ್ಟತರವಾಗುತ್ತದೆ.

ಏವಂ ಚ ಸಾಮರ್ಥ್ಯ, ಅಭಿರುಚಿ—ಈ ಎರಡು ವಿಷಯಗಳಲ್ಲೂ ಮನುಷ್ಯನ ಅಂತಃಕರಣವು ಮುಖ್ಯವಾಗಿ ಮೂರು ಬೇರೆಬೇರೆ ಮಾರ್ಗಗಳನ್ನು ಹಿಡಿಯುವುದಾಗುತ್ತದೆ.

ಸತ್ಯವು ಸಾಮಾನ್ಯ ಜನಕ್ಕೆ ನಾನಾ ರೂಪಗಳಲ್ಲಿ, ನಾನಾ ಅಂಶಪರಿಮಾಣಗಳಲ್ಲಿ ಲಭ್ಯವಾಗತಕ್ಕದ್ದೆಂಬ ಅನುಭವದ ಮಾತನ್ನು ಹಿಂದೆ ಹೇಳಿದ್ದಾಗಿದೆ. ಇದನ್ನು ಆಲಿವರ್ ವೆಂಡಲ್ ಹೋಮ್ಸ್ (Oliver Wendell Holmes) ಎಂಬ ಅಮೆರಿಕದ ಲೇಖಕನು ಸ್ವಾರಸ್ಯವಾಗಿ ಚಿತ್ರಿಸಿದ್ದಾನೆ.

ಕೋಟೆ ಭೀಮರಾಯ (John), ಪೇಟೆ ಶಾಮರಾಯ (Thomas), ಇಬ್ಬರೂ ಮಾರ್ಕೆಟ್ಟಿನ ಮುಂದೆ ಕಲೆಯುತ್ತಾರೆ. ಅವರೆಷ್ಟು ಮಂದಿ? ಆರು ಮಂದಿ ಎಂದು ಹೋಮ್ಸಿನ ವಾದ:

ಕೋಟೆ ಭೀಮರಾಯ

1. ಅವನ ನಿಜವಾದ ಸ್ಥಿತಿ ಅಥವಾ ನೈಜ.

2. ಅವನು ತನ್ನ ವಿಷಯದಲ್ಲಿ ತಾನಿಟ್ಟುಕೊಂಡಿರುವ ಅಭಿಪ್ರಾಯ—ಅವನ ಸ್ವವಿಷಯಕಭ್ರಾಂತಿ ಅಥವಾ ನಟನೆ.
3. ಪೇಟೆ ಶಾಮರಾಯನ ಕಣ್ಣಿಗೆ ಅವನು ಕಾಣುವ ರೀತಿ, ಅಥವಾ ಅವನಿಂದ ಅನ್ಯರಲ್ಲಾದ ಮನೋಮುದ್ರಿಕೆ.

ಪೇಟೆ ಶಾಮರಾಯ

1. ಅವನ ನೈಜ ಅಥವಾ ನಿಜಸ್ಥಿತಿ.
2. ಅವನಿಗೆ ಸ್ವವಿಷಯದಲ್ಲಿರುವ ಅಭಿಪ್ರಾಯ—ಭ್ರಾಂತಿ ಅಥವಾ ನಟನೆ.
3. ಅವನ ವಿಷಯದಲ್ಲಿ ಕೋಟೆ ಭೀಮರಾಯನಿಗಿರುವ ಮತ್ತು ಇತರರಿಗಿರುವ ಮನೋಮುದ್ರಿಕೆಗಳು.

ಹೀಗೆ ಅವರಿಬ್ಬರೂ ಕಲೆತು ಮಾತನಾಡುವಾಗ ಅದರಲ್ಲಿ ಸೇರಿಕೊಳ್ಳುವ ವ್ಯಕ್ತಿಗಳು ಆರು ಮಂದಿ.

ಹೀಗೆ ಆರು ಮಂದಿಯ ಸಂಭಾಷಣೆಯ ತೊಡಕಿನಲ್ಲಿ ಯಾವ ಅಂಶ ಸತ್ಯ? ಎಲ್ಲ ಅಂಶಗಳೂ ಮಿಶ್ರಿತಗಳೇ, ಶುದ್ಧಸತ್ಯವಾದ ನೈಜವು ದುರ್ಲಭವಾಗುತ್ತದೆ. ಭ್ರಾಂತಿರೂಪವೂ ನಟನರೂಪವೂ ಆದ ಕೃತಕಗಳೇ ಗದ್ದಲ ಮಾಡುತ್ತಿರುತ್ತವೆ.

Only one of the three Johns is taxed; ony one can be weighed on a platform-balance; but the other two are just as important in the conversation. Let us suppose the real John to be old, dull, and ill-looking. But as the higher powers have not conferred on men the gift of seeing themselves in the true light, John very possibly conceives himself to be very useful, witty, and fascinating and talks from the point of view of this ideal. Thomas, again, believes John to be an artful rogue, we will say; therefore he is, so far as Thomas's attitude in the conversation is concerned, an artful

rogue, though really simple and stupid. The same conditions apply to the three Thomases. It follows that, until a man can be found who knows himself as his Maker knows him, or who sees himself as others see him, there must be at least six persons engaged in every dialogue between two. Of these, the least important, philosophically speaking, is the one that we have called the real person. No wonder two disputants often get angry when there are six of them talking and listening all at the same time.

–*The Autocrat of the Breakfast Table, Section III.*

ದೃಗ್ಭೇದದಿಂದ ದರ್ಶನಭೇದ

ಒಂದು ವಸ್ತುವನ್ನು ನೋಡಿದ ಇಬ್ಬರಲ್ಲಿ ಅದರ ಆಕಾರಲಕ್ಷಣಗಳನ್ನು ಕುರಿತು ಅಭಿಪ್ರಾಯಭೇದವಿರುವುದು ಅಪರೂಪವಲ್ಲ. ಆ ಭೇದಕ್ಕೆ ಕಾರಣಗಳು ಮುಖ್ಯವಾದವು ನಾಲ್ಕು:

1. **ನೇತ್ರಪಾಟವ :** ಒಬ್ಬ ನೋಟಕನ ಕಣ್ಣಿನ ಶಕ್ತಿ ಇನ್ನೊಬ್ಬನದಕ್ಕಿಂತ ಹೆಚ್ಚಾಗಿರಬಹುದು ಅಥವಾ ಕಡಮೆಯಾಗಿರಬಹುದು. ಕಣ್ಣು ಪೊರೆಗಟ್ಟಿರಬಹುದು ಅಥವಾ ಬಣ್ಣಗಟ್ಟಿರಬಹುದು.
2. **ದೃಶ್ಯದ ಪ್ರಕಾಶ :** ವಸ್ತುವಿನ ಮೇಲೆ ಬೆಳಕು ಬಿದ್ದಿದೆಯೆ, ಮಬ್ಬು ಕವಿದಿದೆಯೆ? ಸಂಜೆಯೆ, ಮಂಜೆ? ಅಲುಗು ಬೆಳಕೆ, ನೆಲೆಬೆಳಕೆ? ಇದಕ್ಕೆ ಒಳಪಟ್ಟದ್ದು ದರ್ಶನ.
3. **ಅಂತರ :** ನೋಟಕನಿಗೂ ವಸ್ತುವಿಗೂ ನಡುವಣ ದೂರ ಎಷ್ಟು? ಆ ದೂರ ಮೇಲುಕೆಳಗುಗಳದಿರಬಹುದು, ಅಥವಾ ಸಮತಲದ್ದಿರಬಹುದು, ಪಕ್ಕದ್ದಿರಬಹುದು. ಹೇಗಾದರೂ ದೂರಸಾಮೀಪ್ಯಗಳು ದೃಷ್ಟಿಯಲ್ಲಿ ಪರಿಣಾಮಕಾರಿಗಳು.
4. **ದಿಕ್ಕೋಣ :** ದೃಷ್ಟಿಯು ವಸ್ತುವಿನ ಯಾವ ಪಕ್ಕಕ್ಕೆ ಬಿದ್ದಿದೆ? ಕಣ್ಣು ತನ್ನ ಯಾವ ಮೂಲೆಯಿಂದ ವಸ್ತುವಿನ ಯಾವ ಮೂಲೆಯನ್ನು ಹಿಡಿದಿದೆ?

ಹೀಗೆ ವಸ್ತುವಿನ ರೂಪರೇಖೆಗಳು ಗೊತ್ತಾಗುವುದು ದ್ರಷ್ಟನ ದೃಕ್ಕೋಣ ದೃಗ್ಭಂಗಿಗಳಿಗನುಸಾರವಾಗಿ.

ಇದು ದೇಹದ ಕಣ್ಣಿನ ಮಾತು. ಮನಸ್ಸು ಬುದ್ಧಿಗಳ ಕಣ್ಣಿನ ಮಾತೂ ಅಷ್ಟೇ. ಅಂತಃಕರಣವು ಸಾಮರ್ಥ್ಯಪರಿಮಿತಿಗೂ ಪೂರ್ವಸಂಸ್ಕಾರಕ್ಕೂ ಸಹಜಾಭಿರುಚಿ ಮೊದಲಾದ ಉಪಾಧಿಗಳಿಗೂ ಒಳಪಟ್ಟಿರುತ್ತದೆ. ಅದರಂತೆ ಸತ್ಯದರ್ಶನವಿರುತ್ತದೆ. ಹೀಗೆ ಅಂತಃಕರಣ ಪರಿಪಾಕದ ತ್ರಿವಿಧಗಳೇ ಮತತ್ರಯಕ್ಕೆ ಮುಖ್ಯ ಕಾರಣಗಳೆಂದು ನನ್ನ ಭಾವನೆ.

ಒಂದು ಬೆಟ್ಟವನ್ನು ನಾಲ್ಕು ಬೇರೆಬೇರೆ ದಿಕ್ಕುಗಳಿಂದ ಬೇರೆಬೇರೆಯಾಗಿ ನೋಡಿದಾಗ ಅದು ನಾಲ್ಕು ಬೇರೆಬೇರೆ ಆಕಾರವಾಗಿ ಕಾಣುತ್ತದಲ್ಲವೆ? ಹಾಗೆಯೇ ದೂರದಿಂದ ನೋಡಿದಾಗ ಒಂದು ಆಕಾರವೂ, ಬೆಟ್ಟದ ಅಡಿಯಿಂದ ನೋಡಿದಾಗ ಇನ್ನೊಂದು ಆಕಾರವೂ,

ಅರ್ಧಮಟ್ಟಕ್ಕೆ ಹತ್ತಿ ನೋಡಿದಾಗ ಮತ್ತೊಂದು ಆಕಾರವೂ, ಕೋಡುಗಲ್ಲಿನ ಮೇಲೆ ನಿಂತು ಕೆಳಕ್ಕೆ ನೋಡಿದಾಗ ಅದೇ ಬೆಟ್ಟದ ಮಗದೊಂದು ಆಕಾರವೂ ನಮಗೆ ಕಾಣಬರುತ್ತವೆ. ಇದು ಎಲ್ಲರಿಗೂ ಅನುಭವದಲ್ಲಿರುವ ಸಂಗತಿ. ಬೆಟ್ಟದ ಆಕಾರಭೇದಗಳಿಗೆ ಕಾರಣ ಬೆಟ್ಟವಲ್ಲ; ನೋಡುವವನ ಸ್ಥಾನಭೇದ—ಅವನ ದೂರತೆ ಸಮೀಪತೆಗಳು, ಅವನ ಉನ್ನತಿ ನಿಮ್ನತೆಗಳು. ಹೀಗೆ ದ್ರಷ್ಟನ ಸ್ಥಾನಭೇದದಿಂದ ದರ್ಶನಭೇದ. ಅದರಂತೆಯೇ ದ್ರಷ್ಟನ ನೇತ್ರಶಕ್ತಿಭೇದದಿಂದ ದರ್ಶನಭೇದ.

ಪರವಸ್ತುವಿನ ವಿಷಯವೂ ಅಷ್ಟೇ. ದರ್ಶಕನ ಮನೋಭಾವಕ್ಕನುಸಾರವಾಗಿ ಮತ್ತು ಬುದ್ಧಿ ಸೂಕ್ಷ್ಮತೆಗನುಸಾರವಾಗಿ ತತ್ತ್ವಸ್ವರೂಪ ಅವನಿಗೆ ಗೋಚರಿಸುತ್ತದೆ. ದರ್ಶನಭೇದಕ್ಕೆ ಕಾರಣ ದೃಶ್ಯವಸ್ತುವಲ್ಲ; ದರ್ಶಕನ (ಅವಸ್ಥಿತಿ) ಅವಸ್ಥಾಭೇದ.

ಒಬ್ಬನೇ ಮನುಷ್ಯ ಒಬ್ಬ ಹೆಂಗಸಿಗೆ ಮಗ, ಇನ್ನೊಬ್ಬಾಕೆಗೆ ಅಣ್ಣ, ಮತ್ತೊಬ್ಬಾಕೆಗೆ ಗಂಡ. ದೃಗ್‌ದೃಶ್ಯಬಾಂಧವ್ಯಗಳೂ ಹಾಗೆಯೇ.

ಹೀಗೆ ಮತತ್ರಯಗಳು ಮನುಷ್ಯಸ್ವಭಾವವಿಹಿತಗಳೆಂದು ಹೇಳಿದಂತಾಯಿತು. ಇಲ್ಲಿ ಏಳುತ್ತದೆ ತಕರಾರು. ಆ ಮೂರರಲ್ಲಿ ಸತ್ಯ ಯಾವುದು? ಈ ಪ್ರಶ್ನೆಯು ಸತ್ಯವೆಂಬುದಕ್ಕೆ ಸರ್ವಾಂಗೀಕೃತವಾದ ಏಕೈಕಪ್ರಮಾಣ ಒಂದುಂಟೆಂಬ ಅಭಿಪ್ರಾಯದ ಆಧಾರದ ಮೇಲೆ ನಿಂತಿದೆ. ಅಂಥ ಏಕೈಕಪ್ರಮಾಣ ಉಂಟೋ?

ಸತ್ಯಸಂದರ್ಶನಕ್ಕೆ ಇರುವ ಪ್ರಮಾಣ ಎರಡು ವಿಧ: ಒಂದು ಬಹಿಷ್ಪ್ರಮಾಣ, ಇನ್ನೊಂದು ಅಂತಃಪ್ರಮಾಣ. ಇದನ್ನು ಇನ್ನೂ ಸಮಂಜಸವಾಗಿ ಹೇಳುವುದಾದರೆ, ಪ್ರಮಾಣಸ್ಥಾನಗಳು ಎರಡು: ಒಂದು ಬಾಹ್ಯ, ಇನ್ನೊಂದು ಆಂತರ.

ಬಹಿಷ್ಪ್ರಮಾಣಗಳು ನಾಲ್ಕೆಂದು ಒಂದು ಮತ:

(೧) ಪ್ರತ್ಯಕ್ಷ, (೨) ಅನುಮಾನ, (೩) ಉಪಮಾನ, (೪) ಶಬ್ದ. ಶಬ್ದವೆಂದರೆ ಇಲ್ಲಿ ವೇದ. ಇನ್ನೊಂದು ಮತದವರು ಈ ನಾಲ್ಕರ ಜೊತೆಗೆ (೫) ಅರ್ಥಾಪತ್ತಿ. (೬) ಅನುಪಲಬ್ಧಿ ಎಂಬೆರಡನ್ನು ಸೇರಿಸಿಕೊಳ್ಳುತ್ತಾರೆ. ಇವುಗಳ ವಿವರಣೆ ನಮಗೆ ಇಲ್ಲಿ ಅಪ್ರಕೃತ. ಒಟ್ಟಿನಲ್ಲಿ

ಮನುಷ್ಯನಿಗೆ ತನ್ನ ಹೊರಗಡೆಯಿಂದ ದೊರೆಯುವ ಶಾಸ್ತ್ರ ಸಂಪ್ರದಾಯ ಗುರೂಪದೇಶಾದಿ ಜ್ಞಾನಸಾಧನಗಳು ಬಹಿಷ್ಪ್ರಮಾಣಗಳು.

ಅಂತಃಪ್ರಮಾಣವೆಂಬುದು ಕೇವಲ ಸ್ವಾನುಭವ—ಮನುಷ್ಯನು ತನ್ನ ಅಂತರಂಗದಲ್ಲಿ ಕಂಡದ್ದು; ತನ್ನೆದೆಯ ಗವಿಯಲ್ಲಿ ಆಲಿಸಿದ್ದು; ತಾನು ಪಟ್ಟದ್ದು. ಆದರೆ ಇದು ಸುಸಂಸ್ಕೃತರೂ ಸೂಕ್ಷ್ಮವೇದಿಗಳೂ ಆದ ಕೆಲವೇ ಕೆಲವು ಮಂದಿಗೆ ಲಭ್ಯವಾಗತಕ್ಕದ್ದು.

ವ್ಯಕ್ತ್ಯೈಕಗಮ್ಯವಾದದ್ದು ಅಂತಃಪ್ರಮಾಣ. ಬಹುಜನಸಾಮಾನ್ಯವಾದದ್ದು ಬಹಿಷ್ಪ್ರಮಾಣ.

ಸತ್ಯಸಂದರ್ಶನದಲ್ಲಿ ಬಹಿಷ್ಪ್ರಮಾಣವು ಪ್ರಾರಂಭದ್ದು; ಅಂತಃಪ್ರಮಾಣವು ಪರಿಸಮಾಪ್ತಿಯದು. ಹೊರಗಡೆಯಿಂದ ನಾವು ಕೇಳಿದ್ದು ಅದನ್ನು ನಾವು ಅನುಸರಿಸಿ ನಡೆದಂತೆ ನಮ್ಮ ಒಳಗಡೆ ರುಜುವಾತಿಗೆ ಬರಬೇಕು. ಆಗ ಸತ್ಯಪ್ರಾಪ್ತಿ. ಬಹಿರುಪದೇಶವಿಲ್ಲದೆ ನಮಗೆ ಮಾರ್ಗಪ್ರವೇಶವಿಲ್ಲ. ಅಂತರನುಭವವಿಲ್ಲದೆ ಆ ಪ್ರದೇಶಕ್ಕೆ ಸಾರ್ಥಕ್ಯವಿಲ್ಲ. ಹೀಗೆ ಬಹಿಷ್ಪ್ರಮಾಣ ಅಂತಃಪ್ರಮಾಣಗಳೆರಡೂ ಒಂದೇ ಕಾಂಡದ ಎರಡು ಕೊನೆಗಳು. ಅವು ಬೇರೆ ಬೇರೆಯಲ್ಲವೇ ಅಲ್ಲ, ಒಂದು ಯಾವುದಕ್ಕೆ ಪಾದವೋ ಇನ್ನೊಂದು ಅದಕ್ಕೇ ಶಿರಸ್ಸು.

ಸತ್ಯದರ್ಶನವು ಏಕಕ್ಷಣಘಟನೆಯಲ್ಲ. ಅದು ಕಾಲಕ್ರಮಪ್ರಾಪ್ತವಾಗತಕ್ಕದ್ದು. (Not the event of a moment, but a process spread over a period of time.) ಮಿಂಚು ಏಕಕ್ಷಣಘಟನೆ, ಮೇಘವು ಕಾಲಾನುಕ್ರಮ ಸಂಘಟನೆ, ಜ್ಞಾನಾರ್ಜನೆಯಾಗುವುದು ಮೇಘಸಮುದಯದಂತೆ, —ಮಿಂಚಿನಂತಲ್ಲ. ಅದಕ್ಕೆ ಆದಿ, ಮಧ್ಯ, ಅಂತ ಈ ಮೂರು ಘಟ್ಟಗಳುಂಟು. ವೇದಶಾಸ್ತ್ರಾದಿ ಬಹಿಷ್ಪ್ರಮಾಣಗಳು ಅದಕ್ಕೆ ಆದಿ; ತದನುಸಂಧಾನ ಅದರ ಮಧ್ಯ; ತದನುಭವರೂಪವಾದ ಅಂತಃಪ್ರಮಾಣ ಅದರ ಅಂತ್ಯ.

ಈ ಸೂತ್ರವನ್ನು ನಮ್ಮ ತ್ರಿಮತಗಳಿಗೂ ಅನ್ವಯಿಸಬಹುದು. ಪ್ರತಿಯೊಂದಕ್ಕೂ ಆದಿಮಧ್ಯಾಂತಗಳೆಂಬ ಮೂರು ಘಟ್ಟಗಳುಂಟು. ಬಹಿಷ್ಪ್ರಮಾಣವು ಸರ್ವಸಾಮಾನ್ಯವೆಂದೂ ಅಂತಃಪ್ರಮಾಣವು ಪ್ರತಿಯೊಂದಕ್ಕೂ ಪ್ರತ್ಯೇಕವೆಂದೂ ಮೇಲೆ ನೋಡಿದ್ದೇವೆ. ವೇದಶಾಸ್ತ್ರಗಳು ತ್ರಿಮತಗಳಿಗೂ ಸಮಾನವಾಗಿರುವ ಆದಿಘಟ್ಟ. ಮಧ್ಯಘಟ್ಟವಾದ ಉಪಾಸನಾವಿಧಾನ ಮೂರು-ಮತಗಳಿಗೂ ಕೆಲವು ಭಾಗಗಳಲ್ಲಿ ಸಮಾನ,

ಕೆಲವು ಭಾಗಗಳಲ್ಲಿ ತತ್ತತ್ಪ್ರತ್ಯೇಕ. ಅಂತ್ಯಘಟ್ಟವಾದ ಸಾಕ್ಷಾತ್ಕಾರವೆಂಬ ಅನುಭವಪ್ರಕಾರದಲ್ಲಿ ಒಂದೊಂದು ಮತದ್ದು ಒಂದೊಂದು ಬಗೆ. ಏಕೈಕ ಬಹಿಷ್ಪ್ರಮಾಣದಿಂದ ಭಿನ್ನಭಿನ್ನಗಳಾದ ಶಾಖಾತ್ರಯ ಹುಟ್ಟಿಕೊಂಡಿದೆ. ಇದಕ್ಕೆ ಕಾರಣವಿರುವುದು ಪ್ರಮಾಣಗ್ರಂಥಸಾಹಿತ್ಯದಲ್ಲಲ್ಲ; ತತ್ಪ್ರಮಾಣಯೋಜಕರ ದೃಷ್ಟಿಯಲ್ಲಿ.

ಒಂದು ಸೂಕ್ಷ್ಮವಿಚಾರ

ಈ ಪ್ರಕರಣದಲ್ಲಿ ಪ್ರಸಕ್ತವಾಗಿರುವ ಸತ್ಯವು ಪರಮಾರ್ಥದ್ದು.

ಸತ್ಯವು ಮೂರು ಬಗೆಯೆಂದು ಹಿಂದೆ ಹೇಳಿದೆ: (೧) ವ್ಯಾವಹಾರಿಕ: ಇದು ಲೋಕ ಜೀವನಕ್ಕೆ ಸಂಬಂಧಪಟ್ಟದ್ದು; (೨) ಪ್ರಾತಿಭಾಸಿಕ: ಇದು ಸ್ವಪ್ನಾದಿ ಅಂತಃಕರಣ ಮಾತ್ರದ ಅನುಭವಗಳಲ್ಲಿಯದು; (೩) ಪಾರಮಾರ್ಥಿಕ: ಇದು ಸರ್ವಕಾಲ ಸರ್ವಸ್ಥಾನಗಳಲ್ಲಿಯೂ ಏಕೈಕರೂಪದಲ್ಲಿ ಅಬಾಧ್ಯವಾಗಿರುವ ಸದ್ವಸ್ತು. ಅದೇ ಪರಬ್ರಹ್ಮತತ್ತ್ವ. ಈ ಮೂರನೆಯದು ನಮ್ಮ ಈಗಿನ ವಿಷಯ.

ಒಳ್ಳೆಯದು, ಈ ಪರಮಸತ್ಯದಲ್ಲಿ ಭಾಗಗಳೂ ಭೇದಗಳೂ ಉಂಟೆ? ಅದರಲ್ಲಿ ಅಂಶ ಪರಿಮಾಣಗಳೂ (Degrees) ಇಯತ್ತೆಗಳೂ ಸಾಧ್ಯವೆ?

ಪರಮಸತ್ಯವು ಅಖಂಡವಾದದ್ದು; ಅನಂತವಾದದ್ದು; ಏಕಾಕಾರವಾದದ್ದು. ಅದನ್ನು ಭಾಗಮಾಡಲಾಗದು, ಭೇದಿಸಲಾಗದು. ಎಲ್ಲಿ ಭಾಗವಿಭಾಗವು ಸಾಧ್ಯವಿಲ್ಲವೋ ಅಲ್ಲಿ ಪರಿಮಾಣವೆಂಬುದೂ ಇಯತ್ತೆಯೆಂಬುದೂ ಸಾಧ್ಯವಾಗದು

ಆದರೆ ಅದನ್ನು ನೋಡುವ ಮನುಷ್ಯನ ಬುದ್ಧಿಯು ಮಿತವಾದದ್ದು, ಭಾಗಗ್ರಾಹಿಯಾದದ್ದು. ಆದದ್ದರಿಂದ ಅವನಿಗಾಗುವ ಸತ್ಯಲಾಭದಲ್ಲಿ ಇಯತ್ತಾ ತಾರತಮ್ಯವಿರುತ್ತದೆ.

ಇಯತ್ತಾಭೇದವು ಸತ್ಯದಲ್ಲಿಲ್ಲ; ಸತ್ಯದ ಉಪಲಬ್ಧಿಯಲ್ಲುಂಟು.

ಇಲ್ಲಿ ನಾವು ವಿಚಾರಮಾಡುತ್ತಿರುವುದು ಸತ್ಯವನ್ನು ಕುರಿತು ಅಲ್ಲ, ಸತ್ಯಸಾಧನವನ್ನು ಕುರಿತು; ಸತ್ಯದ ಸ್ವರೂಪವನ್ನು ಕುರಿತು ಅಲ್ಲ, ಸತ್ಯಸ್ವರೂಪವನ್ನು ಕಾಣಲು ನಮಗಿರುವ ಉಪಾಯವನ್ನು ಕುರಿತು.

ಸತ್ಯವು ಸ್ವತಂತ್ರವಾದದ್ದು. ಅದೇ ತಾನೇತಾನಾಗಿರುವಂಥಾದ್ದು. ಅದು ನಮ್ಮ ಬಹಿಷ್ಪ್ರಮಾಣಗಳಿಗೂ ಅಂತಃಪ್ರಮಾಣಗಳಿಗೂ ಒಳಪಟ್ಟದ್ದಲ್ಲ; ಎರಡಕ್ಕೂ ಅತೀತವಾದದ್ದು. ನಮ್ಮ ಪ್ರಮಾಣಗಳಿಂದ ಅದು ನಮಗೆ ದೊರಕದೆಹೋದರೆ ಅದು

ಇಲ್ಲವೆಂದಾಗದು. ನಮ್ಮ ಪ್ರಮಾಣಗಳಲ್ಲದ ಬೇರೆ ಯಾವುದೋ ವಿಧಾನದಿಂದ ಅದು ಗೋಚರಿಸಬಹುದು; ಅಥವಾ ಹೇಗೂ ಗೋಚರವಾಗದೆ, ಗೂಢವಾಗಿಯೇ ಇದ್ದುಕೊಳ್ಳಬಹುದು. ನಮ್ಮ ಪ್ರಮಾಣಗಳಿಗೆ ಸಿಕ್ಕದೆಹೋದದ್ದು ಸತ್ಯವಲ್ಲ ಎಂದು ವಾದಿಸುವುದಾಗದು. ನಾವು ಸತ್ಯವನ್ನು ಕಾಣಲಾಗದೆಹೋದರೂ ಸತ್ಯವೇನೋ ಇದ್ದೇ ಇರುತ್ತದೆ.

ಅದು ಹೇಗಾದರೂ ಇದ್ದುಕೊಳ್ಳಲಿ; ಅದು ನಮಗೆ ದೊರೆಯುವುದು ಹೇಗೆ—ಎಂಬುದಿಷ್ಟೇ ಇಲ್ಲಿಯ ಪ್ರಶ್ನೆ. ವೇದಾದಿಸಾಧನಗಳನ್ನು ಬಿಟ್ಟು ಕೇವಲ ಬುದ್ಧಿಪ್ರಯತ್ನದಿಂತ ಸತ್ಯವನ್ನು ಕಾಣಲಾಗುವುದಿಲ್ಲವೋ? ಈ ಪ್ರಶ್ನೆಗೆ ಉತ್ತರವಾಗಿ ಇನ್ನೊಂದು ಪ್ರಶ್ನೆ ಏಳುತ್ತದೆ. ಸ್ವತಂತ್ರ ಬುದ್ಧಿಸಾಹಸವು ಯಾವುದನ್ನು ಕಾಣುತ್ತದೆಯೋ ಅದನ್ನು ನಾವು ಸತ್ಯವಾದ ಸತ್ಯವೆಂದು ಅಂಗೀಕರಿಸಲಾಗುತ್ತದೆಯೋ? ಅದನ್ನು ಹಾಗೆಂದು ಖಾತರಿಮಾಡಿಕೊಳ್ಳುವುದು ಹೇಗೆ? ಅನ್ಯಪ್ರಮಾಣದ ಸಮ್ಮತಿ ಸಮರ್ಥನೆಗಳಿಲ್ಲದ ಆ ಕೇವಲ ಬುದ್ಧಿಸಂಪಾದಿತವನ್ನು ಅದು ಬುದ್ಧಿಭ್ರಾಂತಿಯೆಂದು ಯಾರಾದರೂ ಹೇಳಿದರೆ, —ಅದು ಉನ್ಮತ್ತಕಲ್ಪನೆಯೆಂದರೆ, —ನಾವು ಅದನ್ನು ಅಂಗೀಕರಿಸಿಯೇವೋ? ನಮಗೆ ಆ ದರ್ಶನದ ವಿಷಯದಲ್ಲಿ ಸಂದೇಹ ಬರಲಾರದೋ? ಹೀಗೆ ಅವಶ್ಯವಾಗುತ್ತದೆ ಬೇರೊಂದು ರುಜುವಾತು. ಅದೇ ಪ್ರಮಾಣ. (ಪ್ರಮಾಕರಣಂ ಪ್ರಮಾಣಂ) “ಪ್ರಮಾ” ಎಂದರೆ ಸರಿಯಾದ ತಿಳಿವಳಿಕೆ. ಅದಕ್ಕೆ ವಿರೋಧಿಯಾದದ್ದು “ಭ್ರಮ” ಅಥವಾ ತಪ್ಪುಗ್ರಹಿಕೆ. ನಾವು ತಿಳಿದುಕೊಂಡಿರುವುದು ಭ್ರಮೆಯಲ್ಲ, ಅದು ಪ್ರಮೆ ಎಂದು ನಾವು ಖಾತರಿಪಡಬೇಕಾದರೆ ನಮಗೆ ವೇದಶಾಸ್ತ್ರಗಳ ಅನುಮೋದನೆ ಅಪೇಕ್ಷಿತವಾಗುತ್ತದೆ.

ಮನುಷ್ಯಬುದ್ಧಿಯು ಅನ್ಯಸಾಧನ ಸಹಾಯಗಳಿಲ್ಲದೆ ಸತ್ಯಾನ್ವೇಷಣೆಗೆ ಹೊರಟು ತಾನು ಕಂಡದ್ದನ್ನು ಸತ್ಯವೆಂದು, —ಶುದ್ಧವೂ ಸಂಪೂರ್ಣವೂ ಆದ ಸತ್ಯವೆಂದು—ಭಾವಿಸಿಕೊಂಡರೆ ಅದು ಸತ್ಯವಲ್ಲವೆಂದು ಇತರರು ಸಾಧಿಸಲಾಗದು. ಆ ಇತರರು ಹೇಳುವ ಶಾಸ್ತ್ರಾದಿ ಪ್ರಮಾಣಗಳನ್ನು ಅವನು ಮೊದಲೇ ತಳ್ಳಿಹಾಕಿರುತ್ತಾನೆ. ಹೀಗೆ ವಾದಿ ಪ್ರತಿವಾದಿಗಳಿಗೆ ಒಂದು ಉಭಯಸಮಾನವಾದ ಆಧಾರಭೂಮಿಯೇ ಇಲ್ಲದೆ ಹೋಗುತ್ತದೆ. ಅವರಿಬ್ಬರೂ ಆಡುವ ಭಾಷೆಗಳೇ ಬೇರೆಬೇರೆಯೆಂಬಂತೆ ಆಗುತ್ತದೆ. ಆದದ್ದರಿಂದ ಅವರಲ್ಲಿ ತರ್ಕವು ನಿರರ್ಥಕವಾಗುತ್ತದೆ.

ಕೇವಲ ಬುದ್ಧಿಲಬ್ಧವಾದ ದರ್ಶನವು ಸತ್ಯವೋ ಅಲ್ಲವೋ ಎಂಬುದನ್ನು ಚರ್ಚಿಸಲು ತಕ್ಕ ಅಧಿಕಾರಿ ಮತ್ತೊಬ್ಬ ಬುದ್ಧಿಸಾಹಸಿಯೇ ಆಗಿರಬೇಕು. ಆ ಚರ್ಚೆ ಇತರರ ಪಾಲಿಗೆ ಕೇವಲ ತರ್ಕವೇ. ಅದು ನಮ್ಮ ಜೀವಿತಲೋಕಕ್ಕೆ ಇಳಿಯತಕ್ಕದ್ದಲ್ಲ. ಗಣಿತಶಾಸ್ತ್ರದ ಪ್ರೌಢಘಟ್ಟಗಳಲ್ಲಿ ವಸ್ತುಸಂಬಂಧವಿಲ್ಲದ ಸಂಖ್ಯೆಗಳನ್ನು ಭಾಗಿಸಿ ಗುಣಿಸಿ ಹೊಸ ಹೊಸ ಸಂಖ್ಯಾಮಾನಗಳನ್ನು ತಯಾರುಮಾಡುತ್ತಾರಂತೆ. ಅದು ಕೇವಲ ಬುದ್ಧಿರಾಜ್ಯ, ವ್ಯವಹಾರಪ್ರಯುಕ್ತವಾದದ್ದಲ್ಲ. ಆಧ್ಯಾತ್ಮಿಕ ರಾಜ್ಯ ಅಂಥಾದ್ದಲ್ಲ. ಇಲ್ಲಿ ಸತ್ಯ ಸಂದರ್ಶನಕ್ಕೆ ಬುದ್ಧಿಯ ಜೊತೆಗೆ ಜೀವನದ ಸರ್ವಾಂಗಗಳ ಸಹಕಾರವೂ ಬೇಕು. ತತ್ತ್ವಾನುಸಂಧಾನವು ಒಂದು ವಿಶೇಷಾಕಾರದ ವ್ಯವಹಾರ.

ವಿಜ್ಞಾನಾದಿ (Science) ಲೌಕಿಕಶಾಸ್ತ್ರಗಳಲ್ಲಿ ಬಹಿಷ್ಪ್ರಮಾಣವೊಂದೇ ಸಾಕು. ಭೌತವಿಜ್ಞಾನಿಯು (Physicist) ಒಂದು ಹೊಸ ತರ್ಕಕಲ್ಪನೆಯನ್ನು (Theory) ಪ್ರಕಟಿಸಿದ್ದಾದರೆ, ಆ ಕೂಡಲೆ ಅದನ್ನು ಇತರರು ಪ್ರತ್ಯಕ್ಷ ವ್ಯವಹಾರದಲ್ಲಿ ಪ್ರಯೋಗಿಸುವುದಾಗುತ್ತದೆ. ಆಗ ಆ ತರ್ಕಕಲ್ಪನೆಯ ಸತ್ಯಾಸತ್ಯತೆಗಳು ಇತರರಿಗೆ ರುಜುವಾತಾಗುತ್ತವೆ, ರಾಸಾಯನಿಕ ವಿಜ್ಞಾನಿ (Chemist), ಜೈವವಿಜ್ಞಾನಿ (Biologist), ವೈದ್ಯ ವಿಜ್ಞಾನಿ ಮೊದಲಾದವರ ತರ್ಕಕಲ್ಪನೆಗಳೂ ಹಾಗೆಯೇ—ಪ್ರತ್ಯಕ್ಷಪ್ರಮಾಣದಿಂದ ಸ್ಥಿರಪಡತಕ್ಕವು.

ವೇದಾಂತದ ಸತ್ಯವು ಪ್ರತ್ಯಕ್ಷೈಕಗಮ್ಯವಲ್ಲ, ಏಕೆಂದರೆ ಅದರ ವಸ್ತುವು ದೇಹೇಂದ್ರಿಯಗಳಿಗೆ ಅತೀತವಾದದ್ದು. ಆದದ್ದರಿಂದ ಆ ಕ್ಷೇತ್ರದಲ್ಲಿ ಸತ್ಯಪ್ರಾಪ್ತಿಗೆ ಪರಮಪ್ರಮಾಣವಾಗತಕ್ಕದ್ದು ಅಂತರನುಭವ.

ಅಂತರನುಭವವಾದರೋ ಅಂತಃಕರಣಗಳ ಪಟುತ್ವವನ್ನವಲಂಬಿಸಿಕೊಂಡಿರುತ್ತದೆ.

ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ॥ (೬-೪೩)

ಮನಸ್ಸಿಗೂ ಬುದ್ಧಿಗೂ ಪೂರ್ವಜನ್ಮವಾಸನಾ ವಿಶೇಷಗಳಿಂದಲೂ ಇಹಸಹವಾಸಾಭ್ಯಾಸಗಳಿಂದಲೂ ವಿಧವಿಧವಾಗಿ ಸಂಸ್ಕಾರಗಳಾಗಿರುತ್ತವೆ. ಈ ಸಂಸ್ಕಾರಗಳ ನಾನಾತ್ವದ ಕಾರಣದಿಂದ ಮನಸ್ಸಿನ ಅಭಿರುಚಿಗಳೂ ಬುದ್ಧಿಯ ಸಾಮರ್ಥ್ಯಗಳೂ ಒಬ್ಬೊಬ್ಬ

ಮಾನವಜೀವಿಯಲ್ಲಿ ಒಂದೊಂದು ಪ್ರಕಾರವಾಗಿರುತ್ತದೆ. ಹೀಗೆ ವ್ಯಕ್ತಿಗತಗಳಾಗಿರುವ ಅಂತಃಕರಣಭೇದಗಳನ್ನು ಆಸ್ತಿಕವರ್ಗದಲ್ಲಿ ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು:

1. ಸ್ವತಾಸಮರ್ಪಣಸಂತೋಷದ್ದು.
2. ಸ್ವತಾಸಹಭಾಗಸಂತೋಷದ್ದು.
3. ಸ್ವತಾವಿಲಯನಸಂತೋಷದ್ದು.

"ಸ್ವತೆ" ಎಂದರೆ ತಾನು, ತನ್ನದು—ಎಂಬ ಭಾವನೆಗಳು, —ಅಹಂತೆ ಮಮತೆಗಳು.

1. **ಸ್ವತಾಸಮರ್ಪಣೆ** —ಜೀವನು ತನ್ನನ್ನು—ತನ್ನ ಸರ್ವಸ್ವವನ್ನು—ಸದಾ ಸಂಪೂರ್ಣವಾಗಿ ಭಗವದರ್ಪಿತ ಮಾಡುವುದರಲ್ಲಿಯೇ ಅತ್ಯಂತ ಸೌಖ್ಯವನ್ನು ಕಾಣುವುದು. ಇದು ಎರಡು ವಸ್ತುಗಳ ಇರುವಿಕೆಯನ್ನು ಅಪೇಕ್ಷಿಸುತ್ತದೆ: ಸ್ವಾಮಿ, ಸೇವಕ; ಅಥವಾ ಪೂಜ್ಯ, ಪೂಜಕ; ಅಥವಾ ಪ್ರಿಯ, ಪ್ರೇಮಿ. ಇಬ್ಬರೂ ಇರಬೇಕು, ಮತ್ತು ಆ ಅನ್ಯೋನ್ಯ ಸಂಬಂಧದಲ್ಲಿರಬೇಕು. ಇದು ದ್ವೈತ.
2. **ಸ್ವತಾಸಹಭಾಗ** —ಜೀವನು ಭಗವಲ್ಲೀಲೆಯಲ್ಲಿ ಒಂದು ಅಂಶಪ್ರಾಯನಾಗಿ, ಆ ಲೀಲಾನಂದದಲ್ಲಿ ಭಾಗಸ್ಥನಾಗಬೇಕೆನ್ನುವುದು. ಇಲ್ಲಿ ಎರಡು ಘಟ್ಟಗಳು: (೧) ಭಗವತ್ಕೈಂಕರ್ಯದಲ್ಲಿ ಸ್ವಾಮಿ ಭೃತ್ಯ ಎಂಬ ದ್ವಿಭಾಗ; (೨) ತದಾನಂದಾನುಭವದಲ್ಲಿ ಭೃತ್ಯ ಪ್ರತ್ಯೇಕತೆ ವಿಸರ್ಜಿತವಾಗಿ, ಏಕತ್ವದಲ್ಲಿ ಪರ್ಯವಸಾನ. ತುತ್ತು ಕಲಸುವಾಗ ಕೈ ಬೇರೆ, ಬಾಯಿ ಬೇರೆ; ನಾಲಗೆ ಅದನ್ನು ಸವಿದಾಗ ಕೈ ಬಾಯಿ ಮೊದಲಾದ ಎಲ್ಲ ಅಂಗಗಳೂ ಆ ಸುಖದಲ್ಲಿ ಭಾಗಿಗಳು. ಇದು ವಿಶಿಷ್ಟಾದ್ವೈತ.
3. **ಸ್ವತಾವಿಲಯನ** —ಜೀವನು ಯಾವುದನ್ನು ಸರ್ವವ್ಯಾಪಿಯೆಂದೂ ಸರ್ವರೂಪಿಯೆಂದೂ ಭಾವಿಸಿದ್ದಾನೋ ಅದರಲ್ಲಿ ಅವನು ಕರಗಿಹೋಗಿ ತಾನು ಬೇರೆಯೆಂಬ ತನ್ನತನವನ್ನೇ ಕಳೆದುಕೊಳ್ಳುವುದು. ಇದು ಅದ್ವೈತ.

ಈ ತತ್ತ್ವನಿರೂಪಣೆ ಸ್ಥೂಲಾಕಾರದ್ದು. ತ್ರಿಮತಗಳ ಸ್ವರೂಪವನ್ನು ಮುಂದೆ ಪುನಃ ಪ್ರಸ್ತಾವಿಸಬೇಕಾಗುತ್ತದೆ.

ಮುಖ್ಯಾಂಶ ಇದು: ಮೂರು ಮತಗಳಿಗೂ ಜೀವಿಯ "ಸ್ವತೆ" — "ತಾನು", "ತಾನು" ಎಂಬ ಚಿತ್ತವೃತ್ತಿ—ಕೇಂದ್ರಸ್ಥಾನ. ಸ್ವತೆಯ ಚರಮಗತಿಯೇ ಮೂರಕ್ಕೂ ಮುಖ್ಯ ಲಕ್ಷ್ಯ.

ವೇದಶಾಸ್ತ್ರಗಳು ಮೂರು ಮತಗಳಿಗೂ ಸಮಾನಾಧಾರವೆಂದು ನೋಡಿದೆವಲ್ಲವೆ? ಆ ವೈದಿಕ ಸಾಹಿತ್ಯದಲ್ಲಿ ಮೂರು ಮತಗಳಿಗೂ ತತ್ತದನುಕೂಲಗಳಾದ ವಾಕ್ಯಗಳು ದೊರೆಯುತ್ತವೆ. ಅಂಥ ವಾಕ್ಯಗಳನ್ನು ಆಯಾ ಮತಸ್ಥರು ಆರಿಸಿಕೊಂಡು ಮುಖ್ಯವಾಗಿ ಉದಾಹರಿಸುತ್ತಾರೆ. ಇನ್ನು ಮಿಕ್ಕ ವಾಕ್ಯಗಳನ್ನೋ?—ಎಂದರೆ, ಆ ಮಿಕ್ಕ ವಾಕ್ಯಗಳನ್ನು ತರ್ಕ ವ್ಯಾಕರಣಯುಕ್ತಿಗಳಿಂದ ತಮ್ಮತಮ್ಮ ಅರ್ಥಕ್ಕೆ ತಿರುಗಿಸಿಕೊಳ್ಳುತ್ತಾರೆ. ಅದ್ವೈತಿಗಳು ಆಧಾರವಾಗಿಟ್ಟುಕೊಂಡ ಶ್ರುತಿವಾಕ್ಯವನ್ನು ದ್ವೈತಿಗಳು ಅಪ್ರಮಾಣವೆನ್ನುವುದಿಲ್ಲ, ವಾಕ್ಯಾಕ್ಷರವನ್ನು ಅಂಗೀಕರಿಸುತ್ತಾರೆ; ಆದರೆ ಆ ವಾಕ್ಯಕ್ಕೆ ಅದ್ವೈತಿಗಳು ಹೇಳುವ ಅರ್ಥವು ಅಸಂಗತವೆಂದೂ ಅದಕ್ಕೆ ಅರ್ಥ ಬೇರೆ ರೀತಿಯೆಂದೂ ವಾದಿಸುತ್ತಾರೆ. ದ್ವೈತಿಗಳು ಉದಾಹರಿಸುವ ಪ್ರಮಾಣವಾಕ್ಯಗಳನ್ನು ಅದ್ವೈತಿಗಳು ವೇದವೆಂದೇ ಗೌರವಿಸುತ್ತಾರೆ; ಆ ವಾಕ್ಯಗಳಿಗೆ ದ್ವೈತಿಗಳು ಹೇಳುವ ಅರ್ಥ ಸಮಂಜಸವಲ್ಲವೆಂದೂ ಅವುಗಳ ತಾತ್ಪರ್ಯ ಅದ್ವೈತದಲ್ಲಿ ಪರ್ಯವಸಾನವಾಗತಕ್ಕದ್ದೆಂದೂ ವಾದಿಸುತ್ತಾರೆ. ತರ್ಕ ವ್ಯಾಕರಣಗಳು ಇಬ್ಬರಿಗೂ ಅನುಕೂಲವಾಗಿರುತ್ತವೆ. ಸ್ಮೃತಿ ಪುರಾಣೇತಿಹಾಸಗಳೂ ಹಾಗೆಯೇ ಸರಿ. ಈ ವ್ಯಾಖ್ಯಾನಕೋಲಾಹಲದಲ್ಲಿ ವಿಷಯ ವಾಕ್ಯದ ನಿಜವಾದ ಅರ್ಥ ಯಾವುದೆಂಬುದು ಸಂದಿಗ್ಧವಾಗುತ್ತದೆ. ಮನುಷ್ಯಚಮತ್ಕಾರವು ವೇದದ ಯಥಾರ್ಥವನ್ನು ಹೀಗೂ ಹಾಗೂ ಸೆಳೆದಾಡುತ್ತದೆ. ಅಪೌರುಷೇಯವೆನಿಸಿದ ವೇದದ ಅಂತರಾಶಯವನ್ನು ಪೌರುಷೇಯ ಯುಕ್ತಿಯು ಸಂದಿಗ್ಧಮಾಡುತ್ತದೆ. ಇಂಥ ವಿಷಮದಲ್ಲಿ ಮನುಷ್ಯ ಏನು ಮಾಡಬೇಕು? ಅವನು ದೃಷ್ಟಿಯನ್ನು ತನ್ನ ಹೃದಯದ ಒಳಗಡೆಗೆ ತಿರುಗಿಸಿಕೊಳ್ಳಬೇಕು. ಅಲ್ಲಿ ವಿಮರ್ಶೆಮಾಡಿಕೊಂಡು ಬಹಿಷ್ಪ್ರಮಾಣಲಭ್ಯವಾದ ಅನೇಕ ತಾತ್ಪರ್ಯಾರ್ಥಗಳಲ್ಲಿ ಯಾವುದು ತನ್ನ ಅಂತರಂಗಕ್ಕೆ ಯುಕ್ತವೆಂದು ತೋರುತ್ತದೋ ಅದನ್ನು ಭದ್ರವಾಗಿ ಹಿಡಿದುಕೊಳ್ಳಬೇಕು. ಆ ಅರ್ಥವು ದ್ವೈತವಾದರಾಗಲಿ, ಅದ್ವೈತವಾದರಾಗಲಿ, ವಿಶಿಷ್ಟಾದ್ವೈತವಾದರಾಗಲಿ, —ಆ ಒಂದು ಗಟ್ಟಿ ತತ್ತ್ವವನ್ನು ಪಟ್ಟುಹಿಡಿದು ಅನುಸಂಧಾನಮಾಡುವುದರಿಂದ ಅವನಿಗೆ ಕ್ರಮಕ್ರಮವಾಗಿ ತತ್ತ್ವದ ಸಮಗ್ರರೂಪವನ್ನು ಕಂಡುಕೊಳ್ಳುವುದು ಉತ್ತರೋತ್ತರಕಾಲದಲ್ಲಿ ಶಕ್ಯವಾದೀತು.

ತತ್ತ್ವಜಿಜ್ಞಾಸುವು ಒಂದು ನದೀಪ್ರವಾಹದೊಳಗೆ ಬಿದ್ದು ಅಲೆಗಳಿಗೆ ಸಿಕ್ಕಿ ಹೆಣಗಾಡುತ್ತಿರುವ ಮನುಷ್ಯನಂತೆ. ವೇದಶಾಸ್ತ್ರಗಳು ಆ ನದಿಯ ದಡದಲ್ಲಿ ನಿಂತಿರುವ ಸಾಧುಸಜ್ಜನರಂತೆ. ಆ ಸಜ್ಜನರು ಕನಿಕರಿಸಿ ಆ ಮನುಷ್ಯನ ಕಡೆಗೆ ದೊಡ್ಡದೊಡ್ಡ ಹಗ್ಗಗಳನ್ನೆಸೆಯುತ್ತಾರೆ. ಅವನು ಅವುಗಳಲ್ಲಿ ಯಾವುದಾದರೊಂದು ಹಗ್ಗವನ್ನು, —ತನ್ನ ಕೈಗೆ ಅದು ಸಿಕ್ಕಿದ ಕಡೆ, — ಬಿಗಿಯಾಗಿ ಹಿಡಿದುಕೊಂಡರೆ ಅವರು ಅವನನ್ನು ದಡಕ್ಕೆಳೆದುಕೊಂಡು ಪಾರು ಮಾಡುವುದು ಸಾಧ್ಯವಾಗುತ್ತದೆ. ಅವನು ಹಾಗೆ ಮಾಡದೆ—ಮೂರು ನಾಲ್ಕು ಹಗ್ಗಗಳಿವೆಯಲ್ಲ? ಯಾವುದನ್ನು ಹಿಡಿಯಲಿ? ಹಗ್ಗದ ತುದಿಯನ್ನು ಹಿಡಿಯಲೆ? ನಡುವಣ ಭಾಗವನ್ನು ಹಿಡಿಯಲೆ? ಒಂದು ಕೈಯಿಂದ ಹಿಡಿಯಲೆ? ಎರಡು ಕೈಗಳಿಂದಲೂ ಹಿಡಿಯಲೆ?—ಹೀಗೆಲ್ಲ ಪ್ರಶ್ನೆ ಕೇಳುತ್ತ ತಡಮಾಡಿದರೆ, ಅವನ ಗತಿ ಅವರ ಕೈಮೀರಿ ಹೋಗುತ್ತದೆ; ಅವನು ಇನ್ನೂ ದೊಡ್ಡದೊಡ್ಡ ಅಲೆಗಳ ಪಾಲಾಗುತ್ತಾನೆ.

ನೀತಿ ಇಷ್ಟು: ನಮ್ಮ ಮನಸ್ಸಿಗೆ ಒಂದಾನೊಂದು ಕ್ಷಣದಲ್ಲಿ ಯಾವ ಒಂದು ಸಂಗತಿ—ಯಾವ ಒಂದು ಭಾವನೆ—ಯಾವ ಒಂದು ಅನುಭವವು ಸತ್ಯವೆಂದು ತೋರುತ್ತದೋ ಆ ಸಂಗತಿಯನ್ನು, ಆ ಭಾವನೆಯನ್ನು, ಆ ಅನುಭವವನ್ನು ನಾವು ಆಧಾರವಾಗಿರಿಸಿಕೊಂಡು ಅಲ್ಲಿಂದ ಮುಂದಕ್ಕೆ ಹುಡುಕುತ್ತ ಹೊರಟರೆ ನಮ್ಮ ವಿವೇಕ ಜಾಗರೂಕತೆಗಳಿಗೆ ತಕ್ಕಂತೆ ಸತ್ಯದ ಸಂಪೂರ್ಣದರ್ಶನ ನಮಗೆ ಹತ್ತಿರಹತ್ತಿರವಾದೀತು.

ಮತತ್ರಯಗಳಿಗೂ ಇರುವ ಭೇದಗಳು ವಾಕ್ಯಾರ್ಥಕ್ರಮದಿಂದ ಉಂಟಾದವೇ ಹೊರತು, ವೇದದ ಅಂಗೀಕಾರ ಅನಂಗೀಕಾರ ಕಾರಣಗಳಿಂದ ಉಂಟಾದುವಲ್ಲ. ಸಂಸ್ಕೃತ ಭಾಷೆಯಲ್ಲಿ ಯಾವ ಒಂದು ಗುಣ ಅದರ ಸೊಗಸೋ ಅದೇ ಗುಣ ಅದರಲ್ಲಿಯ ಕಷ್ಟ. ತರ್ಕವ್ಯಾಕರಣಚಮತ್ಕಾರಗಳಿಗೆ ಅವಕಾಶಕೊಟ್ಟಿರುವುದೇ ಆ ಗುಣ. ಅಥವಾ ಆ ಅವಗುಣ. ಒಂದು ಸರಳ ಉದಾಹರಣೆಯನ್ನು ನೋಡೋಣ. ಶ್ರೀಧರಸ್ವಾಮಿಗಳು ಭಾಗವತವ್ಯಾಖ್ಯಾನಾರಂಭದಲ್ಲಿ ಒಂದು ಭಗವದ್ಧ್ಯಾನ ಶ್ಲೋಕವನ್ನು ಬರೆದಿದ್ದಾರೆ, ಹೀಗೆ:

ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್ ॥

ಇಲ್ಲಿ "ಮೂಕಂ ಕರೋತಿ ವಾಚಾಲಂ" ಎಂದರೆ, "ಭಗವತ್ಕೃಪೆಯು ಮೂಗನನ್ನೂ ವಾಚಾಲನನ್ನಾಗಿ ಮಾಡುತ್ತದೆ" ಎಂದಾದರೂ ಆಗಬಹುದು; ಅಥವಾ "ವಾಚಾಳಿಯನ್ನು

(ತಲೆಹರಟೆಯವನನ್ನು) ಬಾಯಿಬಿಗಿಸುತ್ತದೆ” ಎಂದಾದರೂ ಆಗಬಹುದು. ನಮಗೆ ಎರಡೂ ಬೇಕಾದ ಉಪಕಾರಗಳೇ ಅಲ್ಲವೇ? “ಪಂಗುಂ ಲಂಘಯತೇ ಗಿರಿಂ” ಎಂದರೆ, “ಕುಂಟನಿಂದ ಬೆಟ್ಟವನ್ನು ದಾಟಿಸುತ್ತದೆ” ಎಂದಾದರೂ ಆಗಬಹುದು; ಹಾಗಲ್ಲದೆ ಬೆಟ್ಟವು ಕುಂಟನನ್ನು ದಾಟುವಂತೆ ಮಾಡುತ್ತದೆ ಎಂದಾದರೂ ಆಗಬಹುದು. ಈ ಎರಡನೆಯ ಅರ್ಥದಲ್ಲಿ ತರ್ಕ ಚಮತ್ಕಾರಕ್ಕೆ ಅವಕಾಶವುಂಟು. ಬೆಟ್ಟದಿಂದ ಕುಂಟನನ್ನು ಏಕೆ ದಾಟಿಸಬೇಕು? ಏಕೆಂದರೆ ಕುಂಟನಲ್ಲದೆ ಕಾಲಿದ್ದು ಓಡುವವನಾದರೆ ಹಾರಿದ ಬೆಟ್ಟ ಇಳಿಯುವಾಗ ಅವನ ತಲೆಯ ಮೇಲೆ ಬೀಳಬಹುದು. ಅದು ಭಗವತ್ಕೃಪೆಯಾಗದು. ಕುಂಟನಾದರೆ ಬಹುದೂರ ನಡೆಯಲಾರ. ಒಂದು ಕಡೆ ಸ್ಥಾಯಿಯಾಗಿರುತ್ತಾನೆ. ಅವನು ಬೆಟ್ಟದ ಪೂರ್ಣಸ್ವರೂಪವನ್ನು ಕಾಣಲು ಕುತೂಹಲಿಯಾಗಿರುತ್ತಾನೆ. ಆದದ್ದರಿಂದ ಬೆಟ್ಟವೇ ಹಾರಿಹಾರಿ ಬಂದು ತನ್ನ ನಾನಾ ಪಕ್ಕಗಳನ್ನು ಅವನಿಗೆ ತೋರಿಸಬೇಕು—ನರ್ತಕಿಯು ಪ್ರೇಕ್ಷಕನ ಮುಂದೆ ಮಾಡುವಂತೆ. ಆಗ ಅವನಿಗೆ ಅಪಾಯ ತಾಕದು. ಇಷ್ಟೇ ಅಲ್ಲದೆ, ಕುಂಟನು ಹಾರುವುದಕ್ಕಿಂತ ಬೆಟ್ಟ ಹಾರುವುದು ಸಾವಿರದಷ್ಟು ಅದ್ಭುತ. ಭಗವತ್ಕೃಪೆಯ ಅದ್ಭುತವನ್ನು ಕೀರ್ತಿಸುವುದೇ ಶ್ರೀಧರಸ್ವಾಮಿಗಳ ಉದ್ದೇಶವಾದದ್ದರಿಂದ “ಗಿರಿಂ ಲಂಘಯತೇ” ಎಂದು ಅನ್ವಯ ಮಾಡುವುದೇ ಉತ್ತಮ. ಹೀಗೆ ಯಾವ ಪಕ್ಷಕ್ಕಾದರೂ ಕೊನೆಮೊದಲಿಲ್ಲದೆ ತರ್ಕ ಮಾಡಬಹುದು.

ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ—

> **ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ॥**

ಎಂಬ ವಾಕ್ಯ ಬರುತ್ತದೆ. ಇದು ಅತ್ಯಂತ ಪ್ರಸಿದ್ಧವಾದ ವಾಕ್ಯ. ಇದಕ್ಕೆ ಅರ್ಥ ಹೇಳುವಲ್ಲಿ—

1. ತತ್+ತ್ವಮ್+ಅಸಿ = ತದೇವಾಸಿ—ಎಂದಾಗಲಿ,
2. ಆತ್ಮಾ+ತತ್ ॥ ತ್ವಮ್+ಅಸಿ—ಎಂದಾಗಲಿ,
3. ತದಧೀನೋಽಸಿ—ಎಂದಾಗಲಿ,
4. ತತ್ಸದೃಶೋಽಸಿ—ಎಂದಾಗಲಿ,

—ವಿಧವಿಧವಾಗಿ ಅರ್ಥ ಹೇಳಬಹುದು. ಇದು ವ್ಯಾಕರಣ ತರ್ಕಯುಕ್ತಿಗಳು ಯಾವ ವಾಕ್ಯದಿಂದ ಯಾವ ಅರ್ಥವನ್ನಾದರೂ ಹೊರಹೊರಡಿಸಲಾಗುತ್ತದೆ ಎಂಬುದಕ್ಕೆ ನಿದರ್ಶನ.

ಭಗವದ್ಗೀತೆಯಲ್ಲಿ—

ನಿತ್ಯಸ್ಸರ್ವಗತಸ್ಸ್ಥಾಣುಃ ॥

—ಎಂದು ಬರುತ್ತದಲ್ಲವೆ? ಇದನ್ನು "ನಿತ್ಯಃ, ಸರ್ವಗತಃ, ಸ್ಥಾಣುಃ" ಎಂದು ಮೂರು ಪದಗಳಾಗಿ ವಿಭಾಗಿಸಬಹುದು. ಅಥವಾ "ನಿತ್ಯಃ, ಸರ್ವಗತಸ್ಥಃ, ಅಣುಃ" ಎಂದು ವಿಭಾಗಿಸಿ "ಸರ್ವಗತಸ್ಥಶ್ಚ ಅಣುಶ್ಚ ಸರ್ವಗತಸ್ಥಾಣುಃ" ಎಂದು ಸಮಾಸ ಮಾಡಿ ಹೇಳಬಹುದು. ಹೀಗೆ ಸಾಗುತ್ತದೆ ವ್ಯಾಖ್ಯಾನ ಚಮತ್ಕಾರ.

ನಮ್ಮ ಶಾಸ್ತ್ರದ ವಾಕ್ಯಾರ್ಥಗಳು ಎಷ್ಟೋ ಕಡೆ ಇಂಥ ಮಾರ್ಗವನ್ನು ಹಿಡಿದಿವೆ. ತರ್ಕಕ್ಕೆ ಒಪ್ಪು, ಮನಸ್ಸಿಗೆ ಒಪ್ಪಿಲ್ಲ.

ಹಾಗಾದರೆ ವೇದಶಾಸ್ತ್ರಗಳ ತಾತ್ಪರ್ಯವನ್ನು ನಾವು ಒಂದು ಏಕಾರ್ಥದಲ್ಲಿ ನಿಷ್ಕರ್ಷೆ ಮಾಡುವುದು ಸಾಧ್ಯವಿಲ್ಲವೋ? ವೇದವು ತರ್ಕವ್ಯಾಕರಣಯುಕ್ತಿಗಳಿಗೆ ವಶವಾಗುವಷ್ಟು ದುರ್ಬಲವಾಗಿರುವಲ್ಲಿ ಅಂಥ ಬಹುಪಕ್ಷಪ್ರಮಾಣದಿಂದ ನಮಗೆ ಆಗಬಹುದಾದ ಪ್ರಯೋಜನವೇನು? ವೇದವು ಹೀಗೂ ಸರಿ, ಹಾಗೂ ಸರಿ ಎಂದು ಅಡ್ಡಗೋಡೆಯ ಮೇಲಣ ದೀಪದಂತೆ ಇರತಕ್ಕದ್ದೆ? ಅಲ್ಲ; ಅದು ಹಾಗಲ್ಲ. ಅದು ಒಂದು ನಿಷ್ಕರ್ಷೆಯಾದ ಸತ್ಯವನ್ನು ಸಾರಿಸಾರಿ ಸ್ಪಷ್ಟವಾಗಿ ಹೇಳುತ್ತದೆ. ಆ ಸತ್ಯವು ಜಗನ್ಮೂಲ ವಸ್ತು ಒಂದುಂಟೆಂಬುದು.

ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ ।
ಯತ್ಪ್ರಯಂತ್ಯಭಿಸಂವಿಶನ್ತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ ॥
ಬ್ರಹ್ಮೈವ ಸತ್ಯಮ್ ॥
ಬ್ರಹ್ಮೈವೇದಂ ಸರ್ವಮ್ ॥
ಸರ್ವಂ ಖಲ್ವಿದಂ ಬ್ರಹ್ಮ । ತಜ್ಜಲಾನಿತಿ ಶಾನ್ತ ಉಪಾಸೀತ ॥
ಆತ್ಮೈವೇದಗ್ಂ ಸರ್ವಮ್ ॥
ಪುರುಷ ಏವೇದಗ್ಂ ಸರ್ವಮ್ ॥

ಇದನ್ನೇ ಹಿಂದೆ ನಾವು ಈಶ್ವರಾಂಗೀಕಾರ ಎಂಬಲ್ಲಿ ಸಂಗ್ರಹವಾಗಿ ಹೇಳಿರುವುದು. ಅದೇ ಆಸ್ತಿಕತೆ. ಜಗತ್ತೂ ಜೀವನವೂ ಶೂನ್ಯಗಳಲ್ಲ; ಮೃತ್ಯುವೆಂದರೆ ಜೀವನದ ಅಂತ್ಯವಲ್ಲ; ಸೂರ್ಯಚಂದ್ರರು ಪ್ರಲಯವಾದರೆ ಜಗತ್ಕಥೆ ನಿಂತಿತೆಂದಲ್ಲ. ಜಗತ್ತಿನ ಹಿಂದೆಯೂ ಜಗತ್ತಿನ ಮುಂದೆಯೂ ಜಗತ್ತಿನ ಹೊರಗೂ ಜಗತ್ತಿನ ಒಳಗೂ ಮತ್ತು ಮನುಷ್ಯಗಣ್ಯವಾದ ಕಾಲದ ಒಳಗಡೆಯೂ ಮನುಷ್ಯಗಣನಾತೀತವಾದ ನಿತ್ಯಕಾಲದ ಹೊರಗಡೆಯೂ ಎಲ್ಲೆಲ್ಲೂ ಯಾವಾಗಲೂ ಒಂದಾನೊಂದು ಅನಂತಸತ್ತ್ವ ಇದೆ. ಅದು ಇತ್ತು; ಅದು ಇದೆ; ಅದು ಎಂದೆಂದಿಗೂ ಇರುತ್ತದೆ. ಅದೇ ಬ್ರಹ್ಮ. ನಾವೆಲ್ಲ ಅದರ ಒಡಲಿನ ಒಳಗಡೆ, ತದಂಗವಾಗಿ, ಅಥವಾ ತದಂಶವಾಗಿ, ಅಥವಾ ತತ್ಕರಣವಾಗಿ, ಅಥವಾ ತತ್ಪ್ರತಿಬಿಂಬವಾಗಿ, ಅಥವಾ ತಜ್ಜ್ಯೋತಿಃಕಿರಣವಾಗಿ, —ಹಾಗೂ ಹೀಗೂ ತದುಪಜೀವಿಗಳಾಗಿ—ಇರತಕ್ಕವರು. ಇದು ತ್ರಿಮತಸ್ಥರಿಗೂ ಸಮಾನವಾಗಿರುವ ವೇದೋಪದೇಶ.

ವೇದವು ಆಸ್ತಿಕ ಕುಟುಂಬಕ್ಕಾಗಿ ಆಗಿರುವ ವಾಸದ ಮನೆ. ಆ ವಿಸ್ತಾರವಾದ ಮನೆಯಲ್ಲಿರುವ ಕುಟುಂಬವು ಯಜಮಾನನ ವಿಷಯದಲ್ಲಿ ಮೂರು ತೆರದ ಬಾಂಧವ್ಯಗಳಿಗೆ ಅವಕಾಶಕೊಟ್ಟಿದೆ. ಒಂದು ಸ್ವಾಮಿ–ಭೃತ್ಯ ಬಾಂಧವ್ಯ; ಇನ್ನೊಂದು ತಂದೆ-ಮಕ್ಕಳ ಬಾಂಧವ್ಯ; ಮೂರನೆಯದು ಗಂಡ-ಹೆಂಡಿರ ಬಾಂಧವ್ಯ—ಎಂದು ಸ್ಥೂಲಾರ್ಥದಲ್ಲಿ ಹೋಲಿಸಬಹುದು. ಈ ತ್ರಿವಿಧಬಂಧುಗಳಿಗೂ ಆ ಮಹಾಗೃಹವನ್ನು ಸಮಾನವಾಗಿ ತಮತಮದೆಂದು ಹೇಳಿಕೊಳ್ಳುವ ಹಕ್ಕು ಉಂಟು. ವೇದದ ನೆಲೆಗಟ್ಟಿನ ಮೇಲೆ ನಿಂತಿರುವ ಆ ದೊಡ್ಡ ಮನೆಯಲ್ಲಿ, ನಮ್ಮ ಭಾಷ್ಯಕಾರರುಗಳು ತಮ್ಮ ತಮ್ಮ ಮೂರು ವರ್ಗಗಳ ಶಿಷ್ಯರಿಗಾಗಿ ಮೂರುಕೋಣೆಗಳನ್ನು ಕಟ್ಟಿಸಿರಿಸಿದ್ದಾರೆ. ದ್ವೈತಾದ್ವೈತವಿಶಿಷ್ಟಾದ್ವೈತಗಳು ಒಂದೇ ಕಟ್ಟಡದಲ್ಲಿ ವಾಸಮಾಡುವ ಮೂರು ಬಂಧುಕುಟುಂಬಗಳಂತೆ.

ಒಂದು ವಠಾರದಲ್ಲಿ ಮೂರು ಸಂಸಾರಗಳೆಂದಮೇಲೆ ಮೂರು ಅಡಿಗೆಮನೆಗಳೂ, ಮೂರು ಉಗ್ರಾಣಗಳೂ ಸಹಜ. ಆದರೆ ಮೂರಕ್ಕೂ ಒಂದೇ ಬಾವಿ; ಒಂದೇ ತುಲಸೀಕಟ್ಟೆ; ಒಂದೇ ಅಂಗಳ; ಒಂದೇ ಹಿತ್ತಿಲು; ಒಂದೇ ಹೆಬ್ಬಾಗಿಲು. ಹೀಗೆ ಕೆಲವು ಸಂಗತಿ ಸಮಾನ, ಕೆಲವು ಪ್ರತ್ಯೇಕ. ಅದೇ ನಮ್ಮ ತ್ರಿಮತಗಳ ಪರಿಸ್ಥಿತಿ. ಆ ಮೂರಕ್ಕೂ ಮೂರು ಅಡಿಗೆಕೋಣೆಗಳೆಂಬುದನ್ನು ಒತ್ತೊತ್ತಿಹೇಳಿ, ಮೂರಕ್ಕೂ ಒಂದೇ ಬಾವಿಯ ನೀರೆಂಬುದನ್ನು ಮರೆತಲ್ಲಿ ಯಥಾರ್ಥಗ್ರಹಣ ತಪ್ಪಿಹೋಗುತ್ತದೆ. ವಾದಪ್ರತಿವಾದ ಕೋಲಾಹಲದಲ್ಲಿ

ತ್ರಿಮತಗಳ ಐಕಮತ್ಯಸ್ಥಾನಗಳು ನಮ್ಮ ದೃಷ್ಟಿಯಿಂದ ಹೊರಗಾಗುವುದುಂಟು. ಆ ಐಕಮತ್ಯ ಸ್ಥಾನಗಳಾದ ತತ್ತ್ವಗಳನ್ನು ಈಗ ಸಂಕ್ಷೇಪವಾಗಿ ನೋಡೋಣ. ಅವು ಹತ್ತು ಇವೆ.

1. **ದೇವರು :** ಜಗನ್ಮೂಲವಾದ ಅನಂತಚೈತನ್ಯವೊಂದುಂಟು. ಅದು ಪರಬ್ರಹ್ಮ, ಪರಮಾತ್ಮ. ಅದೇ ಪರಮೇಶ್ವರ, ಭಗವಂತ, ದೇವರು.
2. **ಜೀವ :** ಪ್ರತಿಯೊಂದು ಪ್ರಾಣಿಯಲ್ಲಿಯೂ ದೇಹದ ಒಳಗಡೆ ದೇಹದಿಂದ ಬೇರೆಯಾದ ಚೈತನ್ಯವೊಂದುಂಟು. ಅದೇ ಜೀವ.
3. **ಪ್ರಕೃತಿ :** ಬ್ರಹ್ಮಚೈತನ್ಯದಿಂದ ಆಗಿ, ತದಧೀನವಾಗಿರತಕ್ಕ ಜೀವಾಧಿಷ್ಠಾನ ರೂಪವಾದ ಜಗತ್ತು. ಇದರಲ್ಲಿ ಇಂದ್ರಿಯಗಮ್ಯವಾದ ಸಮಸ್ತ ಭೌತರಾಶಿಯೂ ಸೇರುತ್ತದೆ.
4. **ತ್ರಿಗುಣ :** ಪ್ರಕೃತಿಯಲ್ಲಿ ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಶಕ್ತಿವಿಶೇಷಗಳು ಅಥವಾ ಗತಿವಿಶೇಷಗಳು ಕೆಲಸಮಾಡುತ್ತಿರುತ್ತವೆ. ಅವುಗಳಿಂದಲೇ ಮಾಯಾ ಕಾರ್ಯಗಳಾದ ಕಾಮ ಕ್ರೋಧ ಲೋಭ ಮೋಹಗಳು.
5. **ಅನಾದಿ :** ಸೃಷ್ಟಿ ಅನಾದಿಯಾದದ್ದು. ಜೀವ, ಜಗತ್ತು, ಪ್ರಕೃತಿ, ಸಂಸಾರ—ಇವು ಅನಾದಿ.
6. **ಕರ್ಮ :** ಮನುಷ್ಯನ ಕರ್ಮಗಳಲ್ಲಿ ಪುಣ್ಯ, ಪಾಪ, —ಎಂಬ ಎರಡು ಭಾಗವುಂಟು. ಅದಕ್ಕೆ ಫಲವಾಗಿ ಶುಭ ಅಶುಭಗಳೂ ಸ್ವರ್ಗ ನರಕಗಳೂ ಉಂಟು.
7. **ಪುನರ್ಜನ್ಮ:** ಜೀವಕ್ಕೆ ಕರ್ಮಾನುಸಾರವಾಗಿ ಜನ್ಮ ಜನ್ಮಾಂತರಗಳುಂಟು.
8. **ಮೋಕ್ಷ:** ಜೀವಕ್ಕೆ ಸಮಸ್ತ ಕಷ್ಟಗಳೂ ಪರಿಹಾರವಾಗಿ, ದುಃಖಸ್ಪೃಕ್ಕಿಲ್ಲದ ಶಾಶ್ವತಸುಖವು ಭಗವದನುಭವದಿಂದ ಲಭ್ಯವಾಗುತ್ತದೆ. ಅದೇ ಮೋಕ್ಷ.
9. **ಸಾಧನ :** ಆತ್ಮಸಂಯಮಪೂರ್ವಕವಾದ ಧರ್ಮ ಭಕ್ತಿ ಜ್ಞಾನಗಳು.
10. **ವೇದಪ್ರಾಮಾಣ್ಯ:** ಜೀವ, ಜಗತ್ತು, ಈಶ್ವರ—ಈ ಮೂರರ ಸ್ವರೂಪ ಸಂಬಂಧ ಮರ್ಮಗಳು ಮನುಷ್ಯನ ಸ್ವತಂತ್ರವಾದ ಊಹಾ ಕಲ್ಪನೆಗಳಿಗೆ ದೊರೆಯಲಾರವು. ಆ ರಹಸ್ಯದ ಕಡೆಗೆ ದಾರಿ ತೋರಿಸುವ ಬೆಳಕು ವೇದ. ನಮ್ಮ ಸ್ವತಂತ್ರ ವಿಚಾರವು ವೇದವಿರುದ್ಧವಾಗದೆ ವೇದದ ಮಾರ್ಗಜ್ಯೋತಿಯಲ್ಲಿ ನಡೆಯಬೇಕಾದದ್ದು.

ಈ ಹತ್ತು ಮೌಲಿಕ ಸಂಗತಿಗಳು. ನಮ್ಮ ತ್ರಿಮತಗಳೂ ಅವುಗಳನ್ನು ಸಮಾನವಾಗಿ ಅಂಗೀಕರಿಸಿಕೊಂಡಿವೆ. ನಮ್ಮ ಭೇದತರ್ಕದ ರಭಸದಲ್ಲಿ ಈ ಐಕಮತ್ಯದ ತಳಹದಿಯನ್ನು ಮರೆಯಬಾರದು. ಮತತ್ರಯದ ಭೇದಗಳೇನಿದ್ದರೂ ಮಹಡಿಯ ಮೇಲಿನ ಮೂರು

ಕೋಣೆಗಳ ಭೇದಗಳಂತೆ. ಆ ಮೂರಕ್ಕೂ ಸಮಾನಾಧಾರವಾದ ನೆಲಗಟ್ಟು ಈ ದಶ ತತ್ತ್ವಘಟ್ಟ.

ಪಂಚಾಂಶಪರಾಮರ್ಶೆ

ಈಗ ತ್ರಿಮತಗಳ ಭೇದವಿಚಾರಕ್ಕೆ ಹೋಗೋಣ. ಪ್ರತಿಯೊಂದು ಮತಪ್ರಕ್ರಿಯೆಯಲ್ಲಿಯೂ ಪ್ರಕ್ರಿಯಾಸೂಕ್ಷ್ಮಗಳು, ಎಂದರೆ ಇಂಗ್ಲಿಷಿನಲ್ಲಿ Detail ಎಂದು ಹೇಳುವ ತಪಶೀಲುಗಳು, ಹತ್ತಾರಿರುತ್ತವೆ. ಇಲ್ಲಿ ಅವುಗಳನ್ನೆಲ್ಲ ನಿರೂಪಿಸಲು ಅವಕಾಶವಿಲ್ಲ. ನಾನು ಅಷ್ಟಕ್ಕೆ ಶಕ್ತನೂ ಅಲ್ಲ. ಅವು ಇಲ್ಲಿ ಅವಶ್ಯವೆಂದೂ ನನಗೆ ತೋರಿಲ್ಲ. ಎಲ್ಲ ಜಿಜ್ಞಾಸುಗಳಿಗೂ ಮೂಲಭೂತವೆಂದು, ಅಥವಾ ಕೇಂದ್ರಬಿಂದುವೆಂದು, ನನಗೆ ತೋರಿರುವ ಐದಂಶಗಳನ್ನು ಈಗ ಸಂಗ್ರಹವಾಗಿ ಕೋಷ್ಟಕಾಕಾರದಲ್ಲಿ ತೋರಿಸಲು ಪ್ರಯತ್ನಿಸುತ್ತೇನೆ.

ಈ ಸಂಕ್ಷೇಪನಿರೂಪಣೆಯಲ್ಲಿ ತತ್ತನ್ಮತೀಯ ದೃಷ್ಟಿಗೆ ನ್ಯೂನಾತಿರೇಕಗಳೇನಾದರೂ ಕಂಡುಬಂದಲ್ಲಿ ಕೃಪೆಮಾಡಿ ತಿಳಿಸಿದರೆ ನೋಡಿ ತಿದ್ದಿಕೊಳ್ಳಲು ಸಿದ್ಧನಾಗಿದ್ದೇನೆ.

ಈ ಮೂರು ಮತಗಳಲ್ಲಿ ಯಾವುದು ಸರಿ? ಮೂರೂ ಸರಿಯೇ; ಮತ್ತು ಮೂರೂ ಸಮಾನವಾಗಿ ಸರಿ.

ಒಂದು ಹಾಲು, ಒಂದು ಬೆಣ್ಣೆ, ಒಂದು ತುಪ್ಪ. ಮೂರೂ ಸಮಾನವಾಗಿ ಗವ್ಯ

1. **ವಿಷಯ:** ಜಗತ್ತು
   ದ್ವೈತ: ಪರಬ್ರಹ್ಮದಿಂದ ಬೇರೆ ಮತ್ತು ಪಂಚವಿಧಭೇದಾತ್ಮಕವಾದದ್ದು; ಸತ್ಯ.
   ವಿಶಿಷ್ಟಾದ್ವೈತ: ಬ್ರಹ್ಮದ ಶರೀರಾಂಶ, ಬ್ರಹ್ಮಶಕ್ತಿಯ ಪರಿಣಾಮ.
   ಅದ್ವೈತ: ಬ್ರಹ್ಮದ ವಿವರ್ತ. (ವಿವರ್ತ ಎಂದರೆ ಒಂದು ವಸ್ತು ತಾನು ಬದಲಾಯಿಸದೆ ತನ್ನ ಆಕಾರ ಬದಲಾಯಿಸಿದಂತೆ ಕಾಣಿಸಿಕೊಳ್ಳುವುದು. ಅದೇ ಮಾಯೆ. ಭೇದದ ತೋರಿಕೆ ಇದರ ಒಂದು ಲಕ್ಷಣ.) ಅನಿರ್ವಚನೀಯ.
2. **ವಿಷಯ:** ಪರಬ್ರಹ್ಮ (ಈಶ್ವರ)
   ದ್ವೈತ: (ಅ) ಸಗುಣ ಮತ್ತು ಸಾಕಾರ. (ಆ) ಹರಿ-ಸರ್ವೋತ್ತಮ.
   ವಿಶಿಷ್ಟಾದ್ವೈತ: ಸಗುಣ ಮತ್ತು ಸಾಕಾರ. ನಾರಾಯಣ-ಸರ್ವಾಂತರ್ಯಾಮಿ.
   ಅದ್ವೈತ: ಸಗುಣ ಸಾಕಾರವೂ ಹೌದು, ನಿರ್ಗುಣ ನಿರಾಕಾರವೂ ಹೌದು. ಪರಮಾತ್ಮ, ಶಿವ, ವಿಷ್ಣು, ದೇವಿ—ಇತ್ಯಾದಿ. ಪರಬ್ರಹ್ಮವು ಸರ್ವಾಂತರ್ಯಾಮಿ ಮತ್ತು ಸರ್ವಾತೀತ.

3. **ವಿಷಯ:** ಜೀವ

   ದ್ವೈತ: ಹರಿಯ ಅನುಚರ.

   ವಿಶಿಷ್ಟಾದ್ವೈತ: ಈಶ್ವರಶೇಷ—ಈಶ್ವರನ ಭೋಗಪರಿವಾರ. ಈಶ್ವರನು ಶೇಷಿ.

   ಅದ್ವೈತ: ಬ್ರಹ್ಮಚೈತನ್ಯದ ದೇಹಾದ್ಯುಪಾಧಿವಿಶಿಷ್ಟವಾದ ಲೀಲಾವಿಕಾರ. ಅಂಶ.

4. **ವಿಷಯ:** ಮೋಕ್ಷ

   ದ್ವೈತ: ವಿಷ್ಣುಸಾಮೀಪ್ಯ, ನೈಜ ಸುಖ.

   ವಿಶಿಷ್ಟಾದ್ವೈತ: ವಿಷ್ಣುಭೋಗಸಾಮ್ಯ (ಸಾರೂಪ್ಯ—ಜಗತ್ಕರ್ತೃತ್ವ ಲಕ್ಷ್ಮೀಪತಿತ್ವಗಳನ್ನು ವಿನಾಯಿಸಿ.)

   ಅದ್ವೈತ: ಜೀವೋಪಾಧಿವಿಲಯನ; ಜೀವತ್ವನಿವೃತ್ತಿ; ಬ್ರಹ್ಮಸಾಯುಜ್ಯ.

5. **ವಿಷಯ:** ಸಾಧನ

   ದ್ವೈತ: ಭಕ್ತಿ. “ಭಕ್ತಿಶ್ಚ ತತ್ಸಾಧನಮ್”

   ವಿಶಿಷ್ಟಾದ್ವೈತ: ಜ್ಞಾನಫಲಿತವಾದ ಭಕ್ತಿ, “ಶೇಮುಷೀ ಭಕ್ತಿ ರೂಪಾ”

   ಅದ್ವೈತ: ಸ್ವಾನುಭವರೂಪವಾದ ಜ್ಞಾನ, “ಸ್ವಾನುಭೂತ್ಯೇಕಮಾನಾಯ”

ಗಳೇ. ಕೆಲವರಿಗೆ ಒಂದು ಹಿತ; ಇನ್ನು ಕೆಲವರಿಗೆ ಇನ್ನೊಂದು ವಿಹಿತ; ಮತ್ತೆ ಕೆಲವರಿಗೆ ಮತ್ತೊಂದು ಉಚಿತ. ಮೂರಕ್ಕೂ ಭೇದವುಂಟು. ರುಚಿಭೇದವುಂಟೆಂದು ನಾಲಗೆ ಹೇಳುತ್ತದೆ; ಗುಣಭೇದವುಂಟೆಂದು ವೈದ್ಯರು ಹೇಳುತ್ತಾರೆ. ಆದದ್ದರಿಂದ ಅಧಿಕಾರಿಗಳಲ್ಲೂ ಭೇದವುಂಟು. ರೂಪರುಚಿಗಳಲ್ಲಿ ಭೇದವಿದ್ದರೂ ಮೂರಕ್ಕೂ ಸದುಪಯೋಗವುಂಟು. ಪ್ರತಿಯೊಂದಕ್ಕೂ ಪಾತ್ರೆ ಬೇರೆ, ಪಾತ್ರರಾದವರೂ ಬೇರೆ ಬೇರೆ.

ಸಿದ್ಧಾಂತದ ಸರಿತಪ್ಪುಗಳನ್ನು ಗೊತ್ತು ಮಾಡುವ ಸ್ಥಾನಗಳು ಎರಡು: ಒಂದು ವಸ್ತುವಿನದು, ಇನ್ನೊಂದು ನೋಟಕನದು. ಇಲ್ಲಿ ವಸ್ತುವು ಪರಬ್ರಹ್ಮ ಅಥವಾ ಪರಮಾತ್ಮ. ಅದು ನಮ್ಮ ಕೈಗೆ ಸಿಕ್ಕತಕ್ಕದ್ದಲ್ಲ. ಅದು ತನ್ನ ಸ್ವರೂಪವನ್ನು ನಮಗೆ ನೇರವಾಗಿ ತಿಳಿಸಿಲ್ಲ. ವೇದರೂಪದಲ್ಲಿ ತಿಳಿಸಿದೆಯಲ್ಲ? ಎಂದರೆ, ಆ ವಾಕ್ಯಗಳು ನಮ್ಮ ತರ್ಕ ವ್ಯಾಖ್ಯಾನಗಳ ಕೋಲಾಹಲದಲ್ಲಿ ಸಂದಿಗ್ಧಾರ್ಥಗಳಾಗಿ ತೋರುತ್ತವೆ. ಹತ್ತು ದೃಕ್ಕೋನಗಳಿದ್ದರೆ ಹತ್ತು ದೃಶ್ಯಪ್ರಕಾರಗಳು. ಒಂದೇ ವಸ್ತುವಿನ ವಿಷಯದಲ್ಲಿ ಹತ್ತು ದೃಶ್ಯಗಳೂ ಸುಸಂಗತಗಳೇ.

ಒಂದು ಉದಾಹರಣೆಯನ್ನು ನೋಡೋಣ.

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

ಈ ಶ್ಲೋಕವು ಮೇಲ್ನೋಟಕ್ಕೆ ಅಮರದಂತೆ ಒಂದೇ ವ್ಯಕ್ತಿಯ ಹೆಸರಿನ ಪರ್ಯಾಯ ಪದಗಳ ಪಟ್ಟಿಯಂತಿದೆಯಷ್ಟೆ? ಆದರೆ ಗಮನಿಸಿ ನೋಡುವವರಿಗೆ ಅದರಲ್ಲಿ ಒಂದು ಸ್ವಾರಸ್ಯ ತೋರೀತು, ಹೀಗೆ:

ಶ್ರೀರಾಮಚಂದ್ರಮೂರ್ತಿ ಒಡ್ಡೋಲಗದಲ್ಲಿದ್ದಾನೆ. ನಾನಾಜನ ಮಹಾಸಭೆಯಾಗಿ ಸೇರಿದ್ದಾರೆ. ಎಲ್ಲರಿಗೂ ಆತನಲ್ಲಿ ಸಮಾನವಾದ ಪ್ರೀತಿ. ಪ್ರತಿಯೊಬ್ಬನಿಗೂ ರಾಮ ತನ್ನವನೆಂಬ ಅಭಿಮಾನ. ಎಲ್ಲರೂ ಆತನನ್ನು ಹರಸಲು ಪುಷ್ಪಾಕ್ಷತೆಗಳನ್ನು ಕೈಯಲ್ಲಿ ಹಿಡಿದು ನಿಂತಿದ್ದಾರೆ. ಆಗ—

1. ಸರಳ ಮನಸ್ಸಿನ ವೈದಿಕರೊಬ್ಬರು “ರಾಮಾಯ” ಎಂದು ಧ್ವನಿಯೆತ್ತಿದರು.
2. ಅಲ್ಲಿದ್ದ ಹಿರಿಯರಿಗೆ ಅದು ಸಾಲದೆಂದು ತೋರಿತು. ಯಾರೋ ಬೀದಿಹೋಕನೇ ರಾಮ? ಅವರು “ರಾಮಭದ್ರಾಯ” ಎಂದು ಪ್ರೀತಿಮಂಗಳಗಳನ್ನು ಸೂಚಿಸಿದರು.
3. ಊರ ಮಂದಿ ತಮ್ಮ ಆನಂದವನ್ನು ಸೂಚಿಸಲು “ರಾಮಚಂದ್ರಾಯ” ಎಂಬುದೇ ಸರಿ ಎಂದು ಬಗೆದರು.
4. ಪರಬ್ರಹ್ಮನಿಷ್ಠರಾದ ವಸಿಷ್ಠಾದಿ ಮಹರ್ಷಿಗಳು “ವೇಧಸೇ” ಎಂಬುದೇ ಉಚಿತವೆಂದು ಭಾವಿಸಿದರು.
5. ಲಕ್ಷ್ಮಣ ಭರತ ಶತ್ರುಘ್ನರು ಸುಮ್ಮನಿರಲಾದೀತೇ? ಅವರು ತಮ್ಮ ಮನೆತನವನ್ನು ನೆನೆದು “ರಘುನಾಥಾಯ” ಎಂದರು.
6. ಸೀತಮ್ಮ ತನ್ನ ಹಕ್ಕುದಾರಿಯನ್ನು ಮರೆತಾಳೆ? “ನಾಥಾಯ” ಎಂದು ತನ್ನ ಹೃದಯಾಭಿರುಚಿಯನ್ನು ಪ್ರಕಟಮಾಡಿದಳು.
7. ಇನ್ನು ಅಲ್ಲಿದ್ದ ಮಹಿಳಾಗೋಷ್ಠಿ: ಅದರ ಸ್ವಾಭಿಮಾನ “ಸೀತಾಯಾಃ ಪತಯೇ” — “ನಮ್ಮ ಸೀತೆಯ ಗಂಡ” —ಎಂದು ಕೂಗಿಸಿತು.

ಈ ಏಳರಲ್ಲಿ ಯಾವುದು ಸರಿ? ಯಾವುದು ತಪ್ಪು? ನಮ್ಮ ಭೇದೈಕದೃಕ್ಕುಗಳು ವಿಚಾರಮಾಡಲಿ.

ನಮ್ಮ ತಿಳಿವಳಿಕೆಯಲ್ಲಿ ಏಳೂ ಸರಿ; ಏಳು ಬೇರೆ ಬೇರೆ ದೃಷ್ಟಿಗಳಿಂದ ಏಳೂ ಸಮಾನವಾಗಿ ಸರಿ.

ಅರ್ಜುನನು ಭಗವಂತನನ್ನು—

ಪಿತೇವ ಪುತ್ರಸ್ಯ ಸಖೇವ ಸಖ್ಯುಃ ಪ್ರಿಯಃ ಪ್ರಿಯಾಯಾಃ ॥ (೧೧-೪೪)

ಎಂದು ಮೂರು ಬಾಂಧವ್ಯಗಳಲ್ಲಿ ನೋಡಿದ್ದಾನೆ. ಯಾವುದು ಸರಿ? ಯಾವುದು ತಪ್ಪು? ಮೂರೂ ಸರಿಯೇ. ಒಬ್ಬ ಮನುಷ್ಯನಲ್ಲಿಯೇ ಮೂರೂ ಇರಲಾಗುತ್ತದೆ. ನಮ್ಮ ಖಂಡನ ಪಂಡಿತರು ಇದನ್ನು ಮಂಡಿಸಲಿ.

ಮತತತ್ತ್ವದ ಸಮ್ಯಗ್ಜ್ಞಾನಕ್ಕೆ ಬೇಕಾದದ್ದು ಅಂತರಂಗಾನುಭವವೆಂದು ಪದೇ ಪದೇ ಅರಿಕೆ ಮಾಡಿದ್ದೇನೆ. ತತ್ತ್ವವು ಅನುಸಂಧಾನದಿಂದಲೇ ಲಭ್ಯವಾಗತಕ್ಕದ್ದು; ಕೇವಲ ಪುಸ್ತಕಪಾಂಡಿತ್ಯದಿಂದ ಅಲ್ಲ.

ನೈಷಾ ತರ್ಕೇಣ ಮತಿರಾಪನೇಯಾ ॥

ಎನ್ನುತ್ತದೆ ಉಪನಿಷತ್ತು. ತರ್ಕಕ್ಕಿಂತ ಮಿಗಿಲಾದದ್ದು ಅನುಭವ.

ಸಮರಸನಯ

ಭಗವದ್ವಿಷಯದಲ್ಲಿ ಅಂತಃಕರಣಭಾವಗಳು ಮೂರು ತೆರನಾಗಿರಬಹುದು—ಹೀಗೆ:

1. ಸ್ವತಾಸಮರ್ಪಣೆ: ಇದರರದು ಶುಶ್ರೂಷಾಸಂತೋಷ.
2. ಸ್ವತಾಸಹಭಾಗ: ಇದರರದು ಸಾಹಚರ್ಯಸಂತೋಷ.
3. ಸ್ವತಾವಿಲಯನ: ಇದರರದು ತಾದಾತ್ಮ್ಯಸಂತೋಷ.

ಈ ತ್ರಿವಿಧ ಸಂತೋಷಗಳೇ ಮೋಕ್ಷದ ತಾತ್ಪರ್ಯ.

ಈ ಮೂರು ಬಗೆಯ ಸಂತೋಷಗಳಲ್ಲಿ ತತ್ತ್ವವಿಚಾರಿಗೆ ಯಾವುದಾದರೊಂದರ ವಿಷಯದಲ್ಲಿ ಅಭಿರುಚಿ ಅತಿಶಯವಾಗಿರುವುದು ಸ್ವಭಾವಸಿದ್ಧವಾದ ಸಂಗತಿ. ಈ ಅಭಿರುಚಿಯು ಪೂರ್ವಜನ್ಮಗಳಿಂದ ಬಂದಿರುವ ವಾಸನಾವಿಶೇಷ. ಆ ವಾಸನಾವಿಶೇಷವೇ ಆ ಮನುಷ್ಯನಲ್ಲಿ ತನ್ನಿಂದ ಬೇರೆಯೆಂದೆನಿಸಿದ ಒಂದಾನೊಂದು ವಸ್ತುವಿನ ಕಡೆಗೆ ಪ್ರೀತಿ ಪ್ರಚೋದನೆಯನ್ನುಂಟುಮಾಡುತ್ತದೆ. ಈ ವಿಧವಾದ ಪ್ರೀತಿಪ್ರೇರಣೆಗಳು ಭಗವದ್ವಿಷಯದಲ್ಲಿ (೧) ಸ್ವಾಮಿ ಭೃತ್ಯಭಾವನೆಯಾಗಬಹುದು; (೨) ಪ್ರಿಯಾಭ್ರಾತೃಭಾವನೆಯಾಗಬಹುದು; (೩) ಪಿತೃಪುತ್ರಭಾವನೆಯಾಗಬಹುದು.

ದ್ವೈತರಹಸ್ಯ

ಸೇವ್ಯಸೇವಕ ಸಂಬಂಧರೂಪವಾದದ್ದು ಭಕ್ತನ ಸ್ವತಾಸಮರ್ಪಣೆ. ಆಂಜನೇಯ, ಪ್ರಹ್ಲಾದ ಮೊದಲಾದ ಭಕ್ತರು ಇದಕ್ಕೆ ದೃಷ್ಟಾಂತ. ಆಂಜನೇಯನು ರಾಮಕಾರ್ಯ ಧುರಂಧರ. ಅದಕ್ಕಿಂತ ಹೆಚ್ಚಿನ ಪದವಿಯನ್ನು ಆತ ಒಲ್ಲ. ಶ್ರೀರಾಮಚಂದ್ರನು ಆಂಜನೇಯನನ್ನು ಕರೆದು ತನ್ನ ಸಿಂಹಾಸನದಲ್ಲಿ ಆ ಪರಮಪ್ರಿಯನಾದ ದೂತವೀರನು ಕೂಡತಕ್ಕದ್ದೆಂದು ಆಜ್ಞೆ ಮಾಡಿದ್ದಿದ್ದರೆ, ಆ ರಾಮದಾಸನು ಅದರಿಂದ ಸಂತೋಷಿಸುವುದಕ್ಕೆ ಬದಲಾಗಿ ವಿಷಾದವನ್ನೇ ಪಡುತ್ತಿದ್ದನು. ಶ್ರೀರಾಮನಲ್ಲದೆ ಇನ್ನಾರಾದರೂ ಹಾಗೆ ಹೇಳಿದ್ದಿದ್ದರೆ ಅಂಥವನ ಕೆನ್ನೆಗೆ ಪೆಟ್ಟೇ ಬೀಳುತ್ತಿತ್ತೆನ್ನಬಹುದು. ಅಂಥಾದ್ದು ಆಂಜನೇಯನ ರಾಮಭಕ್ತಿ. ತಾನು ತನ್ನ ಸ್ವಾಮಿಗೆ ಸಮಾನನಲ್ಲ; ಅದು ಎಂದಿಗೂ ಸಲ್ಲದು. ಇದು ಸದ್ಭೃತ್ಯಭಾವನೆ. ಇದೇ ದ್ವೈತಾನಂದ. ಸಾಮಾನ್ಯ ಲೌಕಿಕರಿಗೆ ದೇವರಪೂಜೆ ದೇವತಾಕೈಂಕರ್ಯಗಳು ಬೇರೊಂದು ಉದ್ದೇಶಕ್ಕೆ ಸಾಧನಗಳು ಮಾತ್ರ. ಅವರ ಮುಖ್ಯ ಸಂತೋಷವಿರುವುದು ಫಲ ನಿರೀಕ್ಷಣೆಯಲ್ಲಿ, — ಫಲಭೋಗದಲ್ಲಿ. ಅವರು ಬೇರೊಂದು ಪ್ರಯೋಜನಕ್ಕಾಗಿ ದೈವವನ್ನೊಲಿಸಿಕೊಳ್ಳಲು ಶ್ರಮಪಡುವವರು. ಆಂಜನೇಯನಂಥ ಮಹಾಭಕ್ತರಾದರೋ, ತಮ್ಮ ಹೃದಯದಲ್ಲಿರುವ ಭಕ್ತಿಯ ಅಭಿವ್ಯಕ್ತಿಯಿಂದಲೇ ತೃಪ್ತಿಪಡತಕ್ಕವರು. ತಮ್ಮ ಭಕ್ತಿಯನ್ನು ಭಗವಂತನು ಸ್ವೀಕರಿಸಿದ್ದೇ ಅವರ ಪಾಲಿಗೆ ಪರಮಲಾಭ. ಭಕ್ತಿಬಂಧನವೇ ಅವರ ಜಗದ್ಬಂಧನವನ್ನು ಕಳಚಿಹಾಕತಕ್ಕ ಸಾಧನ. ಭಗವದ್ದಾಸ್ಯವೇ ಲೋಕಪಾಶವಿಮೋಚನ. ಇಂಥ ಅಭಿರುಚಿಯಿಂದ ಆದದ್ದು ದ್ವೈತಭಾವನೆ.

ಭಕ್ತಿಗೆ ತೃಪ್ತಿಯು ಅಭಿವ್ಯಕ್ತಿಯಿಂದ. ಅದು ಮತ್ತೇನನ್ನೂ ಬೇಡುವುದಿಲ್ಲ. ತಾನು ಹರಿದು ಇಷ್ಟಸ್ಥಾನವನ್ನು ಸೇರುತ್ತಿರಬೇಕು. ಅದು ಪ್ರೀತಿಯ ಸ್ವಭಾವ.

ಆಕಳ ಕೆಚ್ಚಲಿನಲ್ಲಿ ಹಾಲು ತುಂಬಿ ಉಬ್ಬಿಕೊಂಡಿರುವಾಗ ಕರು ಬಂದು ಅದನ್ನು ಹೀರಿದರೆ ಆಕಳಿಗೆ ತೃಪ್ತಿ. ಕರು ಬಾರದಿದ್ದರೆ ಆಕಳಿಗೆ ತನ್ನ ಭಾಗ್ಯವೇ ಭಾರವಾಗುತ್ತದೆ. ಅದರಿಂದ ಆಕಳಿಗೆ ನೋವು. ತನ್ನ ಭಾಗ್ಯವನ್ನು ಇಷ್ಟದಿಂದ ತೆಗೆದುಕೊಳ್ಳುವ ಬಾಯ ತುಟಿ ಸೋಕಿದಾಗ ಆ ಆಕಳು ಎಲ್ಲವನ್ನೂ ಮರೆತು ತನ್ನ ಬಾಳು ಸಾರ್ಥಕವಾಯಿತೆಂದು ತಿಳಿದುಕೊಳ್ಳುತ್ತದೆ.

ಒಳ್ಳೆಯ ಕುದುರೆಗೆ ತೃಪ್ತಿ ಯಾವಾಗ? ಯಜಮಾನ ತನ್ನ ವೇಗವನ್ನು ಉಪಯೋಗಪಡಿಸಿಕೊಂಡಾಗ. ಈ ಶಕ್ತ್ಯಭಿವ್ಯಕ್ತಿಯ ತೃಪ್ತಿಯು ಕುದುರೆಗೆ ಹುಲ್ಲು ಹುರುಳಿಗಳಿಂದ ದೊರೆತ ತೃಪ್ತಿಗಿಂತ ಬಹಳ ಹೆಚ್ಚಿನದು.

ನಾಯಿಗೆ ಅತ್ಯಂತ ಸಂತೋಷ ಯಾವಾಗ? ತನ್ನಿಂದ ಒಂದು ಸ್ವಾಮಿಕಾರ್ಯ ನಡೆದಾಗ. ಅದು ಹಾಲು ರೊಟ್ಟಿ ಸಿಕ್ಕಿದಾಗ ಆಗುವುದಕ್ಕಿಂತ ಹೆಚ್ಚಿನ ಸಂತೋಷ. ಹೀಗೆ ಪ್ರೀತಿಯು ಒಬ್ಬ ಗ್ರಾಹಕನಿಗಾಗಿ ಹುಡುಕಾಡಿ ಅಲೆದಾಡಿ ಕಾದುಕೊಂಡಿರುತ್ತದೆ—ನದಿಯು ಸಮುದ್ರವನ್ನು ಹುಡುಕುವ ಹಾಗೆ.

ಮನುಷ್ಯಪ್ರೇಮದ ಪರಿಣಾಮವೂ ಹಾಗೆಯೇ. ತಾಯಿ ಮಗುವಿಗೆ ಹಾಲೂಡಿಸಿ, ಸಿಂಗರಿಸಿ, ಮುದ್ದಾಡುವಾಗ ಅದರಿಂದ ಏನನ್ನು ಬಯಸುತ್ತಾಳೆ? ಅದು ತನ್ನ ಪ್ರೀತಿಯನ್ನು ಸ್ವೀಕರಿಸಬೇಕೆಂದು ಮಾತ್ರ. ಮತ್ತೇನನ್ನೂ ಅಲ್ಲ. ಮಗುವಿನ ನಲಿವೇ ತಾಯಿಗೆ ಪ್ರತಿಫಲ. ಇಂಥಾದ್ದು ದ್ವೈತದ ಆನಂದ. ಇದೇ ಅಭಿಪ್ರಾಯವನ್ನೇ ಈ ಕೆಳಗಣ ನಾರದ ಭಕ್ತಿಸೂತ್ರಗಳು ಸೂಚಿಸುತ್ತವೆ:

> **ಸ್ವಯಂ ಫಲರೂಪತ ಇತಿ ಬ್ರಹ್ಮಕುಮಾರಃ ॥**
> **ರಾಜಗೃಹಭೋಜನಾದಿಷು ತಥೈವ ದೃಷ್ಟತ್ವಾತ್ ॥**
> **ನ ತೇನ ರಾಜಪರಿತೋಷಃ ಕ್ಷುಚ್ಛಾನ್ತಿರ್ವಾ ॥**

(ಅಧ್ಯಾಯ ೨: ಸೂ ॥ ೩೦-೩೨)

ಭಕ್ತಿಗೆ ಅದೇ ಫಲ. ಯಾವ ವಿಷಯದಲ್ಲಿ ನಾವು ಭಕ್ತಿ ತೋರಿಸುತ್ತೇವೋ ಆ ವಿಷಯವನ್ನು ನಾವು ಅನುಭವಿಸಿದ ಆನಂದವೇ ಭಕ್ತಿಗೆ ಪ್ರತಿಫಲ. ಅರಮನೆಗೆ ನಾವು ಹೋದಾಗ ಅಲ್ಲಿಯ ಸೌಂದರ್ಯದರ್ಶನ ಸುಖಭೋಜನ ಮೊದಲಾದ ಅನುಭವಗಳಲ್ಲಿ ನಮಗಾಗುವಂತೆ. ಅರಮನೆಯಿಂದ ರಾಜನಿಗಾದ ತೃಪ್ತಿ. ಅಲ್ಲಿಯ ಭೋಜನದಿಂದ ರಾಜನಿಗಾದ ಹಸಿವು ತೀರಿಕೆ—ಇವು ಅಲ್ಲಿಗೆ ಹೋದ ಅತಿಥಿಗೆ ಸೇರಿದವಲ್ಲ. ಅತಿಥಿಗೆ ಆದ ಲಾಭವೇನಿದ್ದರೂ ಅವನು ಅಲ್ಲಿ ಕಂಡ, ಅವನು ಅಲ್ಲಿ ಉಂಡ ಅನುಭವ. ಅತಿಥಿ ಅಲ್ಲಿಂದ ಆ ಸಂತೋಷದ ಹೊರತು ಏನನ್ನೂ ಹಿಂದಕ್ಕೆ ತರುವುದಿಲ್ಲ.

ನಾವು ಲಾಲ್‌ಬಾಗಿಗೆ ಹೋಗಿ ತಿರುಗಾಡುತ್ತೇವೆ. ಅದಕ್ಕೇನು ಪ್ರತಿಫಲ? ಆ ವಾತಾವರಣದಲ್ಲಿ ತಿರುಗಾಡಿದ್ದರ ಅನುಭವವೇ ಪ್ರತಿಫಲ. ಎಳೆಯ ಮಗುವನ್ನು ನೋಡಿದಾಗ ಎತ್ತಿಕೊಂಡು ಮುದ್ದಾಡಬೇಕೆನಿಸುತ್ತದೆ. ಅದಕ್ಕೇನು ಪ್ರತಿಫಲ? ಅದಕ್ಕೆ ಅದೇ ಪ್ರತಿಫಲ. ಪ್ರೀತಿಗೆ ತದನುಭವವೇ ಪ್ರತಿಫಲ. ಎಲ್ಲ ದೊಡ್ಡ ಕಲಾಕೃತಿಯ ಅನುಭವವೂ ಇಂಥದೇ.

ಒಬ್ಬ ಗೋಪಿಕೆ ಹೀಗೆ ಹೇಳಿದಳಂತೆ—

> **ಆಶ್ಲಿಷ್ಯ ವಾ ಪಾದರತಾಂ ಪಿನಷ್ಟು ಮಾಮ್ ।**
> **ಅದರ್ಶನಾನ್ಮರ್ಮಹತಾಂ ಕರೋತು ವಾ ॥**
> **ಯಥಾ ತಥಾ ವಾ ವಿದಧಾತು ಲಂಪಟೋ ।**
> **ಮತ್ಪ್ರಾಣನಾಥಸ್ತು ಸ ಏವ ನಾಪರಃ ॥**

"ಪಾದ ಹಿಡಿದು ಬಿದ್ದಿರುವ ನನ್ನನ್ನು ಕೃಷ್ಣನು ಎತ್ತಿಹಿಡಿದು ಆಲಿಂಗಿಸಿಕೊಂಡು ಹಿಸುಕಿ ಮರ್ದಿಸಲಿ; ಅಥವಾ ನನ್ನ ಕಣ್ಣಿಗೆ ಕಾಣಿಸದೆ ಎಲ್ಲೋ ಮರೆಯಲ್ಲಿದ್ದುಕೊಂಡು ನನ್ನ ಸರ್ವಾಂಗಗಳಲ್ಲಿಯೂ ತಾಪವುಂಟುಮಾಡಲಿ. ಅ ಮಹಾರಸಿಕನು ತನಗೆ ಹೇಗೆ ಇಷ್ಟಬರುತ್ತದೋ ಹಾಗೆ ಮಾಡಲಿ. ಹೇಗಾದರೂ ಅವನೇ ನನ್ನ ಪ್ರಾಣಗಳಿಗೆ ಒಡೆಯನು; ಅವನ ಹೊರತು ನನ್ನ ಸ್ವಾಮಿ ಬೇರೆಯಲ್ಲ."

ಇದು ಒಂದು ಸ್ವಭಾವಜಾತಿ (Type). ಈ ಜಾತಿಯಲ್ಲಿ, ಪ್ರೇಮರಸವನ್ನು ಸ್ವೀಕರಿಸಲು ಇಷ್ಟನಾದ ಗ್ರಾಹಕನು ಯಾರಿಗೆ ದೊರೆತಿಲ್ಲವೋ ಅವನೇ ನಿರ್ಭಾಗ್ಯ. ಪ್ರೇಮವು ಹೃದಯದಲ್ಲಿ ಉಕ್ಕಿ ಉಕ್ಕಿ ಬರುತ್ತದೆ. ಆಗ ಅದನ್ನು ಆದರಿಸಿ ತೆಗೆದುಕೊಳ್ಳುವವರಿಲ್ಲದೆ ಹೋದಾಗ ಬಾಳು ಸಾವಿಗಿಂತ ಕೀಳಾಗುತ್ತದೆ; ಜಗತ್ತು ಸುಡುಗಾಡಾಗುತ್ತದೆ.

ಇಂಥ ಪ್ರೇಮಪರವಶತೆ ಯಾರ ಸ್ವಭಾವಘಟನೆಯಲ್ಲಿ ಪ್ರಧಾನಾಂಶವಾಗಿರುತ್ತದೆಯೋ ಅವರಿಗೆ ದ್ವೈತ ಹೆಚ್ಚು ರುಚಿಸುತ್ತದೆ. ಅದು ಒಂದು ಸ್ವಭಾವಸಿದ್ಧವಾದ ಹೃದಯಜಾತಿ. ಅಲ್ಲಿ ಪ್ರೇಮಾಭಿರುಚಿಯೇ ತತ್ತ್ವನಿರ್ಣಾಯಕವಾದ ಸಂಗತಿ. ಪ್ರೇಮಾನುಭೂತಿಯೇ ಮೋಕ್ಷ. ಭಗವದ್ವಸ್ತು ಇರಬೇಕು: ಅದಕ್ಕೆ ನಾನು ಪ್ರೀತಿಸೇವೆ ಮಾಡಬೇಕು; ನನ್ನ ಸೇವೆಯನ್ನು ಅದು

ಅಂಗೀಕರಿಸಬೇಕು. ಅದೇ ನನ್ನ ಸಂತೋಷ. ಹೀಗೆ ವಸ್ತುದ್ವಿತಯಾಪೇಕ್ಷಿಯಾದದ್ದು ದ್ವೈತಪ್ರಸಂಗ. ಅದೇ ಜೀವದ ಸ್ವತಾಸಮರ್ಪಣಾನಂದ.

ವಿಶಿಷ್ಟಾದ್ವೈತದರ್ಶನ

ಸೌಭ್ರಾತ್ರಸದೃಶವಾದ ಸ್ವತಾಸಹಭಾಗಿತ್ವಕ್ಕೆ ರಾಮಲಕ್ಷ್ಮಣರ ಪರಸ್ಪರ ವಾತ್ಸಲ್ಯ ದೃಷ್ಟಾಂತ. ಎಷ್ಟೋ ವಿಷಯಗಳಲ್ಲಿ ಆ ಇಬ್ಬರೂ ಬೇರೆಬೇರೆ. ಮುಖ್ಯಮುಖ್ಯ ಧ್ಯೇಯಗಳಲ್ಲಿ ಇಬ್ಬರದೂ ಒಂದೇ ಮನಸ್ಸು. ರಾಮನು ನಿರುತ್ಸಾಹಿಯಾದಾಗ ಲಕ್ಷ್ಮಣ ಧೈರ್ಯವನ್ನು ಉಪದೇಶಿಸುತ್ತಾನೆ. ರಾಮನು ಅಜಾಗರೂಕನಾಗಿದ್ದಾಗ ಲಕ್ಷ್ಮಣ ಎಚ್ಚರಿಕೆ ಕೊಡುತ್ತಾನೆ. ರಾಮನ ಸುಖವೇ ಲಕ್ಷ್ಮಣನ ಸುಖ. ಆದರೆ ಅಣ್ಣನ ಸುಖಭೋಗದಲ್ಲಿ ತಮ್ಮ ಭಾಗಿಯಾಗಲೊಲ್ಲ. ರಾಮನ ಜಯದಲ್ಲಿ ಲಕ್ಷ್ಮಣನಿಗೆ ಜಯ. ಆದರೆ ಇಂದ್ರಜಿತ್ತಿನ ಮೇಲೆ ಅಸ್ತ್ರ ಪ್ರಯೋಗ ಮಾಡಿದಾಗ ಲಕ್ಷ್ಮಣನು—

> **ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ ॥**

“ರಾಮನ ಸತ್ಯಧರ್ಮನಿಷ್ಠೆಯಿಂದ ಈ ಬಾಣ ಜಯಿಸಲಿ” ಎಂದ. ಜಯವು ತನ್ನ ಸಂಪಾದನೆ ಎಂದುಕೊಳ್ಳಲಿಲ್ಲ. ಇದು ಭಕ್ತಿಮಯವಾದ ಸ್ವತಾಸಹಭಾಗಿತ್ವ.

ಸೀತೆ, ರುಕ್ಮಿಣಿ ಮೊದಲಾದ ಸಾಧ್ವಿಯರ ಚರಿತ್ರೆಯೂ ಇಲ್ಲಿ ದೃಷ್ಟಾಂತ. ಅವರು ಸರ್ವದಾ ಪ್ರಿಯಸಾಹಚರ್ಯವೊಂದನ್ನೇ ಬೇಡುವವರು. ಪ್ರಣಯದ ದಾನಾದಾನದಿಂದಲೇ ಅವರ ಆನಂದ. ಅವರ ಪ್ರಣಯಕ್ಕೆ ಪಾತ್ರ ಒಂದು ಬೇಕು. ಭಗವಂತನೇ ಆ ಪಾತ್ರ. ಭಗವಂತನು ಸ್ವೀಕಾರಿ, ಭಕ್ತನು ಸ್ವೀಕೃತ—ಹೀಗೆ ಅಂಶದ್ವಯವು ಇಲ್ಲಿ ಅಪೇಕ್ಷಿತವಾಗಿದೆ. ಹಾಗಿದ್ದರೂ ಅವೆರಡೂ ಕೆಲವು ಸಂದರ್ಭಗಳಲ್ಲಿ ಐಕ್ಯಹೊಂದುತ್ತವೆ. ಪ್ರಿಯನು ಪ್ರೇಯಸಿಯ ಸನ್ನಿಧಿಯಲ್ಲಿ ತನ್ನ ಪ್ರತ್ಯೇಕತ್ವವನ್ನು ಕಳೆದುಕೊಳ್ಳುತ್ತಾನೆ. ಹಾಗೆಯೇ ಪ್ರೇಯಸಿಯು ಪ್ರಿಯಸಾನ್ನಿಧ್ಯದಲ್ಲಿ ತನ್ನ ಪ್ರತ್ಯೇಕತ್ವವನ್ನು ಕಳೆದುಕೊಳ್ಳುತ್ತಾಳೆ. ಸೀತಾದೇವಿ ಎಷ್ಟೋ ಸಂದರ್ಭದಲ್ಲಿ ತನ್ನ ಪತಿಯನ್ನು ಅಕ್ಷೇಪಿಸಿದ್ದಾಳೆ; ಆತನಿಗೆ ನೀತಿಬೋಧನೆ ಮಾಡಿದ್ದಾಳೆ. ರುಕ್ಮಿಣಿಗೂ ಕೃಷ್ಣನಿಗೂ ಜಗಳ ನಡೆದದ್ದುಂಟು. ಅಂಥ ಸಲಿಗೆಯೇ—ಅಂಥ ಅನ್ಯೋನ್ಯಾಧಿಕಾರವೇ—ಅಂಥ ಅನ್ಯೋನ್ಯ ಸ್ವಾತಂತ್ರ್ಯವೇ ಅಂತರಂಗೈಕ್ಯದ ಲಕ್ಷಣ. ಅದೇ ಸ್ವತಾಸಹಭಾಗಿತ್ವ. ಅದು ವಿಶಿಷ್ಟಾದ್ವೈತಭಾವನೆಯ ಆಂತರ್ಯ. ಅದು ಅಭೇದವೃತ್ತಿಯೇ ಹೌದು, ಆದರೆ ಕಿಂಚಿದ್ಭೇದಗರ್ಭಿತವಾದ ಅಭೇದ. ಗಂಡಹೆಂಡಿರು ಒಬ್ಬರಿಗಿನ್ನೊಬ್ಬರು ಸಮಾನರೇ; ಆದರೂ

ಹೆಂಡತಿ ಗಂಡನನ್ನು ಮನಸಾ ಗೌರವಿಸುತ್ತಾಳೆ. ತಂದೆ ಮಗ ಅಭೇದವಾಗಿಯೇ ನಡೆದುಕೊಳ್ಳುತ್ತಾರೆ; ಆದರೂ ಮಗನ ಮನಸ್ಸಿನಲ್ಲಿ ತಾರತಮ್ಯಸ್ಮೃತಿ ಉಳಿದುಕೊಂಡಿರುತ್ತದೆ. ಸಮುದ್ರದಲ್ಲಿ ನೀರು ಬೇರೆ, ಅಲೆ ಬೇರೆ ಅಲ್ಲ; ಎರಡೂ ಒಂದೇ; ಆದರೂ ಅಲೆಯು ಅಲೆಯಾಗಿರುವಷ್ಟುಮಟ್ಟಿಗೆ ಬೇರೆ. ಇದನ್ನೇ ಶಂಕರಾಚಾರ್ಯರ ಮಾತು ಸೂಚಿಸುತ್ತದೆ:

> **ಸಾಮುದ್ರೋ ಹಿ ತರಂಗಃ**
> **ಕ್ವಚನ ಸಮುದ್ರೋ ನ ತಾರಂಗಃ ॥**

ತರಂಗವು (ಅಲೆ) ತರಂಗಾಕಾರದಲ್ಲಿರುವಾಗ ಶಕ್ಯವಾದ ದೃಷ್ಟಿಯೊಂದು; ತರಂಗವು ಸಮುದ್ರರಾಶಿಯಲ್ಲಿ ಲಯವಾದ ಬಳಿಕ ಶಕ್ಯವಾದ ದೃಷ್ಟಿ ಇನ್ನೊಂದು. ವಿಶಿಷ್ಟಾದ್ವೈತವು ಸಮುದ್ರದ ತರಂಗಲೀಲೆಯ ಮೇಲೆ ದೃಷ್ಟಿಯಿರಿಸಿರುತ್ತದೆ. ಕಡಲ ಅಲೆಗೆ—ತಾನು ಅಲೆ; ತಾನು ಕಡಲಿನಿಂದ ಎದ್ದಿರುವವನು; ತಾನು ಕಡಲಿನಲ್ಲಿಯೇ ಸೇರತಕ್ಕವನು; ತಾನು ಕಡಲಿನ ಅಂಶವೇ ಆದವನು; ಕಡಲಿನ ವಿಲಾಸದಲ್ಲಿ ತನ್ನ ಸ್ಥಾನ; ಅದೇ ತನ್ನ ಪುಣ್ಯ, —ಹೀಗೆಂಬ ಧ್ಯಾನವೇ ಅಲೆಯ ಆನಂದ. ಇದೂ ಒಂದು ಮನುಷ್ಯನೈಜವಾದ ಮನೋವೃತ್ತಿ. ದೊಡ್ಡವರೊಡನೆ ಸಣ್ಣದು ಒಂದುಗೂಡಿ ಒಂದಾಗಿರಬೇಕು; ಆದರೂ ಸಣ್ಣದು ತಾನು ಸೇರಿಕೊಂಡದ್ದು ದೊಡ್ಡದೆಂಬುದನ್ನು ಮರೆಯಬಾರದು. ಏಕತ್ವದ ಒಳಗಡೆ ದ್ವಿತ್ವದ ಮರ್ಯಾದೆ, ಹಾಲಿನ ಪಾತ್ರೆಯಲ್ಲಿ ತೇಲುತ್ತಿರುವ ತುಪ್ಪದ ಗಡ್ಡೆಯಂತೆ. ಇದೂ ಒಂದು ಸ್ವಭಾವಜಾತಿ (Type). ಅದೇ ವಿಶಿಷ್ಟಾದ್ವೈತ.

ಅದ್ವೈತಭಾವನೆ

ಇನ್ನು ಸ್ವತಾವಿಲಯನರೂಪವಾದ ಅದ್ವೈತದ ವಿಚಾರ. ಇದರಲ್ಲಿ ತಾನು ಬೇರೆ, ಧ್ಯೇಯವಸ್ತು ಬೇರೆ ಎಂಬ ಭೇದಸ್ಮರಣೆ ಅಳಿಸಿಹೋಗುತ್ತದೆ.

ತಂದೆ ಮಕ್ಕಳಲ್ಲಿ ಮಗನು ಎಳೆಕೂಸಾಗಿದ್ದಾಗ ಅವನ ವ್ಯಕ್ತಿಭಾವ ತಂದೆಯಲ್ಲಿ ಐಕ್ಯಗೊಂಡಿರುತ್ತದೆ. ಮಗುವಿನ ಬೇರೆತನ ತೋರುವುದು ದೈಹಿಕಜೀವನದಲ್ಲಿ ಮಾತ್ರ. ಮಿಕ್ಕೆಲ್ಲ ವ್ಯಾಪಾರಗಳಲ್ಲಿಯೂ ಮಗನು ತಂದೆಯಲ್ಲಿ ಸೇರಿಹೋಗಿರುತ್ತಾನೆ. ಅವನಿಗೆ ಬೇರೆತನವಿಲ್ಲ. ತಂದೆ ತುಂಬ ಮುದುಕನಾದಾಗಲೂ ಮಗನು ಮಾಡಿದ್ದೆಲ್ಲ ತಂದೆಯ ಮಾಡಿಕೆಯೇ. ದೇಹಜೀವನದ ವಿನಾ ತಂದೆಯ ಸರ್ವಾಧಿಕಾರವೂ ಮಗನ ಕೈಯಲ್ಲಿರುತ್ತದೆ. ಮಗು ಮುದುಕರ ಮಾತೇ ಏಕೆ, ನಡುವಯಸ್ಸಿನಲ್ಲಿಯೂ ಎಷ್ಟೋ ಸಂದರ್ಭದಲ್ಲಿ ಮಗನೇ ತಂದೆ, ತಂದೆಯೇ ಮಗ.

> **ಆತ್ಮಾ ವೈ ಪುತ್ರನಾಮಾಸಿ ॥**

ಎಂಬುದು ಶ್ರುತಿಯ ತಾತ್ಪರ್ಯ. ದೇಹೋಪಕರಣಗಳು ಬೇರೆಬೇರೆ; ಜೀವಸತ್ತ್ವ ಒಂದೇ— ಎಂದು ಭಾವನೆ.

ಸತಿಪತಿಯರ ಉಪಮಾನದಲ್ಲಿ ಉಭಯೈಕ್ಯದ ನಿದರ್ಶನ ಇನ್ನೂ ಚೆನ್ನಾಗಿ ದೊರೆಯುತ್ತದೆ. ಅದ್ವೈತಭಾವನೆಯು ಪ್ರಣಯಾನುಭವದ ಪರಮೋನ್ನತಿ. ಈ ಕೆಳಗಣ ವಾಕ್ಯ ಬೃಹದಾರಣ್ಯಕೋಪನಿಷತ್ತಿನದು:

> **ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದನಾನ್ತರಮ್ ।**
> **ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದನಾನ್ತರಮ್ ।**
> **ತದ್ವಾ ಅಸ್ಯೈತದಾಪ್ತಕಾಮಂ ಆತ್ಮಕಾಮಂ ಅಕಾಮಗ್ಂ ರೂಪಗ್ಂ ಶೋಕಾನ್ತರಮ್ ।**
> **ಅತ್ರ ಪಿತಾಽಪಿತಾ ಭವತಿ ಮಾತಾಽಮಾತಾ ಲೋಕಾ ಅಲೋಕಾ ದೇವಾ ಅದೇವಾ ವೇದಾ ಅವೇದಾಃ ॥ (೪.೩. ೨೧-೨೨)**

“ಪ್ರಿಯೆಯ ಗಾಢಾಲಿಂಗನದಲ್ಲಿರುವಾತನಿಗೆ ಹೊರಗಿನದೆಂಬುದರ ನೆನಪಿಲ್ಲ, ಒಳಗಿನದೆಂಬುದರ ನೆನಪಿಲ್ಲ, ಅವನು ತನ್ನ ಇಷ್ಟಾರ್ಥವು ಕೈಗೂಡಿದ್ದರಿಂದ ಆಶೆಗಳಿಲ್ಲದವನು, ಶೋಕದಿಂದ ದೂರವಾದವನು. ಆಗ ಅವನಿಗೆ ಯಾವ ಬಂಧುವಿನ ಸ್ಮೃತಿಯೂ ಯಾವ ಲೋಕಸಂಬಂಧದ ಸ್ಮೃತಿಯೂ ಇರುವುದಿಲ್ಲ. (ತನ್ನ ನೆನಪು ಕೂಡ ಇರುವುದಿಲ್ಲ.) ಎಲ್ಲ ಅಖಂಡೈಕವಾಗಿರುತ್ತದೆ ಆಗ.”

ಪ್ರಣಯವು ಪ್ರಾರಂಭದಲ್ಲಿ ದ್ವೈತ; ಸರಸಸಲ್ಲಾಪಗಳಲ್ಲಿ ವಿಶಿಷ್ಟಾದ್ವೈತ; ಪ್ರಣಯ ಶಿಖರದಲ್ಲಿ ದ್ವೈತತಾವಿಸ್ಮೃತಿ, ಅಭೇದವೃತ್ತಿ, ಅದ್ವೈತ.

ಪ್ರೇಮಿಯು ಪ್ರೇಮವಿಷಯಧ್ಯಾನದಿಂದ ಕ್ರಮೇಣ ತಾದಾತ್ಮ್ಯವನ್ನು ಪಡೆದು, ಅದ್ವಯಭಾವದಲ್ಲಿ ಪರಿಸಮಾಪ್ತಿಗೊಳ್ಳುವನೆಂಬುದಕ್ಕೆ ವಿಷ್ಣುಪುರಾಣದ ಈ ಕೆಳಗಣ ಶ್ಲೋಕಗಳು ದೃಷ್ಟಾಂತವನ್ನೊದಗಿಸುತ್ತವೆ. ರಾಧಾಮಾಧವರ ಲೀಲೆಗಳಲ್ಲಿ ಆಕೆ ಕೃಷ್ಣ ವಿರಹವನ್ನು ಸಹಿಸಲಾರದವಳಾಗಿ, ಕೃಷ್ಣನನ್ನೇ ಧ್ಯಾನಮಾಡುತ್ತ, ಕ್ರಮೇಣ ಆತನನ್ನೇ ಭಾವಿಸಿ, ಆತನನ್ನೇ ಅನುಕರಿಸಿ, ಕಡೆಗೆ ತಾನೇ ಕೃಷ್ಣನೆಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡು ಚೇಷ್ಟೆಮಾಡುತ್ತ, ಕೃಷ್ಣನಂತೆಯೇ ಆದಳು.

ಗೋಪ್ಯಶ್ಚ ಬೃಂದಶಃ ಕೃಷ್ಣಚೇಷ್ಟಾಸ್ವಾಯತ್ತಮೂರ್ತಯಃ ।
ಕೃಷ್ಣೇ ನಿಬದ್ಧಹೃದಯಾ ಇದಮೂಚುಃ ಪರಸ್ಪರಮ್ ॥
ಕೃಷ್ಣೋಽಹಂ ಏಷ ಲಲಿತಂ ವ್ರಜಾಮ್ಯಾಲೋಕ್ಯತಾಂ ಗತಿಃ ।
ಅನ್ಯಾ ಬ್ರವೀತಿ ಕೃಷ್ಣಸ್ಯ ಮಮ ಗೀತಿರ್ನಿಶಮ್ಯತಾಮ್ ॥
ದುಷ್ಟ ಕಾಲೀಯ ತಿಷ್ಠಾತ್ರ ಕೃಷ್ಣೋಽಹಮಿತಿ ಚಾಪರಾ ।
ಬಾಹುಮಾಸ್ಫೋಟ್ಯ ಕೃಷ್ಣಸ್ಯ ಲೀಲಯಾ ಸರ್ಪಮಾದದೇ ॥

–ವಿಷ್ಣುಪುರಾಣ (ಅಂಶ ೫, ಅಧ್ಯಾಯ ೧೩)

ಇದನ್ನೇ ಭ್ರಮರಕೀಟನ್ಯಾಯವೆಂದು ಹೇಳುವುದುಂಟು. ದುಂಬಿಯು ಒಂದು ಹುಳುವನ್ನು ಹಿಡಿದು ತನ್ನ ಮುಂದಿರಿಸಿಕೊಂಡು ಭಕ್ಷಣಮಾಡಬೇಕೆಂದು ಸಂಕಲ್ಪಿಸಿ, ಆ ಹುಳುವಿನ ಬಲ ಕುಗ್ಗಲಿ ಎಂದು ಸಮಯ ಕಾಯುತ್ತಿರುತ್ತದೆ. ಆ ಹುಳುವಾದರೋ ಭಯದಿಂದ ದುಂಬಿಯನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿರುತ್ತದೆ. ಹೀಗೆ ದುರ್ಬಲವಾದ ಹುಳು ಬಲಿಷ್ಠವಾದ

ದುಂಬಿಯನ್ನು ನೋಡುತ್ತ ನೋಡುತ್ತ ಅದರ ಆಕಾರ ಚೇಷ್ಟೆಗಳನ್ನೇ ತನ್ನ ಮನಸ್ಸಿನಲ್ಲಿ ಧ್ಯಾನಿಸುತ್ತಿರುತ್ತದಂತೆ. ಹೀಗೆ ಆ ಕೀಟವು ಸಂತತವಾದ ಭ್ರಮರಧ್ಯಾನದಿಂದ ಬರುಬರುತ್ತ ತಾನೇ ಭ್ರಮರವಾಗಿಬಿಡುತ್ತದಂತೆ.

> **ಕೀರ್ತೌ ಕೀರ್ತೌ ನಸ್ತದಾಕಾರವೃತ್ತಿಃ ।**
> **ವೃತ್ತೌ ವೃತ್ತೌ ಸಚ್ಚಿದಾನಂದಭಾಸಃ ॥**

ಇದೇ ಸತಾವಿಲಯನ—ಜೀವತ್ವವಿಸರ್ಜನ.

ಅದ್ವೈತಿಗಳ ಇನ್ನೊಂದು ಮಹಾವಾಕ್ಯವಾದ

> **"ಅಹಂ ಬ್ರಹ್ಮಾಸ್ಮಿ"**

ಎಂಬಲ್ಲೂ ಅಹಂತಾವಿಲಯನವೇ ತಾತ್ಪರ್ಯ. ನಾನೆಂಬ ವಸ್ತುವು ಬ್ರಹ್ಮದಿಂದ ಬೇರೆಯಾದದ್ದಲ್ಲ, ಬ್ರಹ್ಮದ ಒಳಗೇ ಸೇರಿದ್ದು, ಬ್ರಹ್ಮದಲ್ಲಿ ಸೇರಬೇಕಾದದ್ದು, "ಲೀಯೇ ಪರಬ್ರಹ್ಮಣಿ" —ಎಂದು ತಾತ್ಪರ್ಯ. ಇಲ್ಲಿ ಬ್ರಹ್ಮವೆಂದರೆ ಸರ್ವ, ಸಮಸ್ತ, ಯಾವಯಾವುದು ನಿಜವಾಗಿ ಉಂಟೋ ಅದರ ಒಟ್ಟು—ಎಂದರ್ಥ. ಬ್ರಹ್ಮಾಹಮ್, ಸರ್ವೋಹಮ್—ಎಂಬ ಮಾತುಗಳ ಅಂತರ್ಭಾವ ಬ್ರಹ್ಮವನ್ನು ಬಿಟ್ಟು ನಾನು ಇಲ್ಲ, ಸರ್ವದಿಂದ ಹೊರತಾಗಿ ನಾನಿಲ್ಲ —ಹೀಗೆಂಬ ಅಹಂತಾಪ್ರತ್ಯೇಕತಾನಾಶ. ಅದೇ ಅದ್ವೈತ. ಅದು ಅಹಂತಾಸ್ಥಾಪನೆಯಲ್ಲ., ಅಹಂತಾಪ್ರತಿಷ್ಠೆಯಲ್ಲ; ಅಹಂತಾವಿಸರ್ಜನ, ಅಹಂತಾ ವಿಲಯನ.

ಮತತ್ರಯಸದೃಶವಾದ ವ್ಯವಹಾರ ಎಲ್ಲ ಸತ್ಕುಟುಂಬಗಳಲ್ಲೂ ಸತಿಪತಿಯರ ಅನ್ಯೋನ್ಯದಲ್ಲಿ ಸ್ವಾಭಾವಿಕವಾಗಿ ಉಂಟಾದದ್ದೇ.

ನಿತ್ಯಗೃಹಕೃತ್ಯದಲ್ಲಿ ಸ್ತ್ರೀಕರ್ತವ್ಯಗಳೂ ಪುರುಷಕರ್ತವ್ಯಗಳೂ ಬೇರೆಬೇರೆಯಾಗಿರುತ್ತವೆ. ಪಾಕಪರಿಚರ್ಯಾದಿ ವಿಷಯಗಳಲ್ಲಿ ಆಕೆ ಸೇವಕಿ, ಆತನು ಸ್ವಾಮಿ. ದ್ರವ್ಯಸಂಪಾದನೆ ಕುಟುಂಬಭರಣಾದಿ ವಿಷಯಗಳಲ್ಲಿ ಅವನು ಸೇವಕ, ಆಕೆ ಸ್ವಾಮಿನಿ. ಹೀಗೆ ನಿತ್ಯಗಟ್ಟಲೆಯ ಜೀವನವು ದ್ವೈತಮರ್ಯಾದೆಯದು. ಅದರಲ್ಲಿ ಒಬ್ಬರಿಗಿನ್ನೊಬ್ಬರ ವಿಷಯದಲ್ಲಿರುವ ಪ್ರೀತಿ

ಭಯ ಗೌರವಗಳು ಅವನ ಅಥವಾ ಅವಳ ಅಹಂತೆಯ ದರ್ಪವನ್ನು ಸವೆಯಿಸುತ್ತವೆ. ಸ್ವೀಕೃತನಾದೆನೆಂಬ ಸಂತುಷ್ಟಿಯ ಪ್ರಸಾದ ಲಭಿಸುತ್ತದೆ.

ಅದೇ ದಂಪತಿಗಳಲ್ಲಿ ದೈವಪೂಜಾದಿ ಧರ್ಮಕಾರ್ಯಗಳಲ್ಲಿಯೂ ವಿವಾಹಾದ್ಯುತ್ಸವಗಳಲ್ಲಿಯೂ ಬಂಧೂಪಚಾರದ ವೇಳೆಗಳಲ್ಲಿಯೂ ಅವರಿಬ್ಬರಿಗೂ ಅಂಶಾಂಶಿಭಾವ, ಅಥವಾ ಶೇಷಶೇಷಿಭಾವ. ಆ ಇಬ್ಬರಲ್ಲಿ ಯಾರೊಬ್ಬರೂ ಸ್ವತಂತ್ರಿಸಿ ಕೆಲಸ ನಡಸುವಹಾಗಿಲ್ಲ. ಇಬ್ಬರೂ ಬೇಕು, ಆದರೆ ಇಬ್ಬರೂ ಒಂದಾಗಿರಬೇಕು. ಯಾವ ಒಬ್ಬರಿಂದಲೂ ಪ್ರಸಕ್ತ ಕರ್ತವ್ಯವು ಪೂರ್ತಿಯಾಗದು. ಸಹಭಾಗಿತ್ವವು ಇಲ್ಲಿಯ ಮರ್ಯಾದೆ. ಅದೇ ವಿಶಿಷ್ಟಾದ್ವೈತ ಮಾರ್ಗ, ಭಗವದ್ವೈಭವದ ಅನುಭವದಲ್ಲಿ ಜೀವದ ಸ್ವಾಹಂಕಾರವು ಕಳಚಿ ಬಿದ್ದು ಹೋಗುತ್ತದೆ. ಅದೇ ಮುಕ್ತಿ.

ಇನ್ನು ಅದ್ವೈತ ಪ್ರಕ್ರಿಯೆಯನ್ನು ನೋಡೋಣ. ಪ್ರಿಯದಾಂಪತ್ಯದ ಉಪಮಾನವೇ ಇಲ್ಲಿಯೂ ಹೊಂದುತ್ತದೆ. ಅತ್ಯಂತಾಪ್ತತೆಯ ಹೊತ್ತಿನಲ್ಲಿ ಅವರಿಬ್ಬರ ಬೇರೆ ಬೇರೆತನ ಮರೆತುಹೋಗುತ್ತದೆ. ನೀನೇ ನಾನು, ನಾನೇ ನೀನು ಎಂದಾಗುತ್ತದೆ. ನಾನು—ನೀನು ಎಂಬ ನೆನಪೇ ಆಗ ಇರುವುದಿಲ್ಲ. ಅದೇ ಸ್ವತೆಯ ಪೂರ್ಣವಿಲಯನ. ಜೀವನ ಜೀವತ್ವ ಕರಗಿಹೋದಾಗ ಉಳಿಯುವುದು ಆತ್ಮವೊಂದೇ ತಾನೆ? *

> **ತತ್ರ ಕೋ ಮೋಹಃ ಕಃ ಶೋಕಃ**
> **ಏಕತ್ವಮನುಪಶ್ಯತಃ ॥**

—ಈಶೋಪನಿಷತ್ತು

ಹೀಗೆ ಒಂದೇ ದಾಂಪತ್ಯದಲ್ಲಿ ದ್ವೈತ ವಿಶಿಷ್ಟಾದ್ವೈತ ಅದ್ವೈತ ಭಾವನೆಗಳು ಮೂರೂ ಕಾಲಾವಸ್ಥಾನುಸಾರವಾಗಿ ಅನುಭೂಯಮಾನಗಳಾಗಿವೆ.

ತ್ರಿಮತಗಳೂ ಭಗವದುಪಾಸನೆಯ ಮಾರ್ಗತ್ರಯಗಳೆಂಬುದನ್ನು ಮಹಾ ಅನುಭವಶಾಲಿಗಳಾದ ಮಧುಸೂದನಸರಸ್ವತಿಗಳವರು ಸಂಗ್ರಹವಾಗಿ ಹೇಳಿದ್ದಾರೆ:

ತಸ್ಮೈವಾಹಂ ಮಮೈವಾಸೌ ಸ ಏವಾಹಮಿತಿ ತ್ರಿಧಾ ।
ಭಗವಚ್ಛರಣತ್ವಂ ಸ್ಯಾತ್ ಸಾಧನಾಭ್ಯಾಸಪಾಕತಃ ॥
ಹರಿಯವನಾಂ ತದ್ಭೃತ್ಯಂ ।
ಹರಿಯೆನ್ನವನೆನ್ನಿನಗಲದಭಿಮಾನಿಯವಂ ॥
ಹರಿಯಿಂ ಪೆರನಲ್ತಾನೀ ।
ಶರಣತ್ರಿವಿಧಂ ಸ್ವಭಾವರುಚಿರೂಢಿಗಳಿಂ ॥

ಇದು ಸಮರಸಮಾರ್ಗ.

1. **“ತಸ್ಮೈವಾಹಂ” :** ನಾನು ಭಗವಂತನಿಗೆ ಸೇರಿದವನು, ನನ್ನದೇನೂ ಯಾವುದೂ ಅಲ್ಲ, ನಾನು ಭಗವದಧೀನ, ಭಗವತ್ಸೇವಕ, ಭಗವದ್ವಿಧೇಯ. ಇದು ದ್ವೈತ.
2. **“ಮಮೈವಾಸೌ” :** ಭಗವಂತನು ನನ್ನವನು, ಮಗುವು-ತನ್ನ ತಾಯಿ ತನ್ನ ಒಡವೆ; ಮತ್ತಾರವಳೂ ಅಲ್ಲ, ಆಕೆಯ ಮೇಲೆ ತನಗೊಬ್ಬನಿಗೇ ಹಕ್ಕು-ಎಂದುಕೊಂಡಿರುತ್ತದೆ; ಈ ಸ್ವೀಯಸರ್ವಸ್ವತಾಭಾವವೇ “ಏವ” ಎಂಬುದರ ಧ್ವನಿ. (ಮಮ+ಏವ, ನಾನ್ಯಸ್ಯ) ಇದು ಪ್ರೀತಿಯ ಅತಿರೇಕ. ಇದರಲ್ಲಿ ನಾನು ಎಂಬುದರ ಸ್ಮರಣೆಯುಂಟು; ಇನ್ನೊಂದು ಎಂಬುದರ ಸ್ಮರಣೆಯೂ ಉಂಟು. ಆದರೆ ಎರಡಕ್ಕಿಂತ ಮೇಲೆ ಆ ಇನ್ನೊಂದರಲ್ಲಿ ನಾನು ಎಂಬುದು ಅಡಗಿಕೊಂಡಿದೆಯೆಂಬ ಸಂತೃಪ್ತಿಯೂ ಉಂಟು. ಇದು ವಿಶಿಷ್ಟಾದ್ವೈತ.
3. **“ಸ ಏವಾಹಂ” :** ನಾನೇ ಅವನು; ನಾನು ಅವನೇ. ಎರಡೆಂಬುದಿಲ್ಲ. ಬೇರೆ ಬೇರೆಯಲ್ಲ. ಎರಡನೆಯದೇ ಇಲ್ಲ. ಇದು ಅದ್ವೈತ.

ಈ ಮೂರೂ ಪರ್ಯವಸಾನದಲ್ಲಿ ಏಕಸ್ಥಾನಗಮಕಗಳೇ. ಅದ್ವೈತಸಿದ್ಧಿಕಾರರಿಗಂತೂ ಮೂರರಲ್ಲಿಯೂ ಸಮತಾಬುದ್ಧಿ. ಮೂರಿರುವುದಕ್ಕೆ ಕಾರಣವು ಭಕ್ತಜನದ ಸಾಧನ ಅಭ್ಯಾಸಗಳಲ್ಲಿರುವ ಪರಿಪಾಕಭೇದ.

ಇನ್ನೊಂದು ಉಪಮಾನವನ್ನು ನೋಡೋಣ. ನೀರು ಬಾವಿಯಲ್ಲಿರುತ್ತದೆ, ನದಿಯಲ್ಲಿರುತ್ತದೆ. ಸಮುದ್ರದಲ್ಲಿರುತ್ತದೆ. ಆದರೆ ಬಾವಿ ಕುಂಟೆಗಳ ನೀರಿಗೂ ಸಮುದ್ರದ ನೀರಿಗೂ ಸಾಕ್ಷಾತ್ಸಂಬಂಧವಿಲ್ಲ. ಮೋಡದಿಂದ ಮಳೆಸುರಿದು, ನೆಲವೆಲ್ಲ ತೊಯ್ದು, ನೆಲದೊಳಕ್ಕೆ

ನೀರಿಳಿದಾಗ ವಾಪೀಜಲಕ್ಕೂ ಸಮುದ್ರಜಲಕ್ಕೂ ಒಂದು ಅಂತಸ್ಸಂಬಂಧವು ಪ್ರಕೃತಿವಿಹಿತವಾಗಿ ಭೂಗರ್ಭ ಸುಷಿರದಿಂದ ಉಂಟಾಗಬಹುದು. ಅಂಥ ಕ್ವಾಚಿತ್ಕವೂ ಪರೋಕ್ಷವೂ ಆದ ಸಂಬಂಧವನ್ನು ಬಿಟ್ಟರೆ ಬಾವಿ ಕೆರೆ ಬೇರೆ, ಸಮುದ್ರವೇ ಬೇರೆ. ಇದು ದ್ವೈತ.

ನದೀಜಲವಾದರೊ ಸಮುದ್ರವನ್ನು ಸೇರುವವರೆಗೂ, ತಾನು ಬೇರೆ, ಸಮುದ್ರವೇ ಬೇರೆ. ವೇಗದಲ್ಲಿಯೂ ಹಾಗೆಯೇ; ಗುಣ ರುಚಿಗಳಲ್ಲಿಯೂ ಹಾಗೆಯೇ. ಆದರೆ ನದೀ ಸಾಗರ ಸಂಗಮವಾದಾಗ ನದಿಯು ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡು ತಾನು ಸಮುದ್ರದ ಬಾಹು—ಅದರ ಒಂದು ಅಂಶ—ಅದರ ಒಂದು ಶೇಷ—ಎಂಬಂತೆ ತೋರುತ್ತದೆ. ಇದು ವಿಶಿಷ್ಟಾದ್ವೈತ.

ಇನ್ನು ಸಮುದ್ರವಾದರೋ ವಾಪೀಕೂಪತಟಾದಿಗಳಿಂದ ಸೂರ್ಯರಶ್ಮಿಯು ಜಲಗ್ರಹಣಮಾಡಿ, ಮೇಘರೂಪಕ್ಕೆ ಪರಿವರ್ತಿಸಿ, ವೃಷ್ಟಿರೂಪದಲ್ಲಿ ಸುರಿಸಿದ ನೀರನ್ನು (ಸಮುದ್ರ)ತನ್ನೊಳಕ್ಕೆ ಸೇರಿಸಿಕೊಂಡಿರುತ್ತದೆ; ನದೀನದಗಳು ತಾವಾಗಿ ತಂದು ಅರ್ಪಿಸಿದ ನೀರುಗಳನ್ನೂ ಸ್ವೀಕರಿಸಿರುತ್ತದೆ. ಬಯಲುನೆಲದ ಮೇಲೂ ಕಾಡಿನಲ್ಲೂ ಬಿದ್ದ ಮಳೆ ನೀರನ್ನೂ, ಜನ ಸುರಿದು ಹರಿದುಬಂದ ಊರನೀರನ್ನೂ ಸಮುದ್ರ ಅಂಗೀಕರಿಸಿಕೊಂಡು ಸ್ವಂತದ್ದನ್ನಾಗಿ ಮಾಡಿಕೊಳ್ಳುತ್ತದೆ. ಈ ತ್ರಿವಿಧ ಜಲಗಳನ್ನು ಸಮುದ್ರವು ಅನಾದಿಯಿಂದ ತನ್ನದೇ ಆಗಿರುವ ಅಪಾರ ಜಲರಾಶಿಯಲ್ಲಿ ಬೆರಸಿಕೊಂಡು ಏಕೀಕೃತಮಾಡುತ್ತದೆ. ಸಮುದ್ರವು ಅದ್ವೈತಬ್ರಹ್ಮಕ್ಕೆ ಉಪಮಾನ.

ಹೀಗೆ ಒಂದು ಮತದವರು ಇನ್ನೊಂದು ಮತವನ್ನು ಸಹಾನುಭೂತಿಯಿಂದ ನೋಡಿದರೆ ಕಲಹಕಾರಣವು ಕಿಂಚಿತ್ತೂ ಕಾಣುವುದಿಲ್ಲ. ಅವರವರ ಅಭಿರುಚಿಯಂತೆ ಅವರವರ ಉಪಾಸನ ಕ್ರಮ.

ಇಬ್ಬರು ಪ್ರಣಯಿಗಳಲ್ಲಿ ಅನುನಯವಾಕ್ಕು ಹೇಗೆ ಪ್ರೀತಿಸೂಚಕವೋ ಕಲಹಗಳೂ ಹಾಗೆ ಪ್ರೀತಿಸೂಚಕವಾಗಬಹುದು. ಶ್ರೀಕೃಷ್ಣನು ರುಕ್ಮಿಣಿಯನ್ನು ಜಗಳಕ್ಕೆ ಕಾಲು ಕೆರೆದದ್ದರ ಕಥೆ ಭಾಗವತದಲ್ಲಿದೆ. ಭಕ್ತನು ಭಗವಂತನ ವಿಷಯದಲ್ಲಿ ಹಾಗೆಯೇ ಸಲುಗೆಯಿಂದ ನಡೆದುಕೊಳ್ಳುತ್ತಾನೆ. ತ್ಯಾಗರಾಜರು ಶ್ರೀರಾಮನನ್ನು “ನಿನ್ನ ಸಮಾನ ಯಾರು?” —ಎಂದು

ಕೊಂಡಾಡಿದ್ದೂ ಉಂಟು; "ನೀನು ಕೈಲಾಗದವನೇನು?" —ಎಂದು ಮೂದಲಿಸಿದ್ದೂ ಉಂಟು. ಆಯಾ ಘಳಿಗೆಯ ಅಭಿರುಚಿಯಂತೆ ಆಯಾ ವಾಕ್ಚೇಷ್ಟೆಗಳ ರೀತಿ.

ಭಗವದುಪಾಸನೆಯೂ ಹಾಗೆಯೇ. ತರ್ಕಸಿದ್ಧಾಂತ ಕಾಲದಲ್ಲಿ ಅದ್ವೈತಬುದ್ಧಿಯುಳ್ಳವರು ಮನಸ್ತೃಪ್ತಿಬೇಕಾದಾಗ ದ್ವೈತಿಗಳೂ ವಿಶಿಷ್ಟಾದ್ವೈತಿಗಳೂ ಆಗುತ್ತಾರೆ. ಇದಕ್ಕೆ ಪರಮಸಾಕ್ಷ್ಯ ಅದ್ವೈತಸಿದ್ಧಿಕಾರರಾದ ಮಧುಸೂದನಸರಸ್ವತಿಗಳದು:

"ಧ್ಯಾನಾಭ್ಯಾಸವಶೀಕೃತೇನ ಮನಸಾ ... ತನ್ನೀಲಂ ಮಹೋ ಧಾವತಿ ॥"

(ಪುಟ 342 ನೋಡಿ.)

ತತ್ತ್ವಕುತೂಹಲಿಗೆ ವೇದವೇದಾಂತಗಳು ತೋರಿಸಿರುವ ಪರಮಾನುಗ್ರಹವು ಅಭಿರುಚಿ ಸ್ವಾತಂತ್ರ್ಯ. ಇದು ಗೀತಾಚಾರ್ಯನ ಘೋಷಣೆಯಲ್ಲಿದೆ:

ಯೋ ಯೋ ಯಾಂ ಯಾಂ ತನುಂ ಭಕ್ತಃ
ಶ್ರದ್ಧಯಾಽರ್ಚಿತುಮಿಚ್ಛತಿ ॥

(೭-೨೧)

ತತ್ತ್ವಪ್ರಾಪ್ತಿ ಎಂದರೆ ತತ್ತ್ವಾರ್ಥದ ಅನುಭವ. ಅನುಭವ ಎಂದರೆ ಅನುಸಂಧಾನ. ಅನುಸಂಧಾನಕ್ಕೆ ಬೇಕಾದದ್ದು ಶ್ರದ್ಧೆ. ಎಲ್ಲಿ ಅಭಿರುಚಿಯೋ ಅಲ್ಲಿ ಶ್ರದ್ಧೆ ಸುಲಭವಾಗಿ ಹುಟ್ಟುತ್ತದೆ. ಈ ಕಾರಣದಿಂದ ತತ್ತ್ವಾನುಸಂಧಾನಿಗೆ ಅಭಿರುಚಿಸ್ವಾತಂತ್ರ್ಯವು ಮೊದಲಿರಬೇಕಾದ ಸೌಕರ್ಯ. ಅಭಿರುಚಿಯಿರುವ ಕಡೆ ಶ್ರದ್ಧೆ ಸ್ವಾಭಾವಿಕ, ಅನುಸಂಧಾನ ಸುಲಭ.

ಅಭಿರುಚಿಸ್ವಾತಂತ್ರ್ಯವಿರುವುದರಿಂದಲೇ ಉಪಾಸನಾಸ್ವಾತಂತ್ರ್ಯ. ಶುದ್ಧವೈಷ್ಣವರಲ್ಲಿಯೇ ಕೆಲವರಿಗೆ ಕೃಷ್ಣಾವತಾರದಲ್ಲಿ ಹೆಚ್ಚು ಇಷ್ಟ; ಕೆಲವರಿಗೆ ರಾಮಾವತಾರದಲ್ಲಿ; ಇನ್ನು ಕೆಲವರಿಗೆ ನೃಸಿಂಹಾವತಾರದಲ್ಲಿ. ಶೈವರಲ್ಲಿ ಗೌರೀಶಂಕರರೂಪದಲ್ಲಿ ಕೆಲವರಿಗೆ ಇಷ್ಟ. ನಟರಾಜಮೂರ್ತಿಯಲ್ಲಿ ಕೆಲವರಿಗೆ. ದೇವೀ ಉಪಾಸಕರಲ್ಲಿ ಲಲಿತಾವತಾರ ಕೆಲವರಿಗೆ ಇಷ್ಟ,

ದುರ್ಗಾವತಾರ ಕೆಲವರಿಗೆ. ಭೋಜನದ ಷಡ್ರಸಗಳಲ್ಲಿ ಹೇಗೆ ರುಚಿ ಮುಖ್ಯ ಪ್ರೇರಕವೋ ಉಪಾಸ್ಯದೇವತಾವಿಷಯದಲ್ಲಿಯೂ ಹಾಗೆಯೇ ರುಚಿ ಮುಖ್ಯ ಪ್ರೇರಕ.

ಭಗವದುಪಾಸನೆಯ ವಿಧಾನದ ವಿಷಯದಲ್ಲಿ ಉಪಾಸಕನಿಗೆ ವರಣಸ್ವಾತಂತ್ರ್ಯ (Freedom of Choice) — “ಯಾಥಾಕಾಮ್ಯ” —ಉಂಟೆಂಬುದನ್ನು ಭಗವಾನ್ ಬಾದರಾಯಣರೇ ಬ್ರಹ್ಮಸೂತ್ರಗಳಲ್ಲಿ, ಸಾಧನಾಧ್ಯಾಯವೆಂಬ ತೃತೀಯಾಧ್ಯಾಯದ ತೃತೀಯಪಾದದ ನಿರ್ಗುಣ ಸಗುಣ ಬ್ರಹ್ಮೋಪಾಸನ ಪ್ರಕರಣದಲ್ಲಿ ಸೂಚಿಸಿದ್ದಾರೆ:

ಅನಿಯಮಃ ಸರ್ವಾಸಾಮವಿರೋಧಃ ... ।। ೩-೩-೩೧.
ತನ್ನಿರ್ಧಾರಣಾನಿಯಮಃ ... ।। ೩-೩-೪೨.
ನಾನಾ, ಶಬ್ದಾದಿಭೇದಾತ್ ।। ೩-೩-೫೮.
ವಿಕಲ್ಪೋಽವಿಶಿಷ್ಟಫಲತ್ವಾತ್ ।। ೩-೩-೫೯.—ಇತ್ಯಾದಿ

ಉದ್ದಿಷ್ಟಫಲವು ಒಂದೇ ಆಗಿದ್ದು, ಅದಕ್ಕೆ ದಾರಿಗಳು ಎರಡು ಮೂರಿರುವಾಗ, ಅವುಗಳಲ್ಲಿ ಯಾವ ಒಂದು ದಾರಿ ಸಾಧಕನಿಗೆ ಹೆಚ್ಚು ಸೌಕರ್ಯವುಳ್ಳದ್ದೆಂದು ತೋರುತ್ತದೆಯೋ ಆ ದಾರಿಯನ್ನು ಆತನು ಹಿಡಿಯತಕ್ಕದ್ದು—ಎಂಬುದು ಮೇಲಣ ಸೂತ್ರಗಳ ಒಟ್ಟು ತಾತ್ಪರ್ಯ. ಜೀವಬ್ರಹ್ಮಸಂಬಂಧದ ವಿಷಯದಲ್ಲಿಯೂ ಉಪಾಸಕನ ಅಭಿರುಚಿಗೂ ಸೌಕರ್ಯಕ್ಕೂ ಯಾವ ಮತಭಾವ ಒಪ್ಪುತ್ತದೆಯೋ ಅದರಿಂದ ಆತನಿಗೆ ಇಷ್ಟ ಸಿದ್ಧಿ ಎಂದು ಗ್ರಹಿಸುವುದರಲ್ಲಿ ಯಾವ ತತ್ತ್ವಕ್ಕೂ ವಿರೋಧ ತೋರುವುದಿಲ್ಲ.

ಬ್ರಾಹ್ಮಣಾದಿ ಚಾತುರ್ವರ್ಣ್ಯದಲ್ಲಿ ವಂಶಪಾರಂಪರ್ಯಕ್ರಮವು ವಿವಾಹಾದಿ ಸಂಸ್ಕಾರಗಳ ಬಗ್ಗೆ ಶಾಸ್ತ್ರವಿಹಿತವಾಗಿದೆ. ಮತತ್ರಯವಿಷಯದಲ್ಲಿ ಅಂಥಾ ವಂಶಾನುಪೂರ್ವಿಯ ಶಾಸ್ತ್ರವಿಧಿಯಿಲ್ಲ. ಆದರೂ ತಂದೆ ಅಜ್ಜಂದಿರು ಬೆಳಸಿದ ಶ್ರದ್ಧಾಚಾರಗಳ ಮನೋವಾತಾವರಣವು ಮಗ ಮೊಮ್ಮಗಂದಿರಿಗೆ ಸ್ವಾಭಾವಿಕವಾಗಿ ಬಂದು ಸುಲಭವಾಗಿರುತ್ತದೆ. ಹೀಗಿದ್ದರೂ ಸ್ವತಂತ್ರವಿಚಾರಿಯಾದವನು ತನ್ನ ವೈಯಕ್ತಿಕವಾದ ಅಂತರಂಗೋಪಾಸನೆಗಾಗಿ ತನಗೆ ಇಷ್ಟವೂ ಸುಲಭವೂ ಆದ ಮತದ ಮಾರ್ಗವನ್ನು ತಾನು ಆರಿಸಿಕೊಳ್ಳಲು ಸ್ವತಂತ್ರನಿದ್ದಾನೆ.

ಮಹಾನುಭಾವ ಭರ್ತೃಹರಿ ಹೀಗೆಂದಿದ್ದಾನೆ:

> **ಮಹೇಶ್ವರೇ ವಾ ಜಗತಾಮಧೀಶ್ವರೇ ಜನಾರ್ದನೇ ವಾ ಜಗದನ್ತರಾತ್ಮನಿ ।**
> **ನ ವಸ್ತುಭೇದಪ್ರತಿಪತ್ತಿರಸ್ತಿ ಮೇ ತಥಾऽಪಿ ಭಕ್ತಿಸ್ತರುಣೇಂದುಶೇಖರೇ ॥**

ಲೀಲಾಶುಕಯೋಗಿಯು ಕೃಷ್ಣಕರ್ಣಾಮೃತದಲ್ಲಿ ಹೀಗೆಂದಿದ್ದಾನೆ:

> **ಶೈವಾ ವಯಂ ನ ಖಲು ತತ್ರ ವಿಚಾರಣೀಯಂ**
> **ಪಂಚಾಕ್ಷರೀಜಪಪರಾ ನಿತರಾಂ ತಥಾऽಪಿ ।**
> **ಚೇತೋ ಮದೀಯಮತಸೀಕುಸುಮಾವಭಾಸಂ**
> **ಸ್ಮೇರಾನನಂ ಸ್ಮರತಿ ಗೋಪವಧೂಕಿಶೋರಮ್ ॥**

ದ್ವೈತಾದ್ವೈತವಿಶಿಷ್ಟಾದ್ವೈತಗಳ ವಿಚಾರವೂ ಅಷ್ಟೇ. ಒಬ್ಬ ಮನುಷ್ಯನೇ ಕೆಲವು ಘಳಿಗೆ ದ್ವೈತಿ, ಇನ್ನು ಕೆಲವು ವೇಳೆ ವಿಶಿಷ್ಟಾದ್ವೈತಿ, ಮತ್ತೆ ಕೆಲವು ಸಮಯ ಅದ್ವೈತಿಯಾಗಿರಬಹುದು—ಅವನ ಮನೋವೃತ್ತಿ ಬಯಸಿದಂತೆ. ಮೂರು ಮತಗಳೂ ವೇದಾಭಿಮತಗಳೇ ಆದದ್ದರಿಂದ ಅವುಗಳಲ್ಲಿ ಯಾವುದನ್ನಾದರೂ ಉಪಾಸಕನು ಇಷ್ಟಾಪತ್ತಿಯಂತೆ ಆರಿಸಿಕೊಳ್ಳಬಹುದು.

ನಮಶ್ಶಬ್ದವು ದ್ವೈತ, ನಿಶ್ಶಬ್ದವು ಅದ್ವೈತ. ಮನುಷ್ಯನಿಗೆ ಇದೂ ಬೇಕೆನ್ನಿಸುವುದುಂಟು, ಅದೂ ಬೇಕೆನ್ನಿಸುವುದುಂಟು.

ಸಿದ್ಧಾಂತವು ಎರಡು ಬಗೆಯಾದದ್ದು: ಒಂದು ತರ್ಕದ್ದು, ಇನ್ನೊಂದು ಅನುಭವದ್ದು. ತರ್ಕವು ಬುದ್ಧಿಮಾತ್ರಕ್ರಿಯೆ, ಅನುಭವವು ಜೀವಸರ್ವಸ್ವದ ಕ್ರಿಯೆ. ಯಾರಿಗೆ ತರ್ಕಶುದ್ಧಿಗಿಂತ ಅನುಭವಸಿದ್ಧಿ ದೊಡ್ಡದೋ ಅವರು ಅಭಿರುಚಿಯ ಸ್ಥಾನವನ್ನಂಗೀಕರಿಸುತ್ತಾರೆ.

ಅನುಭವಾಪೇಕ್ಷಿಯ ದೃಷ್ಟಿಯಲ್ಲಿ ಮತತ್ರಯ ಕಲಹಗಳು ನಿರರ್ಥಕ. ಈ ಕಲಹಗಳು ಏಳೆಂಟು ನೂರು ವರ್ಷಗಳ ಹಿಂದಿನಿಂದ ನಡೆದುಕೊಂಡು ಬಂದಿವೆ. ಈ ದೀರ್ಘಕಾಲದಲ್ಲಿ ಹುಟ್ಟಿದ ತಾತ್ತ್ವಿಕಸಾಹಿತ್ಯದಲ್ಲಿ ಅಧಿಕಭಾಗವು ವಾದವಿವಾದಗ್ರಂಥಗಳದು. ಸ್ವಮತಮಂಡನೆ ಪರಮತಖಂಡನೆಗಳು ಇಷ್ಟಾಗಿದ್ದರೂ ಯಾವ ಮತವೂ ಸೋತಿಲ್ಲ; ಯಾವುದೂ ಗೆದ್ದಿಲ್ಲ. ಆ ಗ್ರಂಥಗಳಲ್ಲಿ ಬಹುಭಾಗ ತರ್ಕದ ಪಿಷ್ಟಪೇಷಣವೇ. ಒಬ್ಬರು ಹಾಡಿದ್ದನ್ನೇ ಇನ್ನೊಬ್ಬರು

ಹಾಡಿದ್ದಾರೆ. ಗಂಟಲ ಧ್ವನಿಯೂ ತುಟಿಯ ಉಚ್ಚಾರಣೆಯೂ ಬೇರೆ; ವಿಷಯವು ಮಾತ್ರ ಹಿಂದಿನದೇ. ನಮ್ಮ ಜನ ಈ ವಾದವೈಖರಿಯ ಶಬ್ದಾಡಂಬರಕ್ಕೆ ಮರುಳಾಗಿ, ಪರಸ್ಪರ ಅಸಹನೆಗೆ ಅವಕಾಶ ಮಾಡಿಕೊಂಡಿದ್ದಾರೆ. ಅದು ವೇದವೇದಾಂತ ತತ್ತ್ವವನ್ನು ಉಳಿಸುವ ದಾರಿಯಲ್ಲ. ಅಭಿರುಚಿಸ್ವಾತಂತ್ರ್ಯವೇ ತತ್ತ್ವಾನ್ವೇಷಣೆಯನ್ನು ಪ್ರೋತ್ಸಾಹಿಸುವ ದಾರಿ.

ಬಹುಶಾಸ್ತ್ರಪಾರಂಗತರಾದ ಮಹಾಮಹೋಪಾಧ್ಯಾಯ ಅಭಯಂಕರ ವಾಸುದೇವ ಶಾಸ್ತ್ರಿಗಳವರು ಸಾಯಣ-ಮಾಯಣ (ಮಾಧವ?-ಸಂ.) ಕೃತವೆಂದು ಪ್ರಸಿದ್ಧವಾಗಿರುವ **"ಸರ್ವದರ್ಶನ ಸಂಗ್ರಹ"** ಗ್ರಂಥದ ಭೂಮಿಕೆಯಲ್ಲಿ ಬರೆದಿರುವ ಕೆಲವು ವಾಕ್ಯಗಳು ಮನನೀಯವಾಗಿವೆ:

> **... ಕಿಂ ಚ ಯಥಾ ಚಕ್ಷುಷ್ಮತಾಮಪಿ ಮಧ್ಯೇ ಕಶ್ಚಿದ್ದೂರಸ್ಥಿತಮರ್ಥಮಾಲೋಚಯಿತುಂ ಪ್ರಭವತಿ, ಕಶ್ಚಿದಾಸನ್ನಮೇವ, ಕಶ್ಚಿತ್ತ್ವಾಸನ್ನತರಮೇವ । ತರ್ಕೇಣಾಪಿ ಕಶ್ಚಿತ್ಸೂಕ್ಷ್ಮಮರ್ಥಂ ಸಂಭಾವಯತಿ, ಕಶ್ಚಿತ್ಸೂಕ್ಷ್ಮತರಂ, ಕಶ್ಚಿತ್ಸೂಕ್ಷ್ಮತಮಮಪಿ । ಶ್ರುತಾವಪಿ ಕಸ್ಯಚಿನ್ಮತಿ ರ್ವಾಚ್ಯಾರ್ಥಮಾಲೋಚ್ಯ ತತ್ರೈವ ಪರ್ಯವತಿಷ್ಠತೇ । ಕಸ್ಯ ಚಿದ್ವ್ಯಂಗ್ಯೇಽರ್ಥೇ । ಕಸ್ಯಚಿತ್ತು ನಿಗೂಢವ್ಯಂಗ್ಯೇಽಪಿ ॥ ತಥಾ ಚ ತತ್ತ್ವಾನುಸಂಧಾನ ಸಾಧನೀಭೂತಂ ಪ್ರಮಾಣಮೇಕಮೇವಾಂಗೀ ಕುರ್ವತಾಮಪಿ ಮಧ್ಯೇ ಪ್ರತಿಪತ್ತಿವೈ ಚಿತ್ರ್ಯಾತ್ತಾದೃತಪ್ರಮಾಣಸಾಧ್ಯೇ ತತ್ತ್ವಾನ್ವೇಷಣೇ ವೈಷಮ್ಯಮಶಕ್ಯನಿವಾರಮ್ ॥ ಅತಶ್ಚ ಪ್ರಮಾಣಭೇದೇನ ಭಿನ್ನಾನಾಮಪಿ ದರ್ಶನಾನಾಂ ಮಧ್ಯೇ ಪ್ರತ್ಯೇಕಂ ಪುನರನ್ವಿಷ್ಯಮಾಣತತ್ತ್ವಭೇದೇನ ಭೇದೋ ದುರ್ನಿವಾರಃ ॥ ತಥಾ ಚ ಶ್ರೌತೇಷು ತಾರ್ಕಿಕೇಷು ಚ ದರ್ಶನಕಾರೇಷು ತತ್ತದ್ದೃಷ್ಟಪ್ರತಿಪತ್ತಿಭೇದೇನ ಪುನಃ ಪ್ರತ್ಯೇಕಮನೇಕವಿಧತ್ವಾತ್ ದರ್ಶನಾನ್ಯಪಿ ನಾನಾವಿಧಾನಿ ಸಮಭೂವನ್ ॥**

ಪುರಾತನಪ್ರಾಜ್ಞರೊಬ್ಬರು ಹೇಳಿದ ಮಾತು ಇದು:

> **ಅಹಂ ದೇಹಬುದ್ಧ್ಯಾ ತವೈವಾಸ್ಮಿ ದಾಸಃ ।**
> **ಅಹಂ ಜೀವಬುದ್ಧ್ಯಾ ತವೇಶೈಕದೇಶಃ ॥**
> **ತ್ವಮೇವಾಸ್ಮ್ಯಹಂ ತ್ವಾತ್ಮಬುದ್ಧ್ಯಾ ತಥಾಽಪಿ ।**
> **ಪ್ರಸೀದಾನ್ವಹಂ ದೇವಬುದ್ಧ್ಯಾ ನಮಸ್ತೇ ॥**

ಇನ್ನೊಬ್ಬರ ವಚನ ಹೀಗೆ:

ದೇಹಬುದ್ಧ್ಯಾತು ದಾಸೋಽಹಂ ಜೀವಬುದ್ಧ್ಯಾ ತ್ವದಂಶಕಃ ।
ಆತ್ಮಬುದ್ಧ್ಯಾ ತ್ವಮೇವಾಹಂ ಇತಿ ಮೇ ನಿಶ್ಚಿತಾ ಮತಿಃ ॥

ಒಬ್ಬ ಮನುಷ್ಯನಲ್ಲಿಯೇ ಮೂರು ಭಾವಗಳೂ ಉಂಟು.

ಯತ್ರೈಕಾಗ್ರತಾ ತತ್ರಾವಿಶೇಷಾತ್ ॥ (ಬ್ರ. ಸೂ. ೪-೧-೧೧)

ಎಂಬ ವ್ಯಾಸಸೂತ್ರ ಇಲ್ಲಿಗೂ ಅನ್ವಯಿಸುತ್ತದೆ. ಚಿತ್ತೈಕಾಗ್ರತೆ ಮುಖ್ಯ; ಶ್ರದ್ಧೆ ಮುಖ್ಯ; ಅನುಸಂಧಾನ ಮುಖ್ಯ; ಆದದ್ದರಿಂದ ಅಭಿರುಚಿಸೌಲಭ್ಯ ಮುಖ್ಯ. ದ್ವೈತ ಸುಲಭವೆನಿಸಿದರೆ ಅದಾಗಲಿ; ವಿಶಿಷ್ಟಾದ್ವೈತ ಇಷ್ಟವೆನಿಸಿದರೆ ಅದೇ ಆಗಲಿ; ಅದ್ವೈತ ಬೇಕೆನಿಸಿದರೆ ಅದೇ ಆಗಲಿ. ಮೂರೂ ತತ್ತ್ವದ ದಾರಿಗಳೇ. ಅವರವರ ಕಣ್ಣಿನ ನೋಟದ ಇಂಪಿನಂತೆ, ಅವರವರ ಕಾಲಿನ ಬಲದಂತೆ, ಅವರವರ ದಾರಿ.

ಈ ಗೀತಾವಾಕ್ಯವೇ ಪರಮಸಿದ್ಧಾಂತ:

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ (೫-೫)

ಮದರಾಸಿನ ಮೈಲಾಪುರ ಸಂಸ್ಕೃತ ಕಾಲೇಜಿನ ವೇದಾಂತಾಧ್ಯಾಪಕರಾದ ಶಾಸ್ತ್ರ ರತ್ನಾಕರ ಮಹಾವಿದ್ವಾನ್ ಪೊಲಹಂ ಶ್ರೀರಾಮಶಾಸ್ತ್ರಿಗಳವರು “ಚತುರ್ಮತಸಾಮರಸ್ಯಮ್” ಎಂಬ ಗ್ರಂಥವನ್ನು ರಚಿಸಿದ್ದಾರೆ. ಅದರ ವಿಷಯದಲ್ಲಿ ಆ ವಿದ್ವಾಂಸರೊಡನೆ ಪ್ರಕೃತ ಲೇಖಕನು ನಡೆಸಿದ ಪತ್ರಿಕಾಪ್ರಸಂಗದ ಕೆಲವು ಶ್ಲೋಕಗಳು ಇಲ್ಲಿಗೆ ಹೊಂದುತ್ತವೆ:

ಶಿವಭಿಕ್ಷುಮತ:

ಲೋಕಲೀಲಾನಿದಾನಂ ಯತ್ ಸರ್ವತ್ರಾತ್ಮೇತಿ ಬುದ್ಧ್ಯತೇ ।
ಸಚ್ಚಿದಾನಂದಚಿಹ್ನಂ ತತ್ ಸರ್ವಸಖ್ಯಂ ತನೋತು ನಃ ॥
ಯದ್ರಹಸ್ಯಂ ಜಗನ್ಮೂಲಮನ್ವಿಷ್ಯನ್ತಿ ಜನಾಃ ಪರಮ್ ।

ಸ್ವಸ್ವೋಚಿತೇಷು ಮಾರ್ಗೇಷು ಭಜಾಮಸ್ತಂ ವಿಭುಂ ಧ್ರುವಮ್ ॥
ಯದ್ವಸ್ತ್ವನಿರ್ದಿಷ್ಟವಪುಶ್ಚಿರಾನ್ಮತಶತಾಧ್ವಗೈಃ ।
ಜಿಘೃಕ್ಷಿತಂ ಬಹೂಪಾಯೈರ್ನುಮಸ್ತಂ ವಿಶ್ವಚೇತನಮ್ ॥
ತದ್ದಾಸತ್ವಂ ತದಂಗತ್ವಂ ತತ್ತ್ವಂ ಚೇತಿ ತ್ರಿಭಿರ್ನಯೈಃ ।
ಭಕ್ತಿರ್ಯಸ್ಮಿನ್ ಭಿನ್ನರುಚ್ಯಾ ತದ್ಬ್ರಹ್ಮ ಸಮುಪಾಸ್ಮಹೇ ॥

ಶ್ರೀರಾಮಶಾಸ್ತ್ರಿಗಳವರ ಪ್ರತ್ಯುತ್ತರ ಪತ್ರದಿಂದ:

ಮತಾನಿ ತು ಪೃಥಗ್ಬಾಲಾಃ ಪ್ರವದನ್ತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಸ್ಸಮ್ಯಕ್ ಸರ್ವೇಷಾಂ ವಿನ್ದತೇ ಫಲಮ್ ॥
ಯದೇಕೇನಾಪ್ಯತೇ ಸ್ಥಾನಂ ತದನ್ಯೇನಾಪಿ ಗಮ್ಯತೇ ।
ಏಕಮೇವ ಮತಂ ಸರ್ವಂ ಯಃ ಪಶ್ಯತಿ ಸ ಪಶ್ಯತಿ ॥

ಮೇಲಣ ಅಭಿಪ್ರಾಯಗಳನ್ನು ಈ ಕನ್ನಡ ಪದ್ಯಗಳು ಸಂಗ್ರಹಿಸಿವೆ:

ದ್ವೈತಮೊ ಮತಂ ವಿಶಿಷ್ಟಾ- ।
ದ್ವೈತಮೊ ಅದ್ವೈತಮೋ ಅದೇನಾದೊಡದೇಂ ॥
ಭೂತವ್ರಾತದೊಳಾರ್ಗನು- ।
ಭೂತಮೊ ಪರವಸ್ತುವವನೆ ಕೃತಪರಮಾರ್ಥಂ ॥ ೧ ॥

ನಿನ್ನನುಚರನಾಂ ನೀಂ ಪ್ರಭು ।
ನಿನ್ನಂಗಂ ನಿನ್ನ ಭೋಗದುಪಕರಣಂ ನಾಂ ॥
ನಿನ್ನಿಂದಿತರಂ ನಾನ- ।
ಲ್ತೆನ್ನುವ ಮೂರೆಣಿಕೆ ದೈವಭಕ್ತಿಯೊಳುಚಿತಂ ॥ ೨ ॥

ಜಲಧಿಗೆ ಪನಿ ತೆರೆ ನೀರೇ ।
ನಲೆವಾಪನಿ ದೂತನಂತೆ, ತೆರೆ ತೋಳ್ಗೈವೋಲ್ ॥
ಅಳೆಯಲ್ಕಾಗದೊಡಲ್ ನೀರ್ ।
ನೆಲೆಮನೆ ಮೂರರ್ಕಮಿಂತು ಕಡಲೊಂದಲ್ತೇ ॥ ೩ ॥

ತಾಂ ಬೇರೆನುವುದು ಕೂಪಂ ।
ಸಂಬಂಧಂ ತನಗೆ ಕಡಲೊಳೆಂಬುದು ನದಿ ಮೇಣ್ ॥
ಅಂಬುಧಿ ತಾನೆಂಬುದು ಕಡ- ।
ಲಂಬರ ವೃಷ್ಟಿಯಿನೆ ಜೀವನಂ ಮೂವರ್ಗಂ ॥ ೪ ॥

ಸರ್ವೋಽಹಮೆಂದು ಲೋಕವ ।
ನಿರ್ವಹಿಪಂಗೆತ್ತಲುಂ ವಸಂತಾರಾಮಂ ॥
ನಿರ್ವೈರಂ ನಿರ್ಮೋಹಂ ।
ನಿರ್ವಾಣಪದಸ್ಥನಾತನುಸಿರ್ದೆಡೆ ಪುಣ್ಯಂ ॥ ೫ ॥

ಪರಿಶಿಷ್ಟ ೨

ಅಧ್ಯಾರೋಪ-ಅಪವಾದ

ಒಂದು ವಸ್ತುವನ್ನು ಕುರಿತು ಏನೂ ತಿಳಿಯದವನಿಗೆ ಆ ವಸ್ತುವನ್ನು ತಿಳಿಯಪಡಿಸಬೇಕಾದರೆ ಅವನಿಗೆ ತಿಳಿದಿರುವುದರ ಪೈಕಿ ಯಾವ ವಸ್ತು ಉದ್ದಿಷ್ಟವಸ್ತುವಿಗೆ ಹತ್ತಿರವಾಗಿ, ಅಷ್ಟಿಷ್ಟು ಹೋಲುವುದಾಗಿರುತ್ತದೆಯೋ ಅದರ ಗುರುತನ್ನು ಮೊದಲು ಹೇಳಿ, ಅದು ಅವನ ತಿಳಿವಳಿಕೆಗೆ ಬಂದ ಮೇಲೆ ಆ ಎರಡಕ್ಕೂ ಇರುವ ವ್ಯತ್ಯಾಸಗಳನ್ನು ತೋರಿಸುತ್ತೇವೆ. ಈ ಬೋಧನೋಪಾಯಕ್ಕೆ ಅಧ್ಯಾರೋಪಾಪವಾದವೆಂದು ಹೆಸರು. “ಅಧ್ಯಾರೋಪ” ವೆಂದರೆ ವಸ್ತುವಿನ ಮೇಲೆ ಅದರಲ್ಲಿ ನಿಜವಾಗಿಲ್ಲದ ಗುಣವನ್ನು ಆರೋಪಣೆ ಮಾಡುವುದು; “ಅಪವಾದ” ಎಂದರೆ (ಇಲ್ಲಿ ದೂರುಮಾತಲ್ಲ) ಹೇಳಿದ್ದನ್ನು ಅಳಿಸಿಹಾಕುವುದು.

ಘೃತ ಎಂದರೆ ಏನು? ಎಂದು ಹುಡುಗ ಕೇಳುತ್ತಾನೆ. ತಾಯಿ ಡಾಲ್ಡಾ (Dalda) ಡಬ್ಬವನ್ನು ತೋರಿಸುತ್ತಾಳೆ. ಇದು ಅಧ್ಯಾರೋಪ. ಘೃತವಲ್ಲದೆ ಘೃತದೋಪಾದಿಯಲ್ಲಿ ಕಾಣಿಸುವುದರ ಮೇಲೆ ಘೃತತ್ವವನ್ನು ಆರೋಪಿಸುತ್ತಾಳೆ. ಹುಡುಗ ಡಾಲ್ಡಾವೇ ಘೃತವೆಂದು ನಂಬಿ, ಘೃತ ಎಂಥ ಒಳ್ಳೆಯ ಪದಾರ್ಥ ಎಂದು ತಾನು ಕೇಳಿದ್ದದ್ದನ್ನು ನೆನಪು ಮಾಡಿಕೊಳ್ಳುತ್ತಾನೆ. ಆಗ ತಾಯಿ ತಾನು ತೋರಿಸಿದ ಡಾಲ್ಡಾ ತುಪ್ಪವು ಜಿಡ್ಡು, ಬಣ್ಣ ಮರಳುಮರಳು ರೂಪ, ಹೆತ್ತುಕೊಳ್ಳುವುದು —ಇಷ್ಟರ ಹೊರತು ಆಕಳ ತುಪ್ಪದ ಗುಣವುಳ್ಳದ್ದಲ್ಲವೆಂದು ವಿವರಿಸುತ್ತಾಳೆ. ಇದು ಅಪವಾದ. ಈ ಅಪವಾದವನ್ನು ಆ ಹುಡುಗ ಮನಸ್ಸಿಗೆ ತಂದುಕೊಂಡ ಮೇಲೆ ಅವನ ಘೃತಜ್ಞಾನ ಅದನ್ನು ಗುರುತುಹಿಡಿಯುವಷ್ಟು ಮಟ್ಟಿನದಾಗುತ್ತದೆ. ಅವನಿಗೆ ನಿಜವಾದ ಘೃತ ಎಂದಾದರೂ ದೊರೆಯುವ ಯೋಗವಿದ್ದು ಅದನ್ನು ಅವನು ತಿಂದು ಅನುಭವಿಸಿದಾಗ ಅವನ ಘೃತಜ್ಞಾನವು ಪೂರ್ಣವಾಗುತ್ತದೆ. ಹೀಗೆ ನಮ್ಮ ಹಳೆಯ ತಿಳಿವಳಿಕೆ ಹೊಸ ತಿಳಿವಳಿಕೆಗೆ ಅಡಿಗಲ್ಲಾಗುತ್ತದೆ. ಹಿಂದಿನ ಅನುಭವದಿಂದ ಮುಂದಿನ ಅನುಭವಕ್ಕೆ ದಾರಿ.

ಇದು ವೇದ ವೇದಾಂತಗಳ ಬೋಧನೋಪಾಯ. ಪರಬ್ರಹ್ಮವಸ್ತುವು ರೂಪ ಚೇಷ್ಟೆಗಳಿಲ್ಲದ್ದು. ಅದನ್ನು ನಮ್ಮ ಮಾತು ವರ್ಣಿಸಲಾರದು. ಅದರ ಪರಿಚಯವನ್ನು ನಮಗೆ

ಉಂಟುಮಾಡಿಕೊಡಬೇಕಾದರೆ ನಮಗೆ ಪರಿಚಿತವಾಗಿರುವ ಕೆಲವು ಪದಾರ್ಥಗಳನ್ನು ಸಾಧನವಾಗಿ ಉಪಯೋಗಿಸಿಕೊಳ್ಳಬೇಕು. ಇದೇ ಅಧ್ಯಾರೋಪಾಪವಾದದ ಕ್ರಮ. ಇದು ನಮ್ಮ ತಾತ್ತ್ವಿಕಸಾಹಿತ್ಯದಲ್ಲಿ ಶಂಕರಾಚಾರ್ಯರ ಕಾಲಕ್ಕೆ ಹಿಂದಿನಿಂದ ಬಂದದ್ದು.

ಪುಂಗನೂರಿನ ಒಬ್ಬ ದೊಡ್ಡಮನುಷ್ಯನು ಗೋಖಲೆ ಸಂಸ್ಥೆಯ ಪ್ರಸಿದ್ಧಿ ಕೇಳಿ ಅದನ್ನು ಕಣ್ಣಾರ ನೋಡಬೇಕೆಂದು ಬೆಂಗಳೂರಿಗೆ ಬಂದಿದ್ದಾನೆ. ರೆಯಿಲ್ ಇಳಿದ ಕೂಡಲೆ ಯಾರನ್ನೋ "ಗೋಖಲೆ ಸಂಸ್ಥೆ ಎಲ್ಲಿ?" ಎಂದು ಕೇಳಿದ್ದಾನೆ. ಅವರು "ಬಸವನ ಗುಡಿಯಲ್ಲಿದೆ" ಎನ್ನುತ್ತಾರೆ. ಇದು ಅಧ್ಯಾರೋಪ. ಅವನು ನಮ್ಮ ಗಾಂಧಿಬಜಾರಿಗೆ ಬಂದು ವಿಚಾರಿಸಿದಾಗ ಸಂಸ್ಥೆ ಅಲ್ಲಿಲ್ಲ. ಅದು ಅಪವಾದ. ಅಲ್ಲಿಯ ಜನ ಅವನನ್ನು "ಬಸವೇಶ್ವರ ದೇವಾಲಯಕ್ಕೆ ಹೋಗಿ" ಎನ್ನುತ್ತಾರೆ. ಅದು ಮತ್ತೆ ಅಧ್ಯಾರೋಪ. ಆತ ಆ ಗುಡಿಗೆ ಹೋದಾಗ ಅಲ್ಲಿ ಸಂಸ್ಥೆಯಿಲ್ಲ. ಇದು ಮತ್ತೆ ಅಪವಾದ. ಗುಡಿಯಲ್ಲಿದ್ದವರು ಆತನನ್ನು "ಇನ್ನೂ ಮುಂದೆ ಹೋಗಿ" ಎನ್ನುತ್ತಾರೆ. ಇದು ಅಧ್ಯಾರೋಪವಾಗದು. ಏಕೆಂದರೆ ಆತ ಇನ್ನೂ ಪ್ರಯಾಣ ಮಾಡಿದಾಗ ಗೋಖಲೆ ಸಂಸ್ಥೆ ತಾನೇ ಅವನ ಕಣ್ಣಿಗೆ ಕಾಣುತ್ತದೆ. ಇದು ಸಾಕ್ಷಾತ್ಕಾರ.

ಮಗು ಚಂದಮಾಮ ಬೇಕು ಎನ್ನುತ್ತದೆ. ಅದು ಆಕಾಶವನ್ನೆಲ್ಲ ಹುಡುಕಬೇಕೆಂದರೆ ಆದೀತೆ? ಆಗ ಅದನ್ನೆತ್ತಿಕೊಂಡಿರುವ ಹಿರಿಯನು ಒಂದು ಮರದ ಕೊಂಬೆಯನ್ನು ತೋರಿಸಿ ಆ ಕಡೆ ನೋಡೆಂದು ಹೇಳುತ್ತಾನೆ. ಆ ಕೊಂಬೆಯ ಪಕ್ಕದಲ್ಲಿ ದೂರವಾಗಿ ಚಂದ್ರಬಿಂಬ ಕಾಣಿಸುತ್ತದೆ. ದೂರದಲ್ಲಿರುವುದು ಹತ್ತಿರ ಬಂದಂತಾಗುತ್ತದೆ. ಈ ಉದಾಹರಣೆಗೆ ಶಾಖಾಚಂದ್ರನ್ಯಾಯವೆಂದು ಹೆಸರು. ಇದು ಅಧ್ಯಾರೋಪಾಪವಾದ.

ಮದುವೆಯ ದಿನ ಸಂಜೆ ವಧೂವರರಿಗೆ ಅರುಂಧತೀದರ್ಶನ ಮಾಡಿಸುವ ಸಂಪ್ರದಾಯ ಒಂದಿತ್ತು. ಅರುಂಧತಿಯು ಪತಿವ್ರತಾಧರ್ಮಕ್ಕೆ ಆದರ್ಶಳು. ಆದರೆ ಅದು ಬಹು ಸಣ್ಣ ನಕ್ಷತ್ರ. ಬೇಗ ಕಣ್ಣಿಗೆ ಸಿಕ್ಕುವುದಿಲ್ಲ. ಆದದ್ದರಿಂದ ಒಂದು ಉಪಾಯ. ಪುರೋಹಿತರು ಆ ನೂತನ ದಂಪತಿಗಳನ್ನು ಉತ್ತರದ ಕಡೆಗೆ ತಿರುಗಿಸುತ್ತಾರೆ. ಇದು ಅಧ್ಯಾರೋಪ. ಉತ್ತರ ದಿಕ್ಕು ಅರುಂಧತಿಯಲ್ಲ. ಹೀಗೆ ಅಪವಾದ ತಾಕುತ್ತದೆ. ಬಳಿಕ ಸಪ್ತರ್ಷಿಗಳನ್ನು ತೋರಿಸುತ್ತಾರೆ. ಇದೂ ಅಧ್ಯಾರೋಪ; ಸಪ್ತರ್ಷಿಮಂಡಲವು ಅರುಂಧತಿಯಲ್ಲ. ಹೀಗೆ ಮತ್ತೆ ಅಪವಾದ ಬರುತ್ತದೆ. ಆಗ ಪುರೋಹಿತರು ವಸಿಷ್ಠ ನಕ್ಷತ್ರವಿರುವ ಸ್ಥಳವನ್ನು ತೋರಿಸಿ ಅದನ್ನು ನೋಡಿರೆನ್ನುತ್ತಾರೆ. ಇದೂ ಅಧ್ಯಾರೋಪವೇ; ಏಕೆಂದರೆ, ವಸಿಷ್ಠರೇ ಅರುಂಧತಿಯಲ್ಲ;

ವಸಿಷ್ಠರ ಪತ್ನಿ ಅರುಂಧತಿ. ಹೀಗೆ ಮತ್ತೆ ಅಪವಾದ ಬಂತು. ಕಡೆಗೆ ಪುರೋಹಿತರು ವಸಿಷ್ಠರ ಪಕ್ಕದಲ್ಲಿ ಮಿನುಗುತ್ತಿರುವ ಚುಕ್ಕಿಯನ್ನು ನೋಡಿ ಎನ್ನುತ್ತಾರೆ. ಹಾಗೆ ನೋಡಿದಾಗ ಆಗುತ್ತದೆ ಅರುಂಧತಿದರ್ಶನ. ಈ ಉದಾಹರಣೆಯೂ ಪ್ರಸಿದ್ಧವಾದದ್ದು—ಅರುಂಧತೀಪ್ರದರ್ಶನನ್ಯಾಯವೆಂದು. ಇದು ಅಧ್ಯಾರೋಪಾಪವಾದ.

ತೈತ್ತೀರಿಯೋಪನಿಷತ್ತಿನಲ್ಲಿ ಭೃಗುಮಹರ್ಷಿಯ ಕಥೆ ಇದೆ. ಭೃಗುವು ವರುಣನಲ್ಲಿಗೆ ಹೋಗಿ, "ಬ್ರಹ್ಮವನ್ನು ನನಗೆ ತಿಳಿಸಿರಿ" ಎಂದು ಬೇಡಿದ. ವರುಣನು "ಅನ್ನಂ ಬ್ರಹ್ಮೇತಿ ವ್ಯಜಾನಾತ್" "(ನಿನಗೆ ಚೆನ್ನಾಗಿ ತಿಳಿದಿರುವ) ಅನ್ನವನ್ನು ಬ್ರಹ್ಮವೆಂದು ತಿಳಿದುಕೋ" ಎಂದು ಉಪದೇಶ ಮಾಡಿದ. ಅದು ಅಧ್ಯಾರೋಪ. ಭೃಗುವು ಆ ಉಪದೇಶವನ್ನು ಚೆನ್ನಾಗಿ ಚಿಂತಿಸಿ ವಿಮರ್ಶೆ ಮಾಡಿದ. ಅನ್ನದಿಂದ ಬೆಳೆಯುವುದು ದೇಹ; ಅದು ಬ್ರಹ್ಮವಲ್ಲ ಎಂದು ಕಂಡುಕೊಂಡ. ಹಾಗೆ ಉಪದೇಶಕ್ಕೆ ಅಪವಾದ ಬಂತು. ಮತ್ತೆ ವರುಣನಲ್ಲಿ ಉಪದೇಶ ಬೇಡಿದ. ವರುಣನು "ಪ್ರಾಣೋ ಬ್ರಹ್ಮೇತಿ ವ್ಯಜಾನಾತ್" ಎಂದು ಅಪ್ಪಣೆ ಮಾಡಿದ. ಇದೂ ಅಧ್ಯಾರೋಪ. ಏಕೆಂದರೆ ಭೃಗುವು ಮರಳಿ ಚಿಂತನೆ ಮಾಡಿ, ಪ್ರಾಣವು ಉಸಿರು ಗಾಳಿ, ಬ್ರಹ್ಮವಲ್ಲ—ಎಂದು ಅಪವಾದ ಕಂಡುಕೊಂಡು, ಪುನಃ ವರುಣನಲ್ಲಿಗೆ ಬಂದ. ಈಗ "ಮನೋ ಬ್ರಹ್ಮ" ಎಂದು ಉಪದೇಶವಾಯಿತು. ಇದೂ ಅಧ್ಯಾರೋಪವೆಂದು ಭೃಗುವಿಗೆ ಅನುಭವಪರೀಕ್ಷೆಯಿಂದ ತಿಳಿಯಬಂದು ಅಪವಾದ ಒದಗಿತು. ಪುನಃ ಉಪದೇಶಕ್ಕಾಗಿ ಪ್ರಾರ್ಥನೆ. ಪುನಃ "ವಿಜ್ಞಾನಂ ಬ್ರಹ್ಮ" ಎಂದು ಅಧ್ಯಾರೋಪವಾಗಿ ಅದಕ್ಕೂ ಅಪವಾದ ಬಂತು. ಇಷ್ಟೆಲ್ಲ ಅನುಭವ ವಿಮರ್ಶೆಗಳನ್ನು ಮಾಡಿಕೊಂಡದ್ದರಿಂದ ಭೃಗುವು ಈಗ ಪರಮೋಪದೇಶಕ್ಕೆ ಅರ್ಹನಾದ. ಆಗ ಸಿದ್ಧಾಂತ: "ಆನಂದೋ ಬ್ರಹ್ಮ....ಸೈಷಾ....ಪರಮೇ ವ್ಯೋಮನ್ ಪ್ರತಿಷ್ಠಿತಾ."

ಇದು ಸ್ವಾನುಭವದಿಂದ ರುಜುವಾತಿಗೆ ಬಂತು. ಮೊದಮೊದಲು ಹೇಳಿದ ಅನ್ನಾದಿವಾಕ್ಯಗಳು ಅಸತ್ಯೋಕ್ತಿಗಳಲ್ಲ. ಆಪಾತಸತ್ಯೋಕ್ತಿಗಳು. ಅನ್ನಾದಿ ಭೌತದ್ರವ್ಯಗಳಿಗೆ ಜಗಜ್ಜೀವನದಲ್ಲಿ ಅವಶ್ಯ ಸ್ಥಾನವುಂಟು. ಇದನ್ನು ಉಪನಿಷತ್ತೂ ಪ್ರಶಂಸೆ ಮಾಡಿದೆ. ಅವೆಲ್ಲ ಬ್ರಹ್ಮಮಹಿಮಾಸೂಚಕಗಳಾಗಿ ಪೂಜ್ಯಗಳೇ. ಅವು ಬ್ರಹ್ಮಸಾನ್ನಿಧ್ಯಕ್ಕೆ ಸೋಪಾನವಾಗಿ ಪ್ರಯೋಜಕಗಳು.

ಈ ಅಧ್ಯಾರೋಪ—ಅಪವಾದ ಪ್ರಕ್ರಿಯೆಯನ್ನು ಭಗವದ್ಗೀತೆಯ—

ಅಧ್ಯಾಯ೭, ಜ್ಞಾನ—ವಿಜ್ಞಾನ—ಜಗಜ್ಜೀವೇಶ್ವರಯೋಗ, ಪುಟ. 253-260

ಅ.೯, ರಾಜವಿದ್ಯಾ—ರಾಜಗುಹ್ಯ—ಬ್ರಹ್ಮಜಗತ್ಸಂಬಂಧಯೋಗ, ಪು. 290 -

ಅ.೧೩, ಕ್ಷೇತ್ರ ಕ್ಷೇತ್ರಜ್ಞ—ಪ್ರಕೃತಿಪುರುಷವಿವೇಕಯೋಗ, ಪು. 363-366 —ಈ ಭಾಗಗಳಲ್ಲಿ ಸ್ಮರಣೆಗೆ ತಂದುಕೊಳ್ಳಬೇಕು. ಈ ಕೆಳಗಣ ವಾಕ್ಯಗಳನ್ನು ನೋಡೋಣವಾಗಲಿ.

ತಸ್ಯ ಕರ್ತಾರಮಪಿ ಮಾಮ್
ವಿದ್ಧ್ಯಕರ್ತಾರಮವ್ಯಯಮ್ ॥ ೪–೧೩
ಮೇ...ಪ್ರಕೃತಿರಷ್ಟಧಾ । ೭–೪
ರಸೋಽಹಮಪ್ಸು... ॥ ೭–೮
ಜೀವನಂ ಸರ್ವಭೂತೇಷು ॥ ೭–೯
ಬೀಜಂ ಮಾಂ ಸರ್ವಭೂತಾನಾಮ್ ॥ ೭–೧೦
ಮತ್‌ಸ್ಥಾನಿ ಸರ್ವಭೂತಾನಿ ॥ ೯–೪
ನ ಚ ಮತ್‌ಸ್ಥಾನಿ ಭೂತಾನಿ ॥ ೯–೫
ನ ಸತ್ ತನ್ನಾಸದುಚ್ಯತೇ ॥ ೧೩–೧೨
ಮಮೈವಾಂಶೋ ಜೀವಲೋಕೇ ॥ ೧೫–೭

ಇಂಥಾ ಜಗದ್ಬ್ರಹ್ಮವಿಷಯಕಗಳಾದ ನಾನಾ ವಾಕ್ಯಗಳು ಮೇಲ್ನೋಟಕ್ಕೆ ಪರಸ್ಪರ ಅಸಂಗತಗಳೆಂಬಂತೆಯೂ ವಿರುದ್ಧಗಳೆಂಬಂತೆಯೂ ಕಾಣುತ್ತವೆ. ಪರವಸ್ತುವು ಕೆಲವು ಕಡೆ ಅಪರೂಪವೆಂದಿದೆ: “ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಂ” (೨–೨೫); ಇನ್ನು ಕೆಲವು ಕಡೆ ಬಹುರೂಪಿಯೆಂದು ಹೇಳಿದೆ (ಮೇಲಣ ವಾಕ್ಯಗಳಲ್ಲಿ ಕಾಣುವಂತೆ); ಕೆಲವು ಕಡೆ ಅದು ನಿಷ್ಕ್ರಿಯವೆಂದು ಹೇಳಿದೆ; ಇನ್ನು ಕೆಲವು ಕಡೆ ಜಗತ್ಕ್ರಿಯವೆಂದು ಹೇಳಿದೆ. ಅಧ್ಯಾರೋಪಾಪವಾದನ್ಯಾಯದಿಂದ ಆ ವಾಕ್ಯಗಳನ್ನು ನೋಡಿದಾಗ ಅವುಗಳಲ್ಲಿಯ ಅಸಾಮಂಜಸ್ಯಗಳು ಕಳೆದುಹೋಗಿ, ಅವು ತತ್ತ್ವದರ್ಶನ ಸಾಧಕಗಳಾಗುತ್ತವೆ.

ನಮಗೆಲ್ಲ ಪರಿಚಿತವಾಗಿರುವುದು ಪ್ರತ್ಯಕ್ಷಪ್ರಪಂಚ. ಅದೇ ಪ್ರಕೃತಿ. ಅಲ್ಲಿಂದ ಪ್ರಾರಂಭವಾಗುತ್ತದೆ ವಿಚಾರ. ಅದರಲ್ಲಿ ಮುಖ್ಯ ಘಟ್ಟಗಳು ಹೀಗೆ—

1. **ಅಧ್ಯಾರೋಪ:** ಜಗತ್ತೇ ಬ್ರಹ್ಮ. ಏಕೆಂದರೆ ಜಗತ್ತು ಬ್ರಹ್ಮಕಾರ್ಯ. ಕಾರ್ಯವೆಂಬುದು ಕಾರಣದ ರೂಪಾಂತರ. ಹೀಗೆ ಜಗತ್ತೆಲ್ಲ ಬ್ರಹ್ಮಸ್ವರೂಪ.
   ಅಪವಾದ: ಜಗತ್ತು ವಿಕಾರ-ವಿನಾಶಗಳಿಗೊಳಪಟ್ಟ ವಸ್ತುಗಳ ಸಮುದಾಯ. ಬ್ರಹ್ಮವು ಅವಿಕಾರ್ಯ, ಶಾಶ್ವತ. ಜಗಲ್ಲಕ್ಷಣಗಳು ಬ್ರಹ್ಮಕ್ಕೆ ಹೊಂದಲಾರವು.
2. **ಅಧ್ಯಾರೋಪ:** ಜಗತ್ತಿನಲ್ಲಿಯ ಜಡಪದಾರ್ಥಗಳನ್ನು ಸಚೇತನವಾಗಿ ಮಾಡುವುದು ಜೀವ. ಪ್ರತ್ಯಕ್ಷದೇಹದ ಒಳಗಡೆ ಗೂಢವಾಗಿ ಸೇರಿಕೊಂಡಿರುವ ಜೀವವು ಬ್ರಹ್ಮಚೈತನ್ಯದ ಅಂಶ. ಅದೇ ಬ್ರಹ್ಮ.
   ಅಪವಾದ: ಜೀವವು ಪುಣ್ಯಪಾಪರೂಪಗಳಾದ ನಾನಾ ಕರ್ಮಗಳನ್ನು ಮಾಡಿ ಫಲಾಫಲಗಳನ್ನು ಅನುಭವಿಸುತ್ತದೆ. ಬ್ರಹ್ಮವಾದರೋ ಅಸಂಗ. ಅದಕ್ಕೆ ಕರ್ತೃತ್ವ-ಭೋಕ್ತೃತ್ವಗಳಿಲ್ಲ.
3. **ಅಧ್ಯಾರೋಪ:** ಜಗತ್ತನ್ನು ನಡಸಿ ಭಕ್ತರನ್ನು ಕಾಪಾಡಲು ಪ್ರಭು ಒಬ್ಬನಿರಬೇಕಲ್ಲವೆ? ಆ ಪ್ರಭುವೇ ಈಶ್ವರ. ಅವನೇ ಬ್ರಹ್ಮ.
   ಅಪವಾದ: ಈಶ್ವರನು ಪ್ರಕೃತಿಯೊಡಗೂಡಿದವನು; ಆದದ್ದರಿಂದ ಶುದ್ಧಬ್ರಹ್ಮವಾಗದು.
4. **ಅಧ್ಯಾರೋಪ:** ಪ್ರಕೃತಿಯು ಬ್ರಹ್ಮದ ಅಂಗ. "ಮೇ ಪ್ರಕೃತಿಃ" "ಮಯಾತತಮಿದಂ."
   ಅಪವಾದ: ಪ್ರಕೃತಿಯು ಬ್ರಹ್ಮದ ಲೀಲಾಚೇಷ್ಟಿತ ಮಾತ್ರ. ಅದು ಅಂಗವಲ್ಲ. ಅದಕ್ಕೆ ಬ್ರಹ್ಮದ ಪರಿಪೂರ್ಣ ಶಾಶ್ವತ ಭಾವದಲ್ಲಿ ಸ್ಥಾನವಿಲ್ಲ.

ಹೀಗೆ ಮೆಟ್ಟಲುಮೆಟ್ಟಲಾಗಿ ಸಾಗುತ್ತದೆ ವಿಚಾರ. ಇದರಲ್ಲಿ ಅಧ್ಯಾರೋಪವಾಕ್ಯಗಳು ಅಸತ್ಯಗಳಲ್ಲ, ಭಾಗಶಃ ಸತ್ಯಗಳು, ಹಾಗೆ ಸತ್ಯಭ್ರಾಂತಿಗಳು. ಅವು ಪರಿಷ್ಕಾರವನ್ನಪೇಕ್ಷಿಸುತ್ತವೆ. ಆ ಪರಿಷ್ಕಾರಗಳು ಅಪವಾದವಾಕ್ಯಗಳಿಂದ ಆಗುತ್ತವೆ. ಮೊದಲು ಒಂದು ಸುಲಭವಾದ ವಸ್ತುವಿನ ಕಡೆಗೆ ಬೆರಳು ತೋರಿಸಿ, ಅದನ್ನು ಗುರುತಿಸಿ ನೋಡೆಂದು ಹೇಳಿ, ಅದಾದ ಮೇಲೆ — "ಅದಲ್ಲ, ಅದರಿಂದಾಚೆಗೆ ನೋಡು" ಎಂದು ಬೆರಳು ತಿರುಗಿಸಿ, ಅದನ್ನೂ ನೋಡಿದ್ದಾದಮೇಲೆ, "ಇನ್ನೂ ಆಚೆಗೆ ನೋಡು" ಎಂದು ಹೇಳಿ, —ಹೀಗಾಗಿ, ಕಡೆಗೆ ತತ್ತ್ವ ದೊರೆತಾಗ ವಾಕ್ಕು ನಿಲ್ಲುತ್ತದೆ.

ಅಧ್ಯಾರೋಪಾಪವಾದಾಭ್ಯಾಂ
ನಿಷ್ಪ್ರಪಂಚಂ ಪ್ರಪಂಚತ್ಯೇ ॥

ಬ್ರಹ್ಮವಸ್ತುವು ರೂಪಗುಣಕ್ರಿಯಾವಿಕಾರಗಳಿಲ್ಲದ್ದು. ರೂಪರೇಖೆಯೆಂದರೆ ಪರಿಮಿತಿ; ಕ್ರಿಯೆಯೆಂದರೆ ರೂಪವಿಕಾರ; ಗುಣವೆಂದರೆ ಕ್ರಿಯಾಫಲಿತ. ಇವು ಜಗದ್ವಸ್ತುಗಳ ಲಕ್ಷಣಗಳು. ಬ್ರಹ್ಮವು ಈ ಪರಿಮಿತಿಗಳಿಲ್ಲದ್ದು. ಅದು ಅನಂತ.

ತಂದೆ ತನ್ನ ಮಕ್ಕಳ ಆಟವನ್ನು ತಾನು ಆ ಆಟದಲ್ಲಿ ಸೇರದೆ ನೋಡುತ್ತ ವಿನೋದ ಪಡುವಂತೆ, ಪರಮಾತ್ಮನು ಪ್ರಪಂಚಲೀಲೆಯನ್ನು ಅದರಲ್ಲಿ ಭಾಗಗೊಳ್ಳದೆ ನೋಡುವ ಶುದ್ಧ ಸಾಕ್ಷಿ. ಆ ರಹಸ್ಯವನ್ನು ಒಂದು ಉಪಾಯಸಾಧನವಿಲ್ಲದೆ ಹೇಗೆ ತಿಳಿಸಲಾದೀತು?

ಪರಿಶಿಷ್ಟ ೨

ಭಕ್ತಿ-ಕರ್ಮ-ಜ್ಞಾನ

ನಮ್ಮ ತತ್ತ್ವಶಾಸ್ತ್ರಗ್ರಂಥಗಳಲ್ಲಿ ಭಕ್ತಿ, ಕರ್ಮ, ಜ್ಞಾನ—ಇವುಗಳ ಅನ್ಯೋನ್ಯ ಶ್ರೇಷ್ಠತೆಯನ್ನು ಕುರಿತು ಜಿಜ್ಞಾಸೆ ತುಂಬಿದೆ. ನಮ್ಮ ತ್ರಿಮತಗಳಲ್ಲಿಯೂ ಇರುವ ಪ್ರಬಲತಮವಾದ ಕಲಹರಂಗಗಳಲ್ಲಿ ಇದು ಒಂದು. ಇದು ಅನಾವಶ್ಯಕವಾದ ಮತ್ತು ನಿಷ್ಫಲವಾದ ವಿವಾದವೆಂದು ನನ್ನ ನಂಬಿಕೆ. ಏಕೆಂದರೆ ಭಕ್ತಿ, ಕರ್ಮ, ಜ್ಞಾನ—ಎಂಬ ಮೂರು ಬಗೆಯ ಸಾಧನಗಳೂ ಬೇರೆಬೇರೆಯೆಂದು ತೋರಿದರೂ, ಆ ಮೂರರ ಮೂಲದ್ರವ್ಯವು ಏಕೈಕವಾದದ್ದು ಎಂಬುದರಲ್ಲಿ ಸಂದೇಹವಿರದು. ಮನುಷ್ಯನ ಅಂತರಂಗದ್ರವ್ಯವು ಒಂದು. ಅದಕ್ಕಿರುವ ಬಹಿಷ್ಪ್ರವಾಹಮಾರ್ಗಗಳು ನಾಲ್ಕಾರು. ಆ ಬಹು ಮಾರ್ಗಗಳಲ್ಲಿ ಭಕ್ತಿ ಜ್ಞಾನ ಕರ್ಮಗಳೆಂಬವು ಮುಖ್ಯವಾದ ಮೂರು. ಅಂತರಂಗದ್ರವ್ಯವು ಉದ್ದಿಷ್ಟವಸ್ತುವಿನ ಕಡೆಗೆ—

1. ಹೃದಯದ ದ್ವಾರದಿಂದ ಹರಿದರೆ ಭಕ್ತಿಯೆನಿಸುತ್ತದೆ;
2. ಬುದ್ಧಿಯ ದ್ವಾರದಿಂದ ಹರಿದರೆ ಜ್ಞಾನವಾಗುತ್ತದೆ;
3. ದೇಹೇಂದ್ರಿಯಾದಿ ದ್ವಾರದಿಂದ ಹರಿದರೆ ಕರ್ಮವಾಗುತ್ತದೆ.

ಸ್ವಕರ್ಮಣಾ ತಮಭ್ಯರ್ಚ್ಯ ॥ (೧೮–೪೬)

ಇಲ್ಲಿ “ತಮ್” ಎಂಬುದು ಜ್ಞಾನವಲ್ಲವೆ? ಅರ್ಚನೆ ಭಕ್ತಿಯಲ್ಲವೆ? ಕರ್ಮವಂತೂ ಸ್ಪಷ್ಟವಾಗಿದೆ.

ಈ ಮೂರು ದಾರಿಗಳಲ್ಲಿ ಮನುಷ್ಯನಿಗೆ ಯಾವ ಕ್ಷಣದಲ್ಲಿ ಯಾವ ದಾರಿ ಸುಲಭವೆಂದು, ಇಷ್ಟವೆಂದು ತೋರುತ್ತದೋ ಆ ದಾರಿಯಲ್ಲಿ ಅವನ ಅಂತರಂಗದ್ರವ್ಯ ಹರಿಯಹೊರಡುತ್ತದೆ. ಒಬ್ಬ ಮನುಷ್ಯನೇ ಒಂದು ಕ್ಷಣ ಭಕ್ತನಾಗಿ ಪೂಜೆ ಕೀರ್ತನೆಗಳಲ್ಲಿ ಸಂತೋಷ ಕಾಣಬಹುದು; ಇನ್ನೊಂದು ಕ್ಷಣ ಯೋಗಸಮಾಧಿಸ್ಥನಾಗಬಹುದು; ಮತ್ತೊಂದು ಕ್ಷಣ ಪುಣ್ಯಕಾರ್ಯನಿಷ್ಠನಾಗಬಹುದು. ಈ ಮೂರು ಮಾರ್ಗಗಳಲ್ಲೇ ಆಗಲಿ ಇನ್ನು ಬೇರೆ

ಭಗವದುಪಾಸನಾಮಾರ್ಗಗಳಲ್ಲಿಯೇ ಆಗಲಿ ಪರಸ್ಪರ ವಿರೋಧವನ್ನು ಕಾಣುವುದೂ, ಇದು ಮೇಲು—ಅದು ಬೀಳು ಎಂದು ವಾದಿಸುವುದೂ ಅಸಂಗತ.

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ
ತದ್ಯೋಗೈರಪಿ ಗಮ್ಯತೇ ॥ (೫–೫)

ಪರಿಶಿಷ್ಟ ೪

ಮೋಕ್ಷಸುಖ

ಮೋಕ್ಷವೆಂದರೆ ಬಿಡುಗಡೆ. ಯಾವುದರಿಂದ ಬಿಡುಗಡೆ? ಉತ್ತರ ನಾಲ್ಕು ಬಗೆಯಾಗಿದೆ:

1. ಜಗತ್ತಿನ ರುಚಿ ಕಾಂತಿಗಳು ನಮ್ಮಲ್ಲಿ ಬಗೆಬಗೆಯ ಆಶೆಗಳನ್ನೂ ವ್ಯಾಮೋಹಗಳನ್ನೂ ಕೆರಳಿಸಿ, ಬಗೆಬಗೆಯಾಗಿ ಚೇಷ್ಟೆ ಮಾಡಿಸುತ್ತವೆ. ಅವೇ ಆಶಾಪಾಶಗಳು. ಅವುಗಳ ಕಟ್ಟಿನಿಂದ ಬಿಡುಗಡೆಯಾದಾಗ ಮೋಕ್ಷ.
2. ಲೋಕದ ಜೀವನಸಂದರ್ಭಗಳಲ್ಲಿ ನಾವು ಎಷ್ಟೋ ಕೆಲಸಗಳನ್ನು ಮಾಡಬೇಕಾಗಿ ಬರುತ್ತದೆ. ಆ ಕೆಲಸಗಳನ್ನು ಮಾಡದಿದ್ದರೆ ಜೀವನವೇ ಸಾಧ್ಯವಾಗದು. ಜೀವನವು ಸಾರ್ಥಕವಾಗಬೇಕಾದರೂ ಕೆಲವು ಕರ್ಮಗಳನ್ನು ಕಡ್ಡಾಯವಾಗಿ ಮಾಡಬೇಕಾಗಿದೆ. ಹೀಗೆ ಮಾಡಿದ ಕರ್ಮಗಳ ಅವಸರದಲ್ಲಿ ಪುಣ್ಯಪಾಪಗಳು ನಡೆಯುತ್ತವೆ. ಇದೇ ಕರ್ಮಬಂಧನ. ಇದರಿಂದ ಬಿಡುಗಡೆ ಮೋಕ್ಷ.
3. ಜನ್ಮಜನ್ಮಾಂತರಗಳ ಕರ್ಮಶೇಷದ ಕಾರಣದಿಂದ ಜೀವವು ಹುಟ್ಟು ಸಾವುಗಳ ಸುಳಿಯಲ್ಲಿ ಬಿದ್ದು ಒದ್ದಾಡುತ್ತದೆ. ಅದೇ ಸಂಸಾರ. ಈ ಸಂಸಾರಸಾಗರದ ಸುಳಿಯಿಂದ ಬಿಡುಗಡೆಯಾದಾಗ ಮೋಕ್ಷ.
4. ಲೋಕಜೀವನವು ಕಷ್ಟನಿಷ್ಠುರಗಳಿಂದ ಭಾರವೆನಿಸುತ್ತದೆ. ದಾರಿದ್ರ್ಯ ಕಾರ್ಪಣ್ಯಗಳು ನೆಮ್ಮದಿ ಕೆಡಿಸಿ ಕಾಡಿಸುತ್ತವೆ. ಈ ಭಾರದ ಅನುಭವ ಹೋಗಿ, ಬಾಳು ಹೂವಿನ ಹೊರೆ, —ಹಗುರವಾದ ಹೊರೆ—ಎಂದು ಮನಸ್ಸಿಗೆ ತೋರುವಂತಾದರೆ ಅದು ಬಿಡುಗಡೆ. ಜೀವಕ್ಕೆ ಕ್ಲೇಶಭಾರ ನಿವೃತ್ತಿಯಾದದ್ದು ಮೋಕ್ಷ.

ಹೀಗೆ ಮೋಕ್ಷದಲ್ಲಿ ನಾಲ್ಕು ಬಗೆಯ ಬಿಡುಗಡೆಗಳು ಸೇರಿವೆ. ಅದರಲ್ಲಿ ನನಗೆ ಮುಖ್ಯವೆನಿಸುವುದು ನಾಲ್ಕನೆಯದು, —ಭಾರಸಂವೇದನೆಯಿಂದ ಬಿಡುಗಡೆ.

ಬಿಡುಗಡೆಯಿಂದ ಆಗುವ ಸುಖಸಂತೋಷಗಳೂ ಮೋಕ್ಷ. ಮನುಷ್ಯಸುಖಗಳಲ್ಲೆಲ್ಲ ಉತ್ತಮೋತ್ತಮವಾದದ್ದು ಮೋಕ್ಷ ಸುಖ.

ಸುಖವೆಂಬುದು ಎಲ್ಲರ ಅನುಭವದಲ್ಲಿಯೂ ಇರುವ ಸಂಗತಿ. ಎಲ್ಲರೂ ಅದರ ರುಚಿಯನ್ನು ಕಂಡಿದ್ದಾರೆ. ಆದದ್ದರಿಂದಲೇ ಪ್ರತಿಯೊಬ್ಬರಿಗೂ ಅದರ ಮೇಲೆ ಅಪೇಕ್ಷೆ. ಕೊಂಚವೂ ತಿಳಿಯದೆ ಇರುವುದರ ವಿಷಯದಲ್ಲಿ ಅಪೇಕ್ಷೆ ಹೇಗೆ ಹುಟ್ಟೀತು?

ಸುಖವನ್ನು ಎಲ್ಲರೂ ಕೊಂಚಕೊಂಚವಾದರೂ ಬಲ್ಲವರಾದರೂ, ಎಲ್ಲರೂ ಬಲ್ಲ ಸುಖದಲ್ಲಿ ಕೆಲವು ಕೊರತೆಗಳಿರುತ್ತವೆ.

ಮೊದಲನೆಯದಾಗಿ, ಸಾಮಾನ್ಯವಾದ ಸುಖವು ದುಃಖದ ಸಹವಾಸದಲ್ಲಿರುತ್ತದೆ. ಭೋಜನದ ಹಿಂದುಗಡೆ ಹಸಿವು, ಮುಂದುಗಡೆ ಅಜೀರ್ಣದ ಭಯ; ಸಿರಿತನದ ಹಿಂದೆ ಬಡತನ, ಮುಂದೆ ಮತ್ತೆ ಬಡತನದ ಭಯ; ಪ್ರೀತಿಯ ಹಿಂದೆ ಹಂಬಲ, ಮುಂದೆ ವಿಯೋಗ ಭಯ; ಸ್ನೇಹದ ಹಿಂದೆ ಉದಾಸೀನತೆ, ಮುಂದೆ ಮತ್ಸರದ ಭಯ—ಹೀಗೆ ನಮ್ಮ ಸುಖದಲ್ಲಿ ದುಃಖದ ಸ್ಮರಣೆ ಕೊಂಚ ಸೇರಿಕೊಂಡಿರುತ್ತದೆ. ಒಂದು ಬೇಕು ಎನ್ನುವುದರಲ್ಲಿ ಇನ್ನೊಂದು ಬೇಡ ಎನ್ನುವುದು ಅಂಟಿಕೊಂಡಿರುತ್ತದೆ.

ಎರಡನೆಯದಾಗಿ, ನಮ್ಮ ಸುಖದಲ್ಲಿ ಅದು ಮುಗಿದುಹೋದೀತೇನೋ ಎಂಬ ಭಯವಿದೆ. ಬಾದಾಮಿಯ ಹಲ್ವದ ಜ್ಞಾಪಕ ಬಂದಾಗ ಅದು ಬೇಕೆನಿಸುತ್ತದೆ. ಅದನ್ನು ಕಂಡಾಗ ಮೊದಲು ಒಂದು ಚೂರನ್ನು ನಾಲಗೆಯ ಮೇಲೆ ಇಟ್ಟುಕೊಳ್ಳಬೇಕೆನ್ನಿಸುತ್ತದೆ. ಹಾಗೆ ಇಟ್ಟುಕೊಂಡ ಮರುಕ್ಷಣವೇ ಅದು ಕರಗಿಹೋಗಲು ಮೊದಲಾಯಿತಲ್ಲಾ! ಇನ್ನೊಂದು ಚೂರು ಮತ್ತೊಂದು ಚೂರು ಬೇಕಲ್ಲಾ—ಎನ್ನಿಸುತ್ತದೆ.

ಮೂರನೆಯದಾಗಿ, ನಮ್ಮ ಸುಖಗಳು ಇಂದ್ರಿಯಗಳನ್ನಾಶ್ರಯಿಸಿಕೊಂಡಿರುವಂಥವು. “ಖ” ಎಂದರೆ ಇಂದ್ರಿಯ. ಇಂದ್ರಿಯ ಎಂದರೆ ದೇಹದ ಅಂಗಾಂಗಗಳಲ್ಲಿರುವ ನಾನಾ ವಿಧದ ವೇದನಶಕ್ತಿಗಳು. ಹೀಗೆ ನಮ್ಮ ಸುಖಗಳು ದೇಹಾವಲಂಬಿಗಳು. ದೇಹವಾದರೋ ಮರಣಭೀತಿಯುಳ್ಳದ್ದು.

ನಾಲ್ಕನೆಯದಾಗಿ, ಯಾವಾಗ ಸುಖವು ದೇಹವನ್ನಾಶ್ರಯಿಸಿಕೊಂಡದ್ದು ಎಂದಾಯಿತೋ ಆಗ ದೇಹದ ರೋಗರುಜಿನಗಳ ಚಿಂತೆ ನಮಗೆ ತಪ್ಪಿದ್ದಲ್ಲ. ನಾವು ಪಡುವ ಸುಖವೇ ರೋಗಕ್ಕೆ ದಾರಿ ಮಾಡಬಹುದು. ಮೃಷ್ಟಾನ್ನಭೋಜನವು ಅಜೀರ್ಣದಲ್ಲಿ ಪರ್ಯವಸಾನಗೊಳ್ಳಬಹುದು. ಬಾಯಾರಿದಾಗ ಕುಡಿದ ನೀರು ಸಿಹಿಯಾಗಿದ್ದರೆ ದಾಹ ತೀರುತ್ತದೆ. ಉಪ್ಪಾಗಿದ್ದರೆ ದಾಹ ಮತ್ತೂ ಹೆಚ್ಚಾಗುತ್ತದೆ. ಹೀಗೆ ನಮ್ಮ ಸುಖದ ಗರ್ಭದಲ್ಲಿ ದುಃಖದ ಬೀಜ ಹುದುಗಿಕೊಂಡಿರುವುದುಂಟು.

ಐದನೆಯದಾಗಿ, ಇಂದ್ರಿಯಸುಖದ ಮಾದಕ (ಅಮಲು) ದೇಹಕ್ಕಿಂತ ಮೇಲ್ಪಟ್ಟ ಜೀವವೆಂಬುದೊಂದುಂಟೆಂಬುದನ್ನು ಮರೆಯಿಸಬಹುದು. ಆತ್ಮಕ್ಕೆ ಮರೆಕಟ್ಟಬಹುದು. ಭಗವಂತನನ್ನು ಇಲ್ಲವೆನ್ನಿಸಬಹುದು. ದೇಹವೇ ಇರತಕ್ಕದ್ದು; ಅದು ಸವಿಯುಣ್ಣುವ ಕ್ಷಣವೇ ನಮ್ಮ ಸರ್ವಸ್ವ; ಆ ಸವಿಯನ್ನು ಬಿಟ್ಟರೆ ಬಾಳಿನಲ್ಲಿ ಇನ್ನೇನೂ ಸ್ವಾರಸ್ಯವಿಲ್ಲ—ಎಂದೆನ್ನಿಸುತ್ತದೆ. ಈ ಆತ್ಮವಿಸ್ಮೃತಿಯೇ ನಮ್ಮ ಸುಖಗಳಲ್ಲಿರುವ ಅಪಾಯಗಳಲ್ಲಿ ಬಹು ದೊಡ್ಡದು.

ಈ ನಾನಾ ಅಪಾಯಗಳಿಗೆ ಒಳಗಾಗದೆ ಇರುವ ಸುಖವೇ ಮೋಕ್ಷಸುಖ. ಇಂದ್ರಿಯಗಳ ಸ್ಪೃಕ್ಕು ಎಷ್ಟು ಮಾತ್ರವೂ ಇಲ್ಲದ ಸುಖವೇ ಆನಂದ. ಮುಗಿದು ಹೋಗುವ ಭಯವಾಗಲಿ, ವಿರೋಧದ ಸ್ಮರಣೆಯಾಗಲಿ, ಆಯಾಸದ ಮಿಶ್ರಣವಾಗಲಿ ಎಷ್ಟು ಮಾತ್ರವೂ ಇಲ್ಲದೆ ಅಪರಿಮಿತವೂ ಅವಿಚ್ಛಿನ್ನವೂ ಆಗಿರುವ ನಿರ್ಮಲ ಸ್ವತಂತ್ರ ಸುಖವೇ ಆನಂದ. ಈ ಆನಂದವು ಸಾಧ್ಯವಾಗುವುದು ದೇಹೇಂದ್ರಿಯಗಳ ಸೆಳೆತದಿಂದಲೂ ಜೀವಾವಸ್ಥೆಯ ಉಪದ್ರವಗಳಿಂದಲೂ ಆತ್ಮಕ್ಕೆ ಬಿಡುಗಡೆಯಾದಾಗ. ಅದೇ ಮೋಕ್ಷ.

ಅಹಂತೆಯಿಂದ ಬಿಡುಗಡೆಯೇ ಮೋಕ್ಷ—ಎಂದು ಹೇಳುವುದು ಎಲ್ಲ ದೃಷ್ಟಿಗಳಿಂದಲೂ ಉಚಿತವಾದೀತು. ಏಕೆಂದರೆ ಸಂಸಾರದ ತೊಡಕುಗಳೂ ಕರ್ಮದ ಅರ್ಥಾನರ್ಥಗಳೂ ಜನನ ಮರಣಗಳ ದುಃಖವೂ ಉತ್ಪನ್ನವಾಗುವುದು ಅಹಂಭಾವ ಪ್ರೇರಣೆಗಳಿಂದ—ಎಂದರೆ ಮನುಷ್ಯನು ತಾನು ಮಿಕ್ಕ ಜಗತ್ತಿನಿಂದ ಬೇರೆ, —ತಾನು ಭೋಕ್ತನಾಗತಕ್ಕವನು, ಜಗತ್ತು ಭೋಗ್ಯವಸ್ತು—ಎಂಬ ಭಾವನೆಯನ್ನಿಟ್ಟುಕೊಂಡಿರುವುದರಿಂದ. ಅವನು ತನ್ನಿಂದ ಬೇರೆಯಾದದ್ದು ಯಾವುದೂ ಇಲ್ಲವೆಂದೂ, ಜಗದ್ದ್ರವ್ಯದಲ್ಲಿ ಭಾಗಕ್ಕಾಗಿ ತನ್ನೊಡನೆ ಸ್ಪರ್ಧಿಸುವವರು ಯಾರೂ ಇಲ್ಲವೆಂದೂ, ತನಗೆ ಶತ್ರು ಎಲ್ಲಿಯೂ ಇಲ್ಲವೆಂದೂ ಮನಸಾ ತಿಳಿದ ಮೇಲೆ ಅವನಿಗೆ ಎಲ್ಲಿದ್ದರೆ ಏನು ದುಃಖ? ಏನು ಕಷ್ಟ? ಎಲ್ಲ ಅನುಭವಗಳೂ

ಮೇಲುಮೇಲಿನವು, ತನ್ನಿಂದ ಬೇರೆಯಾದ ಪ್ರಕೃತಿಯ ಚೇಷ್ಟಿತಗಳು; ವಾಸ್ತವವಾಗಿ ಇರುವ ವಸ್ತು ಪರಮಾತ್ಮ ಒಂದೇ; ತಾನು ಸರ್ವದಾ ಅದರಲ್ಲಿ ಇರತಕ್ಕವನೇ—ಎಂದು ಕ್ಷಣೇಕ್ಷಣೇ ಅನುಭವವಾಗುತ್ತಿದ್ದರೆ ಅವನ ಪಾಲಿಗೆ ಬಂಧವೂ ಇಲ್ಲ, ಮೋಕ್ಷವೂ ಇಲ್ಲ.

> ಬಂಧಮೋಕ್ಷೌ ನ ವಿದ್ಯೇತೇ
> ನಿತ್ಯಮುಕ್ತತಯಾಽಽತ್ಮನಃ ॥

ಸರ್ವಮೂಲವಾದ ಪರಬ್ರಹ್ಮವೊಂದೇ ಯಾರಿಗೆ ಸರ್ವದಾ ಸರ್ವತ್ರ ಅನುಭವವಾಗುತ್ತಿರುತ್ತದೆಯೋ, ಬ್ರಹ್ಮೇತರವಾದ ಯಾವೊಂದೂ ಮನಸ್ಸಿಗೆ ತೋರದೋ, ಕಣ್ಣಿಗೆ ಕಾಣುವುದೆಲ್ಲ ಯಾರ ಪಾಲಿಗೆ ಮಾಯಾಚೇಷ್ಟಿತವೋ, ಆತ್ಮನಿಂದ ಬೇರೆಯಾದದ್ದೊಂದೂ ಇಲ್ಲವೆಂಬ ದೃಢವಾದ ನಂಬಿಕೆಯಿಂದ ಯಾರ ಮನಸ್ಸಿಗೆ ಭೀತಿವ್ಯಾಮೋಹ ಕಾರಣಗಳಿಲ್ಲದೆ ಪರಿಪೂರ್ಣಶಾಂತಿ ಬರುತ್ತದೆಯೋ ಆತನು ಮುಕ್ತಪುರುಷ.

ನಮ್ಮ ಸಾಮಾನ್ಯ ಸುಖಗಳು ಲೋಕಸಂಬಂಧವುಳ್ಳವಾಗಿ ಬಗೆಬಗೆಯ ಮನೋವಿಕಾರಗಳಿಗೆ ಆಸ್ಪದ ಕೊಡುವುವಾದವು. ಯಾವ ಸುಖವು ಕೇವಲ ಆತ್ಮಸಂಬಂಧವುಳ್ಳದ್ದಾಗಿ ಮನೋವಿಕಾರಗಳಿಗೆ ಎಡೆ ಕೊಡುವುದಲ್ಲವೋ ಅದು ಮೋಕ್ಷಸುಖ. ಅದೇ ಆನಂದ. ಆ ಆನಂದದ ಲಕ್ಷಣವು ಚಿಂತೋಪದ್ರವಗಳಿಲ್ಲದ ಶಾಂತಿ. ಅಹಂತೆ ಕರಗುವುದೇ ಶಾಂತಿ. ಅಹಂಕಾರದಿಂದ ಬಿಡುಗಡೆಯೇ ಮೋಕ್ಷ.

ಪರಿಶಿಷ್ಟ ೫

ಮತಧರ್ಮವೋ ಮದ್ದೀಡೋ

ರಷ್ಯಾ ದೇಶದಲ್ಲಿ ಕ್ರಿಸ್ತಶಕ ೧೯೧೭ರಲ್ಲಿ ರಾಜಘಾತಕ ಮಹಾಕ್ರಾಂತಿ ನಡೆಯಿತಷ್ಟೆ? ಅದರಲ್ಲಿ ಆ ಬಾಲ್ಷೆವಿಕ್ ನಾಯಕರ ಪೆಟ್ಟು ಬಿದ್ದದ್ದು ಮೊದಲು ಮತಸಂಸ್ಥೆಗಳ ಮೇಲೆ. ಗುರುಪುರೋಹಿತರುಗಳು ರಾಜ್ಯಾಧಿಕಾರಿಗೂ ಬಂಡವಾಳಗಾರನಿಗೂ ಅಂಗರಕ್ಷಕರು. ಅವರು ಜನದ ಗಮನವನ್ನು ಇಹಜೀವನದಿಂದ ಲೋಕಾಂತರದ ಕಡೆಗೆ ತಿರುಗಿಸುತ್ತಾರೆ. ಅದರಿಂದ ರಾಜ್ಯದ ಅನ್ಯಾಯಕಾರಿಗಳೂ ಧನಿಕ ದುರ್ಲೋಭಿಗಳೂ ಪ್ರಜೆಯ ಆಗ್ರಹವನ್ನು ತಪ್ಪಿಸಿಕೊಳ್ಳಲು ಅವಕಾಶವಾಗುತ್ತದೆ. ಹೀಗೆ ಮತಧರ್ಮವೆಂಬುದು ಜನತೆಗೆ ಮೈಮರೆಯಿಸುವ ಮದ್ದೀಡು, — “ಡೋಪ್” (Dope). ಇದು ಕಮ್ಯುನಿಷ್ಟರ ವಾದ.

“ಡೋಪ್” ಎಂಬ ಮಾತು ಕುದುರೆಯ ಜೂಜಾಟದ ಪರಿಭಾಷೆಯಿಂದ ಬಂದದ್ದು. ಒಂದಾನೊಂದು ಕುದುರೆ ಚುರುಕಾದದ್ದು, ಅದು ಪಂದ್ಯದಲ್ಲಿ ಗೆದ್ದೀತು—ಎಂದು ಎದುರು ಕಡೆಯವರಿಗೆ ತಿಳಿದಾಗ, ಅವರು ಆ ಕುದುರೆಯ ಸವಾರ ಚಾಕರರನ್ನು ವಶಪಡಿಸಿಕೊಂಡು, ಅವರಿಂದ ಅದಕ್ಕೆ ಗುಟ್ಟಾಗಿ ಮದ್ದು ತಿನ್ನಿಸುವುದುಂಟಂತೆ. ಆಗ ಆ ಕುದುರೆ ಚುರುಕಾಗಿರುವುದು ಹೋಗಿ ಮಂಕಾಗುತ್ತದಂತೆ. ಗುಡಿ ಮಠಗಳು ಜನಕ್ಕೆ ಅಂಥಾ ಮಂಕುಮದ್ದು. ಜನರು ತಮ್ಮ ಕಷ್ಟ ಅನ್ಯಾಯಗಳಿಗೆ ಬಂಡವಾಳಸ್ತರೂ ಅಧಿಕಾರಸ್ಥರೂ ಕಾರಣರೆಂಬುದನ್ನು ಮರೆತು, —ದೇವರು, ಧರ್ಮ, ಅದೃಷ್ಟ, ಪುಣ್ಯ, ಪಾಪ—ಎಂದು ಏನೇನೋ ಅರಿಯಲಾಗದ್ದನ್ನು ನಂಬುತ್ತಾರೆ. ಅದರಿಂದ ಅವರ ಪಾಡು ಇನ್ನೂ ಕೆಡುತ್ತದೆ. ಜನದ ಸ್ಥಿತಿಯನ್ನು ಸರಿಪಡಿಸಬೇಕಾದರೆ ಮೊದಲು ಅವರ ಮತಶ್ರದ್ಧೆಯನ್ನು ಮುರಿಯಬೇಕು. ಇದು ಕಮ್ಯುನಿಸ್ಟರ ತಾತ್ಪರ್ಯ.

ಕಮ್ಯುನಿಸ್ಟರು ನಾಸ್ತಿಕರಿರಬಹುದು. ಆದರೆ ಅವರ ವಾದವು ಪೂರ್ತಿ ನಿರಾಧಾರವಾದದ್ದೋ? ಮತಶ್ರದ್ಧೆಯು ಬುದ್ಧಿಗೆ ಆವೇಶ ತಂದು ಭ್ರಾಂತಿಯುಂಟುಮಾಡಲಾರದೋ? ಇಲ್ಲಿ ದೋಷವಿರುವುದು ಮತತತ್ತ್ವದಲ್ಲಲ್ಲ, ಮತೋತ್ಸಾಹದ ಕುರುಡುತನದಲ್ಲಿ. ಮತಧರ್ಮವು

ಮನುಷ್ಯಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಏಕಪ್ರಕಾರವಾಗಿ ವ್ಯಾಪಿಸಿರಬೇಕಾದದ್ದು. ಅದು ಹಾಗಾಗದೆ ಪೂಜೆ ಭಜನೆಗಳಿಗೆ ಕಟ್ಟುಬಿದ್ದು, ದೇಶ ರಾಷ್ಟ್ರಗಳನ್ನು ನಿರಾಕರಿಸಿದ್ದಾದರೆ ಆಗ ಅದು ಮತಧರ್ಮವಾಗದು, ಮತಭ್ರಾಂತಿಯೇ ಆದೀತು.

ಮತಾತಿರೇಕವು ಲೌಕಿಕಕರ್ತವ್ಯಗಳನ್ನು ಮರೆಯಿಸುತ್ತದೆಂಬುದಕ್ಕೆ ನಿದರ್ಶನಗಳು ನಮ್ಮ ದೇಶದಲ್ಲಿ ಅಪರೂಪವಲ್ಲ. ವಿರಕ್ತಿ ಭಗವದ್ಭಕ್ತಿಗಳ ಹೆಸರಿನಲ್ಲಿ ರಾಷ್ಟ್ರ ಸಮಾಜಗಳ ಕೊಳಕಿಗೆ ಕಣ್ಣು ಮುಚ್ಚಿಕೊಂಡಿರುವ ವಿದ್ಯಾವಂತ ಜನ ನಮ್ಮಲ್ಲಿ ಬಹು ಸಾಮಾನ್ಯವಾಗಿದ್ದಾರೆ. ನಮ್ಮ ಧರ್ಮಶ್ರದ್ಧೆಯು ನಮ್ಮ ರಾಷ್ಟ್ರಕಜೀವನದಲ್ಲಿ ಕಾಣಬಂದಿದ್ದಿದ್ದರೆ ದೇಶವು ನಿತ್ಯದುರ್ಭಿಕ್ಷಕ್ಕೂ ಶತ್ರುಭಯಕ್ಕೂ ಸಿಕ್ಕಬೇಕಾಗುತ್ತಿರಲಿಲ್ಲ. ಭಜನೆ ಉತ್ಸವಗಳು ನಮ್ಮಲ್ಲಿ ತಕ್ಕಮಟ್ಟಿಗೆ ನಡೆಯುತ್ತಿವೆ. ಪುರಾಣ ಪುಣ್ಯಕಥೆಗಳು ಸಾಗುತ್ತಿವೆ. ಹರಿಕಥೆ ಧರ್ಮೋಪನ್ಯಾಸಗಳ ಸುದ್ದಿ ದಿನದಿನವೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಅದರೊಡನೆಯೇ ಲಂಚಾವತಾರದ ಲಕ್ಷ ಲೀಲೆಗಳೂ ಆಡಳಿತದಲ್ಲಿ ಅಕ್ರಮಗಳ ಸುದ್ದಿಗಳೂ ಅಪನೀತಿಯ ಸಮಾಚಾರಗಳೂ ಹರಡುತ್ತಿವೆ. ಹೀಗೆ ಒಂದು ಕಡೆ ಭಕ್ತಿಸಂಭ್ರಮ, ಇನ್ನೊಂದು ಕಡೆ ನೀತಿಭ್ರಷ್ಟತೆ—ಇದು ಹೇಗೆ ಒಪ್ಪುತ್ತದೆ? ದೈವಶ್ರದ್ಧೆಯೂ ಧರ್ಮಶ್ರದ್ಧೆಯೂ ಜನದಲ್ಲಿ ನಿಜವಾಗಿದ್ದರೆ ಈ ಅಸಂಗತ ಹೇಗೆ ಬರುತ್ತದೆ?

ಇದಕ್ಕೆ ಕಾರಣ ಮತಧರ್ಮವಲ್ಲ, ಮತಧರ್ಮದ ವಿಷಯದಲ್ಲಿ ನಮ್ಮ ಜನವಿರಿಸಿಕೊಂಡಿರುವ ತಪ್ಪು ಭಾವನೆ. ಧರ್ಮವು ನಮ್ಮ ಜೀವನದ ಸಮಸ್ತಕ್ಕೂ ಅನ್ವಯಿಸತಕ್ಕದ್ದೆಂಬುದಾದರೆ, ಅದರ ಕ್ಷೇತ್ರಗಳು ಮುಖ್ಯವಾಗಿ ನಾಲ್ಕೆಂದು ಗಮನಿಸಬೇಕು:

1. ಔಪಾಸನಿಕ,
2. ಕೌಟುಂಬಿಕ,
3. ಸಾಮಾಜಿಕ,
4. ರಾಷ್ಟ್ರಕ.

ನಮ್ಮ ಜನ ಮೊದಲಿನದೊಂದೇ ಭಕ್ತಿಯೆಂದು ಗಣಿಸಿ, ಎರಡನೆಯದು ಅಷ್ಟಿಷ್ಟು ಅನಿವಾರ್ಯವೆಂದು ಗ್ರಹಿಸಿದ್ದಾರೆ. ಮೂರನೆಯದನ್ನೂ ನಾಲ್ಕನೆಯದನ್ನೂ ಧರ್ಮಕ್ಷೇತ್ರದಿಂದ ಹೊರಗಿಟ್ಟಿದ್ದಾರೆ. ಹೀಗೆ ಜನದ ಧರ್ಮಭಾವನೆಗೂ ಲೋಕಜೀವನಕ್ಕೂ ಸಂಬಂಧ

ತಪ್ಪಿಹೋಗಿದೆ. ಇದರಿಂದಲೇ ನಮ್ಮ ಅನರ್ಥಪರಂಪರೆ. ಭಜನೆ ಸಂಕೀರ್ತನೆಗಳ ಸಂಗೀತವೂ ನೈವೇದ್ಯ ಸಮಾರಾಧನೆಗಳ ಸವಿರುಚಿಯೂ ಮನಸ್ಸಿಗೆ ಇಷ್ಟವಾಗುತ್ತದೆ. ಸಾಮಾಜಿಕ ಕರ್ತವ್ಯಗಳಾದರೋ ಶ್ರಮಕೊಡತಕ್ಕವು. ರಾಜಕೀಯ ಕರ್ತವ್ಯಗಳಂತೂ ನಿಷ್ಠುರ ತರತಕ್ಕವು. ಆದದ್ದರಿಂದ ಪೌರಧರ್ಮ ರಾಷ್ಟ್ರಕಧರ್ಮಗಳು ನಮ್ಮ ಜನಕ್ಕೆ ದೂರವಾಗಿವೆ. ಇದು ಧರ್ಮವಿವೇಕವುಳ್ಳ ಜನದ ಲಕ್ಷಣವಾಗದು. ಧರ್ಮವು ದೈವಭಕ್ತಿಯನ್ನು ಅಪೇಕ್ಷಿಸುವಂತೆ ಸಾರ್ವಜನಿಕ ಕರ್ತವ್ಯಜಾಗರೂಕತೆಯನ್ನೂ ಅಪೇಕ್ಷಿಸುತ್ತದೆ. ಇದನ್ನು ಉಪೇಕ್ಷಿಸಿದವರು ಧರ್ಮಲೋಪಿಗಳಾಗುತ್ತಾರೆ.

ಒಬ್ಬಾನೊಬ್ಬ ಪ್ರಸಿದ್ಧ ಗೀತಾಭಾಷಣಕಾರರು ಬೆಂಗಳೂರಿಗೆ ಬಂದು ಇಪ್ಪತ್ತು ಉಪನ್ಯಾಸಗಳ ಧಾರೆಯನ್ನು ಅನುಗ್ರಹಿಸಿದರು. ಜನ ತಂಡತಂಡವಾಗಿ ಬರುತ್ತಿದ್ದರು. ಕಾರುಗಳು ನೂರಾರು. ಮಹಿಳೆಯರು ಸಾವಿರಾರು ಮಂದಿ. ಅವರಲ್ಲಿ ಒಡವೆ ವಸ್ತ್ರಗಳ ಪ್ರದರ್ಶನಕ್ಕಾಗಿ ಬಂದಿದ್ದವರೆಷ್ಟು ಮಂದಿಯೋ! ಪ್ರತಿಯೊಬ್ಬರ ಕೈಯಲ್ಲೂ ಗೀತಾಗ್ರಂಥ. ಅವರ ಉತ್ಸಾಹವನ್ನು ನೈಜವಾದದ್ದೆಂದು ಭಾವಿಸಿದ ಪಕ್ಷದಲ್ಲಿ ಬೆಂಗಳೂರು ಅರ್ಧಕ್ಕಿಂತ ಹೆಚ್ಚಾಗಿ ನವನಾಗರಿಕರ ಬೀಡಾಗದೆ, ತಪೋವನವೇ ಆಗಿದ್ದಿರಬೇಕು. ಆ ಉಪನ್ಯಾಸಮಾಲಿಕೆಯ ಸಮಾಪ್ತಿಯ ದಿವಸ ಒಬ್ಬ ಲೌಕಿಕ ದೊಡ್ಡಮನುಷ್ಯರನ್ನು ಸಭಾಧ್ಯಕ್ಷರನ್ನಾಗಿ ಮಾಡಿಕೊಂಡಿದ್ದರು. ಆ ಅಧ್ಯಕ್ಷರು ತಮ್ಮ ಮುಕ್ತಾಯಭಾಷಣದಲ್ಲಿ ಉಪನ್ಯಾಸಕರಿಗೆ ಒಂದು ಸವಾಲ್ ಹಾಕಿದರು. ಹೀಗೆ:

"ಸ್ವಾಮಿ, ನನಗೆ ತಿಳಿದ ಒಂದಾನೊಂದು ಕಛೇರಿಯಲ್ಲಿ ಒಬ್ಬ ಅಕೌಂಟೆಂಟ್ (ಲೆಕ್ಕದ ಗುಮಾಸ್ತೆ) ಇದ್ದಾರೆ. ಅವರು ಆಚಾರವಂತರು. ಪಂಚೆಕಚ್ಚೆಹಾಕಿ ಧೋತ್ರ ಉಟ್ಟಿರುತ್ತಾರೆ. ಹಣೆಯ ತುಂಬ ವಿಭೂತಿಯಿರುತ್ತದೆ. ಬಾಯಲ್ಲಿ ಯಾವಗಲೂ ಗೀತಾವಾಕ್ಯಗಳು. ಮಾತು ಮಾತಿಗೂ ರಾಮ ರಾಮ, ಶಿವ ಶಿವ—ಎನ್ನುತ್ತಾರೆ. ಆದರೆ ಅವರ ಕಾಗದಪತ್ರಗಳನ್ನು ತನ್ನಿರೆಂದಾಗ ಬೇಕಾದ ದಾಖಲೆ ಸಿಕ್ಕುವುದಿಲ್ಲ. ಹಣದ ಲೆಕ್ಕದಲ್ಲಿ ತಪ್ಪುಗಳು. ಯಾವ ಸಂಗತಿ ಕೇಳಿದರೂ ನೆನಪಿಲ್ಲ. ಹೀಗೆ ಏಕೆ? ಎಂದು ಕೇಳಿದರೆ, 'ರಾಮನು ಎಲ್ಲವನ್ನೂ ಸರಿ ನೋಡಿಕೊಳ್ಳುತ್ತಾನೆ' —ಎಂದು ಉತ್ತರ. 'ಇದೇನು, ಹೊಟ್ಟೆಪಾಡಿನ ಚಾಕರಿ!' —ಎಂದು ತಾತ್ಸಾರ ಆತನಿಗೆ. ಸಂಬಳ ಕೊಡುವ ಕರ್ತವ್ಯದಲ್ಲಿ ಗೌರವವಿಲ್ಲ, ದಕ್ಷತೆಯಿಲ್ಲ. ಆದರೆ ಅವರು ಗೀತಾಪರಾಯಣರು.

“ಅದೇ ಕಛೇರಿಯಲ್ಲಿ ಒಬ್ಬ ಟೈಪಿಸ್ಟ್ ಇದ್ದಾರೆ. ಆತ ಹಿಂದೂ ಹೌದೋ ಅಲ್ಲವೋ! ಹಣೆಯಮೇಲೆ ಯಾವ ಗುರುತೂ ಇಲ್ಲ. ಆತ ಇಜಾರು ಧರಿಸುತ್ತಾರೆ. ಹ್ಯಾಟ್ ಧರಿಸುವುದೂ ಉಂಟು. ಆತ ಮುಖಕ್ಷೌರವನ್ನು ಮಾಡಿಕೊಂಡಿರುತ್ತಾರೆ. ಗೀತೆಯ ಹೆಸರಾಗಲಿ ರಾಮನ ಹೆಸರಾಗಲಿ ಆತನ ಬಾಯಿಂದ ನಾನು ಕೇಳಿದ್ದಿಲ್ಲ. ಆದರೆ ಆತ ತನ್ನ ಕೆಲಸದಲ್ಲಿ ಸಮರ್ಥ. ತಪ್ಪಿಲ್ಲದೆ ಬರೆದುಕೊಳ್ಳುತ್ತಾರೆ. ಅಂದವಾಗಿ ಟೈಪು ಮಾಡುತ್ತಾರೆ. ಹೊತ್ತಿಗೆ ಸರಿಯಾಗಿ ಕಾಗದ ಸಿದ್ಧಪಡಿಸುತ್ತಾರೆ. ಎಷ್ಟೋ ವೇಳೆ ಕಛೇರಿ ಮುಗಿದ ಮೇಲೆ ರಾತ್ರಿಯಲ್ಲೋ ಅಥವಾ ಬೆಳಗ್ಗೆ ಬೇಗನೆ ಬಂದೋ ಹೆಚ್ಚು ಕೆಲಸವನ್ನು ಮುಗಿಸಿರುತ್ತಾರೆ. ಈತನನ್ನು ಕಛೇರಿ ಪರಾಯಣನೆಂದು ಕರೆಯೋಣ.

“ಈ ಇಬ್ಬರಲ್ಲಿ ಯಾರ ಗೀತಾನಿಷ್ಠೆ ದೊಡ್ಡದು–ಗೀತೆ ನುಡಿಯುವವರದೋ, ಕರ್ತವ್ಯ ಮಾಡುವವರದೋ?”

ಈ ಪ್ರಶ್ನೆಯನ್ನು ನಮ್ಮ ಜನರು ಮನನ ಮಾಡಿದರೆ ಅವರ ಗೀತಾಭಕ್ತಿಯು ಸಾರ್ಥಕವಾದೀತು. ನಿಜವಾದ ಧರ್ಮದ ಗುಣವು ಅದನ್ನು ಹೇಳಿಕೊಳ್ಳುವ ಜನದ ಜೀವನದಲ್ಲಿ ಪ್ರತಿಫಲಿಸಬೇಕಲ್ಲವೆ?

ಸಾಮಾಜಿಕ ರಾಷ್ಟ್ರಕ ಕರ್ತವ್ಯಗಳು ಗೀತೋಪದಿಷ್ಟವಾದ ಧರ್ಮಕ್ಕೆ ಕಾರ್ಯರಂಗವೆಂಬುದನ್ನು ಚೆನ್ನಾಗಿ ಎತ್ತಿ ತೋರಿಸಿದವರು ಮಹಾತ್ಮಗಾಂಧಿಯವರು. ಅವರನ್ನು ರಾಜಕೀಯಕ್ಕೆ ತಂದದ್ದು ಅವರ ಧರ್ಮೋತ್ಸಾಹ. ರಾಜ್ಯರಂಗದಲ್ಲಿ ಧರ್ಮವಿಲ್ಲದೆ ಹೋದಲ್ಲಿ ಜನಜೀವನದಲ್ಲಿ ಧರ್ಮವಿರಲಾರದೆಂಬುದನ್ನು ಅವರು ಮನಗಂಡಿದ್ದರು. ಅವರ ಧರ್ಮಶ್ರದ್ಧೆಯಿಂದ ಅವರಿಗೆ ರಾಜಕೀಯವು ಅವಶ್ಯ ಕರ್ತವ್ಯವಾಯಿತು. ಅವರು ಸಂಜೆ ಸಂಜೆಯೂ ನಡಸುತ್ತಿದ್ದ ಪ್ರಾರ್ಥನಾಸಭೆಗಳು ರಾಜಕೀಯ ಸಭೆಗಳೂ ಆಗಿರುತ್ತಿದ್ದುವು. ಆಯಾ ದಿನದ ಮುಖ್ಯ ಸಾರ್ವಜನಿಕವಿಚಾರಗಳನ್ನು ಆ ಸಭೆಗಳಲ್ಲಿ ಅವರು ಪ್ರಸ್ತಾವಿಸಿ, ಜನಕ್ಕೂ ಸರಕಾರಕ್ಕೂ ವಿವೇಕ ಹೇಳುತ್ತಿದ್ದುದು ಅವರ ಧರ್ಮಾನುಷ್ಠಾನದಲ್ಲಿ ಅತ್ಯಂತ ಮುಖ್ಯ ಭಾಗ. ಇದನ್ನು ನಮ್ಮ ಧರ್ಮಾಭಿಮಾನಿಗಳು ನೆನಪಿನಲ್ಲಿರಿಸಿಕೊಳ್ಳಬೇಕು. ಜೀವನದ ಯಾವ ಭಾಗದಿಂದಲೂ ಧರ್ಮವನ್ನು ವಿನಾಯಿಸತಕ್ಕದ್ದಲ್ಲ.

ಪರಿಶಿಷ್ಟ ೬

ಕಾಲ ಸ್ವರೂಪ

ಕಾಲೋಽಂಶಃ ಪರಮಾತ್ಮನಃ ॥ —ಮಹಾಭಾರತ, ಶಾಂತಿ, ೨೩೮-೨೫.
ಕಾಲೋಽಪಿ ತನ್ಮಯೋಽಚಿಂತ್ಯಸ್ತ್ರಿಗುಣಾತ್ಮಾ ಸನಾತನಃ ॥ —ಅದೇ ೪೩.
ಕಾಲಾತ್ಮನಾ ತ್ವಿದಂ ಭಿನ್ನಮಭಿನ್ನಂ ಶ್ರೂಯತೇ ಹಿ ಯತ್ ।
ಅನಾದ್ಯಂತಮಜಂ ದಿವ್ಯಮವ್ಯಕ್ತಮಜರಂ ಧ್ರುವಮ್ ॥ —ಅದೇ ೪೪.

“ಕಾಲ” ಎಂಬ ಮಾತನ್ನು ಎಲ್ಲರೂ ಬಳಸುತ್ತಿದ್ದೇವೆ. ಕಾಲ ಎಂಥಾದ್ದೆಂಬುದು ನಮ್ಮೆಲ್ಲರ ಮನಸ್ಸಿಗೂ ತಿಳಿದಿದೆ, —ಅಥವಾ ತಿಳಿದಿದೆಯೆಂಬಂತೆ ಮಾತು ಕಥೆ ನಡಸುತ್ತೇವೆ. ಆದರೆ ಅವರ ಸ್ವರೂಪವನ್ನು ನಾವು ಚೆನ್ನಾಗಿ ಬಲ್ಲೆವೆ? ಅದನ್ನು ಮಾತಿನಿಂದ ನಿಷ್ಕರ್ಷೆಯಾಗಿ ಗೊತ್ತಾಗುವಂತೆ ತಿಳಿಯಪಡಿಸಲಾದೀತೆ? ಆ ಪ್ರಯತ್ನ ನಮಗೆ ಅವಶ್ಯವಾಗಿದೆ. ಏಕೆಂದರೆ ಜಗತ್ತು ಕಾಲವೆಂಬುದಕ್ಕೆ ಒಳಪಟ್ಟದ್ದೆಂಬುದನ್ನು ನಾವೆಲ್ಲ ಒಪ್ಪಿಕೊಂಡಿರುವಂತೆ ಕ್ಷಣಕ್ಷಣವೂ ನಡೆದುಕೊಳ್ಳುತ್ತಿದ್ದೇವೆ. “ಎಲ್ಲ ಕಾಲಮಹಿಮೆ”, “ಇದು ಕಾಲವೈಪರೀತ್ಯ” —ಎನ್ನುತ್ತೇವೆ. ಆದದ್ದರಿಂದ ಕಾಲದ ಕೆಲವು ಗುರುತುಗಳನ್ನು ಆಲೋಚಿಸಿ ನೋಡೋಣ.

1. ಕಾಲವು ನಾವು ಅಂತರಂಗದಲ್ಲಿ ಅನುಭವಿಸುವ ಒಂದು ಬಹಿರಂಗಸಂಗತಿ. ಅದು ನಮ್ಮ ಕಣ್ಣು ಕೈಗಳಿಗೆ ಸಿಕ್ಕದೆ ಜ್ಞಾನಕ್ಕೆ ಮಾತ್ರ ವಿಷಯವಾಗುತ್ತದೆ.
2. ಅದು ತಾನು ರೂಪವಿಲ್ಲದ್ದಾದ ಕಾರಣದಿಂದ ರೂಪ ತಾಳಿದ ಭೌತವಸ್ತುವಿನ ಅಥವಾ ಕ್ರಿಯೆಯ ಸಹವಾಸದಲ್ಲಿ ನಮ್ಮ ಮನಸ್ಸಿಗೆ ಗೋಚರಿಸುತ್ತದೆ. ಜಗದ್ವಸ್ತುಗಳ ಗುಣಗಳನ್ನು —ಬಿಳುಪು, ಕೆಂಪು, ಸಿಹಿ, ಖಾರ, ತೆಳು, ದಪ್ಪ, ಒಳ್ಳೆಯತನ, ಕೆಟ್ಟತನ ಇಂಥವುಗಳನ್ನು —ಆಯಾ ವಸ್ತುಗಳಿಂದ ಬೇರೆ ತೆಗೆದು ತೋರಿಸುವುದು ಹೇಗೆ ಆಗಲಾರದೋ, ಹಾಗೆಯೇ ಕಾಲವನ್ನು ತತ್ಸಂಬದ್ಧಗಳಾದ ವಸ್ತುಕ್ರಿಯೆಗಳಿಂದ ಬೇರ್ಪಡಿಸಿ ತೋರಿಸುವುದು ಅಸಾಧ್ಯ. ಆಗ, ಈಗ, ಯಾವಾಗ, ಇಂದು, ನಾಳೆ, ನಿನ್ನೆ—ಇಂಥಾ ಕ್ರಿಯಾಸಂಬಂಧ ಶಬ್ದಗಳು ಕಾಲವಾಚಕಗಳು.

3. ನಮ್ಮ ಜೀವಮಾನದ ಪ್ರತಿಯೊಂದು ಭಾಗವೂ ವಿಭಾಗವೂ ಕಾಲ. ಕಾಲವು ಜೀವಿಯ ಆಯುಸ್ಸಿನ ಒಂದು ಚೂರು.
4. ನಮ್ಮ ಜೀವಮಾನಕ್ಕೆ ಹಿಂದುಗಡೆ ಕಾಲವಿತ್ತು. ಮುಂದೆಯೂ ಇರುತ್ತದೆ. ಶಾಶ್ವತಕಾಲದ ಒಂದು ಚೂರು ನಮ್ಮ ಜೀವಮಾನ.
5. ಹೀಗೆ ಕಾಲವು ಎಂದೆಂದೂ ಇದ್ದದ್ದು; ಎಂದೆಂದಿಗೂ ಇರಬಲ್ಲದ್ದು. ಅದು ಗೂಢವಾಗಿರುತ್ತದೆ; ಪ್ರಕಾಶಕ್ಕೂ ಬರುತ್ತದೆ. ಇರುವಿಕೆ ಎಲ್ಲೆಲ್ಲುಂಟೋ, ಮತ್ತು ಇರುವಿಕೆಯ ಅರಿವು ಎಲ್ಲೆಲ್ಲುಂಟೋ ಅಲ್ಲೆಲ್ಲ ಕಾಲವುಂಟು. ಜಗತ್ತಿರುವಲ್ಲಿ ಕಾಲಭಾವನೆ; ಜಗತ್ತಿಲ್ಲದಲ್ಲಿ ಕಾಲವಿಲ್ಲ. ಜಗತ್ತೆಂದರೆ ಕ್ರಿಯೆ! ಕ್ರಿಯೆಗೆ ಕಾಲಭಾವನೆ ಅನಿವಾರ್ಯವಾದದ್ದು. ಇರುವಿಕೆಯ ಹರಹಿನ ಅರಿವೇ ಕಾಲಮಾನ. ಅಸ್ತಿತ್ವವಿಸ್ತರದ ಮಾನಸಿಕಾನುಭವಕ್ಕೆ ಕಾಲವೆಂದು ಹೆಸರು. ಅಸ್ತಿತ್ವವು ಬ್ರಹ್ಮವಸ್ತುವಿನ ಲಕ್ಷಣ. ಆ ಅಸ್ತಿತ್ವವನ್ನು ಅನುಭವಿಸುವವನು ಜೀವ. ಜಗತ್ಸೃಷ್ಟಿಗೆ ಪೂರ್ವದಲ್ಲಿ ಬ್ರಹ್ಮವಿತ್ತು. ಅದನ್ನು ಅನುಭವಿಸುವ ಚೇತನವು ಆಗ ಬ್ರಹ್ಮದಿಂದ ಬೇರೆಯಾಗಿರಲಿಲ್ಲ. ಆದದ್ದರಿಂದ ಆಗ ಕಾಲವನ್ನು ಕುರಿತ ಮಾತಿರಲಿಲ್ಲ.
6. ಕಾಲವನ್ನು ಎರಡು ಬಗೆಯಾಗಿ ಎಣಿಸಬಹುದು: (೧) ನಮ್ಮ ಜೀವಮಾನಕ್ಕೆ ಸಂಬಂಧಪಟ್ಟದ್ದೆಂಬಂತೆ, (೨) ನಮ್ಮ ಲೋಕಗಳನ್ನೆಲ್ಲ ಮೀರಿ ಆವರಿಸಿಕೊಂಡಿದೆಯೆಂಬಂತೆ. ಮೊದಲಿನದು ಪರಿಮಿತಕಾಲ, ಅಥವಾ ವ್ಯವಹಾರಕಾಲ. ಎರಡನೆಯದು ಅಪರಿಮಿತಕಾಲ, ಅಥವಾ ಲೋಕಾತೀತಕಾಲ. ಅದೇ ಶುದ್ಧಕಾಲ. ಅಥವಾ ನಿತ್ಯಕಾಲ. ಪರಿಮಿತವಾದದ್ದು ಮನುಷ್ಯಜೀವನ. ಅಪರಿಮಿತವಾದದ್ದು ಭಗವನ್ಮಹಿಮೆ.
7. ಪರಿಮಿತವಾದದ್ದು ಅಳತೆಗೆ ಸಿಕ್ಕುತ್ತದೆ. ಯಾವುದಕ್ಕೆ ಮೊದಲು-ಕೊನೆಗಳುಂಟೋ ಅದನ್ನು ಅಳೆಯುವುದೂ ಎಣಿಸುವುದೂ ಸಾಧ್ಯವಾಗುತ್ತದೆ. ಹೀಗೆ ಆದವು ನಮ್ಮ ಕ್ಷಣ, ದಿನ, ಮಾಸ, ವರ್ಷ, ಯುಗ, ಕಲ್ಪ ಮೊದಲಾದ ಕಾಲಾವಯವಸಂಕೇತಗಳು. ಆಗ, ಈಗ, ಯಾವಾಗ—ಮೊದಲಾದ ಕಾಲನಿರ್ದೇಶವಾಚಕಗಳೂ ಭೂತಭವಿಷ್ಯದ್ವರ್ತಮಾನಗಳೆಂಬ ಕಾಲಭಾವನೆಗಳೂ ಅಂಥವೇ. ನಮ್ಮ ಕಣ್ಣುರೆಪ್ಪೆಯ ಬಡಿತ, ನಮ್ಮ ಮೂಗಿನ ಉಸಿರಾಟ, ಸೂರ್ಯೋದಯ, ಸೂರ್ಯಾಸ್ತಮಾನ, ಋತುಚಕ್ರಪರಿವರ್ತನೆ—ಮೊದಲಾದ ಸ್ವಾಭಾವಿಕ ಘಟನೆಗಳೇ ನಮ್ಮ

ಕಾಲಮಾನಗಣನೆಗೆ ಮೂಲಭೂತವಾದ ಮಾನದಂಡಗಳು. ಇವು ವ್ಯಾವಹಾರಿಕಕಾಲಕ್ಕೆ ಸೇರಿದವು.

8. ಇಂಥ ಭಾಗವಿಭಾಗಗಳಿಗೆ ಸಿಕ್ಕದೆ, ನಮ್ಮ ಅಳತೆಯ ಕೋಲಿಗೆ ದೊರೆಯದೆ ಇರುವ ವಸ್ತುವು ಪರಮಾತ್ಮ ಅಥವಾ ಭಗವಂತ. ಅವನು ಅನಂತನು; ಆದದ್ದರಿಂದ ಅಪ್ರಮೇಯನು. ಭಗವತ್ಪ್ರಸಕ್ತಿಯಲ್ಲಿ ಕಾಲವು ಅಪರಿಮಿತ, —ನಿತ್ಯ, ಅನಂತ. ಅದು ಅವ್ಯವಹಾರ್ಯ. "ಸರ್ವಸ್ವರೂಪೀ ಭಗವಾನನಾದಿಮಾನ್." ಬ್ರಹ್ಮವು ಕಾಲಪ್ರಸಕ್ತಿಯಿಲ್ಲದ್ದು.
9. "ಇರು" ಎಂಬುದರಲ್ಲಿ "ಆಗು" ಎಂಬುದು ಸೇರಿಕೊಂಡಿದೆ. ಬೆಂಕಿಯ ಕಿಡಿ ಇದೆ; ಅದು ಉರಿ ಆಗುತ್ತದೆ. ನೀರು ಇದೆ; ಅದು ಆವಿ ಆಗುತ್ತದೆ. ಕಾಯಿ ಇದೆ; ಅದು ಹಣ್ಣು ಆಗುತ್ತದೆ. ಮಗು ಇದೆ; ಒಂದಾನೊಂದು ದಿನ ಅದು ತಂದೆತಾಯಿ ಆಗುತ್ತದೆ. ಆಗೋಣವು ಇರೋಣದರ ಪರಿಣಾಮ. ವಸ್ತುವಿನ ಒಳಗೆ ಗೂಢವಾಗಿ ಅಡಗಿಕೊಂಡಿದ್ದ ಗುಣಶಕ್ತಿಗಳು ಕೊಂಚಕೊಂಚವಾಗಿ ಹೊರಕ್ಕೆ ಬಂದಾಗ ಅದರ ಆಗೋಣ. ಇದಕ್ಕೆ ಬೇಕಾದ ಅಸ್ತಿತ್ವ ಸಾಂತತ್ಯವೇ ಕಾಲ. ಅಂತರ್ಗತವಾಗಿದ್ದ ಗುಣಶಕ್ತಿಗಳು, ಕ್ಷಣ ದಿನ ಮಾಸಾದಿಗಳು ಸಾಗಿಹರಿದಂತೆ, ಪರಿಣಾಮಪಡೆಯುತ್ತವೆ. "ಕಾಲಃ ಪಚತಿ ಭೂತಾನಿ ಸರ್ವಾಣ್ಯೇವಾತ್ಮನಾತ್ಮನಿ" (ಮ. ಭಾ. ಶಾಂತಿ). ಹೀಗೆ ಕಾಲವು ಜಗದಂತರ್ಗುಣದ ಬಹಿರ್ವಿಕಾಸಾವಕಾಶವೆಂದು ಹೇಳಬಹುದು. ಕಾಲವೇ ಎಲ್ಲವನ್ನೂ ಪರಿಪಾಕಗೊಳಿಸುತ್ತದೆ—ಎಂದರೆ ವಸ್ತುಗಳ ಒಳಗಿರುವುದನ್ನು ಹದಗೊಳಿಸಿ, ಗಟ್ಟಿಯನ್ನು ಮೆತುಮಾಡಿ, ಮೆತುವನ್ನು ಗಟ್ಟಿಮಾಡಿ, ಹೊರಕ್ಕೆ ತರಬಲ್ಲದ್ದು ಎಂದು ಭಾವ. ಅಸ್ತಿತ್ವದ ರೂಪಾಂತರವೇ ವ್ಯತ್ಯಾಸ. ಅದು ಕ್ರಿಯೆ.
10. ಇರುವಿಕೆಯನ್ನು ಅರಿವು ಗ್ರಹಿಸಿದ್ದು ಕಾಲ ಎಂದು ಮೇಲೆ (೫) ಹೇಳಿದೆವು. ಅರಿವಾದರೋ ಆತ್ಮವಸ್ತುವಿನ ನೈಜಶಕ್ತಿ. ಅದೇ "ಚಿತ್" ಅಥವಾ ಚಿಚ್ಛಕ್ತಿ. ಇರುವಿಕೆಯೂ ಹಾಗೆಯೇ ಆತ್ಮದ ನೈಜಗುಣ. ಅದೇ "ಸತ್ ಅಥವಾ ಸತ್ತಾ (ಸತ್ತ್ವ). ಆದದ್ದರಿಂದ ಹೀಗೆ ಹೇಳಬಹುದು: ಚಿತ್ತಿಗೆ ಸತ್ತಿನೊಡನೆ ಸಂಯೋಗವಾದಾಗ ಕಾಲ ಭಾವನೆ. ಸತ್ ಮತ್ತು ಚಿತ್—ಇವು ಸೇರಿಕೊಂಡಿರದೆ ಬೇರೆಬೇರೆಯಿದ್ದದ್ದು ಯಾವಾಗ? ಅದು ಎಂದೂ ಅಲ್ಲ. ಆದದ್ದರಿಂದಲೇ ಕಾಲವು ಆತ್ಮವಸ್ತುವಿನಂತೆ ಅನಾದಿ, ಮತ್ತು ಅನಂತ.
11. ಕಾಲಭಾವನೆಯು ಭೌತವಸ್ತು ಭೌತಕ್ರಿಯೆಗಳಿಗೆ ಅನ್ವಯಿಸಿದಾಗ ದೇಶ ಅಥವಾ ಸ್ಥಾನ ಎಂದೆನ್ನಿಸಿಕೊಳ್ಳುತ್ತದೆ. ಅದೃಶ್ಯವಾದ ಕಾಲತತ್ತ್ವದ ದೃಶ್ಯಾಶ್ರಯವೇ ದೇಶ. ಕಾಲವಿಲ್ಲದೆ

ದೇಶವಿಲ್ಲ; ಹಾಗೆಯೇ ದೇಶವಿಲ್ಲದೆ ಕಾಲವಿಲ್ಲವೆಂದೂ ಹೇಳಬಹುದು. ಕಾಲವನ್ನು ನಾವು ಮನಸ್ಸಿನಲ್ಲಿ ಕಾಣುವುದಕ್ಕೆ ಸಾಧನವಾಗಿ ಕಣ್ಣಿಗೆ ಕಾಣಬರುವ ವಸ್ತುವೋ ಕ್ರಿಯೆಯೋ ಒಂದು ಇರಬೇಕಷ್ಟೆ? ವಸ್ತುವಿಗಾಗಲಿ ಕ್ರಿಯೆಗಾಗಲಿ ಸ್ಥಲವೆಂಬ ಭೌತಾಶ್ರಯವಿರಬೇಕು. ಪೃಥಿವ್ಯಾದಿ ಪಂಚಮಹಾಭೂತಗಳಲ್ಲಿ ಆಕಾಶವೂ ವಾಯುವೂ ಅಮೂರ್ತಗಳು, —ದೇಹಾಕಾರಗಳಿಲ್ಲದವು, —ಎಂದು ಗಣನೆ. ಆಕಾಶವನ್ನು ನಾವು ಕಾಣಲಾಗದು. ಅದು ಎಲ್ಲೆಲ್ಲೂ ವ್ಯಾಪಿಸಿಕೊಂಡಿರುತ್ತದೆ. ಕಾಲವೂ ಹಾಗೆಯೇ ಸ್ವತಃ ಕಾಣಬಾರದೆ ಮೂರ್ತವಸ್ತುಗಳ ನಡುನಡುವೆ, ಸಂದುಸಂದುಗಳಲ್ಲಿ, ತುಂಬಿಕೊಂಡಿರುತ್ತದೆ. ಅಳೆಯಲಾಗದ ಪದಾರ್ಥಗಳ ಮಧ್ಯೇಮಧ್ಯೇ ಭಾವಿಸಲಾಗುವುದು ಅನ್ಯಥಾ ಅಳೆಯಲಾಗದ ಕಾಲ. ಹೀಗೆ ಸಾಕಾರವಾದ ದೇಶವು ನಿರಾಕಾರವಾದ ಕಾಲಕ್ಕೆ ಆಶ್ರಯ. ಹೀಗೆ ಕಾಲ ದೇಶಗಳು ಯಾವಾಗಲೂ ಒಟ್ಟೊಟ್ಟಿಗಿರತಕ್ಕವು.

12. ಸತ್ತೂ ಚಿತ್ತೂ ಪರಬ್ರಹ್ಮಲಕ್ಷಣಗಳು. ಆನಂದವೂ ಹಾಗೆಯೇ ಸರಿ. ಬ್ರಹ್ಮಚೈತನ್ಯದಲ್ಲಿ ಅಡಗಿರುವ ಶಕ್ತಿ ಸಾಮರ್ಥ್ಯಗಳು ಅಪಾರವಾದವು. ಅಚಿಂತ್ಯವಾದವು. ಬ್ರಹ್ಮವಸ್ತುವು ಆ ತನ್ನ ಅನಂತಾದ್ಭುತಶಕ್ತಿಗಳನ್ನು ಸ್ವಾನಂದಲೀಲೆಯಲ್ಲಿ ಜಗದ್ರಚನೆಗೆ ವಿನಿಯೋಗಿಸಿದಾಗ, ಆವರೆಗೆ ಗೂಢವಾಗಿದ್ದ ಕಾಲದೇಶಗಳು ಆಗ ಪ್ರಕಾಶಗೊಳ್ಳುತ್ತವೆ. ಜಗತ್ತನ್ನು ಕೇವಲ ನಾಮರೂಪ-ಕಲಾಪವೆಂದು ಹೇಳುವುದುಂಟಷ್ಟೆ? ಹಾಗೆಯೇ ಜಗತ್ತನ್ನು ಕಾಲದೇಶಗಳ–ಅಸ್ತಿತ್ವ-ಜ್ಞತ್ವಗಳ-ಸಂಯೋಗ ಪ್ರಭಾವವೆನ್ನಬಹುದು. ಜೀವಿಯ ದೃಷ್ಟಿಯಿಂದ ಕಾಲದೇಶಗಳು ಪರಿಮಿತಗಳು, —ಪರಿಮೇಯಗಳು; ವಿಭಾಜ್ಯಗಳು, —ವಿಭಕ್ತಗಳು. ಬ್ರಹ್ಮದೃಷ್ಟಿಯಿಂದ ಕಾಲದೇಶಗಳು ಅಪರಿಮಿತಗಳು, —ಅಪರಿಮೇಯಗಳು; ಅಖಂಡ್ಯಗಳು, ಅಖಂಡಿತಗಳು.

13. ಒಟ್ಟಿನಲ್ಲಿ ಕಾಲವೆಂಬುದು ಜಗತ್ತಿನ ಅಂಶ, —ನಮ್ಮ ಜಗದ್ಭಾವನೆಯ ಒಂದು ಪ್ರಕಾರ. ಜಗತ್ತು ಬ್ರಹ್ಮವಸ್ತುವಿಗೆ ಎಷ್ಟು ಮಾತ್ರ ಹೇಗೆ ಸಂಬಂಧಪಟ್ಟಿದೆಯೋ ಜಗದಂಶವಾದ ಕಾಲವು ಬ್ರಹ್ಮಕ್ಕೆ ಅದೇ ರೀತಿಯಾದ ಸಂಬಂಧವುಳ್ಳದ್ದು.

14. ಈ ಮೇಲಣ ವಿವರಣೆಯು ಶ್ರುತಿಸಮ್ಮತವಾದದ್ದು. ತೈತ್ತಿರೀಯದ ಅರುಣಾಧ್ಯಾಯದಲ್ಲಿ ಮನುಷ್ಯನಿಗೆ ಕಾಲವಿಷಯಜ್ಞಾನವು ಉಂಟಾಗುವ ರೀತಿಯನ್ನು ಹೀಗೆ ವರ್ಣಿಸಿದೆ:

ಸೂರ್ಯೋ ಮರೀಚಿಮಾದತ್ತೇ । ಸರ್ವಸ್ಮಾದ್ಭುವನಾದಧಿ ।
ತಸ್ಯಾಃ ಪಾಕವಿಶೇಷೇಣ । ಸ್ಮೃತಂ ಕಾಲವಿಶೇಷಣಮ್ ।
ನದೀವ ಪ್ರಭವಾತ್ಕಾಚಿತ್ । ಅಕ್ಷಯ್ಯಾತ್ಸ್ಯಂದತೇ ಯಥಾ ।
ತಾಂ ನದ್ಯೋಽಭಿಸಮಾಯನ್ತಿ । ಸೋರುಸ್ಸತೀ ನ ನಿವರ್ತತೇ ।
ಏವಂ ನಾನಾ ಸಮುತ್ಥಾನಾಃ । ಕಾಲಾಸ್ಸಂವತ್ಸರಗ್ಂ ಶ್ರಿತಾಃ ।
ಅಣುಶಶ್ಚ ಮಹಶಶ್ಚ । ಸರ್ವೇ ಸಮವಯನ್ತ್ರಿ ತಮ್ ॥

“ಸೂರ್ಯನು ತನ್ನ ಕಿರಣಗಳನ್ನು ಸಮಸ್ತ ಜಗತ್ತಿನ ಮೇಲೂ ಹರಡಿ ಅನುಗ್ರಹಿಸುತ್ತಾನೆ. ಅದರಿಂದ (ಗಿಡ ಮರ ಮೊದಲಾದ ಜೀವಜಂತುಗಳು ಹುಟ್ಟು ಬೆಳವಣಿಗೆ ಮೊದಲಾದ ರೀತಿಗಳಲ್ಲಿ) ಪರಿಪಕ್ವವಾಗುತ್ತವೆ. (ಆ ಕಾರ್ಯಗಳಲ್ಲಿ ಆಗುವ ವ್ಯತ್ಯಾಸಗಳಿಂದ) ನಮಗೆ ಕಾಲದ ವಿಶೇಷರೂಪಗಳು ತಿಳಿವಳಿಕೆಗೆ ಬರುತ್ತವೆ. ನದಿಯು ಎಲ್ಲಿಯೋ ಇರುವ, ಎಂದೆಂದಿಗೂ ಬತ್ತಿಹೋಗದ, ಒರತೆಯಿಂದ ಜಿನುಗಿ ಹರಿದು ಬರುತ್ತ, ಇತರ ನದಿಗಳು ಬಂದು ಅದನ್ನು ಸೇರುತ್ತಿರಲು ಅದು ದೊಡ್ಡದಾಗಿ ಹೇಗೆ ಎಂದಿಗೂ ಬತ್ತಿ ಹೋಗದ ಶಾಶ್ವತಪ್ರವಾಹವಾಗುತ್ತದೆಯೋ, ಹಾಗೆಯೇ ಕಾಲಾಂಶಗಳು ಸಣ್ಣಸಣ್ಣವೂ ದೊಡ್ಡದೊಡ್ಡವೂ (ಕ್ಷಣದಿನಮಾಸಗಳೆಂಬ ನಾನಾ ಸಂದರ್ಭಗಳಲ್ಲಿ ಕಾಣಿಸಿಕೊಂಡು) ಸಂವತ್ಸರವೆಂಬ ಪ್ರಸಿದ್ಧ ಕಾಲಮಾನದಲ್ಲಿ ಒಟ್ಟುಗೂಡುತ್ತವೆ.”

(ಪುಟ ನ್ನು ನೋಡಿರಿ.)

ಹೀಗೆ ಪರಿಚಿತಪ್ರಪಂಚದಿಂದ ಅಪರಿಚಿತವಾದ ಪ್ರಪಂಚಾತೀತತತ್ತ್ವಕ್ಕೆ ದಾರಿ ಮಾಡಿಕೊಡುವುದು ವೇದದ ಉಪಾಯ.

ಪರಿಶಿಷ್ಟ ೭

ಗೀತೆಯ ಗೇಯತ್ವ

ಭಗವದ್ಗೀತೆಯಿಂದ ನಮ್ಮ ಅಂತರಂಗದಲ್ಲುಂಟಾಗುವ ಮುಖ್ಯ ಪರಿಣಾಮವು ಶಾಂತಿ, ಮನಸ್ಸಿನ ಸಮಾಧಾನ—ಆಳವಾದ ನಂಬಿಕೆಯಿಂದ ಬಂದ ಧೈರ್ಯ ಭರವಸೆ ನೆಮ್ಮದಿಗಳು. ಇದು ಶಾಂತಿರಸ.

ಯಾವ ಗ್ರಂಥದಿಂದ ನಮ್ಮ ಹೃದಯದಲ್ಲಿ ರಸವೆಂಬ ಒಂದು ಇಷ್ಟಾನುಭವವಾಗುತ್ತದೆಯೋ ಅದು ಕಾವ್ಯ. ಅದರ ವಿಷಯವು ಕಠಿನವಾದ ಶಾಸ್ತ್ರವಾಗಿದ್ದರೂ ಅದರಲ್ಲಿ ರಸವಿರುವಷ್ಟು ಮಟ್ಟಿಗೆ ಅದು ಕಾವ್ಯ. ಭಗವದ್ಗೀತೆಯು ಶಾಸ್ತ್ರಕಾವ್ಯವೆಂದು ಹೇಳಿದ್ದಾಗಿದೆ.

ರಸವೆಂದರೆ ಇಷ್ಟಾನುಭವದ ಕಾರಣದ್ರವ್ಯ. ಮಾವಿನಹಣ್ಣಿನ ರುಚಿ ಗಂಧಗಳು ಅದರ ರಸ. ಮಲ್ಲಿಗೆಯ ವಾಸನೆಯೂ ಗುಲಾಬಿಯ ಬಣ್ಣವೂ ಅದರ ರಸ. ಹೊಂಗೆಯ ಚಿಗುರಿನ ಕೋಮಲತೆ ಅದರ ರಸ. ಈ ನಾನಾ ರುಚಿ ಕಾಂತಿಗಳನ್ನು ಕಂಡಾಗ ನಮ್ಮ ಹೃದಯದಲ್ಲಿ ಒಂದು ಆರ್ದ್ರತೆ—ಒಂದು ತೇವ, —ಒಂದು ಕರಗಿ ಹರಿಯುವ ಸುಳಿವು— ಅನುಭವವಾಗುತ್ತದೆ, ಅದೇ ರಸ.

ಕಾವ್ಯಕಲಾರಸಗಳು ಎಂಟೆಂದು ಪೂರ್ವಿಕರಲ್ಲಿ ಒಂದು ಎಣಿಕೆ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ—ಇವು ಆ ಎಂಟು. ಇವೆಲ್ಲ ಮನೋವಿಕಾರಾತ್ಮಕಗಳು, —ಮತ್ತು ವಿಕಾರಾಧೀನಗಳು.

ನಿರ್ವಿಕಾರವಾದದ್ದು ಶಾಂತಿರಸ. ಶಾಂತಿಯನ್ನು ಅಧಿರಸವೆಂದು ವಿಶೇಷಿಸುವುದು ಯುಕ್ತವಾಗುತ್ತದೆ. ಶಾಂತಿಯೆಂದರೆ ಅಲೆಬಡಿದಾಟಗಳಿಲ್ಲದೆ, ಚಿಂತೆಭೀತಿಗಳಿಲ್ಲದೆ, ಏಕಾಕಾರವಾಗಿ ಹರಡಿ ನೆಲಸಿರುವ ಸುಖ. ಅಂಥ ನಿರ್ವಿಕಾರ ಸುಖವೇ ಆನಂದ. ಆನಂದದ ಪರಿಪೂರ್ಣ ಲಕ್ಷಣವೇ ಶಾಂತಿ. ಶಾಂತಿ ಬಂದ ಮೇಲೆ ಬೇಕು-ಬೇಡಗಳೆಂಬುದರ

ಸುಳಿವಿರದು. ಈ ಸಂತುಷ್ಟ ಸಂತೃಪ್ತ ಸ್ಥಿತಿ ಬರುವುದು ಸಮಸ್ತಶಂಕಾಸಂಶಯಗಳೂ ನಿರ್ಮೂಲವಾದಾಗ:

> ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।
> ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

—ಮುಂಡಕ, ೩-೨-೯.

ಈ ಬಗೆಯ ಹೃದಯಪರಿಣಾಮವು ಗೀತಾಕಲ್ಪವೃಕ್ಷದ ಪರಮಫಲ. ಅದು ಶಾಂತಿ ರಸ ಪ್ರಧಾನವಾದ ಕೃತಿ. ಅರ್ಜುನನ ಕರುಣವೂ ವಿಶ್ವರೂಪದರ್ಶನದ ಅದ್ಭುತವೂ ಅದಕ್ಕೆ ಪೋಷಕಗಳಾದ ಉಪರಸಗಳು.

ಹೀಗೆ ಗ್ರಂಥವು ರಸವತ್ತಾದದ್ದೆಂದು ಸಿದ್ಧವಾದ ಮೇಲೆ ಅದರ ಗಾಯನಾರ್ಹತೆಯ ವಿಷಯದಲ್ಲಿ ಸಂದೇಹವಿರದು. ಏಕೆಂದರೆ ಛಂದೋಬದ್ಧವಾದ ವಾಗ್ರಚನೆಯೂ ರಾಗಧ್ವನಿ ರೂಪವಾದ ಸಂಗೀತವೂ ರಸಕ್ಕೆ ಸಹಜವಾದ ಯಾನಸಾಧನಗಳು. ಅವೆರಡೂ ಕೂಡಿಕೊಂಡಾಗ ಆಗುವುದು ಗೇಯಕಾವ್ಯ. ಅದೇ ಗೀತೆ ಅಥವಾ ಹಾಡು.

ರಸದ ಕಾರ್ಯಕ್ಷೇತ್ರವು ಹೃದಯ. ಹೃದಯವು ಮನಸ್ಸು ಬುದ್ಧಿಗಳ ಸಮ್ಮೇಳನ ಸ್ಥಾನ. ಆದದ್ದರಿಂದ ಅಲ್ಲಿ ಬುದ್ಧಿಪ್ರಚೋದನೆಗಾಗಿ ಬೋಧಕಸಾಹಿತ್ಯ ಬೇಕಾಗುತ್ತದೆ; ಮನಸ್ಸಿನ ಪ್ರಚೋದನೆಗಾಗಿ ಭಾವಸಾಹಿತ್ಯ ಬೇಕಾಗುತ್ತದೆ; ಭಾವಪರಿಪೋಷಣೆಗಾಗಿ ಸಂಗೀತ ಬೇಕಾಗುತ್ತದೆ. ಬೋಧನೆ, ರಸಭಾವ, ಗಾನಾನುಕೂಲತೆ—ಈ ಮೂರು ಗುಣಗಳೂ ಭಗವದ್ಗೀತೆಯಲ್ಲಿ ಸಮ್ಮಿಳಿತವಾಗಿವೆ. ಇದೊಂದು ಅಪೂರ್ವಜಾತಿಯ ಪ್ರಬಂಧ. ವೇದದ ಹೊರತು ಇದರೊಡನೆ ಹೋಲಿಸಲಾಗುವ ಪ್ರಬಂಧ ಇನ್ನೊಂದಿಲ್ಲ.

ಶಂಕರಭಗವತ್ಪಾದರು ಭಜಗೋವಿಂದಸ್ತೋತ್ರದಲ್ಲಿ—

> ಗೇಯಂ ಗೀತಾ ॥

ಎಂದು ಹೇಳಿದ್ದಾರೆ.

ಹಾಗಾದರೆ ಭಗವದ್ಗೀತೆಯನ್ನು ಹಾಡಬೇಕಾದದ್ದು ಎಂಥೆಂಥ ರಾಗಗಳಲ್ಲಿ? ಯಾವ ಯಾವ ಧಾಟಿಗಳಲ್ಲಿ? ಅದನ್ನು ತ್ಯಾಗರಾಜರ ಕೀರ್ತನೆಯಂತೆ ಹಾಡತಕ್ಕದ್ದೆ? ಪುರಂದರದಾಸರ ದೇವರನಾಮದಂತೆ ಹಾಡತಕ್ಕದ್ದೆ? ಕ್ಷೇತ್ರಜ್ಞನ ಪದಗಳಂತೆ ಹಾಡತಕ್ಕದ್ದೆ? ಅಥವಾ ತಾಲವಾಧೀಶನ ಜಾವಡಿಯಂತೆ ಹಾಡತಕ್ಕದ್ದೆ? ಅಥವಾ ಹಿಂದೂಸ್ತಾನಿ ಖಯಾಲ್ ರೀತಿಯಲ್ಲಿ ಹಾಡತಕ್ಕದ್ದೆ? ಅದಕ್ಕೆ ಸ್ವರ ಸಂಗತಿಗಳನ್ನು ಸೇರಿಸತಕ್ಕದ್ದೆ? ಅದನ್ನೇ ತಿಸ್ರಗತಿ ಚತುರಸ್ರಗತಿಗಳಿಗೆ ಜೋಡಿಸತಕ್ಕದ್ದೆ? ಹೀಗೆಲ್ಲ ಪ್ರಶ್ನೆಗಳು ಏಳುತ್ತವೆ. ಪ್ರಕೃತ ಲೇಖಕನ ಮನಸ್ಸಿಗೆ ಮೊನ್ನೆಮೊನ್ನೆಯವರೆಗೂ ಇಂಥ ಪ್ರಶ್ನೆಯ ಸಂಭವವೇ ತೋರಿರಲಿಲ್ಲ. ಈಚೆಗೆ ರೇಡಿಯೋದಲ್ಲಿ ಯಾರೋ ಮಹಾನುಭಾವರು ಭಗವದ್ಗೀತೆಯ ಕೆಲವು ಶ್ಲೋಕಗಳನ್ನು ಚಿತ್ರವಿಚಿತ್ರ ರಾಗಗಳಲ್ಲಿ ಹಾಡಿದರು. ಅದರಲ್ಲಿ ರಾಗಾಲಾಪದ ಬೆರಕೆಯೂ ಕಂಠಶಕ್ತಿಯ ಕುಲುಕು ಪಲುಕುಗಳೂ ಹೆಚ್ಚಾಗಿ, ಸಂಗೀತವು ಅರ್ಥವನ್ನು ಮುಳುಗಿಸಿಬಿಟ್ಟಿತ್ತು. ನನಗೆ ಇಷ್ಟವಾಗದ ಆ ಅನುಭವದಿಂದ ಒಂದು ಎಚ್ಚರಿಕೆಯ ಮಾತನ್ನು ಇಲ್ಲಿ ಹೇಳಬೇಕೆನಿಸಿದೆ.

ಗೀತಾಗಾನವು ಹಾಡಿಕೆ ಕಚೇರಿಯ ಗಾನವಾಗಬಾರದು. ಅದು ವೇದಗಾನದಂತೆ ಗಂಭೀರವಾಗಿಯೂ ಪವಿತ್ರಭಾವನಾಪ್ರಚೋದಕವಾಗಿಯೂ ಇರಬೇಕು. ಒನಪು ಒಯ್ಯಾರಗಳು ಅಲ್ಲಿ ಸಲ್ಲವು.

ವೇದಾಧ್ಯಯನಕ್ಕೂ ಗಾನವೆಂದೇ ಹೆಸರು. ಅದೂ ಹಾಡೇ. ಶಿಕ್ಷಾ ಎಂಬ ವೇದಾಂಗವೆಲ್ಲ ವೇದಗಾಯನವಿಧಾನವನ್ನು ಕುರಿತದ್ದು. ವೇದವು ಗಾನವಾದರೂ ಅದು ಮನೋಧರ್ಮದ (ಖಯಾಲಿ) ಗಾನವಲ್ಲ. ಹಾಡುವವನ ಸ್ವತಂತ್ರಕಲ್ಪನೆಗೆ ಅದರಲ್ಲಿ ಎಡೆಯಿಲ್ಲ. ವೇದಗಾನದಲ್ಲಿ ಉದಾತ್ತಾನುದಾತ್ತಸ್ವರಿತಗಳ ಕ್ರಮವು ಮಹರ್ಷಿಗಳಿಂದ ವಿಧಿಸಲ್ಪಟ್ಟದ್ದು. ಯಾರು ವೇದ ಹೇಳಿದರೂ ಆ ವಿಧಿಗೆ ವಿಧೇಯರಾಗಿಯೇ ಹೇಳಬೇಕು. ಅಲ್ಲಿ ಸಮಸ್ತರೂ ಸಂಪ್ರದಾಯಬದ್ಧರು. ಯಾರೂ ವೇದಗಾನದಲ್ಲಿ ಅಕ್ಷರಸ್ವರವರ್ಣವ್ಯತ್ಯಾಸ ಮಾಡತಕ್ಕದ್ದಲ್ಲ. ಹೊಸ ಸಂಚಾರ ಮಾಡತಕ್ಕದ್ದಲ್ಲ. ಯಥಾಶ್ರುತವಾಗಿ ಅನೂಚಾನವಾಗಿ ಬರಬೇಕಾದದ್ದು ವೇದಗಾನ. ಈ ನಿರ್ಬಂಧದ ತಾತ್ಪರ್ಯವು ಇಷ್ಟು: ಪದ ವರ್ಣ ಸ್ವರಗಳು ಒಂದು ನಿಯತಕ್ರಮದಲ್ಲಿ ಉಚ್ಚರಿತಗಳಾದರೆ ಅದರಿಂದ ಶ್ರೋತನ ಶ್ರವಣದ ದ್ವಾರಾ ಅವನ ಮನಸ್ಸಿನ ಮೇಲೆ ಒಂದು ಉದ್ದಿಷ್ಟ ಪರಿಣಾಮವುಂಟಾಗುತ್ತದೆ. ಮನೋಭಾವದ ಉದಾತ್ತತೆ,

ಪಾವಿತ್ರ್ಯ, ಗಾಂಭೀರ್ಯ-ಇವು ಉದ್ದೇಶಗಳು. ಇವನ್ನು ಕಾಪಾಡಬೇಕಾದರೆ ವೇದೋಚ್ಚಾರಣೆಯಲ್ಲಿ ಏಕೈಕವಾದ ಉಚ್ಚಾರನಿಯಮವಿರಬೇಕು.

ಇದೇ ತತ್ತ್ವವು ಭಗವದ್ಗೀತಾಗಾನಕ್ಕೂ ಅನ್ವಯಿಸುತ್ತದೆ. ರಾಗವು ನಾಟಕಶಾಲೆಯ ರಕ್ತಿರಾಗವಾಗಬಾರದು; ಉದಾತ್ತವಾದ ಘನರಾಗವೇ ಆಗಿರಬೇಕು. ಅಷ್ಟೇ ಅಲ್ಲದೆ ಹೆಚ್ಚಾಗಿ ರಾಗವಿನ್ಯಾಸವೂ ಸ್ವರಾಡಂಬರವೂ ಅದರಲ್ಲಿರಬಾರದು. ರಾಗವೂ ರಾಗವಿನ್ಯಾಸವೂ ಶಾಂತಿರಸಾನುಕೂಲವಾಗಿರಬೇಕು.

ವೇದದ ಮಂತ್ರಭಾಗ ಇರುವುದು ವಿಶೇಷವಾಗಿ ಅನುಷ್ಟುಪ್ ಛಂದಸ್ಸಿನಲ್ಲಿ. ಭಗವದ್ಗೀತೆಯ ಬಹುಭಾಗವೂ ಅದೇ ಛಂದಸ್ಸಿನಲ್ಲಿದೆ. ಪೂರ್ವಿಕರು ವೇದಮಂತ್ರವನ್ನು ಹೇಳುವ ಧಾಟಿಯಲ್ಲಿಯೇ ಗೀತೆಯನ್ನೂ ಹೇಳುತ್ತಿದ್ದರು. ಅದೇ ಯುಕ್ತ. ರಾಗದ ಸೊಗಸು ಎಲ್ಲಿ ಸರಿಯೋ ಅಲ್ಲಿ ಸರಿ. ಸುಂದರಿಯ ಒನಪು ಒಯ್ಯಾರಗಳು ದೇವರಮನೆಯಲ್ಲಿ ಧ್ಯಾನಾವಾಹನೆ ಮಾಡುವಾಗ ಯುಕ್ತವಲ್ಲ. ರಾಗದ ಮೋಹ ನಮ್ಮ ಮನಸ್ಸನ್ನು ಗೀತಾವಾಕ್ಯಾರ್ಥದಿಂದ ಬೇರೆಡೆಗೆ ಸೆಳೆದುಕೊಳ್ಳಬಾರದು. ರಾಗವು ಮಿತವಾಗಿಯೂ ಮನಸ್ಸನ್ನು ಚಂಚಲಗೊಳಿಸಲಾರದ್ದಾಗಿಯೂ ಇರಬೇಕು. ಗಾಯನಕ್ರಮವು ದೃಢಪಟ್ಟು ನಿಷ್ಕರ್ಷೆಯಾದದ್ದಾಗಿದ್ದರೆ, ಅದನ್ನು ಪದೇಪದೇ ಕೇಳಿ ಅಭ್ಯಾಸವಾಗಿರುವುದರಿಂದ, ಆ ಧಾಟಿಯಲ್ಲಿ ಬಂದ ಶ್ಲೋಕವು ಮನಸ್ಸಿಗೆ ಕೂಡಲೆ ಒಂದು ಉನ್ನತಿಯನ್ನೂ ನಿಶ್ಚಲತೆಯನ್ನೂ ತಂದುಕೊಡಬಲ್ಲದ್ದಾಗುತ್ತದೆ.

ಸಂಗೀತದಲ್ಲಿ ಎರಡು ಪರಸ್ಪರ ವಿರುದ್ಧ ಶಕ್ತಿಗಳು ಅಡಕವಾಗಿರುತ್ತವೆ: ಒಂದು ಶಕ್ತಿ ಮನಸ್ಸನ್ನು ಕೆಣಕಿ ಕೆರಳಿಸಿ ಕುಲುಕಾಡಿಸಬಲ್ಲದ್ದು; ಇನ್ನೊಂದು ಮನಸ್ಸನ್ನು ಹಿಡಿದು ಒಂದೆಡೆ ನಿಲ್ಲಿಸಿ ಸಮಾಧಾನಕ್ಕೆ ತರಬಲ್ಲದ್ದು. ಇದು ಏಕಾಗ್ರತೆಯದು; ಅದು ವ್ಯಗ್ರತೆಯದು. ಒಂದು ಧ್ಯಾನಕ್ಕೆ, ಇನ್ನೊಂದು ವಿಲಾಸಕ್ಕೆ.

ಸುಖಾಂಶ ಎರಡು ಜಾತಿಗಳಲ್ಲೂ ಉಂಟು. ಕೆಲವರಿಗೆ ನೆಮ್ಮದಿಯಲ್ಲಿ ಸುಖ; ಕೆಲವರಿಗೆ ಸಂಭ್ರಮದಲ್ಲಿ. ಏಕಾಂತದಲ್ಲಿ ಕುಳಿತು ಸಮಾಧಿಯಲ್ಲಿ ಮೈಮರೆಯುವವರು ಕೆಲವರು; ಕುಣಿಕುಣಿದು ದಣಿದು ಮೈಮರೆಯುವವರು ಕೆಲವರು. ಒಬ್ಬರಿಗೆ ಶಾಂತಿಯೇ ಸುಖ; ಇನ್ನೊಬ್ಬರಿಗೆ ಆವೇಶವೇ ಸುಖ.

ಈ ಮಾತು ಸಂಗೀತಕ್ಕೆ ಹೇಗೋ ಸಾಹಿತ್ಯಕ್ಕೂ ಹಾಗೆಯೇ ಅನ್ವಯಿಸಬೇಕಾದದ್ದು; ಎಲ್ಲ ಕಲಾನುಭವಕ್ಕೂ ಹೊಂದಬೇಕಾದದ್ದು.

ಐರೋಪ್ಯಜನದ, ಮತ್ತು ಅವರನ್ನನುಕರಿಸಿ ಮೆರೆಯುವ ಈ ಕಾಲದ ಭಾರತೀಯ ಜನದ, ಭೋಗವಿಹಾರವಿಧಾನಗಳನ್ನು ನೋಡಿದರೆ ಸುಖದ ಉದ್ವೇಗರೂಪವೆಂಥಾದ್ದೆಂಬುದು ಗೋಚರವಾಗುತ್ತದೆ. ಅವರಿಗೆ ಎಡೆಬಿಡದೆ ಹಾರಾಟವಿರಬೇಕು. ಹೊತ್ತು ಹುಟ್ಟುವುದಕ್ಕೆ ಮುಂಚಿನಿಂದ ನಡುರಾತ್ರಿಯಿಂದಾಚೆಗೂ ಸಾಲಾಗಿ ಎಂಗೇಜ್‌ಮೆಂಟ್‌ಗಳು (ಉದ್ಯೋಗವ್ಯಾಜಗಳು) ಇರಬೇಕು; ಫಂಕ್ಷನ್‌ಗಳು (ಉತ್ಸವನಿಮಿತ್ತಗಳು) ಇರಬೇಕು. ಅವಸರವಸರವಾಗಿರಬೇಕು; ಮೋಟರು ವೇಗ ಸಾಲದೆನ್ನಬೇಕು. ಅವರ ಜಾಸ್ ಬ್ಯಾಂಡ್ ಸಂಗೀತವನ್ನು ಕೇಳಿದರೆ—ಅವರ ನವನವೀನ ಚಿತ್ರಕಲೆಯನ್ನು ನೋಡಿದರೆ—ಇದು ಗೊತ್ತಾಗುತ್ತದೆ: ಐರೋಪ್ಯರಿಗೆ ರಭಸವೇ ರುಚಿ, ಎಗರಾಟಿಕೆಯೇ ಸೊಗಸು. ಘಾಟೇರಬೇಕು, ತೀಟೆ ತೀರಬೇಕು: ತಲೆ ತಿರುಗಬೇಕು, ಮೆದುಳು ಸುಸ್ತು ಬೀಳಬೇಕು. ಇದು ಪಾಶ್ಚಾತ್ಯನಾಗರಿಕತೆಯ ವಿಶೇಷ ಲಕ್ಷಣ. ಅವರ ಕಲೆ ಕಾವ್ಯಗಳಲ್ಲಿ ಶಾಂತಿ ಸಮಾಧಾನಗಳ ಸೂಚನೆ ಇಲ್ಲವೇ ಇಲ್ಲವೆಂದಲ್ಲ. ಅವು ಇವೆ. ಆದರೆ ಅವಕ್ಕಿಂತ ಹೆಚ್ಚಾಗಿರುವುದು ಉಲ್ಲೋಲಕಲ್ಲೋಲತೆ. ಜನ ಬಯಸುವುದು ಈಗ ಉಲ್ಬಣ ಉದ್ವೇಗಗಳನ್ನ.

ನಮ್ಮ ದೇಶದ ಸಂಗೀತದಲ್ಲಿಯೂ ಈ ಎರಡು ಜಾತಿಗಳು ಕಾಣಬರುತ್ತವೆ: ಒಂದು ಧ್ಯಾನಾನುಕೂಲವಾದದ್ದು, ಇನ್ನೊಂದು ಉದ್ರೇಕಕಾರಿಯಾದದ್ದು. ಕರ್ಣಾಟಕ ಸಂಗೀತದಲ್ಲಿ ಶಂಕರಾಭರಣವೆಂಬ ರಾಗವು ಚಿತ್ತಸಮಾಧಾನಕಾರಿಯಾದದ್ದು; ಸಂನ್ಯಾಸಿಗಳು ಕೂಡ ಅದನ್ನು ಕೇಳಿ ಆನಂದಿಸಬಹುದು—ಎಂದು ಹೇಳುವುದುಂಟು. ಆದರೆ ಆ ರಾಗದಲ್ಲಿ ಕೂಡ ಮಾರಾಮಾರಿ ನಡಸಿ, ಪಿಟೀಲುಗಾರನಿಗೆ ಬೆವರು ತರಿಸಿ, ಮೃದಂಗಕ್ಕೆ ಚರ್ಮ ಬಿರಿಯಿಸುವ ವಿದ್ವಾಂಸರೂ ಇದ್ದಾರೆ. ತ್ಯಾಗರಾಜರು ಸಂನ್ಯಸ್ತರಾಗಿ ಉಪಶಾಂತಿಯನ್ನು ಬಯಸಿದವರು. ಅಂಥವರ ಕೃತಿರಂಗದಲ್ಲಿ ಕಸರತ್ತುಮಾಡಿ ಕುಸ್ತಿ ಹೂಡುವ ಗಾಯಕಶೂರರಿದ್ದಾರೆ. ಪಾಂಡಿತ್ಯಪ್ರದರ್ಶನ ಅವರಿಗೆ ಮುಖ್ಯ. ಸ್ವರದ ತಿರಿತಿರಿಚು, ಮದ್ದಲೆಯ ಗುದ್ದಾಟ—ಇವು ಒಂದು ಜಾತಿ.

ಇನ್ನೊಂದು ಜಾತಿಯಲ್ಲಿ ಮುಖ್ಯವಾದದ್ದು ನೆಮ್ಮದಿ. ಅದು ಆಳವೂ ತಿಳಿಯೂ ಆದ ತುಂಬುಹೊಳೆ. ಅದರಲ್ಲಿ ಅಲೆಗಳ ಬಡಿದಾಟವಿಲ್ಲ; ಅದರ ವೇಗ ಕಣ್ಣಿಗೆ ಕಾಣುವುದಲ್ಲ.

ದಡದ ಮರಗಳಿಂದ ಉದುರಿ ಸಾಗುವ ಹೂಗಳಿಂದ ಗೊತ್ತಾಗುತ್ತದೆ ಅದರ ಹರಿವು. ಇಂಥಾದ್ದು ಧ್ಯಾನಿ ಬಯಸುವ ಸನ್ನಿವೇಶ.

ಪ್ರಕೃತದಲ್ಲಿ, ಭಗವದ್ಗೀತೆಯನ್ನು ಹಾಡುವುದಾದರೆ ಮೊದಲು ರಾಗವನ್ನಾರಿಸಿಕೊಳ್ಳುವುದರಲ್ಲಿ ರಸವಿವೇಕವಿರಬೇಕು. ನಾಟಿ, ಆರಭಿ, ವರಾಳಿ ಇಂಥಾ ಭಕ್ತಿರಾಗಗಳು ಭಗವದ್ಗೀತೆಗೆ ಹೆಚ್ಚು ಅನುಕೂಲವೆಂದು ನನಗನ್ನಿಸುತ್ತದೆ. ರಾಗಕ್ಕಿಂತ ಹೆಚ್ಚು ವಿವೇಕವನ್ನಪೇಕ್ಷಿಸುತ್ತದೆ ರಾಗವಿನ್ಯಾಸಕ್ರಮ. ಎಂಥ ರಾಗವನ್ನಾದರೂ ಗಾಯಕನ ಅವಿಚಾರವು ರಸಾಭಾಸಕ್ಕೆ ತಿರುಗಿಸಲಾಗುತ್ತದೆ. ಭಗವದ್ಗೀತೆಯ ಗಾಯನವು ಗೋಳಾಟವಾಗಬಾರದು, ಮಜಾಹೊಡೆತವೂ ಆಗಬಾರದು. ಅದು ಸ್ವರಚಮತ್ಕಾರ ಲಯಚಮತ್ಕಾರಗಳ ಕಡೆಗೆ ಕೇಳುವವನ ಮನಸ್ಸನ್ನು ತಿರುಗಿಸಬಾರದು. ಭಗವದ್ಗೀತೆಯ ಗಾನ ಕೇಳಿಸಬೇಕಾದದ್ದು ದೇಹದ ಕಿವಿಗಲ್ಲ, ಆತ್ಮದ ಕಿವಿಗೆ; ಚರ್ಮದ ಕಿವಿಗಲ್ಲ, ಹೃದಯದ ಕಿವಿಗೆ. ಸಂಗೀತವು ಅಲ್ಲಿ—ಜೀವದ ಅಂತರಾಳದಲ್ಲಿ—ಪರಿಣಾಮಕಾರಿಯಾಗಬೇಕಾದರೆ ಹಾಡುವ ಶೈಲಿ ಮೃದುವಾಗಿ, ಸರಳವಾಗಿ, ಗಂಭೀರವಾಗಿ, ಆಡಂಬರವಿಲ್ಲದ್ದಾಗಿ, ಧ್ಯಾನಾನುಸಂಧಾನಕ್ಕೆ ಸಹಾಯ ಮಾಡಬಲ್ಲದ್ದಾಗಿರಬೇಕು. ಎಂದರೆ ಹಾಡುವಾತನು ಅಂತರಾತ್ಮಸ್ಮೃತಿಯುಳ್ಳವನಾಗಿರಬೇಕು. ಅವನು ಸದಾಶಿವಬ್ರಹ್ಮೇಂದ್ರರ ಕೃತಿಗಳ ಸರಳಸೌಂದರ್ಯದಿಂದ ಸುಖಿಸಿದವನಾಗಿರಬೇಕು; ವೇದಗಾಯನದ ಇಂಪಿನಿಂದ ಸುಖಿಸಿದವನಾಗಿರಬೇಕು. ಆ ಸುಖವನ್ನರಿತವನಿಗೆ ಭಗವದ್ಗೀತೆಗೆ ತಕ್ಕ ಗಾನಶೈಲಿ ಸುಲಭವಾಗುತ್ತದೆ. ತತ್ತ್ವಧ್ಯಾನಿಯ ಗಾಯನದಲ್ಲಿ ಗೇಯಸಾಹಿತ್ಯದ ಹೃದಯಭಾವವು ಸ್ವಾಮಿಯಾಗಬೇಕು; ಸ್ವರವಿನ್ಯಾಸವೂ ತಾಲಗತಿಯೂ ಅದಕ್ಕೆ ಸೇವಕರಾಗಬೇಕು. ಇವು ತಾವೇ ಸ್ವಾಮಿಯಾಗಬಾರದು. ಕಂಠಧ್ವನಿ ಮಧುರವಾಗಿ, ಅಕ್ಷರೋಚ್ಚಾರಣೆ ಸ್ಫುಟವಾಗಿ, ರಾಗಯೋಜನೆ ಮಿತವಾಗಿ, ಧಾಟಿ ಸಾವಕಾಶದ್ದಾಗಿದ್ದರೆ ಆಗ ಭಾವಾರ್ಥವು ಅನುಭವಕ್ಕೆ ಚೆನ್ನಾಗಿ ಒದಗಿಬರುತ್ತದೆ. ಭಗವದ್ಗೀತೆಯು ಧ್ಯಾನಗ್ರಂಥ. ಅದಕ್ಕೆ ಹೊಂದುವುದು ಧ್ಯಾನಸಂಗೀತ. ಅದು ಆಡಂಬರವಿಲ್ಲದ ಸರಳಸಂಗೀತ.

ಸತ್ಯಾನ್ವೇಷಣೆ ಶಾಸ್ತ್ರಂ ।
ಹೃತ್ತೋಷಣೆ ಕಾವ್ಯಮ್ ಅಂತು ಮತಿಮನಗಳ ದಾಂ- ॥
ಪತ್ಯದ ಫಲಮಧಿರಸರುಚಿ- ।
ಯಾತ್ಮಾನಂದಮದು ಶಾಸ್ತ್ರಕಾವ್ಯಾನುಭವಂ ॥ ೧ ॥

ಕಾವ್ಯನದಿ ಶಾಸ್ತ್ರಗಿರಿಯೋಳ್ ।
ಭಾವ್ಯಂ ಶಾಸ್ತ್ರಮಣಿಯಂತು ಕಾವ್ಯಾಂಬುಧಿಯೋಳ್ ॥
ಭವ್ಯೋಭಯರುಚಿಯಮೃತಂ ।
ದಿವ್ಯಕೃಪಾಸ್ರೋತಮದುವೆ ಭಗವದ್ಗೀತಂ ॥ ೨ ॥

ಪರಿಶಿಷ್ಟ ೮
ಟಿಪ್ಪಣಿಗಳು

(೧) ಭಗವಚ್ಛಬ್ದ ವಿಚಾರ

'ಭಗವಾನ್', 'ಭಗವತ್', 'ಭಗವಂತ' —ಈ ಪದಗಳು ಗೀತಾಗ್ರಂಥದಲ್ಲಿ ಪದೇ ಪದೇ ಉಪಯುಕ್ತವಾಗಿವೆ. 'ಭಗವಂತ' ಎಂಬ ಮಾತನ್ನು ನಾವು ಸಾಮಾನ್ಯವಾದ ಮಾತುಕಥೆಯಲ್ಲಿಯೂ ಬಳಸುತ್ತೇವಲ್ಲವೆ? ಹಾಗೆಂದರೆ ಏನು?

'ಭಗ' ಎಂಬುದು ವೇದದ ಮಾತು. ಅದು ಅಲ್ಲಿ ಒಬ್ಬ ದೇವತೆಯ ಹೆಸರು.

> ಭಗ ಪ್ರಣೇತುರ್ಭಗ ಸತ್ಯರಾಧೋ
> ಭಗೇಮಾಂ ಧಿಯಮುದವಾ ದದನ್ನಃ ।
> ಭಗ ಪ್ರಣೋ ಜನಯ ಗೋಭಿರಶ್ವೈಃ
> ಭಗ ಪ್ರನೃಭಿರ್ನೃವಂತಃ ಸ್ಯಾಮ ॥

-ಋಕ್ಸಂಹಿತೆ, ಮಂಡಲ ೭, ಅನುವಾಕ ೩, ಸೂಕ್ತ ೪೧

"ಹೇ ಭಗದೇವನೆ, ನೀನು ನಮ್ಮನ್ನು ನಡಸುವವನು; ನೀನು ಸತ್ಯಪ್ರಕಾಶನು; ನೀನು ಧನನಿಧಿಯಾಗಿರುವವನು; ನೀನು ನಮ್ಮ ಬೇಡಿಕೆಗಳನ್ನು ಪೂರಯಿಸುವವನು. ನಮ್ಮ ಸ್ತೋತ್ರಗಳನ್ನು ಸಫಲಗೊಳಿಸು. ನಿನ್ನ ಪ್ರಸಾದದಿಂದ ನಾವು ಪುತ್ರ ಪೌತ್ರವಂತರೂ ಗೋಧನ-ಹಯಧನಸಮೃದ್ಧರೂ ಮನುಷ್ಯಸಹಾಯವಂತರೂ ಆದೇವು."

ಇದು ಸಾಯಣಭಾಷ್ಯಾನುಸಾರವಾದ ಅರ್ಥ. 'ಭಗ' ಎಂದರೆ ಸೂರ್ಯ, ಚಂದ್ರ, ವರುಣ, ರುದ್ರ ಮೊದಲಾದ ದೇವತಾವಿಶೇಷವಾವುದಾದರೂ ಆಗಬಹುದು-ಸಂದರ್ಭದಂತೆ. ಸಾಯಣಾಚಾರ್ಯರು "ಭಗಂ = ಭಜನೀಯಂ" ಎಂದು ಎಲ್ಲ ಪ್ರಕರಣಗಳಲ್ಲಿಯೂ ಅರ್ಥ

ಹೇಳಿದ್ದಾರೆ. ಭಜನೀಯ ಎಂದರೆ "ಭಜಿಸಲು ತಕ್ಕ" ಎಂದು ಭಾವ. ಭಜಿಸುವುದು ಎಂದರೆ ಹೊಂದುವುದು, ಸೇವಿಸುವುದು, ಪೂಜಿಸುವುದು. 'ಭಕ್ತಿ' ಎಂಬುದೂ ಅದೇ ಧಾತುವಿನಿಂದ ಬಂದ ಶಬ್ದ. ನಾವು ಯಾವುದರ ವಿಷಯದಲ್ಲಿ ಭಕ್ತಿ ಮಾಡಿದರೆ ನಮಗೆ ಒಳ್ಳೆಯದಾದೀತೋ ಆ ವಸ್ತುವೇ ಭಗ; ಯಾವ ಮಹಾಚೈತನ್ಯವನ್ನು ನಾವು ಸೇವಿಸಿದರೆ ನಮಗೆ ಸರ್ವಶ್ರೇಷ್ಠವಾದದ್ದು ('ವರ') ದೊರೆತೀತೋ ಆ ಚೈತನ್ಯವೇ—ಆ ಮಹಾಶಕ್ತಿಯೇ—ಭಗವಂತ.

ಈ ಅಭಿಪ್ರಾಯವನ್ನು ಶ್ರೀಮದ್ವಿಷ್ಣುಪುರಾಣವು ಪುಷ್ಟೀಕರಿಸುತ್ತದೆ:

> ಸಂಭರ್ತೇತಿ ತಥಾ ಭರ್ತಾ ಭಕಾರೋಽರ್ಥದ್ವಯಾನ್ವಿತಃ ।
> ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥಸ್ತಥಾ ಮುನೇ ॥

-ವಿಷ್ಣುಪುರಾಣ, ಷಷ್ಠಾಂಶ, ಅಧ್ಯಾಯ ೫, ಶ್ಲೋಕ ೭೩

"ಭಕಾರಕ್ಕೆ ಎರಡರ್ಥ: (೧) ತುಂಬುವವನು, (೨) ಒಡೆಯ. ಗಕಾರಕ್ಕೆ (೧) ನಡಸುವವನು, (೨) ಪ್ರಾಪ್ತಿಮಾಡಿಸುವವನು, (೩) ಸೃಷ್ಟಿಮಾಡುವವನು—ಎಂದರ್ಥ. ಆ ಎರಡಕ್ಷರಗಳೂ ಸೇರಿ 'ಭಗ'."

ಇನ್ನೊಂದು ಅರ್ಥವಿವರಣೆ:

> ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಃ ಶ್ರಿಯಃ ।
> ಜ್ಞಾನವೈರಾಗ್ಯಯೋಶ್ಚಾಪಿ ಷಣ್ಣಾಂ ಭಗ ಇತೀರಣಾ ॥

ವಿಷ್ಣುಪುರಾಣ, ಷಷ್ಠಾಂಶ, ಅಧ್ಯಾಯ ೫, ಶ್ಲೋಕ ೭೪

"(೧) ಪರಿಪೂರ್ಣವಾದ ಐಶ್ವರ್ಯ (ಸರ್ವೇಶ್ವರತ್ವ), (೨) ವೀರ್ಯ, (೩) ಯಶಸ್ಸು, (೪) ಸಂಪತ್ತು, ಇವುಗಳ ಜೊತೆಗೆ (೫) ಜ್ಞಾನ, (೬) ವೈರಾಗ್ಯ—ಈ ಆರಕ್ಕೂ 'ಭಗ' ಎಂದು ಹೆಸರುಂಟು."

ಯಾವ ಸರ್ವಮೂಲಸತ್ತ್ವವನ್ನು ಜನರು ದೇವರು ಎಂದು ಕರೆಯುತ್ತಾರೋ ಅದರಲ್ಲಿ ಈ ಆರು ಬಗೆಯ ಮಹಿಮೆಗಳೂ ತುಂಬಿರುತ್ತವಾದದ್ದರಿಂದ ದೇವರಿಗೆ ಭಗವಂತನೆಂದು ಹೆಸರು.

ಮೇಲಣ ಶ್ಲೋಕದಲ್ಲಿ ‘ವೀರ್ಯಸ್ಯ’ ಎಂಬುದಕ್ಕೆ ಬದಲಾಗಿ ‘ಧರ್ಮಸ್ಯ’ ಎಂದೂ ಪಾಠವುಂಟು. ಅದೂ ಸ್ವಾರಸ್ಯವುಳ್ಳದ್ದೇ. ಜಗದೀಶ್ವರನೇ ಧರ್ಮಕ್ಕೆ ಮೂಲ ಸ್ಥಾನ. ಧರ್ಮವೆಂದರೆ ಜಗದ್ವ್ಯವಸ್ಥೆ—ಜಗತ್ತಿನ ಸುಸ್ಥಿತಿ.

ಭಗವಚ್ಛಬ್ದಕ್ಕೆ ಮತ್ತೊಂದು ಅರ್ಥವಿವರಣೆಯುಂಟು. ಅದೂ ಪ್ರಾಚೀನವಾದದ್ದು. ಅದು ಸಾಯಣರ ರುದ್ರಭಾಷ್ಯದಲ್ಲಿ ಉದಾಹೃತವಾಗಿದೆ. ಅದೂ ಗ್ರಾಹ್ಯವೇ.

> ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ ಗತಿಮ್ ।
> ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥

“ಜೀವಜಂತುಗಳ ಹುಟ್ಟುಸಾವುಗಳ ರೀತಿಯನ್ನೂ ಅವರ ಬಾಳಿನ ಏಳುಬೀಳುಗಳನ್ನೂ ಜ್ಞಾನದ ಸ್ವರೂಪವನ್ನೂ ಅಜ್ಞಾನದ (ಮಾಯೆಯ) ಸ್ವಭಾವವನ್ನೂ ಯಾವಾತನು ಬಲ್ಲನೋ ಅವನಿಗೆ ‘ಭಗವಾನ್’ ಎಂದು ಹೆಸರು ಸಲ್ಲುತ್ತದೆ.”

ನಾವು ಯಾರನ್ನು ಗುರುಸ್ಥಾನದಲ್ಲಿರಿಸಿ ಭಕ್ತಿಮಾಡುತ್ತೇವೋ ಅಂಥವರನ್ನೂ ‘ಭಗವಂತ’ ಎನ್ನುವುದುಂಟು: ವ್ಯಾಸಭಗವಾನ್, ಬುದ್ಧಭಗವಾನ್, ಇತ್ಯಾದಿ.

(೨) ಹಕ್ಕುದಾರಿಯಿಲ್ಲದೆ ಜವಾಬ್ದಾರಿ

ಭಗವದ್ಗೀತೆಯ ಪ್ರಸಿದ್ಧವಾಕ್ಯಗಳಲ್ಲೊಂದು ಇದು:

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
> ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಽಸ್ತ್ವಕರ್ಮಣಿ ॥

-ಅಧ್ಯಾಯ ೨, ಶ್ಲೋಕ ೪೭

"ನಿನ್ನ ಅಧಿಕಾರವಿರುವುದು ಕರ್ತವ್ಯ ಮಾಡುವುದರಲ್ಲಿ; ಅದರ ಫಲಾಫಲಗಳ ಅಧಿಕಾರ ನಿನಗೆ ಸೇರಿದ್ದಲ್ಲ. ಕರ್ಮಕ್ಕೆ ಫಲ ಬಯಸುವವನಾಗಿ ಸಲ್ಲದ ಜವಾಬ್ದಾರಿ ಹೊತ್ತುಕೊಳ್ಳಬೇಡ. ಫಲದ ವಿಷಯದಲ್ಲಿ ಉದಾಸೀನನಾಗಿರಬೇಕಾದದ್ದೆಂದು ನೆವ ಮಾಡಿಕೊಂಡು ನೀನು ಕರ್ತವ್ಯಲೋಪ ಮಾಡಬೇಡ."

ಈ ಶ್ಲೋಕದೊಡನೆ ಸಮನ್ವಯವಾಗಬೇಕಾದದ್ದು ಹದಿನೆಂಟನೆಯ ಅಧ್ಯಾಯದ ಈ ಶ್ಲೋಕ !

> ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
> ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥

-ಅ. ೧೮. ಶ್ಲೋ. ೧೪

ಫಲಕ್ಕೆ ಜವಾಬ್ದಾರರು ಐದು ವ್ಯಕ್ತಿ-ಸಂಗತಿಗಳು, ಹೀಗೆ: (೧) ಅಧಿಷ್ಠಾನ = ಕರ್ಮಕ್ಷೇತ್ರ. (೨) ಕರ್ತನ, ಎಂದರೆ ಕೆಲಸಮಾಡುವವನ ಯೋಗ್ಯತೆ ಶ್ರದ್ಧೆಗಳು. (೩) ಕರಣ = ಸಾಧನಗಳು. (೪) ಚೇಷ್ಟಾಃ = ಕಾರ್ಯವಿಧಾನಗಳು. (೫) ದೈವ = ಭಗವದ್ವಿಧಿ.

ಒಂದು ದೃಷ್ಟಾಂತ ನೋಡೋಣ. ಬೇಸಾಯ ಒಂದು ಕರ್ಮ. ಅದಕ್ಕೆ (೧) ಅಧಿಷ್ಠಾನ ಹೊಲ ಗದ್ದೆ ಮೊದಲಾದ ಜಮೀನು. (೨) ಕರ್ತನು ರೈತ; ಅವನ ವಿವೇಕ ಸಾಮರ್ಥ್ಯಗಳು. (೩) ಕರಣಗಳು ನೇಗಿಲು, ಎತ್ತು, ಬೀಜಧಾನ್ಯ ಮೊದಲಾದ ಸಾಮಗ್ರಿ. (೪) ಉಳುಮೆ, ಕುಂಟೆ ಹೊಡೆಯುವುದು, ಕಾಳಿನ ಬಿತ್ತನೆ ಮೊದಲಾದ 'ಚೇಷ್ಟಾಃ' —ವಿಧಾನಗಳು. (೫) ದೈವ—

ಸಕಾಲವೃಷ್ಟಿ, ಅಕಾಲವೃಷ್ಟಿ, ಅತಿವೃಷ್ಟಿ, ಬಿರುಗಾಳಿ, ಭೂಕಂಪ, ಕ್ರಿಮಿಕೀಟಗಳು, ಇತ್ಯಾದಿ. ಈ ಐದಂಶಗಳಲ್ಲಿ ಒಂದೊಂದೂ ಅನುಕೂಲವಾಗಬೇಕು; ಯಾವ ಒಂದು ಪ್ರತಿಕೂಲವಾದರೂ ಕೆಲಸ ಕೆಡುತ್ತದೆ. ಮೊದಲ ನಾಲ್ಕು ಮನುಷ್ಯಾಯತ್ತಗಳು; ಐದನೆಯದು ಮನುಷ್ಯಾತೀತ. ಮೊದಲ ನಾಲ್ಕು ಸರಿಯಾದರೂ ದೈವವು ಅನುಕೂಲವಾಗದಿದ್ದರೆ ಎಲ್ಲ ವ್ಯರ್ಥ.

ವ್ಯಾಪಾರದ ವಿಷಯದಲ್ಲಿಯೂ ಹೀಗೆಯೇ: (೧) ಅಂಗಡಿ ಬಂಡವಾಳಗಳು. (೨) ಮಾರಾಟಗಾರನ ಚಾಲಾಕು. (೩) ಸರಕು, ಅಳತೆ ತೂಕದ ಉಪಕರಣ. (೪) ಜಾಹೀರಾತು ಕ್ರಮ, ಗಿರಾಕಿಗಳನ್ನು ಒಲಿಸಿಕೊಳ್ಳುವ ಉಪಾಯ. (೫) ಗಿರಾಕಿಗಳ ಇಷ್ಟಾನುಕೂಲತೆ.

ಹೀಗೆ ಮನುಷ್ಯನದು ಪ್ರಯತ್ನ; ದೈವದ್ದು ತೀರ್ಮಾನ. ವಸ್ತುಗತಿ ಹೀಗಿರುವುದರಿಂದ ಮನುಷ್ಯನು ಫಲಚಿಂತೆಯಿಟ್ಟುಕೊಳ್ಳಬಾರದೆಂಬ ಉಪದೇಶ. ಅದರಲ್ಲಿ ಎರಡು ಭಾವಗಳು:

(೧) ಫಲವಿಚಾರ ದೈವದ್ದು, ಮನುಷ್ಯನದಲ್ಲ. ಅವನು ಫಲಚಿಂತೆಯಿಟ್ಟುಕೊಳ್ಳುವುದು ವ್ಯರ್ಥ ಪ್ರಯಾಸ.

(೨) ಫಲಚಿಂತೆಯನ್ನು ಬಿಡುವುದರಿಂದ ಅವನಲ್ಲಿ ನೈಜವಾಗಿರುವ ಅಹಂಕಾರ ಮಮಕಾರಗಳು ಸವೆಯಲು ಅವಕಾಶವಾಗುತ್ತದೆ. ಅಹಂಕಾರವಿರುವಾಗ ಫಲಚಿಂತೆ; ಅಹಂಕಾರವಿಲ್ಲದಾಗ ಕೇವಲ ಕರ್ತವ್ಯಬುದ್ಧಿಯಿಂದ ಕರ್ಮಾಚರಣೆ.

(೩) ದೈವ

(98ನೆಯ ಪುಟವನ್ನು ನೋಡಿರಿ)

(ಭಗವದ್ಗೀತೆ, ಅಧ್ಯಾಯ ೧೮, ಶ್ಲೋಕ ೧೩, ೧೪, ೧೫)

ಸಮಸ್ತ ಜಗದ್ವ್ಯವಸ್ಥೆಗೂ ಮೂಲಕಾರಣವಾಗಿದ್ದುಕೊಂಡು, ಜನಜನಾಂಗಗಳ ಸ್ಥಿತಿಗತಿಗಳನ್ನು ನಿರ್ಧಾರಪಡಿಸುತ್ತಿರುವ ಗೂಢವಾದ ಜಗದೀಶ್ವರಶಕ್ತಿಯೇ ದೈವ.

ಲೋಕದಲ್ಲಾಗುವ ಎಷ್ಟೋ ಘಟನೆಗಳು ನಮ್ಮ ಕಾರ್ಯಕಾರಣ ವಿವೇಚನೆಗೆ ಸಿಕ್ಕದೆ ಇರುತ್ತವೆ. ಅಂಥಾ ನಾನಾ ಸಂಗತಿಗಳಿಗೆ ಅನ್ಯೋನ್ಯ ಸಂಬಂಧವೇನೆಂಬುದನ್ನು ನಮ್ಮ ಬುದ್ಧಿಯು ಕಾಣಲಾರದೆ ಕ್ಲೇಶಪಡುತ್ತದೆ. ಅಂಥ ಸಂದರ್ಭಗಳನ್ನು ನಾವು ಸಾಮಾನ್ಯವಾಗಿ ದೈವಿಕ, ಆಕಸ್ಮಿಕ, ಅದೃಷ್ಟ, ದೈವ—ಮೊದಲಾದ ಹೆಸರುಗಳಿಂದ ಕರೆಯುತ್ತೇವೆ.

ಒಂದಾನೊಂದು ಘಟನೆಗೆ ಯಾವುದು ಕಾರಣವೋ, ಅದು ಎಲ್ಲಿಂದ ಬಂದದ್ದೋ ನಮಗೆ ಗೊತ್ತಿಲ್ಲದಾಗ, ಅದನ್ನು ‘ಆಕಸ್ಮಿಕ’ (ಅ+ಕಸ್ಮಾತ್) ಎನ್ನುತ್ತೇವೆ. ಯಾವುದರ ಪೂರ್ವಾಪರ ಸಂಗತಿಗಳು ನಮ್ಮ ಕಣ್ಣಿಗೆ ಕಾಣಬಾರವೋ ಅದನ್ನು ‘ಅದೃಷ್ಟ’ (ಅ+ದೃಷ್ಟ) ಎನ್ನುತ್ತೇವೆ. ಯಾವ ಕಾರ್ಯದ ಕಾರಣಸಂಬಂಧಗಳು ರಹಸ್ಯವಾಗಿವೆಯೋ ಅದು ದೈವಿಕ.

ಈಶ್ವರಪ್ರಭಾವಗಳಲ್ಲಿ ಕೆಲವು ಮೂರ್ತಗಳು, ಕೆಲವು ಅಮೂರ್ತಗಳು. ಮೂರ್ತವೆಂದರೆ ಆಕಾರಗೊಂಡದ್ದು—ಪ್ರತ್ಯಕ್ಷ ಶರೀರ ಧರಿಸಿದ್ದು. ಪೃಥಿವ್ಯಾದಿ ಪಂಚಮಹಾಭೂತಗಳಲ್ಲಿ ಆಕಾಶವು ಅಮೂರ್ತ; ಪೃಥಿವಿ ಅಪ್ಪು ತೇಜಗಳು ಮೂರ್ತಗಳು. ವಾಯು ಆಕಾಶಗಳಿಗೆ ದೇಹಾಕಾರವಿಲ್ಲ. ಆಕಾಶದಂತೆ ಅಮೂರ್ತಗಳಾದ ಶಕ್ತಿಗಳು ಈಶ್ವರನಲ್ಲಿ ಅಗಣ್ಯವಾಗಿರುತ್ತವೆ. ಅವು ಅಮೂರ್ತಗಳಾದದ್ದರಿಂದಲೇ ಅವುಗಳ ಕಾರ್ಯವಿಧಾನಗಳು ಮನುಷ್ಯನಿಗೆ ಗೋಚರಿಸದಿರುವುದು. ಯಾವುದು ನಮಗೆ ಗೋಚರವಲ್ಲವೋ ಅದು ವಾಸ್ತವದಲ್ಲಿ ಇರಲಾಗದೆಂದು ಯಾರೂ ಹೇಳರು. ಆಕಾಶವೆಂಬ ಪದಾರ್ಥವೊಂದಿದೆ. ಅದರ ಇರುವಿಕೆಯೂ ಕೆಲಸವೂ ನಮ್ಮ ಕಣ್ಣಿಗೆ ಕಾಣಬಾರವು. ಆದರೆ ಅದು ಉಂಟೇ ಉಂಟೆಂಬುದು ಅದರ ಕಾರ್ಯಪರಿಣಾಮವಾದ ಶಬ್ದಾನುಭವದಿಂದ ನಮಗೆ ಗೊತ್ತಾಗುತ್ತದೆ.

ಆಕಾಶತತ್ತ್ವವಿಲ್ಲದೆ ನಮ್ಮ ಕಿವಿಗಳಿಗೆ ಕೆಲಸವಿಲ್ಲ. ಆಕಾಶದಂತೆ ನಮ್ಮ ಇಂದ್ರಿಯಗಳಿಗೆ ನೇರವಾಗಿ ಸಿಕ್ಕದೆ ಕೆಲಸಮಾಡುವ ಪ್ರಕೃತಿಶಕ್ತಿಗಳು ಲೋಕದಲ್ಲಿ ಸಾವಿರ ಸಾವಿರವಿರುತ್ತವೆ. ಅವು ದೈವಶಕ್ತಿಯ ಅಂಶಗಳು, ಅಥವಾ ದೈವರಹಸ್ಯ.

***

ಭಗವಂತನು ನಮಗೆ ಎರಡು ಭರವಸೆಗಳನ್ನು ಕೊಟ್ಟಿದ್ದಾನೆ:

1. ಜಗದ್ರಕ್ಷಣೆ, ಧರ್ಮಸ್ಥಾಪನೆ.
2. ಭಕ್ತಪರಿಪಾಲನೆ.

- ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
  ಧರ್ಮಸಂಸ್ಥಾಪನಾರ್ಥಾಯ... ॥

—ಅ. ೪, ಶ್ಲೋ. ೮

- ಯೋಗಕ್ಷೇಮಂ ವಹಾಮ್ಯಹಮ್ ॥

—ಅ. ೯, ಶ್ಲೋ. ೨೨

ನ ಮೇ ಭಕ್ತಃ ಪ್ರಣಶ್ಯತಿ ॥

—ಅ. ೯, ಶ್ಲೋ. ೩೧

ಜಗದ್ರಕ್ಷಣೆಗಾಗಿ ಧರ್ಮವ್ಯವಸ್ಥೆ; ಭಕ್ತಪಾಲನೆಗಾಗಿ ಕೃಪೆ. ಕೃಪೆಯು ವ್ಯವಸ್ಥೆಯಿಂದ ಬೇರೆಯಾದದ್ದು. ವ್ಯವಸ್ಥೆಯೆಂದರೆ ನಿಯಮ, ಕಟ್ಟುನಿಟ್ಟು. ಕೃಪೆಯೆಂದರೆ ಆ ಕಟ್ಟುಪಾಡಿನ ಸಡಲಿಕೆ. ಮನುಷ್ಯನು ಏನೇನನ್ನೋ ಬೇಡುತ್ತಾನೆ, ಏನೇನನ್ನೋ ಮಾಡುತ್ತಾನೆ. ಜಗನ್ನಿಯಮದ ಮೇರೆಗೆ ನೋಡಿದರೆ ಅವನಿಗೆ ಆ ಬೇಡಿಕೆಗಳು ಸಲ್ಲತಕ್ಕುವಲ್ಲ; ಆ ಮಾಡಿಕೆಗಳು ಸಾಧುಗಳಲ್ಲ. ನಿಯಮದಂತೆ ಫಲ ನಿರ್ಣಯವಾಗುವುದಾದರೆ ಅವನ ಇಷ್ಟಾರ್ಥಗಳು ಸಲ್ಲಲಾರವು. ಅವನ ಚರ್ಯೆಗಳು ದಂಡನೆ ಪಡೆಯಬೇಕಾದವು. ಆದರೆ ಭಗವಂತನು ಕರುಣಾಳು. ಆತನು ಔದಾರ್ಯ ತೋರುವುದಾದರೆ ಬೇಡಿದ್ದನ್ನು

ಕೊಡಲಾದೀತು; ಕ್ಷಮೆಯಿಂದ ತಪ್ಪುಗಳನ್ನು ಅಳಿಸಲಾದೀತು. ಹೀಗೆ ವ್ಯವಸ್ಥೆಯಿಂದ ಬೇರೆಯಾಗಿರುವ ಕಾರುಣ್ಯ ವಾತ್ಸಲ್ಯಗಳು ಭಕ್ತನ ಪಾಲಿಗೆ ದೊರೆಯುವುದಾಗುತ್ತದೆ. ಇದು ದೈವ.

***

ಮನುಷ್ಯನ ಸ್ಥಿತಿಗತಿಗಳನ್ನು ನಿರ್ಧಾರಪಡಿಸುವ ಶಕ್ತಿಸ್ಥಾನಗಳು ಎರಡೆಂದು ಹೇಳಬಹುದು:

1. ವಿಶ್ವಪ್ರಕೃತಿ.
2. ಪೂರ್ವಾರ್ಜಿತ.

ಪಂಚ ಮಹಾಭೂತಗಳ ಕಾರ್ಯವೇ ಪ್ರಕೃತಿ. ಪ್ರಕೃತಿಕಾರ್ಯಗಳಲ್ಲಿ ಕೆಲವು ನಿಯತಿಗೆ ಒಳಪಟ್ಟು ನಮ್ಮಿಂದ ನಿರೀಕ್ಷಿಸಲಾಗತಕ್ಕವು: ಸೂರ್ಯೋದಯ ಚಂದ್ರೋದಯಗಳು, ಋತುಪರಿವರ್ತನೆ, ಬಿತ್ತಿದ ಬೀಜ ಮೊಳೆಯುವುದು, ನಾಯಿಯ ವಂಶದಲ್ಲಿ ಬೆಕ್ಕು ಹುಟ್ಟದೆ ನಾಯಿಯೇ ಹುಟ್ಟುವುದು, ಬೆಂಕಿಯಿಂದ ಅನ್ನ ಬೇಯುವುದು—ಇತ್ಯಾದಿ. ಪ್ರಕೃತಿಕಾರ್ಯಗಳಲ್ಲಿ ಒಂದು ಗೊತ್ತಾದ ನಿಯಮಕ್ಕೆ ಸಿಕ್ಕದೆಹೋಗುವುವೂ ಎಷ್ಟೋ ಉಂಟು: ಬಿರುಗಾಳಿ, ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಕ್ರಿಮಿಕೀಟಗಳ ಹಾವಳಿ—ಇತ್ಯಾದಿ. ಇವು ದೈವಿಕ.

ಜೀವಪೂರ್ವಾರ್ಜಿತವೆಂಬುದು ಅನಾದಿಕಾಲದಿಂದ ಜನ್ಮಜನ್ಮಾಂತರಗಳಲ್ಲಿ ಜೀವವು ಸಂಪಾದಿಸಿಕೊಂಡ ಪುಣ್ಯಪಾಪಫಲಗಳಲ್ಲಿ ಇನ್ನೂ ಜೀವದ ಅನುಭವಕ್ಕಾಗಿ ಉಳಿದುಕೊಂಡಿರುವ ಶೇಷ. ಅದೇ ಪ್ರಾರಬ್ಧಕರ್ಮ. ಅದು ಎಂಥಾದ್ದು, ಅದರ ಸ್ವರೂಪವೇನು—ಎಂಬುದನ್ನು ಯಾರೂ ತಿಳಿಯಲಾಗದು. ಆದರೆ ಅದರಿಂದ ಆಗುವ ಸತ್ಫಲ ದುಷ್ಫಲಗಳನ್ನು ಎಲ್ಲರೂ ಭುಜಿಸುತ್ತೇವೆ. ಇದೂ ದೈವಪ್ರಭಾವ.

ರಹಸ್ಯವಾಗಿರುವ ಜೀವಕರ್ಮಕ್ಕೆ ಸಲ್ಲುವ ಫಲವನ್ನು ರಹಸ್ಯರೀತಿಯಲ್ಲಿ ಪ್ರಕೃತಿಶಕ್ತಿಗಳು ತಂದೊದಗಿಸಿದಾಗ ಅದು ದೈವವೆನಿಸುತ್ತದೆ.

ಜೀವದ ಕರ್ಮಶಕ್ತಿಯು ವಿಶ್ವಪ್ರಕೃತಿಯ ಕಾರ್ಯಶಕ್ತಿಗಳ ಒಂದು ಅಂಶ. ಆದದ್ದರಿಂದ ವಿಶ್ವಪ್ರಕೃತಿಯ ರಹಸ್ಯ ಕಾರ್ಯಯಂತ್ರವೇ ದೈವ.

ವಿಶ್ವಚಕ್ರವಾದರೋ ಈಶ್ವರಾಧೀನವಾದದ್ದು. ಜಗತ್ತನ್ನು ಹೇಗೆಹೇಗೆ ನಡೆಯಿಸಬೇಕು, ಹೇಗೆಹೇಗೆ ಕಾಪಾಡಬೇಕು, ಯಾವಯಾವ ಜೀವಕ್ಕೆ ಏನೇನನ್ನು ಸಲ್ಲಿಸಬೇಕು—ಎಂಬುದನ್ನು ನಿಯಾಮಕ ಮಾಡುವವನು ಈಶ್ವರ:

> ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ॥

-ಅ. ೧೦, ಶ್ಲೋ. ೮

***

ಜಗದೀಶ್ವರಶಕ್ತಿ ಅಪರಿಮಿತವಾದದ್ದು. ಆ ಅಪಾರವಾದ ಚೈತನ್ಯಸಮುದ್ರದಿಂದ ಹರಿದುಬರುವ ಪ್ರವಾಹಗಳಲ್ಲಿ ನಾವು ಗುರುತಿಸಬಹುದಾದವು ನಾಲ್ಕು:

(೧) ವಿಶ್ವಪ್ರಕೃತಿ (Nature —ನೇಚರ್.)

(೨) ಮನುಷ್ಯನ ಪ್ರಯತ್ನ ಸಾಹಸಗಳು, ಪೌರುಷ.

(೩) ಜೀವಪ್ರಾಚೀನ.

(೪) ಭಗವದವತಾರ.

ಈ ನಾಲ್ಕು ಕಾಲುವೆಗಳಲ್ಲಿ ಹರಿದುಬಂದರೂ ಆ ಸಮುದ್ರ ಎಂದಿಗೂ ಬರಿದಾಗದು. ಅದು ಎಂದೆಂದಿಗೂ ಪರಿಪೂರ್ಣವಾಗಿ ಉಳಿದಿರುತ್ತದೆ.

> ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಆದದ್ದರಿಂದ ಮೇಲೆ ಹೇಳಿದ ನಾಲ್ಕು ಕಾಲುವೆಗಳಲ್ಲಿಯ ಶಕ್ತಿಪ್ರವಾಹವು ಯಾವಾಗಲೂ ಬತ್ತಿಹೋಗದೆ, ಎಂದೆಂದೂ ಹೊಸಹೊಸದಾಗುತ್ತಿರುತ್ತದೆ. ಅಪಾರ ಸಮುದ್ರದ

ಚೈತನ್ಯನಿಧಿಯಿಂದ ಪ್ರಪಂಚಪ್ರಣಾಳಿಕೆಗಳಲ್ಲಿ ಧಾರೆ ಸಂತತವಾಗಿ ಹರಿಯುತ್ತದೆ. ಮೇಲೆ ಹೇಳಿದ ಮೂರನೆಯ ಪ್ರಣಾಳಿಕೆಯಲ್ಲಿ ಪ್ರವಹಿಸಿ, ಜೀವದ ಜನ್ಮಜನ್ಮಾಂತರಗಳಿಂದ ಹರಿದುಬರುವ ಕರ್ಮಾಕರ್ಮಗಳ ಫಲಗಳನ್ನು ಜೀವಿಗೆ ಊಟಮಾಡಿಸುವ ಈಶ್ವರಶಕ್ತಿಯೇ ದೈವ. ಮತ್ತು ಮನುಷ್ಯನು ತಿಳಿಯಲಾಗದ ಮಹಾಜಗದ್ಯೋಜನೆಗೆ, ವ್ಯಷ್ಟಿಮನುಷ್ಯನ ಇಷ್ಟಾನಿಷ್ಟಗಳನ್ನು ಗಣಿಸದೆ, ಅವನ ಪ್ರಯತ್ನ ಸಾಹಸಗಳನ್ನು ಒಳಪಡಿಸುವ ಈಶ್ವರಾಧಿಕಾರವೇ ದೈವ. ವ್ಯಷ್ಟಿಜೀವಿಯ ಕರ್ಮ, ಸಮಷ್ಟಿಜಗತ್ತಿನ ವ್ಯವಸ್ಥೆ—ಇವೆರಡೂ ದೈವದ ಕರ್ಮ ಕ್ಷೇತ್ರಗಳು.

ಯಜ್ಞ—ಯಜ್ಞಫಲ

ಪ್ರಕೃತಿಯ ಒಳ್ಳೆಯತನ ಮನುಷ್ಯನ ಒಳ್ಳೆಯತನಕ್ಕೆ ಪ್ರತ್ಯುತ್ತರ.

(ಗ್ರಂಥದ 147 ನೆಯ, 152 ನೆಯ ಮತ್ತು, 154 ಮೊದಲಾದ ಪುಟಗಳನ್ನು ನೋಡಿರಿ.)

(೪) ಕಾಮಿತಾರ್ಥಪ್ರದತ್ವ

ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್ ಹಿ ತಾನ್ ॥

–ಅ. ೭, ಶ್ಲೋ ೨೨

ಭಗವಂತನು ಭಕ್ತನ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ—ಬೇಡಿದ ವರಗಳನ್ನು ಕೊಡುತ್ತಾನೆ—ಎಂದು ಲೋಕದ ನಂಬಿಕೆ. ಆದರೆ ಯಾವಾಗ ನೆರವೇರಿಸುತ್ತಾನೆ? ಹೇಗೆ ಕೊಡುತ್ತಾನೆ?

ದೇವರನ್ನು ಬೇಡಿಬೇಡಿ ನಿರಾಶರಾದವರು ಎಷ್ಟೋ ಮಂದಿ ಇದ್ದಾರೆ. ವ್ರತ ಪೂಜೆ ಸೇವೆ ಸತ್ಕಾರಗಳನ್ನು ಯಥಾಶಕ್ತಿ ಮಾಡಿಯೂ ವರ ಕಾಣದವರು ಇದ್ದಾರೆ. ಅಂಥವರೇ ಲೋಕದಲ್ಲಿ ಹೆಚ್ಚು ಸಂಖ್ಯೆಯವರಿದ್ದರೂ ಇರಬಹುದು. ಅವರ ವಿಚಾರ ಹೇಗೆ?

ಈಶ್ವರನು ಕಾಮಿತಾರ್ಥಪ್ರದನೆಂಬುದು ಭಕ್ತಿಯ ಆಧಿಕ್ಯವನ್ನು ಸೂಚಿಸುವ ಮಾತು.
ತತ್ತ್ವವೇನು?

ಈಶ್ವರನು ಕೊಟ್ಟಿರುವ ಪ್ರತಿಜ್ಞೆಗಳು ಎರಡು:

1. ಜಗದ್ರಕ್ಷಣೆ, ಅದಕ್ಕಾಗಿ ಧರ್ಮಸ್ಥಾಪನೆ.
2. ಜಗದ್ರಕ್ಷಣೆಗೆ ವಿರೋಧವಾಗದಂತೆ ಭಕ್ತಪರಿಪಾಲನೆ.

ಹೀಗೆಂದರೆ ಭಕ್ತೇಷ್ಟಪ್ರದಾನಕ್ಕೆ ಮಿತಿಗಳು ಎರಡು ಎಂದಾಯಿತು.

1. ಪ್ರಕೃತಿನಿಯತಿ.
2. ಜೀವದ ಪೂರ್ವಕರ್ಮವಿಧಿ.

ಇವೆರಡೂ ಋತದ ಅಂಶಗಳು. ಋತವೇ ಸತ್ಯ. ಸತ್ಯದ ಕಾರ್ಯರೂಪವೇ ಧರ್ಮ. ಇದು ತತ್ತ್ವ. ಆದದ್ದರಿಂದ ನಮ್ಮನಮ್ಮ ಇಷ್ಟಾರ್ಥಗಳು ಯಾವಾಗ ವಿಶ್ವವಿಧಿ ಕರ್ಮವಿಧಿಗಳಿಗೆ ಅವಿರೋಧವಾಗಿರುತ್ತವೆಯೋ ಆಗ ಅವು ಧರ್ಮ್ಯವಾಗುತ್ತವೆ. ಧರ್ಮ್ಯವಾದದ್ದು ಭಗವತ್ಸಮ್ಮತ.

ಇಲ್ಲಿ ಹೆಚ್ಚು ಸಂಗತವಾದ ವಿಚಾರ ಇನ್ನೊಂದುಂಟು. ಭಕ್ತನ ಇಷ್ಟಕ್ಕಿಂತ ಮೇಲಾಗಬೇಕಾದದ್ದು ಭಕ್ತನ ಹಿತ. ರೋಗಿಗೆ ಪಕೋಡ ಮಿಠಾಯಿ ಇಷ್ಟ; ಮೆಣಸು ಶುಂಠಿ ಹಿತ. ದೇಹದ ಹಿತಾಹಿತಗಳನ್ನು ಬಲ್ಲವನು ವೈದ್ಯ; ಜೀವದ ಹಿತಾಹಿತಗಳನ್ನು ಬಲ್ಲವನು ಭಗವಂತ. ಆದದ್ದರಿಂದ ಭಕ್ತನಾದವನು ಅವನ ಕಾಮಾತುರತೆಯಲ್ಲಿ ಬೇಡಿದ್ದರ ಯುಕ್ತಾಯುಕ್ತಿಗಳನ್ನು ಕಂಡು ಅನುಗ್ರಹಿಸುವುದು ಭಗವಂತನ ಮಹಿಮೆ. ಭಗವಂತನು ಭಕ್ತನ ಆತುರವನ್ನು ಬಲ್ಲ; ಹಾಗೆಯೇ ಅವನ ಜೀವಾವಸ್ಥೆಯನ್ನೂ ಬಲ್ಲ. ಆದದ್ದರಿಂದ ಪ್ರಕೃತಿ ವಿಧಿ ಕರ್ಮವಿಧಿಗಳಿಗನುಸಾರವಾಗಿ, ಜಗದ್ರಕ್ಷಣೆಗೆ ಪ್ರತಿಕೂಲವಾಗದಂತೆ ಯಾವ ವರವನ್ನು ಯಾವಾಗ ಎಷ್ಟು ಮಾತ್ರ ಕೊಟ್ಟರೆ ಜೀವನ ಸದ್ಗತಿಗೆ ಅನುಕೂಲವಾದೀತೋ ಅದನ್ನರಿತು ಆ ವರವನ್ನು ಆ ರೀತಿಯಲ್ಲಿ ಆ ಕಾಲದಲ್ಲಿ ಕರುಣಿಸುವುದು ಈಶ್ವರಾಧಿಕಾರ.

(೫) ಧರ್ಮಸಂಸ್ಥಾಪನೆ ಆಯಿತೋ?

ಅರ್ಜುನನು ಯುದ್ಧಮಾಡೆನೆಂದಾಗ ಸ್ವಾಮಿ ಹೇಳಿದ್ದೇನು? “ನಾನು ಧರ್ಮೋದ್ಧಾರಕ್ಕಾಗಿ ನಿಂತಿರುವವನು. ಈ ಯುದ್ಧವು ಅದಕ್ಕಾಗಿ. ನೀನು ಯುದ್ಧ ಮಾಡದಿದ್ದರೆ ಯುದ್ಧವೇನೂ ನಿಂತುಹೋಗುವುದಿಲ್ಲ. ನಿನಗಿಂತ ಮೊದಲೇ ನಾನು ಧರ್ಮವಿರೋಧಿಗಳನ್ನು ತೀರಿಸಿಬಿಟ್ಟಿದ್ದೇನೆ” (“ಮಯ್ಯೈವೈತೇ ನಿಹತಾಃ ಪೂರ್ವಮೇವ ।” —ಅ. ೧೧, ಶ್ಲೋ. ೩೩).

ಅದರಂತೆ ಆಯಿತೆ?

ತಾತ್ಕಾಲಿಕವಾಗಿ ಆಯಿತು. “ವಿನಾಶಾಯ ಚ ದುಷ್ಕೃತಾಮ್” ಆಯಿತು. ಅನಂತರ ಬಂದದ್ದು ಧರ್ಮರಾಜ್ಯ: ಆದರೆ ಕೊಂಚಕಾಲದ್ದು; ಚಿರಕಾಲದ್ದಲ್ಲ. ಧರ್ಮವು ಲೋಕದಲ್ಲಿ ಚಿರಕಾಲ ಅಬಾಧಿತವಾಗಿ ನಿಲ್ಲತಕ್ಕದ್ದಲ್ಲ. ಧರ್ಮಕ್ಕೆ ಆಗಿಂದಾಗ್ಗೆ ಬಾಧೆ ಬರುತ್ತಲೇ ಇರುತ್ತದೆ. ಅದು ತ್ರಿಗುಣವಿಪರ್ಯಾಸದಿಂದ, ಆದದ್ದರಿಂದಲೇ ಭಗವಂತನು ಪುನಃ ಪುನಃ ಅವತಾರಮಾಡಬೇಕಾದದ್ದು.

> ಸಂಭವಾಮಿ ಯುಗೇ ಯುಗೇ ॥
>
> -ಅ. ೪, ಶ್ಲೋ. ೮

ಭಾರತಕಥೆ ಮುಗಿಯಿತೆಂದರೆ ಜಗತ್ಕಥೆ ಮುಗಿಯಿತೆಂದಲ್ಲ. ಜಗತ್ತು ಇದ್ದೇ ಇದೆ. ಮನುಷ್ಯ ಇದ್ದಾನೆ, ಅವನ ಸ್ವಭಾವ ಇದ್ದೇ ಇದೆ. ಆದದ್ದರಿಂದ ಧರ್ಮಕ್ಕೆ ಹಾನಿ ತಟ್ಟುತ್ತಲೇ ಇರುತ್ತದೆ. ಹೀಗೆ ಧರ್ಮನಿಷ್ಠನಾದ ಮನುಷ್ಯನಿಗೆ ಕೆಲಸ ಎಂದೆಂದಿಗೂ ಇರಲೇ ಇರುತ್ತದೆ. ನಿತ್ಯಸ್ನಾನ ನಿತ್ಯಭೋಜನಗಳು ಹೇಗೋ, ಧರ್ಮಸಂರಕ್ಷಣೆ ಹಾಗೆ ದಿನದಿನವೂ ಕರ್ತವ್ಯವಾಗಿರುತ್ತದೆ.

ವಿಶ್ವವ್ಯವಸ್ಥೆಯಲ್ಲಿ ಮನುಷ್ಯನ ನಿತ್ಯಪರೀಕ್ಷೆಯೇ ಈಶ್ವರಸಂಕಲ್ಪವೆಂದು ತೋರುತ್ತದೆ. ಮನುಷ್ಯನ ಸತ್ತ್ವಪರೀಕ್ಷೆ, ಮನುಷ್ಯನ ಸತ್ತ್ವೋತ್ತೇಜನ—ಇದೇ ಈಶ್ವರನ ಅನುಗ್ರಹ ವಿಧಾನ. ಇದಕ್ಕಾಗಿ ಜಗಜ್ಜೀವನದಲ್ಲಿ ತ್ರಿಗುಣಘರ್ಷಣೆ; ಅದರಿಂದ ಧರ್ಮಕ್ಕೆ ಅಪಾಯ; ಆ ಅಪಾಯನಿವಾರಣೆಗಾಗಿ ಮನುಷ್ಯಪ್ರಯತ್ನ. ಹೀಗೆ ಜೀವೋನ್ನತಿ, ಜೀವನಸಾರ್ಥಕ್ಯ.

(೬) ಸ್ವಕರ್ಮ-ಸ್ವಧರ್ಮ

“ಸ್ವಕರ್ಮಣಾ ತಮಭ್ಯರ್ಚ್ಯ… ॥”

-ಅ. ೧೮, ಶ್ಲೋ. ೪೬

“ಸ್ವಕರ್ತವ್ಯಾಚರಣೆಯೇ ದೇವಪೂಜೆ.”

ಸ್ವಧರ್ಮದ ಒಂದು ಅಂಶ ಸ್ವಕರ್ಮ. ಸ್ವಧರ್ಮದಲ್ಲಿ ಎರಡು ಭಾಗ: (೧) ಒಂದು ಕೇವಲ ಆತ್ಮಸಂಸ್ಕಾರಕ್ಕಾಗಿ—ತಪಸ್ಸು, ಧ್ಯಾನ, ವ್ರತ ಮೊದಲಾದದ್ದು. (೨) ಇನ್ನೊಂದು ಲೋಕಸ್ನೇಹಕ್ಕಾಗಿ—ದಾನ, ಪರೋಪಕಾರ ಮೊದಲಾದ ಸತ್ಕರ್ಮ.

ಮನುಷ್ಯನು (೧) ತನಗೆ ಸ್ವಾಭಾವಿಕವಾಗಿ ಬಂದಿರುವ ಗುಣ ಶಕ್ತಿ ಸಂಪತ್ತುಗಳನ್ನು (೨) ತನ್ನ ಸಂಬಂಧವುಳ್ಳ ಲೋಕದ ಹಿತಕ್ಕಾಗಿ ವಿನಿಯೋಗಿಸುವುದು ಸ್ವಕರ್ಮ. ನೈಜಯೋಗ್ಯತೆ, ಸಮಾಜದ ಆವಶ್ಯಕತೆ—ಇವೆರಡೂ ಸ್ವಕರ್ಮಕ್ಕೆ ನಿರ್ಣಾಯಕಗಳು. ಸ್ವಕರ್ಮನಿಷ್ಠೆಯಿಂದ ಸ್ವಧರ್ಮ.

ಈ ಉಪದೇಶಕ್ಕೆ ಪಾಶ್ಚಾತ್ಯ ತತ್ತ್ವವಿಚಾರಿಗಳಲ್ಲಿ ಪ್ರಖ್ಯಾತನಾದ ಎಫ್.ಎಚ್.ಬ್ರ್ಯಾಡ್ಲೇ (F.H. Bradley) ಮಹಾಶಯನು ಸಮ್ಮತಿಸಿಯಾನೆಂದು ಆತನ ಈ ಕೆಳಗಿನ ವಾಕ್ಯಗಳಿಂದ ತೋರುತ್ತದೆ:

MY STATION AND ITS DUTIES

The self is to be realised as something not simply one or the other; it is to be realized further as will, will not being merely the natural will, or the will as it happens to exit and finds itself here or there, but the will as the *good* will i.e. the will that realizes an end which is above this or that man, superior to them, and capable of confronting them in the shape of a law or an ought. This superior something, further, which is a possible law or ought to the individual man, does not depend for its existence on his choice or opinion. Either there is no morality, so says the moral consciousness, or moral duties exist independently of their position by this or that person: my duty may be mine and no other man's, but I do not make it mine. If it is duty, it would be the duty of any person in my case and condition, whether he thought so or not: in a word, duty is ‘objective’, in the sense of not being contingent on the mere opinion or choice of this or that subject.

What we have left then (to resume) is this—the end is the realization of the good will which is superior to ourselves; and again the end is the self-realization. Bringing these together, we see the end is the realization of ourselves as the will which is above ouerselves. And this will (if morality exists) we saw must be ‘objective’, because not dependent on ‘subjective’ liking; and ‘universal’, because not identifiable with any particular, but

standing above all actual and possible particulars. Further, though universal, it is not abstract, since it belongs to its essence that it should be realized and it has no real existence except in and through its particulars. The good will (for morality) is meaningless, if, whatever else it be, it be not the will of living finite beings *pp. 161–162*.

To know what a man is (as we have seen) you must not take him in isolation. He is one of a people, he was born in a family, he lives in a certain society, in a certain state. What he has to do depends on what his place is, what his function is, and that all comes from his station in the organism. *p. 173*.

Man is a social being; he is real only because he is social, and can realize himself only because it is as social that he realizes himself. The mere individual is a delusion of theory; and the attempt to realize it in practice is the starvation and mutilation of human nature.— *p. 174 Ethical Studies, Second Edition Essay V.*

(೭) ಜಗತ್ತಿನ ಅಖಂಡೈಕತ್ವದ ಅಂತಸ್ತಂತು

ಪ್ರಪಂಚವಸ್ತುಗಳಲ್ಲಿಯೂ ಪ್ರಪಂಚಘಟನೆಗಳಲ್ಲಿಯೂ ಒಂದಕ್ಕೂ ಇನ್ನೊಂದಕ್ಕೂ ಏನು ಸಂಬಂಧ? ಒಂದು ಜೀವಕ್ಕೂ ಇನ್ನೊಂದು ಜೀವಕ್ಕೂ ಏನು ಸಂಬಂಧ? ಯಾವುದೋ ಕರ್ಮಕ್ಕೂ ಯಾರೋ ಒಬ್ಬನ ಸುಖದುಃಖಗಳಿಗೂ ಏನು ಸಂಬಂಧ?—ಇಂಥಾ ಪ್ರಶ್ನೆಗಳು ಗೀತಾವ್ಯಾಸಂಗಿಗೆ ಅಸಂಗತಗಳು; ಏಕೆಂದರೆ ಆತನಿಗೆ ಪ್ರಪಂಚ ಸಮಸ್ತವೂ ಒಂದೇ ಒಂದು. ಅದು ಅಖಂಡವಾದ ಒಂದು ಉಂಡೆ ಅಥವಾ ಮುದ್ದೆ. ಅದರಲ್ಲಿ ಪ್ರತಿಯೊಂದಂಶವೂ ಇನ್ನೊಂದಂಶಕ್ಕೆ ಅಂಟಿಕೊಂಡೇ ಇರುತ್ತದೆ. ಆ ಎಲ್ಲಕ್ಕೂ ಭಗವಂತನ ಮೂಲಕ ಅನ್ಯೋನ್ಯ ಸಂಬಂಧ.

> ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥

-ಅ. ೭. ಶ್ಲೋ. ೭

ದೈವತಂತುವಿನಿಂದ ಎಲ್ಲಕ್ಕೂ ಎಲ್ಲವೂ ಗಂಟು. ಯಾವುದನ್ನೂ ನನ್ನದಲ್ಲ, ನನಗೆ ಸಂಬಂಧಪಟ್ಟಿದ್ದಲ್ಲ ಎನ್ನುವ ಹಾಗಿಲ್ಲ. ಜಗದೀಶ್ವರನು ಗೋಡೆ ತಡೆಗಳಿಲ್ಲದ ಹಕ್ಕಿಯ ಗೂಡು. ಆ ಗೂಡಿನಲ್ಲಿ ಸಾವಿರಸಾವಿರ ಹಕ್ಕಿಗಳು ವಾಸಮಾಡಿಕೊಂಡಿರುತ್ತವೆ.

> ಯತ್ರ ವಿಶ್ವಂ ಭವತ್ಯೇಕನೀಡಮ್ ॥

-ತೈತ್ತಿರೀಯ ಶ್ರುತಿ, ಆರಣ್ಯಕ ಪರಿಶಿಷ್ಟ, ಅನುವಾಕ ೧

ಆದದ್ದರಿಂದ ನಾನಾದೇಶ ನಾನಾವರ್ಣ ನಾನಾಜನಜಾನಪದಗಳವರೆಲ್ಲ ಏಕೈಕ ಕುಟುಂಬದವರಂತೆ ಬಾಳಬೇಕಾದದ್ದು.

ಪರಿಶಿಷ್ಟ ೯
ಭಗವದ್ಗೀತಾ-ರಾಮಕಥಾ ಸಮನ್ವಯ

[ಬೆಂಗಳೂರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗಗೋಷ್ಠಿಯಲ್ಲಿ ಭಗವದ್ಗೀತಾಪ್ರವಚನಸರಣಿಯ ಎರಡನೆಯ ಆವರ್ತಿಯು ತಾ ॥ ೮-೫-೧೯೬೩ ಬುಧವಾರ ಪರಿಸಮಾಪ್ತವಾಯಿತು. ಅದರ ಮಂಗಳೋತ್ಸವವು ತಾ ॥ ೧೨-೫-೧೯೬೩ ಭಾನುವಾರ ಪ್ರಾತಃಕಾಲ ಶ್ರೀಮದ್ವೇದವ್ಯಾಸಪೂಜಾ ವೇದಪಾರಾಯಣಾದಿ ಸೇವಾಕ್ರಮದ ಅಂಗವಾಗಿ ನೆರವೇರಿತು. ಆ ಸಂದರ್ಭದಲ್ಲಿ ಸಭಿಕರಲ್ಲಿ ಪ್ರಕಟಿಸಲಾದದ್ದು ಈ ಪದ್ಯಮಾಲಿಕೆ.]

> ಮರ್ತ್ಯಾತಿಮರ್ತ್ಯಲೀಲಾಯ ಪೃಥಗ್ಜೀವಸ್ವಬನ್ಧವೇ ।
> ಧರ್ಮಾಧಿಧರ್ಮಗುರವೇ ಶ್ರೀಕೃಷ್ಣಾಯ ನಮೋ ನಮಃ ॥ ೧ ॥

ಮನುಷ್ಯರೂಪದಲ್ಲಿಯೂ ಮನುಷ್ಯನನ್ನು ಮೀರಿದ ಕಾರ್ಯಗಳಲ್ಲಿಯೂ ಲೀಲೆ ನಡಸಿ, ಜೀವಕೋಟಿಗಳಲ್ಲಿ ಪ್ರತಿಯೊಂದಕ್ಕೂ ಬೇರೆಬೇರೆಯಾಗಿ ಸ್ವಬಂಧುವೆನಿಸಿ, (ತ್ರಿಗುಣವಶರಿಗೆ ತಕ್ಕ) ಧರ್ಮತತ್ತ್ವವನ್ನೂ (ತ್ರಿಗುಣಾತೀತವಾದ) ಅಧಿಧರ್ಮಮಾರ್ಗವನ್ನೂ ಬೋಧಿಸಿದ ಶ್ರೀಕೃಷ್ಣಭಗವಂತನಿಗೆ ಪುನಃಪುನಃ ನಮಸ್ಕಾರ. (೧)

> ಧರ್ಮಬ್ರಹ್ಮಾಧ್ವನ್ಯಗುರುಂ ಲೋಕೋಜ್ಜಾ಼ಯಧುರಂಧರಮ್ ।
> ನೌಮಿ ತತ್ತ್ವಾನುಭೂತ್ಯರ್ಥಂ ಶ್ರೀವಿದ್ಯಾರಣ್ಯಯೋಗಿನಮ್ ॥ ೨ ॥

ಧರ್ಮಮಾರ್ಗವನ್ನೂ ಬ್ರಹ್ಮಮಾರ್ಗವನ್ನೂ ತಿಳಿಸಿಕೊಡುವ ಗುರುವಾಗಿ, (ವಿಜಯನಗರ ರಾಜ್ಯಸ್ಥಾಪನೆ, ಮಂತ್ರಿತ್ವನಿರ್ವಾಹ ಮೊದಲಾದ ಕಾರ್ಯಗಳ ಮೂಲಕ) ಲೋಕಜೀವನವನ್ನು ಉದ್ಧರಿಸುವ ಭಾರವನ್ನು ವಹಿಸಿದ ಶ್ರೀವಿದ್ಯಾರಣ್ಯಯೋಗಿಯನ್ನು ನಮಗೆ ಪರತತ್ತ್ವದ ಅನುಭವವಾಗಬೇಕೆಂದು ಬೇಡಿ ನಮಸ್ಕರಿಸುತ್ತೇನೆ. (೨)

ಶ್ರೀಕೃಷ್ಣಭಗವದ್ಗೀತಾ ಜಗಜ್ಜೀವೇಶಸಂಹಿತಾ ।
ಜೀಯಾಜ್ಜೀವಿತಸಾಫಲ್ಯಮಾರ್ಗಾನ್ವೇಷಿಭಿರರ್ಥಿತಾ ॥ ೩ ॥

ಶ್ರೀಕೃಷ್ಣಭಗವಂತನು ಕರುಣಿಸಿದ ಗೀತೆಯು ಜಗತ್ತು, ಜೀವ, ಈಶ್ವರ—ಈ ಮೂರು ತತ್ತ್ವಗಳ ಸ್ವರೂಪ ಸಂಬಂಧಗಳನ್ನು ಕುರಿತ ದಿವ್ಯಸ್ತೋತ್ರವಾಗಿದೆ. ಯಾರು ತಮ್ಮ ಜೀವನವನ್ನು ಸಫಲಮಾಡಿಕೊಳ್ಳುವ ದಾರಿಯನ್ನು ಹುಡುಕುತ್ತಿದ್ದಾರೋ ಅಂಥವರಿಗೆ ಆ ಗೀತೆ ಉಪಯುಕ್ತವಾಗಿ ಜಯಿಸಲಿ. (೩)

ಗೀತಾತತ್ತ್ವಾವಬೋಧಾರ್ಥಂ ಶ್ರೀರಾಮಚರಿತಂ ಸ್ಮರೇತ್ ।
ಪೂರ್ವಾವತಾರಚಾರಿತ್ರ್ಯವ್ಯಾಖ್ಯಾ ಕೃಷ್ಣೋಕ್ತಿರೇವ ಹಿ ॥ ೪ ॥

ಗೀತೆಯೊಳಗಿರುವ ತತ್ತ್ವಗಳನ್ನು ತಿಳಿದುಕೊಳ್ಳಬೇಕಾದರೆ ಶ್ರೀರಾಮಚರಿತ್ರೆಯನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು. ಏಕೆಂದರೆ ಶ್ರೀಕೃಷ್ಣನ ಮಾತು ತನ್ನ ಪೂರ್ವಾವತಾರದ ಗುಣಶೀಲಗಳನ್ನು ಕುರಿತ ಟೀಕೆಯೇ ಅಲ್ಲವೆ? (೪)

ಗೃಹೀ ಸನ್ನಪಿ ಸಂನ್ಯಾಸಚರಿತೋ ಭೂಮಿಜಾಪ್ರಿಯಃ ।
ನಿಃಸಂಗಃ ಕರ್ಮನಿಷ್ಠೋಽಪಿ ಸಮ್ರಾಡಪಿ ನ ಭೋಗದೃಕ್ ॥ ೫ ॥

ಯಾರು ಭೂಪುತ್ರಿಗೆ ಪ್ರಿಯನೋ ಮತ್ತು ಯಾರಿಗೆ ಭೂಪುತ್ರಿ ಪ್ರಿಯಳೋ ಆ ಶ್ರೀರಾಮನು ಗೃಹಸ್ಥನಾಗಿದ್ದುಕೊಂಡೇ ಸಂನ್ಯಾಸಚರ್ಯೆಯುಳ್ಳವನಾಗಿದ್ದನು; ಸ್ವಕರ್ಮದಲ್ಲಿ ನಿಷ್ಠನಾಗಿದ್ದೂ ಸಂಗರಹಿತನಾಗಿದ್ದನು; ಸಾಮ್ರಾಜ್ಯಚಕ್ರವರ್ತಿಯಾಗಿದ್ದರೂ ಭೋಗ ದೃಷ್ಟಿಯಿಂದ ಬಾಳಿದವನಲ್ಲ. (೫)

ಸಾಧುಸ್ಸರ್ವಸಖೋಽಪ್ಯೇಷ ದುಷ್ಟಾನಾಂ ದೌಷ್ಟ್ಯದಂಡನಃ ।
ಯಥಾ ರಾಜ್ಯೇ ತಥಾ ಯುದ್ಧೇ ಜೀವಸದ್ಗತಿಕಾರಕಃ ॥ ೬ ॥

ಶ್ರೀರಾಮನು ಸ್ವಭಾವದಿಂದ ಸಾಧುವು; ಸರ್ವರಿಗೂ ಸ್ನೇಹಿತ. ಆದರೂ ಆತನು ದುಷ್ಟರ ದುಷ್ಟತನವನ್ನು ದಂಡಿಸಿದವನು. ರಾಜ್ಯವನ್ನಾಳುವುದರಲ್ಲಿ ಹೇಗೋ ಯುದ್ಧನೀತಿಯಲ್ಲಿಯೂ ಹಾಗೆಯೇ ಜನದ ಜೀವಕ್ಕೆ ಸದ್ಗತಿಯನ್ನು ಉಂಟುಮಾಡಿಸಿದವನು. (೬)

> ಧರ್ತುಂ ವಾ ರಾಜ್ಯಪದವೀಂ ತ್ಯಕ್ತುಂ ವಾ ಸಮಸಮ್ಮತಿಃ ।
> ಈಶಸ್ವಮೇವ ಸರ್ವಸ್ವಂ ರಾಘವೋಽಗಣಯತ್ಸದಾ ॥ ೭ ॥

ರಾಜ್ಯಭಾರವನ್ನು ಧರಿಸಿಕೊಳ್ಳುವುದಕ್ಕಾಗಲಿ ಅದನ್ನು ತ್ಯಾಗಮಾಡುವುದಕ್ಕೇ ಆಗಲಿ (ಎರಡಕ್ಕೂ ವ್ಯತ್ಯಾಸವೆಣಿಸದೆ) ಸಮಾನವಾಗಿ ಸಮ್ಮತಿಯುಳ್ಳವನು; ತನ್ನ ಸರ್ವಸ್ವವನ್ನೂ ಯಾವಾಗಲೂ ಪರಮೇಶನ ಸ್ವತ್ತೆಂದು ಎಣಿಸಿದ್ದವನು ಶ್ರೀರಾಮನು. (೭)

> ನ ಭಯಾನ್ನ ಯಶೋಲೋಭಾನ್ನೈವ ಸ್ವರ್ಗಾದ್ಯಪೇಕ್ಷಯಾ ।
> ಧರ್ಮಾಯೈವಾಚರದ್ಧರ್ಮಂ ರಾಮಃ ಸಾರ್ವಾತ್ಮ್ಯಭಾವನಃ ॥ ೮ ॥

ರಾಮನ ಧರ್ಮವರ್ತನೆಯು (ನರಕಭಯ, ಅಪವಾದಭಯ ಮುಂತಾದ) ಹೊರಗಣ ಭಯಗಳ ಕಾರಣದಿಂದ ಆದದ್ದಲ್ಲ; ಕೀರ್ತಿಪ್ರಸಿದ್ಧಿಗಳ ಆಶೆಯಿಂದ ಆದದ್ದಲ್ಲ; ಸ್ವರ್ಗಾದಿ ಉತ್ತಮ ಲೋಕಗಳ ಅಪೇಕ್ಷೆಯಿಂದ ಆದದ್ದಲ್ಲ. ಧರ್ಮಕ್ಕೋಸ್ಕರವಾಗಿಯೇ ಧರ್ಮವನ್ನು ನಡಸಿದವನು ಶ್ರೀರಾಮನು. ಅವನು (ಗೀತೆಯಲ್ಲಿ ಹೇಳಿರುವ "ಸರ್ವಭೂತಸ್ಥಮಾತ್ಮಾನಮ್" ಇತ್ಯಾದಿಯಾದ) ಸರ್ವಾತ್ಮಭಾವದ ವ್ರತವನ್ನು ಹಿಡಿದಿದ್ದವನು. (ಅದರಿಂದ ಆತನ ಧರ್ಮೈಕನಿಷ್ಠೆ.) (೮)

> ಏವಮೇವ ಚ ಸರ್ವೇ ತೇ ರಾಮಬನ್ಧುಸುಹೃಜ್ಜನಾಃ ।
> ಸ್ವಧರ್ಮೇ ಸುಖಮಾಪನ್ನಾ ಭೋಗೈಶ್ವರ್ಯಪರಾಙ್ಮುಖಾಃ ॥ ೯ ॥

ಶ್ರೀರಾಮನ ಬಂಧುಗಳು ಮಿತ್ರರು ಎಲ್ಲರೂ ಹಾಗೆ ಮಾಡಿದವರೇ: ಅವರೂ ಸ್ವಧರ್ಮದಲ್ಲಿಯೇ ಸುಖ ಕಂಡವರು; ಭೋಗ ಸಂಪತ್ತುಗಳ ಕಡೆ ತಿರುಗಿ ನೋಡದಿದ್ದವರು. (೯)

> ದೇವೀ ಸೀತಾ ಲಕ್ಷ್ಮಣಶ್ಚ ಭರತೋ ಮಾರುತಿಸ್ತಥಾ ।
> ಸ್ವಾರ್ಥಂ ವಿನಾಽರ್ಚಯನ್ ದೇವಂ ನಿಯತಾಃ ಸ್ವಸ್ವಕರ್ಮಭಿಃ ॥ ೧೦ ॥

ಸೀತಾದೇವಿಯೂ ಲಕ್ಷ್ಮಣನೂ ಭರತನೂ ಆಂಜನೇಯನೂ ಸ್ವಾರ್ಥವನ್ನು ಚಿಂತಿಸದೆ, ತಮ್ಮತಮ್ಮ ಕರ್ತವ್ಯಗಳನ್ನು ನೆರವೇರಿಸುವುದರ ಮೂಲಕ ಭಗವಂತನನ್ನು ಪೂಜಿಸಿದರು.

(೧೦)

ಇತ್ಥಂ ರಾಮಾಯಣೇ ದೃಶ್ಯಾ ಗೀತಾತಾತ್ಪರ್ಯಮೂರ್ತಯಃ ।
ಈಶಪ್ರೀತ್ಯಾ ಲೋಕಸಂಸ್ಥಾಕ್ಷೇಮಾರ್ಥಂ ದತ್ತಜೀವಿತಾಃ ॥ ೧೧ ॥

ಹೀಗೆ ಗೀತೆಯ ತತ್ತ್ವದ ಪ್ರತ್ಯಕ್ಷರೂಪಗಳನ್ನು ರಾಮಾಯಣದಲ್ಲಿ ಕಾಣಲಾಗುತ್ತದೆ. ಶ್ರೀರಾಮನ ಜನರು ಭಗವಂತನ ಮೇಲಣ ಪ್ರೀತಿಯಿಂದ, ಲೋಕದ ಸುಸ್ಥಿತಿಗಾಗಿಯೂ ಕ್ಷೇಮಕ್ಕಾಗಿಯೂ ತಮ್ಮತಮ್ಮ ಜೀವಿತಗಳನ್ನು ಸಮರ್ಪಿಸಿದ್ದರು. (೧೧)

ಯಥಾ ವಸನ್ತೇ ತರವಃ ಸ್ವಸ್ವಜಾತ್ಯೈಃ ಸುಮ್ಯೈಃ ಫಲ್ಯೈಃ ।
ಶೋಭನ್ತೇ ತದ್ವದೇವಾಮೀ ಸ್ವಸ್ವಸತ್ತ್ವಗುಣೋದ್ಗಮ್ಯೈಃ ॥ ೧೨ ॥

ವಸಂತಋತುವಿನಲ್ಲಿ ಮರಬಳ್ಳಿಗಳು ಹೇಗೆ ತಮ್ಮತಮ್ಮ ಜಾತಿಗೆ ಸಹಜವಾದ ಹುವ್ವು ಹಣ್ಣುಗಳಿಂದ ಶೋಭಿಸುತ್ತವೆಯೋ ಹಾಗೆ ಆ (ರಾಮಾಯಣದ) ಜನರು ತಮ ತಮಗೆ ನೈಜವಾದ (ಸತ್ತ್ವ) ಒಳ್ಳೆಯ ಗುಣಗಳ ಉಚಿತಪ್ರಕಾರದ ಹೊರಹೊಮ್ಮುವಿಕೆಯಿಂದ ಶೋಭಿಸುತ್ತಾರೆ. (೧೨)

ವಾಲ್ಮೀಕಿವ್ಯಾಸಕಾವ್ಯರ್ಷೀ ಲಕ್ಷ್ಯಲಕ್ಷಣಕಾರಕೌ ।
ಈಶಾವಾಸ್ಯಾದ್ಯುಪನಿಷತ್ತತ್ತ್ವಸಾಕ್ಷಾತ್ಪ್ರಕಾಶಕೌ ॥ ೧೩ ॥

ವಾಲ್ಮೀಕಿ, ವ್ಯಾಸ—ಇವರಿಬ್ಬರೂ ಕಾವ್ಯಲೋಕದಲ್ಲಿಯ ಮಹರ್ಷಿಗಳು. ಅವರಲ್ಲಿ ಮೊದಲನೆಯಾತನು (ಧರ್ಮದ) ಆದರ್ಶ (ಲಕ್ಷ್ಯ)ಗಳನ್ನು ಪ್ರತ್ಯಕ್ಷವಾಗುವಂತೆ ರೂಪಗೊಳಿಸಿದ್ದಾನೆ; ಎರಡನೆಯಾತನು ಧರ್ಮದ ಮೂಲತತ್ತ್ (ಲಕ್ಷಣ)ಗಳನ್ನು (ಗೀತೆಯಲ್ಲಿ) ಪ್ರತಿಪಾದಿಸಿದ್ದಾನೆ. ಅವರಿಬ್ಬರೂ ಈಶಾವಾಸ್ಯ ಮೊದಲಾದ ಉಪನಿಷತ್ತುಗಳ ತತ್ತ್ವಸಾರವನ್ನು ನಮಗೆ ಸಾಕ್ಷಾತ್ತಾಗುವಂತೆ ಪ್ರಕಾಶಪಡಿಸಿದ್ದಾರೆ. (೧೩)

ಭರತಾನ್ವಯವೇಶ್ಮಸ್ಥಪ್ರಜಾನಾಮನ್ತರಾತ್ಮನಃ ।
ದರ್ಶನಾರ್ಥಂ ಗವಾಕ್ಷೇ ದ್ವೇ ಚಕ್ರತುಸ್ತೌ ತಪೋಧನೌ ॥ ೧೪ ॥

ಭರತವಂಶದ ಜನತೆಯ ಅಂತರಾತ್ಮದ ದರ್ಶನಕ್ಕಾಗಿ ಆ ತಪಸ್ವಿಗಳಿರ್ವರೂ ಆ ಜನದ ಮನೆಯಲ್ಲಿ ಎರಡು ಗವಾಕ್ಷಿಗಳನ್ನು ಮಾಡಿರಿಸಿದ್ದಾರೆ. (ಅವೇ ರಾಮಾಯಣ ಮಹಾಭಾರತಗಳು.) (೧೪)

> ಜೀಯಾಸ್ತಾಂ ಸರ್ವದಾ ನೄ ಣಾಂ ಜೀವಸಾರ್ಥಕ್ಯದೀಪಿಕೇ ।
> ಶ್ರೀರಾಮಾಯಣಕೃಷ್ಣೋಕ್ತೀ ಲೋಕಮಂಗಲದಾಯಿಕೇ ॥ ೧೫ ॥

ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಜನರಿಗೆ ದಾರಿಯ ಕೈದೀವಿಗೆಗಳಾಗಿ, ಜಗತ್ತಿಗೆ ಮಂಗಳ ತರತಕ್ಕವುಗಳಾಗಿ, ಶ್ರೀರಾಮಾಯಣವೂ ಶ್ರೀಕೃಷ್ಣಗೀತೆಯೂ ಎಂದೆಂದಿಗೂ ಬೆಳಗಲಿ. (೧೫)

> ಡೀವೀಜೀಸಂಜ್ಞಿತಃ ಕೋಽಪಿ ಬ್ರಹ್ಮಪತ್ತನಭಿಕ್ಷುಕಃ ।
> ಚಕಾರೇದಂ ಸ್ವಮೋದಾರ್ಥಮನುಗೃಹ್ಣನ್ತು ಸಜ್ಜನಾಃ ॥ ೧೬ ॥

ಬ್ರಹ್ಮಪಟ್ಟಣದ ತಿರುಕನೊಬ್ಬನು ತನ್ನ ಸಂತೋಷಕ್ಕಾಗಿ ಈ ಪದ್ಯಗಳನ್ನು ಮಾಡಿಕೊಂಡನು. ಅದರ ವಿಷಯದಲ್ಲಿ ಸಜ್ಜನರು ಅನುಗ್ರಹ ಮಾಡಲಿ. (೧೬)

ಪರಿಶಿಷ್ಟ ೧೦
ಶ್ರೀ ಪಾರ್ಥಸಾರಥಿ ಕೀರ್ತನಂ

ಭಗವದ್ಗೀತಾರ್ಥ ಪ್ರತಿಪಾದಕಂ

ಪೀಠಿಕೆ : ಗೀತೋಪದೇಶದ ಸಾರಾಂಶವನ್ನು ಒಳಕೊಂಡಿರುವ ಈ ಸಂಸ್ಕೃತ ಭಾಷೆಯ ಹಾಡು ಸುಮಾರು ೬೦ ವರ್ಷಗಳಿಂದ ನನ್ನ ಒಂದು ಜ್ಞಾಪಕಪುಸ್ತಕದಲ್ಲಿ ಇದ್ದುಕೊಂಡಿದೆ. ಅದನ್ನು ರಚಿಸಿದವರು ಯಾರೋ, ಎಲ್ಲಿಯವರೋ, ಯಾವ ಕಾಲದವರೋ ತಿಳಿಯುವುದು ಈಗ ಅಸಾಧ್ಯವಾಗಿದೆ. ನನ್ನ ಬಾಲ್ಯದಲ್ಲಿ ನಮ್ಮ ಮನೆಗೆ ಬರುತ್ತಿದ್ದ ಒಬ್ಬಾನೊಬ್ಬ ಹಿರಿಯರು ಹೇಳಿದ್ದನ್ನು ನಾನು ಬರೆದಿಟ್ಟುಕೊಂಡದ್ದು ಇದು. ಅವರು ಯಾರೆಂಬುದು ಈಗ ನೆನಪಿನಿಂದ ಜಾರಿಹೋಗಿದೆ. ಆಗ ಸುಭಿಕ್ಷದ ಕಾಲ. ಹರಿಕಥೆ ಮಾಡುವವರೂ ಪುರಾಣ ಹೇಳುವವರೂ ಸಂಗೀತಗಾರರೂ ವಿದ್ವಾಂಸರೂ ನಮ್ಮೂರಿನಲ್ಲಿಯೂ ಆ ಸುತ್ತಮುತ್ತಲ ಊರುಗಳಲ್ಲಿಯೂ ಆಗ ನಾಲ್ಕಾರು ಮಂದಿ ಇದ್ದರು. ಅವರಲ್ಲನೇಕರು ನನ್ನ ತಂದೆ ತಾತಂದಿರ ಸ್ನೇಹಿತರು. ಅವರು ಆಗಾಗ ನಮ್ಮ ಮನೆಗೆ ಬರುತ್ತಿದ್ದದ್ದುಂಟು. ಪಂಡಿತ ಆವನಿ ರಾಮಸ್ವಾಮಿಶಾಸ್ತ್ರಿಗಳು, ಪುರಾಣದ ರಾಮಚಂದ್ರಶಾಸ್ತ್ರಿಗಳು, ಶೇಷದಾಸರು, ಸೇತುಮಾಧವ ದಾಸರು, ಸಾಹಿತ್ಯದ ವೆಂಕಟರಾಮಶಾಸ್ತ್ರಿಗಳು, ವೆಂಕಟನಾರಾಯಣ ಭಟ್ಟರು, ಗುಡಿಪಲ್ಲಿ ನಾರಣಪ್ಪನವರು— ಮುಂತಾದ ಆ ಹಿರಿಯರು ನಮ್ಮ ಮನೆಗೆ ಬಂದಾಗ ನನ್ನನ್ನು ಮಾತನಾಡಿಸಿ ಹೋಗುತ್ತಿದ್ದರು. ಆ ಹಿರಿಯರು ಕುಳಿತು ಮಾತನಾಡಿಕೊಳ್ಳುತ್ತಿದ್ದಾಗ ಪ್ರಾಸ್ತಾವಿಕವಾಗಿ ಪದ್ಯಗಳೂ ಹಾಡುಗಳೂ ಗಾದೆಗಳೂ ಅವರ ಮುಖದಿಂದ ಬರುತ್ತಿದ್ದವು. ನಾನು ಆ ಕಡೆ ಸುಳಿದಾಗ ನನ್ನ ಕಿವಿಗೆ ಅದರಲ್ಲೇನಾದರೂ ಬೀಸಿಬಂದು, ಅದರಲ್ಲಿ ನನಗೆ ಕುತೂಹಲ ತೋರಿದರೆ, ನಾನು ಅದನ್ನು ಅವರಿಗೆ ತಿಳಿಸಿ ಹೆಚ್ಚು ತಿಳಿವಳಿಕೆಯನ್ನು ಬೇಡಿಕೊಳ್ಳುವಷ್ಟು ಸಲಿಗೆಯಿತ್ತು. ಹಾಗೆ ನಾನು ಎಂದೋ ಬೇಡಿದಾಗ ಅವರಲ್ಲಿ ಯಾರೋ ಒಬ್ಬರು ಹೇಳಿ ಬರೆಯಿಸಿದ್ದು ಈ ಹಾಡು. ಇದು ಬಹು ಪ್ರಾಚೀನ ಕೃತಿ ಎಂದು ಅವರು ಹೇಳಿದ್ದು ನನಗೆ ಜ್ಞಾಪಕದಲ್ಲಿ ನಿಂತಿದೆ.

ಭಗವದ್ಗೀತೆಯು ಗಾನಕ್ಕಾಗಿ ಉದ್ದಿಷ್ಟವಾದ ಕೃತಿಯೆ? ಎಂಬ ಪ್ರಶ್ನೆಯನ್ನು ಈ ಗ್ರಂಥದಲ್ಲಿ ಒಂದಿಷ್ಟು ವಿಚಾರ ಮಾಡಿದೆ. ಆ ಪ್ರಶ್ನೆಗೆ ಉತ್ತರ ಈ ಕೀರ್ತನೆಯಲ್ಲಿ ಒಂದಿಷ್ಟು ಕಾಣಬರುತ್ತದೆ. ಗೀತೆಯ ವಿಷಯವು ಗಾನಯೋಗ್ಯವಾದದ್ದು ಎಂಬುದು ಪುರಾತನರ ಅಭಿಪ್ರಾಯವೆಂದು ಇದರಿಂದ ಸ್ಪಷ್ಟವಾಗಿದೆ. ಗೀತೆಯಲ್ಲಿ ಶಾಸ್ತ್ರಾಂಶ ಕಾವ್ಯಾಂಶಗಳೆರಡೂ ಸೇರಿವೆಯಲ್ಲವೆ? ಗೀತೆಯನ್ನು ಬುದ್ಧಿಯೆಂಬ ಅಂತಃಕರಣದ ದ್ವಾರಾ ಗ್ರಹಿಸುವವರಿಗೆ ತರ್ಕದ ದಾರಿ ಸರಿ; ಹೃದಯದ ದ್ವಾರಾ ಗ್ರಹಿಸುವವರಿಗೆ ಸಂಗೀತದ ದಾರಿ ಸರಿ. ಹೃದಯವು ಜನತಾಸಾಮಾನ್ಯದ ದಾರಿ, —ನೂರರಲ್ಲಿ ತೊಂಭತ್ತು ಮಂದಿಯ ದಾರಿ. ಅವರ ಪ್ರಯೋಜನಕ್ಕಾಗಿ ಈ ಗೀತಾಕೀರ್ತನೆ. ಇದರ ಬಹು ಭಾಗದಲ್ಲಿ ಮೂಲಗ್ರಂಥದ ಪದ ವಾಕ್ಯಗಳನ್ನು ಹಾಗೆಹಾಗೆಯೇ ಬಳಸಿಕೊಂಡಿದೆ. ಇದರ ರಚನೆಯಲ್ಲಿ ಮುಖ್ಯ ದೃಷ್ಟಿ ಸಾಹಿತ್ಯದ ಕಡೆಗೆ ಸೇರಿ, ಸಂಗೀತವು ಗೌಣವಾಗಿರುವುದರಿಂದ ಗಾಯನಾಂಶದ ವಿಸ್ತಾರಕ್ಕೆ ಇಲ್ಲಿ ಸೌಕರ್ಯ ಸಾಲದು, ಮತ್ತು ಅಕ್ಷರೋಚ್ಚಾರಣೆಯಲ್ಲಿ ಗಾಯಕರು ಕೆಲವು ಕಡೆ ಉಚಿತವರಿತು ದ್ರುತವಿಲಂಬಿತ ವ್ಯತ್ಯಾಸಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಗೇಯ ಕೃತಿಗೆ ಮೋಹನರಾಗವನ್ನು ಗೊತ್ತುಪಡಿಸಿದವರು ಇತರ ರಾಗಗಳನ್ನು ನಿಷೇಧಿಸಿದರೆಂದು ತಿಳಿಯಲು ಕಾರಣವಿಲ್ಲ. ಮೋಹನರಾಗವು ಇದರ ಭಾವಕ್ಕೆ ಒಪ್ಪುತ್ತದೆ. ಅದು ಬೇಗ ಮನಸ್ಸನ್ನು ಕರಗಿಸುವ ಶಕ್ತಿಯುಳ್ಳ ರಾಗ. ತ್ಯಾಗರಾಜ ಪುರಂದರಾದಿ ಭಕ್ತಗಾಯಕರು ಮೋಹನರಾಗವನ್ನು ಆರಿಸಿಕೊಂಡಿದ್ದಾರೆ. ಪೂರ್ವಿಕರಲ್ಲಿ ಅದು ಜನಪ್ರಿಯವಾಗಿ ಸರ್ವಸುಲಭವಾಗಿದ್ದ ರಾಗವೆಂದು ನನಗಿರುವ ಹಿಂದಿನ ಕಾಲದ ಅನುಭವದಿಂದ ತೋರುತ್ತದೆ. ಈ ಕೀರ್ತನೆಯಲ್ಲಿ ಪಲ್ಲವಿ-ಅನುಪಲ್ಲವಿಗಳ ಜೊತೆಗೆ ಮುವ್ವತ್ತು ಚರಣಗಳಿವೆಯಾದದ್ದರಿಂದ ಇತರ ರಾಗಗಳನ್ನು ಅಭಿರುಚಿಯಂತೆ ಜೋಡಿಸಿಕೊಂಡು ರಾಗಮಾಲಿಕೆಯಾಗಿ ಹಾಡಬಹುದೆಂದು ತೋರುತ್ತದೆ. ರಾಗದ ಗತಿರೀತಿಗಳು ಭಕ್ತಿಧ್ಯಾನಗಳಿಗೆ ಅನುಕೂಲವಾಗಿರಬೇಕು.

“ಭಜ ಪಾರ್ಥಸಾರಥಿಂ”

ಮೋಹನ ರಾಗೇಣ ಗೀಯತೇ

(ರಾಗಮಾಲಿಕೆಯೂ ಆಗಬಹುದು)

ತಾಳ: ಝಂಪೆ

ಭಜ ಪಾರ್ಥಸಾರಥಿಮ್ । ಅಯಿ ಚಿತ್ತ ಶರಣಂ ॥ ಪಲ್ಲವಿ

ತ್ಯಜಾನರ್ಥಾರಿಷಡ್ವರ್ಗಂ । ವಿಷಯಾಂಶ್ಚ ವಿರಸಾನ್ ॥ ಅನುಪಲ್ಲವಿ

(ಶ್ರೀಕೃಷ್ಣ ವರ್ಣನೆ)

ಸಿತರಥ್ಯಾಂಶ್ಚತುರೋಽಪಿ । ಚತುರಂ ತಂ ಗಮಯಂತಂ ।
ದಕ್ಷಿಣ ಕರ ವೇತ್ರಂ । ಕಂಜಾಭನೇತ್ರಂ ।
ವಾಮಪಾಣಿ ಖಲೀನಂ । ಸರ್ವವಸ್ತುಷು ಲೀನಂ ।
ರಾಧಾಹೃದಯಾನಂದಂ । ಸಚ್ಚಿದಾನಂದಂ ॥ ೧

ಇತರ ಕರೋದ್ಧೃತಾಂ- । ಬುಜರಾಜಾಯುಧರಾಜಂ ।
ಭಾಸಿತ ಶ್ರೀವತ್ಸಂ । ಪಾಲಿತ ವತ್ಸಂ ॥
ಲೀಲಾನಿಹತ ಕಂಸಂ । ಯೋಗಿ ಮಾನಸ ಹಂಸಂ ।
ಕರ್ಮಪಾಶಲವಿತ್ರಂ । [1] ಸಜ್ಜನಮಿತ್ರಂ ॥ ೨

ಹಯ ಖುರೋತ್ಥಿತ ಧೂಳಿ । ಧೂಸರ ಮುಖ ಪದ್ಮಂ ।
ಭಾಸಿತ ತಾಪಿಂಛಂ [2] । ಕಚಧೃತ ಪಿಂಛಂ [3] ॥
ವಕ್ತ್ರ ವಿಜಿತ ಚಂದ್ರಂ । ಭಕ್ತ ಕೈರವ ಚಂದ್ರಂ ।
ಲೋಲಕುಂಡಲ ಹಾರಂ । ಲಜ್ಜಿತ ಮಾರಂ ॥ ೩

ಅಷ್ಟಾಪದಾಷ್ಟಾರ [4] । ರಥಮಪಿ ಬಹು ನೀಲಂ ।
ನಿಜಕಾನ್ತ್ಯಾ ಕಲಯಂತಂ । ಗಾಃ ಪಾಲಯನ್ತಂ ॥
ಸೃಷ್ಟಿಸ್ಥಿತಿಲಯಂ ತಂ । ಜಗತಾಮಾಕಲಯನ್ತಂ ।
ಉಪನಿಷದಾಂ ಸಾರಂ । ಕರುಣಾಕೂಪಾರಂ ॥ ೪

ಸೇನಯೋರುಭಯೋರ್ಮ- । ಧ್ಯೇ ಸಂಸ್ಥಾಪಿತ ರಥಂ ।
ಸ್ವಜನಸ್ಯ ತಂ ಪಾರ್ಥಂ । ಸಂದರ್ಶನಾರ್ಥಂ ॥
ಪ್ರಿಯ ಪಾರ್ಥ ಪಶ್ಯೈತಾನ್ । ಸಮವೇತಾನ್ ಕುರೂನ್ ಸರ್ವಾನ್ ।
ಏವಂ ಸನ್ನಿಗದಂತಂ । ಸತ್ಸುಹೃದಂ ತಂ ॥ ೫

ದೃಷ್ಟ್ವೇಮಂ ಸ್ವಜನಂ ಸಂ- । ಶೋಚತಾ ವಿಜಯೇನ ।
ಯಚ್ಛ್ರೇಯಸ್ಸ್ಯಾನ್ನಿಶ್ಚಿ- । ತಂ ಬ್ರೂಹಿ ತನ್ಮೇ ॥
ಶಿಷ್ಯಸ್ತೇಽಹಂ ಶಾಧಿ । ಮಾಂ ತ್ವಾಂ ಪ್ರಪನ್ನಂ ಭೋ- ।
ರಿತ್ಯುಕ್ತಂ ಸವಿನಯಂ । ವಸುದೇವತನಯಂ ॥ ೬

ವಾಮಕರಸ್ಥ ಕ- । ಶಾ ರಥ್ಯ ಮುಖರಜ್ಜುಂ ।
ಕರಕೃತ ಚಿನ್ಮುದ್ರಂ । ಸರ್ವತೋ ಭದ್ರಂ ॥
ಉಪದಿಶನ್ತಂ ಪಾರ್ಥಂ । ಶ್ರುತ್ಯನ್ತ ಪರಮಾರ್ಥಂ ।
ಗೀತಾ ಪ್ರದಾತಾರಂ । ಜಗತಾಂ ನೇತಾರಂ ॥ ೭

(ಉಪದೇಶಾರಂಭ; ಆತ್ಮತತ್ತ್ವ)
ಅಶೋಚ್ಯಾನನ್ವಶೋಚಸ್ತ್ವಂ । ಪ್ರಜ್ಞಾಭಾಷಿತಂ ಬ್ರೂಷೇ ।
ರೀತಿಂ ತಾಂ ಮಯಿ ಸಾಧೋ । ಮಾಕುರ್ವಸಾಧೋಃ ॥
ಗತಾಸೂನಗತಾಸೂಂಶ್ಚ । ಪಂಡಿತಾ ನ ಶೋಚನ್ತಿ ।
ಇತ್ಯಾಹ ಗುಡಾಕೇಶಂ । ಯೋ ಹೃಷೀಕೇಶಂ ॥ ೮

ನತ್ವೇವಾಹಂ ಜಾತು । ನಾಽಽಸಂ ನ ತ್ವಂ ನೇಮೇ ।
ಮನುಜೇಶಾ ವಯಂ ಸರ್ವೇ । ಭವಿಷ್ಯಾಮ ಏವ ॥
ದೇಹಿನೋಽಸ್ಮಿನ್ ಯಥಾ । ದೇಹೇ ಬಾಲ್ಯಾದಿಕಾ- ।
ವಸ್ಥಾಸ್ತಥಾಂಗಾಪ್ತಿ- । ರತ್ರ ನ ಮುಹ್ಯೇತ್ ॥ ೯

ಮಾತ್ರಾಸ್ಪರ್ಶಾಸ್ತು ಹೇ । ಕೌಂತೇಯ ಶೀತೋಷ್ಣ- ।
ಸುಖದುಃಖದಾ ಏತೇ । ನಾಶನಶೀಲಾಃ ॥
ತಾಂಸ್ತಿತಿಕ್ಷಸ್ವ ಯ- । ಮೇತೇ ನ ಬಾಧಂತೇ ।
ಸಮದುಃಖಸುಖಂ ಧೀರಂ । ಸೋಽಮೃತಮೇತಿ ॥ ೧೦

ನಾಽಸತೋ ವಿದ್ಯತೇ । ಭಾವೋ ನಾಭಾವೋ ।
ವಿದ್ಯತೇ ಸತ ಇತಿ । ದೃಷ್ಟೋಽನ್ತಃಪ್ರಾಜ್ಞೈಃ ॥
ಅನ್ತವನ್ತ ಇಮೇ । ನಿತ್ಯಸ್ಯ ದೇಹಿನೋ ॥
ಹನ್ಯಮಾನೇ ದೇಹೇ । ನ ಹನ್ಯತೇ ದೇಹೀ ॥ ೧೧

ಅಚ್ಛೇದ್ಯೋಽಯಮದಾಹ್ಯೋಽಯ- । ಮಕ್ಲೇದ್ಯೋಽಶೋಷ್ಯಶ್ಚ ।
ನಿತ್ಯೋ ದೇಹೀ ದೇಹಾ । ನೈವಂ ಸ್ವಭಾವಾಃ ॥
ಏವಂ ವಿದಿತ್ವೈನಂ । ನ ಶೋಚಿತುಮರ್ಹಸಿ ।
ಕೌಂತೇಯಾವೇಹಿತತ್ತ್ವಂ । ಪ್ರಾಜ್ಞ ಏವ ತ್ವಂ ॥ ೧೨

(ಕರ್ಮಯೋಗ)

ಯಜ್ಞಾರ್ಥಾತ್ ಕರ್ಮಣೋ- । ಽನ್ಯತ್ರ ಲೋಕೋಽಯಂ ।
ಕರ್ಮ ಬಂಧನ ಇತಿ । ಜಾನೀಹಿ ಸತ್ಯಂ ॥
ಕರ್ಮಫಲಾಸಂಗಂ । ತ್ಯಕ್ತ್ವೈವ ಸನ್ನ್ಯಪ್ತಃ ।
ಕರ್ಮ ಕುರ್ವನ್ನಪಿ । ಕರ್ತಾ ಸ ನೈವ ॥ ೧೩

ಯಃ ಕಾಮಕ್ರೋಧೋದ್ಭ- । ವಂ ವೇಗಂ ಸಹತೇ ಸ ।
ಮುಕ್ತೋ ವಿಮುಕ್ತಶ್ಚ । ಸಂಸಾರಬಂಧಾತ್ ॥
ಯೋ ಮಾಂ ಪಶ್ಯತಿ । ಸರ್ವತ್ರ ಸರ್ವಂ ಚ ।
ಮಯ್ಯೇವ ತಸ್ಯಾಹಂ । ಮಮ ಸ ಚ ಮಿತ್ರಂ ॥ ೧೪

(ಶರಣಾಗತಿ)

ಮಯಿ ಸರ್ವಮಿದಂ ಪ್ರೋತಂ । ಸೂತ್ರೇ ಮಣಯ ಇವ ।
ಜಂಗಮಾಜಂಗಮಂ । ಜಗದಪಿ ಪಾರ್ಥ ॥
ಬಹು ಜನ್ಮನಾಮನ್ತೇ ಜ್ಞಾನೀ ಮಾಂ ಭರಣಂ ।
ವಾಸುದೇವಸ್ಸರ್ವ- । ಮಿತಿ ಯಾತಿ ಶರಣಂ ॥ ೧೫

(ಶರಣಾಗತಿ)

ಅನ್ತಕಾಲೇ ಚ ಮಾ- । ಮೇವ ಸ್ಮರನ್ಮುಕ್ತ್ವಾ ।
ಯೋಽಂಗಂ ಪ್ರಯಾತಿ ಸ । ಮದ್ಭಾವಂ ಯಾತಿ ॥
ಯಂ ಯಂ ವಾಪಿ ಸ್ಮರನ್ । ಭಾವಂ ತ್ಯಜತ್ಯನ್ತೇ ।
ದೇಹಂ ತಮೇವೈತಿ । ಕೌನ್ತೇಯ ಸತ್ಯಂ ॥ ೧೬

ಮಾಂ ಪ್ರಾಪ್ಯ ಪುನರ್ಜನ್ಮ । ದುಃಖಾಲಯಂ ಲೋಕಂ ।
ನ ಪ್ರಾಪ್ನುವನ್ತಿ ಪ- । ರಾಂ ಸಿದ್ಧಿಮಾಪ್ತಾಃ ॥
ಸಂಚಿನ್ತಯನ್ತೋ ಮಾಂ । ಯೇ ಪರ್ಯುಪಾಸತೇ ।
ತೇಷಾಂ ಯೋಗಕ್ಷೇ- । ಮಂ ವಹಾಮ್ಯಹಮೇವ ॥ ೧೭

ಅಪಿ ಚೇತ್ಸುದುರಾಚಾರೋ । ಭಜತಿ ಚೇನ್ಮಾಮೇವ ।
ಧರ್ಮಾತ್ಮಾ ಸ ಭವತಿ । ಶಾನ್ತಿಮುಪೈತಿ ॥
ಶ್ರಿತ್ವಾ ಮಾಂ ಸ್ತ್ರೀ ವೈಶ್ಯ । ಶೂದ್ರಾಶ್ಚ ಮುಚ್ಯನ್ತೇ ।
ಭಜ ಮಾಮಸ್ಮಿನ್ ಲೋಕೇ । ಅಸುಖೇ ಅನಿತ್ಯೇ ॥ ೧೮

ನ ತದಸ್ತಿ ಮದ್ವ್ಯತಿ- । ರಿಕ್ತಂ ಚರಾಚರಂ ।
ಮತ್ಕರ್ಮ ಕೃನ್ಮಮ । ಭಕ್ತೋ ನಿಸ್ಸಂಗೋ ॥
ನಿರ್ವೈರಸ್ಸರ್ವ ಭೂ- । ತೇಷ್ವಪಿ ಯಸ್ಸಮಾ- ।
ಮೇತಿ ಪಾಂಡವ ಪಾರ್ಥ । ಜ್ಞಾತಶಾಸ್ತ್ರಾರ್ಥ ॥ ೧೯

ಯೇ ತು ಸರ್ವಾಣಿ ಕ- । ರ್ಮಾಣ್ಯಪಿ ಮಯ್ಯೇವ ।
ಸಂನ್ಯಸ್ಯ ಮಾಮೇವ । ಸಮುಪಾಸತೇ ಯೇ ॥

ತೇಷಾಮಹಂ ಸಮು- । ದ್ಧರ್ತಾ ಸಂಸಾರತೋ ।
ನ ಚಿರಾತ್ ಪಾರ್ಥ ಭವಾಮಿ । ಜಹಿ ಶತ್ರುಸಾರ್ಥಾನ್ ॥ ೨೦

(ಭಕ್ತಲಕ್ಷಣ)

ನಿರ್ಮಾನಿತ್ವಮದಂಭಿ- । ತ್ವಮಹಿಂಸಾ ಕ್ಷಾಂತಿಶ್ಚ ।
ಅರ್ಜವಮಾಚಾರ್ಯೋ- । ಪಾಸನಂ ಶೌಚಂ ॥
ಸ್ಥೈರ್ಯಮಾತ್ಮವಿನಿಗ್ರ- । ಹೋ ವಿಷಯೇಷು ಚ ।
ವೈರಾಗ್ಯಮಿತಿ ಮಮ । ಭಕ್ತಿಸ್ವರೂಪಂ ॥ ೨೧

ಅನಹಂಕಾರೋ ಜನ್ಮ- । ಮೃತ್ಯುಜರಾ ವ್ಯಾಧಿ ।
ದುಃಖ ದೋಷಾನುದ- । ರ್ಶನಮಸಕ್ತಿಶ್ಚ ॥
ಅನಭಿಷ್ವಂಗಃ ಪುತ್ರ- । ದಾರಗೃಹಾದಿಷು ।
ಇಷ್ಟಾನಿಷ್ಟಾಪ್ತಿಷು । ಸಮಚಿತ್ತತ್ವಂ ಚ ॥ ೨೨

ಮಯ್ಯೇವ ಭಕ್ತಿರ್ವಿ- । ವಿಕ್ತಸೇವಿತ್ವಂ ಚ ।
ಅರತಿರ್ಜನಾನಾಂ ಚ । ಸಂಸದಿ ನಿತ್ಯಂ ॥
ಅಧ್ಯಾತ್ಮಜ್ಞಾನ ನಿ- । ತ್ಯತ್ವಂ ಚ ಕೌನ್ತೇಯ ।
ತತ್ತ್ವ ಜ್ಞಾನಾರ್ಥ ದ- । ರ್ಶನಮಿತಿ ನಿತ್ಯಂ ॥ ೨೩

ಯೋಽವ್ಯಭಿಚಾರೇಣ । ಭಕ್ತಿಯೋಗೇನ ಮಾಂ ।
ಸೇವತೇ ಸ ಗುಣಾನ್ ತಾನ್ । ತ್ರೀನಪ್ಯತೀತ್ಯ ॥
ಬ್ರಹ್ಮಭೂಯಂ ಚ ತ । ದಂಚತಿ ಮದ್ಭಕ್ತೋ ।
ಮಯಿ ಭಕ್ತಿರೇವೈಕಾ । ಭವಸಿಂಧೋರ್ನೌಕಾ ॥ ೨೪

ತಮೇವ ಚಾದ್ಯಂ । ಪುರುಷಂ ಪ್ರಪದ್ಯೇ ।
ಯಸ್ಮಾತ್ಪ್ರವೃತ್ತಿಸ್ತು । ಪ್ರಸೃತಾ ಪುರಾಣೀ ॥
ಏವಂ ಪ್ರಪತ್ತ್ಯಾತು । ಶರಣಂ ಭಜನ್ ಸ ಮಾಂ ।
ಜಗನ್ಮೂಲ ಕಂದಂ । ಯಾತಿ ಮುಕುಂದಂ ॥ ೨೫

ಕಾಮಕ್ರೋಧಲೋ- । ಭಾಖ್ಯಾಶ್ತ್ರವ ಏತೇ ।
ದುಸ್ಸಹ ನರಕ ನಿ- । ಪಾತನ ದಕ್ಷಾಃ ॥
ತಸ್ಮಾದೇತತ್ತ್ರಯಂ । ಸಂತ್ಯಜ್ಯ ಕೌನ್ತೇಯ ।
ಶಾಂತಸ್ತು ತಾಂ ಗತಿಂ । ಯಾತಿ ಪರಾಂ ಚ ॥ ೨೬

ಅಶ್ರದ್ಧಯಾ ಹುತಂ । ದತ್ತಂ ತಪಸ್ತಪ್ತಂ ।
ಯತ್ಕೃತಂ ತತ್ಸರ್ವಮ್ । ಅಸದಿತಿ ವಿದ್ಧಿ ॥
ನ ಚ ತತ್ಪ್ರೇತ್ಯಾತೋ । ನೋ ಇಹ ಕೌನ್ತೇಯ ।
ಶ್ರದ್ಧಾಪುರಸ್ಸರಂ । ಸದವೇಹಿ ಸರ್ವಂ ॥ ೨೭

ಸತ್ಯಂ ತೇ ಪ್ರತಿಜಾನೇ । ಪಾರ್ಥ ಪ್ರಿಯೋಽಸಿ ಮೇ ।
ಸರ್ವಧರ್ಮಾನ್ ಪರಿ- । ತ್ಯಜ್ಯ ಮಾಮೇಕಂ ॥
ಶರಣಂ ವ್ರಜಾಹಂ ತೇ । ಸರ್ವಪಾಪೇಭ್ಯೋ ।
ಮೋಕ್ಷಯಿಷ್ಯಾಮೇವ । ಮಾ ಶುಚ ಇತ್ಥಂ ॥ ೨೮

(ಶ್ರೀಕೃಷ್ಣಾರ್ಪಣ)

ವಸುದೇವಸುತ ಕೃಷ್ಣ । ಜಗತಾಂ ಗುರೋ ಕೃಷ್ಣ ।
ಶರಣಂ ರಮಾಜಾನೇ । ತ್ವಾಮೇವ ಜಾನೇ ॥
ರಾಧಾರಮಣ ನಾ- । ರಾಯಣ ಗೋವಿಂದ ।
ಖೇಲಯ ಮಾಂ ತ್ವಯಿ । ಪಾಲಯ ಚೇತಿ ॥ ೨೯

ಕಾಯಾದಿ ವಿರಚಿತ- । ಮಖಿಲ ಮಪಿ ಚ ಕರ್ಮ ।
ಕೃಷ್ಣೇಽಸ್ತು ಪರಿಹೃತ । ಸಂಸಾರ ತೃಷ್ಣೇ ।
ವೇಂಕಟಗಿರಿವಾಸೇ । ಪಾಲಿತ ನಿಜದಾಸೇ ।
ಶುಭಲಕ್ಷ್ಮೀ ಸುವಿಲಾಸೇ । ಶ್ರೀ ಶ್ರೀನಿವಾಸೇ ॥ ೩೦

ಭಜ ಪಾರ್ಥಸಾರಥಿಮ್ । ಅಯಿ ಚಿತ್ತ ಶರಣಂ ॥

॥ ಸರ್ವಂ ಶ್ರೀ ಕೃಷ್ಣಾರ್ಪಿತಂ ॥

ಮಂಗಳಂ

ಶ್ರೀಕೃಷ್ಣಾರ್ಪಣಮಸ್ತು ಮಂಗಳಮಧೀತಂ ಕೃಷ್ಣಗೀತಂ ಪ್ರಪಂ- ।
ಚೈಕಾತ್ಮ್ಯಪ್ರತಿಪಾದನಂ ಪ್ರಕೃತಿಮಾಯಾಮೋಹನಿರ್ಣೋದನಂ ॥
ಲೋಕಂ ಜೀವನಧರ್ಮಯೋಗಪಥಮಂ ಕಂಡಿಲ್ಲಿ ತದ್ಯೋಗದಿಂ ।
ಶೋಕಾತೀತಶುಭಂಗಳಂ ಗಳಿಕೆ ಸಂಮೋದಂಗಳಂ ಶಾಂತಿಯಂ ॥

ನರನಾರಾಯಣಭಾಷಿತಂ ಕುರುರಣಕ್ಷೇತ್ರಪ್ರಸಂಗೋತ್ಥಿತಂ ।
ಪರಮರ್ಷಿ ಶ್ರುತಿಸಂಪ್ರದಾಯಗುರು ಪಾರಾಶರ್ಯ ಕಾವ್ಯಸ್ಥಿತಂ ॥
ಪುರುಷಾರ್ಥಕ್ಕಿದು ಸಾಧಕಂ ಪರಮತತ್ತ್ವಜ್ಞಾನಸಂಪಾದಕಂ ।
ದುರಿತೋತ್ತಾಪವ ನೀಗಿ ಮಾಳ್ಕೆ ಜನರಿಂಗುಚ್ಛ್ರಾಯಮಂ ಶ್ರೇಯಮಂ ॥

ನೋಡುಗೆ ಸಂತರ್ ಕುತುಕದೆ ।
ನೀಡುಗೆ ಮತ್ಸಾಹಸಕ್ಕೆ ದಯೆಯಿಂ ಕ್ಷಮೆಯಂ ॥
ಪ್ರೌಢಿಯನರಿಯದ ತತ್ತ್ವಾ- ।
ಲೋಡನೆಯುಂ ಮತಿಯ ಶೋಧಿಸದೆ ಮಾದೃಶರೋಳ್ ॥

ಸ್ಮರಿಸಿದ ಮಾತ್ರದಿನಾವನ ।
ಕರುಣೆಯ ರಸತಂತ್ರಮೊದವಿ ದೋಷದಿ ಗುಣಮಂ ॥
ಮೆರೆಯಿಕುಮೊ ಕಣದಿ ಪೂರ್ಣಮ- ।
ನಿರಲವನಡಿ ನಮಗೆ ಶರಣಮಖಿಲಂ ಕುಶಲಂ ॥

ನಾರಾಯಣಂ ನರನಂ ।
ಭಾರತಿಯಂ ವ್ಯಾಸನಂ ಸದಾ ನಮಿಸುತೆ ಸಂ- ॥
ಸಾರಾಹವಮಂ ಭಾರತ ।
ಸಾರಥಿಗೀತೋಪದಿಷ್ಟಬಲದಿಂ ಗೆಲುವಂ ॥

ಜಗದೊಳ್ ದೈವ್ಯಮಸುರ್ಯಮೆಂಬೆರಡುಮೆಂದುಂ ಪೋರುತಿರ್ಕುಂ ನಿಸ- ।
ರ್ಗಗುಣಕ್ಷೋಭೆಗಳಿಂದೆ ಪೌರುಷಕೆ ಕಾರ್ಯಂ ಕ್ಲೃಪ್ತಮಾ ನಿತ್ಯಸಂ- ॥

ಯುಗದೊಳ್ ಸತ್ತ್ವವನೆತ್ತಿ ತಾಮಸರಜಸ್ಸಂ ಸೋಲಿಪಾ ಶೌರ್ಯದೊಳ್ ।
ಭಗವದ್ಗೀತೆಯುಪಾಸಕರ್ಗೆ ಬಲಮುಂಟೆಂದುಂ ಜಯಂ ಮಂಗಳಂ ॥

* ಅಥ ಚೇತ್ ತ್ವಮಹಂಕಾರಾತ್... ॥
ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।

* "ಪ್ರಜಹೀ ಹಿ" ಎಂಬ ಪಾಠವೂ ಉಂಟು: "ತ್ಯಜಿಸು" ಎಂದು ಇದರ ಅರ್ಥ. "ಪ್ರಜಹಿ" ಎಂಬ ಪಾಠ ಶಾಂಕರಭಾಷ್ಯಸಂಮತ: "ಕೊಲ್ಲು" ಎಂದು ಅರ್ಥ. ೪೩ನೆಯ ಶ್ಲೋಕದ "ಜಹಿ" ಎಂಬುದಕ್ಕೆ ಇದು ಅನುಗುಣ.

* ಏನ=ಪಾಪ

* ಯ ಏವಂ ವಿದ್ವಾನುದಗಯನೇ ಪ್ರಮೀಯತೇ ದೇವಾನಾಮೇವ ಮಹಿಮಾನಂ ಗತ್ವಾऽऽದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥಯೋ ದಕ್ಷಿಣೇ ಪ್ರಮೀಯತೇ ಪಿತೃಣಾಮೇವ ಮಹಿಮಾನಂ ಗತ್ವಾ ಚಂದ್ರಮಸಸ್ಸಾಯುಜ್ಯಗ್ಂ ಸಲೋಕತಾಮಾಪ್ನೋತಿ ॥

–ತೈತ್ತಿರೀಯೋಪನಿಷತ್ತು, ಪ್ರ. ೪.

* ಪ್ರಕೃತ ಲೇಖಕನ 'ಪುರುಷಸೂಕ್ತ' ಗ್ರಂಥದ ಅನುಬಂಧವನ್ನು ನೋಡಿರಿ.

* ಪ್ರಕೃತ ಲೇಖಕನ 'ಶೃಂಗಾರ ಮಂಗಳಂ' —ಪ್ರೇಮಾದ್ವೈತ: ಷೇಕ್ಸ್ಪಿಯರನ ಸಾಕ್ಷ್ಯ— ನೋಡಿರಿ.

1 ಲವಿತ್ರ = ಕುಡುಗೋಲು.

2 ತಾಪಿಂಛ = ಹೊಂಗೆಯ ಚಿಗುರು.

3 ಪಿಂಛ = ನವಿಲುಗರಿ.

4 ಅಷ್ಟಾಪದ+ಅಷ್ಟಾರ = ಚಿನ್ನದಿಂದ ಮಾಡಿದ ಮತ್ತು ಎಂಟರಗಳ ಚಕ್ರಗಳಿಂದ ಕೂಡಿದ.